|| ಓಂ ಓಂ ನಮೋ ನಾರಾಯಣಾಯ|| ಶ್ರೀ ವೇದವ್ಯಾಸಾಯ ನಮಃ ||

## ಶ್ರೀ ಕೃಷ್ಣದ್ವೈಪಾಯನ ವೇದವ್ಯಾಸ ವಿರಚಿತ

# ಶ್ರೀ ಮಹಾಭಾರತ



## ಮುಖ್ಯ ಕಥಾ ಪ್ರಸಂಗಗಳು (ಸಂಪುಟ ೩)

ಡಾ| ಬಿ. ಎಮ್. ರಮೇಶ್




ಬನದಕೊಪ್ಪದ ಶ್ರೀ ಲಕ್ಷ್ಮೀನಾರಾಯಣ ದೇವರು

# ಮುಖ್ಯ ಕಥಾ ಪ್ರಸಂಗಗಳು


ಉದ್ಯೋಗ ಪರ್ವ ........................................................ 4

ಪಾಂಡವ-ಕೌರವರು ಸೇನೆಗಳನ್ನು ಒಂದುಗೂಡಿಸಿದುದು .................. 4

ಮೊದಲನೆಯ ರಾಯಭಾರ ........................................... 35

ಎರಡನೆಯ ರಾಯಭಾರ: ಸಂಜಯನು ಪಾಂಡವರಲ್ಲಿಗೆ ಬಂದುದು..... 43

ಕುರುಸಭೆಯಲ್ಲಿ ಸಂಜಯನು ತನ್ನ ರಾಯಭಾರವೃತ್ತಾಂತವನ್ನು ತಿಳಿಸಿದುದು........................................................115

ಶ್ರೀಕೃಷ್ಣ ರಾಯಭಾರ ..................................................225

ಮಹಾಭಾರತ ಯುದ್ಧ ಸಿದ್ಧತೆ ..........................................454

ಅಂಬೋಪಾಽಖ್ಯಾನ .....................................................540

ಭೀಷ್ಮ ಪರ್ವ ..........................................................627

ಮಹಾಭಾರತ ಯುದ್ಧಾರಂಭ..............................................627

ಮೊದಲನೆಯ ದಿನದ ಯುದ್ಧ..............................................708

ಎರಡನೆಯ ದಿನದ ಯುದ್ಧ................................................734

ಮೂರನೆಯ ದಿನದ ಯುದ್ಧ ...............................................772

ನಾಲ್ಕನೆಯ ದಿನದ ಯುದ್ಧ ..............................................802

ಐದನೆಯ ದಿನದ ಯುದ್ಧ .................................................829

ಆರನೆಯ ದಿನದ ಯುದ್ಧ..................................................851

ಏಳನೆಯ ದಿನದ ಯುದ್ಧ .................................................874

ಎಂಟನೆಯ ದಿನದ ಯುದ್ಧ ..................................................912
ಒಂಭತ್ತನೆಯ ದಿನದ ಯುದ್ಧ.............................................978
ಹತ್ತನೆಯ ದಿನದ ಯುದ್ಧ: ಭೀಷ್ಮ ವಧೆ.................................1038
ಭೀಷ್ಮ ವಧ ಶ್ರವಣ .....................................................1133

# ಉದ್ಯೋಗ ಪರ್ವ




## ಪಾಂಡವ-ಕೌರವರು ಸೇನೆಗಳನ್ನು ಒಂದುಗೂಡಿಸಿದುದು

### ವಿರಾಟ ಸಭೆಯಲ್ಲಿ ಪಾಂಡವ ಪಕ್ಷದವರ ಸಮಾಲೋಚನೆ; ಕೃಷ್ಣನ ತೀರ್ಮಾನ

ಅಭಿಮನ್ಯುವಿನ ವಿವಾಹವನ್ನು ಪೂರೈಸಿ ಆ ಕುರುಪ್ರವೀರರು ತಮ್ಮ ಪಕ್ಷದವರೊಂದಿಗೆ ನಾಲ್ಕು ರಾತ್ರಿಗಳನ್ನು ಸಂತೋಷದಿಂದ ಕಳೆದು

ಮಾರನೆಯ ದಿನ ವಿರಾಟನ ಸಭೆಯನ್ನು ಪ್ರವೇಶಿಸಿದರು. ಆ ಮತ್ಸ್ಯಪತಿಯ ಸಭೆಯು ಮಣಿಗಳಿಂದ ತುಂಬಿದ್ದು ಉತ್ತಮ ರತ್ನಗಳಿಂದಲೂ ಬಣ್ಣಬಣ್ಣದ ಮಾಲೆಗಳಿಂದ ಸುಗಂಧಿತ ಆಸನಗಳಿಂದಲೂ ಶೋಭಿಸುತ್ತಿತ್ತು. ಅಲ್ಲಿಗೆ ನರವರ್ಯರೆಲ್ಲರೂ ಆಗಮಿಸಿದರು. ಎದುರಿಗೆ ಆಸನಗಳಲ್ಲಿ ಪೃಥಿವೀಪತಿಗಳಲ್ಲಿಯೇ ಮಾನ್ಯರಾದ ವೃದ್ಧ ವಿರಾಟ-ದ್ರುಪದ ರಾಜರೀರ್ವರು, ಮತ್ತು ತಂದೆಯೊಂದಿಗೆ ಬಲರಾಮ ಜನಾರ್ದನರಿಬ್ಬರೂ ಕುಳಿತಿದ್ದರು. ಪಾಂಚಾಲನ ಸಮೀಪದಲ್ಲಿ ಶಿನಿಪ್ರವೀರನು ರೌಹಿಣೇಯನ ಸಹಿತಲೂ, ಮತ್ಸ್ಯರಾಜನ ಹತ್ತಿರ ಜನಾರ್ದನನೂ, ಯುಧಿಷ್ಠಿರನೂ, ರಾಜ ದ್ರುಪದನ ಎಲ್ಲ ಮಕ್ಕಳೂ, ಭೀಮಾರ್ಜುನರೂ, ಮಾದ್ರಿಯ ಮಕ್ಕಳೀರ್ವರೂ, ಯುದ್ಧಪ್ರವೀರ ಪ್ರದ್ಯುಮ್ನ-ಸಾಂಬರೂ, ವಿರಾಟಪುತ್ರರೊಂದಿಗೆ ಅಭಿಮನ್ಯುವೂ ಕುಳಿತಿದ್ದರು. ವೀರ್ಯ ರೂಪ ಬಲಗಳಲ್ಲಿ ತಂದೆಯಂದಿರ ಸಮಾನರಾಗಿದ್ದ ಶೂರರಾದ ಎಲ್ಲ ದ್ರೌಪದೇಯ ಕುಮಾರರೂ ಬಣ್ಣಬಣ್ಣದ ಸುವರ್ಣಖಚಿತ ಶ್ರೇಷ್ಠ ಆಸನಗಳಲ್ಲಿ ಕುಳಿತಿದ್ದರು. ವಸ್ತ್ರಭೂಷಣಗಳಿಂದ ವಿಭ್ರಾಜಮಾನರಾಗಿ ಅಲ್ಲಿ ಕುಳಿತಿದ್ದ ಮಹಾರಥಿಗಳಿಂದ ಸಮೃದ್ಧ ಆ ರಾಜಸಭೆಯು ವಿಮಲ ಆಕಾಶದಲ್ಲಿ ಕಾಣುವ ಗ್ರಹಗಳಂತೆ ತೋರುತ್ತಿತ್ತು. ಆಗ ಪರಸ್ಪರರಲ್ಲಿ ಬೇರೆ ಬೇರೆ ವಿಷಯಗಳ ಕುರಿತು ಮಾತನಾಡಿ ಆ ಪುರುಷಪ್ರವೀರರು ಒಂದು ಕ್ಷಣ ಪರಿಚಿಂತಿಸುತ್ತಾ ಕೃಷ್ಣನನ್ನೇ ನೋಡುತ್ತಾ ಸುಮ್ಮನಾದರು. ಅವರ ಮಾತುಗಳ ಕೊನೆಯಲ್ಲಿ ಮಾಧವನು ಪಾಂಡವರ ವಿಷಯದ

ಕುರಿತು ಅವರ ಮನಸ್ಸನ್ನು ಸೆಳೆದನು. ಆ ರಾಜಸಿಂಹರು ಒಟ್ಟಿಗೇ ಅವನ ಮಹಾರ್ಥವುಳ್ಳ ಮಹೋದಯಕಾರಕ ವಾಕ್ಯಗಳನ್ನು ಕೇಳಿದರು. ಕೃಷ್ಣನು ಹೇಳಿದನು:

"ಸೌಬಲನಿಂದ ದಾಳದಾಟದಲ್ಲಿ ಗೆಲ್ಲಲ್ಪಟ್ಟು ಮೋಸದಿಂದ ಹೇಗೆ ಯುಧಿಷ್ಠಿರನ ರಾಜ್ಯವು ಅಪಹರಿಸಲ್ಪಟ್ಟಿತು ಮತ್ತು ನಂತರದ ಒಪ್ಪಂದದಂತೆ ಅವರು ಹೊರಗೆ ವಾಸಿಸಿದ್ದುದನ್ನೂ ನೀವೆಲ್ಲರೂ ಚೆನ್ನಾಗಿ ತಿಳಿದಿದ್ದೀರಿ. ಕ್ಷಣದಲ್ಲಿಯೇ ಮಹಿಯನ್ನು ಗೆಲ್ಲಲು ಶಕ್ತರಾಗಿದ್ದರೂ ಸತ್ಯದಲ್ಲಿ ಸ್ಥಿತರಾದ ಭಾರತಾಗ್ರ ಪಾಂಡುಸುತರು ಯಥಾವತ್ತಾಗಿ ನಡೆದುಕೊಂಡು ಹದಿಮೂರು ವರ್ಷಗಳ ಆ ಉಗ್ರರೂಪೀ ವ್ರತವನ್ನು ಪೂರೈಸಿದ್ದಾರೆ. ಸುದುಸ್ತರವಾಗಿದ್ದ ಈ ಹದಿಮೂರನೆಯ ವರ್ಷವನ್ನೂ ಕೂಡ ನಿಮ್ಮ ಸಮೀಪದಲ್ಲಿಯೇ ಯಾರಿಗೂ ತಿಳಿಯದಂತೆ ಎಲ್ಲ ರೀತಿಯ ಕ್ಲೇಶಗಳನ್ನು ಸಹಿಸಿಕೊಂಡು ಹೇಗೆ ಕಳೆದರು ಎನ್ನುವುದೂ ನಿಮಗೆಲ್ಲರಿಗೆ ತಿಳಿದಿದೆ. ಹೀಗಿರಲು ರಾಜ ಧರ್ಮಸುತನಿಗೂ ದುರ್ಯೋಧನನಿಗೂ ಇಬ್ಬರಿಗೂ ಒಳ್ಳೆಯದಾಗುವ ಹಾಗೆ ಕುರುಪಾಂಡವರಿಗೆ ಧರ್ಮವೂ, ಯುಕ್ತವೂ, ಯಶಸ್ಕರವೂ ಆದುದು ಏನು ಎಂದು ಯೋಚಿಸಬೇಕಾಗಿದೆ. ಧರ್ಮರಾಜನು ಸುರರ ರಾಜ್ಯವೇ ಆದರೂ ಅಧರ್ಮಯುಕ್ತವಾದುದನ್ನು ಬಯಸುವುದಿಲ್ಲ. ಆದರೆ ಒಂದೇ ಗ್ರಾಮದ ಒಡೆತನವನ್ನಾದರೂ, ಅದು

ಧರ್ಮಾರ್ಥಯುಕ್ತವಾಗಿದ್ದರೆ, ಅವನು ಸ್ವೀಕರಿಸುತ್ತಾನೆ. ಧೃತರಾಷ್ಟ್ರನ ಮಕ್ಕಳು ಇವನ ಪಿತ್ರಾರ್ಜಿತ ರಾಜ್ಯವನ್ನು ಹೇಗೆ ಸುಳ್ಳುಕೆಲಸವನ್ನು ಮಾಡಿ ಅಪಹರಿಸಿದರು ಮತ್ತು ಇವನು ಹೇಗೆ ಸಹಿಸಲಸಾಧ್ಯ ಮಹಾ ಕಷ್ಟಗಳನ್ನು ಅನುಭವಿಸಿದನು ಎನ್ನುವುದು ನೃಪರೆಲ್ಲರಿಗೂ ತಿಳಿದೇ ಇದೆ. ಧೃತರಾಷ್ಟ್ರನ ಮಕ್ಕಳಿಗೆ ತಮ್ಮದೇ ಬಲದಿಂದ ಪಾರ್ಥನನ್ನು ರಣದಲ್ಲಿ ಗೆಲ್ಲಲು ಸಾಧ್ಯವಿಲ್ಲ. ಆದರೂ ಕೂಡ ಹಿತೈಷಿಗಳೊಂದಿಗೆ ರಾಜನು ಅವರಿಗೆ ಒಳ್ಳೆಯದಾಗುವುದರ ಹೊರತಾಗಿ ಏನನ್ನೂ ಬಯಸುವುದಿಲ್ಲ. ಸ್ವಪ್ರಯತ್ನದಿಂದ ಭೂಮಿಪತಿಗಳನ್ನು ಸೋಲಿಸಿ ಗೆದ್ದು ಒಟ್ಟುಗೂಡಿಸಿದುದನ್ನೇ ಈ ಪುರುಷಪ್ರವೀರ, ಪಾಂಡುಸುತರೂ, ಕುಂತೀಸುತರೂ, ಮಾದ್ರವತೀಸುತರೀರ್ವರೂ ಕೇಳುತ್ತಿದ್ದಾರೆ. ಇವರು ಬಾಲಕರಾಗಿರುವಾಗ ಕೂಡ ಇವರ ಅ ಅಮಿತ್ರರು ಹೇಗೆ ರಾಜ್ಯವನ್ನು ತಮ್ಮದನ್ನಾಗಿಯೇ ಮಾಡಿಕೊಳ್ಳಲು ವಿವಿಧ ಉಪಾಯಗಳಿಂದ ಇವರನ್ನು ಕೊಲ್ಲಲು ಪ್ರಯತ್ನಿಸಿದರು ಎನ್ನುವುದನ್ನು ಯಥಾವತ್ತಾಗಿ ನೀವೆಲ್ಲರೂ ತಿಳಿದಿದ್ದೀರಿ. ಬೆಳೆದಿರುವ ಅವರ ಲೋಭವನ್ನು ಮತ್ತು ಯುಧಿಷ್ಠಿರನ ಧರ್ಮಾತ್ಮತೆಯನ್ನೂ ನೋಡಿ, ಅವರೀರ್ವರ ನಡುವೆಯಿರುವ ಸಂಬಂಧವನ್ನೂ ನೋಡಿ ನೀವೆಲ್ಲರೂ ಒಂದಾಗಿ ಮತ್ತು ಪ್ರತ್ಯೇಕವಾಗಿ ವಿಚಾರಮಾಡಬೇಕು. ಸದಾ

ಸತ್ಯನಿರತರಾಗಿರುವ ಇವರು ಆ ಒಪ್ಪಂದವನ್ನು ಯಥಾವತ್ತಾಗಿ ಪಾಲಿಸಿದ್ದಾರೆ. ಈಗ ಧೃತರಾಷ್ಟ್ರ ಪುತ್ರರು ಅವರೊಂದಿಗೆ ಅನ್ಯಥಾ ನಡೆದುಕೊಂಡರೆ ಅವರನ್ನು ಅವರ ಬೆಂಬಲಿಗರೊಂದಿಗೆ ಇವರು ಕೊಲ್ಲುತ್ತಾರೆ. ಈಗ ರಾಜನಿಂದ ಇವರಿಗೆ ತಪ್ಪು ನಡೆಯಿತೆಂದರೆ ಇವರನ್ನು ಸುತ್ತುವರೆದಿರುವ ಸ್ನೇಹಿತರಿದ್ದಾರೆ. ಯುದ್ಧದಲ್ಲಿ ತಾವು ಸತ್ತರೂ ಅವರ ಶತ್ರುಗಳೊಂದಿಗೆ ಹೋರಾಡುವವರು ಅವರಿಗೆ ಈಗ ಇದ್ದಾರೆ. ಅಂಥವರು ಸ್ವಲ್ಪವೇ ಮಂದಿ ಇದ್ದು ಇವರಿಗೆ ಜಯವನ್ನು ಪಡೆಯುವ ಸಮರ್ಥರಿಲ್ಲರೆಂದು ನೀವು ತಿಳಿದರೂ ಕೂಡ ಇವರ ಸುಹೃದಯಿಗಳಾದ ಎಲ್ಲರೂ ಸೇರಿ ಒಟ್ಟಿಗೇ ಅವರ ವಿನಾಶಕ್ಕೆ ಯತ್ನಿಸಬಹುದು. ದುರ್ಯೋಧನ ವಿಚಾರವೇನು ಮತ್ತು ಅವನು ಏನು ಮಾಡುವವನಿದ್ದಾನೆ ಎನ್ನುವುದು ನಮಗೆ ತಿಳಿದಿಲ್ಲ. ಇನ್ನೊಂದು ಪಕ್ಷದವರ ವಿಚಾರವೇನೆಂದು ತಿಳಿಯದೇ ನಾವಾದರೂ ಮಾಡಬೇಕಾದುದರಲ್ಲಿ ಒಳ್ಳೆಯದು ಏನು ಎಂದು ಹೇಗೆ ತಾನೇ ನಿರ್ಧರಿಸಬಹುದು? ಆದುದರಿಂದ ಅವರ ಕಡೆ ಯುಧಿಷ್ಠಿರನ ಅರ್ಧರಾಜ್ಯವನ್ನು ನೀಡಬೇಕೆಂದು ಸಮರ್ಥ ದೂತನನ್ನು – ಧರ್ಮಶೀಲ, ಶುಚಿ, ಕುಲೀನ, ಅಪ್ರಮತ್ತ – ಪುರುಷನನ್ನು ಕಳುಹಿಸಬೇಕು."

ಜನಾರ್ದನನ ಆ ಮಧುರ, ಸಮ, ಧರ್ಮಾರ್ಥಯುಕ್ತ ಮಾತನ್ನು ಕೇಳಿ ಅವನ ಅಣ್ಣನು ಅವನ ಮತವನ್ನು ಗೌರವಿಸಿ ಈ

ಮಾತುಗಳನ್ನಾಡಿದನು. ಬಲದೇವನು ಹೇಳಿದನು:

“ನೀವೆಲ್ಲರೂ ಗದನ ಅಣ್ಣನ ಧರ್ಮಾರ್ಥವತ್ತಾದ ಅಜಾತಶತ್ರುವಿಗೂ ಹಿತವಾಗುವಂತಹ ಮತ್ತು ರಾಜಾ ದುರ್ಯೋಧನನಿಗೂ ಹಿತವಾಗುವಂತಹ ಮಾತುಗಳನ್ನು ಕೇಳಿದಿರಿ. ಕುಂತಿಯ ವೀರ ಮಕ್ಕಳು ಅರ್ಧ ರಾಜ್ಯವನ್ನೂ ಬಿಡಲು ಸಿದ್ಧರಿದ್ದಾರೆ. ಧೃತರಾಷ್ಟ್ರ ಪುತ್ರನು ಅವರಿಗೆ ಅರ್ಧವನ್ನು ಕೊಟ್ಟು ನಮ್ಮೊಂದಿಗೆ ಸುಖಿಗಳಾಗಿ ಮೋದದಿಂದಿರಬಹುದು. ರಾಜ್ಯವನ್ನು ಪಡೆದು ಈ ಪುರುಷಪ್ರವೀರರು, ವಿರುದ್ಧ ಪಕ್ಷದವರು ಸರಿಯಾಗಿ ನಡೆದುಕೊಂಡಿದ್ದಾರೆಂದರೆ, ಪ್ರಶಾಂತರಾಗಿ ಸುಖದಿಂದಿರುವುದು ನಿಶ್ಚಯ. ಅವರು ಶಾಂತರಾಗಿರುವುದು ಪ್ರಜೆಗಳಿಗೆ ಹಿತವೇ ಸರಿ. ದುರ್ಯೋಧನನ ಮತವನ್ನು ತಿಳಿಯಲು ಮತ್ತು ಯುಧಿಷ್ಠಿರನ ಮಾತುಗಳನ್ನು ಹೇಳಲು ಕುರುಪಾಂಡವರ ಹಿತವನ್ನು ಬಯಸುವ ಯಾರಾದರನ್ನು ಅಲ್ಲಿಗೆ ಕಳುಹಿಸುವುದು ನನಗೂ ಸರಿಯೆನಿಸುತ್ತದೆ. ಅವನು ಕುರುಪ್ರವೀರ ಭೀಷ್ಮ, ಮಹಾನುಭಾವ ವೈಚಿತ್ರವೀರ್ಯ, ಮಗನೊಂದಿಗೆ ದ್ರೋಣ, ವಿದುರ, ಕೃಪ, ಗಾಂಧಾರರಾಜನೊಂದಿಗೆ ಸೂತಪುತ್ರ, ಇತರ ಎಲ್ಲ ಧೃತರಾಷ್ಟ್ರನ ಮಕ್ಕಳು, ಸೇನಾಧಿಪತಿಗಳು, ಕೋಶಾಧಿಕಾರಿಗಳು, ಧರ್ಮದಲ್ಲಿ ಮತ್ತು ಸ್ವಕರ್ಮಗಳಲ್ಲಿ

ನಿರತ ಲೋಕಪ್ರವೀರರೂ, ಕಾಲವನ್ನು ತಿಳಿದ ವೃದ್ಧರೂ ಮತ್ತು ಅಲ್ಲಿ ಸೇರಿರುವ ಎಲ್ಲರಿಗೂ ಕೈಮುಗಿದು ಗೌರವದಿಂದ ಸಂಬೋಧಿಸಿ ಕುಂತೀಸುತನಿಗೆ ಬೇಕಾಗುವ ಮಾತುಗಳನ್ನು ವಿನಯದಿಂದ ಹೇಳಬೇಕು. ಯಾವುದೇ ಸಂದರ್ಭದಲ್ಲಿಯೂ ಅವನು ಚುಚ್ಚುಮಾತುಗಳನ್ನಾಡದಿರಲಿ. ಯಾಕೆಂದರೆ ಅವರು ಬಲವನ್ನೇ ಆಶ್ರಯಿಸಿ ಸಂಪತ್ತನ್ನು ಹಿಡಿದಿಟ್ಟುಕೊಂಡಿದ್ದಾರೆ. ಯುಧಿಷ್ಠಿರನಿಗೆ ಅಭ್ಯುದಯವಾಗಿ ಸುಖವಿದ್ದಾಗ ಅವನು ಪ್ರಮತ್ತನಾಗಿ ದ್ಯೂತದಲ್ಲಿ ರಾಜ್ಯವನ್ನು ಕಳೆದುಕೊಂಡ. ಈ ಆಜಮೀಢನು ಕುರುಪ್ರವೀರರು ಮತ್ತು ಎಲ್ಲ ಸುಹೃದಯಿಗಳು ಬೇಡವೆಂದರೂ ಆಟ ಗೊತ್ತಿಲ್ಲದಿದ್ದರೂ ಜೂಜನ್ನು ತಿಳಿದಿದ್ದ ಗಾಂಧಾರರಾಜನ ಮಗನೊಂದಿಗೆ ಪಗಡೆಯಾಟದ ಜೂಜಿನಲ್ಲಿ ಪಣವಿಟ್ಟಿದ್ದ. ಅಲ್ಲಿ ಸೋಲಿಸಬಹುದಾದ ಸಹಸ್ರಾರು ಇತರರಿದ್ದರು. ಆದರೆ ಯುಧಿಷ್ಠಿರನು ಅವರೆಲ್ಲರನ್ನು ಬಿಟ್ಟು ಸೌಬಲನನ್ನೇ ಆರಿಸಿ ಅಹ್ವಾನಿಸಿ ಅವನೊಂದಿಗೆ ಜೂಜಾಡಿ ಸೋತನು. ಆಟವು ಸದಾ ಅವನ ವಿರುದ್ಧ ಹೋಗುತಿದ್ದರೂ ಅವನನ್ನೇ ತನ್ನ ಪ್ರತಿಸ್ಪರ್ಧಿಯನ್ನಾಗಿ ಮುಂದುವರಿಸಿದನು. ಆಟದಲ್ಲಿ ಅವನಿಂದ ಸರಿಯಾಗಿಯೇ ಗೆಲ್ಲಲ್ಪಟ್ಟಿದ್ದಾನೆ. ಇದರಲ್ಲಿ ಶಕುನಿಯ ಅಪರಾದವೇನೂ ಇಲ್ಲ. ಆದುದರಿಂದ ಪ್ರೀತಿಯಲ್ಲಿ ಮಾತನಾಡಿ ವೈಚಿತ್ರವೀರ್ಯನ ಮನವೊಲಿಸಲಿ. ಇದರಿಂದ ಧೃತರಾಷ್ಟ್ರಪುತ್ರನ ಉದ್ದೇಶವೇನೆಂದು

ತಿಳಿದುಕೊಳ್ಳಬಹುದು. ಪೌರುಷದಿಂದ ಸಾದ್ಯವಿಲ್ಲ.”

ಮಧುಪ್ರವೀರನು ಹೀಗೆ ಹೇಳಲು ಶಿನಿಪ್ರವೀರನು ಒಮ್ಮೆಲೇ ಎದ್ದು ಅವನ ಮಾತುಗಳನ್ನು ನಿಂದಿಸುತ್ತಾ ಕೋಪದಿಂದ ಈ ಮಾತುಗಳನ್ನಾಡಿದನು. ಸಾತ್ಯಕಿಯು ಹೇಳಿದನು:

“ಪುರುಷನು ತಾನು ಹೇಗಿದ್ದಾನೋ ಹಾಗೆಯೇ ಮಾತನ್ನಾಡುತ್ತಾನೆ. ನಿನ್ನ ಅಂತರಾತ್ಮವು ಹೇಗಿದೆಯೋ ಹಾಗೆಯೇ ನೀನು ಮಾತನಾಡುತ್ತಿರುವೆ. ಶೂರ ಪುರುಷರಿದ್ದಂತೆ ಕಾಪುರುಷರೂ ಇರುತ್ತಾರೆ. ಸರಿಯಾಗಿ ತೋರಿಸಿಕೊಳ್ಳುವ ಈ ಎರಡು ದೃಢ ಪಂಗಡಗಳಲ್ಲಿ ಪುರುಷರನ್ನು ವಿಂಗಡಿಸಬಹುದು. ಒಂದೇ ಮರದಲ್ಲಿ ಫಲಬರದೇ ಇರುವ ಮತ್ತು ಫಲಬಂದಿರುವ ಶಾಖೆಗಳಿರುವಂತೆ ಒಂದೇ ಕುಲದಲ್ಲಿ ದುರ್ಬಲ ಮತ್ತು ಮಹಾರಥರಿಬ್ಬರೂ ಹುಟ್ಟಬಹುದು. ಲಾಂಗಲಧ್ವಜ! ನೀನು ಹೇಳಿದ ಮಾತನ್ನು ನಾನು ಟೀಕಿಸುತ್ತಿಲ್ಲ. ಆದರೆ ನಿನ್ನ ಮಾತನ್ನು ಕೇಳುತ್ತಿರುವವರನ್ನು ಟೀಕಿಸುತ್ತಿದ್ದೇನೆ. ಈ ಪರಿಷತ್ತಿನ ಮಧ್ಯದಲ್ಲಿ ಧರ್ಮರಾಜನಲ್ಲಿ ಸ್ವಲ್ಪವಾದರೂ ದೋಷವಿದೆಯೆಂದು ಸ್ವಲ್ಪವೂ ಅನುಮಾನಪಡದೇ ಹೇಳುವುದಕ್ಕೆ ಹೇಗೆ ಅನುಮತಿಯನ್ನು ನೀಡುತ್ತಿದ್ದೇವೆ? ಅಕ್ಷಕೋವಿದರು ಅಕ್ಷವನ್ನು ಅರಿಯದ ಈ ಮಹಾತ್ಮನನ್ನು ಕರೆದು ನಂಬಿಸಿ ಸೋಲಿಸಿದರು. ಹಾಗಿರುವಾಗ

ಅದು ಎಲ್ಲಿಯ ಧರ್ಮಜಯವೆನಿಸಿಕೊಳ್ಳುತ್ತದೆ? ಒಂದುವೇಳೆ ಕುಂತೀಸುತನು ಮನೆಯಲ್ಲಿ ಸಹೋದರರೊಡನೆ ಆಡುತ್ತಿರುವಾಗ ಅವರು ಬಂದು ಅವನನ್ನು ಗೆದ್ದಿದ್ದೇ ಆಗಿದ್ದರೆ ಅದು ಧರ್ಮಜಯವಾಗುತ್ತಿತ್ತು. ಆದರೆ ಅವರು ಸದಾ ಕ್ಷತ್ರಧರ್ಮರತನಾದ ರಾಜನನ್ನು ಕರೆದು ಮೋಸದಿಂದ ಅವನನ್ನು ಗೆದ್ದರು. ಹೀಗಿರುವಾಗ ಅವರಲ್ಲಿ ಅಂಥಹ ಪರಮ ಶುಭವಾದದ್ದು ಏನಿದೆ? ಪಣದಂತೆ ಸಂಪೂರ್ಣವಾಗಿ ವನವಾಸವನ್ನು ಪೂರೈಸಿ ಪಿತ್ರಾರ್ಜಿತ ರಾಜ್ಯವನ್ನು ಕೇಳುವಾಗ ಏಕೆ ಕೈಮುಗಿಯಬೇಕು? ಒಂದುವೇಳೆ ಯುಧಿಷ್ಠಿರನು ಪರರ ಸಂಪತ್ತನ್ನು ಬಯಸಿದರೆ ಅವನು ಬೇಡುವುದು ಸರಿಯಲ್ಲ. ಕೌಂತೇಯರು ವನವಾಸವನ್ನು ಮುಗಿಸಿದರೂ ಅವರನ್ನು ಕಂಡುಹಿಡಿದಿದ್ದೇವೆ ಎಂದು ಹೇಳುವ ಅವರು ರಾಜ್ಯವನ್ನು ತಮ್ಮದಾಗಿಟ್ಟುಕೊಳ್ಳುವ ಆಸೆಯಲ್ಲಿಲ್ಲ ಮತ್ತು ಧರ್ಮಯುಕ್ತರಾಗಿದ್ದಾರೆ ಎಂದು ಹೇಗೆ ಹೇಳಬಹುದು? ಭೀಷ್ಮ ಮತ್ತು ಮಹಾತ್ಮ ದ್ರೋಣರು ಅವರನ್ನು ಕರೆತಂದಿದ್ದರು. ಆದರೆ ಪಿತ್ರಾರ್ಜಿತ ಸಂಪತ್ತನ್ನು ಪಾಂಡವರಿಗೆ ಕೊಡಲು ಅವರು ಸಿದ್ಧರಿಲ್ಲ. ನಾನಾದರೋ ಅವರನ್ನು ರಣದಿದ ಬಲಾತ್ಕಾರವಾಗಿ ಹರಿತ ಬಾಣಗಳಿಂದ ಕರೆತಂದು ಮಹಾತ್ಮ ಕೌಂತೇಯನ ಪಾದಗಳಲ್ಲಿ ಕೆಡವಿಸುತ್ತೇನೆ. ಒಂದುವೇಳೆ ಅವರು ಧೀಮತನ ಕಾಲುಗಳಿಗೆ

ಬೀಳದಿದ್ದರೆ ಅಮಾತ್ಯರೊಂದಿಗೆ ಯಮನ ಸದನಕ್ಕೆ ಹೋಗುತ್ತಾರೆ. ಪರ್ವತಗಳು ವಜ್ರವನ್ನು ಹೇಗೆ ಸಹಿಸಲಾರವೋ ಹಾಗೆ ಅವರು ಈ ಕುಪಿತ ಯುದ್ಧೋತ್ಸಾಹಿ ಯುಯುಧಾನನ ವೇಗವನ್ನು ಎದುರಿಸಲು ಸಾಧ್ಯವಿಲ್ಲ. ಯುದ್ಧದಲ್ಲಿ ಯಾರುತಾನೇ ಗಾಂಡೀವವನ್ನು ಹಿಡಿದವನನ್ನು, ಯಾರು ತಾನೇ ಚಕ್ರಾಯುಧವನ್ನು ಹಿಡಿದವನನ್ನು, ಹೋರಾಡುತ್ತಿರುವ ನನ್ನನ್ನು ಮತ್ತು ದುರಾಸದ ಭೀಮನನ್ನು ತಡೆದುಕೊಳ್ಳಬಲ್ಲರು? ಜೀವವನ್ನು ಬಯಸುವ ಯಾರುತಾನೇ ಯಮಕಲ್ಪ ಮಹಾದ್ಯುತೀ ಅವಳಿಗರನ್ನು, ಪಾರ್ಷತ ಧೃಷ್ಟದ್ಯುಮ್ನನನ್ನು, ಪಾಂಡವರ ಸಮಪ್ರಮಾಣ-ಸಮವೀರರಾದ, ದ್ರೌಪದಿಯ ಕೀರ್ತಿವರ್ಧಕ, ಮದೋತ್ಕಟ ಪಂಚ ಪಾಂಡವೇಯರನ್ನು, ಅಮರರಿಗೂ ದುಃಸಹನಾಗಿರುವ ಮಹೇಷ್ವಾಸ ಸೌಭದ್ರಿಯನ್ನು, ಕಾಲ ಮತ್ತು ವಜ್ರರ ಸಮನಾಗಿರುವ ಗದ, ಪ್ರದ್ಯುಮ್ನ ಮತ್ತು ಸಾಂಬರನ್ನು ಎದುರಿಸಿಯಾರು? ಶಕುನಿ ಕರ್ಣರೊಂದಿಗೆ ಆ ಧೃತರಾಷ್ಟ್ರನ ಮಗನನ್ನು ಕೊಂದು ನಾವು ಪಾಂಡವನನ್ನು ಅಭಿಷೇಕಿಸೋಣ! ನಮ್ಮನ್ನು ತುಳಿಯುವ ಶತ್ರುಗಳನ್ನು ಹನನ ಮಾಡುವುದು ಎಂದೂ ಅಧರ್ಮವೆನಿಸಿಕೊಳ್ಳುವುದಿಲ್ಲ. ಆದರೆ ಶತ್ರುಗಳ ಎದುರಿಗೆ ಭಿಕ್ಷುಕರಾಗುವುದು ಅಧರ್ಮವೂ ಅಯಶಸ್ಕರವೂ ಎನಿಸಿಕೊಳ್ಳುತ್ತದೆ. ಪಾಂಡವನು ಹೃದಯದಲ್ಲಿ ಏನನ್ನು

ಬಯಸುತ್ತಾನೋ ಅದನ್ನು ಮಾಡೋಣ. ಅವನು ಧೃತರಾಷ್ಟ್ರನು ಕೊಟ್ಟ ರಾಜ್ಯವನ್ನು ಪಡೆಯಲಿ. ಇಂದು ಪಾಂಡುಸುತ ಯುಧಿಷ್ಠಿರನು ರಾಜ್ಯವನ್ನು ಪಡೆಯಬೇಕು ಅಥವಾ ಎಲ್ಲರೂ ರಣದಲ್ಲಿ ನಿಹತರಾಗಿ ನೆಲಕ್ಕುರುಳಬೇಕು!"

ದ್ರುಪದನು ಹೇಳಿದನು:

"ಮಹಾಬಾಹೋ! ನೀನು ಹೇಳಿದಂತೆಯೇ ಆಗುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ. ದುರ್ಯೋಧನನು ಒಳ್ಳೆಯ ಮಾತುಗಳಿಗೆ ರಾಜ್ಯವನ್ನು ಬಿಟ್ಟುಕೊಡುವುದಿಲ್ಲ. ಮಗನ ಮೇಲಿನ ಪ್ರೀತಿಯಿಂದ ಧೃತರಾಷ್ಟ್ರ, ಕಾರ್ಪಣ್ಯತೆಯಿಂದ ಭೀಷ್ಮ-ದ್ರೋಣರು ಮತ್ತು ಮೂರ್ಖತನದಿಂದ ರಾಧೇಯ-ಸೌಬಲರು ಅವನನ್ನೇ ಅನುಸರಿಸುತ್ತಾರೆ. ಬಲದೇವನ ಮಾತಾದರೋ ನನ್ನ ಜ್ಞಾನಕ್ಕೆ ಸಿಲುಕುವುದಿಲ್ಲ. ಅವನು ಹೇಳಿದುದನ್ನು ಸುನಯರಾಗಿರಲು ಬಯಸುವ ಪುರುಷರ ಮುಂದೆ ಮಾಡಬೇಕು. ಆದರೆ ಧಾರ್ತರಾಷ್ಟ್ರನನ್ನು ಮೃದುವಾದ ವಚನಗಳಲ್ಲಿ ಎಂದೂ ಮಾತನಾಡಿಸಬಾರದು. ಪಾಪಬುದ್ಧಿಯ ಅವನನ್ನು ನಯಮಾತುಗಳಿಂದ ಬದಲಾಯಿಸುವುದು ಅಸಾಧ್ಯ ಎಂದು ನನಗನ್ನಿಸುತ್ತದೆ. ಕತ್ತೆಗಳೊಂದಿಗೆ ಸೌಮ್ಯವಾಗಿ ನಡೆದುಕೊಳ್ಳಬೇಕು. ಗೋವುಗಳೊಂದಿಗೆ ತೀಕ್ಷ್ಣವಾಗಿ ನಡೆದುಕೊಳ್ಳಬೇಕು. ಒಂದುವೇಳೆ ದುರ್ಯೋಧನನೊಡನೆ ಮೃದುವಾಗಿ

ಮಾತನಾಡಿದರೆ ಆ ಪಾಪಿ ಪಾಪಚೇತಸಿಯು ಮೃದುವಾಗಿ ಮಾತನಾಡುವವನು ಅಶಕ್ತನೆಂದು ತಿಳಿದುಕೊಳ್ಳುತ್ತಾನೆ. ಮೃದುವಾಗಿ ನಡೆದುಕೊಂಡರೆ ಆ ಮೂಢನು ತಾನೇ ಗೆದ್ದೆನೆಂದು ತಿಳಿದುಕೊಂಡುಬಿಡುತ್ತಾನೆ. ನಾವು ಇದನ್ನೂ ಮಾಡೋಣ; ತಯಾರಿಯನ್ನೂ ಮಾಡೋಣ! ನಮ್ಮ ಮಿತ್ರರಲ್ಲಿ ಪ್ರಸ್ತಾವಿಸಿ ಸೇನೆಯನ್ನು ಒಟ್ಟುಗೂಡಿಸೋಣ! ಶೀಘ್ರವಾಗಿ ಹೋಗಬಲ್ಲ ದೂತರನ್ನು ಶಲ್ಯ, ದೃಷ್ಟಕೇತು, ಜಯತ್ಸೇನ, ಮತ್ತು ಕೇಕಯ ರಾಜರೆಲ್ಲರ ಬಳಿ ಕಳುಹಿಸೋಣ. ದುರ್ಯೋಧನನೂ ಕೂಡ ಎಲ್ಲೆಡೆ ದೂತರನ್ನು ಕಳುಹಿಸುತ್ತಾನೆ. ಆದರೆ ಒಳ್ಳೆಯವರು ಮೊದಲು ಬಂದು ಕೇಳಿಕೊಂಡವರ ಕಡೆ ಹೋಗುತ್ತಾರೆ. ಆದುದರಿಂದ ಅವಸರ ಮಾಡಿ ಮೊದಲೇ ನರೇಂದ್ರರನ್ನು ಕೇಳಿಕೊಳ್ಳೋಣ. ಮಹಾಕಾರ್ಯವೊಂದು ಕಾಯುತ್ತಿದೆ ಎಂದು ನನಗನ್ನಿಸುತ್ತಿದೆ. ಶೀಘ್ರದಲ್ಲಿಯೇ ಶಲ್ಯ ಮತ್ತು ಅವನ ಅನುಯಾಯಿ ನೃಪರಿಗೆ, ಪೂರ್ವಸಾಗರದಲ್ಲಿ ವಾಸಿಸುವ ಅಮಿತೌಜಸ ರಾಜ ಭಗದತ್ತನಿಗೆ, ಉಗ್ರ ಹಾರ್ದಿಕ್ಯ ಮತ್ತು ಆಹುಕರಿಗೆ, ದೀರ್ಘಪ್ರಜ್ಞ, ಮಲ್ಲ, ವಿಭೂ ರೋಚಮಾನನಿಗೆ ಹೇಳಿ ಕಳುಹಿಸೋಣ. ಇವರೆಲ್ಲರನ್ನೂ ಕರೆಸೋಣ: ಬೃಹಂತ, ಪಾರ್ಥಿವ ಸೇನಾಬಿಂದು, ಪಾಪಚಿತ್, ಪ್ರತಿವಿಂಧ್ಯ, ಚಿತ್ರವರ್ಮ, ಸುವಾಸ್ತುಕ, ಬಾಹ್ಲೀಕ, ಚೈದ್ಯಾಧಿಪತಿ ಮುಂಜಕೇಶ, ಸುಪಾರ್ಶ್ವ, ಸುಬಾಹು,

ಮಹಾರಥಿ ಪೌರವ, ಶಕರ, ಪಹ್ಲರ, ದರದರ ನೃಪರು, ಕಾಂಬೋಜಾ, ಋಷಿಕಾ, ಪಶ್ಚಿಮ ಅನೂಪಕಾ, ಜಯತ್ಸೇನ, ಕಾಶಿ, ಮತ್ತು ಪಂಚನದಾ ನೃಪರು, ಜಾನಕಿ, ಸುಶರ್ಮ, ಮಣಿಮಾನ್, ಪೌತಿಪತ್ಸಕ, ಪಾಂಸುರಾಷ್ಟ್ರಾಧಿಪ, ವೀರ್ಯವಾನ್ ದೃಷ್ಟಕೇತು, ಔಡ್ರ, ದಂಡಧಾರ, ವೀರ್ಯವಾನ್ ಬೃಹತ್ಸೇನ, ಅಪರಾಜಿತ, ನಿಷಾದ, ಶ್ರೇನಿಮತ್, ವಸುಮತ್, ಮಹೌಜಸ ಬೃಹದ್ಬಲ, ಪರಪುರಂಜಯ ಬಾಹು, ಪುತ್ರರೊಂದಿಗೆ ವೀರ್ಯವಾನ ರಾಜ ಸಮುದ್ರಸೇನ, ಅದಾರಿ, ನದೀಜ, ರಾಜ ಕರ್ಣವೇಷ್ಟ, ಸಮರ್ಥ, ಸುವೀರ, ಮಾರ್ಜಾರ, ಕನ್ಯಕ, ಮಹಾವೀರ ಕದ್ರು, ನಿಕರಸ್ತುಮುಲ, ಕ್ರಥ, ವೀರಧರ್ಮ ನೀಲ, ವೀರ್ಯವಾನ್ ಭೂಮಿಪಾಲ, ದುರ್ಜಯ ದಂತವಕ್ತ್ರ, ರುಕ್ಮಿ, ಜನಮೇಜಯ, ಆಷಾಢ, ವಾಯುವೇಗ, ಪಾರ್ಥಿವ ಪೂರ್ವಪಾಲೀ, ಭೂರಿತೇಜ ದೇವಕ, ಅವನ ಮಗ ಏಕಲವ್ಯ, ರಾಜ ಕಾರೂಷಕ, ವೀರ್ಯವಾನ ಕ್ಷೇಮಧೂರ್ತಿ, ಉದ್ಭವ, ಕ್ಷೇಮಕ, ಪಾರ್ಥಿವ ವಾಟದಾನ, ಶ್ರುತಾಯು, ದೃಢಾಯು, ವೀರ್ಯವಾನ್ ಶಾಲ್ವಪುತ್ರ, ಕಲಿಂಗರ ರಾಜ ಯುದ್ಧ ಧುರ್ಮದ ಕುಮಾರ. ಇವರೆಲ್ಲರಿಗೂ ಶೀಘ್ರದಲ್ಲಿ ಹೇಳಿಕಳುಹಿಸಬೇಕೆಂದು ನನ್ನ ಬದ್ಧಿಗೆ ಹೊಳೆಯುತ್ತದೆ. ರಾಜನ್! ನನ್ನ ಈ ಪುರೋಹಿತ ಬ್ರಾಹ್ಮಣನನ್ನು

ಶೀಘ್ರದಲ್ಲಿಯೇ ಧೃತರಾಷ್ಟ್ರನಲ್ಲಿಗೆ ಕಳುಹಿಸೋಣ. ದುರ್ಯೋಧನನಿಗೆ ಏನು ಹೇಳಬೇಕೆನ್ನುವುದನ್ನೂ, ಶಾಂತನವ, ನೃಪ ಧೃತರಾಷ್ಟ್ರ ಮತ್ತು ವಿದುಷರಲ್ಲಿ ಶ್ರೇಷ್ಠ ದ್ರೋಣನಿಗೆ ಏನು ಹೇಳಬೇಕೆನ್ನುವುದನ್ನೂ ಅವನಿಗೆ ತಿಳಿಸಿಕೊಡು.”

ವಾಸುದೇವನು ಹೇಳಿದನು:

“ಸೋಮಕರ ಧುರಂಧರ! ರಾಜರಿಗೆ ತಕ್ಕುದಾದ ಮಾತಿದು. ಮಹೌಜಸ ಪಾಂಡವನ ಅರ್ಥಸಿದ್ಧಿಕರವಾದುದು. ಸುನೀತಮಾರ್ಗವನ್ನು ಬಯಸುವವರಿಗೆ ಇದೇ ಮೊದಲು ಮಾಡಬೇಕಾದ ಕಾರ್ಯ. ಅನ್ಯಥಾ ನಡೆದುಕೊಳ್ಳುವ ಮತ್ತು ಮಾಡುವ ಪುರುಷನು ಬಾಲಿಶನೇ ಸರಿ. ಅವರು ಪಾಂಡವರೊಂದಿಗೆ ವರ್ತಮಾನದಲ್ಲಿ ಹೇಗೆ ನಡೆದುಕೊಂಡರೂ ಕುರು ಮತ್ತು ಪಾಂಡವರೊಂದಿಗೆ ನಮ್ಮ ಸಂಬಂಧವು ಸಮನಾದುದು.  ನಿನ್ನಂತೆ ನಾವೆಲ್ಲರೂ ಇಲ್ಲಿಗೆ ವಿವಾಹಾರ್ಥವಾಗಿ ಆಹ್ವಾನಿತರಾಗಿ ಬಂದಿದ್ದೇವೆ. ವಿವಾಹವು ಮುಗಿದು ಸಂತೋಷಗೊಂಡು ಮನೆಗಳಿಗೆ ಹೋಗೋಣ. ನೀನಾದರೋ ವಯಸ್ಸಿನಲ್ಲಿ ಮತ್ತು ತಿಳುವಳಿಕೆಯಲ್ಲಿ ರಾಜರಲ್ಲೆಲ್ಲಾ ಹಿರಿಯವನು. ಆದುದರಿಂದ ಇಲ್ಲಿರುವ ನಾವೆಲ್ಲರೂ ನಿನ್ನ ಶಿಷ್ಯರಂತೆ ಎನ್ನುವುದರಲ್ಲಿ ಸಂಶಯವಿಲ್ಲ. ಧೃತರಾಷ್ಟ್ರನು ನಿನ್ನನ್ನು ಸತತವಾಗಿ ಬಹಳಷ್ಟು

ಗೌರವಿಸುತ್ತಾನೆ. ಆಚಾರ್ಯ ದ್ರೋಣ ಮತ್ತು ಕೃಪರ ಗೆಳೆಯನೂ ಆಗಿರುವೆ. ಆದುದರಿಂದ ಇಂದು ಪಾಂಡವಾರ್ಥವಾಗಿ ಸಂದೇಶವನ್ನು ಅವರಿಗೆ ಕಳುಹಿಸಬೇಕೆಂದು ನಾನು ನಿನ್ನಲ್ಲಿ ಕೇಳಿಕೊಳ್ಳುತ್ತೇನೆ. ನೀನು ಸಂದೇಶವನ್ನು ಕಳುಹಿಸಬೇಕೆಂದು ನಮ್ಮೆಲ್ಲರ ನಿರ್ಧಾರ. ಒಂದುವೇಳೆ ಕುರುಪುಂಗವರು ನ್ಯಾಯದಿಂದ ಶಾಂತಿಗಾಗಿ ನಡೆದುಕೊಂಡರೆ ಕುರು-ಪಾಂಡವರ ನಡುವಿನ ಸೌಭ್ರಾತೃತ್ವವು ಮಹಾ ಕ್ಷಯವನ್ನು ಹೊಂದುವುದಿಲ್ಲ. ಇಲ್ಲವಾದರೆ ಆ ಮಂದಬುದ್ಧಿ ಮೂಢ ದುರ್ಯೋಧನನನು ಅಮಾತ್ಯ-ಬಾಂಧವರೊಡನೆ ಕೃದ್ಧ ಗಾಂಡೀವಧನುಸ್ಸಿನಿಂದ ಕೊನೆಯನ್ನು ಕಾಣುತ್ತಾನೆ.”

ಅನಂತರ ರಾಜ ವಿರಾಟನು ವಾರ್ಷ್ಣೇಯನನ್ನು ಸತ್ಕರಿಸಿ ಅವನ ಗಣ ಬಾಂಧವರೊಡನೆ ಮನೆಗಳಿಗೆ ಕಳುಹಿಸಿಕೊಟ್ಟನು. ಕೃಷ್ಣನು ದ್ವಾರಕೆಗೆ ಹೋದ ನಂತರ ಯುಧಿಷ್ಠಿರನು ತನ್ನ ಅನುಯಾಯಿಗಳೊಂದಿಗೆ ಮತ್ತು ರಾಜ ವಿರಾಟನೊಂದಿಗೆ ಯುದ್ಧದ ಎಲ್ಲ ತಯಾರಿಗಳನ್ನೂ ನಡೆಸಿದನು. ಅನಂತರ ವಿರಾಟನು ಎಲ್ಲ ಭೂಮಿಪಾಲರನ್ನೂ ಮಹೀಪತಿ ದ್ರುಪದನನ್ನೂ ಬಾಂಧವರೊಂದಿಗೆ ಕಳುಹಿಸಿಕೊಟ್ಟನು. ಕುರುಸಿಂಹರ ಮತ್ತು ಮತ್ಸ್ಯ-ಪಾಂಚಾಲರ ಮಾತಿನಂತೆ ಸಂತೋಷಗೊಂಡು ಮಹಾಬಲ ಮಹೀಪಾಲರು ಬಂದು ಸೇರಿದರು. ಪಾಂಡುಪುತ್ರರು ಮಹಾಬಲವನ್ನು ಒಟ್ಟುಗೂಡಿಸಿದ್ದಾರೆ ಎಂದು ಕೇಳಿದ

ಧೃತರಾಷ್ಟ್ರಪುತ್ರನೂ ಕೂಡ ಮಹೀಪತಿಗಳನ್ನು ಒಟ್ಟುಗೂಡಿಸಿದನು. ಆಗ ಕುರು-ಪಾಂಡವರ ಕಾರಣದಿಂದ ಪ್ರಯಾಣಿಸುತ್ತಿದ್ದ ಮಹೀಕ್ಷಿತರಿಂದ ಇಡೀ ಭೂಮಿಯು ತುಂಬಿಹೋಯಿತು. ಎಲ್ಲೆಡೆಯಿಂದ ಬರುತ್ತಿರುವ ಆ ವೀರರ ನಡುಗೆಯಿಂದ ಪರ್ವತ ವನಗಳಿಂದ ಕೂಡಿದ ಇಡೀ ಭೂಮಿದೇವಿಯು ನಡುಗುತ್ತಿರುವಂತೆ ತೋರಿತು.

## ಅರ್ಜುನನು ಕೃಷ್ಣನನ್ನು ಸಾರಥಿಯನ್ನಾಗಿ ಆರಿಸಿಕೊಂಡಿದುದು

ಮಾಧವ ಕೃಷ್ಣ ಮತ್ತು ಬಲದೇವರು ನೂರಾರು ವೃಷ್ಣಿ, ಅಂಧಕ, ಮತ್ತು ಭೋಜರೆಲ್ಲರೊಡನೆ ದ್ವಾರವತಿಗೆ ಹೋಗಲು, ರಾಜಾ ಧೃತರಾಷ್ಟ್ರನ ಮಗನು, ಕಳುಹಿಸಿದ ಹಿತೈಷಿ ದೂತರ ಮೂಲಕ ಪಾಂಡವರು ನಡೆಸಿದ್ದ ಎಲ್ಲದರ ಕುರಿತು ವಿಷಯಗಳನ್ನು ಸಂಗ್ರಹಿಸಿಕೊಂಡನು. ಮಾಧವನು ಬರುತ್ತಿದ್ದಾನೆಂದು ಕೇಳಿದ ಅವನು ವಾಯುವೇಗದ ಉತ್ತಮ ಕುದುರೆಗಳನ್ನೇರಿ ಅತಿ ದೊಡ್ಡದಲ್ಲದ ದಂಡಿನೊಂದಿಗೆ ದ್ವಾರಕಾಪುರಿಗೆ ಬಂದನು. ಅದೇ ದಿವಸ ಕೌಂತೇಯ ಪಾಂಡುನಂದನ ಧನಂಜಯನೂ ಕೂಡ ರಮ್ಯ ಆನರ್ತನಗರಿಗೆ ಬಂದನು. ದ್ವಾರಕೆಗೆ ಬಂದ ಆ ಪುರುಷವ್ಯಾಘ್ರ ಕುರುನಂದನರಿಬ್ಬರೂ ಕೃಷ್ಣನು ಮಲಗಿಕೊಂಡಿದ್ದುದನ್ನು ನೋಡಿ ಮಲಗಿರುವವನ ಬಳಿಸಾರಿದರು. ಗೋವಿಂದನು ಮಲಗಿರುವಲ್ಲಿ ಸುಯೋಧನನು ಪ್ರವೇಶಿಸಿದನು ಮತ್ತು ಕೃಷ್ಣನ ಮಂಚದ ತಲೆಯ ಹತ್ತಿರದ ವರಾಸನದಲ್ಲಿ ಕುಳಿತುಕೊಂಡನು.



ಅವನ ನಂತರ ಮಹಾಮನಸ್ವಿ ಕಿರೀಟಿಯು ಪ್ರವೇಶಿಸಿದನು ಮತ್ತು ಕೃಷ್ಣನ ಮಂಚದ ಕೊನೆಯಲ್ಲಿ ಕೈಮುಗಿದು ತಲೆಬಾಗಿ ನಿಂತುಕೊಂಡನು. ಆ ವಾರ್ಷ್ಣೇಯನು ಎಚ್ಚೆತ್ತಾಗ ಮೊದಲು ಕಿರೀಟಿಯನ್ನು ಕಂಡನು. ಅವನನ್ನು ಸ್ವಾಗತಿಸಿ ಯಥಾರ್ಹವಾಗಿ ಪ್ರತಿಪೂಜಿಸಿ ಮಧುಸೂದನನು ಅವನ ಆಗಮನದ ಕಾರಣವನ್ನು ಕೇಳಿದನು. ಆಗ ದುರ್ಯೋಧನನು ನಗುತ್ತಾ ಕೃಷ್ಣನಿಗೆ ಹೇಳಿದನು:

"ಈ ಯುದ್ಧದಲ್ಲಿ ನೀನು ನನಗೆ ಸಹಾಯವನ್ನು ನೀಡಬೇಕು.

ನನ್ನಲ್ಲಿ ಮತ್ತು ಅರ್ಜುನನನಲ್ಲಿ ನಿನ್ನ ಸಖ್ಯವು ಸಮನಾಗಿದೆ. ಮಾಧವ! ಹಾಗೆಯೇ ನೀನು ನಮ್ಮಿಬ್ಬರೊಡನೆ ಒಂದೇ ರೀತಿಯ ಸಂಬಂಧಿಕನೂ ಹೌದು. ಇಂದು ನಾನು ನಿನ್ನಲ್ಲಿಗೆ ಮೊದಲು ಬಂದವನು. ಸಂತರು ಮೊದಲು ಬಂದವರಲ್ಲಿ ಬಂದ ಕಾರಣವನ್ನು ಕೇಳುತ್ತಾರೆ. ಇದು ಮೊದಲಿನಿಂದಲೂ ನಡೆದುಕೊಂಡು ಬಂದಿರುವುದು. ನೀನಾದರೋ ಲೋಕದಲ್ಲಿರುವ ಸಂತರಲ್ಲಿಯೇ ಶ್ರೇಷ್ಠನೆನಿಸಿಕೊಂಡವನು! ಸತತವೂ ಸಮ್ಮತನಾಗಿರುವೆ. ಆದುದರಿಂದ ಒಳ್ಳೆಯ ನಡತೆಯನ್ನು ಅನುಸರಿಸು."

ಕೃಷ್ಣನು ಹೇಳಿದನು:

"ರಾಜನ್! ನೀನು ಮೊದಲು ಬಂದಿರುವೆ ಎನ್ನುವುದರಲ್ಲಿ ನಾನು ಸಂಶಯಪಡುವುದಿಲ್ಲ. ಆದರೆ ನನಗೆ ಮೊದಲು ಕಂಡವನು ಪಾರ್ಥ ಧನಂಜಯ. ಮೊದಲು ಬಂದಿರುವುದರಿಂದ ನಿನಗೆ ಮತ್ತು ಮೊದಲು ದರ್ಶನವಾದುದರಿಂದ ಇವನಿಗೆ ಇಬ್ಬರಿಗೂ ನಾನು ಸಹಾಯವನ್ನು ಮಾಡುತ್ತೇನೆ. ಆದರೆ ಮೊದಲ ಆಯ್ಕೆಯನ್ನು ಕಿರಿಯವರಿಗೆ ಕೊಡಬೇಕೆಂದು ಶ್ರುತಿಯು ಹೇಳುತ್ತದೆ. ಆದುದರಿಂದ ಪಾರ್ಥ ಧನಂಜಯನು ಮೊದಲ ಆಯ್ಕೆಗೆ ಅರ್ಹ. ಯುದ್ಧದಲ್ಲಿ ನನ್ನ ಸರಿಸಮರಾಗಿರುವ ಹತ್ತು ಕೋಟಿ

ಎಲ್ಲ ಸಂಗ್ರಾಮಯೋಧರ ನಾರಾಯಣ ಎಂದು ಖ್ಯಾತವಾದ ಗೋಪರ ಸೇನೆಯಿದೆ. ಯುದ್ಧದಲ್ಲಿ ದುರಾಧರ್ಷ ಈ ಸೇನೆಯನ್ನು ನಿಮ್ಮಲ್ಲಿ ಒಬ್ಬನಿಗೆ ಮತ್ತು ಯುದ್ಧಮಾಡದೇ ಇರುವ, ಸಂಗ್ರಾಮದಲ್ಲಿ ನಿಃಶಸ್ತ್ರನಾಗಿರುವ ನಾನೊಬ್ಬನು ಇನ್ನೊಬ್ಬನಿಗೆ. ಪಾರ್ಥ! ಇವೆರಡರಲ್ಲಿ ನಿನ್ನ ಹೃದಯಕ್ಕೆ ಯಾವುದು ಬೇಕೆನಿಸುತ್ತದೆಯೋ ಅದನ್ನು ಆರಿಸಿಕೋ. ಧರ್ಮದಪ್ರಕಾರ ಮೊದಲ ಆಯ್ಕೆ ನಿನಗೇ ಇದೆ."

ಕೃಷ್ಣನು ಹೀಗೆ ಹೇಳಲು ಕುಂತೀಪುತ್ರ ಧನಂಜಯನು ಸಂಗ್ರಾಮದಲ್ಲಿ ಯುದ್ಧಮಾಡದೇ ಇರುವ ಕೇಶವನನ್ನು ಆರಿಸಿಕೊಂಡನು. ಪಾರ್ಥಿವ ದುರ್ಯೋಧನನು ಸಹಸ್ರ ಸಹಸ್ರ ಸಂಖ್ಯೆಯ ಯೋಧರನ್ನು ಪಡೆದು, ಕೃಷ್ಣನು ತನ್ನ ಕಡೆ ಇಲ್ಲವೆಂದು ತಿಳಿದೂ ಆ ಸೈನ್ಯವನ್ನೆಲ್ಲ ಪಡೆದನೆಂದು ಪರಮ ಸಂತೋಷವನ್ನು ಹೊಂದಿದನು. ಅನಂತರ ಆ ಭೀಮಬಲನು ಮಹಾಬಲ ರೌಹಿಣೇಯನ ಬಳಿ ಹೋಗಿ ಬಂದಿದುದರ ಕಾರಣವನ್ನೆಲ್ಲಾ ಅವನಿಗೆ ನಿವೇದಿಸಿದನು. ಆಗ ಶೌರಿಯು ಧಾರ್ತರಾಷ್ಟ್ರನಿಗೆ ಈ ಮಾತನ್ನಾಡಿದನು:

"ನರವ್ಯಾಘ್ರ! ವಿರಾಟನ ಪುರಿಯಲ್ಲಿ ವಿವಾಹದ ಸಮಯದಲ್ಲಿ ನಾನು ಏನೆಲ್ಲ ಹೇಳಿದೆನೆನ್ನುವುದು ನಿನಗೆ ತಿಳಿದಿರಲೇ ಬೇಕು. ಆಗ ನಾನು, ನಿನಗೋಸ್ಕರ, ಹೃಷೀಕೇಶನ ವಿರುದ್ಧವಾಗಿ ಮಾತನಾಡಿದೆ. ಪುನಃ ಪುನಃ ನನ್ನ ಸಂಬಂಧವು ಇಬ್ಬರೊಡನೆಯೂ ಸಮನಾದುದೆಂದು ಹೇಳಿದೆ. ಆದರೆ

ಕೃಷ್ಣನು ಆಗ ಹೇಳಿದ ನನ್ನ ಮಾತುಗಳಂತೆ ನಡೆದುಕೊಳ್ಳಲಿಲ್ಲ. ಮತ್ತು ಕೃಷ್ಣನಿಲ್ಲದೇ ಒಂದು ಕ್ಷಣವಿರಲೂ ನನಗೆ ಉತ್ಸಾಹವಿಲ್ಲ. ವಾಸುದೇವನ ವಿರುದ್ಧ ಹೋಗಲಾರೆನೆಂದು ತಿಳಿದು ನಾನು ಪಾರ್ಥರಿಗೂ ದುರ್ಯೋಧನನಿಗೂ ಸಹಾಯ ಮಾಡುವುದಿಲ್ಲ ಎಂದು ನಿಶ್ಚಯಿಸಿದ್ದೇನೆ. ಸರ್ವ ಪಾರ್ಥಿವರಿಂದ ಪೂಜಿತಗೊಂಡ ಭಾರತ ವಂಶದಲ್ಲಿ ಜನಿಸಿದ್ದೀಯೆ. ಹೋಗು. ಕ್ಷಾತ್ರಧರ್ಮದಂತೆ ಯುದ್ಧಮಾಡು."

ಹೀಗೆ ಹೇಳಲು ಅವನು ಹಲಾಯುಧನನ್ನು ಆಲಂಗಿಸಿದನು. ಕೃಷ್ಣನನ್ನು ಜಯನು ಅಪಹರಿಸಿದನೆಂದು ತಿಳಿದೂ ಯುದ್ಧದಲ್ಲಿ ಅವನನ್ನು ಗೆದ್ದುಬಿಟ್ಟೆ ಎಂದು ತಿಳಿದುಕೊಂಡನು.ಅನಂತರ ನೃಪ ಧೃತರಾಷ್ಟ್ರಸುತನು ಕೃತವರ್ಮನ ಬಳಿ ಹೋದನು. ಆಗ ಕೃತವರ್ಮನು ಅವನಿಗೆ ಒಂದು ಅಕ್ಷೌಹಿಣೀ ಸೇನೆಯನ್ನು ಕೊಟ್ಟನು. ಆ ಭಯಂಕರ ಸರ್ವಸೈನ್ಯಗಳಿಂದ ಸುತ್ತುವರೆಯಲ್ಪಟ್ಟು, ಸಂತೋಷಗೊಂಡ ಸ್ನೇಹಿತರೊಂದಿಗೆ ಹರ್ಷಿಸುತ್ತಾ ಕುರುನಂದನನು ಹೊರಟನು.

ದುರ್ಯೋಧನನು ಹೊರಟುಹೋದ ನಂತರ ಕೃಷ್ಣನು ಕಿರೀಟಿಯಲ್ಲಿ ಕೇಳಿದನು:

"ಯುದ್ಧವನ್ನೇ ಮಾಡದಿರುವ ನನ್ನನ್ನು ಏನನ್ನು ಯೋಚಿಸಿ ಆರಿಸಿಕೊಂಡೆ?"

ಅರ್ಜುನನು ಹೇಳಿದನು:

“ಅವರೆಲ್ಲರನ್ನೂ ನೀನು ಕೊಲ್ಲಲು ಸಮರ್ಥ ಎನ್ನುವುದರಲ್ಲಿ ಸಂಶಯವಿಲ್ಲ. ಪುರುಷೋತ್ತಮ! ನಾನೊಬ್ಬನೇ ಅವರನ್ನು ಕೊಲ್ಲಲು ಸಮರ್ಥ. ನೀನಾದರೋ ಲೋಕದಲ್ಲಿ ಕೀರ್ತಿವಂತನಾಗಿರುವೆ ಮತ್ತು ಅದು ನಿನ್ನೊಂದಿಗೇ ಹೋಗುತ್ತದೆ. ನಾನೂ ಕೂಡ ಯಶಸ್ಸನ್ನು ಬಯಸುತ್ತಿದ್ದೇನಾದುದರಿಂದ ನಿನ್ನನ್ನು ನಾನು ಆರಿಸಿಕೊಂಡೆ. ನಿನ್ನಿಂದ ಸಾರಥ್ಯವನ್ನು ಮಾಡಿಸಿಕೊಳ್ಳಬೇಕು ಎಂದು ಸದಾ ನನ್ನ ಮನಸ್ಸಿನಲ್ಲಿತ್ತು. ತುಂಬಾ ಸಮಯದಿಂದಿರುವ ಈ ಬಯಕೆಯನ್ನು ನೀನು ಪೂರೈಸಿಕೊಡಬೇಕು.”

ವಾಸುದೇವನು ಹೇಳಿದನು:

“ಪಾರ್ಥ! ನನ್ನೊಡನೆ ಸ್ಪರ್ಧಿಸುತ್ತಿದ್ದೀಯೆ ಎನ್ನುವುದು ಇದರಿಂದ ತೋರುತ್ತಿದೆ. ನಿನ್ನ ಸಾರಥ್ಯವನ್ನು ಮಾಡುತ್ತೇನೆ. ನಿನ್ನ ಬಯಕೆಯು ಪೂರೈಸಲಿ!”

ಹೀಗೆ ಸಂತೋಷಗೊಂಡ ಪಾರ್ಥನು ದಾಶಾರ್ಹಪ್ರವರನೊಡಗೂಡಿ ಪುನಃ ಯುಧಿಷ್ಠಿರನಲ್ಲಿಗೆ ಬಂದನು.

## ಶಲ್ಯನು ಮೋಸಗೊಂಡು ದುರ್ಯೋಧನನ ಪಕ್ಷವನ್ನು ಸೇರಿದುದು

ದೂತರಿಂದ ಕೇಳಿದ ಶಲ್ಯನು ಮಹಾರಥ ಪುತ್ರರೊಂದಿಗೆ ಪಾಂಡವರಲ್ಲಿಗೆ ಬರುತ್ತಿದ್ದನು. ಅವನ ಸೇನೆಯ ಡೇರೆಯು ಅರ್ಧ ಯೋಜನೆಯಷ್ಟು ಜಾಗವನ್ನು ಆವರಿಸಿತ್ತು. ಅಷ್ಟೊಂದು ದೊಡ್ಡದಾಗಿತ್ತು ಆ ನರರ್ಷಭನ ಸೇನೆ. ಅವರೆಲ್ಲ ಶೂರರೂ ವಿಚಿತ್ರಕವಚಗಳನ್ನು ಧರಿಸಿದವರೂ, ವಿಚಿತ್ರ ಧ್ವಜ-ಬಿಲ್ಲುಗಳನ್ನು ಹೊಂದಿದವರೂ, ವಿಚಿತ್ರಾಭರಣಗಳನ್ನು ಧರಿಸಿದವರೂ, ವಿಚಿತ್ರ ರಥವಾಹನರೂ ಆಗಿದ್ದರು. ಸ್ವದೇಶದ ವೇಷಾಭರಣಗಳನ್ನು ಧರಿಸಿದ ನೂರಾರು ಸಾವಿರಾರು ಕ್ಷತ್ರಿಯರ್ಷಭ ವೀರರು ಅವನ ಸೇನೆಯ ಮುಖಂಡರಾಗಿದ್ದರು. ಅವನ ಸೇನೆಯು ನಿಧಾನವಾಗಿ ಅಲ್ಲಲ್ಲಿ ವಿಶ್ರಮಿಸುತ್ತಾ ಪಾಂಡವರಿರುವಲ್ಲಿಗೆ ಬರುತ್ತಿರಲು ಭೂಮಿಯ ಮೇಲಿರುವವುಗಳು ವ್ಯಥಿತಗೊಂಡವು. ಆಗ ಮಹಾಸೇನ ಮಹಾರಥನು ಬರುತ್ತಿದ್ದಾನೆಂದು ಕೇಳಿದ ದುರ್ಯೋಧನನು ಅವನನ್ನು ಸ್ವಯಂ ಎದುರುಗೊಂಡು ಗೌರವಿಸಿದನು. ಅವನನ್ನು ಪೂಜಿಸಲು ದುರ್ಯೋಧನನು ರಮಣೀಯ ಪ್ರದೇಶಗಳಲ್ಲಿ ರತ್ನ-ಚಿತ್ರಗಳಿಂದ ಸ್ವಲಂಕೃತ ಸಭೆಗಳನ್ನು ನಿರ್ಮಿಸಿದನು. ದೇಶ ದೇಶಗಳಲ್ಲಿ ಆ ಸಭೆಗಳಿಗೆ ಹೋಗಿ ಅಮರನಂತೆ ದುರ್ಯೋಧನನ ಸಚಿವರಿಂದ ಯಥಾರ್ಹನಾಗಿ ಪೂಜೆಗೊಂಡು, ದೇವತೆಗಳ ವಾಸದಂತೆ ಶೋಭಿಸುವ ಇನ್ನೊಂದು ಸಭೆಗೆ ಬಂದನು. ಅಲ್ಲಿ ಯುಕ್ತ ವಿಷಯಗಳಿಂದ ಅತಿಮಾನುಷ ಸುಖಭೋಗಗಳಿಂದ ಪೂಜಿಸಲ್ಪಟ್ಟು ಅವನು ತಾನು ಪುರಂದರನಿಗಿಂತ ಅಧಿಕನೇನೋ ಎಂದು ಭಾವಿಸಿದನು. ಆ ಕ್ಷತ್ರಿಯರ್ಷಭನು

ಸಂತೋಷಗೊಂಡು ತನ್ನ ಸೇವಕರನ್ನು ಕೇಳಿದನು:

"ಈ ಸಭೆಗಳನ್ನು ನಿರ್ಮಿಸಿದ ಯುಧಿಷ್ಠಿರನ ಜನರು ಎಲ್ಲಿದ್ದಾರೆ? ಈ ಸಭಾಕಾರರನ್ನು ನನ್ನೆದುರಿಗೆ ಕರೆದುಕೊಂಡು ಬನ್ನಿ."

ಆಗ ಅಡಗಿಕೊಂಡಿದ್ದ ದುರ್ಯೋಧನನು ಮಾವನಿಗೆ ಕಾಣಿಸಿಕೊಂಡನು. ಅವನನ್ನು ನೋಡಿ ಇದು ಅವನ ಪ್ರಯತ್ನವೆಂದು ತಿಳಿದ ಮದ್ರರಾಜನು ಅವನನ್ನು ಆಲಂಗಿಸಿ

"ನಿನಗಿಷ್ಟವಾದುದನ್ನು ಕೇಳಿ ಪಡೆದುಕೋ!"

ಎಂದು ಹೇಳಿದನು. ದುರ್ಯೋಧನನು ಹೇಳಿದನು:

"ಕಲ್ಯಾಣ! ಸತ್ಯವಾಗ್ಮಿಯಾಗು. ನನಗೆ ವರವನ್ನು ನೀಡುವವನಾಗು. ನೀನು ನನ್ನ ಸರ್ವ ಸೇನೆಯ ನಾಯಕನಾಗಬೇಕು."

"ಹಾಗೆಯೇ ಆಗಲಿ! ಇನ್ನೇನು ಮಾಡಲಿಕ್ಕಾಗುತ್ತದೆ?" ಎಂದು ಶಲ್ಯನು ಹೇಳಲು ಗಾಂಧಾರಿಯ ಮಗನು "ಆಯಿತು" ಎಂದು ಪುನಃ ಪುನಃ ಉತ್ತರಿಸಿದನು. ಹೀಗೆ ಶಲ್ಯನನ್ನು ಆಮಂತ್ರಿಸಿ ಅವನು ತನ್ನ ಪುರಕ್ಕೆ ಹಿಂದಿರುಗಿದನು. ಶಲ್ಯನು ಅವನು ನಡೆಸಿದುದನ್ನು ಹೇಳಲು ಕೌಂತೇಯನಲ್ಲಿಗೆ ಹೋದನು. ಉಪಪ್ಲವ್ಯಕ್ಕೆ ಹೋಗಿ ಡೇರೆಯನ್ನು ಪ್ರವೇಶಿಸಿ ಅಲ್ಲಿ ಪಾಂಡವರೆಲ್ಲರನ್ನೂ ಶಲ್ಯನು ಕಂಡನು. ಮಹಾಬಾಹು ಶಲ್ಯನು ಪಾಂಡುಸುತರನ್ನು ಸೇರಿ ಯಥಾವಿಧಿಯಾಗಿ ಪಾದ್ಯ, ಅರ್ಘ್ಯ

ಮತ್ತು ಗೋವನ್ನು ಸ್ವೀಕರಿಸಿದನು. ಆಗ ಮೊದಲು ಅರಿಸೂದನ ಮದ್ರರಾಜನು ಕುಶಲವನ್ನು ಕೇಳಿ ಪರಮ ಪ್ರೀತಿಯಿಂದ ಯುಧಿಷ್ಠಿರನನ್ನು, ಭೀಮಾರ್ಜುನರನ್ನೂ ಮತ್ತು ಹಾಗೆಯೇ ಹೃಷ್ಟರಾಗಿದ್ದ ಯಮಳರಿಬ್ಬರನ್ನೂ ಬಿಗಿದಪ್ಪಿದನು. ಆಸನದಲ್ಲಿ ಕುಳಿತುಕೊಂಡ ಶಲ್ಯನು ಪಾರ್ಥನಿಗೆ ಹೇಳಿದನು:

> “ರಾಜಶಾರ್ದೂಲ! ನೀನು ಕುಶಲವಾಗಿದ್ದೀಯೆ ತಾನೇ? ಸುದುಷ್ಕರ ನಿರ್ಜನ ವನವಾಸವನ್ನು ನಿನ್ನ ಸಹೋದರರೊಂದಿಗೆ ಮತ್ತು ಈ ಗೌರವಾನ್ವಿತೆ ಕೃಷ್ಣೆಯೊಂದಿಗೆ ಒಳ್ಳೆಯದಾಗಿ ಕಳೆದೆ ತಾನೇ? ಘೋರ ಮತ್ತು ದುಷ್ಕೃತ ಅಜ್ಞಾತವಾಸವನ್ನೂ ನೀನು ಮಾಡಿ ಮುಗಿಸಿದ್ದೀಯೆ. ರಾಜ್ಯಭ್ರಷ್ಟನಾದವನಿಗೆ ದುಃಖ ಮಾತ್ರವಿದೆ. ಸುಖವು ಎಲ್ಲಿಯದು? ಧಾರ್ತರಾಷ್ಟ್ರನಿಂದ ತಂದೊಡ್ಡಿದ ಈ ಮಹಾ ದುಃಖದ ಪ್ರಮಾಣದಷ್ಟೇ ಸುಖವನ್ನು ನಿನ್ನ ಶತ್ರುಗಳನ್ನು ಸಂಹರಿಸಿ ಪಡೆಯುತ್ತೀಯೆ. ಲೋಕತತ್ವವು ನಿನಗೆ ತಿಳಿದೇ ಇದೆ. ಆದುದರಿಂದ ಮಗೂ! ನಿನ್ನ ಚಿತ್ತವು ಲೋಭದಿಂದ ಮಾಡುವುದನ್ನು ತಿಳಿದಿಲ್ಲ.”

ಅನಂತರ ರಾಜಾ ದುರ್ಯೋಧನನೊಡನೆ ಭೇಟಿಯಾದುದನ್ನು ಹೇಳಿ ತಾನು ಕೊಟ್ಟ ಭರವಸೆ ಮತ್ತು ಅವನು ಕೇಳಿದ ವರದಾನಗಳ ಕುರಿತು ವಿವರವಾಗಿ ಎಲ್ಲವನ್ನೂ ಹೇಳಿದನು.

ಯುಧಿಷ್ಠಿರನು ಹೇಳಿದನು:

“ರಾಜನ್! ನೀನು ಒಳ್ಳೆಯದನ್ನೇ ಮಾಡಿದೆ. ಅಂತರಾತ್ಮದಲ್ಲಿ ಸಂತೋಷಗೊಂಡು ನೀನು ದುರ್ಯೋಧನನಿಗೆ ನಿನ್ನ ಮಾತನ್ನು ಕೇಳಿಸಿದೆ. ನಿನಗೆ ಮಂಗಳವಾಗಲಿ. ನಿನ್ನಿಂದ ಒಂದೇ ನಡೆಯಬೇಕು ಎಂದು ನಾನು ಬಯಸುತ್ತೇನೆ. ಯುದ್ಧದಲ್ಲಿ ನೀನು ವಾಸುದೇವನ ಸಮನಾಗಿದ್ದೀಯೆ. ಕರ್ಣಾರ್ಜುನರ ರಥಗಳ ದ್ವಂದ್ವಯುದ್ಧವು ಬಂದಾಗ ಕರ್ಣನ ಸಾರಥ್ಯವನ್ನು ನೀನು ಮಾಡಬೇಕಾಗಿ ಬರುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ. ನನಗೆ ಒಳ್ಳೆಯದನ್ನು ಮಾಡಲು ಬಯಸಿದರೆ ನೀನು ಆಗ ಅರ್ಜುನನನ್ನು ಪಾಲಿಸಬೇಕು. ಸೌತಿಯ ತೇಜೋವಧೆಯನ್ನು ಮಾಡಿ ನಮಗೆ ಜಯವನ್ನು ಒದಗಿಸಬೇಕು. ಮಾವ! ಮಾಡಬಾರದುದ್ದಾದರೂ ಇದನ್ನು ನೀನು ಮಾಡಬೇಕು.”

ಶಲ್ಯನು ಹೇಳಿದನು:

“ಪಾಂಡವ! ನಿನಗೆ ಮಂಗಳವಾಗಲಿ! ಕೇಳು. ಯುದ್ಧದಲ್ಲಿ ದುರಾತ್ಮ ಸೂತಪುತ್ರನ ತೇಜೋವಧೆಗೆ ಕಾರಣನಾಗಬೇಕೆಂದು ಹೇಳಿದೆಯಲ್ಲ! ಸಂಗ್ರಾಮದಲ್ಲಿ ಖಂಡಿತವಾಗಿ ನಾನು ಅವನ ಸಾರಥಿಯಾಗುತ್ತೇನೆ. ಏಕೆಂದರೆ ಅವನು ನನ್ನನ್ನು ಯಾವಾಗಲೂ ವಾಸುದೇವನಿಗೆ ಸಮನೆಂದು ತಿಳಿದುಕೊಂಡಿದ್ದಾನೆ. ರಣದಲ್ಲಿ ಹೋರಾಡಲು ಬಯಸಿದಾಗ

ಖಂಡಿತವಾಗಿ ನಾನು ಅವನಿಗೆ ಅವನ ದರ್ಪವನ್ನು ಅಪಹರಿಸುವ ಮತ್ತು ತೇಜಸ್ಸನ್ನು ಅಪಹರಿಸುವ ಅಹಿತ ಮಾತುಗಳನ್ನಾಡುತ್ತೇನೆ. ಇದರಿಂದ ಸುಲಭವಾಗಿ ಅವನನ್ನು ಕೊಲ್ಲಬಹುದು. ನಿನಗೆ ಸತ್ಯವನ್ನು ಹೇಳುತ್ತಿದ್ದೇನೆ. ನೀನು ನನ್ನನ್ನು ಕೇಳಿದಂತೆಯೇ ನಾನು ಮಾಡುತ್ತೇನೆ. ನಿನಗೆ ಒಳ್ಳೆಯದಾಗುವಂತೆ ಇನ್ನೇನಾದರೂ ಇದ್ದರೆ ಅದನ್ನೂ ಮಾಡುತ್ತೇನೆ. ಕೃಷ್ಣೆಯೊಂದಿಗೆ ದ್ಯೂತದಲ್ಲಿ ಏನೆಲ್ಲ ದುಃಖವನ್ನು ನೀನು ಪಡೆದೆಯೋ, ಸೂತಪುತ್ರನಾಡಿದ ಪೌರುಷದ ಮಾತುಗಳು, ಜಟಾಸುರನಿಂದ ಮತ್ತು ಮಹಾದ್ಯುತಿ ಕೀಚಕರಿಂದ ಕಷ್ಟ, ದಮಯಂತಿಯಂತೆ ದ್ರೌಪದಿಯು ಅನುಭವಿಸಿದ ಎಲ್ಲ ಕಷ್ಟಗಳೂ, ಈ ಸರ್ವ ದುಃಖಗಳೂ ಸುಖದಲ್ಲಿ ಕೊನೆಗೊಳ್ಳುತ್ತವೆ. ಇದರಲ್ಲಿ ನೀನು ದುಃಖಿಸುವುದು ಏನೂ ಇಲ್ಲ. ವಿಧಿಯೇ ಬಲವತ್ತರ. ಮಹಾತ್ಮರಿಗೆ ದುಃಖಗಳು ಬರುತ್ತವೆ. ದೇವತೆಗಳು ಕೂಡ ದುಃಖವನ್ನು ಹೊಂದುತ್ತಾರೆ. ಮಹಾತ್ಮ ದೇವರಾಜ ಇಂದ್ರನು ಭಾರ್ಯೆಯೊಡನೆ ಮಹಾ ದುಃಖವನ್ನು ಅನುಭವಿಸಿದ್ದನೆಂದು ಕೇಳುತ್ತೇವೆ.”

ಯುಧಿಷ್ಠಿರನು ಹೇಳಿದನು:

“ರಾಜೇಂದ್ರ! ಮಹಾತ್ಮ ಇಂದ್ರನು ಭಾರ್ಯೆಯೊಡನೆ ಹೇಗೆ ಪರಮ ಘೋರ ದುಃಖವನ್ನು ಹೊಂದಿದನು ಎನ್ನುವುದನ್ನು ತಿಳಿಯಲು ಬಯಸುತ್ತೇನೆ.”

ಶಲ್ಯನು ಹೇಳಿದನು:

“ರಾಜನ್! ಹಿಂದೆ ಇಂದ್ರನು ಭಾರ್ಯೆಯೊಡನೆ ಹೇಗೆ ದುಃಖವನ್ನು ಪಡೆದನು ಎನ್ನುವ ಈ ಪುರಾತನ ಇತಿಹಾಸ ವೃತ್ತಾಂತವನ್ನು ಕೇಳು. ದ್ರೌಪದಿಯೊಂದಿಗೆ ಮತ್ತು ಮಹಾತ್ಮ ಸಹೋದರರೊಂದಿಗೆ ಮಹಾವನದಲ್ಲಿ ಕ್ಲಿಷ್ಟಗಳನ್ನು ಅನುಭವಿಸಿದುದನ್ನು ನಿನ್ನ ಹೃದಯಕ್ಕೆ ತೆಗೆದುಕೊಳ್ಳಬೇಡ. ಹೇಗೆ ಶಕ್ರನು ವೃತ್ರನನ್ನು ಕೊಂದು ಪಡೆದನೋ ಹಾಗೆ ನೀನೂ ಕೂಡ ರಾಜ್ಯವನ್ನು ಪಡೆಯುತ್ತೀಯೆ. ದುರಾಚಾರಿ, ಪಾಪಚೇತನ, ಬ್ರಹ್ಮದ್ವೇಷೀ ನಹುಷನೂ ಕೂಡ ಅಗಸ್ತ್ಯನ ಶಾಪದಿಂದ ಹತನಾಗಿ ಶಾಶ್ವತ ಸಮಯದದ ವರೆಗೆ ವಿನಿಷ್ಟನಾದನು. ಹಾಗೆ ದುರಾತ್ಮರಾದ ಕರ್ಣದುರ್ಯೋಧನರೇ ಮೊದಲಾದ ನಿನ್ನ ಶತ್ರುಗಳು ಕ್ಷಿಪ್ರವಾಗಿ ನಾಶವನ್ನು ಹೊಂದುತ್ತಾರೆ. ಆಗ ಸಾಗರಪರ್ಯಂತವಾದ ಈ ಮೇದಿನಿಯನ್ನು ಭ್ರಾತೃಗಳ ಸಹಿತ ಮತ್ತು ದ್ರೌಪದಿಯ ಸಹಿತ ಭೋಗಿಸುತ್ತೀಯೆ. ವೇದಸಮ್ಮಿತವಾದ ಶಕ್ರವಿಜಯದ ಈ ಆಖ್ಯಾನವನ್ನು ಜಯವನ್ನು ಬಯಸುವ ರಾಜನು ವ್ಯೂಢವನ್ನು ರಚಿಸುವಾಗ ಕೇಳಬೇಕು. ಆದುದರಿಂದ ನಿನ್ನ ವಿಜಯಕ್ಕಾಗಿ ಇದನ್ನು ಹೇಳುತ್ತಿದ್ದೇನೆ. ಮಹಾತ್ಮರು ಸ್ತುತಿಸಲ್ಪಟ್ಟಾಗ ವೃದ್ಧಿ ಹೊಂದುತ್ತಾರೆ. ದುರ್ಯೋಧನನ ಅಪರಾಧದಿಂದ ಮತ್ತು

ಭೀಮಾರ್ಜುನರ ಬಲದಿಂದ ಮಹಾತ್ಮ ಕ್ಷತ್ರಿಯರ ನಾಶವಾಗಲಿದೆ. ಇಂದ್ರವಿಜಯದ ಈ ಆಖ್ಯಾನವನ್ನು ಯಾರು ನಿಯತನಾಗಿ ಓದುತ್ತಾನೋ ಅವನು ಪಾಪವನ್ನು ಕಳೆದುಕೊಂಡು ಸ್ವರ್ಗವನ್ನು ಗೆದ್ದು ಇಲ್ಲಿ ಮತ್ತು ನಂತರದಲ್ಲಿ ಸಂತೋಷದಲ್ಲಿರುತ್ತಾನೆ. ಅವನಿಗೆ ಶತ್ರುಗಳ ಭಯವಿರುವುದಿಲ್ಲ. ಅಂಥವನು ಅಪುತ್ರನಾಗುವುದಿಲ್ಲ. ಆಪತ್ತನ್ನು ಪಡೆಯುವುದಿಲ್ಲ ಮತ್ತು ದೀರ್ಘಾಯುಷಿಯಾಗುತ್ತಾನೆ. ಎಲ್ಲೆಡೆಯೂ ಜಯವನ್ನು ಹೊಂದುತ್ತಾನೆ ಮತ್ತು ಎಂದೂ ಪರಾಜಯುವನ್ನು ಪಡೆಯುವುದಿಲ್ಲ."

ಶಲ್ಯನು ಹೀಗೆ ಆಶ್ವಾಸನೆಯನ್ನು ನೀಡಲು ಧರ್ಮಭೃತರಲ್ಲಿ ಶ್ರೇಷ್ಠ ರಾಜನು ಶಲ್ಯನನ್ನು ವಿಧಿವತ್ತಾಗಿ ಪೂಜಿಸಿದನು. ಶಲ್ಯನ ಮಾತನ್ನು ಕೇಳಿದ ಮಹಾಬಾಹು ಕುಂತೀಪುತ್ರ ಯುಧಿಷ್ಠಿರನು ಮದ್ರರಾಜನಿಗೆ ಉತ್ತರಿಸಿದನು:

"ನೀನು ಕರ್ಣನ ಸಾರಥ್ಯವನ್ನು ಮಾಡುತ್ತೀಯೆ ಎನ್ನುವುದರಲ್ಲಿ ಸಂಶಯವಿಲ್ಲ. ಅಲ್ಲಿ ನನ್ನನ್ನು ಸ್ತುತಿಸಿ ಕರ್ಣನ ತೇಜೋವಧೆಯನ್ನು ಮಾಡಬೇಕು."

ಶಲ್ಯನು ಹೇಳಿದನು:

"ನಾನು ಮಾತುಕೊಟ್ಟಂತೆ ಮಾಡುತ್ತೇನೆ. ಇನ್ನೂ ಏನನ್ನು

ಮಾಡಲಿಕ್ಕಾಗುತ್ತದೆಯೋ ಅದನ್ನೂ ನಿನಗಾಗಿ ಮಾಡುತ್ತೇನೆ.”

ನಂತರ ಮದ್ರಾಧಿಪನು ಕೌಂತೇಯನನ್ನು ಬೀಳ್ಕೊಂಡು ಸೇನೆಯೊಂದಿಗೆ ಶ್ರೀಮಾನ್ ಅರಿಂದಮ ದುರ್ಯೋಧನನ ಬಳಿಗೆ ಹೋದನು.

## ಪಾಂಡವ-ಕೌರವರಲ್ಲಿ ಬಂದು ಸೇರಿದ ಸೇನೆಗಳು

ಆಗ ವೀರ ಸಾತ್ವತರ ಮಹಾರಥಿ ಯುಯುಧಾನನು ಮಹಾ ಚತುರಂಗ ಬಲದೊಂದಿಗೆ ಯುಧಿಷ್ಠಿರನಲ್ಲಿಗೆ ಬಂದನು. ನಾನಾದೇಶಗಳಿಂದ ಬಂದು ಸೇರಿದ್ದ ಅವನ ಆ ಮಹಾವೀರ, ನಾನಾಪ್ರಹರಣಗಳಲ್ಲಿ ವೀರ ಯೋಧರು ಸೇನೆಗೆ ಶೋಭೆಯನ್ನು ತಂದರು. ಆ ಬಲವು ಪರಶು, ಭಿಂಡಿಪಾಲ, ಶಕ್ತಿ, ತೋಮರ, ಮುದ್ಗರ, ಶಕ್ತಿ, ಮುಷ್ಟಿ, ಪರಶು, ಪ್ರಾಸ, ನಿರ್ಮಲ ಕರವಾಲ, ಖಡ್ಗ, ಕಾರ್ಮುಕ, ವಿವಿಧ ಶರಗಳು, ತೈಲಧೌತಗಳು, ಮತ್ತು ಪ್ರಕಾಶಗಳಿಂದ ಶೋಭಿಸಿತು. ಶಸ್ತ್ರಸ್ತ್ರಗಳಿಂದ ಶೋಭಿಸುತ್ತಿದ್ದ ಮೇಘಭರಿತ ಆಕಾಶದ ಬಣ್ಣವನ್ನು ತಳೆದ ಅವನ ಸೇನೆಯು ಮಿಂಚಿನಿಂದ ಕೂಡಿದ ಮೇಘದಂತೆ ಕಂಡಿತು. ಅವನ ಸೇನೆಯು ಒಂದು ಅಕ್ಷೌಹಿಣಿಯದಾಗಿತ್ತು. ಯುಧಿಷ್ಠಿರನ ಬಲವು ಅದನ್ನು ಪ್ರವೇಶಿಸಿದಾಗ ಸಾಗರವನ್ನು ಸೇರುವ ಸಣ್ಣ ನದಿಯಂತೆ ಕಾಣದಾಯಿತು. ಹಾಗೆಯೇ ಚೇದಿಗಳ ರಾಜ ಬಲಶಾಲಿ ಧೃಷ್ಟಕೇತುವು ಅಕ್ಷೌಹಿಣೀ ಸೇನೆಯನ್ನು ತೆಗೆದುಕೊಂಡು ಅಮಿತೌಜಸ ಪಾಂಡವನಲ್ಲಿಗೆ ಆಗಮಿಸಿದನು. ಜರಾಸಂಧನ ಮಗ ಮಹಾಬಲ ಮಾಗಧ ಜಯತ್ಸೇನನು ಅಕ್ಷೌಹಿಣೀ ಸೇನೆಯೊಂದಿಗೆ ಧರ್ಮರಾಜನಲ್ಲಿಗೆ

ಬಂದನು. ಹಾಗೆಯೇ ಸಾಗರ ತೀರದಲ್ಲಿ ವಾಸಿಸುವ ರಾಜೇಂದ್ರ ಪಾಂಡ್ಯನು ಬಹುವಿಧದ ಯೋಧರಿಂದ ಆವೃತನಾಗಿ ಯುಧಿಷ್ಠಿರನ ಬಳಿ ಬಂದನು. ಸೇನೆಗಳು ಸೇರಿ ಅವನ ಸೇನೆಯು ಸುಂದರವೂ, ಬಲಶಾಲಿಯೂ, ಪ್ರೇಕ್ಷಣೀಯವೂ ಆಗಿತ್ತು. ನಾನಾ ದೇಶಗಳಿಂದ ಬಂದು ಸೇರಿದ್ದ ದ್ರುಪದನ ಸೇನೆಯು ಶೂರ ಪುರುಷರಿಂದ ಮತ್ತು ಮಹಾರಥಿ ಪುತ್ರರಿಂದ ಶೋಭಿಸುತ್ತಿತ್ತು. ಹಾಗೆಯೇ ವಾಹಿನೀಪತಿ ಮತ್ಸ್ಯರ ರಾಜ ವಿರಾಟನು ಪರ್ವತವಾಸೀ ಮಹೀಪಾಲರೊಂದಿಗೆ ಪಾಂಡವರಲ್ಲಿಗೆ ಬಂದನು. ಮಹಾತ್ಮ ಪಾಂಡವರಲ್ಲಿಗೆ ಇವರು ಮತ್ತು ಇತರ ವಿವಿಧ ಧ್ವಜ ಸಂಕುಲಗಳ ಏಳು ಅಕ್ಷೌಹಿಣೀಗಳು ಬಂದು ಸೇರಿದವು. ಕುರುಗಳೊಂದಿಗೆ ಹೋರಾಡಲು ಉತ್ಸಾಹಿತರಾದ ಅವರು ಪಾಂಡವರನ್ನು ಸಂತೋಷಗೊಳಿಸಿದರು.

ಹಾಗೆಯೇ ಮಹೀಪಾಲ ಭಗದತ್ತನು ಒಂದು ಅಕ್ಷೌಹಿಣೀ ಸೇನೆಯನ್ನಿತ್ತು ಧಾರ್ತರಾಷ್ಟ್ರನ ಹರ್ಷವನ್ನು ಹೆಚ್ಚಿಸಿದನು. ಬಂಗಾರದಂತೆ ಹೊಳೆಯುತ್ತಿದ್ದ ಚೀನ-ಕಿರಾತರಿಂದ ಕೂಡಿದ್ದ ಅವನ ಸೇನೆಯು ಕರ್ಣಿಕಾರವನದಂತೆ ತೋರಿತು. ಹಾಗೆಯೇ ಭೂರಿಶ್ರವ ಮತ್ತು ಶೂರ ಶಲ್ಯರು ಪ್ರತ್ಯೇಕ ಪ್ರತ್ಯೇಕವಾಗಿ ಒಂದೊಂದು ಅಕ್ಷೌಹಿಣಿಯನ್ನು ದುರ್ಯೋಧನನಿಗೆ ನೀಡಿದರು. ಹಾರ್ದಿಕ್ಯ ಕೃತವರ್ಮನು ಭೋಜ-ಅಂಧಕರ ಸೇನೆಯೊಂದಿಗೆ ಒಂದು ಅಕ್ಷೌಹಿಣೀ ಸೇನೆಯೊಂದಿಗೆ ದುರ್ಯೋಧನನಲ್ಲಿಗೆ ಬಂದನು. ವನಮಾಲೆಗಳನ್ನು ಧರಿಸಿದ್ದ ಪುರುಷವ್ಯಾಘ್ರರಿಂದ ತುಂಬಿದ ಅವನ ಆ ಸೇನೆಯು ಮತ್ತ ಗಜಗಳು

ಆಡುತ್ತಿರುವ ವನದಂತೆ ಶೋಭಿಸಿತು. ಜಯದ್ರಥನ ಮುಂದಾಳುತ್ವದಲ್ಲಿ ಇತರ ಸಿಂಧು ಸೌವೀರ ವಾಸಿ ಪೃಥ್ವೀಪಾಲರು ಪರ್ವತಗಳನ್ನು ನಡುಗಿಸುವಂತೆ ಆಗಮಿಸಿದರು. ಅವರ ಅಕ್ಷೌಹಿಣೀ ಸೇನೆಯು ಗಾಳಿಯಿಂದ ತೂರಿಸಿಕೊಂಡು ಬಂದ ಬಹುರೂಪದ ಮೋಡಗಳಂತೆ ತೋರಿತು. ಕಾಂಬೋಜ ಸುದಕ್ಷಿಣ, ಯವನ ಮತ್ತು ಶಕರು ಅಕ್ಷೌಹಿಣಿಯೊಂದಿಗೆ ಕೌರವನಲ್ಲಿಗೆ ಬಂದರು. ಶಲಭಗಳ ಗುಂಪಿನಂತಿದ್ದ ಅವನ ಸೇನೆಯು ಕೌರವನ ಸೇನೆಯನ್ನು ಸೇರಿ ಅಲ್ಲಿಯೇ ಅಂತರ್ಧಾನವಾಯಿತು. ಹಾಗೆಯೇ ಮಾಹಿಷ್ಮತೀ ವಾಸಿಗಳಾದ ನೀಲರು ನೀಲಾಯುಧಗಳೊಂದಿಗೆ ದಕ್ಷಿಣಾಪಥವಾಸಿಗಳಾದ ಮಹಾವೀರ ಮಹೀಪಾಲರು, ಮಹಾಬಲ ಸಂವೃತರಾದ ಅವಂತಿಯ ಮಹೀಪಾಲರಿಬ್ಬರು ಪ್ರತ್ಯೇಕ ಅಕ್ಷೌಹಿಣೀಗಳೊಂದಿಗೆ ಸುಯೋಧನನಲ್ಲಿಗೆ ಆಗಮಿಸಿದರು. ನರವ್ಯಾಘ್ರ ಪಾರ್ಥಿವ ಕೇಕಯ ಸಹೋದರರೈವರು ಅಕ್ಷೌಹಿಣಿಗಳಿಂದ ಆದ್ರವಂತ ಕೌರವ್ಯನನ್ನು ಸಂತೋಷಗೊಳಿಸಿದರು. ಇವರು ಮತ್ತು ಇತರ ಮಹಾತ್ಮ ಭೂಮಿಪರೆಲ್ಲರ ಮೂರು ಭಾಗಗಳ ವಾಹಿನಿಯೂ ಬಂದು ಸೇರಿತು. ಹೀಗೆ ದುರ್ಯೋಧನನಲ್ಲಿ ಹನ್ನೊಂದು ಅಕ್ಷೌಹಿಣೀ ಸೇನೆಯು ಬಂದು ಸೇರಿತು. ನಾನಾಧ್ವಜ ಸಮಾಕುಲರಾದ ಅವರು ಕೌಂತೇಯರೊಡನೆ ಯುದ್ಧಮಾಡಲು ಉತ್ಸುಕರಾಗಿದ್ದರು.

ಹಸ್ತಿನಾಪುರದಲ್ಲಿ ರಾಜನ ಸಬಲಮುಖ್ಯರಿಗೆ ಮತ್ತು ಪ್ರಧಾನರಿಗೆ ಕೂಡ ಸ್ಥಳವಿಲ್ಲದಂತಾಯಿತು. ಆಗ ಐದುನದಿಗಳ ಮತ್ತು

ಕುರುಜಾಂಗಲವೆಲ್ಲವೂ, ಹಾಗೆಯೇ ಸಮಭೂಮಿಯ ರೋಹಿತಾರಣ್ಯವೂ, ಅಹಿಚ್ಛತ್ರ, ಕಾಲಕೂಟ, ಗಂಗಾಕೂಲ, ವಾರಣ, ವಾಟಧಾನ, ಯಮುನಾ ಪರ್ವತವೂ, ಧನಧಾನ್ಯಗಳಿಂದ ಸಮೃದ್ಧವಾದ ಈ ಎಲ್ಲ ಸುವಿಸ್ತೀರ್ಣ ಪ್ರದೇಶಗಳೂ ಕೌರವ ಸೇನೆಯ ಸಮಾಕುಲದಿಂದ ತುಂಬಿಹೋದವು.

# ಮೊದಲನೆಯ ರಾಯಭಾರ

## ದ್ರುಪದನು ದೂತನನ್ನು ಕಳುಹಿಸಿದುದು

ಯುಧಿಷ್ಠಿರನ ಮತದಂತೆ ಪಾಂಚಲನು ಪ್ರಜ್ಞಾವಂತನೂ ವಯೋವೃದ್ಧನೂ ಆದ ತನ್ನ ಪುರೋಹಿತನನ್ನು ಕುರುಗಳಲ್ಲಿಗೆ ಕಳುಹಿಸಿದನು. ದ್ರುಪದನು ಹೇಳಿದನು:

> “ಇರುವವುಗಳಲ್ಲಿ ಪ್ರಾಣಿಗಳು ಶ್ರೇಷ್ಠರು; ಪ್ರಾಣಿಗಳಲ್ಲಿ ಬುದ್ಧಿಜೀವಿಗಳು ಶ್ರೇಷ್ಠರು; ಬುದ್ಧಿಯಿರುವವರಲ್ಲಿ ನರರು ಶ್ರೇಷ್ಠರು ಮತ್ತು ನರರಲ್ಲಿ ದ್ವಿಜರು ಶ್ರೇಷ್ಠರು. ದ್ವಿಜರಲ್ಲಿ ವೇದವನ್ನು ತಿಳಿದವರು ಶ್ರೇಯಸ್ಕರು, ವೇದಗಳನ್ನು ತಿಳಿದವರಲ್ಲಿ ಆ ತಿಳುವಳಿಕೆಯನ್ನು ಕಾರ್ಯದಲ್ಲಿ ಅಳವಡಿಸಿಕೊಂಡವರು ಶ್ರೇಯಸ್ಕರು. ಹೀಗೆ ತಿಳುವಳಿಕೆಯನ್ನು ಅಳವಡಿಸಿಕೊಂಡವರಲ್ಲಿ ನೀನು ಪ್ರಧಾನನೆಂದು ನನಗನ್ನಿಸುತ್ತದೆ. ನೀನು ಕುಲದಲ್ಲಿ, ವಯಸ್ಸಿನಲ್ಲಿ ಮತ್ತು

ತಿಳುವಳಿಕೆಯಲ್ಲಿ ವಿಶಿಷ್ಟನಾಗಿದ್ದೀಯೆ. ಪ್ರಜ್ಞೆಯಲ್ಲಿ ಶುಕ್ರ ಅಥವಾ ಆಂಗೀರಸ ಬೃಹಸ್ಪತಿಯನ್ನು ಹೋಲುವೆ. ಕೌರವನು ಎಂಥವನು ಮತ್ತು ಪಾಂಡವ ಕುಂತೀಪುತ್ರ ಯುಧಿಷ್ಠಿರನು ಎಂಥವನು ಎಂದು ಎಲ್ಲವೂ ನಿನಗೆ ತಿಳಿದಿದೆ. ಧೃತರಾಷ್ಟ್ರನಿಗೆ ತಿಳಿದೇ ಪಾಂಡವರು ಪರರಿಂದ ವಂಚಿತರಾದರು. ವಿದುರನು ಹೇಳಿದರೂ ಅವನು ಪುತ್ರನನ್ನೇ ಅನುಸರಿಸುತ್ತಾನೆ. ಮೊದಲೇ ಯೋಚಿಸಿ ಅಕ್ಷದಲ್ಲಿ ಪಳಗಿದ್ದ ಶಕುನಿಯು ಅಕ್ಷವನ್ನು ತಿಳಿಯದೇ ಇದ್ದ ಆದರೆ ಕ್ಷತ್ರಿಯರ ನಡತೆಯನ್ನನುಸರಿಸಿದ್ದ ಶುಚಿ ಕುಂತೀಪುತ್ರನನ್ನು ಜೂಜಿಗೆ ಆಹ್ವಾನಿಸಿದನು. ಹೀಗೆ ಧರ್ಮಪುತ್ರ ಯುಧಿಷ್ಠಿರನನ್ನು ವಂಚಿಸಿದ ಅವರು ಯಾವುದೇ ಕಾರಣಕ್ಕಾಗಿ ತಾವಾಗಿಯೇ ರಾಜ್ಯವನ್ನು ಹಿಂದಿರುಗಿಸುವುದಿಲ್ಲ. ಧೃತರಾಷ್ಟ್ರನಲ್ಲಿ ಧರ್ಮಸಂಯುಕ್ತ ಮಾತುಗಳನ್ನಾಡಿ ನೀನು ಆ ಯೋಧರ ಮನಸ್ಸನ್ನು ಖಂಡಿತವಾಗಿ ಹಿಂದಿರುಗಿಸಬಲ್ಲೆ. ನಿನ್ನ ಆ ಮಾತುಗಳನ್ನು ವಿದುರನೂ ಬಳಸಿಕೊಳ್ಳುತ್ತಾನೆ ಮತ್ತು ಭೀಷ್ಮ-ದ್ರೋಣ-ಕೃಪರಲ್ಲಿ ಭೇದವನ್ನು ಹುಟ್ಟಿಸುತ್ತಾನೆ. ಅಮಾತ್ಯರಲ್ಲಿ ಭಿನ್ನಾಭಿಪ್ರಾಯವಾದರೆ, ಯೋಧರು ಹಿಂದೆ ಸರಿದರೆ ಪುನಃ ಒಂದುಗೂಡಿಸುವುದೇ ಅವರ ಕೆಲಸವಾಗುತ್ತದೆ. ಈ ಮಧ್ಯದಲ್ಲಿ ಪಾರ್ಥರು ಸುಖವಾಗಿ ಏಕಾಗ್ರಚಿತ್ತರಾಗಿ ಸೇನೆಯ ತಯಾರಿ ಮತ್ತು ದ್ರವ್ಯಗಳ ಸಂಗ್ರಹವನ್ನು ಮಾಡಿಕೊಳ್ಳುತ್ತಾರೆ.

ತಮ್ಮಲ್ಲಿಯೇ ಒಡಕು ಬಂದಾಗ, ನೀನೂ ಕೂಡ ಅಲ್ಲಿ ಬಹಳ ಸಮಯವನ್ನು ಕಳೆಯುವುದರಿಂದ, ಅವರಿಗೆ ಸೇನೆಯ ಕೆಲಸಗಳನ್ನು ಮಾಡಲಿಕ್ಕಾಗುವುದಿಲ್ಲ ಎನ್ನುವದರಲ್ಲಿ ಸಂಶಯವಿಲ್ಲ. ಇದರಲ್ಲಿ ಪ್ರಯೋಜನವಿದೆ. ಫಲಿತಾಂಶವು ದೊರೆಯುತ್ತದೆ. ಧೃತರಾಷ್ಟ್ರನನ್ನು ಭೇಟಿಯಾದ ನಂತರ ನಿನ್ನ ಮಾತಿನಂತೆಯೇ ಅವನು ಮಾಡಬಹುದು. ಧರ್ಮಯುಕ್ತನಾದ ನೀನು ಅವರೊಡನೆಯೂ ಧರ್ಮಯುಕ್ತನಾಗಿ ನಡೆದುಕೊಳ್ಳಬೇಕು. ಕೃಪಾಳುಗಳಲ್ಲಿ ಪಾಂಡವರ ಪರಿಕ್ಲೇಶಗಳನ್ನು ಹೇಳಿಕೊಳ್ಳಬೇಕು. ಪೂರ್ವಜರು ಅನುಷ್ಠಾನಮಾಡಿಕೊಂಡು ಬಂದಿರುವ ಕುಲಧರ್ಮವನ್ನು ವೃದ್ಧರಲ್ಲಿ ಹೇಳಿಕೊಂಡು ಅವರ ಮನಸ್ಸುಗಳನ್ನು ಒಡೆಯಬೇಕು ಎನ್ನುವುದರಲ್ಲಿ ನನಗೆ ಸಂಶಯವೇ ಇಲ್ಲ. ಬ್ರಾಹ್ಮಣ! ನೀನು ವೇದವಿದು. ಅವರಿಂದ ನಿನಗೆ ಏನೂ ಭಯವಿರಕೂಡದು. ವಿಶೇಷವಾಗಿ ಹಿರಿಯವನಿಗೆ ದೂತ ಕರ್ಮವು ಸರಿಹೊಂದುತ್ತದೆ. ಕೌಂತೇಯನ ಅರ್ಥಸಿದ್ಧಿಗಾಗಿ ನೀನು ಪುಷ್ಯಯೋಗದ ಜಯ ಮುಹೂರ್ತದಲ್ಲಿ ಕೌರವನೆಡೆಗೆ ಪ್ರಯಾಣಿಸು.”

ಹೀಗೆ ಮಹಾತ್ಮ ದ್ರುಪದನಿಂದ ಅನುಶಿಷ್ಟನಾಗಿ ವೃತ್ತಸಂಪನ್ನ ಪುರೋಹಿತನು ನಾಗಸಾಹ್ವಯಕ್ಕೆ ಹೊರಟನು.

## ದ್ರುಪದ ಪುರೋಹಿತನ ರಾಯಭಾರ

ದ್ರುಪದನ ಪುರೋಹಿತನು ಕೌರವ್ಯನ ಬಳಿಸಾರಿ ಧೃತರಾಷ್ಟ್ರ, ಭೀಷ್ಮ ಮತ್ತು ವಿದುರರನಿಂದ ಸತ್ಕೃತನಾದನು. ಎಲ್ಲರ ಕೌಶಲ್ಯದ ಕುರಿತೂ ಹೇಳಿ, ಅವರ ಕೌಶಲ್ಯದ ಕುರಿತೂ ಕೇಳಿ ಅವನು ಸರ್ವಸೇನಾಪ್ರಣೀತರ ಮಧ್ಯೆ ಈ ಮಾತುಗಳನ್ನಾಡಿದನು:

“ನೀವೆಲ್ಲರೂ ಸನಾತನ ರಾಜಧರ್ಮವನ್ನು ತಿಳಿದಿದ್ದೀರಿ. ತಿಳಿದಿದ್ದರೂ ನನ್ನ ಮಾತಿನ ಪೀಠಿಕೆಯಾಗಿ ಹೇಳುತ್ತೇನೆ. ಧೃತರಾಷ್ಟ್ರ ಮತ್ತು ಪಾಂಡು ಇಬ್ಬರೂ ಒಬ್ಬನೇ ತಂದೆಯ ಮಕ್ಕಳೆಂದು ವಿಶ್ರುತರು. ಪಿತೃ ಸಂಪತ್ತಿಗೆ ಅವರಿಬ್ಬರೂ ಸಮಾನರು ಎನ್ನುವುದರಲ್ಲಿ ಸಂಶಯವಿಲ್ಲ. ಧೃತರಾಷ್ಟ್ರನ ಪುತ್ರರು ಪಿತೃಸಂಪತ್ತನ್ನು ಪಡೆದಿದ್ದಾರೆ. ಪಾಂಡುಪುತ್ರರು ಹೇಗೆ ಈ ಪಿತೃ ಸಂಪತ್ತನ್ನು ಪಡೆಯಲೇ ಇಲ್ಲ? ಧಾರ್ತರಾಷ್ಟ್ರರು ತಮ್ಮದನ್ನಾಗಿಸಿಕೊಂಡ ಪಿತೃಸಂಪತ್ತನ್ನು ಹಿಂದೆ ಹೇಗೆ ಪಾಂಡವೇಯರು ಪಡೆಯಲಿಲ್ಲ ಎನ್ನುವುದು ನಿಮಗೆ ತಿಳಿದೇ ಇದೆ. ಅನೇಕ ಉಪಾಯಗಳಿಂದ ಅವರ ಪ್ರಾಣಗಳನ್ನು ಕೊನೆಗೊಳಿಸಲು ಪ್ರಯತ್ನಿಸಿದರೂ ಶೇಷವಂತರಾದ ಅವರನ್ನು ಯಮಸಾದನಕ್ಕೆ ಕಳುಹಿಸಲು ಸಾಧ್ಯವಾಗಲಿಲ್ಲ. ಆ ಮಹಾತ್ಮರು ಸ್ವಬಲದಿಂದ ಅಭಿವೃದ್ಧಿಗೊಳಿಸಿದ ರಾಜ್ಯವನ್ನು ಕ್ಷುದ್ರ ಧಾರ್ತರಾಷ್ಟ್ರರು ಸೌಬಲನೊಂದಿಗೆ ಪುನಃ ಮೋಸದಿಂದ ಅಪಹರಿಸಿದರು.

ಯಾವಾಗಿನಂತೆ ಆ ಕೆಲಸಕ್ಕೆ ಕೂಡ ಅನುಮತಿಯು ದೊರೆಯಿತು. ಹದಿಮೂರು ವರ್ಷಗಳು ಮಹಾರಣ್ಯದಲ್ಲಿ ವಾಸಿಸಲು ಕಳುಹಿಸಲಾಯಿತು. ಭಾರ್ಯೆಯೊಂದಿಗೆ ಆ ವೀರರು ಸಭೆಯಲ್ಲಿ ತುಂಬಾ ಕ್ಲೇಶಗಳನ್ನು ಅನುಭವಿಸಿದುದಲ್ಲದೇ ಅರಣ್ಯದಲ್ಲಿಯೂ ವಿವಿಧ ಸುದಾರುಣ ಕ್ಲೇಶಗಳನ್ನು ಹೊಂದಿದರು. ಪಾಪಿಗಳು ಕೀಳು ಯೋನಿಗಳನ್ನು ಸೇರಿ ಪಡೆಯುವಂತೆ ಆ ಮಹಾತ್ಮರು ವಿರಾಟನಗರದಲ್ಲಿ ಪರಮ ಸಂಕ್ಲೇಶಗಳನ್ನು ಹೊಂದಿದರು. ಹಿಂದಾದ ಈ ಎಲ್ಲ ಕಿಲ್ಬಿಷಗಳನ್ನೂ ಹಿಂದೆ ಸರಿಸಿ ಆ ಕುರುಪುಂಗವರು ಕುರುಗಳೊಂದಿಗೆ ಸಾಮದಿಂದ ಜೊತೆಯಿರಲು ಇಚ್ಛಿಸುತ್ತಾರೆ. ಅವರ ನಡತೆಯನ್ನೂ ದುರ್ಯೋಧನನ ನಡತೆಯನ್ನೂ ತಿಳಿದುಕೊಂಡು ಧೃತರಾಷ್ಟ್ರನ ಸುಹೃಜ್ಜನರು ಶಾಂತಿಯನ್ನು ತರಬೇಕು. ಆ ವೀರರು ಕುರುಗಳೊಂದಿಗೆ ಯುದ್ಧವನ್ನು ಮಾಡುವುದಿಲ್ಲ. ಸ್ವಯಂ ಪಾಂಡವರು ಲೋಕದ ಅವಿನಾಶವನ್ನು ಬಯಸುವುದಿಲ್ಲ. ಧಾರ್ತರಾಷ್ಟ್ರರು ಯುದ್ಧದ ಪರವಾಗಿ ಏನಾದರೂ ಕಾರಣವನ್ನಿತ್ತರೂ ಅದು ಸರಿಯಾದ ಕಾರಣವೆನಿಸಿಕೊಳ್ಳುವುದಿಲ್ಲ. ಅವರು ಬಲಶಾಲಿಗಳಾಗಿದ್ದಾರಲ್ಲವೇ? ಕುರುಗಳೊಂದಿಗೆ ಹೋರಾಡಲು ಉತ್ಸಾಹಿತರಾಗಿ ಅವನ ಶಾಸನವನ್ನು ಪ್ರತೀಕ್ಷಿಸುತ್ತಾ ಏಳು ಅಕ್ಷೌಹಿಣಿಗಳು ಧರ್ಮಪುತ್ರನನ್ನು

ಸೇರಿಯಾಗಿವೆ. ಸಹಸ್ರ ಅಕ್ಷೌಹಿಣಿಗೆ ಸಮನಾದ ಇತರ ಪುರುಷವ್ಯಾಘ್ರರಿದ್ದಾರೆ: ಸಾತ್ಯಕಿ, ಭೀಮಸೇನ ಮತ್ತು ಸುಮಹಾಬಲ ಯಮಳರೀರ್ವರು. ಹನ್ನೊಂದು ಅಕ್ಷೌಹಿಣಿಗಳು ಒಂದು ಕಡೆ ಸಮಾಗತರಾಗಿದ್ದಾರೆನ್ನುವುದು ಸತ್ಯ. ಆದರೆ ಇನ್ನೊಂದುಕಡೆ ಬಹುರೂಪೀ ಮಹಾಬಾಹು ಧನಂಜಯನಿದ್ದಾನೆ. ಹೇಗೆ ಕಿರೀಟಿಯು ಈ ಎಲ್ಲ ಸೇನೆಗಳನ್ನೂ ಮೀರುತ್ತಾನೋ ಹಾಗೆಯೇ ಮಹಾದ್ಯುತಿ ಮಹಾಬಾಹು ವಾಸುದೇವನೂ ಇದ್ದಾನೆ. ಸೇನೆಗಳ ಬಹುಲತ್ವದ, ಕಿರೀಟಿಯ ವಿಕ್ರಮದ, ಮತ್ತು ಕೃಷ್ಣನ ಬುದ್ಧಿವಂತಿಕೆಯ ವಿರುದ್ಧ ಯಾವ ನರನು ಯುದ್ಧ ಮಾಡಿಯಾನು? ಆದುದರಿಂದ ಯಥಾಧರ್ಮವಾಗಿ, ಒಪ್ಪಂದದಂತೆ ಕೊಡಬೇಕಾದುದನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಅವಕಾಶವು ತಪ್ಪಿಹೋಗದಂತೆ ಮಾಡಿ.”

ಅವನ ಆ ಮಾತನ್ನು ಕೇಳಿ ಪ್ರಜ್ಞಾವೃದ್ಧ, ಮಹಾದ್ಯುತಿ ಭೀಷ್ಮನು ಅವನನ್ನು ಗೌರವಿಸಿ ಕಾಲಕ್ಕೆ ತಕ್ಕಂತಹ ಈ ಮಾತುಗಳನ್ನಾಡಿದನು:

“ಪಾಂಡವರೆಲ್ಲರೂ ಬಾಂಧವರೊಂದಿಗೆ ಕುಶಲರಾಗಿದ್ದಾರೆಂದರೆ ಒಳ್ಳೆಯದೇ ಆಯಿತು. ಒಳ್ಳೆಯದಾಯಿತು ಅವರಿಗೆ ಸಹಾಯವು ದೊರಕಿದೆ. ಮತ್ತು ಅವರು ಧರ್ಮನಿರತರಾಗಿದ್ದಾರೆ. ಒಳ್ಳೆಯದಾಯಿತು ಆ

ಕುರುನಂದರು ತಮ್ಮ ಭ್ರಾತೃಗಳೊಂದಿಗೆ ಸಂಧಿಯನ್ನು ಬಯಸುತ್ತಿದ್ದಾರೆ. ಒಳ್ಳೆಯದಾಯಿತು ದಾಮೋದರನನ್ನೂ ಸೇರಿ ಅವರು ಯುದ್ಧದ ಮನಸ್ಸು ಮಾಡುತ್ತಿಲ್ಲ. ನೀನು ಹೇಳಿದುದೆಲ್ಲವೂ ಸತ್ಯ ಎನ್ನುವುದರಲ್ಲಿ ಸಂಶಯವಿಲ್ಲ. ಆದರೆ ನಿನ್ನ ಮಾತುಗಳು ಅತಿ ತೀಕ್ಷ್ಣವಾಗಿವೆ. ನೀನು ಬ್ರಾಹ್ಮಣನಾಗಿರುವುದೇ ಇದಕ್ಕೆ ಕಾರಣವಾಗಿರಬಹುದೆಂದು ನನಗನ್ನಿಸುತ್ತದೆ. ಪಾಂಡವರು ಇಲ್ಲಿ ಮತ್ತು ವನದಲ್ಲಿ ಕಷ್ಟಗಳನ್ನನುಭವಿಸಿದರು ಎನ್ನುವುದರಲ್ಲಿ ಸಂಶಯವಿಲ್ಲ. ಧರ್ಮತಃ ಅವರು ಸರ್ವ ಪಿತುರ್ಧನವನ್ನೂ ಪಡೆಯಬೇಕು ಎನ್ನುವುದರಲ್ಲೂ ಸಂಶಯವಿಲ್ಲ. ಕಿರೀಟೀ ಪಾರ್ಥನು ಮಹಾಬಲಶಾಲಿ, ಬಲವಂತ ಮತ್ತು ಕೃತಾಸ್ತ್ರ. ಯಾರುತಾನೇ ಪಾಂಡುಸುತ ಧನಂಜಯನನ್ನು ಯುದ್ಧದಲ್ಲಿ ಎದುರಿಸಿಯಾರು? ಸಾಕ್ಷಾತ್ ವಜ್ರಧರನಿಗೇ ಸಾಧ್ಯವಿಲ್ಲದಿರುವಾಗ ಇನ್ನು ಇತರ ಧನುಷ್ಪಾಣಿಗಳೇನು? ಮೂರು ಲೋಕಗಳಲ್ಲಿಯೂ ಸಮರ್ಥರಿಲ್ಲ ಎಂದು ನನ್ನ ಅಭಿಪ್ರಾಯ.”

ಭೀಷ್ಮನು ಹೀಗೆ ಮಾತನ್ನಾಡುತ್ತಿರುವಾಗಲೇ ಸಿಟ್ಟಿಗೆದ್ದ ಕರ್ಣನು ದುರ್ಯೋಧನನನ್ನು ನೋಡುತ್ತಾ ಮಧ್ಯ ಮಾತನಾಡಿದನು:

“ಬ್ರಹ್ಮನ್! ಈ ಲೋಕದಲ್ಲಿ ಇದನ್ನು ತಿಳಿಯದೇ ಇರುವವರು ಯಾರೂ ಇಲ್ಲ. ಪುನಃ ಪುನಃ ನೀನು ಅದನ್ನೇ ಏಕೆ

ಹೇಳುತ್ತಿರುವೆ? ಹಿಂದೆ ದುರ್ಯೋಧನನಿಗಾಗಿ ಶಕುನಿಯು ದ್ಯೂತದಲ್ಲಿ ಗೆದ್ದನು. ಒಪ್ಪಂದದಂತೆ ಪಾಂಡುಪುತ್ರ ಯುಧಿಷ್ಠಿರನು ಅರಣ್ಯಕ್ಕೆ ಹೋದನು. ಆ ಪಾರ್ಥಿವನು ಈಗ ಆ ಒಪ್ಪಂದವನ್ನು ಆದರಿಸದೇ, ಮತ್ಸ್ಯ ಮತ್ತು ಪಾಂಚಾಲರ ಬಲವನ್ನು ಆಶ್ರಯಿಸಿ ಪಿತ್ರಾರ್ಜಿತ ರಾಜ್ಯವನ್ನು ಇಚ್ಛಿಸುತ್ತಾನೆ. ದುರ್ಯೋಧನನು ಬೆದರಿಕೆಗೊಳಗಾಗಿ ಒಂದಡಿ ಭೂಮಿಯನ್ನೂ ಕೊಡುವುದಿಲ್ಲ. ಆದರೆ ಧರ್ಮದಂತಾದರೆ ಅವನು ಶತ್ರುವಿಗೆ ಕೂಡ ಇಡೀ ಮಹಿಯನ್ನು ಕೊಟ್ಟಾನು. ಒಂದುವೇಳೆ ಅವರು ಪಿತೃಪಿತಾಮಹರ ರಾಜ್ಯವನ್ನು ಬಯಸುವರಾದರೆ, ಪ್ರತಿಜ್ಞೆಮಾಡಿದಷ್ಟು ಸಮಯ ಪುನಃ ವನವಾಸವನ್ನು ನಡೆಸಲಿ. ಆಗ ದುರ್ಯೋಧನನ ಆಳ್ವಿಕೆಯಲ್ಲಿ ನಿರ್ಭಯರಾಗಿ ವಾಸಿಸಲಿ. ಕೇವಲ ಮೂರ್ಖತನದಿಂದ ಅಧರ್ಮಕಾರ್ಯವನ್ನೆಸಗುತ್ತಿದ್ದಾರೆ. ಈಗ ಆ ಪಾಂಡವರು ಧರ್ಮವನ್ನು ತೊರೆದು ಯುದ್ಧವನ್ನು ಬಯಸುತ್ತಿದ್ದಾರೆ. ಈ ಕುರುಶ್ರೇಷ್ಠರನ್ನು ಎದುರಿಸುವಾಗ ನನ್ನ ಈ ಮಾತನ್ನು ಸ್ಮರಿಸಿಕೊಳ್ಳುತ್ತಾರೆ.”

ಭೀಷ್ಮನು ಹೇಳಿದನು:

“ರಾಧೇಯ! ನಿನ್ನ ಮಾತಿನ ಪ್ರಯೋಜನವೇನು? ಯುದ್ಧದಲ್ಲಿ ಪಾರ್ಥನು ಒಬ್ಬನೇ ನಮ್ಮ ಷಡ್ರಥರನ್ನು ಗೆದ್ದುದನ್ನು ನೀನು

> ಸ್ಮರಿಸಿಕೊಳ್ಳಬೇಕು. ಈ ಬ್ರಾಹ್ಮಣನು ಹೇಳಿದಂತೆ ನಾವು ಮಾಡದೇ ಇದ್ದರೆ ಯುದ್ಧದಲ್ಲಿ ಅವನಿಂದ ಹತರಾಗುತ್ತೇವೆ ಎನ್ನುವುದು ನಿಶ್ಚಿತ.”

ಆಗ ಧೃತರಾಷ್ಟ್ರನು ಭೀಷ್ಮನನ್ನು ಮೆಚ್ಚಿಸಿ ರಾಧೇಯನನ್ನು ಹಳಿದು ಸಂಧಿಯ ಈ ಮಾತನ್ನಾಡಿದನು:

> “ಶಾಂತನವ ಭೀಷ್ಮನು ಹೇಳಿದ ಮಾತು ನಮಗೆ ಮತ್ತು ಪಾಂಡವರಿಗೆ ನಮಸ್ಕೃತ್ಯವಾದುದು. ಸರ್ವ ಜಗತ್ತಿಗೂ ಕೂಡ ಇದು ಹಿತವಾದುದು. ಆದರೆ ಆಲೋಚಿಸಿ ನಾನು ಸಂಜಯನನ್ನು ಪಾಂಡವರ ಬಳಿ ಕಳುಹಿಸುತ್ತೇನೆ. ನೀನು ಇಂದೇ ತಡಮಾಡದೇ ಪಾಂಡವರಲ್ಲಿಗೆ ಹಿಂದಿರುಗು.”

ಕೌರವ್ಯನು ಅವನನ್ನು ಸತ್ಕರಿಸಿ ಪಾಂಡವರಲ್ಲಿಗೆ ಕಳುಹಿಸಿದನು. ಸಭಾಮಧ್ಯದಲ್ಲಿ ಸಂಜಯನನ್ನು ಕರೆಯಿಸಿ ಈ ಮಾತುಗಳನ್ನಾಡಿದನು.

# ಎರಡನೆಯ ರಾಯಭಾರ: ಸಂಜಯನು ಪಾಂಡವರಲ್ಲಿಗೆ ಬಂದುದು

## ಸಂಜಯನನ್ನು ಪಾಂಡವರಲ್ಲಿಗೆ ಕಳುಹಿಸಿದುದು

ಕೌರವ್ಯನು ದ್ರುಪದನ ಪುರೋಹಿತನನ್ನು ಸತ್ಕರಿಸಿ ಪಾಂಡವರಲ್ಲಿಗೆ

ಕಳುಹಿಸಿದನು. ಸಭಾಮಧ್ಯದಲ್ಲಿ ಸಂಜಯನನ್ನು ಕರೆಯಿಸಿ ಈ ಮಾತುಗಳನ್ನಾಡಿದನು:

“ಸಂಜಯ! ಪಾಂಡುಪುತ್ರರು ಉಪಪ್ಲವ್ಯಕ್ಕೆ ಬಂದಿದ್ದಾರೆಂದು ಹೇಳುತ್ತಾರೆ. ಹೋಗಿ ತಿಳಿದುಕೊಂಡು ಬಾ. ಅಜಾತಶತ್ರುವನ್ನು ಈ ರೀತಿ ಸಂಭೋಧಿಸು: “ಅನಘ! ನೀನು ಗ್ರಾಮಕ್ಕೆ ಬಂದಿರುವುದು ಒಳ್ಳೆಯದೇ ಆಯಿತು.” ಎಲ್ಲರಿಗೂ ಹೇಳಬೇಕು: “ಅನರ್ಹರಾಗಿದ್ದರೂ ವನವಾಸದ ಕಷ್ಟಗಳನ್ನು ಮುಗಿಸಿದ ನೀವು ಚೆನ್ನಾಗಿದ್ದೀರಾ?” ಮೋಸಗೊಂಡಿದ್ದರೂ ಶೀಘ್ರದಲ್ಲಿಯೇ ಅವರು ನಮ್ಮ ಮೇಲೆ ಶಾಂತಿಯನ್ನು ತಾಳುತ್ತಾರೆ. ಏಕೆಂದರೆ ಅವರು ಉಪಕಾರಿಗಳು ಮತ್ತು ಒಳ್ಳೆಯವರು. ನಾನು ಎಂದೂ ಪಾಂಡವರಲ್ಲಿ ಮಿಥ್ಯಾವೃತ್ತಿಯನ್ನು ಕಂಡವನಲ್ಲ. ಅವರು ಎಲ್ಲಾ ಸಂಪತ್ತನ್ನೂ ತಮ್ಮದೇ ವೀರ್ಯದಿಂದ ಗಳಿಸಿದ್ದರೂ ಪಾಂಡವರು ನನ್ನ ಪರಿಚಾರಕರಂತಿದ್ದರು. ನಿತ್ಯ ಪರೀಕ್ಷಿಸಿದರೂ ಪಾರ್ಥರಲ್ಲಿ ದೂಷಿಸುವಂಥಹ ಸ್ವಲ್ಪವೂ ದೋಷವನ್ನು ನಾನು ಕಾಣಲಿಲ್ಲ. ನಿತ್ಯವೂ ಅವರು ಧರ್ಮ ಮತ್ತು ಅರ್ಥಗಳಿಗಾಗಿ ಕಾರ್ಯಗಳನ್ನು ಮಾಡುತ್ತಾರೆ. ಸುಖಪ್ರಿಯರಾಗಿ ಕಾಮದಿಂದ ಮಾಡುವುದಿಲ್ಲ. ಉಷ್ಣ, ಶೀತ, ಹಸಿವು ಮತ್ತು ಬಾಯಾರಿಕೆ, ನಿದ್ರೆ, ಮೈಥುನ, ಕ್ರೋಧ, ಹರ್ಷ, ಪ್ರಮಾದಗಳನ್ನು ಸಹಿಸಿಕೊಂಡು ಪ್ರಜ್ಞೆಯಲ್ಲಿದ್ದುಕೊಂಡು ಪಾರ್ಥರು

ಧರ್ಮಾರ್ಥಯೋಗಗಳಲ್ಲಿ ನಡೆಯುತ್ತಾರೆ. ಕಾಲಕ್ಕೆ ಸರಿಯಾಗಿ ಅವರು ಮಿತ್ರರಲ್ಲಿ ಧನವನ್ನು ಬಿಡುತ್ತಾರೆ. ಇವರೊಂದಿಗಿನ ಮೈತ್ರವು ಸಮಯ ಹೆಚ್ಚಾದಂತೆ ಜೀರ್ಣವಾಗುವುದಿಲ್ಲ. ಏಕೆಂದರೆ ಪಾರ್ಥರು ಯಥಾರ್ಹವಾಗಿ ಗೌರವ ಸಂಪತ್ತುಗಳನ್ನು ನೀಡುತ್ತಾರೆ.

ಅಜಮೀಢನ ಪಕ್ಷದಲ್ಲಿ ಅವರನ್ನು ದ್ವೇಷಿಸುವವರು ಯಾರೂ ಇಲ್ಲ. ಈ ಪಾಪಿ, ವಿಷಮಾನ್, ಮಂದಬುದ್ಧಿ ದುರ್ಯೋಧನ ಮತ್ತು ಕ್ಷುದ್ರತರ ಕರ್ಣರಹೊರತಾಗಿ! ಇವರಿಬ್ಬರೂ ಸುಖ ಮತ್ತು ಸ್ನೇಹಿತರನ್ನು ಕಳೆದುಕೊಂಡ ಆ ಮಹಾತ್ಮರ ತೇಜಸ್ಸನ್ನು ಹೆಚ್ಚಿಸುತ್ತಾರೆ. ಹೆಚ್ಚಿನ ವೀರ್ಯವುಳ್ಳ ಮತ್ತು ಸುಖವನ್ನೇ ಅನುಭವಿಸಿದ ದುರ್ಯೋಧನನು ಉತ್ತಮ ಕಾರ್ಯಗಳನ್ನೇ ಗೌರವಿಸುತ್ತಾನೆ. ಆದರೂ ಅವರು ಜೀವಂತವಿರುವಾಗಲೇ ಪಾಂಡವರ ಪಾಲನ್ನು ಕಸಿದುಕೊಳ್ಳಬಹುದು ಎನ್ನುವುದು ಬಾಲತನ.

ಯಾರ ಹೆಜ್ಜೆಗಳನ್ನು ಅರ್ಜುನ-ಕೇಶವರು, ವೃಕೋದರ-ಸಾತ್ಯಕಿಯರು, ಮಾದ್ರೀ ಪುತ್ರರು ಮತ್ತು ಸೃಂಜಯರೆಲ್ಲರೂ ಅನುಸರಿಸುತ್ತಾರೋ ಆ ಅಜಾತಶತ್ರುವಿಗೆ ಯುದ್ಧಕ್ಕೆ ಮೊದಲೇ ಕೊಡುವುದು ಒಳ್ಳೆಯದು. ರಥದಲ್ಲಿ ಕುಳಿತ ಸವ್ಯಸಾಚೀ ಗಾಂಡೀವಧನ್ವಿಯೊಬ್ಬನೇ ಪೃಥ್ವಿಯನ್ನು ಸದೆಬಡಿಯಲು

ಸಾಕು. ಹಾಗೆಯೇ ಜಯಿಸಲಸಾಧ್ಯ ವಿಷ್ಣು, ಕೇಶವ, ಲೋಕತ್ರಯಗಳ ಅಧಿಪತಿ ಮಹಾತ್ಮನೂ ಅದನ್ನೇ ಮಾಡುವವನು. ಸರ್ವದೇವರಲ್ಲಿ ಶ್ರೇಷ್ಠನಾದ, ಇಷ್ಟಪಾತ್ರನಾದ, ಮೋಡಗಳಂತೆ ಘೋಷಿಸುವ, ಶೀಘ್ರವಾಗಿ ಸಂಚರಿಸಬಲ್ಲ ಚಿಟ್ಟೆಗಳ ಹಿಂಡುಗಳಂಥ ಬಾಣಗಳನ್ನು ಪ್ರಯೋಗಿಸುವವನ ಎದಿರು ಯಾವ ಮಾನವನು ತಾನೇ ನಿಂತಾನು? ಸವ್ಯಸಾಚಿಯು ಗಾಂಡೀವವನ್ನು ಹಿಡಿದು, ರಥದಲ್ಲಿ ಕುಳಿತು ಒಬ್ಬನೇ ಉತ್ತರದಿಕ್ಕನ್ನು ಮತ್ತು ಉತ್ತರದ ಕುರುಗಳನ್ನು ಗೆದ್ದು ಅವರ ಧನವನ್ನು ತಂದನು ಮತ್ತು ಅವರ ಸೇನೆಗಳನ್ನು ತನ್ನ ಬಲದ ಭಾಗವನ್ನಾಗಿ ಮಾಡಿದನು. ಗಾಂಡೀವಧನ್ವಿ ಸವ್ಯಸಾಚಿ ಫಲ್ಗುನನು ಖಾಂಡವದಲ್ಲಿ ಇಂದ್ರನನ್ನೂ ಸೇರಿ ಎಲ್ಲ ದೇವತೆಗಳನ್ನೂ ಸೋಲಿಸಿ ಜಾತವೇದಸನಿಗೆ ಉಣಿಸಿ, ಪಾಂಡವರ ಯಶಸ್ಸನ್ನೂ ಮಾನವನ್ನೂ ಹೆಚ್ಚಿಸಿದನು. ಗದೆಯನ್ನು ಹಿಡಿಯುವವರಲ್ಲಿ ಭೀಮನ ಸಮನಾದವರು ಇಂದು ಯಾರೂ ಇಲ್ಲ. ಆನೆಯನ್ನು ಏರುವವರಲ್ಲಿ ಅವನ ಸಮನಾದವರಿಲ್ಲ. ರಥದಲ್ಲಿ ಅವನು ಅರ್ಜುನನಿಗೂ ಮಣಿಯುವುದಿಲ್ಲ ಎಂದು ಹೇಳುತ್ತಾರೆ. ಬಾಹುಬಲದಲ್ಲಿ ಅವನು ಹತ್ತು ಸಾವಿರ ಆನೆಗಳಿಗೆ ಸಮ. ಸುಶಿಕ್ಷಿತನಾದ, ವೈರತ್ವವನ್ನು ಬೆಳೆಸಿಕೊಂಡ, ಆ ತರಸ್ವಿಯು ಕೃದ್ಧನಾದರೆ ಕ್ಷಣಮಾತ್ರದಲ್ಲಿ ಧಾರ್ತರಾಷ್ಟ್ರರನ್ನು

ಸುಟ್ಟುಬಿಡುತ್ತಾನೆ. ಸದಾ ಕೋಪದಲ್ಲಿರುವ ಆ ಬಲವಾನನನ್ನು ಸಾಕ್ಷಾತ್ ವಾಸವನೂ ಕೂಡ ಯುದ್ಧದಲ್ಲಿ ಜಯಿಸಲು ಶಕ್ಯನಿಲ್ಲ. ಸುಚೇತಸರಾದ, ಬಲಶಾಲಿಗಳಾದ, ಶೀಘ್ರಕೈಚಳಕವುಳ್ಳ, ಅಣ್ಣ ಫಲ್ಗುನನಿಂದ ತರಬೇತಿಪಡೆದ, ಪಕ್ಷಿಗಳ ಹಿಂಡಿನ ಮೇಲೆ ಹಾರಾಡುವ ಗಿಡುಗಗಳಂತಿರುವ ಮಾದ್ರೀಪುತ್ರರೀರ್ವರು ಕುರುಗಳ ಮೇಲೆ ಹಾರಾಡುತ್ತಿರುತ್ತಾರೆ. ಅವರ ಮಧ್ಯೆ ಓಡಾಡುವ ತರಸ್ವೀ ಧೃಷ್ಟದ್ಯುಮ್ನನು ಪಾಂಡವರಲ್ಲೇ ಒಬ್ಬನೆಂದು ಹೇಳುತ್ತಾರೆ. ಅವನು ಪಾಂಡವರ ಜಯಕ್ಕಾಗಿ ಅಮಾತ್ಯರೊಂದಿಗೆ ಸೋಮಕರ ಮತ್ತು ತನ್ನ ಆತ್ಮವನ್ನೂ ತ್ಯಜಿಸಲು ಸಿದ್ಧನಿದ್ದಾನೆಂದು ಕೇಳಿದ್ದೇನೆ. ಯಾರಬಳಿಯಲ್ಲಿ ಸ್ವಲ್ಪ ಸಮಯ ಉಳಿದುಕೊಂಡಿದ್ದರೋ ಆ ವಯಸ್ಥ, ಶಾಲ್ವೇಯಾನರ ಅಧಿಪ ವಿರಾಟನು ಪುತ್ರರೊಂದಿಗೆ ಪಾಂಡವರಿಗಾಗಿ ಇದ್ದಾನೆ ಮತ್ತು ಅವನು ಯುಧಿಷ್ಠಿರನ ಭಕ್ತ ಎಂದು ನಾನು ಕೇಳಿದ್ದೇನೆ. ಕೇಕಯ ರಾಜ್ಯದಿಂದ ಭ್ರಷ್ಟ ಬಲಶಾಲಿ ಐವರು ಮಹೇಷ್ವಾಸ ಸಹೋದರರಿದ್ದಾರೆ. ರಾಜ್ಯಾಕಾಂಕ್ಷಿಗಳಾದ ಅವರು ಯುದ್ಧಾರ್ಥಿಗಳಾಗಿ ಪಾರ್ಥರನ್ನು ಅವಲಂಬಿಸಿದ್ದಾರೆ. ಪೃಥ್ವೀಪತಿಗಳಲ್ಲಿ ವೀರರೆಲ್ಲರೂ ಪಾಂಡವರ ವಿಷಯದಲ್ಲಿ ನಿಷ್ಠರಾಗಿ ಸೇರಿದ್ದಾರೆ. ಆ ಶೂರರು ಭಕ್ತಿಮತರಾಗಿ ಪ್ರೀತಿಯಿಂದ ಧರ್ಮರಾಜನನ್ನು ಸೇರಿದ್ದಾರೆ ಎಂದು ನಾನು

ಕೇಳಿದ್ದೇನೆ. ಗಿರಿ ದುರ್ಗಗಳಲ್ಲಿ ವಾಸಿಸುವವರು ಮತ್ತು ಪೃಥ್ವಿಯಲ್ಲಿ ವಿಶುದ್ಧ ಕುಲದಲ್ಲಿ ಹುಟ್ಟಿದ ಯೋಧರು, ನಾನಾ ಆಯುಧವೀರ್ಯವಂತ ಮ್ಲೇಚ್ಛರು ಪಾಂಡವರಿಗಾಗಿ ನಿಷ್ಠೆಯಿಂದ ಸೇರಿದ್ದಾರೆ. ಇಂದ್ರಸಮನಾದ ರಾಜ ಪಾಂಡ್ಯನೂ ಯುದ್ಧದಲ್ಲಿ ಬಹು ಪ್ರವೀರರರೊಂದಿಗೆ ಲೋಕಪ್ರವೀರ, ಅಪ್ರತಿಮ ವೀರ್ಯ ತೇಜಸ್ವಿಗಳಾದ ಮಹಾತ್ಮ ಪಾಂಡವರಿಗಾಗಿ ಸೇರಿದ್ದಾರೆ. ದ್ರೋಣ, ಅರ್ಜುನ, ವಾಸುದೇವ, ಕೃಪ ಮತ್ತು ಭೀಷ್ಮರಿಂದ ಕಲಿತ ಕೃಷ್ಣನ ಮಗನಿಗೆ ಸರಿಸಮನಾದ ಸಾತ್ಯಕಿಯು ಪಾಂಡವರಿಗಾಗಿ ನಿಷ್ಠಾವಂತನಾಗಿದ್ದಾನೆಂದು ಹೇಳುತ್ತಾರೆ. ಚೇದಿ ಮತ್ತು ಕರೂಷಗಳ ಭೂಮಿಪಾಲರು ಎಲ್ಲರೂ ಉತ್ಸಾಹದಿಂದ ಸೇರಿದ್ದಾರೆ.

ಅವರ ಮಧ್ಯೆ ಸೂರ್ಯನಂತೆ ಸುಡುತ್ತಿರುವ ಶ್ರೀಯಿಂದ ಪ್ರಜ್ವಲಿಸುವ ಚೇದಿಪತಿಯನ್ನು ಸಂಹರಿಸಿದ, ಯುದ್ಧದಲ್ಲಿ ಅಜೇಯನಾದ, ಗೌರವಾನ್ವಿತ, ಬಿಲ್ಲನ್ನು ಎಳೆಯುವವರಲ್ಲೆಲ್ಲಾ ಶ್ರೇಷ್ಠನಾದ, ಕ್ಷತ್ರಿಯರ ಸರ್ವೋತ್ಸಾಹವನ್ನು ಕಸಿದುಕೊಂಡು ನಗುತ್ತಿರುವ ತರಸ್ವಿ ಕೃಷ್ಣನಿದ್ದಾನೆ. ಅವನು ಹಿಂದೆ ಶಿಶುಪಾಲನನ್ನು ಸಂಹರಿಸಿ ಯಾದವರ ಯಶಸ್ಸು ಮಾನಗಳನ್ನು ವರ್ಧಿಸಿದನು. ಅದೇ ಕರೂಷರಾಜ ಪ್ರಮುಖನನ್ನು ನರೇಂದ್ರರೆಲ್ಲರೂ ಗೌರವಿಸಿ ವರ್ಧಿಸುತ್ತಿದ್ದರು. ಅಲ್ಲಿ ಸುಗ್ರೀವ

ಮತ್ತು ಇತರ ಕುದುರೆಗಳನ್ನು ಕಟ್ಟಿದ ರಥದಲ್ಲಿದ್ದ ಕೃಷ್ಣ ಕೇಶವನು ಅಸಹ್ಯನೆಂದು ತಿಳಿದು, ಚೇದಿಪತಿಯನ್ನು ಬಿಟ್ಟು, ಸಿಂಹವನ್ನು ನೋಡಿದ ಕ್ಷುದ್ರಮೃಗಗಳಂತೆ ಇತರರು ಓಡಿಹೋದರು. ಸೊಕ್ಕಿನಿಂದ ತರಸ್ತನಾಗಿ ವಾಸುದೇವನನ್ನು ದ್ವಂದ್ವಯುದ್ಧದಲ್ಲಿ ಎದುರಿಸಲು ಅವನು ಕೃಷ್ಣನಿಂದ ಭಿರುಗಾಳಿಯ ಹೊಡೆತಕ್ಕೆ ಸಿಲುಕಿ ಉರುಳಿದ ಕರ್ಣಿಕಾರ ವೃಕ್ಷದಂತೆ ಹೊಡೆತತಿಂದು ಜೀವವನ್ನು ಕಳೆದುಕೊಂಡು ಬಿದ್ದನು. ಅವರಿಗಾಗಿ ಕೇಶವನು ಏನೆಲ್ಲ ಮಾಡಿದ ಎಂದು ಹೇಳುವುದನ್ನು ಕೇಳಿದರೆ ಮತ್ತು ಆ ವಿಷ್ಣುವಿನ ಕರ್ಮಗಳನ್ನು ಸ್ಮರಿಸಿಕೊಂಡರೆ ನನಗೆ ಶಾಂತಿಯೆನ್ನುವುದೇ ಇಲ್ಲವಾಗಿದೆ. ಆ ವೃಷ್ಣಿಸಿಂಹನ ನಾಯಕತ್ವದಲ್ಲಿರುವ ಅವರನ್ನು ಯಾವ ಶತ್ರುವೂ ಎದುರಿಸಲು ಸಾಧ್ಯವಿಲ್ಲ. ಇಬ್ಬರು ಕೃಷ್ಣರೂ ಒಂದೇ ರಥದಲ್ಲಿ ಸೇರಿದ್ದಾರೆ ಎಂದು ಕೇಳಿ ನನ್ನ ಹೃದಯವು ಭಯದಿಂದ ಕಂಪಿಸುತ್ತಿದೆ. ನನ್ನ ಮಂದಬುದ್ಧಿ ಮಗನು ಅವರೊಂದಿಗೆ ಸಂಗರವನ್ನು ಮಾಡಲು ಉತ್ಸುಕನಾಗಿದ್ದರೆ ಅವನು ಅದನ್ನು ಮಾಡಿಯಾನು. ಇಲ್ಲದಿದ್ದರೆ ಇಂದ್ರ ಮತ್ತು ವಿಷ್ಣು ಇಬ್ಬರೂ ದೈತ್ಯಸೇನೆಯನ್ನು ಹೇಗೋ ಹಾಗೆ ಶಕ್ರಸಮನಾದ ಧನಂಜಯ ಮತ್ತು ಸನಾತನ ವಿಷ್ಣು ವೃಷ್ಣಿವೀರರು ಅವನನ್ನು ಸಂಹರಿಸುತ್ತಾರೆ ಎಂದು ನನಗನ್ನಿಸುತ್ತದೆ. ಕುಂತೀಪುತ್ರ ಪಾಂಡವ ಅಜಾತಶತ್ರುವು

ಧಾರ್ಮಿಕ. ಮರ್ಯಾದೆಯನ್ನು ಕಳೆದುಕೊಳ್ಳುವ ಕೆಲಸಗಳನ್ನು ಮಾಡದೇ ಇರುವವನು. ಮತ್ತು ತರಸ್ವೀ. ಆ ಮನಸ್ವಿಯು ದುರ್ಯೋಧನನಿಂದ ಮೋಸಗೊಂಡಿದ್ದಾನೆ. ಕೃದ್ಧನಾಗಿ ಅವನು ಧಾರ್ತರಾಷ್ಟ್ರರನ್ನು ಸುಟ್ಟುಬಿಡುವುದಿಲ್ಲವೇ? ಕ್ರೋಧದೀಪ್ತನಾದ ರಾಜನ ಸಿಟ್ಟಿಗೆ ಸದೈವ ಹೆದರುವಷ್ಟು ನಾನು ಅರ್ಜುನ, ವಾಸುದೇವ, ಭೀಮ ಅಥವಾ ಯಮಳರಿಗೆ ಹೆದರುವುದಿಲ್ಲ. ತಪಸ್ಸು ಮತ್ತು ಬ್ರಹ್ಮಚರ್ಯದಿಂದ ಯುಕ್ತನಾದ ಅವನು ಮನಸ್ಸಿನಲ್ಲಿ ಸಂಕಲ್ಪಿಸಿದುದು ಸಿದ್ಧಿಯಾಗುತ್ತದೆ. ಅವನ ಕ್ರೋಧವನ್ನು ಮತ್ತು ಅದು ಎಷ್ಟು ನ್ಯಾಯವಾದುದು ಎಂದು ತಿಳಿದಾಗ ನನ್ನನ್ನು ಭೀತಿಯು ಆವರಿಸುತ್ತದೆ. ನನ್ನಿಂದ ಕಳುಹಿಸಲ್ಪಟ್ಟ ರಥದಲ್ಲಿ ಶೀಘ್ರವಾಗಿ ಪಾಂಚಾಲರಾಜನ ಸೇನೆಯು ತಂಗಿರುವಲ್ಲಿಗೆ ಹೋಗು. ಅಜಾತಶತ್ರುವಿನ ಕುಶಲವನ್ನು ಕೇಳು. ಪುನಃ ಪುನಃ ಅವನನ್ನು ಪ್ರೀತಿಯಿಂದ ಮಾತನಾಡಿಸು. ನೀನು ಮಹಾಮಾತ್ರನೂ, ವೀರ್ಯವತನೂ, ಉದಾರನೂ, ಅನಾಮಯನೂ ಆದ ಜನಾರ್ದನನನ್ನು ಭೇಟಿಯಾಗುವೆ. ನನ್ನ ಮಾತಿನಂತೆ ಕುಶಲವನ್ನು ಕೇಳುವೆ ಮತ್ತು ಧೃತರಾಷ್ಟ್ರನು ಪಾಂಡವರೊಂದಿಗೆ ಶಾಂತಿಯನ್ನು ಬಯಸುತ್ತಾನೆ ಎಂದು ಹೇಳುವೆ. ಕುಂತೀಪುತ್ರನು ವಾಸುದೇವನ ಮಾತಿಲ್ಲದೇ ಏನನ್ನೂ ಮಾಡಲಾರ. ಕೃಷ್ಣನು ಅವರಿಗೆ ಆತ್ಮದಷ್ಟೇ

ಪ್ರಿಯನಾದವನು. ವಿಧ್ವಾಂಸನಾದ ಅವನು ನಿತ್ಯವೂ ಅವರ ಏಳ್ಗೆಯ ಕೆಲಸವನ್ನೇ ಮಾಡುತ್ತಾನೆ.

ಪಾಂಡವರನ್ನು, ಸೃಂಜಯರನ್ನು, ಜನಾರ್ದನನನ್ನು, ಯುಯುಧಾನನನ್ನು, ವಿರಾಟನನ್ನು, ಮತ್ತು ಐವರು ದ್ರೌಪದೇಯರನ್ನೂ ಭೇಟಿಮಾಡಿ ನನ್ನ ಮಾತಿನಂತೆ ಕುಶಲವನ್ನು ಕೇಳು. ಅಲ್ಲಿ ಇನ್ನೂ ಇತರ ಕಾಲಕ್ಕೆ ತಕ್ಕಂತಹ, ಭಾರತರ ಹಿತವೆಂದೆನಿಸಿದ, ಅಸ್ವೀಕೃತಗೊಳ್ಳದ, ಯುದ್ಧವನ್ನು ಸೂಚಿಸದ ಎಲ್ಲವನ್ನೂ ರಾಜಮಧ್ಯದಲ್ಲಿ ಹೇಳು."

## ಉಪಪ್ಲವ್ಯಕ್ಕೆ ಸಂಜಯನ ಆಗಮನ

ರಾಜಾ ಧೃತರಾಷ್ಟ್ರನ ಮಾತನ್ನು ಕೇಳಿ ಸಂಜಯನು ಅಮಿತೌಜಸ ಪಾಂಡವರನ್ನು ಕಾಣಲು ಉಪಪ್ಲವ್ಯಕ್ಕೆ ಬಂದನು. ರಾಜಾ ಧರ್ಮಾತ್ಮ ಯುಧಿಷ್ಠಿರನ ಬಳಿಬಂದು ಮೊದಲಿಗೆ ನಮಸ್ಕರಿಸಿ ಸೂತಪುತ್ರನು ಮಾತನಾಡಿದನು. ಗಾವಲ್ಗಣಿ ಸೂತಸೂನು ಸಂಜಯನು ಅಜಾತಶತ್ರುವಿಗೆ ಸಂತೋಷದಿಂದ ಹೇಳಿದನು:

"ರಾಜನ್! ಒಳ್ಳೆಯದಾಯಿತು ಮಹೇಂದ್ರ ಸಮನಾದವರ ಸಹಾಯವನ್ನು ಪಡೆದಿರುವ, ಆರೋಗ್ಯದಿಂದಿರುವ ನಿನ್ನನ್ನು ನೋಡುತ್ತಿದ್ದೇನೆ. ಅಂಬಿಕೇಯ, ವೃದ್ಧ ರಾಜಾ ಮನೀಷೀ ಧೃತರಾಷ್ಟ್ರನು ಪಾಂಡವಾಗ್ರಜನ, ಭೀಮನ, ಧನಂಜಯನ ಮತ್ತು ಮಾದ್ರೀಸುತರ ಕುಶಲವನ್ನು ಕೇಳುತ್ತಾನೆ. ಯಾರ

ಕಾಮ-ಇಷ್ಟಗಳನ್ನು ನೀನು ಪೂರೈಸುತ್ತೀಯೋ ಆ ಕೃಷ್ಣೆ, ದ್ರೌಪದೀ, ಮನಸ್ವಿನೀ, ಸತ್ಯವ್ರತೆ, ವೀರಪತ್ನಿಯು ಕೂಡ ಪುತ್ರರೊಂದಿಗೆ ಚೆನ್ನಾಗಿದ್ದಾಳೆ ತಾನೇ?"

ಯುಧಿಷ್ಠಿರನು ಹೇಳಿದನು:

"ಸಂಜಯ! ನಿನಗೆ ಸ್ವಾಗತ! ನಿನ್ನನ್ನು ನೋಡಿ ನಾವು ಸಂತೋಷಗೊಂಡಿದ್ದೇವೆ. ಹಿಂದಿರುಗಿ ನಿನ್ನ ಕುಶಲವನ್ನು ಕೇಳುತ್ತೇನೆ. ನಾನು ಅನುಜರೊಂದಿಗೆ ಕುಶಲನಾಗಿದ್ದೇನೆ ಎಂದು ತಿಳಿ. ಬಹಳ ಸಮಯದ ನಂತರ ಈಗ ಆ ಭಾರತ ಕುರುವೃದ್ಧ ರಾಜನ ಕುಶಲತೆಯ ಕುರಿತು ಕೇಳುತ್ತಿದ್ದೇನೆ. ನಿನ್ನನ್ನು ನೋಡಿ ಆ ನರೇಂದ್ರನನ್ನೇ ನೋಡಿದ್ದೇನೋ ಎನ್ನುವಷ್ಟು ಸಂತೋಷವಾಗುತ್ತಿದೆ. ಪಿತಾಮಹ, ಸ್ಥವಿರ, ಮನಸ್ವಿ, ಮಹಾಪ್ರಾಜ್ಞ, ಸರ್ವಧರ್ಮೋಪಪನ್ನ, ಕೌರವ್ಯ ಭೀಷ್ಮನು ಕುಶಲನಾಗಿದ್ದಾನೆ ತಾನೇ? ಮೊದಲಿನಂತೆಯೇ ಈಗಲೂ ವೃತ್ತಿಪರನಾಗಿದ್ದಾನೆಯೇ? ಮಹಾತ್ಮ ವೈಚಿತ್ರವೀರ್ಯ, ಮಹಾರಾಜ ಧೃತರಾಷ್ಟ್ರನು ಪುತ್ರರೊಂದಿಗೆ ಕುಶಲನಾಗಿದ್ದಾನೆಯೇ? ಮಹಾರಾಜ ಬಾಹ್ಲೀಕ, ಪ್ರತೀಪನ ಮಗ, ವಿದ್ವಾನನು ಕುಶಲನಾಗಿದ್ದಾನೆಯೇ? ಸೋಮದತ್ತನು ಕುಶಲನಾಗಿದ್ದಾನೆಯೇ? ಹಾಗೆಯೇ ಭೂರಿಶ್ರವ, ಸತ್ಯಸಂಧ,

ಶಲ, ಮಹೇಷ್ವಾಸ ವಿಪ್ರರಾದ ದ್ರೋಣ, ಅವನ ಮಗ ಮತ್ತು ಕೃಪರು ಆರೋಗ್ಯದಿಂದಿದ್ದಾರೆ ತಾನೇ? ಮಹಾಪ್ರಾಜ್ಞರು, ಸರ್ವಶಾಸ್ತ್ರಾವದಾತರು, ಭೂಮಿಯಲ್ಲಿಯೇ ಧನುಭೃತರಲ್ಲಿ ಮುಖ್ಯತಮರು ಗೌರವವನ್ನು ಪಡೆಯುತ್ತಿದ್ದಾರೆಯೇ? ಈ ಧನುಭೃತರು ಆರೋಗ್ಯದಿಂದಾರಲ್ಲವೇ? ಇವರೆಲ್ಲರೂ ಕುರುಗಳಿಗೆ ಅಂಟಿಕೊಂಡಿದ್ದಾರೆ. ಪೃಥ್ವಿಯ ಧನುರ್ಧರ ಯುವಕರೆಲ್ಲಾ ಮತ್ತು ನೋಡಲು ಸುಂದರನಾದ ಮಹೇಷ್ವಾಸ ಶೀಲವಂತ ದ್ರೋಣಪುತ್ರನು ಅವರ ರಾಷ್ಟ್ರದಲ್ಲಿ ವಾಸಿಸುತ್ತಿದ್ದಾರೆ. ವೈಶ್ಯಾಪುತ್ರ, ಮಹಾಪ್ರಾಜ್ಞ, ರಾಜಪುತ್ರ ಯುಯುತ್ಸುವು ಕುಶಲನಾಗಿದ್ದಾನೆಯೇ? ಮಂದ ಸುಯೋಧನ, ಮತ್ತು ಅವನಿಗೆ ವಿಧೇಯನಾಗಿರುವ ಅಮಾತ್ಯ ಕರ್ಣರು ಕುಶಲರಾಗಿದ್ದಾರೆಯೇ? ಭಾರತರ ವೃದ್ಧ ಸ್ತ್ರೀಯರು, ಜನನಿಯರು, ಅಡುಗೆಮನೆಯ ದಾಸಿಯರು, ಭಾರ್ಯೆಯರ ದಾಸಿಯರು, ಸೊಸೆಯಂದಿರು, ಮಕ್ಕಳು, ಸಹೋದರಿಯರು, ಸಹೋದರಿಯರ ಮಕ್ಕಳು, ಮತ್ತು ಮಗಳ ಮಕ್ಕಳು ಆರೋಗ್ಯದಿಂದ ಇದ್ದಾರೆಯೇ? ಹಿಂದಿನಂತೆ ರಾಜನು ಬ್ರಾಹ್ಮಣರ ವೃತ್ತಿಯನ್ನು ಯಥಾವತ್ತಾಗಿ ಮಾಡಲು ಬಿಡುತ್ತಾನೆಯೇ? ನನ್ನ ದಾಯಾದಿಗಳಾದ ಧಾರ್ತರಾಷ್ಟ್ರರು ದ್ವಿಜಾತಿಯವರಿಗೆ ನಾನು ನೀಡಿದ್ದ ದಾನಗಳನ್ನು ಕಸಿದುಕೊಂಡಿಲ್ಲ ತಾನೇ? ರಾಜ ಧೃತರಾಷ್ಟ್ರನು ಪುತ್ರರು

ಬ್ರಾಹ್ಮಣರನ್ನು ಅತಿಕ್ರಮಿಸುವುದನ್ನು ಉಪೇಕ್ಷಿಸುತ್ತಾನೆ ತಾನೇ? ಅವರಲ್ಲಿ ಆ ನ್ಯೂನವೃತ್ತಿಯನ್ನು ಉಪೇಕ್ಷಿಸಬೇಕು. ಏಕೆಂದರೆ ಇದು ಸ್ವರ್ಗಕ್ಕಿರುವ ಒಂದೇ ಮಾರ್ಗ. ಇದೇ ಜೀವಲೋಕದಲ್ಲಿ ವಿಧಾತ್ರನು ಪ್ರಜೆಗಳಿಗೆ ವಿಹಿಸಿರುವ ಉತ್ತಮ ಶ್ವೇತವರ್ಣದ ಜ್ಯೋತಿ. ಆ ಮಂದರು ಅವರನ್ನು ಸರಿಯಾಗಿ ನೋಡಿಕೊಳ್ಳದೇ ಇದ್ದರೆ ಕೌರವರ ಸರ್ವನಾಶವಾಗುತ್ತದೆ. ರಾಜಾ ಧೃತರಾಷ್ಟ್ರನು ಪುತ್ರರೊಡನೆ ಅಮಾತ್ಯವರ್ಗಕ್ಕೆ ವೃತ್ತಿವೇತನವನ್ನು ಕೊಡುತ್ತಿದ್ದಾನೆಯೇ? ಅಮಿತ್ರರು ಸುಹೃದಯರಂತೆ ವೇಷಧರಿಸಿ ಅವರಲ್ಲಿ ಭೇದವನ್ನು ತರುವ ಶತ್ರುಗಳ್ಯಾರೂ ಅವರಿಗಿಲ್ಲ ತಾನೇ? ಕೌರವರೆಲ್ಲರೂ ಪಾಂಡವರ ಪಾಪಗಳ ಕುರಿತು ಮಾತನಾಡಿಕೊಳ್ಳುವುದಿಲ್ಲ ತಾನೇ?

ದಸ್ಯುಗಳ ದಂಡನ್ನು ನೋಡಿದಾಗ ಅವರು ಯುದ್ಧದಲ್ಲಿ ಪ್ರಣೀತನಾದ ಪಾರ್ಥನನ್ನು ಸ್ಮರಿಸಿಕೊಳ್ಳುತ್ತಾರೆ ತಾನೇ? ಭುಜದ ಮೇಲೇರಿಸಿ ಗಾಂಡೀವ ಧನುಸ್ಸಿನಿಂದ ಬಿಟ್ಟ, ಗಾಳಿಯಲ್ಲಿ ನೇರವಾಗಿ, ಗುಡುಗಿನಂತೆ ಮೊಳಗುತ್ತ ಸಾಗುವ ಬಾಣಗಳನ್ನು ಅವರು ಸ್ಮರಿಸಿಕೊಳ್ಳುತ್ತಾರೆ ತಾನೇ? ಒಂದೇ ಒಂದು ಹಸ್ತ ಚಳಕದಲ್ಲಿ ಅರವತ್ತೊಂದು ಖಡ್ಗಗಳಂತೆ ತೀಕ್ಷ್ಣ, ಗರಿಗಳುಳ್ಳ, ಹರಿತ ಬಾಣಗಳನ್ನು ಒಟ್ಟಿಗೇ ಬಿಡಬಲ್ಲ ಅರ್ಜುನನ್ನು ಹೋಲುವ ಅಥವಾ ಮೀರಿಸುವವರನ್ನು ಈ

ಭೂಮಿಯಲ್ಲಿ ನಾನು ನೋಡಿಲ್ಲ ಅಥವಾ ಕೇಳಿಲ್ಲ. ವ್ಯೂಹಗಳಲ್ಲಿ ರಚಿತಗೊಂಡ ಶತ್ರುಸಂಘಗಳನ್ನು ಭಯದಿಂದ ಕಂಪಿಸುವಂತೆ ಮಾಡುವ, ಕಪಾಲಗಳು ಒಡೆದ ಆನೆಯಂತೆ ಸಂಚರಿಸುವ ಗದಾಪಾಣೀ, ತರಸ್ವೀ ಭೀಮಸೇನನನ್ನು ಅವರು ಸ್ಮರಿಸಿಕೊಳ್ಳುತ್ತಾರೆ ತಾನೇ? ಎಡ ಮತ್ತು ಬಲಗೈ ಎರಡರಿಂದಲೂ ಬಾಣಗಳನ್ನು ಪ್ರಯೋಗಿಸುತ್ತಾ ದಂತಕೂರದಲ್ಲಿ ಸೇರಿದ್ದ ಕಲಿಂಗರನ್ನು ಜಯಿಸಿದ ಮಾದ್ರೀಪುತ್ರ, ಮಹಾಬಲಿ, ಸಹದೇವನನ್ನು ಸ್ಮರಿಸಿಕೊಳ್ಳುತ್ತಾರೆ ತಾನೇ? ನೀನು ನೋಡುತ್ತಿದ್ದಂತೇ ಪೂರ್ವದಿಕ್ಕಿಗೆ ಕಳುಹಿಸಲ್ಪಟ್ಟ, ಮತ್ತು ನನಗಾಗಿ ಪೂರ್ವದಿಕ್ಕನ್ನು ವಶಪಡಿಸಿಕೊಂಡು ಬಂದ ಮಾದ್ರೀಸುತ ನಕುಲನನ್ನು ಸ್ಮರಿಸಿಕೊಳ್ಳುತ್ತಾರೆ ತಾನೇ? ಕೆಟ್ಟದಾಗಿ ಆಲೋಚಿಸಿ ಘೋಷಯಾತ್ರೆಗೆಂದು ದ್ವೈತವನಕ್ಕೆ ಬಂದಾಗ ಅಲ್ಲಿ ಆ ಮಂದಬುದ್ಧಿಯವರು ಶತ್ರುಗಳ ವಶವಾದಾಗ ಭೀಮಸೇನ ಮತ್ತು ಜಯರು ಅವರನ್ನು ಬಿಡುಗಡೆಗೊಳಿಸಿದ್ದುದನ್ನು, ನಾನು ಅರ್ಜುನನನ್ನು ಹಿಂಬಾಲಿಸಿ, ಮಾದ್ರೀಪುತ್ರರು ಭೀಮಸೇನನ ರಥಚಕ್ರವನ್ನು ರಕ್ಷಿಸಿದುದನ್ನು, ಗಾಂಡೀವಧರನು ಶತ್ರುಸಂಘಗಳನ್ನು ನಾಶಪಡಿಸಿ ಏನೂ ತೊಂದರೆಗೊಳಗಾಗದೇ ಹಿಂದಿರುಗಿ ಬಂದಿದ್ದುದನ್ನು ಅವರು ನೆನಪಿಸಿಕೊಳ್ಳುತ್ತಾರೆಯೇ? ನಮ್ಮೆಲ್ಲರ

ಆತ್ಮಗಳಿಂದಲೂ ನಾವು ಧೃತರಾಷ್ಟ್ರ ಪುತ್ರನನ್ನು ಗೆಲ್ಲಲು ಶಕ್ಯರಾಗಿಲ್ಲದಿರುವಾಗ ಒಂದೇ ಒಂದು ಒಳ್ಳೆಯ ಕೆಲಸದಿಂದ ಇದನ್ನು ಮಾಡಲು ಸಾದ್ಯವಿಲ್ಲ."

## ಸಂಜಯನು ಧೃತರಾಷ್ಟ್ರನ ಸಂದೇಶವನ್ನು ಹೇಳಿದುದು

ಸಂಜಯನು ಹೇಳಿದನು:

"ಪಾಂಡವ! ನೀನು ಹೇಳಿದಂತೆಯೇ ಇದೆ. ಕುರುಗಳ ಮತ್ತು ಕುರುಶ್ರೇಷ್ಠ ಜನರ ಕುಶಲವನ್ನು ಕೇಳುತ್ತಿದ್ದೀಯಲ್ಲ. ಯಾವ ಕುರುಶ್ರೇಷ್ಠರ ಕುರಿತು ನೀನು ಕೇಳುತ್ತಿದ್ದೀಯೋ ಅವರು ಅನಾಮಯರಾಗಿದ್ದಾರೆ. ಧಾರ್ತರಾಷ್ಟ್ರನ ಬಳಿ ಸಂತರೂ, ವೃದ್ಧರೂ ಮತ್ತು ಪಾಪಿಗಳೂ ಇದ್ದಾರೆಂದು ತಿಳಿ. ಧಾರ್ತರಾಷ್ಟ್ರನು ರಿಪುಗಳಿಗೂ ಕೊಡುತ್ತಾನೆ. ಹಾಗಿರುವಾಗ ಬ್ರಾಹ್ಮಣರಿಗೆ ಕೊಟ್ಟಿದ್ದುದನ್ನು ಹೇಗೆ ತಾನೇ ಕಸಿದುಕೊಳ್ಳುತ್ತಾನೆ?

ನಿಮ್ಮ ಈ ನಡವಳಿಕೆಯು ಧರ್ಮಯುತವಾದುದಲ್ಲ. ನಿಮಗೆ ಕೆಟ್ಟದ್ದನ್ನು ಬಯಸದೇ ಇರುವವರ ಮೇಲೂ ಹಗೆತನವನ್ನು ಸಾಧಿಸುವುದು ಒಳ್ಳೆಯದಲ್ಲ. ಪುತ್ರರೊಂದಿಗೆ ಧೃತರಾಷ್ಟ್ರನು ಸಾಧುನಡತೆಯುಳ್ಳ ನಿಮ್ಮೊಂದಿಗೆ ದ್ವೇಷಿಗಳಂತೆ ನಡೆದುಕೊಳ್ಳುವುದು ಸಾಧುವಲ್ಲ. ಇದು ಮಿತ್ರರೊಡನೆ ಹಗೆಸಾಧಿಸಿದಂತೆ. ಅವನು ಈ ರೀತಿ ಕಾಡಿಸುವುದನ್ನು

ಒಪ್ಪಿಕೊಳ್ಳುವುದಿಲ್ಲ. ಆಗಿದ್ದುದಕ್ಕೆ ಅತ್ಯಂತ ದುಃಖಿತನಾಗಿದ್ದಾನೆ. ಮಿತ್ರದ್ರೋಹವು ಎಲ್ಲ ಪಾಪಗಳಿಗಿಂತಲೂ ಹೆಚ್ಚಿನದು ಎಂದು ಬ್ರಾಹ್ಮಣರು ಸೇರಿ ಅವನಿಗೆ ಹೇಳಿದ್ದಾರೆ.

ಯುದ್ಧಕ್ಕೆ ಸೇರಿದಾಗ ನಿನ್ನನ್ನು ಮತ್ತು ಯೋಧರ ನಾಯಕನಾದ ಜಿಷ್ಣುವನ್ನು ನೆನಪಿಸಿಕೊಳ್ಳುತ್ತಾರೆ. ಶಂಖ ಮತ್ತು ದುಂಧುಭಿಗಳ ಶಬ್ದವು ಕೇಳಿದಾಗಲೆಲ್ಲ ಗದಾಪಾಣಿ ಭೀಮಸೇನನನ್ನು ಸ್ಮರಿಸಿಕೊಳ್ಳುತ್ತಾರೆ. ರಣದ ಮಧ್ಯದಲ್ಲಿ ಎಲ್ಲ ದಿಕ್ಕುಗಳಲ್ಲಿಯೂ ಹೋಗಬಲ್ಲ, ಶತ್ರುಸೇನೆಯ ಮೇಲೆ ಒಂದೇಸಮನೆ ಶರಗಳ ಮಳೆಯನ್ನು ಸುರಿಸುವ, ಸಮರದಲ್ಲಿ ಇತರರನ್ನು ನಡುಗಿಸಬಲ್ಲ, ಮಹಾರಥಿ ಮಾದ್ರೀ ಸುತರಿಬ್ಬರನ್ನೂ ಎಲ್ಲರೂ ಸ್ಮರಿಸಿಕೊಳ್ಳುತ್ತಾರೆ.

ಪುರುಷನಿಗೆ ಭವಿಷ್ಯದಲ್ಲಿ ಏನು ಬರುತ್ತದೆಯೋ ಎಂದು ತಿಳಿಯವುದು ಕಷ್ಟ. ಪಾಂಡವ! ಸರ್ವಧರ್ಮೋಪನ್ನನಾದ ನೀನೂ ಕೂಡ ಸಹಿಸಲಾಧ್ಯವಾದ ಕಷ್ಟಗಳನ್ನು ಪಡೆದೆ. ಪ್ರಜ್ಞೆಯಿಂದ ನೀನೇ ಆದ ಇವೆಲ್ಲವನ್ನೂ ಸರಿಪಡೆಸಿಕೊಳುತ್ತೀಯೆ ಎನ್ನುವುದು ಖಂಡಿತ. ಇಂದ್ರಸಮರಾದ ಪಾಂಡುವಿನ ಮಕ್ಕಳು ಕಾಮಕ್ಕಾಗಿ ಧರ್ಮವನ್ನು ಎಂದೂ ತ್ಯಜಿಸುವುದಿಲ್ಲ. ಪ್ರಜ್ಞೆಯಿಂದಲೇ

ನೀನು ಧಾರ್ತರಾಷ್ಟ್ರರು, ಪಾಂಡವರು, ಸೃಂಜಯರು ಮತ್ತು ಇಲ್ಲಿ ಸೇರಿರುವ ಇತರ ರಾಜರೂ ಕೂಡ ಶಾಂತಿಯನ್ನು ಹೊಂದುವಂತೆ ಮಾಡುತ್ತೀಯೆ. ನಿನ್ನ ತಂದೆ ಧೃತರಾಷ್ಟ್ರನ ಮಾತನ್ನು ನಾನು ಹೇಳಿದ್ದೇನೆ. ಅವನು ಅಮಾತ್ಯರೊಡನೆ ಮತ್ತು ಮಕ್ಕಳೊಂದಿಗೆ ವಿಚಾರಿಸಿ ನನಗೆ ಈ ಮಾತುಗಳನ್ನು ತಿಳಿಸಿದ್ದಾನೆ."

ಯುಧಿಷ್ಠಿರನು ಹೇಳಿದನು:

"ಗಾವಲ್ಗಣೇ! ಪಾಂಡವರು, ಸೃಂಜಯರು, ಜನಾರ್ದನ, ಯುಯುಧಾನ, ವಿರಾಟರು ಇಲ್ಲಿ ಸೇರಿದ್ದಾರೆ. ಧೃತರಾಷ್ಟ್ರನು ನಿನಗೆ ಏನು ಹೇಳಿ ಕಳುಹಿಸಿದ್ದಾನೋ ಅದನ್ನು ಹೇಳು."

ಸಂಜಯನು ಹೇಳಿದನು:

"ಅಜಾತಶತ್ರು, ವೃಕೋದರ, ಧನಂಜಯ, ಮಾದ್ರೀ ಸುತರು, ಶೌರಿ ವಾಸುದೇವ, ಯುಯುಧಾನ, ಚೇಕಿತಾನ, ವಿರಾಟ, ಪಾಂಚಾಲರ ವೃದ್ಧ ಅಧಿಪತಿ, ಪಾರ್ಷತ ಧೃಷ್ಟದ್ಯುಮ್ನ, ಮತ್ತು ಯಾಜ್ಞಸೇನಿ ಎಲ್ಲರಿಗೂ, ಕುರುಗಳ ಒಳ್ಳೆಯದನ್ನೇ ಬಯಸಿ ಹೇಳುವ, ನನ್ನ ಈ ಮಾತುಗಳನ್ನು ಕೇಳಲು ಆಮಂತ್ರಿಸುತ್ತೇನೆ. ಶಾಂತಿಯನ್ನು ಸ್ವಾಗತಿಸುತ್ತಾ ರಾಜಾ ಧೃತರಾಷ್ಟ್ರನು ಅವಸರ ಮಾಡಿ ನನ್ನ ರಥವನ್ನು ಆಯೋಜಿಸಿದನು. ಭ್ರಾತೃಗಳೊಂದಿಗೆ, ಪುತ್ರರೊಂದಿಗೆ, ಮತ್ತು

ಸ್ವಜನ ರಾಜರೊಂದಿಗೆ ಪಾಂಡವರಿಗೆ ಶಾಂತಿಯೇ ಬೇಕೆಂದೆನಿಸಲಿ. ಪಾರ್ಥರು ಸರ್ವಧರ್ಮಗಳಿಂದ ಸಮೋಪೇತರಾಗಿದ್ದಾರೆ. ನಡತೆಯಲ್ಲಿ ಮಾರ್ದವವಿದೆ. ಆರ್ಜವವಿದೆ. ಉತ್ತಮ ಕುಲದಲ್ಲಿ ಜನಿಸಿದ್ದಾರೆ. ಸುಳ್ಳನ್ನೇ ಆಡುವುದಿಲ್ಲ. ನಾಚಿಕೆಯನ್ನು ತರುವ ಕರ್ಮಗಳನ್ನು ನಿಶ್ಚಯವಾಗಿಯೂ ನಿಷೇಧಿಸುತ್ತಾರೆ. ನೀವು ಹೀನ ಕರ್ಮಗಳಲ್ಲಿ ತೊಡಗುವುದಿಲ್ಲ. ಸತ್ವಯುತರಾದ ನಿಮಗೆ ಭಯಂಕರ ಸೇನೆಗಳ ಬೆಂಬಲವಿದೆ. ನೀವು ಏನಾದರೂ ಪಾಪಕೃತ್ಯವನ್ನೆಸಗಿದರೆ ಅದು ಬಿಳೀ ಬಟ್ಟೆಯ ಮೇಲೆ ಬಿದ್ದ ಕಾಡಿಗೆಯಂತೆ ನಿಮ್ಮ ಶುದ್ಧ ಹೆಸರಿಗೆ ಕಳಂಕವನ್ನು ತರುತ್ತದೆ. ತಿಳಿದೂ ಯಾರುತಾನೇ ಸರ್ವವೂ ಕ್ಷಯವಾಗುವುದನ್ನು ನೋಡಲು ಪ್ರಜೆಗಳೆಲ್ಲರನ್ನೂ ನಾಶಪಡಿಸಬಲ್ಲ, ಪಾಪಕಾರ್ಯವನ್ನು ಮಾಡಲು ತೊಡಗುತ್ತಾನೆ?

ಜ್ಞಾತಿಕಾರ್ಯವನ್ನು ಮಾಡುವವರೇ ಧನ್ಯರು. ತಮ್ಮ ಉಪಕೃಷ್ಟ ಜೀವಿತವನ್ನು ತ್ಯಜಿಸಲು ಸಿದ್ಧರಾಗಿರುವ ಅವರೇ ಕುರುಗಳಿಗೆ ನಿಯತರಾದ ನಿಜವಾದ ಪುತ್ರರು, ಸುಹೃದಯರು ಮತ್ತು ಬಾಂಧವರು. ಒಂದುವೇಳೆ ನೀವು ಪಾರ್ಥರು ನಿಮ್ಮ ದ್ವೇಷಿಗಳನ್ನು ಸೋಲಿಸಿ ಕೊಂದು ಕುರುಗಳನ್ನು ಆಳಿದರೆ ಅನಂತರದ ನಿಮ್ಮ ಜೀವನವು ಮೃತ್ಯುವಿನಂತೆಯೇ ಇರುವುದಿಲ್ಲವೇ? ಜ್ಞಾತಿವಧೆಯನ್ನು ಮಾಡಿ ನಂತರದ

ಜೀವನವು ಸಾಧುವಾಗಿರುವುದಿಲ್ಲ. ಯಾರುತಾನೇ - ಅವನು ದೇವತೆಗಳನ್ನೆಲ್ಲ ಸಚಿವರನ್ನಾಗಿಸಿಕೊಂಡ ಇಂದ್ರನೇ ಆಗಿದ್ದರೂ - ಕೇಶವ, ಚೇಕಿತಾನ, ಸಾತ್ಯಕಿ, ಪಾರ್ಷತರ ಬಾಹುಗಳಿಂದ ರಕ್ಷಿಸಲ್ಪಟ್ಟ ನಿಮ್ಮನ್ನು ಸೋಲಿಸಲು ಶಕ್ಯರು? ಹಾಗೆಯೇ ದ್ರೋಣ, ಭೀಷ್ಮ, ಅಶ್ವತ್ಥಾಮ, ಶಲ್ಯ, ಕೃಪ, ಕರ್ಣ ಮತ್ತು ಇತರ ಭೂಮಿಪಾಲರಿಂದ ರಕ್ಷಿತರಾದ ಕುರುಗಳನ್ನು ಯಾರುತಾನೇ ಸೋಲಿಸಬಲ್ಲರು? ತನಗೆ ನಷ್ಟಮಾಡಿಕೊಳ್ಳದೇ ಯಾರುತಾನೇ ರಾಜಾ ಧಾರ್ತರಾಷ್ಟ್ರನ ಮಹಾ ಸೇನೆಯನ್ನು ಸಂಹರಿಸಲು ಶಕ್ತ? ಆದುದರಿಂದ ನಾನು ಜಯದಲ್ಲಿಯಾಗಲೀ ಪರಾಜಯದಲ್ಲಿಯಾಗಲೀ ಶ್ರೇಯಸ್ಸನ್ನು ಕಾಣುತ್ತಿಲ್ಲ. ದುಷ್ಕುಲದಲ್ಲಿ ಹುಟ್ಟಿದವರು ಮಾಡುವಂಥಹ ನೀಚ ಮತ್ತು ಅಧರ್ಮಯುಕ್ತ ಕೆಲಸವನ್ನು ಹೇಗೆ ತಾನೇ ಪಾರ್ಥರು ಮಾಡಬಲ್ಲರು? ಆದುದರಿಂದ ವಾಸುದೇವ ಮತ್ತು ಪಾಂಚಾಲರ ಅಧಿಪ ವೃದ್ಧರನ್ನು ಕರುಣೆಗಾಗಿ ನಮಸ್ಕರಿಸುತ್ತೇನೆ. ಕೈಮುಗಿದು ಶರಣು ಬಿದ್ದು ಕೇಳಿಕೊಳ್ಳುತ್ತಿದ್ದೇನೆ. ಕುರು ಮತ್ತು ಸೃಂಜಯರು ಹೇಗೆ ಚೆನ್ನಾಗಿರಬಹುದು? ನಿನ್ನ ಮಾತಿಗೆ ಅತಿರಿಕ್ತವಾಗಿ ವಾಸುದೇವನಾಗಲೀ ಧನಂಜಯನಾಗಲೀ ನಡೆದುಕೊಳ್ಳುವುದಿಲ್ಲ. ಕೇಳಿದರೆ ಅವರಿಬ್ಬರೂ ಪ್ರಾಣಗಳನ್ನೂ ಕೊಡುತ್ತಾರೆ. ಅನ್ಯಥಾ ಮಾಡುವುದಿಲ್ಲ. ಇದನ್ನು ತಿಳಿದೇ

ಸಾಧನೆಗೊಳ್ಳಲೆಂದು ಹೇಳುತ್ತಿದ್ದೇನೆ. ಇದು ರಾಜ ಮತ್ತು ಭೀಷ್ಮನೇ ಮೊದಲಾದವರ ಉತ್ತಮ ಶಾಂತಿಯನ್ನು ತರುವ ಮತ.”

ಯುಧಿಷ್ಠಿರನು ಹೇಳಿದನು:

“ಸಂಜಯ! ನಾನಾಡಿದ ಯಾವ ಮಾತನ್ನು ಕೇಳಿ ನಾವು ಯುದ್ಧವನ್ನು ಬಯಸುತ್ತೇವೆ ಎಂದು ತಿಳಿದು ಯುದ್ಧದ ಭಯವಾಗಿದೆ? ಯುದ್ಧಕ್ಕಿಂತ ಅಯುದ್ಧವು ದೊಡ್ಡದು. ಬೇರೆ ದಾರಿಗಳಿರುವಾಗ ಯುದ್ಧವನ್ನು ಯಾರುತಾನೇ ಆರಿಸಿಕೊಳ್ಳುವರು? ಮನಸ್ಸಿನಲ್ಲಿ ಸಂಕಲ್ಪಿಸಿದುದು ಮತ್ತು ಬಯಸಿದುದೆಲ್ಲಾ ಏನನ್ನೂ ಮಾಡದೇ ಸಿದ್ಧಿಗಳಾಗುತ್ತವೆ ಎಂದಾದರೆ ಪುರುಷನು ಎಷ್ಟೇ ಲಘುವಾಗಿರಲಿ ಕರ್ಮಗಳನ್ನೇ ಮಾಡುವುದಿಲ್ಲ. ಇನ್ನು ಯುದ್ಧ ಮಾಡುವುದು ದೂರದ ಮಾತು ಎಂದು ನನಗೆ ತಿಳಿದಿದೆ. ಮನುಷ್ಯನು ಏಕೆ ತಾನೇ ಯುದ್ಧಕ್ಕೆ ಹೋಗುತ್ತಾನೆ? ದೇವತೆಗಳಿಂದ ಶಪಿಸಲ್ಪಟ್ಟವನು ಮಾತ್ರ ಯುದ್ಧಕ್ಕೆ  ಹೋಗುತ್ತಾನೆಯೇ? ಸುಖವನ್ನು ಬಯಸಿ ಪಾರ್ಥರು, ಧರ್ಮಯುಕ್ತವಾದ, ಲೋಕಕ್ಕೆ ಒಳಿತಾಗುವ ಕರ್ಮಗಳನ್ನು ಮಾಡುತ್ತಾರೆ. ಪ್ರಶಂಸಮಾನ ಕರ್ಮಗಳಿಂದ ದೊರಕುವ ಸುಖವನ್ನು ಮಾತ್ರ ಬಯಸುತ್ತಾರೆ. ಸುಖವನ್ನಿರಸಿ ಮತ್ತು ದುಃಖವನ್ನು ದೂರವಿಡಲು ಇಂದ್ರಿಯಗಳ ಸುಖವನ್ನು ಹಿಂಬಾಲಿಸಿ ಹೋಗುವವನು ನಿಜವಾಗಿಯೂ ದುಃಖವಲ್ಲದೆ

ಬೇರೆ ಏನನ್ನೂ ಕೊಡದ ಕರ್ಮದಲ್ಲಿ ತೊಡಗುತ್ತಾನೆ. ಕಾಮವನ್ನರಸಿ ಹೋಗುವವನು ಸ್ವಶರೀರವನ್ನು ದುಃಖಿಸುತ್ತಾನೆ. ಅದರಂತೆ ಮಾಡದವನು ದುಃಖವೇನೆಂಬುದನ್ನೇ ಅರಿಯನು. ಉರಿಯತ್ತಿರುವ ಬೆಂಕಿಯ ತೇಜಸ್ಸು ಸಮಿದ್ಧೆಗಳಿಂದ ಹೇಗೆ ಬಲಗೊಳ್ಳುತ್ತದೆಯೋ ಹಾಗೆ ಅರ್ಥಲಾಭದಿಂದ ಕಾಮವು ತುಪ್ಪವನ್ನು ಸುರಿದ ಬೆಂಕಿಯಂತೆ ಹೆಚ್ಚಾಗುತ್ತದೆಯೇ ಹೊರತು ತೃಪ್ತಿಗೊಳ್ಳುವುದಿಲ್ಲ.

ರಾಜಾ ಧೃತರಾಷ್ಟ್ರನ ಮಹಾ ಭೋಗವಸ್ತು ಸಂಗ್ರಹಗಳನ್ನು ನಮ್ಮಲ್ಲಿರುವುದಕ್ಕೆ ಹೋಲಿಸಿ ನೋಡು! ಅಶ್ರೇಯಸನು ಯುದ್ಧಗಳನ್ನು ಗೆಲ್ಲುವುದಿಲ್ಲ. ಅಶ್ರೇಯಸನು ಗೀತಶಬ್ಧಗಳನ್ನು ಕೇಳುವುದಿಲ್ಲ. ಅಶ್ರೇಯಸನು ಮಾಲೆ ಗಂಧಗಳನ್ನು ಸೇವಿಸುವುದಿಲ್ಲ. ಅಶ್ರೇಯಸನು ಲೇಪನಾದಿಗಳನ್ನೂ ಬಳಸುವುದಿಲ್ಲ. ಅವನು ಉತ್ತಮವಲ್ಲದ ವಸ್ತ್ರಗಳನ್ನೂ ಉಡುವುದಿಲ್ಲ. ಹಾಗಿದ್ದರೆ ಅವನು ನಮ್ಮನ್ನು ಏಕೆ ಕುರುಗಳಿಂದ ಹೊರಗಟ್ಟಿದ? ನಮ್ಮನ್ನು ಆಗಾಗ ಕಷ್ಟಗಳಿಗೊಳಪಡೆಸಿದರೂ ಅವನ ಶರೀರದ ಹೃದಯವು ಕಾಮದಿಂದ ಸುಡುತ್ತಿದೆ. ಸ್ವಯಂ ವಿಷಮಸ್ಥನಾಗಿರುವ ರಾಜನು ಇತರರಿಂದ ಸಾಮಸ್ಥವನ್ನು ಇಚ್ಛಿಸುವುದು ಸಾಧುವಲ್ಲ. ಅವರೊಂದಿಗೆ ತಾನು ನಡೆದುಕೊಳ್ಳುವುದನ್ನು ಹೇಗೆ ನೋಡುತ್ತಾನೋ ಹಾಗೆಯೇ ಇತರರಿಂದಲೂ

ಪಡೆಯುತ್ತಾನೆ. ಛಳಿಗಾಲದ ಕೊನೆಯಲ್ಲಿ, ಬೇಸಗೆಯ ಬಿಸಿಲಿನಲ್ಲಿ ಹತ್ತಿರದ ಒಣಗಿದ ಮರಗಳ ದಟ್ಟಾರಣ್ಯಕ್ಕೆ ಬೆಂಕಿಯನ್ನು ಹಚ್ಚಿಸಿ, ಗಾಳಿಯಲ್ಲಿ ಅದು ಜೋರಾಗಿ ಉರಿಯಲು ಅದರಿಂದ ತಪ್ಪಿಸಿಕೊಳ್ಳುವಾಗ ಖಂಡಿತವಾಗಿಯೂ ದುಃಖವನ್ನು ಅನುಭವಿಸುತ್ತಾನೆ. ಐಶ್ವರ್ಯವನ್ನು ಪಡೆದಿರುವ ರಾಜಾ ಧೃತರಾಷ್ಟ್ರನು ಇಂದು ವಿಲಪಿಸುತ್ತಿದ್ದಾನೆ - ಯಾವ ಕಾರಣಕ್ಕಾಗಿ? ಮೋಸದಲ್ಲಿ ನಿರತನಾಗಿರುವ ಆ ದುರ್ಬುದ್ಧಿ, ಮಂದ ಮಗನ ಮೂಢ ಸಲಹೆಯನ್ನು ತೆಗೆದುಕೊಂಡಿದ್ದುದಕ್ಕೆ ಅಲ್ಲವೇ? ಸುಯೋಧನನು ಆಪ್ತರಲ್ಲಿಯೇ ಅತ್ಯುತ್ತಮನಾದ ವಿದುರನ ಮಾತನ್ನು ಅನಾಪ್ತವೆಂದು ಸ್ವೀಕರಿಸಲಿಲ್ಲ. ಮಗನ ಪ್ರಿಯೈಷಿಯಾದ ರಾಜಾ ಧೃತರಾಷ್ಟ್ರನು, ತಿಳಿದೂ ಅಧರ್ಮದ ಜೊತೆಗೇ ಹೋದನು. ಪುತ್ರಕಾಮದಿಂದ ರಾಜಾ ಧೃತರಾಷ್ಟ್ರನು ಕುರುಗಳಲ್ಲಿಯೇ ಮೇಧಾವಿಯಾದ, ಕುರುಗಳ ಒಳಿತನ್ನೇ ಬಯಸುವ, ಬಹುಶ್ರುತ, ವಾಗ್ಮಿ ಶೀಲವಂತ ವಿದುರನ ಮಾತನ್ನು ನೆನಪಿಸಿಕೊಳ್ಳಲಿಲ್ಲ. ಮಾನಘ್ನ, ಆತ್ಮಕಾಮಿ, ಹೊಟ್ಟೆಕಿಚ್ಚಿನ, ದುಗುಡುಸ್ವಭಾವದ, ಅರ್ಥ-ಧರ್ಮಗಳನ್ನು ಮೀರಿ ನಡೆಯುವ, ದುರ್ಭಾಷಿಣೀ, ಸಿಟ್ಟಿಗೆ ವಶನಾಗುವ, ಕಾಮಾತ್ಮ, ಹೃದಯದಲ್ಲಿ ಕೆಟ್ಟ ಭಾವನೆಯನ್ನಿಟ್ಟುಕೊಳ್ಳುವ, ಅನೇಯ. ಅಶ್ರೇಯಸ,

ದೀರ್ಘಕಾಲದವರೆಗೆ ಸಿಟ್ಟನ್ನು ಇಟ್ಟುಕೊಳ್ಳುವ, ಮಿತ್ರದ್ರೋಹಿ, ಪಾಪಬುದ್ಧಿ ಮಗನ ಪ್ರಿಯೈಷಿಯಾದ ರಾಜಾ ಧೃತರಾಷ್ಟ್ರನು ಕಾಣುತ್ತಿದ್ದರೂ ಧರ್ಮಕಾಮಗಳನ್ನು ಬಿಸಾಡಿದನು. ಜೂಜನ್ನು ಆಡುವಾಗಲೇ ನಾನು ಕುರುಗಳಿಗೆ ಬರಬಾರದ ಆಪತ್ತು ಬರದಿರಲಿ ಎಂದು ಬಯಸಿದ್ದೆ. ವಿದುರನು ಆ ಋಷಿಗಳ ಮಾತುಗಳನ್ನಾಡುವಾಗ ಧೃತರಾಷ್ಟ್ರನಿಂದ ಪ್ರಶಂಸೆಯನ್ನು ಪಡೆಯಲಿಲ್ಲ. ಯಾವಾಗ ಕ್ಷತ್ತನ ಬುದ್ಧಿಯನ್ನು ಅನುಸರಿಸಲಿಲ್ಲವೋ ಆಗ ಕಷ್ಟಗಳು ಕುರುಗಳನ್ನು ಮೀರಿಸಿದವು. ಯಾವಾಗ ಅವನ ಪ್ರಜ್ಞೆಯನ್ನು ಅನುಸರಿಸುತ್ತಿದ್ದರೋ ಆಗ ರಾಷ್ಟ್ರವು ಅಭಿವೃದ್ಧಿಯನ್ನು ಹೊಂದಿತ್ತು. ಆ ಅರ್ಥಲುಬ್ಧ ಧಾರ್ತರಾಷ್ಟ್ರನ ಮಂತ್ರಿಗಳ್ಯಾರೆಂದು ನನ್ನಿಂದ ಕೇಳು: ದುಃಶಾಸನ, ಶಕುನಿ, ಮತ್ತು ಸೂತಪುತ್ರ. ಈ ಸಮ್ಮೋಹವನ್ನು ನೋಡು!

ಇನ್ನೊಬ್ಬರ ಐಶ್ವರ್ಯವನ್ನು ಧೃತರಾಷ್ಟ್ರನು ತನ್ನದಾಗಿಸಿಕೊಂಡಿರುವಾಗ ಮತ್ತು ದೀರ್ಘದೃಷ್ಟಿ ವಿದುರನನ್ನು ದೂರವಿಟ್ಟಿರುವಾಗ ಕುರು ಮತ್ತು ಸೃಂಜಯರಿಗೆ ಹೇಗೆ ಒಳ್ಳೆಯದಾಗುತ್ತದೆ ಎನ್ನುವುದು ಪರೀಕ್ಷಿಸಿದರೂ ನನಗೆ ಕಾಣುವುದಿಲ್ಲ. ಮಗನೊಂದಿಗೆ ಧೃತರಾಷ್ಟ್ರನು ಭೂಮಿಯಲ್ಲಿಯೇ ಎದುರಾಳಿಗಳಿಲ್ಲದ ಮಹಾರಾಜ್ಯವನ್ನು ಬಯಸುತ್ತಿದ್ದಾನೆ. ಆದುದರಿಂದ ಶಾಂತಿಯು

ದೊರೆಯುವುದಿಲ್ಲ. ಅವನಲ್ಲಿರುವುದೆಲ್ಲವೂ ತನ್ನದೇ ಎಂದು ತಿಳಿದುಕೊಂಡಿದ್ದಾನೆ.

ಅಯುಧಗಳನ್ನು ಹಿಡಿದ ಅರ್ಜುನನನ್ನು ಯುದ್ಧದಲ್ಲಿ ಮೀರಿಸಬಲ್ಲೆ ಎಂದು ಕರ್ಣನು ತಿಳಿದುಕೊಂಡಿದ್ದರೆ, ಇದಕ್ಕೂ ಮಹಾ ಯುದ್ಧಗಳಾದಾಗ ಅವರಿಗೆ ಕರ್ಣನು ಹೇಗೆ ಪ್ರಯೋಜನಕ್ಕೆ ಬರಲಿಲ್ಲ? ಅರ್ಜುನನ ಸರಿಸಾಟಿಯಾದ ಅನ್ಯ ಧನುರ್ಧರನು ಯಾರೂ ಇಲ್ಲ ಎಂದು ಕರ್ಣ ಮತ್ತು ಸುಯೋಧನರಿಗೆ ಗೊತ್ತು. ದ್ರೋಣ-ಪಿತಾಮಹರಿಗೆ ಗೊತ್ತು. ಮತ್ತು ಅಲ್ಲಿರುವ ಇತರ ಕುರುಗಳಿಗೂ ಗೊತ್ತು. ಅರಿಂದಮ ಅರ್ಜುನನು ಇಲ್ಲದಿದ್ದರೆ ಮಾತ್ರ ದುರ್ಯೋಧನನು ತನ್ನ ಅಪರಾಧಗಳನ್ನು ಮಾಡಬಲ್ಲ ಎಂದು ಕುರುಗಳೆಲ್ಲರಿಗೂ ಮತ್ತು ಸೇರಿರುವ ಅನ್ಯ ಭೂಮಿಪಾಲರಿಗೂ ತಿಳಿದಿದೆ. ನನ್ನಿಂದ ಪಾಂಡವರು ಕೂಡಿಟ್ಟ ಸಂಪತ್ತನ್ನು ಅಪಹರಿಸಲು ಶಕ್ಯನೆಂದು ಧಾರ್ತರಾಷ್ಟ್ರನ ಅಭಿಪ್ರಾಯ. ಅವನನ್ನು ತಿಳಿದ ಕಿರೀಟಿಯು ತನ್ನ ಒಂಭತ್ತು ಮೊಳದ ಬಿಲ್ಲನ್ನು ಹಿಡಿದು ಯುದ್ಧಕ್ಕೆ ಅಲ್ಲಿಗೆ ಬರುತ್ತಾನೆ! ಎಳೆದ ಗಾಂಡೀವದ ಧ್ವನಿಯನ್ನು ಕೇಳದ ಧಾರ್ತರಾಷ್ಟ್ರರು ಇನ್ನೂ ಉಳಿದುಕೊಂಡಿದ್ದಾರೆ. ಕ್ರುದ್ಧನಾದ ಭೀಮಸೇನನ ವೇಗವನ್ನು ಅರಿಯದ ಸುಯೋಧನನು ತನ್ನ ಕಾರ್ಯವು ಸಿದ್ಧಿಯಾಯಿತೆಂದು ಭಾವಿಸಿದ್ದಾನೆ. ಭೀಮಸೇನ, ಧನಂಜಯ, ನಕುಲ ಮತ್ತು ವೀರ ಸಹದೇವರು ನನ್ನಲ್ಲಿ

ಜೀವಿಸಿರುವಾಗ ಇಂದ್ರನೂ ಕೂಡ ನನ್ನಿಂದ ಐಶ್ವರ್ಯವನ್ನು ಅಪಹರಿಸಲು ಸಾಧ್ಯವಿಲ್ಲ. ರಣದಲ್ಲಿ ಪಾಂಡವರ ಕೋಪದಿಂದ ಧಾರ್ತರಾಷ್ಟ್ರರು ಸುಟ್ಟು ನಾಶವಾಗುವುದಿಲ್ಲ ಎಂದು ಈಗಲೂ ಆ ವೃದ್ಧ ರಾಜನು ಪುತ್ರರೊಂದಿಗೆ ಯೋಚಿಸುತ್ತಾನೆ.

ನಾವು ಅನುಭವಿಸಿದ ಕಷ್ಟಗಳು ನಿನಗೆ ತಿಳಿದೇ ಇವೆ. ನಿನ್ನನ್ನು ಗೌರವಿಸಿ ಅವರೆಲ್ಲರನ್ನೂ ಕ್ಷಮಿಸುತ್ತೇನೆ. ನಾವು ಹಿಂದೆ ಕೌರವರಿಂದ ಏನನ್ನು ಪಡೆದುಕೊಂಡೆವು ಮತ್ತು ನಂತರ ನಾವು ಧಾರ್ತರಾಷ್ಟ್ರರಲ್ಲಿ ಹೇಗೆ ನಡೆದುಕೊಂಡೆವು ಎನ್ನುವುದು ನಿನಗೆ ತಿಳಿದೇ ಇದೆ. ನೀನು ಕೇಳುತ್ತಿರುವಂತೆ ನಾನೂ ಶಾಂತಿಯನ್ನೇ ಕೇಳುತ್ತೇನೆ. ಇಂದೂ ಕೂಡ ನಾವು ಮೊದಲಿನಂತೆಯೇ ನಡೆದುಕೊಳ್ಳುತ್ತೇವೆ. ಆದರೆ ಇಂದ್ರಪ್ರಸ್ಥದಲ್ಲಿ ನನ್ನದೇ ರಾಜ್ಯವಿರಬೇಕು. ಭಾರತಾಗ್ರ್ಯ ಸುಯೋಧನನು ಅದನ್ನು ನೀಡಲಿ.”

## ಯುಧಿಷ್ಠಿರನಿಗೆ ಸಂಜಯನ ಉಪದೇಶ

ಸಂಜಯನು ಹೇಳಿದನು:

“ಪಾರ್ಥ! ನೀನು ನಿತ್ಯವೂ ಧರ್ಮದಲ್ಲಿಯೇ ನಿರತನಾಗಿದ್ದೀಯೆ ಎಂದು ಲೋಕವು ಹೇಳುತ್ತದೆ. ಕಾಣುತ್ತದೆ ಕೂಡ. ಮಹಾ ಪ್ರವಾಹದ ಈ ಜೀವಿತವು ಅನಿತ್ಯ. ಅದರ

ನಾಶವನ್ನು ನೀನು ಕಾಣ ಬಯಸಬೇಡ! ಯುದ್ಧವಿಲ್ಲದೇ ಕುರುಗಳು ನಿನ್ನ ಭಾಗವನ್ನು ಕೊಡದೇ ಇದ್ದರೆ, ನೀನು ಯುದ್ಧದಿಂದ ರಾಜ್ಯವನ್ನು ಪಡೆಯುವುದಕ್ಕಿಂತ ಅಂಧಕ-ವೃಷ್ಣಿ ರಾಜ್ಯದಲ್ಲಿ ಭಿಕ್ಷಾಟನೆಯನ್ನು ಮಾಡಿ ಜೀವುಸುವುದು ಶ್ರೇಯವೆಂದು ನನಗನ್ನಿಸುತ್ತದೆ. ಈ ಮನುಷ್ಯ ಜೀವನವು ಅಲ್ಪಕಾಲದ ಮಹಾಪ್ರವಾಹವು. ನಿತ್ಯವೂ ದುಃಖವನ್ನು ತರುವಂಥಹುದು. ಚಂಚಲವಾದುದು. ಬದುಕಿನ ಆಸೆಯನ್ನು ನೀಗಿಸಲು ಅನುರೂಪವಲ್ಲದ್ದು. ಆದುದರಿಂದ ಪಾಪವನ್ನು ಪಸರಿಸಬೇಡ. ಕಾಮವು ಮನುಷ್ಯನನ್ನು ಅಂಟಿಕೊಂಡಿರುವುದೇ ಧರ್ಮದ ವಿಘ್ನಕ್ಕೆ ಮೂಲ. ಧೃತಿವಂತನಾಗಿ ಅವುಗಳನ್ನು ಮೊದಲೇ ನಾಶಪಡಿಸಿದ ನರನು ಲೋಕದಲ್ಲಿ ಕಳಂಕವಿಲ್ಲದ ಪ್ರಶಂಸೆಯನ್ನು ಪಡೆಯುತ್ತಾನೆ. ಧನದ ದಾಹವು ಬಂಧನವಿದ್ದಂತೆ. ಇವನ್ನು ಬಯಸುವವನ ಧರ್ಮವು ಕುಂದಾಗುತ್ತದೆ. ಧರ್ಮವನ್ನೇ ತನ್ನದಾಗಿಸಿಕೊಳ್ಳುವವನು ತಿಳಿದವನು. ಕಾಮವನ್ನು ಹೆಚ್ಚಿಸಿಕೊಂಡವನು ಅರ್ಥವನ್ನು ಆಸೆಪಟ್ಟು ನಾಶಹೊಂದುತ್ತಾನೆ. ಧರ್ಮಕರ್ಮಗಳನ್ನು ಮುಖ್ಯವನ್ನಾಗಿ ಮಾಡಿಕೊಂಡವನು ಮಹಾಪ್ರತಾಪಿ ಸೂರ್ಯನಂತೆ ಹೊಳೆಯುತ್ತಾನೆ. ಧರ್ಮದ ಕೊರತೆಯಿರುವ, ಪಾಪ ಬುದ್ಧಿ ನರನು ಈ ಭೂಮಿಯನ್ನೇ ಪಡೆದರೂ ನಾಶಹೊಂದುತ್ತಾನೆ.

ನೀನು ವೇದವನ್ನು ಕಲಿತಿರುವೆ, ಬ್ರಹ್ಮಚರ್ಯವನ್ನು ಆಚರಿಸಿರುವೆ. ಯಜ್ಞ-ಇಷ್ಟಿಗಳಲ್ಲಿ ಬ್ರಾಹ್ಮಣರಿಗೆ ನೀಡಿದ್ದೀಯೆ. ಪರಮ ಸ್ಥಾನವನ್ನು ಮನ್ನಿಸಿ ನೀನು ಹಲವಾರು ವರ್ಷಗಳ ಸುಖವನ್ನು ನಿನಗೆ ನೀನೇ ಒದಗಿಸಿ ಕೊಂಡಿದ್ದೀಯೆ. ಸುಖ ಮತ್ತು ಬಯಕೆಗಳ ಸೇವೆಯಲ್ಲಿ ಅತಿಯಾಗಿ ತೊಡಗಿದವನು ಯೋಗಾಭ್ಯಾಸದ ಕೆಲಸವನ್ನು ಮಾಡುವುದಿಲ್ಲ. ಅವನ ವಿತ್ತವು ಕ್ಷಯವಾದಾಗ ಸುಖವೂ ಕಡಿಮೆಯಾಗಿ, ಅತ್ಯಂತ ದುಃಖವನ್ನು ಅನುಭವಿಸುತ್ತಾನೆ. ಹಾಗೆಯೇ ಅರ್ಥವನ್ನೇ ಕಾಣದ ಜೀವನವನ್ನು ನಡೆಸುವವನು ಧರ್ಮವನ್ನು ತೊರೆದು ಅಧರ್ಮದಲ್ಲಿ ನಿರತನಾಗಿರುತ್ತಾನೆ. ಆ ಮೂಢನು ಪರಲೋಕದಲ್ಲಿ ಶ್ರದ್ಧೆಯನ್ನಿಟ್ಟುಕೊಳ್ಳುವುದಿಲ್ಲ. ಆ ಮಂದಬುದ್ಧಿಯು ದೇಹವನ್ನು ತೊರೆದ ನಂತರವೂ ತಪಿಸುತ್ತಾನೆ. ಇದರ ನಂತರದ ಲೋಕದಲ್ಲಿ ಪುಣ್ಯಗಳಿರಲಿ ಅಥವಾ ಪಾಪಗಳಿರಲಿ ನಾಶವಾಗುವುದಿಲ್ಲ. ಕರ್ತುವಿನ ಮೊದಲೇ ಪುಣ್ಯಪಾಪಗಳು ಹೋಗುತ್ತವೆ. ಅವುಗಳ ನಂತರ ಕರ್ತನು ಹಿಂಬಾಲಿಸುತ್ತಾನೆ. ನಿನ್ನ ಕರ್ಮವು ನ್ಯಾಯೋಪೇತವಾಗಿ ಬ್ರಾಹ್ಮಣರಿಗೆ ಕೊಡುವ ಶ್ರದ್ಧಾಪೂರಿತ ಅನ್ನ, ಗಂಧ, ರಸ ಉಪಪನ್ನಗಳಂತೆ ಮತ್ತು ಉತ್ತಮ ದಕ್ಷಿಣೆಗಳನ್ನಿತ್ತು ನಡೆಸುವ ದೇವತಾಕಾರ್ಯಗಳಂತೆ ಎಂದು ಹೇಳಬಹುದು. ಈ ದೇಹವಿರುವವರೆಗೆ ಕಾರ್ಯಗಳನ್ನು

ಮಾಡುತ್ತೇವೆ. ಮರಣದ ನಂತರ ಮಾಡಬೇಕಾದುದು ಏನೂ ಇಲ್ಲ. ನೀನು ಪರಲೋಕಕ್ಕೆ ಬೇಕಾಗುವ ಕಾರ್ಯಗಳನ್ನು ಮಾಡಿದ್ದೀಯೆ. ಮಹಾ ಪುಣ್ಯವನ್ನೂ ಜನರ ಪ್ರಶಸ್ತಿಯನ್ನೂ ಪಡೆದಿರುವೆ. ಪರಲೋಕದಲ್ಲಿ ಮೃತ್ಯುವಿನಿಂದ ಸ್ವತಂತ್ರವಿದೆ, ಮುಪ್ಪಿನ ಭಯವಿಲ್ಲ, ಮನಸ್ಸಿಗೆ ಅಪ್ರಿಯವಾದ ಹಸಿವು ಬಾಯಾರಿಕೆಗಳಿಲ್ಲ. ಇಂದ್ರಿಯಗಳನ್ನು ತೃಪ್ತಿಪಡಿಸುವ ಹೊರತಾಗಿ ಬೇರೆ ಏನೂ ಅಲ್ಲಿ ಇರುವುದಿಲ್ಲ. ಕರ್ಮಫಲವು ಈ ರೂಪದ್ದು. ಆದುದರಿಂದ ಹೃದಯಕ್ಕೆ ಪ್ರಿಯವಾಗುವಂತೆ ಮಾತ್ರ ನಡೆದುಕೊಳ್ಳಬೇಡ. ಈ ಲೋಕದಲ್ಲಿ ಕ್ರೋಧ ಮತ್ತು ಹರ್ಷ ಇವೆರಡನ್ನೂ ನೀಡುವಂಥಹುದನ್ನು ಮಾಡಬೇಡ. ಕರ್ಮಗಳ ಅಂತ್ಯದಲ್ಲಿ ಪ್ರಶಂಸೆಯಿದೆ - ಸತ್ಯ, ಆತ್ಮನಿಗ್ರಹ, ಪ್ರಾಮಾಣಿಕತೆ, ಮೃದುತ್ವ, ಅಶ್ವಮೇಧ, ರಾಜಸೂಗಳು, ಇಷ್ಟಿಗಳು ಇವೆ. ಆದರೆ ಪಾಪಕರ್ಮಗಳ ಕೊನೆಯನ್ನು ಅರಸಿ ಹೋಗಬೇಡ!

ಇಷ್ಟೊಂದು ಸಮಯದ ನಂತರ ಪಾಂಡವರು ಪದ್ಧತಿಯನ್ನು ಅನುಸರಿಸಿ ಪಾಪ ಕರ್ಮವನ್ನೇ ಮಾಡಬೇಕಾದರೆ ಧರ್ಮಹೇತುಗಳಾದ ಪಾಂಡವರು ಬಹು ವರ್ಷಗಳು ವನದಲ್ಲಿ ಏಕೆ ದುಃಖದ ವಾಸವನ್ನು ವಾಸಿಸಿದರು? ಹೊರಹಾಕಲ್ಪಡದೇ ನೀವು ಮೊದಲೇ ನಿಮ್ಮದಾಗಿದ್ದ ಸೇನೆಯನ್ನು ಕೂಡಿಸಬಹುದಾಗಿತ್ತು –ಪಾಂಚಾಲರು,

ಜನಾರ್ದನ ಮತ್ತು ವೀರ ಯುಯುಧಾನರು ನಿತ್ಯವೂ ನಿಮ್ಮ ಸಚಿವರಾಗಿದ್ದವರು. ಪುತ್ರನೊಡನೆ ರಾಜಾ ಮತ್ಸ್ಯನು ಬಂಗಾರದ ರಥದಲ್ಲಿ, ಪ್ರಹಾರಿ ಪುತ್ರರೊಂದಿಗೆ ವಿರಾಟ, ಮತ್ತು ಹಿಂದೆ ನೀವು ಸೋಲಿಸಿದ್ದ ರಾಜರು ಎಲ್ಲರೂ ನಿಮ್ಮ ಕಡೆಯೇ ಸೇರುತ್ತಿದ್ದರು. ಎಲ್ಲರನ್ನೂ ಸುಡುವ ಮಹಾಸೇನೆಯ ಬಲವನ್ನು ಪಡೆದು ವಾಸುದೇವ-ಅರ್ಜುನರನ್ನು ಮುಂದಿಟ್ಟುಕೊಂಡು, ರಣಮಧ್ಯದಲ್ಲಿ ಶ್ರೇಷ್ಠ ದ್ವೇಷಿಗಳನ್ನು ಸಂಹರಿಸಿ ಧಾರ್ತರಾಷ್ಟ್ರರ ದರ್ಪವನ್ನು ಕೆಳಗಿಳಿಸಬಹುದಾಗಿತ್ತು! ಕಾಲವನ್ನು ಮೀರಿ ಯುದ್ಧಮಾಡಲಿಚ್ಛಿಸುವ ನೀನು ಏಕೆ ನಿನ್ನ ವೈರಿಗಳ ಬಲವನ್ನು ಹೆಚ್ಚುಗೊಳಿಸಲು ಅವಕಾಶ ನೀಡಿದೆ? ಏಕೆ ನಿನ್ನ ಬಲವನ್ನು ಕಡಿಮೆಮಾಡಿಕೊಂಡೆ? ಏಕೆ ಬಹುವರ್ಷಗಳು ವನಗಳಲ್ಲಿ ಕಳೆದೆ?

ತಿಳುವಳಿಕೆಯಿಲ್ಲದವನು ಯುದ್ಧಮಾಡುತ್ತಾನೆ. ಅಥವಾ ಧರ್ಮವನ್ನು ತಿಳಿಯದೇ ಇರುವವನು ಒಳಿತಿನ ದಾರಿಯನ್ನು ಬಿಡುವನು. ಅಥವಾ ಪ್ರಜ್ಞಾವಂತನಾಗಿದ್ದರೂ, ಬುದ್ಧಿವಂತನಾಗಿದ್ದರೂ ಕೂಡ ಕೋಪದಿಂದ ಧರ್ಮದ ದಾರಿಯನ್ನು ಬಿಡಬಹುದು. ಆದರೆ ನಿನ್ನ ಬುದ್ಧಿಯು ಅಧರ್ಮವನ್ನು ಯೋಚಿಸುವುದಿಲ್ಲ. ನೀನು ಕೋಪಗೊಂಡು ಪಾಪ ಕರ್ಮವನ್ನು ಮಾಡುವವನಲ್ಲ. ಹಾಗಿದ್ದಾಗ ಯಾವ

ಕಾರಣಕ್ಕಾಗಿ ಯಾವುದನ್ನು ಬಯಸಿ ಪ್ರಜ್ಞಾವಿರುದ್ಧವಾದ ಕರ್ಮವನ್ನು ಮಾಡಲು ಹೊರಟಿರುವೆ? ಸಂತರು ಕುಡಿದುಬಿಡುವ, ಅಸಂತರು ಕುಡಿಯದೇ ಇರುವ, ವ್ಯಾಧಿಯಿಂದ ಹುಟ್ಟದ, ಕಹಿಯಾದ ತಲೆನೋವನ್ನು ಕೊಡುವ, ಯಶಸ್ಸನ್ನು ಕ್ಷೀಣಗೊಳಿಸುವ, ಪಾಪಫಲವನ್ನು ನೀಡುವ ಸಿಟ್ಟನ್ನು ಕುಡಿದು ಶಾಂತಗೊಳಿಸು.

ಎಲ್ಲಿ ಶಾಂತನವ ಭೀಷ್ಮನು ಹತನಾಗಬಲ್ಲನೋ, ಎಲ್ಲಿ ಪುತ್ರನೊಂದಿಗೆ ದ್ರೋಣನು ಹತನಾಗುವನೋ, ಕೃಪ, ಶಲ್ಯ, ಸೌಮದತ್ತಿ, ವಿಕರ್ಣ, ವಿವಿಂಶತಿ ಮತ್ತು ಕರ್ಣ-ದುರ್ಯೋಧನರು ಹತರಾಗುವರೋ ಆ ಪಾಪವನ್ನು ತಂದು ಕಟ್ಟಿಸುವುದನ್ನು ಯಾರುತಾನೇ ಬಯಸುತ್ತಾರೆ? ಭೋಗಗಳ ಹಿಂದೆ ಹೋಗುವುದಕ್ಕಿಂತ ನಿನಗೆ ಕ್ಷಮೆಯೇ ಒಳ್ಳೆಯದು. ಇವರನ್ನೆಲ್ಲಾ ಕೊಂದು ಅದರಲ್ಲಿ ನಿನಗೆ ಯಾವ ಸುಖವು ಸಿಗುತ್ತದೆ ಎನ್ನುವುದನ್ನು ಹೇಳು. ಸಾಗರಗಳೇ ಅಂಚಾಗಿರುವ ಈ ಭೂಮಿಯನ್ನು ಪಡೆದರೂ ನೀನು ಮುಪ್ಪು-ಮೃತ್ಯುಗಳಿಂದ, ಪ್ರಿಯ-ಅಪ್ರಿಯಗಳಿಂದ, ಮತ್ತು ಸುಖ-ದುಃಖಗಳಿಂದ ತಪ್ಪಿಸಿಕೊಳ್ಳಲಾರೆ. ಇವನ್ನು ತಿಳಿದೂ ಯುದ್ಧಮಾಡಬೇಡ! ಒಂದುವೇಳೆ ನಿನ್ನ ಅಮಾತ್ಯರ ಬಯಕೆಯನ್ನು ಪೂರೈಸಲು ನೀನು ಈ ತಪ್ಪನ್ನು ಮಾಡಲು ಹೊರಟಿರುವೆಯಾದರೆ ನಿನ್ನಲ್ಲಿರುವ ಎಲ್ಲವನ್ನೂ ಅವರಿಗೆ

ಕೊಟ್ಟು ಓಡಿ ಹೋಗು! ದೇವಯಾನದ ನಿನ್ನ ದಾರಿಯನ್ನು ತಪ್ಪಿ ನಡೆಯಬೇಡ!”

ಯುಧಿಷ್ಠಿರನು ಹೇಳಿದನು:

“ಸಂಜಯ! ನೀನು ಹೇಳಿದಂತೆ ಧರ್ಮವೇ ಎಲ್ಲಕ್ಕಿಂತ ಶ್ರೇಷ್ಠವಾದ ಕರ್ಮ. ಅದರಲ್ಲಿ ಸಂಶಯವೇ ಇಲ್ಲ. ಆದರೆ ನಾನು ನಡೆಯುತ್ತಿರುವುದು ಧರ್ಮದಲ್ಲಿಯೋ ಅಥವಾ ಅಧರ್ಮದಲ್ಲಿಯೋ ಎಂದು ತಿಳಿಯದೇ ನೀನು ನನ್ನನ್ನು ದೂರಬಾರದು. ಅಧರ್ಮವು ಧರ್ಮರೂಪಗಳಲ್ಲಿ ಕಾಣುವಾಗ ಅಥವಾ ಧರ್ಮವು ಅಧರ್ಮರೂಪದಲ್ಲಿ ಕಾಣುವಾಗ ಧರ್ಮವು ಧರ್ಮದ ರೂಪವನ್ನೇ ಧರಿಸಿದೆಯೋ ಇಲ್ಲವೋ ಎನ್ನುವುದನ್ನು ವಿದ್ವಾಂಸರು ಬುದ್ಧಿಯಿಂದ ಕಂಡುಕೊಳ್ಳುತ್ತಾರೆ. ಆಪತ್ತಿನಲ್ಲಿ ನಿತ್ಯವೃತ್ತಿಗೆ ಸಂಬಂಧಿಸಿದಂತೆ ಧರ್ಮ-ಅಧರ್ಮಗಳೆರಡೂ ಒಂದೇ ಲಕ್ಷಣಗಳನ್ನು ಹೊಂದುತ್ತವೆ. ಹೀಗಿರುವಾಗ ಮೊದಲು ಅವನ ಜಾತಿಗೆ ತಕ್ಕಂತಹುದನ್ನು ಆರಿಸಿಕೊಳ್ಳಬೇಕು. ಇದೇ ಆಪದ್ಧರ್ಮವೆನ್ನುವುದನ್ನು ತಿಳಿದುಕೋ. ಜೀವನದ ಮಾರ್ಗಗಳನ್ನು ಸಂಪೂರ್ಣವಾಗಿ ಕಳೆದುಕೊಂಡವನು ತನ್ನದೇ ಜಾತಿಯು ವಿಹಿಸುವ ಬೇರೆ ಯಾವುದಾದರೂ ಮಾರ್ಗವನ್ನು ಹುಡುಕಿಕೊಳ್ಳಬೇಕು. ವರ್ತಮಾನದಲ್ಲಿ ಆಪತ್ತಿನಲ್ಲಿ ಇಲ್ಲದಿರುವವನು ಮತ್ತು ಆಪತ್ತಿನಲ್ಲಿ ಇರುವವನು

ಇಬ್ಬರನ್ನೂ ದೂರಲಾಗುತ್ತಿದೆ! ಆಪತ್ತಿನಲ್ಲಿ ತಮ್ಮ ನಾಶವನ್ನು ಬಯಸದೇ ತಮ್ಮ ಜಾತಿಗೆ ತಕ್ಕುದಾದುದಕಿಂತ ಬೇರೆಯ ಕರ್ಮವನ್ನು ಮಾಡುವ ಬ್ರಾಹ್ಮಣರಿಗೂ ವಿಧಾತನು ಪ್ರಾಯಶ್ಚಿತ್ತವನ್ನು ನೀಡಿದ್ದಾನೆ. ಇದರಲ್ಲಿ ದೂರುವುದು ಏನಿದೆ? ಅಬ್ರಾಹ್ಮಣರಿಗೆ ಮತ್ತು ಅವೈದೀಕರಿಗೆ ಸದೈವವಾದ ವೃತ್ತಿಯನ್ನು ಮನೀಷಿಗಳು ತತ್ತ್ವವಿಚ್ಛೇದನೆ ಮಾಡಿ ವಿಧಿಸಿದ್ದಾರೆ. ಅವುಗಳನ್ನೇ ಸರ್ವೋಚ್ಛವೆಂದು ಮನ್ನಿಸುವುದು ಒಳ್ಳೆಯದು. ಇದೇ ಮಾರ್ಗದಲ್ಲಿ ನನ್ನ ತಂದೆಯಂದಿರು ಅವರ ಪೂರ್ವಜರು, ಪಿತಾಮಹರು ಮತ್ತು ಅವರ ಮೊದಲಿನವರು ಕೂಡ ಇದನ್ನೇ ಅರ್ಥೈಸಿದ್ದರು. ಪ್ರಜ್ಞೈಷಿಗಳಾಗಿ ಕರ್ಮಗಳನ್ನು ಮಾಡುವವರೂ ಕೊಡ ಕೊನೆಯಲ್ಲಿ ಇದು ಅಧರ್ಮವಲ್ಲ ಎಂದು ತಿಳಿಯುತ್ತಾರೆ. ಈ ಭೂಮಿಯ ಮೇಲೆ ಎಷ್ಟೇ ಸಂಪತ್ತಿದ್ದರೂ, ಅಥವಾ ತ್ರಿದಿವದಲ್ಲಿರುವ ದೇವ ತ್ರಿದಶರರಲ್ಲಿ, ಪ್ರಜಾಪತಿ ಬ್ರಹ್ಮಲೋಕದಲ್ಲಿ ಎಷ್ಟೇ ಸಂಪತ್ತಿರಲಿ ಅವನ್ನು ನಾನು ಅಧರ್ಮದಿಂದ ಮಾತ್ರ ಬಯಸುವವನಲ್ಲ.

ಧರ್ಮೇಶ್ವರ, ಕುಶಲ, ನೀತಿವಂತ, ಬ್ರಾಹ್ಮಣರನ್ನು ಉಪಾಸಿಸುವ, ಮನೀಷೀ ಕೃಷ್ಣನು ನಾನಾವಿಧದ ಮಹಾಬಲಶಾಲಿಗಳಾದ ರಾಜರಿಗೂ ಭೋಜರಿಗೂ ಸಲಹೆಗಾರನಾಗಿದ್ದಾನೆ. ನಾನು ಯುದ್ಧವನ್ನು ಬಿಟ್ಟರೆ

ತಪ್ಪಿತಸ್ತನಾಗುವುದಿಲ್ಲ ಅಥವಾ ಯುದ್ಧವನ್ನು ಮಾಡಿದರೆ ಸ್ವಧರ್ಮವನ್ನು ತೊರೆದಂತಾಗುವುದಿಲ್ಲ ಎನ್ನುವುದನ್ನು ಮಹಾಯಶಸ್ವಿ ಕೃಷ್ಣನೇ ಹೇಳಲಿ. ವಾಸುದೇವನು ಇಬ್ಬರ ಏಳಿಗೆಯನ್ನೂ ಬಯಸುತ್ತಾನೆ. ಶೈನ್ಯರು, ಚೈತ್ರರು, ಅಂಧಕರು, ವಾರ್ಷ್ಣೇಯರು, ಭೋಜರು, ಕೌಕುರರು ಮತ್ತು ಸೃಂಜಯರು ವಾಸುದೇವನ ಬುದ್ಧಿಯನ್ನು ಬಳಸಿ ಶತ್ರುಗಳನ್ನು ನಿಗ್ರಹಿಸಿ ಸುಹೃದಯರನ್ನು ಆನಂದಿಸುತ್ತಿದ್ದಾರೆ. ಇಂದ್ರಕಲ್ಪರಾದ ವೃಷ್ಣಿ, ಅಂಧಕ, ಉಗ್ರಸೇನಾದಿಗಳು ಎಲ್ಲರೂ ಕೃಷ್ಣನ ಮಾರ್ಗದರ್ಶನದಂತೆ ನಡೆಯುತ್ತಾರೆ. ಮಹಾಬಲಿ ಯಾದವರು ಮನಸ್ವಿಗಳು, ಸತ್ಯಪರಾಕ್ರಮಿಗಳು ಮತ್ತು ಭೋಗವಂತರು. ಕೃಷ್ಣನನ್ನು ಭ್ರಾತನನ್ನಾಗಿ ಮಾರ್ಗದರ್ಶಕನನ್ನಾಗಿ ಪಡೆದ ಕಾಶಿರಾಜ ಬಭ್ರುವು ಉತ್ತಮ ಶ್ರೀಯನ್ನು ಪಡೆದಿದ್ದಾನೆ. ಬೇಸಗೆಯ ಕೊನೆಯಲ್ಲಿ ಮೋಡಗಳು ಪ್ರಜೆಗಳ ಮೇಲೆ ಮಳೆಸುರಿಸುವಂತೆ ವಾಸುದೇವನು ಅವನ ಆಸೆಗಳನ್ನು ಪೂರೈಸಿದ್ದಾನೆ. ಕೇಶವನು ಇಂಥವನು! ಅವನಿಗೆ ಕರ್ಮಗಳನ್ನು ನಿಶ್ಚಯಿಸಲು ಗೊತ್ತು ಎನ್ನುವುದು ನಮಗೆ ತಿಳಿದಿದೆ. ಅತ್ಯಂತ ಸಾಧುವಾದ ಕೃಷ್ಣನು ನಮ್ಮೆಲ್ಲರ ಪ್ರಿಯ. ಕೇಶವನ ಮಾತನ್ನು ಮೀರುವುದಿಲ್ಲ."

## ಕೃಷ್ಣ ವಾಕ್ಯ

ವಾಸುದೇವನು ಹೇಳಿದನು:

"ಸಂಜಯ! ನಾನು ಪಾಂಡವರ ಅವಿನಾಶವನ್ನು, ಅವರಿಗೆ ಪ್ರಿಯವಾದುದನ್ನು, ಮತ್ತು ಅವರ ಏಳಿಗೆಯನ್ನು ಬಯಸುತ್ತೇನೆ. ಹಾಗೆಯೇ ರಾಜ ಧೃತರಾಷ್ಟ್ರನ ಮತ್ತು ಅವನ ಬಹುಮಂದಿ ಮಕ್ಕಳ ವೃದ್ಧಿಯನ್ನು ಸದಾ ಬಯಸುತ್ತೇನೆ. ನಿತ್ಯವೂ ನನ್ನ ಬಯಕೆಯು - ಅವರಿಗೆ ನಾನು ಬೇರೆ ಏನನ್ನೂ ಹೇಳಲಿಲ್ಲ- ಶಾಂತಿ ಎನ್ನುವುದು. ರಾಜನಿಗೂ ಕೂಡ ಅದು ಬೇಕಾಗಿದ್ದುದೆಂದು ಕೇಳುತ್ತಿದ್ದೇನೆ. ಅದು ಪಾಂಡವರಿಗೂ ಒಳ್ಳೆಯದು ಎಂದು ತಿಳಿದಿದ್ದೇನೆ. ಪುತ್ರರೊಂದಿಗೆ ಧೃತರಾಷ್ಟ್ರನು ಆಸೆಬುರುಕನಾಗಿರುವಾಗ ಪಾಂಡವರಾದರೋ ತುಂಬಾ ದುಷ್ಕರವಾದ ಶಾಂತತೆಯನ್ನೇ ಪ್ರದರ್ಶಿಸಿದ್ದಾರೆ. ಹೇಗೆತಾನೇ ಇವರಿಬ್ಬರ ನಡುವೆ ಕಲಹವುಂಟಾಗುವುದಿಲ್ಲ? ಧರ್ಮದ ತತ್ವವನ್ನು ನಿರ್ಧರಿಸುವಾಗ ಇಲ್ಲಿ ನೀನು ನನ್ನಿಂದ ಮತ್ತು ಯುಧಿಷ್ಠಿರನಿಂದ ತಿಳಿದುಕೋ! ಹೀಗಿರುವಾಗ ನೀನು ತನ್ನ ಕರ್ತವ್ಯವನ್ನು ಪೂರೈಸಲು ಹೊರಟಿರುವ, ತನ್ನ ಕುಟುಂಬವನ್ನು ಸರಿಯಾಗಿ ಮಾರ್ಗದರ್ಶನದೊಂದಿಗೆ ನಡೆಸಿಕೊಂಡು ಹೋಗುತ್ತಿರುವ, ಮೊದಲಿಂದಲೂ ಸರಿಯಾಗಿಯೇ ನಡೆದುಕೊಂಡು ಬಂದಿರುವ ಈ ಪಾಂಡವನನ್ನು ಏಕೆ ಅಲ್ಲಗಳೆಯುತ್ತಿರುವೆ?



ವರ್ತಮಾನದ ವಿಷಯದ ಕುರಿತು ಸರಿಯಾದ ಮಾತನ್ನು ವಿವಿಧರೀತಿಗಳಲ್ಲಿ ಬ್ರಾಹ್ಮಣರು ಹೇಳಿದ್ದಾರೆ. ಕರ್ಮಗಳು ಪರತ್ರದಲ್ಲಿ ಸಿದ್ಧಿಯನ್ನು ನೀಡುತ್ತವೆ ಎಂದು ಕೆಲವರು ಹೇಳುತ್ತಾರೆ. ಇತರರು ಕರ್ಮವನ್ನು ತೊರೆದು ವಿದ್ಯೆಯೊಂದೇ ಸಿದ್ಧಿಯನ್ನು ನೀಡುತ್ತದೆ ಎನ್ನುತ್ತಾರೆ. ಭಕ್ಷ್ಯ-ಭೋಜ್ಯಗಳನ್ನು ತಿಳಿದಿದ್ದರೂ ಅದನ್ನು ತಿನ್ನದೇ ಇರುವವನು ಹಸಿವಿನಿಂದ ತೃಪ್ತನಾಗುವುದಿಲ್ಲ ಎಂದೂ ಬ್ರಾಹ್ಮಣರಿಗೆ ತಿಳಿದಿದೆ. ಕರ್ಮಗಳನ್ನು ಸಾಧಿಸುವಂತಹ ವಿದ್ಯೆ ಮಾತ್ರ ಫಲವನ್ನು ನೀಡುತ್ತದೆ. ಇತರ ವಿದ್ಯೆಗಳಲ್ಲ! ಕರ್ಮವೇ ಕಾಣಲಿಕ್ಕಾಗುವ ಫಲವನ್ನು ನೀಡುತ್ತದೆ. ಬಾಯಾರಿಕೆಯು ನೀರನ್ನು ಕುಡಿಯುವುದರಿಂದ ಶಾಂತವಾಗುತ್ತದೆ. ಈ ಕರ್ಮವೇ ವಿಧಿವಿಹಿತವಾದುದು. ಅಲ್ಲಿ ಕರ್ಮವೇ ನಡೆಯುವುದು. ಕರ್ಮಕ್ಕಿಂತಲೂ ಉತ್ತಮವಾದುದು ಏನೋ ಇದೆ ಎಂದು ತಿಳಿದುಕೊಳ್ಳುವುದು ದುರ್ಬಲ ಮತ್ತು ಪ್ರಯೋಜನವಿಲ್ಲದ್ದು ಎಂದು ನನ್ನ ಮತ. ಕರ್ಮಗಳಿಂದಲೇ ಅಲ್ಲಿ ದೇವತೆಗಳು ಹೊಳೆಯುತ್ತಾರೆ. ಕರ್ಮದಿಂದಲೇ ವಾಯುವು ಇಲ್ಲಿ ಬೀಸುತ್ತಾನೆ. ಕರ್ಮದಿಂದಲೇ ಹಗಲು ರಾತ್ರಿಗಳನ್ನು ನಿರ್ಧರಿಸುತ್ತಾ ಸೂರ್ಯನು ನಿತ್ಯವೂ ಆಯಾಸಗೊಳ್ಳದೇ ಉದಯಿಸುತ್ತಾನೆ. ಹಾಗೆಯೇ ಆಯಾಸಗೊಳ್ಳದೇ ಚಂದ್ರಮನು ಮಾಸ-ಪಕ್ಷಗಳಲ್ಲಿ ನಡೆದು ನಕ್ಷತ್ರ ರಾಶಿಗಳಲ್ಲಿ ಸಂಚರಿಸುತ್ತಾನೆ.

ಜಾತವೇದಗಳು ಕೂಡ ತಮ್ಮ ಕರ್ಮಗಳನ್ನು ಮಾಡುತ್ತ ಪ್ರಜೆಗಳ ಒಳಿತಿಗಾಗಿ ಆಯಾಸಗೊಳ್ಳದೇ ನಿರಂತರವಾಗಿ ಉರಿಯುತ್ತವೆ. ವಿಶ್ರಾಂತಿಯಿಲ್ಲದೇ ಈ ಮಹಾಭಾರವನ್ನು ಬಲವನ್ನುಪಯೋಗಿಸಿ ದೇವೀ ಪೃಥ್ವಿಯು ಹೊರುತ್ತಾಳೆ. ನಿದ್ದೆಯಿಲ್ಲದೇ ನದಿಗಳು ನೀರನ್ನು ಹೊತ್ತು ಶೀಘ್ರವಾಗಿ ಹರಿದು ಸರ್ವಭೂತಗಳನ್ನು ಸಂತೃಪ್ತಗೊಳಿಸುತ್ತವೆ. ಆಯಾಸಗೊಳ್ಳದೇ ಭೂರಿತೇಜಸ್ವಿಯು ಅಂತರಿಕ್ಷ-ಸ್ವರ್ಗಗಳಲ್ಲಿ ಗರ್ಜಿಸಿ ಮಳೆಯನ್ನು ಸುರಿಸುತ್ತಾನೆ. ಅವನು ಆಯಾಸಗೊಳ್ಳದೇ ಬ್ರಹ್ಮಚರ್ಯವನ್ನು ಪಾಲಿಸಿ ದೇವತೆಗಳ ಶ್ರೇಷ್ಠತ್ವವನ್ನು ಬಲವನ್ನೂ ಪಡೆಯುತ್ತಾನೆ. ಸುಖವನ್ನೂ ಮನಸ್ಸಿನ ಆಸೆಗಳನ್ನೂ ತೊರೆದು ಶಕ್ರನು ಕರ್ಮಗಳಿಂದ ಶ್ರೇಷ್ಠತ್ವವನ್ನು ಪಡೆದನು. ಅಪ್ರಮತ್ತನಾಗಿದ್ದುಕೊಂಡು ಸತ್ಯ ಧರ್ಮಗಳನ್ನು ಪಾಲಿಸುತ್ತಾ, ದಮ, ತಾಳ್ಮೆ, ಸಮತೆ ಮತ್ತು ಪ್ರೀತಿ ಈ ಎಲ್ಲ ಗುಣಗಳನ್ನೂ ಅನುಸರಿಸಿ ಮಘವಾನನು ದೇವರಾಜ್ಯದ ಮುಖಂಡತ್ವವನ್ನು ಪಡೆದನು. ಬೃಹಸ್ಪತಿಯು ಸಮಾಹಿತನಾಗಿ, ಸಂಶಿತಾತ್ಮನಾಗಿ ಯಥಾವತ್ತಾಗಿ ಬ್ರಹ್ಮಚರ್ಯದಲ್ಲಿ ನಡೆಯುತ್ತಾನೆ. ಸುಖವನ್ನು ತೊರೆದು, ಇಂದ್ರಿಯಗಳನ್ನು ನಿಯಂತ್ರಣದಲ್ಲಿಟ್ಟುಕೊಂಡು ಅವನು ದೇವತೆಗಳ ಗುರುಪದವಿಯನ್ನು ಪಡೆದನು. ತಮ್ಮ ಕರ್ಮಗಳಿಂದಲೇ ನಕ್ಷತ್ರಗಳು ಹೊಳೆಯುತ್ತವೆ; ಹಾಗೆಯೇ

ರುದ್ರ, ಆದಿತ್ಯ, ವಸುಗಳು ಮತ್ತು ವಿಶ್ವೇದೇವರು, ಯಮರಾಜ, ವೈಶ್ರವಣ ಕುಬೇರ, ಗಂಧರ್ವ-ಯಕ್ಷರು ಮತ್ತು ಶುಭ್ರ ಅಪ್ಸರೆಯರು. ಬ್ರಹ್ಮಚರ್ಯೆ, ವೇದವಿದ್ಯೆ ಮತ್ತು ಕ್ರಿಯೆಗಳಿಂದಲೇ ಮುನಿಗಳು ಆ ಲೋಕದಲ್ಲಿ ಹೊಳೆಯುತ್ತಾರೆ. ಇದೇ ಸರ್ವಲೋಕದ - ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರ - ಧರ್ಮವೆಂದು ತಿಳಿದೂ, ತಿಳಿದವರ ತಿಳುವಳಿಕೆಯನ್ನು ತಿಳಿದೂ ನೀನು ಏಕೆ ಕೌರವನನ್ನು ಅರ್ಥಮಾಡಿಕೊಳ್ಳಲು ಶ್ರಮಿಸುತ್ತಿರುವೆ?

ವೇದಗಳಲ್ಲಿ ಅವನಿಗೆ ನಿತ್ಯವೂ ಮನಸ್ಸಿರುವುದನ್ನು ತಿಳಿದುಕೋ! ಹಾಗೆಯೇ ಅವನಿಗೆ ಅಶ್ವಮೇಧ-ರಾಜಸೂಯಗಳಲ್ಲಿ ಆಸಕ್ತಿಯಿದೆ. ಧನುಸ್ಸು ಕವಚಗಳಲ್ಲಿಯೂ, ಹಸ್ತತ್ರಾಣ, ರಥಗಳು ಮತ್ತು ಅಸ್ತ್ರಗಳಲ್ಲಿಯೂ ಆಸಕ್ತಿಯನ್ನಿಟ್ಟಿದ್ದಾನೆ. ಕೌರವರನ್ನು ನಾಶಗೊಳಿಸದೇ ತಮ್ಮ ಕರ್ಮದ ದಾರಿಯನ್ನು ಪಾರ್ಥರು ಕಂಡರೆ ಅವರು ಧರ್ಮವನ್ನು ಉಳಿಸುವ ಆ ಪುಣ್ಯಕಾರ್ಯವನ್ನು ಮಾಡುತ್ತಾರೆ. ಆಗ ಭೀಮಸೇನನನ್ನು ಪಳಗಿಸಿ ಆರ್ಯನಂತೆ ನಡೆಯುವ ಹಾಗೆ ಮಾಡುತ್ತಿದ್ದರು. ಆದರೆ ಅವರ ಪಿತೃಗಳಂತೆ ಮಾಡಿ ನಡೆದುಕೊಂಡು ವಿಧಿವಶದಿಂದ ಮೃತ್ಯುವನ್ನು ಪಡೆದರೂ, ತಮ್ಮ ಕರ್ಮವನ್ನು ಅವರು ಯಥಾವತ್ತಾಗಿ ಪೂರೈಸಲು ತೊಡಗಿದುದರಿಂದ ಅದರಲ್ಲಿ

ಅವರ ನಿಧನವಾದರೂ ಅದು ಪ್ರಶಸ್ತವೆನಿಸುತ್ತದೆ. ನಿನಗೆ ಎಲ್ಲವೂ ತಿಳಿದಿದೆಯೆಂದು ಅಭಿಪ್ರಾಯ ಪಡುತ್ತಿರುವೆಯಾದುದರಿಂದ ಈ ಪ್ರಶ್ನೆಗೆ ಉತ್ತರವಾಗಿ ನಿನ್ನ ಮಾತನ್ನು ನಾನು ಕೇಳುತ್ತೇನೆ.

ಹೇಳು! ಧರ್ಮವು ರಾಜನಿಗೆ ಯುದ್ಧಮಾಡಲು ಹೇಳುತ್ತದೆಯೋ ಅಥವಾ ಧರ್ಮವು ರಾಜನಿಗೆ ಯುದ್ಧಮಾಡಬಾರದು ಎಂದು ಹೇಳುತ್ತದೆಯೋ? ಸಂಜಯ! ಮೊದಲು ನೀನು ನಾಲ್ಕು ವರ್ಣಗಳ ವಿಭಾಗವನ್ನೂ ಪ್ರತಿಯೊಂದಕ್ಕಿರುವ ಕರ್ಮಗಳನ್ನೂ ಗಮನಕ್ಕೆ ತೆಗೆದುಕೊಳ್ಳಬೇಕು. ನಂತರ ಪಾಂಡವರ ಸ್ವಕರ್ಮವೇನೆಂದು ಕೇಳಿ ನಿನಗಿಷ್ಟ ಬಂದಂತೆ ಅವರನ್ನು ಪ್ರಶಂಸಿಸಬಹುದು ಅಥವಾ ನಿಂದಿಸಬಹುದು. ಬ್ರಾಹ್ಮಣನು ಅಧ್ಯಯನ ಮಾಡಬೇಕು, ಯಾಜಿಸಬೇಕು, ದಾನಮಾಡಬೇಕು, ಮುಖ್ಯ ತೀರ್ಥಗಳಿಗೆ ಹೋಗಬೇಕು, ಅರ್ಹರಾದವರಿಗೆ ಕಲಿಸಬೇಕು, ಪುರೋಹಿತನಾಗಿರಬೇಕು, ಮತ್ತು ತನಗೆ ತಿಳಿದಿರುವ ದಾನಗಳನ್ನು ಸ್ವೀಕರಿಸಬೇಕು. ಹಾಗೆಯೇ ರಾಜರು ಧರ್ಮದಿಂದ ಪ್ರಜೆಗಳ ರಕ್ಷಣೆಯನ್ನು ಮಾಡಬೇಕು, ದಾನಮಾಡಿ ಯಜ್ಞ-ಇಷ್ಟಿಗಳನ್ನು ಕೈಗೊಳ್ಳಬೇಕು, ಸರ್ವ ವೇದಗಳನ್ನು ತಿಳಿದಿರಬೇಕು, ಮದುವೆಯಾಗಿ ಪುಣ್ಯಕರ ಗೃಹಸ್ಥನಾಗಿರಬೇಕು. ವೈಶ್ಯನು ಅಧ್ಯಯನದಲ್ಲಿ

ತೊಡಗಬೇಕು; ಅಪ್ರಮತ್ತನಾಗಿ ಕೃಷಿ-ಗೋರಕ್ಷಣೆಗಳ ಮೂಲಕ ವಿತ್ತವನ್ನು ಸಂಪಾದಿಸಬೇಕು. ಬ್ರಾಹ್ಮಣರು ಮತ್ತು ಕ್ಷತ್ರಿಯರಿಗೆ ಪ್ರಿಯವಾದುದನ್ನು ಮಾಡಿಕೊಂಡು, ಧರ್ಮಶೀಲನಾಗಿ, ಗೃಹಸ್ಥನಾಗಿ ಪುಣ್ಯಕರ್ಮಗಳನ್ನು ಮಾಡುತ್ತಿರಬೇಕು. ಪುರಾಣಗಳಲ್ಲಿ ಹೇಳಿರುವ ಶೂದ್ರಧರ್ಮವು ಇವು: ಬ್ರಾಹ್ಮಣರನ್ನು ವಂದಿಸಿ ಅವರ ಪರಿಚರ್ಯೆ ಮಾಡುವುದು. ಇವರಿಗೆ ಯಜ್ಞಗಳು ಅಧ್ಯಯನ ಎರಡೂ ನಿಶಿದ್ಧ. ಆಯಾಸಗೊಳ್ಳದೇ ನಿತ್ಯವೂ ತನ್ನ ಏಳಿಗೆಯಲ್ಲಿ ತೊಡಗಿರಬೇಕು.

ಇವರೆಲ್ಲರನ್ನೂ ರಾಜನು ಅಪ್ರಮತ್ತನಾಗಿ, ಎಲ್ಲ ವರ್ಣದವರನ್ನೂ ತಮ್ಮ ತಮ್ಮ ಧರ್ಮಗಳಲ್ಲಿ ತೊಡಗಿಸಿಕೊಂಡು ಪಾಲಿಸಬೇಕು. ಕಾಮಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳಬಾರದು. ಪ್ರಜೆಗಳನ್ನು ಸಮದೃಷ್ಟಿಯಿಂದ ನೋಡಿಕೊಳ್ಳಬೇಕು. ಅಧಾರ್ಮಿಕ ಆಸೆಗಳ ಹಿಂದೆ ಹೋಗಬಾರದು. ತನಗಿಂತಲೂ ಪ್ರಶಂಸನೀಯನಾದ, ಪ್ರಸಿದ್ಧನಾದ, ಸರ್ವಧರ್ಮೋಪಪನ್ನನಾದ ಪುರುಷನು ಯಾರಾದರೂ ಇದ್ದರೆ, ಅದನ್ನು ತಿಳಿದು ದುಷ್ಟರನ್ನು ಅವನು ಶಿಕ್ಷಿಸಬೇಕು. ಆದರೆ ಅವನ ರಾಜ್ಯವನ್ನು ಕಸಿದುಕೊಳ್ಳಲು ಪ್ರಯತ್ನಿಸಬಾರದು. ಅದು ಸರಿಯಲ್ಲ. ಇನ್ನೊಬ್ಬರ ಭೂಮಿಯನ್ನು ಕ್ರೂರವಾಗಿ ಕಸಿದುಕೊಂಡು, ವಿಧಿಯನ್ನು

ಪ್ರಕೋಪಗೊಳಿಸಿ ಬಲವನ್ನು ಕಸಿದುಕೊಂಡರೆ, ಇದು ರಾಜರ ಮಧ್ಯೆ ನಡೆಯುವ ಯುದ್ಧಕ್ಕೆ ಕಾರಣವಾಗುತ್ತದೆ. ಯಾಕೆಂದರೆ, ದಸ್ಯುಗಳ ವಧೆಗಾಗಿಯೇ ಇಂದ್ರನು ಈ ಕವಚ-ಶಸ್ತ್ರ-ಧನುಸ್ಸುಗಳನ್ನು ಸೃಷ್ಟಿಸಿದನು. ಯಾರಿಗೂ ಕಾಣದೇ ಪರರ ಧನವನ್ನು ಕದಿಯುವವನು ಮತ್ತು ಎಲ್ಲರಿಗೂ ಕಾಣುವಂತೆ ಕಸಿದುಕೊಳ್ಳುವವನು ಇಬ್ಬರೂ ನಿಂದನೀಯರು.

ಧೃತರಾಷ್ಟ್ರನ ಪುತ್ರರು ಇವರಿಗಿಂತ ಹೇಗೆ ಭಿನ್ನರಾಗಿದ್ದಾರೆ? ಇವರು ಲೋಭವೇ ಧರ್ಮವೆಂದು ತಿಳಿದಿದ್ದಾರೆ. ಕೋಪದ ವಶಕ್ಕೆ ಬಂದು ಅದನ್ನೇ ಮಾಡಲು ಬಯಸುತ್ತಾರೆ. ಪಾಂಡವರ ಪಿತ್ರಾರ್ಜಿತ ಭಾಗವು ನಿರ್ದಿಷ್ಠವಾದುದು. ಇತರರು ಅದನ್ನು ಏಕೆ ನಮ್ಮಿಂದ ಕಸಿದುಕೊಳ್ಳಬೇಕು? ಈ ವಿಷಯದಲ್ಲಿ ನಾವು ಹೋರಾಡಿ ಸತ್ತರೂ ಶ್ಲಾಘನೀಯ. ಏಕೆಂದರೆ ಪರರ ರಾಜ್ಯಕ್ಕಿಂತ ಪಿತೃರಾಜ್ಯವು ವಿಶಿಷ್ಟವಾದುದು. ಈ ಪುರಾಣ ಧರ್ಮಗಳನ್ನು ರಾಜರ ಮಧ್ಯದಲ್ಲಿ ಕೌರವರಿಗೆ ತೋರಿಸಿಕೊಡು! ಮೂಢ ಧಾರ್ತರಾಷ್ಟ್ರನ ಜೊತೆ ಸೇರಿರುವವರು ಮೂಢಾತ್ಮರು ಮತ್ತು ಮೃತ್ಯುವಿನ ವಶಕ್ಕೆ ಸಿಲುಕಿದ್ದಾರೆ. ಮತ್ತೊಮ್ಮೆ ಸಭಾಮಧ್ಯದಲ್ಲಿ ಕುರುಗಳ ಪಾಪ ಕರ್ಮವನ್ನೂ ನಡತೆಯನ್ನೂ ನೋಡು. ಪಾಂಡವರ ಪ್ರಿಯ ಭಾರ್ಯೆ ಯಶಸ್ವಿನೀ ಶೀಲನಡತೆಯಿಂದ ಲಕ್ಷಿತಳಾದ, ರೋದಿಸುತ್ತಿರುವ ದ್ರೌಪದಿಯನ್ನು ಆ ಕಾಮಾನುಗನು ಎಳೆದು

ತರುವಾಗ ಭೀಷ್ಮ ಮತ್ತು ಇತರ ಕುರು ಮುಖ್ಯರು ಯಾರೂ ವಿರೋಧಿಸಲಿಲ್ಲ. ಅಲ್ಲಿ ಸೇರಿದ್ದ ಕುಮಾರ ವೃದ್ಧ ಕುರುಗಳೆಲ್ಲರೂ ಅವನನ್ನು ತಡೆದಿದ್ದರೆ ಧೃತರಾಷ್ಟ್ರನು ನನಗೆ ಪ್ರಿಯವಾದುದನ್ನು ಮಾಡಿದಂತೆ, ತನ್ನ ಪುತ್ರರಿಗೂ ಒಳ್ಳೆಯದನ್ನು ಮಾಡಿದಂತೆ ಆಗುತ್ತಿತ್ತು. ಎಲ್ಲ ಧರ್ಮಗಳನ್ನೂ ತುಳಿದು ದುಃಶಾಸನನು ಕೃಷ್ಣೆಯನ್ನು ಅವಳ ಮಾವಂದಿರಿರುವ ಸಭಾಮಧ್ಯಕ್ಕೆ ಎಳೆದು ತಂದನು. ಅಲ್ಲಿಗೆ ಎಳೆದು ತರಲ್ಪಟ್ಟಾಗ ಅವಳು ಕರುಣೆಯಿಂದ ಮಾತನಾಡಲು ಕ್ಷತ್ತ ವಿದುರನ ಹೊರತಾಗಿ ಬೇರೆ ಯಾವ ರಕ್ಷಕನನ್ನೂ ಅವಳು ಕಾಣಲಿಲ್ಲ. ಸಭೆಯಲ್ಲಿದ್ದ ರಾಜರೆಲ್ಲರೂ ಕಾರ್ಪಣ್ಯದಿಂದ ಕೂಡಿದವರಾಗಿ ಉತ್ತರಿಸಲು ಅಶಕ್ಯರಾಗಿದ್ದರು. ಧರ್ಮಗಳ ಅರ್ಥವನ್ನು ಹೇಳಬಲ್ಲ ಕ್ಷತ್ತನೊಬ್ಬನೇ ಆ ಅಲ್ಪಬುದ್ಧಿಗೆ ಧರ್ಮವನ್ನು ತಿಳಿಸಿ ಹೇಳಿದನು. ನೀನೂ ಕೂಡ ಆ ಸಭೆಯಲ್ಲಿ ಧರ್ಮವೇನೆಂದು ಹೇಳಲಿಲ್ಲ. ಈಗ ಪಾಂಡವರಿಗೆ ಉಪದೇಶಿಸಲು ಬಯಸುತ್ತಿದ್ದೀಯಾ?

ಆದರೆ ಕೃಷ್ಣೆಯೇ ಆ ಸಭೆಯಲ್ಲಿ ಸರಿಯಾಗಿದ್ದುಕೊಂಡು ಶುದ್ಧ ಕರ್ಮವನ್ನು ಮಾಡಿದಳು. ಸಾಗರದಲ್ಲಿ ಸಿಲುಕಿಕೊಂಡ ದೋಣಿಯಂತಿದ್ದ ಪಾಂಡವರನ್ನೂ ತನ್ನನ್ನೂ ಕಷ್ಟದಿಂದ ಪಾರುಮಾಡಿದಳು. ಆಗ ಆ ಸಭೆಯಲ್ಲಿ ಕೃಷ್ಣೆಯು ತನ್ನ ಮಾವಂದಿರ ಸಮೀಪ ನಿಂತಿರುವಾಗ ಸೂತಪುತ್ರನು

ಹೇಳಿದನು: "ಯಾಜ್ಞಸೇನೀ! ನಿನಗೆ ಬೇರೆ ಯಾವ ಗತಿಯೂ ಇಲ್ಲವಾಗಿದೆ. ಧಾರ್ತರಾಷ್ಟ್ರನ ಮನೆಯನ್ನು ಸೇರು. ಪರಾಜಿತರಾದ ನಿನ್ನ ಪತಿಯಂದಿರು ಇನ್ನಿಲ್ಲ. ಭಾಮಿನೀ! ಬೇರೆ ಯಾರನ್ನಾದರೂ ನಿನ್ನ ಪತಿಯನ್ನಾಗಿ ಆರಿಸಿಕೋ!" ಈ ಭಯಂಕರವಾದ, ಹೃದಯವನ್ನು ಖಡ್ಗದಂತೆ ಕೊರೆಯುವ, ಮರ್ಮವನ್ನು ಘಾತಿಗೊಳಿಸುವ, ಸುಡುವ, ಸುಘೋರವಾದ ಕರ್ಣನ ಮಾತುಗಳು ಅತಿ ತೇಜಸ್ಸುಳ್ಳ ಬಾಣಗಳಂತೆ ಫಲ್ಗುನನ ಹೃದಯದಲ್ಲಿ ನಾಟಿ ನಿಂತಿವೆ. ಅವರು ಕೃಷ್ಣಾಜಿನಗಳನ್ನು ತೊಡುತ್ತಿರುವಾಗ ದುಃಶಾಸನನು ಕಟುಕಾದ ಈ ಮಾತುಗಳನ್ನಾಡಿದನು: "ಇವರೆಲ್ಲರೂ ಪೊಳ್ಳು ಎಳ್ಳಿನಂತೆ ವಿನಷ್ಟರಾಗಿದ್ದಾರೆ ಮತ್ತು ಕ್ಷಯರಾಗಿ ದೀರ್ಘಕಾಲದ ನರಕಕ್ಕೆ ಹೋಗಿದ್ದಾರೆ." ದ್ಯೂತಕಾಲದಲ್ಲಿ ಗಾಂಧಾರರಾಜ ಶಕುನಿಯು ಮೋಸದಿಂದ ಪಾರ್ಥರಿಗೆ ಹೇಳಿದ್ದನು: "ನಕುಲನನ್ನು ಸೋತೆ! ನಿನ್ನಲ್ಲಿ ಇನ್ನೇನಿದೆ? ಈಗ ಕೃಷ್ಣೆ ಯಾಜ್ಞಸೇನಿಯನ್ನು ಪಣವಾಗಿಡು!" ಸಂಜಯ! ದ್ಯೂತದಲ್ಲಿ ಹೇಳಬಾರದಂತ ಮಾತುಗಳನ್ನಾಡಿದುದೆಲ್ಲವೂ ಆಡಿದಂತೆ ನಿನಗೆ ತಿಳಿದೇ ಇದೆ.

ಸ್ವಯಂ ನಾನೇ ಅಲ್ಲಿಗೆ ಹೋಗಿ ಈ ಕಷ್ಟದ ವಿಷಯವನ್ನು, ಕೈತಪ್ಪಿ ಹೋಗುವುದರೊಳಗೆ ಸಮಾಧಾನ ಪಡಿಸಲು ಹೋಗುವವನಿದ್ದೇನೆ. ಪಾಂಡವರ ಆಸಕ್ತಿಗೆ ಬಾಧಕವಾಗದಂತೆ ಕುರುಗಳಲ್ಲಿ ಶಾಂತಿಯನ್ನು ತರುವುದರಲ್ಲಿ ಯಶಸ್ವಿಯಾದರೆ

ಅದು ಅತ್ಯಂತ ವಿಶೇಷವೂ ಪುಣ್ಯತರವೂ ಆಗುತ್ತದೆ ಮತ್ತು ಕುರುಗಳನ್ನು ಮೃತ್ಯುಪಾಶದಿಂದ ಬಿಡಿಸಿದಂತಾಗುತ್ತದೆ. ಆ ವಿವೇಕಯುಕ್ತವಾದ, ಧರ್ಮಯುಕ್ತವಾದ, ಅರ್ಥವತ್ತಾದ, ಅಹಿಂಸೆಯ ಮಾತುಗಳನ್ನು ಧಾರ್ತರಾಷ್ಟ್ರರ ಎದುರು ಮಾತನಾಡುವಾಗ ಕುರುಗಳು ಸ್ವೀಕರಿಸುತ್ತಾರೆ ಮತ್ತು ನನ್ನನ್ನು ನೋಡಿ ಗೌರವಿಸುತ್ತಾರೆ ಎಂದು ಆಶಿಸುತ್ತೇನೆ. ಇಲ್ಲದಿದ್ದರೆ ರಥದಲ್ಲಿ ಕುಳಿತ ಫಲ್ಗುನ ಮತ್ತು ಭೀಮರು, ಈ ಮೊದಲೇ ತಮ್ಮದೇ ಕರ್ಮಗಳಿಂದ ದಹಿಸಿ ಹೋಗಲ್ಪಡುವ ಮಂದಬುದ್ಧಿಯ ಧಾರ್ತರಾಷ್ಟ್ರರನ್ನು, ಸುಟ್ಟುಹಾಕುತ್ತಾರೆ. ಪಾಂಡವೇಯರು ಸೋತಾಗ ಧಾರ್ತರಾಷ್ಟ್ರನು ರೌದ್ರರೂಪದ ಮಾತುಗಳನ್ನಾಡಿದ್ದನು. ಗದೆಯನ್ನು ಹಿಡಿದ ಭೀಮಸೇನನು ಅಪ್ರಮತ್ತನಾಗಿ ಸಮಯ ಬಂದಾಗ ದುರ್ಯೋಧನನಿಗೆ ಅದನ್ನು ನೆನಪಿಸಿ ಕೊಡುತ್ತಾನೆ.

ಮನ್ಯುಮಯ ದುರ್ಯೋಧನನು ಮಹಾವೃಕ್ಷ, ಕರ್ಣನು ಅದರ ಕಾಂಡ, ಶಕುನಿಯು ಅದರ ಶಾಖೆಗಳು, ದುಃಶಾಸನನು ಸಮೃದ್ಧವಾದ ಪುಷ್ಪಫಲಗಳು, ರಾಜಾ ಮನೀಷೀ ಧೃತರಾಷ್ಟ್ರನು ಅದರ ಬೇರುಗಳು. ಧರ್ಮಮಯ ಯುಧಿಷ್ಠಿರನು ಮಹಾವೃಕ್ಷ, ಅರ್ಜುನನು ಅದರ ಕಾಂಡ, ಭೀಮಸೇನನು ಅದರ ಶಾಖೆಗಳು, ಮಾದ್ರೀಪುತ್ರರು ಸಮೃದ್ಧವಾದ ಪುಷ್ಪಫಲಗಳು, ನಾನು, ಬ್ರಹ್ಮ, ಮತ್ತು

ಬ್ರಾಹ್ಮಣರು ಅದರ ಬೇರುಗಳು. ಸಂಜಯ! ಪುತ್ರರೊಂದಿಗೆ ರಾಜಾ ಧೃತರಾಷ್ಟ್ರನು ವನ, ಪಾಂಡವೇಯರು ವನದಲ್ಲಿರುವ ಹುಲಿಗಳು. ವ್ಯಾಘ್ರಗಳೊಂದಿಗೆ ವನವನ್ನು ಕಡಿದುರಿಳಿಸಬೇಡ! ವ್ಯಾಘ್ರಗಳನ್ನೂ ವನದಿಂದ ಓಡಿಸಬೇಡ! ಕಾಡಿಲ್ಲದೇ ವ್ಯಾಘ್ರಗಳು ವಧೆಗೊಳ್ಳುತ್ತವೆ. ವ್ಯಾಘ್ರಗಳಿಲ್ಲದೇ ವನವು ಕಡಿಯಲ್ಪಡುತ್ತದೆ. ಆದುದರಿಂದ ವ್ಯಾಘ್ರಗಳು ವನವನ್ನು ರಕ್ಷಿಸಬೇಕು. ವನವು ವ್ಯಾಘ್ರಗಳನ್ನು ಪಾಲಿಸಬೇಕು. ಧಾರ್ತರಾಷ್ಟ್ರರು ಲತೆಗಳಂತಿದ್ದರೆ ಪಾಂಡವರು ಶಾಲವೃಕ್ಷಗಳಂತೆ. ಮಹಾವೃಕ್ಷವನ್ನು ಆಶ್ರಯಿಸದೇ ಲತೆಗಳು ಬೆಳೆಯಲಾರವು. ಪಾರ್ಥರು ಸೇವೆಮಾಡಲೂ ನಿಂತಿದ್ದಾರೆ, ಮತ್ತು ಈ ಅರಿಂದಮರು ಯುದ್ಧಮಾಡಲೂ ನಿಂತಿದ್ದಾರೆ. ನರಾಧಿಪ ಧೃತರಾಷ್ಟ್ರನು ಏನು ಮಾಡಬೇಕೋ ಅದನ್ನು ಮಾಡಲಿ. ಧರ್ಮಚಾರಿಗಳಾದ ಮಹಾತ್ಮ ಪಾಂಡವರು ಶಾಂತಿಗೆ ಕಾಯುತ್ತಿದ್ದಾರೆ. ಅವರು ಸಮೃದ್ಧ ಯೋಧರೂ ಕೂಡ. ಇದನ್ನು ಯಥಾವತ್ತಾಗಿ ಅವರಿಗೆ ಹೇಳು."

## ಸಂಜಯನು ಯುಧಿಷ್ಠಿರನಿಂದ ಬೀಳ್ಕೊಂಡಿದುದು

ಸಂಜಯನು ಹೇಳಿದನು:

"ನರದೇವದೇವ! ಪಾಂಡವ! ನಿನ್ನಿಂದ ಬೀಳ್ಕೊಳ್ಳುತ್ತೇನೆ. ನಾನು ಹೋಗುತ್ತೇನೆ. ನಿನಗೆ ಮಂಗಳವಾಗಲಿ! ನನ್ನ ಈ

ಪಕ್ಷಪಾತೀ ಹೃದಯವು ನಿನ್ನನ್ನು ನೋಯಿಸುವ ಹಾಗೆ ಏನನ್ನೂ ನನ್ನಿಂದ ಮಾತನಾಡಿಸಲಿಲ್ಲ ಎಂದು ಅಂದುಕೊಳ್ಳುತ್ತೇನೆ. ಜನಾರ್ದನನನ್ನೂ, ಭೀಮಸೇನ-ಅರ್ಜುನರನ್ನೂ, ಮಾದ್ರೀಸುತರನ್ನೂ, ಸಾತ್ಯಕಿಯನ್ನೂ, ಚೇಕಿತಾನನನ್ನೂ ಬೀಳ್ಕೊಂಡು ಹೋಗುತ್ತೇನೆ. ಮಂಗಳವೂ ಸುಖವೂ ನಿಮ್ಮದಾಗಲಿ. ಎಲ್ಲ ನೃಪರೂ ನನ್ನನ್ನು ಸೌಮ್ಯ ದೃಷ್ಟಿಯಿಂದ ಕಾಣಲಿ."

ಯುಧಿಷ್ಠಿರನು ಹೇಳಿದನು:

"ಸಂಜಯ! ಅಪ್ಪಣೆಯಿದೆ. ಹೊರಡು. ನಿನಗೆ ಮಂಗಳವಾಗಲಿ. ನೀನು ಎಂದೂ ನಮ್ಮ ಕುರಿತು ಕೆಟ್ಟದ್ದನ್ನು ಯೋಚಿಸಿದವನಲ್ಲ. ಸಭಾಸದರಲ್ಲಿ ನೀನೇ ಶುದ್ಧಾತ್ಮನೆಂದು ಅವರಿಗೆ ಮತ್ತು ನಮಗೆಲ್ಲರಿಗೂ ಗೊತ್ತು, ಆಪ್ತ ದೂತನೂ, ಸುಪ್ರಿಯನೂ, ಕಲ್ಯಾಣಮಾತುಳ್ಳವನೂ, ಶೀಲವಂತನೂ, ದೃಷ್ಟಿವಂತನೂ ಆಗಿದ್ದೀಯೆ. ನೀನು ಮೋಹಿತನಾಗಿಲ್ಲ. ವಿಷಯವನ್ನು ಇದ್ದಹಾಗೆ ಹೇಳಿದರೂ ನೀನು ಸಿಟ್ಟಾಗುವುದಿಲ್ಲ. ಸೂತ ನೀನು ಕಠೋರವಾದ ಮಾತುಗಳನ್ನಾಡಿ ಹೃದಯವನ್ನು ಚುಚ್ಚುವುದಿಲ್ಲ. ಕಟುಕವಾಗಿ ಅಥವಾ ಹುಳಿಯಾಗಿ ಸಂಬೋಧಿಸುವುದಿಲ್ಲ. ನಿನ್ನ ಮಾತು ಧರ್ಮಯುಕ್ತವೂ, ಅರ್ಥವತ್ತಾಗಿಯೂ, ಅಹಿಂಸಾಯುಕ್ತವೂ ಆಗಿದೆ ಎಂದು ನನಗೆ

ತಿಳಿದಿದೆ. ನಮಗೆ ನೀನು ಪ್ರಿಯತಮನಾದ ದೂತ. ನಿನ್ನನ್ನು ಬಿಟ್ಟರೆ ಇಲ್ಲಿಗೆ ವಿದುರನು ಬರಬೇಕಿತ್ತು. ನಿನ್ನನ್ನು ನಾವು ಈ ಹಿಂದೆಯೂ ನೋಡಲಿಲ್ಲವೇ? ನೀನು ಧನಂಜಯನ ಸಮನಾಗಿರುವೆ ಮತ್ತು ಸಖನಾಗಿರುವೆ.

ಇಲ್ಲಿಂದ ಕ್ಷಿಪ್ರವಾಗಿ ಹೋಗಿ ವಿಶುದ್ಧ ವೀರ್ಯರೂ, ಶರಣೋಪಪನ್ನರೂ, ಉತ್ತಮ ಕುಲದಲ್ಲಿ ಜನಿಸಿದವರೂ, ಸರ್ವಧರ್ಮೋಪಪನ್ನರೂ ಆದ ಅರ್ಹ ಬ್ರಾಹ್ಮಣರನ್ನು ನಮಸ್ಕರಿಸು. ಸ್ವಾಧ್ಯಾಯಿಗಳನ್ನೂ, ಬ್ರಾಹ್ಮಣರನ್ನೂ, ಭಿಕ್ಷುಗಳನ್ನೂ, ನಿತ್ಯವೂ ವನದಲ್ಲಿರುವ ತಪಸ್ವಿಗಳನ್ನೂ ಅಭಿವಂದಿಸಿ ನನ್ನ ಮಾತಿನಂತೆ ವೃದ್ಧರ ಮತ್ತು ಇತರರ ಕುಶಲವನ್ನು ಕೇಳು. ನೀನು ರಾಜಾ ಧೃತರಾಷ್ಟ್ರನ ಪುರೋಹಿತನನ್ನು, ಅವನ ಆಚಾರ್ಯನನ್ನೂ ಋತ್ವಿಜನನ್ನೂ, ಅವರ ಜೊತೆಗಿರುವವರನ್ನೂ ಯಥಾರ್ಹವಾಗಿ ಭೇಟಿಮಾಡಿ ಅವರ ಕುಶಲವನ್ನೂ ಕೇಳಬೇಕು. ಅನಂತರ ನಮ್ಮ ಪ್ರಿಯ ಆಚಾರ್ಯ, ವಿಧೇಯ, ಅನಪಗ, ವೇದವನ್ನು ಬಯಸಿ ಬ್ರಹ್ಮಚರ್ಯವನ್ನು ನಡೆಸಿರುವ, ಅಸ್ತ್ರಗಳನ್ನು ಅವುಗಳ ನಾಲ್ಕೂ ಕಾಲುಗಳನ್ನೂ ಪುನಃ ಪ್ರತಿಷ್ಠಾಪಿಸಿದ ಪ್ರಸನ್ನ ದ್ರೋಣನಿಗೆ ಯಥಾರ್ಹವಾಗಿ ಅಭಿವಾದಿಸು. ಅನಂತರ ನೀನು ಅಧ್ಯಯನದಲ್ಲಿ ನಿರತನಾಗಿರುವ, ಶರಣೋಪಪನ್ನನಾದ, ಅಸ್ತ್ರವನ್ನು ಪುನಃ ಪ್ರತಿಷ್ಠಾಪಿಸಿದ, ಗಂಧರ್ವಪುತ್ರನಂತಿರುವ,

ತರಸ್ವಿ, ಅಶ್ವತ್ಥಾಮನ ಕುಶಲವನ್ನು ಕೇಳು. ಶಾರದ್ವತನ ಮನೆಗೆ ಹೋಗಿ, ನನ್ನ ಹೆಸರನ್ನು ಪುನಃ ಪುನಃ ಹೇಳುತ್ತಾ ಆ ಮಹಾರಥಿಯ, ಅಸ್ತ್ರವಿದರಲ್ಲಿ ಶ್ರೇಷ್ಠ ಕೃಪನ ಪಾದಗಳನ್ನು ಕೈಗಳಿಂದ ಮುಟ್ಟಿ ನಮಸ್ಕರಿಸು. ಯಾರಲ್ಲಿ ಶೌರ್ಯ, ಅಕ್ರೂರತೆ, ತಪಸ್ಸು, ಪ್ರಜ್ಞಾಶೀಲತೆ, ಶ್ರುತಿಸತ್ವ, ಧೃತಿಗಳಿವೆಯೋ ಆ ಕುರುಸತ್ತಮ ಭೀಷ್ಮನ ಪಾದಗಳನ್ನು ಹಿಡಿದು ನನ್ನ ನಿವೇದನೆಯನ್ನು ಹೇಳಬೇಕು. ಪ್ರಜ್ಞಾಚಕ್ಷು, ಕುರುಗಳ ಪ್ರಣೀತ, ಬಹುಶ್ರುತ, ವೃದ್ಧಸೇವೀ, ಮನೀಷೀ ಆ ರಾಜನಿಗೆ ವಂದಿಸಿ ನನ್ನ ಆರೋಗ್ಯದ ಕುರಿತು ಹೇಳು. ಧೃತರಾಷ್ಟ್ರನ ಜ್ಯೇಷ್ಠ ಪುತ್ರ ಮಂದಬುದ್ಧಿ, ಮೂರ್ಖ, ಹಠವಾದಿ, ಪಾಪಶೀಲ, ಈ ಎಲ್ಲ ಪೃಥ್ವಿಯನ್ನೂ ಆಳುತ್ತಿರುವ ಸುಯೋಧನನ ಕುಶಲವನ್ನು ಕೇಳು. ಅವನ ಕಿರಿಯ ತಮ್ಮ ಮಂದಬುದ್ಧಿಯ, ಯಾವಾಗಲೂ ಅವನಂತೆಯೇ ನಡೆದುಕೊಳ್ಳುವ, ಮಹೇಷ್ವಾಸ, ಕುರುಗಳಲ್ಲಿಯೇ ಅತ್ಯಂತ ಶೂರನಾದ ದುಃಶಾಸನನ ಕುಶಲವನ್ನು ಕೇಳು. ಶ್ರೇಷ್ಠ ಕವಿ, ಎಲ್ಲ ವಿಷಯಗಳಲ್ಲಿಯೂ ವಿವೇಕಿಯಾದ, ಮಹಾಪ್ರಾಜ್ಞ, ಸರ್ವಧರ್ಮೋಪಪನ್ನ, ಯಾರೊಂದಿಗೂ ಎಂದೂ ಯುದ್ಧವನ್ನು ಬಯಸದ ವೈಶ್ಯಾಪುತ್ರ ವಿದುರನ ಕುಶಲವನ್ನು ಕೇಳು. ಕತ್ತರಿಸುವುದರಲ್ಲಿ ಮತ್ತು ಜೂಜಿನಲ್ಲಿ ಅದ್ವಿತೀಯನಾದ, ಕುಶಲ ಮೋಸಗಾರ, ದಾಳ ಮತ್ತು ಪಗಡೆಯಾಟಗಳಲ್ಲಿ

ಪಳಗಿದ, ಜೂಜಿನ ಸ್ಪರ್ಧೆಯಲ್ಲಿ ಗೆಲ್ಲಲಸಾಧ್ಯನಾದ ಆ ಚಿತ್ರಸೇನನ ಕುಶಲವನ್ನು ಕೇಳು.

ನಿತ್ಯವೂ ಭಾರತರ ನಡುವೆ ಶಾಂತಿಯ ಹೊರತು ಬೇರೆ ಏನನ್ನೂ ಬಯಸದ, ಬಾಹ್ಲೀಕರ ಹಿರಿಯ ವೃಷಭ, ಮನಸ್ವಿಗೆ ಮೊದಲಿನಂತೆ ಪ್ರಸನ್ನನ್ನಾಗಿ ನನ್ನ ನಮಸ್ಕಾರಗಳು. ನನ್ನ ಮತದಂತೆ ಅನೇಕ ಉತ್ತಮ ಗಣಗಳಿಂದ ಯುಕ್ತನಾಗಿರುವ, ತಿಳಿದವನಾದರೂ ನಿಷ್ಠುರವಾಗಿರದ, ಸ್ನೇಹಭಾವದಿಂದ ಸಿಟ್ಟನ್ನು ಸದಾ ಸಹಿಸಿಕೊಳ್ಳುತ್ತಿರುವ ಆ ಸೋಮದತ್ತನೂ ಪೂಜನೀಯ. ಕುರುಗಳಲ್ಲಿ ಸೌಮದತ್ತಿಯು ಅತ್ಯಂತ ಅರ್ಹನು. ಅವನು ನನ್ನ ಭ್ರಾತಾ ಮತ್ತು ಸಖನೂ ಕೂಡ. ಮಹೇಷ್ವಾಸ, ರಥಿಗಳಲ್ಲಿ ಉತ್ತಮನಾದ ಅವನ, ಮಂತ್ರಿಗಳೊಡನೆ, ಕುಶಲವನ್ನು ಕೇಳು. ಅಲ್ಲಿ ಇನ್ನೂ ಇತರ ಕುರುಮುಖ್ಯ ಯುವಕರು, ನನ್ನ ಮಕ್ಕಳು, ಮೊಮ್ಮಕ್ಕಳು ಮತ್ತು ಸಹೋದರರು ಇದ್ದಾರೆ. ಯಾವುದೇ ರೀತಿಯಲ್ಲಿ ಅವರನ್ನು ಭೇಟಿಯಾದರೆ ನನ್ನ ಕಡೆಯಿಂದ ಅವರ ಆರೋಗ್ಯವನ್ನು ಕೇಳುತ್ತೀಯಾ? ಪಾಂಡವರ ವಿರುದ್ಧ ಹೋರಾಡಲು ಧೃತರಾಷ್ಟ್ರನು ಒಟ್ಟುಗೂಡಿಸಿರುವ ರಾಜರ - ವಸಾತಿಗಳು, ಶಾಲ್ವಕರು, ಕೇಕಯರು, ಅಂಬಷ್ಠರು, ತ್ರಿಗರ್ತ ಮುಖ್ಯರು, ಪೂರ್ವ-ಉತ್ತರಗಳ ಪ್ರಮುಖರು, ದಕ್ಷಿಣದ ಶೂರರು, ಮತ್ತು ಹಾಗೆಯೇ ಪಶ್ಚಿಮದ ಪಾರ್ವತೇಯರು, ಎಲ್ಲರೂ ಕೇಡನ್ನು

ಬಯಸದವರು, ಶೀಲ-ನಡತೆಯುಳ್ಳವರು, ಅವರೆಲ್ಲರ ಕುಶಲವನ್ನು ಕೇಳು. ಮಾವುತರಿಗೆ, ಅಶ್ವಾರೋಹಿಗಳಿಗೆ, ರಥಿಗಳಿಗೆ, ಸಾದಿನರಿಗೆ, ಪದಾಳುಗಳಿಗೆ, ಅಲ್ಲಿಸೇರಿದ ಆರ್ಯರ ಮಹಾಗುಂಪಿನ ಅವರಿಗೆ ನಾನು ಕುಶಲನಾಗಿದ್ದೇನೆಂದು ಹೇಳು. ಅವರೆಲ್ಲರ ಕುಶಲವನ್ನೂ ಕೇಳು. ಹಾಗೆಯೇ ರಾಜನಿಂದ ನಿಯುಕ್ತರಾಗಿರುವ ಅಮಾತ್ಯರು, ಕಂದಾಯದ ಅಧಿಕಾರಿಗಳು, ಸೇನೆಗಳನ್ನು ನಡೆಸುವವರು, ಖರ್ಚು-ವೆಚ್ಚಗಳನ್ನು ಲೆಖ್ಕಮಾಡುವವರು, ಮತ್ತು ಅವನ ಕಾರ್ಯಗಳ ಕುರಿತು ವಿಶೇಷವಾಗಿ ಚಿಂತಿಸುವವರು. ಗಾಂಧಾರರಾಜ, ಶಕುನಿ, ಪಾರ್ವತೇಯ, ಕಡಿಯುವುದರಲ್ಲಿ ಮತ್ತು ಜೂಜಾಟದಲ್ಲಿ ಅದ್ವಿತೀಯನಾದ ಧಾರ್ತರಾಷ್ಟ್ರನ ಮಾನವನ್ನು ಹೆಚ್ಚಿಸುವ ಆ ಅಪ್ರಮಾಣಿಕನ ಕುಶಲವನ್ನೂ ಕೇಳಬೇಕು. ಸೋಲಿಸಲಸಾಧ್ಯರಾದ ಪಾಂಡವರನ್ನು ಒಂದೇ ರಥದಿಂದ ಗೆಲ್ಲಲು ಉತ್ಸುಕನಾಗಿರುವ, ಮೋಹಿತರನ್ನು ಮೋಹಗೊಳಿಸುವರಲ್ಲಿ ಅದ್ವಿತೀಯನಾದ ಆ ವೈಕರ್ತನನ ಕುಶಲವನ್ನು ಕೇಳಬೇಕು. ನಮ್ಮ ಭಕ್ತನಾಗಿರುವ, ಗುರುವೂ, ಭೃತ್ಯನೂ, ತಂದೆ-ತಾಯಂದಿರೂ, ಸ್ನೇಹಿತನೂ ಆಗಿರುವ ಅಗಾಧಬುದ್ಧಿಯ, ದೀರ್ಘದರ್ಶೀ ಮಂತ್ರಿ ವಿದುರನ ಕುಶಲವನ್ನೂ ಕೇಳಬೇಕು.

ನಮಗೆ ತಾಯಂದಿರೆಂದು ತಿಳಿಯಲ್ಪಟ್ಟಿರುವ, ಗುಣೋಪಪನ್ನ

ವೃದ್ಧಸ್ತ್ರೀಯರು; ಅವರೆಲ್ಲರನ್ನೂ ಒಟ್ಟಿಗೇ ಭೇಟಿಮಾಡಿ ಆ ವೃದ್ಧಸ್ತ್ರೀಯರಿಗೆ ಅಭಿವಂದನೆಗಳನ್ನು ಈ ರೀತಿ ಹೇಳು: "ಯಾರ ಮಕ್ಕಳು ಜೀವಂತರಾಗಿದ್ದಾರೋ ಅವರು ನಿಮ್ಮನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆಯೇ?" ಇದರ ನಂತರ ಅಜಾತಶತ್ರುವು ಪುತ್ರರೊಂದಿಗೆ ಕುಶಲನಾಗಿದ್ದಾನೆ ಎಂದು ಹೇಳಬೇಕು. ನಮ್ಮ ಭಾರ್ಯೆಯರಂತಿರುವವರನ್ನು ತಿಳಿದು ಅವರೆಲ್ಲರ ಕುಶಲವನ್ನೂ ಕೇಳಬೇಕು - "ನೀವೆಲ್ಲರೂ ಚೆನ್ನಾಗಿ ರಕ್ಷಿಸಲ್ಪಟ್ಟಿರುವಿರೇ? ನಿಮ್ಮ ಗೌರವಕ್ಕೆ ಏನೂ ಗಾಯಗಳಾಗಲಿಲ್ಲ ತಾನೇ? ತಮ್ಮ ತಮ್ಮ ಮನೆಗಳಲ್ಲಿ ಅಪ್ರಮತ್ತರಾಗಿ ವಾಸಿಸುತ್ತಿದ್ದಾರೆಯೇ? ನಿಮ್ಮ ಅತ್ತೆಮಾವಂದಿರೊಡನೆ ಚೆನ್ನಾಗಿ, ನೋವಾಗದಂತೆ, ನಡೆದುಕೊಳ್ಳುತ್ತಿರುವಿರಾ? ಪತಿಯಂದಿರಿಗೆ ಅನುಕೂಲವಾಗುವಂತಹ ನಡತೆಯನ್ನು ನಿಮ್ಮಲ್ಲಿ ನೆಲೆಮಾಡಿಸಿಕೊಂಡಿದ್ದೀರಾ?" ಅಲ್ಲಿ ನಮ್ಮ ಸೊಸೆಯಂದಿರಂತಿರುವ ಗುಣೋಪಪನ್ನ, ಕುಲೀನ ಮಕ್ಕಳ ತಾಯಂದಿರಾದ ಯುವತಿಯರನ್ನು ಭೇಟಿಯಾದಾಗ ಯುಧಿಷ್ಠಿರನು ಅವರಿಗೆ ಪ್ರಸನ್ನ ಸಂದೇಶಗಳನ್ನು ಕಳುಹಿಸಿದ್ದಾನೆಂದು ಹೇಳು. ನಮ್ಮ ಮನೆಯ ಹೆಣ್ಣುಮಕ್ಕಳನ್ನು ಆಲಂಗಿಸಿ ನನ್ನ ವತಿಯಿಂದ ಅವರ ಆರೋಗ್ಯದ ಕುರಿತು ಕೇಳಬೇಕು. ಅವರಿಗೆ ನೀನು ಹೇಳಬೇಕು - "ನಿಮ್ಮ

ಪತಿಯಂದಿರು ನಿಮ್ಮೊಡನೆ ಚೆನ್ನಾಗಿರಲಿ. ನೀವು ಕೂಡ ನಿಮ್ಮ ಪತಿಯಂದಿರಿಗೆ ಅನುಕೂಲರಾಗಿರಿ. ಅಲಂಕೃತರಾಗಿ, ಉತ್ತಮ ವಸ್ತ್ರಗಳನ್ನುಟ್ಟು, ಸುಗಂಧಗಳನ್ನು ತೊಟ್ಟು, ಶುಚಿಯಾಗಿದ್ದುಕೊಂಡು ಸುಖವನ್ನು ಭೋಗಿಸಿ. ನಿಮ್ಮ ನೋಟವು ಚೆನ್ನಾಗಿರಲಿ ಮಾತು ಸುಖಕರವಾಗಿರಲಿ.” ನೀನು ಮನೆಯ ಸ್ತ್ರೀಯರ ಕುಶಲವನ್ನು ಕೇಳಬೇಕು.

ಕುರುಗಳ ಆಶ್ರಯದಲ್ಲಿರುವ ದಾಸೀಪುತ್ರರಿಗೂ, ದಾಸರಿಗೂ, ಕುಬ್ಜರಿಗೂ, ಕುಳ್ಳರಿಗೂ ನಾನು ಕುಶಲನಾಗಿದ್ದೇನೆಂದು ಹೇಳು. ಅನಂತರ ಅವರ ಆರೋಗ್ಯದ ಕುರಿತೂ ಕೇಳಬೇಕು. ಅವರು ಹಿಂದೆ ಮಾಡುತ್ತಿದ್ದ ವೃತ್ತಿಗಳಲ್ಲಿಯೇ ತೊಡಗಿದ್ದಾರೆಯೇ ಮತ್ತು ಧಾರ್ತರಾಷ್ಟ್ರರು ಅವರಿಗೆ ಮೊದಲಿನಂತೆಯೇ ಕೊಡುತ್ತಿದ್ದಾರೆಯೇ? ಧೃತರಾಷ್ಟ್ರನು ಪೊರೆಯುವ ಅಂಗಹೀನರಿಗೂ ಕೃಪಣರಿಗೂ, ಗಿಡ್ಡರಿಗೂ, ವೃದ್ಧರಿಗೂ, ಕುರುಡರಿಗೂ, ಮತ್ತು ಕಾಲುಗಳನ್ನು ಕಳೆದುಕೊಂಡು ಕೇವಲ ಕೈಗಳಿಂದ ಕೆಲಸಮಾಡಬಲ್ಲ ಎಲ್ಲರಿಗೂ ನನ್ನ ಕುಶಲತೆಯ ಕುರಿತು ಹೇಳಿ ನಂತರ ಅವರ ಆರೋಗ್ಯದ ಕುರಿತು ಕೇಳಬೇಕು. “ನಿಮ್ಮ ಕೆಟ್ಟ ಜೀವನ ದುಃಖದಿಂದ ಭಯಪಡಬೇಡಿ. ಪರಲೋಕಗಳಲ್ಲಿ ಪಾಪಗಳನ್ನು ಮಾಡಿರಬಹುದು. ಶತ್ರುಗಳನ್ನು ನಿಗ್ರಹಿಸಿ ಸುಹೃದರನ್ನು ಅನುಗ್ರಹಿಸಿ ನಾನು ನಿಮಗೆ ಊಟ ವಸ್ತ್ರಗಳನ್ನಿತ್ತು

ತೃಪ್ತಿಗೊಳಿಸುತ್ತೇನೆ. ಬ್ರಾಹ್ಮಣರಿಂದ ನನಗೆ ಇನ್ನೂ ಉತ್ತಮ ಫಲಗಳು ಬರುವುದಿದೆ. ಭವಿಷ್ಯದಲ್ಲಿ ನನಗೆ ಅವು ದೊರೆಯುತ್ತವೆ ಎನ್ನುವುದರಲ್ಲಿ ಸಂಶಯವಿಲ್ಲ. ನೀವೆಲ್ಲರೂ ಪುನಃ ಯುಕ್ತರೂಪರಾಗುತ್ತೀರಿ. ಅದು ಸಿದ್ಧಿಯಾದಾಗ ನೃಪನಿಗೆ ತಿಳಿಸಿ." ಅನಾಥರಾಗಿರುವ, ದುರ್ಬಲರಾಗಿರುವ, ಸರ್ವಕಾಲದಲ್ಲಿಯೂ ತಮ್ಮ ಕುರಿತೇ ಚಿಂತಿಸುತ್ತಿರುವ, ಮೂಢ ಕೃಪಣರೆಲ್ಲರನ್ನು ಕೂಡ ನಮ್ಮ ಪರವಾಗಿ ಕುಶಲವನ್ನು ಕೇಳು. ನಾನಾ ದಿಕ್ಕುಗಳಿಂದ ಬಂದು ಧಾರ್ತರಾಷ್ಟ್ರರೊಡನೆ ಸೇರಿದ ಇತರರಿಗೂ, ನೀನು ನೋಡಲು ಸಾಧ್ಯವಾದ ಎಲ್ಲರಿಗೂ ಕುಶಲ ಮತ್ತು ಆರೋಗ್ಯದ ಕುರಿತು ಕೇಳು. ಹೀಗೆ ಎಲ್ಲ ದಿಕ್ಕುಗಳಿಂದಲೂ ಬಂದವರ, ಇನ್ನೂ ಬರುತ್ತಿರುವ ರಾಜರಿಗೂ ದೂತರಿಗೂ ಎಲ್ಲರಿಗೂ ಅವರ ಕುಶಲವನ್ನು ಕೇಳಿ ನಂತರ ಅವರಿಗೆ ನಾನು ಕುಶಲನಾಗಿದ್ದೇನೆ ಎಂದು ಹೇಳು.

ಧಾರ್ತರಾಷ್ಟ್ರರಿಗೆ ದೊರಕಿರುವ ಯೋಧಕರಂಥವರು ಬೇರೆ ಯಾರೂ ಭೂಮಿಯಲ್ಲಿಲ್ಲ. ಆದರೆ ಧರ್ಮವು ನಿತ್ಯ ಮತ್ತು ಧರ್ಮವೇ ಶತ್ರುಗಳನ್ನು ನಾಶಪಡಿಸಲು ನನ್ನಲ್ಲಿರುವ ಮಹಾಬಲ. ನನ್ನ ಈ ಮಾತನ್ನು ಧಾರ್ತರಾಷ್ಟ್ರ ಸುಯೋಧನನಿಗೆ ಪುನಃ ಪುನಃ ಕೇಳಿಸಬೇಕು: "ಕುರುಗಳನ್ನು ಸಂಪೂರ್ಣವಾಗಿ ನಾನೇ ಆಳುತ್ತೇನೆ ಎಂದು ನಿನ್ನ ಶರೀರದಲ್ಲಿ ಹೃದಯವನ್ನು ಸುಡುತ್ತಿರುವ ಈ ಆಸೆಗೆ ಯಾವುದೇ

ಅರ್ಥವೂ ವಿವೇಕವೂ ಇಲ್ಲ. ನಿನಗೆ ಅಪ್ರಿಯವಾದುದನ್ನು ಮಾಡುವಂಥವರು ನಾವಲ್ಲ. ಶಕ್ರಪುರವನ್ನು ನಮಗೆ ಹಿಂದಿರುಗಿಸು ಅಥವಾ ಯುದ್ಧಮಾಡು."

## ಧೃತರಾಷ್ಟ್ರ-ದುರ್ಯೋಧನರಿಗೆ ಯುಧಿಷ್ಠಿರನ ಸಂದೇಶ

ಯುಧಿಷ್ಠಿರನು ಹೇಳಿದನು:

"ಸಂಜಯ! ಸಂತರೂ ಅಸಂತರೂ, ಬಾಲರೂ ವೃದ್ಧರೂ, ಅಬಲರೂ ಬಲಶಾಲಿಗಳೂ ಎಲ್ಲರನ್ನೂ ಧಾತನು ವಶದಲ್ಲಿಟ್ಟುಕೊಂಡಿರುತ್ತಾನೆ. ಆ ಸರ್ವಗಳ ಒಡೆಯನೇ, ತನಗಿಷ್ಟವಾದ ಹಾಗೆ, ಬಾಲರಲ್ಲಿ ಪಾಂಡಿತ್ಯವನ್ನೂ ಪಂಡಿತರಲ್ಲಿ ಬಾಲಕತ್ವವನ್ನೂ ನೀಡುತ್ತಾನೆ. ಅವನು ಮೊದಲೇ ಬೀಜವನ್ನು ಬಿತ್ತುವಾಗಲೇ ಎಲ್ಲವನ್ನೂ ಕೊಟ್ಟುಬಿಟ್ಟಿರುತ್ತಾನೆ. ಉಪದೇಶವನ್ನು ಸಾಕುಮಾಡೋಣ. ಇದ್ದದ್ದನ್ನು ಇದ್ದಹಾಗೆ ನೀನು ಹೇಳುತ್ತೀಯೆ. ಈಗ ನಾವು ಅನ್ಯೋನ್ಯರಲ್ಲಿ ವಿಷಯವನ್ನು ಚರ್ಚಿಸಿ ತೃಪ್ತರಾಗಿದ್ದೇವೆ. ಕುರುಗಳ ಮಹಾಬಲ ಧೃತರಾಷ್ಟ್ರನಲ್ಲಿಗೆ ಹೋಗಿ, ಪಾದಗಳಿಗೆ ನಮಸ್ಕರಿಸಿ ನಂತರ ಅವನ ಆರೋಗ್ಯವನ್ನು ವಿಚಾರಿಸು. ಅವನು ಕುರುಗಳ ಮಧ್ಯದಲ್ಲಿ ಕುಳಿತಿರುವಾಗ ಅವನಿಗೆ ಹೇಳು: "ರಾಜನ್! ಪಾಂಡವರು ವೀರ್ಯದಿಂದ ಸುಖವಾಗಿ ಜೀವಿಸಿದ್ದಾರೆ. ನಿನ್ನ ಪ್ರಸಾದಿಂದ ಅವರು ಬಾಲಕರಿದ್ದಾಗಲೇ ರಾಜ್ಯವನ್ನು ಪಡೆದರು. ಮೊದಲು ಅವರನ್ನು ರಾಜ್ಯದಲ್ಲಿ

ಸ್ಥಾಪಿಸಿ ಈಗ ಅವರನ್ನು ನಿರ್ಲಕ್ಷಿಸಿ ನಾಶಗೊಳಿಸಬೇಡ. ಇದ್ದುದೆಲ್ಲವನ್ನೂ ತನಗೊಬ್ಬನಿಗಾಗಿ ಮಾತ್ರ ಇಟ್ಟುಕೊಳ್ಳಲು ಯಾರೂ ಅರ್ಹನಿಲ್ಲ. ಅಪ್ಪಾ! ನಾವು ಒಟ್ಟಾಗಿ ಜೀವಿಸೋಣ. ದ್ವೇಷಿಗಳ ವಶದಲ್ಲಿ ಹೋಗಬೇಡ!"

ಅನಂತರ ಭಾರತರ ಪಿತಾಮಹ ಶಾಂತನವ ಭೀಷ್ಮನಿಗೆ ನನ್ನ ಹೆಸರನ್ನು ಹೇಳಿ ತಲೆಬಾಗಿ ನಮಸ್ಕರಿಸಬೇಕು. ನಮ್ಮ ಪಿತಾಮಹನಿಗೆ ನಮಸ್ಕರಿಸಿ ಹೇಳಬೇಕು: "ಹಿಂದೆ ನೀನು ಶಂತನುವಿನ ವಂಶವು ಮುಳುಗುತ್ತಿರುವಾಗ ಅದನ್ನು ಪುನಃ ಉದ್ಧರಿಸಿದೆ. ಪಿತಾಮಹ! ಈಗ ನಿನ್ನದೇ ವಿಚಾರದಂತೆ ನಿನ್ನ ಮೊಮ್ಮಕ್ಕಳು ಪರಸ್ಪರ ಪ್ರೀತಿಯಿಂದ ಬದುಕಿರುವಂತೆ ಮಾಡು." ಅನಂತರ ಕುರುಗಳ ಮಂತ್ರಧಾರಿಣಿ ವಿದುರನಿಗೆ ಹೇಳಬೇಕು: "ಸೌಮ್ಯ! ಯುಧಿಷ್ಠಿರನ ಹಿತವನ್ನು ಬಯಸಿ ಅಯುದ್ಧದ ಮಾತನಾಡು!" ಅನಂತರ ಕುರುಗಳ ಮಧ್ಯೆ ಕುಳಿತಿರುವ ರಾಜಪುತ್ರ, ಅಮರ್ಷಣ, ಸುಯೋಧನನನ್ನು ಪುನಃ ಪುನಃ ಪುಸಲಾಯಿಸುತ್ತಾ ಹೇಳಬೇಕು: "ಕುರುಗಳನ್ನು ವಧಿಸಬಾರದು ಎಂದು ಏಕಾಂಗಿಯಾಗಿ ಸಭಾಗತಳಾಗಿದ್ದ ಕೃಷ್ಣೆಯನ್ನು ನಾನು ಉಪೇಕ್ಷಿಸಿ ನೋಡುತ್ತಿದ್ದ ಆ ದುಃಖವನ್ನೂ ನಾನು ಸಹಿಸಿಕೊಳ್ಳುತ್ತೇನೆ. ಈ ರೀತಿಯಲ್ಲಿ ಅದರ ಮೊದಲು ಮತ್ತು ನಂತರ ತಂದೊಡ್ಡಿದ ಕ್ಲೇಶಗಳನ್ನೂ ಪಾಂಡವರು, ಬಲಶಾಲಿಗಳಾಗಿದ್ದರೂ, ಸಹಿಸಿಕೊಂಡಿದ್ದಾರೆ

ಎನ್ನುವುದೆಲ್ಲವನ್ನೂ ಕುರುಗಳು ತಿಳಿದಿದ್ದಾರೆ. ಸೌಮ್ಯ! ನೀನು ನಮ್ಮನ್ನು ಜಿಂಕೆಯ ಚರ್ಮಗಳನ್ನು ತೊಡಿಸಿ ಹೊರಗಟ್ಟಿದೆ. ಆ ದುಃಖವನ್ನು ಕೂಡ ಕುರುಗಳನ್ನು ಕೊಲ್ಲಬಾರದೆಂದು ಸಹಿಸಿಕೊಳ್ಳುತ್ತೇವೆ. ನಿನ್ನ ಅನುಮತಿಯಂತೆ ದುಃಶಾಸನನು ಸಭೆಯನ್ನು ಅತಿಕ್ರಮಿಸಿ ಕೃಷ್ಣೆಯ ಕೂದಲನ್ನು ಹಿಡಿದು ಎಳೆದುತಂದ. ಅದನ್ನೂ ನಾವು ಕ್ಷಮಿಸುತ್ತೇವೆ. ಆದರೆ ಯಥೋಚಿತವಾದ ನಮ್ಮ ಭಾಗವು ನಮಗೆ ದೊರೆಯಬೇಕು. ಪರರ ಸ್ವತ್ತಿನ ಮೇಲಿರುವ ನಿನ್ನ ಆಸೆಬುರುಕ ಬುದ್ಧಿಯನ್ನು ಹಿಂದೆ ತೆಗೆದುಕೋ! ಹಾಗಿದ್ದರೆ ಮಾತ್ರ ಶಾಂತಿಯಾಗಿರುತ್ತದೆ ಮತ್ತು ಪರಸ್ಪರರಲ್ಲಿ ಪ್ರೀತಿಯಿರುತ್ತದೆ. ಶಾಂತಿಯನ್ನು ಬಯಸುವ ನಮಗೆ ರಾಜ್ಯದ ಒಂದು ಮೂಲೆಯನ್ನಾದರೂ ಕೊಡು. ಕುಶಸ್ಥಲ, ವೃಕಸ್ಥಲ, ಆಸಂದೀ, ವಾರಣಾವತ ಮತ್ತು ಐದನೆಯದಾಗಿ ನೀನು ಬಯಸಿದ ಯಾವುದಾದರೂ ಒಂದು ತುಂಡನ್ನು ಕೊಡು. ಸುಯೋಧನ! ಹೀಗೆ ಐದು ಸಹೋದರರಿಗೆ ಐದು ಗ್ರಾಮಗಳನ್ನು ಕೊಡು. ಇದರಿಂದ ನಮ್ಮ ಮತ್ತು ನಮ್ಮ ದಾಯಾದಿಗಳ ನಡುವೆ ಶಾಂತಿಯು ನೆಲೆಸುತ್ತದೆ. ಸಹೋದರರು ಸಹೋದರರನ್ನು ಸೇರಲಿ, ತಂದೆಯಂದಿರು ಮಕ್ಕಳನ್ನು ಕೂಡಲಿ. ಪಾಂಚಾಲರು ಕುರುಗಳೊಂದಿಗೆ ಸೇರಿ ನಲಿದಾಡಲಿ. ಕುರುಪಾಂಚಾಲರು ನಾಶವಾಗದೇ ಇರುವುದನ್ನು ನೋಡಬೇಕು ಎನ್ನುವುದೇ ನನ್ನ ಆಸೆ. ಎಲ್ಲರೂ

ಸುಮನಸ್ಕರಾಗಿ ಶಾಂತಿಯಿಂದ ಇರೋಣ !”

ಸಂಜಯ ! ನಾನು ಶಾಂತಿಗೆ ಹೇಗೋ ಹಾಗೆ ಯುದ್ಧಕ್ಕೂ ತಯಾರಿದ್ದೇನೆ. ಧರ್ಮ-ಅರ್ಥಗಳೆರಡನ್ನೂ ಬಯಸುತ್ತೇನೆ. ನಾನು ಮೃದುವಾಗಿರಬಲ್ಲೆ, ದಾರುಣವಾಗಬಲ್ಲೆ ಕೂಡ.”

## ಸಂಜಯನು ಹಸ್ತಿನಾಪುರಕ್ಕೆ ಹಿಂದಿರುಗಿದ ರಾತ್ರಿಯೇ ಧೃತರಾಷ್ಟ್ರನನ್ನು ಭೇಟಿಮಾಡಿದುದು

ಆಗ ಮಹಾತ್ಮ ಧೃತರಾಷ್ಟ್ರನು ವಿಧಿಸಿದ ಎಲ್ಲ ಕೆಲಸಗಳನ್ನೂ ಪೂರೈಸಿ, ಸಂಜಯನು ಪಾಂಡವರಿಂದ ಅನುಜ್ಞೆಯನ್ನು ಪಡೆದು ಹೊರಟನು. ಹಾಸ್ತಿನಪುರವು ಹತ್ತಿರವಾದ ಕೂಡಲೇ ಶೀಘ್ರವಾಗಿ ಪ್ರವೇಶಿಸಿ, ಅಂತಃಪುರವನ್ನು ತಲುಪಿ, ದ್ವಾರದಲ್ಲಿ ನಿಂತಿರುವವನಿಗೆ ಹೇಳಿದನು:

“ದ್ವಾರಪಾಲಕನೇ ! ನಾನು ಪಾಂಡವರ ಬಳಿಯಿಂದ ಬಂದಿದ್ದೇನೆ ಎಂದು ಧೃತರಾಷ್ಟ್ರನಿಗೆ ಹೇಳು. ರಾಜನು ಎಚ್ಚರವಾಗಿದ್ದರೆ ಮಾತ್ರ, ನಾನು ಒಳಬರಲು ಬಯಸುತ್ತೇನೆ ಎಂದು ಹೇಳಬೇಕು.”

ದ್ವಾರಪಾಲಕನು ಹೇಳಿದನು:

“ಭೂಮಿಪತಿಗೆ ನಮಸ್ಕಾರ ! ನಿನ್ನನ್ನು ಕಾಣಲು ಸಂಜಯನು ದ್ವಾರದಲ್ಲಿ ನಿಂತಿದ್ದಾನೆ. ಪಾಂಡವರ ಕಡೆಯಿಂದ ಸಂದೇಶವನ್ನು ತೆಗೆದುಕೊಂಡು ಬಂದಿದ್ದಾನೆ. ನಾನೇನು

ಮಾಡಬೇಕೆಂದು ಆಜ್ಞಾಪಿಸು.”

ಧೃತರಾಷ್ಟ್ರನು ಹೇಳಿದನು:

“ಅವನಿಗೆ ಹೇಳು - ನಾನು ಸುಖಿಯಾಗಿದ್ದೇನೆ ಮತ್ತು ಈಗ ಸಮಯವಿದೆ. ಅವನು ಪ್ರವೇಶಿಸಲಿ. ಸಂಜಯನಿಗೆ ಸ್ವಾಗತ. ನಿನ್ನನ್ನು ಯಾವ ಸಮಯದಲ್ಲಿಯೂ ಕಾಣಬಯಸುತ್ತೇನೆ. ಪ್ರವೇಶವು ಎಂದೂ ನಿಷೇದವಾಗಿರದ ಅವನು ಏಕೆ ಹೊರಗೆ ನಿಂತಿದ್ದಾನೆ?”

ಆಗ ನೃಪನ ಅನುಮತಿಯಂತೆ ಸೂತಪುತ್ರನು ವಿಶಾಲ ಅರಮನೆಯನ್ನು ಪ್ರವೇಶಿಸಿ, ಪ್ರಾಜ್ಞರೂ, ಶೂರರೂ ಮತ್ತು ಆರ್ಯರಿಂದ ರಕ್ಷಿಸಲ್ಪಟ್ಟ ಸಿಂಹಾಸನಸ್ಥ ವೈಚಿತ್ರವೀರ್ಯ ಪಾರ್ಥಿವನ ಬಳಿಸಾರಿ ಕೈಮುಗಿದು ಹೇಳಿದನು:

“ಭೂಮಿಪತೇ ನಮಸ್ಕಾರ! ನಾನು ಸಂಜಯ! ಪಾಂಡವರಲ್ಲಿಗೆ ಹೋಗಿ ಬಂದಿದ್ದೇನೆ. ನಿನಗೆ ಅಭಿವಂದಿಸಿ ಮನಸ್ವೀ ಪಾಂಡುಪುತ್ರ ಯುಧಿಷ್ಠಿರನು ಕುಶಲವನ್ನೂ ಕೇಳಿದ್ದಾನೆ. ಅವನು ಪ್ರೀತಿಯಿಂದ ನಿನ್ನ ಮಕ್ಕಳನ್ನು ಕೇಳಿದ್ದಾನೆ. ಮತ್ತು ನೀನು ನಿನ್ನ ಮಕ್ಕಳು, ಮೊಮ್ಮಕ್ಕಳು, ಆಪ್ತರು, ಸ್ನೇಹಿತರು, ಸಚಿವರು ಮತ್ತು ನಿನ್ನನ್ನು ಅವಲಂಬಿಸಿರುವ ಎಲ್ಲರೊಡನೆ ಸಂತೋಷದಿಂದಿರುವೆಯಾ ಎಂದೂ ಕೇಳಿದ್ದಾನೆ.”

ಧೃತರಾಷ್ಟ್ರನು ಹೇಳಿದನು:

“ಮಗೂ ಸಂಜಯ! ನಾನು ನಿನ್ನಲ್ಲಿ ಕೇಳುತ್ತಿದ್ದೇನೆ - ಅಜಾತಶತ್ರು ಪಾರ್ಥನು ಸುಖದಿಂದ ಇದ್ದಾನೆಯೇ? ರಾಜನು ಪುತ್ರರೊಂದಿಗೆ, ಅಮಾತ್ಯರೊಂದಿಗೆ, ಕೌರವರ ಅನುಜರೊಂದಿಗೆ ಕುಶಲನಾಗಿದ್ದಾನೆ ತಾನೇ?”

ಸಂಜಯನು ಹೇಳಿದನು:

“ಅಮಾತ್ಯರೊಂದಿಗೆ ಪಾಂಡುಪುತ್ರನು ಕುಶಲನಾಗಿದ್ದಾನೆ. ಹಿಂದೆ ತನ್ನದಾಗಿಸಿಕೊಂಡಿದ್ದುದನ್ನು ಪಡೆಯಲು ಬಯಸುತ್ತಾನೆ. ಕೆಟ್ಟದ್ದನ್ನು ಏನನ್ನೂ ಮಾಡದೆಯೇ ಅವನು ಧರ್ಮ ಮತ್ತು ಅರ್ಥಗಳನ್ನು ಅರಸುತ್ತಾನೆ. ಅವನು ಮನಸ್ವೀ, ಬಹುಶ್ರುತ, ದೃಷ್ಟಿವಂತ ಮತ್ತು ಶೀಲವಂತ. ಆ ಪಾಂಡವನಿಗೆ ಅಹಿಂಸೆಯು ಪರಮ ಧರ್ಮ. ವಿತ್ತವನ್ನು ಒಟ್ಟುಮಾಡುವುದಕ್ಕಿಂತಲೂ ಅದು ಪರಮ ಧರ್ಮವೆಂದು ಅವನ ಮತ. ಪಾರ್ಥನು ಸುಖಪ್ರಿಯನಲ್ಲ, ಧರ್ಮಹೀನನಲ್ಲ. ಅವನ ಬುದ್ಧಿಯು ಏಳಿಗೆಯ ಮುಖವಾಗಿದೆ. ದಾರಕ್ಕೆ ಕಟ್ಟಲ್ಪಟ್ಟ ಮರದ ಗೊಂಬೆಯಂತೆ ಪುರುಷನು ಇನ್ನೊಂದರ ಕೈಯಲ್ಲಿರುತ್ತಾನೆ. ಪಾಂಡವನ ಈ ಕಷ್ಟಗಳನ್ನು ನೋಡಿ ಕರ್ಮವು ಮನುಷ್ಯನಿಗಿಂತಲೂ ದೊಡ್ಡದಾದ ದೈವ ಎಂದೆನಿಸುತ್ತದೆ.

ನಿನ್ನ ಈ ಅತಿ ಪಾಪವನ್ನು ತರುವ, ಹೇಳಲಸಾಧ್ಯ ಘೋರರೂಪಿನ ಕರ್ಮದೋಷವನ್ನು ನೋಡಿದರೆ ಎಲ್ಲಿಯವರೆಗೆ ಮನುಷ್ಯನು ತೋರುವಿಕೆಗೆ ಇರುವುದನ್ನು ಬಯಸುತ್ತಾನೋ ಅಲ್ಲಿಯ ವರೆಗೆ ಅವನಿಗೆ ಪ್ರಶಂಸೆಯು ದೊರೆಯುತ್ತದೆ. ಅಜೀರ್ಣವಾದ ಅಸಮರ್ಥವಾದ ಚರ್ಮವನ್ನು ಸರ್ಪವು ತೊರೆಯುವಂತೆ ಆ ಧೀರ ಅಜಾತಶತ್ರುವಾದರೋ ಪಾಪವನ್ನು ತೊರೆದು ಹೊಳೆಯುತ್ತಿದ್ದಾನೆ. ಯುಧಿಷ್ಠಿರನು ಪಾಪವನ್ನು ನಿನಗೆ ಬಿಟ್ಟಿದ್ದಾನೆ. ಧರ್ಮಾರ್ಥಯುಕ್ತವಲ್ಲದ, ಆರ್ಯರ ನಡತೆಗೆ ವಿರೋಧವಾಗಿರುವ ನಿನ್ನ ಕೆಲಸವನ್ನು ನೀನೇ ತಿಳಿದುಕೋ. ಕೇವಲ ಕೆಟ್ಟ ಹೆಸರನ್ನು ನೀನು ಗಳಿಸಿದ್ದೀಯೆ. ಇದನ್ನು ನೀನು ಅಳಿಸಲಾರೆ. ಇದು ನಿನ್ನೊಡನೆಯೇ ಬರುತ್ತದೆ. ಇಂದು ನೀನು ಪುತ್ರರ ವಶಕ್ಕೆ ಬಂದು ಅವರ ವಿನಾ ಈ ಸಂಶಯಯುಕ್ತವಾದ ಸಂಪತ್ತನ್ನು ಭೋಗಿಸಲು ಆಶಿಸುತ್ತಿರುವೆ. ನಿನ್ನ ಈ ಅಧರ್ಮದ ವಿಷಯವು ಮಹಾ ಪೃಥ್ವಿಯೆಲ್ಲೆಲ್ಲಾ ಹರಡಿದೆ. ಇದು ನಿನಗೆ ಸಮನಾದುದಲ್ಲ.

ತಿಳುವಳಿಕೆ ಇಲ್ಲದಿರುವವನಿಗೆ, ಕೆಟ್ಟ ಕುಲದಲ್ಲಿ ಹುಟ್ಟಿದವನಿಗೆ, ಕ್ರೂರನಾದವನಿಗೆ, ಬಹುಕಾಲ ವೈರವನ್ನು ಪ್ರತಿಪಾದಿಸುವವನಿಗೆ, ಕ್ಷತ್ರಿಯ ವಿದ್ಯೆಗಳಲ್ಲಿ ಅಧೀರನಾದವನಿಗೆ, ಈ ಗುರುತುಗಳಿರುವವನಿಗೆ ಮತ್ತು

ಬುದ್ಧಿಯಿಲ್ಲದಿರುವ ಅವೀರ್ಯ ಅಶಿಕ್ಷಿತನಿಗೆ ಕಷ್ಟಗಳನ್ನು ಎದುರಿಸಲು ಸಾಧ್ಯವಾಗಲಾರದು. ಉತ್ತಮ ಕುಲದಲ್ಲಿ ಹುಟ್ಟುವುದು, ಧರ್ಮವಂತನಾಗಿರುವುದು, ಯಶಸ್ವಿಯಾಗುವುದು, ಪ್ರಸಿದ್ಧನಾಗುವುದು, ಸುಖಜೀವಿಯಾಗಿರುವುದು, ಯತಾತ್ಮನಾಗಿರುವುದು, ಧರ್ಮ-ಅರ್ಥಗಳಲ್ಲಿ ಸಿಲುಕಿಕೊಂಡಿರುವುವವನ್ನು ಬಿಡಿಸಿಕೊಳ್ಳುವುದು ಇವೆಲ್ಲವುಗಳಲ್ಲಿ ಅದೃಷ್ಟವಲ್ಲದೆ ಬೇರೆ ಯಾವುದರ ಕೈವಾಡವಿದೆ? ಬುದ್ಧಿವಂತರಾದ ಹಿರಿಯರಿಂದ ಸಲಹೆಗಳನ್ನು ಪಡೆದ, ಧರ್ಮ-ಅರ್ಥಗಳಲ್ಲಿ ಪ್ರಣೀತನಾದ, ಸರ್ವಮಂತ್ರಗಳಿಂದಲೂ ರಹಿತನಾಗಿರದ, ಅಮೂಢನು ಹೇಗೆ ತಾನೇ ಕ್ರೂರ ಕೃತ್ಯವನ್ನು ಮಾಡಬಹುದು? ಇಲ್ಲಿ ಸೇರಿರುವ ಮಂತ್ರವಿದರು ನಿನ್ನನ್ನೇ ಬೆಂಬಲಿಸುತ್ತಿದ್ದಾರೆ ಮತ್ತು ನಿನ್ನ ಕೆಲಸದಲ್ಲಿಯೇ ನಿತ್ಯವೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಅವರ ಈ ಬಲವಾದ ನಿಶ್ಚಯದಿಂದ ಕುರುಕ್ಷಯವು ನಡೆಯುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ. ಅಜಾತಶತ್ರುವು ಪಾಪದಿಂದ ಪಾಪವನ್ನು ಗೆಲ್ಲಲು ಅಕಾಲಿಕವಾಗಿ ಕುರುಗಳನ್ನು ನಾಶಪಡಿಸಬೇಕಾಗುವುದು. ನಿನಗೆ ಪಾಪವನ್ನೆಲ್ಲ ಬಿಟ್ಟುಕೊಟ್ಟು ಲೋಕದಲ್ಲಿ ನಿನ್ನ ನಿಂದೆಯೇ ನಡೆಯುವಂತೆ ಆಗುತ್ತದೆ. ದೇವತೆಗಳು ಪಾರ್ಥನನ್ನು ಪರಲೋಕಕ್ಕೆ ಕರೆಯಿಸಿಕೊಂಡು ತೋರಿಸಿ ಸನ್ಮಾನಿಸಿದರು ಎನ್ನುವುದಕ್ಕೆ

ಬೇರೆ ಏನಾದರೂ ಅರ್ಥವಿದೆಯೇ? ಅದು ಮನುಷ್ಯನು ಮಾಡಿದುದಲ್ಲ ಎನ್ನುವುದರಲ್ಲಿ ಸಂಶಯವೇ ಇಲ್ಲ. ಕರ್ಮ ಮತ್ತು ಕೃತನ ಈ ಗುಣಗಳನ್ನು, ಭಾವಾಭಾವಗಳನ್ನು, ವರ್ತಮಾನ ಮತ್ತು ಹಿಂದೆ ನಡೆದುದವುಗಳನ್ನು ನೋಡಿಯೇ ರಾಜಾ ಬಲಿಯು ಆದಿ ಅಂತ್ಯಗಳನ್ನು ತಿಳಿಯಲಾರದೇ ಇವಕ್ಕೆ ಕಾಲವಲ್ಲದೇ ಬೇರೆ ಏನೂ ಅಲ್ಲ ಎಂದು ಅಭಿಪ್ರಾಯಪಟ್ಟನು. ಕಣ್ಣು, ಕಿವಿ, ಮೂಗು, ಚರ್ಮ ಮತ್ತು ನಾಲಿಗೆಗಳು ಜಂತುವಿನ ಜ್ಞಾನದ ಬಾಗಿಲುಗಳು. ಆಸೆಗಳು ಕ್ಷಯವಾಗಲು ಇವು ತಮ್ಮಷ್ಟಕ್ಕೆ ತಾವೇ ಸುಖದಿಂದ ಇರುತ್ತವೆ. ಆದುದರಿಂದ ಇವುಗಳನ್ನು ವ್ಯಥೆಯಿಲ್ಲದೇ ದುಃಖಪಡೆಯದೇ ನಿಯಂತ್ರಣದಲ್ಲಿಟ್ಟುಕೊಳ್ಳಬೇಕು. ಪುರುಷನು ಕರ್ಮಗಳನ್ನು ಸರಿಯಾಗಿ ಮಾಡಿದರೆ ಬೇಕಾದ ಫಲಿತಾಂಶವನ್ನು ಪಡೆಯಬಹುದು ಎಂದು ಹೇಳುತ್ತಾರೆ. ತಂದೆ-ತಾಯಿಗಳ ಕರ್ಮದಿಂದ ಹುಟ್ಟಿದವನು ವಿಧಿವತ್ತಾದ ಆಹಾರಸೇವನೆಯಿಂದ ಬೆಳೆಯುತ್ತಾನೆ. ಪ್ರಿಯವಾದುದು, ಅಪ್ರಿಯವಾದುದು, ಸುಖ, ದುಃಖ, ನಿಂದನೆ ಮತ್ತು ಪ್ರಶಂಸೆಗಳು ಇವನನ್ನು ಹಿಂಬಾಲಿಸುತ್ತವೆ. ಅಪರಾಧಮಾಡಿದಾಗ ಇತರರು ಇವನನ್ನು ಝರಿಯುತ್ತಾರೆ. ಒಳ್ಳೆಯದಾಗಿ ನಡೆದುಕೊಂಡರೆ ಅವನನ್ನೇ ಜನರು ಪ್ರಶಂಸಿಸುತ್ತಾರೆ. ಭಾರತರಲ್ಲಿನ ಮನಸ್ತಾಪಕ್ಕೆ ನಾನು ನಿನ್ನನ್ನೇ

ಬೈಯ್ಯುತ್ತೇನೆ. ಇದು ನಿಜವಾಗಿಯೂ ನಿನ್ನ ಮಕ್ಕಳ ಅಂತ್ಯವೆನಿಸಿಕೊಳ್ಳುತ್ತದೆ. ನಿನ್ನ ಕರ್ಮಾಪರಾಧದಿಂದ ಒಣಹುಲ್ಲಿನಂತೆ ಕುರುಗಳು ಸುಟ್ಟುಹೋಗದೇ ಇರಲಿ. ಈ ಸರ್ವಲೋಕದಲ್ಲಿ ನೀನೊಬ್ಬನೇ ಹುಟ್ಟಿದ ಮಕ್ಕಳ ವಶನಾಗಿ ಹೋಗಿದ್ದೀಯೆ. ದ್ಯೂತಕಾಲದಲ್ಲಿ ನೀನು ಕಾಮಾತ್ಮನನ್ನು ಪ್ರಶಂಸಿಸಿದೆ. ಶಾಂತಿಯ ಹೊರತಾಗಿ ಬೇರೆ ಏನೂ ಇದರಿಂದ ಬಿಡುಗಡೆಯು ಕಾಣುವುದಿಲ್ಲ. ಅನಾಪ್ತರನ್ನು ಸ್ವೀಕರಿಸಿ ಮತ್ತು ಹಾಗೆಯೇ ಆಪ್ತರನ್ನು ದೂರವಿಡಿಸಿ ದುರ್ಬಲನಾಗಿ ನೀನು ಈ ಅಪಾರ ಸಮೃದ್ಧ ಭೂಮಿಯನ್ನು ರಕ್ಷಿಸಲು ಅಸಮರ್ಥನಾಗಿದ್ದೀಯೆ.

ರಥವೇಗದಿಂದ ತುಂಬಾ ಬಳಲಿದ್ದೇನೆ. ಮಲಗಿಕೊಳ್ಳಲು ನಿನ್ನ ಅನುಮತಿಯನ್ನು ಕೇಳುತ್ತಿದ್ದೇನೆ. ಬೆಳಿಗ್ಗೆ ಸಭೆಯಲ್ಲಿ ಕುರುಗಳು ಒಟ್ಟಿಗೇ ಅಜಾತಶತ್ರುವಿನ ಮಾತನ್ನು ಕೇಳುವರು."

## ವಿದುರ ನೀತಿ

ಮಹಾಪ್ರಾಜ್ಞ, ಮಹೀಪತಿ, ಧೃತರಾಷ್ಟ್ರನು ದ್ವಾರದಲ್ಲಿ ನಿಂತಿದ್ದವನಿಗೆ ಹೇಳಿದನು:

"ವಿದುರನನ್ನು ಕಾಣಲು ಬಯಸುತ್ತೇನೆ. ಅವನನ್ನು ಬೇಗನೆ ಇಲ್ಲಿಗೆ ಕರೆದು ತಾ!"

ಧೃತರಾಷ್ಟ್ರನಿಂದ ಕಳುಹಿಸಲ್ಪಟ್ಟ ದೂತನು ಕ್ಷತ್ತನಿಗೆ ಹೇಳಿದನು:

“ಮಹಾಪ್ರಾಜ್ಞ ಮಹಾರಾಜ ಒಡೆಯನು ನಿನ್ನನ್ನು ನೋಡಲು ಬಯಸುತ್ತಾನೆ.”

ಇದನ್ನು ಕೇಳಿದ ವಿದುರನು ರಾಜನಿವೇಶನವನ್ನು ತಲುಪಿ ದ್ವಾರಪಾಲಕನಿಗೆ ಹೇಳಿದನು:

“ಧೃತರಾಷ್ಟ್ರನಿಗೆ ನಾನು ಬಂದಿರುವುದನ್ನು ತಿಳಿಸು!”

ದ್ವಾರಪಾಲಕನು ಹೇಳಿದನು:

“ರಾಜೇಂದ್ರ! ನಿನ್ನ ಆಜ್ಞೆಯಂತೆ ವಿದುರನು ನಿಮ್ಮ ಪಾದಗಳನ್ನು ಕಾಣಲು ಬಂದಿದ್ದಾನೆ. ಏನು ಮಾಡಬೇಕೆಂದು ಆಜ್ಞಾಪಿಸಿ!”

ಧೃತರಾಷ್ಟ್ರನು ಹೇಳಿದನು:

“ಮಹಾಪ್ರಾಜ್ಞ ದೀರ್ಘದರ್ಶಿ ವಿದುರನು ಒಳಬರಲಿ. ವಿದುರನನ್ನು ಕಾಣಲು ನನಗೆ ಅಕಾಲವೆನ್ನುವುದೇ ಇಲ್ಲ.”

ದ್ವಾರಪಾಲಕನು ಹೇಳಿದನು:

“ಕ್ಷತ್ತ! ಧೀಮತ ಮಹಾರಾಜನ ಅಂತಃಪುರವನ್ನು ಪ್ರವೇಶಿಸು! ನಿನ್ನನ್ನು ನೋಡಲು ಅವನಿಗೆ ಅಕಾಲವೆನ್ನುವುದೇ ಇಲ್ಲ ಎಂದು ರಾಜನು ನನಗೆ ಹೇಳಿದ್ದಾನೆ.”

ಆಗ ವಿದುರನು ಧೃತರಾಷ್ಟ್ರನ ನಿವೇಶನವನ್ನು ಪ್ರವೇಶಿಸಿ ಚಿಂತೆಯಲ್ಲಿದ್ದ ನರಾಧಿಪನಿಗೆ ಕೈಮುಗಿದು ಈ ಮಾತನ್ನು ಹೇಳಿದನು:

“ಮಹಾಪ್ರಾಜ್ಞ! ನಾನು ವಿದುರ! ನಿನ್ನ ಆಜ್ಞೆಯಂತೆ

ಬಂದಿದ್ದೇನೆ. ಯಾವುದೇ ಕಾರ್ಯವನ್ನು ನಡೆಸಬೇಕಾದರೆ ನಾನಿಲ್ಲಿ ಇದ್ದೇನೆ. ಅಪ್ಪಣೆ ಕೊಡು!”

ಧೃತರಾಷ್ಟ್ರನು ಹೇಳಿದನು:

“ವಿದುರ! ಸಂಜಯನು ಬಂದು ನನಗೆ ಬೈದು ಹೋಗಿದ್ದಾನೆ. ನಾಳೆ ಅವನು ಸಭಾಮಧ್ಯದಲ್ಲಿ ಅಜಾತಶತ್ರುವಿನ ಸಂದೇಶವನ್ನು ಹೇಳುವವನಿದ್ದಾನೆ. ಕುರುವೀರನ ಸಂದೇಶವೇನೆಂದು ಇಂದು ನನಗೆ ತಿಳಿಯಲಿಕ್ಕಾಗಲಿಲ್ಲ. ಆದುದರಿಂದ ನನ್ನ ದೇಹವು ಸುಡುತ್ತಿದೆ. ನಿದ್ದೆಬರುತ್ತಿಲ್ಲ. ಸುಡುತ್ತಿರುವ ಮತ್ತು ನಿದ್ದೆಮಾಡಲಿಕ್ಕಾಗದೇ ಇರುವವನಿಗೆ ಒಳ್ಳೆಯದು ಏನಾದರೂ ಇದೆಯೇ ಹೇಳು. ಅಯ್ಯಾ! ನೀನು ಧರ್ಮ ಮತ್ತು ಅರ್ಥಗಳಲ್ಲಿ ಕುಶಲನಾಗಿದ್ದೀಯೆ. ಸಂಜಯನು ಪಾಂಡವರ ಕಡೆಯಿಂದ ಮರಳಿ ಬಂದಾಗಿನಿಂದ ನನ್ನ ಮನಸ್ಸಿಗೆ ಶಾಂತಿಯಿಲ್ಲದಂತಾಗಿದೆ. ಅವನು ಏನು ಹೇಳುತ್ತಾನೋ ಎಂಬ ಚಿಂತೆಯಲ್ಲಿ ಇಂದು ನನ್ನ ಸರ್ವೇಂದ್ರಿಯಗಳೂ ಕೆಟ್ಟು ಹೋಗಿವೆ.”

ವಿದುರನು ಹೇಳಿದನು:

“ಪ್ರಜಾಗರವು (ನಿದ್ದೆಬಾರದಿರುವುದು) ದುರ್ಬಲನನ್ನು, ಬಡವನನ್ನು, ಕಳೆದುಕೊಂಡವನನ್ನು, ಕಾಮಿಯನ್ನು, ಮತ್ತು ಕಳ್ಳನನ್ನು ಆವರಿಸುತ್ತದೆ. ನರಾಧಿಪ! ಇವುಗಳಲ್ಲಿ ಯಾವ

ಮಹಾ ದೋಷವೂ ನಿನ್ನನ್ನು ಮುಟ್ಟಿಲ್ಲ ತಾನೇ? ಪರವಿತ್ತವನ್ನು ಕಸಿದುಕೊಂಡು ಪರಿತಪಿಸುತ್ತಿಲ್ಲ ತಾನೇ?”

ಧೃತರಾಷ್ಟ್ರನು ಹೇಳಿದನುಃ

“ನಿನ್ನಿಂದ ಧರ್ಮವತ್ತಾದ ಪರಮ ಶ್ರೇಯಸ್ಕರ ಮಾತನ್ನು ಕೇಳಬಯಸುತ್ತೇನೆ. ಈ ರಾಜವಂಶದಲ್ಲಿ ಪ್ರಾಜ್ಞರಿಂದ ಸಮ್ಮತಿಯನ್ನು ಪಡೆದವನು ನೀನೊಬ್ಬನೇ.”

ವಿದುರನು ಹೇಳಿದನುಃ

“ವನದಲ್ಲಿ ಶಾಪದಗ್ಧನಾದ ರಾಜ ಪಾಂಡುವಿಗೆ ಹುಟ್ಟಿದ ಐವರು ಇಂದ್ರರಂತಿರುವ ಪುತ್ರರನ್ನು ನೀನೇ ಬೆಳೆಸಿದೆ, ಶಿಕ್ಷಣ ನೀಡಿದೆ. ಅಂಬಿಕೇಯ! ಈಗ ಅವರು ನಿನ್ನ ಆದೇಶವನ್ನು ಪಾಲಿಸಲು ಕಾಯುತ್ತಿದ್ದಾರೆ. ಅವರಿಗೆ ಉಚಿತವಾದ ರಾಜ್ಯವನ್ನು ಕೊಟ್ಟು ಪುತ್ರರೊಂದಿಗೆ ಮುದದಿಂದ ಸುಖಿಯಾಗಿದ್ದರೆ ನಿನ್ನ ಕುರಿತು ದೇವತೆಗಳಲ್ಲಿಯಾಗಲೀ ಮನುಷ್ಯರಲ್ಲಿಯಾಗಲೀ ಯಾರೂ ಅನುಮಾನಪಡುವುದಿಲ್ಲ.”

ಧೃತರಾಷ್ಟ್ರನು ಹೇಳಿದನುಃ

“ನಿದ್ದೆ ಬಾರದಿರುವವನು ಮತ್ತು ಬೇಗೆಯುಳ್ಳವನು ಏನು ಮಾಡಬೇಕು? ಅದನ್ನು ಹೇಳು! ಅಯ್ಯಾ! ನೀನೇ ಧರ್ಮಾರ್ಥಕುಶಲನೂ ಶುಚಿಯೂ ಅಲ್ಲವೇ?



ಅಜಾತಶತ್ರುವಿಗೆ ಎಲ್ಲರಿಗೂ ಸರಿಯಾಗಿರುವುದು ಏನು ಮತ್ತು ಕುರುಗಳಿಗೆ ಶ್ರೇಯಸ್ಕರವಾದುದು ಏನು ಎಂದು ನಿನಗನ್ನಿಸುತ್ತದೆಯೋ ಅದನ್ನು ಯಥಾವತ್ತಾಗಿ ಹೇಳು. ಮುಂದೆ ಕೆಡುಕಾಗಬಹುದೆಂದು ಶಂಕಿಸಿ ನಾನು ಹಿಂದೆ ಮಾಡಿದ ಪಾಪಗಳನ್ನೇ ಕಾಣುತ್ತಿದ್ದೇನೆ. ವ್ಯಾಕುಲಾತ್ಮನಾಗಿ ನಾನು ನಿನ್ನಲ್ಲಿ ಕೇಳುತ್ತಿದ್ದೇನೆ. ಅಜಾತಶತ್ರುವಿನ ಯೋಚನೆಯಲ್ಲಿರಬಹುದಾದುದೆಲ್ಲವನ್ನೂ ನನಗೆ ಯಥಾವತ್ತಾಗಿ ಹೇಳು.”

ವಿದುರನು ಹೇಳಿದನು:

“ಯಾರ ಸೋಲನ್ನು ಬಯಸುವುದಿಲ್ಲವೋ ಅವನಿಗೆ, ಕೇಳದೇ ಇದ್ದರೂ, ಅದು ಅವನಿಗೆ ಶುಭವೆಂದೆನಿಸಲಿ ಅಥವಾ ಪಾಪವೆಂದೆನಿಸಲಿ, ದ್ವೇಷ ಅಥವಾ ಪ್ರಿಯವಾದುದೆಂದೆನಿಸಲಿ, ಸತ್ಯವನ್ನೇ ನುಡಿಯಬೇಕು. ಆದುದರಿಂದ ಕುರುಗಳಿಗೆ ಒಳ್ಳೆಯದನ್ನೇ ಬಯಸಿ ನಿನಗೆ ಶ್ರೇಯಸ್ಕರವಾದ, ಧರ್ಮಯುಕ್ತ ಮಾತುಗಳನ್ನು ಹೇಳುತ್ತಿದ್ದೇನೆ. ಅರ್ಥಮಾಡಿಕೋ! ಮೋಸ ಮತ್ತು ಕೆಟ್ಟ ವಿಧಾನಗಳನ್ನು ಬಳಸಿ ಯಶಸ್ವಿಯಾಗುವ ಕರ್ಮಗಳಲ್ಲಿ ನಿನ್ನ ಮನಸ್ಸನ್ನು ತೊಡಗಿಸಬೇಡ. ಪಾಂಡವರ ವಿರೋಧದಿಂದ ನಿನ್ನ ಪುತ್ರರ ಬುದ್ಧಿಯು ಮಸುಕಾಗಿದೆ ಎನ್ನುವುದು ನಿನಗೆ ತಿಳಿಯುತ್ತಿಲ್ಲ. ಮೂರೂ ಲೋಕಗಳ

ರಾಜನು ಆಗಬಲ್ಲ ಲಕ್ಷಣ ಸಂಪನ್ನನಾದ ಯುಧಿಷ್ಠಿರನು ನಿನ್ನ ಶಿಷ್ಯ. ಅವನಿಗೆ ಆಳಲು ಬಿಡು. ನಿನ್ನ ಪುತ್ರರೆಲ್ಲರಲ್ಲಿ ಅವನು ತುಂಬಾ ಗೌರವಾನ್ವಿತ ಭಾಗಧೇಯನು. ತೇಜಸ್ಸು ಮತ್ತು ಪ್ರಜ್ಞೆಯಿಂದ ಕೂಡಿದ, ಧರ್ಮಾರ್ಥಗಳ ತತ್ತ್ವವನ್ನು ತಿಳಿದ, ಅನೃಶಂಸನೂ ಅಕ್ರೋಶಾದ್ಯನೂ ಆದ ಈ ಧರ್ಮಭೃತರಲ್ಲಿ ಶ್ರೇಷ್ಠನು ನಿನ್ನ ಗೌರವಕ್ಕಾಗಿ ಬಹಳಷ್ಟು ಕ್ಲೇಶಗಳನ್ನು ಸಹಿಸಿದ್ದಾನೆ."

ಇದನ್ನು ಹೇಳಿ ವಿದುರನು ಅನೇಕ ನೀತಿಯುಕ್ತ ಮಾತುಗಳನ್ನಾಡಿದನು. ವಿದುರನು ಹೇಳಿದನು:

"ರಾಜೇಂದ್ರ! ಭೂಮಿಗಾಗಿ ಸುಳ್ಳನ್ನು ಹೇಳಬಾರದು. ಮಗನ ಮೇಲಿನ ಪ್ರೀತಿಯಿಂದಾಗಿ ಸುಳ್ಳನ್ನು ಹೇಳಿ ಮಕ್ಕಳು ಮಂತ್ರಿಗಳೊಂದಿಗೆ ನಾಶವಾಗಬೇಡ. ದುರ್ಯೋಧನ, ಶಕುನಿ, ಮೂಢ ದುಃಶಾಸನ ಮತ್ತು ಕರ್ಣರ ಮೇಲೆ ಐಶ್ವರ್ಯವನ್ನು ಇರಿಸಿ ಹೇಗೆ ತಾನೆ ನೀನು ಶಾಂತಿಯನ್ನು ಬಯಸುತ್ತೀಯೆ? ಸರ್ವಗುಣಗಳಿಂದ ಕೂಡಿದ ಪಾಂಡವರು ನಿನ್ನಲ್ಲಿ ತಂದೆಯಂತೆ ವರ್ತಿಸುತ್ತಾರೆ. ನೀನೂ ಕೂಡ ಅವರೊಡನೆ ಪುತ್ರರಂತೆ ವರ್ತಿಸು. ನಿನ್ನ ನೂರು ಮಕ್ಕಳು, ಕರ್ಣ ಮತ್ತು ಐವರು ಪಾಂಡವರು ಸಾಗರವೇ ಉಡುಪಾಗಿರುವ ಈ ಅಖಿಲ ಪೃಥ್ವಿಯನ್ನು ಆಳಬಲ್ಲರು. ಧಾರ್ತರಾಷ್ಟ್ರರು ವನವಿದ್ದಂತೆ

ಮತ್ತು ಪಾಂಡುಸುತರು ವ್ಯಾಘ್ರಗಳು. ವ್ಯಾಘ್ರಗಳಿರುವ ಕಾಡನ್ನು ಕಡಿಯಬೇಡ; ಹುಲಿಗಳನ್ನು ಕಾಡಿನಿಂದ ಓಡಿಸಬೇಡ. ಹುಲಿಗಳಿಲ್ಲದೇ ಕಾಡು ಉಳಿಯುವುದಿಲ್ಲ; ಕಾಡಿಲ್ಲದೇ ಹುಲಿಗಳು ಉಳಿಯುವುದಿಲ್ಲ. ಕಾಡೇ ಹುಲಿಗಳನ್ನು ರಕ್ಷಿಸುತ್ತದೆ ಮತ್ತು ಹುಲಿಗಳು ಕಾಡನ್ನು ರಕ್ಷಿಸುತ್ತವೆ. ಆ ಪರಮೇಷ್ವಾಸ, ಅಮಿತೌಜಸ ಪಾಂಡವರನ್ನು ತೊರೆದು ಭಾರತರ ಐಶ್ವರ್ಯವನ್ನು ದುರ್ಯೋಧನನಿಗಿತ್ತು ನೀನು ಮಹಾ ಅಹಿತವನ್ನು ಮಾಡುತ್ತಿದ್ದೀಯೆ. ಐಶ್ವರ್ಯಮದಸಮ್ಮೂಢ ಬಲಿಯು ಮೂರೂಲೋಕಗಳಿಂದ ಪರಿಭ್ರಷ್ಟನಾದಂತೆ ಇವನೂ ಕೂಡ ಬೇಗನೇ ಪರಿಭ್ರಷ್ಟನಾಗುವುದನ್ನು ನೀನು ನೋಡುತ್ತೀಯೆ. ಸಾಧುವಾದ ಕುಲವೃದ್ಧಿಯನ್ನು ನಡೆಸು. ನಿನ್ನ ಬಂಧುಗಳಿಗೆ ಒಳ್ಳೆಯದನ್ನು ಮಾಡಿದರೆ ಶ್ರೇಯಸ್ಸನ್ನು ಪಾಡೆಯುತ್ತೀಯೆ. ಸದ್ಗುಣಿಗಳಲ್ಲದಿದ್ದರೂ ಬಂದುಗಳನ್ನು ಸಂರಕ್ಷಿಸಬೇಕು. ಹೀಗಿರುವಾಗ ಇನ್ನು ನಿನ್ನ ಕರುಣೆಯ ಆಕಾಂಕ್ಷಿಗಳಾದ ಗುಣವಂತರದ್ದೇನು? ದೀನ ಪಾಂಡವರ ಮೇಲೆ ಕರುಣೆಯನ್ನು ತೋರು. ಅವರ ಹೊಟ್ಟೆಪಾಡಿಗೆಂದು ಕೆಲವು ಗ್ರಾಮಗಳನ್ನಾದರೂ ಕೊಡು. ಈ ರೀತಿ ನೀನು ಲೋಕದಲ್ಲಿ ಯಶಸ್ಸನ್ನು ಗಳಿಸುತ್ತೀಯೆ. ನೀನು ವೃದ್ಧ. ಆದುದರಿಂದ ಪುತ್ರರನ್ನು ರಕ್ಷಿಸುವುದು ನಿನ್ನ ಕಾರ್ಯ. ಹಿತವಾಕ್ಯಗಳನ್ನು

ನುಡಿಯುವ ನನ್ನನ್ನು ಕೂಡ ನಿನ್ನ ಹಿತೈಷಿಯೆಂದು ತಿಳಿದುಕೋ. ಇನ್ನೊಮ್ಮೆ ಹೇಳುತ್ತಿದ್ದೇನೆ. ನಿನ್ನ ಮತ್ತು ಪಾಂಡುವಿನ ಮಕ್ಕಳಲ್ಲಿ ಸಮತೆಯಿಂದ ನೀನು ನಡೆದುಕೊಂಡರೆ ನಿನ್ನ ಮಕ್ಕಳೊಂದಿಗೆ ಚೆನ್ನಾಗಿರಬಲ್ಲೆ.

ಧೃತರಾಷ್ಟ್ರ! ಭಾರತ! ಪುರಾಣನೂ ಸನಾತನನೂ ಆದ ಕುಮಾರ ಸನತ್ಸುಜಾತನು ಮೃತ್ಯುವಿಲ್ಲವೆಂದು ಹೇಳಿದನು. ಸರ್ವಬುದ್ಧಿಮತರಲ್ಲಿ ಶ್ರೇಷ್ಠನಾದ ಅವನು ನಿನಗೆ ಗುಹ್ಯವಾಗಿರುವ ಎಲ್ಲದರ ಮೇಲೆ ಬೆಳಕನ್ನು ಬೀರಿ ನಿನ್ನ ಹೃದಯದಲ್ಲಿ ನೆಲೆಸುವಂತೆ ಹೇಳುತ್ತಾನೆ."

ಧೃತರಾಷ್ಟ್ರನು ಹೇಳಿದನು:

"ಆ ಸನಾತನ ಋಷಿಯು ನನಗೆ ಏನನ್ನು ಹೇಳಲಿದ್ದಾನೆಯೋ ಅದು ನಿನಗೆ ತಿಳಿದಿಲ್ಲವೇ? ವಿದುರ! ಅದನ್ನು ನೀನೇ ಹೇಳು. ಅಷ್ಟಕ್ಕೆ ನಿನ್ನಲ್ಲಿ ಪ್ರಜ್ಞೆಯಿದೆ."

ವಿದುರನು ಹೇಳಿದನು:

"ನಾನು ಶೂದ್ರಯೋನಿಯಲ್ಲಿ ಹುಟ್ಟಿದ್ದುದರಿಂದ ನಾನು ಇಷ್ಟರವರಗೆ ಹೇಳಿದುದಕ್ಕಿಂತ ಹೆಚ್ಚು ಹೇಳುವುದಿಲ್ಲ. ಆ ಕುಮಾರನಲ್ಲಿರುವ ವೇದಗಳ ಕುರಿತಾದ ಜ್ಞಾನವು ಶಾಶ್ವತವೆಂದು ನನಗನ್ನಿಸುತ್ತದೆ. ಬ್ರಾಹ್ಮಣ ಯೋನಿಯಲ್ಲಿ

ಜನಿಸಿದ ಅವನು ತುಂಬಾ ಗುಹ್ಯವಾದುದನ್ನೂ ತಿಳಿದಿದ್ದಾನೆ. ದೇವತೆಗಳು ಅವನನ್ನು ನಿಂದಿಸುವುದಿಲ್ಲ. ಆದುದರಿಂದ ಇದನ್ನು ನಿನಗೆ ಹೇಳುತ್ತಿದ್ದೇನೆ."

ಧೃತರಾಷ್ಟ್ರನು ಹೇಳಿದನು:

"ವಿದುರ! ಈ ದೇಹದಲ್ಲಿದ್ದುಕೊಂಡು ನಾನು ಹೇಗೆ ಆ ಪುರಾಣ ಸನಾತನನನ್ನು ಸಂದರ್ಶಿಸಬಲ್ಲೆ ಹೇಳು!"



ಆಗ ವಿದುರನು ಆ ಸಂಶಿತವ್ರತ ಋಷಿಯ ಕುರಿತು ಚಿಂತಿಸಿದನು. ಅವನು ಚಿಂತಿಸುತ್ತಿರುವುದನ್ನು ತಿಳಿದು ಋಷಿಯು ಅಲ್ಲಿ ಕಾಣಿಸಿಕೊಂಡನು. ಆಗ ಅವನನ್ನು ವಿಧಿವತ್ತಾಗಿ ಬರಮಾಡಿಕೊಂಡು, ಸುಖವಾಗಿ ಕುಳಿತುಕೊಂಡು, ಸ್ವಲ್ಪ ವಿಶ್ರಾಂತಿಯನ್ನು ಪಡೆಯಲು ವಿದುರನು ಹೇಳಿದನು:

> "ಭಗವನ್! ಧೃತರಾಷ್ಟ್ರನ ಮನಸ್ಸಿನಲ್ಲಿ ಕೆಲವು ಸಂಶಯಗಳಿವೆ. ನನಗೆ ಶಕ್ಯವಾದಷ್ಟನ್ನು ನಾನು ಹೇಳಿದ್ದೇನೆ. ಯಾವುದನ್ನು ಕೇಳಿ ಈ ಮನುಷ್ಯೇಂದ್ರನು ಸುಖ-ದುಃಖಗಳನ್ನೂ, ಲಾಭಾ-ಲಾಭಗಳನ್ನೂ, ಪ್ರೀತಿ-ದ್ವೇಷಗಳನ್ನೂ, ಮುಪ್ಪು-ಮೃತ್ಯುಗಳನ್ನೂ, ಭಯ-ಮಾತ್ಸರ್ಯಗಳನ್ನೂ, ಹಸಿವು-ಬಾಯಾರಿಕೆಗಳನ್ನೂ, ಮದ ಮತ್ತು ವೈಭವ, ಅರತಿ, ಆಲಸ್ಯ, ಕಾಮ-ಕ್ರೋಧ ಮತ್ತು ಕ್ಷಯ-ಉದಯಗಳನ್ನು ದಾಟಬಹುದೋ ಅದನ್ನು ನೀನೂ ಅವನಿಗೆ ಹೇಳಬೇಕು."

ಆಗ ಮನೀಷೀ ರಾಜಾ ಧೃತರಾಷ್ಟ್ರನು ವಿದುರನ ಮಾತನ್ನು ಗೌರವಿಸಿ, ಪರಮ ಬುದ್ಧಿಯನ್ನು ಪಡೆಯಲೋಸುಗ, ಮಹಾತ್ಮ ಸನತ್ಸುಜಾತನಿಗೆ ರಹಸ್ಯದಲ್ಲಿ ಅನೇಕ ಪ್ರಶ್ನಿಗಳನ್ನು ಕೇಳಿದನು. ಸನತ್ಸುಜಾತನು ಅವನಿಗೆ ಬ್ರಹ್ಮವಸ್ತುವನ್ನು ನಿರೂಪಿಸಿ ಅವನ ಸಂಶಯಗಳನ್ನು ಹೋಗಲಾಡಿಸಿದನು.

ಹೀಗೆ ಸನತ್ಸುಜಾತ ಮತ್ತು ಧೀಮತ ವಿದುರನೊಂದಿಗೆ ರಾಜನು ಮಾತುಕಥೆಯನ್ನಾಡುತ್ತಿರಲು, ರಾತ್ರಿಯು ಕಳೆಯಿತು.

# ಕುರುಸಭೆಯಲ್ಲಿ ಸಂಜಯನು ತನ್ನ ರಾಯಭಾರವೃತ್ತಾಂತವನ್ನು ತಿಳಿಸಿದುದು

## ಪಾಂಡವರಿಂದ ಹಿಂದಿರುಗಿದ ಸಂಜಯನು ಕೌರವ ಸಭೆಗೆ ಆಗಮಿಸಿದುದು

ಆ ರಾತ್ರಿಯು ಕಳೆಯಲು ಎಲ್ಲ ರಾಜರೂ ಸೂತನನ್ನು ಕೇಳಲು ಸಂತೋಷದಿಂದ ಸಭೆಯನ್ನು ಪ್ರವೇಶಿಸಿದರು. ಪಾರ್ಥರ ಧರ್ಮಾರ್ಥಸಂಹಿತ ಮಾತುಗಳನ್ನು ಕೇಳಲು ಬಯಸಿ ಎಲ್ಲರೂ ಧೃತರಾಷ್ಟ್ರನನ್ನು ಮುಂದಿಟ್ಟುಕೊಂಡು ಶುಭ ರಾಜಸಭೆಯನ್ನು ಪ್ರವೇಶಿಸಿದರು. ಆ ವಿಸ್ತೀರ್ಣ ಸಭೆಗೆ ಬಿಳಿಯ ಬಣ್ಣವನ್ನು ಬಳಿದಿದ್ದರು. ಕನಕರಾಜಿಗಳಿಂದ ಅಲಂಕರಿಸಿದ್ದರು. ಚಂದ್ರನ ಪ್ರಭೆಯಂತೆ ಸುಂದರವಾದ ಬೆಳಕುಗಳನ್ನಿಟ್ಟಿದ್ದರು. ಗಂಧದ ನೀರನ್ನು ಸಿಂಪಡಿಸಿದ್ದರು. ಬಂಗಾರದ ಮತ್ತು ಮರದ ಆಸನಗಳನ್ನಿರಿಸಿದ್ದರು. ದಂತ-ಅಶ್ಮಸಾರಗಳಿಂದ ಕೂಡಿದ ವಸ್ತ್ರಗಳನ್ನು ಹೊದೆಸಿದ್ದರು. ಭೀಷ್ಮ, ದ್ರೋಣ, ಕೃಪ, ಶಲ್ಯ, ಕೃತವರ್ಮ, ಜಯದ್ರಥ, ಅಶ್ವತ್ಥಾಮ, ವಿಕರ್ಣ, ಸೋಮದತ್ತ, ಬಾಹ್ಲೀಕ, ಮಹಾಪ್ರಾಜ್ಞ ವಿದುರ, ಯುಯುತ್ಸು ಮತ್ತು

ಎಲ್ಲ ಶೂರ ಪಾರ್ಥಿವರೂ ಒಟ್ಟಿಗೆ ಧೃತರಾಷ್ಟ್ರನ ಹಿಂದೆ ಶುಭ ಸಭೆಯನ್ನು ಪ್ರವೇಶಿಸಿದರು. ದುಃಶಾಸನ, ಚಿತ್ರಸೇನ, ಶಕುನಿ, ದುರ್ಮುಖ, ದುಃಸ್ಸಹ, ಕರ್ಣ, ಉಲೂಕ, ವಿವಿಂಶತಿಯರು ಅಮರ್ಷಣ ಕುರುರಾಜ ದುರ್ಯೋಧನನನ್ನು ಮುಂದಿಟ್ಟುಕೊಂಡು ಸುರರು ಶಕ್ರಸಭೆಯನ್ನು ಹೇಗೋ ಹಾಗೆ ಸಭೆಯನ್ನು ಪ್ರವೇಶಿಸಿದರು. ಪರಿಘದಂತೆ ಬಾಹುಗಳನ್ನುಳ್ಳ ಆ ಶೂರರು ಪ್ರವೇಶಿಸಲು ಸಭೆಯು ಗಿರಿಗಳಲ್ಲಿ ಸಿಂಹಗಳಿರುವ ಗುಹೆಯಂತೆ ಶೋಭಿಸಿತು. ಒಟ್ಟಿಗೇ ಶೋಭಿಸುತ್ತಿದ್ದ ಆ ಮಹೇಷ್ವಾಸರು ಸಭೆಯನ್ನು ಪ್ರವೇಶಿಸಿ ಬೆಲೆಬಾಳುವ ಆಸನಗಳಲ್ಲಿ ಸೂರ್ಯವರ್ಚಸರಂತೆ ಬೆಳಗಿದರು. ಆ ಸರ್ವ ರಾಜರು ಆಸನಗಳಲ್ಲಿರಲು ಸೂತಪುತ್ರನು ಬಂದಿರುವುದನ್ನು ದ್ವಾರಪಾಲಕರು ನಿವೇದಿಸಿದನು.

> "ಸೈಂಧವನ ಉತ್ತಮ ಕುದುರೆಗಳನ್ನು ಕಟ್ಟಿದ ರಥದಲ್ಲಿ ಪಾಂಡವರ ಕಡೆ ಹೋಗಿದ್ದ ದೂತನು ಅವಸರದಿಂದ ಬಂದಿದ್ದಾನೆ."

ಕುಂಡಲಗಳನ್ನು ಧರಿಸಿದ ಅವನು ಬೇಗನೆ ರಥದಿಂದ ಇಳಿದು ಮಹಾತ್ಮ ಮಹೀಪಾಲರಿಂದ ತುಂಬಿದ್ದ ಸಭೆಯನ್ನು ಪ್ರವೇಶಿಸಿದನು. ಸಂಜಯನು ಹೇಳಿದನು:

> "ಕೌರವರೇ! ನಾನು ಪಾಂಡವರ ಬಳಿ ಹೋಗಿ ಬಂದಿದ್ದೇನೆಂದು ತಿಳಿಯಿರಿ. ಅವರವರ ವಯಸ್ಸಿನ ಪ್ರಕಾರ ಕುರುಗಳೆಲ್ಲರಿಗೆ ಪಾಂಡವರು ಪ್ರತಿನಂದಿಸುತ್ತಾರೆ. ವೃದ್ಧರನ್ನೂ,

ತಮ್ಮ ವಯಸ್ಸಿನವರನ್ನೂ ವಯಸ್ಸಿಗೆ ತಕ್ಕಂತೆ ಅಭಿವಂದಿಸುತ್ತಾರೆ. ಸಣ್ಣ ವಯಸ್ಸಿನವರನ್ನು ವಯಸ್ಸಿಗೆ ತಕ್ಕಂತೆ ಪಾರ್ಥರು ಪ್ರತಿಪೂಜಿಸಿ ಅಭಿವಾದಿಸುತ್ತಾರೆ. ಧೃತರಾಷ್ಟ್ರನ ಆಜ್ಞೆಯಂತೆ ಈ ಮೊದಲೇ ಇಲ್ಲಿಂದ ಹೋದ ನಾನು ಪಾಂಡುವರಲ್ಲಿಗೆ ಹೋಗಿ ಏನು ಹೇಳಲಿರುವೆನೋ ಅದನ್ನು ಕೇಳಿ."

## ಸಂಜಯನು ಕುರುಸಭೆಯಲ್ಲಿ ಅರ್ಜುನನ ಸಂದೇಶವನ್ನು ತಿಳಿಸಿದುದು

ಧೃತರಾಷ್ಟ್ರನು ಹೇಳಿದನು:

"ಸಂಜಯ! ಈ ರಾಜರ ಮಧ್ಯದಲ್ಲಿ ನಿನ್ನನ್ನು ಕೇಳುತ್ತೇನೆ - ಸತ್ವಾಧೀನನಾದ, ಯೋದ್ಧರಲ್ಲಿ ಪ್ರಣೀತನಾದ, ದುರಾತ್ಮರ ಜೀವವನ್ನು ಕಸಿದುಕೊಳ್ಳುವ ಮಗ ಮಹಾತ್ಮ ಧನಂಜಯನು ಏನು ಹೇಳಿದನು?"

ಸಂಜಯನು ಹೇಳಿದನು:

"ಯುಧಿಷ್ಠಿರನ ಅನುಮತಿಯಂತೆ ಮತ್ತು ಕೇಶವನು ಕೇಳುವಂತೆ ಯುದ್ಧಕ್ಕೆ ಉತ್ಸುಕನಾಗಿರುವ ಮಹಾತ್ಮ ಧನಂಜಯ ಅರ್ಜುನನು ಹೇಳಿದ ಈ ಮಾತುಗಳನ್ನು ದುರ್ಯೋಧನನು ಕೇಳಬೇಕು. ಸಂಪೂರ್ಣ ವಿಶ್ವಾಸದಿಂದ, ತನ್ನ

ಬಾಹುವಿರ್ಯವನ್ನು ಅರ್ಥಮಾಡಿಕೊಂಡು, ವಾಸುದೇವನ ಸಮಕ್ಷಮದಲ್ಲಿ ಧೀರನಾಗಿ, ಯುದ್ಧಕ್ಕೆ ಸಿದ್ಧನಾಗಿದ್ದ ಕಿರೀಟಿಯು ನನಗೆ ಹೇಳಿದನು: "ಕುರುಗಳ ಮಧ್ಯದಲ್ಲಿ ಧಾರ್ತರಾಷ್ಟ್ರರಿಗೆ ಹೇಳು. ಪಾಂಡವರೊಂದಿಗೆ ಯುದ್ಧಮಾಡಲು ಯಾವ ಯಾವ ರಾಜರು ಬಂದು ಸೇರಿದ್ದಾರೋ ಅವರಿಗೂ ಕೇಳುವಂತೆ ಹೇಳು. ನಾನು ಹೇಳುವ ಮಾತುಗಳನ್ನು ಸಮಗ್ರವಾಗಿ ಅಮಾತ್ಯರೊಂದಿಗೆ ನೃಪನಿಗೆ ಕೇಳಿಸು." ವಜ್ರಹಸ್ತ ದೇವರಾಜನು ಹೇಳಿದುದನ್ನು ಎಲ್ಲ ದೇವತೆಗಳೂ ಕೇಳುವಂತೆ ಸೃಂಜಯರೂ ಪಾಂಡವರೂ ಸಮರ್ಥ ಕಿರೀಟಿಯ ಮಾತುಗಳನ್ನು ಕೇಳಿದರು. ಯೋತ್ಸಮಾನ, ಗಾಂಡೀವಧನ್ವಿ, ಲೋಹಿತಪದ್ಮನೇತ್ರ ಅರ್ಜುನನು ಹೀಗೆ ಹೇಳಿದನು: "ರಾಜ ಅಜಮೀಢ ಯುಧಿಷ್ಠಿರನ ರಾಜ್ಯವನ್ನು ಧಾರ್ತರಾಷ್ಟ್ರನು ಬಿಟ್ಟುಕೊಡದೇ ಇದ್ದರೆ ನಿಜವಾಗಿಯೂ ಶಿಕ್ಷಾರ್ಹವಾದ ಪಾಪಕರ್ಮವನ್ನು ಧಾರ್ತರಾಷ್ಟ್ರರು ಎಸಗಿದಂತೆ. ಭೀಮಾರ್ಜುನರೊಂದಿಗೆ, ಅಶ್ವಿನೀಪುತ್ರರೊಂದಿಗೆ, ವಾಸುದೇವನೊಂದಿಗೆ, ಆಯುಧವನ್ನು ಎತ್ತಿಹಿಡಿದಿರುವ ಶೈನಿಯೊಂದಿಗೆ, ದೃಷ್ಟದ್ಯುಮ್ನ ಮತ್ತು ಶಿಖಂಡಿಯೊಡನೆ, ಮತ್ತು ಒಂದೇ ಅಪಧ್ಯಾನದಿಂದ ಭೂಮಿ-ಆಕಾಶಗಳನ್ನು ಸುಟ್ಟುಬಿಡಬಲ್ಲ ಇಂದ್ರಸಮಾನ ಯುಧಿಷ್ಠಿರನೊಂದಿಗೆ ಯುದ್ಧಮಾಡಲು ಬಯಸುತ್ತಾರೆ ಎಂದಂತೆ. ಅವರೊಂದಿಗೆ

ಧಾರ್ತರಾಷ್ಟ್ರನು ಯುದ್ಧಮಾಡಲು ಬಯಸಿದರೆ, ಪಾಂಡವರ ಸಕಲ ಉದ್ದೇಶಗಳೂ ಪೂರ್ಣಗೊಂಡಂತೆ! ಪಾಂಡವರಿಗಾಗಿ ಬೇರೆ ಏನನ್ನೂ ಮಾಡುವುದು ಬೇಡ. ಮನಸಿದ್ದರೆ ನೀನು ಬಂದು ಯುದ್ಧಮಾಡು. ಪ್ರವ್ರಾಜಿತ ಪಾಂಡವರು ಧರ್ಮವನ್ನಾಚರಿಸಿ ವನದಲ್ಲಿ ದುಃಖದ ಹಾಸಿಗೆಯ ಮೇಲೆ ಮಲಗಿದ್ದೇ ಆದರೆ, ಧಾರ್ತರಾಷ್ಟ್ರನು ಅದಕ್ಕಿಂತಲೂ ದುಃಖತರವಾದ, ಅವನ ಅಂತ್ಯದ ಹಾಸಿಗೆಯ ಮೇಲೆ ಮಲಗಿ ಸಾಯುತ್ತಾನೆ. ಧರ್ಮರಾಜನು ವಿನಯ, ಜ್ಞಾನ, ತಪಸ್ಸು, ದಮ, ಕ್ರೋಧ, ಅನಾಥರನ್ನು ಧರ್ಮ ಮತ್ತು ಧನಗಳಿಂದ ರಕ್ಷಿಸುತ್ತಿದ್ದರೆ, ದುರಾತ್ಮ ಧಾರ್ತರಾಷ್ಟ್ರನು ಕುರು-ಪಾಂಡವರೊಂದಿಗೆ ಅನ್ಯಾಯವಾಗಿ ನಡೆದುಕೊಂಡು ಆಳುತ್ತಿದ್ದಾನೆ. ಮೋಸಕ್ಕೊಳಗಾದರೂ ಗೌರವ ಮತ್ತು ಆರ್ಜವಗಳಿಂದ, ತಪಸ್ಸು-ದಮಗಳಿಂದ, ಧರ್ಮವನ್ನು ರಕ್ಷಿಸುವ ಬಲದಿಂದ, ಸುಳ್ಳನ್ನು ಹೇಳಲ್ಪಟ್ಟಿದ್ದರೂ ಸತ್ಯವನ್ನೇ ಹೇಳಿಕೊಂಡು, ಪ್ರೀತಿಯುಕ್ತನಾಗಿದ್ದುಕೊಂಡು ಯುಧಿಷ್ಠಿರನು ಮಿತಿಯಿಲ್ಲದ ಕಷ್ಟಗಳನ್ನು ಸಹಿಸಿದನು. ಯಾವಾಗ ಸಂಶಿತಾತ್ಮ ಜ್ಯೇಷ್ಠ ಪಾಂಡವನು ಹಲವಾರು ವರ್ಷಗಳು ಹಿಡಿದಿಟ್ಟುಕೊಂಡಿರುವ ಘೋರ ಕ್ರೋಧವನ್ನು ಕುರುಗಳ ಮೇಲೆ ಎಸೆಯುತ್ತಾನೋ ಆಗ ಧಾರ್ತರಾಷ್ಟ್ರರು ಆ ಯುದ್ಧದಲ್ಲಿ ಪರಿತಪಿಸುತ್ತಾರೆ. ಬೇಸಗೆಯಲ್ಲಿ ಹೊಗೆಬಿಟ್ಟು

ಉರಿಯುವ ಬೆಂಕಿಯು ಒಣಗಿದ ಮರಗಳನ್ನು ಹೇಗೆ ಸುಟ್ಟುಹಾಕುವುದೋ ಹಾಗೆ ಯುಧಿಷ್ಠಿರನು ಕ್ರೋಧದಿಂದ ಉರಿಯುವ ದೃಷ್ಟಿಮಾತ್ರದಿಂದ ಧಾರ್ತರಾಷ್ಟ್ರರ ಸೇನೆಯನ್ನು ಸುಟ್ಟುಬಿಡುತ್ತಾನೆ. ಗದೆಯನ್ನು ಹಿಡಿದು, ಕ್ರೋಧದ ವಿಷವನ್ನು ಕಾರುತ್ತಾ ರಣಸ್ಥನಾಗಿರುವ ದುರ್ಮರ್ಷಣ, ಭೀಮವೇಗಿ, ಪಾಂಡವ ಭೀಮಸೇನನನ್ನು ನೋಡಿ ಧಾರ್ತರಾಷ್ಟ್ರರು ಯುದ್ಧಕ್ಕೆ ಪಶ್ಚಾತ್ತಾಪ ಪಡುತ್ತಾರೆ. ಮಹಾಸಿಂಹವು ಗೋವುಗಳ ಹಿಂಡನ್ನು ಪ್ರವೇಶಿಸುವಂತೆ ಆ ಭೀಮರೂಪ ಭೀಮನು ಗದಾಪಾಣಿಯಾಗಿ ಧಾರ್ತರಾಷ್ಟ್ರರ ಮೇಲೆರಗಿ ಕೊಲ್ಲುವಾಗ ಧಾರ್ತರಾಷ್ಟ್ರರು ಯುದ್ಧಕ್ಕೆ ಪಶ್ಚಾತ್ತಾಪ ಪಡುತ್ತಾರೆ. ಮಹಾಭಯದಲ್ಲಿಯೂ ಭಯವನ್ನು ಕಳೆದುಕೊಳ್ಳುವ ಆ ಅಸ್ತ್ರಪ್ರವೀಣನು ಶತ್ರುಬಲವನ್ನು ತಲುಪಿ ಕೋಪಗೊಂಡು ರಥದಿಂದ ಇತರ ರಥಸಮೂಹಗಳನ್ನು ಚೆನ್ನಾಗಿ ಅಪ್ಪಳಿಸಿ, ಪದಾತಿಪಡೆಗಳನ್ನು ಗದೆಯಿಂದ ಹೊಡೆದುರುಳಿಸಿ, ಅನೇಕ ಸೇನೆಗಳನ್ನು ಕ್ಷಣದಲ್ಲಿಯೇ ಮರ್ದಿಸಿ, ಧಾರ್ತರಾಷ್ಟ್ರರ ಸೇನೆಯನ್ನು ಕೊಡಲಿಯಿಂದ ವನವನ್ನು ಚಿಂದಿ ಚಿಂದಿಯಾಗಿ ಕತ್ತರಿಸುವಂತೆ ನಾಶಗೊಳಿಸುವಾಗ ಧಾರ್ತರಾಷ್ಟ್ರರು ಯುದ್ಧಕ್ಕೆ ಪಶ್ಚಾತ್ತಾಪ ಪಡುತ್ತಾರೆ. ಹುಲ್ಲಿನ ಮನೆಗಳಿಂದ ಕೂಡಿದ ಗ್ರಾಮವನ್ನು ಸುಟ್ಟು ಭಸ್ಮಮಾಡುವಂತೆ, ಬೆಳೆದ ಬೆಳೆಯು

ಮಿಂಚುಹೊಡೆದಂತೆ ಸುಟ್ಟುಹೋಗುವ ಧಾರ್ತರಾಷ್ಟ್ರರನ್ನು ನೋಡಿ, ಭೀಮಸೇನನ ಶಸ್ತ್ರಗಳಿಂದ ಸುಟ್ಟುಹೋಗುತ್ತಿರುವ, ಪ್ರಮುಖ ಯೋಧರು ಹತರಾಗಿ, ಭಯಾರ್ತರಾಗಿ ವಿಮುಖರಾಗಿ, ಪರಾಙ್ಮುಖರಾಗಿ ಓಡಿಹೋಗುತ್ತಿರುವುದನ್ನು ನೋಡಿ, ಧಾರ್ತರಾಷ್ಟ್ರರು ಯುದ್ಧಕ್ಕೆ ಪಶ್ಚಾತ್ತಾಪ ಪಡುತ್ತಾರೆ. ಆ ಚಿತ್ರಯೋಧೀ ನಕುಲನು ತನ್ನ ಬಲಗೈಯಿಂದ ಭತ್ತಳಿಕೆಯಲ್ಲಿರುವ ಬಾಣಗಳನ್ನು ತೆಗೆದು ನೂರಾರು ಶತ್ರು ರಥಿಕರನ್ನು ರಥದಮೇಲಿದ್ದುಕೊಂಡು ಸದೆಬಡಿದಾಗ ಧಾರ್ತರಾಷ್ಟ್ರನು ಯುದ್ಧದ ಕುರಿತು ಪಶ್ಚಾತ್ತಾಪ ಪಡುತ್ತಾನೆ. ಸುಖೋಚಿತನಾಗಿದ್ದರೂ ವನಗಳಲ್ಲಿ ದೀರ್ಘಕಾಲ ದುಃಖದ ಹಾಸಿಗೆಯಲ್ಲಿ ಮಲಗಿದ ನಕುಲನು ಯಾವಾಗ ಸಿಟ್ಟಿನಿಂದ ಹಾವಿನಂತೆ ಭುಸುಗುಟ್ಟುತ್ತ ವಿಷವನ್ನು ಕಾರುವಾಗ ಧಾರ್ತರಾಷ್ಟ್ರನು ಯುದ್ಧದ ಕುರಿತು ಪಶ್ಚಾತ್ತಾಪ ಪಡುತ್ತಾನೆ. ಧರ್ಮರಾಜನಿಂದ ಒಟ್ಟುಗೂಡಿಸಿದ, ಜೀವವನ್ನು ತ್ಯಜಿಸಲು ಸಿದ್ಧರಾಗಿರುವ ಪಾರ್ಥಿವ ಯೋಧರು ಶುಭ್ರ ರಥಗಳಲ್ಲಿ ಸೈನ್ಯವನ್ನು ಧ್ವಂಸಮಾಡುತ್ತಿರುವನ್ನು ನೋಡಿ ಧಾರ್ತರಾಷ್ಟ್ರನು ಪಶ್ಚಾತ್ತಾಪ ಪಡುತ್ತಾನೆ. ಐವರು ಶೂರ ಮಕ್ಕಳನ್ನು – ಮಕ್ಕಳಾಗಿದ್ದರೂ ಕೃತಾಸ್ತ್ರರಾಗಿ ಪ್ರಕಾಶಿಸುವ, ಪ್ರಾಣಗಳನ್ನೂ ತೊರೆಯಲು ಸಿದ್ಧರಾಗಿ, ಕೇಕೆ ಹಾಕಿ ಆಕ್ರಮಣ ಮಾಡುತ್ತಿದ್ದವರನ್ನು ಕೌರವನು ನೋಡಿದಾಗ ಧಾರ್ತರಾಷ್ಟ್ರನು

ಯುದ್ಧದ ಕುರಿತು ಪಶ್ಚಾತ್ತಾಪ ಪಡುತ್ತಾನೆ. ವಿರೋಧವಿಲ್ಲದ, ಸುವರ್ಣ ತಾರೆಗಳ ಮತ್ತು ಸದ್ದಿಲ್ಲದೇ ಚಲಿಸುವ, ಪಳಗಿದ ಕುದುರೆಗಳನ್ನು ಕಟ್ಟಿದ ತನ್ನ ರಥವನ್ನೇರಿ ಸಹದೇವನು ಬಾಣಗಳಿಂದ ರಾಜರ ಶಿರವನ್ನು ಚೆಲ್ಲಾಡುವಾಗ, ರಥಸ್ಥನಾಗಿದ್ದು ಮಹಾಭಯವನ್ನುಂಟುಮಾಡಿ ಸಮರದಲ್ಲಿ, ಎಲ್ಲ ದಿಕ್ಕುಗಳಲ್ಲಿಯೂ ನೋಡಿ ಬಾಣಗಳನ್ನು ಸುರಿಸಿ ಹಿಂದೆ ಕಳುಹಿಸುತ್ತಿರುವ ಆ ಕೃತಾಸ್ತ್ರನನ್ನು ಯಾವಾಗ ನೋಡುತ್ತಾರೋ ಆಗ ಧಾರ್ತರಾಷ್ಟ್ರನು ಪಶ್ಚಾತ್ತಾಪ ಪಡುತ್ತಾನೆ. ವಿನಯದ ಹಿಡಿತದಲ್ಲಿರುವ, ನಿಪುಣ, ಸತ್ಯವಾದೀ, ಮಹಾಬಲಿ, ಸರ್ವ ಧರ್ಮೋಪಪನ್ನ, ತರಸ್ವೀ ಸಹದೇವನು ಗಾಂಧಾರಿ ಶಕುನಿಯ ಮಾರ್ಗದಲ್ಲಿ ಬರುವ ಎಲ್ಲರನ್ನೂ ಸದೆಬಡಿಯುತ್ತಾನೆ. ಯಾವಾಗ ಮಹಾಧನ್ವಿಗಳಾದ ಶೂರ, ಕೃತಾಸ್ತ್ರ, ರಥಯುದ್ಧ ಕೋವಿದ, ದ್ರೌಪದಿಯ ಮಕ್ಕಳು ಘೋರವಿಷವುಳ್ಳ ಸರ್ಪದಂತೆ ವಿಷಕಾರುತ್ತಾ ಮುಂದುವರೆಯುತ್ತಾರೋ ಆಗ ಧಾರ್ತರಾಷ್ಟ್ರನು ಯುದ್ಧದ ಕುರಿತು ಪಶ್ಚಾತ್ತಾಪ ಪಡುತ್ತಾನೆ. ಪರವೀರಘಾತೀ, ಕೃಷ್ಣನಂತೆ ಕೃತಾಸ್ತ್ರನಾದ ಅಭಿಮನ್ಯುವು ಶತ್ರುಗಳ ಮೇಲೆ ಮೋಡವು ಮಳೆಸುರಿಸುವಂತೆ ಬಾಣಗಳನ್ನು ಸುರಿಸಿ ಹೋರಾಡುವಾಗ ಧಾರ್ತರಾಷ್ಟ್ರನು ಯುದ್ಧದ ಕುರಿತು ಪಶ್ಚಾತ್ತಾಪ ಪಡುತ್ತಾನೆ. ಬಾಲಕನಾಗಿ ಕಂಡರೂ ಪ್ರೌಢನ ವೀರ್ಯವುಳ್ಳ ಇಂದ್ರನಿಗೆ

ಸಮಾನನಾದ ಕೃತಾಸ್ತ್ರ ಸೌಭದ್ರನು ಮೃತ್ಯುವಿನಂತೆ ಅರಿಸೇನೆಯಮೇಲೆ ಬೀಳುವಾಗ ಧಾರ್ತರಾಷ್ಟ್ರನು ಯುದ್ಧದ ಕುರಿತು ಪಶ್ಚಾತ್ತಾಪ ಪಡುತ್ತಾನೆ. ಶೀಘ್ರತರರಾದ, ವಿಶಾರದರಾದ, ಸಿಂಹಸಮಾನವೀರ್ಯರಾದ ಪ್ರಭದ್ರಕ ಯುವಕರು ಯಾವಾಗ ಸೇನೆಗಳೊಂದಿಗೆ ಧಾರ್ತರಾಷ್ಟ್ರರನ್ನು ಸದೆಬಡಿಯುತ್ತಾರೋ ಆಗ ಧಾರ್ತರಾಷ್ಟ್ರನು ಯುದ್ಧದ ಕುರಿತು ಪಶ್ಚಾತ್ತಾಪ ಪಡುತ್ತಾನೆ. ಮಹಾರಥಿಗಳಾದ ವಿರಾಟ-ದ್ರುಪದ ವೃದ್ಧರೀರ್ವರು ಜೋರಾಗಿ ಸೇನೆಗಳನ್ನು ಸದೆಬಡಿಯುವುದನ್ನು ಸೇನೆಗಳೊಂದಿಗೆ ಧಾರ್ತರಾಷ್ಟ್ರರು ನೋಡಿದಾಗ ಧಾರ್ತರಾಷ್ಟ್ರನು ಯುದ್ಧದ ಕುರಿತು ಪಶ್ಚಾತ್ತಾಪ ಪಡುತ್ತಾನೆ. ಯಾವಾಗ ಕೃತಾಸ್ತ್ರ ದ್ರುಪದನು ಸಮರದಲ್ಲಿ ರಥಸ್ಥನಾಗಿದ್ದುಕೊಂಡು ಕ್ರೋಧದಿಂದ ತನ್ನ ಬಿಲ್ಲಿನಿಂದ ಬಿಟ್ಟ ಶರಗಳಿಂದ ಯುವಕರ ಶಿರಗಳನ್ನು ಕತ್ತರಿಸುವನೋ ಆಗ ಧಾರ್ತರಾಷ್ಟ್ರನು ಯುದ್ಧದ ಕುರಿತು ಪಶ್ಚಾತ್ತಾಪ ಪಡುತ್ತಾನೆ. ಯಾವಾಗ ಪರವೀರಘಾತೀ ವಿರಾಟನು, ಬಿರುಸಾಗಿ ತೋರುವ ಮತ್ಸ್ಯರ ಸೇನೆಯನ್ನು ಕರೆದುಕೊಂಡು ಮರ್ಮಾಂತರಗಳಲ್ಲಿ ಸೇನೆಯನ್ನು ಪ್ರವೇಶಿಸುತ್ತಾನೋ ಆಗ ಧಾರ್ತರಾಷ್ಟ್ರನು ಯುದ್ಧದ ಕುರಿತು ಪಶ್ಚಾತ್ತಾಪ ಪಡುತ್ತಾನೆ. ಭಿರುಸಾಗಿ ಕಾಣುವ ಮತ್ಸ್ಯರ ಜ್ಯೇಷ್ಠ ವಿರಾಟಪುತ್ರ ರಥಿಕನು ಮುಂದುವರೆದು ಪಾಂಡವರಿಗಾಗಿ ಕವಚಗಳನ್ನು

ಧರಿಸುವುದನ್ನು ನೋಡಿ ಧಾರ್ತರಾಷ್ಟ್ರನು ಯುದ್ಧದ ಕುರಿತು ಪಶ್ಚಾತ್ತಾಪ ಪಡುತ್ತಾನೆ. ಕೌರವರ ಪ್ರವೀರ ಸತ್ತಮ ಶಂತನೂಜನು ಶಿಖಂಡಿಯಿಂದ ರಣದಲ್ಲಿ?ಹತನಾಗಲು, ನಿಸ್ಸಂಶಯುವಾಗಿ ಸತ್ಯವನ್ನು ಹೇಳುತ್ತಿದ್ದೇನೆ, ಶತ್ರುಗಳು ಜೀವವನ್ನು ತಳೆದಿರುವುದಿಲ್ಲ. ಯಾವಾಗ ಶಿಖಂಡಿಯು ರಥಿಗಳನ್ನು ಕತ್ತರಿಸಿ ರಥದ ಮೇಲಿದ್ದುಕೊಂಡು, ದಿವ್ಯ ಹಯಗಳು ಶತ್ರುಗಳ ರಥಗಳನ್ನು ತುಳಿಯುತ್ತಿರಲು, ವರೂಥೀ ಭೀಷ್ಮನ ಮೇಲೆ ಆಕ್ರಮಣ ಮಾಡುತ್ತಾನೋ ಆಗ ಧಾರ್ತರಾಷ್ಟ್ರನು ಯುದ್ಧದ ಕುರಿತು ಪಶ್ಚಾತ್ತಾಪ ಪಡುತ್ತಾನೆ. ಯಾವಾಗ ಸೃಂಜಯರ ಸೇನೆಯಲ್ಲಿ ಪ್ರಮುಖನಾಗಿ ಮಿಂಚುತ್ತಿರುವ, ಯಾರಿಗೆ ದ್ರೋಣನು ಗುಹ್ಯವಾದ ಅಸ್ತ್ರವನ್ನು ನೀಡಿದನೋ ಆ ಧೃಷ್ಟದ್ಯುಮ್ನನನ್ನು ನೋಡುತ್ತಾನೋ ಆಗ ಧಾರ್ತರಾಷ್ಟ್ರನು ಪಶ್ಚಾತ್ತಾಪ ಪಡುತ್ತಾನೆ. ಯಾವಾಗ ಆ ಅಪ್ರಮೇಯ ಸೇನಾಪತಿಯು ಧಾರ್ತರಾಷ್ಟ್ರರನ್ನು ಪರಾಭವಗೊಳಿಸಿ ರಣದಲ್ಲಿ ಶತ್ರುಗಳೊಂದಿಗಿರುವ ದ್ರೋಣನ ಮೇಲೆ ಆಕ್ರಮಣ ಮಾಡುತ್ತಾನೋ ಆಗ ಧಾರ್ತರಾಷ್ಟ್ರನು ಯುದ್ಧದ ಕುರಿತು ಪಶ್ಚಾತ್ತಾಪ ಪಡುತ್ತಾನೆ. ಆ ಸೋಮಕರ ನಾಯಕನು ಹ್ರೀಮಾನ, ಮನೀಷೀ, ಬಲಶಾಲೀ, ಮನಸ್ವೀ ಮತ್ತು ಲಕ್ಷೀವಂತ. ಆ ವೃಷ್ಣಿಸಿಂಹನು ಯಾರ ಬಲದ ನಾಯಕನಾಗಿರುವನೋ ಆ ಸೇನೆಯನ್ನು ಎದುರಿಸಿ ಶತ್ರುಗಳು

ಜೀವಿತರಾಗಿರಲಾರರು. ‘ಇನ್ನು ಆರಿಸುವುದು ಬೇಡ!’ ಎಂದು ಜನರಿಗೆ ಹೇಳು. ಏಕೆಂದರೆ ಯುದ್ಧದಲ್ಲಿ ಅದ್ವಿತೀಯ, ರಥಸ್ಥ, ಶಿನಿಯ ಮೊಮ್ಮಗ, ಮಹಾಬಲಿ, ಭಯವಿಲ್ಲದ ಕೃತಾಸ್ತ್ರ ಸಾತ್ಯಕಿಯನ್ನು ಸಚಿವನನ್ನಾಗಿ ಆರಿಸಿಕೊಂಡಿದ್ದೇವೆ. ನಾನು ಹೇಳಿದಂತೆ ಶಿನಿಗಳ ಅಧಿಪನು ಮೇಘಗಳಂತೆ ಶತ್ರುಗಳ ಮೇಲೆ ಬಾಣಗಳ ಮಳೆಯನ್ನು ಸುರಿಸಿ ಶರಜಾಲಗಳಿಂದ ಯೋಧರನ್ನು ಮುಚ್ಚುವಾಗ ಧಾರ್ತರಾಷ್ಟ್ರನು ಯುದ್ಧದ ಕುರಿತು ಪಶ್ಚಾತ್ತಾಪ ಪಡುತ್ತಾನೆ. ಯಾವಾಗ ಆ ದೀರ್ಘಬಾಹು, ದೃಢಧನ್ವಿ, ಮಹಾತ್ಮನು ಧೃತಿಯಿಂದ ಯುದ್ಧವನ್ನು ಮಾಡುತ್ತಾನೋ ಆಗ ಶತ್ರುಗಳು ಸಿಂಹದ ವಾಸನೆಯನ್ನು ಮೂಸಿದ ಗೋವುಗಳಂತೆ ಮತ್ತು ಬೆಂಕಿಗೆ ಸಿಲುಕಿದಂತೆ ಒಣಗಿ ಹೋಗುತ್ತಾರೆ. ಆ ದೀರ್ಘಬಾಹು, ದೃಢಧನ್ವಿ, ಮಹಾತ್ಮನು ಗಿರಿಗಳನ್ನು ಭೇದಿಸಬಲ್ಲ, ಸರ್ವಲೋಕಗಳನ್ನೂ ಸಂಹರಿಸಬಲ್ಲ. ಅಸ್ತ್ರಗಳನ್ನು ಬಳಸುವುದರಲ್ಲಿ ನಿಪುಣನಾದ, ಕ್ಷಿಪ್ರ ಕೈಚಳಕವಿರುವ ಅವನು ದಿವಿಯಲ್ಲಿ ಸೂರ್ಯನಂತೆ ಹೊಳೆಯುತ್ತಾನೆ. ಆ ಯಾದವ ವೃಷ್ಣಿಸಿಂಹನು ಅಸ್ತ್ರಗಳಲ್ಲಿ ಅತ್ಯಂತ ಪ್ರಶಸ್ತವಾದ ಯೋಗವೆಂದು ಯಾವುದಕ್ಕೆ ಹೇಳುತ್ತಾರೋ ಆ ವಿಚಿತ್ರ, ಸೂಕ್ಷ್ಮ ಯೋಗವನ್ನು ಸಿದ್ಧಿಗೊಳಿಸಿಕೊಂಡಿದ್ದಾನೆ. ಸಾತ್ಯಕಿಯು ಸರ್ವಗುಣಗಳಿಂದ ಕೂಡಿದ್ದಾನೆ. ಯುದ್ಧದಲ್ಲಿ ಮಾಧವ

ಸಾತ್ಯಕಿಯ ನಾಲ್ಕು ಬಿಳಿಯ ಕುದುರೆಗಳನ್ನು ಕಟ್ಟಿದ ಹಿರಣ್ಮಯ ರಥವನ್ನು ನೋಡಿ ಆ ಮಂದ ಸುಯೋಧನನು ಪಶ್ಚಾತ್ತಾಪ ಪಡುತ್ತಾನೆ. ಯಾವಾಗ ಅವನು ಕೇಶವನೊಡನೆ ಹೇಮಮಣಿಪ್ರಕಾಶಿತ, ಶ್ವೇತಾಶ್ವಯುಕ್ತ, ಉಗ್ರ ವಾನರಕೇತುವನ್ನು ಹೊಂದಿದ ರಥವನ್ನು ನೋಡುತ್ತಾನೋ ಆಗ ಆ ಮಂದನು ಪಶ್ಚಾತ್ತಾಪ ಪಡುತ್ತಾನೆ. ಯಾವಾಗ ನನ್ನ ಗಾಂಡೀವದ ಮಿಡಿತದಿಂದ ಉಂಟಾದ ಸಿಡಿಲಿನಂತಹ ಮಹಾಶಬ್ಧವನ್ನು ಮಹಾರಣದಲ್ಲಿ ಕೇಳುತ್ತಾನೋ ಆಗ ಆ ಮಂದಬುದ್ಧಿಯು ಶೋಕಿಸುತ್ತಾನೆ. ನನ್ನ ಬಾಣಗಳ ಸುರಿಮಳೆಯಿಂದುಂಟಾದ ಅಂಧಕಾರದಿಂದ ಗೋವುಗಳ ಹಿಂಡುಗಳು ಚದುರಿ ಓಡುವಂತೆ ಅವನ ಸೇನೆಯು ರಣದಿಂದ ಎಲ್ಲ ಕಡೆ ಓಡಿಹೋಗುವುದನ್ನು ನೋಡಿ ಧೃತರಾಷ್ಟ್ರನ ದುರ್ಮತಿ ದುಃಸ್ಸಹ ಮೂಢ ಮಗನು ಯುದ್ಧಕ್ಕೆ ತಪಿಸುತ್ತಾನೆ. ಮೋಡಗಳಿಂದ ಹೊರಹೊಮ್ಮುವ ಮಿಂಚುಗಳಂತೆ ಹೊರಡುವ ಸಹಸ್ರಾರು ಶತ್ರುಗಳನ್ನು ಕೊಲ್ಲಬಲ್ಲ, ಎಲುಬುಗಳನ್ನೂ ಹೊಕ್ಕಿ, ಮರ್ಮಗಳನ್ನು ಭೇದಿಸಬಲ್ಲ ನನ್ನ ಬಾಣಗಳನ್ನು ನೋಡಿದಾಗ ಧಾರ್ತರಾಷ್ಟ್ರನು ಯುದ್ಧದ ಕುರಿತು ಪಶ್ಚಾತ್ತಾಪ ಪಡುತ್ತಾನೆ. ತೀಕ್ಷ್ಣಮೊನೆಗಳನ್ನುಳ್ಳ, ಬಂಗಾರದ ಮುಖವುಳ್ಳ, ರೆಕ್ಕೆಗಳನ್ನುಳ್ಳ ಬಾಣಸಂಘಗಳು ನನ್ನ ಗಾಂಡೀವದಿಂದ ಹೊರಬಂದು ಆನೆ, ಕುದುರೆಗಳ

ವರ್ಮಗಳನ್ನು ಭೇದಿಸುವುದನ್ನು ನೋಡಿದಾಗ ಧಾರ್ತರಾಷ್ಟ್ರನು ಯುದ್ಧದ ಕುರಿತು ಪಶ್ಚಾತ್ತಾಪ ಪಡುತ್ತಾನೆ. ಶತ್ರುಗಳು ಬಿಟ್ಟಬಾಣಗಳನ್ನು ನನ್ನ ಬಾಣಗಳು ಆರಿಸಿದಾಗ, ಅಥವಾ ಹಿಂದಿರುಗಿಸಿದಾಗ ಅಥವ ತುಂಡರಿಸಿದಾಗ ಆ ಮಂದಬುದ್ಧಿ ಧಾರ್ತರಾಷ್ಟ್ರನು ಯುದ್ಧದ ಕುರಿತು ಪಶ್ಚಾತ್ತಾಪ ಪಡುತ್ತಾನೆ. ನನ್ನ ಭುಜಗಳಿಂದ ಪ್ರಯೋಗಿಸಲ್ಪಟ್ಟ ವಿಪಾಠಗಳು ಪಕ್ಷಿಗಳು ಮರದ ಮೇಲಿರುವ ಹಣ್ಣುಗಳನ್ನು ಕೀಳುವಂತೆ ಅವರ ಯುವಕರ ಶಿರಗಳನ್ನು ಕೀಳುವಾಗ ಧಾರ್ತರಾಷ್ಟ್ರನು ಯುದ್ಧದ ಕುರಿತು ಪಶ್ಚಾತ್ತಾಪ ಪಡುತ್ತಾನೆ. ರಣದಲ್ಲಿ ನನ್ನ ಶರಗಳಿಂದ ಹೊಡೆತತಿಂದು ಅವನ ಯೋಧರು ರಥಗಳಿಂದ, ಮಹಾಗಜಗಳಿಂದ, ಕುದುರೆಗಳ ಮೇಲಿಂದ ಬೀಳುವುದನ್ನು ನೋಡಿದಾಗ ಧಾರ್ತರಾಷ್ಟ್ರನು ಯುದ್ಧದ ಕುರಿತು ಪಶ್ಚಾತ್ತಾಪ ಪಡುತ್ತಾನೆ. ಯಾವಾಗ ನಾನು ಬಾಯಿಕಳೆದ ಕಾಲನಂತೆ ಶತ್ರುವಿನ ಪದಾತಿಸಮೂಹಗಳನ್ನು, ರಥಸಮೂಹಗಳನ್ನು ಎಲ್ಲ ಕಡೆಯಿಂದ ಉರಿಯುತ್ತಿರುವ ಬಾಣವರ್ಷಗಳಿಂದ ಅಂತ್ಯಗೊಳಿಸುವೆನೋ ಆಗ ಆ ಮಂದಬುದ್ಧಿಯು ಪರಿತಪಿಸುತ್ತಾನೆ. ಗಾಂಡೀವದಿಂದ ಹೊಡೆದುರಿಳಿಸಲ್ಪಟ್ಟ ರಥಗಳಿಂದ ಎಲ್ಲ ದಿಕ್ಕುಗಳಲ್ಲಿಯೂ ಮೇಲೆಬ್ಬುವ ಧೂಳಿನಿಂದ ಮುಸುಕಲ್ಪಟ್ಟು ದಿಕ್ಕುತೋಚದಂತಾದ ಅವನ ಸೇನೆಯನ್ನು ನೋಡಿ ಆ

ಮಂದಬುದ್ಧಿಯು ಪಶ್ಚಾತ್ತಾಪ ಪಡುತ್ತಾನೆ. ದುರ್ಯೋಧನನು ತನ್ನ ಎಲ್ಲ ಸೇನೆಯೂ ಸಣ್ಣದಾಗುವುದನ್ನು, ಸಂಜ್ಞೆಯನ್ನು ಕಳೆದುಕೊಳ್ಳುವುದನ್ನು, ಅಶ್ವ, ವೀರಾಗ್ರ, ನರೇಂದ್ರ, ಗಜಗಳನ್ನು ಕಳೆದುಕೊಂಡು ಬಾಯಾರಿ, ಭಯಾರ್ತರಾಗಿ, ಆಯಾಸಗೊಳ್ಳುವುದನ್ನು ನೋಡುತ್ತಾನೆ. ಹತರಾದ, ಹತರಾಗುತ್ತಿರುವವರ ಆರ್ತಸ್ವರ, ಪ್ರಜಾಪತಿಯ ಅರ್ಧ ಮುಗಿಸಿದ ಕೆಲಸವೋ ಎಂಬಂತೆ ಕೇಶ, ಎಲುಬು, ಮತ್ತು ಬುರುಡೆಗಳು ಚೆಲ್ಲಪಿಲ್ಲಿಯಾಗಿ ಬಿದ್ದಿರುವುದನ್ನು ನೋಡಿ ಆ ಮಂದಬುದ್ಧಿಯು ಪರಿತಪಿಸುತ್ತಾನೆ. ಯಾವಾಗ ರಥದಲ್ಲಿ ಗಾಂಡೀವ, ವಾಸುದೇವ, ದಿವ್ಯ ಶಂಖ ಪಾಂಚಜನ್ಯ, ಕುದುರೆಗಳು, ಅಕ್ಷಯವಾದ ಎರಡು ಭತ್ತಳಿಕೆಗಳು ಮತ್ತು ನನ್ನ ದೇವದತ್ತವನ್ನೂ ಅವನು ನೋಡುತ್ತಾನೋ ಆಗ ಧಾರ್ತರಾಷ್ಟ್ರನು ಈ ಯುದ್ಧದ ಕುರಿತು ಪಶ್ಚಾತ್ತಾಪ ಪಡುತ್ತಾನೆ. ಯುಗವು ಕಳೆದು ಇನ್ನೊಂದು ಯುಗವು ಬರುವಾಗ ಸೇರಿರುವ ಎಲ್ಲ ದಸ್ಯುಸಂಘಗಳನ್ನು ಅಗ್ನಿಯು ಹೇಗೆ ಕಬಳಿಸುತ್ತಾನೋ ಹಾಗೆ ನಾನು ಕೌರವರನ್ನು ನಾಶಪಡಿಸುವಾಗ ಪುತ್ರರೊಂದಿಗೆ ಧೃತರಾಷ್ಟ್ರನು ಪರಿತಪಿಸುತ್ತಾನೆ. ಕ್ರೋಧವಶನಾದ ಅಲ್ಪಚೇತಸನಾದ ಮಂದ ಧಾರ್ತರಾಷ್ಟ್ರನು ಭ್ರಾತರೊಂದಿಗೆ ಪುತ್ರರೊಂದಿಗೆ ಮತ್ತು ಸೈನ್ಯದೊಂದಿಗೆ ಐಶ್ವರ್ಯವನ್ನು, ದರ್ಪವನ್ನು ಕಳೆದುಕೊಂಡು

ನಡುಗುತ್ತಿರುವಾಗ ಪರಿತಪಿಸುತ್ತಾನೆ. ಒಂದು ಬೆಳಿಗ್ಗೆ ಜಪವನ್ನು ಮಾಡಿ ಮುಗಿಸಿರುವಾಗ ಏಕಾಂತದಲ್ಲಿ ಓರ್ವ ಮನೋಜ್ಞ ವಿಪ್ರನು ನನಗೆ ಹೇಳಿದ್ದನು: 'ಸವ್ಯಸಾಚೀ! ಪಾರ್ಥ! ನಿನಗೆ ಒಂದು ದುಷ್ಕರವಾದ ಕೆಲಸವನ್ನು ಮಾಡಬೇಕಾಗಿದೆ. ಶತ್ರುಗಳೊಡನೆ ನೀನು ಹೋರಾಡುತ್ತೀಯೆ. ಹರಿವಾನ್ ವಜ್ರಹಸ್ತ ಇಂದ್ರನು ನಿನ್ನ ಮುಂದೆ ಹೋಗಿ ಸಮರದಲ್ಲಿ ಅರಿಗಳನ್ನು ಸಂಹರಿಸುತ್ತಾನೆ. ಅಥವಾ ಸುಗ್ರೀವವನ್ನು ಕಟ್ಟಿದ ನಿನ್ನ ರಥದಲ್ಲಿ ಹಿಂದಿನಿಂದ ವಾಸುದೇವನು ರಕ್ಷಿಸುತ್ತಾನೆ.' ವಜ್ರಹಸ್ತ ಮಹೇಂದ್ರನನ್ನು ಮೀರಿ ಈ ಯುದ್ಧದಲ್ಲಿ ನಾನು ವಾಸುದೇವನ ಸಹಾಯವನ್ನು ಆರಿಸಿಕೊಂಡಿದ್ದೇನೆ. ದಸ್ಯುಗಳ ವಧೆಗಾಗಿಯೇ ನನಗೆ ಕೃಷ್ಣನು ದೊರಕಿದ್ದಾನೆ. ಇವೆಲ್ಲವುಗಳಲ್ಲಿ ದೈವದ ನಿಶ್ಚಯವಿದೆ ಎಂದು ನನಗೆ ತೋರುತ್ತಿದೆ. ಯುದ್ಧವನ್ನು ಮಾಡದೆಯೇ ಯಾವ ಪುರುಷನಿಗೆ ಜಯವಾಗಲೆಂದು ಕೃಷ್ಣನು ಮನಸ್ಸಿನಲ್ಲಿಯಾದರೂ ಆಲೋಚಿಸುತ್ತಾನೋ ಅವನಿಗೆ, ಶತ್ರುಗಳು ಇಂದ್ರನೊಡನೆ ದೇವತೆಗಳೇ ಆಗಿರಲಿ, ಎಲ್ಲ ರೀತಿಯಿಂದ ಯಶಸ್ಸುಂಟಾಗುವುದು ಸತ್ಯ. ಇನ್ನು ಮನುಷ್ಯರೆಂದರೆ ಅದರಲ್ಲಿ ಚಿಂತೆಯೇ ಇಲ್ಲ. ಯುದ್ಧದಲ್ಲಿ ಯಾರು ತೇಜಸ್ವಿ, ಅತ್ಯಂತ ಶೂರ, ಕೃಷ್ಣ ವಾಸುದೇವನನ್ನು ಗೆಲ್ಲಲು ಬಯಸುತ್ತಾರೋ ಅವರು ಅಳತೆಯಿಲ್ಲದ

ಮಹಾಸಾಗರದ ನೀರಿನಲ್ಲಿ ಎರಡೂ ತೋಳುಗಳಿಂದ ಈಸಿ ಸಾಗರವನ್ನು ದಾಟಲು ಬಯಸಿದಂತೆ. ಅತಿ ದೊಡ್ಡದಾದ ಶಿಲೆಗಳಿಂದ ತುಂಬಿದ ಶ್ವೇತ ಗಿರಿಯನ್ನು ತನ್ನ ಅಂಗೈಯಿಂದ ಪುಡಿಮಾಡಲು ಬಯಸುವವನ ಕೈ-ಉಗುರುಗಳೇ ಪುಡಿಯಾಗುತ್ತವೆಯೋ ಹೊರತು ಆ ಗಿರಿಗೆ ಏನನ್ನೂ ಮಾಡಿದಂತಾಗುವುದಿಲ್ಲ. ಯುದ್ಧದಲ್ಲಿ ವಾಸುದೇವನನ್ನು ಗೆಲ್ಲಲು ಬಯಸುವವನು ಉರಿಯುತ್ತಿರುವ ಬೆಂಕಿಯನ್ನು ಕೈಗಳಿಂದಲೇ ಆರಿಸಬಹುದು, ಚಂದ್ರ-ಸೂರ್ಯರನ್ನು ನಿಲ್ಲಿಸಬಹುದು ಮತ್ತು ದೇವತೆಗಳಿಂದ ಸುಲಭವಾಗಿ ಅಮೃತವನ್ನು ಅಪಹರಿಸಿಕೊಂಡು ಬರಬಹುದು. ಅವನು ರಾಜರ ದೇಶಗಳನ್ನು ಸದೆಬಡಿದನು ಮತ್ತು ಒಂದೇ ರಥದಲ್ಲಿ ಏಕಾಂಗಿಯಾಗಿ ಭೋಜರ ಯಶಸ್ಸಿನಿಂದ ಬೆಳಗುತ್ತಿರುವ ರುಕ್ಮಿಣಿಯನ್ನು ಅಪಹರಿಸಿ ವಿವಾಹವಾದನು. ಅವಳಿಂದ ಮಹಾತ್ಮ ರೌಕ್ಮಿಣೇಯನು ಜನಿಸಿದನು. ಅವನು ತರಸದಿಂದ ಗಾಂಧಾರರನ್ನು ಸದೆಬಡಿದು, ನಗ್ನಜಿತನ ಎಲ್ಲ ಮಕ್ಕಳನ್ನು ಗೆದ್ದು, ಅವನ ಸೆರೆಯಿಂದ ದೇವತೆಗಳ ಲಲಾಮ ಸುದರ್ಶನೀಯನನ್ನು ಬಿಡಿಸಿದನು. ಅವನು ಕವಾಟದಲ್ಲಿ ಪಾಂಡ್ಯನನ್ನು ಕೊಂದು ಹಾಗೆಯೇ ದಂತಕೂರದಲ್ಲಿ ಕಲಿಂಗರನ್ನು ಮರ್ದಿಸಿದನು. ಅವನಿಂದ ಸುಡಲ್ಪಟ್ಟ ವಾರಾಣಸೀ ನಗರಿಯು ಬಹಳ ವರ್ಷಗಳವರೆಗೆ ರಾಜನಿಲ್ಲದೇ

ಇದ್ದಿತ್ತು. ಯುದ್ಧದಲ್ಲಿ ಅಜೇಯನೆಂದು ಇತರರು ತಿಳಿದುಕೊಂಡಿದ್ದ ಏಕಲವ್ಯ ಎಂಬ ಹೆಸರಿನ ನಿಷಾದರಾಜ ಮತ್ತು ಸಿಟ್ಟಿನಿಂದ ಶೈಲವನ್ನು ಆಕ್ರಮಣಮಾಡಿದ ಜಂಭ ಇವರುಗಳು ಕೃಷ್ಣನಿಂದಲೇ ಹತರಾಗಿ ಅಸುವನ್ನು ನೀಗಿ ಮಲಗಿದರು. ಉಗ್ರಸೇನನ ಮಗ, ಅತಿ ದುಷ್ಟ ಅಂಧಕ-ವೃಷ್ಣಿಗಳ ಮಧ್ಯೆ ಸುಡುತ್ತಿದ್ದವನನ್ನು ಬಲದೇವನೊಡನೆ ಸೇರಿ ಸಂಹರಿಸಿ ರಾಜ್ಯವನ್ನು ಉಗ್ರಸೇನನಿಗಿತ್ತನು. ಆಕಾಶದಲ್ಲಿ ನಿಂತು ಸೌಭದಿಂದ ಯುದ್ಧಮಾಡುತ್ತಿರುವ ವಿಭೀಷಣ ಶಾಲ್ವರಾಜ ಶತಘ್ನಿಯನ್ನು ಮಾಯೆಯಿಂದ ಸೌಭದ ದ್ವಾರದಲ್ಲಿಯೇ ಹಿಡಿದು ಕೊಂದವನನ್ನು ಯಾವ ಮರ್ತ್ಯನು ಎದುರಿಸಿಯಾನು? ಪ್ರಾಗ್ಜ್ಯೋತಿಷ ಎಂಬ ಹೆಸರಿನ, ಭೇದಿಸಲಸಾಧ್ಯವಾದ, ಘೋರವಾದ, ಅಸಹ್ಯವಾದ ಅಸುರರ ಪುರವೊಂದಿತ್ತು. ಅಲ್ಲಿದ್ದ ಭೂಮಿಯ ಮಗ ಮಹಾಬಲಿ ನರಕನು ಅದಿತಿಯ ಶುಭ ಕುಂಡಲಗಳನ್ನು ಅಪಹರಿಸಿದನು. ಶಕ್ರನೊಂದಿಗೆ ದೇವತೆಗಳು ಒಟ್ಟಾಗಿ ಅವುಗಳನ್ನು ಹಿಂದೆತೆಗೆದುಕೊಳ್ಳಲು ಹೋದಾಗ ಅವನ ಬಲವನ್ನು ಸಹಿಸಲಾಗದೇ ಭೀತರಾದರು. ಆಗ ಕೇಶವನ ವಿಕ್ರಮ, ಬಲ ಮತ್ತು ಶ್ರೇಷ್ಠ ಅಸ್ತ್ರಗಳನ್ನು ನೋಡಿದರು. ಕೇಶವನ ಪ್ರಕೃತಿಯನ್ನು ತಿಳಿದುಕೊಂಡು ಅವರು ಕೃಷ್ಣನನ್ನು ದಸ್ಯುವಧೆಗೆ ನಿಯೋಜಿಸಿದರು. ಆ ದುಷ್ಕರವಾದ ಕೆಲಸವನ್ನು

ಮಾಡಲು ಸಿದ್ಧಿಗಳಲ್ಲಿ ಐಶ್ವರ್ಯವಂತ ವಾಸುದೇವನು ಒಪ್ಪಿಕೊಂಡನು. ನಿರ್ಮೋಚನದಲ್ಲಿ ಮೊನಚಾದ ಪಾಶಗಳನ್ನು ಜೋರಾಗಿ ತುಂಡರಿಸಿ ಆರು ಸಾವಿರರನ್ನು ಕೊಂದು, ಮುರ ಮತ್ತು ಅವನ ರಾಕ್ಷಸ ಪಡೆಯನ್ನು ಸಂಹರಿಸಿ ಆ ವೀರನು ನಿರ್ಮೋಚನವನ್ನು ಪ್ರವೇಶಿಸಿದನು. ಅಲ್ಲಿಯೇ ಆ ಮಹಾಬಲ ಮತ್ತು ಅತಿಬಲ ವಿಷ್ಣುವಿನ ನಡುವೆ ಯುದ್ಧವು ನಡೆಯಿತು. ಗಾಳಿಯಿಂದ ಕೆಳಗುರುಳಿದ ಕರ್ಣಿಕಾರ ವೃಕ್ಷದಂತೆ ಕೃಷ್ಣನಿಂದ ಹತನಾಗಿ ಅವನು ಅಸುವನ್ನು ತೊರೆದು ಮಲಗಿದನು. ಹೀಗೆ ಆ ಮಣಿಕುಂಡಲಗಳನ್ನು ಹಿಂದೆಪಡೆದುಕೊಂಡು ಭೌಮ ನರಕನನ್ನೂ ಮುರನನ್ನೂ ಕೊಂದು, ಶ್ರೀ ಮತ್ತು ಯಶಸ್ಸಿನಿಂದ ಆವೃತನಾಗಿ ಆ ಧೀಮಂತ, ಅಪ್ರತಿಮ ಪ್ರಭಾವಿ ಕೃಷ್ಣನು ಹಿಂದಿರುಗಿದನು. ಅಲ್ಲಿ ರಣದಲ್ಲಿ ಅವನು ನಡೆಸಿದ ಭೀಮಕೃತ್ಯಗಳನ್ನು ಕಂಡು ದೇವತೆಗಳು ಅವನಿಗೆ ವರವನ್ನಿತ್ತರು: 'ಯುದ್ಧಮಾಡುವಾಗ ನಿನಗೆ ಶ್ರಮವಾಗದಿರಲಿ! ಆಕಾಶದಲ್ಲಿ ಅಥವಾ ನೀರಿನಲ್ಲಿ ನಿನ್ನ ವಿಕ್ರಮವನ್ನು ಸಾಧಿಸು. ಯಾವುದೇ ಶಸ್ತ್ರಗಳು ನಿನ್ನ ದೇಹವನ್ನು ಪ್ರವೇಶಿಸಿದಿರಲಿ!' ಈ ರೀತಿ ಕೃಷ್ಣನು ಆಗ ಕೃತಾರ್ಥನಾದನು. ಇದು ಅಪ್ರಮೇಯ, ಮಹಾಬಲ, ಸದೈವ ಗುಣಸಂಪತ್ತಿನ ವಾಸುದೇವನ ಸ್ವರೂಪ. ಅಂಥಹ ಅನಂತವೀರ್ಯ ಮೀರಲಸಾಧ್ಯನಾದ ವಿಷ್ಣುವನ್ನು ಬಲದಿಂದ ಸೋಲಿಸಲು ಧಾರ್ತರಾಷ್ಟ್ರನು

ಯೋಚಿಸುತ್ತಿದ್ದಾನೆ! ಈ ರೀತಿ ದುರಾತ್ಮನು ತರ್ಕಿಸುತ್ತಿರಲು ಅವನು ನಮ್ಮ ಕಡೆ ಪ್ರೀತಿಯಿಂದ ನೋಡುತ್ತಾನೆ. ಕೃಷ್ಣ ಮತ್ತು ನನ್ನ ನಡುವೆ ಕಲಹವನ್ನು ಹುಟ್ಟಿಸಿ ಪಾಂಡವರ ಸಂಪತ್ತನ್ನು ಅಪಹರಿಸಲು ಅವನು ಯೋಜಿಸಿದರೆ, ಯುದ್ಧಕ್ಕೆ ಬಂದಾಗ ಅವನಿಗೆ ಗೊತ್ತಾಗುತ್ತದೆ. ರಾಜ ಶಾಂತನವನಿಗೆ, ದ್ರೋಣನಿಗೆ, ಅವನ ಪುತ್ರನಿಗೆ, ಮತ್ತು ಪ್ರತಿದ್ವಂದ್ವಿಯಿರದ ಶಾರದ್ವತನಿಗೆ ನಮಸ್ಕರಿಸಿ ನಮ್ಮ ರಾಜ್ಯವನ್ನು ಪಡೆಯಲೋಸುಗ ನಾನು ಯುದ್ಧವನ್ನು ಮಾಡುತ್ತೇನೆ. ಧರ್ಮಚಾರಿಗಳಾದ ಪಾಂಡವರೊಡನೆ ಯಾರು ಯುದ್ಧಮಾಡುತ್ತಾರೋ ಅವರಿಗೆ ಧರ್ಮವು ಅಸ್ತ್ರಗಳ ಗುರಿಯಿಡುತ್ತದೆ ಎಂದು ನನ್ನ ಅಭಿಪ್ರಾಯ. ಮೋಸಗಾರರಿಂದ ಸುಳ್ಳಿನ ಜೂಜಿನಲ್ಲಿ ಸೋತು ಪಾಂಡುಪುತ್ರರು ಹನ್ನೆರಡು ವರ್ಷಗಳು ಕಾದಿದ್ದಾರೆ. ಅರಣ್ಯದಲ್ಲಿ ಬಂದೊದಗಿದ ಕಷ್ಟಗಳನ್ನು ಸಹಿಸಿ, ದೀರ್ಘಕಾಲದ ಅಜ್ಞಾತವಾಸವನ್ನೂ ಪೂರೈಸಿ ಅಕಸ್ಮಾತ್ತಾಗಿ ಜೀವಿತರಾಗಿರುವ ಪಾಂಡವರನ್ನು ಪದಸ್ಥರಾಗಿರುವ ಧಾರ್ತರಾಷ್ಟ್ರರು ಸಹಿಸಿಕೊಳ್ಳಲಾರರು! ಈ ಯುದ್ಧದಲ್ಲಿ ನಮ್ಮನ್ನು ಅವರು, ಇಂದ್ರಪ್ರಮುಖನಾದ ದೇವತೆಗಳ ಸಹಾಯದಿಂದಲಾದರೂ ಗೆಲ್ಲುವುದಾದರೆ, ಧರ್ಮದಿಂದ ನಡೆದುಕೊಳ್ಳುವುದಕ್ಕಿಂತ ಅಧರ್ಮವನ್ನು ಆಚರಿಸುವುದೇ ಹೆಚ್ಚಿನದೆಂದೆನಿಸಿಕೊಳ್ಳುತ್ತದೆ. ಅಂದಿನಿಂದ ಯಾರೂ

ಒಳ್ಳೆಯದನ್ನು ಮಾಡುವುದಿಲ್ಲ. ಪುರುಷನು ಮಾಡಿದ ಕರ್ಮಕ್ಕೆ ಬದ್ಧನಲ್ಲವೆಂದು ಅವನು ತಿಳಿದುಕೊಂಡಿದ್ದರೆ, ನಾವು ವಿಶಿಷ್ಟರಲ್ಲ ಎಂದು ತಿಳಿದುಕೊಂಡಿದ್ದರೆ ನಾನು ವಾಸುದೇವನ ಸಹಾಯದಿಂದ ಅವನ ಅನುಯಾಯಿಗಳೊಂದಿಗೆ ದುರ್ಯೋಧನನನ್ನು ಕೊಲ್ಲುತ್ತೇನೆ ಎನ್ನುವುದರಲ್ಲಿ ಸಂಶಯವಿಲ್ಲ. ನರರು ಕರ್ಮಗಳಿಗೆ ಬದ್ಧರಲ್ಲವೆಂದರೂ, ಪುರುಷನಿಗೆ ಸ್ವಕರ್ಮವೆನ್ನುವುದು ಇಲ್ಲವೆಂದು ತಿಳಿದುಕೊಂಡರೂ, ಮತ್ತು ಇವೆರಡನ್ನೂ ಸಮೀಕ್ಷಿಸಿದರೆ ಧಾರ್ತರಾಷ್ಟ್ರನ ಪರಾಜಯವು ಒಳ್ಳೆಯದೇ! ಕುರುಗಳೇ! ಸತ್ಯವನ್ನು ಹೇಳುತ್ತಿದ್ದೇನೆ. ಯುದ್ಧಮಾಡಿದರೆ ಧಾರ್ತರಾಷ್ಟ್ರರು ಇರುವುದಿಲ್ಲ. ಯುದ್ಧವನ್ನು ಮಾಡದೇ ಅವರು ತಮ್ಮ ಗುರಿಯನ್ನು ಸಾಧಿಸಲಿ. ಯುದ್ಧ ಮಾಡದಿರಲಿ. ಇದರಿಂದಲಾದರೂ ಅವರು ಉಳಿಯುತ್ತಾರೆ. ನಾನು ಕರ್ಣನೊಂದಿಗೆ ಧಾರ್ತರಾಷ್ಟ್ರರನ್ನು ಸಂಹರಿಸಿ ಕುರುಗಳ ಸಮಗ್ರ ರಾಜ್ಯವನ್ನು ಗೆಲ್ಲುತ್ತೇನೆ. ಆದುದರಿಂದ ಯಾವುದನ್ನು ಮಾಡಬೇಕೋ ಯಾವುದನ್ನು ಮಾಡಬಲ್ಲಿರೋ ಅದನ್ನು ಮಾಡಿ, ಪ್ರೀತಿಯ ಹೆಂಡತಿ ಮಕ್ಕಳೊಂದಿಗೆ ಉಪಭೋಗಿಸಿ. ನಮ್ಮಲ್ಲಿಯೂ ಕೂಡ ಬಹುಶ್ರುತರಾದ, ಶೀಲವಂತ, ಕುಲೀನ, ಸಂವತ್ಸರ-ಜ್ಯೋತಿಷ್ಯಗಳಲ್ಲಿ ತೊಡಸಿಕೊಂಡ, ನಕ್ಷತ್ರ-ಯೋಗ-ನಿಶ್ಚಯಗಳನ್ನು ತಿಳಿದಿರುವ ವೃದ್ಧ ಬ್ರಾಹ್ಮಣರಿದ್ದಾರೆ.

ಮೇಲಿನ ಮತ್ತು ಕೆಳಗಿನ ದೈವಯುಕ್ತ ರಹಸ್ಯವನ್ನು, ದಿವ್ಯ ಪ್ರಶ್ನೆಗಳು, ಮೃಗಚಕ್ರಗಳು ಮತ್ತು ಮುಹೂರ್ತಗಳನ್ನು ಅರಿತ ಅವರು ಕುರು-ಸೃಂಜಯರ ಮಹಾ ಕ್ಷಯವನ್ನು ಮತ್ತು ಪಾಂಡವರ ಜಯವನ್ನು ಅರುಹಿದ್ದಾರೆ. ನಮ್ಮ ಅಜಾತಶತ್ರುವೂ ವೈರಿಗಳ ನಿಗ್ರಹದಲ್ಲಿ ಸಿದ್ಧಿಯನ್ನು ಕಾಣುತ್ತಾನೆ. ಅಪರೋಕ್ಷವಿದ್ಯೆಯನ್ನು ತಿಳಿದ ವೃಷ್ಣಿಸಿಂಹ ಜನಾರ್ದನನೂ ಕೂಡ ಇದರಲ್ಲಿ ಸಂಶಯಪಡುವುದಿಲ್ಲ. ನಾನೂ ಕೂಡ ಭವಿಷ್ಯದ ರೂಪವನ್ನು ಬಲ್ಲೆ. ಅಪ್ರಮತ್ತನಾಗಿ ಬುದ್ಧಿಯಿಂದ ನೋಡುತ್ತೇನೆ. ನನ್ನ ಪುರಾತನ ದೃಷ್ಟಿಯು ವ್ಯಥಿತವಾಗಿಲ್ಲ. ಯುದ್ಧಮಾಡುವ ಧಾರ್ತರಾಷ್ಟ್ರರು ಇಲ್ಲವಾಗುತ್ತಾರೆ. ಹಿಡಿಯದೆಯೇ ನನ್ನ ಗಾಂಡೀವವು ಜೃಂಭಿಸುತ್ತಿದೆ. ಮುಟ್ಟದೆಯೇ ನನ್ನ ಧನುಸ್ಸಿನ ದಾರವು ಕಂಪಿಸುತ್ತಿದೆ. ಬಾಣಗಳು ಕೂಡ ನನ್ನ ಭತ್ತಳಿಕೆಯ ಬಾಯಿಯಿಂದ ಹಾರುತ್ತಿವೆ. ಪುನಃ ಪುನಃ ಅವುಗಳು ಹಾರಿಹೋಗಲು ಬಯಸುತ್ತಿವೆ. ಹಾವು ಜೀರ್ಣವಾದ ತನ್ನ ಪೊರೆಯನ್ನು ಕಳಚಿಕೊಳ್ಳುವಂತೆ ನನ್ನ ಖಡ್ಗವು ಪ್ರಸನ್ನವಾಗಿ ಕೋಶದಿಂದ ಹೊರಬರುತ್ತದೆ. ನನ್ನ ಧ್ವಜದಲ್ಲಿರುವ ರೌದ್ರರೂಪಿಗಳು 'ಕಿರೀಟೀ! ಎಂದು ನಿನ್ನ ರಥವನ್ನು ಕಟ್ಟುತ್ತೀಯೆ?' ಎಂದು ಹೇಳುತ್ತವೆ. ರಾತ್ರಿಯಲ್ಲಿ ನರಿಗಳ ಪಡೆಗಳು ಕೂಗುತ್ತವೆ. ಆಕಾಶದಿಂದ ರಾಕ್ಷಸರು ಬೀಳುತ್ತಿದ್ದಾರೆ.

ಮೃಗಗಳು, ನರಿಗಳು, ಶಿತಿಕಂಠಗಳು, ಕಾಗೆಗಳು, ಹದ್ದುಗಳು, ಗಿಡುಗಗಳು, ಮತ್ತು ಹಯೀನಗಳು ಹೊರಬಂದಿವೆ. ಬಿಳಿಯ ಕುದುರೆಗಳನ್ನು ಕಟ್ಟಿದ ನನ್ನ ರಥವನ್ನು ನೋಡಿ ಹಿಂದೆ ಹಿಂದೆ ಗರುಡಗಳು ಹಾರುತ್ತವೆ. ನಾನೊಬ್ಬನೇ ಬಾಣಗಳ ಮಳೆಯನ್ನು ಸುರಿಸಿ ಪಾರ್ಥಿವ ಯೋಧರನೆಲ್ಲ ಮೃತ್ಯುಲೋಕಕ್ಕೆ ಕಳುಹಿಸುತ್ತೇನೆ. ಬೇಸಗೆಯಲ್ಲಿ ಗಹನವಾದ ಕಾಡನ್ನು ಸುಡುವ ಅಗ್ನಿಯಂತೆ ನಾನು ನನ್ನ ಪ್ರತ್ಯೇಕ ಅಸ್ತ್ರ – ಸ್ಥೂಣಕರ್ಣ, ಘೋರ ಪಾಶುಪತ, ಬ್ರಹ್ಮಾಸ್ತ್ರ ಮತ್ತು ಶಕ್ರನು ತಿಳಿಸಿದ ಅಸ್ತ್ರ - ಮಾರ್ಗಗಳನ್ನು ಮಾಡಿಕೊಳ್ಳುತ್ತೇನೆ. ಕೊಲ್ಲುವುದನ್ನೇ ಗುರಿಯಾಗಿಟ್ಟುಕೊಂಡು, ವೇಗವಾಗಿ ಬಾಣಪ್ರಯೋಗಮಾಡಿ ನಾನು ಪ್ರಜೆಗಳು ಯಾರನ್ನೂ ಉಳಿಸುವುದಿಲ್ಲ. ಇದೇ ಭಾವದಲ್ಲಿ ನನಗೆ ಪರಮ ಶಾಂತಿಯು ದೊರೆಯುತ್ತದೆ. ನನ್ನ ಸ್ಥಿರತೆಯ ಕುರಿತು ಅವರಿಗೆ ಹೇಳು ಗಾವಲ್ಗಣೇ! ಯಾರ ಸಹಾಯದಿಂದ ತಮ್ಮ ವೈರಿಗಳನ್ನು – ಇಂದ್ರಪ್ರಮುಖರಾದ ದೇವತೆಗಳ ಸಹಾಯವೇ ಅವರಿಗಿದ್ದರೂ - ಗೆಲ್ಲಬಲ್ಲ ಸಚಿವರೊಂದಿಗೆ ಅವರು ಕಲಹವನ್ನು ಹೂಡುತ್ತಿದ್ದಾರೆ? ಧಾರ್ತರಾಷ್ಟ್ರನ ಈ ಮೂಢತನವನ್ನು ನೋಡು! ವೃದ್ಧ ಭೀಷ್ಮ ಶಾಂತನವ, ಕೃಪ, ದ್ರೋಣ, ಅವನ ಮಗ, ಧೀಮಂತ ವಿದುರ ಇವರೆಲ್ಲರೂ ಇದನ್ನೇ ಹೇಳಿರಬಹುದು. ಕುರುಗಳೆಲ್ಲರೂ ಆಯುಷ್ಮಂತರಾಗಿರಲಿ!”

## ಭೀಷ್ಮ-ದ್ರೋಣರ ಮಾತು

ಆ ರಾಜರುಗಳೆಲ್ಲರೂ ಸೇರಿರುವಾಗ ಶಾಂತನವ ಭೀಷ್ಮನು ದುರ್ಯೋಧನನಿಗೆ ಈ ಮಾತುಗಳನ್ನು ಹೇಳಿದನು:

"ಒಮ್ಮೆ ಬೃಹಸ್ಪತಿ ಮತ್ತು ಇಂದ್ರರು ಬ್ರಹ್ಮನ ಉಪಸ್ಥಿತಿಯಲ್ಲಿ ಬಂದರು. ಇಂದ್ರನೊಡನೆ ಮರುತರು, ವಸುಗಳು, ಅಶ್ವಿನಿಯರು, ಆದಿತ್ಯರು, ಸಾಧ್ಯರು, ಸಪ್ತರ್ಷಿಗಳು, ದಿವದಲ್ಲಿರುವ ವಿಶ್ವಾವಸುಗಳು, ಗಂಧರ್ವರು, ಶುಭ ಅಪ್ಸರಗಣಗಳೂ ಇದ್ದರು. ಅಲ್ಲಿಗೆ ಹೋಗಿ ಲೋಕವೃದ್ಧ ಪಿತಾಮಹನಿಗೆ ನಮಸ್ಕರಿಸಿ ದಿವೌಕಸರು ವಿಶ್ವೇಶನನ್ನು ಸುತ್ತುವರೆದು ಕುಳಿತುಕೊಂಡರು. ಅದೇ ಸಮಯದಲ್ಲಿ ತಮ್ಮ ಮನಸ್ಸಿನಿಂದಲೇ ದಿವೌಕಸರ ತೇಜಸ್ಸನ್ನು ಸೆಳೆಯುತ್ತಾ ಪೂರ್ವದೇವರಾದ ನರ-ನಾರಾಯಣ ಋಷಿಗಳು ಅಲ್ಲಿಂದ ಹೊರಟರು. ಬೃಹಸ್ಪತಿಯು ಬ್ರಹ್ಮನನ್ನು ಇವರು ಯಾರೆಂದು ಪ್ರಶ್ನಿಸಿದನು. "ಅವರಿಬ್ಬರೂ ನಿನ್ನನ್ನು ಪೂಜಿಸದೇ ಹೋದರು. ಪಿತಾಮಹ! ಅವರ ಕುರಿತು ಹೇಳು!"

ಬ್ರಹ್ಮನು ಹೇಳಿದನು: "ಪೃಥ್ವಿ-ಆಕಾಶಗಳನ್ನು ಬೆಳಗಿಸುವಂತೆ ಪ್ರಜ್ವಲಿಸುತ್ತಿರುವ, ಎಲ್ಲವನ್ನು ವ್ಯಾಪಿಸಿ, ಎಲ್ಲವಕ್ಕೂ ಆಧಾರರಾಗಿರುವ, ಮಹಬಲಶಾಲಿಗಳಾದ ಈ ಇಬ್ಬರು ತಪಸ್ವಿಗಳು ನರ-ನಾರಾಯಣರು. ಲೋಕಲೋಕಗಳಲ್ಲಿ

ಇರುತ್ತಾರೆ. ಅವರ ತಪಸ್ಸಿನಿಂದ ಊರ್ಜಿತರಾಗಿದ್ದಾರೆ. ಮಹಾಸತ್ವಪರಾಕ್ರಮಿಗಳಾಗಿದ್ದಾರೆ. ಇಬ್ಬರೂ ತಮ್ಮ ಕರ್ಮಗಳಿಂದಲೇ ಲೋಕಗಳಿಗೆ ಆನಂದವನ್ನು ತರುತ್ತಾರೆ. ದೇವಗಂಧರ್ವ ಪೂಜಿತರಾದ ಅವರು ಅಸುರ ವಧೆಗಾಗಿಯೇ ಇದ್ದಾರೆ.”

ಅದನ್ನು ಕೇಳಿ ಶಕ್ರನು ಅವರಿಬ್ಬರೂ ತಪಸ್ಸನ್ನು ತಪಿಸುತ್ತಿದ್ದಲ್ಲಿಗೆ, ಬೃಹಸ್ಪತಿಯನ್ನು ಮುಂದಿಟ್ಟುಕೊಂಡು ದೇವಗಣಗಳೊಂದಿಗೆ ಹೋದನು. ಆಗ ದೇವತೆಗಳಿಗೆ ಅಸುರರಿಂದ ಹುಟ್ಟಿದ ಘೋರ ಭಯದಿಂದ ದಿವೌಕಸರು ಮಹಾತ್ಮ ನರನಾರಾಯಣರಲ್ಲಿ ವರವನ್ನು ಬೇಡಿದರು. ಅವರು ಕೇಳು ಎಂದು ಹೇಳಲು ಶಕ್ರನು ಸಹಾಯ ಮಾಡಬೇಕು ಎಂದು ಅವರಲ್ಲಿ ಕೇಳಿಕೊಂಡನು. ಆಗ ಅವರಿಬ್ಬರೂ ಶಕ್ರನಿಗೆ ನೀನು ಬಯಸಿದುದನ್ನು ಮಾಡುತ್ತೇವೆ ಎಂದರು. ಅವರಿಬ್ಬರ ಸಹಾಯದಿಂದ ಶಕ್ರನು ದೈತ್ಯದಾನವರನ್ನು ಜಯಿಸಿದನು. ಪರಂತಪ ನರನು ಸಂಗ್ರಾಮದಲ್ಲಿ ಇಂದ್ರನ ಶತ್ರುಗಳಾದ ಪೌಲೋಮರನ್ನೂ ಕಾಲಖಂಜರನ್ನೂ ನೂರಾರು ಸಾವಿರಾರು ಸಂಖ್ಯೆಗಳಲ್ಲಿ ಸಂಹರಿಸಿದನು. ಇದೇ ಅರ್ಜುನನು ರಣದಲ್ಲಿ ತಿರುಗುತ್ತಿರುವ ರಥದಲ್ಲಿ ನಿಂತು ನುಂಗಲು ಬರುತ್ತಿದ್ದ ಜಂಭನ ಶಿರವನ್ನು ಭಲ್ಲೆಯಿಂದ ಕತ್ತರಿಸಿದನು. ಇವನೇ ಸಮುದ್ರದ ಆಚೆಯಿರುವ

ಹಿರಣ್ಯಪುರದಲ್ಲಿ ವಾಸಿಸುತ್ತಿರುವ ಅರವತ್ತು ಸಾವಿರ ನಿವಾತಕವಚರನ್ನು ರಣದಲ್ಲಿ ಸಂಹರಿಸಿದನು. ಈ ಪರಪುರಂಜಯ ಮಹಾಬಾಹು ಅರ್ಜುನನೇ ಇಂದ್ರನೊಡನೆ ದೇವತೆಗಳನ್ನು ಗೆದ್ದು ಜಾತವೇದಸನನ್ನು ತೃಪ್ತಿಗೊಳಿಸಿದನು. ನಾರಾಯಣನೂ ಕೂಡ ಅಲ್ಲಿ ಎನ್ನೂ ಹೆಚ್ಚಿನ ಅನ್ಯರನ್ನು ಸಂಹರಿಸಿದನು. ಆ ಈರ್ವರು ಮಹಾವೀರ್ಯರು ಒಂದಾಗಿದ್ದುದ್ದನ್ನು ನೋಡು. ಮಹಾರಥಿ ವೀರ ವಾಸುದೇವ ಅರ್ಜುನರು ಒಂದಾಗಿದ್ದಾರೆ. ಅವರೇ ಪೂರ್ವದೇವರಾದ ನರನಾರಾಯಣದೇವರೆಂದು ಕೇಳಿದ್ದೇವೆ. ಮಾನುಷಲೋಕದಲ್ಲಿ ಅವರು ಇಂದ್ರನೂ ಸೇರಿ ಸುರಾಸುರರಿಗೆ ಅಜೇಯರು. ಆ ನಾರಾಯಣನೇ ಕೃಷ್ಣ. ಫಲ್ಗುನನನು ನರನೆಂದು ಹೇಳುತ್ತಾರೆ. ನಾರಾಯಣ ಮತ್ತು ನರರ ಸತ್ವ ಒಂದೇ. ಆಕೃತಿ ಮಾತ್ರ ಎರಡು. ಅವರ ಕರ್ಮಗಳಿಂದ ಇಬ್ಬರೂ ಅಕ್ಷಯ ಲೋಕಗಳನ್ನು ಪಡೆದಿದ್ದಾರೆ. ಯುದ್ಧದ ಕಾಲವು ಬಂದಾಗಲೆಲ್ಲಾ ಪುನಃ ಪುನಃ ಜನ್ಮ ತಾಳುತ್ತಾರೆ. ಆದುದರಿಂದ ಅವರ ಕರ್ಮವೇ ಹೋರಾಡುವುದು. ಇದನ್ನು ವೇದವಿದು ನಾರದನು ವೃಷ್ಣಿಗಳೆಲ್ಲರಿಗೆ ಹೇಳಿ ತಿಳಿಸಿದ್ದಾನೆ. ಮಗೂ! ದುರ್ಯೋಧನ! ಎಂದು ನೀನು ಶಂಖಚಕ್ರಗದಾಪಾಣಿಯಾದ ಕೇಶವನನ್ನು, ಮತ್ತು ಅಸ್ತ್ರಗಳನ್ನು ಹಿಡಿದಿರುವ ಭೀಮಧನ್ವಿ ಅರ್ಜುನನನ್ನು, ಆ ಸನಾತನ

ಮಹಾವೀರ ಕೃಷ್ಣರಿಬ್ಬರೂ ಒಂದೇ ರಥದಲ್ಲಿರುವುದನ್ನು ನೋಡುತ್ತೀಯೋ ಅಂದು ನೀನು ನನ್ನ ಮಾತನ್ನು ನೆನಪಿಸಿಕೊಳ್ಳುತ್ತೀಯೆ. ಬಹುಷಃ ಕುರುಗಳ ವಿನಾಶವು ಇನ್ನೂ ಬಂದಿಲ್ಲ; ಆದರೆ ನಿನ್ನ ಬುದ್ಧಿಯು ಧರ್ಮ-ಅರ್ಥಗಳಿಂದ ತಪ್ಪಿರಬಹುದೇ? ಈಗ ನನ್ನ ಮಾತುಗಳನ್ನು ನೀನು ತಿಳಿದುಕೊಳ್ಳದೇ ಇದ್ದರೆ ಇದನ್ನೇ ಬಹಳಷ್ಟು ಜನರು ಹತರಾದ ಮೇಲೆ ಕೇಳುತ್ತೀಯೆ. ಎಲ್ಲ ಕುರುಗಳೂ ನಿನ್ನ ಮಾತುಗಳನ್ನೇ ಮನ್ನಿಸುತ್ತಾರೆ. ಕೇವಲ ಮೂರು ಮಂದಿಗಳ ಅಭಿಪ್ರಾಯಗಳನ್ನು ನೀನು ಸ್ವೀಕರಿಸುತ್ತೀಯೆ - ರಾಮನಿಂದ ಶಪಿತನಾದ ಆ ದುರ್ಜಾತ ಸೂತಪುತ್ರ ಕರ್ಣನ, ಸೌಬಲ ಶಕುನಿಯ ಮತ್ತು ಆ ನಿನ್ನ ನೀಚ ಪಾಪಿ ತಮ್ಮ ದುಃಶಾಸನನ."

ಕರ್ಣನು ಹೇಳಿದನು:

"ಬಹುವರ್ಷ ಬಾಳಿದ ಪಿತಾಮಹ! ನನ್ನ ಕುರಿತು ಆ ರೀತಿ ಮಾತನಾಡಬೇಡ! ಸ್ವಧರ್ಮವನ್ನು ತ್ಯಜಿಸದೇ ಕ್ಷತ್ರಧರ್ಮವನ್ನು ನಾನು ಪಾಲಿಸುತ್ತಿದ್ದೇನೆ. ಎಲ್ಲಿ ನಾನು ಕೆಟ್ಟದಾಗಿ ನಡೆದುಕೊಂಡಿದ್ದೇನೆಂದು ನೀನು ನನ್ನನ್ನು ಈ ರೀತಿ ಹೀಯಾಳಿಸುತ್ತಿದ್ದೀಯೆ? ನಾನು ಎಂದಾದರೂ ತಪ್ಪು ಮಾಡಿದ್ದುದು ಧಾರ್ತರಾಷ್ಟ್ರನಿಗೆ ತಿಳಿದಿಲ್ಲವಲ್ಲ? ನನ್ನ ಎಲ್ಲ ಕಾರ್ಯಗಳೂ ರಾಜ ಧೃತರಾಷ್ಟ್ರನಿಗೆ ಮತ್ತು ಹಾಗೆಯೇ

ಮರ್ಯೋಧನನಿಗೆ ಕೂಡ ಒಳ್ಳೆಯದಾಗಲೆಂದೇ. ಅವನೇ ರಾಜ್ಯವನ್ನು ನಡೆಸುತ್ತಿದ್ದಾನಲ್ಲ!”

ಕರ್ಣನ ಆ ಮಾತುಗಳನ್ನು ಕೇಳಿ ಶಾಂತನವ ಭೀಷ್ಮನು ಮಹಾರಾಜ ಧೃತರಾಷ್ಟ್ರನಿಗೆ ಪುನಃ ಈ ಮಾತುಗಳನ್ನಾಡಿದನು:

“ಪಾಂಡವರನ್ನು ನಾನು ಕೊಲ್ಲುತ್ತೇನೆ ಎಂದು ನಿತ್ಯವೂ ಕೊಚ್ಚಿಕೊಳ್ಳುವ ಇವನು ಮಹಾತ್ಮ ಪಾಂಡವರ ಒಂದು ಕಾಲು ಭಾಗಕ್ಕೂ ಸಮನಲ್ಲ. ನಿನ್ನ ದುರಾತ್ಮ ಮಕ್ಕಳಿಗೆ ಬರಲಿರುವ ಗಂಡಾಂತರವು ಈ ದುರ್ಮತಿ ಸೂತಪುತ್ರನ ಕೆಲಸ ಎನ್ನುವುದನ್ನು ತಿಳಿದುಕೋ. ಇವನನ್ನು ಆಶ್ರಯಿಸಿ ನಿನ್ನ ಮಗ ಮಂದಬುದ್ಧಿ ಸುಯೋಧನನು ಆ ವೀರ ಅರಿಂದಮ ದೇವಪುತ್ರರನ್ನು ಅಪಮಾನಿಸುತ್ತಿದ್ದಾನೆ. ಒಬ್ಬೊಬ್ಬರಾಗಿ ಪಾಂಡವರೆಲ್ಲರೂ ಈ ಹಿಂದೆ ಮಾಡಿದಂತಹ ಯಾವ ದುಷ್ಕರ ಕರ್ಮವನ್ನು ಇವನು ಈ ಹಿಂದೆ ಮಾಡಿದ್ದಾನೆ? ವಿರಾಟನಗರದಲ್ಲಿ ತನ್ನ ಪ್ರಿಯ ತಮ್ಮನೇ ವಿಕ್ರಮಿ ಧನಂಜಯನಿಂದ ಹತನಾಗಲು ಇವನೇನು ಮಾಡಿದ? ಕುರುಗಳೆಲ್ಲರನ್ನೂ ಒಟ್ಟಿಗೇ ಧನಂಜಯನು ಆಕ್ರಮಣಿಸಿ, ಸೋಲಿಸಿ ಗೋವುಗಳನ್ನು ಕಸಿದುಕೊಂಡು ಹೋದನು. ಆಗ ಇವನು ಪ್ರವಾಸದಲ್ಲಿದ್ದನೇ? ಘೋಷಯಾತ್ರೆಯಲ್ಲಿ ನಿನ್ನ ಮಗನನ್ನು ಗಂಧರ್ವರು ಎತ್ತಿಕೊಂಡು ಹೋದಾಗ ಈಗ

ಗೂಳಿಯಂತೆ ಸೊಕ್ಕಿ ಉರಿಯುತ್ತಿರುವ ಈ ಸೂತಪುತ್ರನು ಎಲ್ಲಿದ್ದ? ಅಲ್ಲಿ ಕೂಡ ಮಹಾತ್ಮ ಪಾರ್ಥ-ಭೀಮರು ಮತ್ತು ಯಮಳರೀರ್ವರು ಬಂದು ಗಂಧರ್ವರನ್ನು ಪರಾಜಿತಗೊಳಿಸಲಿಲ್ಲವೇ? ಈ ಧರ್ಮಾರ್ಥಲೋಪಿ ಆತ್ಮಶ್ಲಾಘಿಯು ಹೇಳುವ ಸುಳ್ಳುಗಳು ಬಹಳಷ್ಟಿವೆ. ನಿನಗೆ ಮಂಗಳವಾಗಲಿ!"

ಭೀಷ್ಮನ ಆ ಮಾತುಗಳನ್ನು ಕೇಳಿ ಮಹಾಮನಸ್ವಿ ಭಾರದ್ವಾಜನು ರಾಜರ ಮಧ್ಯದಲ್ಲಿ ಧೃತರಾಷ್ಟ್ರನನ್ನು ಗೌರವಿಸಿ ಹೇಳಿದನು:

"ಭರತಶ್ರೇಷ್ಠ! ನೃಪ! ಭೀಷ್ಮನು ಏನು ಹೇಳುತ್ತಿದ್ದಾನೋ ಅದನ್ನು ಮಾಡುವಂಥವನಾಗು. ತಮ್ಮದೇ ಬಯಕೆಗಳನ್ನು ಪೂರೈಸಿಕೊಳ್ಳುವುದಕ್ಕೆ ಆಡುವವರ ಮಾತುಗಳನ್ನು ಕೇಳಬಾರದು. ಯುದ್ಧಕ್ಕಿಂತ ಮೊದಲು ಪಾಂಡವರೊಂದಿಗೆ ಕೂಡುವುದು ಸಾಧುವೆಂದು ನನಗನ್ನಿಸುತ್ತದೆ. ಸಂಜಯನು ಅರ್ಜುನನ ಯಾವ ಮಾತುಗಳನ್ನು ಬಂದು ತಿಳಿಸಿದನೋ ಅವೆಲ್ಲವನ್ನೂ ಆ ಪಾಂಡವನು ಮಾಡುತ್ತಾನೆಂದು ನಾನು ಬಲ್ಲೆ. ಈ ಮೂರು ಲೋಕಗಳಲ್ಲಿಯೂ ಅವನಂತಹ ಧನುರ್ಧರನಿಲ್ಲ."

ಆದರೆ ದ್ರೋಣ-ಭೀಷ್ಮರ ಆ ಮಾತುಗಳನ್ನು ಅನಾದರಿಸಿ ರಾಜನು ಪಾಂಡವರ ಕುರಿತು ಸಂಜಯನನ್ನು ಪುನಃ ಪಶ್ನಿಸಿದನು. ಯಾವಾಗ

ರಾಜನು ಭೀಷ್ಮ-ದ್ರೋಣರಿಗೆ ಉತ್ತರವಾಗಿ ಮಾತನಾಡಲಿಲ್ಲವೋ ಆಗಲೇ ಎಲ್ಲ ಕುರುಗಳೂ ಜೀವಿತದ ನಿರಾಶರಾದರು.

## ಸಂಜಯನು ಪಾಂಡವ ಯೋಧರನ್ನು ವರ್ಣಿಸಿದುದು

ಧೃತರಾಷ್ಟ್ರನು ಹೇಳಿದನು:

> "ಪಾಂಡವ ರಾಜ ಧರ್ಮಪುತ್ರನು ತನ್ನನ್ನು ವಿರೋಧಿಸಿ ಬಹುದೊಡ್ಡ ಸೇನೆಯು ಸೇರಿದೆ ಎಂದು ಕೇಳಿ ಏನು ಹೇಳಿದನು? ಯುದ್ಧಕ್ಕೆ ತಯಾರಿ ನಡೆಸಿರುವ ಯುಧಿಷ್ಠಿರನು ಏನನ್ನು ಬಯಸುತ್ತಿದ್ದಾನೆ? ಅವನ ಸಹೋದರ-ಮಕ್ಕಳಲ್ಲಿ ಯಾರಮುಖವನ್ನು ಚಿಂತೆಯಿಂದ ನೋಡುತ್ತಾನೆ? ಅವನೊಡನಿರುವ ಯಾರು, ಈ ಮಂದಬುದ್ಧಿಗಳಿಂದ ಮೋಸಗೊಂಡು ಕುಪಿತನಾಗಿರುವ ಆ ಧರ್ಮಜ್ಞ ಧರ್ಮಚಾರಿಣಿಯನ್ನು ಯುದ್ಧ ಅಥವಾ ಶಾಂತಿಗೆ ತಡೆಯುತ್ತಾರೆ?"

ಸಂಜಯನು ಹೇಳಿದನು:

> "ಪಾಂಚಾಲರೂ ಪಾಂಡವರೂ ಒಟ್ಟಿಗೆ ರಾಜ ಯುಧಿಷ್ಠಿರನ ಮುಖವನ್ನು ನೋಡುತ್ತಾರೆ. ಅವನೇ ಎಲ್ಲರನ್ನೂ ಆಳುತ್ತಾನೆ. ನಿನಗೆ ಮಂಗಳವಾಗಲಿ! ಪಾಂಡವರ ಮತ್ತು ಪಾಂಚಾಲರ ರಥಸಮೂಹಗಳು ಬಂದು ಕುಂತೀಪುತ್ರ ಯುಧಿಷ್ಠಿರನನ್ನು ಅಭಿನಂದಿಸುತ್ತವೆ. ಕತ್ತಲೆಯಿಂದ ಸೂರ್ಯನು

ಉದಯಿಸುವಂತೆ ತೇಜೋರಾಶಿಯಿಂದ ಬೆಳಗುವ, ದೀಪ್ತತೇಜಸ ಕೌಂತೇಯನನ್ನು ಪಾಂಚಾಲರು ಹರ್ಷಗೊಳಿಸುತ್ತಾರೆ. ಗೋಪಾಲಕರು ಮತ್ತು ಕುರಿಕಾಯುವವರು ಯುಧಿಷ್ಠಿರನನ್ನು ಹರ್ಷಗೊಳಿಸುತ್ತಾರೆ. ಪಾಂಚಾಲರು, ಕೇಕಯರು, ಮತ್ಸ್ಯರೂ ಕೂಡ ಪಾಂಡವನನ್ನು ಪ್ರತಿನಂದಿಸುತ್ತಾರೆ. ಬ್ರಾಹ್ಮಣ ಮತ್ತು ರಾಜಪುತ್ರಿಯರು, ವೈಶ್ಯರ ಹೆಣ್ಣುಮಕ್ಕಳೂ ಆಟವಾಡುತ್ತಾ ಸಂನ್ನದ್ಧನಾದ ಪಾರ್ಥನನ್ನು ಕಾಣಲು ಬರುತ್ತಾರೆ.”

ಧೃತರಾಷ್ಟ್ರನು ಹೇಳಿದನು:

“ಸಂಜಯ! ಯಾವುದರಿಂದ ಪಾಂಡವರು ನಮ್ಮನ್ನು ಹೋರಾಡಲು ಸಿದ್ಧರಾಗಿದ್ದಾರೋ ಆ ಸೋಮಕ ದೃಷ್ಟಧ್ಯುಮ್ನನ ಸೇನೆ-ಬಲಗಳು ಎಷ್ಟು ಎನ್ನುವುದನ್ನು ನಮಗೆ ಹೇಳು.”

ಕುರುಗಳು ಸೇರಿದ್ದ ಆ ಸಭೆಯಲ್ಲಿ ಹೀಗೆ ಕೇಳಲ್ಪಟ್ಟ ಗಾವಲ್ಗಣಿ ಸೂತನು ತುಂಬ ದೀರ್ಘವಾದ ನಿಟ್ಟುಸಿರನ್ನು ಬಿಟ್ಟು, ಸ್ವಲ್ಪಹೊತ್ತು ಯೋಚನೆಯಲ್ಲಿ ಮುಳುಗಿದಂತಿದ್ದು, ಇದ್ದಕ್ಕಿದ್ದ ಹಾಗೆಯೇ ಏನೂ ಕಾರಣವಿಲ್ಲದೇ ಕೆಳಗೆ ಬಿದ್ದನು. ಆಗ ರಾಜಸಂಸದಿಯ ಸಭೆಯಲ್ಲಿ ವಿದುರನು ಜೋರಾಗಿ ಹೇಳಿದನು:

“ಮಹಾರಾಜ! ಇದೋ ಸಂಜಯನು ಮೂರ್ಛಿತನಾಗಿ ನೆಲದ

ಮೇಲೆ ಬಿದ್ದಿದ್ದಾನೆ. ಅವನ ಪ್ರಜ್ಞೆ-ಚೇತನಗಳು ಕ್ಷೀಣವಾಗಿ ಅವನಿಗೆ ಮಾತನಾಡಲಾಗುತ್ತಿಲ್ಲ.”

ಧೃತರಾಷ್ಟ್ರನು ಹೇಳಿದನು:

“ಮಹಾರಥಿ ಪುರುಷವ್ಯಾಘ್ರರ ಅಪಾರ ಸೇನೆಯನ್ನು ನೋಡಿ ಸಂಜಯನ ಮನಸ್ಸು ಉದ್ವೇಗಗೊಂಡಿರಬಹುದು.”

ಆರೈಕೆಗೊಂಡು ಚೇತರಿಸಿಕೊಂಡ ಸಂಜಯನು ಕುರುಸಂಸದಿಯ ಸಭೆಯಲ್ಲಿ ಮಹಾರಾಜ ಧೃತರಾಷ್ಟ್ರನಿಗೆ ಹೇಳಿದನು:

“ರಾಜೇಂದ್ರ! ಮತ್ಸ್ಯರಾಜನ ಮನೆಯಲ್ಲಿ ವಾಸಿಸಿ ಕಷ್ಟಪಟ್ಟು ಸಣ್ಣವರಾಗಿರುವ ಆ ಮಹಾರಥಿ ಕುಂತಿಪುತ್ರರನ್ನು ನಾನು ನೋಡಿದ್ದೇನೆ. ಈಗ ಯಾರೊಂದಿಗೆ ಸೇರಿ ಪಾಂಡವರು ನಿನ್ನನ್ನು ಎದುರಿಸುವವರಿದ್ದಾರೆ ಎನ್ನುವುದನ್ನು ಕೇಳು. ಯಾರು ರೋಷವನ್ನಾಗಲೀ, ಭಯವನ್ನಾಗಲೀ, ಕಾಮವನ್ನಾಗಲೀ ಅಥವಾ ಅರ್ಥವನ್ನಾಗಲೀ ಕಾರಣವಾಗಿಟ್ಟುಕೊಂಡು ಧರ್ಮ ಮತ್ತು ಸತ್ಯಗಳನ್ನು ಎಂದೂ ಮೀರುವುದಿಲ್ಲವೋ, ಯಾರು ಧರ್ಮದ ಪ್ರಮಾಣವಾಗಿರುವನೋ, ಆ ಧರ್ಮಭೃತರಲ್ಲಿ ಶ್ರೇಷ್ಠ, ಅಜಾತ ಶತ್ರು ಪಾಂಡವನು ನಿನ್ನನ್ನು ಎದುರಿಸಿ ಹೋರಾಡುವನು. ಯಾರ ಬಾಹುಬಲಕ್ಕೆ ಸಮನಾದವರು ಭೂಮಿಯಲ್ಲಿ ಯಾರೂ ಇಲ್ಲವೋ, ಯಾವ ಧನುರ್ಧರನು ಎಲ್ಲ ಮಹೀಪಾಲರನ್ನು ವಶಮಾಡಿಕೊಂಡನೋ ಆ

ಭೀಮಸೇನನೊಂದಿಗೆ ಪಾಂಡವನು ನಿನ್ನನ್ನು ಎದುರಿಸಿ ಹೋರಾಡುತ್ತಾನೆ. ಜತುಗೃಹದಿಂದ ಪಲಾಯನ ಮಾಡುವಾಗ ಪುರುಷಾದಕ ಹಿಡಿಂಬನಿಂದ ರಕ್ಷಿಸಿದ ಕುಂತೀಪುತ್ರ ವೃಕೋದರ, ಯಾಜ್ಞಸೇನಿಯನ್ನು ಅಪಹರಿಸಿದ ಸಿಂಧುರಾಜನನ್ನು ಹಿಡಿದು ಅವಳನ್ನು ರಕ್ಷಿಸಿದ ಕುಂತೀಪುತ್ರ ವೃಕೋದರ, ಎಲ್ಲ ಪಾಂಡವರೂ ವಾರಣಾವತದಲ್ಲಿ ವಾಸಿಸುವಾಗ ಅವರನ್ನು ಬೆಂಕಿಯಿಂದ ಉಳಿಸಿದ, ಕೃಷ್ಣೆಯ ಪ್ರೀತಿಗೋಸ್ಕರ ಕ್ರೋಧವಶರು ಯಾರಿಂದ ಹತರಾದರೋ, ಯಾರು ವಿಷಮವೂ ಘೋರವೂ ಆದ ಗಂಧಮಾದನ ಪರ್ವತವನ್ನು ಪ್ರವೇಶಿಸಿದನೋ, ಯಾರ ಭುಜಗಳು ಹತ್ತು ಆನೆಗಳ ಸಾರಗಳನ್ನು ಹೊಂದಿ ವೀರ್ಯಶಾಲಿಯಾಗಿರುವನೋ ಆ ಭೀಮಸೇನನೊಂದಿಗೆ ಪಾಂಡವನು ನಿನ್ನೊಡನೆ ಹೋರಾಡುತ್ತಾನೆ. ಜಾತವೇದಸನನ್ನು ತೃಪ್ತಿಗೊಳಿಸಲೋಸುಗ ಹಿಂದೆ ಪುರಂದರನೊಡನೆ ಯುದ್ಧಮಾಡಿ ವಿಜಯವನ್ನು ಸಾಧಿಸಿದ ವೀರ, ಎರಡನೆಯ ಕೃಷ್ಣ, ಯಾರು ಸಾಕ್ಷಾತ್ ಮಹಾದೇವ, ಗಿರೀಶ, ಶೂಲಪಾಣಿ, ದೇವದೇವ, ಉಮಾಪತಿಯನ್ನು ಯುದ್ಧದಲ್ಲಿ ಸಂತೋಷಪಡಿಸಿದನೋ, ಯಾವ ಧನುರ್ಧರನಿಂದ ಲೋಕಪಾಲಕರೆಲ್ಲರೂ ವಶರಾದರೋ ಆ ವಿಜಯನೊಡನೆ ಪಾಂಡವನು ನಿನ್ನನ್ನು ಎದುರಿಸಿ ಹೋರಾಡುತ್ತಾನೆ. ಪಶ್ಚಿಮ ದಿಕ್ಕಿನಲ್ಲಿರುವ

ಮ್ಲೇಚ್ಛಗಣಗಳನ್ನು ವಶಪಡಿಸಿಕೊಂಡ ಚಿತ್ರಯೋಧೀ ನಕುಲನು ಯುದ್ಧಮಾಡಲು ಅಲ್ಲಿದ್ದಾನೆ. ಆ ದರ್ಶನೀಯ, ವೀರ, ಧನುರ್ಭೃತ, ಮಾದ್ರೀಪುತ್ರನೊಂದಿಗೆ ಪಾಂಡವನು ನಿನ್ನನ್ನು ಎದುರಿಸುತ್ತಾನೆ. ಯಾರು ಕಾಶೀ, ಅಂಗ, ಮಾಗಧ, ಕಲಿಂಗರನ್ನು ಯುದ್ಧದಲ್ಲಿ ಜಯಿಸಿದನೋ ಆ ಸಹದೇವನೊಂದಿಗೆ ಪಾಂಡವನು ನಿನ್ನನ್ನು ಎದುರಿಸುತ್ತಾನೆ. ಯಾರ ವೀರ್ಯಕ್ಕೆ ಸಮಾನರಾದ ನಾಲ್ವರೇ - ಅಶ್ವತ್ಥಾಮ, ಧೃಷ್ಟಕೇತು, ಪ್ರದ್ಯುಮ್ನ ಮತ್ತು ರುಕ್ಮಿ – ಮನುಷ್ಯರು ಈ ಭುವಿಯಲ್ಲಿದ್ದಾರೋ ಆ ಸಹದೇವ, ವಯಸ್ಸಿನಲ್ಲಿ ಯುವಕನಾಗಿರುವ, ಮಾಂದ್ರೀನಂದನನೊಡನೆ ಪಾಂಡವನು ನಿನ್ನನ್ನು ಎದುರಿಸುತ್ತಾನೆ.

ಸತ್ತನಂತರವೂ ಭೀಷ್ಮನ ವಧೆಯನ್ನು ಇಚ್ಛಿಸಿ ಘೋರ ತಪಸ್ಸನ್ನು ಆಚರಿಸಿದ ಆ ಪುರಾತನ ಸತೀ ಕಾಶಿಕನ್ಯೆಯು ದೈವದಿಂದ ಪಾಂಚಾಲನ ಮಗಳಾಗಿ ಹುಟ್ಟಿ ನಂತರ ಗಂಡಾದ, ಪುರುಷವ್ಯಾಘ್ರ, ಸ್ತ್ರೀ-ಪುರುಷರ ಗುಣಾಗುಣಗಳನ್ನು ತಿಳಿದಿರುವ, ಕಲಿಂಗರನ್ನು ಯುದ್ಧದಲ್ಲಿ ಎದುರಿಸಿದ ಯುದ್ಧದುರ್ಮದ, ಕೃತಾಸ್ತ್ರ ಪಾಂಚಾಲ ಶಿಖಂಡಿಯು ಕುರುಗಳೊಂದಿಗೆ ಹೋರಾಡುತ್ತಾನೆ. ಮಹೇಷ್ವಾಸ, ರಾಜಪುತ್ರ, ಅಭೇದ್ಯ ಕವಚಗಳನ್ನು ಧರಿಸಿದ ಶೂರ ಐವರು ಕೇಕಯ ಸಹೋದರರು ನಿನ್ನೊಡನೆ

ಹೋರಾಡುತ್ತಾರೆ. ಆ ದೀರ್ಘಬಾಹು, ಕ್ಷಿಪ್ರಾಸ್ತ್ರ, ಧೃತಿಮಾನ್, ಸತ್ಯವಿಕ್ರಮಿ, ವೃಷ್ಣಿವೀರ ಯುಯುಧಾನನೊಂದಿಗೆ ನಿನಗೆ ಹೋರಾಡಬೇಕಾಗುತ್ತದೆ. ಮಹಾತ್ಮ ಪಾಂಡವರಿಗೆ ಸಮಯ ಬಂದಾಗ ಶರಣ್ಯನಾಗಿದ್ದ ಆ ವಿರಾಟನನ್ನು ಕೂಡಿ ಪಾಂಡವನು ನಿನ್ನೊಡನೆ ಯುದ್ಧ ಮಾಡುತ್ತಾನೆ. ವಾರಾಣಸೀ ರಾಜ ಕಾಶೀಪತಿ ಮಹಾರಥಿಯು ಅವರ ಪಂಗಡವನ್ನು ಸೇರಿದ್ದಾನೆ. ಅವನನ್ನು ಕೂಡಿ ನಿನ್ನೊಡನೆ ಯುದ್ಧಮಾಡುವನು. ಮಕ್ಕಳಾಗಿದ್ದರೂ ಯುದ್ಧದಲ್ಲಿ ದುರ್ಜಯರಾಗಿರುವ, ಮುಟ್ಟಿದರೆ ವಿಷಸರ್ಪಗಳ ಸಮನಾಗಿರುವ ಮಹಾತ್ಮ ದ್ರೌಪದೇಯರೊಡನೆ ಪಾಂಡವನು ನಿನ್ನನ್ನು ಎದುರಿಸುತ್ತಾನೆ. ವೀರ್ಯದಲ್ಲಿ ಕೃಷ್ಣನ ಸಮನಾಗಿರುವ, ಆತ್ಮ ನಿಗ್ರಹದಲ್ಲಿ ಯುಧಿಷ್ಠಿರನ ಸಮನಾಗಿರುವ ಆ ಅಭಿಮನ್ಯುವಿನೊಂದಿಗೆ ಪಾಂಡವನು ನಿನ್ನನ್ನು ಎದುರಿಸುತ್ತಾನೆ. ವೀರ್ಯದಲ್ಲಿ ಅಪ್ರತಿಮನಾಗಿರುವ, ಕ್ರುದ್ಧನಾದರೆ ಸಮರದಲ್ಲಿ ದುಃಸ್ಸಹನಾದ, ಮಹಾಯಶ, ಮಹಾರಥಿ, ಶಿಶುಪಾಲನ ಮಗ ಧೃಷ್ಟಕೇತುವು ಅವರ ವಶದಲ್ಲಿದ್ದಾನೆ. ಅವನೊಂದಿಗೆ ಪಾಂಡವನು ನಿನ್ನನ್ನು ಎದುರಿಸುತ್ತಾನೆ.

ದೇವತೆಗಳಿಗೆ ವಾಸವನಂತೆ ಪಾಂಡವರಿಗೆ ಸಂಶ್ರಯನಾಗಿರುವ ವಾಸುದೇವನೊಂದಿಗೆ ಪಾಂಡವನು ನಿನ್ನನ್ನು ಎದುರಿಸುತ್ತಾನೆ. ಹಾಗೆಯೇ ಚೇದಿಪತಿಯ ಅಣ್ಣ ಶರಭನು ಕರಕರ್ಷಣನೊಡನೆ

ಅವರನ್ನು ಸೇರಿದ್ದಾನೆ. ಅವನೂ ಕೂಡ ನಿನ್ನೊಡನೆ ಹೋರಾಡುತ್ತಾನೆ. ಜರಾಸಂಧನ ಮಗ ಸಹದೇವ ಮತ್ತು ಜಯತ್ಸೇನ ಇಬ್ಬರೂ, ಮಹಾ ಸೇನೆಯೊಂದಿಗೆ ಆವೃತನಾದ ಮಹಾತೇಜ ದ್ರುಪದ ಇವರು ಪಾಂಡವರಿಗಾಗಿ ಜೀವವನ್ನು ತೊರೆದು ಯುದ್ಧಮಾಡಲು ಸಿದ್ಧರಾಗಿದ್ದಾರೆ. ಇವರು ಮತ್ತು ಇತರ ಬಹಳಷ್ಟು, ನೂರಾರು, ಪೂರ್ವ-ಪಶ್ಚಿಮಗಳ ಮಹೀಕ್ಷಿತರು, ರಥಗಳನ್ನೇರಿ ಧರ್ಮರಾಜನ ಜೊತೆಗೆ ಬೀಡುಬಿಟ್ಟಿದ್ದಾರೆ."

## ಭೀಮಸೇನನ ಕುರಿತು ತನಗಿರುವ ಭಯವನ್ನು ಧೃತರಾಷ್ಟ್ರನು ತೋಡಿಕೊಳ್ಳುವುದು

ಧೃತರಾಷ್ಟ್ರನು ಹೇಳಿದನು:

"ನೀನು ಹೇಳಿದ ಈ ಎಲ್ಲರೂ ಮಹೋತ್ಸಾಹಿಗಳು. ಇವರೆಲ್ಲರೂ ಒಂದಾಗಿ ಸೇರಿ ಭೀಮನೊಬ್ಬನಿಗೇ ಸಮಾನರು. ಭೀಮಸೇನನ ಕುರಿತು ಯೋಚಿಸಿದಾಗಲೆಲ್ಲ ನನಗೆ ಮತ್ತೆ ಮತ್ತೆ ಮಹಾ ಭಯವು ಹುಟ್ಟುತ್ತದೆ. ಕೃದ್ಧನಾದ ಭೀಮನನ್ನು ನೋಡಿ ನನಗೆ ಹುಲಿಯನ್ನು ಕಂಡ ಮಹಾ ರುರುವಿನಂತೆ ಭಯವಾಗುತ್ತದೆ. ಎಲ್ಲ ರಾತ್ರಿಗಳೂ ನಾನು, ಅಬಲ ಪಶುವು ಸಿಂಹದಿಂದ ಹೇಗೋ ಹಾಗೆ ವೃಕೋದರನಿಂದ ಭೀತನಾಗಿ ದೀರ್ಘ ಬಿಸಿ ನಿಃಶ್ವಾಸಗಳನ್ನು ಬಿಡುತ್ತಾ ಎದ್ದಿರುತ್ತೇನೆ.

ತೇಜಸ್ಸಿನಲ್ಲಿ ಶಕ್ರನಿಗೆ ಸರಿಸಮನಾದ ಆ ಮಾಹಾಬಾಹುವಿನ ಸರಿಸಮನಾದವ ಯಾರನ್ನೂ ನಾನು ಈ ಸೇನೆಯಲ್ಲಿ ಕಾಣುವುದಿಲ್ಲ. ಆ ಕೌಂತೇಯ ಪಾಂಡವನು ಅಮರ್ಷಣ, ಕಡು ವೈರವನ್ನಿಟ್ಟುಕೊಳ್ಳುವವನು, ಹಾಸ್ಯದಲ್ಲಿಯೂ ನಗುವವನಲ್ಲ, ಸಿಟ್ಟಿನಲ್ಲಿ ಹುಚ್ಚಾಗುತ್ತಾನೆ, ಕೀಳಾಗಿ ನೋಡುತ್ತಾನೆ ಮತ್ತು ಗುಡುಗಿನ ಧ್ವನಿಯಲ್ಲಿ ಮಾತನಾಡುತ್ತಾನೆ. ಆ ಮಹಾವೇಗಿ, ಮಹೋತ್ಸಾಹೀ, ಮಹಾಬಾಹು ಮಹಾಬಲನು ಯುದ್ಧದಲ್ಲಿ ನನ್ನ ಮಂದ ಮಕ್ಕಳನ್ನು ಅಂತ್ಯಗೊಳಿಸುತ್ತಾನೆ. ಅಂತಕ ಯಮನು ದಂಡವನ್ನು ಹಿಡಿದು ಹೇಗೋ ಹಾಗೆ ಗದೆಯನ್ನು ತಿರುಗಿಸುತ್ತಾ ಆ ಕುರುಗಳ ವೃಷಭ ವೃಕೋದರನು ಯುದ್ಧದಲ್ಲಿ ಹೋರಾಡುತ್ತಾನೆ. ಈಗಲೂ ಕೂಡ ಉಕ್ಕಿನಿಂದ ಮಾಡಲ್ಪಟ್ಟ, ಕಾಂಚನಭೂಷಿತ ಆ ಘೋರ ದಂಡವನ್ನು ನೆನೆಸಿಕೊಂಡಾಗಲೆಲ್ಲ ಅದನ್ನು ಎತ್ತಿ ಹಿಡಿದಿರುವ ಒಂದು ಬ್ರಹ್ಮದಂಡದಂತೆ ಕಾಣುತ್ತೇನೆ. ಬಲಶಾಲಿ ಸಿಂಹವು ರುರುಗಳ ಗುಂಪುಗಳ ಮಧ್ಯೆ ಹೇಗೆ ಸುಳಿದಾಡುವುದೋ ಹಾಗೆ ಭೀಮನು ನನ್ನ ಸೇನೆಗಳ ಮಧ್ಯೆ ಸಂಚರಿಸುತ್ತಾನೆ. ಅವನೊಬ್ಬನೇ ನನ್ನ ಮಕ್ಕಳಮೇಲೆ ಕ್ರೂರ ವಿಕ್ರಮವನ್ನು ತೋರಿಸಿದವನು.

ಬಾಲಕನಾಗಿದ್ದಲೂ ಅವನು ಹೆಚ್ಚು ತಿಂದು ರಭಸದಿಂದ ಯಾವಾಗಲೂ ಅವರನ್ನು ಕಾಡುತ್ತಿದ್ದನು. ಬಾಲ್ಯದಲ್ಲಿ

ದುರ್ಯೋಧನಾದಿಗಳು ಅವನೊಡನೆ ಯುದ್ಧಮಾಡುವಾಗ ಆನೆಯಿಂದಲೋ ಎಂಬಂತೆ ಪೀಡಿತರಾದಾಗ ನನ್ನ ಹೃದಯವು ಉದ್ವೇಗಗೊಳ್ಳುತ್ತಿತ್ತು. ನಿತ್ಯವೂ ನನ್ನ ಮಕ್ಕಳು ಅವನ ವೀರ್ಯದಿಂದ ಕಷ್ಟವನ್ನು ಅನುಭವಿಸಿದರು. ಆ ಭೀಮಪರಾಕ್ರಮಿ ಭೀಮನೇ ಈ ಒಡಕಿಗೆ ಕಾರಣ. ಯುದ್ಧದಲ್ಲಿ ಕ್ರೋಧಮೂರ್ಛಿತನಾದ ಭೀಮ, ನಮ್ಮ ಸೇನೆಯ ಸೈನಿಕರು, ಆನೆಗಳು ಮತ್ತು ಕುದುರೆಗಳನ್ನು ಹಿಡಿದು ಮುಂದುವರೆಯುವ ಭೀಮನನ್ನು ನಾನು ಕಾಣುತ್ತಿದ್ದೇನೆ. ಅಸ್ತ್ರಗಳಲ್ಲಿ ದ್ರೋಣಾರ್ಜುನರ ಸಮಾನನಾದ, ವೇಗದಲ್ಲಿ ವಾಯುವೇಗಕ್ಕೆ ಸಮನಾದ ಅಮರ್ಷಣ ಶೂರ ಭೀಮಸೇನನ ಕುರಿತು ನನಗೆ ಹೇಳು! ಆ ರಿಪುಘಾತಿ ಮನಸ್ವಿಯು ಅಂದೇ ನನ್ನ ಮಕ್ಕಳೆಲ್ಲರನ್ನೂ ಕೊಲ್ಲಲಿಲ್ಲ ಎನ್ನುವುದೇ ಅತಿಯಾದ ಲಾಭ ಎಂದು ತಿಳಿದುಕೊಳ್ಳುತ್ತೇನೆ. ಯಾರ ಭೀಮಬಲದಿಂದ ಯಕ್ಷ-ರಾಕ್ಷಸರು ಹತರಾದರೋ ಅವನ ವೇಗವನ್ನು ರಣದಲ್ಲಿ ಮನುಷ್ಯರು ಹೇಗೆ ಸಹಿಸಿಕೊಂಡಾರು? ಬಾಲಕನಾಗಿದ್ದಾಗಲೂ ಕೂಡ ಅವನು ಸಂಪೂರ್ಣ ನನ್ನ ವಶದಲ್ಲಿ ಬಂದಿರಲೇ ಇಲ್ಲ. ಈಗ ಪುನಃ ದುಷ್ಕೃತ್ಯಗಳಿಂದ ರೋಷಗೊಂಡ ಆ ಪಾಂಡವನು ಹೇಗೆ ತಾನೇ ನನ್ನ ಹಿಡಿತಕ್ಕೆ ಬರುತ್ತಾನೆ?

ನಿಷ್ಠೂರಮಾಡದಿದ್ದರೂ ನಿಷ್ಠುರಗೊಳ್ಳುವ, ಭಜಿಸಿದರೂ ಸೌಮ್ಯಗೊಳ್ಳದ, ಹುಬ್ಬುಗಳನ್ನು ಗಂಟಿಕ್ಕಿ ಕೆಳನೋಡುವ

ವೃಕೋದರನನ್ನು ಹೇಗೆ ಶಾಂತಗೊಳಿಸಬೇಕು? ಬಹುನಾಯಕತ್ವವನ್ನುಳ್ಳ, ಅಪ್ರತಿಮ ಬಲಶಾಲಿ ಮತ್ತು ಗೌರವರ್ಣದವನಾದ, ತಾಳವೃಕ್ಷದಂತೆ ಎತ್ತರನಾಗಿರುವ, ಭೀಮಸೇನನು ಪ್ರಮಾಣದಲ್ಲಿ ಅರ್ಜುನನಿಗಿಂತ ಒಂದು ಬೆರಳು ಹೆಚ್ಚಾಗಿದ್ದಾನೆ. ಆ ಬಲಶಾಲಿ ಮಧ್ಯಮ ಪಾಂಡವನು ವೇಗದಲ್ಲಿ ಕುದುರೆಗಳಂತೆ, ಬಲದಲ್ಲಿ ಆನೆಗಳಂತೆ ಇದ್ದಾನೆ. ಚೆನ್ನಾಗಿ ಮಾತನಾಡುತ್ತಾನೆ. ಅವನ ಕಣ್ಣುಗಳು ಜೇನಿನ ಬಣ್ಣದ್ದು. ರೂಪ ಮತ್ತು ವೀರ್ಯದಲ್ಲಿ ಆ ಪಾಂಡವನು ಬಾಲ್ಯದಲ್ಲಿಯೂ ಹಾಗೆಯೇ ಇದ್ದಿದ್ದನೆಂದು ನಾನು ಹಿಂದೆ ವ್ಯಾಸನ ಬಾಯಿಯಿಂದಲೇ ಕೇಳಿದ್ದೆ. ಪ್ರಹಾರಿಗಳಲ್ಲಿ ಶ್ರೇಷ್ಠನಾದ ಬೀಮನು ಕ್ರುದ್ಧನಾಗಿ ರಣದಲ್ಲಿ ಅವನ ಉಕ್ಕಿನ ಗದೆಯಿಂದ ರಥಗಳನ್ನೂ, ಆನೆಗಳನ್ನೂ, ಕುದುರೆಗಳನ್ನೂ, ನರರನ್ನೂ ಕೊಲ್ಲುತ್ತಾನೆ. ಅಯ್ಯಾ! ಆ ಅಮರ್ಷಿ, ನಿತ್ಯಸಂರಬ್ಧ, ರೌದ್ರ, ಕ್ರೂರಪರಾಕ್ರಮಿಯನ್ನು ನಾನು ಹಿಂದೆ ಅವನ ಇಚ್ಛೆಗೆ ವಿರುದ್ಧವಾಗಿ ಮಾಡಿ ಅವನನ್ನು ಅಪಮಾನಿಸಿದೆ.

ಹೇಗೆ ತಾನೇ ನನ್ನ ಮಕ್ಕಳು ನೇರವಾಗಿರುವ, ಹರಿತವಾಗಿರುವ, ದಪ್ಪಗಿರುವ, ಸುಂದರ ಕೊನೆಗಳನ್ನುಳ್ಳ, ಬಂಗಾರದಿಂದ ಅಲಂಕೃತವಾಗಿರುವ, ನೂರುಜನರನ್ನು ಕೊಲ್ಲಬಲ್ಲ, ಮತ್ತು ಎಸೆದರೆ ಅಮೋಘ ಶಬ್ಧವನ್ನುಂಟುಮಾಡುವ ಆ ಗದೆಯನ್ನು ಸಹಿಸಿಕೊಳ್ಳುತ್ತಾರೆ?

ಭೀಮಸೇನಮಯವಾದ ಅಪಾರವಾದ ಆಳವಾದ ನೀರುಳ್ಳ, ಶರಗಳ ವೇಗದಿಂದ ಅಲ್ಲೋಲಕಲ್ಲೋಲಗೊಂಡು ದಾಟಲು ಅಸಾಧ್ಯವಾದ ಸಮುದ್ರವನ್ನು ಈ ಮಂದಮತಿಗಳು ಹೇಗೆ ದಾಟುತ್ತಾರೆ? ಪಂಡಿತರೆಂದು ತಿಳಿದುಕೊಂಡಿರುವ, ಆದರೂ ಬಾಲಕರಂತಿರುವ, ಅವರು ನಾನೆಷ್ಟು ಕೂಗಿ ಹೇಳಿದರೂ ಕೇಳಿಸಿಕೊಳ್ಳುವುದಿಲ್ಲ. ಕೇವಲ ಜೇನುತುಪ್ಪವನ್ನು ನೋಡಿದ ಅವರಿಗೆ ಎದುರಿಗಿರುವ ಆಳವಾದ ಪ್ರಪಾತವಿರುವುದು ಕಾಣಿಸುವುದಿಲ್ಲ. ನರರೂಪದಲ್ಲಿರುವ ಆ ವಾಯುವಿನೊಂದಿಗೆ ಯಾರು ಯುದ್ಧವನ್ನು ಮಾಡುತ್ತಾರೋ ಅವರು ಧಾತ್ರನಿಂದ ಚೋದಿತರಾಗಿ ಸಿಂಹದಿಂದ ಮಹಾಮೃಗವು ಕೊಲ್ಲಲ್ಪಡುವಂತೆ ನಾಶಹೊಂದುತ್ತಾರೆ. ಪೂರ್ಣ ನಾಲ್ಕು ಅಡಿ ಉದ್ದವಾಗಿರುವ, ಆರೂ ಕಡೆಯಲ್ಲಿ ಅಮಿತ ಬಲಶಾಲಿಯಾಗಿರುವ, ಮುಟ್ಟಿದರೆ ನೋವಾಗುವ ಆ ಗದೆಯನ್ನು ಎಸೆದರೆ ನನ್ನ ಮಕ್ಕಳು ಹೇಗೆ ತಾನೆ ಸಹಿಸಿಯಾರು? ಅವನು ಗದೆಯನ್ನು ತಿರುಗಿಸುತ್ತಾ ಆನೆಗಳ ತಲೆಗಳನ್ನು ಒಡೆಯುವಾಗ, ನಾಲಿಗೆಯಿಂದ ತನ್ನ ಬಾಯಿಯ ಅಂಚುಗಳನ್ನು ನೆಕ್ಕುತ್ತಿರುವಾಗ, ದೀರ್ಘ ನಿಟ್ಟುಸಿರುಬಿಡುತ್ತಿರುವಾಗ, ಬೀಳುತ್ತಿರುವ ಮೃಗಗಳ ಭೈರವ ಕೂಗಿಗೆ ಪ್ರತ್ಯುತ್ತರವಾಗಿ ಕೂಗುತ್ತಾ, ವಿರುದ್ಧವಾಗಿ ಬಂದು ಬೀಳುತ್ತಿರುವ ಮದಿಸಿ ಗರ್ಜಿಸುತ್ತಿರುವ ಆನೆಗಳನ್ನು

ಎದುರಿಸುವಾಗ, ಮಾರ್ಗಗಳಲ್ಲಿ ರಥಗಳನ್ನೂ ರಥಿಕರನ್ನೂ ಗುರಿಯಿಟ್ಟು ಸಂಹರಿಸುವಾಗ, ಆ ಪ್ರಜ್ವಲಿತ ಅಗ್ನಿಯಿಂದ ಕೂಡ ನನ್ನ ಪ್ರಜೆಗಳು ಉಳಿಯುವುದಿಲ್ಲ. ನನ್ನ ಸೇನೆಯನ್ನು ಕತ್ತರಿಸಿ ದಾರಿಯನ್ನು ಮಾಡಿಕೊಂಡು ಓಡಿ ಮುಂದೆ ಬರುವ ಆ ಮಹಾಬಾಹು ಗದಾಪಾಣಿಯು ನರ್ತಿಸುತ್ತಿರುವ ಯುಗಾಂತನಂತೆ ಕಾಣಿಸುತ್ತಾನೆ. ಹೂವಿರುವ ಮರಗಳನ್ನು ಕೆಳಗುರುಳಿಸಿ ಬರುವ ಆನೆಗಳಂತೆ ವೃಕೋದರನು ರಣದಲ್ಲಿ ನನ್ನ ಪುತ್ರರ ಸೇನೆಯನ್ನು ಉರುಳಿಸಿ ಮುಂದುವರೆಯುತ್ತಾನೆ. ರಥಗಳನ್ನು ಜನರಿಲ್ಲದಂತೆ ಮಾಡಿ, ಧ್ವಜಗಳಿಲ್ಲದಂತೆ ಮಾಡಿ, ರಥಗಳನ್ನೇರಿ ಹೋರಾಡುವ ಪುರುಷವ್ಯಾಘ್ರರನ್ನು ಭಗ್ನ ಮಾಡಿ ಗಂಗೆಯು ವೇಗದಿಂದ ಪ್ರವಾಹದಲ್ಲಿ ಮರಗಳನ್ನು ಕೊಚ್ಚಿಕೊಂಡು ಹೋಗುವಂತೆ ಅವನು ನನ್ನ ಪುತ್ರರ ಮಹಾಸೇನೆಯನ್ನು ಪ್ರವೇಶಿಸುತ್ತಾನೆ. ಭೀಮಸೇನನ ಬಲದಿಂದ ಪೀಡಿತರಾಗಿ ನನ್ನ ಪುತ್ರರೂ, ಅವರ ಸೇವಕರೂ ಮತ್ತು ರಾಜರು ಕೂಡ ಎಲ್ಲ ದಿಕ್ಕುಗಳಲ್ಲಿ ಚದುರಿ ಓಡಿಹೋಗುತ್ತಾರೆ.

ಅವನು ವಾಸುದೇವನ ಸಹಾಯದಿಂದ ವಯಸ್ಸಾದ ಮಹಾವೀರ ರಾಜ ಜರಾಸಂಧನನ್ನು ಅವನ ಅಂತಃಪುರವನ್ನು ಪ್ರವೇಶಿಸಿ ಉರುಳಿಸಿದನು. ಆ ಧೀಮತ ಮಾಗಧೇಂದ್ರ ಜರಾಸಂಧನಾದರೋ ಈ ದೇವಿ ಪೃಥ್ವಿಯನ್ನಿಡೀ ತನ್ನ ಬಲದಿಂದ ವಶಪಡಿಸಿಕೊಂಡು ಮೆರೆಯುತ್ತಿದ್ದನು. ಭೀಷ್ಮನ

ಪ್ರತಾಪದಿಂದ ಕುರುಗಳು ಮತ್ತು ನೀತಿಯಿಂದ ಅಂಧಕ-ವೃಷ್ಣಿಯರು ಅವನ ವಶದಲ್ಲಿ ಬರಲಿಲ್ಲ ಎನ್ನುವುದು ದೈವವೇ ಸರಿ. ಅವನಲ್ಲಿಗೆ ಹೋಗಿ ಆ ವೀರ ಪಾಂಡುಪುತ್ರನು ತನ್ನ ಬಾಹುಬಲದಿಂದ ಅವಸರದಲ್ಲಿ ಅನಾಯುಧನಾಗಿ ಅವನನ್ನು ಕೊಂದ ಎನ್ನುವುದಕ್ಕಿಂತ ಹೆಚ್ಚಿನದು ಏನಿದೆ? ಬಹಳ ಸಮಯದಿಂದ ವಿಷವನ್ನು ಶೇಖರಿಸಿಟ್ಟುಕೊಂಡಿರುವ ಹಾವಿನಂತೆ ಅವನು ರಣದಲ್ಲಿ ನನ್ನ ಮಕ್ಕಳ ಮೇಲೆ ತನ್ನ ತೀಕ್ಷ್ಣ ವಿಷವನ್ನು ಕಾರುವವನಿದ್ದಾನೆ. ದೇವಸತ್ತಮ ಮಹೇಂದ್ರನು ವಜ್ರದಿಂದ ದಾನವರನ್ನು ಹೇಗೋ ಹಾಗೆ ಗದಾಪಾಣಿ ಭೀಮಸೇನನು ನನ್ನ ಮಕ್ಕಳನ್ನು ಕೊಲ್ಲುತ್ತಾನೆ. ಎದುರಿಸಲಾಗದ, ತಪ್ಪಿಸಿಕೊಳ್ಳಲಾರದ ತೀವ್ರವೇಗ ಪರಾಕ್ರಮಿಯು ತಾಮ್ರದಂತೆ ಕೆಂಪುಕಣ್ಣುಗಳೊಂದಿಗೆ ಮೇಲೆ ಬೀಳುವ ವೃಕೋದರನನ್ನು ನಾನು ಕಾಣುತ್ತಿದ್ದೇನೆ. ಭೀಮನು ಗದೆಯನ್ನು ಹಿಡಿಯದೇ, ಧನುಸ್ಸೂ ಇಲ್ಲದೇ, ವಿರಥನಾಗಿ, ಕವಚಗಳಿಲ್ಲದೇ ಬಾಹುಗಳಿಂದ ಯುದ್ಧಮಾಡುತ್ತಿದ್ದರೂ ಅವನನ್ನು ಎದುರಿಸುವ ಪುರುಷನು ಯಾರಿದ್ದಾನೆ?

ಭೀಷ್ಮ, ದ್ರೋಣ, ಕೃಪ ಶಾರದ್ವತರು ನಾನು ತಿಳಿದಂತೆ ಆ ಧೀಮತನ ವೀರ್ಯವನ್ನು ತಿಳಿದಿದ್ದಾರೆ. ಇದನ್ನು ತಿಳಿದೂ ಆರ್ಯರಂತೆ ನಡೆದುಕೊಳ್ಳುವ ಮತ್ತು ಸಂಗರದಲ್ಲಿ ಜೀವತೊರೆಯಲು ಬಯಸುವ ಈ ನರರ್ಷಭರು ನನ್ನವರ

ಸೇನಾಮುಖದಲ್ಲಿ ನಿಲ್ಲುತ್ತಾರೆ. ದೈವವು ಎಲ್ಲೆಲ್ಲಿಯೂ, ಅದರಲ್ಲಿಯು ವಿಶೇಷವಾಗಿ ಪುರುಷನ ವಿಷಯದಲ್ಲಿ, ಬಲಶಾಲಿ. ಅವರದೇ ಜಯವನ್ನು ಕಾಣುತ್ತೇನಾದರೂ ಯುದ್ಧಮಾಡುವವರನ್ನು ನಿಯಂತ್ರಿಸಲಾಗುತ್ತಿಲ್ಲ. ಆ ಮಹೇಷ್ವಾಸರು ಪುರಾತನವಾದ ಇಂದ್ರಮಾರ್ಗದಲ್ಲಿ ಹೋಗಲು ಸಿದ್ಧರಾಗಿದ್ದಾರೆ. ಅವರು ತುಮುಲದಲ್ಲಿ ಪಾರ್ಥಿವ ಯಶಸ್ಸನ್ನು ರಕ್ಷಿಸುತ್ತಾ ಪ್ರಾಣಗಳನ್ನು ತ್ಯಜಿಸುತ್ತಾರೆ. ನನ್ನ ಮಕ್ಕಳು ಹೇಗೋ ಹಾಗೆ ಪಾಂಡವರೂ ಕೂಡ ಭೀಷ್ಮನ ಮೊಮ್ಮಕ್ಕಳು ಮತ್ತು ದ್ರೋಣ-ಕೃಪರ ಶಿಷ್ಯರು. ಈ ಮೂವರು ಸ್ಥಾವಿರರಿಗೆ ನಾವು ಏನೋ ಸ್ವಲ್ಪ ಸಂತೋಷವನ್ನೂ ಆಶ್ರಯವನ್ನೂ ಕೊಟ್ಟಿದ್ದೇವೆ. ಅದಕ್ಕೆ ಬದಲಾಗಿ ನಮಗೆ ಈ ಆರ್ಯರು ಇದನ್ನು ಮಾಡುತ್ತಿದ್ದಾರೆ. ಶಸ್ತ್ರವನ್ನು ಹಿಡಿದು ಕ್ಷತ್ರಧರ್ಮವನ್ನು ಅನುಸರಿಸಿ ರಣದಲ್ಲಿ ನಿಧನಹೊಂದುವುದು ಈ ಇಬ್ಬರು ಬ್ರಾಹ್ಮಣರ ಉತ್ತಮ ವರವೆಂದೇ ಹೇಳುತ್ತಾರೆ. ಪಾಂಡವರೊಂದಿಗೆ ಯುದ್ಧಮಾಡುವ ಎಲ್ಲರ ಕುರಿತು ಶೋಕಿಸುತ್ತಿದ್ದೇನೆ. ವಿದುರನು ಮೊಡಲೇ ಕಂಡುಕೊಂಡಿದ್ದ ಆ ಭಯವು ಬಂದಂತಿದೆ. ಜ್ಞಾನವು ದುಃಖವನ್ನು ನಾಶಪಡಿಸುತ್ತದೆ ಎಂದು ಅನ್ನಿಸುವುದಿಲ್ಲ. ಆದರೆ ಅತಿದೊಡ್ಡ ದುಃಖವು ಜ್ಞಾನದ ನಾಶಕ್ಕೆ ಕಾರಣವಾಗಬಹುದು. ಲೋಕಸಂಗ್ರಹಗಳಿಂದ ನಿರ್ಮುಕ್ತರಾದ ಋಷಿಗಳು ಕೂಡ

ಸುಖಿಗಳು ಸುಖದಲ್ಲಿರುವುದನ್ನು, ದುಃಖಿತರು ದುಃಖದಲ್ಲಿರುವುದನ್ನು ನೋಡುತ್ತಾರೆ. ಹಾಗಿರುವಾಗ ಇನ್ನು - ಸಹಸ್ರಾರು ವಿಷಯಗಳಲ್ಲಿ – ಪುತ್ರರು, ರಾಜ್ಯ, ಪತ್ನಿಯರು, ಮೊಮ್ಮಕ್ಕಳು ಮತ್ತು ಬಂಧುಗಳಲ್ಲಿ – ಆಸಕ್ತನಾಗಿರುವ ನಾನು ಯಾವ ಲೆಕ್ಕಕ್ಕೆ? ಇಂತಹ ಮಹಾ ಸಂಶಯವು ಬಂದೊದಗಿರುವಾಗ ನನಗೆ ಉತ್ತಮವಾದುದಾದರೂ ಏನು ಆಗಬಹುದು? ಎಷ್ಟೇ ಚಿಂತಿಸಿದರೂ ಕುರುಗಳ ವಿನಾಶವನ್ನೇ ಕಾಣುತ್ತೇನೆ. ಆ ದ್ಯೂತವೇ ಕುರುಗಳ ಈ ಮಹಾ ವ್ಯಸನಕ್ಕೆ ಮುಖ್ಯ ಕಾರಣವೆಂದು ತೋರುತ್ತಿದೆ. ಲೋಭದಿಂದ ಐಶ್ವರ್ಯವನ್ನು ಬಯಸಿ ಈ ಮಂದಬುದ್ಧಿಯು ಈ ಪಾಪದ ಕೆಲಸವನ್ನು ಮಾಡಿದನು.

ಇದು ಅತ್ಯಂತವೇಗದಲ್ಲಿ ಚಲಿಸುತ್ತಿರುವ ಕಾಲದ ಪರ್ಯಾಯ ಧರ್ಮವೆಂದು ನನಗನ್ನಿಸುತ್ತದೆ. ಚಕ್ರದ ಪರಿಧಿಯಲ್ಲಿ ಸಿಲುಕಿಕೊಂಡಿರುವ ನನಗೆ ಬಿಟ್ಟು ಓಡಿಹೋಗಲು ಆಗುತ್ತಿಲ್ಲ. ಏನು ಮಾಡಲಿ? ಹೇಗೆ ಮಾಡಲಿ? ಎಲ್ಲಿ ಹೋಗಲಿ? ಕಾಲದ ವಶದಲ್ಲಿ ಬಂದಿರುವ ಈ ಮಂದ ಕುರುಗಳು ನಾಶವಾಗುತ್ತಾರೆ. ನೂರು ಮಕ್ಕಳು ಹತರಾಗಿ ಸ್ತ್ರೀಯರ ಕೂಗನ್ನು ಕೇಳುವುದರ ಮೊದಲೇ ನನಗೆ ಮರಣವು ಏಕೆ ಬರುವುದಿಲ್ಲ ಎಂದು ಶೋಕಿಸುತ್ತಿದ್ದೇನೆ. ಗಾಳಿಯಿಂದ ಪ್ರಚೋದನಗೊಂಡು ಉರಿಯುವ ಬೆಂಕಿಯು ಕಟ್ಟಿಗೆಯನ್ನು

ಹೇಗೆ ಸುಡುವುದೋ ಹಾಗೆ ನನ್ನವರು ಗದಾಹಸ್ತನಾದ ಪಾಂಡವನಿಂದ, ಅರ್ಜುನನ ಸಹಾಯದಿಂದ, ಹತರಾಗುತ್ತಾರೆ.”

## ಅರ್ಜುನನ ಕುರಿತು ಧೃತರಾಷ್ಟ್ರನು ಭಯವನ್ನು ವ್ಯಕ್ತಪಡಿಸುವುದು

ಧೃತರಾಷ್ಟ್ರನು ಹೇಳಿದನು:

“ಯಾರ ತುಟಿಗಳಿಂದ ನಾವು ಒಂದಾದರೂ ಸುಳ್ಳು ಮಾತನ್ನು ಕೇಳಿರದ ಮತ್ತು ಯಾರ ಯೋಧನು ಧನಂಜಯನೋ ಅವನು ತ್ರಿಲೋಕಗಳನ್ನೂ ಆಳಬಹುದು. ಹಗಲೂ ರಾತ್ರಿ ನಾನು ಚಿಂತಿಸಿದರೂ ಯುದ್ಧದಲ್ಲಿ ಆ ಗಾಂಡೀವ ಧನ್ವಿಯನ್ನು ರಥದಲ್ಲಿ ಎದುರಿಸುವ ಯಾರನ್ನೂ ಕಾಣಲಾರೆ! ಯುದ್ಧದಲ್ಲಿ ಗಾಂಡೀವಧನ್ವಿಯು ಹೃದಯಗಳನ್ನು ಭೇದಿಸುವ ಕರ್ಣಿನಾಲೀಕಗಳನ್ನು ಮತ್ತು ಮಾರ್ಗಣಗಳನ್ನು ಪ್ರತಿದ್ವಂದಿಸುವ ಸರಿಸಮನು ಯಾರೂ ಇಲ್ಲ. ಒಂದುವೇಳೆ ವೀರ ನರರ್ಷಭರಾದ ದ್ರೋಣ-ಕರ್ಣರು ಅವನನ್ನು ಎದುರಿಸಿನಿಂತರೂ ಮಹಾತ್ಮರಾದ ಅವರಿಗೆ ಅಲ್ಪವೇ ಅವಕಾಶವಿರಬಹುದು. ನನಗೆ ವಿಜಯವು ಇಲ್ಲವೆಂಬುದರಲ್ಲಿ ಸಂಶಯವಿಲ್ಲ. ಕರ್ಣನು ಕನಿಕರವುಳ್ಳವನು ಮತ್ತು ಪ್ರಮಾದಕ್ಕೊಳಗಾಗುವನು. ಆಚಾರ್ಯನು ವೃದ್ಧ ಮತ್ತು

ಗುರು. ಬಲವಾನ್ ಪಾರ್ಥನು ದೃಢಧನ್ವಿ ಮತ್ತು ಇಬ್ಬರನ್ನೂ ಗೆಲ್ಲಲು ಸಮರ್ಥ. ನಡೆಯುವ ತುಮಲ ಯುದ್ಧದಲ್ಲಿ ಎಲ್ಲರಿಗೂ ಪರಾಜಯವೇ ಆಗುತ್ತದೆ. ಎಲ್ಲರೂ ಅಸ್ತ್ರವಿದರು, ಶೂರರು ಮತ್ತು ಎಲ್ಲರೂ ಮಹಾ ಯಶಸ್ಸನ್ನು ಪಡೆದಿದ್ದಾರೆ. ಎಲ್ಲರೂ ಅಮರ ಐಶ್ವರ್ಯವನ್ನು ತ್ಯಜಿಸಿಯಾರು ಆದರೆ ಜಯವನ್ನಲ್ಲ. ಇವರಿಬ್ಬರ ಅಥವಾ ಅರ್ಜುನನ ವಧೆಯಾದರೆ ಮಾತ್ರ ಶಾಂತಿಯುಂಟಾಗುತ್ತದೆ. ಆದರೂ ಅರ್ಜುನನ್ನು ಗೆಲ್ಲುವವನಾಗಲೀ ಕೊಲ್ಲುವವನಾಗಲೀ ಇಲ್ಲಿರುವುದು ತಿಳಿದಿಲ್ಲ. ನನ್ನ ಮಂದಬುದ್ಧಿಯವರ ಪ್ರತಿ ಹೆಚ್ಚಾಗಿರುವ ಅವನ ಕೋಪವನ್ನು ಹೇಗೆ ತಣಿಸಬಹುದು?

ಇತರರೂ ಕೂಡ ಅಸ್ತ್ರಗಳನ್ನು ತಿಳಿದಿದ್ದಾರೆ. ಅವರು ಗೆದ್ದಿದ್ದಾರೆ ಮತ್ತು ಸೋತಿದ್ದಾರೆ ಕೂಡ. ಆದರೆ ಫಲ್ಗುನನಿಗೆ ವಿಜಯವೊಂದನ್ನೇ ಕೇಳಿದ್ದೇವೆ. ಅವನು ಮೂವತ್ಮೂರು ದೇವತೆಗಳನ್ನು ಎದುರಿಸಿ ಖಾಂಡವದಲ್ಲಿ ಅಗ್ನಿಯನ್ನು ತೃಪ್ತಪಡೆಸಿದನು. ಅವನು ಸುರರೆಲ್ಲರನ್ನೂ ಗೆದ್ದನು. ಅವನಿಗೆ ಪರಾಜಯವಾದುದು ನನಗೆ ತಿಳಿದಿಲ್ಲ. ಯುದ್ಧದಲ್ಲಿ ಯಾರ ಸಾರಥಿಯು ಶೀಲ, ನಡತೆಗಳಲ್ಲಿ ಸರಿಸಮನಾಗಿರುವ ಹೃಷೀಕೇಶನೋ ಅವನ ಜಯವು, ಇಂದ್ರನಿಗೆ ಜಯವು ಹೇಗೋ ಹಾಗೆ ನಿಶ್ಚಯವಾದುದು. ಕೃಷ್ಣರಿಬ್ಬರು ಮತ್ತು ಗಾಂಡೀವ ಧನುಸ್ಸು ಈ ಮೂರೂ ತೇಜಸ್ಸುಗಳೂ ಒಂದೇ

ರಥದಲ್ಲಿ ಸೇರಿಕೊಂಡಿವೆ ಎಂದು ಕೇಳಿದ್ದೇವೆ. ಅದರಂಥಹ ಧನುಸ್ಸಾಗಲೀ ಅವರಂಥಹ ಸಾರಥಿಯಾಗಲೀ ಯೋಧನಾಗಲೀ ನಮ್ಮಲ್ಲಿಲ್ಲ. ಇದು ಮಂದಬುದ್ಧಿ ದುರ್ಯೋಧನನಿಗೆ ಮತ್ತು ಅವನ ಅನುಯಾಯಿಗಳಿಗೆ ತಿಳಿದಿಲ್ಲ. ಮೇಲಿಂದ ಬಿದ್ದ ಸಿಡಿಲು ತಲೆಯ ಮೇಲೆ ಸ್ವಲ್ಪವನ್ನಾದರೂ ಉಳಿಸೀತು. ಆದರೆ ಕಿರೀಟಿಯು ಪ್ರಯೋಗಿಸಿದ ಬಾಣವು ಏನನ್ನೂ ಉಳಿಸುವುದಿಲ್ಲ. ಫಲ್ಗುನನು ಈಗಲೇ ಕೊಲ್ಲುತ್ತಿರುವಂತೆ, ತನ್ನ ಶರವೃಷ್ಟಿಯಿಂದ ಕಾಯಗಳಿಂದ ತಲೆಗಳನ್ನು ಕತ್ತರಿಸುತ್ತಿರುವುದು ಕಂಡುಬರುತ್ತದೆ. ಎಲ್ಲೆಡೆಯೂ ಸುಡುತ್ತಿರುವ ತೇಜಸ್ಸಿನಿಂದ ಉರಿಯುತ್ತಿರುವ ಅವನ ಗಾಂಡೀವದಿಂದ ಹೊರಬಂದ ಬಾಣಗುಂಪುಗಳು ನನ್ನ ಮಕ್ಕಳ ಸೇನೆಯನ್ನು ಸುಡದೆಯೇ ಇರುತ್ತದೆಯೇ? ಆ ಸವ್ಯಸಾಚಿಯ ರಥಘೋಷದಿಂದಲೇ ಭಯಾರ್ತರಾಗಿ ಭಾರತ ಸೇನೆಯು ಬಹುಸಂಖ್ಯೆಗಳಲ್ಲಿ ನಡುಗುತ್ತಿರುವಂತೆ ನನಗೆ ತೋರುತ್ತಿದೆ. ಒಣಗಿದ ಮರಗಳನ್ನು ಸುಟ್ಟು ಹೆಚ್ಚಾಗಿ ಎಲ್ಲಕಡೆ ಪಸರಿಸುವಂತೆ, ಗಾಳಿಯಿಂದ ಬೆಂಕಿಯು ಭುಗಿಲೆದ್ದು ಸುಡುವಂತೆ ಅವನು ನನ್ನವರನ್ನು ಸುಟ್ಟು ಹಾಕುತ್ತಾನೆ. ನಿಶಿತ ಬಾಣಸಂಘಗಳನ್ನು ಉಗುಳುತ್ತಾ ಸಮರಕ್ಕೆ ಸನ್ನದ್ಧನಾಗಿ ನಿಂತ ಕಿರೀಟಿಯು, ವಿಧಾತ್ರನು ಸೃಷ್ಟಿಸಿದ, ಸರ್ವವನ್ನೂ ಕಳೆಯುವ ಅಂತಕನಂತೆ

ತಪ್ಪಿಸಿಕೊಳ್ಳಲಾರದಂತೆ ಇರುತ್ತಾನೆ. ಈಗ ಕುರುಗಳಿರುವಲ್ಲಿ, ಅವರು ಸೇರಿರುವಲ್ಲಿ, ರಣದ ಮೊದಲು ಬಹಳ ಪ್ರಕಾರದ ಕುರುಹಗಳ ಕುರಿತು ಕೇಳಿದಾಗ, ಭರತರ ಕ್ಷಯವು ಬಂದಿದೆ ಎಂದು ನನಗನ್ನಿಸುತ್ತದೆ.”

## ಧೃತರಾಷ್ಟ್ರನು ಶಾಂತಿಯ ಕುರಿತು ಮಾತನಾಡುವುದು

ಧೃತರಾಷ್ಟ್ರನು ಹೇಳಿದನು:

“ಹೇಗೆ ಪಾಂಡವರೆಲ್ಲರೂ ವಿಜಯದ ಭರವಸೆಯನ್ನಿಟ್ಟುಕೊಂಡಿದ್ದಾರೋ ಹಾಗೆಯೇ ಅವರಿಗಾಗಿ ಜೀವವನ್ನು ತೊರೆದಿರುವ ಅವರ ಜನರೂ ಕೂಡ ಜಯದಲ್ಲಿ ವಿಶ್ವಾಸವನ್ನಿಟ್ಟಿದ್ದಾರೆ. ನೀನೇ ನನಗೆ ಆ ಪರಾಕ್ರಮಿ ವೀರರ ಕುರಿತು - ಪಾಂಚಾಲರು, ಕೇಕಯರು, ಮತ್ಸ್ಯರು, ಮಾಗಧರು ಮತ್ತು ಚೇದಿರಾಜರು - ನನಗೆ ಹೇಳಿದ್ದೇಯೆ. ಇಂದ್ರನನ್ನೂ ಸೇರಿ ಈ ಲೋಕಗಳನ್ನು ವಶಪಡೆಸಿಕೊಳ್ಳಬಲ್ಲ ಬಲಶಾಲಿ, ಜಗತ್ತಿನಲ್ಲಿಯೇ ಶ್ರೇಷ್ಠನಾಗಿರುವ ಕೃಷ್ಣನೂ ಕೂಡ ಪಾಂಡವರ ಜಯದಲ್ಲಿ ವಿಶ್ವಾಸವನ್ನಿಟ್ಟಿದ್ದಾನೆ. ಅರ್ಜುನನಿಂದ ಸಮಸ್ತವಿದ್ಯೆಗಳನ್ನೂ ಬೇಗನೆ ಪಡೆದ ಸಾತ್ಯಕಿ ಶೈನಿಯು ಸಮರದಲ್ಲಿ ನೆಲೆಸಿ ಬೀಜಗಳಂತೆ ಬಾಣಗಳನ್ನು ಬಿತ್ತುತ್ತಾನೆ. ಕ್ರೂರಕರ್ಮಿ, ಮಹಾರಥಿ, ಪಾಂಚಾಲ್ಯ ಧೃಷ್ಟದ್ಯುಮ್ನನು ತನ್ನ ಪರಮಾಸ್ತ್ರ ವಿದ್ಯೆಯಿಂದ ನನ್ನವರೊಡನೆ ರಣದಲ್ಲಿ

ಹೋರಾಡುತ್ತಾನೆ. ಯುಧಿಷ್ಠಿರನ ಕ್ರೋಧದಿಂದ, ಅರ್ಜುನ, ಯಮಳರು ಮತ್ತು ಭೀಮಸೇನನ ವಿಕ್ರಮದಿಂದ ನನಗೆ ಭಯವಾಗುತ್ತಿದೆ. ಆ ಮನುಷ್ಯೇಂದ್ರರು ನನ್ನ ಸೇನೆಯ ಮಧ್ಯೆ ಅಮಾನುಷ ಜಾಲವನ್ನು ಎಸೆದು ಸಂಹರಿಸುತ್ತಾರೆ. ಈಗಲೇ ಅದರ ಕುರಿತು ದುಃಖಿಸುತ್ತಿದ್ದೇನೆ.

ಪಾಂಡುನಂದನನು ನೋಡಲು ಸುಂದರನಾಗಿದ್ದಾನೆ. ಮನಸ್ವಿ. ಲಕ್ಷ್ಮೀವಂತ ಮತ್ತು ಬ್ರಹ್ಮವರ್ಚಸ್ಸುಳ್ಳವನು. ಅವನು ಮೇಧಾವೀ, ಸುಕೃತಪ್ರಜ್ಞ ಮತ್ತು ಧರ್ಮಾತ್ಮ. ಅವನಿಗೆ ಹೇರಳ ಮಿತ್ರರಿದ್ದಾರೆ. ಅಮಾತ್ಯರಿದ್ದಾರೆ. ಕಟ್ಟಲು ಕುದುರೆಗಳು ಮತ್ತು ಕಟ್ಟುವವರೂ ಇದ್ದಾರೆ. ತಮ್ಮಂದಿರು, ಮಾವಂದಿರು, ಮತ್ತು ಮಹಾರಥಿ ಮಕ್ಕಳಿದ್ದಾರೆ. ಆ ಪುರುಷವ್ಯಾಘ್ರ ಪಾಂಡವನಲ್ಲಿ ಧೃತಿಯಿದೆ. ಗುಟ್ಟನ್ನು ಇಟ್ಟುಕೊಳ್ಳುತ್ತಾನೆ. ಅವನು ಮೃದು, ದಾನಿ, ಮತ್ತು ವಿನಯಿ. ಸತ್ಯಪರಾಕ್ರಮಿ. ಅವನು ವಿದ್ಯಾವಂತ. ಕೃತಾತ್ಮ. ವೃದ್ಧಸೇವೀ ಮತ್ತು ಜಿತೇಂದ್ರಿಯ. ಚೆನ್ನಾಗಿ ಉರಿಯಿಸಿದ ಅಗ್ನಿಯಂತೆ ಅವನು ಸರ್ವಗುಣಸಂಪನ್ನ. ಯಾವ ಮೂಢನು ತಾನೇ ಪತಂಗದಂತೆ ಬೆಂಕಿಯಂತೆ ಉರಿಯತ್ತಿರುವವನಲ್ಲಿ ಹೋಗಿ ಬೀಳುತ್ತಾನೆ? ಪಾಂಡವಾಗ್ನಿಯನ್ನು ತಪ್ಪಿಸಿಕೊಳ್ಳದ ಮೂಢನು ಸಾಯುವುದು ಖಂಡಿತ. ಆ ರಾಜನು ಶುದ್ಧ ಬಂಗಾರದ ಪ್ರಭೆಯಿಂದ ಎತ್ತರವಾಗಿ ಉರಿಯುತ್ತಿರುವ ಶಿಖಿಯಂತೆ.

ಅವನು ಯುದ್ಧದಲ್ಲಿ ನನ್ನ ಮಂದ ಮಕ್ಕಳನ್ನು ಅಂತ್ಯಗೊಳಿಸುತ್ತಾನೆ.

ಕುರುಗಳೇ! ನನ್ನನ್ನು ಕೇಳಿ! ಯುದ್ಧವನ್ನು ಮಾಡದೇ ಇರುವುದೇ ಒಳ್ಳೆಯದು! ಯುದ್ಧವಾದರೆ ಕುಲದ ಸರ್ವನಾಶವು ನಡೆಯುವುದು ಸತ್ಯ. ಇಂದು ಶಾಂತಿಗಾಗಿ ನಾನು ಮಾಡುವ ಅಂತಿಮ ಯತ್ನ. ಇದು ನನ್ನ ಮನಸ್ಸನ್ನು ಶಮನಗೊಳಿಸುತ್ತದೆ. ಒಂದುವೇಳೆ ನಿಮಗೆ ಯುದ್ಧವು ಬೇಡವೆಂದಾದರೆ ಶಾಂತಿಗೆ ಪ್ರಯತ್ನಿಸೋಣ. ಶಾಂತಿಗಾಗಿ ಪ್ರಯತ್ನಿಸಿದರೆ ಯುಧಿಷ್ಠಿರನು ಉಪೇಕ್ಷಿಸುವುದಿಲ್ಲ. ಏಕೆಂದರೆ ಯಾವುದಕ್ಕೆ ನಾನೇ ಕಾರಣನೆಂದು ಅವನು ತಿಳಿದುಕೊಂಡಿದ್ದಾನೋ ಆ ಅಧರ್ಮದ ಕುರಿತು ಅವನಿಗೆ ಜಿಗುಪ್ಸೆಯಿದೆ.”

ಸಂಜಯನು ಹೇಳಿದನು:

“ಮಹಾರಾಜ! ನೀನು ಹೇಳಿದಂತೆಯೇ ಆಗುವುದು. ಯುದ್ಧದಲ್ಲಿ ಗಾಂಡೀವದಿಂದ ಕ್ಷತ್ರಿಯರ ವಿನಾಶವು ಕಾಣುತ್ತಿದೆ. ಆದರೆ ನಿನ್ನ ಬುದ್ಧಿಯು ನನಗೆ ಅರ್ಥವಾಗುತ್ತಿಲ್ಲ. ಸವ್ಯಸಾಚಿಯ ಸತ್ವವನ್ನು ತಿಳಿದೂ ಕೂಡ ನೀನು ನಿತ್ಯವೂ ನಿನ್ನ ಮಗನ ವಶವಾಗುತ್ತಿದ್ದೀಯೆ. ಮೊದಲಿನಿಂದಲೂ ಪಾರ್ಥರಿಗೆ ನೀನು ಕೆಟ್ಟದ್ದನ್ನೇ ಮಾಡಿದ್ದೀಯೆ. ಈಗ ಅವುಗಳ ಕುರಿತು

ಪಶ್ಚಾತ್ತಾಪ ಪಡುವ ಕಾಲವಲ್ಲ. ತಂದೆಯ ಸ್ಥಾನದಲ್ಲಿರುವವನು ಯಾವಾಗಲೂ ಸ್ನೇಹಿತನಾಗಿರಬೇಕು, ಮತ್ತು ಒಳ್ಳೆಯದನ್ನೇ ಬಯಸಬೇಕು. ಆದರೆ ಅವರ ಹಿತವನ್ನು ಬಯಸದವನನ್ನು ಹಿರಿಯರ ಸ್ಥಾನದಲ್ಲಿರಬಾರದೆಂದು ಹೇಳುತ್ತಾರೆ. ದ್ಯೂತದ ಸಮಯದಲ್ಲಿ ಅವರು ಸೋತುದನ್ನು ಕೇಳಿದಾಗ ನೀನು ಬಾಲಕನಂತೆ ನಗುತ್ತಾ 'ಇದನ್ನು ಗೆದ್ದೆವು! ಇದು ದೊರಕಿತು!' ಎಂದು ಹೇಳಿದ್ದೆ. ಇಡೀ ರಾಜ್ಯವನ್ನು ಗೆದ್ದರು ಎಂಬ ಸಂತೋಷದಲ್ಲಿ ಪಾರ್ಥರಿಗೆ ಕಠೋರವಾಗಿ ಮಾತನಾಡುತ್ತಿದ್ದಾಗ ನೀನು ಉಪೇಕ್ಷಿಸಲಿಲ್ಲ. ನಿನ್ನ ಮುಂದಿರುವ ಪ್ರಪಾತವು ನಿನಗೆ ಕಾಣಲಿಲ್ಲ. ಕುರುಜಂಗಲವು ಮಾತ್ರ ನಿನ್ನ ಪಿತ್ರಾರ್ಜಿತ ರಾಜ್ಯವಾಗಿತ್ತು. ಆ ವೀರರು ಗೆದ್ದನಂತರವೇ ನಿನಗೆ ಈ ಅಖಿಲ ಭೂಮಿಯೂ ದೊರಕಿತು. ಪಾಂಡವರು ತಮ್ಮ ಬಾಹುವೀರ್ಯದಿಂದ ಗೆದ್ದ ಭೂಮಿಯನ್ನು ನಿನಗೆ ಒಪ್ಪಿಸಿದ್ದಾರೆ. ಆದರೆ ನೀನು ಇವೆಲ್ಲವನ್ನೂ ನಾನೇ ಗೆದ್ದಿದ್ದೇನೆ ಎಂದು ತಿಳಿದುಕೊಂಡಿದ್ದೀಯೆ.

ನಿನ್ನ ಪುತ್ರರು ಗಂಧರ್ವರಾಜನಿಂದ ಸೆರೆಹಿಡಿಯಲ್ಪಟ್ಟು ದೋಣಿಯಿಲ್ಲದೇ ಸಾಗರದಲ್ಲಿ ತೇಲುತ್ತಿರುವಂತಿರುವಾಗ ಪಾರ್ಥನೇ ಅವರನ್ನು ಹಿಂದಿರುಗಿ ಪಡೆದು ತಂದನು. ದ್ಯೂತದಲ್ಲಿ ಮೋಸಗೊಂಡು ಪಾಂಡವರು ವನಕ್ಕೆ

ಹೊರಡುವಾಗ ಬಾಲಕನಂತೆ ನೀನು ಪುನಃ ಪುನಃ ನಗುತ್ತಿದ್ದೆ. ಅರ್ಜುನನು ಹರಿತ ಬಾಣಗಳ ಭಾರೀ ಮಳೆಯನ್ನು ಸುರಿಸುವಾಗ ಸಾಗರದ ನೀರೂ ಬತ್ತಿಹೋಗುತ್ತದೆ. ಇನ್ನು ಮಾಂಸಯೋನಿಯಲ್ಲಿ ಜನಿಸಿದ ಮನುಷ್ಯರು ಯಾವ ಲೆಖ್ಕಕ್ಕೆ? ಬಿಲ್ಗಾರರಲ್ಲಿ ಫಲ್ಗುನನು ಶ್ರೇಷ್ಠ. ಧನುಸ್ಸುಗಳಲ್ಲಿ ಗಾಂಡೀವವು ಶ್ರೇಷ್ಠ. ಸರ್ವಭೂತಗಳಲ್ಲಿ ಕೇಶವ ಮತ್ತು ಚಕ್ರಗಳಲ್ಲಿ ಸುದರ್ಶನವು ಶ್ರೇಷ್ಠ. ಧ್ವಜಗಳಲ್ಲಿ ವಾನರನು ಕಾಣುತ್ತಿರುವ ಧ್ವಜವು ಶ್ರೇಷ್ಠ. ಇವೆಲ್ಲವುಗಳನ್ನೂ ಹೊಂದಿರುವ ಶ್ವೇತಹಯಗಳು ಒಯ್ಯುವ ರಥದಿಂದ ರಣದಲ್ಲಿ ಅವನು ಕಾಲಚಕ್ರವು ಉರುಳುವಂತೆ ನಮ್ಮನ್ನು ನಾಶಗೊಳಿಸುತ್ತಾನೆ. ಯಾರೊಡನೆ ಭೀಮಾರ್ಜುನರು ಯೋಧರಾಗಿದ್ದಾರೋ ಅವನೇ ರಾಜ. ಅಖಿಲ ವಸುಧೆಯೂ ಅವನದ್ದೇ ಆಗುತ್ತದೆ. ನಿನ್ನ ಸೇನೆಯು ಭೀಮನಿಂದ ಪುಡಿಯಾಗಿ ಹತಪ್ರಾಯವಾಗುವುದನ್ನು ನೋಡುತ್ತಾ ದುರ್ಯೋಧನನ ನಾಯಕತ್ವದಲ್ಲಿರುವ ಕೌರವರು ನಾಶ ಹೋಗುತ್ತಾರೆ. ನಿನ್ನ ಪುತ್ರರು ಮತ್ತು ಅವರನ್ನು ಅನುಸರಿಸುವ ರಾಜರು ಭೀಮನ ಭಯದಿಂದ ಭೀತರಾಗಿ ವಿಜಯವನ್ನು ಹೊಂದಲಾರರು. ಈಗ ಮತ್ಸ್ಯರು, ಪಾಂಚಾಲರು ಮತ್ತು ಜೊತೆಗೆ ಕೇಕಯರು ನಿನ್ನನ್ನು ಗೌರವಿಸುವುದಿಲ್ಲ. ಶಾಲ್ವರು ಮತ್ತು ಶೂರಸೇನರು ಎಲ್ಲರೂ ನಿನ್ನನ್ನು ಕೀಳಾಗಿ ಕಾಣುತ್ತಾರೆ. ಏಕೆಂದರೆ ಅವರೆಲ್ಲರೂ

ವೀರ್ಯಜ್ಞ ಧೀಮತ ಪಾರ್ಥನ ಕಡೆ ಹೋಗಿದ್ದಾರೆ.

ಅನರ್ಹರಾದ ಆ ಧರ್ಮಯುಕ್ತರನ್ನು ವಧಿಸಲು ಮತ್ತು ಮೋಸಗೊಳಿಸಲು ಮುಂದುವರೆದಿರುವ ನಿನ್ನ ಪುತ್ರ ಪಾಪಪುರುಷನನ್ನು ಅವನ ಅನುಯಾಯಿಗಳೊಂದಿಗೆ ಸರ್ವೋಪಾಯಗಳನ್ನು ಬಳಸಿ ತಡೆಯಬೇಕಾಗಿದೆ. ಅದರಲ್ಲಿ ಶೋಕಿಸಬಾರದು. ದ್ಯೂತಕಾಲದಲ್ಲಿ ನಾನೂ, ಧೀಮತ ವಿದುರನೂ ಹೇಳಿದ್ದೆವು. ಇದಕ್ಕೆಲ್ಲ ನೀನು ಹೊಣೆಗಾರನಲ್ಲ ಎಂದು ಪಾಂಡವರಿಗೋಸ್ಕರ ಈ ರೀತಿ ವಿಲಪಿಸುವುದು ನಿರರ್ಥಕ."

## ದುರ್ಯೋಧನನು ಧೃತರಾಷ್ಟ್ರನಿಗೆ ವಿಜಯದ ಆಶ್ವಾಸನೆಯನ್ನು ನೀಡಿದುದು

ದುರ್ಯೋಧನನು ಹೇಳಿದನು:

"ಮಹಾರಾಜ! ನಮಗಾಗಿ ನೀನು ಶೋಕಿಸಬೇಕಿಲ್ಲ. ಹೆದರಬೇಕಿಲ್ಲ. ನಾವು ಶತ್ರುಗಳನ್ನು ಸಮರದಲ್ಲಿ ಜಯಿಸಲು ಸಮರ್ಥರಾಗಿದ್ದೇವೆ. ಪಾರ್ಥರು ವನಕ್ಕೆ ತೆರಳಿದಾಗ ಮಧುಸೂದನನು ಪರರಾಷ್ಟ್ರಗಳನ್ನು ಮರ್ದಿಸಿದ ಕೇಕಯ, ಧೃಷ್ಟಕೇತು, ಪಾರ್ಷತ ಧೃಷ್ಟದ್ಯುಮ್ನ ಮತ್ತು ಪಾರ್ಥರನ್ನು ಅನುಯಾಯಿಸಿದ ಅನ್ಯ ರಾಜರ ಬೃಹತ್ತಾದ ಮಹಾ ಸೇನೆಯನ್ನು ಒಂದುಗೂಡಿಸಿ ಬಂದಿದ್ದನು. ಇಂದ್ರಪ್ರಸ್ಥದ

ಅನತಿದೂರದಲ್ಲಿಯೇ ಆ ಮಹಾರಥರು ಬಂದು ಸೇರಿ ನಿನ್ನ ಮತ್ತು ಕುರುಗಳ ವಿರುದ್ಧ ವ್ಯವಹರಿಸಿದರು. ಪಕ್ಕದಲ್ಲಿ ವಾಸಿಸುವ ಅವರು ಕೃಷ್ಣನನ್ನು ಪ್ರಧಾನನನ್ನಾಗಿ ಇಟ್ಟುಕೊಂಡು ಜಿನಗಳ ಮೇಲೆ ಕುಳಿತಿದ್ದ ಯುಧಿಷ್ಠಿರನನ್ನು ಪೂಜಿಸಿದರು. ಆ ನರಾಧಿಪರು ರಾಜ್ಯವನ್ನು ಹಿಂದೆ ತೆಗೆದುಕೊಳ್ಳಲು ಹೇಳಿದರು. ಅವರು ನಿನ್ನನ್ನು, ನಿನ್ನ ಬಂಧುಗಳೊಂದಿಗೆ, ತೆಗೆದುಹಾಕಲು ಬಯಸಿದರು. ಇದನ್ನು ಕೇಳಿ ನಾನು ಬಾಂಧವರ ಕ್ಷಯದ ಭಯದಿಂದ ಭೀತನಾಗಿ ಭೀಷ್ಮ, ದ್ರೋಣ, ಕೃಪರಿಗೆ ಆಗ ಹೇಳಿದ್ದೆನು: ‘ವಾಸುದೇವನು ನಮ್ಮನ್ನು ಸಂಪೂರ್ಣವಾಗಿ ಕಿತ್ತೊಗೆಯಲು ಬಯಸುತ್ತಾನೆ. ಆದುದರಿಂದ ಪಾಂಡವರು ಒಪ್ಪಂದದಂತೆ ನಡೆದುಕೊಳ್ಳುವುದಿಲ್ಲ ಎಂದು ನನಗನ್ನಿಸುತ್ತದೆ. ವಿದುರನನ್ನು ಬಿಟ್ಟು ನೀವೆಲ್ಲ ಮಹಾತ್ಮರೂ ವಧ್ಯರು. ಕುರುಸತ್ತಮ ಧರ್ಮಜ್ಞ ಧೃತರಾಷ್ಟ್ರನು ವಧ್ಯನಲ್ಲ. ನಮ್ಮನ್ನು ಸಂಪೂರ್ಣವಾಗಿ ಕಿತ್ತೊಗೆದು ಯುಧಿಷ್ಠಿರನಡಿಯಲ್ಲಿ ಕುರುಗಳ ಒಂದು ರಾಜ್ಯವನ್ನು ಮಾಡಲು ಜನಾರ್ದನನು ಬಯಸುತ್ತಾನೆ. ಈಗ ಸಮಯವು ಪ್ರಾಪ್ತವಾಗಿದೆ. ಯಾವುದಕ್ಕೆ? ಶರಣುಹೋಗಲು? ಪಲಾಯನ ಮಾಡಲು? ಅಥವಾ ಪ್ರಾಣಗಳನ್ನು ತೊರೆದು ಶತ್ರುಗಳ ವಿರುದ್ಧ ಯುದ್ಧ ಮಾಡಬೇಕೇ? ಎದುರಿಸಿ ಯುದ್ಧಮಾಡಿದರೆ ಅದರಲ್ಲಿ ನಮ್ಮ ಪರಾಜಯವು ನಿಶ್ಚಿತವಾದುದು. ಏಕೆಂದರೆ ಎಲ್ಲ

ಪಾರ್ಥಿವರೂ ಯುಧಿಷ್ಠಿರನ ವಶದಲ್ಲಿದ್ದಾರೆ. ನಮ್ಮ ರಾಷ್ಟ್ರವು ವಿರಕ್ತವಾಗುತ್ತದೆ. ಮಿತ್ರರು ಕುಪಿತರಾಗುತ್ತಾರೆ. ಎಲ್ಲ ಪಾರ್ಥಿವರೂ, ಸ್ವಜನರೂ ಎಲ್ಲ ಕಡೆಗಳಿಂದ ನಮ್ಮನ್ನು ಧಿಕ್ಕರಿಸುತ್ತಾರೆ. ಶರಣು ಹೋದರೆ ಶಾಶ್ವತ ವರ್ಷಗಳ ವರೆಗೆ ಬಂಧುಗಳಲ್ಲಿ ದೋಷವುಳಿಯುತ್ತದೆ. ಪ್ರಜ್ಞಾನೇತ್ರ, ಜನೇಶ್ವರ, ತಂದೇ ನಿನ್ನ ಕುರಿತು ಶೋಕಿಸುತ್ತೇನೆ. ನನ್ನಿಂದಾಗಿ ಅವನು ಕೊನೆಯಿಲ್ಲದ ಕಷ್ಟಗಳನ್ನು ಪಡೆದಿದ್ದಾನೆ. ದುಃಖವನ್ನು ಹೊಂದಿದ್ದಾನೆ. ಏಕೆಂದರೆ ನನಗೆ ಪ್ರಿಯವಾದುದನ್ನು ಮಾಡಲೋಸುಗ ನಿನ್ನ ಪುತ್ರರೇ ಶತ್ರುಗಳು ಮುಂದುವರೆಯುವುದನ್ನು ತಡೆದಿದ್ದಾರೆ. ಇದು ನಿನಗೆ ಸಂಪೂರ್ಣವಾಗಿ ತಿಳಿದಿದೆ. ಮಹಾರಥಿ ಪಾಂಡವರು ಅಮಾತ್ಯರೊಂದಿಗೆ ರಾಜ ಧೃತರಾಷ್ಟ್ರನ ಕುಲವನ್ನು ಕಿತ್ತೊಗೆದು ವೈರಕ್ಕೆ ಪ್ರತೀಕಾರಗೊಳಿಸುತ್ತಾರೆ.’

ಆಗ ದ್ರೋಣ, ಭೀಷ್ಮ, ಕೃಪ ಮತ್ತು ದ್ರೌಣಿಯರು, ನಾನು ಮಹಾ ಚಿಂತೆಯಲ್ಲಿದ್ದೇನೆಂದು ಮತ್ತು ನನ್ನ ಇಂದ್ರಿಯಗಳು ವ್ಯಥಿತವಾಗಿವೆಯೆಂದು ಆಲೋಚಿಸಿ ಹೇಳಿದ್ದರು: ‘ಪರಂತಪ! ಇತರರು ನಮಗೆ ಬೆದರಿಕೆ ಹಾಕಿದರೆ ನಾವು ಭಯಪಡಬೇಕಾಗಿಲ್ಲ. ಇತರರು ನಮ್ಮನ್ನು ಯುದ್ಧದಲ್ಲಿ ಜಯಿಸಲು ಅಸಮರ್ಥರು. ಒಬ್ಬೊಬ್ಬರಾಗಿ ನಾವು ಸರ್ವ ಪಾರ್ಥಿವರನ್ನು ಗೆಲ್ಲಲು ಸಮರ್ಥರು. ಬರಲಿ! ಅವರ

ದರ್ಪವನ್ನು ಈ ಹರಿತ ಬಾಣಗಳಿಂದ ನಾಶಪಡಿಸುತ್ತೇವೆ. ಹಿಂದೆ ಅವನ ತಂದೆಯು ಮೃತನಾದ ನಂತರ ಭೀಷ್ಮನು ಕ್ರುದ್ಧನಾಗಿ ಸರ್ವ ಪಾರ್ಥಿವರನ್ನು ಒಂದೇ ರಥದಿಂದ ಗೆದ್ದಿದ್ದನು. ಕೋಪದಿಂದ ಕುರುಸತ್ತಮನು ಅವರಲ್ಲಿ ಬಹಳರನ್ನು ಸಂಹರಿಸಿದನು. ಆಗ ಅವರು ಭಯದಿಂದ ದೇವವ್ರತನ ಶರಣು ಹೋದರು. ನಮ್ಮೊಂದಿಗೆ ಈ ಭೀಷ್ಮನು ರಣದಲ್ಲಿ ಶತ್ರುಗಳನ್ನು ಗೆಲ್ಲಲು ಸುಸಮರ್ಥನು. ಆದುದರಿಂದ ನಿನ್ನ ಭೀತಿಯನ್ನು ಕಳೆದುಕೋ!’

ಇದು ಆ ಸಮಯದಲ್ಲಿ ಈ ಅಮಿತೌಜಸರ ನಿಶ್ಚಯವಾಗಿತ್ತು. ಹಿಂದೆ ಇಡೀ ಭೂಮಿಯು ಶತ್ರುಗಳ ವಶದಲ್ಲಿತ್ತು. ಈಗ ಅವರು ಯುದ್ಧದಲ್ಲಿ ನಮ್ಮನ್ನು ಗೆಲ್ಲಲು ಸಮರ್ಥರಿಲ್ಲ. ಏಕೆಂದರೆ ಶತ್ರು ಪಕ್ಷವು ಒಡೆದಿದೆ. ಪಾಂಡವರು ಇಂದು ತಮ್ಮ ವೀರ್ಯವನ್ನು ಕಳೆದುಕೊಂಡಿದ್ದಾರೆ. ಈಗ ಪೃಥ್ವಿಯ ಆಗುಹೋಗುಗಳು ನಮ್ಮ ಮೇಲೆ ನಿಂತಿವೆ. ನಾನು ಕರೆದು ತಂದಿರುವ ರಾಜರು ಸುಖ ದುಃಖಗಳಲ್ಲಿ ಒಂದೇ ಉದ್ದೇಶವನ್ನಿಟ್ಟುಕೊಂಡಿದ್ದಾರೆ. ನನಗಾಗಿ ಈ ರಾಜರು ಎಲ್ಲರೂ ಅಗ್ನಿಯನ್ನಾದರೂ ಅಥವಾ ಸಮುದ್ರವನ್ನಾದರೂ ಹೊಗಬಲ್ಲರು. ಅದನ್ನು ತಿಳಿದುಕೋ! ನೀನು ದುಃಖಿಸುತ್ತಿರುವುದನ್ನು ನೋಡಿ ನಿನಗೆ ಹುಚ್ಚೇನಾದರೂ ಹಿಡಿದಿದೆಯೋ ಎಂದು ಅವರು ನಗುತ್ತಿದ್ದಾರೆ. ಭೀತನಾಗಿ

ಬಹುವಿಧದಲ್ಲಿ ವಿಲಪಿಸುತ್ತಿರುವ ನೀನು ಶತ್ರುಗಳನ್ನು ಹೊಗಳುತ್ತಿದ್ದೀಯೆ. ಇಲ್ಲಿರುವ ಒಬ್ಬೊಬ್ಬ ರಾಜನೂ ಪಾಂಡವರನ್ನು ಎದುರಿಸಲು ಸಮರ್ಥನು. ಎಲ್ಲರೂ ಆತ್ಮಪೂರ್ವಕವಾಗಿ ಅದನ್ನು ತಿಳಿದಿದ್ದಾರೆ. ನಿನಗೆ ಬಂದಿರುವ ಭಯವನ್ನು ತೆಗೆದುಹಾಕು. ನಮ್ಮ ಈ ಸಮಗ್ರ ಸೇನೆಯೆಲ್ಲವನ್ನೂ ನಾಶಗೊಳಿಸಲು ವಾಸವನಿಗೂ, ಅಕ್ಷಯರೂಪೀ, ಸ್ವಯಂಭು ಬ್ರಹ್ಮನಿಗೂ ಸಾಧ್ಯವಿಲ್ಲ.

ನನ್ನ ಪ್ರಭಾವ ಮತ್ತು ಸೇನೆಗೆ ಹೆದರಿ ಯುಧಿಷ್ಠಿರನು ಪುರವನ್ನು ಬಿಟ್ಟು ಐದು ಗ್ರಾಮಗಳನ್ನು ಬೇಡುತ್ತಿದ್ದಾನೆ! ಕುಂತೀಪುತ್ರ ವೃಕೋದರನು ಸಮರ್ಥ ಎಂದು ನೀನು ಏನು ಅಭಿಪ್ರಾಯ ಪಡುತ್ತೀಯೋ ಅದು ಸುಳ್ಳು. ನಿನಗೆ ನನ್ನ ಸಂಪೂರ್ಣ ಪ್ರಭಾವವು ತಿಳಿದಿಲ್ಲ. ಗದಾಯುದ್ಧದಲ್ಲಿ ನನಗೆ ಸಮನಾದವನು ಭೂಮಿಯಲ್ಲಿಯೇ ಯಾರೂ ಇಲ್ಲ. ಯಾರೂ ನನ್ನನ್ನು ಮೀರಿಸಿಲ್ಲ. ಯಾರೂ ಮೀರಿಸುವುದೂ ಇಲ್ಲ. ಉದ್ದೇಶವನ್ನಿಟ್ಟುಕೊಂಡೇ ಕಷ್ಟಪಟ್ಟು ನಾನು ಈ ವಿದ್ಯೆಯಲ್ಲಿ ಪಾರಂಗತನಾಗಿದ್ದೇನೆ. ಆದುದರಿಂದ ನನಗೆ ಭೀಮನ ಸ್ವಲ್ಪವೇ ಭಯವೆನ್ನುವುದನ್ನೂ ತಿಳಿದಿಲ್ಲ. ಸಂಕರ್ಷಣನಲ್ಲಿ ನಾನು ಕಲಿಯುತ್ತಿದ್ದಾಗ ಗದಾಯುದ್ಧದಲ್ಲಿ ದುರ್ಯೋಧನನ ಸಮನಿಲ್ಲ ಎಂದು ನಿಶ್ಚಯವಾಗಿತ್ತು. ನಿನಗೆ ಮಂಗಳವಾಗಲಿ! ಯುದ್ಧದಲ್ಲಿ ನಾನು ಸಂಕರ್ಷಣನ ಸಮ. ಬಲದಲ್ಲಿ ಭುವಿಯಲ್ಲಿ

ಅವನಿಗಿಂತಲೂ ಅಧಿಕ. ಯುದ್ಧದಲ್ಲಿ ಭೀಮನು ನನ್ನ ಗದಾಪ್ರಹಾರವನ್ನು ಸಹಿಸಿಕೊಳ್ಳುವುದನ್ನು ತಿಳಿದಿಲ್ಲ. ರೋಷದಿಂದ ಒಂದೇ ಒಂದು ಹೊಡೆತವನ್ನು ಭೀಮನಿಗೆ ಕೊಟ್ಟರೆ ಅವನನ್ನು ಬೇಗನೆ ವೈವಸ್ವತಕ್ಷಯಕ್ಕೆ ಕೊಂಡೊಯ್ಯಲು ಸಾಕು.

ವೃಕೋದರನು ಕೈಯಲ್ಲಿ ಗದೆಯನ್ನು ಹಿಡಿದಿರುವುದನ್ನು ನೋಡಲು ಬಯಸುತ್ತೇನೆ. ಅದಕ್ಕಾಗಿಯೇ ನಾನು ಬಹುಕಾಲದಿಂದ ಪ್ರಾರ್ಥಿಸುತ್ತಿದ್ದೆ. ಅದೇ ನನ್ನ ನಿತ್ಯ ಮನೋರಥವಾಗಿತ್ತು. ನನ್ನ ಗದೆಯಿಂದ ಹೊಡೆಯಲ್ಪಟ್ಟು ಪಾರ್ಥ ವೃಕೋದರನು ತನ್ನ ದೇಹವು ಜಜ್ಜಿಹೋಗಿ ಭೂಮಿಯ ಮೇಲೆ ಅಸುನೀಗಿ ಬೀಳುತ್ತಾನೆ. ನನ್ನ ಗದೆಯ ಪ್ರಹಾರಕ್ಕೆ ಸಿಲುಕಿದ ಹಿಮಾಲಯ ಪರ್ವತವೂ ಸಹ ನೂರಾರು ಸಹಸ್ರಾರು ಪುಡಿಯಾಗಿ ಕೆಳಗುರುಳುತ್ತದೆ. ಇದು ಅವನಿಗೆ ಮತ್ತು ಹಾಗೆಯೇ ವಾಸುದೇವ-ಅರ್ಜುನರಿಬ್ಬರಿಗೂ ತಿಳಿದಿದೆ. ಗದಾಯುದ್ಧದಲ್ಲಿ ದುರ್ಯೋಧನನ ಸಮನಾದವನು ಇಲ್ಲ ಎನ್ನುವುದು ನಿಶ್ಚಯವಾಗಿಹೋಗಿದೆ. ಆದುದರಿಂದ ಮಹಾಹವದಲ್ಲಿ ವೃಕೋದರನ ಕುರಿತು ಭಯವನ್ನು ತೆಗೆದುಹಾಕು. ನಾನು ಅವನನ್ನು ಕಳುಹಿಸುತ್ತೇನೆ. ಚಿಂತೆಯಿಲ್ಲದವನಾಗು. ಅವನು ನನ್ನಿಂದ ಹತನಾದ ತಕ್ಷಣ ಸರಿಸಾಟಿಯರಾದ ಮತ್ತು ಅವನಿಗಿಂತಲೂ ಮೀರಿದ ರಥಿಗಳು

ಅರ್ಜುನನನ್ನು ಸೋಲಿಸುತ್ತಾರೆ.

ಭೀಷ್ಮ, ದ್ರೋಣ, ಕೃಪ, ದ್ರೌಣಿ, ಕರ್ಣ, ಭೂರಿಶ್ರವ, ಪ್ರಾಗ್ಜ್ಯೋತಿಷಾಧಿಪ, ಶಲ್ಯ, ಸಿಂಧುರಾಜ ಜಯದ್ರಥ ಇವರು ಒಬ್ಬೊಬ್ಬರೇ ಪಾಂಡವರನ್ನು ಸಂಹರಿಸಲು ಶಕ್ತರು. ಒಟ್ಟಾಗಿ ಇವರು ಕ್ಷಣದಲ್ಲಿ ಅವರನ್ನು ಯಮಸಾದನಕ್ಕೆ ಕಳುಹಿಸುತ್ತಾರೆ. ಸಮಗ್ರ ಪಾರ್ಥಿವರ ಸೇನೆಯು ಪಾರ್ಥ ಧನಂಜಯನನ್ನು ಒಬ್ಬನನ್ನೇ ಸೋಲಿಸಲು ಅಶಕ್ತರಾಗಿರುವುದು ಹೇಗೆ? ಕಾರಣವು ತಿಳಿಯುತ್ತಿಲ್ಲ. ಭೀಷ್ಮನಿಂದ, ದ್ರೋಣ, ದ್ರೌಣಿ, ಕೃಪರಿಂದ ಪ್ರಯೋಗಿಸಲ್ಪಟ್ಟ ನೂರಾರು ಸಹಸ್ರಾರು ಬಾಣಗಳು ಪಾರ್ಥನನ್ನು ಯಮಕ್ಷಯಕ್ಕೆ ಕಳುಹಿಸುವವು. ಪಿತಾಮಹ ಗಾಂಗೇಯನಾದರೋ ಬ್ರಹ್ಮರ್ಷಿಸದೃಷನಾದ, ದೇವತೆಗಳಿಗೂ ಗೆಲ್ಲಲು ಅಸಾಧ್ಯನಾದ ಶಂತನುವಿಗೆ ಜನಿಸಿದನು. 'ನೀನು ಬಯಸದೇ ಸಾಯುವುದಿಲ್ಲ!' ಎಂದು ಪ್ರಸನ್ನನಾದ ಅವನ ತಂದೆಯು ಹೇಳಿದ್ದನು. ದ್ರೋಣನು ದ್ರೋಣಿಯಲ್ಲಿ ಬ್ರಹ್ಮರ್ಷಿ ಭರದ್ವಾಜನಿಗೆ ಜನಿಸಿದನು. ದ್ರೋಣನಲ್ಲಿ ಪರಮಾಸ್ತ್ರವನ್ನು ತಿಳಿದಿರುವ ದ್ರೌಣಿಯು ಜನಿಸಿದನು. ಆಚಾರ್ಯ ಮುಖ್ಯನಾಗಿರುವ ಈ ಕೃಪನು ಮಹರ್ಷಿ ಗೌತಮನಿಗೆ ಶರಸ್ತಂಭದಲ್ಲಿ ಜನಿಸಿದನು. ಈ ಶ್ರೀಮಾನನು ಅವಧ್ಯನೆಂದು ನನಗನ್ನಿಸುತ್ತದೆ. ಈ ಮೂವರು ಅಯೋನಿಜರನ್ನು ತಂದೆ, ತಾಯಿ ಮತ್ತು ಸೋದರ

ಮಾವನನ್ನಾಗಿ ಪಡೆದ ಅಶ್ವತ್ಥಾಮನು ನನಗೆ ಶೂರನಾಗಿಯೇ ಇದ್ದಾನೆ. ಇವರೆಲ್ಲರೂ ದೇವಸಮಾನ ಮಹಾರಥಿಗಳು. ಇವರು ಯುದ್ಧದಲ್ಲಿ ಶಕ್ರನನ್ನೂ ವ್ಯಥೆಗೊಳಿಸಬಲ್ಲರು.

ಭೀಷ್ಮ-ದ್ರೋಣ-ಕೃಪರನ್ನು ಕರ್ಣನು ಹೋಲುತ್ತಾನೆಂದು ನನಗನ್ನಿಸುತ್ತದೆ. 'ನನ್ನ ಸಮನಾಗಿದ್ದೀಯೆ!' ಎಂದು ರಾಮನಿಂದ ಅವನು ಹೇಳಿಸಿಕೊಂಡಿದ್ದಾನೆ. ಹುಟ್ಟುವಾಗಲೇ ಕರ್ಣನು ಹೊಳೆಯುವ ಸುಂದರ ಕುಂಡಲಗಳನ್ನು ಪಡೆದಿದ್ದನು. ಅದನ್ನು ಶಚಿಗೋಸ್ಕರವಾಗಿ ಮಹೇಂದ್ರನು ಪರಂತಪನಿಂದ ಕೇಳಿ ಪಡೆದನು. ಬದಲಾಗಿ ಪರಮ ಭಯಂಕರ ಶಕ್ತಿಯನ್ನಿತ್ತನು. ಆ ಶಕ್ತಿಯಿಂದ ರಕ್ಷಿತನಾದ ಅವನನ್ನು ಧನಂಜಯನು ಹೇಗೆ ಗೆಲ್ಲುತ್ತಾನೆ? ಕೈಯಲ್ಲಿ ಹಿಡಿದ ಫಲದಂತೆ ವಿಜಯವು ನನಗೆ ನಿಶ್ಚಯವಾದುದು. ಶತ್ರುಗಳ ಸಂಪೂರ್ಣ ಪರಾಜಯವು ಭೂಮಿಯಲ್ಲಿ ಅಭಿವ್ಯಕ್ತವಾಗಿವೆ.

ಈ ಭೀಷ್ಮನು ಒಂದೇ ದಿನದಲ್ಲಿ ಹತ್ತುಸಾವಿರ ಯೋಧರನ್ನು ಸಂಹರಿಸುತ್ತಾನೆ. ದ್ರೋಣ, ದ್ರೌಣಿ, ಕೃಪರೂ ಕೂಡ ಅವನಿಗೆ ಸರಿಸಮನಾಗಿರುವವರೇ. ಕ್ಷತ್ರಿಯ ಸಂಶಪ್ತಕರ ಗುಂಪು 'ನಾವು ಅರ್ಜುನನನ್ನು ಅಥವಾ ಅರ್ಜುನನು ನಮ್ಮನ್ನು ಕೊಲ್ಲಬೇಕು!' ಎಂದು ಪ್ರತಿಜ್ಞೆಯನ್ನು ಮಾಡಿರುವರು. ಹಾಗೆಯೇ ಇನ್ನೂ ಅನೇಕ ರಾಜರು ಸವ್ಯಸಾಚಿಯನ್ನು ವಧಿಸುತ್ತೇವೆ ಎಂದು

ತಿಳಿದಿದ್ದಾರೆ. ಏಕೆ ನೀನು ವ್ಯಥೆಗೊಳ್ಳುತ್ತಿರುವೆ? ಭೀಮಸೇನನು ಹತನಾದ ನಂತರ ಯುದ್ಧಮಾಡಲು ಬೇರೆ ಯಾರಿದ್ದಾರೆ? ಶತ್ರುಗಳ ಕುರಿತು ನೀನು ತಿಳಿದುಕೊಂಡಿದ್ದೇ ಆದರೆ ಇದನ್ನು ನನಗೆ ಹೇಳು. ಅವರು ಎಲ್ಲ ಐವರು ಸಹೋದರರು, ಧೃಷ್ಟದ್ಯುಮ್ನ ಮತ್ತು ಸಾತ್ಯಕಿ ಈ ಏಳು ಮಂದಿ ಮಾತ್ರ ಶತ್ರುಗಳ ಪರಮ ಬಲಶಾಲಿ ಯೋದ್ಧರು. ಆದರೆ ನಮ್ಮಲ್ಲಿ ಇವರು ವಿಶಿಷ್ಟರಾಗಿದ್ದಾರೆಃ ಭೀಷ್ಮ, ದ್ರೋಣ, ಕೃಪ, ದ್ರೌಣಿ, ವೈಕರ್ತನ ಕರ್ಣ, ಸೋಮದತ್ತ ಬಾಹ್ಲೀಕ, ಪ್ರಾಗ್ಜ್ಯೋತಿಷಾಧಿಪ, ಶಲ್ಯ, ಅವಂತಿಯವರಿಬ್ಬರು (ವಿಂದ ಮತ್ತು ಅನುವಿಂದ), ಜಯದ್ರಥ, ದುಃಶಾಸನ, ದುರ್ಮುಖ, ದುಃಸ್ಸಹ, ಶ್ರುತಾಯು, ಚಿತ್ರಸೇನ, ಪುರುಮಿತ್ರ, ವಿವಿಂಶತಿ, ಶಲ, ಭೂರಿಶ್ರವ ಮತ್ತು ನಿನ್ನ ಮಗ ವಿಕರ್ಣ.

ನಾನು ಹನ್ನೊಂದು ಅಕ್ಷೌಹಿಣಿಗಳನ್ನು ಒಟ್ಟುಹಾಕಿದ್ದೇನೆ. ಶತ್ರುಗಳದ್ದು ಏಳೇ ಇರುವಾಗ ನಾನು ಹೇಗೆ ಪರಾಜಯ ಹೊಂದುತ್ತೇನೆ? ಮೂರನೇ ಒಂದು ಭಾಗ ಕಡಿಮೆಯಿರುವ ಸೇನೆಯೊಂದಿಗೆ ಯುದ್ಧಮಾಡಬೇಕೆಂದು ಬೃಹಸ್ಪತಿಯು ಹೇಳಿದ್ದಾನೆ. ನನ್ನ ಸೇನೆಯು ಶತ್ರುಗಳ ಸೇನೆಗಿಂತ ಮೂರನೇ ಒಂದು ಭಾಗ ಹೆಚ್ಚಿದೆ. ಶತ್ರುಗಳಲ್ಲಿ ನಾನು ಬಹಳಷ್ಟು ಗುಣಹೀನತೆಯನ್ನು ಮತ್ತು ನಮ್ಮಲ್ಲಿ ಬಹುಮಟ್ಟಿನ ಗುಣೋದಯವನ್ನು ಕಾಣುತ್ತೇನೆ. ಈ ಎಲ್ಲ ನನ್ನ ಬಲದ

ಹೆಚ್ಚಿನದನ್ನು ಮತ್ತು ಪಾಂಡವರ ನ್ಯೂನತೆಗಳನ್ನು ಅರ್ಥಮಾಡಿಕೊಂಡು ನೀನು ದುಃಖಿಸಬಾರದು.”

ಹೀಗೆ ಹೇಳಿ ಆ ಸಮಯದಲ್ಲಿ ಏನನ್ನು ತಿಳಿದುಕೊಳ್ಳಬೇಕು ಎಂದು ಅರಿತಿರುವ ಆ ಪರಪುರಂಜಯನು ಸಂಜಯನನ್ನು ಪುನಃ ಕೇಳಿದನು.

## ಪಾಂಡವರ ರಥಗಳ ವರ್ಣನೆ

ದುರ್ಯೋಧನನು ಹೇಳಿದನು:

“ಸಂಜಯ! ಏಳು ಅಕ್ಷೌಹಿಣಿಗಳನ್ನು ಪಡೆದು ಕೌಂತೇಯ ಯುಧಿಷ್ಠಿರನು ರಾಜರೊಂದಿಗೆ ಯುದ್ಧಕ್ಕಾಗಿ ಏನು ಮಾಡುತ್ತಿದ್ದಾನೆ?”

ಸಂಜಯನು ಹೇಳಿದನು:

“ರಾಜನ್! ಯುದ್ಧದ ಕುರಿತು ಯುಧಿಷ್ಠಿರನು ಅತೀವ ಹರ್ಷಿತನಾಗಿದ್ದಾನೆ. ಭೀಮಸೇನ-ಅರ್ಜುನರೂ, ಇಬ್ಬರು ಯಮಳರೂ ಕೂಡ ಭಯಪಡುತ್ತಿಲ್ಲ. ಮಂತ್ರಗಳನ್ನು ಪರೀಕ್ಷಿಸಲು ಕೌಂತೇಯ ಬೀಭತ್ಸುವು ಎಲ್ಲ ದಿಕ್ಕುಗಳನ್ನೂ ಬೆಳಗಿಸುವ ದಿವ್ಯ ರಥವನ್ನು ಸಿದ್ಧಪಡಿಸಿದ್ದಾನೆ. ಕವಚಗಳನ್ನು ಧರಿಸಿದ ಅವನು ಮಿಂಚಿನಿಂದ ಕೂಡಿದ ಕಪ್ಪು ಮೋಡದಂತೆ ಕಾಣಿಸುತ್ತಾನೆ. ಸ್ವಲ್ಪ ಯೋಚಿಸಿ ಅವನು ಹರ್ಷದಿಂದ ನನಗೆ ಈ ಮಾತುಗಳನ್ನಾಡಿದನು: “ಸಂಜಯ! ಮೊದಲ ಈ

ರೂಪವನ್ನು ನೋಡು. ನಾವು ಗೆಲ್ಲುತ್ತೇವೆ!” ಬೀಭತ್ಸುವು ನನಗೆ ಹೇಳಿದುದು ಸತ್ಯವಾಗಿ ತೋರಿತು.”

ದುರ್ಯೋಧನನು ಹೇಳಿದನು:

“ಅಕ್ಷದಲ್ಲಿ ಸೋತ ಆ ಪಾರ್ಥರನ್ನು ಪ್ರಶಂಸಿಸುವುದರಲ್ಲಿ ನೀನು ಖುಷಿಪಡುವಂತಿದೆ! ಹೇಳು! ಅರ್ಜುನನ ರಥವು ಹೇಗಿದೆ? ಅಶ್ವಗಳು, ಧ್ವಜವು ಹೇಗಿವೆ?”

ಸಂಜಯನು ಹೇಳಿದನು:

“ವಿಭೋ! ಶಕ್ರನೊಂದಿಗೆ ಭೌವನನು ಧಾತ್ರಾ ತ್ವಷ್ಟನ ಸಹಾಯದಿಂದ ಅರ್ಜುನನ ರಥದಲ್ಲಿರುವ ಬಹುಚಿತ್ರ ರೂಪಗಳನ್ನು ಕಲ್ಪಿಸಿದನು. ಅವನ ಧ್ವಜದಲ್ಲಿ ದೇವಮಾಯೆಯನ್ನು ತೋರಿಸುವ, ದೊಡ್ಡ ಮತ್ತು ಸಣ್ಣ ದಿವ್ಯ ಆಕಾರಗಳನ್ನು ನೀಡಿದ್ದಾರೆ. ಭೌವನನು ಮಾಯೆಯಿಂದ ಧ್ವಜವು ಎಲ್ಲ ದಿಕ್ಕುಗಳಲ್ಲಿಯೂ, ಮೇಲೆ ಮತ್ತು ಕೆಳಗೆ ಒಂದು ಯೋಜನ ದೂರದವರೆಗೆ ಪಸರಿಸುವಂತೆ ಮಾಡಿದ್ದಾನೆ. ಗಿಡಮರಗಳೂ ಅದರ ದಾರಿಯನ್ನು ತಡೆಯಲಾರವು. ಆಕಾಶದಲ್ಲಿ ಕಾಮನಬಿಲ್ಲು ಪ್ರಕಾಶಿಸುವಂತೆ ಒಂದೇ ಬಣ್ಣವನ್ನು ತೋರಿಸುವುದಿಲ್ಲ. ಅದು ಯಾವುದರಿಂದ ಮಾಡಲ್ಪಟ್ಟಿದೆಯೆಂದು ಯಾರಿಗೂ ತಿಳಿಯದು. ಹಾಗೆ ಭೌವನನು ಅದನ್ನು ನಿರ್ಮಿಸಿದ್ದಾನೆ. ಅದರ ಆಕಾರ-

ರೂಪಗಳು ಬಹಳ. ಬೆಂಕಿ-ಹೊಗೆಗಳು ಒಂದಾಗಿ ಮೇಲೇರುವಂತೆ ಅದರ ಶರೀರದಿಂದ ತೇಜಸ್ಸಿನ ಬಣ್ಣಗಳು ಹೊರಸೂಸುತ್ತವೆ. ಆ ರೀತಿಯಲ್ಲಿ ಭೌವನನು ಧ್ವಜವನ್ನು ನಿರ್ಮಿಸಿದ್ದಾನೆ. ಅದಕ್ಕೆ ಭಾರವೇ ಇಲ್ಲ. ಅದನ್ನು ತಡೆಯುವುದೂ ಅಸಾಧ್ಯ. ಅದಕ್ಕೆ ಚಿತ್ರರಥನು ಕೊಟ್ಟ ವಾಯುವೇಗವುಳ್ಳ ದಿವ್ಯವಾದ ಬಿಳಿಯ ನೂರು ಕುದುರೆಗಳನ್ನು ಕಟ್ಟಲಾಗಿವೆ. ಕೊಲ್ಲಲ್ಪಟ್ಟ ಹಾಗೆ ಅವುಗಳ ಸಂಖ್ಯೆಯು ಯಾವಾಗಲೂ ಪೂರ್ಣವಾಗಿರುವವೆಂದು ಹಿಂದೆ ವರವಿತ್ತು.

ಹಾಗೆಯೇ ರಾಜ ಯುಧಿಷ್ಠಿರನ ರಥಕ್ಕೆ ದಂತವರ್ಣದ ಗಾತ್ರದಲ್ಲಿ ದೊಡ್ಡ, ವೀರ್ಯದಲ್ಲಿ ಸಮನಾದ ಹೊಳೆಯುತ್ತಿರುವ ಕುದುರೆಗಳನ್ನು ಕಟ್ಟಲಾಗಿದೆ. ಹಾಗೆಯೇ ರಣದಲ್ಲಿ ಭೀಮಸೇನನ ವಾಹನಕ್ಕೆ ಸಪ್ತರ್ಷಿಗಳಂತೆ ತೋರುವ ವಾಯುವೇಗವಿರುವ ಕುದುರೆಗಳಿವೆ. ಸಹದೇವನು ದೇಹದ ಮೇಲೆ ಚುಕ್ಕೆಗಳಿರುವ, ಬೆನ್ನಿನ ಮೇಲೆ ಗಿಳಿಯ ಬಣ್ಣವನ್ನು ತಳೆದಿರುವ, ಅಣ್ಣ ಫಲ್ಗುನನು ಪ್ರೀತಿಯಿಂದ ಕೊಟ್ಟಿರುವ, ವೀರ ಸಹೋದರನ ಕುದುರೆಗಳಿಗಿಂತಲೂ ವಿಶಿಷ್ಟವಾದ ಕುದುರೆಗಳನ್ನು ಓಡಿಸುತ್ತಾನೆ. ಮಾದ್ರಿಯ ಮಗ ಅಜಮೀಡ ನಕುಲನನ್ನು ಮಹೇಂದ್ರನು ನೀಡಿದ ಉತ್ತಮ ಕುದುರೆಗಳು ಕೊಂಡೊಯ್ಯುತ್ತವೆ. ವೇಗದಲ್ಲಿ ಅವು ವಾಯುವಿಗೆ

ಸಮನಾದವು. ಆ ತರಸ್ವಿಗಳು ವೃತ್ರಶತ್ರು ಇಂದ್ರನನ್ನು ಹೇಗೋ ಹಾಗೆ ಆ ವೀರನನ್ನು ಹೊರುತ್ತವೆ. ವಯಸ್ಸಿನಲ್ಲಿ ಮತ್ತು ವಿಕ್ರಮದಲ್ಲಿ ಇವುಗಳನ್ನು ಹೋಲುವ, ವೇಗದಲ್ಲಿ ಸರಿಸಾಟಿಯಿರದ, ದೇವತೆಗಳು ಕೊಟ್ಟಿರುವ ಉತ್ತಮ ದೊಡ್ಡ ಕುದುರೆಗಳು ಸೌಬದ್ರಿಯೇ ಮೊದಲಾದ ದ್ರೌಪದೇಯ ಕುಮಾರರನ್ನು ಹೊರುತ್ತವೆ."

ಧೃತರಾಷ್ಟ್ರನು ಹೇಳಿದನು:

"ಸಂಜಯ! ಅಲ್ಲಿ. ಬೇರೆ ಬೇರೆ ಕಾರಣಗಳಿಂದ ಪಾಂಡವರಿಗಾಗಿ ನನ್ನ ಸೇನೆಯೊಡನೆ ಯುದ್ಧಮಾಡಲು ಸೇರಿರುವ ಯಾರ್ಯಾರನ್ನು ನೀನು ನೋಡಿದೆ?"

ಸಂಜಯನು ಹೇಳಿದನು:

"ಅಂಧಕ-ವೃಷ್ಣಿಯರ ಮುಖ್ಯ ಕೃಷ್ಣನು ಬಂದಿರುವುದನ್ನು ನೋಡಿದೆ. ಚೇಕಿತಾನ, ಯುಯುಧಾನ ಸಾತ್ಯಕಿಯರೂ ಅಲ್ಲಿದ್ದರು. ಪುರುಷಮಾನಿಗಳಾದ ಅವರಿಬ್ಬರು ಮಹಾರಥಿಗಳೂ ಒಂದೊಂದು ಅಕ್ಷೌಹಿಣಿಗಳೊಂದಿಗೆ ಪಾಂಡವನನ್ನು ಸೇರಿರುವರು. ಪಾಂಚಾಲ್ಯ ದ್ರುಪದನು ಅವರ ಮಾನವನ್ನು ಹೆಚ್ಚಿಸಲು ತನ್ನ ಹತ್ತು ಮಕ್ಕಳಿಂದ ಆವೃತವಾಗಿರುವ, ಸತ್ಯಜಿತನೇ ಮೊದಲಾದ ಪ್ರಮುಖ ವೀರರಿಂದ ಕೂಡಿದ, ವೀರ ಧೃಷ್ಟದ್ಯುಮ್ನನ

ನಾಯಕತ್ವದಲ್ಲಿರುವ, ಶಿಖಂಡಿಯಿಂದ ರಕ್ಷಿತವಾಗಿರುವ, ಅಕ್ಷೌಹಿಣಿಯನ್ನು ತಂದಿದ್ದಾನೆ. ಅವನ ಸೇನೆಯೆಲ್ಲವಕ್ಕೂ ಉಡುಪಿನ ವ್ಯವಸ್ಥೆಯಿದೆ. ಪೃಥಿವೀಪಾಲ ವಿರಾಟನು ಶಂಖ ಮತ್ತು ಉತ್ತರ ಈ ಇಬ್ಬರು ಪುತ್ರರೊಂದಿಗೆ, ಸೂರ್ಯದತ್ತನೇ ಮೊದಲಾದ ವೀರರೊಂದಿಗೆ, ಮದಿರಾಶ್ವನ ನಾಯಕತ್ವದಲ್ಲಿ, ಸಹೋದರರು ಮಕ್ಕಳೊಂದಿಗೆ ಅಕ್ಷೌಹಿಣೀ ಸೇನೆಯೊಂದಿಗೆ ಪಾರ್ಥನನ್ನು ಸೇರಿದ್ದಾನೆ. ಮಾಗಧಿ ಜರಾಸಂಧನ ಮಗ ಮತ್ತು ಚೇದಿರಾಜ ಧೃಷ್ಟಕೇತು ಇಬ್ಬರೂ ಒಂದೊಂದು ಅಕ್ಷೌಹಿಣೀ ಸೇನೆಗಳೊಂದಿಗೆ ಬಂದಿದ್ದಾರೆ. ಐವರು ಕೇಕಯ ಸಹೋದರರೆಲ್ಲರೂ ಅವರ ಕೆಂಪುಧ್ವಜಗಳನ್ನು ಹಾರಿಸಿ, ಒಂದು ಅಕ್ಷೌಹಿಣಿಯಿಂದ ಪರಿವೃತರಾಗಿ ಪಾಂಡವರನ್ನು ಸೇರಿದ್ದಾರೆ. ಇವರೆಲ್ಲ ಅಲ್ಲಿ ಪಾಂಡವರಿಗಾಗಿ ಧಾರ್ತರಾಷ್ಟ್ರನ ಸೇನೆಯನ್ನು ಎದುರಿಸಲು ಬಂದು ಸೇರಿರುವುದನ್ನು ನಾನು ನೋಡಿದ್ದೇನೆ.

ಮಾನುಷ, ದೇವ, ಗಂಧರ್ವ, ಅಸುರ ವ್ಯೂಹಗಳನ್ನು ತಿಳಿದಿರುವ ಮಹಾಮನಸ್ವಿ ಧೃಷ್ಟದ್ಯುಮ್ನನು ಅವನ ಆ ಸೇನೆಯ ಪ್ರಮುಖನು. ಭೀಷ್ಮ ಶಾಂತನವನನ್ನು ಶಿಖಂಡಿಯ ಪಾಲಿಗೆ ಬಿಟ್ಟುಕೊಟ್ಟಿದ್ದಾರೆ. ಸೈನಿಕ ಅಮಾತ್ಯರೊಂದಿಗೆ ಮತ್ಸ್ಯ ವಿರಾಟನು ಅವನಿಗೆ ಸಹಾಯ ಮಾಡುತ್ತಾನೆ. ಬಲಶಾಲೀ ಮದ್ರಾಧಿಪನು ಹಿರಿಯ ಪಾಂಡುಪುತ್ರನ ಪಾಲಿಗೆ

ಹೋಗಿದ್ದಾನೆ. ಅಲ್ಲಿದ್ದ ಕೆಲವರು ಅವರಿಬ್ಬರೂ ವಿಷಮರು ಎಂದೂ ಅಭಿಪ್ರಾಯ ಪಟ್ಟಿದ್ದಾರೆ. ಮಗನೊಂದಿಗೆ ದುರ್ಯೋಧನ ಮತ್ತು ಜೊತೆಯಲ್ಲಿ ಅವನ ನೂರು ತಮ್ಮಂದಿರು, ಹಾಗೆಯೇ ಪೂರ್ವ ಮತ್ತು ದಕ್ಷಿಣದ ರಾಜರು ಭೀಮಸೇನನ ಪಾಲಿಗೆ ಹೋಗಿದ್ದಾರೆ. ಅರ್ಜುನನ ಪಾಲಿಗೆ ಕರ್ಣ ವೈಕರ್ತನ, ಅಶ್ವತ್ಥಾಮ, ವಿಕರ್ಣ ಮತ್ತು ಸೈಂಧವ ಜಯದ್ರಥರು ಬರುತ್ತಾರೆ. ಭೂಮಿಯಲ್ಲಿಯೇ ಶೂರರೆಂದು ತಿಳಿದಿರುವ ಇತರ ಗೆಲ್ಲಲಸಾಧ್ಯರೆಲ್ಲರೂ ಪಾರ್ಥ ಅರ್ಜುನನ ಪಾಲಿಗೆಂದೂ ಯೋಚಿಸಲಾಗಿದೆ. ಐವರು ಮಹೇಷ್ವಾಸ ರಾಜಪುತ್ರ ಕೇಕಯ ಸಹೋದರರು ಯುದ್ಧದಲ್ಲಿ ಕೇಕಯರನ್ನು ತಮ್ಮ ಪಾಲಿಗಿರಿಸಿಕೊಂಡು ಯುದ್ಧಮಾಡುವರು. ಅವರು ತಮ್ಮ ಪಾಲಿಗೆ ಮಾಲವರು, ಶಾಲ್ವರು, ಕೇಕಯರು, ಮತ್ತು ತ್ರಿಗರ್ಥರ ಇಬ್ಬರು ಪ್ರಮುಖರಾದ ಸಂಶಪ್ತಕರನ್ನು ಮಾಡಿಕೊಂಡಿದ್ದಾರೆ. ದುರ್ಯೋಧನ ಮತ್ತು ದುಃಶಾಸನನ ಮಕ್ಕಳು ಹಾಗೂ ರಾಜಾ ಬೃಹದ್ಬಲನನ್ನು ಸೌಭದ್ರಿಯು ತನ್ನ ಪಾಲಿಗೆ ಮಾಡಿಕೊಂಡಿದ್ದಾನೆ. ಸುವರ್ಣದಿಂದ ಮಾಡಲ್ಪಟ್ಟ ಧ್ವಜಗಳನ್ನು ಹೊಂದಿದ ಮಹೇಷ್ವಾಸ ದ್ರೌಪದೇಯರು ಧೃಷ್ಟದ್ಯುಮ್ನನ ನೇತೃತ್ವದಲ್ಲಿ ದ್ರೋಣನನ್ನು ಎದುರಿಸುತ್ತಾರೆ. ಚೇಕಿತಾನನು ಸೋಮದತ್ತನೊಡನೆ ದ್ವಂದ್ವರಥ ಯುದ್ಧಮಾಡಲು ಬಯಸುತ್ತಾನೆ. ಯುಯುಧಾನನು ಭೋಜ

ಕೃತವರ್ಮನೊಡನೆ ಯುದ್ಧ ಮಾಡುತ್ತಾನೆ. ಯುದ್ಧದಲ್ಲಿ ಆಕ್ರಂದನಗೈಯುವ ಶೂರ ಮಾದ್ರೇಯ ಸಹದೇವನು ನಿನ್ನ ಬಾವ ಸುಬಲಾತ್ಮಜನು ತನಗೆಂದು ಯೋಚಿಸಿದ್ದಾನೆ. ಉಲೂಕ ಕೈತವ್ಯ ಮತ್ತು ಸಾರಸ್ವತ ಗಣಗಳು ಮಾದ್ರವತೀಸುತ ನಕುಲನ ಪಾಲಿಗೆಂದು ಯೋಚಿಸಿದ್ದಾರೆ. ಇತರ ಪಾರ್ಥಿವರನ್ನು ಪಾಂಡುಪುತ್ರರು ಯುದ್ಧದಲ್ಲಿ ಯಾರು ಯಾರನ್ನು ಎದುರಿಸುವರೋ ಅದರಂತೆ ಪಾಲುಹಂಚುತ್ತಾರೆ. ಈ ರೀತಿಯಲ್ಲಿ ಸೇನೆಗಳು ಭಾಗ ಭಾಗಗಳಾಗಿ ಹಂಚಲ್ಪಟ್ಟಿವೆ. ಈಗ ನೀನು ಮತ್ತು ನಿನ್ನ ಮಗನು ಕಾರ್ಯವೆಸಗುವುದರಲ್ಲಿ ವಿಳಂಬ ಮಾಡಬಾರದು."

ಧೃತರಾಷ್ಟ್ರನು ಹೇಳಿದನು:

"ಕೆಟ್ಟ ದ್ಯೂತವನ್ನಾಡಿದ ಜೂಜುಗಾರ ಮೂಢ ನನ್ನ ಮಕ್ಕಳು ಜೋರಾಗಿ ನಡೆಯುವ ರಣದಲ್ಲಿ ಬಲವಂತ ಭೀಮನೊಡನೆ ಯುದ್ಧಮಾಡಿ ಇಲ್ಲವಾಗುತ್ತಾರೆ. ಕಾಲಧರ್ಮದಿಂದ ಪ್ರೋಕ್ಷಿತರಾದ ಪಾರ್ಥಿವ ರಾಜರೆಲ್ಲರೂ ಬೆಂಕಿಗೆ ಬೀಳುವ ಪತಂಗಗಳಂತೆ ಗಾಂಡೀವಾಗ್ನಿಯನ್ನು ಪ್ರವೇಶಿಸುತ್ತಾರೆ. ಆ ಮಹಾತ್ಮರ ವೈರಸಾಧನೆಯಿಂದ ನನ್ನ ಸೇನೆಯು ನಾಶವಾದುದನ್ನು ಈಗಲೇ ಕಾಣುತ್ತಿದ್ದೇನೆ. ರಣದಲ್ಲಿ ಪಾಂಡವರೊಂದಿಗೆ ಯುದ್ಧಮಾಡಿ ಪುಡಿಯಾಗಿರುವ

ಸೇನೆಯನ್ನು ಯಾರುತಾನೇ ಅನುಸರಿಸುತ್ತಾರೆ? ಯುಧಿಷ್ಠಿರನ ನೇತೃತ್ವದಲ್ಲಿರುವ ಮತ್ತು ಮಧುಸೂದನನ ರಕ್ಷಣೆಯಲ್ಲಿರುವ ಇವರೆಲ್ಲರೂ - ಇಬ್ಬರು ಪಾಂಡವ ವೀರ ಯೋಧರಾದ ಸವ್ಯಸಾಚಿ-ವೃಕೋದರರು. ನಕುಲ-ಸಹದೇವರು, ಪಾರ್ಷತ ಧೃಷ್ಟದ್ಯುಮ್ನ, ಸಾತ್ಯಕಿ, ದ್ರುಪದ, ಧೃಷ್ಟದ್ಯುಮ್ನನ ಮಗ, ಉತ್ತಮೌಜ ಪಾಂಚಾಲ್ಯ, ಯುಧಾಮನ್ಯು ದುರ್ಜಯ, ಶಿಖಂಡಿ, ಕ್ಷತ್ರದೇವ, ವೈರಾಟೀ ಉತ್ತರ, ಕಾಶಿರಾಜ, ಚೇದಿರಾಜ, ಮತ್ಸ್ಯರು, ಸರ್ವ ಸೃಂಜಯರು, ವಿರಾಟಪುತ್ರ ಬಭ್ರು, ಪಾಂಚಾಲ ಪ್ರಭದ್ರಕ - ಎಲ್ಲರೂ ಅತಿರಥರು, ಶೂರರು, ಕೀರ್ತಿಮಂತರು, ಪ್ರತಾಪಿಗಳು, ತೇಜಸ್ಸಿನಲ್ಲಿ ಸೂರ್ಯ-ಪಾವಕರ ಸಮಾನರು ಮತ್ತು ಯುದ್ಧಗಳಲ್ಲಿ ಜಯಗಳಿಸಿದವರು. ಇವರು ಬಯಸದಿದ್ದರೆ ಇಂದ್ರನೂ ಕೂಡ ಇವರಿಂದ ಈ ಭೂಮಿಯನ್ನು ಕಸಿದುಕೊಳ್ಳಲಾರ. ಈ ವೀರರು, ರಣಧೀರರು ಪರ್ವತವನ್ನೂ ಪುಡಿಮಾಡಿಯಾರು! ಆ ಎಲ್ಲ ಗುಣಸಂಪನ್ನರನ್ನೂ, ಅಮನುಷ್ಯರನ್ನೂ, ಪ್ರತಾಪಿಗಳನ್ನೂ, ನಾನು ಕೂಗಿ ಅಳುತ್ತಿದ್ದರೂ, ನನ್ನ ದುಷ್ಪುತ್ರರು ಯುದ್ಧಮಾಡಬಯಸುತ್ತಾರೆ ಸಂಜಯ!"

ದುರ್ಯೋಧನನು ಹೇಳಿದನು:

"ನಾವಿಬ್ಬರೂ ಒಂದೇ ಜಾತಿಯವರು. ಹಾಗೆಯೇ ಇಬ್ಬರೂ

ಭೂಮಿಯ ಮೇಲೇ ನಡೆಯುವವರು. ಹಾಗಿರುವಾಗ ಪಾಂಡವರಿಗೆ ಮಾತ್ರ ಜಯವೆಂದು ನೀನು ಹೇಗೆ ಹೇಳುತ್ತೀಯೆ? ಪಿತಾಮಹ, ದ್ರೋಣ, ಕೃಪ, ದುರ್ಜಯ ಕರ್ಣ, ಜಯದ್ರಥ, ಸೋಮದತ್ತ, ಅಶ್ವತ್ಥಾಮ ಇವರೂ ಕೂಡ ಸುಚೇತಸರು, ಮಹೇಷ್ವಾಸರು, ಮತ್ತು ಸಮರದಲ್ಲಿ ಅವರನ್ನು ದೇವತೆಗಳ ಸಹಿತ ಇಂದ್ರನೂ ಗೆಲ್ಲಲು ಅಶಕ್ತನಾಗಿರುವಾಗ ಇನ್ನು ಪಾಂಡವರು ಯಾವ ಲೆಖ್ಖಕ್ಕೆ? ಅಪ್ಪಾ! ಈ ಭೂಮಿಯೆಲ್ಲವೂ ನನಗಾಗಿಯೇ ಸೃಷ್ಟಿಯಾಗಿದೆ - ಆರ್ಯರಾದ, ಧೃತಿಮತರಾದ, ಅಗ್ನಿಯಂತೆ ಶೂರರಾದ ಪಾಂಡವರನ್ನು ಕಾಡಿಸಲು. ನನ್ನವರನ್ನು ನಿನ್ನ ಪಾಂಡವರು ತಿರುಗಿ ನೋಡಲೂ ಅಸಮರ್ಥರು. ಪಾರಾಕ್ರಾಂತರಾದ ಇವರು ಪಾಂಡವರನ್ನು ಅವರ ಮಕ್ಕಳೊಂದಿಗೆ ಯುದ್ಧದಲ್ಲಿ ಹೋರಾಡುತ್ತಾರೆ. ನನ್ನ ಈ ಪ್ರಿಯ ಪಾರ್ಥಿವರೆಲ್ಲರೂ ಬಲೆಯನ್ನು ಬೀಸಿ ಜಿಂಕೆಗಳನ್ನು ತಡೆಯುವಂತೆ ಅವರನ್ನು ತಡೆಯಲು ಬಯಸುತ್ತಾರೆ. ನನ್ನವರ ಮಹಾ ರಥಸಮೂಹಗಳಿಂದ ಮತ್ತು ಶರಜಾಲಗಳಿಂದ ಪಾಂಚಾಲರೊಂದಿಗೆ ಪಾಂಡವರು ಇಲ್ಲವಾಗುತ್ತಾರೆ.”

ಧೃತರಾಷ್ಟ್ರನು ಹೇಳಿದನು:

“ಸಂಜಯ! ಹುಚ್ಚು ಹಿಡಿದವನಂತೆ ನನ್ನ ಮಗನು

ವಿಲಪಿಸುತ್ತಿದ್ದಾನೆ. ಧರ್ಮರಾಜ ಯುಧಿಷ್ಠಿರನನ್ನು ಯುದ್ಧದಲ್ಲಿ ಗೆಲ್ಲುವುದಕ್ಕೆ ಅವನು ಶಕ್ತನಿಲ್ಲ. ಸುಪುತ್ರರಾದ, ಬಲವತ್ತರಾಗಿರುವ, ಧರ್ಮಜ್ಞರಾದ, ಮಹಾತ್ಮ, ಯಶಸ್ವಿ ಪಾಂಡವರ ಕುರಿತು ಭೀಷ್ಮನಿಗೆ ಸದಾ ತಿಳಿದಿದೆ. ಅವನು ಆ ಮಹಾತ್ಮರೊಡನೆ ಯುದ್ಧಮಾಡಲು ಇಷ್ಟಪಡುವುದಿಲ್ಲ. ನನಗೆ ಇನ್ನೂ ಪುನಃ ಅವರು ಏನುಮಾಡುತ್ತಿದ್ದಾರೆ ಎನ್ನುವುದನ್ನು ಹೇಳು. ಯಾವ ತರಸ್ವಿಯು ಮಹೇಷ್ವಾಸ ಪಾಂಡವರನ್ನು ಪುನಃ ಪುನಃ, ಯಾಜ್ಞಿಕರು ತುಪ್ಪದ ಆಹುತಿಯನ್ನು ಅಗ್ನಿಯಲ್ಲಿ ಹಾಗಿ ಉರಿಸುವಂತೆ ಉರಿಸುತ್ತಿದ್ದಾನೆ?”

ಸಂಜಯನು ಹೇಳಿದನು:

“ಭಾರತ! ‘ಯುದ್ಧಮಾಡಿ! ಯುದ್ಧಕ್ಕೆ ಹೆದರಬೇಡಿ!’ ಎಂದು ಧೃಷ್ಟದ್ಯುಮ್ನನು ಸದಾ ಆ ಭರತಸತ್ತಮರನ್ನು ಉರಿಸುತ್ತಿದ್ದಾನೆ. ‘ಧಾರ್ತರಾಷ್ಟ್ರನನ್ನು ಸುತ್ತುವರೆದಿರುವ ಆ ಕೆಲವು ಪಾರ್ಥಿವರು ಯುದ್ಧದ ಹೋರಾಟದಲ್ಲಿ ಆಯುಧಗಳ ಹೊಡೆತವನ್ನು ಎದುರಿಸುವವರಿದ್ದಾರೆ. ತಿಮಿಂಗಿಲವು ನೀರಿನಲ್ಲಿರುವ ಮೀನುಗಳನ್ನು ಹೇಗೋ ಹಾಗೆ ನಾನೊಬ್ಬನೇ ಕೃದ್ಧನಾಗಿ ಬಂಧುಗಳೊಂದಿಗೆ ಸೇರಿರುವ ಎಲ್ಲರನ್ನೂ ಯುದ್ಧದಲ್ಲಿ ನಾಶಗೊಳಿಸುತ್ತೇನೆ. ಭೀಷ್ಮ, ದ್ರೋಣ, ಕೃಪ, ಕರ್ಣ, ದ್ರೌಣಿ, ಶಲ್ಯ, ಸುಯೋಧನ ಇವರನ್ನೂ ಕೂಡ

ಸಮುದ್ರದ ದಡವು ಅಲೆಗಳನ್ನು ತಡೆಯುವಂತೆ ತಡೆಯುತ್ತೇನೆ.’ ಹಾಗೆ ಹೇಳುತ್ತಿದ್ದ ಅವನಿಗೆ ಧರ್ಮಾತ್ಮ ರಾಜಾ ಯುಧಿಷ್ಠಿರನು ಹೇಳಿದನು: ‘ಪಾಂಚಾಲರೊಂದಿಗೆ ಪಾಂಡವರು ಎಲ್ಲರೂ ನಿನ್ನ ಧೈರ್ಯ, ವೀರ್ಯಗಳನ್ನು ಅವಲಂಬಿಸಿದ್ದಾರೆ. ಈ ಸಂಗ್ರಾಮದಿಂದ ನಮ್ಮನ್ನು ರಕ್ಷಿಸಿ ಉದ್ಧರಿಸು. ನೀನು ಕ್ಷತ್ರಧರ್ಮದಲ್ಲಿ ವ್ಯವಸ್ಥಿತನಾಗಿದ್ದೀಯೆ ಎಂದು ತಿಳಿದಿದ್ದೇನೆ. ಕೌರವರೊಂದಿಗೆ ಯುದ್ಧಮಾಡಲು ನೀನೊಬ್ಬನೇ ಸಮರ್ಥನಾಗಿದ್ದೀಯೆ. ಸಂಗ್ರಾಮಕ್ಕೆ ಸಿದ್ಧರಾಗಿ ಅವರು ನಮ್ಮ ಎದಿರು ಬಂದಾಗ ನೀನು ರಚಿಸುವ ವ್ಯೂಹವು ನಮಗೆ ಶ್ರೇಯಸ್ಕರವಾಗಿರುತ್ತದೆ. ಪೌರುಷವನ್ನು ತೋರಿಸಿದ ಶೂರನು ಸೈನಿಕರನ್ನು ಮುಂದೆ ನಿಲ್ಲಿಸಿಕೊಂಡು ಹೋರಾಡುವವನನ್ನು ಸಹಸ್ರವನ್ನು ಕೊಟ್ಟಾದರೂ ಪಡೆಯಬೇಕೆಂದು ನೀತಿಯನ್ನು ತಿಳಿದವರು ಹೇಳುತ್ತಾರೆ. ನೀನು ಶೂರ, ವೀರ ಮತ್ತು ವಿಕ್ರಾಂತ. ಯುದ್ಧದಲ್ಲಿ ಭಯಾರ್ತರ ಪರಿತ್ರಾತಾ ಎನ್ನುವುದರಲ್ಲಿ ಸಂಶಯವಿಲ್ಲ.

ಧರ್ಮಾತ್ಮ ಕೌಂತೇಯ ಯುಧಿಷ್ಠಿರನು ಈ ರೀತಿ ಹೇಳಲು ಧೃಷ್ಟದ್ಯುಮ್ನನು, ಭಯವಿಲ್ಲದೇ, ನನಗೆ ಈ ಮಾತುಗಳನ್ನು ಹೇಳಿದನು: ‘ಸೂತ! ದುರ್ಯೋಧನನಲ್ಲಿರುವ ಎಲ್ಲ ಜನಪದ ಯೋಧರಿಗೆ, ಬಾಹ್ಲೀಕನೇ ಮೊದಲಾದ ಪ್ರಾತಿಪೇಯ ಕುರುಗಳಿಗೆ, ಶಾರದ್ವತ, ಸೂತಪುತ್ರ, ದ್ರೋಣ, ಅವನ ಮಗ,

ಜಯದ್ರಥ, ದುಃಶಾಸನ, ವಿಕರ್ಣ ಮತ್ತು ನೃಪ ದುರ್ಯೋಧನನಿಗೆ ಹೇಳು. ಭೀಷ್ಮನಿಗೆ ಕೂಡ ಹೋಗಿ ಹೇಳು. 'ಯುಧಿಷ್ಠಿರನೊಂದಿಗೆ ಒಳ್ಳೆಯದಾಗಿ ನಡೆದುಕೊಳ್ಳಿ. ದೇವತೆಗಳಿಂದ ರಕ್ಷಿಸಲ್ಪಟ್ಟಿರುವ ಅರ್ಜುನನಿಂದ ವಧೆಗೊಳ್ಳಬೇಡಿ. ಬೇಗನೇ ಲೋಕವೀರ ಪಾಂಡವನನ್ನು ಬೇಡಿಕೊಳ್ಳಿ. ಶಸ್ತ್ರವಿತ್ತಮ ಪಾಂಡವ ಸವ್ಯಸಾಚಿಯಿರುವ ಹಾಗೆ ಬೇರೆ ಯಾವ ಯೋಧನೂ ಈ ಭೂಮಿಯ ಮೇಲೆ ಇಲ್ಲ. ಗಾಂಡೀವಧನ್ವಿಯ ದಿವ್ಯ ರಥವು ದೇವತೆಗಳಿಂದಲೇ ರಕ್ಷಿತವಾಗಿದೆ. ಮನುಷ್ಯರಿಂದ ಅವನನ್ನು ಗೆಲ್ಲಲಿಕ್ಕಾಗುವುದಿಲ್ಲ. ಆದುದರರಿಂದ ಯುದ್ಧಕ್ಕೆ ಮನಸ್ಸು ಮಾಡಬೇಡಿ!'"

ಧೃತರಾಷ್ಟ್ರನು ಹೇಳಿದನು:

"ಪಾಂಡವನು ಕೌಮಾರ್ಯದಿಂದಲೇ ಕ್ಷತ್ರತೇಜಸ್ಸನ್ನು ಹೊಂದಿದ್ದಾನೆ, ಬ್ರಹ್ಮಚಾರಿಯಾಗಿದ್ದಾನೆ. ಅವರೊಂದಿಗೆ ಈ ಮಂದರು, ನಾನು ವಿಲಪಿಸುತ್ತಿದ್ದೇನೆಂದು ಹೇಳಿ, ಯುದ್ಧಮಾಡಲು ಬಯಸುತ್ತಾರೆ. ಯುದ್ಧದಿಂದ ವಿಮುಖನಾಗು. ಸರ್ವಾವಸ್ಥೆಗಳಲ್ಲಿ ಯುದ್ಧವನ್ನು ಪ್ರಶಂಸಿಸುವುದಿಲ್ಲ. ಅಮಾತ್ಯರೊಂದಿಗೆ ಜೀವಿಸಲು ನಿನಗೆ ಅರ್ಧಭೂಮಿಯು ಸಾಕು! ಪಾಂಡುಪುತ್ರರಿಗೆ ಯಥೋಚಿತವಾದುದನ್ನು ಕೊಟ್ಟುಬಿಡು. ಮಹಾತ್ಮ

ಪಾಂಡುಪುತ್ರರೊಂದಿಗೆ ಶಾಂತಿಯಿಂದಿರಲು ಪ್ರಯತ್ನಿಸುವುದೇ ಧರ್ಮಸಂಹಿತವೆಂದು ಎಲ್ಲ ಕುರುಗಳೂ ಅಭಿಪ್ರಾಯಪಡುತ್ತಾರೆ. ಮಗನೇ! ಆಲೋಚಿಸು! ನಿನ್ನ ಈ ಸೇನೆಯು ನಿನ್ನದೇ ನಾಶಕ್ಕೆ ಕಾರಣವಾಗುವುದು. ಮೋಹದಿಂದಾಗಿ ಇದು ನಿನಗೆ ಅರ್ಥವಾಗುತ್ತಿಲ್ಲ. ಏಕೆಂದರೆ ನಾನು ಯುದ್ಧವನ್ನು ಬಯಸುವುದಿಲ್ಲ. ಬಾಹ್ಲೀಕನೂ ಇದನ್ನು ಬಯಸುವುದಿಲ್ಲ. ಭೀಷ್ಮನೂ, ದ್ರೋಣನೂ, ಅಶ್ವತ್ಥಾಮನೂ, ಸಂಜಯನೂ, ಸೋಮದತ್ತನೂ, ಶಲ್ಯನೂ, ಕೃಪನೂ, ಸತ್ಯವ್ರತ ಪುರುಮಿತ್ರ, ಜಯಶಾಲಿ ಭೂರಿಶ್ರವನೂ ಯುದ್ಧವನ್ನು ಇಚ್ಛಿಸುವುದಿಲ್ಲ. ಶತ್ರುಗಳಿಂದ ಪೀಡಿತರಾದಾಗ ಯಾರ ಮೇಲೆ ಕುರುಗಳು ಅವಲಂಬಿಸುತ್ತಾರೋ ಅವರೇ ಯುದ್ಧವನ್ನು ಇಷ್ಟಪಡುವುದಿಲ್ಲ. ಮಗೂ! ನಿನಗೂ ಅದು ಇಷ್ಟವಾಗಲಿ. ನೀನು ನಿನಗೆ ಬೇಕೆಂದು ಮಾಡುತ್ತಿಲ್ಲ. ಕರ್ಣ, ಪಾಪಾತ್ಮ ದುಃಶಾಸನ ಮತ್ತು ಶಕುನಿ ಸೌಬಲರು ಇದನ್ನು ನಿನ್ನಿಂದ ಮಾಡಿಸುತ್ತಿದ್ದಾರೆ.”

ದುರ್ಯೋಧನನು ಹೇಳಿದನು:

“ನಾನು ನಿನ್ನ ಮೇಲಾಗಲೀ ಅಥವಾ ಅನ್ಯರ ಮೇಲಾಗಲೀ ಭಾರವನ್ನು ಹೊರಿಸಿ ಈ ಯುದ್ಧವನ್ನು ಮಾಡುತ್ತಿಲ್ಲ. ನನಗೆ ನೀನೂ ಬೇಡ, ದ್ರೋಣನೂ ಬೇಡ, ಅಶ್ವತ್ಥಾಮನೂ ಬೇಡ,

ಸಂಜಯನೂ ಬೇಡ, ವಿಕರ್ಣನೂ ಬೇಡ, ಕಾಂಬೋಜನೂ ಬೇಡ, ಕೃಪನೂ ಬೇಡ, ಬಾಹ್ಲೀಕನೂ ಬೇಡ, ಸತ್ಯವ್ರತ ಪುರುಮಿತ್ರರೂ ಬೇಡ ಮತ್ತು ಪುನಃ ಭೂರಿಶ್ರವನೂ ಬೇಡ. ಅಪ್ಪಾ! ನಾನು ಮತ್ತು ಕರ್ಣ ಇಬ್ಬರೇ ದೀಕ್ಷೆ ಕೈಗೊಂಡು, ಯುಧಿಷ್ಠಿರನನ್ನು ಬಲಿಯನ್ನಾಗಿ ಮಾಡಿ, ರಥವನ್ನು ವೇದಿಯನ್ನಾಗಿಸಿ, ಆಹುತಿಯನ್ನು ನೀಡಲು ಖಡ್ಗವನ್ನು ಸಣ್ಣ ಹುಟ್ಟನ್ನಾಗಿಸಿ, ಗದೆಯನ್ನು ದೊಡ್ಡ ಹುಟ್ಟನ್ನಾಗಿಸಿ, ಕವಚವನ್ನು ಸದಸ್ಯನನ್ನಾಗಿಸಿ, ನಾಲ್ಕು ಕುದುರೆಗಳನ್ನು ಧುರ್ಯರನ್ನಾಗಿಸಿ, ನನ್ನ ಬಾಣಗಳನ್ನು ದರ್ಬೆಗಳನ್ನಾಗಿಸಿ, ಯಶಸ್ಸನ್ನು ಹವಿಸ್ಸನ್ನಾಗಿಸಿ ರಣಯಜ್ಞವನ್ನು ಮಾಡಬೇಕೆಂದಿದ್ದೇವೆ. ರಣದಲ್ಲಿ ವೈವಸ್ವತನಿಗೆ ಈ ರೀತಿಯ ಆತ್ಮಯಜ್ಞವನ್ನು ಮಾಡಿ, ಅಮಿತ್ರರನ್ನು ಸಂಹರಿಸಿ, ಶ್ರೀಯಿಂದ ಆವೃತರಾಗಿ ವಿಜಯ ಸಾಧಿಸಿ ಹಿಂದಿರುಗುತ್ತೇವೆ. ನಾನು, ಕರ್ಣ ಮತ್ತು ನನ್ನ ತಮ್ಮ ದುಃಶಾಸನ ಈ ನಾವು ಮೂವರೇ ಸಮರದಲ್ಲಿ ಪಾಂಡವರನ್ನು ಇಲ್ಲವಾಗಿಸುತ್ತೇವೆ. ನಾನೇ ಪಾಂಡವರನ್ನು ಕೊಂದು ಈ ಪೃಥ್ವಿಯನ್ನು ಆಳುತ್ತೇನೆ. ಅಥವಾ ಪಾಂಡುಪುತ್ರರು ನನ್ನನ್ನು ಕೊಂದು ಈ ಪೃಥ್ವಿಯನ್ನು ಭೋಗಿಸುತ್ತಾರೆ. ನನ್ನ ಜೀವವನ್ನು, ಧನವನ್ನು ಮತ್ತು ರಾಜ್ಯವನ್ನು ತ್ಯಜಿಸಿಯೇನು. ಆದರೆ ಪಾಂಡವರೊಂದಿಗೆ ನಾನು ಹಂಚಿಕೊಂಡು ಜೀವಿಸುವುದಿಲ್ಲ. ತೀಕ್ಷ್ಣವಾದ ಸೂಜಿಯ

ಮೊನೆಯು ಊರುವಷ್ಟು ಭೂಮಿಯನ್ನೂ ನಾನು ಪಾಂಡವರಿಗೆ ಬಿಟ್ಟು ಕೊಡುವುದಿಲ್ಲ.”

ಧೃತರಾಷ್ಟ್ರನು ಹೇಳಿದನು:

“ಅಯ್ಯಾ! ಈಗ ನಾನು ದುರ್ಯೋಧನನನ್ನು ತ್ಯಜಿಸುತ್ತೇನೆ. ಈ ಮೂಢನನ್ನು ಅನುಸರಿಸುವವರೆಲ್ಲರೂ ವೈವಸ್ವತಕ್ಷಯಕ್ಕೆ ಹೋಗುತ್ತಾರೆ. ರುರುಗಳ ಗುಂಪುಗಳ ಮಧ್ಯೆ ಹೋರಾಡುವ ಶ್ರೇಷ್ಠ ವ್ಯಾಘ್ರದಂತೆ ಯುದ್ಧದಲ್ಲಿ ಸೇರಿರುವ ಶ್ರೇಷ್ಠ ಶ್ರೇಷ್ಠರನ್ನೂ ಪಾಂಡವರು ಸಂಹರಿಸುತ್ತಾರೆ. ಬೆದರಿದ ಸೀಮಂತಿನಿಯಂತಿರುವ ಭಾರತಿಯನ್ನು ಯುಯುಧಾನನು ತನ್ನ ದೀರ್ಘ ಬಾಹುಗಳಿಂದ ಹಿಡಿದು, ಮುದ್ದೆಗಟ್ಟಿ ದೂರ ಎಸೆಯುತ್ತಾನೆ. ಆಗಲೇ ಸಂಪೂರ್ಣವಾಗಿರುವ ಪಾರ್ಥನ ಬಲವನ್ನೂ ಇನ್ನೂ ಸಂಪೂರ್ಣಗೊಳಿಸುವ ಮಾಧವ ಶೈನಿಯು ಹೊಲದಲ್ಲಿ ಬೀಜವನ್ನು ಬಿತ್ತಿದ ಹಾಗೆ ಸಮರದಲ್ಲಿ ಬಾಣಗಳನ್ನು ಸುರಿಸುತ್ತಾನೆ. ಭೀಮಸೇನನು ಸೇನೆಯ ಮುಖದಲ್ಲಿ ಹೋರಾಡುತ್ತಾನೆ. ಅವನ ಸೈನಿಕರೆಲ್ಲರೂ ಪ್ರಾಕಾರದ ಹಿಂದೆ ನಿಲ್ಲುವಂತೆ ಅವನ ಹಿಂದೆ ನಿಂತು ಯುದ್ಧಮಾಡುತ್ತಾರೆ. ಭೀಮನು ದಂತಗಳನ್ನು ಮುರಿದು, ಕಪಾಲಗಳನ್ನು ಜಜ್ಜಿ, ರಕ್ತಸುರಿಸಿ ಆನೆಗಳನ್ನು ಕೆಳಗುರುಳಿಸಿದುದನ್ನು ನೋಡುತ್ತೀಯೆ. ಪರ್ವತಗಳಂತಿದ್ದ

ಅವು ಪುಡಿಪುಡಿಯಾಗಿ ಸಂಗ್ರಾಮದಲ್ಲಿ ಬಿದ್ದುದನ್ನು ನೋಡಿ, ಭೀಮನ ಸ್ಪರ್ಷವನ್ನೇ ಹೆದರುವಾಗ ನೀನು ನನ್ನ ಮಾತನ್ನು ನೆನಪಿಸಿಕೊಳ್ಳುತ್ತೀಯೆ. ರಥ, ಕುದುರೆ ಮತ್ತು ಆನೆಗಳು ಭೀಮಸೇನನಿಂದ, ಅಗ್ನಿಯ ಮಾರ್ಗದಂತೆ ಸುಡಲ್ಪಟ್ಟಿದ್ದುದನ್ನು ನೋಡಿ ನೀನು ನನ್ನ ವಚನವನ್ನು ಸ್ಮರಿಸಿಕೊಳ್ಳುತ್ತೀಯೆ. ಪಾಂಡವರೊಂದಿಗೆ ಸಂಧಿಯನ್ನು ಮಾಡಿಕೊಳ್ಳದೇ ಇದ್ದರೆ ಮಹಾ ಭಯವು ನಿನಗಾಗುತ್ತದೆ. ಭೀಮಸೇನನ ಗದೆಯಿಂದ ಹತನಾಗಿ ಶಾಂತಿಯನ್ನು ಹೊಂದುತ್ತೀಯೆ. ಕುರುಗಳ ಸೇನೆಯು ಸಂಗ್ರಾಮದಲ್ಲಿ ಮಹಾವನದಂತೆ ಕತ್ತರಿಸಲ್ಪಟ್ಟು ಬೀಳುವುದನ್ನು ನೋಡಿದಾಗ ನನ್ನ ಮಾತನ್ನು ಸ್ಮರಿಸಿಕೊಳ್ಳುತ್ತೀಯೆ.”

ಎಲ್ಲ ಪೃಥಿವೀಪತಿಗಳನ್ನು ಉದ್ದೇಶಿಸಿ ಹೀಗೆ ಹೇಳಿದ ಮಹಾರಾಜನು ಪುನಃ ಸಂಜಯನನ್ನು ಮಾತನಾಡಿಸಿ ಕೇಳಿದನು.

## ವಾಸುದೇವ ಕೃಷ್ಣನ ಸಂದೇಶ

ಧೃತರಾಷ್ಟ್ರನು ಹೇಳಿದನು:

“ಮಹಾಪ್ರಾಜ್ಞ! ಮಹಾತ್ಮರಾದ ವಾಸುದೇವ-ಧನಂಜಯರು ಏನು ಹೇಳಿದರೆಂಬುದನ್ನು ನನಗೆ ಹೇಳು. ಅದನ್ನು ಕೇಳಲು

ತವಕವಿದೆ.”

ಸಂಜಯನು ಹೇಳಿದನು:

“ರಾಜನ್! ನಾನು ಕೃಷ್ಣ-ಧನಂಜಯರನ್ನು ಹೇಗಿದ್ದಾಗ ನೋಡಿದೆನೆನ್ನುವುದನ್ನೂ, ಆ ವೀರರಿಬ್ಬರೂ ನನಗೆ ಏನು ಹೇಳಿ ಕಳುಹಿಸಿದ್ದಾರೆನ್ನುವುದನ್ನೂ ನಿನಗೆ ಹೇಳುತ್ತೇನೆ. ಕಾಲಿನ ಬೆರಳುಗಳನ್ನು ನೋಡುತ್ತಾ, ತಲೆಬಾಗಿ, ಕೈಮುಗಿದು ಶುದ್ಧನಾಗಿ ಅವರಿಗೆ ಹೇಳಲು ನಾನು ಆ ನರದೇವರ ಅಂತಃಪುರವನ್ನು ಪ್ರವೇಶಿಸಿದೆ. ಕೃಷ್ಣರಿಬ್ಬರೂ, ಕೃಷ್ಣೆ ಮತ್ತು ಭಾಮಿನೀ ಸತ್ಯಭಾಮೆಯರಿರುವ ಆ ಪ್ರದೇಶವನ್ನು ಅಭಿಮನ್ಯುವಾಗಲೀ ಯಮಳರಾಗಲೀ ಹೋಗಲಾರರು. ಇಬ್ಬರೂ ಹಾರಗಳನ್ನು ಹಾಕಿಕೊಂಡು, ವರವಸ್ತ್ರಗಳನ್ನು ಧರಿಸಿ, ದಿವ್ಯಾಭರಣ ಭೂಷಿತರಾಗಿ, ಚಂದನಲೇಪಿತರಾಗಿ, ಮಧುವನ್ನು ಸೇವಿಸುತ್ತಾ ಕುಳಿತಿದ್ದರು. ಅನೇಕ ವಿಚಿತ್ರ ರತ್ನಗಳಿಂದ ಕೂಡಿದ ಕಾಂಚನದ ಮಹದಾಸನದ ಮೇಲೆ, ವಿವಿಧ ನೆಲಗಂಬಳಿಗಳನ್ನು ಹಾಸಿದ್ದಲ್ಲಿ ಆ ಅರಿಂದಮರಿಬ್ಬರೂ ಕುಳಿತುಕೊಂಡಿದ್ದರು. ಕೇಶವನ ಪಾದಗಳು ಅರ್ಜುನನ ತೊಡೆಯಮೇಲಿದ್ದುದನ್ನು, ಮತ್ತು ಮಹಾತ್ಮ ಅರ್ಜುನನ ಪಾದಗಳು ಕೃಷ್ಣೆ ಮತ್ತು ಸತ್ಯಭಾಮೆಯರ ತೊಡೆಯಮೇಲಿರುವುದನ್ನು ನೋಡಿದೆನು. ಪಾರ್ಥನು ನನಗೆ



ಕಾಂಚನದ ಪಾದಪೀಠವೊಂದನ್ನು ತೋರಿಸಿದನು. ಅದನ್ನು ನಾನು ಕೈಯಲ್ಲಿ ಮುಟ್ಟಿ ನೆಲದ ಮೇಲೆ ಕುಳಿತುಕೊಂಡೆನು. ಪಾದಪೀಠದಿಂದ ಕಾಲನ್ನು ಹಿಂದೆ ತೆಗೆದುಕೊಳ್ಳುವಾಗ ನಾನು ಪಾರ್ಥನ ಆ ಪಾದಗಳಲ್ಲಿರುವ ಶುಭಲಕ್ಷಣ ಊರ್ಧ್ವರೇಖೆಗಳಿರುವ ತಲವನ್ನು ನೋಡಿದೆನು. ಶ್ಯಾಮವರ್ಣದ, ದೊಡ್ಡದೇಹದ, ತರುಣರಾದ,

ಶಾಲಸ್ಕಂಧದಂತೆ ಎತ್ತರವಾಗಿರುವ ಅವರಿಬ್ಬರೂ ಒಂದೇ ಆಸನದಲ್ಲಿ ಕುಳಿತಿರುವುದನ್ನು ನೋಡಿ ನನಗೆ ಮಹಾ ಭಯವು ಆವರಿಸಿತು. ಇಂದ್ರ-ವಿಷ್ಣು ಇಬ್ಬರೂ ಸೇರಿರುವುದು ದ್ರೋಣ, ಭೀಷ್ಮ ಮತ್ತು ತನ್ನನ್ನು ತಾನು ಹೊಗಳಿಕೊಳ್ಳುವ ಕರ್ಣನನ್ನು ಸಂಶ್ರಯಿಸಿರುವ ಮಂದಾತ್ಮನಿಗೆ ತಿಳಿದಿಲ್ಲ. ಆ ಕ್ಷಣದಲ್ಲಿ ನನಗೆ ನಿಶ್ಚಯವಾಯಿತು - ಯಾರ ನಿರ್ದೇಶನದಂತೆ ಅವರಿಬ್ಬರು ನಡೆದುಕೊಳ್ಳುತ್ತಾರೋ ಯಾರ ಮನಸ್ಸನ್ನು ಅವರು ಸೇವಿಸುತ್ತಾರೋ ಆ ಧರ್ಮರಾಜನ ಸಂಕಲ್ಪದಂತೆಯೇ ಆಗುತ್ತದೆ. ಅನ್ನ ಪಾನಗಳಿಂದ ಸತ್ಕೃತನಾಗಿ ಮತ್ತು ಇತರ ಸತ್ಕ್ರಿಯೆಗಳಿಂದ ಸಮ್ಮಾನಿತನಾಗಿ ತಲೆಯ ಮೇಲೆ ಕೈಗಳನ್ನು ಮುಗಿದು ನಿನ್ನ ಸಂದೇಶವನ್ನು ಅವರಿಗೆ ಹೇಳಿದೆ. ಆಗ ಪಾರ್ಥನು ಧನುರ್ಬಾಣಗಳನ್ನು ಹಿಡಿಯುವ ಕೈಯಿಂದ ಕೇಶವನ ಶುಭಲಕ್ಷಣಯುತ ಕಾಲನ್ನು ಸರಿಸಿ, ಅವನಿಗೆ ಮಾತನಾಡಲು ಒತ್ತಾಯಿಸಿದನು. ಸರ್ವಾಭರಣಭೂಷಿತ ಇಂದ್ರವೀರ್ಯೋಪಮ ಕೃಷ್ಣನು ಇಂದ್ರಧ್ವಜದಂತೆ ಮೇಲೆದ್ದು ನನ್ನನ್ನು ಉದ್ದೇಶಿಸಿ ಹೇಳಿದನು. ಆ ಮಾತುನಾಡುವವರಲ್ಲಿ ಶ್ರೇಷ್ಠನ ಮಾತುಗಳು ದಾರುಣವಾಗಿದ್ದು ಧಾರ್ತರಾಷ್ಟ್ರರನ್ನು ಕಾಡುವಂತಿದ್ದರೂ, ಆನಂದದಾಯಕವಾಗಿದ್ದವು, ಮನಸೆಳೆಯುವಂತಿದ್ದವು ಮತ್ತು ಮೃದುಪೂರ್ವಕವಾಗಿದ್ದವು. ಆ ಮಾತುಗಳನ್ನಾಡಲು ಅವನೋರ್ವನೇ ಅರ್ಹನಾಗಿದ್ದನು.

ಅವು ಶಿಕ್ಷಾಕ್ಷರ ಸಮನ್ವಿತವಾಗಿತ್ತು. ಅರ್ಥಗರ್ಭಿತವಾಗಿತ್ತು. ಆದರೂ ಕೊನೆಯಲ್ಲಿ ಅದು ಹೃದಯವನ್ನು ಶೋಷಿಸುವಂತಿತ್ತು.

ವಾಸುದೇವನು ಹೇಳಿದನು: 'ಸಂಜಯ! ಮನೀಷಿ ಧೃತರಾಷ್ಟ್ರನಿಗೆ ಈ ಮಾತುಗಳನ್ನು ಹೇಳು. ಕುರುಮುಖ್ಯರಿಗೂ ಕೇಳಿಸು ಮತ್ತು ದ್ರೋಣನಿಗೂ ಕೇಳಿಸು. ವಿಪ್ರರಿಗೆ ವಿಪುಲ ದಕ್ಷಿಣೆಗಳನ್ನಿತ್ತು ಯಜ್ಞಗಳನ್ನು ಯಾಜಿಸಿರಿ. ಹೆಂಡತಿ ಮಕ್ಕಳೊಂದಿಗೆ ಆನಂದಿಸಿಕೊಳ್ಳಿ. ಮಹಾಭಯವು ಬಂದೊದಗಿದೆ. ಸಂಪತ್ತನ್ನು ಪಾತ್ರರಲ್ಲಿ ಹಂಚಿ. ಬೇಕಾದ ಸುತರನ್ನು ಪಡೆಯಿರಿ. ಪ್ರಿಯರೊಡನೆ ಪ್ರೀತಿಯಿಂದ ನಡೆದುಕೊಳ್ಳಿ. ಏಕೆಂದರೆ ರಾಜಾ ಯುಧಿಷ್ಠಿರನು ಜಯಕ್ಕೆ ಕಾತರನಾಗಿದ್ದಾನೆ. ನಾನು ದೂರದಲ್ಲಿರುವಾಗ ಕೃಷ್ಣೆಯು 'ಗೋವಿಂದ!' ಎಂದು ಶೋಕದಿಂದ ಕೂಗಿ ಕರೆದಿದ್ದುದರ, ಯಾರ ಕಾರ್ಮುಕವು ತೇಜೋಮಯ, ದುರಾಧರ್ಷ ಗಾಂಡೀವವೋ ಆ ಸವ್ಯಸಾಚಿ – ನನ್ನ ಎರಡನೆಯವನೊಡನೆ ನೀವೇನು ವೈರ ಸಾಧಿಸಿದ್ದೀರೋ ಅವುಗಳ ಋಣವು ಬೆಳೆದು ನನ್ನ ಹೃದಯವನ್ನು ಆವರಿಸಿದೆ. ನನಗೆ ಎರಡನೆಯವನಾದ ಪಾರ್ಥನನ್ನು ಯಾರುತಾನೇ - ಅವನು ಸಾಕ್ಷಾತ್ ಪುರಂದರನೇ ಆಗಿದ್ದರೂ - ಅವನ ಕಾಲವು ಮುಗಿದಿಲ್ಲವಾಗಿದ್ದರೆ ಎದುರಿಸಲು ಬಯಸುತ್ತಾನೆ?

ಅರ್ಜುನನನ್ನು ಸಮರದಲ್ಲಿ ಯಾರು ಗೆಲ್ಲುತ್ತಾನೋ ಅವನು ಎರಡೂ ಬಾಹುಗಳಿಂದ ಭೂಮಿಯನ್ನು ಎತ್ತಿ ಹಿಡಿಯಬಹುದು, ಕೃದ್ಧನಾಗಿ ಈ ಪ್ರಜೆಗಳನ್ನು ಸುಟ್ಟುಬಿಡಬಲ್ಲನು, ಮತ್ತು ದೇವತೆಗಳೊಂದಿಗೆ ದಿವಿಯನ್ನು ಕೆಳಗೆ ಬೀಳಿಸಿಯಾನು. ರಣದಲ್ಲಿ ಪಾಂಡವನೊಂದಿಗೆ ಯುದ್ಧಮಾಡಿ ಎದುರಿಸುವವನನ್ನು ದೇವಾಸುರಮನುಷ್ಯರಲ್ಲಿ, ಯಕ್ಷ-ಗಂಧರ್ವ-ನಾಗರಲ್ಲಿ ನಾನು ಕಾಣಲಾರೆ. ವಿರಾಟನಗರದಲ್ಲಿ ನಡೆದ ಮಹಾ ಅದ್ಭುತಕ ಕುರಿತು ಏನು ಕೇಳಿದ್ದೇವೋ - ಓರ್ವನೇ ಬಹುಯೋಧರನ್ನು ಎದುರಿಸಿದುದು - ಅದೇ ಇದಕ್ಕೆ ನಿದರ್ಶನವು. ವಿರಾಟನಗರದಲ್ಲಿ ಪಾಂಡುಪುತ್ರನೊಬ್ಬನಿಂದಲೇ ಎದುರಿಸಲ್ಪಟ್ಟಾಗ, ಭಗ್ನರಾಗಿ ದಿಕ್ಕುಗಳಲ್ಲಿ ಪಲಾಯನ ಮಾಡಿದುದೇ ಅದಕ್ಕೆ ನಿದರ್ಶನವು. ಪಾರ್ಥನಲ್ಲಿರುವ ಬಲ, ವೀರ್ಯ, ತೇಜಸ್ಸು, ಶೀಘ್ರತೆ, ಕೈಚಳಕ, ಆಯಾಸಗೊಳ್ಳದಿರುವಿಕೆ, ಮತ್ತು ಧೈರ್ಯವು ಬೇರೆ ಯಾರಲ್ಲಿಯೂ ಇದ್ದುದು ಗೊತ್ತಿಲ್ಲ.’

ಹೀಗೆ ಗಗನದಲ್ಲಿ ಪಾಕಶಾಸನನು ಮಳೆಸುರಿಸುವಾಗ ಕೇಳಿಬರುವ ಗುಡುಗಿನ ಧ್ವನಿಯಲ್ಲಿ ಪಾರ್ಥನನ್ನು ಉತ್ತೇಜಿಸುವ ಈ ಮಾತುಗಳನ್ನಾಡಿದನು. ಕೇಶವನ ಮಾತುಗಳನ್ನು ಕೇಳಿ ಶ್ವೇತವಾಹನ ಕಿರೀಟಿ ಅರ್ಜುನನು ಆ ಲೋಮಹರ್ಷಣ ಮಹಾಮಾತನ್ನು ಆಡಿದನು.”

ಸಂಜಯನ ಮಾತನ್ನು ಕೇಳಿ ಪ್ರಜ್ಞಾಚಕ್ಷು ನರೇಶ್ವರನು ಅವನ ಮಾತುಗಳ ಗುಣದೋಷಗಳನ್ನು ವಿಮರ್ಶಿಸಲು ಪ್ರಾರಂಭಿಸಿದನು. ಸೂಕ್ಷ್ಮವಾಗಿ ವಿಶ್ಲೇಷಣೆಯನ್ನು ಮಾಡಿ, ಗುಣದೋಷಗಳನ್ನು ಪರೀಕ್ಷಿಸಿ, ತನ್ನ ಮಕ್ಕಳ ಜಯವನ್ನು ಬಯಸಿ ಅದರಂತೆ ಅಭಿಪ್ರಾಯಪಟ್ಟನು. ಎರಡೂ ಪಕ್ಷಗಳ ಬಲಾಬಲಗಳನ್ನು ಯಥಾತಥ್ಯವಾಗಿ ನಿಶ್ಚಯಿಸಿ ಆ ಬುದ್ಧಿಮಾನ್ ಮನುಜಾಧಿಪನು ಪರಸ್ಪರರ ಶಕ್ತಿಯನ್ನು ವಿಶ್ಲೇಷಿಸ ತೊಡಗಿದನು. ದೇವ-ಮನುಷ್ಯರ ಸಹಾಯಶಕ್ತಿ ಮತ್ತು ತೇಜಸ್ಸಿನಲ್ಲಿ ಪಾಂಡವರಿಗಿಂತ ಕುರುಗಳ ಶಕ್ತಿಯು ಕಡಿಮೆಯಾದುದು ಎಂದು ಯೋಚಿಸಿ ದುರ್ಯೋಧನನಿಗೆ ಹೇಳಿದನು:

> “ದುರ್ಯೋಧನ! ನನ್ನ ಈ ಚಿಂತೆಯು ಶಾಶ್ವತವಾಗಿ ಇಲ್ಲವಾಗುತ್ತಿಲ್ಲ. ಇದು ಸತ್ಯವಾದುದು ಎಂದು ತಿಳಿಯುತ್ತೇನೆ. ಇದು ಪ್ರತ್ಯಕ್ಷವಾದುದು. ಅನುಮಾನಿತವಾದುದಲ್ಲ. ಇರುವ ಎಲ್ಲವೂ ತಮ್ಮಲ್ಲಿ ಹುಟ್ಟಿದವುಗಳಲ್ಲಿ ಪರಮ ಸ್ನೇಹವನ್ನು ಮಾಡಿಕೊಳ್ಳುತ್ತವೆ. ಅವುಗಳಿಗೆ ಪ್ರಿಯವಾದುದನ್ನು, ಯಥಾಶಕ್ತಿ ಹಿತವಾದುವನ್ನು ಮಾಡುತ್ತವೆ. ಇದನ್ನೂ ಕೂಡ ಸಾಧಾರಣವಾಗಿ ನಾವು ಕಾಣುತ್ತೇವೆ - ಯಾರಿಂದ ಉಪಕೃತ್ಯರಾಗಿದ್ದೇವೋ ಅವರಿಗೆ ಮಹಾ ಪ್ರಿಯವಾದುದನ್ನು ಮಾಡಿ ಪ್ರತೀಕಾರ ಮಾಡಬೇಕೆಂದು ಸಂತರು ಬಯಸುತ್ತಾರೆ. ಖಾಂಡವದಲ್ಲಿ ಅರ್ಜುನನು ಮಾಡಿದ ಕೆಲಸಗಳನ್ನು ನೆನಪಿನಲ್ಲಿಟ್ಟುಕೊಂಡು ಕುರುಪಾಂಡವರ ಈ ಯುದ್ಧದಲ್ಲಿ

ಅಗ್ನಿಯು ಅವನಿಗೆ ಸಹಾಯ ಮಾಡುತ್ತಾನೆ. ಮಕ್ಕಳ ಮೇಲಿನ ಪ್ರೀತಿಯಿಂದ ಕೂಡ ಧರ್ಮಾದಿ ಅನೇಕ ದಿವೌಕಸರು ಪಾಂಡವರ ಪಕ್ಷವನ್ನು ಸೇರುತ್ತಾರೆ. ಭೀಷ್ಮ-ದ್ರೋಣ-ಕೃಪಾದಿಗಳ ಭಯದಿಂದ ಅವರನ್ನು ರಕ್ಷಿಸಲು ಮಿಂಚಿನಂತೆ ಬರುತ್ತಾರೆಂದು ನನಗನ್ನಿಸುತ್ತದೆ. ದೇವಸಹಿತರಾದ ಆ ವೀರ್ಯವಂತ ಅಸ್ತ್ರಪಾರಗ ನರವ್ಯಾಘ್ರ ಪಾರ್ಥರನ್ನು ಮನುಷ್ಯರು ಎದುರಿಸಲು ಶಕ್ಯವಿರುವುದಿಲ್ಲ. ಯಾರ ಧನುಸ್ಸು ದಿವ್ಯ ಉತ್ತಮ ದುರಾಸದ ಗಾಂಡೀವವೋ, ಯಾರು ವರುಣನು ಕೊಟ್ಟ ಎರಡು ಅಕ್ಷಯ, ದಿವ್ಯ, ಶರಪೂರ್ಣ ಭತ್ತಳಿಕೆಗಳನ್ನು ಹೊಂದಿರುವನೋ. ಯಾರಲ್ಲಿ ನಿಃಸಂಗವಾಗಿ ಹೊಗೆಯಂತೆ ಹಾರಡುವ ದಿವ್ಯ ವಾನರಧ್ವಜವಿದೆಯೋ, ಯಾರ ರಥವು ಚತುರಾಯಾಂತದಲ್ಲಿ ಅಂಥಹ ಕಾಂತಿಯನ್ನು ಹೊಂದಿಲ್ಲವೋ ಮತ್ತು ಮಳೆಗಾಳದ ಮೋಡಗಳಂತೆ ಗುಡುಗಿ ಶತ್ರುಗಳಲ್ಲಿ ಭಯವನ್ನುಂಟುಮಾಡುತ್ತದೆಯೋ, ಯಾರ ವೀರ್ಯವನ್ನು ಇಡೀ ಲೋಕವೇ ಅಮಾನುಷವಾದುದೆಂದು ತಿಳಿದಿದೆಯೋ, ಯಾರನ್ನು ಪಾರ್ಥಿವರು ದೇವತೆಗಳಿಗೂ ಅಜೇಯನೆಂದು ತಿಳಿದುಕೊಂಡಿದ್ದಾರೋ, ಕಣ್ಣುಮುಚ್ಚಿ ತೆರೆಯುವುದರೊಳಗೆ ಯಾರು ಐದುನೂರು ಬಾಣಗಳನ್ನು ಬಿಡುವುದನ್ನು, ದೂರದಲ್ಲಿ ಹೋಗಿ ಬೀಳುವುದನ್ನು ಎಲ್ಲರೂ ನೋಡಿದ್ದಾರೋ, ಯಾವ ಪಾರ್ಥನನ್ನು ಭೀಷ್ಮ, ದ್ರೋಣ,

ಕೃಪ, ದ್ರೌಣಿ, ಮದ್ರರಾಜ ಶಲ್ಯ ಮತ್ತು ಮಧ್ಯಸ್ಥರಾಗಿರುವ ಮಾನವರು ಯುದ್ಧದಲ್ಲಿ ಅತಿಮಾನುಷನೆಂದೂ, ಪರಾಜಯಗೊಳಿಸಲು ಅಶಕ್ಯನಾದ ರಥಶಾರ್ದೂಲನೆಂದೂ ಅರಿಂದಮನೆಂದೂ ಹೇಳುತ್ತಾರೋ, ಒಂದೇ ಎಸೆತದಲ್ಲಿ ಒಂದೇ ವೇಗದ ಐನೂರು ಬಾಣಗಳನ್ನು ಬಿಡುವ, ಬಾಹುವೀರ್ಯದಲ್ಲಿ ಕಾರ್ತವೀರ್ಯನಂತಿರುವ ಪಾಂಡವ, ಆ ಅರ್ಜುನ, ಮಹೇಷ್ವಾಸ, ಮಹೇಂದ್ರ-ಉಪೇಂದ್ರರಿಂದ ರಕ್ಷಿತನಾದವನು ಮಹಾಯುದ್ಧದಲ್ಲಿ ನಮ್ಮನ್ನು ಸಂಹರಿಸುತ್ತಿರುವುದನ್ನು, ಸದೆಬಡಿಯುತ್ತಿರುವುದನ್ನು ಕಾಣುತ್ತೇನೆ.

ಹೀಗೆ ಇಡೀ ಹಗಲು ರಾತ್ರಿಗಳಲ್ಲಿ ಚಿಂತಿಸುತ್ತೇನೆ. ಕುರುಗಳ ಶಾಂತಿಯ ಕುರಿತು ಚಿಂತಿಸುತ್ತ ನಿದ್ರೆಯಿಲ್ಲದವನಾಗಿದ್ದೇನೆ. ನಿಃಸುಖಿಯಾಗಿದ್ದೇನೆ. ಕುರುಗಳ ಮಹಾ ನಾಶವು ಪ್ರಾರಂಭವಾದಂತಿದೆ. ಸಂಧಿಯಲ್ಲದೇ ಈ ಕಲಹಕ್ಕೆ ಬೇರೆ ಯಾವ ಅಂತ್ಯವನ್ನೂ ತಿಳಿಯಲಿಕ್ಕಾಗುತ್ತಿಲ್ಲ. ಪಾರ್ಥರೊಂದಿಗೆ ಸಂಧಿಯು ನನಗೆ ಯಾವಾಗಲೂ ಇಷ್ಟವಾಗುತ್ತದೆ. ಜಗಳವಲ್ಲ. ಕುರುಗಳಿಗಿಂತ ಪಾಂಡವರೇ ಹೆಚ್ಚು ಶಕ್ತಿವಂತರೆಂದು ಸದಾ ಅಭಿಪ್ರಾಯಪಡುತ್ತೇನೆ.”

## ದುರ್ಯೋಧನನು ತನ್ನ ಮಂತ್ರಸಿದ್ಧಿಗಳ ಕುರಿತು ಹೇಳಿಕೊಂಡಿದುದು

ತಂದೆಯ ಮಾತುಗಳನ್ನು ಕೇಳಿ ಅತಿ ಅಮರ್ಷಣ ಧಾರ್ತರಾಷ್ಟ್ರನು ತುಂಬಾ ಕೋಪಗೊಂಡು ಪುನಃ ಇದನ್ನು ಹೇಳಿದನು:

> "ರಾಜಸತ್ತಮ! ದೇವತೆಗಳ ಸಹಾಯವಿರುವ ಪಾರ್ಥರನ್ನು ಇಲ್ಲವಾಗಿಸಲು ಸಾಧ್ಯವಿಲ್ಲ ಎಂದು ನಿನಗನಿಸಿದರೆ ಆ ಭಯವನ್ನು ನೀನು ಕಿತ್ತೊಗೆಯಬೇಕು. ಕಾಮ-ದ್ವೇಷ-ಸಂಯೋಗ-ದ್ರೋಹ-ಲೋಭಗಳಿಲ್ಲವೆಂತಲೇ ದೇವತೆಗಳು ದೇವತ್ವ ಭಾವವನ್ನು ಪಡೆದರು. ಇದನ್ನು ನಮಗೆ ದ್ವೈಪಾಯನ ವ್ಯಾಸ, ಮಹಾತಪಸ್ವಿ ನಾರದ, ರಾಮ ಜಾಮದಗ್ನಿ ಇವರು ಹಿಂದೆ ಹೇಳಿದ್ದರು. ದೇವತೆಗಳು ಎಂದೂ ಕಾಮ, ಲೋಭ, ಅನುಕ್ರೋಶ, ದ್ವೇಷಗಳನ್ನು ಹೊಂದಿದ ಮನುಷ್ಯರಂತೆ ನಡೆದುಕೊಳ್ಳುವುದಿಲ್ಲ. ಒಂದುವೇಳೆ ಅಗ್ನಿ, ವಾಯು, ಧರ್ಮ, ಇಂದ್ರ ಮತ್ತು ಅಶ್ವಿನಿಯರು ಕಾಮ ಹೊಂದಿದವರಂತೆ ನಡೆದುಕೊಂಡರೂ ಪಾರ್ಥರು ದುಃಖವನ್ನು ಪಡೆಯಬಾರದಾಗಿತ್ತು. ಆದುದರಿಂದ ನೀನು ಎಂದೂ ಅದರ ಕುರಿತು ಚಿಂತಿಸುವುದನ್ನು ಮಾಡಬಾರದು. ಏಕೆಂದರೆ ದೇವತೆಗಳು ತಮಗೆ ತಕ್ಕುದಾದ ಕಾರ್ಯಗಳಲ್ಲಿ ಭಾಗವಹಿಸುತ್ತಾರೆ. ಒಂದು ವೇಳೆ ದೇವತೆಗಳಲ್ಲಿ ಕಾಮ,

ಸಂಯೋಗ, ದ್ವೇಷ, ಲೋಭಗಳಿರುವಂತೆ ಕಂಡರೂ, ದೇವ ಪ್ರಮಾಣದಿಂದ ಅವು ಹರಡುವುದಿಲ್ಲ.

ನಾನು ಅಭಿಮಂತ್ರಿಸಿದರೆ ಜಾತವೇದಸನು, ಸಕಲ ಲೋಕಗಳನ್ನು ಎಲ್ಲಕಡೆಯಿಂದ ಸುಡುತ್ತಿರುವಂತೆ ಕಂಡುಬಂದರೂ ನಂದಿಹೋಗುತ್ತಾನೆ. ದಿವೌಕಸರು ಪರಮ ತೇಜಸ್ಸಿನಿಂದ ಕೂಡಿದವರು ಎಂದು ತಿಳಿದಿದೆ. ಆದರೆ ನನ್ನ ತೇಜಸ್ಸು ದೇವತೆಗಳಿಗಿದ್ದಕಿಂತಲೂ ಇನ್ನೂ ಹೆಚ್ಚಿನದು ಎಂದು ತಿಳಿದುಕೋ. ವಸುಧೆಯು ಸೀಳಿಹೋದರೂ, ಗಿರಿ-ಶಿಖರಗಳು ತುಂಡಾದರೂ ನಾನು ಅವುಗಳನ್ನು ಅಭಿಮಂತ್ರಿಸಿ ಎಲ್ಲರೂ ನೋಡುತ್ತಿದ್ದಂತೆ ಜೋಡಿಸಬಲ್ಲೆ. ಚೇತನವಿರುವ, ಚೇತನವಿಲ್ಲದಿರುವ, ಜಂಗಮ ಸ್ಥಾವರಗಳ ವಿನಾಶಕ್ಕಾಗಿ ಮೇಲೆದ್ದ ಮಹಾಘೋರ ಮಹಸ್ವನ, ಕಲ್ಲುಗಳನ್ನು ಸುರಿಸುವ ಚಂಡಮಾರುತವನ್ನು ಕೂಡ ನಾನು ಇರುವವುಗಳಿಗೆ ಅನುಕಂಪವನ್ನು ತೋರಿ ಜಗತ್ತು ಗಾಭರಿಯಾಗಿ ನೋಡುತ್ತಿದ್ದಂತೆ ನಿಲ್ಲಿಸಬಲ್ಲೆ. ನಾನು ನೀರನ್ನು ಹೆಪ್ಪುಗಟ್ಟಿಸಿದಾಗ ರಥ-ಪದಾತಿಗಳು ಅದರ ಮೇಲೆ ಹೋಗಬಲ್ಲವು. ದೇವಾಸುರರ ಭಾವಗಳನ್ನು ನಾನೊಬ್ಬನೇ ಪರಿವರ್ತಿಸಬಲ್ಲೆ. ಯಾವುದೇ ದೇಶಗಳಿಗೆ ನನ್ನ ಅಕ್ಷೌಹಿಣಿಯು ಯಾವುದೇ ಕಾರ್ಯಕ್ಕೆಂದು ಹೋದರೂ, ಎಲ್ಲಿ ಹೋದರೂ ನೀರು ನನ್ನ ಪ್ರಕಾರ ನಡೆದುಕೊಳ್ಳುತ್ತದೆ ಮತ್ತು ಬೇಕಾದಲ್ಲಿ

ಹೋಗುತ್ತವೆ. ನಾನಿರುವ ಪ್ರದೇಶದಲ್ಲಿ ಹಾವು ಮೊದಲಾದವುಗಳ ಭಯವು ನನಗಿರುವುದಿಲ್ಲ. ಅಲ್ಲಿರುವ ಭೂತಗಳು ಮತ್ತರಾಗಿ ಮಲಗುತ್ತಾರೆ ಮತ್ತು ಭಯಂಕರ ಭೂತಗಳು ಹಿಂಸಿಸುವುದಿಲ್ಲ. ನನ್ನ ರಾಜ್ಯದಲ್ಲಿ ವಾಸಿಸುವವರ ಇಷ್ಟದಂತೆ ಮೋಡಗಳು ಮಳೆಸುರಿಸುತ್ತವೆ. ನನ್ನ ಪ್ರಜೆಗಳೆಲ್ಲರೂ ಧರ್ಮಿಷ್ಠರು ಮತ್ತು ಅವರು ದುರಂತಗಳನ್ನು ಅನುಭವಿಸುವುದಿಲ್ಲ.

ಅಶ್ವಿನಿಯರು, ವಾಯು, ಅಗ್ನಿ, ಮರುತ್ತುಗಳ ಸಹಿತ ವೃತ್ರಹ ಮತ್ತು ಧರ್ಮನೂ ಕೂಡ ನನ್ನ ಶತ್ರುಗಳನ್ನು ರಕ್ಷಿಸಲು ಮುಂದುವರೆಯುವುದಿಲ್ಲ. ಒಂದುವೇಳೆ ಅವರು ತಮ್ಮ ಓಜಸ್ಸಿನಿಂದ ನನ್ನ ವೈರಿಗಳನ್ನು ರಕ್ಷಿಸಲು ಸಮರ್ಥರಾಗಿದ್ದರೆ ಪಾರ್ಥರು ಹದಿಮೂರು ವರ್ಷಗಳು ದುಃಖವನ್ನು ಅನುಭವಿಸುತ್ತಿರಲಿಲ್ಲ. ನಾನು ದ್ವೇಷಿಸುವವರನ್ನು ದೇವತೆಗಳ, ಗಂಧರ್ವರ, ಅಸುರರ, ಮತ್ತು ರಾಕ್ಷಸರ ಶಕ್ತಿಗಳು ರಕ್ಷಿಸಲು ಅಸಮರ್ಥರು. ನಿನಗೆ ಸತ್ಯವನ್ನು ಹೇಳುತ್ತಿದ್ದೇನೆ. ನನ್ನ ಮಿತ್ರರು ಮತ್ತು ವೈರಿಗಳಲ್ಲಿ ಯಾರಿಗೆ ಶಿಕ್ಷೆ ಕೊಡಬೇಕು ಯಾರಿಗೆ ಪ್ರೋತ್ಸಾಹಿಸಬೇಕು ಎನ್ನುವುದರ ಕುರಿತು ಇದೂವರೆಗೆ ನನಗೆ ದ್ವಂದ್ವಗಳಿಲ್ಲ. ಇದೂವರೆಗೆ ಮುಂದೆ ಇದು ಆಗುತ್ತದೆ ಎಂದು ನಾನು ಹೇಳಿದುದು ಬೇರೆಯಾಗಿಲ್ಲ. ಸತ್ಯವಾಗುವುದನ್ನೇ ಹೇಳುವವನು ಎಂದು ನನ್ನನ್ನು ತಿಳಿ. ನನ್ನ

ಈ ಮಹಾತ್ಮೆಯನ್ನು ಜನರು ಸಾಕ್ಷಾತ್ ನೋಡಿದ್ದಾರೆ ಮತ್ತು ದಿಕ್ಕುಗಳಲ್ಲಿ ಕೇಳಿಬಂದಿದೆ. ಇದನ್ನು ನಿನಗೆ ಅಶ್ವಾಸನೆಯನ್ನು ನೀಡಲು ಹೇಳುತ್ತಿದ್ದೇನೆಯೇ ಹೊರತು ಹೊಗಳಿಕೊಳ್ಳಲು ಅಲ್ಲ. ಈ ಹಿಂದೆ ನಾನು ಎಂದೂ ಆತ್ಮಶ್ಲಾಘನೆಯನ್ನು ಮಾಡಲಿಲ್ಲ. ತನ್ನನ್ನು ತಾನೇ ಪ್ರಶಂಸಿಸಿಕೊಳ್ಳುವುದು ಸದಾಚಾರವಲ್ಲ.

ಪಾಂಡವರು, ಮತ್ಸ್ಯರು, ಪಾಂಚಾಲರು, ಕೇಕಯರು, ಸಾತ್ಯಕಿ ಮತ್ತು ವಾಸುದೇವನು ಕೂಡ ನನ್ನಿಂದ ಗೆಲ್ಲಲ್ಪಟ್ಟಿದ್ದುದನ್ನು ನೀನು ಕೇಳುವೆಯಂತೆ. ನದಿಗಳು ಸಾಗರವನ್ನು ಸೇರಿ ಹೇಗೆ ಸಂಪೂರ್ಣವಾಗಿ ನಾಶವಾಗುತ್ತಾರೋ ಹಾಗೆ ಅನುಯಾಯಿಗಳೊಂದಿಗೆ ಅವರು ನನ್ನ ಬಳಿಸಾರಿ ವಿನಾಶಗೊಳ್ಳುತ್ತಾರೆ. ನನ್ನ ಬುದ್ಧಿಯು ಹೆಚ್ಚಿನದು, ತೇಜಸ್ಸು ಹೆಚ್ಚಿನದು ಮತ್ತು ನನ್ನ ವೀರ್ಯವೂ ಹೆಚ್ಚಿನದು. ವಿದ್ಯೆಯು ಹೆಚ್ಚಿನದು, ಯೋಗವು ಹೆಚ್ಚಿನದು. ಇವೆರಡೂ ಅವರಿಗಿಂತ ನನ್ನಲ್ಲಿ ವಿಶೇಷವಾಗಿವೆ. ಪಿತಾಮಹ, ದ್ರೋಣ, ಕೃಪ, ಶಲ್ಯ, ಮತ್ತು ಶಲ ಇವರುಗಳು ಅಸ್ತ್ರಗಳ ಕುರಿತು ಏನನ್ನು ತಿಳಿದಿದ್ದಾರೋ ಅವು ನನ್ನಲ್ಲಿಯೂ ಇವೆ.”

ಇದನ್ನು ಕೇಳಿ ಧೃತರಾಷ್ಟ್ರನು ಯುದ್ಧಕ್ಕೆ ಮಾಡಿಕೊಳ್ಳಬೇಕಾದ ಸಿದ್ಧತೆಗಳ ಕುರಿತು ಇನ್ನೂ ತಿಳಿದುಕೊಳ್ಳಲು ಸಂಜಯನನ್ನು ಪುನಃ ಪ್ರಶ್ನಿಸಿದನು.

# ಕರ್ಣನ ಶಸ್ತ್ರನ್ಯಾಸ

ಪಾರ್ಥನ ಕುರಿತು ಇನ್ನೂ ಕೇಳತೊಡಗಿರುವ ವೈಚಿತ್ರವೀರ್ಯನನ್ನು ಕಡೆಗಣಿಸಿ ಕೌರವರ ಸಂಸದಿಯಲ್ಲಿ ಧೃತರಾಷ್ಟ್ರಪುತ್ರನನ್ನು ಹರ್ಷಗೊಳಿಸುತ್ತಾ ಕರ್ಣನು ಹೇಳಿದನು:

"ನಾನು ಸುಳ್ಳುಹೇಳಿ ಆ ಪುರಾತನ ಬ್ರಹ್ಮಪುರ ಅಸ್ತ್ರವನ್ನು ರಾಮನಿಂದ ಪಡೆದೆನೆಂದು ತಿಳಿದ ರಾಮನು 'ನಿನ್ನ ಅಂತಕಾಲದಲ್ಲಿ ನಿನಗೆ ಇದನ್ನು ಪ್ರಯೋಗಿಸುವ ವಿಧಾನವು ಮರೆತುಹೋಗುತ್ತದೆ!' ಎಂದಿದ್ದನು. ಅಷ್ಟೊಂದು ಮಹಾ ಅಪರಾಧವನ್ನೆಸಗಿದ್ದರೂ ನನ್ನ ಗುರು ಮಹರ್ಷಿಯಿಂದ ಲಘುವಾಗಿಯೇ ಶಪಿಸಲ್ಪಟ್ಟಿದ್ದೇನೆ. ಆ ತಿಗ್ಮತೇಜ ಮಹರ್ಷಿಯು ಸಾಗರಗಳಿಂದೊಡಗೂಡಿದ ಈ ಅವನಿಯನ್ನೂ ಭಸ್ಮಮಾಡಲು ಶಕ್ತ. ಮನಸ್ಥೈರ್ಯದಿಂದ ಮತ್ತು ಪೌರುಷದಿಂದ ನಾನು ಅವನ ಶುಶ್ರೂಷೆ ಮಾಡಿ ಮೆಚ್ಚಿಸಿದೆ. ಆ ಅಸ್ತ್ರವು ಇನ್ನೂ ನನ್ನಲ್ಲಿದೆ. ಮತ್ತು ನನ್ನ ಆಯಸ್ಸು ಇನ್ನೂ ಮುಗಿದಿಲ್ಲ! ಆದುದರಿಂದ ಸಮರ್ಥನಾಗಿದ್ದೇನೆ. ಆ ಭಾರವು ನನಗಿರಲಿ. ಆ ಋಷಿಯ ಪ್ರಸಾದದಿಂದ, ಕಣ್ಣುಮುಚ್ಚಿತೆರೆಯುವುದರೊಳಗೆ ನಾನು ಶಸ್ತ್ರದಿಂದ ಪಾಂಚಾಲ, ಕರೂಷ, ಮತ್ಸ್ಯರನ್ನು, ಪಾರ್ಥರನ್ನು ಅವರು ಮಕ್ಕಳು ಮೊಮ್ಮಕ್ಕಳೊಂದಿಗೆ ಲೋಕಗಳನ್ನು ಜಯಿಸಿ ಒಪ್ಪಿಸುತ್ತೇನೆ. ಪಿತಾಮಹ, ದ್ರೋಣ ಮತ್ತು

ನರೇಂದ್ರಮುಖ್ಯರೆಲ್ಲರೂ ನಿನ್ನ ಸಮೀಪದಲ್ಲಿಯೇ ಇರಲಿ. ಪ್ರಧಾನ ಸೇನೆಯನ್ನು ತೆಗೆದುಕೊಂಡು ಹೋಗಿ ಪಾಂಡವರನ್ನು ಸಂಹರಿಸುತ್ತೇನೆ. ಆ ಭಾರವು ನನಗಿರಲಿ."

ಹೀಗೆ ಹೇಳುತ್ತಿದ್ದ ಅವನಿಗೆ ಭೀಷ್ಮನು ಹೇಳಿದನು:

"ಏನು ಹೇಳುತ್ತಿರುವೆ? ನಿನ್ನ ಅಂತ್ಯವು ಬಂದು ಬುದ್ಧಿ ಕೆಟ್ಟಿದೆ. ಪ್ರಧಾನನು ಹತನಾದರೆ ಎಲ್ಲ ಧೃತರಾಷ್ಟ್ರಪುತ್ರರೂ ಹತರಾಗುತ್ತಾರೆ ಎಂದು ನಿನಗೆ ತಿಳಿದಿಲ್ಲವೇ? ಖಾಂಡವವನ್ನು ಸುಡುವಾಗ ಕೃಷ್ಣನೊಬ್ಬನ ಸಹಾಯದಿಂದಲೇ ಧನಂಜಯನು ಮಾಡಿದುದನ್ನು ಕೇಳಿಯೂ ಕೂಡ, ಬಾಂಧವರೊಂದಿಗೆ ನಿನ್ನನ್ನು ನೀನು ನಿಯಂತ್ರಿಸಿಕೊಳ್ಳುವುದು ಒಳ್ಳೆಯದು. ಯಾವ ಶಕ್ತಿಯನ್ನು ನಿನಗೆ ತ್ರಿದಶಾಧಿಪ ಮಹಾತ್ಮ ಭಗವಾನ್ ಮಹೇಂದ್ರನು ಕೊಟ್ಟಿದ್ದನೋ ಅದನ್ನೂ ಕೂಡ ಕೇಶವನು ಚಕ್ರದಿಂದ ಹೊಡೆದು ಚೂರಾಗಿ ಭಸ್ಮೀಕೃತವಾಗಿ ಕೆಳಗೆ ಬೀಳುವುದನ್ನು ನೋಡುವಿಯಂತೆ! ಕರ್ಣ! ಯಾವ ಶರವು ಸರ್ಪಮುಖದಲ್ಲಿ ಹೊಳೆಯುತ್ತಿರುವುದೋ, ಪ್ರಯತ್ನ ಪಟ್ಟು ನೀನು ಯಾವುದನ್ನು ಮಾಲೆಗಳನ್ನು ಹಾಕಿ ಪೂಜಿಸುತ್ತಿರುವೆಯೋ ಅದನ್ನು ಕೂಡ ಪಾಂಡುಪುತ್ರನು ಹರಿತ ಶರಗಳಿಂದ ಹೊಡೆದು ನಿನ್ನೊಂದಿಗೆ ಅದೂ ನಾಶವಾಗುತ್ತದೆ. ಬಾಣ ಮತ್ತು ಭೌಮ (ನರಕ) ರ ಹಂತಕ

> ವಾಸುದೇವನು ಕಿರೀಟಿಯನ್ನು ರಕ್ಷಿಸುತ್ತಾನೆ. ಪ್ರಗಾಢ ತುಮುಲದಲ್ಲಿ ಅವನು ನಿನ್ನಂಥಹ ಮತ್ತು ನಿನಗಿಂಥಲೂ ಹೆಚ್ಚಿನ ಶತ್ರುಗಳನ್ನು ಹತಗೊಳಿಸುತ್ತಾನೆ.”

ಕರ್ಣನು ಹೇಳಿದನು:

> “ವೃಷ್ಣಿಪತಿಯು ಹೇಳಿದಂತೆಯೇ ಇದ್ದಾನೆ ಎನ್ನುವುದರಲ್ಲಿ ಸಂಶಯವಿಲ್ಲ. ಆ ಮಹಾತ್ಮನು ಅದಕ್ಕಿಂತಲೂ ಹೆಚ್ಚಿನವನು. ಆದರೆ ಪಿತಾಮಹನಾಡಿದ ಈ ಕಠೋರ ಮಾತುಗಳ ಪರಿಣಾಮವನ್ನು ಕೇಳಿ. ಶಸ್ತ್ರಗಳನ್ನು ಕೆಳಗಿಡುತ್ತೇನೆ. ಯುದ್ಧಕ್ಕೆ ಹೋಗುವುದಿಲ್ಲ. ಪಿತಾಮಹನು ನನ್ನನ್ನು ಸಭೆಗಳಲ್ಲಿ ಮಾತ್ರ ನೋಡುತ್ತಾನೆ. ನೀನು ಸುಮ್ಮನಾದಾಗ ಭೂಮಿಯಲ್ಲಿರುವ ಭೂಮಿಪಾಲರು ಎಲ್ಲರೂ ನನ್ನ ಪ್ರಭಾವವನ್ನು ನೋಡುತ್ತಾರೆ.”

ಹೀಗೆ ಹೇಳಿ ಆ ಮಹಾಧನುಷ್ಮಂತನು ಸಭೆಯನ್ನು ತೊರೆದು ಸ್ವ-ಭವನಕ್ಕೆ ತೆರಳಿದನು. ಭೀಷ್ಮನಾದರೋ ಕುರುಗಳ ಮಧ್ಯದಲ್ಲಿ ಜೋರಾಗಿ ನಕ್ಕು ದುರ್ಯೋಧನನಿಗೆ ಹೇಳಿದನು:

> “ಸೂತಪುತ್ರನು ತನ್ನ ಪ್ರತಿಜ್ಞೆಯನ್ನು ಸತ್ಯವಾಗಿಸುತ್ತಾನಲ್ಲವೇ? ಭೀಮಸೇನನು ನೋಡುತ್ತಿದ್ದಂತೆ ವ್ಯೂಹ-ಪ್ರತಿವ್ಯೂಹಗಳ ಶಿರಗಳನ್ನು ಕತ್ತರಿಸಿ ಲೋಕಕ್ಷಯವನ್ನುಂಟುಮಾಡುತ್ತೇನೆ ಮತ್ತು ಅವಂತಿ, ಕಲಿಂಗ, ಜಯದ್ರಥರ ಧ್ವಜಗಳ ಮಧ್ಯದಲ್ಲಿ ಬಾಹ್ಲೀಕನನ್ನು ನಿಲ್ಲಿಸಿ ನಾನು ಸದಾ ಶತ್ರುಗಳ ಹತ್ತುಸಾವಿರ

ಯೋಧರನ್ನು ಸಂಹರಿಸುತ್ತೇನೆ ಎಂದು ಹೇಳಿದ ಅವನು ತನ್ನ ಆ ಜವಾಬ್ಧಾರಿಯನ್ನು ಹೇಗೆ ನಿರ್ವಹಿಸುತ್ತಾನೆ? ಅನಿಂದ್ಯ, ಭಗವಂತ ರಾಮನನಿಗೆ ಬ್ರಾಹ್ಮಣನೆಂದು ಹೇಳಿ ಆ ಅಸ್ತ್ರವನ್ನು ಪಡೆದಾಗಲೇ ಆ ಅಧಮ ಪುರುಷ ವೈಕರ್ತನನ ಧರ್ಮ ತಪಸ್ಸುಗಳ ನಷ್ಟವಾಗಿ ಹೋಗಿತ್ತು."

ಶಸ್ತ್ರಗಳನ್ನು ಬಿಸುಟು ಹೊರಟುಹೋದ ಕರ್ಣನ ಕುರಿತು ಭೀಷ್ಮನು ನೃಪತಿಗಳಿಗೆ ಹೇಳಲು. ಬುದ್ಧಿಯಿಲ್ಲದ, ವೈಚಿತ್ರವೀರ್ಯನ ಮಗ ದುರ್ಯೋಧನನು ಶಾಂತನವನಿಗೆ ಹೇಳಿದನು. ದುರ್ಯೋಧನನು ಹೇಳಿದನು:

"ಮನುಷ್ಯರ ಸದೃಶರಾಗಿರುವ, ಜನ್ಮದಲ್ಲಿ ಎಲ್ಲರ ಸಮನಾಗಿರುವ ಪಾಂಡವರು ಮಾತ್ರ ಜಯವನ್ನು ಪಡೆಯುತ್ತಾರೆ ಎಂದು ಏಕೆ ನಂಬುತ್ತೀಯೆ? ಎಲ್ಲರೂ ಸಮಜಾತೀಯರಾಗಿದ್ದೇವೆ. ಎಲ್ಲರೂ ಮನುಷ್ಯ ಯೋನಿಯಲ್ಲಿಯೇ ಹುಟ್ಟಿದ್ದೇವೆ. ಹೀಗಿರುವಾಗ ಪಿತಾಮಹನು ಪಾರ್ಥರಿಗೇ ವಿಜಯವೆಂದು ಹೇಗೆ ಹೇಳುತ್ತಾನೆ? ನನ್ನ ಪರಾಕ್ರಮವು ನಿನ್ನ, ದ್ರೋಣನ, ಕೃಪ, ಬಾಹ್ಲೀಕ, ಮತ್ತು ಇತರ ನರೇಂದ್ರರ ಪರಾಕ್ರಮವನ್ನು ಆಧಾರಿಸಿಲ್ಲ. ನಾನು, ವೈಕರ್ತನ ಕರ್ಣ, ಮತ್ತು ನನ್ನ ತಮ್ಮ ದುಃಶಾಸನರು ಸಮರದಲ್ಲಿ ಪಂಚ ಪಾಂಡವರನ್ನು ಹರಿತ ಬಾಣಗಳಿಂದ ಸಂಹರಿಸುತ್ತೇವೆ. ಆಗ

ಮಹಾ ಯಜ್ಞಗಳಿಂದ, ವಿವಿಧ ಭೂರಿದಕ್ಷಿಣೆಗಳಿಂದ, ಗೋ-ಐಶ್ವರ್ಯ ಧನಗಳಿಂದ ಬ್ರಾಹ್ಮಣರನ್ನು ಸಂತುಷ್ಟಗೊಳಿಸುತ್ತೇನೆ.”

## ವಿದುರನ ಸಲಹೆ

ವಿದುರನು ಹೇಳಿದನು:

“ಹಿಂದೆ ಓರ್ವ ಹಕ್ಕಿಹಿಡಿಯುವವನು ಹಕ್ಕಿಗಳನ್ನು ಹಿಡಿಯಲು ನೆಲದ ಮೇಲೆ ಬಲೆಯನ್ನು ಬೀಸಿದ ಎಂದು ಕೇಳಿದ್ದೇವೆ. ಅವುಗಳಲ್ಲಿ ಬುದ್ಧಿವಂತರಾಗಿದ್ದ, ರೆಕ್ಕೆಗಳ ಬಲದಲ್ಲಿ ಮತ್ತು ಪೌರುಷದಲ್ಲಿ ಸಮನಾಗಿದ್ದ ಎರಡು ಪಕ್ಷಿಗಳು ಒಂದು ಉಪಾಯವನ್ನು ಮಾಡಿ ಆ ಬಲೆಯನ್ನೇ ಎತ್ತಿಕೊಂಡು ಆಕಾಶವನ್ನೇರಿದವು. ಆ ಪಕ್ಷಿಗಳು ಹಾರಿಹೋದುದನ್ನು ನೋಡಿ ಹಕ್ಕಿಹಿಡಿಯುವವನು ಅನಿರ್ವಿಣ್ಣನಾಗದೇ ಅವು ಹೋದೆಡೆಯಲ್ಲಿಯೇ ಹಿಂಬಾಲಿಸಿದನು. ಪಕ್ಷಿಯ ಬೇಟೆಯಾಡುವವನು ಹಾಗೆ ಓಡಿ ಹೋಗುತ್ತಿದ್ದುದನ್ನು ಅಲ್ಲಿಯೇ ಆಶ್ರಮದಲ್ಲಿದ್ದ, ಆಹ್ನೀಕವನ್ನು ಮಾಡುತ್ತಿದ್ದ ಮುನಿಯೋರ್ವನು ನೋಡಿದನು. ಅಂತರಿಕ್ಷದಲ್ಲಿ ಹಾರಿಹೋಗುತ್ತಿದ್ದ ಅವರನ್ನು ಶೀಘ್ರವಾಗಿ ಭೂಮಿಯುಮೇಲೆ ಓಡಿ ಹೋಗಿ ಅನುಸರಿಸುತ್ತಿದ್ದ ಅವನನ್ನು ಆ ಮುನಿಯು ಪ್ರಶ್ನಿಸಿದನು. ‘ಮೃಗಹನ್! ಇದು ಆಶ್ಚರ್ಯವಾಗಿ ತೋರುತ್ತಿದೆ. ಪಕ್ಷಿಗಳು ಹಾರಿಕೊಂಡು ಹೋಗತ್ತಿವೆ. ನೀನು

ಕಾಲ್ನಡುಗೆಯಲ್ಲಿ ಅನುಸರಿಸುತ್ತಿದ್ದೀಯೆ!’ ಆಗ ಅದಕ್ಕೆ ಹಕ್ಕಿ ಹಿಡಿಯುವವನು ಹೇಳಿದನು: ‘ಇವರಿಬ್ಬರೂ ಒಟ್ಟಾಗಿ ನನ್ನ ಬಲೆಯನ್ನು ಅಪಹರಿಸಿಕೊಂಡು ಹೋಗುತ್ತಿದ್ದಾರೆ. ಆದರೆ ಅವರಲ್ಲಿ ಬಿಡುಕು ಬಂದಾಗ ಅವು ನನ್ನ ವಶವಾಗುತ್ತವೆ.’ ಮೃತ್ಯುವನ್ನು ಸಮೀಪಿಸಿದ್ದ ಆ ಎರಡು ಪಕ್ಷಿಗಳು ವಿವಾದಕ್ಕೆ ತೊಡಗಿದವು. ತುಂಬಾ ದುರ್ಬುದ್ಧಿಯಾಗಿದ್ದ ಅವು ಹೊಡೆದಾಡಿ ಭೂಮಿಯ ಮೇಲೆ ಬಿದ್ದವು. ಹೊಡೆದಾಟದಲ್ಲಿ ಮಗ್ನರಾಗಿದ್ದ ಆ ಮೃತ್ಯುಪಾಶಗಳಿಗೆ ಸಿಲುಕಿದ ಅವರಿಗೆ ತಿಳಿಯದಂತೆ ಬೇಟೆಗಾರನು ಬಂದು ಅವುಗಳನ್ನು ಹಿಡಿದನು.

ಹೀಗೆ ಸಂಪತ್ತಿಗೆ ಹೊಡೆದಾಡುವ ದಾಯಾದಿಗಳು ಅವರ ಜಗಳದಿಂದ ಈ ಪಕ್ಷಿಗಳಂತೆ ಅವರ ಶತ್ರುಗಳ ವಶರಾಗುತ್ತಾರೆ. ಒಟ್ಟಿಗೇ ಊಟಮಾಡುವುದು, ಒಟ್ಟಿಗೇ ಮಾತುಕಥೆಗಳನ್ನಾಡುವುದು, ಒಟ್ಟಿಗೇ ಕೂಡಿಕೊಂಡಿರುವುದು ದಾಯಾದಿಗಳು ಮಾಡಬೇಕಾದ ಕೆಲಸಗಳು. ಎಂದಿಗೂ ವಿರೋಧವುಂಟಾಗಬಾರದು. ಎಲ್ಲಿಯವರೆಗೆ ಅವರು ಎಲ್ಲರೂ ಸುಮನಸ್ಕರಾಗಿ ವೃದ್ಧರನ್ನು ಪೂಜಿಸುತ್ತಾರೋ ಅಲ್ಲಿಯವರೆಗೆ ಅವರು ಸಿಂಹದಿಂದ ರಕ್ಷಿತವಾದ ಕಾಡಿನಂತೆ ಅಗಮ್ಯರಾಗಿರುತ್ತಾರೆ. ಯಾರು ಉತ್ತಮ ಐಶ್ವರ್ಯವನ್ನು ಪಡೆದೂ ದೀನರಂತೆ ವರ್ತಿಸುತ್ತಾರೋ ಅವರು ಯಾವಾಗಲೂ ತಮ್ಮ ವೈರಿಗಳ ಐಶ್ವರ್ಯವನ್ನು

ಹೆಚ್ಚಿಸುತ್ತಾರೆ. ದಾಯಾದಿಗಳು ಕೆಂಡಗಳಿದ್ದಂತೆ. ಒಟ್ಟಿಗೇ ಇದ್ದರೆ ಉರಿಯುತ್ತವೆ. ಬೇರೆ ಬೇರೆಯಾದರೆ ಕೇವಲ ಹೊಗೆಯನ್ನು ಕೊಡುತ್ತವೆ. ಇದನ್ನು ಕೇಳಿಕೊಂಡು ಹೇಗೆ ಶ್ರೇಯಸ್ಸಾಗುತ್ತದೆಯೋ ಹಾಗೆ ಮಾಡು."

ಧೃತರಾಷ್ಟ್ರನು ಹೇಳಿದನು:

"ದುರ್ಯೋಧನ! ನಾನು ಹೇಳುವುದನ್ನು ಅರ್ಥಮಾಡಿಕೋ! ದಾರಿಯನ್ನು ತಿಳಿಯದವನಂತೆ ನೀನು ತಪ್ಪು ದಾರಿಯನ್ನು ಸರಿಯಾದ ದಾರಿಯೆಂದು ಮನ್ನಿಸುತ್ತಿದ್ದೀಯೆ. ಪಂಚ ಭೂತಗಳಂತೆ ಮಹತ್ತರರಾದ ಸುಮಹಾತ್ಮ ಪಂಚ ಪಾಂಡುಪುತ್ರರ ತೇಜಸ್ಸನ್ನು ಕುಂದಿಸಲು ಬಯಸುತ್ತಿರುವೆ. ನಿನ್ನ ಜೀವನದಲ್ಲಿ ಸ್ವಲ್ಪವನ್ನೂ ತ್ಯಜಿಸದೇ ಧಾರ್ಮಿಕರಲ್ಲಿ ಶ್ರೇಷ್ಠ ಕೌಂತೇಯ ಯುಧಿಷ್ಠಿರನನ್ನು ಗೆಲ್ಲಲಾರೆ. ಮಹಾ ಭಿರುಗಾಳಿಯನ್ನು ಎದುರಿಸುವ ಮರದಂತೆ ಬಲದಲ್ಲಿ ಸರಿಸಾಟಿಯಿಲ್ಲದ, ರಣಾಂತಕನಾದ ಕೌಂತೇಯ ಭೀಮಸೇನನನ್ನು ಎದುರಿಸಲು ತರ್ಕಿಸುತ್ತಿರುವೆ. ಶಿಖರಗಳಲ್ಲಿ ಮೇರುವಿನಂತಿರುವ, ಸರ್ವಶಸ್ತ್ರಭೃತರಲ್ಲಿ ಶ್ರೇಷ್ಠನಾಗಿರುವ ಗಾಂಡೀವಧನ್ವಿಯನ್ನು ಯುದ್ಧದಲ್ಲಿ ಯಾವ ಬುದ್ಧಿವಂತನು ತಾನೇ ಹೋರಾಡಿಯಾನು? ವಜ್ರಾಯುಧವನ್ನು ಪ್ರಯೋಗಿಸುವ ದೇವರಾಜನಂತೆ ಶತ್ರುಗಳ ಮಧ್ಯೆ ಶರಗಳನ್ನು

ಪ್ರಯೋಗಿಸುವ ಪಾಂಚಾಲ್ಯ ಧೃಷ್ಟದ್ಯುಮ್ನನು ಯಾರನ್ನು ನಾಶಗೊಳಿಸಲಾರ? ಪಾಂಡವೇಯರ ಹಿತದಲ್ಲಿಯೇ ನಿರತನಾಗಿರುವ, ಅಂಧಕ-ವೃಷ್ಣಿಯರಿಗೆ ಸಮ್ಮತನಾದ ದುರ್ಧರ್ಷ ಸಾತ್ಯಕಿಯೂ ಕೂಡ ನಿನ್ನ ಸೇನೆಯನ್ನು ಧ್ವಂಸಗೊಳಿಸುತ್ತಾನೆ. ಅಳತೆಯಲ್ಲಿ ಮೂರು ಲೋಕಗಳನ್ನೂ ಮೀರುವ ಕೃಷ್ಣ ಪುಂಡರೀಕಾಕ್ಷನೊಡನೆ ಯಾವ ಬುದ್ಧಿವಂತನು ತಾನೇ ಯುದ್ಧಮಾಡಿಯಾನು? ಒಂದು ಕಡೆ ಅವನ ಮಡದಿಯರು, ದಾಯಾದಿಗಳು, ಬಾಂಧವರು, ತಾನು ಮತ್ತು ಭೂಮಿಯೇ ಇದ್ದರೆ ಇನ್ನೊಂದು ಕಡೆ ಧನಂಜಯನಿದ್ದಾನೆ. ಯಾರ ಮೇಲೆ ಪಾಂಡವನು ಅವಲಂಬಿಸಿರುವನೋ ಆ ವಾಸುದೇವನು ದುರ್ಧರ್ಷನು. ಕೇಶವನೆಲ್ಲಿರುವನೋ ಆ ಸೇನೆಯು ಭೂಮಿಯಲ್ಲಿಯೇ ಜಯಿಸಲಸಾಧ್ಯವಾಗಿರುತ್ತದೆ. ಆದುದರಿಂದ ಮಗೂ! ನಿನ್ನ ಒಳ್ಳೆಯದಕ್ಕಾಗಿಯೇ ಹೇಳುವ ಸುಹೃದಯರ, ಸತ್ಯವಂತರ ಮಾತಿನಂತೆ ನಡೆದುಕೋ. ವೃದ್ಧ ಪಿತಾಮಹ ಶಾಂತನವ ಭೀಷ್ಮನನ್ನು ಮಾರ್ಗದರ್ಶಕನನ್ನಾಗಿ ಸ್ವೀಕರಿಸು. ನಾನು ಹೇಳುವುದನ್ನು ಕೇಳು. ಕುರುಗಳ ಒಳ್ಳೆಯದಕ್ಕಾಗಿಯೇ ಹೇಳುವ ದ್ರೋಣ, ಕೃಪ, ವಿಕರ್ಣ ಮತ್ತು ಮಹಾರಾಜ ಬಾಹ್ಲೀಕನನ್ನು ಕೇಳು. ಇವರೆಲ್ಲರೂ ನನ್ನಂತೆಯೇ. ನೀನು ನನ್ನನ್ನು ಹೇಗೋ ಹಾಗೆ ಇವರನ್ನೂ ಮನ್ನಿಸಬೇಕು. ಇವರೆಲ್ಲರೂ ಧರ್ಮವನ್ನು

ತಿಳಿದುಕೊಂಡಿರುವವರು ಮತ್ತು ನನ್ನಷ್ಟೇ ಸ್ನೇಹವುಳ್ಳವರು.

ವಿರಾಟನಗರದಲ್ಲಿ ಸಹೋದರರೊಡನೆ ನಿನ್ನ ಸೇನೆಯು ಗೋವುಗಳನ್ನು ಬಿಟ್ಟು ತುಂಬಾ ಸಂತ್ರಸ್ತರಾಗಿ ಹಿಂದೆಸರಿಯಿತು. ಆ ನಗರದಲ್ಲಿ ನಡೆದ ಏನು ಮಹದದ್ಭುತವನ್ನು – ಒಬ್ಬನೇ ಬಹುಮಂದಿಗಳಿಗೆ ಪೂರೈಸಿದನು - ನಾವು ಕೇಳಿದ್ದೇವೋ ಅದೇ ನಿದರ್ಶನವೇ ಸಾಕು. ಅರ್ಜುನನು ಒಬ್ಬನೇ ಅವೆಲ್ಲವನ್ನೂ ಸಾಧಿಸಿರುವಾಗ ಇನ್ನು ಅವರೆಲ್ಲರೂ ಒಂದಾದಾಗ ಏನಾದೀತು? ನಿನ್ನ ಸಹೋದರರ ಕೈಹಿಡಿದು ಅವರೊಂದಿಗೆ ಭೂಮಿಯನ್ನು ಹಂಚಿಕೊಂಡು ಸ್ನೇಹಭಾವದಿಂದಿರು."

ಸುಯೋಧನನಿಗೆ ಹೀಗೆ ಹೇಳಿ ಮಹಾಪ್ರಾಜ್ಞ, ಮಹಾಭಾಗ ಧೃತರಾಷ್ಟ್ರನು ಸಂಜಯನನ್ನು ಪುನಃ ಪ್ರಶ್ನಿಸಿದನು.

"ಸಂಜಯ! ವಾಸುದೇವನ ನಂತರ ಅರ್ಜುನನು ಹೇಳಿದುದರಲ್ಲಿ ನಮಗೆ ಹೇಳದೇ ಬಿಟ್ಟಿದ್ದುದನ್ನು ಹೇಳು. ಏಕೆಂದರೆ ಅದರಲ್ಲಿ ನನಗೆ ಅತ್ಯಂತ ಕುತೂಹಲವಿದೆ."

ಸಂಜಯನು ಹೇಳಿದನುಃ

"ವಾಸುದೇವನ ಮಾತನ್ನು ಕೇಳಿ ಕುಂತೀಪುತ್ರ ಧನಂಜಯನು ದುರ್ಧರ್ಷ ವಾಸುದೇವನು ಕೇಳುವಂತೆ ಕಾಲೋಚಿತ

ಮಾತನ್ನಾಡಿದನು: ‘ಸೂತ! ಕೌರವರ ಪ್ರೀತಿಗಾಗಿ ಯುದ್ಧಮಾಡಲು ಅಲ್ಲಿ ಸೇರಿರುವ ಪಿತಾಮಹ ಶಾಂತನವ, ಧೃತರಾಷ್ಟ್ರ, ದ್ರೋಣ, ಕೃಪ, ಕರ್ಣ, ಮಹಾರಾಜ ಬಾಹ್ಲೀಕ, ದ್ರೌಣಿ, ಸೋಮದತ್ತ, ಶಕುನಿ ಸೌಬಲ, ದುಃಶಾಸನ, ಶಲ, ಪುರುಮಿತ್ರ, ವಿವಿಂಶತಿ, ವಿಕರ್ಣ, ಚಿತ್ರಸೇನ, ಪಾರ್ಥಿವ ಜಯತ್ಸೇನ, ಅವಂತಿಯ ವಿಂದ-ಅನುವಿಂದರು, ಕೌರವ ದುರ್ಮುಖ, ಸೈಂಧವ, ದುಃಸಹ, ಭೂರಿಶ್ರವ, ರಾಜ ಭಗದತ್ತ, ಪಾರ್ಥಿವ ಜಲಸಂಧ - ಇವರು ಮತ್ತು ಇತರ ಪಾರ್ಥಿವರನ್ನು ಧಾರ್ತರಾಷ್ಟ್ರನು ಪಾಂಡವರ ಅಗ್ನಿಯಲ್ಲಿ ಆಹುತಿಯನ್ನಾಗಿಸಲು ಸೇರಿಸಿದ್ದಾನೆ. ಯಥಾನ್ಯಾಯವಾಗಿ ನನ್ನ ಮಾತಿನಲ್ಲಿಯೇ ಅಲ್ಲಿ ಸೇರಿರುವರಿಗೆ ಕುಶಲವನ್ನು ಕೇಳು ಮತ್ತು ವಂದನೆಗಳನ್ನು ಹೇಳಬೇಕು. ಪಾಪಕೃತರಲ್ಲಿ ಪ್ರಧಾನನಾಗಿರುವ ಸುಯೋಧನನಿಗೆ ರಾಜರ ಮಧ್ಯದಲ್ಲಿ ಇದನ್ನು ಹೇಳು. ನನ್ನ ಈ ಮಾತನ್ನು ಎಲ್ಲವನ್ನೂ ಸಮಗ್ರವಾಗಿ ಅಮಾತ್ಯರೊಂದಿಗೆ ಆ ಅಮರ್ಷಣ, ದುರ್ಮತಿ, ಲುಬ್ಧ, ರಾಜಪುತ್ರ ಧಾರ್ತರಾಷ್ಟ್ರನಿಗೆ ಕೇಳಿಸಬೇಕು.’

ಹೀಗೆ ಪೀಠಿಕೆಯನ್ನು ಹಾಕಿ ಕೆಂಪು ಕೊನೆಗಳ ದೊಡ್ಡ ಕಣ್ಣುಗಳ ಧೀಮಾನ್ ಧನಂಜಯ ಪಾರ್ಥನು ವಾಸುದೇವನನ್ನು ನೋಡುತ್ತಾ ಅರ್ಥ-ಧರ್ಮಗಳನ್ನೊಡಗೂಡಿದ ಈ ಮಾತನ್ನು ನನಗೆ ಹೇಳಿದನು: ‘ನೀನು ಈಗಾಗಲೇ ಮಹಾತ್ಮ

ಮಧುಪ್ರವೀರನು ಹೇಳಿದ ಸಮಾಹಿತ ಮಾತನ್ನು ಕೇಳಿದ್ದೀಯೆ. ಅದೇ ನನ್ನ ಮಾತುಗಳೂ ಕೂಡ ಎಂದು ಅಲ್ಲಿ ಸೇರಿರುವ ಎಲ್ಲ ಕ್ಷಿತಿಪರಿಗೆ ಹೇಳು. ನೀವೆಲ್ಲರೂ ಸೇರಿ ಶರಗಳೆಬ್ಬಿಸುವ ಅಗ್ನಿಧೂಮಗಳ, ರಥಗಾಲಿಗಳ ನಿನಾದದಿಂದ ಕೂಡಿದ, ಬಲಪ್ರಹಾರಿ ಧನುಸ್ಸುಗಳೆಂಬ ಹುಟ್ಟಿನಿಂದ ಮಹಾ ಯಜ್ಞದಲ್ಲಿ ಆಹುತಿಯಾಗದಂತೆ ಏನಾದರೂ ಪ್ರಯತ್ನ ಮಾಡಿ. ಅಮಿತ್ರಘಾತಿ ಯುಧಿಷ್ಠಿರನು ಕೇಳುವ ತನ್ನ ಪಾಲನ್ನು ನೀವು ಕೊಡದೇ ಇದ್ದರೆ ನಾವು ಹರಿತ ಬಾಣಗಳಿಂದ ನಿಮ್ಮನ್ನು ಅಶ್ವ-ಪದಾತಿ-ಕುಂಜರಗಳ ಸಹಿತ ಪಿತೃಗಳ ಅಮಂಗಳ ದಿಕ್ಕಿಗೆ ಕಳುಹಿಸುತ್ತೇವೆ.’

ಆಗ ನಾನು ಚತುರ್ಭುಜ ಹರಿ ಮತ್ತು ಧನಂಜಯರಿಗೆ ನಮಸ್ಕರಿಸಿ ಬೀಳ್ಕೊಂಡು ವೇಗದಿಂದ ಆ ಮಹಾ ಮಾತನ್ನು ತಲುಪಿಸಲು ನಿನ್ನಲ್ಲಿಗೆ ಬಂದೆ.”

ಧಾರ್ತರಾಷ್ಟ್ರ ದುರ್ಯೋಧನನು ಆ ಮಾತನ್ನು ಸ್ವೀಕರಿಸದೇ ಇರಲು ಎಲ್ಲರೂ ಸುಮ್ಮನಾದರು. ನರೇಶ್ವರರು ಎದ್ದರು. ಭೂಮಿಯ ಸರ್ವ ರಾಜರೂ ಏಳಲು ರಾಜನು, ತಾನು ಯಾರ ವಶದಲ್ಲಿದ್ದನೋ ಆ ತನ್ನ ಮಕ್ಕಳ ವಿಜಯವನ್ನು ಬಯಸಿ, ತನ್ನ, ಇತರರ ಮತ್ತು ಪಾಂಡವರ ಕುರಿತು ನಿಶ್ಚಯಮಾಡಲು, ಏಕಾಂತದಲ್ಲಿ ಸಂಜಯನನ್ನು ಕೇಳತೊಡಗಿದನು:

“ಗಾವಲ್ಗಣೇ! ನಮ್ಮ ಸೇನೆಯಲ್ಲಿರುವಂಥಹ ಬಲ-ನಿರ್ಬಲಗಳ ಕುರಿತು ಹೇಳು. ನೀನು ಪಾಂಡವರ ನಿಪುಣತೆಯೆಲ್ಲವನ್ನೂ ತಿಳಿದಿದ್ದೀಯೆ. ಅವರು ಯಾವುದರಲ್ಲಿ ಮುಂದಿದ್ದಾರೆ? ಯಾವುದರಲ್ಲಿ ಹಿಂದಿದ್ದಾರೆ? ನೀನು ಇಬ್ಬರ ಸಾರಗಳನ್ನೂ ಅರಿತಿದ್ದೀಯೆ. ಧರ್ಮಾರ್ಥಗಳ ನಿಪುಣ ನಿಶ್ಚಯವನ್ನೂ ತಿಳಿದಿದ್ದೀಯೆ. ನಿನ್ನನ್ನು ನಾನು ಕೇಳುತ್ತಿದ್ದೇನೆ. ಸಂಜಯ! ಎಲ್ಲವನ್ನೂ ಹೇಳು. ಇಬ್ಬರಲ್ಲಿ ಯಾರು ಯುದ್ಧದಲ್ಲಿ ನಾಶಹೊಂದುತ್ತಾರೆ?”

ಸಂಜಯನು ಹೇಳಿದನು:

“ಅಜಮೀಢ! ಏಕಾಂತದಲ್ಲಿ ನಾನು ನಿನಗೆ ಏನನ್ನೂ ಹೇಳುವುದಿಲ್ಲ. ಅಸೂಯೆಯಿಂದ ನೀನು ನನ್ನನ್ನು ಸಹಿಸುವುದಿಲ್ಲ. ಸಂಶಿತವ್ರತನಾದ ನಿನ್ನ ತಂದೆಯನ್ನೂ, ಗಾಂಧಾರಿಯನ್ನೂ ಕರೆಯಿಸು. ಅವರಿಬ್ಬರೂ ಅಸೂಯೆಯಿಲ್ಲದವರು, ವಿನಯರು. ಧರ್ಮಜ್ಞರು. ನಿಶ್ಚಯಿಸುವುದರಲ್ಲಿ ನಿಪುಣರು. ಅವರಿಬ್ಬರ ಸನ್ನಿಧಿಯಲ್ಲಿ ನಾನು ನಿನಗೆ ವಾಸುದೇವ-ಅರ್ಜುನರ ಮತವೆಲ್ಲವನ್ನೂ ಹೇಳುತ್ತೇನೆ.”

ಆಗ ಸಂಜಯ ಮತ್ತು ತನ್ನ ಮಗನ ಇಂಗಿತವನ್ನು ತಿಳಿದ ಮಹಾಪ್ರಾಜ್ಞ ಕೃಷ್ಣ ದ್ವೈಪಾಯನನು ಅಲ್ಲಿ ಕಾಣಿಸಿಕೊಂಡು ಹೇಳಿದನು:

“ಸಂಜಯ! ಧೃತರಾಷ್ಟ್ರನು ಕೇಳಿದ್ದುದನ್ನು ಎಲ್ಲವನ್ನೂ ಹೇಳು. ವಾಸುದೇವ-ಅರ್ಜುನರ ಕುರಿತು ನಿನಗೆ ತಿಳಿದುದೆಲ್ಲವನ್ನೂ ಯಥಾವತ್ತಾಗಿ, ಯಥಾತಥ್ಯವಾಗಿ ಹೇಳು.”

ಸಂಜಯನು ಹೇಳಿದನು:

“ಪರಮಾರ್ಚಿತ ಧನ್ವಿಗಳಾದ ಅರ್ಜುನ-ವಾಸುದೇವರಿಬ್ಬರೂ ಇಷ್ಟಪಟ್ಟು ಇನ್ನೊಂದು ಜನ್ಮವನ್ನು ತಾಳಿ ಎಲ್ಲವನ್ನೂ ಇಲ್ಲವಾಗಿಸಲು ಒಂದಾಗಿದ್ದಾರೆ. ಆಕಾಶದಲ್ಲಿದ್ದುಕೊಂಡು, ಬೇಕಾದ ಹಾಗೆ ವಾಸುದೇವನ ಆ ಮನಸ್ವೀ ಚಕ್ರವು ಮಾಯೆಯಿಂದ ನಡೆಯುತ್ತದೆ. ಅದು ಪಾಂಡವರಿಗೆ ಕಾಣಿಸದೇ ಇದ್ದರೂ ಪಾಂಡವರು ಅದನ್ನು ಪೂಜಿಸುತ್ತಾರೆ. ಅವರ ಸಾರಾಸಾರ ಬಲಗಳನ್ನು ಕೇಳಿ ತಿಳಿದುಕೋ. ಆಟದಂತೆ ಮಾಧವ ಜನಾರ್ದನನು ಘೋರಸಂಕಾಶರಾದ ನರಕ, ಶಂಬರ, ಕಂಸ ಮತ್ತು ಚೈದ್ಯರನ್ನು ಗೆದ್ದಿದ್ದಾನೆ. ಈ ವಿಶಿಷ್ಟಾತ್ಮ ಪುರುಷೋತ್ತಮನು ತನ್ನ ಮನಸ್ಸಿನಿಂದಲೇ ಭೂಮಿ-ಅಂತರಿಕ್ಷ-ದೇವಲೋಕಗಳನ್ನು ತನ್ನ ಆತ್ಮವಶ ಮಾಡಿಕೊಂಡಿದ್ದಾನೆ. ಮೇಲಿಂದ ಮೇಲೆ ನೀನು ಪಾಂಡವರ ಸಾರಾಸಾರಬಲಗಳ ಕುರಿತು ತಿಳಿದುಕೊಳ್ಳಲು ಕೇಳಿದ್ದೀಯೆ. ಈಗ ಹೇಳುವುದನ್ನು ಕೇಳು.

ಒಂದು ಕಡೆ ಇಡೀ ಈ ಜಗತ್ತು ಮತ್ತು ಇನ್ನೊಂದೆಡೆ

ಜನಾರ್ದನನೊಬ್ಬನೇ ಇದ್ದರೂ ಸಾರದಲ್ಲಿ ಜಗತ್ತಿಗಿಂತ ಜನಾರ್ದನನೇ ಹೆಚ್ಚಿನವನು. ಮನಸ್ಸಿನಿಂದಲೇ ಜನಾರ್ದನನು ಈ ಜಗತ್ತನ್ನು ಭಸ್ಮಮಾಡಬಲ್ಲ. ಆದರೆ ಇಡೀ ಜಗತ್ತೇ ಸೇರಿದರೂ ಜನಾರ್ದನನನ್ನು ಭಸ್ಮಮಾಡಲಿಕ್ಕಾಗುವುದಿಲ್ಲ. ಎಲ್ಲಿ ಸತ್ಯವಿದೆಯೋ, ಎಲ್ಲಿ ಧರ್ಮವಿದೆಯೋ, ಎಲ್ಲಿ ವಿನಯ, ಪ್ರಾಮಾಣಿಕತೆಗಳಿವೆಯೋ ಅಲ್ಲಿ ಗೋವಿಂದನಿರುತ್ತಾನೆ. ಎಲ್ಲಿ ಕೃಷ್ಣನಿರುತ್ತಾನೋ ಅಲ್ಲಿ ಜಯವಿರುತ್ತದೆ. ಪುರುಷೋತ್ತಮ, ಭೂತಾತ್ಮ ಜನಾರ್ದನನು ಭೂಮಿ-ಅಂತರಿಕ್ಷ-ದೇವಲೋಕಗಳನ್ನು ಆಟದಂತೆ ನಡೆಸುತ್ತಾನೆ. ಅವನು ಪಾಂಡವರನ್ನು ನೆಪವನ್ನಾಗಿಸಿಕೊಂಡು ಲೋಕವನ್ನು ಸಮ್ಮೋಹಿಸುತ್ತಾ ನಿನ್ನ ಅಧರ್ಮನಿರತ ಮೂಢ ಮಕ್ಕಳನ್ನು ಸುಡಲು ಬಯಸುತ್ತಾನೆ. ಆತ್ಮಯೋಗದಿಂದ ಭಗವಾನ್ ಕೇಶವನು ಕಾಲಚಕ್ರವನ್ನು, ಜಗಚ್ಚಕ್ರವನ್ನು ಮತ್ತು ಯುಗಚಕ್ರವನ್ನು ನಿಲ್ಲಿಸದೆಯೇ ತಿರುಗಿಸುತ್ತಿರುತ್ತಾನೆ.  ಆ ಭಗವಾನನು ಒಬ್ಬನೇ ಕಾಲ, ಮೃತ್ಯು, ಜಂಗಮ-ಸ್ಥಾವರಗಳನ್ನು ಆಳುತ್ತಾನೆ. ನಾನು ನಿನಗೆ ಈ ಸತ್ಯವನ್ನು ಹೇಳುತ್ತಿದ್ದೇನೆ.

ಮಹಾಯೋಗಿ ಹರಿಯು ಸರ್ವ ಜಗತ್ತುಗಳ ಈಶನಾದರೂ ದುರ್ಬಲ ರೈತನಂತೆ ಕರ್ಮಗಳಲ್ಲಿ ತೊಡಗಿರುತ್ತಾನೆ. ಹೀಗೆ ಕೇಶವನು ತನ್ನ ಮಾಯಾಯೋಗದಿಂದ ಲೋಕಗಳನ್ನು

ವಂಚಿಸುತ್ತಾನೆ. ಆದರೆ ಅವನನ್ನೇ ಶರಣು ಹೋಗುವ ಮಾನವರು ಮೋಸಹೋಗುವುದಿಲ್ಲ.”

## ವ್ಯಾಸ-ಗಾಂಧಾರಿಯರು ಸಂಧಿಗೆ ಪ್ರೋತ್ಸಾಹಿಸಿದುದು

ಧೃತರಾಷ್ಟ್ರನು ಹೇಳಿದನು:

“ಸಂಜಯ! ನೀನು ಹೇಗೆ ಸರ್ವಲೋಕಮಹೇಶ್ವರ ಮಾಧವನನ್ನು ತಿಳಿದಿರುವೆ? ನಾನು ಹೇಗೆ ಅವನನ್ನು ತಿಳಿದಿಲ್ಲ ಎನ್ನುವುದನ್ನು ನನಗೆ ಹೇಳು.”

ಸಂಜಯನು ಹೇಳಿದನು:

“ರಾಜನ್! ನಿನಗೆ ವಿದ್ಯೆ-ತಿಳುವಳಿಕೆಯಿಲ್ಲ. ನನ್ನ ವಿದ್ಯೆ-ತಿಳುವಳಿಕೆಯಲ್ಲಿ ಕಡಿಮೆಯಿಲ್ಲ. ವಿದ್ಯಾಹೀನನಾಗಿ, ಕತ್ತಲೆಯಿಂದ ಆವರಿಸಿದವನಾಗಿ ನಿನಗೆ ಕೇಶವನು ಅರ್ಥವಾಗುತ್ತಿಲ್ಲ. ವಿದ್ಯೆಯಿಂದಲೇ ನಾನು ಮೂರೂ ಯುಗಗಳ ಮಧುಸೂದನನನ್ನು, ಸ್ವತಃ ಪಾಡಲ್ಪಟ್ಟಿಲ್ಲದಿದ್ದರೂ ಬೇರೆ ಎಲ್ಲವನ್ನೂ ಮಾಡುವ, ಇರುವ ಎಲ್ಲವಕ್ಕೂ ಒಡೆಯನಾದ, ಪ್ರಭು ಅವ್ಯಯನನ್ನು ತಿಳಿದಿದ್ದೇನೆ.”

ಧೃತರಾಷ್ಟ್ರನು ಹೇಳಿದನು:

“ಗಾವಲ್ಗಣೇ! ಜನಾರ್ದನನಲ್ಲಿ ನಿತ್ಯವೂ ನೀನು ತೋರಿಸುವ ಈ ಭಕ್ತಿ - ಯಾವುದರಿಂದ ನೀನು ತ್ರಿಯುಗಗಳ

ಮಧುಸೂದನನನ್ನು ತಿಳಿದಿದ್ದೀಯೋ - ಆ ಭಕ್ತಿಯೇನು?”

ಸಂಜಯನು ಹೇಳಿದನು:

“ನಿನಗೆ ಮಂಗಳವಾಗಲಿ! ಮಾಯೆಯನ್ನು ನಾನು ಸೇವಿಸುವುದಿಲ್ಲ. ನಾನು ಸ್ವಲ್ಪವೂ ಅಧರ್ಮವನ್ನು ಆಚರಿಸುವುದಿಲ್ಲ. ಶುದ್ಧ ಭಕ್ತಿ ಭಾವದಿಂದ ನಡೆಯುತ್ತೇನೆ. ಶಾಸ್ತ್ರಗಳಿಂದ ಜನಾರ್ದನನನ್ನು ತಿಳಿದಿದ್ದೇನೆ.”

ಧೃತರಾಷ್ಟ್ರನು ಹೇಳಿದನು:

“ದುರ್ಯೋಧನ! ಹೃಷೀಕೇಶ ಜನಾರ್ದನನನ್ನು ಮೆಚ್ಚಿಸು. ಮಗೂ! ಸಂಜಯನಷ್ಟು ಆಪ್ತರಿಲ್ಲ. ಕೇಶವನನ್ನು ಶರಣು ಹೋಗು!”

ದುರ್ಯೋಧನನು ಹೇಳಿದನು:

“ಅರ್ಜುನನ ಸಖನೆಂದು ಹೇಳಿಕೊಂಡು ಆ ಭಗವಾನ್ ದೇವಕಿಪುತ್ರನು ಲೋಕವನ್ನು ನಾಶಪಡಿಸುವವನಾದರೆ, ನಾನು ಕೇಶವನ ಮೊರೆಹೋಗುವುದಿಲ್ಲ!”

ಧೃತರಾಷ್ಟ್ರನು ಹೇಳಿದನು:

“ಇಗೋ ಗಾಂಧಾರೀ! ನಿನ್ನ ಈ ಸುದುರ್ಮತಿ ದುರಾತ್ಮ ಮಗನು ತನ್ನ ಈರ್ಷ್ಯೆ, ಅಭಿಮಾನಗಳಿಂದಾಗಿ ಶ್ರೇಯಸ್ಕರ

ಮಾತುಗಳಂತೆ ನಡೆದುಕೊಳ್ಳದೇ
ಅಧೋಗತಿಗಿಳಿಯುತ್ತಿದ್ದಾನೆ!”

ಗಾಂಧಾರಿಯು ಹೇಳಿದಳು:

“ಐಶ್ವರ್ಯಕಾಮೀ! ದುಷ್ಟಾತ್ಮ! ವೃದ್ಧರ ಶಾಸನವನ್ನು ಅಲ್ಲಗಳೆಯುವವನೇ! ಮೂಢ! ಐಶ್ವರ್ಯ-ಜೀವಗಳನ್ನು, ತಂದೆ ತಾಯಿಯರನ್ನು ತೊರೆದವನೇ! ಶತ್ರುಗಳ ಸಂತೋಷವನ್ನು ಹೆಚ್ಚಿಸುವವನೇ! ನನ್ನ ಶೋಕವನ್ನು ಹೆಚ್ಚಿಸುವವನೇ! ಭೀಮಸೇನನ ಪೆಟ್ಟು ತಿಂದಾಗ ನಿನ್ನ ತಂದೆಯ ಮಾತನ್ನು ನೆನಪಿಸಿಕೊಳ್ಳುವೆ!”

ವ್ಯಾಸನು ಹೇಳಿದನು:

“ರಾಜನ್! ನೀನು ಕೃಷ್ಣನಿಗೆ ಬೇಕಾದವನು. ಧೃತರಾಷ್ಟ್ರ! ನನ್ನನ್ನು ಕೇಳು. ನಿನ್ನ ದೂತನಾಗಿರುವ ಸಂಜಯನು ನಿನ್ನನ್ನು ಶ್ರೇಯಸ್ಸಿನೆಡೆಗೆ ಕೊಂಡೊಯ್ಯುತ್ತಿದ್ದಾನೆ. ಅವನು ಈ ಹೃಷೀಕೇಶನನ್ನು – ಅವನ ಪುರಾತನ ಮತ್ತು ಹೊಸ ರೂಪಗಳಲ್ಲಿ – ತಿಳಿದುಕೊಂಡಿದ್ದಾನೆ. ಅವನನ್ನು ಏಕಾಗ್ರನಾಗಿ ಕೇಳುವುದರಿಂದ ಮಹಾ ಭಯದಿಂದ ಮುಕ್ತನಾಗುತ್ತೀಯೆ. ಕ್ರೋಧ-ಹರ್ಷಗಳ ಕತ್ತಲೆಯಿಂದ ಆವೃತರಾಗಿ, ಬಹುವಿಧದ ಪಾಶಗಳ ಬಂಧನಕ್ಕೊಳಗಾಗಿ, ತಮ್ಮಲ್ಲಿರುವ ಧನಗಳಿಂದ ಸಂತುಷ್ಟರಾಗಿರುವುದಿಲ್ಲ. ಕಾಮಮೂಢರು ಕುರುಡನು

ಕುರುಡನಿಂದ ಕರೆದೊಯ್ಯಲ್ಪಡುವಂತೆ ತಾವೇ ಮಾಡಿದ ಕರ್ಮಗಳಿಂದ ಪುನಃ ಪುನಃ ಯಮನ ವಶದಲ್ಲಿ ಬರುತ್ತಾರೆ. ಮನೀಷಿಗಳು ಹೋಗುವ ಒಂದೇ ಒಂದು ಮಾರ್ಗವಿದೆ. ಅದನ್ನು ನೋಡಿ ಮೃತ್ಯುವನ್ನು ಜಯಿಸುತ್ತಾರೆ. ಮಹಾತ್ಮರು ಅಲ್ಲಿ ಅಂಟಿಕೊಳ್ಳುವುದಿಲ್ಲ!”

ಧೃತರಾಷ್ಟ್ರನು ಹೇಳಿದನು:

“ಸಂಜಯ! ಭಯವನ್ನು ಹೋಗಲಾಡಿಸುವ, ಯಾವುದರ ಮೂಲಕ ಹೃಷೀಕೇಶನನ್ನು ತಲುಪಿ ಉತ್ತಮ ಶಾಂತಿಯನ್ನು ಪಡೆಯಬಲ್ಲೆನೋ ಆ ಮಾರ್ಗದ ಕುರಿತು ಹೇಳು ಬಾ!”

ಸಂಜಯನು ಹೇಳಿದನು:

“ಅಕೃತಾತ್ಮನು ಕೃತಾತ್ಮನಾದ ಜನಾರ್ದನನನ್ನು ತಿಳಿಯಲಿಕ್ಕಾಗುವುದಿಲ್ಲ. ಇಂದ್ರಿಯನಿಗ್ರಹವಿಲ್ಲದೇ ತನ್ನ ಕ್ರಿಯೆಗಳನ್ನು ಮಾಡುವುದು ಉಪಾಯವಲ್ಲ. ಉತ್ತೇಜನಗೊಂಡ ಇಂದ್ರಿಯಗಳು ಬಯಸುವ ವಸ್ತುಗಳನ್ನು ಅಪ್ರಮಾದನಾಗಿದ್ದುಕೊಂಡು ತ್ಯಜಿಸುವುದು, ಅಪ್ರಮಾದನಾಗಿರುವುದು, ಮತ್ತು ಅಹಿಂಸೆ ಇವು ಜ್ಞಾನವನ್ನು ಹುಟ್ಟಿಸುತ್ತವೆ ಎನ್ನುವುದರಲ್ಲಿ ಸಂಶಯವಿಲ್ಲ. ಯಾವಾಗಲೂ ಆಯಾಸಗೊಳ್ಳದೇ ಇಂದ್ರಿಯಗಳನ್ನು ನಿಯಂತ್ರಿಸು. ನಿನ್ನ ಬುದ್ಧಿಯು ದಾರಿತಪ್ಪದಿರಲಿ. ಪ್ರತಿಸಾರಿಯೂ

ನಿರ್ದಿಷ್ಟಪಡಿಸಿಕೋ. ಈ ಇಂದ್ರಿಯ ಧಾರಣೆಯನ್ನು ವಿಪ್ರರು ನಿಶ್ಚಿತವಾಗಿಯೂ ಜ್ಞಾನವನ್ನು ನೀಡುತ್ತದೆಯೆಂದು ತಿಳಿದಿದ್ದಾರೆ. ಇದೇ ಮನೀಷಿಗಳು ಹೋಗುವ ಜ್ಞಾನದ ಮಾರ್ಗ. ಇಂದ್ರಿಯಗಳನ್ನು ಗೆಲ್ಲದೇ ಕೇಶವನನ್ನು ಮನುಷ್ಯರು ತಲುಪುವುದಿಲ್ಲ. ಇಂದ್ರಿಯಗಳನ್ನು ವಶದಲ್ಲಿಟ್ಟುಕೊಂಡು, ಆಗಮಗಳನ್ನು ತಿಳಿದುಕೊಂಡಿರುವವನು ಯೋಗದ ಮೂಲಕ ತತ್ವದಲ್ಲಿ ಶಾಂತನಾಗುತ್ತಾನೆ."

## ಕೃಷ್ಣನ ನಾಮಾರ್ಥಗಳನ್ನು ಸಂಜಯನು ಧೃತರಾಷ್ಟ್ರನಿಗೆ ವಿವರಿಸಿದುದು

ಧೃತರಾಷ್ಟ್ರನು ಹೇಳಿದನು:

"ಸಂಜಯ! ಪುಂಡರೀಕಾಕ್ಷನ ಕುರಿತು ನಾನು ಕೇಳಿದುದಕ್ಕೆ ಇನ್ನೂ ಹೆಚ್ಚು ಹೇಳು. ಅವನ ಹೆಸರು ಮತ್ತು ಕಾರ್ಯಗಳ ಅರ್ಥವನ್ನು ಮಾಡಿಕೊಂಡರೆ ಆ ಪುರುಷೋತ್ತಮನನ್ನು ತಲುಪಬಹುದು."

ಸಂಜಯನು ಹೇಳಿದನು:

"ನಾನು ಆ ದೇವನ ಶುಭನಾಮಗಳ ವಿವರಣೆಗಳನ್ನು ಕೇಳಿದ್ದೇನೆ. ನನಗೆ ತಿಳಿದಂತೆ ಕೇಶವನು ಅಪ್ರಮೇಯನು. ಸರ್ವಭೂತಗಳಿಗೆ ವಸನವನ್ನೀಯುವುದರಿಂದ, ವಸುವಾಗಿರುವುದರಿಂದ, ಮತ್ತು

ದೇವಯೋನಿಯಾಗಿರುವುದರಿಂದ ಅವನನ್ನು ವಾಸುದೇವನೆಂದು ತಿಳಿಯುತ್ತಾರೆ. ವೃಷತ್ವದಿಂದಾಗಿ ವಿಷ್ಣುವೆಂದು ಕರೆಯುತ್ತಾರೆ. ಮುನಿಯಾಗಿದ್ದುದರಿಂದ, ಯೋಗಿಯಾಗಿರುವುದರಿಂದ ಅವನನ್ನು ಮಾಧವನೆಂದು ತಿಳಿ. ಸರ್ವತತ್ವಗಳನ್ನೂ ಲಯಗೊಳಿಸುವುದರಿಂದ ಮತ್ತು ಮಧುವಿನ ಸಂಹಾರಕನಾಗಿದುದರಿಂದ ಅವನು ಮಧುಸೂದನ. 'ಕೃಷಿ' ಶಬ್ಧವು ಭೂಮಿಯನ್ನು ಸೂಚಿಸುತ್ತದೆ ಮತ್ತು 'ಣ' ವು ನಿವೃತ್ತಿಯನ್ನು ಸೂಚಿಸುತ್ತದೆ. ಕೃಷ್ಣನಲ್ಲಿ ಇವೆರಡೂ ಸೇರಿರುವುದರಿಂದ ಕೃಷ್ಣನು ಶಾಶ್ವತನೆಂದಾಗುತ್ತಾನೆ. ಪುಂಡರೀಕವು ನಿತ್ಯವೂ, ಅಕ್ಷಯವೂ, ಅಕ್ಷರವೂ ಆದ ಪರಮ ಧಾಮ. ಆದುದರಿಂದ ಅವನು ಪುಂಡರೀಕಾಕ್ಷ. ದಸ್ಯುಗಳನ್ನು ಕಾಡುವುದರಿಂದ ಅವನು ಜನಾರ್ದನ. ಯಾರಲ್ಲಿ ಸತ್ವವು ತೋರಿಸಿಕೊಳ್ಳುತ್ತದೆಯೋ, ಯಾರಲ್ಲಿ ಸತ್ವವು ಕಡಿಮೆಯಾಗುವುದಿಲ್ಲವೋ, ಅಂಥಹ ಸತ್ವಕ್ಕಾಗಿ ಅವನು ಸಾತ್ವತ. ವೃಷಭನಂತಿರುವುದರಿಂದ ಅವನು ವೃಷಭೇಕ್ಷಣ. ಜನನಿಯಲ್ಲಿ ಜನಿಸದೇ ಇರುವುದರಿಂದ, ಜಯಿಸಲಸಾಧ್ಯನಾಗಿರುವುದರಿಂದ ಅವನು ಅಜ (ಜನ್ಮವಿಲ್ಲದವನು). ದೇವತೆಗಳ ಸ್ವಪ್ರಕಾಶವಿರುವುದರಿಂದ ಅವನನ್ನು ದಾಮೋದರನೆಂದು ತಿಳಿಯುತ್ತಾರೆ. ಹರ್ಷ, ಸುಖ ಮತ್ತು ಐಶ್ವರ್ಯಗಳಿಂದ ಅವನು

ಹೃಷೀಕೇಶನಾಗಿದ್ದಾನೆ. ಭೂಮಿ-ಆಕಾಶಗಳನ್ನು ಎರಡು ಬಾಹುಗಳಲ್ಲಿ ಹೊತ್ತಿರುವುದರಿಂದ ಅವನು ಮಹಾಬಾಹುವೆಂದು ವಿಶ್ರುತನಾಗಿದ್ದಾನೆ. ಕೆಳಮುಖವಾಗಿ ಕ್ಷೀಣವಾಗದೇ ಇರುವುದರಿಂದ ಅವನು ಅಧೋಕ್ಷಜ. ನರರ ಪ್ರಯಾಣನಾಗಿದ್ದುದರಿಂದ ಅವನು ನಾರಾಯಣನೆಂದೂ ಕರೆಯಲ್ಪಡುತ್ತಾನೆ. ಪೂರ್ಣಗೊಳಿಸುವವನು ಮತ್ತು ಕಡಿಮೆಮಾಡುವವನಾಗಿರುವುದರಿಂದ ಅವನು ಪುರುಷೋತ್ತಮ. ಇರುವ ಮತ್ತು ಇಲ್ಲದಿರುವ ಎಲ್ಲವುಗಳ ಪ್ರಭುವಾದುದರಿಂದ ಮತ್ತು ಜ್ಞಾನದ ಮೂಲಕ ಎಲ್ಲವನ್ನೂ ಕಾಣುವುದರಿಂದ ಅವನು ಸರ್ವ. ಕೃಷ್ಣನು ಸತ್ಯದಲ್ಲಿ ನೆಲೆಸಿದ್ದಾನೆ ಮತ್ತು ಸತ್ಯವು ಅವನಲ್ಲಿ ನೆಲೆಸಿದೆ. ಗೋವಿಂದನು ಸತ್ಯ ಅಸತ್ಯಗಳೆರಡೂ. ಆದುದರಿಂದ ಅವನಿಗೆ ಸತ್ಯ ಎಂಬ ಹೆಸರೂ ಇದೆ. ವಿಕ್ರಮದಿಂದಾಗಿ ಅವನು ವಿಷ್ಣು. ಜಯದಿಂದಾಗಿ ಜಿಷ್ಣು ಎನ್ನುತ್ತಾರೆ. ಶಾಶ್ವತನಾಗಿರುವುದರಿಂದ ಅನಂತನೆಂದೂ ಗೋವುಗಳನ್ನು ತಿಳಿದುಕೊಂಡಿದುದಕ್ಕೆ ಗೋವಿಂದನೆಂದೂ ಕರೆಯುತ್ತಾರೆ. ತತ್ತ್ವವಲ್ಲವುಗಳನ್ನು ತತ್ತ್ವವುಳ್ಳವುಗಳನ್ನಾಗಿ ಮಾಡಿ ಪ್ರಜೆಗಳನ್ನು ಮೋಹಗೊಳಿಸುತ್ತಾನೆ. ಈ ರೀತಿ ಧರ್ಮನಿತ್ಯನಾದ ಭಗವಾನ್ ಮಹಾಬಾಹು ಅಚ್ಯುತನು ಹಿಂಸೆಯನ್ನು ತಡೆಯಲು ಮುನಿಗಳೊಂದಿಗೆ ಇಲ್ಲಿಗೆ ಬರುತ್ತಾನೆ.”

## ಧೃತರಾಷ್ಟ್ರನು ಮಹಾವಿಷ್ಣುವನ್ನು ಪ್ರಾರ್ಥಿಸುವುದು

ಧೃತರಾಷ್ಟ್ರನು ಹೇಳಿದನು:

“ಸಂಜಯ! ದಿಕ್ಕುಗಳನ್ನು ದಿಕ್ಸೂಚಿಯಂತೆ ಪ್ರಕಾಶಗೊಳಿಸುವ ಪರಮ ಶರೀರದಿಂದ ಬೆಳಗುವ ವಾಸುದೇವನನ್ನು ಹತ್ತಿರದಿಂದ ನೋಡಬಲ್ಲ ಕಣ್ಣುಳ್ಳವರ ಮೇಲೆ ಅಸೂಯೆಪಡುತ್ತೇನೆ. ಅವನು ಭಾರತರು ಗೌರವದಿಂದ ಕೇಳುವಹಾಗೆ, ಸೃಂಜಯರಿಗೆ ಮಂಗಳವನ್ನು ಮಾಡುವ, ಅಭಿವೃದ್ಧಿಯನ್ನು ಬಯಸುವವರು ಕೇಳಬೇಕಾದ, ಯಾವರೀತಿಯಲ್ಲಿಯೂ ನಿಂದನೀಯವಲ್ಲದ, ಸಾಯಲು ಬಯಸುವವರು ಕೇಳದ ಮಾತುಗಳನ್ನು ಆಡುತ್ತಾನೆ. ಸಾತ್ವತರ ಏಕವೀರನು ನಮ್ಮಲ್ಲಿಗೆ ಬರುತ್ತಾನೆ. ಯಾದವರ ಪ್ರಣೇತಾರ ಆ ವೃಷಭ, ಶತ್ರುಗಳ ಕ್ಷೋಭಣ ಮತ್ತು ಹಂತಾರ, ಮತ್ತು ದ್ವೇಷಿಸುವವರ ಯಶಸ್ಸನ್ನು ಎಳೆದುಕೊಳ್ಳುವವನು. ಕುರುಗಳು ಒಟ್ಟಿಗೇ ಆ ಮಹಾತ್ಮ, ಶತ್ರುಹರಣ, ವರೇಣ್ಯ, ಅಹಿಂಸೆಯ ಕುರಿತಾಗಿ ಮಾತನಾಡಿ ನಮ್ಮವರನ್ನು ಮೋಹಿಸುವಂತಹ ಆ ವೃಷ್ಣಿಶ್ರೇಷ್ಠನನ್ನು ನೋಡುತ್ತಾರೆ. ಆ ಋಷಿ, ಅತ್ಯಂತ ಸನಾತನ, ಮಾತುಗಳ ಸಮುದ್ರ, ಯತಿಗಳ ಕಲಶ, ಅರಿಷ್ಟನೇಮಿ, ಗರುಡ, ಸುಪರ್ಣ, ಪ್ರಜೆಗಳ ಪತಿ, ಭುವನದ ಧಾಮ, ಸಹಸ್ರಶೀರ್ಷ, ಪುರುಷ, ಪುರಾಣ, ಆದಿ-ಮಧ್ಯ-

ಅಂತ್ಯಗಳಿಲ್ಲದಿರುವ, ಅನಂತ ಕೀರ್ತಿ, ಶುಕ್ರದ ಧಾತಾರ, ಹುಟ್ಟಿರದ ಜನಿತ್ರ, ಪರಮ ಪರೇಭ್ಯನಿಗೆ ಶರಣು ಹೋಗುತ್ತೇನೆ. ಮೂರೂಲೋಕಗಳನ್ನು ನಿರ್ಮಾಣಿಸಿದ, ದೇವಾಸುರರನ್ನೂ ನಾಗರಾಕ್ಷಸರನ್ನೂ, ಪ್ರಧಾನ ನರಾಧಿಪರನ್ನೂ, ವಿದುಷರನ್ನೂ ಹುಟ್ಟಿಸಿದ, ಇಂದ್ರನ ಅನುಜನಿಗೆ ಶರಣು ಹೋಗುತ್ತೇನೆ."

# ಶ್ರೀಕೃಷ್ಣ ರಾಯಭಾರ

## ಯುಧಿಷ್ಠಿರನು ರಾಯಭಾರಕ್ಕೆ ಕೃಷ್ಣನನ್ನು ಕೇಳಿದ್ದುದು

ಸಂಜಯನು ಮರಳಿದ ನಂತರ ಧರ್ಮರಾಜ ಯುಧಿಷ್ಠಿರನು ಸರ್ವ ಸಾತ್ವತರ ವೃಷಭ ದಾಶಾರ್ಹನಿಗೆ ಹೇಳಿದನು:

"ಜನಾರ್ದನ! ನನ್ನ ಮಿತ್ರರ ಕಾಲವು ಇಗೋ ಬಂದೊದಗಿದೆ. ಈ ಆಪತ್ತಿನಿಂದ ಉದ್ಧರಿಸುವ ಬೇರೆ ಯಾರನ್ನೂ ನಾನು ಕಾಣಲಾರೆ. ಮಾಧವ! ನಿನ್ನನ್ನೇ ಆಶ್ರಯಿಸಿ ನಾವು ಅಮಾತ್ಯರೊಂದಿಗಿರುವ ಮೋಹದರ್ಪಿತ ಧಾರ್ತರಾಷ್ಟ್ರನಿಂದ ನಮ್ಮ ಭಾಗವನ್ನು ನಿರ್ಭಯದಿಂದ ಕೇಳಬಲ್ಲೆವು. ವೃಷ್ಣಿಯರನ್ನು ಸರ್ವ ಆಪತ್ತುಗಳಿಂದ ಹೇಗೆ ರಕ್ಷಿಸುತ್ತೀಯೋ ಹಾಗೆ ನೀನು ಪಾಂಡವರಾದ ನಮ್ಮನ್ನೂ ಕೂಡ ಈ ಮಹಾ ಭಯದಿಂದ ರಕ್ಷಿಸಬೇಕು."

ಭಗವಂತನು ಹೇಳಿದನು:

“ಮಹಾಬಾಹೋ! ನಾನು ಇಲ್ಲಿಯೇ ಇದ್ದೇನೆ. ಏನು ಹೇಳಬೇಕೆಂದು ಬಯಸುತ್ತೀಯೋ ಅದನ್ನು ಹೇಳು. ನೀನು ಏನು ಹೇಳುತ್ತೀಯೋ ಅವೆಲ್ಲವನ್ನೂ ಮಾಡುತ್ತೇನೆ.”

ಯುಧಿಷ್ಠಿರನು ಹೇಳಿದನು:

“ಧೃತರಾಷ್ಟ್ರ ಮತ್ತು ಅವನ ಮಗನ ಮನಸ್ಸಿನಲ್ಲಿರುವುದನ್ನು ನೀನು ಕೇಳಿದ್ದೀಯೆ. ಕೃಷ್ಣ! ಸಂಜಯನು ನನಗೆ ಏನನ್ನು ಹೇಳಿದನೋ ಅವೆಲ್ಲವೂ ಧೃತರಾಷ್ಟ್ರನ ಮನಸ್ಸಿನಲ್ಲಿರುವವು. ಇವನಲ್ಲಿ ಅವನ ಆತ್ಮವು ವಿಸ್ಕೃತಗೊಂಡಿದೆ. ಹೇಳಿಕಳುಹಿಸಿದ್ದುದನ್ನು ಮಾತ್ರ ದೂತನು ಆಡಬೇಕು. ಬೇರೆ ಏನನ್ನಾದರೂ ಹೇಳಿದರೆ ಅವನು ವಧಾರ್ಹ. ಲುಬ್ಧನಾಗಿ, ಪಾಪಮನಸ್ಸಿನಿಂದ ಇತರರನ್ನು ಕೀಳಾಗಿ ಕಾಣುತ್ತಾ ಅವನು ರಾಜ್ಯವನ್ನು ಕೊಡದೇ ನಮ್ಮೊಂದಿಗೆ ಶಾಂತಿಯನ್ನು ಹುಡುಕುತ್ತಿದ್ದಾನೆ. ಧೃತರಾಷ್ಟ್ರನ ಆದೇಶದಂತೆ ಹನ್ನೆರಡು ವರ್ಷಗಳು ವನದಲ್ಲಿ ವಾಸಿಸಿದುದು ಮತ್ತು ಇನ್ನೊಂದು ವರ್ಷ ವೇಷಮರೆಸಿಕೊಂಡಿದ್ದುದು, ಧೃತರಾಷ್ಟ್ರನೂ ಕೂಡ ಆ ಒಪ್ಪಂದದಂತೆ ನಡೆದುಕೊಳ್ಳುತ್ತಾನೆ ಎಂದಲ್ಲವೇ? ನಾವು ಈ ಒಪ್ಪಂದವನ್ನು ಮುರಿದಿಲ್ಲ ಎನ್ನುವುದನ್ನು ಬ್ರಾಹ್ಮಣರು ಚೆನ್ನಾಗಿ ಬಲ್ಲರು. ವೃದ್ಧರಾಜ ಧೃತರಾಷ್ಟ್ರನು ಸ್ವಧರ್ಮವನ್ನು

ಕಾಣುತ್ತಿಲ್ಲ. ಅಥವಾ ಅದನ್ನು ಕಂಡರೂ ಪುತ್ರನ ಮೇಲಿನ ಮೋಹದಿಂದ ಆ ಮಂದಬುದ್ಧಿಯ ಆಳ್ವಿಕೆಯಲ್ಲಿದ್ದಾನೆ. ಸುಯೋಧನನ ಅನುಮತಿಯಂತೆ ನಿಂತು, ತನ್ನದೇ ಲಾಭವನ್ನು ಬಯಸಿ ಲುಬ್ಧನಾಗಿ ನಮ್ಮೊಂದಿಗೆ ಸುಳ್ಳಾಗಿ ನಡೆದುಕೊಳ್ಳುತ್ತಿದ್ದಾನೆ. ನಾನು ತಾಯಿ ಮತ್ತು ಮಿತ್ರರನ್ನು ನೋಡಿಕೊಳ್ಳಲು ಶಕ್ಯನಾಗಿಲ್ಲ ಎನ್ನುವುದಕ್ಕಿಂತ ದುಃಖತರವಾದುದು ಏನಿದೆ? ಕಾಶಿ, ಚೇದಿ, ಪಾಂಚಾಲ, ಮತ್ಸ್ಯರು ಮತ್ತು ಗೋವಿಂದ ಮಧುಸೂದನ ನೀನು ನನ್ನ ಪಕ್ಷದಲ್ಲಿರುವಾಗ ನಾನು ಕೇವಲ ಐದು ಗ್ರಾಮಗಳನ್ನು ಕೇಳುತ್ತಿದ್ದೇನೆ - ಕುಶಸ್ಥಲ, ವೃಕಸ್ಥಲ, ಮಾಸಂದೀ, ವಾರಣಾವತ ಮತ್ತು ಐದನೆಯ ಕೊನೆಯದಾಗಿ ಬೇರೆ ಯಾವುದಾದರೂ ಗ್ರಾಮ. 'ತಂದೇ! ಐದು ಗ್ರಾಮಗಳನ್ನಾಗಲೀ ನಗರಗಳನ್ನಾಗಲೀ ಕೊಡು. ಅಲ್ಲಿ ನಾವು ಒಟ್ಟಾಗಿ ವಾಸಿಸುತ್ತೇವೆ. ಭರತರು ನಮ್ಮನ್ನು ಅಲ್ಲಿ ಬಿಟ್ಟುಬಿಡಲಿ.' ಅದಕ್ಕೂ ಕೂಡ ದುಷ್ಟಾತ್ಮ ಧಾರ್ತರಾಷ್ಟ್ರನು ಒಪ್ಪಿಕೊಳ್ಳುವುದಿಲ್ಲ. ಎಲ್ಲವೂ ತನ್ನದೆಂದು ತಿಳಿದುಕೊಂಡಿದ್ದಾನೆ. ಇದಕ್ಕಿಂತಲೂ ದುಃಖತರವಾದುದು ಏನಿದೆ?

ಉತ್ತಮ ಕುಲದಲ್ಲಿ ಜನಿಸಿದ ವೃದ್ಧನು ಪರರ ಸಂಪತ್ತಿಗೆ ಆಸೆಪಟ್ಟರೆ ಆ ಲೋಭವು ಅವನ ಪ್ರಜ್ಞೆಯನ್ನು ಕಳೆಯುತ್ತದೆ

ಮತ್ತು ನಾಶವಾದ ಪ್ರಜ್ಞೆಯು ನಾಚಿಕೆಯನ್ನು ಕಳೆಯುತ್ತದೆ. ನಾಚಿಕೆಯನ್ನು ಕಳೆದು ಕೊಂಡಾಗ ಧರ್ಮವು ಕೆಡುತ್ತದೆ. ಧರ್ಮವು ನಾಶಗೊಳ್ಳಲು ಸಂಪತ್ತು ನಾಶವಾಗುತ್ತದೆ. ಸಂಪತ್ತು ನಾಶವಾಗಲು ಪುರುಷನು ನಾಶಹೊಂದುತ್ತಾನೆ. ಹೂ-ಹಣ್ಣುಗಳನ್ನು ಬಿಡದ ಮರದಿಂದ ಹಕ್ಕಿಗಳು ಹೇಗೋ ಹಾಗೆ ಬಡವನಿಂದ ದಾಯಾದಿಗಳು, ಸ್ನೇಹಿತರು ಮತ್ತು ಋತ್ವಿಜರು ದೂರವಾಗುತ್ತಾರೆ. ಬಂಧುಗಳು ದೂರವಾದರೆ, ಉಸಿರು ಹೊರಟುಹೋದ ನಂತರ ಕೆಳಗುರುಳುವಂತೆ ಅದೇ ಮರಣ. ಇಂದು ಮತ್ತು ನಾಳೆಗೆ ಊಟವನ್ನು ಕಾಣದೇ ಇರುವಷ್ಟು ಪಾಪದ ಅವಸ್ಥೆಯು ಬೇರೊಂದಿಲ್ಲ ಎಂದು ಶಂಬರನು ಹೇಳಿದ್ದಾನೆ. ಧನವು ಪರಮ ಧರ್ಮವೆಂದು ಹೇಳುತ್ತಾರೆ. ಎಲ್ಲವೂ ಧನವನ್ನು ಅವಲಂಬಿಸಿವೆ. ಲೋಕದಲ್ಲಿ ಧನಿಕರು ಜೀವಿಸುತ್ತಾರೆ. ಧನವಿಲ್ಲದ ನರರು ಸಾಯುತ್ತಾರೆ. ತನ್ನದೇ ಬಲವನ್ನುಪಯೋಗಿಸಿ ಯಾವ ನರನು ಇತರರ ಧನವನ್ನು ಕಸಿದುಕೊಳ್ಳುತ್ತಾನೋ ಅವನು ಆ ನರನ ಧರ್ಮವನ್ನೂ, ಅರ್ಥವನ್ನೂ, ಕಾಮವನ್ನೂ ಮತ್ತು ಅವನನ್ನೂ ಕೊಲ್ಲುತ್ತಾನೆ. ಈ ಅವಸ್ಥೆಯನ್ನು ಪಡೆದ ಜನರು ಮರಣವನ್ನು ಹೊಂದುತ್ತಾರೆ, ಮತ್ತು ಕೆಲವರು ಗ್ರಾಮದ, ಕೆಲವರು ಕಾಡಿನ ಮತ್ತು ಕೆಲವರು ನಾಶದ ದಾರಿಯನ್ನು ಹಿಡಿಯುವವರು. ಧನಕ್ಕಾಗಿ ಕೆಲವರು ಹುಚ್ಚರಾಗುತ್ತಾರೆ, ಇತರರು ಶತ್ರುಗಳ

ವಶರಾಗುತ್ತಾರೆ. ಕೆಲವರು ಇತರರ ದಾಸರಾಗುತ್ತಾರೆ. ಸಂಪತ್ತನ್ನು ಕಳೆದುಕೊಳ್ಳುವುದು ಪುರುಷನಿಗೆ ಮರಣಕ್ಕಿಂತಲೂ ದೊಡ್ಡದು. ಸಂಪತ್ತೇ ಧರ್ಮ ಮತ್ತು ಕಾಮಗಳ ಕಾರಣ. ಆದರೆ ಸ್ವಾಭಾವಿಕವಾಗಿ ಸಾಯುವುದು ಲೋಕದಲ್ಲಿರುವವುಗಳಿಗೆ ಶಾಶ್ವತವಾಗಿರುವ ಧರ್ಮ. ಇದು ಯಾರಿಗೂ ತಪ್ಪಿದ್ದಲ್ಲ.

ಉತ್ತಮ ಸಂಪತ್ತನ್ನು ಒಂದುಗೂಡಿಸಿದವರು ಭೋಗಿಸುವಾಗಲೇ ಅದನ್ನು ಕಳೆದುಕೊಂಡಷ್ಟು ನಿರ್ಧನಿಕರಾದ ಜನರಿಗೆ ಬಾಧಕವೆನಿಸುವುದಿಲ್ಲ. ತನ್ನದೇ ಅಪರಾಧದಿಂದ ಮಹಾ ವ್ಯಸನವನ್ನು ಹೊಂದಿದವನು ಇಂದ್ರಾದಿ ದೇವತೆಗಳನ್ನು ನಿಂದಿಸುತ್ತಾನೆಯೇ ಹೊರತು ತನ್ನನ್ನು ಎಂದೂ ನಿಂದಿಸಿಕೊಳ್ಳುವುದಿಲ್ಲ. ಎಲ್ಲ ಶಾಸ್ತ್ರಗಳೂ ಕೂಡ ಅವನಲ್ಲಿರುವ ನಾಚಿಕೆಯನ್ನು ಅಳಿಸಲಾರವು. ತನ್ನ ಸೇವಕರ ಮೇಲೆ ಸಿಟ್ಟಾಗುತ್ತಾನೆ ಮತ್ತು ಸ್ನೇಹಿತರ ಮೇಲೆ ಅಸೂಯೆ ಪಡುತ್ತಾನೆ. ಆಗ ಕೋಪವು ಅವನನ್ನು ಏರಿ ಮೂರ್ಛೆಗೊಳಿಸುತ್ತದೆ. ಮೋಹದ ವಶಕ್ಕೆ ಬಂದು ಕ್ರೂರ ಕರ್ಮಗಳೆಡೆಗೆ ಒಯ್ಯಲ್ಪಡುತ್ತಾನೆ. ಇನ್ನೂ ಪಾಪಕರ್ಮಗಳನ್ನು ಮಾಡಿ ಅವನಿಂದ ಸಂಕರವುಂಟಾಗುವುದು. ಸಂಕರದಿಂದ ಪಾಪಕರ್ಮಗಳ ಕೊನೆಯ ತಾಣ ನರಕಕ್ಕೆ ಹೋಗುತ್ತಾನೆ. ಎಚ್ಚೆತ್ತುಕೊಳ್ಳಲಿಲ್ಲವೆಂದರೆ ಅವನು ನರಕಕ್ಕೇ ಹೋಗುತ್ತಾನೆ.

ಪ್ರಜ್ಞೆಯೇ ಅವನನ್ನು ಎಚ್ಚರಿಸುತ್ತದೆ. ಪ್ರಜ್ಞೆಯ ಕಣ್ಣಿಲ್ಲದಿದ್ದರೆ ಅವನು ಅಧೋಗತಿಗಿಳಿಯುತ್ತಾನೆ. ಪ್ರಜ್ಞೆಯನ್ನು ಪಡೆದ ಪುರುಷನು ಶಾಸ್ತ್ರಗಳನ್ನು ನೋಡುತ್ತಾನೆ. ನಿತ್ಯವೂ ಶಾಸ್ತ್ರಗಳನ್ನು ಓದಿ ಪುನಃ ಧರ್ಮ, ನಂತರ ಮಾನವು ಅವನ ಉತ್ತಮ ಅಂಗವಾಗುತ್ತದೆ. ಮಾನವಂತನು ಪಾಪವನ್ನು ದ್ವೇಷಿಸುತ್ತಾನೆ ಮತ್ತು ಅವನ ಅದೃಷ್ಟವು ಅಭಿವೃದ್ಧಿಯಾಗುತ್ತದೆ. ಅವನು ಎಷ್ಟು ಶ್ರೀಮಂತನೋ ಅಷ್ಟು ಪುರುಷನಾಗಿರುತ್ತಾನೆ. ಧರ್ಮನಿತ್ಯನಾಗಿದ್ದುಕೊಂಡು, ಪ್ರಶಾಂತಾತ್ಮನಾಗಿ, ಕಾರ್ಯಯೋಗದಲ್ಲಿ ಸದಾ ತೊಡಗಿರುವ ಅವನು ಅಧರ್ಮವನ್ನು ಮಾಡುವ ಬುದ್ಧಿಯನ್ನು ಮಾಡುವುದಿಲ್ಲ, ಪಾಪದಲ್ಲಿ ನಡೆದುಕೊಳ್ಳುವುದಿಲ್ಲ.

ನಾಚಿಕೆಯಿಲ್ಲದ ವಿಮೂಢನು ಸ್ತ್ರೀಯೂ ಅಲ್ಲ ಪುರುಷನೂ ಅಲ್ಲ. ಶೂದ್ರನಿಗೆ ಹೇಗೋ ಹಾಗೆ ಅವನಿಗೆ ಧರ್ಮದಲ್ಲಿ ಅಧಿಕಾರವಿರುವುದಿಲ್ಲ. ಮಾನವಂತನು ದೇವತೆಗಳನ್ನೂ, ಪಿತೃಗಳನ್ನೂ ಮತ್ತು ತನ್ನನ್ನೂ ಪ್ರೀತಿಗೊಳಿಸಿ ಅದರಿಂದ ಪುಣ್ಯಕರ್ಮಗಳ ಅಂತಿಮ ತಾಣ ಅಮೃತತ್ವವನ್ನು ಪಡೆಯುತ್ತಾನೆ. ಮಧುಸೂದನ! ಇವೆಲ್ಲವನ್ನು – ರಾಜ್ಯವನ್ನು ಕಳೆದುಕೊಂಡು ಹೇಗೆ ನಾನು ಈ ರಾತ್ರಿಗಳನ್ನು ಕಳೆದೆ ಎನ್ನುವುದನ್ನು - ನೀನು ನನ್ನಲ್ಲಿ ಪ್ರತ್ಯಕ್ಷವಾಗಿ ನೋಡಿದ್ದೀಯೆ. ಯಾವುದೇ ನ್ಯಾಯದಿಂದಲೂ ನಾವು ನಮ್ಮ ಸಂಪತ್ತನ್ನು

ಬಿಟ್ಟುಬಿಡುವವರಲ್ಲ. ಪ್ರಯತ್ನಮಾಡುವಾಗ ಸತ್ತರೆ ಅದೂ ಕೂಡ ಸರಿಯೇ! ನಾವು-ಅವರು ಶಾಂತಿಯಿಂದ ಸಮಭೂತರಾಗಿ ಭೂಮಿಯನ್ನು ಆಳುವುದು ಈಗಿರುವ ಮೊದಲನೆಯ ಮಾರ್ಗವಲ್ಲವೇ? ಅದರ ನಂತರದ ಮಾರ್ಗವು ಕೌರವರನ್ನು ಕೊಂದು ಅವರಿಂದ ರಾಜ್ಯವನ್ನು ಪಡೆಯುವ ರೌದ್ರ ಕರ್ಮವು ಕ್ಷಯವನ್ನು ಆರಂಭಿಸುತ್ತದೆ. ಶತ್ರುಗಳು ಸಂಬಂಧಿಕರಾಗಿಲ್ಲದಿದ್ದರೂ ಎಷ್ಟೇ ಅನಾರ್ಯರಾಗಿದ್ದರೂ ಅವರನ್ನು ವಧಿಸಬಾರದು. ಹೀಗಿರುವಾಗ ಇವರಂಥವರಿಗೆ ಹೇಗೆ ಅದನ್ನೇ ಮಾಡಬಹುದು? ಇವರು ನಮ್ಮ ದಾಯವಾದಿಗಳು, ಹೆಚ್ಚಾಗಿ ಸ್ನೇಹಿತರು ಮತ್ತು ಗುರುಗಳಲ್ಲವೇ? ಅವರನ್ನು ವಧಿಸುವುದು ಅತಿ ಪಾಪ.  ಯುದ್ಧದಲ್ಲಿ ಏನು ಚಂದವಿದೆ?

ಈ ಕ್ಷತ್ರಿಯ ಧರ್ಮವೇ ಪಾಪವು. ನಾವಾದರೋ ಕ್ಷತ್ರಿಯರಾಗಿ ಹುಟ್ಟಿದ್ದೇವೆ. ಇದು ನಮ್ಮ ಧರ್ಮವಾಗಲೀ ಅಥವಾ ಅಧರ್ಮವಾಗಲೀ ನಮಗೆ ಬೇರೆ ಯಾವ ವೃತ್ತಿಯೂ ನಿಶೇದವಾಗಿದೆ. ಶೂದ್ರರು ಸೇವೆಯನ್ನು ಮಾಡುತ್ತಾರೆ. ವೈಶ್ಯರು ವ್ಯಾಪಾರಮಾಡಿ ಜೀವಿಸುತ್ತಾರೆ. ನಾವು ವಧಿಸಿ ಜೀವಿಸುತ್ತೇವೆ. ಬ್ರಾಹ್ಮಣರು ಭಿಕ್ಷಾಪಾತ್ರೆಯನ್ನು ಬಳಸುತ್ತಾರೆ. ಕ್ಷತ್ರಿಯನು ಕ್ಷತ್ರಿಯನನ್ನು ಕೊಲ್ಲುತ್ತಾನೆ. ಮೀನು ಮೀನಿನಿಂದ ಜೀವಿಸುತ್ತದೆ. ನಾಯಿಯು ನಾಯಿಯನ್ನು ಕೊಲ್ಲುತ್ತದೆ.

ನಡೆದುಕೊಂಡು ಬಂದಿರುವ ಧರ್ಮವನ್ನು ನೋಡು! ಯುದ್ಧದಲ್ಲಿ ನಿತ್ಯವೂ ಕಲಿಯಿರುತ್ತಾನೆ. ಹೋರಾಟದಲ್ಲಿ ಪ್ರಾಣಗಳು ಹೋಗುತ್ತವೆ. ಬಲವು ನೀತಿ ಮಾತ್ರ. ಜಯ-ಅಪಜಯಗಳು ಅದೃಷ್ಟ. ಜೀವನ-ಮರಣಗಳು ಭೂತಗಳ ಸ್ವ ಇಚ್ಛೆಯಂತೆ ನಡೆಯುವುದಿಲ್ಲ. ಸುಖ ದುಃಖಗಳೆರಡೂ ಕಾಲ ಬಂದೊದಗದೇ ಬರಲಾರವು. ಒಬ್ಬನೇ ಹಲವರನ್ನು ಕೊಲ್ಲಬಹುದು ಅಥವಾ ಹಲವರು ಸೇರಿ ಒಬ್ಬನನ್ನೇ ಕೊಲ್ಲಬಹುದು. ಶೂರನು ಕಾಪುರುಷನನ್ನೂ ಅಯಶಸ್ವಿಯು ಯಶಸ್ವಿಯನ್ನು ಕೊಲ್ಲಬಹುದು. ಇಬ್ಬರಲ್ಲಿ ಯಾರಿಗೂ ಜಯವಾಗಬಹುದು. ಇಬ್ಬರಲ್ಲಿ ಯಾರಿಗೂ ಸೋಲಾಗಬಹುದು. ಅವನತಿಯೂ ಹಾಗೆಯೇ. ಅದರಿಂದ ಓಡಿ ಹೋದರೆ ನಾಶ ಮತ್ತು ಮರಣ ಎರಡೂ. ಹೇಗೆ ನೋಡಿದರೂ ಯುದ್ಧವು ಕೆಟ್ಟದ್ದು. ಯಾವ ಕೊಲೆಗಾರನನ್ನು ತಿರುಗಿ ಕೊಲ್ಲುವುದಿಲ್ಲ?

ಸತ್ತವರಿಗೆ ಸೋಲು-ಗೆಲವುಗಳೆರಡೂ ಒಂದೇ! ಪರಾಜಯವು ಮರಣಕ್ಕಿಂತ ಬೇರೆಯೆಂದು ನನಗನ್ನಿಸುವುದಿಲ್ಲ. ಯಾರದ್ದು ಗೆಲುವೋ ಅವರದ್ದೂ ಅಪಚಯವು ನಿಶ್ಚಿತವಾದುದು. ಕೊನೆಯಲ್ಲಿ ಬೇರೆ ಯಾರೋ ಅವನಿಗೆ ಪ್ರಿಯರಾದವರನ್ನು ಕೊಲ್ಲುತ್ತಾರೆ. ಅವನ ಅಂಗಾಂಗಗಳು ಬಲಹೀನವಾದಾಗ, ಪುತ್ರ ಭ್ರಾತರನ್ನು ಕಾಣದೇ ಎಲ್ಲಕಡೆಯಿಂದಲೂ ಜೀವನದಲ್ಲಿ

ಜಿಗುಪ್ಸೆಯು ಬೆಳೆಯುತ್ತದೆ. ಯಾರು ವೀರರಾಗಿರುವರೋ, ಮಾನವಂತರೋ, ಆರ್ಯರೋ, ಕರುಣವೇದಿನಿಗಳೋ ಅವರೇ ಯುದ್ಧದಲ್ಲಿ ಸಾಯುತ್ತಾರೆ. ಕೀಳು ಜನರು ತಪ್ಪಿಸಿಕೊಂಡು ಬಿಡುತ್ತಾರೆ. ಇತರರನ್ನು ಕೊಂದನಂತರವೂ ನಿತ್ಯ ಪಶ್ಚಾತ್ತಾಪವು ಇದ್ದೇ ಇರುತ್ತದೆ. ಇದರ ಫಲಿತಾಂಶವು ಪಾಪವೇ. ಯಾಕೆಂದರೆ ಉಳಿದವರು ಉಳಿದುಕೊಳ್ಳುತ್ತಾರಲ್ಲವೇ? ಉಳಿದವರು ಕೂಡ ಬಲವನ್ನು ಮರಳಿ ಪಡೆದು ಉಳಿದವರನ್ನು ಸಂಪೂರ್ಣವಾಗಿ ಕೊಲ್ಲಲು, ವೈರಕ್ಕೆ ಅಂತಿಮ ವಿಧಿಯನ್ನು ನೀಡಲು ಪ್ರಯತ್ನಿಸುತ್ತಾರೆ. ಜಯವು ವೈರಕ್ಕೆ ಕಾರಣವಾಗುತ್ತದೆ ಯಾಕೆಂದರೆ ಸೋತವರು ದುಃಖಿತರಾಗಿಯೇ ಇರುತ್ತಾರೆ.

ಆದರೆ ಜಯಾಪಜಯಗಳನ್ನು ತೊರೆದು ಶಾಂತಿಯನ್ನು ಹುಡುಕಿದವನೇ ಸುಖವಾಗಿ ನಿದ್ರಿಸಬಲ್ಲನು. ವೈರವನ್ನು ಹುಟ್ಟಿಸಿದ ಪುರುಷನು, ಮನೆಯಲ್ಲಿ ಸರ್ಪಗಳು ತುಂಬಿಯೆವೋ ಎಂಬಂತೆ ಮನಸ್ಸಿನಲ್ಲಿ ಚಿಂತಿಸುತ್ತಾ ನಿತ್ಯವೂ ದುಃಖದಲ್ಲಿ ಮಲಗುತ್ತಾನೆ. ಎಲ್ಲರನ್ನೂ ನಾಶಪಡಿಸಿದರೆ ಯಶಸ್ಸು ಅವನನ್ನು ತೊರೆಯುತ್ತದೆ. ಸರ್ವಭೂತಗಳಲ್ಲಿ ಶಾಶ್ವತವಾದ ಅಕೀರ್ತಿಯನ್ನು ತಂದುಕೊಳ್ಳುತ್ತಾನೆ. ತುಂಬಾ ಕಾಲದಿಂದ ಇದ್ದರೂ ವೈರವು ಶಾಂತಗೊಳ್ಳುವುದಿಲ್ಲ. ಕುಟುಂಬದಲ್ಲಿ ಹೊಸ ಪುರುಷನು ಹುಟ್ಟುವವರೆಗೆ ಅದನ್ನೇ ಹೇಳಿಕೊಂಡು

ಬರುತ್ತಾರೆ. ವೈರವು ವೈರದಿಂದ ಉಪಶಮನವಾಗುವುದಿಲ್ಲ. ಹವಿಸ್ಸಿನಿಂದ ಅಗ್ನಿಯು ಇನ್ನೂ ಚೆನ್ನಾಗಿ ಉರಿಯುವಂತೆ ಬೆಳೆಯುತ್ತ ಹೋಗುತ್ತದೆ. ಇದನ್ನು ಶಾಂತಗೊಳಿಸಲು ಬೇರೆ ಯಾವ ದಾರಿಯೂ ಇಲ್ಲ. ಕೊನೆಯವರೆಗೂ ಈ ಅಂತರವು ಉಳಿದುಕೊಳ್ಳುತ್ತದೆ. ಇದೇ ಭೇದವನ್ನುಂಟುಮಾಡುವವರ ನಿರಂತರ ದೋಷ.

ಪೌರುಷವೇ ಹೃದವನ್ನು ಬಾಧಿಸುವ ಮಹಾ ರೋಗ. ಅದನ್ನು ತ್ಯಜಿಸುವುದರಿಂದ ಅಥವಾ ಮನಸ್ಸನ್ನು ಹಿಂದೆ ತೆಗೆದುಕೊಳ್ಳುವುದರ ಮೂಲಕ ಮಾತ್ರ ಶಾಂತಿಯನ್ನು ಪಡೆಯಬಹುದು. ಅಥವಾ ವೈರಿಗಳನ್ನು ಬುಡಸಹಿತ ನಾಶಗೊಳಿಸುವುದರಿಂದ ಇದೇ ಫಲವನ್ನು ಪಡೆಯಬಹುದಾದರೂ ಅದು ತುಂಬಾ ಕ್ರೂರವೆನಿಸುತ್ತದೆ. ತ್ಯಾಗದಿಂದ ಕೂಡ ಶಾಂತಿಯು ಬರುವುದಾದರೂ ಅದು ವಧೆಯಂತೆಯೇ. ಯಾಕೆಂದರೆ ತನಗೂ ಮತ್ತು ವೈರಿಗಳಿಗೂ ಸಾವಿನ ಸಂಶಯವು ಇದ್ದೇ ಇರುತ್ತದೆ. ನಾವು ನಮ್ಮ ರಾಜ್ಯವನ್ನು ತ್ಯಜಿಸಲೂ ಇಚ್ಛಿಸುವುದಿಲ್ಲ. ಕುಲಕ್ಷಯವನ್ನೂ ಬಯಸುವುದಿಲ್ಲ. ಶರಣು ಹೋಗುವುದರಿಂದ ದೊರೆಯುವ ಶಾಂತಿಯೇ ದೊಡ್ಡದು. ಎಲ್ಲರೀತಿಯಲ್ಲಿ ಪ್ರಯತ್ನಿಸುವವರು ಯುದ್ಧವನ್ನು ಬಯಸುವುದಿಲ್ಲ. ಆದರೆ ಅವರ ಶಾಂತಿಯ ಕೈಯನ್ನು ತಿರಸ್ಕರಿದರೆ ಯುದ್ಧವು ವಿನಿಶ್ಚಿತ. ಮಾತುಕತೆಗಳು

ಯಶಸ್ವಿಯಾಗದೇ ಇದ್ದಾಗ ಪರಿಣಾಮವು ದಾರುಣವಾದುದು. ಅದು ತೋಳಗಗಳ ಜಗಳದಂತೆ ಎಂದು ಪಂಡಿತರು ಕಂಡುಕೊಂಡಿದ್ದಾರೆ. ಬಾಲಗಳನ್ನು ಅಲ್ಲಾಡಿಸುವುದರಿಂದ ಪ್ರಾರಂಭವಾಗುತ್ತದೆ, ನಂತರ ಬೊಗಳುವುದು, ಅದಕ್ಕುತ್ತರವಾಗಿ ಮತ್ತೊಮ್ಮೆ ಬೊಗಳಿಕೆ, ಹಿಂದೆ ಸರಿಯುವುದು, ಹಲ್ಲುಗಳನ್ನು ಕಡಿಯುವುದು, ಜೋರಾದ ಬೊಗಳಿಕೆ ಮತ್ತು ನಂತರ ಕಚ್ಚಾಟ. ಅವುಗಳಲ್ಲಿ ಬಲಶಾಲಿಯಾದುದು ಗೆದ್ದು ಮಾಂಸದ ತುಂಡನ್ನು ತಿನ್ನುತ್ತದೆ. ಮನುಷ್ಯರಲ್ಲಿಯೂ ಹೀಗೆಯೇ ನಡೆಯುತ್ತದೆ. ಅದರಲ್ಲಿ ವಿಶೇಷವಾದುದು ಏನೂ ಇಲ್ಲ. ಯಾವಾಗಲೂ ಬಲಶಾಲಿಗಳು ದುರ್ಬಲರೊಂದಿಗೆ ಹೀಗೆಯೇ ನಡೆದುಕೊಳ್ಳುತ್ತಾರೆ - ಅನಾದರಣೆ ಮತ್ತು ವಿರೋಧ. ದುರ್ಬಲನೇ ಶರಣುಹೋಗುತ್ತಾನೆ.

ತಂದೆ, ರಾಜ ಮತ್ತು ವೃದ್ಧರು ಸರ್ವತಾ ಗೌರವಕ್ಕೆ ಅರ್ಹರು. ಆದುದರಿಂದಲೇ ಧೃತರಾಷ್ಟ್ರನನ್ನು ನಾವು ಗೌರವಿಸುತ್ತೇವೆ ಮತ್ತು ಪೂಜಿಸುತ್ತೇವೆ. ಆದರೆ ಧೃತರಾಷ್ಟ್ರನ ಪುತ್ರಸ್ನೇಹವಾದರೋ ಬಲವಾದದ್ದು. ಅವನು ಪುತ್ರನ ವಶದಲ್ಲಿ ನಮ್ಮ ಶರಣಾಗತಿಯನ್ನು ಪರಿಹಾಸಿಸುತ್ತಾನೆ. ಬಂದೊದಗಿದ ಈ ಸಮಯದಲ್ಲಿ ನಿನಗೇನಿಸುತ್ತದೆ? ಮಾಧವ! ನಾವು ಹೇಗೆ ಅರ್ಥ ಮತ್ತು ಧರ್ಮಗಳು ಕಡಿಮೆಯಾಗದಂತೆ

ನಡೆದುಕೊಳ್ಳಬಹುದು? ಈ ರೀತಿಯ ಕಷ್ಟ ಬಂದೊಗಿರುವಾಗ ನಿನ್ನನ್ನು ಬಿಟ್ಟು ಬೇರೆ ಯಾರಲ್ಲಿ ನಾನು ವಿಚಾರಮಾಡಬಹುದು? ಎಲ್ಲವನ್ನೂ ನಿರ್ಧರಿಸಬಲ್ಲ ನೀನಲ್ಲದೇ ನಮಗೆ ಎಲ್ಲ ಕೆಲಸಗಳಲ್ಲಿ ದಾರಿಯನ್ನು ತಿಳಿದಿರುವ, ಒಳ್ಳೆಯದನ್ನೇ ಬಯಸುವ ಪ್ರಿಯನು ಬೇರೆ ಯಾರಿದ್ದಾರೆ?"

ಹೀಗೆ ಹೇಳಿದ ಧರ್ಮರಾಜನಿಗೆ ಜನಾರ್ದನನು ಉತ್ತರಿಸಿದನು:

"ನಿಮ್ಮಿಬ್ಬರ ಒಳಿತಿಗಾಗಿ ಕುರುಸಂಸದಕ್ಕೆ ಹೋಗುತ್ತೇನೆ. ನಿನ್ನ ಲಾಭವನ್ನು ಅಪಹರಿಸದೇ ಶಾಂತಿಯು ದೊರೆಯಿತೆಂದರೆ ಅದು ನನ್ನ ಮಹಾ ಪುಣ್ಯವಾಗುತ್ತದೆ. ಹಾಗೆ ನಡೆದರೆ ಫಲವು ಮಹತ್ತರವಾಗಿರುತ್ತದೆ. ಹೋರಾಡಲು ಸಿದ್ಧರಾಗಿರುವ ಕುರು-ಸೃಂಜಯರು, ಪಾಂಡವರು, ಧಾರ್ತರಾಷ್ಟ್ರರು ಮತ್ತು ಇಡೀ ಭೂಮಿಯನ್ನೇ ಮೃತ್ಯುಪಾಶದಿಂದ ಬಿಡುಗಡೆಗೊಳಿಸುತ್ತೇನೆ."

ಯುಧಿಷ್ಠಿರನು ಹೇಳಿದನು:

"ಕೃಷ್ಣ! ನೀನು ಕುರುಗಳಲ್ಲಿಗೆ ಹೋಗುವುದಕ್ಕೆ ನಾನು ಒಪ್ಪುವುದಿಲ್ಲ. ಎಷ್ಟೇ ಸೂಕ್ತವಾಗಿದ್ದರೂ ನಿನ್ನ ಮಾತನ್ನು ಸುಯೋಧನನು ನಡೆಸುವುದಿಲ್ಲ. ಎಲ್ಲ ಪಾರ್ಥಿವರೂ ಕ್ಷತ್ರಿಯರೂ ಸುಯೋಧನನ ವಶದಲ್ಲಿ ಬಂದಿದ್ದಾರೆ. ಅವರ ಮಧ್ಯೆ ನೀನು ಹೋಗುವುದು ನನಗಿಷ್ಟವಿಲ್ಲ. ಮಾಧವ!

ನಿನಗೇನಾದರೂ ಆದರೆ ಪ್ರಪಂಚದ ಯಾವುದೂ - ಸಂಪತ್ತು, ದೇವತ್ವ, ಅಮರರ ಎಲ್ಲ ಐಶ್ವರ್ಯ – ನಮಗೆ ಸುಖವನ್ನು ತರಲಾರವು."

ಭಗವಂತನು ಹೇಳಿದನು:

"ಮಹಾರಾಜ! ಧಾರ್ತರಾಷ್ಟ್ರನ ದುಷ್ಟತನವನ್ನು ಬಲ್ಲೆ. ಆದರೆ ಇದರಿಂದ ನಾವು ಸರ್ವ ಲೋಕಗಳಲ್ಲಿ ಮಹೀಕ್ಷಿತರ ಮಾತಿಗೆ ಬರುವುದಿಲ್ಲ. ಸಿಂಹದ ಎದಿರು ಇತರ ಮೃಗಗಳಂತೆ ಎಲ್ಲ ರಾಜರು ಒಟ್ಟಿಗೇ ಬಂದರೂ ಕ್ರುದ್ಧನಾದ ನನ್ನ ಎದಿರು ನಿಲ್ಲಲು ಸಾಕಾಗಲಿಕ್ಕಿಲ್ಲ. ಅವರು ನನ್ನೊಡನೆ ಏನಾದರೂ ಕೆಟ್ಟದ್ದಾಗಿ ನಡೆದುಕೊಂಡರೆ ಎಲ್ಲ ಕುರುಗಳನ್ನೂ ಸುಟ್ಟುಬಿಡುತ್ತೇನೆ ಎಂದು ನಿಶ್ಚಯಿಸಿದ್ದೇನೆ. ನಾನು ಅಲ್ಲಿಗೆ ಹೋಗುವುದು ನಿರರ್ಥಕವಾಗುವುದಿಲ್ಲ. ನಮಗೆ ಎಂದಾದರೂ ಏನಾದರೂ ಲಭ್ಯವಾಗಿಯೇ ಆಗುತ್ತದೆ. ನೀನು ಕೆಟ್ಟ ಮಾತಿಗೆ ಬರಬಾರದೆಂದಷ್ಟೇ!"

ಯುಧಿಷ್ಠಿರನು ಹೇಳಿದನು:

"ಕೃಷ್ಣ! ನಿನಗೆ ಇಷ್ಟವಾಗುವುದಾದರೆ ಕೌರವರಲ್ಲಿಗೆ ಹೋಗು. ಮಂಗಳವಾಗಲಿ! ಯಶಸ್ವಿಯಾಗಿ, ಸುರಕ್ಷಿತನಾಗಿ ನಿನ್ನ ಮರಳುವಿಕೆಯನ್ನು ಕಾಯುತ್ತಿರುತ್ತೇನೆ. ಕುರುಗಳಲ್ಲಿಗೆ ಹೋಗಿ, ಎಲ್ಲರೂ ಸ್ನೇಹ ಮತ್ತು ಸಂತೋಷದಿಂದ ಒಟ್ಟಿಗೇ ಇರುವ

ಹಾಗೆ ಭಾರತರನ್ನು ಶಾಂತಗೊಳಿಸು. ನನ್ನ ತಮ್ಮನಂತಿರುವೆ. ನನ್ನ ಮತ್ತು ಬೀಭತ್ಸುವಿನ ಪ್ರಿಯ ಸಖನಾಗಿರುವೆ. ನಿನ್ನ ಸ್ನೇಹದಲ್ಲಿ ಸ್ವಲ್ಪವೂ ಶಂಕೆಯಿಲ್ಲ. ನಮಗೆ ಒಳ್ಳೆಯದನ್ನು ತರುತ್ತೀಯೆ. ನಮ್ಮನ್ನು ತಿಳಿದಿದ್ದೀಯೆ. ಅವರನ್ನು ತಿಳಿದಿದ್ದೀಯೆ. ಒಳ್ಳೆಯದೇನೆಂದು ತಿಳಿದಿದ್ದೀಯೆ. ಮಾತನ್ನು ತಿಳಿದಿದ್ದೀಯೆ. ನಮ್ಮ ಹಿತದಲ್ಲಿರುವ ಏನನ್ನೂ ಸುಯೋಧನನಿಗೆ ಹೇಳು. ಶಾಂತಿಯಾಗಲೀ ಅಥವಾ ಯುದ್ಧವಾಗಲೀ, ಯಾವುದು ಧರ್ಮಕ್ಕೆ ಜೋಡಿಕೊಂಡಿದೆಯೋ ಅದೇ ಮಾತನ್ನು ಅವರಿಗೆ ಹೇಳು."

## ಕೃಷ್ಣನು ರಾಯಭಾರಕ್ಕೆ ಒಪ್ಪಿಕೊಂಡಿದುದು

ಭಗವಂತನು ಹೇಳಿದನು:

"ಸಂಜಯನ ಮಾತನ್ನೂ ನಿನ್ನದನ್ನೂ ಕೇಳಿದ್ದೇನೆ. ಅವರ ಮತ್ತು ನಿನ್ನ ಎಲ್ಲ ಅಭಿಪ್ರಾಯಗಳನ್ನೂ ತಿಳಿದಿದ್ದೇನೆ. ನಿನ್ನ ಬುದ್ಧಿಯು ಧರ್ಮವನ್ನು ಆಶ್ರಯಿಸಿದ್ದರೆ ಅವರ ಮತಿಯು ವೈರವನ್ನು ಆಶ್ರಯಿಸಿದೆ. ಯುದ್ಧವಿಲ್ಲದೇ ಏನೆಲ್ಲ ದೊರೆಯುತ್ತದೆಯೋ ಅದು ನಿನ್ನ ಬಹುಮತವಾಗುತ್ತದೆ. ವಿಶಾಂಪತೇ! ಭಿಕ್ಷೆಬೇಡುವುದು ಕ್ಷತ್ರಿಯನ ಕೆಲಸವಲ್ಲ. ಆಶ್ರಮಗಳನ್ನು ತಿಳಿದವರು ಕ್ಷತ್ರಿಯರು ಏನನ್ನು ಬೇಡಬೇಕೆಂದು ಹೇಳಿದ್ದಾರೆ. ಸಂಗ್ರಾಮದಲ್ಲಿ ಜಯ ಅಥವಾ ಸಾವು. ಇದೇ ಸನಾತನವಾಗಿ

ಧಾತ್ರನು ತೋರಿಸಿಕೊಟ್ಟ ಕ್ಷತ್ರಿಯರ ಸ್ವಧರ್ಮ. ಹೇಡಿತನವು ಹೇಳಿದ್ದುದಲ್ಲ. ಹೇಡಿತನವನ್ನು ಬಳಸಿ ಜೀವನ ಮಾಡುವುದು ಶಕ್ಯವಿಲ್ಲ. ವಿಕ್ರಮದಿಂದ ಶತ್ರುಗಳನ್ನು ಜಯಿಸು. ಅತಿ ಆಸೆಯಿಂದ ದೀರ್ಘಕಾಲ ಸ್ನೇಹವನ್ನು ಬಳಸಿ, ಸಂತೋಷಗೊಳಿಸಿ ಧಾರ್ತರಾಷ್ಟ್ರರು ಮಿತ್ರರನ್ನು ಮಾಡಿಕೊಂಡಿದ್ದಾರೆ. ಸೇನೆಗಳನ್ನು ಒಟ್ಟುಗೂಡಿಸಿದ್ದಾರೆ. ಅವರು ನಿನ್ನನ್ನು ಎಂದೂ ಸರಿಸಮನೆಂದು ಪರಿಗಣಿಸುವುದಿಲ್ಲ. ಭೀಷ್ಮ, ದ್ರೋಣ, ಕೃಪ, ಮೊದಲಾದವರ ಕಾರಣದಿಂದ ತಾವೇ ಬಲವಂತರೆಂದು ತಿಳಿದುಕೊಂಡಿದ್ದಾರೆ. ಎಲ್ಲಿಯವರೆಗೆ ನೀನು ಕರುಣೆಯಿಂದ ಅವರೊಡನೆ ನಡೆದುಕೊಳ್ಳುತ್ತೀಯೋ ಅಲ್ಲಿಯವರಗೆ ಅವರು ನಿನ್ನ ರಾಜ್ಯವನ್ನು ನಿನ್ನಿಂದ ದೂರವಿಟ್ಟುಕೊಳ್ಳುತ್ತಾರೆ. ಅನುಕ್ರೋಶವಾಗಲೀ, ಕಾರ್ಪಣ್ಯವಾಗಲೀ, ಧರ್ಮಾರ್ಥಕಾರಣವಾಗಲೀ ಧಾರ್ತರಾಷ್ಟ್ರನು ನಿನಗಿಷ್ಟಬಂದಂತೆ ನಡೆದುಕೊಳ್ಳುವಂತೆ ಮಾಡಲಾರವು. ಯಾವಾಗ ನಿನಗೆ ಕೌಪೀನವನ್ನು ತೊಡಿಸಿ ಬಿಟ್ಟರೋ ಆಗ ಅವರು ತಮ್ಮ ತಪ್ಪಿಗೆ ಪರಿತಪಿಸಲಿಲ್ಲ ಎನ್ನುವುದೇ ನಿನಗೆ ಇದರ ಕುರಿತಾದ ಸಾಕ್ಷಿ. ಪಿತಾಮಹ, ದ್ರೋಣ, ಧೀಮತ ವಿದುರ ಮತ್ತು ಎಲ್ಲ ಕುರುಮುಖ್ಯರೂ ನೋಡುತ್ತಿರುವಾಗಲೇ ದಾನಶೀಲನಾದ, ಮೃದುವಾದ, ನಿಯಂತ್ರಣದಲ್ಲಿರುವ, ಧರ್ಮವನ್ನು ಬಯಸುವ, ಮಾತಿನಂತೆ

ನಡೆದುಕೊಳ್ಳುವ ನಿನ್ನನ್ನು ದ್ಯೂತದಲ್ಲಿ ಮೋಸಗೊಳಿಸಿ, ಆ ಕ್ರೂರ ಕರ್ಮದಿಂದ ನಾಚಿ ಮುದುಡಿಹೋಗದೇ ಇದ್ದ ಆ ಪಾಪಿ, ನಡತೆ ವಿಚಾರಗಳಿಲ್ಲದಿರುವವನೊಂದಿಗೆ ಸ್ವಲ್ಪವೂ ಪ್ರೀತಿಯನ್ನು ತೋರಿಸಬೇಡ! ಅವರು ಲೋಕದಲ್ಲಿ ಎಲ್ಲರಿಂದ ವಧಾರ್ಹರು. ಪುನಃ ನಿನ್ನಿಂದಾದರೇನು! ಅವನು ಸಹೋದರರೊಂದಿಗೆ ಜಂಬದಿಂದ ನಗುತ್ತಾ ಹೊಲಸು ಮಾತುಗಳಿಂದ ನಿನ್ನನ್ನು ಈ ರೀತಿ ಹೇಳಿ ನೋಯಿಸಲಿಲ್ಲವೇ? ‘ಈಗ ಪಾಂಡವರಲ್ಲಿ ತಮ್ಮದು ಎಂದು ಹೇಳಿಕೊಳ್ಳುವುದು ಏನೂ ಉಳಿದಿಲ್ಲ! ಅವರ ಹೆಸರೂ ಗೋತ್ರವೂ ಕೂಡ ಅವರದ್ದಾಗಿ ಉಳಿಯುವುದಿಲ್ಲ! ಬಹು ಕಾಲದ ನಂತರ ಅವರ ಪರಾಭವವಾಗುತ್ತದೆ. ತಮ್ಮ ಪ್ರಕೃತಿಯನ್ನು ಕಳೆದುಕೊಂಡು ಪ್ರಕೃತಿಯನ್ನೇ ಸೇರಿಕೊಳ್ಳುತ್ತಾರೆ!’

ನೀನು ವನಕ್ಕೆ ಹೊರಟಿರುವಾಗ ಕುಲಬಾಂಧವರ ನಡುವೆ ಅವನು ಇದು ಮತ್ತು ಇನ್ನೂ ಇತರ ಪೌರುಷದ ಜಂಬದ ಮಾತನಾಡಿದನು. ತಪ್ಪಿಲ್ಲದ ನಿನ್ನನ್ನು ನೋಡಿ ಅಲ್ಲಿ ಸಭೆಯಲ್ಲಿ ಸೇರಿದ್ದ ಎಲ್ಲರೂ ಗಂಟಲಲ್ಲಿ ಕಣ್ಣೀರನ್ನು ತುಂಬಿಸಿಕೊಂಡು ಅಳುತ್ತಾ ಕುಳಿತಿದ್ದರು. ರಾಜರೂ ಬ್ರಾಹ್ಮಣರೂ ಅವನನ್ನು ಅಭಿನಂದಿಸಲಿಲ್ಲ. ಅಲ್ಲಿ ಎಲ್ಲ ಸಭಾಸದರೂ ದುರ್ಯೋಧನನನ್ನು ನಿಂದಿಸಿದರು. ಕುಲೀನನಿಗೆ ನಿಂದೆ ಮತ್ತು ಸಾವಿದೆ. ಆದರೆ ಕುಜೀವಿಕನ ನಿಂದೆಗಿಂತ ಸಾವೇ ಅವನಿಗೆ

ಬೇಕಾದುದಾಗುತ್ತದೆ. ಎಂದು ಭೂಮಿಯ ಸರ್ವ ರಾಜರುಗಳು ಅವನ ನಾಚಿಕೆಗೇಡುತನವನ್ನು ನಿಂದಿಸಿದರೋ ಅಂದೇ ಅವನು ಸತ್ತುಹೋದ! ಯಾರ ಚಾರಿತ್ರ್ಯವು ಈ ರೀತಿ ಇದೆಯೋ ಅವನನ್ನು ಕೊಲ್ಲುವುದು, ಬೇರುಗಳನ್ನು ಕಳೆದುಕೊಂಡು ಕೇವಲ ಬುಡದ ಮೇಲೆ ನಿಂತಿರುವ ಮರವನ್ನು ಕೆಡಹುವಂತೆ, ಅತೀ ಸುಲಭ. ಅನಾರ್ಯನಾದ, ಸರ್ವಲೋಕ್ಕೆ ದುರ್ಮತಿಯಾದ, ಇವನನ್ನು ಸರ್ಪದಂತೆ ಕೊಲ್ಲಬೇಕು. ಶಂಕಿಸಬೇಡ! ಅದೇನೇ ಇದ್ದರೂ, ತಂದೆ ಮತ್ತು ಭೀಷ್ಮರಿಗೆ ಶರಣುಹೋಗುವ ನಿನ್ನ ಈ ಕ್ಷಮಾಬುದ್ಧಿಯು ನನಗೆ ಹಿಡಿಸುತ್ತದೆ.

ನಾನು ಹೋಗಿ ದುರ್ಯೋಧನನ ಕುರಿತು ಇನ್ನೂ ದ್ವಂದ್ವಭಾವವನ್ನು ಹೊಂದಿರುವ ಎಲ್ಲರ ಸಂಶಯವನ್ನು ಕೊನೆಗೊಳಿಸುತ್ತೇನೆ. ರಾಜರುಗಳ ಮಧ್ಯೆ ನಿನ್ನಲ್ಲಿರುವ ಪುರುಷ ಗುಣಗಳ ಮತ್ತು ಅವನ ದುರ್ನಡತೆಯ ಸಂಕೀರ್ತನ ಮಾಡುತ್ತೇನೆ. ಅಲ್ಲಿ ನಾನು ಹೇಳುವ ಧರ್ಮಾರ್ಥಸಂಹಿತವಾದ ಹಿತವಾದ ಮಾತುಗಳನ್ನು ಕೇಳಿ ಸರ್ವ ಪಾರ್ಥಿವರೂ, ನಾನಾ ಜನಪದೇಶ್ವರೂ ನೀನು ಧರ್ಮಾತ್ಮ ಮತ್ತು ಸತ್ಯವನ್ನು ಹೇಳುವವನೆಂದೂ ಅವನು ಲೋಭದಿಂದ ನಡೆದುಕೊಳ್ಳುತ್ತಿದ್ದಾನೆಂದೂ ತಿಳಿಯುತ್ತಾರೆ. ಪೌರ ಜಾನಪದರಲ್ಲಿ, ವೃದ್ಧ ಬಾಲಕರಲ್ಲಿ, ನಾಲ್ಕು

ವರ್ಣದವರು ಸೇರುವಲ್ಲಿ ಅವನೇ ತಪ್ಪಿತಸ್ಥನೆಂದು ಹೇಳುತ್ತೇನೆ. ಶಾಂತಿಯನ್ನು ಅರಸುವಾಗ ನೀನು ಅಲ್ಲಿ ಯಾವ ಅಧರ್ಮವನ್ನೂ ಎಸಗುವುದಿಲ್ಲ. ರಾಜರು ಕುರುಗಳನ್ನೂ ಧೃತರಾಷ್ಟ್ರನನ್ನೂ ನಿಂದಿಸುತ್ತಾರೆ. ಲೋಕವೇ ಅವರನ್ನು ಪರಿತ್ಯಜಿಸಿದಾಗ ಮಾಡುವುದೇನು ಉಳಿಯುತ್ತದೆ? ದುರ್ಯೋಧನನು ಹತನಾದ ನಂತರ ಮಾಡುವುದಾದರೂ ಏನಿದೆ? ಇದನ್ನು ಮನಸ್ಸಿನಲ್ಲಿಟ್ಟುಕೊಂಡು ನಾನು ಕುರುಗಳೆಲ್ಲರ ಬಳಿ ಹೋಗುತ್ತೇನೆ.

ನಿನ್ನ ಲಾಭವನ್ನು ಕಡೆಗೆಣಿಸದೇ ಶಾಂತಿಯನ್ನು ತರಲು ಪ್ರಯತ್ನಿಸುತ್ತೇನೆ ಮತ್ತು ಅದಕ್ಕೆ ಅವರ ಪ್ರತಿಕ್ರಿಯೆಯನ್ನು ಗಮನಿಸುತ್ತೇನೆ. ಕೌರವರ ಯುದ್ಧದ ತಯಾರಿಯನ್ನು ನೋಡಿಕೊಂಡು, ನಿನಗೆ ಜಯವನ್ನು ತರಲು ಹಿಂದಿರುಗುತ್ತೇನೆ. ಏನೇ ಆದರೂ ಅವರೊಂದಿಗೆ ಯುದ್ಧವನ್ನೇ ನಾನು ಶಂಕಿಸುತ್ತಿದ್ದೇನೆ. ನಿಮಿತ್ತಗಳೆಲ್ಲವೂ ನನಗೆ ಅದನ್ನೇ ಸೂಚಿಸುತ್ತಿವೆ. ಮೃಗಪಕ್ಷಿಗಳು ಘೋರವಾಗಿ ಕೂಗುತ್ತಿವೆ. ರಾತ್ರಿಯಾಗುವಾಗ ಆನೆ ಕುದುರೆಗಳು ಘೋರ ರೂಪವನ್ನು ತಾಳುತ್ತಿವೆ. ಮತ್ತು ಬೆಂಕಿಯು ಬಹು ಬಣ್ಣಗಳನ್ನು ತಳೆದು ಘೋರರೋಪಗಳನ್ನು ಕರೆಯುತ್ತಿದೆ. ಮನುಷ್ಯ ಲೋಕವನ್ನು ಕೊನೆಗೊಳಿಸಲು ಘೋರ ಅಂತಕನು ಬರುತ್ತಿದ್ದಾನಲ್ಲದೇ ಈ ರೀತಿ ತೋರಿಸಿಕೊಳ್ಳುತ್ತಿರಲಿಲ್ಲ. ಶಸ್ತ್ರಗಳು, ಬಾಣಗಳು,

ಕವಚಗಳು, ರಥಗಳು, ಆನೆಗಳು ಮತ್ತು ಧ್ವಜಗಳು ಸಿದ್ಧವಾಗಿರಲಿ. ನಿನ್ನ ಎಲ್ಲ ಯೋಧರೂ ತಮ್ಮ ತರಬೇತಿಗಳನ್ನು ಮುಗಿಸಿ, ಕುದುರೆ, ಆನೆ ಮತ್ತು ರಥಗಳಲ್ಲಿ ಸಿದ್ಧರಾಗಿರಲಿ. ಸಂಗ್ರಾಮಕ್ಕೆ ಬೇಕಾದುದೆಲ್ಲವೂ ಸಿದ್ಧವಾಗಿದೆಯೆಂದು ನೋಡಿಕೋ. ಹಿಂದೆ ನಿನ್ನದಾಗಿದ್ದ ಮತ್ತೆ ದ್ಯೂತದಲ್ಲಿ ಅಪಹರಿಸಲ್ಪಟ್ಟ ಸಮೃದ್ಧ ರಾಜ್ಯವನ್ನು ಜೀವವಿರುವವರೆಗೆ ದುರ್ಯೋಧನನು ನಿನಗೆ ಕೊಡಲು ಏನು ಮಾಡಿದರೂ ಸಿದ್ಧನಿರುವುದಿಲ್ಲ."

## ಕೃಷ್ಣ ರಾಯಭಾರಕ್ಕೆ ಭೀಮಸೇನನ ಸಂದೇಶ

ಭೀಮಸೇನನು ಹೇಳಿದನು:

"ಮಧುಸೂದನ! ಕುರುಗಳಿಗೆ ಶಾಂತಿಯಾಗುವ ರೀತಿಯಲ್ಲಿಯೇ ಮಾತನಾಡು. ಯುದ್ಧದ ಭೀತಿಯನ್ನು ಅವರಲ್ಲಿ ಹುಟ್ಟಿಸಬೇಡ! ಅಮರ್ಷಿ, ನಿತ್ಯವೂ ಕೋಪದಲ್ಲಿರುವ, ಇನ್ನೊಬ್ಬರ ಶ್ರೇಯಸ್ಸನ್ನು ದ್ವೇಷಿಸುವ ದುರ್ಯೋಧನನೊಡನೆ ಕಟುವಾಗಿ ಮಾತನಾಡಬೇಡ. ಸೌಮ್ಯವಾಗಿಯೇ ವ್ಯವಹರಿಸು. ಸ್ವಭಾವದಲ್ಲಿಯೇ ಪಾಪಿಷ್ಟನಾಗಿರುವ, ಮನಸ್ಸಿನಲ್ಲಿ ದಸ್ಯುಗಳಿಗೆ ಸಮನಾದ, ಮುಂದಿನ ಆಲೋಚನೆಯೇ ಇಲ್ಲದ, ನಿಷ್ಠೂರೀ, ಮೋಸಗಾರ, ಕ್ರೂರ ಪರಾಕ್ರಮಿ, ತುಂಬಾ ಸಮಯದವರೆಗೆ ಕೋಪವನ್ನಿಟ್ಟುಕೊಳ್ಳುವ, ಪಾಪಾತ್ಮ, ತನ್ನ

ಸಂಪತ್ತನ್ನು ಹಂಚಿಕೊಳ್ಳುವ ಮೊದಲು ಸಾಯುತ್ತೇನೆ ಎನ್ನುವ ದುರ್ಯೋಧನನು ತನಗೆ ಸೇರಿದ್ದು ಎಂದು ತಿಳಿದುದನ್ನು ನಮಗೆ ಕೊಡಲಾರ. ಅಂಥವನೊಡನೆ ಶಾಂತಿಯನ್ನು ಕೇಳುವುದು ಪರಮದುಷ್ಕರವೆಂದು ನನಗನ್ನಿಸುತ್ತದೆ. ಅವನು ತನ್ನ ಮಿತ್ರರನ್ನೂ ಕೀಳಾಗಿ ಕಾಣುತ್ತಾನೆ, ಧರ್ಮವನ್ನು ತೊರೆದಿದ್ದಾನೆ, ಸುಳ್ಳನ್ನು ಪ್ರೀತಿಸುತ್ತಾನೆ, ಮತ್ತು ಸುಹೃದಯರ ಮಾತುಗಳನ್ನೂ ಯೋಚನೆಗಳನ್ನೂ ಸ್ವೀಕರಿಸುವುದಿಲ್ಲ. ಅವನು ಸಿಟ್ಟಿನ ವಶಕ್ಕೆ ಸಿಲುಕಿ ದುಷ್ಟಸ್ವಭಾವವನ್ನು ತಳೆದಿದ್ದಾನೆ. ಹುಲ್ಲು ಕಡ್ಡಿಗಳ ಮೇಲೆ ತೆವಳುವ ಹಾವಿನಂತೆ ಸ್ವಭಾವತಃ ಪಾಪದಿಂದಲೇ ನಡೆಯುತ್ತಾನೆ. ದುರ್ಯೋಧನನ ಸೇನೆಯು ಎಂಥಹುದು, ಅವನ ಶೀಲವು ಎಂಥಹುದು, ಸ್ವಭಾವವು ಎಂಥಹುದು, ಬಲವು ಎಂಥಹುದು ಮತ್ತು ಪರಾಕ್ರಮವು ಎಂಥಹುದು ಎಂದು ಎಲ್ಲವೂ ನಿನಗೆ ತಿಳಿದೇ ಇದೆ. ಹಿಂದೆ ಕುರುಗಳು ಪುತ್ರರೊಂದಿಗೆ ಮತ್ತು ನಮ್ಮೊಂದಿಗೆ ಇಂದ್ರನ ಹಿರಿಯರಂತೆ ಬಂಧುಗಳೊಂದಿಗೆ ಮುದದಿಂದ ಇರುತ್ತಿದ್ದೆವು. ಈಗ ದುರ್ಯೋಧನನ ಕ್ರೋಧದಿಂದಾಗಿ ಛಳಿಗಾಲದ ಕೊನೆಯಲ್ಲಿ ಬೆಂಕಿ ಹತ್ತಿ ಉರಿಯುವ ಕಾಡಿನಂತೆ ಭಾರತರು ಆಗಿದ್ದಾರೆ.

ತಮ್ಮ ಕುಲದವರನ್ನು, ಸುಹೃದಯರನ್ನು ಮತ್ತು ಬಾಂಧವರನ್ನು ನಾಶಗೊಳಿಸಿದ ಹದಿನೆಂಟು ರಾಜರು

ಪ್ರಖ್ಯಾತರು. ಧರ್ಮದ ಪರ್ಯಾಯಕಾಲವು ಬಂದಾಗ ಸಮೃದ್ಧರಾಗಿದ್ದ ಅಸುರರಲ್ಲಿ ತೇಜನಲ್ಲಿ ಅಗ್ನಿಯಂತಿರುವ ಬಲಿಯು ಜನಿಸಿದನು. ಹೈಹಯರಲ್ಲಿ ಉದಾವರ್ತ, ನೀಪರಲ್ಲಿ ಜನಮೇಜಯ, ತಾಲಜಂಘರಲ್ಲಿ ಬಹುಲ, ಕೃಮಿಗಳಲ್ಲಿ ಉದ್ಧತ ವಸು, ಸುವೀರರಲ್ಲಿ ಅಜಬಿಂದು, ಸುರಾಷ್ಟ್ರರಲ್ಲಿ ಕುಶರ್ಧಿಕ, ಬಲೀಹರಲ್ಲಿ ಅರ್ಕಜ, ಚೀಣರಲ್ಲಿ ಧೌತಮೂಲಕ, ವಿದೇಹರಲ್ಲಿ ಹಯಗ್ರೀವ, ಮಹೌಜಸರಲ್ಲಿ ವರಪ್ರ, ಸುಂದರವೇಗರಲ್ಲಿ ಬಾಹು, ದೀಪ್ತಾಕ್ಷಣರಲ್ಲಿ ಪುರೂರವರು, ಚೇದಿ-ಮತ್ಸ್ಯರಲ್ಲಿ ಸಹಜ, ಪ್ರಚೇತರಲ್ಲಿ ಬೃಹದ್ಬಲ, ಇಂದ್ರವತ್ಸರಲ್ಲಿ ಧಾರಣ, ಮುಕುಟರಲ್ಲಿ ವಿಗಾಹನ, ನಂದಿವೇಗರಲ್ಲಿ ಶಮ ಈ ಕುಲಪಾಂಸಕರು ಯುಗಾಂತದಲ್ಲಿ ಕುಲಗಳಲ್ಲಿ ಪುರುಷಾಧಮರಾಗಿ ಜನಿಸಿದರು. ಈ ಯುಗಾಂತ್ಯದಲ್ಲಿ ಕಾಲಸಂಭೃತನಾಗಿ ಕುರುಗಳ ಕುಲದ ಕೆಂಡವಾಗಿ ಪಾಪಪೂರುಷ ದುರ್ಯೋಧನನು ಹುಟ್ಟಿಕೊಂಡಿದ್ದಾನೆ. ಆದುದರಿಂದ ಅವನೊಂದಿಗೆ ಮೃದುವಾಗಿ, ನಿಧಾನವಾಗಿ ಧರ್ಮಾರ್ಥಗಳನ್ನು ಸೇರಿಸಿ, ಅವನ ಇಚ್ಛೆಗೆ ಕೂಡಿಬರುವಂತೆ ಮಾತನಾಡು. ಉಗ್ರವಾಗಿ ಪರಾಕ್ರಮದಿಂದ ಬೇಡ. ಭರತರನ್ನು ನಾಶಗೊಳಿಸುವ ಬದಲಾಗಿ ನಾವು ಎಲ್ಲರೂ ದುರ್ಯೋಧನನಿಗೆ ಶಿರಬಾಗಿಸಿ ವಿನಯದಿಂದ ನಡೆದುಕೊಳ್ಳುತ್ತೇವೆ. ಕುರುಗಳೊಂದಿಗೆ ಅವನು

ನಮ್ಮ ವಿಷಯದಲ್ಲಿ ಉದಾಸೀನನಾಗುವಂತೆ ಏನನ್ನಾದರೂ ಮಾಡು. ಕುರುಗಳನ್ನು ವಿನಾಶವು ಮುಟ್ಟದಿರಲಿ. ಭ್ರಾತೃಗಳಲ್ಲಿ ಉತ್ತಮ ಭ್ರಾತೃತ್ವವಿರುವಂತೆ ಧಾರ್ತರಾಷ್ಟ್ರರು ಪ್ರಶಾಂತರಾಗುವಂತೆ ವೃದ್ಧ ಪಿತಾಮಹನಲ್ಲಿ ಮತ್ತು ಸಭಾಸದರಲ್ಲಿ ಮಾತನಾಡು. ಇದು ನಾನು ಹೇಳುವಂಥಹುದು. ರಾಜನೂ ಇದಕ್ಕೆ ಒಪ್ಪಿಗೆಯನ್ನಿತ್ತಿದ್ದಾನೆ. ಅರ್ಜುನನಲ್ಲಿ ದಯೆಯಿದೆ. ಅರ್ಜುನನಂತೂ ಯುದ್ಧವನ್ನು ಬಯಸುವುದಿಲ್ಲ.”

## ಕೃಷ್ಣನು ಭೀಮನನ್ನು ಉತ್ತೇಜಿಸಿದುದು

ಭೀಮನ ಈ ಅಭೂತಪೂರ್ವ, ಮೃದು ಮಾತುಗಳನ್ನು ಕೇಳಿ ಮಹಾಬಾಹು ಕೇಶವನು ಜೋರಾಗಿ ನಕ್ಕನು. ಪರ್ವತವೇ ಹಗುರಾಗಿದೆಯೋ, ಬೆಂಕಿಯು ತಣ್ಣಗಾಗಿದೆಯೋ ಎಂದು ಭಾವಿಸಿ ರಾಮನ ತಮ್ಮ, ಶೌರಿ, ಶಾಂಗ್ರಧನ್ವಿಯು ಬೆಂಕಿಯನ್ನು ಇನ್ನೂ ಉರಿಸುವ ಗಾಳಿಯಂತಿರುವ ಮಾತುಗಳಿಂದ, ಕೃಪಾಭರಿತನಾಗಿ ಕುಳಿತುಕೊಂಡಿದ್ದ ವೃಕೋದರ ಭೀಮನಿಗೆ ಹೇಳಿದನು:

“ಭೀಮಸೇನ! ಬೇರೆ ಎಲ್ಲ ಸಮಯಗಳಲ್ಲಿ ನೀನು ಕೊಲ್ಲುವುದರಿಂದ ಆನಂದಪಡುವ ಕ್ರೂರ ಧಾರ್ತರಾಷ್ಟ್ರರನ್ನು ವಿಮರ್ದಿಸುವ ಯುದ್ಧವೇ ಬೇಕೆಂದು ಹೇಳುತ್ತಿದ್ದೆ. ನೀನು ನಿದ್ದೆಮಾಡುವುದಿಲ್ಲ, ತಲೆಕೆಳಗೆ ಮಾಡಿ ಮಲಗಿಕೊಂಡಿದ್ದರೂ

ಎಚ್ಚೆತ್ತೇ ಇರುತ್ತೀಯೆ. ಯಾವಾಗಲೂ ಘೋರವಾದ, ನೋಯಿಸುವ, ಸಿಟ್ಟಿನ ಮಾತನ್ನೇ ಆಡುತ್ತಿರುತ್ತೀಯೆ. ನೀನು ಸಿಟ್ಟಿನಿಂದ ಶಾಂತಿಯಿಲ್ಲದೇ ಹೊಗೆತುಂಬಿದ ಬೆಂಕಿಯಂತೆ ಸಂತಪ್ತನಾಗಿ ಬೆಂಕಿಯ ನಿಟ್ಟಿಸುರನ್ನು ಬಿಡುತ್ತಿರುತ್ತೀಯೆ. ಭಾರವನ್ನು ಹೊರಲಾರದ ದುರ್ಬಲನಂತೆ ನರಳುತ್ತಾ ಏಕಾಂತದಲ್ಲಿ ಬೇರೆಯಾಗಿಯೇ ಮಲಗುತ್ತೀಯೆ. ನಿನ್ನನ್ನು ಚೆನ್ನಾಗಿ ತಿಳಿಯದ ಜನರು ನೀನು ಹುಚ್ಚನೋ ಎಂದೂ ಆಡಿಕೊಳ್ಳುತ್ತಾರೆ. ಮೇಯುವ ಆನೆಯಂತೆ ಮರಗಳನ್ನು ಕಿತ್ತು ನಿರ್ಮೂಲನ ಮಾಡುತ್ತೀಯೆ ಮತ್ತು ಜೋರಾಗಿ ಕಿರುಚಿ ಕಾಲಿನಿಂದ ಭೂಮಿಯನ್ನು ಮೆಟ್ಟಿ ತುಳಿದು ಓಡುತ್ತಿರುತ್ತೀಯೆ. ನೀನು ಈ ಜನರೊಂದಿಗೆ ರಮಿಸುತ್ತಿಲ್ಲ, ಅವರಿಂದ ದೂರವಿರಲು ಇಷ್ಟಪಡುತ್ತೀಯೆ. ರಾತ್ರಿಯಾಗಲೀ ಹಗಲಾಗಲೀ ನೀನು ಇನ್ನೊಬ್ಬರು ಬರುವುದನ್ನು ಇಷ್ಟಪಡುವುದಿಲ್ಲ. ಅಕಸ್ಮಾತ್ತಾಗಿ ನಗುತ್ತಾ ಅಥವಾ ಅಳುತ್ತಿರುವಂತೆ ಅಥವಾ ಬಹಳ ಹೊತ್ತು ಕಣ್ಣನ್ನು ಮುಚ್ಚಿಕೊಂಡು ನಿನ್ನ ಮೊಳಕಾಲಮೇಲೆ ತಲೆಯನ್ನಿರಿಸಿ ಕುಳಿತುಕೊಂಡಿರುತ್ತೀಯೆ. ಕೆಲವೊಮ್ಮೆ ಕಣ್ಣುಹುಬ್ಬುಗಳನ್ನು ಗಂಟುಹಾಕಿಕೊಂಡಿರುತ್ತೀಯೆ ಅಥವಾ ತುಟಿಯನ್ನು ನೆಕ್ಕುತ್ತಿರುತ್ತೀಯೆ. ಇವೆಲ್ಲವೂ ನೀನು ಸಿಟ್ಟಾಗಿರುವುದರಿಂದಲೇ ತೋರುತ್ತವೆ.

‘ಹೇಗೆ ಪೂರ್ವದಲ್ಲಿ ಸೂರ್ಯನು ಬೆಳಕನ್ನು ಪಸರಿಸಿ ಕಾಣಿಸಿಕೊಳ್ಳುತ್ತಾನೆ, ಮತ್ತು ಹೇಗೆ ಧೃವ ನಕ್ಷತ್ರವನ್ನು ಸುತ್ತುವರಿದು ರಶ್ಮಿವಂತನು ಪಶ್ಚಿಮದಲ್ಲಿ ಮುಳುಗುತ್ತಾನೋ ಹಾಗೆ ನಾನು ಸತ್ಯವನ್ನು ಹೇಳುತ್ತಿದ್ದೇನೆ - ಅದನ್ನು ಅತಿಕ್ರಮಿಸುವುದಿಲ್ಲ – ಈ ಅಮರ್ಷಣ ದುರ್ಯೋಧನನನ್ನು ನಾನು ಗದೆಯಿಂದ ಹೊಡೆದು ಕೊಲ್ಲುತ್ತೇನೆ.’ ಎಂದು ನಿನ್ನ ಸಹೋದರರ ಮಧ್ಯೆ, ಹಿಡಿದ ಗದೆಯ ಆಣೆಯಿಟ್ಟು ನೀನು ಪ್ರತಿಜ್ಞೆ ಮಾಡಿದ್ದೆ. ಆ ನಿನ್ನ ಬುದ್ಧಿಯೇ ಇಂದು ಈ ಶಾಂತಿಯ ಮಾತುಗಳನ್ನಾಡುತ್ತಿದೆಯೇ? ಅಹೋ ಭೀಮ! ಯುದ್ಧದ ಸಮಯವು ಬಂದಿರುವಾಗ, ಯದ್ಧದ ಲಕ್ಷಣಗಳು ಹೌದೋ ಅಲ್ಲವೋ ಎಂದು ಕಾಣುತ್ತಿರುವಾಗ ನೀನು ಭೀತಿಗೊಳ್ಳಲಿಲ್ಲ ತಾನೇ? ಸ್ವಪ್ನದಲ್ಲಿಯಾಗಲೀ ಎಚ್ಚರವಿರುವಾಗಲಾಗಲೀ ನೀನು ಕೆಟ್ಟ ನಿಮಿತ್ತಗಳನ್ನು ನೋಡುತ್ತಿದ್ದೀಯಾ? ಅದಕ್ಕೇ ಶಾಂತಿಯನ್ನು ಬಯಸುತ್ತಿದ್ದೀಯಾ? ತನ್ನಲ್ಲಿ ಪುರುಷತ್ವವನ್ನು ಕಾಣದ ನಪುಂಸಕನೇನಾದರೂ ಆಗಿಬಿಟ್ಟಿದ್ದೀಯಾ? ಹೇಡಿತನವು ನಿನ್ನನ್ನು ಆವರಿಸಿದೆ. ಅದರಿಂದಲೇ ನಿನ್ನ ಮನಸ್ಸು ವಿಕೃತವಾಗಿದೆ. ನಿನ್ನ ಹೃದಯವು ಕಂಪಿಸುತ್ತಿದೆ. ಮನಸ್ಸು ನಿರಾಶೆಗೊಂಡಿದೆ. ನಿನ್ನ ತೊಡೆಗಳು ಮರಗಟ್ಟಿವೆ. ಆದುದರಿಂದಲೇ ನೀನು ಶಾಂತಿಯನ್ನು ಬಯಸುತ್ತಿದ್ದೀಯೆ! ಮನುಷ್ಯನ ಬದಲಾಗುವ ಚಿತ್ತವು ಭಿರುಗಾಳಿಯ ವೇಗದಿಂದ

ಸುಯ್ದಾಡುವ ಶಾಲ್ಮಲೀ ಮರದ ಮೇಲಿನ ಗಡ್ಡೆಯಂತೆ! ಹಸುವಿಗೆ ಮಾತು ಹೇಗೋ ಹಾಗೆ ಈ ಅಭಿಪ್ರಾಯವು ನಿನಗೆ ಸ್ವಾಭಾವಿಕವಾದುದಲ್ಲ. ಇದು ಮುಳುಗುತ್ತಿರುವ ಹಡಗಿನಲ್ಲಿರುವ ಸಮುದ್ರಯಾನಿಗಳಂತಿರುವ ಪಾಂಡುಪುತ್ರರ ಮನಸ್ಸುಗಳನ್ನು ಕುಸಿಯುತ್ತದೆ. ನಿನಗೆ ತಕ್ಕುದಲ್ಲದ ಈ ಮಾತನ್ನಾಡುತ್ತಿದ್ದೀಯಾ ಎಂದರೆ ಪರ್ವತವೇ ಹರಿದು ಹೋಗಲು ಪ್ರಾರಂಭಿಸಿದೆಯೋ ಎನ್ನುವಷ್ಟು ಮಹದಾಶ್ಚರ್ಯವಾಗುತ್ತಿದೆ. ನಿನ್ನ ಉತ್ತಮ ಕುಲದಲ್ಲಿಯ ಜನ್ಮವನ್ನು ಮತ್ತು ನಿನ್ನ ಮಹತ್ಕಾರ್ಯಗಳನ್ನು ನೋಡಿಕೋ! ವೀರ! ಎದ್ದೇಳು! ವಿಷಾದಿಸಬೇಡ! ಸ್ಥಿರನಾಗಿರು! ಈ ರೀತಿಯ ಅಸಡ್ಡತನವು ನಿನಗೆ ಅನುರೂಪವಾದುದಲ್ಲ. ಕ್ಷತ್ರಿಯನು ಯಾವುದನ್ನು ತನ್ನ ವೀರ್ಯದಿಂದ ಪಡೆಯುವುದಿಲ್ಲವೋ ಅದನ್ನು ಉಣ್ಣುವುದಿಲ್ಲ."

ವಾಸುದೇವನು ಹೀಗೆ ಹೇಳಿದ ನಂತರ ನಿತ್ಯವೂ ಕೋಪದಲ್ಲಿದ್ದ, ಅಮರ್ಷಣನಾದ ಭೀಮಸೇನನು ಕುದುರೆಯಂತೆ ಓಡಾಡುತ್ತಾ ಹೇಳಿದನು:

"ಅಚ್ಯುತ! ನಾನು ಏನು ಮಾಡಬೇಕೆಂದಿದ್ದೇನೆ ಎನ್ನುವುದನ್ನು ನೀನು ಸಂಪೂರ್ಣವಾಗಿ ತಪ್ಪು ತಿಳಿದುಕೊಂಡಿದ್ದೀಯೆ. ನಾನು ಯುದ್ಧದಲ್ಲಿಯೂ ಅತ್ಯಂತ ಸತ್ಯಪರಾಕ್ರಮಿ ಮತ್ತು ಕುಶಲ. ನನ್ನ

ಸತ್ವವನ್ನು ಅರ್ಥಮಾಡಿಕೊಳ್ಳುವಷ್ಟು ದೀರ್ಘ ಕಾಲ ನೀನು ನನ್ನೊಡನೆ ವಾಸಿಸಿದ್ದೀಯೆ! ಅಥವಾ ಸರೋವರದಲ್ಲಿ ತೇಲುವವನಂತೆ ನೀನು ನನ್ನನ್ನು ಅರಿತೇ ಇಲ್ಲ. ಆದುದರಿಂದ ನೀನು ಗುರಿಗೆ ಬಹುದೂರವಾಗಿರುವ ಮಾತುಗಳಿಂದ ನನ್ನನ್ನು ಆಕ್ರಮಣ ಮಾಡುತ್ತಿದ್ದೀಯೆ! ಹೇಗೆ ತಾನೇ ಭೀಮಸೇನ ನನ್ನನ್ನು ತಿಳಿದ ಯಾರೂ ನೀನು ಸಂತೋಷದಿಂದ ಹೇಳಿದಂತ ಆ ದೊಡ್ಡ ಮಾತುಗಳನ್ನು ಆಡಬಲ್ಲರು? ಆದುದರಿಂದ ನನ್ನ ಪೌರುಷದ ಕುರಿತು ಮತ್ತು ಬೇರೆ ಯಾರಲ್ಲಿಯೂ ಸಮನಾಗಿರದ ಬಲದ ಕುರಿತು ಇದನ್ನು ಹೇಳುತ್ತೇನೆ. ತನ್ನನ್ನು ತಾನೇ ಹೊಗಳಿಕೊಳ್ಳುವುದು ಅರ್ಯರ ನಡತೆಯಲ್ಲ. ಆದರೂ ನೀನು ಅವಹೇಳನ ಮಾಡಿದುದರಿಂದ ನನ್ನ ಬಲದ ಕುರಿತು ಹೇಳುತ್ತೇನೆ. ಕೃಷ್ಣ! ಒಂದು ವೇಳೆ ಜೀವಿಗಳೆಲ್ಲವೂ ಇರುವ, ಅಚಲವಾಗಿರುವ, ಅನಂತವಾಗಿರುವ, ಎಲ್ಲವುಗಳ ತಾಯಂದಿರೆನಿಸಿಕೊಂಡಿರುವ ಇಲ್ಲಿ ಕಾಣುವ ಆಕಾಶ ಮತ್ತು ಭೂಮಿಗಳೆರಡೂ ಒಮ್ಮಿಂದೊಮ್ಮೆಗೇ ಕೋಪಗೊಂಡು ಶಿಲಾಬಂಡೆಗಳಂತೆ ಒಂದಕ್ಕೊಂದು ಅಪ್ಪಳಿಸಿದರೆ ಕೂಡ ನನ್ನ ಈ ಇರಡು ಬಾಹುಗಳಿಂದ ಸಚರಾಚರಗಳೊಂದಿಗೆ ಅವೆರಡನ್ನೂ ಬೇರೆಬೇರೆ ಮಾಡಿ ಹಿಡಿಯಬಲ್ಲೆ! ಮಹಾ ಪರಿಘಗಳಿಂತಿರುವ ಈ ಎರಡು ಬಾಹುಗಳ ಮಧ್ಯೆ ನೋಡು. ಇವುಗಳ ಮಧ್ಯೆ ಸಿಲುಕಿ ಬಿಡುಗಡೆಯಾಗಬಲ್ಲ ಯಾವ

ಪುರುಷನನ್ನೂ ನಾನು ನೋಡೆ! ಹಿಮವಂತ, ಸಮುದ್ರ ಮತ್ತು ವಜ್ರಿಗಳು ಮೂವರೂ ಒಟ್ಟಿಗೇ ತಮ್ಮ ಬಲದಿಂದ ನಾನು ಬಲವನ್ನುಪಯೋಗಿಸಿ ಹಿಡಿಯುವವನನ್ನು ಬಿಡಿಸಲಾರರು. ಪಾಂಡವರ ಆತತಾಯಿ ಕ್ಷತ್ರಿಯರೆಲ್ಲರನ್ನೂ ಯುದ್ಧದಲ್ಲಿ ಪಾದದ ಅಡಿಯಲ್ಲಿ ತುಳಿದು ಭೂಮಿಯ ಒಳಗೆ ಕಳುಹಿಸಿಯೇನು! ಇಲ್ಲ. ನೀನು ನನ್ನ ವಿಕ್ರಮವನ್ನು – ಹೇಗೆ ನಾನು ರಾಜರನ್ನು ಸದೆಬಡಿದು ವಶಮಾಡಿಕೊಂಡೆ ಎನ್ನುವುದನ್ನು - ತಿಳಿದಿಲ್ಲ! ಅಥವಾ ಉದಯಿಸುತ್ತಿರುವ ಸೂರ್ಯನ ಪ್ರಭೆಯಂತೆ ನನ್ನನ್ನು ನೀನು ತಿಳಿಯದೇ ಇದ್ದರೆ ನಾನು ಯುದ್ಧದ ಕುಣಿಯಲ್ಲಿ ಧುಮುಕಿದಾಗ ನೀನು ನನ್ನನ್ನು ತಿಳಿಯುತ್ತೀಯೆ. ಗಾಯವನ್ನು ಸುಚ್ಚುವಂತೆ ಕಟುಮಾತುಗಳಿಂದ ಏಕೆ ನನ್ನನ್ನು ಅಪಮಾನಗೊಳಿಸುತ್ತಿರುವೆ? ನನಗೆ ತಿಳಿದುದನ್ನು ನಾನು ನಿನಗೆ ಹೇಳಿದ್ದೇನೆ. ನಾನು ಅದಕ್ಕಿಂತಲೂ ಅಧಿಕ. ಯುದ್ಧವು ಮುಂದುವರೆಯುವಾಗ, ರಕ್ತವು ಪ್ರವಹಿಸುವ ದಿನದಂದು, ನೀನು ನನ್ನಿಂದ ಪ್ರಾಣವನ್ನು ಕಳೆದುಕೊಳ್ಳುವ ಆನೆಗಳನ್ನೂ ರಥದ ಸಾರಥಿಗಳನ್ನೂ ನೋಡುವಿಯಂತೆ! ಕೃದ್ಧನಾದ ನಾನು ನರ ಶ್ರೇಷ್ಠರಲ್ಲಿಯೇ ಶ್ರೇಷ್ಠರಾದ ಕ್ಷತ್ರಿಯರ್ಷಭರನ್ನು ಎಳೆದೆಳೆದು ಕೊಲ್ಲುವುದನ್ನು ನೀನು ಮತ್ತು ಲೋಕವು ನೋಡುವಿರಂತೆ! ಇಲ್ಲ! ನನ್ನ ಮಜ್ಜೆಗಳು ಕುಸಿದಿಲ್ಲ! ಮನಸ್ಸು ಕಂಪಿಸುತ್ತಿಲ್ಲ! ಸರ್ವ ಲೋಕಗಳೇ

ಸಿಟ್ಟಾದರೂ ಭಯವೆನ್ನುವುದು ನನಗೆ ತಿಳಿದಿಲ್ಲ! ಕೇವಲ ಸೌಹಾರ್ದತೆಯಿಂದ ಮಾತ್ರ ಭರತರು ನಾಶವಾಗಬಾರದೆಂದು ನಾನು ಎಲ್ಲ ಸಂಕ್ಲೇಶಗಳನ್ನು ಸಹಿಸಿಕೊಂಡಿದ್ದೇನೆ.”

ಭಗವಂತನು ಹೇಳಿದನು:

“ನಿನ್ನ ಭಾವವನ್ನು ತಿಳಿದುಕೊಳ್ಳಲು ಪ್ರಣಯದಿಂದ ನಾನು ಹೇಳಿದೆ. ನಿನ್ನನ್ನು ಆಕ್ಷೇಪಿಸುವುದಕ್ಕಾಗಲೀ, ನನ್ನ ಪಾಂಡಿತ್ಯವನ್ನು ತೋರಿಸಿಕೊಳ್ಳುವುದಕ್ಕಾಗಲೀ, ಸಿಟ್ಟಿನಿಂದಾಗಲೀ ಅಥವಾ ಅನುಮಾನದಿಂದಾಗಲೀ ಅಲ್ಲ. ನಿನ್ನ ಮಹಾತ್ಮೆಯನ್ನು ನಾನು ತಿಳಿದಿದ್ದೇನೆ. ನಿನ್ನ ಬಲವೇನೆನ್ನುವುದನ್ನೂ ತಿಳಿದಿದ್ದೇನೆ. ನೀನು ಮಾಡಿದ ಮಹತ್ಕಾರ್ಯಗಳನ್ನು ಬಲ್ಲೆ. ನಾನು ನಿನ್ನನ್ನು ಸೋಲಿಸಲು ಪ್ರಯತ್ನಿಸುತ್ತಿಲ್ಲ. ಪಾಂಡವ! ನಿನ್ನಲ್ಲಿ ನೀನು ಏನೆಲ್ಲ ಉತ್ತಮ ಗುಣಗಳನ್ನು ಕಂಡುಕೊಂಡಿದ್ದೀಯೋ ಅದಕ್ಕಿಂತಲೂ ಸಹಸ್ರ ಪ್ರಮಾಣದ ಗುಣಗಳನ್ನು ನಾನು ನಿನ್ನಲ್ಲಿರುವುದನ್ನು ಕಾಣುತ್ತೇನೆ. ಸರ್ವರಾಜರಿಂದ ಪೂಜಿತ ಕುಲದಲ್ಲಿ ಯಾರು ಹುಟ್ಟುತ್ತಾರೋ ಮತ್ತು ಬಂಧು-ಸುಹೃದಯರಿಂದ ಯಾರು ಸುತ್ತುವರೆದಿರುತ್ತಾರೋ ಅವರಂತೆಯೇ ಇದ್ದೀಯೆ! ದೈವ ಮತ್ತು ಮನುಷ್ಯ ಪ್ರಯತ್ನಗಳ ನಡುವಿನ ಧರ್ಮ

ಸಂದಿಗ್ಧತೆಯನ್ನು ಜಿಜ್ಞಾಸೆಮಾಡುವವರು ಇಂಥಹುದೇ ಎನ್ನುವ ನಿರ್ಧಾರಕ್ಕೆ ಬಂದವರಿಲ್ಲ. ಪುರುಷನ ಕರ್ಮವು ಸಂದಿಗ್ಧದಲ್ಲಿದೆ. ಪುರುಷನ ಅರ್ಥಸಿದ್ಧಿಗೆ ಏನು ಕಾರಣವೋ ಅದೇ ವಿನಾಶಕ್ಕೂ ಕಾರಣವಾಗಬಲ್ಲದು. ದೋಷಗಳನ್ನು ಕಾಣಬಹುದಾದ ಕವಿಗಳು ಒಂದು ರೀತಿಯಿಂದ ವಿಷಯವನ್ನು ನೋಡಿದರೆ ಅದು ಸುಳಿದಾಡುವ ಗಾಳಿಯಂತೆ ತನ್ನ ದಿಕ್ಕನ್ನೇ ಬದಲಾಯಿಸಬಹುದು. ಮನುಷ್ಯನು ಮಾಡಿದ ಕೆಲಸವನ್ನು, ಅದು ಎಷ್ಟೇ ಆಲೋಚನೆ ಮಾಡಿ ಮಾಡಿದ್ದಾಗಿರಲಿ, ಉತ್ತಮ ನೀತಿಯುತವಾಗಿರಲಿ ಅಥವಾ ನ್ಯಾಯದಿಂದ ನಡೆಸಲ್ಪಟ್ಟಿರಲಿ, ಅದನ್ನು ಕೂಡ ದೈವವು ವಿರೋಧಿಸುತ್ತದೆ. ಪುರುಷ ಕರ್ಮವು ದೈವವು ಮಾಡದೇ ಇರುವ ಛಳಿ, ಬಿಸಿಲು, ಮಳೆ, ಮತ್ತು ಹಸಿವೆ-ಬಾಯಾರಿಕೆಗಳಿಂದಲೂ ನಾಶಗೊಳ್ಳುತ್ತವೆ. ಹಾಗೆಯೇ ಪುರುಷನ ಇಷ್ಟಭಾವದಿಂದ ಸ್ವಯಂಕೃತ ಬೇರೆ ಕರ್ಮಗಳಿಗೆ ವಿರೋಧವಿಲ್ಲದೇ ಇರಬಹುದು.

ಕರ್ಮವಲ್ಲದೇ ಬೇರೆ ಯಾವುದರ ಮೇಲೂ ಲೋಕವು ನಡೆಯುವುದಿಲ್ಲ. ಇದನ್ನು ತಿಳಿದವನು ತನ್ನ ಪ್ರಯತ್ನ ಮತ್ತು ದೈವ ಇವೆರಡರ ಫಲವು ಏನೇ ಆಗಿದ್ದರೂ ಕರ್ಮದಲ್ಲಿಯೇ ಮುಂದುವರೆಯುತ್ತಾನೆ. ಇದನ್ನು ಬುದ್ಧಿಯಲ್ಲಿ ಅಳವಳಡಿಸಿಕೊಂಡವನು ಕರ್ಮದಲ್ಲಿಯೇ ನಿರತನಾಗಿರುತ್ತಾನೆ. ಸಿದ್ಧಿಯಾಗದಿದ್ದರೆ ವ್ಯಥಿತನಾಗುವುದಿಲ್ಲ. ಸಿದ್ಧಿಯಾದರೆ

ಅವನಿಗೆ ಹರ್ಷವೂ ಆಗುವದಿಲ್ಲ. ಭೀಮಸೇನ! ಇದನ್ನು ಮಾತ್ರ ನಾನು ಹೇಳಲು ಬಯಸಿದೆ. ಕುರುಗಳೊಂದಿಗೆ ಆಗುವ ಯುದ್ಧದಲ್ಲಿ ನಾವು ಸಂಪೂರ್ಣ ಜಯವೊಂದೇ ಸಿಗುತ್ತದೆ ಎಂದು ಎಣಿಸಿರಬಾರದು. ಅದೃಷ್ಟವು ಪಲ್ಲಟವಾದರೆ ಮಂಚೂಣಿಯನ್ನು ಬಿಡಬಾರದು, ಮತ್ತು ವಿಷಾದ ಅಥವಾ ಆಯಾಸಗೊಳ್ಳಬಾರದು. ಅದನ್ನೇ ನಾನು ಹೇಳುತ್ತಿದ್ದೇನೆ. ನಾಳೆ ನಾನು ಧೃತರಾಷ್ಟ್ರನ ಬಳಿ ಹೋಗಿ ನಿಮ್ಮ ಒಳಿತನ್ನು ಬಿಟ್ಟುಕೊಡದೇ ಶಾಂತಿಯನ್ನುಂಟುಮಾಡಲು ಪ್ರಯತ್ನಿಸುತ್ತೇನೆ. ಅವರು ಶಾಂತಿಯನ್ನು ಮಾಡಿಕೊಂಡರೆ ಅನಂತವಾದ ಯಶಸ್ಸು ನನ್ನ ಪಾಲಿಗಾಗುತ್ತದೆ, ನಿಮ್ಮ ಆಸೆಯೂ ಪೂರೈಸಿದಂತಾಗುತ್ತದೆ ಮತ್ತು ಅವರಿಗೂ ಉತ್ತಮ ಶ್ರೇಯಸ್ಸುಂಟಾಗುತ್ತದೆ. ಕುರುಗಳು ತಮ್ಮದೇ ಹಠ ಹಿಡಿದು ನನ್ನ ಮಾತಿಗೆ ಒಪ್ಪಿಕೊಳ್ಳದೇ ಇದ್ದರೆ ಆಗ ರೌದ್ರ ಕರ್ಮವಾದ ಯುದ್ಧವೇ ನಡೆಯುತ್ತದೆ.

ಆ ಯುದ್ಧದಲ್ಲಿ ಭಾರವು ನಿನ್ನ ಮೇಲಿರುತ್ತದೆ, ಮಂಚೂಣಿಯು ಅರ್ಜುನನ ಕೈಯಲ್ಲಿರುತ್ತದೆ, ಮತ್ತು ಇತರರನ್ನು ನಿಮ್ಮ ಜೊತೆಗೇ ಎಳೆದುಕೊಂಡು ಹೋಗುತ್ತೀರಿ. ಆಗುವ ಯುದ್ಧದಲ್ಲಿ ನಾನೇ ಬೀಭತ್ಸುವಿನ ಸಾರಥಿಯಾಗುವೆ. ಇದು ಧನಂಜಯನ ಇಚ್ಛೆ. ಯಾಕೆಂದರೆ ನಾನು ಯುದ್ಧಮಾಡಲು ಬಯಸುವುದಿಲ್ಲ. ನಿನ್ನ ಅಭಿಪ್ರಾಯದ ಮೇಲಿನ ಶಂಕೆಯಿಂದಲೇ ನಾನು ನಿನಗೆ

‘ಶಂಡನಂತೆ ವರ್ತಿಸಬೇಡ!’ ಎಂದು ಮೂದಲಿಸಿ ನಿನ್ನ ತೇಜಸ್ಸನ್ನು ಬೆಳಗಿಸಿದೆ.”

## ಕೃಷ್ಣರಾಯಭಾರಕ್ಕೆ ಅರ್ಜುನನ ಸಂದೇಶ

ಅರ್ಜುನನು ಹೇಳಿದನು:

“ಜನಾರ್ದನ! ಹೇಳಬೇಕಾದುದೆಲ್ಲವನ್ನೂ ಯುಧಿಷ್ಠಿರನು ಹೇಳಿದ್ದಾನೆ. ನಿನ್ನ ಮಾತನ್ನು ಕೇಳಿ ನನಗನ್ನಿಸುತ್ತದೆ - ಪ್ರಭೋ - ಸುಲಭದಲ್ಲಿ ಶಾಂತಿಯನ್ನು ತರಬಹುದು ನಿನಗನ್ನಿಸುವುದಿಲ್ಲ – ಧೃತರಾಷ್ಟ್ರನ ಲೋಭದಿಂದಾಗಲೀ ಅಥವಾ ನಮ್ಮಲ್ಲಿ ಸಾಕಷ್ಟು ಬಲವಿಲ್ಲದೇ ಇರುವುದರಿಂದ. ಹಾಗೆಯೇ ಪುರುಷನ ಪರಾಕ್ರಮವು ಫಲವನ್ನು ನೀಡದೇ ಇರುವುದಿಲ್ಲ ಮತ್ತು ಪುರುಷ ಪ್ರಯತ್ನವಿಲ್ಲದೇ ಯಾವುದೂ ಫಲಿಸುವುದಿಲ್ಲ ಎಂದೂ ಅಭಿಪ್ರಾಯಪಡುತ್ತಿದ್ದೀಯೆ. ನೀನು ಹೇಳಿದ ಮಾತಿನಂತೆಯೇ ಆಗಬಹುದು ಆಗದೆಯೂ ಇರಬಹುದು. ಆದರೆ ಯಾವುದನ್ನೂ ಅಸಾಧ್ಯವೆಂದು ಕಾಣಬಾರದು. ಮತ್ತು ನಮ್ಮ ಈ ಕಷ್ಟಗಳೆಲ್ಲವಕ್ಕೂ ಕಾರಣ ಅವರು ಮಾಡಿದ ಪಾಪ ಎಂದು ತಿಳಿದುಕೊಂಡಿದ್ದೀಯಲ್ಲವೇ? ಆದರೆ ಅವರಿಗೆ ಇದೂವರೆಗೆ ಯಾವ ಫಲವೂ ದೊರೆತಂತಿಲ್ಲ! ಚೆನ್ನಾಗಿ ನಡೆಸಿದ ಕಾರ್ಯಕ್ಕೆ ಫಲವೊಂದಿರುತ್ತದೆಯಲ್ಲವೇ?

ಇತರರೊಂದಿಗೆ ಶಾಂತಿಯುಂಟಾಗುವಂತೆ ವರ್ತಿಸು. ನೀನು

ಸುರಾಸುರರಿಗೆ ಪ್ರಜಾಪತಿಯು ಹೇಗೋ ಹಾಗೆ ಪಾಂಡವ-ಕುರುಗಳಿಗೆ ನೀನು ಪರಮ ಮಿತ್ರ. ಕುರುಗಳಿಗೆ ಮತ್ತು ಪಾಂಡವರಿಗೆ ಒಳ್ಳೆಯದಾಗುವ ಹಾಗೆ ಮಾಡು. ಇದನ್ನು ನಡೆಸಿಕೊಡುವುದು ನಿನಗೆ ದುಷ್ಕರವಲ್ಲ ಎಂದು ತಿಳಿದಿದ್ದೇವೆ. ಈ ಕಾರ್ಯವನ್ನು ನೀನು ಅಲ್ಲಿ ಹೋಗುವುದರ ಮೂಲಕದಿಂದಲೇ ಮಾಡಿ ಮುಗಿಸುತ್ತೀಯೆ ಎನ್ನುವುದರಲ್ಲಿ ಸಂಶಯವಿಲ್ಲ. ಆ ದುರಾತ್ಮನೊಂದಿಗೆ ಯಾವ ರೀತಿಯಾದರೂ ನೀನು ಬಯಸಿದಂತೆ ನಡೆದುಕೋ. ಆಗುವುದೆಲ್ಲವೂ ನೀನು ಬಯಸಿದಂತೆಯೇ ಆಗುತ್ತದೆ. ಅವರೊಂದಿಗೆ ಶಾಂತಿ ನೆಲೆಸುತ್ತದೆಯೋ ಅಥವಾ ಇಲ್ಲವೋ ಅದು ನೀನು ಬಯಸಿದಂತೆ. ನಿನ್ನ ಇಚ್ಛೆ ಮತ್ತು ವಿಚಾರಗಳು ನಮಗೆ ದೊಡ್ಡವು. ಧರ್ಮಸುತನಲ್ಲಿರುವ ಶ್ರೀಯನ್ನು ಕಂಡು ಅಸೂಯೆಗೊಂಡ ಆ ದುಷ್ಟಾತ್ಮನು ಮಕ್ಕಳು ಬಾಂಧವರೊಂದಿಗೆ ವಧೆಗೆ ಅರ್ಹನಲ್ಲವೇ? ಧರ್ಮಿಷ್ಠವಾದ ಉಪಾಯವನ್ನು ಕಾಣದೇ ಅವನು ಅದನ್ನು ಕೆಟ್ಟ ದ್ಯೂತದಲ್ಲಿ ಪಣವಾಗಿ, ಮೋಸದ ಉಪಾಯದಿಂದ, ಅಪಹರಿಸಿದನು. ಪ್ರಾಣತ್ಯಾಗವನ್ನು ಮಾಡಬೇಕಾಗಿ ಬಂದರೂ ಕ್ಷತ್ರಿಯರಲ್ಲಿ ಹುಟ್ಟಿದ ಧನುರ್ಧರ ಪುರುಷನು ಹೇಗೆ ತಾನೇ ಯುದ್ಧಕ್ಕೆ ಹಿಂಜರಿಯಬಲ್ಲ? ನಮ್ಮನ್ನು ಅಧರ್ಮದಿಂದ ಗೆದ್ದುದನ್ನು ಮತ್ತು ವನದಲ್ಲಿ ಕಳುಹಿಸುದುದನ್ನು ನೋಡಿದಾಗಲೇ

ಸುಯೋಧನನು ನನಗೆ ವಧಾರ್ಹನಾದ. ಮಿತ್ರರಿಗಾಗಿ ನೀನು ಏನು ಮಾಡಲಿಕ್ಕೆ ಹೊರಟಿರುವಿಯೋ ಅದು ಅದ್ಭುತವೇನೂ ಅಲ್ಲ. ಆದರೆ ಮುಖ್ಯ ಕಾರ್ಯವು ಹೇಗೆ ಆಗುತ್ತದೆ - ಮೃದುತ್ವದಿಂದ ಅಥವಾ ಕಲಹದಿಂದ? ಅಥವಾ ಅವರನ್ನು ಕೂಡಲೇ ವಧಿಸುವುದು ಒಳ್ಳೆಯದು ಎಂದು ನಿನಗನ್ನಿಸಿದರೆ ಅದನ್ನೇ ಮಾಡೋಣ. ಅದರಲ್ಲಿ ನೀನು ವಿಚಾರಮಾಡಬೇಡ!

ಆ ಪಾಪಬುದ್ಧಿಯು ಹೇಗೆ ದ್ರೌಪದಿಯನ್ನು ಸಭಾಮಧ್ಯದಲ್ಲಿ ಕಾಡಿಸಿದ ಮತ್ತು ಹೇಗೆ ಇತರರು ಅದನ್ನು ಆಗಲು ಬಿಟ್ಟರು ಎನ್ನುವುದನ್ನು ನೀನು ತಿಳಿದಿದ್ದೀಯೆ. ಅಂಥಹ ಮನುಷ್ಯನು ಪಾಂಡವರೊಂದಿಗೆ ಸರಿಯಾಗಿ ನಡೆದುಕೊಳ್ಳುತ್ತಾನೆ ಎಂದು ನನಗೆ ನಂಬಿಕೆಯಿಲ್ಲ. ಅದು ಉಪ್ಪು ನೆಲದಲ್ಲಿ ಬೀಜವನ್ನು ಬಿತ್ತಿದಂತೆ. ಆದುದರಿಂದ ಪಾಂಡವರಿಗೆ ಯಾವುದು ಒಳ್ಳೆಯದೆಂದು ತಿಳಿದಿದ್ದೀಯೋ ಅದನ್ನು ಬೇಗನೇ ಮಾಡಿ, ಮುಂದೆ ಮಾಡಬೇಕಾಗಿರುವುದನ್ನು ನಮಗೆ ಬಿಡು!”

ಭಗವಂತನು ಹೇಳಿದನು:

“ಮಹಾಬಾಹೋ! ಇದು ನೀನು ಹೇಳಿದಂತೆಯೇ! ಆದರೂ ಇವೆಲ್ಲವೂ ಎರಡು ರೀತಿಯ ಕರ್ಮಗಳ ಮೇಲೆ ಅವಲಂಬಿಸಿವೆ. ರಸವತ್ತಾದ ಶುದ್ಧ ಭೂಮಿಯನ್ನು ಕೃಷಿಕನು ಸಿದ್ಧಗೊಳಿಸಬಹುದು. ಆದರೆ ಅಲ್ಲಿ ಮಳೆಯೇ ಬೀಳದಿದ್ದರೆ

ಬೆಳೆಯನ್ನು ತೆಗೆಯಲು ಸೋಲುತ್ತಾನೆ. ಅಲ್ಲಿ ಪುರುಷನ ಪ್ರಯತ್ನದಿಂದ ಏರ್ಪಡಿಸಿದ ನೀರಾವರಿಯ ವ್ಯವಸ್ಥೆಯು ಬೆಳೆಯನ್ನು ತೆಗೆಯಲು ಸಾಧ್ಯಮಾಡುತ್ತದೆ ಎಂದು ಹೇಳುತ್ತಾರೆ. ಆದರೆ ಅಲ್ಲಿಯೂ ಕೂಡ ದೈವವು ಮಾಡಿಟ್ಟಂತೆ ಒಣಗಿ ಹೋಗುವುದನ್ನು ಖಂಡಿತವಾಗಿ ಕಾಣಬಹುದು. ನಮ್ಮ ಮಹಾತ್ಮ ಪೂರ್ವಜರು ತಮ್ಮ ಬುದ್ಧಿಯಿಂದ ಇದರ ಕುರಿತು ನಿಶ್ಚಯವನ್ನು ಕೊಟ್ಟಿದ್ದಾರೆ: ಲೋಕದ ಆಗುಹೋಗುಗಳು ದೈವ ಮತ್ತು ಮಾನುಷ ಕಾರಣಗಳೆರಡರ ಮೇಲೂ ನಿಂತಿದೆ. ನಾನಾದರೋ ಪುರುಷನು ಕೊನೆಯದಾಗಿ ಏನನ್ನು ಮಾಡಬಲ್ಲನೋ ಅದನ್ನು ಮಾತ್ರ ಮಾಡುತ್ತೇನೆ. ಆದರೆ ದೈವದ ಕೆಲಸವನ್ನು ಮಾಡಲು ನಾನು ಎಂದೂ ಶಕ್ಯನಿಲ್ಲ. ಆ ದುರ್ಮತಿಯಾದರೋ ಸತ್ಯ ಧರ್ಮಗಳನ್ನು ಬಿಸುಟು ನಡೆದುಕೊಳ್ಳುತ್ತಿದ್ದಾನೆ. ಆ ರೀತಿಯ ಕರ್ಮವು ಅವನನ್ನು ಸುಡುತ್ತಲೂ ಇಲ್ಲ. ಅವನ ಪಾಪಿಷ್ಠ ಬುದ್ಧಿಯನ್ನು ಅವನ ಮಂತ್ರಿಗಳಾದ ಶಕುನಿ, ಸೂತಪುತ್ರ, ಮತ್ತು ಸಹೋದರ ದುಃಶಾಸನರು ಬೆಳೆಸುತ್ತಿದ್ದಾರೆ. ಅವನು ರಾಜ್ಯವನ್ನು ಕೊಡುವುದರ ಮೂಲಕ ಶಾಂತಿಯನ್ನು ಬಯಸುವುದಿಲ್ಲ. ಅದಕ್ಕೆ ಮೊದಲು ಅನುಯಾಯಿಗಳೊಂದಿಗೆ ಸುಯೋಧನನನ್ನು ವಧಿಸಬೇಕಾಗುತ್ತದೆ. ಶರಣು ಹೋಗುವುದರ ಮೂಲಕವೂ ಧರ್ಮರಾಜನು ರಾಜ್ಯವನ್ನು ತ್ಯಜಿಸಲು ಬಯಸುವುದಿಲ್ಲ. ಆ

ದುರ್ಮತಿಯು ಕೇಳುವುದರಿಂದ ರಾಜ್ಯವನ್ನು ಕೊಡುವುದಿಲ್ಲ. ಅಲ್ಲಿ ಧರ್ಮರಾಜನು ಹೇಳಿದ ಯುಧಿಷ್ಠಿರನ ಶಾಸನವನ್ನು ಹೇಳುವುದರಿಂದ ಏನಾದರೂ ಪ್ರಯೋಜನವಿದೆಯೆಂದು ನನಗನ್ನಿಸುವುದಿಲ್ಲ. ಆ ಪಾಪಿ ಕೌರವನು ಹೇಳಿದಂತೆ ಏನನ್ನೂ ಮಾಡುವವನಲ್ಲ.

ಹಾಗೆ ಮಾಡದೇ ಇದ್ದಲ್ಲಿ ಅವನು ಲೋಕದಲ್ಲಿ ಯಾರಿಂದಲೂ ವಧಿಸಲ್ಪಡಲು ಅರ್ಹ. ಕುಮಾರರಾಗಿರುವಾಗಲೇ ನಿಮ್ಮೆಲ್ಲರನ್ನೂ ಮೋಸದಿಂದ ಕಾಡಿದ ಅವನನ್ನು ನಾನೂ, ಜಗತ್ತೂ, ಕೊಲ್ಲಬಹುದು. ಯುಧಿಷ್ಠಿರನಲ್ಲಿದ್ದ ಐಶ್ವರ್ಯವನ್ನು ನೋಡಿದ ನಂತರ ಶಾಂತಿಯನ್ನು ಕಾಣದ ಆ ದುರಾತ್ಮ ಪಾಪಿಯು ನಿಮ್ಮಿಂದ ರಾಜ್ಯವನ್ನು ಮೋಸದಿಂದ ಅಪಹರಿಸಿದನು. ನನ್ನ ಮತ್ತು ನಿಮ್ಮ ನಡುವೆ ಭೇದವನ್ನು ತರಲು ಅವನು ಬಹುಬಾರಿ ಪ್ರಯತ್ನಿಸಿದ್ದಾನೆ. ಆದರೆ ನಾನು ಅವನ ಪಾಪ ಬುದ್ಧಿಯನ್ನು ಸ್ವೀಕರಿಸಲಿಲ್ಲ. ಅವನ ಪರಮ ಮತವೇನೆಂದು ಮತ್ತು ನಾನು ಧರ್ಮರಾಜನಿಗೆ ಪ್ರಿಯವಾದುದನ್ನು ಮಾಡಲು ಹೊರಟಿರುವೆನೆಂದು ನಿನಗೆ ತಿಳಿದಿದೆ. ಅವನ ಮತ್ತು ನನ್ನ ಪರಮ ಮತವನ್ನೂ ತಿಳಿದಿದ್ದೀಯೆ. ಆದರೂ ಏನನ್ನೂ ತಿಳಿದಿಲ್ಲದವನಂತೆ ನಮ್ಮನ್ನು ಶಂಕಿಸುತ್ತಿದ್ದೀಯೆ. ಪರಮ ದೈವವು ಏನನ್ನು ನಿರ್ಧರಿಸಿದೆಯೋ ಅದೂ ನಿನಗೆ ತಿಳಿದಿದೆ. ಹೀಗಿರುವಾಗ

ಅವರೊಂದಿಗೆ ಶಾಂತಿಯು ಹೇಗಾಗುತ್ತದೆ? ಮಾತು ಮತ್ತು ಕರ್ಮಗಳಿಂದ ಏನೆಲ್ಲ ಮಾಡಲಿಕ್ಕೆ ಸಾಧ್ಯವಿದೆಯೋ ಅವೆಲ್ಲವನ್ನೂ ಮಾಡುತ್ತೇನೆ. ಆದರೆ ಅವರೊಂದಿಗೆ ಶಾಂತಿಯಾಗುತ್ತದೆ ಎಂದು ನನಗನ್ನಿಸುವುದಿಲ್ಲ. ಕಳೆದ ವರ್ಷ ಗೋಹರಣದ ಸಮಯದಲ್ಲಿ ಭೀಷ್ಮನು ಕೇಳಿಕೊಂಡರೂ ಅವನು ಶಾಂತಿಯನ್ನು ನೀಡಿದನೇ? ಅದೇ ದಿವಸ ನೀನು ಸಂಕಲ್ಪಿಸಿದಂತೆ ಅವರನ್ನು ಪರಾಜಯಗೊಳಿಸಿದೆ. ಸುಯೋಧನನು ಸ್ವಲ್ಪವನ್ನೂ ಸ್ವಲ್ಪಸಮಯಕ್ಕಾಗಿಯೂ ಕೊಡಲು ಬಯಸುವುದಿಲ್ಲ. ಹೇಗಿದ್ದರೂ ನಾನು ಧರ್ಮರಾಜನ ಶಾಸನವನ್ನು ಕಾರ್ಯಗತಗೊಳಿಸಬೇಕು. ಆ ದುರಾತ್ಮನ ಪಾಪ ಕರ್ಮಗಳನ್ನು ಇನ್ನೊಮ್ಮೆ ಮನಸ್ಸಿಗೆ ತೆಗೆದುಕೊಳ್ಳಬಾರದು!”

## ಕೃಷ್ಣ ರಾಯಭಾರಕ್ಕೆ ನಕುಲನ ಸಂದೇಶ

ನಕುಲನು ಹೇಳಿದನು:

“ಮಾಧವ! ಧರ್ಮರಾಜನು ಬಹುವಿಧದಲ್ಲಿ ಮಾತುಗಳನ್ನಾಡಿದ್ದಾನೆ. ಧರ್ಮಜ್ಞನ ಈ ಮಾತುಗಳು ಧರ್ಮಯುಕ್ತವಾಗಿಯೂ ತತ್ತ್ವಯುಕ್ತವಾಗಿಯೂ ಇವೆ. ರಾಜನ ಮತವನ್ನು ತಿಳಿದ ಭೀಮಸೇನನು ಶಮ ಮತ್ತು ಬಾಹುವೀರ್ಯ ಎರಡರ ಕುರಿತೂ ಮಾತನಾಡಿದ್ದಾನೆ.

ಹಾಗೆಯೇ ಫಲ್ಗುನನು ಏನು ಹೇಳಬೇಕೆಂದಿದ್ದನೋ ಅದನ್ನೂ ಕೂಡ ನೀನು ಕೇಳಿದ್ದೀಯೆ. ನಿನ್ನ ಸ್ವಂತ ಮತವನ್ನು ಕೂಡ ನೀನು ಪುನಃ ಪುನಃ ಹೇಳಿದ್ದೀಯೆ. ಈಗ ನೀನು ಕೇಳಿದ ಎಲ್ಲವನ್ನೂ ಬದಿಗೊತ್ತಿ, ಬಂದೊದಗಿರುವ ಈ ಸಮಯದಲ್ಲಿ ಏನನ್ನು ಮಾಡಬೇಕೆಂದು ನಿನಗನ್ನಿಸುತ್ತದೆಯೋ ಅದನ್ನು ಮಾಡು. ಪ್ರತಿಯೊಂದಕ್ಕೂ ಅಭಿಪ್ರಾಯಗಳು ಇರುತ್ತವೆ. ಆದರೆ ಬಂದಿರುವ ಕಾಲವನ್ನು ನೋಡಿ ಮನುಷ್ಯನು ಸ್ವತಃ ಕಾರ್ಯವನ್ನು ನಿರ್ಧರಿಸಬೇಕು. ವಿಷಯವನ್ನು ಒಂದು ರೀತಿಯಲ್ಲಿ ಯೋಚಿಸಿದರೆ ಅದು ಬೇರೆಯೇ ರೀತಿಯಲ್ಲಿ ನಡೆಯಬಹುದು. ಈ ಲೋಕದಲ್ಲಿ ಜನರ ಅಭಿಪ್ರಾಯಗಳು ಬದಲಾಗುತ್ತಿರುತ್ತವೆ. ನಾವು ವನವಾಸದಲ್ಲಿರುವಾಗ ನಮ್ಮಲ್ಲಿ ಒಂದು ರೀತಿಯ ಯೋಚನೆಯಿತ್ತು, ಅಜ್ಞಾತವಾಸದಲ್ಲಿರುವಾಗ ಬೇರೆ ಯೋಚನೆಯಿತ್ತು, ಮತ್ತು ಈಗ ಪುನಃ ಎಲ್ಲರಿಗೂ ಕಾಣಿಸುವಂತಿರುವಾಗ ಬೇರೆಯೇ ಯೋಚನೆಯಿದೆ. ಅಂದು ವನದಲ್ಲಿ ಅಲೆಯುತ್ತಿರುವಾಗ ನಮಗೆ ರಾಜ್ಯದ ಕುರಿತು, ಈಗ ಇರುವಷ್ಟು ಆಸೆಯಿರಲಿಲ್ಲ. ವನವಾಸದಿಂದ ಹಿಂದಿರುಗಿದ್ದಾರೆ ಎಂದು ಕೇಳಿದ ನಿನ್ನ ಪ್ರಸಾದದಿಂದಲೇ ಈ ಏಳು ಅಕ್ಷೌಹಿಣಿಗಳು ಬಂದು ಸೇರಿವೆ. ಯೋಚಿಸಲೂ ಅಸಾಧ್ಯವಾದ ಬಲಪೌರುಷಗಳುಳ್ಳ, ಶಸ್ತ್ರಗಳನ್ನು ಹಿಡಿಯುವ ಈ ಪುರುಷವ್ಯಾಘ್ರರನ್ನು ಕಂಡು ರಣದಲ್ಲಿ ಯಾವ ಪುರುಷನು

ವ್ಯಥೆಗೊಳ್ಳುವುದಿಲ್ಲ? ಕುರುಮಧ್ಯದಲ್ಲಿ ನೀನು ಮಂದಬುದ್ಧಿ ಸುಯೋಧನನು ವ್ಯಥಿತನಾಗದಂತೆ ಸಾಂತ್ವಪೂರ್ವಕನಾಗಿ ಭಯಾನ್ವಿತನಾಗಿ ಮಾತನಾಡಬೇಕು. ರಕ್ತಮಾಂಸಗಳಿಂದ ಕೂಡಿದ ಯಾವ ಮನುಷ್ಯನು ತಾನೇ ಯುದ್ಧದಲ್ಲಿ ಇವರ ಯದುರಾಳಿಯಾಗಿ ಹೋರಾಡುತ್ತಾನೆ? - ಯುಧಿಷ್ಠಿರ, ಭೀಮಸೇನ, ಅಪರಾಜಿತ ಬೀಭತ್ಸು, ಸಹದೇವ, ನಾನು, ನೀನು, ರಾಮ, ಸಾತ್ಯಕಿ, ಮಕ್ಕಳೊಂದಿಗೆ ಮಹಾವೀರ್ಯ ವಿರಾಟ, ಅಮಾತ್ಯ-ದೃಷ್ಟದ್ಯುಮ್ನನೊಂದಿಗೆ ಪಾರ್ಷತ ದ್ರುಪದ, ವಿಕ್ರಾಂತ ಕಾಶಿರಾಜ ಮತ್ತು ಚೇದಿಪತಿ ಧೃಷ್ಟಕೇತು.

ಕೇವಲ ಹೋಗುವುದರಿಂದಲೇ ನೀನು ಧರ್ಮರಾಜನ ಇಷ್ಟವನ್ನು ಒಳಿತನ್ನು ಸಾಧಿಸುತ್ತೀಯೆ ಎನ್ನುವುದರಲ್ಲಿ ಸಂಶಯವಿಲ್ಲ. ನೀನು ಹೇಳಹೊರಟಿರುವುದು ಶ್ರೇಯಸ್ಕರವಾದುದು ಎನ್ನುವುದನ್ನು ವಿದುರ, ಭೀಷ್ಮ, ದ್ರೋಣ ಮತ್ತು ಬಾಹ್ಲೀಕರು ಅರ್ಥಮಾಡಿಕೊಳ್ಳಲು ಸಮರ್ಥರು. ಅವರೇ ಜನಾಧಿಪ ಧೃತರಾಷ್ಟ್ರನನ್ನು, ಅಮಾತ್ಯರೂ ಕೂಡಿ ಪಾಪಿ ಸುಯೋಧನನನ್ನು ದಾರಿಗೆ ತರುತ್ತಾರೆ. ಉರುಳಿಕೊಂಡು ಬರುತ್ತಿರುವ ಏನನ್ನು ತಾನೇ ಅರ್ಥವತ್ತಾಗಿ ಹೇಳುವ ನೀನು ಮತ್ತು ಕೇಳಿ ಅರ್ಥೈಸಿಕೊಳ್ಳುವ ವಿದುರ ಇಬ್ಬರಿಗೂ ತಡೆದು ನಿಲ್ಲಿಸಲಿಕ್ಕಾಗುವುದಿಲ್ಲ?”

## ಕೃಷ್ಣನ ರಾಯಭಾರಕ್ಕೆ ಸಹದೇವ-ಸಾತ್ಯಕಿಯರ ಸಂದೇಶ

ಸಹದೇವನು ಹೇಳಿದನು:

"ಅರಿಂದಮ! ರಾಜನು ಏನು ಹೇಳಿದನೋ ಅದು ಸನಾತನ ಧರ್ಮ. ಹಾಗಿದ್ದರೂ ಯುದ್ಧವೇ ನಡೆಯುವ ಹಾಗೆ ಮಾಡು! ಒಂದು ವೇಳೆ ಕುರುಗಳು ಪಾಂಡವರೊಂದಿಗೆ ಶಾಂತಿಯನ್ನು ಇಚ್ಛಿಸಿದರೂ ಕೂಡ ನೀನು ಅವರೊಂದಿಗೆ ಯುದ್ಧವೇ ನಡೆಯುವಂತೆ ಮಾಡಬೇಕು. ಸುಯೋಧನನ ವಧೆಯಾಗದೇ ಪಾಂಚಾಲಿಯನ್ನು ಸಭೆಗೆ ಎಳೆತಂದು ಕಾಡಿಸಿದುದನ್ನು ನೋಡಿದ ನನ್ನ ಈ ಸಿಟ್ಟು ಹೇಗೆ ಶಾಂತಗೊಳ್ಳುತ್ತದೆ? ಒಂದು ವೇಳೆ ಭೀಮಾರ್ಜುನರಿಬ್ಬರೂ ಮತ್ತು ಧರ್ಮರಾಜನೂ ಧಾರ್ಮಿಕರಾಗಿದ್ದರೆ, ನಾನು ಧರ್ಮವನ್ನು ತೊರೆದು ಯುದ್ಧದಲ್ಲಿ ಅವರೊಂದಿಗೆ ಹೋರಾಡಲು ಬಯಸುತ್ತೇನೆ."

ಸಾತ್ಯಕಿಯು ಹೇಳಿದನು:

"ಮಹಾಬಾಹೋ! ಮಹಾಮತಿ ಸಹದೇವನು ಸತ್ಯವನ್ನೇ ನುಡಿದಿದ್ದಾನೆ. ದುರ್ಯೋದನನ ವಧೆಯಿಂದ ಮಾತ್ರ ಅವನ ಮೇಲೆ ನನಗಿರುವ ಕೋಪವು ಶಾಂತವಾಗುವುದು. ವನದಲ್ಲಿ ಚೀರಜಿನಗಳನ್ನು ಧರಿಸಿ ದುಃಖಿತರಾಗಿದ್ದ ಪಾಂಡವರನ್ನು ನೋಡಿ ನಿನಗೂ ಕೂಡ ಕೋಪವುಂಟಾಗಿತ್ತು ಎಂದು ನನಗೆ ತಿಳಿದಿದೆ. ಆದುದರಿಂದ ಈ ಶೂರ ಪುರುಷರ್ಷಭ

ಮಾದ್ರೀಸುತನು ಯಾವ ಮಾತನ್ನು ಹೇಳಿದನೋ ಅದೇ ಸರ್ವಯೋಧರ ಮತ!”

ಮಹಾಮತಿ ಯುಯುಧಾನನು ಹೀಗೆ ಮಾತನ್ನಾಡಲು ಅಲ್ಲಿ ಎಲ್ಲ ಯೋಧರಿಂದ ಭಯಂಕರ ಸಿಂಹನಾದವು ಮೊಳಗಿತು. ಎಲ್ಲಾ ಕಡೆಯಿಂದ ಎಲ್ಲರೂ ಆ ವೀರನ ಮಾತನ್ನು ಗೌರವಿಸಿ “ಸಾಧು! ಸಾಧು!” ಎಂದು ಕೂಗುತ್ತಾ ಶೈನಿಯನ್ನು ಹರ್ಷಗೊಳಿಸಿದರು.

## ಕೃಷ್ಣ ರಾಯಭಾರಕ್ಕೆ ದ್ರೌಪದಿಯ ಸಂದೇಶ

ಧರ್ಮಾರ್ಥಸಹಿತವೂ ಹಿತವೂ ಆದ ರಾಜನ ಮಾತುಗಳನ್ನು ಕೇಳಿ ಶೋಕಕರ್ಶಿತಳಾಗಿ ಕುಳಿತುಕೊಂಡಿದ್ದ ಕೃಷ್ಣೆಯು ದಾಶಾರ್ಹನಿಗೆ ಹೇಳಿದಳು. ಕಪ್ಪು ನೀಳ ಕೂದಲಿನ ಆ ದ್ರುಪದರಾಜನ ಮಗಳು ಮನಸ್ವಿನಿಯು ಮಹಾರಥಿ ಸಹದೇವ ಮತ್ತು ಸಾತ್ಯಕಿಯರನ್ನು ಹೊಗಳುತ್ತಾ, ಭೀಮಸೇನನೂ ಕೂಡ ಶಾಂತಿಯ ಪರವಾಗಿದ್ದುದನ್ನು ನೋಡಿ ಪರಮ ದುಃಖಿತಳಾಗಿ ಕಣ್ಣಿನಲ್ಲಿ ಕಣ್ಣೀರನ್ನು ತುಂಬಿಸಿ ಈ ಮಾತುಗಳನ್ನಾಡಿದಳು:

“ಮಹಾಬಾಹೋ! ಜನಾರ್ದನ! ಹೇಗೆ ಧೃತರಾಷ್ಟ್ರನ ಮಕ್ಕಳು ಅವರ ಅಮಾತ್ಯರಿಂದೊಡಗೂಡಿ ಮೋಸದಿಂದ ಪಾಂಡವರನ್ನು ಸುಖದಿಂದ ಪಲ್ಲಟಗೊಳಿಸಿದರೆಂದು ನಿನಗೆ ತಿಳಿದಿದೆ. ಮತ್ತು ರಾಜನು ಸಂಜಯನಿಗೆ ರಹಸ್ಯದಲ್ಲಿ ಏನನ್ನು ಹೇಳಿ ಕಳುಹಿಸಿದನೆನ್ನುವುದನ್ನೂ ನೀನು ಕೇಳಿದ್ದೀಯೆ.

ಯುಧಿಷ್ಠಿರನು ಸಂಜಯನಿಗೆ ಏನನ್ನು ಹೇಳಿದನೆನ್ನುವುದೆಲ್ಲವನ್ನೂ ನೀನು ಕೇಳಿದ್ದೀಯೆ, ತಿಳಿದಿದ್ದೀಯೆ. ‘ತಂದೇ! ಐದು ಗ್ರಾಮಗಳನ್ನಾದರೂ ನಮಗೆ ಕೊಡಬೇಕು - ಕುಶಸ್ಥಲ, ವೃಕಸ್ಥಲ, ಆಸಂದೀ, ವಾರಣಾವತ, ಮತ್ತು ಐದನೆಯ ಮತ್ತು ಕೊನೆಯದಾಗಿ ಯಾವುದಾದರೂ ನಿನಗಿಷ್ಟವಾದುದು’ ಎಂದು ದುರ್ಯೋಧನನಿಗೂ ಅವನ ಸ್ನೇಹಿತರಿಗೂ ಹೇಳಿದ್ದನು, ಮಾನವಂತ ಯುಧಿಷ್ಠಿರನು ಸಂಧಿಯನ್ನು ಬಯಸಿದರೂ ಸುಯೋಧನನು ಆ ಮಾತನ್ನು ಕೇಳಿಯೂ ಏನನ್ನೂ ಮಾಡಲಿಲ್ಲ. ಒಂದು ವೇಳೆ ಸುಯೋಧನನು ರಾಜ್ಯವನ್ನು ಕೊಡದೇ ಸಂಧಿಯನ್ನು ಬಯಸಿದರೆ ಅಲ್ಲಿಗೆ ಹೋಗುವ ಕೆಲಸವು ಎಂದೂ ಪ್ರಯೋಜನಕಾರಿಯಾಗುವುದಿಲ್ಲ. ಸೃಂಜಯರೊಂದಿಗೆ ಪಾಂಡವರು ಧಾರ್ತರಾಷ್ಟ್ರನ ಘೋರ ಕೃದ್ಧ ಸೇನೆಯನ್ನು ಎದುರಿಸಲು ಶಕ್ಯರಿದ್ದಾರೆ. ಅವರೊಂದಿಗೆ ಸಾಮ ಮತ್ತು ದಾನಗಳ ಮೂಲಕ ಏನನ್ನು ಸಾಧಿಸಲೂ ಸಾಧ್ಯವಿಲ್ಲದಾಗ, ಅಂಥವರಿಗೆ ನಿನ್ನ ಕೃಪೆಯನ್ನು ತೋರಿಸುವ ಕರ್ತವ್ಯವನ್ನು ಮಾಡಬಾರದು. ಜೀವವನ್ನು ರಕ್ಷಿಸಿಕೊಳ್ಳಬೇಕಾದರೆ ಸಾಮ ಅಥವಾ ದಾನಗಳಿಂದ ಶಾಂತಗೊಳ್ಳದ ಶತ್ರುಗಳಿಗೆ ದಂಡವನ್ನು ತೋರಿಸಬೇಕು. ಆದುದರಿಂದ ಅವರ ಮೇಲೆ ಬೇಗನೇ ಸೃಂಜಯ ಪಾಂಡವರೊಡನೆ ನೀನು

ಮಹಾದಂಡವನ್ನು ಎಸೆ!

ಹೀಗೆ ಮಾಡುವುದರಿಂದ ಪಾರ್ಥರನ್ನು ಸಮರ್ಥಿಸಿದಂತಾಗುತ್ತದೆ, ನಿನಗೆ ಯಶಸ್ಸುಂಟಾಗುತ್ತದೆ, ಮತ್ತು ಕ್ಷತ್ರಿಯರಿಗೆ ಸುಖವಾಗುತ್ತದೆ. ಸ್ವಧರ್ಮವನ್ನು ಪಾಲಿಸುವ ಕ್ಷತ್ರಿಯನು ಲೋಭಿಯಾಗಿರುವ ಇನ್ನೊಬ್ಬ ಕ್ಷತ್ರಿಯನನ್ನು ಅಥವಾ ಎಲ್ಲ ಪಾಪಗಳಲ್ಲಿಯೂ ನಿರತನಾಗಿರುವ ಬ್ರಾಹ್ಮಣನನ್ನು ಬಿಟ್ಟು ಕ್ಷತ್ರಿಯರಲ್ಲದ ಇತರರನ್ನೂ ಕೊಲ್ಲಬೇಕು. ಬ್ರಾಹ್ಮಣನು ಸರ್ವವರ್ಣದವರಲ್ಲಿ ಹಿರಿಯ ಮತ್ತು ಉತ್ತಮ ಫಲವನ್ನು ಅನುಭವಿಸುವವನು. ಅವಧ್ಯನಾಗಿರುವವನನ್ನು ಕೊಲ್ಲುವುದು ಹೇಗೆ ದೋಷವೆನಿಸುತ್ತದೆಯೋ ಹಾಗೆಯೇ ವಧೆಗೆ ಅರ್ಹರಾದವರನ್ನು ವಧಿಸದೇ ಇರುವುದೂ ದೋಷವೆಂದು ಧರ್ಮವಿದರು ತಿಳಿದುಕೊಂಡಿದ್ದಾರೆ. ಈ ದೋಷವು ಸೈನಿಕರೊಂದಿಗೆ ಪಾಂಡವ- ಸೃಂಜಯರಿಗೆ ತಾಗದಂತೆ ಮಾಡು.

ಆದಷ್ಟು ಬಾರಿ ಇದನ್ನು ಹೇಳಿದ್ದಾಗಿದೆ! ಆದರೂ ವಿಶ್ವಾಸವಿಟ್ಟು ಕೇಳುತ್ತಿದ್ದೇನೆ - ಕೇಶವ! ನನ್ನಂಥಹ ಸ್ತ್ರೀಯು ಭೂಮಿಯಲ್ಲಿದ್ದಾಳೆಯೇ? ದ್ರುಪದರಾಜನ ಮಗಳು, ವೇದಿಮಧ್ಯದಿಂದ ಎದ್ದುಬಂದವಳು, ಧೃಷ್ಟದ್ಯುಮ್ನನ ತಂಗಿ,

ಕೃಷ್ಣ! ನಿನ್ನ ಪ್ರಿಯ ಸಖೀ, ಅಜಮೀಢಕುಲಕ್ಕೆ ಬಂದ ಮಹಾತ್ಮ ಪಾಂಡುವಿನ ಸೊಸೆ, ಇಂದ್ರಸಮಾನ ವರ್ಚಸರಾದ ಐವರು ಪಾಂಡುಪುತ್ರರ ರಾಣಿ, ಈ ಐವರು ವೀರರಿಂದ ಹುಟ್ಟಿದ ಐವರು ಮಹಾರಥಿಗಳು ನನ್ನ ಮಕ್ಕಳು, ಧರ್ಮದಂತೆ ನಿನಗೆ ಅಭಿಮನ್ಯುವಿನಂತಿರುವವರು. ಅಂಥಹ ನನ್ನನ್ನು, ಪಾಂಡುಪುತ್ರರು ನೋಡುತ್ತಿದ್ದಂತೆ ಮತ್ತು ನೀನು ಜೀವಿತವಾಗಿರುವಾಗಲೇ, ಕೂದಲನ್ನು ಹಿಡಿದೆಳೆದು ಸಭೆಗೆ ತಂದು ಅಪಮಾನಿಸಲಾಯಿತು. ಕೌರವರು, ಪಾಂಚಾಲರು ಮತ್ತು ವೃಷ್ಣಿಯರು ಜೀವಿತರಾಗಿರುವಾಗಲೇ ನನ್ನನ್ನು ಸಭಾಮಧ್ಯದಲ್ಲಿ ನಿಲ್ಲಿಸಿ ಪಾಪಿಗಳ ದಾಸಿಯನ್ನಾಗಿ ಮಾಡಿದರು. ಪಾಂಡವರು ಏನನ್ನೂ ಮಾಡದೇ, ಸಿಟ್ಟನ್ನೂ ಪ್ರಕಟಗೊಳಿಸದೇ ಸುಮ್ಮನೇ ಅದನ್ನು ನೋಡಿದರು. ಕಾಪಾಡು ಗೋವಿಂದ! ಎಂದು ನಾನು ನಿನ್ನನ್ನೇ ಮನಸ್ಸಿನಲ್ಲಿ ಬೇಡಿಕೊಂಡೆ. ಭಗವಾನ್ ರಾಜಾ ಮಾವನು ಯಾವಾಗ ನನಗೆ 'ಪಾಂಚಾಲೀ! ವರವನ್ನು ಕೇಳಿಕೋ! ನೀನು ವರಕ್ಕೆ ಅರ್ಹಳಾಗಿರುವೆ ಎಂದು ನನಗನ್ನಿಸುತ್ತಿದೆ' ಎಂಬ ಮಾತನ್ನು ಹೇಳಿದನೋ ಆಗ ಪಾಂಡವರು ಅದಾಸರಾಗಲಿ ಮತ್ತು ರಥ-ಆಯುಧಗಳನ್ನು ಹೊಂದಲಿ ಎಂದು ನಾನು ಕೇಳಿಕೊಂಡಾಗ ಅವರು ನಿರ್ಮುಕ್ತರಾದರು ವನವಾಸಕ್ಕೆ. ಈ ವಿಧದ ದುಃಖಗಳನ್ನು ನೀನು ತಿಳಿದಿದ್ದೀಯೆ. ಗಂಡಂದಿರು ಮತ್ತು

ಜ್ಞಾತಿಬಾಂಧವರೊಂದಿಗೆ ನನ್ನನ್ನು ಕಾಪಾಡು! ಕೃಷ್ಣ! ಧರ್ಮದಂತೆ ನಾನು ಭೀಷ್ಮ ಮತ್ತು ಧೃತರಾಷ್ಟ್ರ ಇಬ್ಬರ ಸೊಸೆಯೂ ಅಲ್ಲವೇ? ಆದರೂ ನನ್ನನ್ನು ದಾಸಿಯನ್ನಾಗಿ ಮಾಡಿದರು.

ಇನ್ನು ಒಂದು ಕ್ಷಣವೂ ದುರ್ಯೋಧನನು ಜೀವಂತವಿದ್ದಾನೆ ಎಂದಾದರೆ ಭೀಮಸೇನನ ಬಲಕ್ಕೆ ಧಿಕ್ಕಾರ! ಪಾರ್ಥನ ಬಿಲ್ಗಾರಿಕೆಗೆ ಧಿಕ್ಕಾರ! ಕೃಷ್ಣ! ನಿನಗೆ ನನ್ನ ಮೇಲೆ ಅನುಗ್ರಹವಿದೆಯೆಂದಾದರೆ, ನನ್ನ ಮೇಲೆ ಕೃಪೆಯಿದೆ ಎಂದಾದರೆ ನಿನ್ನ ಎಲ್ಲ ಕೋಪವನ್ನೂ ಧಾರ್ತರಾಷ್ಟ್ರರ ಮೇಲೆ ತಿರುಗಿಸು!"

ಹೀಗೆ ಹೇಳಿ ಆ ಕಪ್ಪು ಕಣ್ಣಿನ, ಪದ್ಮಾಕ್ಷೀ ವರಾರೋಹೆಯು, ತನ್ನ ಎಡಗೈಯಿಂದ ಮೃದುವಾದ, ತುದಿಯಲ್ಲಿ ಗುಂಗುರಾಗಿದ್ದ, ನೋಡಲು ಸುಂದರವಾಗಿದ್ದ, ಕಪ್ಪಾಗಿದ್ದ, ಪುಣ್ಯಗಂಧವನ್ನು ಸೂಸುತ್ತಿದ್ದ, ಸರ್ವಲಕ್ಷಣ ಸಂಪನ್ನವಾದ, ಮಹಾಸರ್ಪದಂತೆ ತೋರುತ್ತಿದ್ದ ತಲೆಗೂದಲನ್ನು ಎತ್ತಿಕೊಂಡು ಪುಂಡರೀಕಾಕ್ಷನಲ್ಲಿಗೆ ಆನೆಯಂತೆ ನಡೆದುಬಂದು, ಕಣ್ಣುಗಳಲ್ಲಿ ಕಣ್ಣೀರನ್ನು ತುಂಬಿಸಿಕೊಂಡು, ಕೃಷ್ಣೆಯು ಕೃಷ್ಣನಿಗೆ ಹೇಳಿದಳು.

"ಪುಂಡರೀಕಾಕ್ಷ! ಇದನ್ನೇ ಆ ದುಃಶಾಸನನು ಕೈಯಿಕ್ಕಿ ಎಳೆದುದು! ಅವರೊಂದಿಗೆ ಸಂಧಿಯನ್ನು ಬಯಸುವಾಗ

ಸರ್ವಕಾಲಗಳಲ್ಲಿ ಇದನ್ನು ನೆನಪಿಸಿಕೊಳ್ಳುತ್ತಿರು! ಒಂದು ವೇಳೆ ಭೀಮಾರ್ಜುನರು ಕೃಪಣರಾಗಿ ಸಂಧಿಯನ್ನು ಬಯಸಿದರೆ, ನನ್ನ ಈ ವೃದ್ಧ ತಂದೆಯು ಮಹಾರಥಿ ಮಕ್ಕಳನ್ನೊಡಗೂಡಿ ಹೋರಾಡುತ್ತಾನೆ! ಅಭಿಮನ್ಯುವನ್ನು ಮುಂದಿಟ್ಟುಕೊಂಡು ನನ್ನ ಐವರು ಮಹಾವೀರ ಪುತ್ರರು ಕುರುಗಳೊಂದಿಗೆ ಯುದ್ಧ ಮಾಡುತ್ತಾರೆ. ಯಾವಾಗ ದುಃಶಾಸನನ ಆ ಕಪ್ಪು ಭುಜಗಳನ್ನು ಕತ್ತರಿಸಿ ಧೂಳು ಮುಕ್ಕುವುದನ್ನು ನೋಡುತ್ತೇನೋ ಅಲ್ಲಿಯವರೆಗೆ ನನ್ನ ಹೃದಯಕ್ಕೆ ಶಾಂತಿಯೆಲ್ಲಿದೆ? ಉರಿಯುತ್ತಿರುವ ಬೆಂಕಿಯಂತಿದ್ದ ಈ ಕೋಪವನ್ನು ಹೃದಯಲ್ಲಿಟ್ಟುಕೊಂಡು ಕಾಯುತ್ತಾ ಹದಿಮೂರು ವರ್ಷಗಳು ಕಳೆದುಹೋದವು. ಇಂದು ಧರ್ಮವನ್ನು ಮಾತ್ರ ಕಾಣುವ ಆ ಮಹಾಬಾಹು ಭೀಮನ ವಾಕ್ಯದ ಮುಳ್ಳಿನಿಂದ ಪೀಡಿತನಾದ ನನ್ನ ಹೃದಯವು ಒಡೆಯುತ್ತಿದೆ.”

ಆ ಆಯತಲೋಚನೆ ಕೃಷ್ಣೆಯು ಕಣ್ಣೀರಿನಿಂದ ಕಟ್ಟಿದ ಕಂಠದಲ್ಲಿ ಹೀಗೆ ಹೇಳಿ ನಡುಗುತ್ತಾ ಗದ್ಗದ ಕಂಠದಲ್ಲಿ ಜೋರಾಗಿ ಅತ್ತಳು. ಅವಳ ಮೇಲುಬ್ಬಿದ ಮೊಲೆಗಳು ಕಣ್ಣೀರಿನಿಂದ ಒದ್ದೆಯಾದವು. ಆ ಶ್ರೋಣಿಯು ನೀರಾದ ಬೆಂಕಿಯಂತಿರುವ ಕಣ್ಣೀರನ್ನು ಒಂದೇ ಸಮನೆ ಸುರಿಸಿದಳು. ಮಹಾಬಾಹು ಕೇಶವನು ಅವಳನ್ನು ಸಂತವಿಸುತ್ತಾ ಹೇಳಿದನು:

“ಕೃಷ್ಣೇ! ಬೇಗನೇ ನೀನು ಭರತಸ್ತ್ರೀಯರು ರೋದಿಸುವುದನ್ನು

ನೋಡುವಿಯಂತೆ. ಅವರೂ ಕೂಡ ಹೀಗೆಯೇ ಜ್ಞಾತಿಬಾಂಧವರನ್ನು ಕಳೆದುಕೊಂಡು ರೋದಿಸುವರು. ಯಾರಮೇಲೆ ನೀನು ಸಿಟ್ಟಾಗಿದ್ದೀಯೋ ಅವರ ಮಿತ್ರರು ಮತ್ತು ಸೇನೆಯು ಈಗಾಗಲೇ ಹತರಾಗಿಬಿಟ್ಟಿದ್ದಾರೆ. ನಾನು, ಭೀಮಾರ್ಜುನರು ಮತ್ತು ಯಮಳರು ಯುಧಿಷ್ಠಿರನ ಮಾತಿನಂತೆ ಮಾಡುತ್ತೇವೆ. ದೈವವು ವಿಧಿನಿರ್ಮಿತ ಕೆಲಸವನ್ನು ಮಾಡುತ್ತದೆ. ಕಾಲದಲ್ಲಿ ಬೆಂದುಹೋಗಿರುವ ಧಾರ್ತರಾಷ್ಟ್ರರು ನನ್ನ ಮಾತುಗಳನ್ನು ಕೇಳದೇ ಇದ್ದರೆ ಅವರು ಹತರಾಗಿ ಭೂಮಿಯ ಮೇಲೆ ನಾಯಿ-ನರಿಗಳಿಗೆ ಆಹಾರವಾಗಿ ಬೀಳುತ್ತಾರೆ. ಹಿಮವತ್ ಪರ್ವತವು ಚಲಿಸಬಹುದು, ಭೂಮಿಯು ಚೂರಾಗಬಹುದು, ನಕ್ಷತ್ರಗಳೊಂದಿಗೆ ಆಕಾಶವು ಬೀಳಬಹುದು, ಆದರೆ ನನ್ನ ಮಾತು ಹುಸಿಯಾಗುವುದಿಲ್ಲ! ಕೃಷ್ಣೇ! ನಿನಗೆ ಸತ್ಯವನ್ನು ತಿಳಿಸುತ್ತಿದ್ದೇನೆ. ಕಣ್ಣೀರು ಸುರಿಸುವುದನ್ನು ನಿಲ್ಲಿಸು! ಬೇಗನೇ ನಿನ್ನ ಪತಿಯಂದಿರು ಶತ್ರುಗಳನ್ನು ಸಂಹರಿಸಿ ಶ್ರೀಯನ್ನು ಹೊಂದುತ್ತಾರೆ."

ಅರ್ಜುನನು ಹೇಳಿದನು:

"ಇಂದು ಕುರುಗಳೆಲ್ಲರ ಅನುತ್ತಮ ಗೆಳೆಯನು ನೀನೇ. ನೀನು ಯಾವಾಗಲೂ ಎರಡೂ ಪಕ್ಷಗಳ ಪ್ರೀತಿಯ ಸಂಬಂಧಿಯಾಗಿದ್ದೀಯೆ. ಪಾಂಡವರು ಮತ್ತು ಧಾರ್ತರಾಷ್ಟ್ರರ

ಕುಶಲವನ್ನು ಪ್ರತಿಪಾದಿಸಬೇಕು. ಕೇಶವ ! ಇಬ್ಬರನ್ನೂ ಪ್ರಶಾಂತಗೊಳಿಸಲು ನೀನೇ ಸಮರ್ಥನಾಗಿದ್ದೀಯೆ. ಈಗ ನೀನು ಅಮರ್ಷಣ ಸುಯೋಧನನಲ್ಲಿಗೆ ಶಾಂತಿಗಾಗಿ ಹೋಗಿ ಭಾರತರಿಗೆ ಏನು ಹೇಳಬೇಕೋ ಅದನ್ನು ಹೇಳು. ಮಂಗಳವೂ, ಅನಾಮಯವೂ, ಧರ್ಮಾರ್ಥಯುಕ್ತವೂ ಆದ ನಿನ್ನ ಹಿತವನ್ನು ಅವನು ಸ್ವೀಕರಿಸದೇ ಇದ್ದರೆ ದೈವದ ವಶವಾಗುತ್ತಾನೆ."

ಭಗವಂತನು ಹೇಳಿದನು:

"ಸರಿ ! ಧರ್ಮಸಮ್ಮತವಾಗಿ ದೊರೆಯಬೇಕಾದ, ನಮಗೆ ಲಾಭದಾಯಕವಾದ ಮತ್ತು ಕುರುಗಳಿಗೆ ಅನಾಮಯವಾದುದನ್ನು ಪಡೆಯುವ ಆಸೆಯನ್ನಿಟ್ಟುಕೊಂಡು ನಾನು ರಾಜ ಧೃತರಾಷ್ಟ್ರನಲ್ಲಿಗೆ ಹೋಗುತ್ತೇನೆ."

## ಹಸ್ತಿನಾಪುರಕ್ಕೆ ಶ್ರೀಕೃಷ್ಣನ ಪ್ರಯಾಣ

ರಾತ್ರಿಯು ಕಳೆದು ವಿಮಲ ಸೂರ್ಯನು ಉದಯಿಸಲು, ದಿವಾಕರನು ಮೃದುವಾಗಿ ಬೆಳಗುತ್ತಿದ್ದ ಮೈತ್ರ ಮುಹೂರ್ತವು ಸಂಪ್ರಾಪ್ತವಾಗಲು, ಕೌಮುದ ಮಾಸದಲ್ಲಿ, ರೇವತೀ ನಕ್ಷತ್ರದಲ್ಲಿ, ಶರದೃತುವು ಮುಗಿದು ಹೇಮಂತ ಋತುವು ಪ್ರಾರಂಭವಾಗುವಾಗ, ಸಸ್ಯಗಳು ಬೆಳೆಯನ್ನು ಹೊತ್ತು ಸುಖವಾಗಿರುವ ಕಾಲದಲ್ಲಿ ಸತ್ವವತರಲ್ಲಿ ಶ್ರೇಷ್ಠನು

ಸಿದ್ಧನಾದನು. ವಾಸವನು ಋಷಿಗಳಿಂದ ಕೇಳುವಂತೆ ಹೊರಡುವಾಗ ಅವನು ಬ್ರಾಹ್ಮಣರ ಮಂಗಳ ಘೋಷಗಳನ್ನೂ, ಪುಣ್ಯಾಹ-ವಾಚನಗಳನ್ನೂ, ಸತ್ಯಗಳನ್ನೂ ಕೇಳಿದನು. ಜನಾರ್ದನನು ಬೆಳಗಿನ ಆಹ್ನೀಕವನ್ನು ಪೂರೈಸಿ, ಸ್ನಾನಮಾಡಿ, ಶುದ್ಧಿಯಾಗಿ, ಅಲಂಕೃತನಾಗಿ, ಸೂರ್ಯ ಮತ್ತು ಅಗ್ನಿಯ ಉಪಾಸನೆಯನ್ನು ಮಾಡಿದನು. ಹೋರಿಯ ಬೆನ್ನನ್ನು ಸವರಿ, ಬ್ರಾಹ್ಮಣರನ್ನು ವಂದಿಸಿ, ಅಗ್ನಿಯ ಪ್ರದಕ್ಷಿಣೆಯನ್ನು ಮಾಡಿ, ಮುಂದಿರುವ ಕಲ್ಯಾಣ ವಸ್ತುಗಳನ್ನು ನೋಡಿದನು. ಪಾಂಡವರ ಮಾತನ್ನು ಮನ್ನಿಸಿ ಜನಾರ್ದನನು ಕುಳಿತಿದ್ದ ಶಿನಿ ಸಾತ್ಯಕಿಗೆ ಹೇಳಿದನು:

> "ಶಂಖ-ಚಕ್ರಗಳನ್ನೂ ಜೊತೆಗೆ ಗದೆಯನ್ನೂ, ಈಟಿ ಶಕ್ತಿಗಳನ್ನೂ, ಸರ್ವ ಪ್ರಹರಗಳನ್ನೂ ರಥಕ್ಕೆ ಏರಿಸು! ಏಕೆಂದರೆ ದುರ್ಯೋಧನ, ಕರ್ಣ ಮತ್ತು ಸೌಬಲರು ದುಷ್ಟಾತ್ಮರು. ಬಲಶಾಲಿಯಾದವನು ಶತ್ರುವು ಎಷ್ಟೇ ಕೀಳಾಗಿದ್ದರೂ ಅವರನ್ನು ಪರಿಗಣಿಸದೇ ಇರಬಾರದು."

ಆಗ ಕೇಶವನ ಆಜ್ಞೆಯನ್ನು ತಿಳಿದು ಸೇವಕರು ಸಡಗರದಿಂದ ಓಡಾಡುತ್ತಾ ಚಕ್ರ, ಗದೆಗಳಿಂದೊಡಗೂಡಿದ ರಥವನ್ನು ಕಟ್ಟಿದರು. ಆ ರಥವು ಕಲಾಗ್ನಿಯಂತೆ ಬೆಳಗುತ್ತಿತ್ತು ಮತ್ತು ಪಕ್ಷಿಯಂತೆ ಆಕಾಶದಲ್ಲಿ ಹಾರಿಹೋಗುವಂತಿತ್ತು. ಸಮಲಂಕೃತವಾದ ಅದರ ಎರಡು ಚಕ್ರಗಳು ಚಂದ್ರ ಮತ್ತು ಸೂರ್ಯರಂತೆ ಪ್ರಕಾಶಿಸುತ್ತಿದ್ದವು. ಅದರಲ್ಲಿ ಅರ್ಧಚಂದ್ರ, ಪೂರ್ಣಚಂದ್ರಗಳು, ಮೀನುಗಳು, ಮೃಗಪಕ್ಷಿಗಳು, ಹೂವುಗಳು, ವಿವಿಧ ಚಿತ್ರಗಳು, ಮತ್ತು ಮಣಿರತ್ನಗಳಿಂದ ಎಲ್ಲೆಡೆಯೂ

ತುಂಬಿದ, ಬೃಹತ್ತಾದ, ನೋಡಲು ಸುಂದರವಾದ, ಮಣಿ-ಹೇಮ-ಚಿತ್ರಗಳನ್ನೊಡಗೂಡಿದ, ಉದಯಿಸುವ ಸೂರ್ಯನಂತಿರುವ, ಉತ್ತಮ ಧ್ವಜವೂ ಉತ್ತಮ ಪತಾಕೆಯೂ ಇದ್ದವು. ಶತ್ರುಗಳ ಯಶವನ್ನು ತೆಗೆದುಹಾಕುವ ಮತ್ತು ಯದುಗಳ ಆನಂದವನ್ನು ಹೆಚ್ಚಿಸುವ ಆ ಧ್ವಜವು ಸಂಸ್ಕರಿಸಿದ ಚಿನ್ನದಿಂದ ಮಾಡಲ್ಪಟ್ಟಿದ್ದು, ಹುಲಿಯ ಚರ್ಮದಿಂದ ಸುತ್ತಲ್ಪಟ್ಟಿತ್ತು. ಅದಕ್ಕೆ ಅವನ ಕುದುರೆಗಳು - ಸೈನ್ಯ, ಸುಗ್ರೀವ, ಮೇಘಪುಷ್ಪ, ಬಲಾಹಕಗಳನ್ನು ಸ್ನಾನಮಾಡಿಸಿ, ಚೆನ್ನಾಗಿ ಸಿದ್ಧಪಡಿಸಿ ಕಟ್ಟಿದರು. ಆ ಸುಘೋಷ ರಥಕ್ಕೆ ಗರುಡನಿರುವ ಧ್ವಜವನ್ನು ಏರಿಸಿ ಕೃಷ್ಣನ ಮಹಿಮೆಯನ್ನು ಇನ್ನೂ ಹೆಚ್ಚಿಸಿದರು. ಮೇರುಶಿಖರದಂತಿದ್ದ, ಮೇಘದುಂದುಭಿಗಳಂತೆ ಮೊಳಗುತ್ತಿದ್ದ ಆ ರಥವನ್ನು, ಪುಣ್ಯಾತ್ಮನು ವಿಮಾನವನ್ನು ಏರುವಂತೆ, ಶೌರಿಯು ಏರಿದನು. ಆಗ ಸಾತ್ಯಕಿಯನ್ನು ಹತ್ತಿಸಿಕೊಂಡು ಪುರುಷೋತ್ತಮನು ಭೂಮಿ ಅಂತರಿಕ್ಷಗಳನ್ನು ರಥಘೋಷದಿಂದ ಮೊಳಗಿಸುತ್ತಾ ಹೊರಟನು.

ಆ ಕ್ಷಣದಲ್ಲಿಯೇ ಹವಾಮಾನವು ಸ್ವಚ್ಛವಾಯಿತು, ಆಕಾಶವು ಮೋಡರಹಿತವಾಯಿತು. ಮಂಗಳ ಗಾಳಿಯು ಬೀಸಿತು ಮತ್ತು ಮೇಲೆದ್ದ ಧೂಳು ಪ್ರಶಾಂತವಾಯಿತು. ಮಂಗಲ ಮೃಗಪಕ್ಷಿಗಳು ವಾಸುದೇವನನ್ನು ಅವನ ಪ್ರಯಾಣದಲ್ಲಿ ಅನುಸರಿಸಿ ಬಲಗಡೆಯಿಂದ ಪ್ರದಕ್ಷಿಣೆ ಮಾಡಿ ಹೋದವು. ಮಂಗಲವನ್ನು ಸೂಚಿಸುವಂತೆ ಕೂಗುತ್ತಾ ಸಾರಸಗಳು, ಹಂಸಗಳು ಮತ್ತು ಮರಕುಟುಕ ಪಕ್ಷಿಗಳು

ಮಧುಸೂದನನನ್ನು ಎಲ್ಲಕಡೆಯಿಂದ ಸುತ್ತುವರೆದವು. ಮಹಾಹೋಮಗಳಲ್ಲಿ ಮಂತ್ರಾಹುತಿಯನ್ನು ಹಾಕಿ, ಉರಿಯುತ್ತಿದ್ದ ಪಾವಕನು ಹೊಗೆಯಿಲ್ಲದೇ ಪ್ರದಕ್ಷಿಣವಾಗಿ ಉರಿಯತೊಡಗಿದನು. ವಸಿಷ್ಠ, ವಾಮದೇವ, ಭೂರಿದ್ಯುಮ್ನ, ಗಯ, ಕ್ರಥ, ಶುಕ್ರ, ನಾರದ, ವಾಲ್ಮೀಕಾ, ಮರುತ, ಕುಶಿಕ, ಭೃಗು ಮೊದಲಾದ ಬ್ರಹ್ಮರ್ಷಿ-ದೇವರ್ಷಿಗಳು ಯದುಸುಖಾವಹ, ವಾಸವಾನುಜ ಕೃಷ್ಣನನ್ನು ಪ್ರದಕ್ಷಿಣೆಮಾಡಿದರು.

ಈ ರೀತಿ ಮಹಾಭಾಗ ಮಹರ್ಷಿ-ಸಾಧುಗಣಗಳಿಂದ ಪೂಜಿತನಾಗಿ ಕೃಷ್ಣನು ಕುರುಗಳ ಸದನದೆಡೆಗೆ ಪ್ರಯಾಣಿಸಿದನು. ಮುಂದೆ ಹೋಗುತ್ತಿದ್ದ ಅವನನ್ನು ಕುಂತೀಪುತ್ರ ಯುಧಿಷ್ಠಿರ, ಭೀಮಸೇನ-ಅರ್ಜುನರು, ಪಾಂಡವ ಮಾದ್ರೀಪುತ್ರರಿಬ್ಬರು, ವಿಕ್ರಾಂತ ಚೇಕಿತಾನ, ಚೇದಿಪ ಧೃಷ್ಟಕೇತು, ದ್ರುಪದ, ಕಾಶಿರಾಜ, ಮಹಾರಥಿ ಶಿಖಂಡೀ, ದೃಷ್ಟದ್ಯುಮ್ನ, ಪುತ್ರರೊಂದಿಗೆ ವಿರಾಟ, ಕೇಕಯ ಎಲ್ಲರೂ ಜೊತೆಗೂಡಿ ಹಿಂಬಾಲಿಸಿದರು. ಕ್ಷತ್ರಿಯರು ಕ್ಷತ್ರಿಯರ್ಷಭನ ಯಶಸ್ಸಿಗೆ ಸಹಾಯಮಾಡಲು ಹೊರಟರು. ಗೋವಿಂದನನ್ನು ಸ್ವಲ್ಪ ದೂರ ಹಿಂಬಾಲಿಸಿದ ಧರ್ಮರಾಜ ಕೌಂತೇಯ ಯುಧಿಷ್ಠಿರನು ರಾಜರ ಸಮಕ್ಷಮದಲ್ಲಿ ದ್ಯುತಿಮಾನ, ಕಾಮ, ಭಯ, ಲೋಭ ಮತ್ತು ಅರ್ಥದ ಕಾರಣದಿಂದ ಅನ್ಯಾಯವಾಗಿ ನಡೆದುಕೊಳ್ಳದೇ ಇದ್ದ, ಸ್ಥಿರಬುದ್ಧಿಯನ್ನು ಹೊಂದಿದ, ಎಂದೂ ಲೋಲುಪನಾಗಿರದ, ಧರ್ಮಜ್ಞ, ಧೃತಿವಂತ, ಸರ್ವಭೂತಗಳಲ್ಲಿ ಪ್ರಾಜ್ಞನಾದ, ಸರ್ವಭೂತಗಳ ಈಶ್ವರ, ದೇವದೇವ,

ಪ್ರತಾಪವಾನ್, ಸರ್ವಗುಣಸಂಪನ್ನ, ಶ್ರೀವತ್ಸಕೃತಲಕ್ಷಣ, ಕೇಶವನನ್ನು ಆಲಂಗಿಸಿ ಈ ಮಾತುಗಳನ್ನಾಡಿದನು:

“ಮಾಧವ! ಜನಾರ್ದನ! ಬಾಲ್ಯದಿಂದಲೂ ಅಬಲೆಯಾಗಿದ್ದುಕೊಂಡು ನಮ್ಮನ್ನು ಬೆಳೆಸಿದ, ಉಪವಾಸ ತಪಸ್ಸು ಮತ್ತು ಇತರ ವ್ರತಗಳಲ್ಲಿ ಯಾವಾಗಲೂ ನಿರತಳಾಗಿರುವ, ದೇವ-ಅತಿಥಿ ಪೂಜೆಗಳಲ್ಲಿ ಮತ್ತು ಹಿರಿಯರ ಶುಶ್ರೂಷಣೆಯಲ್ಲಿ ನಿರತಳಾಗಿರುವ, ಮಕ್ಕಳನ್ನು ಪ್ರೀತಿ-ವಾತ್ಸಲ್ಯದಿಂದ ಕಾಣುವ, ನಮ್ಮ ಪ್ರಿಯೆಯಾದ, ಸುಯೋಧನನ ಭಯದಿಂದ ನಮ್ಮನ್ನು ರಕ್ಷಿಸಿದ, ಮಹಾ ಮೃತ್ಯುಭಯದಿಂದ ಮುಳುಗುವವರನ್ನು ಹಡಗು ರಕ್ಷಿಸುವಂತೆ ರಕ್ಷಿಸಿದ, ದುಃಖಕ್ಕೆ ಅನರ್ಹಳಾಗಿದ್ದರೂ ನಮಗೋಸ್ಕರ ಸತತವೂ ದುಃಖವನ್ನೇ ಅನುಭವಿಸಿದ ಅವಳ ಆರೋಗ್ಯವನ್ನು ವಿಚಾರಿಸು. ಪುತ್ರರ ಕುರಿತು ಶೋಕಸಂತಪ್ತಳಾದ ಅವಳನ್ನು ಚೆನ್ನಾಗಿ ಸಂತವಿಸು. ಪಾಂಡವರು ಚೆನ್ನಾಗಿದ್ದಾರೆಂದು ಹೇಳುತ್ತಾ ಅವಳನ್ನು ಆಲಂಗಿಸು. ಮದುವೆಯಾದಾಗಿನಿಂದ ಅವಳು ಮಾವನ ಮನೆಯವರಿಂದ ದುಃಖ-ಮೋಸಗಳನ್ನಲ್ಲದೇ ಬೇರೆ ಏನನ್ನೂ ಕಾಣದೇ ದುಃಖಿಸಿದ್ದಾಳೆ. ಅವಳ ದುಃಖವನ್ನು ಕಳೆಯುವ ಹಾಗೆ ನಾನು ಮಾಡುವ, ತಾಯಿಯ ಕಷ್ಟಗಳ ಬದಲಾಗಿ ಸುಖವನ್ನು ನೀಡುವ ಕಾಲವು ಎಂದಾದರೂ ಬರುವುದಿದೆಯೇ? ನಾವು ಹೊರಡುವಾಗ ಅವಳು ದೀನಳಾಗಿ,

ಪುತ್ರರ ಮೇಲಿನ ಆಸೆಯಿಂದ ನಮ್ಮ ಹಿಂದೆ ಓಡಿ ಬಂದಳು. ಆದರೂ ನಾವು ರೋದಿಸುತ್ತಿರುವ ಅವಳನ್ನು ಅಲ್ಲಿಯೇ ಬಿಟ್ಟು ವನಕ್ಕೆ ಬಂದೆವು. ಪುತ್ರರಿಗಾಗಿ ದುಃಖಿತಳಾಗಿ, ಇತರರಿಂದ ನೋಡಿಕೊಳ್ಳಲ್ಪಟ್ಟ ತಾಯಿಯಿರುವಾಗ ದುಃಖದಿಂದ ಜೀವ ತ್ಯಜಿಸುವುದೂ ಕಷ್ಟವಾಗುತ್ತದೆ! ನನ್ನ ವಚನದಂತೆ ಅವಳನ್ನು ಅಭಿವಂದಿಸು. ಹಾಗೆಯೇ ವೃದ್ಧರಾಜ ಕೌರವ್ಯ ಧೃತರಾಷ್ಟ್ರ, ಭೀಷ್ಮ, ದ್ರೋಣ, ಕೃಪ, ಮಹಾರಾಜಾ ಬಾಹ್ಲೀಕ, ದ್ರೌಣಿ, ಸೋಮದತ್ತ, ಮತ್ತೆ ಎಲ್ಲ ಭಾರತರು, ಮಹಾಪ್ರಾಜ್ಞ, ಕುರುಗಳ ಮಂತ್ರಧಾರಿಣಿ, ಅಗಾಧಬುದ್ಧಿ, ದರ್ಮಜ್ಞ ವಿದುರನನ್ನು ಕೂಡ ಅಭಿವಂದಿಸು.”

ಹೀಗೆ ಅಲ್ಲಿ ರಾಜರ ಮಧ್ಯದಲ್ಲಿ ಕೇಶವನಿಗೆ ಹೇಳಿ, ಕೃಷ್ಣನಿಗೆ ಪ್ರದಕ್ಷಿಣೆಮಾಡಿ ಆಜ್ಞೆಯನ್ನು ಪಡೆದು ಯುಧಿಷ್ಠಿರನು ಹಿಂದಿರುಗಿದನು. ಆದರೆ ಬೀಭತ್ಸುವು ಸಖನೊಂದಿಗೆ ಮುಂದುವರೆದು ಪುರುಷರ್ಷಭ, ಪರವೀರಘ್ನ, ಅಪರಾಜಿತ ದಾಶಾರ್ಹನಿಗೆ ಹೇಳಿದನು:

“ವಿಭೋ! ಗೋವಿಂದ! ಹಿಂದೆ ನಾವು ಮಂತ್ರಾಲೋಚನೆ ಮಾಡಿ ನಿಶ್ಚಯಿಸಿದ ಅರ್ಧರಾಜ್ಯದ ವಿಷಯವು ರಾಜರೆಲ್ಲರಿಗೂ ತಿಳಿದಿದೆ. ಒಂದು ವೇಳೆ ಅವರು ಅದನ್ನು ಗೌರವಿಸಿ, ತಿರಸ್ಕರಿಸದೇ ಕೊಡುತ್ತಾರೆಂದಾದರೆ ಅದು ನನಗೆ ಮೆಚ್ಚುಗೆಯಾಗುತ್ತದೆ ಮತ್ತು ಅವರನ್ನು ಮಹಾಭಯದಿಂದ

ಬಿಡುಗಡೆಗೊಳಿಸುತ್ತದೆ. ಆದರೆ ಧಾರ್ತರಾಷ್ಟ್ರನು ಉಪಾಯವನ್ನು ತಿಳಿಯದೇ ಬೇರೆಯದನ್ನು ಮಾಡಿದರೆ, ನಾನು ಕ್ಷತ್ರಿಯರು ಇಲ್ಲದಂತೆ ಮಾಡುತ್ತೇನೆ."

ಪಾಂಡವನು ಹೀಗೆ ಹೇಳಲು ವೃಕೋದರನು ಪರಮ ಹರ್ಷಿತನಾದನು. ಕ್ರೋಧಾವೇಶಗೊಂಡು ಪುನಃ ಪುನಃ ಆ ಪಾಂಡವನು ನಡುಗುತ್ತಿದ್ದನು. ಧನಂಜಯನ ಮಾತನ್ನು ಕೇಳಿ ಹರ್ಷೋತ್ಸಾಹಿಯಾದ ಕೌಂತೇಯನು ನಡುಗುತ್ತಾ ಜೋರಾಗಿ ಗರ್ಜಿಸಿದನು. ಅವನ ಆ ಕೂಗನ್ನು ಕೇಳಿ ಧನ್ವಿಗಳು ನಡುಗಿದರು, ಮತ್ತು ಎಲ್ಲ ವಾಹನಗಳೂ ಮಲ ಮೂತ್ರಗಳನ್ನು ವಿಸರ್ಜಿಸಿದವು. ಕೇಶವನಿಗೆ ಈ ರೀತಿ ತನ್ನ ನಿಶ್ಚಯವನ್ನು ಹೇಳಿ ಪಾರ್ಥನು ಜನಾರ್ದನನನ್ನು ಆಲಂಗಿಸಿ, ಅಪ್ಪಣೆಪಡೆದು, ಹಿಂದಿರುಗಿದನು.

ಆ ಎಲ್ಲ ರಾಜರೂ ಹಿಂದಿರುಗಿ ಹೋದ ನಂತರ ಜನಾರ್ದನನು ಸೈನ್ಯ-ಸುಗ್ರೀವ ವಾಹನನಾಗಿ ರೆಕ್ಕೆಗಳಿಂದ ಹಾರಿಹೋಗುತ್ತಿರುವವನಂತೆ ಕಂಡನು. ದಾರುಕನಿಂದ ಪ್ರಚೋದಿತವಾದ ವಾಸುದೇವನ ಆ ಕುದುರೆಗಳು ದಾರಿಯನ್ನು ಬಿಟ್ಟು ಆಕಾಶಕ್ಕೆ ಏರಿ ಹೋಗುತ್ತಿವೆಯೋ ಎಂಬಂತೆ ಸಾಗುತ್ತಿದ್ದವು. ಆಗ ಆ ಮಹಾಬಾಹು ಕೇಶವನು ದಾರಿಯ ಎರಡೂ ಕಡೆಗಳಲ್ಲಿ ನಿಂತಿದ್ದ ಬ್ರಹ್ಮಶ್ರೀಯಿಂದ ಬೆಳಗುತ್ತಿದ್ದ ಋಷಿಗಳನ್ನು ನೋಡಿದನು. ತಕ್ಷಣವೇ ಜನಾರ್ದನನು ರಥದಿಂದಿಳಿದು ನಮಸ್ಕರಿಸಿ, ಯಥಾವತ್ತಾಗಿ ಋಷಿಗಳನ್ನು ಪೂಜಿಸಿ ಮಾತನಾಡಿದನು:

“ಲೋಕಗಳಲ್ಲಿ ಕುಶಲವೇ? ಧರ್ಮವು ನೆಲೆಗೊಂಡಿದೆಯೇ? ಮೂರೂ ವರ್ಣದವರೂ ಬ್ರಾಹ್ಮಣರ ಶಾಸನದಡಿಯಲ್ಲಿದ್ದಾರೆಯೇ?”

ಅವರನ್ನು ಪೂಜಿಸಿ ಮಧುಸೂದನು ಮುಂದುವರೆಸಿದನು:

“ಭಗವಂತರೇ! ನಿಮ್ಮ ಸಿದ್ಧಿಯು ಎಲ್ಲಿಯವರೆಗೆ ಬಂದಿದೆ? ಯಾವ ಮಾರ್ಗವು ನಿಮ್ಮನ್ನು ಇಲ್ಲಿಯವರೆಗೆ ಕರೆತಂದಿತು? ನೀವುಗಳು ಏನಾದರೂ ಆಗಬೇಕೆಂದು ಬಯಸಿದ್ದೀರೇ? ನಾನು ನಿಮಗೋಸ್ಕರ ಏನು ಮಾಡಲಿ? ಭಗವಂತರಾದ ನೀವು ಯಾವ ಉದ್ದೇಶದಿಂದ ಈ ಭೂಮಿಗೆ ಬಂದಿದ್ದೀರಿ?”

ಜಾಮದಗ್ನಿಯು ಮಧುಸೂದನನ ಬಳಿಸಾರಿ, ಹಿಂದೆ ಉತ್ತಮ ಕಾರ್ಯಗಳಲ್ಲಿ ಸಖನಾಗಿದ್ದ ಗೋವಿಂದನನ್ನು ಆಲಂಗಿಸಿ ಹೇಳಿದನು:

“ದಾಶಾರ್ಹ! ಪುಣ್ಯಕೃತ ದೇವರ್ಷಿಗಳೂ, ಬಹುಶ್ರುತ ಬ್ರಾಹ್ಮಣರೂ, ರಾಜರ್ಷಿಗಳೂ, ಮಾನಯಂತ ತಪಸ್ವಿಗಳೂ ಹಿಂದೆ ನಡೆದಿದ್ದ ದೇವಾಸುರರ ಯುದ್ಧವನ್ನು ನೋಡಿದ್ದರು. ಈಗ ಅವರು ಇಲ್ಲಿ ಎಲ್ಲೆಡೆಯಿಂದ ಬಂದು ಸೇರಿರುವ ಕ್ಷತ್ರಿಯ ಪಾರ್ಥಿವರನ್ನು, ರಾಜರ ಸಭಾಸದರನ್ನೂ ಜನಾರ್ದನ ನಿನ್ನ ಸತ್ಯವನ್ನೂ ನೋಡಲು ಬಯಸಿದ್ದಾರೆ. ಈ ಮಹಾದೃಶ್ಯವನ್ನು ನೋಡಲು ನಾವು ಹೋಗುತ್ತಿದ್ದೇವೆ! ಕುರುರಾಜರ ಮಧ್ಯದಲ್ಲಿ ನೀನು ಹೇಳುವ ಧರ್ಮಾರ್ಥಸಹಿತ ಮಾತುಗಳನ್ನು ಕೇಳಲು

ಬಯಸುತ್ತೇವೆ. ಭೀಷ್ಮ, ದ್ರೋಣಾದಿಗಳು, ಮಹಾಮತಿ ವಿದುರ ಮತ್ತು ಯಾದವಶಾರ್ದೂಲ ನೀನೂ ಕೂಡ ಸಭೆಯಲ್ಲಿ ಸೇರುವಿರಿ! ಅಲ್ಲಿ ನಿನ್ನ ಮತ್ತು ಅವರ ಸತ್ಯ-ಶುಭ ವಾಕ್ಯಗಳನ್ನು ಕೇಳಲು ಬಯಸುತ್ತೇವೆ. ಮುಂದೆಸಾಗು! ನಾವು ಪುನಃ ನಿನ್ನನ್ನು ಕಾಣುತ್ತೇವೆ. ಅವಿಘ್ನನಾಗಿ ಪ್ರಯಾಣಿಸು. ಸಭೆಗೆ ಬಂದು ನಿನ್ನನ್ನು ಕಾಣುತ್ತೇವೆ.”

ಪ್ರಯಾಣಿಸುತ್ತಿದ್ದ ದೇವಕೀಪುತ್ರನನ್ನು ಹತ್ತು ಪರವೀರಹ ಮಹಾರಥಿ ಮಹಾಬಾಹುಗಳು ಶಸ್ತ್ರಗಳನ್ನು ಹಿಡಿದು, ಸಹಸ್ರ ಪದಾತಿಗಳು ಮತ್ತು ವಾಹಕರು, ಇನ್ನೂ ನೂರಾರು ಸೇವಕರು ವಿಪುಲ ಭೋಜ್ಯವಸ್ತುಗಳನ್ನು ತೆಗೆದುಕೊಂಡು ಅನುಸರಿಸಿದರು. ಆ ಮಹಾತ್ಮನು ಪ್ರಯಾಣಿಸುವಾಗ ಅನೇಕ ಅದ್ಭುತ, ದಿವ್ಯ, ದೈವವನ್ನು ಸೂಚಿಸುವ ಉತ್ಪಾತಗಳು ಕಾಣಿಸಿದವು. ಮೋಡವಿಲ್ಲದ ಆಕಾಶದಲ್ಲಿ ಗುಡುಗು ಸಿಡಿಲುಗಳು ಹುಟ್ಟಿದವು. ಮೋಡವಿಲ್ಲದೇ ಪರ್ಜನ್ಯನು ಅವನ ಹಿಂದೆ ಭಾರೀ ಮಳೆಯನ್ನು ಸುರಿಸಿದನು. ಪೂರ್ವಾಭಿಮುಖವಾಗಿ ಹರಿಯುತ್ತಿದ್ದ ಮಹಾನದಿಗಳು, ಸಿಂಧು ಸತ್ತಮಗಳು ತಮ್ಮ ದಿಕ್ಕನ್ನು ಬದಲಾಯಿಸಿ ಹರಿಯತೊಡಗಿದವು. ಎಲ್ಲ ದಿಕ್ಕುಗಳೂ ವಿಪರೀತವಾಗಿ, ಯಾವಕಡೆ ಯಾವ ದಿಕ್ಕು ಎನ್ನುವುದೇ ತಿಳಿಯದಂತಾಯಿತು. ಅಗ್ನಿಯು ಉರಿದನು, ಭೂಮಿಯು ಕಂಪಿಸಿತು, ನೂರಾರು ಬಾವಿ ಕೊಡಗಳಿಂದ ನೀರು ಉಕ್ಕಿ ಹರಿಯಿತು. ಆಗ ಈ ಜಗತ್ತನ್ನೆಲ್ಲವನ್ನೂ ಕತ್ತಲೆಯು ಆವರಿಸಿತು. ಧೂಳಿನಿಂದಾಗಿ ದಿಕ್ಕುಗಳ್ಯಾವುದು ಎಂದು ತಿಳಿಯದಂತಾಯಿತು.

ಆಕಾಶದಲ್ಲಿ ಮಹಾ ಶಬ್ಧವು ಕೇಳಿಬಂದಿತು, ಆದರೆ ಶರೀರವು ಎಲ್ಲಿಯೂ ಕಾಣಿಸಲಿಲ್ಲ. ಎಲ್ಲ ದೇಶಗಳಲ್ಲಿ ಆ ಅದ್ಭುತವು ನಡೆಯಿತು. ಜೋರಾಗಿ ಭಯಂಕರ ಶಬ್ಧಮಾಡುತ್ತಿದ್ದ ಭಿರುಗಾಳಿಯು ದಕ್ಷಿಣ ಪಶ್ಚಿಮದ ಕಡೆಯಿಂದ ಹಸ್ತಿನಾಪುರದ ಮೇಲೆ, ಹಲವಾರು ವೃಕ್ಷವನ್ನು ಕೆಡವುತ್ತಾ, ಬೀಸಿತು.

ಎಲ್ಲೆಲ್ಲಿ ವಾರ್ಷ್ಣೇಯನು ಹೋದನೋ ಅಲ್ಲಲ್ಲಿ ಸುಖವಾದ ಗಾಳಿಯು ಬೀಸಿತು, ಎಲ್ಲವೂ ಸರಿಯಾಗಿದ್ದಿತು. ಪುಷ್ಪವೃಷ್ಟಿಯಾಯಿತು. ಬಹಳಷ್ಟು ಕಮಲಗಳಿದ್ದವು. ದಾರಿಯು ತಾನಾಗಿಯೇ ಕಲ್ಲು ಮುಳ್ಳುಗಳಿಲ್ಲದೇ ಏರುತಗ್ಗುಗಳಿಲ್ಲದೇ ಸಮನಾಗುತ್ತಿತ್ತು. ಆ ಮಹಾಭುಜನು ಹೋದಲ್ಲೆಲ್ಲ ಬ್ರಾಹ್ಮಣರು ಅವನನ್ನು ಸುಮನಸ್ಸಿನಿಂದ ಮಧುಪರ್ಕವನ್ನಿತ್ತು ಅರ್ಚಿಸಿದರು ಮತ್ತು ಅವನು ಅವರಿಗೆ ಸಂಪತ್ತನ್ನು ಕರುಣಿಸಿದನು. ಆ ಸರ್ವಭೂತಹಿತ ರತ ಮಹಾತ್ಮನ ಮೇಲೆ ದಾರಿಯಲ್ಲಿ ಸ್ತ್ರೀಯರು ಗುಂಪುಗೂಡಿ ಸುಗಂಧಿತ ವನ ಪುಷ್ಪಗಳನ್ನು ಸುರಿಸಿದರು. ಅವನು ರಮ್ಯವಾದ, ಸರ್ವಸಸ್ಯಗಳಿಂದ ತುಂಬಿದ ಸುಖದಿಂದಿರುವ, ಪರಮ ಧರ್ಮಿಷ್ಠವಾದ ಶಾಲಿಭವನಕ್ಕೆ ಬಂದನು. ಬಹಳಷ್ಟು ಪ್ರಾಣಿಗಳನ್ನೂ, ಗ್ರಾಮಗಳನ್ನೂ, ರಮ್ಯವಾದ ಹೃದಯವನ್ನು ಸಂತೋಷಗೊಳಿಸುವ ಪುರಗಳನ್ನು ವಿವಿಧರಾಷ್ಟ್ರಗಳನ್ನು ದಾಟಿದನು. ನಿತ್ಯವೂ ಸಂತೋಷದಲ್ಲಿದ್ದ, ಸುಮನಸ್ಕರಾಗಿದ್ದ, ಭಾರತರಿಂದ ರಕ್ಷಿತರಾಗಿದ್ದ, ಶತ್ರುಗಳ ಭಯದಿಂದ ಉದ್ವಿಗ್ನರಾಗಿರದ, ಅನಾಮಯರಾದ, ಸುಶಿಕ್ಷಿತರಾದ, ಪುರನಿವಾಸಿ ಜನರು

ಉಪಪ್ಲವದಿಂದ ಬರುತ್ತಿದ್ದ ವಿಶ್ವಕ್ಸೇನನನ್ನು ನೋಡಲು ದಾರಿಯಲ್ಲಿ ಗುಂಪಾಗಿ ಸೇರಿ ನಿಂತಿದ್ದರು. ಅವರೆಲ್ಲರೂ ತಮ್ಮ ದೇಶಕ್ಕೆ ಅತಿಥಿಯಾಗಿ ಬಂದಿದ್ದ, ಪೂಜೆಗೆ ಅರ್ಹನಾದ ಅಗ್ನಿಯಂತೆ ಬೆಳಗುತ್ತಿದ್ದ ಪ್ರಭುವನ್ನು ಅರ್ಚಿಸಿದರು.

ಸ್ವಚ್ಛವಾದ ಸೂರ್ಯನು ಕೆಂಪು ಕಿರಣಗಳನ್ನು ಪಸರಿಸುವ ಸಮಯಕ್ಕೆ ಪರವೀರಹ ಕೇಶವನು ವೃಕಸ್ಥಲವನ್ನು ಸೇರಿದನು. ರಥದಿಂದ ಇಳಿದು, ಯಥಾವಿಧಿಯಾಗಿ ಶೌಚವನ್ನು ಮಾಡಿ, ರಥವನ್ನು ಕಳಚಲು ಆದೇಶವನ್ನಿತ್ತು ಸಂಧ್ಯಾವಂದನೆಯಲ್ಲಿ ತೊಡಗಿದನು. ದಾರುಕನಾದರೋ ಕುದುರೆಗಳನ್ನು ಬಿಚ್ಚಿ ಶಾಸ್ತ್ರೋಕ್ತವಾಗಿ ಪರಿಚರ್ಯವನ್ನು ಮಾಡಿ, ಅವರ ಕವಚಗಳೆಲ್ಲವನ್ನೂ ತೆಗೆದು ವಿಶ್ರಾಂತಿಗೆಂದು ಬಿಟ್ಟನು. ಅವೆಲ್ಲವನ್ನು ಮುಗಿಸಿದ ನಂತರ ಅವನಿಗೆ ಮಧುಸೂದನನು ಹೇಳಿದನು:

> “ಯುಧಿಷ್ಠಿರನ ಕಾರ್ಯಕ್ಕೆ ಹೊರಟಿರುವ ನಾವು ಈ ರಾತ್ರಿಯನ್ನು ಇಲ್ಲಿಯೇ ಕಳೆಯೋಣ!”

ಅವನ ಅಭಿಪ್ರಾಯವನ್ನು ತಿಳಿದ ಜನರು ಬೇಗನೆ ಚೆನ್ನಾದ ಅನ್ನ ಪಾನೀಯಗಳನ್ನು ಸಿದ್ಧಪಡಿಸಿದರು. ಆ ಗ್ರಾಮದಲ್ಲಿದ್ದ ಆರ್ಯ, ಕುಲೀನ, ವಿನಯಶೀಲ, ಬ್ರಾಹ್ಮಣವೃತ್ತಿಯನ್ನು ಅನುಸರಿಸುತ್ತಿದ್ದ ಪ್ರಧಾನ ಬ್ರಾಹ್ಮಣರು ಬಂದು ಮಹಾತ್ಮ, ಅರಿಂದಮ, ಕೇಶವನನ್ನು ಯಥಾನ್ಯಾಯವಾಗಿ ಪೂಜಿಸಿ ಅಶೀರ್ವಚನ, ಮಂಗಳಗಳನ್ನು

ನೀಡಿದರು. ಸರ್ವಲೋಕದಲ್ಲಿ ಪೂಜಿತನಾದ ದಾಶಾರ್ಹನನ್ನು ಪೂಜಿಸಿ ಆ ಮಹಾತ್ಮನಿಗೆ ತಮ್ಮ ರತ್ನವಂತೀ ಮನೆಗಳನ್ನು ಉಳಿಯಲು ಒಪ್ಪಿಸಿದರು. ಆಯಿತೆಂದು ಅವರಿಗೆ ಹೇಳಿ ಪ್ರಭುವು ಅವರನ್ನು ಯಥಾರ್ಹವಾಗಿ ಸತ್ಕರಿಸಿ ಅವರ ಮನೆಗಳಿಗೆ ಹೋಗಿ ಅವರೊಂದಿಗೆ ಹಿಂದಿರುಗಿದನು. ಅಲ್ಲಿ ಬ್ರಾಹ್ಮಣರಿಗೆ ಸಮೃಷ್ಟ ಭೋಜನವನ್ನಿತ್ತು, ಅವರೊಂದಿಗೆ ತಾನೂ ಉಂಡು, ರಾತ್ರಿಯನ್ನು ಸುಖವಾಗಿ ಕಳೆದನು.

## ಹಸ್ತಿನಾಪುರದಲ್ಲಿ ಶ್ರೀಕೃಷ್ಣನ ಆಗಮನಕ್ಕೆ ಸಿದ್ಧತೆ

ಮಧುಸೂದನನು ಬರುತ್ತಿದ್ದಾನೆ ಎನ್ನುವುದನ್ನು ದೂತರಿಂದ ತಿಳಿದ ಧೃತರಾಷ್ಟ್ರನು ಮಹಾಭುಜ ಭೀಷ್ಮನನ್ನು ಪೂಜಿಸಿ, ದ್ರೋಣ, ಸಂಜಯ, ಮಹಾಮತಿ ವಿದುರ, ಮತ್ತು ಅಮಾತ್ಯರೊಂದಿಗೆ ರೋಮ ಹರ್ಷಿತನಾಗಿ ದುರ್ಯೋಧನನಿಗೆ ಹೇಳಿದನು:

> “ಕುರುನಂದನ! ಅದ್ಭುತವೂ ಮಹದಾಶ್ಚರ್ಯವೂ ಆದುದು ಕೇಳಿಬರುತ್ತಿದೆ! ಮನೆಮನೆಗಳಲ್ಲಿ ಸ್ತ್ರೀಯರು, ಬಾಲಕರು, ವೃದ್ಧರು ಹೇಳುತ್ತಿದ್ದಾರೆ. ಕೆಲವರು ಭಕ್ತಿಯಿಂದ ಹೇಳುತ್ತಿದ್ದಾರೆ, ಇತರರು ಗುಂಪುಗಳಲ್ಲಿ ಹೇಳುತ್ತಿದ್ದಾರೆ, ಚೌಕಗಳಲ್ಲಿ ಸಭೆಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ವಾರ್ತೆಯು ಕೇಳಿಬರುತ್ತಿದೆ. ಪಾಂಡವರಿಗಾಗಿ ಪರಾಕ್ರಮಿ ದಾಶಾರ್ಹನು ಬರುತ್ತಿದ್ದಾನೆ. ಆ ಮಧುಸೂದನನನ್ನು ಸರ್ವಥಾ ಗೌರವಿಸಬೇಕು, ಪೂಜಿಸಬೇಕು. ಅವನಲ್ಲಿಯೇ ಲೋಕದ

ಯಾತ್ರೆಯು ನಡೆಯುತ್ತದೆ. ಅವನೇ ಭೂತಗಳ ಈಶ್ವರ! ಆ ಮಾಧವನಲ್ಲಿ ಧೃತಿ, ವೀರ್ಯ, ಪ್ರಜ್ಞೆ ಮತ್ತು ಓಜಸ್ಸುಗಳು ನೆಲೆಸಿವೆ. ಆ ನರಶ್ರೇಷ್ಠನನ್ನು ಮನ್ನಿಸಬೇಕು. ಅವನೇ ಸನಾತನ ಧರ್ಮ. ಪೂಜಿಸಿದರೆ ಸುಖವನ್ನು, ಪೂಜಿಸದಿದ್ದರೆ ಅಸುಖವನ್ನು ತರುತ್ತಾನೆ. ನಮ್ಮ ಉಪಚಾರಗಳಿಂದ ಅರಿಂದಮ ದಾಶಾರ್ಹನು ತೃಪ್ತನಾದರೆ, ನಮ್ಮೆಲ್ಲ ರಾಜರ ಸರ್ವ ಕಾಮನೆಗಳನ್ನೂ ಪಡೆಯುತ್ತೇವೆ. ಇಂದೇ ಅವನ ಪೂಜೆಗೆ ಸಿದ್ಧಗೊಳಿಸು. ದಾರಿಯಲ್ಲಿ ಸರ್ವಕಾಮಗಳನ್ನು ಪೂರೈಸಬಲ್ಲ ಸಭೆಗಳು ನಿರ್ಮಾಣಗೊಳ್ಳಲಿ. ಗಾಂಧಾರೇ! ಅವನಿಗೆ ನಿನ್ನ ಮೇಲೆ ಪ್ರೀತಿಯುಂಟಾಗುವಂತೆ ಮಾಡು! ಅಥವಾ ಭೀಷ್ಮ! ನಿನಗೇನನ್ನಿಸುತ್ತದೆ?"

ಆಗ ಭೀಷ್ಮಾದಿಗಳೆಲ್ಲರೂ ಜನಾಧಿಪ ಧೃತರಾಷ್ಟ್ರನಿಗೆ "ಬಹು ಉತ್ತಮ!" ಎಂದು ಹೇಳಿ ಅವನ ಮಾತನ್ನು ಗೌರವಿಸಿದರು. ಅವರ ಅನುಮತವನ್ನು ತಿಳಿದ ರಾಜಾ ದುರ್ಯೋಧನನು ರಮ್ಯ ಸಭಾಭವನಗಳನ್ನು ಕಟ್ಟಿಸಲು ಪ್ರಾರಂಭಿಸಿದನು. ಆಗ ದೇಶದೇಶಗಳಲ್ಲಿ ರಮಣೀಯ ಭಾಗಗಳಲ್ಲಿ ಅನೇಕ ಸಂಖ್ಯೆಗಳಲ್ಲಿ ಸಭೆಗಳನ್ನು ನಿರ್ಮಿಸಲಾಯಿತು - ಎಲ್ಲವೂ ರತ್ನಗಳನ್ನು ಒಳಗೊಂಡಿದ್ದವು, ಬಣ್ಣಬಣ್ಣದ ವಿವಿಧ ಗುಣಗಳ ಆಸನಗಳನ್ನು ಒಳಗೊಂಡಿದ್ದವು, ಉತ್ತಮ ವಸ್ತ್ರಗಳನ್ನು ಧರಿಸಿದ ಸ್ತ್ರೀಯರು ಗಂಧ ಅಲಂಕಾರಗಳನ್ನು ಹಿಡಿದಿದ್ದರು; ಉತ್ತಮ ಗುಣದ ಅನ್ನ ಪಾನೀಯಗಳು ವಿವಿಧ

ಭೋಜನಗಳು, ಮಾಲೆಗಳು, ಸುಂಗಂಧಗಳು ಎಲ್ಲವನ್ನೂ ರಾಜನು ಕೊಟ್ಟಿದ್ದನು. ವಿಶೇಷವಾಗಿ ವೃಕಸ್ಥಲ ಗ್ರಾಮದಲ್ಲಿ ಉಳಿಯುವುದಕ್ಕೆಂದು ರಾಜಾ ಕೌರವನು ಬಹುರತ್ನಗಳಿಂದ ಮನೋರಮ ಸಭೆಯನ್ನು ನಿರ್ಮಿಸಿದ್ದನು. ಈ ರೀತಿ ಎಲ್ಲ ಅತಿಮಾನುಷವಾದ, ದೇವತೆಗಳಿಗೆ ತಕ್ಕುದಾದ ವ್ಯವಸ್ಥೆಗಳನ್ನು ಮಾಡಿಸಿ, ದುರ್ಯೋಧನನು ರಾಜಾ ಧೃತರಾಷ್ಟ್ರನಿಗೆ ವರದಿ ಮಾಡಿದನು. ಅದರೆ ವಿವಿಧ ರತ್ನಗಳಿಂದ ಕೂಡಿದ ಆ ಸಭೆಗಳೆಲ್ಲವನ್ನೂ ನಿರ್ಲಕ್ಷಿಸಿ ಕೇಶವ ದಾಶಾರ್ಹನು ಕುರುಗಳ ಸದನಕ್ಕೆ ನಡೆದನು.

ಧೃತರಾಷ್ಟ್ರನು ಹೇಳಿದನು:

> “ಕ್ಷತ್ತ! ಉಪಪ್ಲವದಿಂದ ಇಲ್ಲಿಗೆ ಜನಾರ್ದನನು ಬರುತ್ತಿದ್ದಾನೆ. ವೃಕಸ್ಥಲದಲ್ಲಿ ರಾತ್ರಿಯನ್ನು ಕಳೆಯುತ್ತಿದ್ದಾನೆ ಮತ್ತು ಅವನು ನಾಳೆ ಬೆಳಿಗ್ಗೆ ಇಲ್ಲಿಗೆ ಬರುತ್ತಾನೆ. ಆಹುಕರ ಅಧಿಪತಿ, ಸರ್ವಸಾತ್ವತರ ನಾಯಕ, ಮಹಾಮನಸ್ವಿ, ಮಹಾವೀರ, ಮಹಾಮಾತ್ರ ಜನಾರ್ದನ ಮಾಧವನು ವೃಷ್ಣೀ ವಂಶದ ಒಡೆಯ ಮತ್ತು ರಕ್ಷಕ. ಅವನು ಮೂರೂ ಲೋಕಗಳ ಭಗವಾನ್ ಪಿತಾಮಹ. ಹೇಗೆ ಆದಿತ್ಯರು, ವಸುಗಳು ಮತ್ತು ರುದ್ರರು ಬೃಹಸ್ಪತಿಯ ಬುದ್ಧಿಯನ್ನು ಹೇಗೋ ಹಾಗೆ ವೃಷ್ಣಿ ಅಂಧಕರು ಈ ಸುಮನಸನ ಬುದ್ಧಿಯನ್ನು ಗೌರವಿಸುತ್ತಾರೆ. ಆ ಮಹಾತ್ಮ ದಾಶಾರ್ಹನಿಗೆ ಪೂಜೆಯನ್ನು ಸಲ್ಲಿಸುತ್ತೇನೆ. ಹೇಗೆ ಎಂದು ನಾನು ಹೇಳುತ್ತೇನೆ. ಧರ್ಮಜ್ಞನಾದ ನೀನು

ಪ್ರತ್ಯಕ್ಷವಾಗಿ ಕೇಳು.

ನಾನು ಅವನಿಗೆ ಪ್ರತಿಯೊಂದೂ ನಾಲ್ಕು ಬಾಹ್ಲಿಯಕದ ಹುಟ್ಟಿದ, ಕಪ್ಪುಬಣ್ಣದ ಒಂದೇ ತರಹದ ಉತ್ತಮ ಕುದುರೆಗಳನ್ನು ಕಟ್ಟಲ್ಪಟ್ಟ ಹದಿನಾರು ರಥಗಳನ್ನು ಕೊಡುತ್ತೇನೆ. ಈಟಿಯಂಥ ಕೋರೆದಾಡೆಗಳುಳ್ಳ, ನಿತ್ಯವೂ ಮದದಿಂದ ಪ್ರಹಾರಮಾಡುವ, ಒಂದೊಂದಕ್ಕೂ ಎಂಟು ಅನುಚರರಿರುವ ಎಂಟು ಆನೆಗಳನ್ನು ನಾನು ಕೇಶವನಿಗೆ ಕೊಡುತ್ತೇನೆ. ನಾನು ಅವನಿಗೆ ಇನ್ನೂ ಮಕ್ಕಳನ್ನು ಹಡೆಯದೇ ಇದ್ದ, ಬಂಗಾರದ ಬಣ್ಣದ ನೂರು ಸುಂದರ ದಾಸಿಯರನ್ನೂ ಅಷ್ಟೇ ಸಂಖ್ಯೆಯ ದಾಸರನ್ನೂ ಕೊಡುತ್ತೇನೆ. ಕೇಶವನಿಗೆ ಅರ್ಹವಾದ, ಪರ್ವತದ ಜನರು ನನಗೆ ತಂದು ಕೊಟ್ಟಿರುವ ಹದಿನೆಂಟು ಸಾವಿರ ಮೃದು ಕಂಬಳಿಗಳನ್ನು ಮತ್ತು ಚೀನದೇಶದಿಂದ ಬಂದ ಸಹಸ್ರಾರು ಜಿನ ಚರ್ಮಗಳನ್ನು ಸಲ್ಲಿಸುತ್ತೇನೆ. ಈ ವಿಮಲ ಮಣಿಯು ಹಗಲು ಮತ್ತು ರಾತ್ರಿ ತೇಜಸ್ಸಿನಿಂದ ಹೊಳೆಯುತ್ತದೆ. ಇದೂ ಕೂಡ ಕೇಶವನಿಗೆ ಅರ್ಹವಾದುದು. ಅವನಿಗೆ ಇದನ್ನೂ ಸಮರ್ಪಿಸುತ್ತೇನೆ. ಒಂದೇ ದಿನದಲ್ಲಿ ಹದಿನಾಲ್ಕು ಯೋಜನ ದೂರ ಹೋಗಬಲ್ಲ ಅಶ್ವತರಿಯಿಂದೊಡಗೂಡಿದ ವಾಹನವನ್ನು ಕೂಡ ಅವನಿಗೆ ಕೊಡುತ್ತೇನೆ. ಪ್ರತಿದಿನವೂ ಅವನೊಂದಿಗೆ ಬಂದಿರುವ ವಾಹನ ಪುರುಷರಿಗೆ ಬೇಕಾದುದಕ್ಕಿಂತ ಎಂಟು ಪಟ್ಟು

ಹೆಚ್ಚಿನ ಭೋಜನವನ್ನು ಅವನಿಗೆ ನೀಡುತ್ತೇನೆ. ದುರ್ಯೋಧನನನ್ನು ಬಿಟ್ಟು ನನ್ನ ಎಲ್ಲ ಮಕ್ಕಳೂ ಮೊಮ್ಮಕ್ಕಳೂ ಚೆನ್ನಾಗಿ ಅಲಂಕೃತಗೊಂಡ ರಥಗಳಲ್ಲಿ ದಾಶಾರ್ಹನನ್ನು ಬರಮಾಡಿಕೊಳ್ಳಲು ಹೋಗುತ್ತಾರೆ. ಅಲಂಕೃತರಾದ ಸುಂದರ ಪದಾತಿಗಳೂ ಆಸ್ಥಾನಿಕರೂ ಸಹಸ್ರಾರು ಸಂಖ್ಯೆಗಳಲ್ಲಿ ಆ ಮಹಾಭಾಗ ಕೇಶವನನ್ನು ಸ್ವಾಗತಿಸಲು ಹೋಗುತ್ತಾರೆ. ಜನಾರ್ದನನನ್ನು ನೋಡಲು ನಗರದಿಂದ ಯಾರೆಲ್ಲ ಕಲ್ಯಾಣ ಕನ್ಯೆಯರು ಹೋಗುತ್ತಾರೋ ಅವರು ಅನಾವೃತರಾಗಿ ಹೋಗುತ್ತಾರೆ. ಸ್ತ್ರೀ ಪುರುಷ ಬಾಲಕರೊಂದಿಗೆ ಇಡೀ ನಗರದ ಪ್ರಜೆಗಳು ಮಹಾತ್ಮ ಮಧುಸೂದನನನ್ನು ಸೂರ್ಯನನ್ನು ಹೇಗೋ ಹಾಗೆ ನೋಡಲಿದ್ದಾರೆ. ಅವನು ಬರುವ ದಾರಿಯಲ್ಲಿ ಎಲ್ಲ ಕಡೆಗಳಲ್ಲಿ ಮಹಾಧ್ವಜ ಪತಾಕೆಗಳನ್ನು ಏರಿಸಲಿ. ನೀರನ್ನು ಸಿಂಪಡಿಸಿ ಧೂಳಾಗದಂತೆ ಮಾಡಲಿ. ಅವನಿಗಾಗಿ ದುರ್ಯೋಧನನ ಮನೆಗಿಂಥ ಚೆನ್ನಾಗಿರುವ ದುಃಶಾಸನನ ಮನೆಯನ್ನು ಬೇಗನೆ ಚೆನ್ನಾಗಿ ಅಲಂಕರಿಸಿ ಸಿದ್ಧಗೊಳಿಸಲ್ಪಡಲಿ. ಅದು ಸುಂದರ ಪ್ರಾಕಾರಗಳಿಂದ ಕೂಡಿದೆ, ರಮಣೀಯವಾಗಿದೆ, ಮಂಗಳಕರವಾಗಿದೆ, ಎಲ್ಲ ಋತುಗಳಲ್ಲಿಯೂ ಮಹಾಧನದಿಂದ ಕೂಡಿರುತ್ತದೆ. ಆ ಮನೆಯಲ್ಲಿ ವಾರ್ಷ್ಣೇಯನಿಗೆ ತಕ್ಕುದಾದ ನನ್ನ ಮತ್ತು ದುರ್ಯೋಧನನ

ರತ್ನಗಳಿವೆ. ಅದರಲ್ಲಿ ಸಂಶಯವೇ ಇಲ್ಲ.”

ವಿದುರನು ಹೇಳಿದನು:

“ರಾಜನ್! ನೀನು ಸತ್ತಮನೆಂದು ಮೂರು ಲೋಕಗಳಲ್ಲಿಯೂ ಬಹುಮತವಿದೆ. ಲೋಕದಲ್ಲಿ ನೀನು ಸಂಭಾವಿತನೆಂದೂ ಸಮ್ಮತಿಯಿದೆ. ಶಾಸ್ತ್ರವನ್ನು ಆಧರಿಸಿ ಅಥವಾ ಉತ್ತಮ ತರ್ಕವನ್ನು ಆಧರಿಸಿ ನೀನು ಏನೇ ಹೇಳಿದರೂ, ಕೊನೆಯ ವಯಸ್ಸಿನಲ್ಲಿರುವ ನೀನು ವೃದ್ಧನಾಗಿರುವುದರಿಂದ ಅದು ಸುಸ್ಥಿರವೆನಿಸಿಕೊಳ್ಳುತ್ತದೆ. ಕಲ್ಲುಗಳ ಮೇಲೆ ಗೆರೆಗಳಿರುವಂತೆ, ಸೂರ್ಯನಲ್ಲಿ ಬೆಳಕಿರುವಂತೆ ಮತ್ತು ಸಾಗರದಲ್ಲಿ ಅಲೆಗಳಿರುವಂತೆ ನಿನ್ನಲ್ಲಿ ಮಹಾ ಧರ್ಮವಿದೆ ಎಂದು ಪ್ರಜೆಗಳು ತಿಳಿದುಕೊಂಡಿದ್ದಾರೆ. ನಿನ್ನಲ್ಲಿರುವ ಉತ್ತಮ ಗುಣಗಳಿಂದ ಲೋಕವು ಸದಾ ನಿನ್ನನ್ನು ಗೌರವಿಸುತ್ತದೆ. ಬಾಂಧವರೊಂದಿಗೆ ಆ ಗುಣಗಳನ್ನು ಕಾಪಾಡಿಕೊಳ್ಳಲು ನಿತ್ಯವೂ ಪ್ರಯತ್ನಿಸು. ಬಾಲ್ಯತನದಿಂದ ಬಹುರೀತಿಯಲ್ಲಿ ನಿನ್ನ ರಾಜ್ಯ, ಮಕ್ಕಳು, ಮೊಮ್ಮೊಕ್ಕಳೂ, ಸುಹೃದಯರು ಮತ್ತು ಪ್ರಿಯರು ನಾಶವಾಗದಂತೆ ಆರ್ಜವವನ್ನು ನಿನ್ನದಾಗಿಸಿಕೋ! ಕೃಷ್ಣನಿಗೆ ನೀನು ಆತಿಥ್ಯದಿಂದ ಏನೆಲ್ಲ ಕೊಡಲು ಬಯಸುವೆಯೋ ಅದಕ್ಕಿಂತಲೂ ಹೆಚ್ಚಿನದಕ್ಕೆ, ಇಡೀ ಭೂಮಿಗೇ, ಆ ದಾಶಾರ್ಹನು ಅರ್ಹ! ಆದರೆ ನೀನು

ಅವೆಲ್ಲವನ್ನು ಧರ್ಮದ ಉದ್ದೇಶದಿಂದ ಅಥವ ಕೃಷ್ಣನ ಮೇಲೆ ನಿನಗಿರುವ ಪ್ರೀತಿಯ ಕಾರಣದಿಂದ ಕೊಡಲು ಬಯಸುತ್ತಿಲ್ಲ. ನನ್ನ ಆತ್ಮದ ಸಾಕ್ಷಿಯಾಗಿ ಇದು ಸತ್ಯವೆಂದು ಹೇಳುತ್ತೇನೆ. ಇದೊಂದು ಮೋಸ, ಸುಳ್ಳು, ಮೇಲ್ನೋಟ! ರಾಜನ್! ನೀನು ಹೊರಗಡೆಯವರ ತೋರಿಕೆಗೆ ಮಾಡುವ ಈ ಕೆಲಸದ ಹಿಂದೆ ಅಡಗಿರುವ ಯೋಚನೆಯನ್ನು ನಾನು ತಿಳಿದಿದ್ದೇನೆ. ಪಾಂಡವರು ಐದೇ ಐದು ಗ್ರಾಮಗಳನ್ನು ಕೇಳುತ್ತಿದ್ದಾರೆ. ಅದನ್ನೂ ಕೊಡಲು ನೀನು ಬಯಸುತ್ತಿಲ್ಲ. ಹೀಗಿರುವಾಗ ಯಾರುತಾನೇ ಶಾಂತಿಯನ್ನುಂಟುಮಾಡುತ್ತಾರೆ? ಸಂಪತ್ತಿನಿಂದ ಮಹಾಬಾಹು ವಾರ್ಷ್ಣೇಯನನ್ನು ನೀನು ಗೆಲ್ಲಲು ಬಯಸುತ್ತಿದ್ದೀಯೆ.ಈ ಉಪಾಯಗಳಿಂದ ಅವನನ್ನು ಪಾಂಡವರಿಂದ ಬೇರ್ಪಡಿಸಲು ಪ್ರಯತ್ನಿಸುತ್ತಿದ್ದೀಯೆ. ನಾನು ನಿನಗೆ ಹೇಳುತ್ತಿದ್ದೇನೆ. ವಿತ್ತದಿಂದಾಗಲೀ, ಪ್ರಯತ್ನದಿಂದಾಗಲೀ, ಬೈಯುವುದರಿಂದಾಗಲೀ ಅಥವಾ ಬೇರೆ ಯಾವುದರಿಂದಾಗಲೀ ಅವನನ್ನು ಧನಂಜಯನಿಂದ ಬೇರ್ಪಡಿಸಲು ಸಾಧ್ಯವಿಲ್ಲ. ಕೃಷ್ಣನ ಮಹಾತ್ಮೆಯನ್ನು ತಿಳಿದಿದ್ದೇನೆ. ಅವನ ದೃಢಭಕ್ತಿಯನ್ನು ತಿಳಿದಿದ್ದೇನೆ. ತನ್ನ ಪ್ರಾಣಕ್ಕೆ ಸಮನಾದ ಧನಂಜಯನನ್ನು ಅವನು ತ್ಯಜಿಸುವುದಿಲ್ಲ ಎನ್ನುವುದನ್ನೂ ತಿಳಿದಿದ್ದೇನೆ. ಪಾದಗಳನ್ನು ತೊಳೆಯಲು ಸಾಕಾಗುವಷ್ಟು ಒಂದು ಬಿಂದಿಗೆ ನೀರು ಮತ್ತು ಕುಶಲ ಪ್ರಶ್ನೆ

ಇವುಗಳನ್ನು ಮಾತ್ರ ನಿನ್ನಿಂದ ಜನಾರ್ದನನು ಬಯಸುತ್ತಾನೆ. ಆದುದರಿಂದ ಮಾನಾರ್ಹನಾದ ಆ ಮಹಾತ್ಮನಿಗೆ ಪ್ರೀತಿಯ ಆತಿಥ್ಯವನ್ನು ನೀಡಲು ಪ್ರಯತ್ನಿಸು. ಅದನ್ನೇ ಮಾಡು ರಾಜನ್! ಏಕೆಂದರೆ ಜನಾರ್ದನನು ಮಾನಾರ್ಹ. ಕೇಶವನು ಒಂದೇ ಒಂದು ಒಳ್ಳೆಯದನ್ನು ಬಯಸಿ ಕುರುಗಳಲ್ಲಿಗೆ ಬರುತ್ತಿದ್ದಾನೆ. ಅವನು ಏನನ್ನು ಬಯಸಿ ಬರುತ್ತಿದ್ದಾನೋ ಅದನ್ನೇ ಅವನಿಗೆ ಕೊಡು. ದಾಶಾರ್ಹನು ನಿನ್ನ ದುರ್ಯೋಧನ ಮತ್ತು ಪಾಂಡವರಲ್ಲಿ ಶಾಂತಿಯನ್ನು ಇಚ್ಛಿಸುತ್ತಾನೆ. ಅವನ ಮಾತಿನಂತೆ ಮಾಡು. ನೀನು ಅವರ ತಂದೆ, ಅವರು ನಿನ್ನ ಮಕ್ಕಳು. ನೀನು ವೃದ್ಧ. ಇತರರು ಸಣ್ಣವರು. ಅವರೊಡನೆ ತಂದೆಯಂತೆ ನಡೆದುಕೋ. ಏಕೆಂದರೆ ಅವರು ನಿನ್ನೊಡನೆ ಮಕ್ಕಳಂತೆ ನಡೆದುಕೊಳ್ಳುತ್ತಿದ್ದಾರೆ.”

ದುರ್ಯೋಧನನು ಹೇಳಿದನು:

“ಕೃಷ್ಣನ ಕುರಿತು ವಿದುರನನು ಹೇಳಿದುದೆಲ್ಲವೂ ಸತ್ಯ. ಜನಾರ್ದನು ಪಾರ್ಥರಲ್ಲಿ ಬಿಡಿಸಲಸಾಧ್ಯವಾದಷ್ಟು ಅನುರಕ್ತನಾಗಿದ್ದಾನೆ. ರಾಜೇಂದ್ರ! ಜನಾರ್ದನನಿಗೆ ಸತ್ಕಾರವಾಗಿ ಏನು ಅನೇಕ ರೂಪದ ಸಂಪತ್ತನ್ನು ಕೊಡುವೆಯೆಂದು ನೀನು ಹೇಳಿದೆಯೋ ಅದನ್ನು ಸರ್ವಥಾ ಕೊಡಬಾರದು. ಇದು ಅದಕ್ಕೆ ತಕ್ಕುದಾದ ಸ್ಥಳವೂ ಅಲ್ಲ,

ಸಮಯವೂ ಅಲ್ಲ. ಕೇಶವನು ಅವೆಲ್ಲವಕ್ಕೂ ಅರ್ಹನಿರಬಹುದು. ಆದರೆ ತನ್ನನ್ನು ಭಯಪಟ್ಟುಕೊಂಡು ಪೂಜಿಸುತ್ತಿದ್ದಾನೆ ಎಂದು ಅಧೋಕ್ಷಜನು ತಿಳಿದುಕೊಳ್ಳುತ್ತಾನೆ. ಬುದ್ಧಿವಂತ ಕ್ಷತ್ರಿಯನು ಅವಮಾನಹೊಂದುವ ಕಾರ್ಯವನ್ನು ಮಾಡಬಾರದು ಎಂದು ನನ್ನ ಅಭಿಪ್ರಾಯ. ಕಮಲಲೋಚನ ದೇವ ಕೃಷ್ಣನು ಮೂರು ಲೋಕಗಳಲ್ಲಿಯೂ ಸರ್ವಥಾ ಅತ್ಯಂತ ಪೂಜನೀಯ ಎನ್ನುವುದನ್ನು ನಾನು ತಿಳಿದುಕೊಂಡಿದ್ದೇನೆ. ಆದುದರಿಂದ ಅವನಿಗೆ ಈಗ ಏನನ್ನೂ ಕೊಡುವುದು ಸರಿಯಲ್ಲ. ಯುದ್ಧವನ್ನು ನಿಶ್ಚಯಿಸಿದ ನಂತರ ಆತಿಥ್ಯವನ್ನಿತ್ತು ಹೋರಾಟಕ್ಕೆ ಶಾಂತಿಯನ್ನು ತರಬಾರದು."

ಅವನ ಆ ಮಾತನ್ನು ಕೇಳಿ ಕುರುಪಿತಾಮಹ ಭೀಷ್ಮನು ರಾಜ ವೈಚಿತ್ರವೀರ್ಯನಿಗೆ ಈ ಮಾತನ್ನು ಹೇಳಿದನು:

"ಸತ್ಕಾರವನ್ನು ಮಾಡುವುದರಿಂದ ಅಥವಾ ಮಾಡದೇ ಇರುವುದರಿಂದ ಜನಾರ್ದನನು ಸಿಟ್ಟಾಗುವವನಲ್ಲ. ಯಾವುದೂ ಅವನನ್ನು ಕಡೆಗಣಿಸಲಾರದು. ಏಕೆಂದರೆ ಕೇಶವನು ಕಡೆಗಣಿಸಲಾಗುವವನಲ್ಲ. ಯಾವಕಾರ್ಯವನ್ನು ಮಾಡಬೇಕೆಂದು ಅವನು ಮನಸ್ಸುಮಾಡುತ್ತಾನೋ ಅದನ್ನು ಬೇರೆಯದಾಗಿ ಮಾಡುವುದಕ್ಕೆ ಎಲ್ಲ ಉಪಾಯಗಳನ್ನು ಬಳಸಿದರೂ ಯಾರಿಂದಲೂ ಸಾಧ್ಯವಿಲ್ಲ. ಏನನ್ನೂ ಶಂಕಿಸದೇ

ಆ ಮಹಾಬಾಹುವು ಏನನ್ನು ಹೇಳುತ್ತಾನೋ ಅದನ್ನು ಮಾಡು. ವಾಸುದೇವನ ಮೂಲಕ ಪಾಂಡವರೊಂದಿಗೆ ಬೇಗ ಶಾಂತಿಯನ್ನು ತಾ. ಆ ಧರ್ಮಾತ್ಮ ಜನಾರ್ದನನು ನಿಶ್ಚಯವಾಗಿಯೂ ಧರ್ಮ ಮತ್ತು ಅರ್ಥಗಳ ಕುರಿತೇ ಹೇಳುತ್ತಾನೆ. ಅವನಿಗೆ ಪ್ರಿಯವಾಗುವ ಮಾತುಗಳನ್ನೇ ನೀನೂ ಕೂಡ ಬಾಂಧವರೊಂದಿಗೆ ಮಾತನಾಡಬೇಕು."

ದುರ್ಯೋಧನನು ಹೇಳಿದನು:

"ಪಿತಾಮಹ! ಕೇವಲ ನನ್ನದಾಗಿರುವ ಈ ಶ್ರೀ-ರಾಜ್ಯವನ್ನು ಅವರೊಂದಿಗೆ ಹಂಚಿಕೊಂಡು ಜೀವಿಸಲು ಸಾಧ್ಯವಿಲ್ಲ. ನಾನು ನಿಶ್ಚಯಿಸಿದಂತೆ ಮುಖ್ಯವಾಗಿ ಮಾಡಬೇಕಾದ ಕಾರ್ಯವೇನೆನ್ನುವುದನ್ನು ಕೇಳಿ: ಪಾಂಡವರ ಪರಾಯಣನಾದ ಜನಾರ್ದನನನ್ನು ಸೆರೆಹಿಡಿಯುತ್ತೇನೆ. ಅವನನ್ನು ಬಂಧಿಸಿದರೆ ವೃಷ್ಣಿಗಳು, ಇಡೀ ಭೂಮಿ ಮತ್ತು ಪಾಂಡವರು ಕೂಡ ನನ್ನ ವಿಧೇಯರಾಗುತ್ತಾರೆ. ನಾಳೆ ಬೆಳಿಗ್ಗೆ ಅವನು ಇಲ್ಲಿಗೆ ಬರುತ್ತಿದ್ದಾನೆ. ಯಾವ ರೀತಿಯಲ್ಲಿ ಈ ಉಪಾಯವು ಜನಾರ್ದನನಿಗೆ ತಿಳಿಯದಂತೆ ಮಾಡಬಹುದು ಎನ್ನುವುದನ್ನು ನೀವು ನನಗೆ ಹೇಳಿ."

ಕೃಷ್ಣನಿಗೆ ಕೇಡನ್ನು ಬಯಸುವ ಅವನ ಆ ಘೋರ ಮಾತುಗಳನ್ನು ಕೇಳಿ ಅಮಾತ್ಯರೊಂದಿಗೆ ಧೃತರಾಷ್ಟ್ರನು ವ್ಯತಿಥನಾದನು,

ವಿಮನಸ್ಕನಾದನು. ಆಗ ಧೃತರಾಷ್ಟ್ರನು ದುರ್ಯೋಧನನಿಗೆ ಹೇಳಿದನು:

> "ನೀನು ಪ್ರಜಾಪಾಲಕನಾಗಿದ್ದರೆ ಈ ರೀತಿ ಮಾತನಾಡಬೇಡ! ಇದು ಸನಾತನ ಧರ್ಮವಲ್ಲ! ಹೃಷೀಕೇಶನು ದೂತನೂ ನಮ್ಮ ಪ್ರಿಯ ಸಂಬಂಧಿಯೂ ಹೌದು. ಕೌರವರ ಕುರಿತು ಕೆಟ್ಟದ್ದನ್ನು ಬಯಸದ ಅವನು ಹೇಗೆ ಬಂಧಿಸಲು ಅರ್ಹನಾಗಬಹುದು?"

ಭೀಷ್ಮನು ಹೇಳಿದನು:

> "ಧೃತರಾಷ್ಟ್ರ! ನಿನ್ನ ಈ ಮೂಢ ಮಗನನ್ನು ಭೂತ ಅವರಿಸಿದೆ. ಸುಹೃದಯರು ಒಳ್ಳೆಯದನ್ನು ಹೇಳಿದರೂ ಅವನು ಅನರ್ಥವನ್ನೇ ಆರಿಸಿಕೊಳ್ಳುತ್ತಿದ್ದಾನೆ. ನೀನು ಕೂಡ ಪಾಪಿಷ್ಟರನ್ನು ಕಟ್ಟಿಕೊಂಡು ಪಾಪಿಗಳಂತೆ ವರ್ತಿಸುತ್ತಿರುವವನನ್ನು ಸುಹೃದಯರ ಮಾತುಗಳನ್ನು ತೊರೆದು ಅನುಸರಿಸುತ್ತಿದ್ದೀಯೆ. ನಿನ್ನ ಈ ಅತಿ ಕೆಟ್ಟ ಮಗನು ಅಮಾತ್ಯರೊಂದಿಗೆ ಅಕ್ಲಿಷ್ಟಕರ್ಮಿ ಕೃಷ್ಣನನ್ನು ತಕ್ಕರಿಸಿ ಕ್ಷಣದಲ್ಲಿಯೇ ಇಲ್ಲದಂತಾಗುತ್ತಾನೆ. ಈ ಪಾಪಿಯ, ಸುಳ್ಳುಬುರುಕನ, ಧರ್ಮವನ್ನು ತ್ಯಜಿಸಿದ ದುರ್ಮತಿಯು ಹೇಳುತ್ತಿರುವ ಮಾತುಗಳನ್ನು ಕೇಳಲು ನನಗೆ ಎಂದೂ ಉತ್ಸಾಹವಿಲ್ಲ."

ಹೀಗೆ ಹೇಳಿ ಭರತಶ್ರೇಷ್ಠ, ವೃದ್ಧ, ಸತ್ಯಪರಾಕ್ರಮಿ, ಭೀಷ್ಮನು ಪರಮ ಕುಪಿತನಾಗಿ ಎದ್ದು ಅಲ್ಲಿಂದ ಹೊರಟುಹೋದನು.

## ಹಸ್ತಿನಾಪುರಕ್ಕೆ ಶ್ರೀಕೃಷ್ಣನ ಆಗಮನ-ಧೃತರಾಷ್ಟ್ರನೊಂದಿಗೆ ಭೇಟಿ

ಕೃಷ್ಣನಾದರೋ ಬೆಳಿಗ್ಗೆ ಎದ್ದು ಆಹ್ನೀಕವನ್ನೆಲ್ಲ ಪೂರೈಸಿ, ಬ್ರಾಹ್ಮಣರಿಂದ ಅನುಜ್ಞೆಯನ್ನು ಪಡೆದು ನಗರದ ಕಡೆ ಪ್ರಯಾಣಿಸಿದನು. ಹೊರಟ ಆ ಮಹಾಬಾಹುವುವನ್ನು ಬೀಳ್ಕೊಂಡು ವೃಕಸ್ಥಲ ನಿವಾಸಿಗಳೆಲ್ಲರೂ ಹಿಂದಿರುಗಿದರು. ದುರ್ಯೋಧನನನ್ನು ಬಿಟ್ಟು ಎಲ್ಲ ಧಾರ್ತರಾಷ್ಟ್ರರೂ, ಭೀಷ್ಮ, ದ್ರೋಣ, ಕೃಪ ಮೊದಲಾದವರೂ ಸ್ವಲಂಕೃತರಾಗಿ ಅವನನ್ನು ಭೇಟಿಮಾಡಲು ಹೊರಟರು. ಬಹಳ ಮಂದಿ ಪೌರರೂ ಕೂಡ ಬಹುವಿಧದ ಯಾನಗಳ ಮೇಲೆ ಮತ್ತು ಇತರರು ಕಾಲ್ನಡುಗೆಯಲ್ಲಿ, ಹೃಷೀಕೇಶನನ್ನು ನೋಡಲು ಹೊರಟರು. ದಾರಿಯಲ್ಲಿ ಅಕ್ಲಿಷ್ಟಕರ್ಮಿ ಭೀಷ್ಮ, ದ್ರೋಣ, ಮತ್ತು ಧಾರ್ತರಾಷ್ಟ್ರರನ್ನು ಭೇಟಿ ಮಾಡಿ ಅವರಿಂದ ಸುತ್ತುವರೆದು ನಗರಕ್ಕೆ ಬಂದನು. ಕೃಷ್ಣನ ಸಮ್ಮಾನಾರ್ಥವಾಗಿ ನಗರವು ಸುಂದರವಾಗಿ ಅಲಂಕರಿಸಲ್ಪಟ್ಟಿತ್ತು. ರಾಜಮಾರ್ಗಗಳನ್ನು ಬಹುವಿಧದ ರತ್ನಗಳಿಂದ ಅಲಂಕರಿಸಲಾಗಿತ್ತು. ಆಗ ವಾಸುದೇವನನ್ನು ನೋಡುವ ಇಚ್ಛೆಯಿಂದ ಯಾವ ಸ್ತ್ರೀಯೂ, ವೃದ್ಧನೂ, ಶಿಶುವೂ, ಯಾವುದೇ ಮನೆಯ ಒಳಗೆ ಇದ್ದಿರಲಿಲ್ಲ. ಹೃಷೀಕೇಶನು ಪ್ರವೇಶಿಸುವಾಗ ರಾಜ ಮಾರ್ಗಗಳಲ್ಲಿ

ಬಹುಸಂಖ್ಯೆಗಳಲ್ಲಿ ನರರು ನಿಂತು ನೆಲವನ್ನು ನೋಡುತ್ತಾ ಅವನನ್ನು ಗೌರವಿಸಿದರು. ಎತ್ತರದ ಮನೆಗಳ ಗಚ್ಚುಗಳು ಬಹು ಸಂಖ್ಯೆಗಳ ವರಸ್ತ್ರೀಯರ ಭಾರದಿಂದ ಕುಸಿದು ಬೀಳುತ್ತವೆಯೋ ಎಂಬಂತೆ ತೋರುತ್ತಿತ್ತು. ವಾಸುದೇವನ ಕುದುರೆಗಳು ಅತಿ ವೇಗದಲ್ಲಿ ಚಲಿಸಬಹುದಾಗಿದ್ದರೂ, ಮನುಷ್ಯರಿಂದ ತುಂಬಿಹೋಗಿದ್ದ ರಾಜಮಾರ್ಗದಲ್ಲಿ ತಮ್ಮ ವೇಗವನ್ನು ಕಳೆದುಕೊಂಡವು.

ಪುಂಡರೀಕಾಕ್ಷ ಶತ್ರುಕರ್ಶನನು ಉಪ ಪ್ರಾಸಾದಗಳಿಂದ ಶೋಭಿಸುತ್ತಿದ್ದ ಧೃತರಾಷ್ಟ್ರನ ಬೂದುಬಣ್ಣದ ಅರಮನೆಯನ್ನು ಪ್ರವೇಶಿಸಿದನು. ಆ ರಾಜಗೃಹದ ಮೂರು ಕಕ್ಷೆಗಳನ್ನು ದಾಟಿ ಅರಿಂದಮ ಕೇಶವನು ರಾಜ ವೈಚಿತ್ರವೀರ್ಯನ ಬಳಿ ಬಂದನು. ದಾಶಾರ್ಹನು ಆಗಮಿಸುತ್ತಿದ್ದಂತೆ ಪ್ರಜ್ಞಾಚಕ್ಷು ನರೇಶ್ವರನು ಮಹಾಯಶರಾದ ದ್ರೋಣ-ಭೀಷ್ಮಾದಿಗಳೊಂದಿಗೆ ಮೇಲೆದ್ದು ನಿಂತನು. ಕೃಪ, ಸೋಮದತ್ತ, ಮತ್ತು ಮಹಾರಾಜ ಬಾಹ್ಲಿಕ ಎಲ್ಲರೂ ಜನಾರ್ದನನ್ನು ಗೌರವಿಸುತ್ತಾ ಆಸನಗಳಿಂದ ಮೇಲೆದ್ದು ನಿಂತರು. ಆಗ ವಾರ್ಷ್ಣೇಯನು ಯಶಸ್ವಿ ರಾಜ ಧೃತರಾಷ್ಟ್ರನನ್ನೂ ಭೀಷ್ಮನನ್ನೂ ಸಮೀಪಿಸಿ ಪೂಜಿಸಿದನು. ಮಧುಸೂದನ ಮಾಧವನು ಧರ್ಮಾನುಸಾರವಾಗಿ, ವಯಸ್ಸಿಗೆ ತಕ್ಕಂತೆ ಅಲ್ಲಿರುವ ರಾಜರನ್ನು ಭೇಟಿಮಾಡಿದನು. ಪುತ್ರನೊಂದಿಗೆ ದ್ರೋಣ, ಯಶಸ್ವಿ ಬಾಹ್ಲೀಕ, ಕೃಪ ಮತ್ತು ಸೋಮದತ್ತರನ್ನು ಭೇಟಿಮಾಡಿದನು. ಅಲ್ಲಿದ್ದ ದೊಡ್ಡದಾದ ಗಟ್ಟಿಯಾದ ಕಾಂಚನದಿಂದ ಮಾಡಲ್ಪಟ್ಟ ಆಸನದಲ್ಲಿ ಧೃತರಾಷ್ಟ್ರನ ಶಾಸನದಂತೆ ಅಚ್ಯುತನು ಕುಳಿತುಕೊಂಡನು.

ಆಗ ಧೃತರಾಷ್ಟ್ರನ ಪುರೋಹಿತರು ಜನಾರ್ದನನಿಗೆ ಯಥಾನ್ಯಾಯವಾಗಿ ಗೋವು, ಮಧುಪರ್ಕ ಮತ್ತು ನೀರನ್ನು ನೀಡಿದರು. ಆತಿಥ್ಯವಾದ ನಂತರ ಗೋವಿಂದನು ಎಲ್ಲ ಕುರುಗಳಿಂದ ಸುತ್ತುವರೆಯಲ್ಪಟ್ಟು ನಗುತ್ತಾ ಎಲ್ಲರೊಡನೆ ವ್ಯವಹರಿಸಿದನು. ಧೃತರಾಷ್ಟ್ರನಿಂದ ಅರ್ಚಿತನಾಗಿ, ಮಹಾಯಶರಿಂದ ಪೂಜಿತನಾಗಿ ಆ ಅರಿಂದಮನು ರಾಜನ ಅನುಮತಿಯನ್ನು ಪಡೆದು ಬೀಳ್ಕೊಂಡನು.

ಯಥಾನ್ಯಾಯವಾಗಿ ಕುರುಸಂಸದಿಯಲ್ಲಿ ಕುರುಗಳೊಂದಿಗೆ ಕಲೆತು ಮಾಧವನು ವಿದುರನ ರಮ್ಯ ವಸತಿಯಕಡೆ ನಡೆದನು. ವಿದುರನು ಸರ್ವ ಕಲ್ಯಾಣಗಳಿಂದ ಜನಾರ್ದನನನ್ನು ಸ್ವಾಗತಿಸಿ ದಾಶಾರ್ಹನಿಗೆ ಬೇಕಾದುದೆಲ್ಲವನ್ನೂ ತಂದಿಟ್ಟು ಅರ್ಚಿಸಿದನು. ಗೋವಿಂದನಿಗೆ ಆತಿಥ್ಯವನ್ನು ಪೂರೈಸಿ ಸರ್ವಧರ್ಮವಿದು ವಿದುರನು ಮಧುಸೂದನನಿಗೆ ಪಾಂಡುಪುತ್ರರ ಕುಶಲದ ಕುರಿತು ಪ್ರಶ್ನಿಸಿದನು. ಆಗ ತನ್ನ ಪ್ರೀತಿಯ ಗೆಳೆಯ, ವಿದುಷ, ಬುದ್ಧಿಸತ್ತಮ, ಧರ್ಮನಿತ್ಯ, ದೋಷಗಳಿಲ್ಲದ ಧೀಮಂತ ಕ್ಷತ್ತನಿಗೆ ಎಲ್ಲವನ್ನು ಪ್ರತ್ಯಕ್ಷವಾಗಿ ಕಂಡಿರುವ ದಾಶಾರ್ಹನು ಪಾಂಡವರು ನಡೆಸಿದುದನ್ನು ಎಲ್ಲವನ್ನೂ ಸವಿಸ್ತಾರವಾಗಿ ಹೇಳಿದನು.

## ಕುಂತಿಯು ಕೃಷ್ಣನಲ್ಲಿ ದುಃಖವನ್ನು ಹೇಳಿಕೊಂಡಿದುದು

ಜನಾರ್ದನ ಗೋವಿಂದ ಅರಿಂದಮನು ವಿದುರನನ್ನು ಭೇಟಿ ಮಾಡಿದ ನಂತರ ತಂದೆಯ ತಂಗಿಯಿದ್ದಲ್ಲಿಗೆ ಹೋದನು. ಪ್ರಸನ್ನ ಆದಿತ್ಯ

ವರ್ಚಸನಾಗಿ ಬಂದ ಕೃಷ್ಣನನ್ನು ಕಂಡು ಪೃಥಾಳು ಪಾರ್ಥರನ್ನು ನೆನಪಿಸಿಕೊಂಡು ಅವನ ಕುತ್ತಿಗೆಯನ್ನು ತನ್ನ ಕೈಗಳಿಂದ ಬಳಸಿ ರೋದಿಸಿದಳು. ಆ ಸತ್ಯವತರ ಮಧ್ಯೆ ಸಹಚಾರಿಯಾಗಿದ್ದ ಗೋವಿಂದನನ್ನು ಬಹುಕಾಲದ ನಂತರ ನೋಡಿ ಪೃಥೆಯು ಕಣ್ಣೀರು ಸುರಿಸಿದಳು. ಯೋಧರಲ್ಲಿ ಶ್ರೇಷ್ಠನಾದ ಕೃಷ್ಣನಿಗೆ ಆತಿಥ್ಯವನ್ನು ಮಾಡಿ ಕುಳ್ಳಿರಿಸಿ ಆ ಶೋಕಪೀಡಿತ ಮುಖದ ಅವಳು ಕಣ್ಣೀರಿನಿಂದ ಕಟ್ಟಿಹೋದ ಗಂಟಲಿನಲ್ಲಿ ಅವನಿಗೆ ಹೇಳಿದಳು:

"ಕೇಶವ! ಮಗೂ! ಬಾಲ್ಯದಿಂದಲೂ ಗುರುಶುಶ್ರೂಷಣೆಯಲ್ಲಿ ನಿರತರಾಗಿರುವ, ಪರಸ್ಪರರೊಂದಿಗೆ ಸುಹೃದಯರಾಗಿದ್ದು ಒಂದೇ ಮತ-ಚೇತನರಾಗಿರುವ, ಮೋಸದಿಂದ ರಾಜ್ಯವನ್ನು ಕಳೆದುಕೊಂಡು ಜನಾರ್ಹರಾಗಿದ್ದರೂ ನಿರ್ಜನ ಪ್ರದೇಶಕ್ಕೆ ಹೋಗಿರುವ, ಕ್ರೋಧ-ಹರ್ಷಗಳನ್ನು ತೊರೆದು ಬ್ರಹ್ಮಣ್ಯರೂ ಸತ್ಯವಾದಿಗಳೂ ಆಗಿರುವ, ಪ್ರೀತಿಸುಖಗಳನ್ನು ತ್ಯಜಿಸಿ, ರೋದಿಸುತ್ತಿರುವ ನನ್ನನ್ನು ಹಿಂದೆಯೇ ಬಿಟ್ಟುಹೋದ, ನನ್ನ ಹೃದಯವನ್ನು ಸಮೂಲವಾಗಿ ಕಿತ್ತು ವನಕ್ಕೆ ತೆರಳಿದ, ಮಹಾತ್ಮ ಪಾಂಡವರು ಸಿಂಹ-ವ್ಯಾಘ್ರ-ಗಜಸಂಕುಲಗಳಿಂದ ಕೂಡಿರುವ ವನದಲ್ಲಿ ಹೇಗೆ ವಾಸಿಸಿದರು? ಬಾಲ್ಯದಲ್ಲಿಯೇ ತಂದೆಯನ್ನು ಕಳೆದುಕೊಂಡ ಅವರನ್ನು ನಾನು ಸತತವೂ ಲಾಲಿಸಿ ಬೆಳೆಸಿದ್ದೆ. ಈಗ ತಂದೆ-ತಾಯಿಗಳಿಬ್ಬರನ್ನೂ ಕಾಣದೇ ಅವರು ಮಹಾವನದಲ್ಲಿ ಹೇಗೆ ವಾಸಿಸಿದರು?

ಬಾಲ್ಯದಿಂದಲೂ ಪಾಂಡವರು ಶಂಖ-ದುಂಧುಭಿಗಳ ನಿರ್ಘೋಷಗಳಿಂದ, ಮೃದಂಗ-ವೇಣುನಾದಗಳಿಂದ ಎಬ್ಬಿಸಲ್ಪಡುತ್ತಿದ್ದರು. ಮನೆಯಲ್ಲಿರುವಾಗ ಆನೆಗಳ ಘೀಂಕಾರ, ಕುದುರೆಗಳ ಹೇಂಕಾರ, ರಥಗಾಲಿಗಳ ಶಬ್ಧ ಇವುಗಳಿಂದ ಎಚ್ಚರಗೊಳ್ಳುತ್ತಿದ್ದ, ಶಂಖ-ಭೇರಿ ನಿನಾದ, ವೇಣೂ-ವೀಣಾ ನಾದನಗಳಿಂದ, ಪುಣ್ಯಾಹ ಮಂತ್ರ-ಘೋಷಗಳಿಂದ ದ್ವಿಜರು ಪೂಜಿಸುತ್ತಿರಲು, ವಸ್ತ್ರ ರತ್ನ ಅಲಂಕಾರಗಳಿಂದ ದ್ವಿಜರನ್ನು ಪೂಜಿಸುತ್ತಿದ್ದ, ಅರ್ಚನಾರ್ಹರನ್ನು ಅರ್ಚಿಸಿ, ಸ್ತುತಿಗಳಿಂದ ಅಭಿನಂದಿತರಾಗಿ, ರಂಕದ ಚರ್ಮದಿಂದ ಮಾಡಿದ ಹಾಸಿಗೆಯಮೇಲೆ ಮಲಗಿ ಪ್ರಾಸಾದಗಳಲ್ಲಿ ಎಚ್ಚರಗೊಳ್ಳುತ್ತಿದ್ದ ಅವರು ಆ ಮಹಾವನದಲ್ಲಿ ಮೃಗಗಳ ನಿನಾದವನ್ನು ಕೇಳಿ ಏಳಬೇಕಾದ ನನ್ನ ಮಕ್ಕಳು ಹೇಗೆ ತಾನೇ ನಿದ್ದೆಮಾಡುತ್ತಿದ್ದರು? ಭೇರೀ-ಮೃದಂಗ ನಿನಾದಗಳಿಂದ, ಶಂಖ-ವೇಣುಗಳ ಸುಸ್ವರದಿಂದ, ಸ್ತ್ರೀಯರ ಮಧುರ ಗೀತ-ನಿನಾದಗಳಿಂದ, ಬಂದಿ-ಮಾಗದ-ಸೂತರ ಸ್ತುವಗಳನ್ನು ಕೇಳಿ ಏಳುವ ಅವರು ಮಹಾವನದಲ್ಲಿ ಹೇಗೆ ಮೃಗಗಳ ಕೂಗುಗಳನ್ನು ಕೇಳಿ ಏಳುತ್ತಿದ್ದರು?

ನಾಚಿಕೆಸ್ವಭಾವದ, ಸತ್ಯಧೃತಿ, ದಾಂತ, ಇರುವವುಗಳ ಮೇಲೆ ಅನುಕಂಪಿತನಾಗಿರುವ, ಕಾಮದ್ವೇಷಗಳನ್ನು ವಶಮಾಡಿಕೊಂಡು ಸಂತರ ನಡತೆಯಂತೆ ನಡೆದುಕೊಳ್ಳುವ,

ಅಂಬರೀಷ, ಮಾಂಧಾತ, ಯಯಾತಿ, ನಹುಷ, ಭರತ, ದಿಲೀಪ, ಶಿಬಿ, ಔಶೀನರ ಮೊದಲಾದ ಭಾರವನ್ನು ಹೊತ್ತ ಈ ಪುರಾಣ ರಾಜರ್ಷಿಗಳ ಭಾರವನ್ನು ಹೊರುವ, ಶೀಲವೃತ್ತ, ಉಪಸಂಪನ್ನ, ಧರ್ಮಜ್ಞ, ಸತ್ಯಸಂಗರ, ತ್ರೈಲೋಕಗಳಲ್ಲಿಯೇ ಯಾರು ಸರ್ವಗುಣೋಪೇತ ರಾಜನೆನಿಸಿಕೊಂಡಿದ್ದಾನೋ ಆ ಅಜಾತಶತ್ರು, ಧರ್ಮಾತ್ಮ, ಶುದ್ಧಜಾಂಬೂನದಪ್ರಭ, ಸರ್ವ ಕುರುಗಳಲ್ಲಿಯೇ ಶ್ರೇಷ್ಠ, ಧರ್ಮತ, ಶ್ರುತವೃತ್ತತ, ಪ್ರಿಯದರ್ಶನ, ದೀರ್ಘಭುಜ ಯುಧಿಷ್ಠಿರನು ಹೇಗಿದ್ದಾನೆ? ಸಾವಿರ ಆನೆಗಳ ಬಲವನ್ನುಳ್ಳ, ವಾಯುವಿನ ವೇಗವುಳ್ಳ, ವೃಕೋದರ, ಪಾಂಡವರಲ್ಲಿ ನಿತ್ಯವೂ ಕೋಪಿಷ್ಟನಾಗಿರುವ, ತನ್ನ ಸಹೋದರರಿಗೆ ಯಾವಾಗಲೂ ಒಳ್ಳೆಯದನ್ನೇ ಮಾಡುವ, ಅವರಿಗೆ ಪ್ರಿಯನಾದ, ಬಾಂಧವರೊಂದಿಗೆ ಕೀಚಕನನ್ನು ಮತ್ತು ಕ್ರೋಧವಶರಾದ ಹಿಡಿಂಬ ಮತ್ತು ಬಕರನ್ನು ಸಂಹರಿಸಿದ ಶೂರ, ಪರಾಕ್ರಮದಲ್ಲಿ ಶಕ್ರಸಮನಾದ, ವೇಗದಲ್ಲಿ ವಾಯುವೇಗದ ಸಮನಾದ, ಕ್ರೋಧದಲ್ಲಿ ಮಹೇಶ್ವರನ ಸಮನಾದ, ಪ್ರಹಾರಿಗಳಲ್ಲಿ ಶ್ರೇಷ್ಠ, ಕ್ರೋಧ, ಬಲ, ಸಿಟ್ಟನ್ನು ತಡೆದಿಟ್ಟುಕೊಂಡ ಪರಂತಪ, ಕೋಪದಲ್ಲಿದ್ದರೂ ಜಿತಾತ್ಮನಾಗಿ ಅಣ್ಣನ ಶಾಸನದಡಿಯಲ್ಲಿರುವ ಪಾಂಡವ, ತೇಜೋರಾಶಿ, ಮಹಾತ್ಮ, ಬಲೌಘ, ಅಮಿತ ತೇಜಸ್ವಿ, ನೋಡುವುದಕ್ಕೇ ಭಯಂಕರನಾಗಿರುವ ಭೀಮಸೇನ

ವೃಕೋದರನ ಕುರಿತು ಹೇಳು. ಪರಿಘದಂತಹ ಬಾಹುಗಳನ್ನುಳ್ಳ ಆ ಮಧ್ಯಮ, ಸಹಸ್ರಬಾಹುಗಳ ಅರ್ಜುನನೊಂದಿಗೆ ನಿತ್ಯವೂ ಸ್ಪರ್ಧಿಸುವ ಎರಡು ಕೈಗಳ ಅರ್ಜುನ, ಒಂದೇ ಸಲ ವೇಗದಿಂದ ಐನೂರು ಬಾಣಗಳನ್ನು ಬಿಡಬಲ್ಲ, ಅಸ್ತ್ರಗಳಲ್ಲಿ ರಾಜ ಕಾರ್ತವೀರ್ಯನ ಸಮನಾಗಿರುವ ಪಾಂಡವ, ತೇಜಸ್ಸಿನಲ್ಲಿ ಆದಿತ್ಯಸದೃಶನಾಗಿರುವ, ದಮದಲ್ಲಿ ಮಹರ್ಷಿಗೆ ಸಮನಾಗಿರುವ, ಕ್ಷಮೆಯಲ್ಲಿ ಪೃಥ್ವಿಯ ಸಮನಾಗಿರುವ, ವಿಕ್ರಮದಲ್ಲಿ ಮಹೇಂದ್ರನ ಸಮನಾಗಿರುವ, ಈ ಮಹಾರಾಜ್ಯವನ್ನು ಗೆದ್ದಿರುವ ದೀಪ್ತ ತೇಜಸ್ವಿ, ಯಾರ ಘೋರ ಬಾಹುಬಲವನ್ನು ಕೌರವರು ಉಪಾಸಿಸುವರೋ, ದೇವತೆಗಳು ವಾಸವನನ್ನು ಹೇಗೋ ಹಾಗೆ ಯಾರನ್ನು ಪಾಂಡವರು ಆಶ್ರಯಿಸಿರುವರೋ ಆ ನಿನ್ನ ಭ್ರಾತಾ ಸಖ ಧನಂಜಯನು ಇಂದು ಹೇಗಿದ್ದಾನೆ?

ಸರ್ವಭೂತಗಳಿಗೂ ದಯಾವಂತನಾದ, ವಿನಯದಿಂದ ಹಿಡಿಯಲ್ಪಟ್ಟ, ಮಹಾಸ್ತ್ರವಿದು, ಮೃದು, ಸುಕುಮಾರ, ಧಾರ್ಮಿಕ, ನನಗೆ ಪ್ರಿಯನಾದ ಸಹದೇವನು ಮಹೇಷ್ವಾಸ, ಶೂರ, ಸಮಿತಿಶೋಭನ, ಸಹೋದರರ ಶುಶ್ರೂಷೆಯನ್ನು ಮಾಡುವ, ಧರ್ಮಾರ್ಥಕುಶಲ, ಯುವಕ. ಮಹಾತ್ಮ ಸಹದೇವನನ್ನು ಸದಾ ಅವನ ಕಲ್ಯಾಣ ನಡತೆಯನ್ನು

ಸಹೋದರರು ಪೂಜಿಸುತ್ತಾರೆ. ಅಣ್ಣಂದಿರಿಗೆ ವಿಧೇಯನಾಗಿರುವ, ನನ್ನನ್ನು ಶುಶ್ರೂಷೆಮಾಡುವ, ಯೋಧರ ನಾಯಕ ಮಾದ್ರೀಪುತ್ರ ವೀರ ಸಹದೇವನ ಕುರಿತು ನನಗೆ ಹೇಳು. ಆ ಸುಕುಮಾರ, ಯುವಕ, ಶೂರ, ದರ್ಶನೀಯ ಪಾಂಡವ, ಎಲ್ಲ ಸಹೋದರರಿಗೆ ತಮ್ಮ ಪ್ರಾಣಗಳಷ್ಟೇ ಪ್ರಿಯನಾಗಿರುವ, ಚಿತ್ರಯೋಧೀ, ಮಹೇಷ್ವಾಸ, ಮಹಾಬಲಶಾಲಿ, ನನ್ನ ಮಗ, ಸುಖದಲ್ಲಿಯೇ ಬೆಳೆದ ನಕುಲನು ಕುಶಲನಾಗಿದ್ದಾನೆಯೇ? ಸುಖೋಚಿತನಾದ, ದುಃಖಕ್ಕೆ ಅನರ್ಹನಾದ ಸುಕುಮಾರ ಮಹಾರಥಿ ಮಹಾಬಾಹು ನಕುಲನನ್ನು ನಾನು ಪುನಃ ನೋಡುತ್ತೇನೆಯೇ? ಒಂದು ಕ್ಷಣವೂ ನಕುಲನ ವಿನಃ ನನಗೆ ಶಾಂತಿಯಿರಲಿಲ್ಲ. ಈಗ ನೋಡು! ನಾನು ಇನ್ನೂ ಜೀವಿಸಿದ್ದೇನೆ!

ಎಲ್ಲ ಪುತ್ರರಿಗಿಂತಲೂ ನನಗೆ ಪ್ರಿಯತಮೆಯಾದ ದ್ರೌಪದೀ, ಕುಲೀನೆ, ಶೀಲಸಂಪನ್ನೆ, ಸರ್ವ ಗುಣಗಳಿಂದ ಕೂಡಿರುವ, ಪುತ್ರರ ಲೋಕಕ್ಕಿಂತ ಪತಿಗಳ ಲೋಕವನ್ನು ಆರಿಸಿಕೊಂಡಿರುವ ಸತ್ಯವಾದಿನೀ, ಪ್ರಿಯ ಪುತ್ರರನ್ನು ಪರಿತ್ಯಜಿಸಿ ಪಾಂಡವರನ್ನು ಅನುಸರಿಸಿಹೋದ, ಮಹಾಭಿಜನಸಂಪನ್ನೆ, ಸರ್ವಕಾಮಗಳಿಂದ ಸುಪೂಜಿತೆ, ಈಶ್ವರೀ, ಸರ್ವಕಲ್ಯಾಣೀ ದ್ರೌಪದಿಯು ಹೇಗಿದ್ದಾಳೆ? ಶೂರರೂ ಅಗ್ನಿಸಮಾನರೂ, ಪ್ರಹಾರಿಗಳೂ, ಮಹೇಷ್ವಾಸರೂ

ಆದ ಐವರು ಪತಿಯಂದಿರನ್ನು ಪಡೆದ ದ್ರುಪದಿಗೂ ದುಃಖವೇ ಪಾಲಾಯಿತು. ತನ್ನ ಪುತ್ರರ ಕುರಿತೇ ಕೊರಗುತ್ತಿರುವ ಸತ್ಯವಾದಿನೀ ದ್ರೌಪದಿಯನ್ನು ಕಾಣದೇ ಇರುವುದು ಇದು ಹದಿನಾಲ್ಕನೆಯ ವರ್ಷ. ಉನ್ನತ ನಡತೆಯ ಆ ದ್ರೌಪದಿಗೇ ಅವ್ಯಯ ಸುಖವು ದೊರೆಯುತ್ತಿಲ್ಲ ಎಂದರೆ ಪುಣ್ಯಕರ್ಮಗಳಿಂದಲೂ ಪುರುಷನು ಸುಖವನ್ನು ಹೊಂದುವುದಿಲ್ಲ ಎಂದಾಯಿತು. ಸಭೆಯಲ್ಲಿ ನಡೆದುದನ್ನು ನೋಡಿದಾಗಲಿಂದ ನನಗೆ ಕೃಷ್ಣೆಗಿಂತ ಅಧಿಕ ಪ್ರಿಯನು ಬೀಭತ್ಸುವೂ ಅಲ್ಲ, ಯುಧಿಷ್ಠಿರನೂ ಅಲ್ಲ, ಭೀಮಸೇನನೂ ಅಲ್ಲ, ಯಮಳರೂ ಅಲ್ಲ. ಯಾವಾಗ ದ್ರೌಪದಿಯನ್ನು, ಬಯಲಿನಲ್ಲಿ ಒಬ್ಬಳೇ ನಿಂತಿರುವಂತೆ ಮಾವನ ಸಮೀಪದಲ್ಲಿ ನಿಂತಿರುವುದನ್ನು, ಕ್ರೋಧಲೋಭಾನುವರ್ತಿಗಳು ಅನಾರ್ಯರೀತಿಯಲ್ಲಿ ಏಕವಸ್ತ್ರಳಾದ ಅವಳನ್ನು ಸಭೆಗೆ ಎಳೆದು ತಂದುದನ್ನು ನೋಡಿದುದಕ್ಕಿಂತ ಅಧಿಕ ದುಃಖವನ್ನು ಅದರ ಹಿಂದೆ ಏನೂ ನನಗೆ ಕೊಟ್ಟಿರಲಿಲ್ಲ. ಅಲ್ಲಿಯೇ ಮಹಾರಾಜ ಧೃತರಾಷ್ಟ್ರನೂ, ಬಾಹ್ಲೀಕನೂ, ಕೃಪನೂ, ಸೋಮದತ್ತನೂ ಮತ್ತು ನಿರ್ವಿಣ್ಣರಾದ ಕುರುಗಳು ಇದ್ದಿದ್ದರೂ ಆ ಸಂಸದಿಯಲ್ಲಿದ್ದ ಎಲ್ಲರರಿಗಿಂತಲೂ ಕ್ಷತ್ತನನ್ನು ನಾನು ಗೌರವಿಸುತ್ತೇನೆ, ಏಕೆಂದರೆ ಅವನೊಬ್ಬನೇ ಆರ್ಯನಂತೆ, ಧನ ಮತ್ತು ವಿದ್ಯೆಯ ಆಧಾರದ ಮೇಲಲ್ಲ, ನಡೆದುಕೊಂಡ. ಆ

ಮಹಾಬುದ್ಧಿ, ಗಂಭೀರ, ಮಹಾತ್ಮ ಕ್ಷತ್ತನು ಲೋಕಗಳೇ ಯಾವುದರ ಮೇಲೆ ನಿಂತಿವೆಯೋ ಅಂಥಹ ಶೀಲದಿಂದ ಅಲಂಕೃತನಾಗಿದ್ದಾನೆ.”

ಗೋವಿಂದನು ಬಂದುದನ್ನು ನೋಡಿ ಸಂತೋಷ ಮತ್ತು ದುಃಖಗಳಿಂದ ಶೋಕಾರ್ತಳಾದ ಅವಳು ನಾನಾವಿಧದ ಎಲ್ಲ ದುಃಖಗಳನ್ನೂ ತೋಡಿಕೊಂಡಳು.

“ಅರಿಂದಮ! ಹಿಂದೆ ರಾಜರು ಆಚರಿಸುತ್ತಿದ್ದ ಅಕ್ಷದ್ಯೂತ, ಮೃಗವಧೆ ಮೊದಲಾದವುಗಳು ಅವರಿಗೆ ನಿಜವಾಗಿಯೂ ಸುಖವನ್ನು ನೀಡುತ್ತಿದ್ದವೇ? ಅಂದು ಕುರುಸನ್ನಿಧಿಯ ಸಭೆಯಲ್ಲಿ ಕೃಷ್ಣೆಯನ್ನು ಧಾರ್ತರಾಷ್ಟ್ರರು ಕಷ್ಟಕ್ಕೊಳಪಡಿಸಿದರು ಎನ್ನುವುದು ಒಳ್ಳೆಯದಲ್ಲ! ಅವರು ನಗರದಿಂದ ಹೊರಹಾಕಲ್ಪಟ್ಟಿದ್ದು, ನಂತರದ ವನವಾಸ, ಅವರು ಅಜ್ಞಾತವಾಸವನ್ನು ನಡೆಸಿದುದು, ಬಾಲಕರಿಂದ ದೂರವಿದ್ದುದು ಹೀಗೆ ನಾನಾವಿಧದ ದುಃಖಗಳನ್ನು ಪಡೆದಿದ್ದೇನೆ. ಅದಕ್ಕಿಂತಲೂ ಹೆಚ್ಚಿನ ಕ್ಲೇಶವೇನೆಂದರೆ ನಾನು ಪುತ್ರರೊಂದಿಗೆ ಈ ಹದಿನಾಲ್ಕನೆಯ ವರ್ಷವೂ ದುರ್ಯೋಧನನಿಂದ ಮೋಸಹೋಗುತ್ತಿದ್ದೇನೆ. ದುಃಖವು ಸುಖಕ್ಕೆ ಎಡೆಮಾಡಿಕೊಡುವುದಿಲ್ಲ ಎಂದರೆ ಪುಣ್ಯದ ಫಲವು ಕ್ಷಯವಾಗಿಹೋಗುತ್ತದೆ. ನಾನು ಯಾವಾಗಲೂ ಪಾಂಡವರು

ಮತ್ತು ಧಾರ್ತರಾಷ್ಟ್ರರಲ್ಲಿ ಬೇಧವನ್ನು ಕಾಣಲಿಲ್ಲ. ಇದೇ ಸತ್ಯದ ಮೂಲಕ ನೀನು ಅಮಿತ್ರರನ್ನು ಸಂಹರಿಸಿ ಶ್ರೀಯಿಂದ ಆವೃತನಾಗಿ ಪಾಂಡವರೊಂದಿಗೆ ನಮ್ಮನ್ನು ಈ ಸಂಗ್ರಾಮದಿಂದ ಉಳಿಸುತ್ತೀಯೆ ಎಂದು ಕಾಣುತ್ತಿದ್ದೇನೆ. ಅವರ ಸತ್ವದಂತೆ ಹೋದರೆ ಅವರನ್ನು ಸೋಲಿಸುವುದು ಶಕ್ಯವಿಲ್ಲ. ನಾನು ನನ್ನನ್ನು ಅಥವಾ ಸುಯೋಧನನನ್ನಲ್ಲ. ನನ್ನ ತಂದೆಯನ್ನು ದೂರುತ್ತೇನೆ. ಅವನು ಧನವನ್ನು ಧೂರ್ತರಿಗೆ ಅರ್ಪಿಸುವಂತೆ ನನ್ನನ್ನು ಕುಂತಿಭೋಜನಿಗೆ ಕೊಟ್ಟನು. ನಾನು ಬಾಲಕಿಯಾಗಿದ್ದೆ. ಚಂಡಿನೊಂದಿಗೆ ಆಡುತ್ತಿರುವಾಗ ನಿನ್ನ ಅಜ್ಜನು ನನ್ನನ್ನು ಸಖ್ಯದಲ್ಲಿ ಮಹಾತ್ಮ ಕುಂತಿಭೋಜನಿಗಿತ್ತನು. ನಾನು ಪಿತನಿಂದ ಮತ್ತು ಮಾವನಿಂದಲೂ ಮೋಸಗೊಂಡು ಅತ್ಯಂತ ದುಃಖಿತಳಾಗಿದ್ದೇನೆ. ನಾನು ಜೀವಿಸಿ ಫಲವೇನು?

ನಾನು ಸವ್ಯಸಾಚಿಗೆ ಜನ್ಮವಿತ್ತಾಗ ರಾತ್ರಿಯಲ್ಲಿ ಧ್ವನಿಯೊಂದು ಹೇಳಿತ್ತು: ‘ನಿನ್ನ ಪುತ್ರನು ಪೃಥ್ವಿಯನ್ನು ಗೆದ್ದು ಅವನ ಯಶಸ್ಸು ದೇವಲೋಕವನ್ನೂ ಮುಟ್ಟುತ್ತದೆ! ಜನರು ಸೇರಿರುವ ಯುದ್ಧದಲ್ಲಿ ಕುರುಗಳನ್ನು ಸಂಹರಿಸಿ ರಾಜ್ಯವನ್ನು ಪಡೆದು ಧನಂಜಯ ಕೌಂತೇಯನು ಸಹೋದರರೊಡನೆ ಮೂರು ಯಾಗಗಳನ್ನು ಮಾಡುವನು!’ ಅದನ್ನು ನಾನು ಎಂದೂ ಅನುಮಾನಪಡಲಿಲ್ಲ. ಧರ್ಮ ವೇಧಸನಿಗೆ ನಮಸ್ಕಾರ. ಇದೇ ಪ್ರಜೆಗಳನ್ನು ನಿತ್ಯವೂ ಹೊರುವುದು ಮಹಾ ಧರ್ಮ!

ಧರ್ಮವಿದ್ದರೆ ಸತ್ಯವು ಆಗುತ್ತದೆ. ಆಗ ನೀನೂ ಕೂಡ ಎಲ್ಲವನ್ನು ಸಂಪಾದಿಸಲು ಸಾಧ್ಯ. ನಾನೋರ್ವ ವಿಧವೆ. ಸಂಪತ್ತನ್ನು ಕಳೆದುಕೊಂಡಿದ್ದೇನೆ. ವೈರಿಗಳನ್ನಲ್ಲ! ಅದಕ್ಕಿಂತಲೂ ಹೆಚ್ಚಾಗಿ ಪುತ್ರರಿಲ್ಲವಲ್ಲ ಎಂದು ಶೋಕಪಡುತ್ತಿದ್ದೇನೆ. ಗಾಂಡೀವ ಧನ್ವಿಯನ್ನು, ಸರ್ವಶಸ್ತ್ರಭೃತರಲ್ಲಿ ಶ್ರೇಷ್ಠ ಧನಂಜಯನನ್ನು ನೋಡದೇ ನನ್ನ ಹೃದಯಕ್ಕೆ ಯಾವ ರೀತಿಯ ಶಾಂತಿಯಿರಬಲ್ಲದು? ಯುಧಿಷ್ಠಿರನನ್ನು, ಧನಂಜಯನನ್ನು, ಯಮಳರನ್ನು ಮತ್ತು ವೃಕೋದರನನ್ನು ನಾನು ನೋಡದೇ ಇರುವುದು ಇದು ಹದಿನಾಲ್ಕನೆಯ ವರ್ಷ. ಮಾನವರು ಕಾಣದೇ ಹೋದವರಿಗೆ ತೀರಿಕೊಂಡಿದ್ದಿರಬಹುದೆಂದು ಶ್ರಾದ್ಧವನ್ನು ಮಾಡುತ್ತಾರೆ. ಒಂದು ರೀತಿಯಲ್ಲಿ ನನಗೆ ಅವರು ಮತ್ತು ನಾನು ಅವರಿಗೆ ಮೃತರಾದಂತೆ! ರಾಜ ಧರ್ಮಾತ್ಮ ಯುಧಿಷ್ಠಿರನಿಗೆ ಹೇಳು: 'ಪುತ್ರಕ! ನಿನ್ನ ಧರ್ಮವು ಹೀನವಾಗುತ್ತದೆ. ಸುಮ್ಮನೇ ನಾಟಕವಾಡಬೇಡ!'

ಇಲ್ಲಿ ನಾನು ಪರಾಶ್ರಯದಲ್ಲಿ ಬದುಕುತ್ತಿದ್ದೇನೆ. ನನಗೆ ಧಿಕ್ಕಾರ! ಭಿಕ್ಷೆಬೇಡಿ ಜೀವಿಸುವುದಕ್ಕಿಂತ ಬೇರೆಯವರ ಆಶ್ರಯದಲ್ಲಿರುವುದು ಉತ್ತಮ. ಈಗ ನಿತ್ಯವೂ ಉದ್ಯುಕ್ತರಾಗಿರುವ ಧನಂಜಯ-ವೃಕೋದರರಿಗೆ ಹೇಳು: 'ಕ್ಷತ್ರಿಯಳಾದ ನಾನು ನಿಮ್ಮನ್ನು ಯಾವ ಉದ್ದೇಶಕ್ಕೆ

ಹಡೆದಿದ್ದೆನೋ ಅದರ ಕಾಲವು ಬಂದಿದೆ. ಈಗ ಬಂದಿರುವ ಕಾಲವು ಹೊರಟುಹೋದರೆ ನೀವು ಎಷ್ಟೇ ಲೋಕಸಂಭಾವಿತರು ಸಂತರೆಂದು ಎನಿಸಿಕೊಂಡಿದ್ದರೂ ನೀವು ಹಿಂಸೆಯನ್ನು ಮಾಡಿದಂತೆ! ನೀವು ಈ ಕ್ರೂರ ಕೃತ್ಯವನ್ನು ಮಾಡಿದಿರೆಂದರೆ ನಾನು ನಿಮ್ಮನ್ನು ಕೊನೆಯವರೆಗೆ ತ್ಯಜಿಸುತ್ತೇನೆ. ಸಮಯವು ಕೂಡಿ ಬಂದಾಗ ಜೀವವನ್ನೂ ಹಿಂದೆ ಪಡೆಯಬಹುದು.' ಸದಾ ಕ್ಷತ್ರಧರ್ಮದಲ್ಲಿ ನಿರತರಾಗಿರುವ ಮಾದ್ರೀಪುತ್ರರೀರ್ವರಿಗೆ ಹೇಳು: 'ಜೀವ ಹೋದರೂ ವಿಕ್ರಮದಿಂದ ಗಳಿಸಿದ ಭೋಗಗಳನ್ನು ಆರಿಸಿಕೊಳ್ಳಬೇಕು. ಏಕೆಂದರೆ ವಿಕ್ರಮದಿಂದ ಗಳಿಸಿದ ಸಂಪತ್ತು ಕ್ಷತ್ರಧರ್ಮದಿಂದ ಜೀವಿಸುವ ಮನುಷ್ಯನ ಮನಸ್ಸನ್ನು ಸದಾ ಸಂತೋಷಗೊಳಿಸುತ್ತದೆ.' ಮಹಾಬಾಹೋ! 'ದ್ರೌಪದಿಯ ಹೆಜ್ಜೆಗಳಲ್ಲಿ ನಡೆ!' ಎಂದು ಸರ್ವಶಸ್ತ್ರಭೃತರಲ್ಲಿ ಶ್ರೇಷ್ಠ, ವೀರ, ಅರ್ಜುನ ಪಾಂಡವನಿಗೆ ಹೇಳು. ನಿನಗೆ ತಿಳಿದೇ ಇದೆ. ಕೃದ್ಧರಾದ ಭೀಮಾರ್ಜುನರು ಅಂತಕರಂತೆ; ಅವರು ದೇವತೆಗಳನ್ನು ಕೂಡ ಪರಮ ಗತಿಗೆ ಎಳೆದೊಯ್ಯುತ್ತಾರೆ. ಕೃಷ್ಣೆಯನ್ನು ಸಭೆಗೆ ಎಳೆದು ತರಲಾಯಿತು ಮತ್ತು ದುಃಶಾಸನ-ಕರ್ಣರು ಕ್ರೂರವಾಗಿ ಮಾತನಾಡಿದರು ಎನ್ನುವುದು ಅವರಿಗಾದ ಅಪಮಾನ. ಮನಸ್ವಿಯಾದ ಭೀಮಸೇನನನ್ನು ದುರ್ಯೋಧನನು ಕುರುಮುಖ್ಯರು ನೋಡುತ್ತಿರುವಾಗಲೇ

ಎದುರಿಸಿದನು. ಅದರ ಫಲವನ್ನು ಅವನು ಕಾಣುತ್ತಾನೆ. ವೈರವನ್ನು ಕಟ್ಟಿಕೊಂಡ ವೃಕೋದರನಿಗೆ ಶಾಂತಿಯಾಗುವುದಿಲ್ಲ. ಎಷ್ಟೇ ಹಳತಾದರೂ ಆ ಶತ್ರುಕರ್ಶನನು ಶತ್ರುವಿಗೆ ಅಂತ್ಯವನ್ನು ತೋರಿಸುವವರೆಗೆ ಭೀಮನ ವೈರವು ಶಾಂತಗೊಳ್ಳುವುದಿಲ್ಲ.

ರಾಜ್ಯಹರಣ, ದ್ಯೂತದಲ್ಲಿ ಪರಾಜಯ, ಮಕ್ಕಳ ವನವಾಸ ಇವೆಲ್ಲವೂ ನನ್ನ ದುಃಖಕ್ಕೆ ಕಾರಣವಲ್ಲ. ಆದರೆ ಆ ಕಪ್ಪುವರ್ಣದ ದೊಡ್ಡದೇಹದವಳನ್ನು ಏಕವಸ್ತ್ರದಲ್ಲಿ ಸಭೆಗೆ ಎಳೆದುಕೊಂಡು ಹೋಗಿ ಕ್ರೂರವಾದ ಮಾತುಗಳನ್ನು ಕೇಳಿಸಿದರಲ್ಲ ಅದಕ್ಕಿಂತ ಹೆಚ್ಚಿನ ದುಃಖವೇನಿದೆ? ಸದಾ ಕ್ಷತ್ರಧರ್ಮವನ್ನು ಪಾಲಿಸುವ, ಋತುವಿನಲ್ಲಿದ್ದ ಆ ವರಾರೋಹೆ ಸತೀ ಕೃಷ್ಣೆಯು ತನ್ನ ನಾಥರು ಅಲ್ಲಿದ್ದರೂ ಅನಾಥಳಾಗಿದ್ದಳು. ಪುತ್ರರೊಂದಿಗೆ ನನ್ನ ನಾಥನು ನೀನು ಮಧುಸೂದನ! ಮತ್ತು ಬಲಿಗಳಲ್ಲಿ ಶ್ರೇಷ್ಠ ರಾಮ ಮತ್ತು ಮಹಾರಥಿ ಪ್ರದ್ಯುಮ್ನ. ಪುರುಷೋತ್ತಮ! ದುರ್ಧರ್ಷನಾದ ಭೀಮ ಮತ್ತು ಯುದ್ಧದಲ್ಲಿ ಹಿಂದೆಸರಿಯದ ವಿಜಯನು ಜೀವಿತರಿರುವವರೆಗೂ ನಾನು ಈ ದುಃಖವನ್ನು ಸಹಿಸಿಕೊಂಡಿರಬಲ್ಲೆ."

ಆಗ ಪಾರ್ಥಸಖ ಶೌರಿಯು ಪುತ್ರರ ಕಷ್ಟಗಳ ಕುರಿತು ಶೋಕಿಸುತ್ತಿದ್ದ

ತನ್ನ ತಂದೆಯ ತಂಗಿಗೆ ಆಶ್ವಾಸನೆಯನ್ನಿತ್ತನು.

"ಅತ್ತೇ! ನಿನ್ನಂತಹ ಸೀಮಂತಿನಿಯು ಲೋಕದಲ್ಲಿ ಯಾರಾದರೂ ಇದ್ದಾರೆಯೇ? ರಾಜ ಶೂರನ ಮಗಳು, ಅಜಮೀಢನ ಕುಲಕ್ಕೆ ಹೋದವಳು, ಮಹಾಕುಲೀನಳು, ಕೊಳದಿಂದ ಕೊಳಕ್ಕೆ ಹೋದ ಕಮಲದಂತವಳು, ಈಶ್ವರೀ, ಸರ್ವ ಕಲ್ಯಾಣೀ, ಪತಿಯಿಂದ ಪರಮಪೂಜಿತಳಾದ, ವೀರರ ತಾಯಿ ಮತ್ತು ವೀರನ ಪತ್ನಿ, ಸರ್ವ ಗುಣಗಳಿಂದ ಸುಮದಿತಳಾಗಿರುವ ನಿನ್ನಂಥಹ ಮಹಾಪ್ರಾಜ್ಞಳು ಮಾತ್ರ ಈ ರೀತಿಯ ಸುಖ-ದುಃಖಗಳನ್ನು ಸಹಿಸಿಕೊಳ್ಳಬಲ್ಲಳು. ನಿದ್ರೆ, ಆಲಸ್ಯ, ಕ್ರೋಧ, ಹರ್ಷ, ಹಸಿವು, ಬಾಯಾರಿಕೆ, ಛಳಿ, ಬಿಸಿಲು ಇವೆಲ್ಲವನ್ನೂ ಜಯಿಸಿ ವೀರ ಪಾರ್ಥರು ನಿತ್ಯಸುಖವನ್ನು ಬಯಸುತ್ತಿದ್ದಾರೆ. ಪಾರ್ಥರು ಗ್ರಾಮಸುಖವನ್ನು ತೊರೆದಿದ್ದಾರೆ. ಅವರು ಈಗ ವೀರರ, ಮಹೋತ್ಸಾಹರ ಮಹಾಬಲರ ಸುಖವನ್ನು ಬಯಸುತ್ತಿದ್ದಾರೆ. ಸ್ವಲ್ಪದರಲ್ಲಿಯೇ ಅವರು ತೃಪ್ತರಾಗುತ್ತಿಲ್ಲ. ಧೀರರು ಅತ್ಯುನ್ನತವಾದುದನ್ನು ಬಯಸುತ್ತಾರೆ; ಗ್ರಾಮದವರು ಮಧ್ಯಮ ಸುಖವನ್ನು ಬಯಸುತ್ತಾರೆ. ಉತ್ತಮರು ಮಾನುಷ ಭೋಗಗಳಿಗಿಂದ ಅತೀವವಾದವುಗಳಿಗೆ ಕಷ್ಟಪಡುತ್ತಾರೆ. ಧೀರರು ಕೊನೆಯದನ್ನು ಬಯಸುತ್ತಾರೆ, ಮಧ್ಯದಲ್ಲಿರುವುದನ್ನಲ್ಲ. ಕೊನೆಯದನ್ನು ಪಡೆಯುವುದು ಸುಖ ಮತ್ತು ಎರಡು ಕೊನೆಗಳ

ಮಧ್ಯದಲ್ಲಿರುವುದನ್ನು ಪಡೆಯುವುದು ದುಃಖ ಎಂದು ಹೇಳುತ್ತಾರೆ. ಕೃಷ್ಣೆಯೂ ಕೂಡಿ ಪಾಂಡವರು ನಿನಗೆ ಅಭಿವಾದಿಸುತ್ತಾರೆ. ಅವರು ಕುಶಲರಾಗಿದ್ದಾರೆಂದು ತಿಳಿಸಿ ನಿನ್ನ ಆರೋಗ್ಯದ ಕುರಿತು ಕೇಳುತ್ತಾರೆ. ಅಮಿತ್ರರನ್ನು ನಾಶಪಡಿಸಿ, ಶ್ರೀಯಿಂದ ಆವೃತರಾಗಿ, ಸರ್ವಲೋಕದ ಒಡೆಯರಾದ ಪಾಂಡವರನ್ನು ಆರೋಗ್ಯದಿಂದಿದ್ದು ಸರ್ವವನ್ನೂ ಸಾಧಿಸಿದವರಾಗಿರುವುದನ್ನು ಶೀಘ್ರದಲ್ಲಿಯೇ ನೋಡುತ್ತೀಯೆ."

ಈ ರೀತಿ ಆಶ್ವಾಸನೆಯನ್ನು ಪಡೆದ ಕುಂತಿಯು, ಪುತ್ರರಿಗಾಗಿ ಇನ್ನೂ ದುಃಖಿಸುತ್ತಾ, ಬುದ್ಧಿಯಲ್ಲಿ ಹುಟ್ಟಿದ ಕತ್ತಲೆಯನ್ನು ನಿಯಂತ್ರಿಸಿಕೊಂಡು ಜನಾರ್ದನನಿಗೆ ತಿರುಗಿ ಹೇಳಿದಳು:

"ಮಧುಸೂದನ! ಕೃಷ್ಣ! ಅವರಿಗೆ ಏನು ಒಳ್ಳೆಯದೆಂದು ನೀನು ತಿಳಿಯುತ್ತೀಯೋ ಅದನ್ನು ನಿನಗಿಷ್ಟವಾದ ಹಾಗೆ – ಆದರೆ ಧರ್ಮಕ್ಕೆ ಲೋಪಬಾರದ ಹಾಗೆ ಮತ್ತು ಮೋಸವನ್ನು ಬಳಸದೇ - ಮಾಡು. ಕೃಷ್ಣ! ನಿನ್ನ ಉನ್ನತ ಜನ್ಮವನ್ನೂ, ಸತ್ಯತೆಯನ್ನೂ, ನಿನ್ನ ಮಿತ್ರರಿಗೆ ಬುದ್ಧಿ ವಿಕ್ರಮಗಳನ್ನು ಉಪಯೋಗಿಸಿ ವ್ಯವಸ್ಥೆಮಾಡುವುದನ್ನೂ ನಾನು ತಿಳಿದುಕೊಂಡಿದ್ದೇನೆ. ನಿನ್ನ ಕುಲದಲ್ಲಿ ನೀನೇ ಧರ್ಮ, ನೀನೇ ಸತ್ಯ, ನೀನೇ ಮಹಾತಪಸ್ಸು. ನೀನೇ ತ್ರಾತಾ, ನೀನೇ

ಮಹಾಬ್ರಹ್ಮ, ಮತ್ತು ನಿನ್ನಲ್ಲಿಯೇ ಎಲ್ಲವೂ ನೆಲೆಸಿವೆ. ನೀನು ಹೇಳಿದಂತೆಯೇ ಆಗುತ್ತದೆ; ನಿನ್ನಲ್ಲಿಯೇ ಸತ್ಯವಿರುತ್ತದೆ.”

ಗೋವಿಂದನು ಅವಳಿಗೆ ಪ್ರದಕ್ಷಿಣೆ ಮಾಡಿ ಬೀಳ್ಕೊಂಡನು. ಅನಂತರ ಮಹಾಬಾಹುವು ದುರ್ಯೋಧನನ ಮನೆಯ ಕಡೆ ನಡೆದನು.

## ಶ್ರೀಕೃಷ್ಣನು ದುರ್ಯೋಧನನ ಮನೆಗೆ ಹೋದುದು-ಭೋಜನವನ್ನು ತಿರಸ್ಕರಿಸಿದ್ದುದು

ಪ್ರದಕ್ಷಿಣೆ ಮಾಡಿ ಪೃಥೆಯನ್ನು ಬೀಳ್ಕೊಂಡು ಗೋವಿಂದ, ಶೌರಿ, ಅರಿಂದಮನು ದುರ್ಯೋಧನನ ಮನೆಗೆ ಹೋದನು. ಪುರಂದರನ ಮನೆಯಂತೆ ಪರಮಸಂಪತ್ತಿನಿಂದ ಕೂಡಿದ್ದ, ಆಕಾಶದಲ್ಲಿ ಮೋಡದಂತಿರುವ ಮನೆಯ ಮೂರು ಕಕ್ಷೆಗಳನ್ನು ದ್ವಾರಪಾಲಕರಿಂದ ತಡೆಯಲ್ಪಡದೇ ಆ ಗಿರಿಕೂಟದಂತೆ ಎತ್ತರವಾಗಿರುವ, ಐಶ್ವರ್ಯದಿಂದ ಬೆಳಗುತ್ತಿರುವ, ಮಹಾಯಶಸ್ವಿ ಪ್ರಾಸಾದಗಳನ್ನು ಏರಿ ಹೋದನು. ಅಲ್ಲಿ ಸಹಸ್ರಾರು ರಾಜರುಗಳಿಂದ ಮತ್ತು ಕುರುಗಳಿಂದ ಪರಿವೃತನಾಗಿ ಆಸನದಲ್ಲಿ ಕುಳಿತಿದ್ದ ಮಹಾಬಾಹು ಧಾರ್ತರಾಷ್ಟ್ರನನ್ನು ಕಂಡನು. ದುರ್ಯೋಧನನ ಸಮೀಪದಲ್ಲಿ ತಮ್ಮ ತಮ್ಮ ಆಸನಗಳಲ್ಲಿದ್ದ ದುಃಶಾಸನ, ಕರ್ಣ, ಸೌಬಲ ಶಕುನಿಯರನ್ನೂ ಅವನು ನೋಡಿದನು. ದಾಶಾರ್ಹನು ಹತ್ತಿರ ಬರಲು ಮಹಾಯಶಸ್ವಿ ಧಾರ್ತರಾಷ್ಟ್ರನು ಅಮಾತ್ಯರೊಂದಿಗೆ ಎದ್ದು ಮಧುಸೂದನನನ್ನು ಪೂಜಿಸಿದನು. ವಾರ್ಷ್ಣೇಯ ಕೇಶವನು ಅಮಾತ್ಯರೊಂದಿಗೆ ಧಾರ್ತರಾಷ್ಟ್ರರನ್ನೂ

ಭೇಟಿಮಾಡಿ ಅಲ್ಲಿದ್ದ ರಾಜರನ್ನೂ ಕೂಡ ವಯಸ್ಸಿಗೆ ತಕ್ಕುದಾಗಿ ಭೇಟಿ ಮಾಡಿದನು. ಅಲ್ಲಿ ಅಚ್ಯುತನು ವಿವಿಧ ರತ್ನಗಳಿಂದ ಅಲಂಕರಿಸಲ್ಪಟ್ಟ ಬಂಗಾರದ ಪರ್ಯಂಕದ ಮೇಲೆ ಕುಳಿತುಕೊಂಡನು. ಆಗ ಕೌರವನು ಜನಾರ್ದನನಿಗೆ ಗೋವು ಮಧುಪರ್ಕಗಳನ್ನಿತ್ತು ಮನೆಗಳನ್ನೂ ರಾಜ್ಯವನ್ನೂ ಅವನಿಗೆ ನಿವೇದಿಸಿದನು. ಅಲ್ಲಿ ಕುಳಿತಿದ್ದ ಪ್ರಸನ್ನಾದಿತ್ಯವರ್ಚಸ ಗೋವಿಂದನನ್ನು ಕುರುಗಳು ರಾಜರೊಂದಿಗೆ ಉಪಾಸಿಸಿದರು. ಆಗ ರಾಜಾ ದುರ್ಯೋಧನನು ಜಯಂತರಲ್ಲಿ ಶ್ರೇಷ್ಠನಾದ ವಾರ್ಷ್ಣೇಯನನ್ನು ಭೋಜನಕ್ಕೆ ಆಮಂತ್ರಿಸಿದನು. ಆದರೆ ಕೇಶವನು ಆಮಂತ್ರಣವನ್ನು ಸ್ವೀಕರಿಸಲಿಲ್ಲ. ರಾಜಸಂಸದಿಯಲ್ಲಿ ದುರ್ಯೋಧನನು ಮೃದುವಾದ ಆದರೆ ವ್ಯಂಗ್ಯದ ದಾಟಿಯಲ್ಲಿ, ಕರ್ಣನನ್ನು ನೋಡುತ್ತಾ, ಕೃಷ್ಣನಿಗೆ ಹೇಳಿದನು:

> “ಜನಾರ್ದನ! ಏಕೆ ನೀನು ನಿನಗಾಗಿ ತಯಾರಿಸಿದ ಅನ್ನ-ಪಾನೀಯಗಳನ್ನು, ವಸ್ತ್ರ-ಹಾಸಿಗೆಗಳನ್ನು ಸ್ವೀಕರಿಸುತ್ತಿಲ್ಲ? ಎರಡೂ ಪಕ್ಷದವರಿಗೆ ನೀನು ಸಹಾಯಮಾಡುತ್ತಿದ್ದೀಯೆ. ಇಬ್ಬರ ಹಿತದಲ್ಲಿಯೂ ಇರುವೆ. ಧೃತರಾಷ್ಟ್ರನ ಸಂಬಂಧಿಯೂ ಪ್ರೀತಿಪಾತ್ರನೂ ಆಗಿದ್ದೀಯೆ. ನೀನು ಧರ್ಮ-ಅರ್ಥಗಳೆರಡನ್ನೂ ಎಲ್ಲ ತತ್ವಗಳನ್ನೂ ತಿಳಿದಿದ್ದೀಯೆ. ಇದರ ಕಾರಣವನ್ನು ಕೇಳಲು ಬಯಸುತ್ತೇನೆ.”

ಆಗ ಗೋವಿಂದ, ಮಹಾಮನಸ್ವಿ, ರಾಜೀವನೇತ್ರನು ತನ್ನ ವಿಪುಲ

ಭುಜವನ್ನು ಹಿಡಿದು ಗುಡುಗಿನಂಥಹ ಸ್ವರದಲ್ಲಿ, ಸ್ಪಷ್ಟವಾದ, ಉತ್ತಮವಾಗಿ ರಚಿಸಲ್ಪಟ್ಟ, ಮುಚ್ಚುಮರೆಯಿಲ್ಲದ, ನೀರಸವಲ್ಲದ, ಯಾವ ಶಬ್ಧವನ್ನೂ ನುಂಗದೇ ರಾಜನಿಗೆ ಕಾರಣದ ಕುರಿತು ಉತ್ತರಿಸಿದನು:

> "ಭಾರತ! ದೂತರು ಬಂದ ಕೆಲಸವು ಯಶಸ್ವಿಯಾದರೆ ಊಟಮಾಡುತ್ತಾರೆ ಮತ್ತು ಸತ್ಕಾರವನ್ನು ಸ್ವೀಕರಿಸುತ್ತಾರೆ. ನಾನು ಯಶಸ್ವಿಯಾದರೆ ನೀನು ಅಮಾತ್ಯರೊಂದಿಗೆ ನನ್ನನ್ನು ಸತ್ಕರಿಸಬಲ್ಲೆ!"

ಹೀಗೆ ಹೇಳಲು ಧಾರ್ತರಾಷ್ಟ್ರನು ಜನಾರ್ದನನಿಗೆ ಹೇಳಿದನು:

> "ನಮ್ಮೊಡನೆ ಈ ರೀತಿ ವ್ಯವಹರಿಸುವುದು ಸರಿಯಲ್ಲ. ನೀನು ನಿನ್ನ ಕಾರ್ಯದಲ್ಲಿ ಯಶಸ್ವಿಯಾಗುತ್ತೀಯೋ ಅಥವಾ ಇಲ್ಲವೋ, ನಿನಗೆ ನಮ್ಮೊಂದಿಗಿರುವ ಸಂಬಂಧದ ಕಾರಣ ನಾವು ನಿನಗೆ ಪೂಜೆ ಸಲ್ಲಿಸಬಲ್ಲೆವು. ಆದರೂ ಪ್ರೀತಿಯಿಂದ ಮಾಡಿದ ಪೂಜೆಯನ್ನು ನೀನು ಸ್ವೀಕರಿಸದೇ ಇದ್ದುದರ ಕಾರಣವು ನಮಗೆ ತಿಳಿಯಲಿಲ್ಲ. ನಿನ್ನೊಂದಿಗೆ ನಮ್ಮ ವೈರವೂ ಇಲ್ಲ, ಕದನವೂ ಇಲ್ಲ. ಆದುದರಿಂದ ಯೋಚಿಸಿದರೆ ನಿನ್ನ ಈ ಮಾತುಗಳು ನಿನಗೆ ತಕ್ಕುದಲ್ಲ."

ಹೀಗೆ ಹೇಳಲು ಜನಾರ್ದನ ದಾಶಾರ್ಹನು ಅಮಾತ್ಯರೊಂದಿಗಿದ್ದ ಧಾರ್ತರಾಷ್ಟ್ರನನ್ನು ನೋಡಿ ನಗುತ್ತಾ ಉತ್ತರಿಸಿದನು:

“ನಾನು ಕಾಮಕ್ಕಾಗಲೀ, ಅನುಮಾನದಿಂದಾಗಲೀ, ದ್ವೇಷದಿಂದಾಗಲೀ, ಸಂಪತ್ತಿಗಾಗಲೀ, ಲೋಭದ ಕಾರಣದಿಂದಾಗಲೀ ಎಂದೂ ಧರ್ಮವನ್ನು ಬಿಡುವವನಲ್ಲ. ಪ್ರೀತಿಯಿಂದ ಅಥವಾ ಆಪತ್ತಿನಲ್ಲಿರುವಾಗ ಇನ್ನೊಬ್ಬರಲ್ಲಿ ಊಟಮಾಡುತ್ತಾರೆ. ನೀನು ನನಗೆ ಪ್ರೀತಿಪಾತ್ರನಲ್ಲ ಮತ್ತು ನಾವು ಆಪತ್ತಿನಲ್ಲಿಲ್ಲ. ಸರ್ವ ಗುಣಗಳಿಂದ ಸಮುದಿತರಾಗಿರುವ, ನಿನ್ನೊಂದಿಗೆ ಪ್ರೀತಿಯಿಂದ ನಡೆದುಕೊಳ್ಳುವ ನಿನ್ನ ಸಹೋದರ ಪಾಂಡವರನ್ನು ನೀನು ಅವರು ಹುಟ್ಟಿದಾಗಲಿಂದಲೂ, ವಿನಾಕಾರಣ, ದ್ವೇಷಿಸಿಕೊಂಡು ಬಂದಿದ್ದೀಯೆ. ಪಾರ್ಥರ ಮೇಲಿರುವ ಈ ಕಾರಣವಿಲ್ಲದ ದ್ವೇಷವು ನಿನಗೆ ಸರಿಯಲ್ಲ. ಧರ್ಮದಲ್ಲಿ ಸ್ಥಿತರಾಗಿರುವ ಪಾಂಡವರಿಗೆ ಯಾರು ತಾನೇ ಕೇಡನ್ನು ಬಯಸಿಯಾರು? ಯಾರು ಅವರನ್ನು ದ್ವೇಷಿಸುತ್ತಾರೋ ಅವರು ನನ್ನನ್ನೂ ದ್ವೇಷಿಸುತ್ತಾರೆ. ಅವರನ್ನು ಪ್ರೀತಿಸುವವರು ನನ್ನನ್ನೂ ಪ್ರೀತಿಸುತ್ತಾರೆ. ಧರ್ಮಚಾರಿಗಳಾದ ಪಾಂಡವರ ಮತ್ತು ನನ್ನ ಆತ್ಮಗಳು ಒಂದೇ ಎನ್ನುವುದನ್ನು ತಿಳಿ. ಯಾರು ಕಾಮ-ಕ್ರೋಧಗಳನ್ನು ಅನುಸರಿಸಿ ಮೋಹದಿಂದ ಗುಣವಂತರಾದವರನ್ನು ದ್ವೇಷಿಸುತ್ತಾನೋ ಅವನನ್ನು ಪುರುಷಾಧಮನೆಂದು ಹೇಳುತ್ತಾರೆ. ತನ್ನನ್ನು ತಾನು ನಿಯಂತ್ರಣದಲ್ಲಿಟ್ಟುಕೊಳ್ಳದೇ, ಕ್ರೋಧವನ್ನು ಜಯಿಸದೇ

ಕಲ್ಯಾಣಗುಣಗಳನ್ನು ಹೊಂದಿದ ಬಾಂಧವರನ್ನು ಮೋಹ-ಲೋಭಗಳಿಂದ ನೋಡುವವನು ತುಂಬಾ ಸಮಯ ಸಂಪತ್ತನ್ನು ಹೊಂದಿರುವುದಿಲ್ಲ. ಆದರೆ ಹೃದಯದಲ್ಲಿ ಅಪ್ರಿಯತೆಯನ್ನಿಟ್ಟುಕೊಂಡಿದ್ದರೂ ಗುಣಸಂಪನ್ನರಿಗೆ ಪ್ರಿಯವಾದುದನ್ನು ಮಾಡಿ ಅವರನ್ನು ವಶಪಡಿಸಿಕೊಳ್ಳುವವನು ದೀರ್ಘಕಾಲದ ಯಶಸ್ಸನ್ನು ಪಡೆಯುತ್ತಾನೆ. ದುಷ್ಟತನದಿಂದ ಕಲುಷಿತವಾಗಿರುವ ಈ ಎಲ್ಲ ಅನ್ನವೂ ನನಗೆ ಅಭೋಜ್ಯವಾಗಿದೆ. ಕ್ಷತ್ತನು ನೀಡಿದುದು ಮಾತ್ರ ನನಗೆ ಭೋಕ್ತವ್ಯ ಎಂದು ನನ್ನ ಮತಿಗೆ ತಿಳಿದಿದೆ.”

ಹೀಗೆ ಹೇಳಿ ಆ ಮಹಾಬಾಹುವು ದುರ್ಯೋಧನ, ಅಮರ್ಷಣ, ಧಾರ್ತರಾಷ್ಟ್ರನ ಶುಭ್ರನಿವೇಶನದಿಂದ ಹೊರಬಂದನು.

## ವಿದುರ-ಕೃಷ್ಣರ ಸಂವಾದ

ಹೊರಟುಬಂದು ಮಹಾಬಾಹು ವಾಸುದೇವ ಮಹಾಮನಸ್ವಿಯು ಮಹಾತ್ಮ ವಿದುರನ ಮನೆಗೆ ಬಂದನು. ಆ ಮಹಾಬಾಹುವು ವಿದುರನ ಮನೆಯಲ್ಲಿದ್ದಾಗ ಅಲ್ಲಿಗೆ ದ್ರೋಣ, ಕೃಪ, ಭೀಷ್ಮ, ಬಾಹ್ಲಿಕ ಮತ್ತು ಇತರ ಕುರುಗಳು ಬಂದರು. ಅಲ್ಲಿಗೆ ಬಂದ ಕುರುಗಳು ಮಧುಸೂದನನಿಗೆ

“ವಾರ್ಷ್ಣೇಯ! ರತ್ನಗಳನ್ನುಳ್ಳ ನಮ್ಮ ಮನೆಗಳನ್ನು ನಿನಗೆ ಕೊಡುತ್ತೇವೆ” ಎಂದು ಹೇಳಿದರು. ಆ ಮಹಾತೇಜಸ್ವಿ ಕೌರವರಿಗೆ ಮಧುಸೂದನನು “ನೀವೆಲ್ಲರೂ ಹೋಗಿ.

ನಿಮ್ಮೆಲ್ಲರಿಂದ ನಾನು ಸತ್ಕೃತನಾಗಿದ್ದೇನೆ” ಎಂದನು.

ಕುರುಗಳು ಹೊರಟು ಹೋಗಲು ಕ್ಷತ್ತನು ದಾಶಾರ್ಹ, ಅಪರಾಜಿತನನ್ನು ಸರ್ವ ಕಾಮಗಳಿಂದ ಪ್ರಯತ್ನಪಟ್ಟು ಅರ್ಚಿಸಿದನು. ಆಗ ಕ್ಷತ್ತನು ಮಹಾತ್ಮ ಕೇಶವನಿಗೆ ಶುಚಿಯಾದ, ಉತ್ತಮ ಗುಣದ ಅನ್ನ ಪಾನೀಯಗಳನ್ನೂ ಅನೇಕ ಉಪಾಹರಗಳನ್ನು ನೀಡಿದನು. ಪ್ರಥಮವಾಗಿ ಬ್ರಾಹ್ಮಣರನ್ನು ತೃಪ್ತಿಪಡಿಸಿ, ಆ ವೇದವಿದರಿಗೆ ಪರಮ ದ್ರವ್ಯಗಳನ್ನೂ ದಾನವಾಗಿತ್ತನು. ಅನಂತರ ತನ್ನ ಅನುಯಾಯಿಗಳೊಂದಿಗೆ, ಮರುತರೊಂದಿಗೆ ವಾಸವನು ಹೇಗೋ ಹಾಗೆ, ವಿದುರನ ಶುಚಿಯಾದ ಮತ್ತು ಗುಣವಂತ ಆಹಾರವನ್ನು ಭುಂಜಿಸಿದನು.

ಅವನು ಊಟಮಾಡಿ ಚೇತರಿಸಿಕೊಂಡ ನಂತರ ರಾತ್ರಿಯಲ್ಲಿ ವಿದುರನು ಹೇಳಿದನು:

> “ಕೇಶವ! ನಿನ್ನ ಈ ಆಗಮನವು ಸರಿಯಾಗಿ ವಿಚಾರಮಾಡಿದ್ದುದಲ್ಲ. ಯಾಕೆಂದರೆ ಇವನು ಅರ್ಥಧರ್ಮಗಳನ್ನು ತಿಳಿಯದವನು ಮತ್ತು ದುಡುಕು ಸ್ವಭಾವದವನು. ಇನ್ನೊಬ್ಬರನ್ನು ಹೀಯಾಳಿಸುತ್ತಾನೆ ಆದರೆ ತಾನು ಮಾತ್ರ ಗೌರವವನ್ನು ಬಯಸುತ್ತಾನೆ. ವೃದ್ಧರ ಮಾತನ್ನು ಮೀರಿ ನಡೆಯುತ್ತಾನೆ. ಧಾರ್ತರಾಷ್ಟ್ರನು ಧರ್ಮಶಾಸ್ತ್ರಗಳನ್ನು ತಿಳಿಯದವನು. ದುರಾತ್ಮ. ವಿಧಿಯ

ಗತಿಗೆ ಸಿಲುಕಿದವನು. ಅಳತೆಗೆ ದೊರಕದವನು. ಶ್ರೇಯಸ್ಸನ್ನು ಬಯಸುವವರಿಗೆ ಕೆಟ್ಟದ್ದನ್ನು ಮಾಡುವವನು. ಅವನು ಕಾಮಾತ್ಮ. ತುಂಬಾ ತಿಳಿದುಕೊಂಡಿದ್ದೇನೆಂದು ಅಭಿಮಾನಪಡುತ್ತಾನೆ. ನಿಜವಾದ ಮಿತ್ರರ ಶತ್ರು. ಎಲ್ಲರನ್ನೂ ಶಂಕಿಸುತ್ತಾನೆ. ಏನನ್ನೂ ಮಾಡುವುದಿಲ್ಲ. ಮಾಡಿದವರಿಗೆ ಅಕೃತಜ್ಞ. ಧರ್ಮವನ್ನು ತ್ಯಜಿಸಿದವನು. ಸುಳ್ಳನ್ನು ಪ್ರೀತಿಸುತ್ತಾನೆ. ಇವು ಮತ್ತು ಇನ್ನೂ ಇತರ ಬಹಳಷ್ಟು ದೋಷಗಳಿಂದ ಅವನು ಕೂಡಿದ್ದಾನೆ. ನೀನು ಹೇಳುವುದು ಅವನಿಗೆ ಶ್ರೇಯಸ್ಕರವಾದುದಾದರೂ ಅವನು ದುಡುಕಿನಿಂದ ಸ್ವೀಕರಿಸುವುದಿಲ್ಲ.

ತನ್ನ ಸೇನಾಸಮುದಾಯವನ್ನು ನೋಡಿ ಆ ಬಾಲಕ ಪಾರ್ಥಿವನು ತಾನು ಕೃತಾರ್ಥನಾದೆನೆಂದು ತಿಳಿದುಕೊಂಡಿದ್ದಾನೆ. ಕರ್ಣನೊಬ್ಬನೇ ಶತ್ರುಗಳನ್ನು ಗೆಲ್ಲಲು ಸಮರ್ಥ ಎಂದು ನಿಶ್ಚಯಿಸಿದ ದುರ್ಬುದ್ಧಿ ಧಾರ್ತರಾಷ್ಟ್ರನು ಶಾಂತಿಯನ್ನು ಬಯಸುವುದಿಲ್ಲ. ಭೀಷ್ಮ, ದ್ರೋಣ, ಕೃಪ, ಕರ್ಣ, ದ್ರೋಣಪುತ್ರ ಮತ್ತು ಜಯದ್ರಥರ ಮೇಲೆ ತುಂಬಾ ನಂಬಿಕೆಯನ್ನು ಇಟ್ಟಿದ್ದಾನೆ. ಆದುದರಿಂದ ಅವನು ಶಾಂತಿಗೆ ಮನಸ್ಸುಮಾಡುವುದಿಲ್ಲ. ಪಾರ್ಥರು ಭೀಷ್ಮ-ದ್ರೋಣ-ಕೃಪರನ್ನು ನೋಡಲೂ ಕೂಡ ಶಕ್ತರಲ್ಲ ಎಂದು ಕರ್ಣನೊಂದಿಗೆ ಧಾರ್ತರಾಷ್ಟ್ರರು ನಿಶ್ಚಯಿಸಿದ್ದಾರೆ.

ಪಾಂಡವರಿಗೆ ಯಥೋಚಿತವಾದುದನ್ನು ನಾವು ಕೊಡುವುದಿಲ್ಲ ಎಂದು ನಿರ್ಧರಿಸಿದ ಧಾರ್ತರಾಷ್ಟ್ರರಿಗೆ ನಿನ್ನ ಮಾತು ನಿರರ್ಥಕವಾಗುತ್ತದೆ. ಎಲ್ಲಿ ಒಳ್ಳೆಯ ಮಾತು ಮತ್ತು ಕೆಟ್ಟ ಮಾತು ಸಮವೆಂದು ಪರಿಗಣಿಸಲ್ಪಡುತ್ತದೆಯೋ ಅಲ್ಲಿ ಪ್ರಾಜ್ಞನು ಕಿವುಡನಿಗೆ ಗಾಯನ ಮಾಡಿದಂತೆ ಎಂದು ಮಾತನಾಡುವುದೇ ಇಲ್ಲ. ಚಾಂಡಾಲರ ಮುಂದೆ ದ್ವಿಜನ ಮಾತು ಹೇಗೋ ಹಾಗೆ ಯುಕ್ತವಾದ ನಿನ್ನ ಮಾತುಗಳು ತಿಳುವಳಿಕೆಯಿಲ್ಲದಿರುವವರ, ಮೂಢರ ಮತ್ತು ಮರ್ಯಾದೆಯನ್ನು ನೀಡದವರ ಮುಂದೆ. ಬಲಶಾಲಿಯಾಗಿರುವ ಈ ಮೂಢನು ನಿನ್ನ ಮಾತನ್ನು ನಡೆಸುವುದಿಲ್ಲ. ನೀನು ಅವನಿಗೆ ಏನೆಲ್ಲ ಮಾತುಗಳನ್ನಾಡುತ್ತೀಯೋ ಅವು ನಿರರ್ಥಕ.

ಆ ಎಲ್ಲ ಪಾಪಚೇತನರು ಸೇರಿರುವವರ ಮಧ್ಯ ನೀನು ಹೋಗುವುದು ನನಗೆ ಸರಿಯೆನಿಸುತ್ತಿಲ್ಲ ಕೃಷ್ಣ! ಬಹುಸಂಖ್ಯೆಯಲ್ಲಿರುವ ಆ ದುರ್ಬುದ್ಧಿಗಳ, ಅಶಿಷ್ಟರ ಮತ್ತು ಪಾಪಚೇತಸರ ವಿರುದ್ಧ ಅವರ ಮಧ್ಯೆಯೇ ನೀನು ಮಾತನಾಡುವುದು ನನಗೆ ಸರಿಯೆನ್ನಿಸುವುದಿಲ್ಲ, ವೃದ್ಧರ ಸೇವೆಯನ್ನು ಮಾಡದೇ ಇರುವ, ಸಂಪತ್ತು ಮೋಹಗಳಿಂದ ದರ್ಪಿತರಾದ, ವಯಸ್ಸಿನಿಂದ ದರ್ಪಿತರಾದ, ಕ್ರೂರರಾದ ಅವರು ನಿನ್ನ ಶ್ರೇಯಸ್ಕರ ಮಾತುಗಳನ್ನು ಸ್ವೀಕರಿಸುವುದಿಲ್ಲ.

ಅವನು ಬಲವಾದ ಸೇನೆಯನ್ನು ಒಟ್ಟುಗೂಡಿಸಿದ್ದಾನೆ. ಅವನಿಗೆ ನಿನ್ನಮೇಲೆ ಮಹಾ ಶಂಕೆಯಿದೆ. ಆದುದರಿಂದ ಅವನು ನಿನ್ನ ಮಾತಿನಂತೆ ಮಾಡುವುದಿಲ್ಲ. ಇಂದು ಯುದ್ಧದಲ್ಲಿ ಅಮರರನ್ನೊಡಗೂಡಿದ ಇಂದ್ರನಿಗೂ ಕೂಡ ತಮ್ಮೊಂದಿಗೆ ಹೋರಾಡಲು ಸಾಧ್ಯವಿಲ್ಲ ಎಂದು ಧಾರ್ತರಾಷ್ಟ್ರರೆಲ್ಲರೂ ನಂಬಿದ್ದಾರೆ. ಅಂಥಹ ಗಾಢನಂಬಿಕೆಯನ್ನಿಟ್ಟಿರುವವನ ಮತ್ತು ಕಾಮಕ್ರೋಧಗಳಂತೆ ನಡೆದುಕೊಳ್ಳುವವನ ಎದಿರು ನಿನ್ನ ಮಾತುಗಳು ಸಮರ್ಥವಾಗಿದ್ದರೂ ಅಸಮರ್ಥವಾಗುತ್ತವೆ. ಆನೆಗಳ, ರಥಗಳ, ಅಶ್ವಗಳ ಮತ್ತು ಸೇನೆಯ ಮಧ್ಯೆ ನಿಂತು ಆ ಮೂಢ ಮಂದ ದುರ್ಯೋಧನನು ಭಯವನ್ನು ಕಳೆದುಕೊಂಡು ಈಗಾಗಲೇ ತಾನು ಇಡೀ ಭೂಮಿಯನ್ನೇ ಗೆದ್ದುಬಿಟ್ಟಿದ್ದೇನೆ ಎಂದು ತಿಳಿದುಕೊಂಡಿದ್ದಾನೆ. ಧೃತರಾಷ್ಟ್ರನ ಪುತ್ರನು ಪ್ರತಿಸ್ಪರ್ಧಿಗಳಿಲ್ಲದೇ ಭೂಮಿಯ ಮಹಾರಾಜ್ಯವನ್ನು ಆಳುತ್ತಿದ್ದಾನೆ. ಅವನಿಂದ ಶಾಂತಿಯು ದೊರೆಯುವುದು ಅಸಂಭವ. ತನ್ನಲ್ಲಿರುವುದೆಲ್ಲ ಕೇವಲ ತನಗೇ ಸೇರಿದ್ದುದು ಎಂದು ತಿಳಿದುಕೊಂಡಿದ್ದಾನೆ. ಕಾಲದಿಂದ ಪಕ್ವವಾದ ಪೃಥ್ವಿಯ ನಾಶವು ಸಮೀಪಿಸುತ್ತಿರುವಂತಿದೆ. ದುರ್ಯೋಧನನಿಗಾಗಿ ಪಾಂಡವರೊಂದಿಗೆ ಯುದ್ಧಮಾಡಲು ಭೂಮಿಯ ಸರ್ವ ಯೋಧರೂ ರಾಜರೂ ಕ್ಷಿತಿಪಾಲರೂ

ಬಂದು ಸೇರಿದ್ದಾರೆ. ಇವರೆಲ್ಲರೂ ನಿನ್ನ ಮೇಲೆ ಹಿಂದಿನಿಂದಲೂ ವೈರವನ್ನು ಸಾಧಿಸಿಕೊಂಡು ಬಂದಿದ್ದಾರೆ. ಈ ರಾಜರ ಸಾರವನ್ನೂ ನೀನು ಅಪಹರಿಸಿದ್ದೀಯೆ. ನಿನ್ನ ಕುರಿತಾದ ಉದ್ವೇಗದಿಂದ ಆ ವೀರರು ಕರ್ಣನ ಜೊತೆ ಸೇರಿಕೊಂಡು ಧಾರ್ತರಾಷ್ಟ್ರರ ಪಕ್ಷದಲ್ಲಿದ್ದಾರೆ. ತಮ್ಮನ್ನು ತಾವೇ ತೊರೆದು ಈ ಎಲ್ಲ ಯೋಧರೂ ದುರ್ಯೋಧನನ ಜೊತೆಗೂಡಿ ಪಾಂಡವರೊಂದಿಗೆ ಯುದ್ಧಮಾಡಲು ದೊರಕಿದೆಯೆಂದು ಸಂತೋಷದಿಂದಿದ್ದಾರೆ. ನೀನು ಅವರ ಮಧ್ಯೆ ಪ್ರವೇಶಿಸುತ್ತೀಯೆ ಎಂದರೆ ನನಗೇನೋ ಹಿಡಿಸುವುದಿಲ್ಲ. ಬಹುಸಂಖ್ಯೆಯಲ್ಲಿ ಸೇರಿರುವ ಆ ದುಷ್ಟಚೇತಸ ಶತ್ರುಗಳ ಮಧ್ಯೆ ನೀನು ಹೇಗೆ ಹೋಗುತ್ತೀಯೆ?

ನೀನು ಸರ್ವಥಾ ದೇವತೆಗಳಿಗೂ ಗೆಲ್ಲಲಸಾಧ್ಯನು. ನಿನ್ನ ಪ್ರಭಾವ, ಪೌರುಷ ಮತ್ತು ಬುದ್ಧಿಯನ್ನು ತಿಳಿದುಕೊಂಡಿದ್ದೇನೆ. ಆದರೂ ನಿನ್ನಲ್ಲಿ ಮತ್ತು ಪಾಂಡವರಲ್ಲಿ ನನಗೆ ಪ್ರೀತಿಯಿರುವುದರಿಂದ, ಪ್ರೇಮದಿಂದ, ಸೌಹಾರ್ದತೆಯಿಂದ ಬಹಳ ಗೌರವದಿಂದ ನಿನಗೆ ಇದನ್ನು ಹೇಳುತ್ತಿದ್ದೇನೆ.”

ಭಗವಂತನು ಹೇಳಿದನು:

“ಮಹಾಪ್ರಾಜ್ಞನು ಹೇಳುವಂತಿದೆ. ದೂರದೃಷ್ಟಿಯಿರುವವನು ಹೇಳಿದಂತಿದೆ. ನಿನ್ನಂಥಹ ಸುಹೃದಯನು ನನ್ನಂಥಹ

ಸುಹೃದಯನಿಗೆ ಹೇಳಬೇಕಾದುದೇ ಇದು. ಧರ್ಮಾರ್ಥಯುಕ್ತವಾಗಿದೆ. ನಿನಗೆ ತಕ್ಕುದಾಗಿದೆ. ತಂದೆ-ತಾಯಿಗಳು ಆಡುವಂತ ಮಾತುಗಳನ್ನು ಆಡಿದ್ದೀಯೆ. ನೀನು ನನಗೆ ಹೇಳಿದ್ದುದು ಸತ್ಯವಾದುದು. ಈಗ ನಡೆಯುತ್ತಿರುವುದು. ಯುಕ್ತವಾದುದು ಮತ್ತು ನನ್ನ ಒಳಿತಿಗಾಗಿಯೇ ಇರುವುದು. ಆದರೂ ನಾನು ಇಲ್ಲಿಗೆ ಬಂದಿರುವುದರ ಕಾರಣವನ್ನು ಗಮನವಿಟ್ಟು ಕೇಳು. ಕ್ಷತ್ತ! ಧಾರ್ತರಾಷ್ಟ್ರನ ದೌರಾತ್ಮ್ಯ, ಕ್ಷತ್ರಿಯರ ವೈರತ್ವ ಇವೆಲ್ಲವನ್ನೂ ತಿಳಿದೇ ನಾನು ಇಂದು ಕೌರವರಲ್ಲಿಗೆ ಬಂದಿದ್ದೇನೆ. ಯಾರು ವಿನಾಶವಾಗುವ ಈ ಪೃಥ್ವಿಯನ್ನು, ಕುದುರೆ, ರಥ, ಆನೆಗಳು ಮತ್ತು ಇವರೆಲ್ಲರೊಂದಿಗೆ ಮೃತ್ಯುಪಾಶದಿಂದ ಬಿಡುಗಡೆ ಮಾಡುತ್ತಾನೋ ಅವನು ಉತ್ತಮ ಧರ್ಮವನ್ನು ಹೊಂದುತ್ತಾನೆ. ಧರ್ಮಕಾರ್ಯದ ಯಥಾ ಶಕ್ತಿ ಪ್ರಯತ್ನಮಾಡುವ ಮಾನವನಿಗೆ, ಕೊನೆಯಲ್ಲಿ ಅದು ಸಾಧ್ಯವಾಗದೇ ಹೋದರೂ ಅದರ ಪುಣ್ಯವು ದೊರೆಯುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ. ಮನಸ್ಸಿನಲ್ಲಿ ಪಾಪಕರ್ಮಗಳನ್ನು ಯೋಚಿಸಿ ಅವುಗಳನ್ನು ಮಾಡದೇ ಇದ್ದರೆ ಅದರ ಫಲವು ಅವನಿಗೆ ತಗಲುವುದಿಲ್ಲ ಎಂದು ಧರ್ಮವಿದರು ತಿಳಿದಿದ್ದಾರೆ. ಸಂಗ್ರಾಮದಲ್ಲಿ ವಿನಾಶಹೊಂದುವ ಕುರು ಮತ್ತು ಸೃಂಜಯರ ನಡುವೆ

ಶಾಂತಿಯನ್ನು ತರಲು ಪ್ರಯತ್ನಿಸುತ್ತಿದ್ದೇನೆ.

ಬಂದೊದಗಿರುವ ಈ ಮಹಾಘೋರ ಆಪತ್ತು ಕುರುಗಳಿಂದಲೇ ಹುಟ್ಟಿದೆ. ಇದು ಕರ್ಣ-ದುರ್ಯೋಧನರು ಮಾಡಿದ್ದುದು. ಉಳಿದವರೆಲ್ಲರೂ ಅವರನ್ನು ಅನುಸರಿಸುತ್ತಿದ್ದಾರೆ ಅಷ್ಟೆ. ವ್ಯಸನಗಳಿಗೆ ಸಿಲುಕಿದ ಮಿತ್ರನನ್ನು ಉಳಿಸಲು ಪ್ರಯತ್ನಿಸದ ಮಿತ್ರನನ್ನು ತಿಳಿದವರು ಕಟುಕನೆಂದು ಕರೆಯುತ್ತಾರೆ. ಕೆಟ್ಟ ಕಾರ್ಯವನ್ನು ಮಾಡಲು ಹೊರಟಿರುವ ಮಿತ್ರನನ್ನು ಬಲವನ್ನುಪಯೋಗಿಸಿ, ಬೈಯುವುದರಿಂದಾಗಲೀ, ತಲೆಕೂದಲನ್ನು ಹಿಡಿದು ಎಳೆದಾಗಲೀ, ಏನಾದರೂ ಮಾಡಿ ತಡೆಯಬೇಕು. ಸಮರ್ಥವಾದ, ಧರ್ಮಾರ್ಥಸಹಿತವಾದ, ಹಿತವಾದ ಶುಭ ಮಾತುಗಳು ಅಮಾತ್ಯರೊಂದಿಗೆ ಧಾರ್ತರಾಷ್ಟ್ರನು ಸ್ವೀಕರಿಸಲು ಅರ್ಹವಾದವುಗಳು. ಧಾರ್ತರಾಷ್ಟ್ರರ, ಪಾಂಡವರ ಹಾಗೂ ಭೂಮಿಯ ಕ್ಷತ್ರಿಯರ ಹಿತಕ್ಕಾಗಿ ಪ್ರಯತ್ನಿಸಲೇ ನಾನು ಇಲ್ಲಿಗೆ ಬಂದಿದ್ದೇನೆ. ಹಿತಕ್ಕಾಗಿ ಪ್ರಯತ್ನಿಸುತ್ತಿರುವ ನನ್ನನ್ನು ದುರ್ಯೋಧನನು ಶಂಕಿಸಿದರೆ, ನಾನು ಅನೃಣನಾಗಿದ್ದೇನೆ ಎಂಬ ಸಂತೋಷವು ನನ್ನ ಹೃದಯಕ್ಕಾಗುತ್ತದೆ.

ಬಾಂಧವರಲ್ಲಿ ಮಿಥ್ಯ ಭೇದಗಳುಂಟಾದಾಗ ಯಾವ ಮಿತ್ರನು ಅದನ್ನು ಹೆಚ್ಚಿಸದೇ ಸರ್ವಯತ್ನದಿಂದ ಮಧ್ಯಸ್ತಿಕೆ

ಮಾಡುತ್ತಾನೋ ಅವನೇ ನಿಜವಾದ ಮಿತ್ರ ಎಂದು ತಿಳಿದವರು ಹೇಳುತ್ತಾರೆ. ಶಕ್ತನಾಗಿದ್ದರೂ ಕೃಷ್ಣನು ದುಡುಕುತ್ತಿರುವ ಕುರು-ಪಾಂಡವರನ್ನು ತಡೆಯಲಿಲ್ಲವಲ್ಲ ಎಂದು ಅಧರ್ಮಜ್ಞರು, ಮೂಢರು, ಅಸುಹೃದಯರು ಮುಂದೆ ಹೇಳಬಾರದಲ್ಲ! ಇದರಿಂದಲೇ ಇಬ್ಬರ ನಡುವೆ ಅರ್ಥವನ್ನು ಸಾಧಿಸಲೋಸುಗ ನಾನು ಇಲ್ಲಿಗೆ ಬಂದಿದ್ದೇನೆ. ನನ್ನ ಪ್ರಯತ್ನವನ್ನು ಮಾಡಿ ಹೋಗುತ್ತೇನೆ. ಇನ್ನೊಬ್ಬರು ಕೆಟ್ಟದಾಗಿ ಮಾತನಾಡಿಕೊಳ್ಳಬಾರದಲ್ಲ! ಧರ್ಮಾರ್ಥಯುಕ್ತವಾದ, ಅನಾಮಯವಾದ ನನ್ನ ಮಾತುಗಳನ್ನು ಕೇಳಿ ಆ ಬಾಲಕನು ನಡೆದುಕೊಳ್ಳದೇ ಇದ್ದರೆ ಅವನು ದೈವದ ವಶವಾಗುತ್ತಾನೆ. ಪಾಂಡವರ ಒಳಿತಿಗೆ ಕಡಿಮೆಮಾಡದೇ ಕುರುಗಳಲ್ಲಿ ಶಾಂತಿಯನ್ನು ತಂದೆನೆಂದಾದರೆ ಕುರುಗಳನ್ನು ಮೃತ್ಯುಪಾಶದಿಂದ ಬಿಡುಗಡೆಮಾಡಿದ ಮಹಾ ಅರ್ಥವೂ, ಸಚ್ಚಾರಿತ್ರ್ಯವೂ, ಪುಣ್ಯವೂ ನನ್ನದಾಗುತ್ತದೆ. ನಾನು ಹೇಳುವ ಕಾವ್ಯ, ಧರ್ಮ, ಅರ್ಥವತ್ತಾದ, ಅಹಿಂಸೆಯ ಮಾತುಗಳನ್ನು ಧಾರ್ತರಾಷ್ಟ್ರರು ಕೇಳಿ ಆಲೋಚಿಸಲು ಸಮರ್ಥರಾದರೆ, ಕುರುಗಳೂ ಕೂಡ ನನ್ನನ್ನು ಪೂಜಿಸುತ್ತಾರೆ. ಬದಲಾಗಿ ಅವರು ನನ್ನ ಮೇಲೆ ಆಕ್ರಮಣ ಮಾಡಿದರೆ ಅಲ್ಲಿ ಸೇರಿದ ಪಾರ್ಥಿವರೆಲ್ಲರೂ ಕುಪಿತನಾದ ಸಿಂಹದ ಎದಿರು ನಿಲ್ಲಲಾರದ ಮೃಗಗಳಂತೆ!”

ವೃಷ್ಣಿಗಳ ವೃಷಭನು ಹೀಗೆ ಹೇಳಿ ಹಾಸಿಗೆಯ ಸುಖಸಂಸ್ಪರ್ಷದಲ್ಲಿ ಸುಖವಾದ ನಿದ್ದೆಯನ್ನು ಮಾಡಿದನು.

## ಕುರುಸಭೆಗೆ ಶ್ರೀಕೃಷ್ಣನ ಆಗಮನ

ಹೀಗೆ ಆ ಬುದ್ಧಿಮತರಿಬ್ಬರ ನಡುವೆ ಮಾತುಕಥೆಯು ನಡೆಯಲು ಮಂಗಳ ನಕ್ಷತ್ರಸಂಪನ್ನ ರಾತ್ರಿಯು ಕಳೆಯಿತು. ಧರ್ಮಾರ್ಥಕಾಮಯುಕ್ತವಾದ, ವಿಚಿತ್ರಾರ್ಥಪದಾಕ್ಷರಗಳಿಂದ ಕೂಡಿದ ವಿವಿಧ ಮಾತುಗಳನ್ನು ಕೇಳುತ್ತಿದ್ದ ಮಹಾತ್ಮ ವಿದುರನಿಗೆ ಮತ್ತು ಅದಕ್ಕೆ ಸಮನಾದ ಮಾತುಗಳನ್ನು ಕೇಳುತ್ತಿದ್ದ ಅಮಿತ ತೇಜಸ್ವಿ ಕೃಷ್ಣನಿಗೆ ಇಷ್ಟವಾಗದೇ ಇದ್ದರೂ ಆ ರಾತ್ರಿಯು ಕಳೆದು ಹೋಯಿತು. ಆಗ ಸ್ವರಸಂಪನ್ನರಾದ ಬಹುಮಂದಿ ಸೂತಮಾಗಧರು ಶಂಖದುಂದುಭಿಗಳ ನಿರ್ಘೋಷಗಳಿಂದ ಕೇಶವನನ್ನು ಎಚ್ಚರಿಸಿದರು. ದಾಶಾರ್ಹ, ಸರ್ವಸಾತ್ವತರ ಋಷಭ, ಜನಾರ್ದನನು ಎದ್ದು ಪ್ರಾತಃಕಾರ್ಯದಲ್ಲಿ ಅವಶ್ಯಕವಾದುದೆಲ್ಲವನ್ನೂ ಮಾಡಿ ಮುಗಿಸಿದನು. ಅವನು ಸಮಲಂಕೃತನಾಗಿ ಉದಕಕಾರ್ಯಗಳನ್ನು ಪೂರೈಸಿ, ಜಪಿಸಿ, ಅಗ್ನಿಯಲ್ಲಿ ಆಹುತಿಯನ್ನಿತ್ತು ಆದಿತ್ಯನನ್ನು ಉಪಾಸಿಸಿದನು. ಅಪರಾಜಿತ ದಾಶಾರ್ಹ ಕೃಷ್ಣನು ಸಂಧ್ಯಾವಂದನೆಯಲ್ಲಿ ನಿರತನಾಗಿರಲು ದುರ್ಯೋಧನ ಮತ್ತು ಸೌಬಲ ಶಕುನಿಯರು ಬಂದು ಭೇಟಿಮಾಡಿದರು. ಅವರು ಧೃತರಾಷ್ಟ್ರ, ಭೀಷ್ಮಪ್ರಮುಖ ಕುರುಗಳು ಮತ್ತು ಎಲ್ಲ ಪಾರ್ಥಿವ ರಾಜರೂ ಸಭೆಗೆ ಬಂದಿರುವುದನ್ನು ಕೃಷ್ಣನಿಗೆ

ವರದಿಮಾಡಿದರು.

"ಗೋವಿಂದ! ದಿವಿಯಲ್ಲಿ ಅಮರರು ಶಕ್ರನನ್ನು ಹೇಗೋ ಹಾಗೆ
ನಿನ್ನ ಬರವನ್ನು ಕಾಯುತ್ತಿದ್ದಾರೆ"

ಎನ್ನಲು ಗೋವಿಂದನು ಅವರನ್ನು ಸಾಮದಿಂದ ಪರಮ ಪ್ರೀತಿಯಿಂದ ಅಭಿನಂದಿಸಿದನು.

ಆದಿತ್ಯನು ಸ್ವಲ್ಪ ಮೇಲೆ ಬರಲು ಪರಂತಪ ಜನಾರ್ದನನು ಬ್ರಾಹ್ಮಣರಿಗೆ ಹಿರಣ್ಯ, ವಸ್ತ್ರಗಳು, ಮತ್ತು ಗೋವುಗಳನ್ನು ದಾನವನ್ನಾಗಿತ್ತನು. ರತ್ನಗಳನ್ನು ಹಂಚಿದ ನಂತರ ಅಪರಾಜಿತ ದಾಶಾರ್ಹನು ನಿಂತುಕೊಳ್ಳಲು ಸಾರಥಿಯು ಬಳಿಬಂದು ವಂದಿಸಿದನು. ಆ ಮಹಾಮನಸ್ವಿಯು ಮಹಾಮೋಡದಂತೆ ಘೋಷಿಸುವ, ಸರ್ವರತ್ನವಿಭೂಷಿತವಾದ ದಿವ್ಯ ರಥವನ್ನು ತರಲು ಆಜ್ಞಾಪಿಸಿದನು. ಅಗ್ನಿ ಮತ್ತು ಬ್ರಾಹ್ಮಣರಿಗೆ ಪ್ರದಕ್ಷಿಣೆ ಮಾಡಿ, ಪರಮ ಶ್ರೀಯಿಂದ ಬೆಳಗುತ್ತಿದ್ದ ಕೌಸ್ತುಭ ಮಣಿಯನ್ನು ಧರಿಸಿ, ಕುರುಗಳಿಂದ ಸಂವೃತನಾಗಿ, ವೃಷ್ಣಿಗಳಿಂದ ರಕ್ಷಿತನಾಗಿ ಜನಾರ್ದನ, ಕೃಷ್ಣ, ಶೌರಿ, ಸರ್ವಯಾದವನಂದನನು ರಥವನ್ನೇರಿದನು. ಸರ್ವಧರ್ಮವಿದು ವಿದುರನು ರಥವನ್ನೇರಿ ಸರ್ವಪ್ರಾಣಭೃತರಲ್ಲಿ ಶ್ರೇಷ್ಠನಾದ, ಸರ್ವಧರ್ಮಭೃತರಲ್ಲಿ ಶ್ರೇಷ್ಠನಾದ ದಾಶಾರ್ಹನನ್ನು ಹಿಂಬಾಲಿಸಿದನು. ದುರ್ಯೋಧನ ಮತ್ತು ಸೌಬಲ ಶಕುನಿಯರೂ ಕೂಡ ಎರಡನೆಯ ರಥದಲ್ಲಿ ಪರಂತಪನನ್ನು ಹಿಂಬಾಲಿಸಿದರು. ವೃಷ್ಣಿಗಳ ಮಹಾರಥರಾದ ಸಾತ್ಯಕಿ- ಕೃತವರ್ಮರು ರಥ, ಕುದುರೆ

ಆನೆಗಳೊಂದಿಗೆ ಕೃಷ್ಣನ ಹಿಂದೆ ಹಿಂಬಾಲಿಸಿ ಹೋದರು.

ಉತ್ತಮ ಕುದುರೆಗಳನ್ನು ಕಟ್ಟಿದ, ಬಂಗಾರದಿಂದ ಮಾಡಲ್ಪಟ್ಟ ಅವರ ರಥಗಳು ಹೋಗುತ್ತಿರುವಾಗ ಅವುಗಳಿಗೆ ಕಟ್ಟಿದ್ದ ಬಣ್ಣದ ಸುಂದರ ಗಂಟೆಗಳು ಬಡಿದು ಘೋಷಿಸಿದವು. ಸ್ವಲ್ಪವೇ ಸಮಯದಲ್ಲಿ ಧೀಮಾನ್ ಕೃಷ್ಣನು ಶ್ರೀಯಿಂದ ಬೆಳಗುತ್ತಾ, ಗುಡಿಸಿ, ನೀರುಸಿಂಪಡಿಸಿ ಸಿದ್ಧಪಡಿಸಿದ, ರಾಜರ್ಷಿಗಳು ನಡೆದ ಮಹಾಪಥದ ಮೇಲೆ ಬಂದನು. ದಾಶಾರ್ಹನು ಮುಂದುವರೆಯುತ್ತಿರಲು ಶಂಖಗಳನ್ನು ಊದಿದರು, ಭೇರಿಗಳನ್ನು ಬಾರಿಸಿದರು ಮತ್ತು ಅನ್ಯ ವಾದ್ಯಗಳನ್ನು ನುಡಿಸಿದರು. ಹೋಗುತ್ತಿರುವ ಶೌರಿಯ ರಥವನ್ನು ಸರ್ವಲೋಕ ಪ್ರವೀರ, ಸಿಂಹವಿಕ್ರಮಿ, ಪರಂತಪ ಯುವಕರು ಸುತ್ತುವರೆದಿದ್ದರು. ವಿಚಿತ್ರ ಮತ್ತು ಅದ್ಭುತವಸ್ತ್ರಗಳನ್ನು ಧರಿಸಿದ, ಖಡ್ಗ-ಪ್ರಾಸ ಮೊದಲಾದ ಆಯುಧಗಳನ್ನು ಹಿಡಿದ ಬಹುಸಹಸ್ರ ಸಂಖ್ಯೆಯಲ್ಲಿ ಇನ್ನೂ ಇತರರು ಕೃಷ್ಣನ ಮುಂದೆ ನಡೆದಿದ್ದರು. ಮುಂದುವರೆಯುತ್ತಿದ್ದ ಆ ಅಪರಾಜಿತ ವೀರ ದಾಶಾರ್ಹನನ್ನು ನೂರಕ್ಕೂ ಅಧಿಕ ಆನೆಗಳು, ಸಹಸ್ರಾರು ಶ್ರೇಷ್ಠ ಕುದುರೆಗಳು ಹಿಂಬಾಲಿಸಿದವು. ಜನಾರ್ದನನನ್ನು ನೋಡಲು, ವೃದ್ಧ-ಬಾಲಕ-ಸ್ತ್ರೀಯರೊಂದಿಗೆ ಕುರುಗಳ ಪುರವಿಡೀ ದಾರಿಯಲ್ಲಿ ಬಂದು ನೆರೆದಿತ್ತು. ಮನೆಯ ಮಹಡಿಗಳು ಅನೇಕ ಸಂಖ್ಯೆಯ ಜನರಿಗೆ ಆಶ್ರಯವನ್ನಿತ್ತು, ಅವರ ಭಾರದಿಂದ ತೂಗುತ್ತಿದೆಯೋ ಎಂದು ತೋರುತ್ತಿದ್ದವು. ಕುರುಗಳು ಗೌರವಿಸುತ್ತಿರಲು, ವಿವಿಧ ಮಾತುಗಳನ್ನು ಕೇಳುತ್ತಾ, ಯಥಾರ್ಹವಾಗಿ ಪ್ರತಿಗೌರವಿಸುತ್ತಾ, ಎಲ್ಲೆಡೆ ನೋಡುತ್ತಾ,

ಅವನು ಮೆಲ್ಲಗೆ ಪ್ರಯಾಣಿಸಿದನು.

ಸಭೆಯನ್ನು ಸಮೀಪಿಸಲು ಕೇಶವನ ಅನುಯಾಯಿಗಳು ಶಂಖ-ವೇಣುಗಳ ನಿರ್ಘೋಷದಿಂದ ಎಲ್ಲ ದಿಕ್ಕುಗಳನ್ನೂ ಮೊಳಗಿಸಿದರು. ಕೃಷ್ಣನ ಆಗಮನವನ್ನು ಕಾಯುತ್ತಿದ್ದ ಆ ಎಲ್ಲ ಅಮಿತತೇಜಸ್ವಿ ರಾಜರ ಸಭೆಯು ಹರ್ಷದಿಂದ ನಡುಗಿತು. ಮೋಡದಂತೆ ಮೊಳಗುತ್ತಿದ್ದ ಅವನ ರಥನಿರ್ಘೋಷವನ್ನು ಕೇಳಿ, ಕೃಷ್ಣನು ಬಂದನೆಂದು, ನರಾಧಿಪರು ಪರಮ ಹರ್ಷಿತರಾದರು. ಸರ್ವಸಾತ್ವತರ ವೃಷಭ ಶೌರಿಯು ಕೈಲಾಸಶಿಖರೋಪಮ ರಥದಿಂದಿಳಿದು ಸಭಾದ್ವಾರವನ್ನು ತಲುಪಿದನು. ಆಗ ಅವನು ಪರ್ವತದಂತೆ ಅಥವಾ ಬೃಹತ್ ಮೋಡದಂತೆ ತೋರುತ್ತಿದ್ದ, ತೇಜಸ್ಸಿನಿಂದ ಉರಿಯುತ್ತಿದೆಯೋ ಎಂದು ತೋರುತ್ತಿದ್ದ, ಇಂದ್ರನ ಸದನದಂತಿದ್ದ ಆ ಸಭೆಯನ್ನು ಪ್ರವೇಶಿಸಿದನು.

ಮಹಾಯಶ ವಿದುರ-ಸಾತ್ಯಕಿಯರ ಕೈಹಿಡಿದು ಅವನು ಸೂರ್ಯನು ನಕ್ಷತ್ರಗಳನ್ನು ಮೀರಿ ಮಿರುಗಿ ಅವರ ತೇಜಸ್ಸನ್ನು ಮುಸುಕುವಂತೆ ತನ್ನ ಶ್ರೀಯಿಂದ ಕುರುಗಳನ್ನು ಮುಸುಕಿದನು. ವಾಸುದೇವನ ಮುಂದೆ ಕರ್ಣ-ದುರ್ಯೋಧನರಿಬ್ಬರೂ, ಕೃಷ್ಣನ ಹಿಂದೆ ಕೃತವರ್ಮ ವೃಷ್ಣಿಗಳೂ ಇದ್ದರು. ಧೃತರಾಷ್ಟ್ರನೇ ಮೊದಲಾಗಿ ಭೀಷ್ಮ-ದ್ರೋಣಾದಿಗಳು ಎಲ್ಲರೂ ಆಸನಗಳಿಂದ ಮೇಲೆದ್ದು ಜನಾರ್ದನನನ್ನು ಗೌರವಿಸಿದರು. ದಾಶಾರ್ಹನು ಆಗಮಿಸುತ್ತಲೇ ಪ್ರಜ್ಞಾಚಕ್ಷುವು ಮಹಾಮನಸ್ಕ, ಮಹಾಯಶ ಭೀಷ್ಮ-ದ್ರೋಣಾದಿಗಳೊಡನೆ ಥಟ್ಟನೇ ಮೇಲೆದ್ದು

ನಿಂತನು. ಮಹಾರಾಜ ಜನೇಶ್ವರ ಧೃತರಾಷ್ಟ್ರನು ಎದ್ದು ನಿಲ್ಲಲು ಅಲ್ಲಿ ಸೇರಿದ್ದ ಸಹಸ್ರಾರು ರಾಜರುಗಳೂ ಮೇಲೆದ್ದು ನಿಂತರು. ಧೃತರಾಷ್ಟ್ರನ ಶಾಸನದಂತೆ ಕೃಷ್ಣನಿಗಾಗಿ ಅಲ್ಲಿ ಸರ್ವತೋಭದ್ರವಾದ, ಬಂಗಾರದಿಂದ ಪರಿಷ್ಕರಿಸಲ್ಪಟ್ಟ ಆಸನವನ್ನು ಕಲ್ಪಿಸಲಾಗಿತ್ತು. ಆಗ ಧರ್ಮಾತ್ಮ ಮಾಧವನು ಮುಗುಳ್ನಕ್ಕು ರಾಜನನ್ನು, ಭೀಷ್ಮ-ದ್ರೋಣರನ್ನು, ಇತರ ರಾಜರನ್ನೂ ವಯಸ್ಸಿಗೆ ತಕ್ಕಂತೆ ಮಾತನಾಡಿಸಿದನು. ಸಭೆಗೆ ಬಂದಿದ್ದ ಕೇಶವ ಜನಾರ್ದನನನ್ನು ಎಲ್ಲ ಕುರುಗಳೂ, ರಾಜ ಪಾರ್ಥಿವರೂ ಅರ್ಚಿಸಿದರು.

ಅಲ್ಲಿ ರಾಜರ ಮಧ್ಯೆ ನಿಂತು ಪರಪುರಂಜಯ ಪರಂತಪ ದಾಶಾರ್ಹನು ಅಂತರಿಕ್ಷದಲ್ಲಿ ನಿಂತಿದ್ದ ಋಷಿಗಳನ್ನು ನೋಡಿದನು. ನಾರದಪ್ರಮುಖ ಆ ಋಷಿಗಳನ್ನು ನೋಡಿ ದಾಶಾರ್ಹನು ಶಾಂತನವ ಭೀಷ್ಮನಿಗೆ ಮೆಲ್ಲನೇ ಹೇಳಿದನು:

> "ನೃಪ! ಈ ಪಾರ್ಥಿವರ ಸಭೆಯನ್ನು ನೋಡಲು ಋಷಿಗಳು ಆಗಮಿಸಿದ್ದಾರೆ. ಅವರನ್ನು ಸ್ವಾಗತಿಸಿ ಆಸನಗಳನಿತ್ತು ಸತ್ಕರಿಸಬೇಕು. ಅವರು ಕುಳಿತುಕೊಳ್ಳದೇ ಇಲ್ಲಿರುವ ಯಾರೂ ಕುಳಿತುಕೊಳ್ಳಲಾರರು. ಆದುದರಿಂದ ಈ ಭಾವಿತಾತ್ಮ ಮುನಿಗಳ ಪೂಜೆಯು ಶೀಘ್ರವಾಗಿ ನಡೆಯಲಿ."

ಸಭಾದ್ವಾರದಲ್ಲಿ ನಿಂತಿದ್ದ ಋಷಿಗಳನ್ನು ನೋಡಿ ಶಾಂತನವನು ಅವರಿಗೆ ಬೇಗ ಆಸನಗಳನ್ನು ತರುವಂತೆ ಸೇವಕರಿಗೆ ಆಜ್ಞಾಪಿಸಿದನು. ಕೂಡಲೆ

ಮಣಿಕಾಂಚನಗಳಿಂದ ಅಲಂಕರಿಸಲ್ಪಟ್ಟ, ಹೇರಳವಾದ ದೊಡ್ಡ ದೊಡ್ಡ ಆಸನಗಳನ್ನು ತರಲಾಯಿತು. ಅವರು ಅಲ್ಲಿ ಕುಳಿತುಕೊಂಡು ಅರ್ಘ್ಯಗಳನ್ನು ಸ್ವೀಕರಿಸಿದ ನಂತರ ಕೃಷ್ಣ ಮತ್ತು ರಾಜರು ಆಸನಗಳನ್ನು ಗ್ರಹಿಸಿದರು. ದುಃಶಾಸನನು ಸಾತ್ಯಕಿಗೆ ಉತ್ತಮ ಆಸನವನ್ನು ನೀಡಿದನು. ವಿವಿಂಶತಿಯು ಕೃತವರ್ಮನಿಗೆ ಕಾಂಚನ ಪೀಠವನ್ನಿತ್ತನು. ಕೃಷ್ಣನ ಪಕ್ಕದಲ್ಲಿಯೇ ಒಂದೇ ಪೀಠದಲ್ಲಿ ಮಹಾತ್ಮ, ದುಷ್ಟ ಕರ್ಣ-ದುರ್ಯೋಧನರಿಬ್ಬರು ಒಟ್ಟಿಗೇ ಕುಳಿತುಕೊಂಡರು. ಗಾಂಧಾರರಾಜ ಶಕುನಿಯು ಗಾಂಧಾರರಿಂದ ರಕ್ಷಿತನಾಗಿ ಪುತ್ರನೊಂದಿಗೆ ಅಲ್ಲಿ ಆಸನದಲ್ಲಿ ಕುಳಿತಿದ್ದನು. ಮಹಾಮತಿ ವಿದುರನು ಬಿಳಿಯ ಜಿನವಸ್ತ್ರವನ್ನು ಹೊದಿಸಿದ್ದ, ಶೌರಿಯ ಪೀಠಕ್ಕೆ ತಾಗಿಕೊಂಡಿದ್ದ ಮಣಿಪೀಠದಲ್ಲಿ ಕುಳಿತುಕೊಂಡನು. ಅಲ್ಲಿದ್ದ ಸರ್ವ ರಾಜ ಪಾರ್ಥಿವರು ತುಂಬಾ ಹೊತ್ತು ದಾಶಾರ್ಹನನ್ನು ನೋಡುತ್ತಿದ್ದರೂ ಅಮೃತವನ್ನು ಎಷ್ಟು ಕುಡಿದರೂ ತೃಪ್ತರಾಗದವರಂತೆ ಜನಾರ್ದನನ್ನು ನೋಡಿ ತೃಪ್ತರಾಗಲಿಲ್ಲ. ಅತಸೀಪುಷ್ಪಸಂಕಾಶ, ಪೀತಾಂಬರವನ್ನುಟ್ಟಿದ್ದ ಜನಾರ್ದನನು ಬಂಗಾರದಲ್ಲಿ ಹುದುಗಿದ್ದ ಮಣಿಯಂತೆ ಆ ಸಭಾಮಧ್ಯದಲ್ಲಿ ಹೊಳೆಯುತ್ತಿದ್ದನು. ಗೋವಿಂದನು ಕುಳಿತುಕೊಂಡ ನಂತರ ಎಲ್ಲರೂ ಸುಮ್ಮನಾದರು. ಅಲ್ಲಿದ್ದ ಯಾವ ಪುರುಷನೂ ಏನನ್ನೂ ಹೇಳಲಿಲ್ಲ.

## ಕೃಷ್ಣ ವಾಕ್ಯ



ಆ ಸರ್ವ ರಾಜರೂ ಆಸೀನರಾಗಿ ಸುಮ್ಮನಾದ ನಂತರ, ಸುದಂಷ್ಟ್ರ ಕೃಷ್ಣನು ಗುಡುಗಿನ ಸ್ವರದಲ್ಲಿ ಮಾತನ್ನು ಪ್ರಾರಂಭಿಸಿದನು. ಮೋಡವು ಮೊಳಗುವಂತೆ, ಮಾಧವನು ಸಭೆಯಲ್ಲಿ ಎಲ್ಲರಿಗೂ ಕೇಳಿಸುವಂತೆ, ಧೃತರಾಷ್ಟ್ರನನ್ನು ಉದ್ದೇಶಿಸಿ ಈ ಉತ್ತಮ ಮಾತುಗಳನ್ನು ಹೇಳಿದನು.

"ಭಾರತ! ವೀರರ ನಾಶವಾಗದೇ ಕುರುಗಳಲ್ಲಿ ಮತ್ತು ಪಾಂಡವರಲ್ಲಿ ಶಾಂತಿಯನ್ನುಂಟುಮಾಡುವ ಪ್ರಯತ್ನದಿಂದ ನಾನು ಇಲ್ಲಿಗೆ ಬಂದಿದ್ದೇನೆ. ರಾಜನ್! ಇದರ ಹೊರತಾಗಿರುವ ಬೇರೆ ಯಾವ ಶ್ರೇಯಸ್ಕರ ಮಾತನ್ನೂ ನಾನು ಹೇಳುವುದಿಲ್ಲ. ಏಕೆಂದರೆ ತಿಳಿಯಬೇಕಾಗಿರುವ ಎಲ್ಲವೂ ನಿನಗೆ ತಿಳಿದೇ ಇದೆ. ಈ ಕುಲವು ಇಂದು ಅಧ್ಯಯನ, ನಡತೆಗಳಿಂದ ಕೂಡಿದ್ದು ಸರ್ವ ಗುಣಗಳಿಂದ ತುಂಬಿದ್ದು ಎಲ್ಲ ರಾಜರಲ್ಲಿ ಶ್ರೇಷ್ಠವೆನಿಸಿಕೊಂಡಿದೆ. ವಿಶೇಷವಾಗಿ ಕೃಪೆ, ಅನುಕಂಪ, ಕಾರುಣ್ಯ, ಅಹಿಂಸೆ, ಆರ್ಜವ, ಕ್ಷಮೆ, ಹಾಗೆ ಸತ್ಯ ಇವು ಕುರುಗಳಲ್ಲಿವೆ. ಈ ವಿಧಗಳಲ್ಲಿ ಎತ್ತರವಾಗಿ ನಿಂತಿರುವ ಈ ಕುಲದಲ್ಲಿ ಸರಿಯಾಗಿರದಿದ್ದುದು ಯಾವುದೂ, ವಿಶೇಷವಾಗಿ ನಿನ್ನಿಂದ, ನಡೆಯಬಾರದು. ಕುರುಗಳಲ್ಲಿ ಯಾರಾದರೂ ಒಳಗಿನವರಲ್ಲಿ ಅಥವಾ ಹೊರಗಿನವರಲ್ಲಿ ಸುಳ್ಳಾಗಿ ನಡೆದುಕೊಳ್ಳುವುದನ್ನು ನೀನೇ ನಿಲ್ಲಿಸಬಹುದು. ನಿನ್ನ ಪುತ್ರರು, ದುರ್ಯೋಧನನ ನಾಯಕತ್ವದಲ್ಲಿ, ಧರ್ಮ-ಅರ್ಥಗಳನ್ನು ಹಿಂದೊತ್ತಿ, ಅಶಿಷ್ಟರಾಗಿ, ಮರ್ಯಾದೆಯನ್ನು ಕಳೆದುಕೊಂಡು,

ಲೋಭದಿಂದ ಬುದ್ಧಿ ಕಳೆದುಕೊಂಡು ನಿನ್ನ ಬಂಧುಮುಖ್ಯರಲ್ಲಿ ಕ್ರೂರವಾಗಿ ನಡೆದುಕೊಳ್ಳುತ್ತಿದ್ದಾರೆ. ಇದು ನಿನಗೆ ತಿಳಿದೇ ಇದೆ. ಈ ಮಹಾಘೋರ ಸನ್ನಿವೇಶವು ಕುರುಗಳಿಂದಲೇ ಉತ್ಪನ್ನವಾಗಿದೆ. ಇದನ್ನು ನಿರ್ಲಕ್ಷಿಸಿದರೆ ಇಡೀ ಪೃಥ್ವಿಯನ್ನೇ ಅದು ಘಾತಿಗೊಳಿಸುತ್ತದೆ. ನೀನು ಇಚ್ಛಿಸಿದರೆ ಇದನ್ನು ಶಾಂತಗೊಳಿಸಲು ಶಕ್ಯವಿದೆ. ಏಕೆಂದರೆ ಇಲ್ಲಿ ಶಾಂತಿಯನ್ನು ತರುವುದು ದುಷ್ಕರವೇನಲ್ಲ ಎಂದು ನನ್ನ ಅನಿಸಿಕೆ. ಶಾಂತಿಯು ನಿನ್ನ ಮತ್ತು ನನ್ನ ಅಧೀನದಲ್ಲಿದೆ. ನೀನು ಪುತ್ರರನ್ನು ತಡೆ! ನಾನು ಇತರರರನ್ನು ತಡೆಯುತ್ತೇನೆ. ತಮ್ಮ ಅನುಯಾಯಿಗಳೊಂದಿಗೆ ಪುತ್ರರು ನಿನ್ನ ಆಜ್ಞೆಯಂತೆ ಮಾಡಬೇಕು. ಇವರನ್ನು ನಿನ್ನ ಶಾಸನದಡಿಯಲ್ಲಿ ಬಲವತ್ತಾಗಿ ಹಿಡಿದಿಟ್ಟುಕೊಳ್ಳುವುದೇ ಹಿತಕರವಾದುದು. ನಿನಗೆ ಹಿತವಾದುದು ನಿನ್ನ ಶಾಸನದಲ್ಲಿರಲು ಬಯಸುವ ಪಾಂಡವರಿಗೆ ಕೂಡ, ಮತ್ತು ಶಾಂತಿಯನ್ನು ಪ್ರಯತ್ನಿಸುತ್ತಿರುವ ನನಗೂ ಹಿತವಾದುದು. ಸ್ವಯಂ ನೀನೇ ಇದನ್ನು ವಿಚಾರಿಸಿ ನಿರ್ಧರಿಸು.

ನೀನೇ ಭಾರತರನ್ನು ಒಂದಾಗಿಸಬಹುದು. ಪಾಂಡವರಿಂದ ರಕ್ಷಿತನಾಗಿ ಧರ್ಮಾರ್ಥಗಳಲ್ಲಿ ನೆಲೆಸು. ಪ್ರಯತ್ನಿಸಿದರೂ ಅವರನ್ನು ಇಲ್ಲವಾಗಿಸಲು ಸಾಧ್ಯವಾಗುವುದಿಲ್ಲ. ಮಹಾತ್ಮ ಪಾಂಡವರಿಂದ ರಕ್ಷಿತನಾದ ನಿನ್ನನ್ನು ದೇವತೆಗಳ ಸಹಿತ

ಇಂದ್ರನೂ ಕೂಡ ಜಯಿಸಲು ಸಾಧ್ಯವಿಲ್ಲ. ಇತರ ನೃಪರು ಎಲ್ಲಿ? ಯಾರ ಕಡೆ ಭೀಷ್ಮ, ದ್ರೋಣ, ಕೃಪ, ಕರ್ಣ, ವಿವಿಂಶತಿ, ಅಶ್ವತ್ಥಾಮ, ವಿಕರ್ಣ, ಬಾಹ್ಲಿಕ ಸೋಮದತ್ತ, ಸೈಂಧವ, ಕಲಿಂಗ, ಕಾಂಭೋಜ, ಸುದಕ್ಷಿಣ, ಯುಧಿಷ್ಠಿರ, ಭೀಮಸೇನ, ಸವ್ಯಸಾಚೀ ಮತ್ತು ಯಮಳರು, ಮಹಾತೇಜ ಸಾತ್ಯಕಿ ಮತ್ತು ಮಹಾರಥಿ ಯುಯುತ್ಸುವು ಇದ್ದಾರೋ ಅವರೊಡನೆ ಯಾವ ಹುಚ್ಚನು ತಾನೇ ಯುದ್ಧಮಾಡಿಯಾನು? ಕುರುಪಾಂಡವರೊಡನೆ ನೀನು ಲೋಕೇಶ್ವರತ್ವವನ್ನು ಪಡೆಯುತ್ತೀಯೆ ಮತ್ತು ಶತ್ರುಗಳಿಗೆ ಅಜೇಯನಾಗುತ್ತೀಯೆ. ನಿನ್ನ ಸರಿಸಮರಾಗಿರುವ ಅಥವಾ ನಿನಗಿಂಥಲೂ ಉತ್ತಮರಾಗಿರುವ ರಾಜರು ನಿನ್ನೊಡನೆ ಸಂಧಿ ಮಾಡಿಕೊಳ್ಳುವರು. ಆಗ ನೀನು ಎಲ್ಲ ಕಡೆಯಿಂದ ಮಕ್ಕಳು-ಮೊಮ್ಮಕ್ಕಳು, ಸಹೋದರರು, ಪಿತೃಗಳು, ಸ್ನೇಹಿತರಿಂದ ರಕ್ಷಿಸಲ್ಪಟ್ಟು ಸುಖವಾದ ಜೀವನವನ್ನು ನಡೆಸಲು ಶಕ್ಯನಾಗುತ್ತೀಯೆ. ಅವರನ್ನು ಮುಂದೆ ಇರಿಸಿ ಹಿಂದಿನಂತೆಯೇ ಸತ್ಕರಿಸು. ಇದರಿಂದ ಇಡೀ ಪೃಥ್ವಿಯ ಎಲ್ಲವನ್ನೂ ಭೋಗಿಸಬಲ್ಲೆ. ಪಾಂಡವರು ಮತ್ತು ನಿನ್ನವರೆಲ್ಲರೂ ಒಟ್ಟಿಗೇ ಇತರ ಶತ್ರುಗಳೆಲ್ಲರನ್ನು ಗೆಲ್ಲಬಹುದು. ಇದು ಸಂಪೂರ್ಣವಾಗಿ ನಿನ್ನದೇ ಸ್ವಾರ್ಥದಲ್ಲಿದೆ.

ಒಂದುವೇಳೆ ಪುತ್ರರೊಂದಿಗೆ ಅಮಾತ್ಯರೊಂದಿಗೆ

ಒಂದಾದೆಯಾದರೆ, ಅವರು ನಿನಗೆ ಗಳಿಸಿಕೊಡುವ ಭೂಮಿಯನ್ನು ನೀನು ಭೋಗಿಸಬಹುದು. ಆದರೆ ಯುದ್ಧವೇ ಆಗಬೇಕೆಂದರೆ ಮಹಾನಾಶವು ಕಾಣುತ್ತಿದೆ. ಎರಡೂ ಕಡೆಯವರು ಕ್ಷಯವಾಗುವುದರಲ್ಲಿ ನೀನು ಯಾವ ಧರ್ಮವನ್ನು ಕಾಣುತ್ತೀಯೆ? ಯುದ್ಧದಲ್ಲಿ ಮಹಾಬಲ ಪಾಂಡವರು ಮತ್ತು ನಿನ್ನ ಪುತ್ರರೂ ಕೂಡ ಹತರಾಗುವುದರಲ್ಲಿ ಎಂಥಹ ಸುಖವಿದೆ ಹೇಳು. ಪಾಂಡವರು ಮತ್ತು ನಿನ್ನವರು ಎಲ್ಲರೂ ಶೂರರು. ಕೃತಾಸ್ತ್ರರಾಗಿದ್ದಾರೆ. ಯುದ್ಧಾಕಾಂಕ್ಷಿಗಳಾಗಿದ್ದಾರೆ. ಅವರನ್ನು ಈ ಮಹಾಭಯದಿಂದ ರಕ್ಷಿಸು. ಆ ಶೂರರು ರಥಿಗಳಿಂದ ರಥಗಳು ಪುಡಿಯಾಗಿ ಯುದ್ಧದಲ್ಲಿ ನಾಶವನ್ನು ಹೊಂದಿದರೆ ಕುರುಗಳನ್ನೂ ಪಾಂಡವರೆಲ್ಲರನ್ನೂ ನಾವು ನೋಡಲಾರೆವು. ಪೃಥ್ವಿಯ ರಾಜರು ಸಿಟ್ಟಿನ ವಶರಾಗಿ ಈ ಪ್ರಜೆಗಳನ್ನು ನಾಶಪಡಿಸುವ ಉದ್ದೇಶದಿಂದ ಸೇರಿದ್ದಾರೆ. ಈ ಲೋಕವನ್ನು ಉಳಿಸು. ನಿನ್ನ ಪ್ರಜೆಗಳು ನಾಶವಾಗಲು ಬಿಡಬೇಡ. ನಿನ್ನ ಸ್ವಭಾವವನ್ನು ಹೊಂದಿ ಎಲ್ಲವನ್ನೂ ಉಳಿಯುವಂತೆ ಮಾಡು. ಶುಚಿಯಾಗಿರುವ, ಉದಾರಿಗಳಾದ, ವಿನೀತರಾದ, ಆರ್ಯರಾದ, ಪುಣ್ಯಗಳಿಂದ ಹುಟ್ಟಿದ, ಅನ್ಯೋನ್ಯರೊಡನೆ ಒಂದಾಗಿರುವ ಇವರನ್ನು ಮಹಾ ಭಯದಿಂದ ರಕ್ಷಿಸು. ಈ ಭೂಮಿಪಾಲಕರು ಶಾಂತಿಯುತವಾಗಿ ಪರಸ್ಪರರನ್ನು ಸೇರಲಿ,

ಒಟ್ಟಿಗೇ ತಿಂದು, ಕುಡಿದು, ಉತ್ತಮ ಉಡುಗೆಗಳನ್ನು ತೊಟ್ಟು, ಮಾಲೆಗಳನ್ನು ಧರಿಸಿ ಸತ್ಕೃತರಾಗಿ, ಸಿಟ್ಟು-ವೈರಗಳನ್ನು ತೊರೆದು, ತಮ್ಮ ತಮ್ಮ ಮನೆಗಳಿಗೆ ತೆರಳಲಿ. ಈಗ ನಿನ್ನ ಜೀವನದ ಹೆಚ್ಚುಕಾಲವು ಕಳೆದುಹೋಗಿರಲು, ನಿನಗೆ ಹಿಂದೆ ಪಾಂಡವರೊಡನಿದ್ದ ಸೌಹಾರ್ದತೆಯ ಇನ್ನೊಮ್ಮೆ ತೋರಿಬರಲಿ. ಬಾಲಕರಾಗಿರುವಾಗಲೇ ತಂದೆಯನ್ನು ಕಳೆದುಕೊಂಡ ಅವರು ನಿನ್ನಿಂದಲೇ ಬೆಳೆದರು. ಪುತ್ರರಂತೆ ಯಥಾನ್ಯಾಯವಾಗಿ ಅವರನ್ನು ಪಾಲಿಸಬೇಕು. ವಿಶೇಷವಾಗಿ ವ್ಯಸನದಲ್ಲಿರುವಾಗ ಅವರಿಗೆ ನಿನ್ನದೇ ರಕ್ಷಣೆಯು ಬೇಕು. ಇಲ್ಲದಿದ್ದರೆ ನಿನ್ನ ಧರ್ಮಾರ್ಥಗಳು ನಾಶವಾಗುತ್ತದೆ.

ಪಾಂಡವನು ನಿನ್ನನ್ನು ಅಭಿವಂದಿಸಿ ಕರುಣೆಯನ್ನು ಬೇಡಿ ಕೇಳಿಕೊಳ್ಳುತ್ತಿದ್ದಾರೆ: ‘ನಿನ್ನ ಶಾಸನದಂತೆ ಅನುಗರೊಂದಿಗೆ ದುಃಖವನ್ನು ಸಹಿಸಿಕೊಂಡು ಈ ಹನ್ನೆರಡು ವರ್ಷಗಳು ವನದಲ್ಲಿ ಮತ್ತು ಹಾಗೆಯೇ ಹದಿಮೂರನೆಯ ವರ್ಷವನ್ನು ಜನರ ಮಧ್ಯೆ ಯಾರಿಗೂ ತಿಳಿಯದಂತೆ ಕಳೆದಿದ್ದೇವೆ. ತಂದೆಯು ಒಪ್ಪಂದದಂತೆ ನಡೆದುಕೊಳ್ಳುತ್ತಾನೆ ಎಂದು ಯೋಚಿಸಿ ನಾವು ನಡೆದುಕೊಂಡೆವು. ಅಪ್ಪಾ! ನಾವು ಒಪ್ಪಂದವನ್ನು ಮುರಿಯಲಿಲ್ಲ. ಇದನ್ನು ಬ್ರಾಹ್ಮಣರು ತಿಳಿದಿದ್ದಾರೆ. ಆದುದರಿಂದ ಒಪ್ಪಂದದಂತೆ ನಡೆದುಕೊಂಡು ಬಂದವರೊಡನೆ ಒಪ್ಪಂದದಂತೆ ನಡೆದುಕೋ! ನಾವು

ಸಾಕಷ್ಟು ಕಷ್ಟಗಳನ್ನು ಅನುಭವಿಸಿದ್ದೇವೆ. ಈಗ ನಮಗೆ ನಮ್ಮ ರಾಜ್ಯಾಂಶವು ದೊರೆಯಬೇಕು. ಧರ್ಮ-ಅರ್ಥಗಳನ್ನು ಚೆನ್ನಾಗಿ ಜೋಡಿಸಿ ನಮ್ಮನ್ನು ನೀನು ರಕ್ಷಿಸಬೇಕು. ನಿನ್ನನ್ನು ಗುರುವೆಂದು ಸ್ವೀಕರಿಸಿ ನಾವು ಬಹಳ ಕ್ಲೇಶಗಳನ್ನು ಅನುಭವಿಸಿದ್ದೇವೆ. ನಮ್ಮನ್ನು ನೀನು ತಂದೆ-ತಾಯಿಯಂತೆ ಪಾಲಿಸಬೇಕು. ಗುರುವಿನ ಕಡೆ ಶಿಷ್ಯರು ನಡೆದುಕೊಳ್ಳುವ ರೀತಿಯು ಅತಿ ದೊಡ್ಡದು. ನಾವು ದಾರಿತಪ್ಪಿರುವವರಾದರೆ ತಂದೆಯಾಗಿ ನೀನೇ ನಮ್ಮನ್ನು ನಿಲ್ಲಿಸಬೇಕು. ನೀನು ನಮ್ಮನ್ನು ದಾರಿಯಲ್ಲಿ ಇರಿಸಿ ನೀನೂ ಕೂಡ ಸರಿಯಾದ ದಾರಿಯಲ್ಲಿ ನಿಂತಿರು.

’ನಿನ್ನ ಮಕ್ಕಳು ಈ ಪರಿಷತ್ತಿಗೆ ಇದನ್ನು ಹೇಳಿ ಕಳುಹಿಸಿದ್ದಾರೆ: ‘ಧರ್ಮವನ್ನು ತಿಳಿದಿರುವ ಈ ಸಭಾಸದರಲ್ಲಿ ಅಸಾಂಪ್ರತವು ಸರಿಯಲ್ಲ. ಎಲ್ಲಿ ಧರ್ಮವು ಅಧರ್ಮದಿಂದ ಮತ್ತು ಸತ್ಯವು ಸುಳ್ಳಿನಿಂದ ಸಾಯಿಸಲ್ಪಡುತ್ತದೆಯೋ ಅದನ್ನು ಅಲ್ಲಿದ್ದು ನೋಡುತ್ತಿರುವ ಸಭಾಸದರೂ ಹತರಾಗುತ್ತಾರೆ. ಅಧರ್ಮದಿಂದ ಚುಚ್ಚಲ್ಪಟ್ಟ ಧರ್ಮವು ಸಭೆಗೆ ಬಂದಾಗ ಮತ್ತು ಆ ಮುಳ್ಳನ್ನು ಅವರು ಕಿತ್ತು ತೆಗಿಯದೇ ಇದ್ದರೆ, ಅದು ಆ ಸಭಾಸದರನ್ನೇ ಚುಚ್ಚುತ್ತದೆ. ನದಿಯು ತನ್ನ ದಂಡೆಯಲ್ಲಿರುವ ಮರಗಳನ್ನು ಕೊಚ್ಚಿಕೊಂಡು ಹೋಗುವಂತೆ ಧರ್ಮವು ಅವರನ್ನೂ ಕೊಚ್ಚಿಕೊಂಡು ಹೋಗುತ್ತದೆ.’

ಧರ್ಮವನ್ನು ನೋಡಿಕೊಂಡು, ಧ್ಯಾನಾಸಕ್ತರಾಗಿದ್ದುಕೊಂಡು ಅವರು ಸತ್ಯವನ್ನೇ ಹೇಳುತ್ತಿದ್ದಾರೆ. ಇಲ್ಲಿ ಧರ್ಮವೇ ನ್ಯಾಯವು. ಅವರಿಗೆ ಕೊಡುತ್ತೇನೆ ಎನ್ನುವುದಲ್ಲದೇ ಬೇರೆ ಏನನ್ನು ಹೇಳಲು ಸಾಧ್ಯ? ನಾನು ಧರ್ಮಾರ್ಥಗಳನ್ನು ಯೋಚಿಸಿ ಸತ್ಯವನ್ನು ಹೇಳುತ್ತಿದ್ದೇನೆ ಎಂದಾದರೆ ಈ ಸಭೆಯಲ್ಲಿ ಸೇರಿರುವ ಮಹೀಪಾಲರ್ಯಾರಾದರೂ ಹೇಳಲಿ. ಈ ಕ್ಷತ್ರಿಯರನ್ನು ಮೃತ್ಯುಪಾಶದಿಂದ ಬಿಡುಗಡೆ ಮಾಡು. ಶಾಂತನಾಗು! ಕೋಪವಶನಾಗಬೇಡ! ಪಾಂಡವರಿಗೆ ಯಥೋಚಿತವಾಗಿ ಅವರ ಪಿತೃಗಳ ಅಂಶವನ್ನು ಕೊಟ್ಟುಬಿಡು! ಅನಂತರ ಪುತ್ರರೊಂದಿಗೆ ಅರ್ಥಸಿದ್ಧಿಯನ್ನು ಹೊಂದಿ ಭೋಗಗಳನ್ನು ಭೋಗಿಸು. ಸದಾ ಸಂತರ ಧರ್ಮದಲ್ಲಿ ನಡೆಯುವ ಅಜಾತಶತ್ರುವನ್ನು ನೀನು ತಿಳಿದಿದ್ದೀಯೆ. ಹಾಗೆಯೇ ಅವನು ನಿನ್ನ ಮತ್ತು ನಿನ್ನ ಮಕ್ಕಳೊಡನೆಯೂ ಕೂಡ ನಡೆದುಕೊಳ್ಳುತ್ತಿದ್ದಾನೆ.

ಸುಡುವ ಪ್ರಯತ್ನಕ್ಕೊಳಪಟ್ಟಿದ್ದ, ಹೊರಗಟ್ಟಲ್ಪಟ್ಟ, ಪುತ್ರರೊಂದಿಗೆ ನಿನ್ನಿಂದ ಇಂದ್ರಪ್ರಸ್ಥಕ್ಕೆ ಕಳುಹಿಸಲ್ಪಟ್ಟ ಅವನು ಪುನಃ ನಿನ್ನ ಆಶ್ರಿತನಾಗಿರಲು ಬಯಸುತ್ತಾನೆ. ಅಲ್ಲಿ ವಾಸಿಸಿರುವಾಗ ಅವನು ಸರ್ವ ಪಾರ್ಥಿವರನ್ನೂ ಗೆದ್ದರೂ ನಿನ್ನನ್ನು ಎಂದೂ ಮೀರಿಸಲಿಲ್ಲ. ಹೀಗೆ ಅವನು ನಡೆದುಕೊಳ್ಳುತ್ತಿರಲು ಸೌಬಲನು ಅವನ ರಾಷ್ಟ್ರಗಳನ್ನು,

ಧನಧಾನ್ಯಗಳನ್ನು ಗೆಲ್ಲುವ ಆಸೆಯಿಂದ ಪರಮ ಉಪಾಯವನ್ನು ಬಳಸಿದನು. ಆ ಅವಸ್ಥೆಯನ್ನು ಪಡೆದು, ಕೃಷ್ಣೆಯನ್ನು ಸಭೆಗೆ ಎಳೆದುತಂದುದನ್ನು ನೋಡಿಯೂ ಆ ಅಮೇಯಾತ್ಮ ಯುಧಿಷ್ಠಿರನು ಕ್ಷತ್ರಧರ್ಮದಿಂದ ಅಲುಗಾಡಲಿಲ್ಲ. ಧರ್ಮ, ಅರ್ಥ ಮತ್ತು ಸುಖಗಳಲ್ಲಿ ನಾನು ನಿಮ್ಮ ಮತ್ತು ಅವರ ಶ್ರೇಯಸ್ಸನ್ನು ಬಯಸುತ್ತಿದ್ದೇನೆ. ರಾಜನ್! ಪ್ರಜೆಗಳನ್ನು ನಾಶಪಡಿಸಬೇಡ! ಅನರ್ಥವಾದುದನ್ನು ಲಾಭದಾಯಕವೆಂದೂ, ಲಾಭದಾಯಕವಾದುದನ್ನು ತಮಗೆ ಸರಿಯಲ್ಲ ಎಂದು ತಿಳಿದಿರುವ, ಲೋಭದಲ್ಲಿ ಬಹಳ ಮುಂದುವರೆದಿರುವ ನಿನ್ನ ಮಕ್ಕಳನ್ನು ಹಿಡಿದಿಡು! ಅರಿಂದಮ ಪಾರ್ಥರು ನಿನ್ನ ಸೇವೆಮಾಡಲು ಸಿದ್ಧರಾಗಿದ್ದಾರೆ, ಯುದ್ದಕ್ಕೂ ಸಿದ್ಧರಾಗಿದ್ದಾರೆ. ರಾಜನ್! ಪರಂತಪ! ನಿನಗೆ ಯಾವುದು ಉತ್ತಮವೆನಿಸುತ್ತದೆಯೋ ಅದರಂತೆ ನಿರ್ಧರಿಸು."

ಪಾರ್ಥಿವರೆಲ್ಲರೂ ಅವನ ಆ ಮಾತುಗಳನ್ನು ಹೃದಯದಲ್ಲಿಯೇ ಮೆಚ್ಚಿದರು. ಆದರೆ ಅಲ್ಲಿ ಯಾರೂ ಏನನ್ನು ಹೇಳಲೂ ಮುಂದೆ ಬರಲಿಲ್ಲ. ಮಹಾತ್ಮ ಕೇಶವನು ಹೀಗೆ ಹೇಳಲು ಸಭಾಸದರೆಲ್ಲರೂ, ರೋಮಗಳು ನಿಮಿರೆದ್ದು, ಗರಬಡಿದವರಂತೆ ಕುಳಿತಿದ್ದರು. "ಅದಕ್ಕೆ ಯಾವ ಪುರುಷನು ಉತ್ತರಿಸಬಲ್ಲ?" ಎಂದು ಎಲ್ಲ ಪಾರ್ಥಿವರೂ ಮನಸ್ಸಿನಲ್ಲಿಯೇ ಯೋಚಿಸಿದರು.

## ಜಾಮದಗ್ನಿಯ ವಚನ

ಕುರುಸಂಸದಿಯಲ್ಲಿ ಎಲ್ಲ ರಾಜರೂ ಸುಮ್ಮನಾಗಿರಲು ಜಾಮದಗ್ನ್ಯ ಪರಶುರಾಮನು ಈ ಮಾತುಗಳನ್ನಾಡಿದನು:

> “ರಾಜನ್! ಈ ಒಂದು ಉಪಮೆಯನ್ನು ಕೇಳು. ಇದು ಸತ್ಯವಾದುದು. ಅನುಮಾನಪಡುವಂಥದ್ದಲ್ಲ. ಅದನ್ನು ಕೇಳಿ, ನಿನಗಿಷ್ಟವಾದರೆ, ನಿನಗೆ ಶ್ರೇಯಸ್ಸು ಎನಿಸಿದುದನ್ನು ನಿನ್ನದಾಗಿಸಿಕೋ. ಹಿಂದೆ ದಂಭೋದ್ಭವನೊಂದಿಗೆ ನರನು ಎಸಗಿದ ಆ ಕರ್ಮವು ಮಹತ್ತರವಾದುದು. ನಾರಾಯಣನು ಅದಕ್ಕಿಂತಲೂ ಅಧಿಕ ಗುಣಗಳಿಂದ ಶ್ರೇಷ್ಠನಾಗಿದ್ದನು. ಆದುದರಿಂದ ಆ ಧನುಶ್ರೇಷ್ಠ ಗಾಂಡೀವಕ್ಕೆ ಅಸ್ತ್ರವನ್ನು ಹೂಡುವುದರ ಮೊದಲೇ, ನೀನು ನಿನ್ನ ಅಭಿಮಾನವನ್ನು ತೊರೆದು ಧನಂಜಯನಲ್ಲಿ ಹೋಗು! ಅವನಲ್ಲಿ ಕಾಕುದೀಕ, ಶುಕ, ನಾಕ, ಅಕ್ಷಿಸಂತರ್ಜನ, ಸಂತಾನ, ನರ್ತನ, ಘೋರ ಮತ್ತು ಎಂಟನೆಯದಾಗಿ ಉದಕಗಳಿವೆ. ಇವುಗಳಿಂದ ಹೊಡೆಯಲ್ಪಟ್ಟ ಎಲ್ಲ ಮಾನವರೂ ಮರಣ ಹೊಂದುತ್ತಾರೆ - ಉನ್ಮತ್ತರಾಗಿ ನಡೆದುಕೊಳ್ಳುತ್ತಾರೆ, ಸಂಜ್ಞೆಗಳನ್ನು ಕಳೆದುಕೊಂಡು ಮೂರ್ಛೆಗೊಳ್ಳುತ್ತಾರೆ, ನಿದ್ದೆ ಹೋಗುತ್ತಾರೆ, ಕುಪ್ಪಳಿಸುತ್ತಾರೆ, ವಾಂತಿಮಾಡುತ್ತಾರೆ, ಮೂತ್ರಮಾಡುತ್ತಾರೆ, ಸತತವಾಗಿ ಅಳುತ್ತಾರೆ ಮತ್ತು ನಗುತ್ತಾರೆ. ಪಾರ್ಥನ

ಗುಣಗಳು ಅಸಂಖ್ಯವಾದವುಗಳು. ಜನಾರ್ದನನು ಅವನಿಗಿಂಥ ವಿಶಿಷ್ಟನಾದವನು. ನೀನೇ ಅವನನ್ನು ಕುಂತೀಪುತ್ರ ಧನಂಜಯನೆಂದು ಚೆನ್ನಾಗಿ ತಿಳಿದುಕೊಂಡಿರುವೆ. ಈ ಪ್ರವೀರ, ಪುರುಷರ್ಷಭ ಅರ್ಜುನ-ಕೇಶವರೇ ಆ ನರ-ನಾರಾಯಣರೆಂದು ತಿಳಿದುಕೋ. ಇದನ್ನು ನೀನು ತಿಳಿದುಕೊಂಡಿದ್ದರೆ, ನನ್ನನ್ನು ಶಂಕಿಸದೇ ಇದ್ದರೆ, ಉತ್ತಮ ಮನಸ್ಸು ಮಾಡಿ ಪಾಂಡವರೊಂದಿಗೆ ಶಾಂತಿಯನ್ನು ಪಾಲಿಸು. ಭೇದವಿಲ್ಲದಿರುವುದೇ ಶ್ರೇಯಸ್ಸೆಂದು ನೀನು ಯೋಚಿಸಿ, ಶಾಂತನಾಗು! ಯುದ್ಧದ ಕುರಿತು ಮನಸ್ಸು ಮಾಡಬೇಡ! ನಿನ್ನ ಕುಲವು ಭೂಮಿಯಲ್ಲಿಯೇ ಬಹುಮತವುಳ್ಳದ್ದು. ಅದು ಹಾಗೆಯೇ ಉಳಿದುಕೊಳ್ಳಬೇಕು. ನಿನಗೆ ಆಶೀರ್ವಾದವಿದೆ. ನಿನಗೆ ಒಳ್ಳೆಯದಾಗುವಂತೆ ಅಲೋಚಿಸು!”

## ಕಣ್ವನ ವಚನ

ಜಾಮದಗ್ನಿಯ ವಚನವನ್ನು ಕೇಳಿ ಭಗವಾನ್ ಋಷಿ ಕಣ್ವನೂ ಕೂಡ ಕುರುಸಂಸದಿಯಲ್ಲಿ ದುರ್ಯೋಧನನಿಗೆ ಈ ಮಾತನ್ನಾಡಿದನು:

“ಲೋಕಪಿತಾಮಹ ಬ್ರಹ್ಮನು ಅಕ್ಷಯ ಮತ್ತು ಅವ್ಯಯ. ಹಾಗೆಯೇ ಭಗವಂತರಾದ ಆ ನರ-ನಾರಯಣ ಋಷಿಗಳೂ ಕೂಡ. ಆದಿತ್ಯರೆಲ್ಲರಲ್ಲಿ ವಿಷ್ಣುವೊಬ್ಬನೇ ಸನಾತನನು, ಅಜೇಯನು, ಅವ್ಯಯನು, ಶಾಶ್ವತನು ಮತ್ತು ಪ್ರಭು

ಈಶ್ವರನು. ಇತರರು - ಚಂದ್ರ-ಸೂರ್ಯರು, ಭೂಮಿ, ನೀರು, ವಾಯು, ಅಗ್ನಿ, ಆಕಾಶ, ಗ್ರಹ, ತಾರಗಣಗಳು ನಿಮಿತ್ತವಾದವುಗಳು ಮತ್ತು ನಾಶಹೊಂದುವವು. ಅವು ಜಗತ್ತಿನ ಕ್ಷಯವಾಗುವಾಗ ಲೋಕತ್ರಯಗಳನ್ನು ತೊರೆಯುತ್ತವೆ. ಅವೆಲ್ಲವೂ ಕ್ಷಯವಾಗಿ ಹೋಗುತ್ತವೆ ಮತ್ತು ಪುನಃ ಪುನಃ ಸೃಷ್ಟಿಯಾಗುತ್ತವೆ. ಅನ್ಯ ಮನುಷ್ಯರು, ಮೃಗ-ಪಕ್ಷಿಗಳು, ತಿರ್ಯಗ್ಯೋನಿಗಳಲ್ಲಿ ಜನಿಸಿದ ಇತರ ಜೀವಲೋಕಚರಗಳು ಅಲ್ಪವೇ ಸಮಯದಲ್ಲಿ ಮರಣ ಹೊಂದುತ್ತವೆ. ಹಾಗೆಯೇ ರಾಜರು ಸಂಪತ್ತನ್ನು ಭೋಗಿಸಿ ಆಯುಷ್ಯವು ಕ್ಷಯವಾಗಲು ಮರಣ ಹೊಂದುತ್ತಾರೆ ಮತ್ತು ಸುಕೃತ-ದುಷ್ಕೃತಗಳನ್ನು ಭೋಗಿಸಲು ಪುನಃ ಜೀವತಳೆಯುತ್ತಾರೆ. ನೀನು ಆ ಧರ್ಮಪುತ್ರನೊಂದಿಗೆ ಶಾಂತಿ ಮಾಡಿಕೊಳ್ಳಬೇಕು. ಪಾಂಡವರು ಮತ್ತು ಕೌರವರು ಭೂಮಿಯನ್ನು ಪಾಲಿಸಲಿ. ಸುಯೋಧನ! ‘ನಾನೇ ಬಲಶಾಲಿ!’ ಎಂದು ತಿಳಿದುಕೊಳ್ಳಬೇಡ. ಬಲಶಾಲಿಗಳಿಗಿಂತ ಬಲಶಾಲಿಗಳು ಕಂಡುಬರುತ್ತಾರೆ. ಬಲಶಾಲಿಗಳಲ್ಲಿ ಕೇವಲ ದೇಹಬಲವೇ ಬಲವೆನಿಸಿಕೊಳ್ಳುವುದಿಲ್ಲ. ದೇವತೆಗಳ ವಿಕ್ರಮವನ್ನು ಪಡೆದಿರುವ ಪಾಂಡವರೆಲ್ಲರೂ ನಿನಗಿಂತ ಬಲವಂತರು. ಇದರ ಕುರಿತಾಗಿ, ಉದಾಹರಣೆಯಾಗಿ, ಮಾತಲಿಯು ಮಗಳನ್ನು ಕೊಡಲು ವರನನ್ನು ಹುಡುಕಿದ

ಪುರಾತನ ಇತಿಹಾಸವೊಂದಿದೆ. ಗಾಂಧಾರೇ! ಎಲ್ಲಿಯವರೆಗೆ ನೀನು ಆ ವೀರ ಪಾಂಡುಸುತರನ್ನು ರಣದಲ್ಲಿ ಎದುರಿಸುವುದಿಲ್ಲವೋ ಅಲ್ಲಿಯವರೆಗೆ ಜೀವಿಸಿರುತ್ತೀಯೆ. ಪ್ರಹರಿಗಳಲ್ಲಿ ಶ್ರೇಷ್ಠ ವಾಯುಪುತ್ರ ಮಹಾಬಲಿ ಭೀಮ ಮತ್ತು ಇಂದ್ರಸುತ ಧನಂಜಯರು ರಣದಲ್ಲಿ ಯಾರನ್ನು ತಾನೇ ಸಂಹರಿಸಲಾರರು? ದೇವತೆಗಳಾದ ವಿಷ್ಣು, ವಾಯು, ಶಕ್ರ, ಧರ್ಮ, ಅಶ್ವಿಯರನ್ನು ನೀನು ಯಾವ ಕಾರಣದಿಂದ ಗೆಲ್ಲಲು ಬಯಸುತ್ತೀಯೆ? ಆದುದರಿಂದ ವಿರೋಧಿಸುವುದನ್ನು ಬಿಟ್ಟು ಶಾಂತಿಯತ್ತ ನಡೆ. ವಾಸುದೇವನ ತೀರ್ಥದಿಂದ ಕುಲವನ್ನು ರಕ್ಷಿಸಿಕೋ! ಈ ಮಹಾತಪಸ್ವಿ ನಾರದನು ಚಕ್ರಗದಾಧರ ಈ ವಿಷ್ಣುವಿನ ಮಹಾತ್ಮೆಗಳೆಲ್ಲವನ್ನೂ ಪ್ರತ್ಯಕ್ಷವಾಗಿ ನೋಡಿದ್ದಾನೆ.”

ಅದನ್ನು ಕೇಳಿ ದುರ್ಯೋಧನನು ನಿಟ್ಟುಸಿರು ಬಿಡುತ್ತ, ಮುಖ ಗಂಟುಮಾಡಿಕೊಂಡು, ರಾಧೇಯನನ್ನು ನೋಡಿ ಜೋರಾಗಿ ನಕ್ಕನು. ಋಷಿ ಕಣ್ವನ ಆ ಮಾತುಗಳನ್ನು ಅಲ್ಲಗಳೆದು ದುರ್ಮತಿಯು ಆನೆಯ ಸೊಂಡಿಲಿನಂತಿದ್ದ ತನ್ನ ತೊಡೆಯನ್ನು ಚಪ್ಪರಿಸಿ ಹೇಳಿದನು:

“ಮಹರ್ಷೇ! ಈಶ್ವರನಿಂದ ಹೇಗೆ ಸೃಷ್ಟಿಸಲ್ಪಟ್ಟಿದ್ದೇನೋ, ನನ್ನ ಭವಿಷ್ಯ ಮತ್ತು ದಾರಿಯು ಹೇಗೆ ನಡೆಸುತ್ತದೆಯೋ ಹಾಗೆಯೇ ನಾನು ಮಾಡುತ್ತೇನೆ. ಈ ಪ್ರಲಾಪವು ಏಕೆ?”

## ನಾರದನ ವಚನ

ಆಗ ನಾರದನು ಹೇಳಿದನು:

“ಸುಹೃದಯರನ್ನು ಕೇಳುವವರು ದುರ್ಲಭ. ಸುಹೃದರೇ ದುರ್ಲಭ. ಎಲ್ಲಿ ಬಂಧುಗಳು ಸಿಗುವುದಿಲ್ಲವೋ ಅಲ್ಲಿ ಸುಹೃದಯರು ದೊರಕುತ್ತಾರೆ. ಕುರುನಂದನ! ಸುಹೃದಯರ ಮಾತನ್ನು ಕೇಳಬೇಕೆಂದು ನನಗನ್ನಿಸುತ್ತದೆ. ನಿರ್ಬಂಧಗಳು (ಹಠ) ಮಾಡುವಂಥವುಗಳಲ್ಲ. ನಿರ್ಬಂಧಗಳು ದಾರುಣವಾದವುಗಳು. ಇದನ್ನು ಉದಾಹರಿಸಿ ಒಂದು ಪುರಾತನ ಇತಿಹಾಸವಿದೆ. ಅದರಲ್ಲಿ ಹಠ ಹಿಡಿದ ಗಾಲವನು ಪರಾಜಯವನ್ನು ಹೊಂದಿದನು. ಅಭಿಮಾನದಿಂದ ಹಿಂದೆ ಯಯಾತಿ ಮತ್ತು ಗಾಲವರು ಅತಿಯಾಗಿ ಹಠಮಾಡಿ ದೋಷಗಳನ್ನು ಹೊಂದಿದರು. ತಮ್ಮ ಏಳಿಗೆಯನ್ನು ಬಯಸುವವರು ಸುಹೃದಯರ ಹಿತಕಾಮನೆಗಳನ್ನು ಕೇಳಬೇಕು. ಹಠವನ್ನು ಮಾಡಬಾರದು. ಏಕೆಂದರೆ ಹಠವು ಕ್ಷಯವನ್ನು ತರುತ್ತದೆ. ಆದುದರಿಂದ ಗಾಂಧಾರೇ! ನೀನೂ ಕೂಡ ಮಾನಕ್ರೋಧಗಳನ್ನು ತೊರೆದು ವೀರ ಪಾಂಡವರೊಂದಿಗೆ ಸಂಧಿ ಮಾಡಿಕೋ! ಈ ರಂಪಾಟವನ್ನು ತ್ಯಜಿಸು. ಏನನ್ನು ಕೊಡುತ್ತೀವೋ, ಏನನ್ನು ಮಾಡುತ್ತೇವೋ, ಏನು ತಪಸ್ಸನ್ನು ತಪಿಸುತ್ತೇವೋ, ಏನು ಯಜ್ಞಗಳನ್ನು ಮಾಡುತ್ತೇವೋ ಅವುಗಳು ನಾಶವಾಗುವುದಿಲ್ಲ. ಬೇರೆ

ಯಾರೂ ತೆಗೆದುಕೊಳ್ಳುವುದಿಲ್ಲ. ಮಾಡುವವನಲ್ಲದೇ ಬೇರೆ ಯಾರಿಗೂ ಅವು ತಲುಪುವುದಿಲ್ಲ."

ಧೃತರಾಷ್ಟ್ರನು ಹೇಳಿದನು:

"ಭಗವನ್! ನಾರದ! ನೀನು ಹೇಳಿದುದು ಸರಿ. ನಾನೂ ಕೂಡ ಅದನ್ನೇ ಬಯಸುತ್ತೇನೆ. ಆದರೆ ನನಗೆ ಅಧಿಕಾರವಿಲ್ಲ!"

ಹೀಗೆ ಹೇಳಿ ಅವನು ಕೃಷ್ಣನನ್ನುದ್ದೇಶಿಸಿ ಹೇಳಿದನು:

"ಕೇಶವ! ನೀನು ಹೇಳಿದುದು ಸ್ವರ್ಗವನ್ನು ನೀಡುವಂತಹುದು, ಲೋಕಕ್ಕೆ ಹಿತವಾದುದು, ಧರ್ಮ ಮತ್ತು ನ್ಯಾಯಗಳಿಗೆ ಸಮ್ಮತವಾಗಿದೆ. ಆದರೆ ನಾನು ಸ್ವವಶನಾಗಿಲ್ಲ. ನನಗೆ ಇಷ್ಟವಾದುದನ್ನು ಮಾಡುವುದಿಲ್ಲ. ನನ್ನ ಆಜ್ಞೆಗಳನ್ನು ಅನುಸರಿಸದೇ ಇರುವ ಈ ಮಂದ ದುರ್ಯೋಧನನನ್ನು ಗೆಲ್ಲಲು ನೀನೇ ಪ್ರಯತ್ನಿಸು. ಇದರಿಂದ ನಿನ್ನ ಸ್ನೇಹಿತರಿಗೆ ಒಂದು ಮಹತ್ಕಾರ್ಯವನ್ನು ಮಾಡುವೆ!"

## ಕೃಷ್ಣನ ಮಾತು

ಆಗ ವಾರ್ಷ್ಣೇಯನು ಅಮರ್ಷಣ ದುರ್ಯೋಧನನ ಕಡೆ ತಿರುಗಿ ಈ ಸರ್ವ ಧರ್ಮಾರ್ಥ ತತ್ವಗಳುಳ್ಳ ಮಧುರ ಮಾತನ್ನು ಹೇಳಿದನು:

"ದುರ್ಯೋಧನ! ನಿನ್ನ ಮತ್ತು ನಿನ್ನ ಅನುಯಾಯಿಗಳ ಆಸಕ್ತಿಯನ್ನಿಟ್ಟುಕೊಂಡು ನಾನು ಹೇಳುವ ಮಾತುಗಳನ್ನು

ಕೇಳು. ಮಹಾಪ್ರಾಜ್ಞನಾದ ನೀನು ಉಚ್ಚ ಕುಲದಲ್ಲಿ ಜನಿಸಿದ್ದೀಯೆ. ಆದುದರಿಂದ ನೀನು ಒಳ್ಳೆಯವನಂತೆ ನಡೆದುಕೊಳ್ಳಬೇಕು. ನೀನು ವಿದ್ಯಾವಂತ, ಉತ್ತಮ ನಡತೆಯುಳ್ಳವನು ಮತ್ತು ಎಲ್ಲ ಗುಣಗಳಿಂದಲೂ ಕೂಡಿದ್ದೀಯೆ. ನೀನು ಯೋಚಿಸಿರುವಂತಹ ಕೆಲಸವನ್ನು ದುಷ್ಕುಲದಲ್ಲಿ ಹುಟ್ಟಿದವರು, ದುರಾತ್ಮರು, ಕ್ರೂರಿಗಳು ಮತ್ತು ನಾಚಿಕೆಯಿಲ್ಲದವರು ಮಾಡುತ್ತಾರೆ. ಈ ಲೋಕದಲ್ಲಿ ಸಂತರ ಪ್ರವೃತ್ತಿಯನ್ನು ಧರ್ಮಾರ್ಥಯುಕ್ತವೆಂದು ಕಾಣುತ್ತಾರೆ. ಸಂತರರದಲ್ಲದ ಪ್ರವೃತ್ತಿಯನ್ನು ವಿಪರೀತವೆಂದು ಕಾಣುತ್ತಾರೆ. ಈ ವಿಷಯದಲ್ಲಿ ನೀನು ನಡೆದುಕೊಳ್ಳುತ್ತಿರುವ ರೀತಿಯು ವಿಪರೀತವೆಂದು ತೋರುತ್ತಿದೆ - ನಿನ್ನ ಈ ಅಧರ್ಮ ಹಠವು ಘೋರ, ಮತ್ತು ಮಹಾ ಪ್ರಾಣಹರಣ ಮಾಡುವಂತಹುದು. ಈಗಾಗಲೇ ನೀನು ಅನೇಕ ಅಯಶಸ್ಕರವಾದವುಗಳನ್ನು ಮಾಡಿರುವೆ. ಆದರೆ ಈಗ ಆ ಅನರ್ಥವನ್ನು ಬಿಟ್ಟರೆ ನಿನಗೇ ಶ್ರೇಯಸ್ಕರವಾದುದನ್ನು ಮಾಡಿದಂತಾಗುತ್ತದೆ. ನೀನು ನಿನ್ನ ಭ್ರಾತೃಗಳನ್ನೂ, ಭೃತ್ಯರನ್ನೂ ಅಧರ್ಮ ಮತ್ತು ಅಯಶಸ್ಕರ ಕರ್ಮಗಳಿಂದ ಬಿಡುಗಡೆ ಮಾಡಬಲ್ಲೆ. ಪ್ರಾಜ್ಞರೂ, ಶೂರರೂ, ಮಹೋತ್ಸಾಹರೂ, ಆತ್ಮವಂತರೂ, ಬಹುಶ್ರುತರೂ ಆದ ಪಾಂಡವರೊಂದಿಗೆ ಸಂಧಿ ಮಾಡಿಕೋ. ಇದು ಹಿತವಾದುದು. ಇದು ಧೀಮತ ಧೃತರಾಷ್ಟ್ರನಿಗೂ, ಪಿತಾಮಹನಿಗೂ,

ದ್ರೋಣನಿಗೂ, ಮಹಾಮತಿ ವಿದುರನಿಗೂ, ಕೃಪನಿಗೂ, ಸೋಮದತ್ತನಿಗೂ, ಧೀಮತ ಬಾಹ್ಲೀಕನಿಗೂ, ಅಶ್ವತ್ಥಾಮ-ವಿಕರ್ಣರಿಗೂ, ಸಂಜಯನಿಗೂ, ಬಾಂಧವರಿಗೂ, ಮಿತ್ರರಿಗೂ ಇಷ್ಟವಾದುದು ಮತ್ತು ಒಳ್ಳೆಯದಾದುದು. ಶಾಂತಿಯಲ್ಲಿ ಸರ್ವ ಜಗತ್ತೂ ಆಸರೆಯನ್ನು ಪಡೆಯುತ್ತದೆ. ನಿನ್ನಲ್ಲಿ ಮಾನವಿದೆ. ಉಚ್ಚ ಕುಲದಲ್ಲಿ ಜನಿಸಿದ್ದೀಯೆ. ವಿದ್ಯಾವಂತನಾಗಿದ್ದೀಯೆ. ಕ್ರೂರನಾಗಿಲ್ಲ. ನಿನ್ನ ತಂದೆ ತಾಯಿಯರ ಶಾಸನದಂತೆ ನಡೆದುಕೋ! ತಂದೆಯ ನಿಬಂಧನೆಗಳನ್ನು ಪಾಲಿಸುವುದು ಶ್ರೇಯವಾದುದು. ಏಕೆಂದರೆ ಆಪತ್ತಿನಲ್ಲಿ ಎಲ್ಲರೂ ತಂದೆಯು ಹೇಳಿದುದನ್ನು ಉತ್ತಮವಾದುದೆಂದು ಸ್ಮರಿಸಿಕೊಳ್ಳುತ್ತಾರೆ. ಪಾಂಡವರೊಂದಿಗೆ ನೀನು ಒಂದಾಗು ಎಂದೇ ನಿನ್ನ ತಂದೆಯು ಬಯಸುತ್ತಾನೆ. ಅಮಾತ್ಯರೊಂದಿಗೆ ನೀನೂ ಕೂಡ ಅದನ್ನೇ ಬಯಸಬೇಕು. ಸುಹೃದಯರ ಮಾತನ್ನು ಕೇಳಿ ಅದರಂತೆ ನಡೆದುಕೊಳ್ಳದೇ ಇದ್ದರೆ ಅವನನ್ನು ಅದು ನಂತರ ಕಿಂಪಾಕವನ್ನು ತಿಂದಿದ್ದಾನೋ ಎನ್ನುವಂತೆ ಸುಡುತ್ತದೆ. ಶ್ರೇಯಸ್ಕರ ಮಾತನ್ನು ಮೋಹದಿಂದ ಅನುಸರಿಸದೇ ಇರುವ ದೀರ್ಘಸೂತ್ರನು ಅವನ ಉದ್ದೇಶವನ್ನು ಕಳೆದುಕೊಂಡು ಪಶ್ಚಾತ್ತಾಪದಿಂದ ಬಳಲುತ್ತಾನೆ. ಆದರೆ ಯಾರು ತನ್ನ ಅಭಿಪ್ರಾಯಗಳನ್ನು ಬದಿಗೊತ್ತಿ ಶ್ರೇಯಸ್ಕರವಾದುದನ್ನು ಕೇಳಿ ಅದರಂತೆ ನಡೆದುಕೊಳ್ಳುತ್ತಾನೋ ಅವನು ಲೋಕದಲ್ಲಿ

ಸುಖವನ್ನು ಪಡೆಯುತ್ತಾನೆ. ಯಾರು ಅವನಿಗೆ ಉತ್ತಮವನ್ನು ಬಯಸುವವರ ಮಾತನ್ನು ತನಗೆ ಪ್ರತಿಕೂಲವೆಂದು ಸ್ವೀಕರಿಸುವುದಿಲ್ಲವೋ ಮತ್ತು ಅವನಿಗೆ ಪ್ರತಿಕೂಲರಾದವನ್ನು ಕೇಳುತ್ತಾನೋ ಅವನು ಶತ್ರುಗಳ ವಶವಾಗುತ್ತಾನೆ. ಒಳ್ಳೆಯವರ ಮತವನ್ನು ಉಲ್ಲಂಘಿಸಿ ಒಳ್ಳೆಯವರಲ್ಲದವರ ಮತದಂತೆ ನಡೆದುಕೊಳ್ಳುವವನ ಸುಹೃದಯಿಗಳು ಸ್ವಲ್ಪವೇ ಸಮಯದಲ್ಲಿ ಅವನ ಕುರಿತು ಚಿಂತಿಸಿ ಶೋಕಿಸುತ್ತಾರೆ. ಯಾರು ಮುಖ್ಯ ಅಮಾತ್ಯರನ್ನು ದೂರವಿಟ್ಟು ಕೀಳುಜನರನ್ನು ಕೇಳುತ್ತಾನೋ ಅವನು ಘೋರ ಆಪತ್ತನ್ನು ಹೊಂದಿ ಏಳಿಗೆಯ ಭರವಸೆಯನ್ನೇ ಕಳೆದುಕೊಳ್ಳುತ್ತಾನೆ. ಯಾರು ದುಷ್ಟರನ್ನು ಕೇಳುತ್ತಾರೋ, ಸುಹೃದರನ್ನು ಸದಾ ಕೇಳುವುದಿಲ್ಲವೋ, ತನ್ನವರನ್ನು ದ್ವೇಷಿಸಿ ಪರರನ್ನು ಆರಿಸಿಕೊಳ್ಳುತ್ತಾರೋ ಅವರನ್ನು ಭೂಮಿಯು ಶಪಿಸುತ್ತಾಳೆ. ನೀನು ಆ ವೀರರನ್ನು ವಿರೋಧಿಸಿ ಅನ್ಯರ - ಅಶಿಷ್ಟ, ಅಸಭ್ಯ ಮತ್ತು ಮೂಢರ - ಸಹಾಯವನ್ನು ಪಡೆಯಲು ಬಯಸುತ್ತಿದ್ದೀಯೆ!

ನಿನ್ನನ್ನು ಬಿಟ್ಟು ಬೇರೆ ಯಾವ ಮಾನವನು ತಾನೇ ಈ ಭೂಮಿಯಲ್ಲಿ ಶಕ್ರಸಮರಾದ ಮಹಾರಥಿ ದಯಾದಿಗಳನ್ನು ಅತಿಕ್ರಮಿಸಿ ಅನ್ಯರ ಸಹಾಯ ಮತ್ತು ನೆರಳನ್ನು ಬಯಸುತ್ತಾನೆ? ಹುಟ್ಟಿದಾಗಿನಿಂದ ನಿತ್ಯವೂ ನೀನು ಕೌಂತೇಯರನ್ನು ಕಾಡಿಸುತ್ತಿದ್ದೀಯೆ. ಧರ್ಮಾತ್ಮರಾಗಿರುವುದರಿಂದ

ಪಾಂಡವರು ನಿನ್ನ ಮೇಲೆ ಕೋಪಗೊಂಡಿಲ್ಲ. ಹುಟ್ಟಿದಾಗಿನಿಂದ ಪಾಂಡವರೊಂದಿಗೆ ನೀನು ಮೋಸದಿಂದ ನಡೆದುಕೊಂಡಿದ್ದರೂ ಆ ಯಶಸ್ವಿಗಳು ನಿನ್ನೊಡನೆ ಸಂಯಮದಿಂದ ನಡೆದುಕೊಂಡಿದ್ದಾರೆ. ನೀನೂ ಕೂಡ ಆ ನಿನ್ನ ಮುಖ್ಯ ಬಂಧುಗಳೊಡನೆ ಹಾಗೆಯೇ ವ್ಯವಹರಿಸಬೇಕು. ಸಿಟ್ಟಿನ ವಶದಲ್ಲಿ ಬರಬೇಡ! ಪ್ರಾಜ್ಞರ ಕೆಲಸಗಳು ತ್ರಿವರ್ಗಯುಕ್ತವಾಗಿರುತ್ತವೆ - ಧರ್ಮ, ಅರ್ಥ ಮತ್ತು ಕಾಮ. ಈ ಮೂರೂ ಅಸಂಭವವಾಗಿದ್ದರೆ ನರರು ಧರ್ಮ-ಅರ್ಥಗಳನ್ನಾದರೂ ಅನುಸರಿಸುತ್ತಾರೆ. ಈ ಮೂರನ್ನೂ ಬೇರೆ ಬೇರೆಯಾಗಿ ಸಾಧಿಸುವವರನ್ನು ನೋಡಿದರೆ ಧೀರರು ಧರ್ಮವನ್ನು ಅನುಸರಿಸುತ್ತಾರೆ, ಮಧ್ಯಮರು ಅರ್ಥವನ್ನು, ಮತ್ತು ಕೀಳು ಜನರು ಬಾಲಕರಂತೆ ಕಾಮವನ್ನೇ ಅನುಸರಿಸುತ್ತಾರೆ. ಲೋಭದಿಂದ ಧರ್ಮವನ್ನು ತೊರೆದು ಕಾಮ-ಅರ್ಥಗಳ ಹಿಂದೆ ಮಾತ್ರ ಹೋಗುವವನನ್ನು ಇಂದ್ರಿಯಗಳು ನಾಶಪಡಿಸುತ್ತವೆ. ಕಾಮಾರ್ಥಗಳ ಬಗ್ಗೆ ಮಾತನಾಡುವವನೂ ಧರ್ಮವನ್ನೇ ಆಚರಿಸಬೇಕು. ಏಕೆಂದರೆ ಅರ್ಥವಾಗಲೀ ಕಾಮವಾಗಲೀ ಎಂದೂ ಧರ್ಮದಿಂದ ಬೇರೆಯಾಗಿರುವುದಿಲ್ಲ. ಧರ್ಮವೇ ತ್ರಿವರ್ಗದ ಉಪಾಯವೆಂದು ಹೇಳುತ್ತಾರೆ. ಏಕೆಂದರೆ ಅದಕ್ಕೆ ತಗಲಿದವನು ಒಣ ಹುಲ್ಲಿಗೆ ತಗಲಿದ ಬೆಂಕಿಯಂತೆ

ವೃದ್ಧಿಯಾಗುತ್ತದೆ. ಸರ್ವರಾಜರಲ್ಲಿ ಪ್ರಥಿತವಾಗಿರುವ, ಹೆಚ್ಚಾಗಿ ಬೆಳಗುತ್ತಿರುವ ಈ ಅಧಿರಾಜ್ಯವನ್ನು ಅನುಪಾಯದಿಂದ ಆಸೆ ಪಡುತ್ತಿರುವೆ. ಯಾರು ಉತ್ತಮವಾಗಿ ನಡೆದುಕೊಳ್ಳುವವರೊಡನೆ ಮೋಸದಿಂದ ವ್ಯವಹರಿಸುತ್ತಾರೋ ಅವರು ವನವನ್ನು ಕೊಡಲಿಯಿಂದ ವನವನ್ನು ಹೇಗೋ ಹಾಗೆ ತಮ್ಮನ್ನು ತಾವೇ ಕಡಿದುಕೊಳ್ಳುತ್ತಾರೆ. ಸೋಲನ್ನು ಬಯಸದಿರುವವನು ಅವನ ಬುದ್ಧಿಯಲ್ಲಿ ಒಡಕನ್ನು ತಂದುಕೊಳ್ಳಬಾರದು. ಏಕೆಂದರೆ ಅವಿಚ್ಛಿನ್ನ ಬುದ್ಧಿಯುಳ್ಳವನಿಗೆ ಕಲ್ಯಾಣವಾಗುತ್ತದೆ ಎಂದು ತಿಳಿದವರ ಅಭಿಪ್ರಾಯ. ತಮ್ಮ ಆತ್ಮವನ್ನು ನಿಯಂತ್ರಣದಲ್ಲಿಟ್ಟುಕೊಂಡಿರುವವರು ಮೂರು ಲೋಕಗಳಲ್ಲಿ ಯಾವುದನ್ನೂ – ಅತಿ ಕೀಳೆನಿಸಿದುದನ್ನೂ – ತಿರಸ್ಕರಿಸುವುದಿಲ್ಲ. ಇನ್ನು ಆ ಭರತರ್ಷಭರನ್ನೇನು? ಕೋಪಕ್ಕೆ ವಶನಾಗುವವನು ಸರಿಯಾವುದು ಕೆಟ್ಟದ್ದ್ಯಾವುದು ಎನ್ನುವ ಬುದ್ಧಿಯನ್ನು ಕಳೆದುಕೊಳ್ಳುತ್ತಾನೆ. ಇವೆಲ್ಲವನ್ನೂ ಕಿತ್ತು ಹಾಕಬೇಕು. ಇದಕ್ಕೆ ಪ್ರಮಾಣವನ್ನು ನೋಡು.

ಈಗ ದುರ್ಜನರೊಂದಿಗಿಂತ ಪಾಂಡವರೊಡನೆ ಸೇರಿಕೊಳ್ಳುವುದು ನಿನ್ನ ಶ್ರೇಯಸ್ಸಿನಲ್ಲಿದೆ. ಅವರೊಂದಿಗೆ ಪ್ರೀತಿಯಿಂದಿದ್ದರೆ ನಿನ್ನ ಎಲ್ಲ ಕಾಮನೆಗಳನ್ನೂ ಪೂರೈಸಿಕೊಳ್ಳುವೆ. ಪಾಂಡವರು ಗೆದ್ದಿರುವ ಈ ಭೂಮಿಯನ್ನು

ಭೋಗಿಸುವಾಗ ನೀನು ಪಾಂಡವರನ್ನು ಹಿಂದೆ ಹಾಕಿ ಅನ್ಯರ ಬೆಂಬಲವನ್ನು ಕೇಳುತ್ತಿರುವೆಯಲ್ಲ! ದುಃಶಾಸನ, ದುರ್ವಿಷಹ, ಕರ್ಣ ಸೌಬಲರಿಗೆ ಈ ಐಶ್ವರ್ಯವನ್ನು ಕೊಟ್ಟು ಇನ್ನೂ ಬೆಳೆಯಲು ಇಚ್ಛಿಸುತ್ತಿರುವೆ! ನಿನಗೂ ಪರ್ಯಾಪ್ತರಾಗಿಲ್ಲದೇ ಇರುವ ಇವರು ಜ್ಞಾನದಲ್ಲಿ, ಧರ್ಮ-ಅರ್ಥಗಳಲ್ಲಿ, ವಿಕ್ರಮದಲ್ಲಿ ಪಾಂಡವರಿಗಿಂತಲೂ ಅಪರ್ಯಾಪ್ತರು. ನಿನ್ನನ್ನೂ ಸೇರಿ ಈ ಎಲ್ಲ ರಾಜರೂ ಯುದ್ಧದಲ್ಲಿ ಕ್ರುದ್ಧನಾಗಿರುವ ಭೀಮಸೇನನ ಮುಖವನ್ನು ನೋಡಲೂ ಸಮರ್ಥರಿಲ್ಲ. ಈ ಸಮಗ್ರ ಪಾರ್ಥಿವ ಬಲವೂ ನಿನ್ನಲ್ಲಿದೆ. ಇಲ್ಲಿ ಭೀಷ್ಮನಿದ್ದಾನೆ. ದ್ರೋಣನಿದ್ದಾನೆ. ಹಾಗೆಯೇ ಕರ್ಣನೂ ಇದ್ದಾನೆ. ಭೂರಿಶ್ರವ, ಸೌಮದತ್ತಿ, ಅಶ್ವತ್ಥಾಮಾ ಮತ್ತು ಜಯದ್ರಥರಿದ್ದಾರೆ. ಆದರೆ ಇವರೆಲ್ಲರೂ ಧನಂಜಯನ ವಿರುದ್ಧ ಹೋರಾಡಲು ಅಶಕ್ತರು. ಏಕೆಂದರೆ ಕೃದ್ಧನಾದ ಅರ್ಜುನನು ಎಲ್ಲರಿಗೂ ಅಜೇಯ. ಸುರಾಸುರರಿಗೂ, ಮನುಷ್ಯರಿಗೂ, ಗಂಧರ್ವರಿಗೂ ಅವನನ್ನು ಮೀರಿಸಲು ಸಾಧ್ಯವಿಲ್ಲ. ಯುದ್ಧದಲ್ಲಿರುವ ಮನಸ್ಸನ್ನು ತೆಗೆದುಹಾಕು. ಸಮರದಲ್ಲಿ ಅರ್ಜುನನನ್ನು ಎದುರಿಸಿ ಒಳ್ಳೆಯದಾಗಿ ಮನೆಗೆ ಹಿಂದಿರುಗಿರುವ ಯಾರಾದರೂ ಬಲಶಾಲೀ ಪುರುಷ ಪಾರ್ಥಿವನನ್ನು ನೋಡಿದ್ದೇವೆಯೇ? ಜನಕ್ಷಯದಲ್ಲಿ ಪ್ರಯೋಜನವೇನಿದೆ? ಅವನನ್ನು ಗೆದ್ದು ನಿನಗೆ ಗೆಲುವನ್ನು ತರುವ ಯಾರಾದರೂ ಒಬ್ಬ ಪುರುಷನು ನಿನಗೆ

ತೋರಿದರೆ ಹೇಳು. ಖಾಂಡವಪ್ರಸ್ಥದಲ್ಲಿ ಗಂಧರ್ವರೊಂದಿಗೆ, ಯಕ್ಷ-ಅಸುರ-ಪನ್ನಗರೊಂದಿಗೆ ಬಂದಿದ್ದ ದೇವತೆಗಳನ್ನು ಸೋಲಿಸಿದ ಅವನೊಡನೆ ಯಾವ ಮಾನವನು ತಾನೇ ಯುದ್ಧಮಾಡುತ್ತಾನೆ? ವಿರಾಟನಗರದಲ್ಲಿ ನಡೆದ ಮಹದದ್ಭುತವನ್ನು ಕೇಳಿದ್ದೇವಲ್ಲ! ಒಬ್ಬನೇ ಬಹುಸೇನೆಗೆ ಪರ್ಯಾಪ್ತನಾದನು. ಅದೇ ನಿದರ್ಶನ. ನೀನು ಅಜೇಯನೂ, ಅನಾಧೃಷ್ಯನೂ ಆದ ಜಿಷ್ಣು ಅಚ್ಯುತ ವೀರ ಅರ್ಜುನನನ್ನು ಸಮರದಲ್ಲಿ ಗೆಲ್ಲುವ ಭರವಸೆಯನ್ನಿಟ್ಟುಕೊಂಡಿರುವೆಯಲ್ಲ! ಪುನಃ ನನ್ನ ಸಹಾಯದಿಂದ ಬರುವ ಪಾರ್ಥನನ್ನು ಯಾರು ಎದುರಿಸಲು ಅರ್ಹರಾಗಿದ್ದಾರೆ? ಸಾಕ್ಷಾತ್ ಪುರಂದರನು ಯುದ್ಧದಲ್ಲಿ ಎದುರಿಸಬಲ್ಲನೇ? ಅರ್ಜುನನನ್ನು ಸಮರದಲ್ಲಿ ಜಯಿಸುವವನು ತನ್ನ ಬಾಹುಗಳಿಂದ ಭೂಮಿಯನ್ನು ಎತ್ತಿ ಹಿಡಿಯಬಲ್ಲನು, ಕ್ರೋಧದಿಂದ ಈ ಪ್ರಜೆಗಳನ್ನು ಸುಟ್ಟುಹಾಕಬಲ್ಲನು ಮತ್ತು ದಿವದಿಂದ ದೇವತೆಗಳನ್ನು ಬೀಳಿಸಬಲ್ಲನು.

ನಿನ್ನಿಂದಾಗಿ ನಿನ್ನ ಈ ಪುತ್ರರು, ಸಹೋದರರು, ಕುಲಬಾಂಧವರು, ಸಂಬಂಧಿಗಳೂ ವಿನಾಶಹೊಂದದಂತೆ ನೋಡಿಕೋ! ಕೌರವರ ಈ ಕುಲವು ನಿರ್ವಿಶೇಷವಾಗದಿರಲಿ ಅಥವಾ ಕ್ಷೀಣಿಸದಿರಲಿ! ನಿನ್ನನ್ನು ಕುಲಘ್ನ ಮತ್ತು ಕೀರ್ತಿನಾಶಕನೆಂದು ಕರೆಯದಿರಲಿ. ಆ ಮಹಾರಥಿಗಳು

ನಿನ್ನನ್ನೇ ಯುವರಾಜನನ್ನಾಗಿ ಸ್ಥಾಪಿಸುತ್ತಾರೆ. ಮತ್ತು ನಿನ್ನ ತಂದೆ ಧೃತರಾಷ್ಟ್ರನು ಈ ಮಹಾರಾಜ್ಯದ ಜನೇಶ್ವರನಾಗಿರುತ್ತಾನೆ. ನಿನಗಾಗಿ ಕಾದುಕೊಂಡಿರುವ, ಖಂಡಿತವಾಗಿಯೂ ಬರಲಿರುವ ಶ್ರೀಯನ್ನು ಅವಮಾನಿಸಬೇಡ! ಪಾರ್ಥರಿಗೆ ಅರ್ಧವನ್ನು ಕೊಟ್ಟು, ಮಹಾ ಶ್ರೀಯನ್ನು ಪಡೆಯುತ್ತೀಯೆ. ಪಾಂಡವರೊಂದಿಗೆ ಶಾಂತಿಯನ್ನು ಮಾಡಿಕೊಂಡು ಸುಹೃದಯರ ಮಾತಿನಂತೆ ಮಾಡಿ, ಮಿತ್ರರಿಗೂ ಸಂತೋಷ ತರುತ್ತೀಯೆ ಮತ್ತು ಚಿರವಾದ ರಕ್ಷಣೆಯನ್ನು ಪಡೆಯುತ್ತೀಯೆ."

## ಭೀಷ್ಮ-ದ್ರೋಣ-ವಿದುರಾದಿಗಳ ವಚನ

ಕೇಶವನ ಮಾತನ್ನು ಕೇಳಿ ಶಾಂತನವ ಭೀಷ್ಮನು ಅಮರ್ಷಣ ದುರ್ಯೋಧನನಿಗೆ ಹೀಗೆ ಹೇಳಿದನು:

"ಸುಹೃದಯರಲ್ಲಿ ಶಾಂತಿಯನ್ನು ಬಯಸಿ ಕೃಷ್ಣನು ನಿನಗೆ ಹೇಳಿದ್ದಾನೆ. ಅದನ್ನು ಅನುಸರಿಸು. ಸಿಟ್ಟಿನ ವಶದಲ್ಲಿ ಬರಬೇಡ, ಸಾಧಿಸಬೇಡ. ಮಹಾತ್ಮ ಕೇಶವನ ಮಾತಿನಂತೆ ಮಾಡದೇ ಇದ್ದರೆ ನಿನಗೆ ಶ್ರೇಯಸ್ಸಾಗಲೀ, ಸಂಪತ್ತಾಗಲೀ, ಸುಖವಾಗಲೀ, ಕಲ್ಯಾಣವಾಗಲೀ ದೊರಕುವುದಿಲ್ಲ. ಮಗೂ! ಮಹಾಬಾಹು ಕೇಶವನು ಧರ್ಮವೂ ಅರ್ಥವೂ ಉಳ್ಳ ಮಾತುಗಳನ್ನು ನಿನಗೆ ಹೇಳಿದ್ದಾನೆ. ಅದರಂತೆ ನಡೆದುಕೋ.

ಪ್ರಜೆಗಳನ್ನು ನಾಶಗೊಳಿಸಬೇಡ! ಧೃತರಾಷ್ಟ್ರನು ಜೀವಂತವಾಗಿರಿಸಿರುವ, ಎಲ್ಲ ರಾಜರಲ್ಲಿ ಶ್ರೀಯಿಂದ ಪ್ರಜ್ವಲಿಸುತ್ತಿರುವ ಈ ಭಾರತವನ್ನು ನಿನ್ನ ದೌರಾತ್ಮ್ಯದಿಂದ ಭ್ರಂಶಗೊಳಿಸುತ್ತಿರುವೆ. ಅಮಾತ್ಯರೊಂದಿಗೆ, ಪುತ್ರ-ಪಶು-ಬಾಂಧವರೊಂದಿಗೆ, ಮಿತ್ರರೊಂದಿಗೆ ನಿನ್ನ ಜೀವನವನ್ನೂ ಅಸದ್ಬುದ್ಧಿಯಿಂದ ಭ್ರಂಶಗೊಳಿಸುತ್ತಿರುವೆ! ತಥ್ಯವಾದ, ಅರ್ಥವತ್ತಾದ ಕೇಶವನ, ನಿನ್ನ ತಂದೆಯ, ಧೀಮತ ವಿದುರನ ಮಾತನ್ನು ಅತಿಕ್ರಮಿಸಿ ಕುಲಘ್ನ-ಅಂತಕನೆನಿಸಿಕೊಳ್ಳಬೇಡ. ದುರ್ಮತಿಯಾಗಬೇಡ! ಕೆಟ್ಟ ದಾರಿಯಲ್ಲಿ ಹೋಗಬೇಡ! ವೃದ್ಧ ತಂದೆ-ತಾಯಂದಿರಿಗೆ ಶೋಕವನ್ನು ಕೊಡಬೇಡ!”

ಆಗ ಅಲ್ಲಿ ಕೋಪಾವಿಷ್ಟನಾಗಿ ಪುನಃ ಪುನಃ ನಿಟ್ಟುಸಿರು ಬಿಡುತ್ತಿರುವ ದುರ್ಯೋಧನನಿಗೆ ದ್ರೋಣನು ಹೇಳಿದನು:

“ಮಗೂ! ಕೇಶವನೂ ಹಾಗೆ ಶಾಂತನವ ಭೀಷ್ಮನೂ ನಿನಗೆ ಧರ್ಮಾರ್ಥಯುಕ್ತವಾದ ಮಾತುಗಳನ್ನೇ ಹೇಳಿದ್ದಾರೆ. ಇವುಗಳನ್ನು ಸ್ವೀಕರಿಸು. ಇವರಿಬ್ಬರೂ ಪ್ರಾಜ್ಞರು, ಮೇಧಾವಿಗಳು, ಅರ್ಥ-ಕಾಮಗಳಲ್ಲಿ ದಾಂತರು, ಬಹಳ ವಿದ್ಯಾವಂತರು. ನಿನಗೆ ಹಿತವಾದುದನ್ನೇ ಆಡಿದ್ದಾರೆ. ಅದನ್ನು ಸ್ವೀಕರಿಸು! ಮಹಾಪ್ರಾಜ್ಞರಾದ ಕೃಷ್ಣ-ಭೀಷ್ಮರು ಹೇಳಿದುದನ್ನು ಅನುಸರಿಸಿ ನಡೆ. ಲಘು ಬುದ್ಧಿಯಿಂದ ಈ

ಮಾತುಗಳನ್ನು ನೀನು ಅಲ್ಲಗಳೆಯಬೇಡ. ನಿನ್ನನ್ನು ಯಾರು ಪ್ರೋತ್ಸಾಹಿಸುತ್ತಿರುವರೋ ಅವರು ಏನನ್ನೂ ಮಾಡಲಾರರು. ಯುದ್ಧದಲ್ಲಿ ಇವರು ವೈರವನ್ನು ಇನ್ನೊಬ್ಬರ ಕೊರಳಿಗೆ ಕಟ್ಟುತ್ತಾರೆ. ಎಲ್ಲ ಮಕ್ಕಳ ಮತ್ತು ಸಹೋದರರ ಕೊಲೆ ಮಾಡಬೇಡ. ಎಲ್ಲಿ ವಾಸುದೇವ-ಅರ್ಜುನರು ಇರುವರೋ ಅಲ್ಲಿ ಸೇನೆಯು ಅಜೇಯವೆಂದು ತಿಳಿದುಕೋ! ಸುಹೃದಯರಾದ ಈ ಕೃಷ್ಣ-ಭೀಷ್ಮರ ಸತ್ಯ ಮತವನ್ನು ನೀನು ಆದರಿಸದೇ ಇದ್ದರೆ ಪಶ್ಚಾತ್ತಾಪ ಪಡುತ್ತೀಯೆ. ಅರ್ಜುನನು ಜಾಮದಗ್ನಿಯು ಹೇಳಿದುದಕ್ಕಿಂತಲೂ ಹೆಚ್ಚಿನವನು. ದೇವಕೀ ಪುತ್ರ ಕೃಷ್ಣನು ದೇವತೆಗಳಿಗೂ ದುರುತ್ಸಹನು. ನಿನಗೆ ಸುಖವೂ ಪ್ರಿಯವೂ ಆದುದನ್ನು ಹೇಳುವುದರಲ್ಲಿ ಇನ್ನೇನಿದೆ? ಇವರು ಎಲ್ಲವನ್ನೂ ಹೇಳಿದ್ದಾರೆ. ನಿನಗೆ ಇಷ್ಟವಾದ ಹಾಗೆ ಮಾಡು! ಇದಕ್ಕಿಂತಲೂ ಹೆಚ್ಚಿಗೆ ನಿನಗೆ ಹೇಳಲು ಉತ್ಸಾಹವಿಲ್ಲ."

ಆ ಮಾತು ಮುಗಿದ ನಂತರ ಕ್ಷತ್ತ ವಿದುರನೂ ಕೂಡ ಕೋಪಾವಿಷ್ಟನಾಗಿದ್ದ ಧಾರ್ತರಾಷ್ಟ್ರ ದುರ್ಯೋಧನನನ್ನು ನೋಡಿ ಹೇಳಿದನು:

"ದುರ್ಯೋಧನ! ನಿನ್ನ ಕುರಿತು ನಾನು ಶೋಕಿಸುತ್ತಿಲ್ಲ! ವೃದ್ಧರಾಗಿರುವ ಈ ಗಾಂಧಾರೀ ಮತ್ತು ನಿನ್ನ ತಂದೆಯ

ಕುರಿತು ಶೋಕಿಸುತ್ತಿದ್ದೇನೆ. ದುಷ್ಟನಾದ ನಿನ್ನನ್ನು ನಾಥನನ್ನಾಗಿ ಪಡೆದಿರುವ ಇವರು ಮಿತ್ರರನ್ನು ಕಳೆದುಕೊಂಡು, ಅಮಾತ್ಯರನ್ನು ಕಳೆದುಕೊಂಡು, ರೆಕ್ಕೆಗಳನ್ನು ಕಳೆದುಕೊಂಡ ಪಕ್ಷಿಗಳಂತೆ ಅನಾಥರಾಗಿ ತಿರುಗ ಬೇಕಾಗುತ್ತದೆ. ನಿನ್ನಂತಹ ಕುಲಘ್ನ, ಪಾಪಿ, ಕೆಟ್ಟಪುರುಷನಿಗೆ ಜನ್ಮವಿತ್ತು ಭಿಕ್ಷುಕರಂತೆ ಶೋಕಿಸುತ್ತಾ ಈ ಭೂಮಿಯಲ್ಲಿ ಅಲೆಯಬೇಕಾಗುತ್ತದೆ.”

ಆಗ ಸಹೋದರರೊಂದಿಗೆ, ರಾಜರಿಂದ ಸುತ್ತುವರೆಯಲ್ಪಟ್ಟು ಕುಳಿತಿದ್ದ ದುರ್ಯೋಧನನಿಗೆ ರಾಜಾ ಧೃತರಾಷ್ಟ್ರನು ಹೇಳಿದನು:

“ದುರ್ಯೋಧನ! ಮಹಾತ್ಮ ಶೌರಿಯು ಹೇಳಿದುದನ್ನು ಕೇಳು. ಅವನ ಆ ಅತ್ಯಂತ ಮಂಗಳಕರ, ಅವ್ಯಯ ಯೋಗಕ್ಷೇಮಗಳನ್ನು ನೀಡುವ  ಮಾತನ್ನು ಸ್ವೀಕರಿಸು. ಏಕೆಂದರೆ ಈ ಅಕ್ಲಿಷ್ಟಕರ್ಮಿ ಕೃಷ್ಣನ ಸಹಾಯದಿಂದಲೇ ನಾವು ಎಲ್ಲ ರಾಜರೂ ತಮ್ಮ ಇಷ್ಟ ಅಭಿಪ್ರಾಯಗಳನ್ನು ಸಾಧಿಸಬಲ್ಲೆವು. ಮಗೂ! ಕೇಶವನೊಂದಿಗೆ ಹೋಗಿ ಯುಧಿಷ್ಠಿರನನ್ನು ಸೇರು. ಭಾರತರ ಈ ಅನಾಮಯ ಸಂಪೂರ್ಣ ಮಂಗಳ ಕಾರ್ಯವನ್ನು ಮಾಡಿ ಅದರಂತೆ ನಡೆದುಕೋ. ವಾಸುದೇವನ ಮೂಲಕ ಸಂಗಮವನ್ನು ಹೊಂದು. ಕಾಲವು ಪ್ರಾಪ್ತವಾಗಿದೆ ಎಂದೆನಿಸುತ್ತಿದೆ. ಈ ಅವಕಾಶವನ್ನು ಕಳೆದುಕೊಳ್ಳಬೇಡ! ಆದರೆ ನಿನ್ನ

ಒಳ್ಳೆಯದಕ್ಕಾಗಿಯೇ ಪುನಃ ಪುನಃ ಹೇಳುತ್ತಿರುವ ಕೇಶವನನ್ನು ನೀನು ಅನಾದರಿಸಿ ಶಾಂತಿಯನ್ನು ಮಾಡಿಕೊಳ್ಳದೇ ಇದ್ದರೆ ಪರಾಭವವು ನಿನ್ನದಾಗುತ್ತದೆ."

ಧೃತರಾಷ್ಟ್ರನ ಮಾತನ್ನು ಕೇಳಿ ಸಮರ್ಥರಾದ ಭೀಷ್ಮ-ದ್ರೋಣರು ಅವಿಧೇಯ ದುರ್ಯೋಧನನಿಗೆ ಈ ಮಾತನ್ನು ಆಡಿದರು:

"ಇನ್ನೂ ಕೃಷ್ಣರಿಬ್ಬರು ಸನ್ನದ್ಧರಾಗಿಲ್ಲ. ಇನ್ನೂ ಗಾಂಡೀವವನ್ನು ಎತ್ತಿ ಹಿಡಿದಿಲ್ಲ. ಶತ್ರುಗಳ ಬಲನಾಶನಕ್ಕೆ ಧೌಮ್ಯನು ಇನ್ನೂ ಅಗ್ನಿಯಲ್ಲಿ ಆಹುತಿಗಳನ್ನು ಹಾಕಿಲ್ಲ. ವಿನಯತೆಯನ್ನು ಆಭರಣವನ್ನಾಗಿಸಿಕೊಂಡಿರುವ ಮಹೇಷ್ವಾಸ ಯುಧಿಷ್ಠಿರನು ಇನ್ನೂ ಕೃದ್ಧನಾಗಿ ನಿನ್ನ ಸೇನೆಯನ್ನು ನೋಡುತ್ತಿಲ್ಲ. ಆದುದರಿಂದ ವೈಶಮ್ಯವು ಈಗಲೇ ಮುಗಿಯಲಿ. ಇದೂವರೆಗೆ ಪಾರ್ಥ, ಮಹೇಷ್ವಾಸ, ಭೀಮಸೇನನು ತನ್ನ ಸೇನೆಯ ಕೇಂದ್ರಸ್ಥಾನದಲ್ಲಿ ನಿಂತಿಲ್ಲ. ಆದುದರಿಂದ ವೈಶಮ್ಯವು ಈಗಲೇ ಮುಗಿಯಲಿ. ಇನ್ನೂ ಅವನು ಮಾರ್ಗದಲ್ಲಿ ಸಂಚರಿಸುತ್ತಾ, ತನ್ನ ಸೇನೆಯನ್ನು ಹರ್ಷಗೊಳಿಸುತ್ತಿಲ್ಲ. ಇನ್ನೂ ಅವನು ಆನೆಯ ಮೇಲೆ ಕುಳಿತ ಯೋದ್ಧರ ತಲೆಯನ್ನು ವೀರಘಾತಿ ಗದೆಯಿಂದ ಪರಿಪಕ್ವವಾದ ವನಸ್ಪತಿಯ ಫಲಗಳನ್ನು ಕಾಲಬಂದಾಗ ಕತ್ತರಿಸುವಂತೆ ಮಾಡುತ್ತಿಲ್ಲ. ಆದುದರಿಂದ ಈಗಲೇ ಈ ವೈಷಮ್ಯವು

ಮುಗಿಯಲಿ. ನಕುಲ ಸಹದೇವರು, ಪಾರ್ಷತ ಧೃಷ್ಟದ್ಯುಮ್ನ, ವಿರಾಟ, ಶಿಖಂಡಿ, ಕೋಪಗೊಂಡಿರುವ ಶಿಶುಪಾಲನ ಮಗ ಮೊದಲಾದ ಕೃತಾಸ್ತ್ರರು, ಕ್ಷಿಪ್ರವಾಗಿ ಬಾಣಪ್ರಯೋಗಿಸುವವರು, ಮೊಸಳೆಗಳು ಸಾಗರದ ಮೇಲೆ ಹೇಗೋ ಹಾಗೆ ಆಕ್ರಮಣವನ್ನು ಮಾಡುವುದರ ಮೊದಲೇ ಈ ವೈಶಮ್ಯವು ಕೊನೆಗೊಳ್ಳಲಿ. ಹದ್ದಿನ ಗರಿಯ ಬಾಣಗಳು ಮಹೀಕ್ಷಿತರ ಸುಕುಮಾರರ ಶರೀರಗಳಿಗೆ ಹೊಗುವ ಮೊದಲು ಈ ವೈರವು ಕೊನೆಗೊಳ್ಳಲಿ. ಚಂದನ ಅಗರುಗಳನ್ನು ಬಳಿದುಕೊಂಡ, ಹಾರ ಮತ್ತು ಚಿನ್ನದ ಕವಚಗಳನ್ನು ಧರಿಸಿರುವ ನಮ್ಮ ಯೋದ್ಧರ ಎದೆಗಳನ್ನು ಮಹೇಷ್ವಾಸ, ಕೃತಾಸ್ತ್ರರಾದವರು ಕ್ಷಿಪ್ರವಾಗಿ ಬಹುದೂರದಿಂದ ಪ್ರಯೋಗಿಸಿದ ಉಕ್ಕಿನ ಬಾಣಗಳು ತಾಗಿ ಬೀಳುವುದಕ್ಕಿಂತ ಮೊದಲೇ ಈ ವೈಶಮ್ಯವು ಮುಗಿಯಲಿ. ಶಿರದಿಂದ ಅಭಿವಾದಿಸುವ ನಿನ್ನನ್ನು ಆ ರಾಜಕುಂಜರ ಧರ್ಮರಾಜ ಯುಧಿಷ್ಠಿರನು ತನ್ನ ಎರಡೂ ಕೈಗಳಿಂದ ಮೇಲೆತ್ತಿ ಸ್ವೀಕರಿಸಲಿ. ಶಾಂತಿಯ ಗುರುತಾಗಿ ಅವನು ತನ್ನ ಸುದಕ್ಷಿಣ, ಧ್ವಜ-ಅಂಕುಶ-ಪತಾಕೆಗಳ ಗುರುತಿರುವ ಬಲಗೈಯನ್ನು ನಿನ್ನ ಬಾಹುಗಳ ಮೇಲಿರಿಸಲಿ. ನೀನು ಕುಳಿತಿರುವಾಗ ಅವನು ರತ್ನೌಷಧಿಗಳಿಂದ ಕೂಡಿದ ರತ್ನಾಂಗುಲಿತ ಕೈಗಳಿಂದ ನಿನ್ನ ಬೆನ್ನನ್ನು ತಟ್ಟಲಿ. ಆ ಶಾಲಸ್ಕಂಧ, ಮಹಾಬಾಹು

ವೃಕೋದರನು ಶಾಂತಿಯಿಂದ ನಿನ್ನನ್ನು ಅಪ್ಪಿಕೊಂಡು ಸಾಮದಿಂದ ಅಭಿನಂದಿಸಲಿ. ಅರ್ಜುನ ಮತ್ತು ಯಮಳರು ಈ ಮೂವರೂ ನಿನಗೆ ವಂದಿಸಲು ನೀನು ಅವರ ನೆತ್ತಿಯನ್ನು ಆಘ್ರಾಣಿಸಿ ಪ್ರೇಮದಿಂದ ಅಭಿನಂದಿಸು. ನೀನು ವೀರ ಸಹೋದರ ಪಾಂಡವರೊಂದಿಗೆ ಸೇರಿಕೊಂಡಿದ್ದುದನ್ನು ನೋಡಿ ನರಾಧಿಪರು ಆನಂದ ಬಾಷ್ಪಗಳನ್ನು ಸುರಿಸಲಿ. ರಾಜಧಾನಿಗಳಲ್ಲಿ ಘೋಷಿಸಲ್ಪಡಲಿ. ಮಹೀಕ್ಷಿತರು ಸರ್ವಸಂಪನ್ನರಾಗಿ ಆನಂದಿಸಲಿ. ಭ್ರಾತೃಭಾವದಿಂದ ಪೃಥ್ವಿಯನ್ನು ಭೋಗಿಸಲಿ. ವಿಜ್ವರನಾಗು.”

ಕುರುಸಂಸದಿಯಲ್ಲಿ ಈ ಅಪ್ರಿಯ ಮಾತುಗಳನ್ನು ಕೇಳಿ ದುರ್ಯೋಧನನು ಮಹಾಬಾಹು ಯಶಸ್ವಿ ವಾಸುದೇವನಿಗೆ ಉತ್ತರಿಸಿದನು.

“ಕೇಶವ! ಇದನ್ನು ಹೇಳುವುದಕ್ಕೆ ಮೊದಲು ನೀನು ಯೋಚಿಸಬೇಕು. ಸರಿಯಾಗಿ ವಿವರಿಸದೇ ಕೇವಲ ನನ್ನನ್ನೇ ನೀನು ವಿಶೇಷವಾಗಿ ನಿಂದಿಸುತ್ತಿದ್ದೀಯೆ. ಏಕೆಂದರೆ ಪಾರ್ಥರಲ್ಲಿ ನಿನಗೆ ಭಕ್ತಿಯಿದೆ. ಆದರೆ ನೀನು ನಮ್ಮ ಬಲಾಬಲಗಳನ್ನು ಪರಿಶೀಲಿಸಿ ನಮ್ಮನ್ನು ದೂಷಿಸುತ್ತಿರುವೆಯೋ ಹೇಗೆ? ನೀನು, ಕ್ಷತ್ತ, ರಾಜ, ಆಚಾರ್ಯ ಅಥವಾ ಪಿತಾಮಹರು ನನ್ನನ್ನೇ ದೂಷಿಸುತ್ತೀರಿ. ಎಂದೂ ಅನ್ಯ ಪಾರ್ಥಿವರನ್ನಲ್ಲ! ನಾನು ನನ್ನಲ್ಲಿ ಯಾವುದೇ

ವ್ಯಭಿಚಾರವನ್ನು ಕಾಣುವುದಿಲ್ಲ. ಆದರೂ ರಾಜರೊಂದಿಗೆ ನೀವೆಲ್ಲರೂ ನನ್ನನ್ನೇ ದ್ವೇಷಿಸುತ್ತೀರಿ. ಆಲೋಚಿಸಿದರೆ ನಾನು ಯಾವ ಮಹಾ ಅಪರಾಧವನ್ನೂ, ಸೂಕ್ಷ್ಮವಾದುದನ್ನೂ ಮಾಡಿಲ್ಲ. ಪಾಂಡವರು ಸಂತೋಷದಿಂದ ದ್ಯೂತಕ್ಕೆ ಒಪ್ಪಿಕೊಂಡರು. ಶಕುನಿಯು ರಾಜ್ಯವನ್ನು ಗೆದ್ದನು. ಅದರಲ್ಲಿ ನನ್ನ ದುಷ್ಕೃತವಾದರೂ ಏನಿದೆ? ಪಾಂಡವರಿಂದ ಏನೆಲ್ಲ ಗೆದ್ದಿದ್ದೆವೋ ಅವನ್ನು ಹಿಂತೆಗೆದು ಕೊಂಡು ಹೋಗಲು ಅಲ್ಲಿಯೇ ಅವರಿಗೆ ಅನುಮತಿಯನ್ನಿತ್ತೆ. ಜಯಿಸುವವರಲ್ಲಿ ಶ್ರೇಷ್ಠ ಪಾರ್ಥರು ಜೂಜಿನಲ್ಲಿ ಸೋತು ವನಕ್ಕೆ ತೆರಳಿದುದರಲ್ಲಿ ನನ್ನ ಅಪರಾಧವೇನೂ ಇಲ್ಲವಲ್ಲ! ಅದೂ ಅಲ್ಲದೇ ಈಗ ಯಾವ ಅಪವಾದಕ್ಕೆಂದು ಅಶಕ್ತ ಪಾಂಡವರು ಸಂತೋಷದಿಂದ ನಾವು ಅರಿಗಳೋ ಎನ್ನುವಂತೆ ಜಗಳವಾಡುತ್ತಿದ್ದಾರೆ? ನಾವು ಅವರಿಗೆ ಏನು ಮಾಡಿದ್ದೇವೆ? ಯಾವ ಅಪರಾಧದ ಸೇಡನ್ನು ತೀರಿಸರು ಪಾಂಡವರು ಸೃಂಜಯರನ್ನು ಸೇರಿಕೊಂಡು ಧಾರ್ತರಾಷ್ಟ್ರರನ್ನು ಕೊಲ್ಲಲು ಬರುತ್ತಿದ್ದಾರೆ?

ಯಾವುದೇ ಉಗ್ರ ಕರ್ಮದಿಂದಾಗಲೀ ಅಥವಾ ಮಾತಿನಿಂದಾಗಲೀ ನಮ್ಮನ್ನು ನಡುಗಿಸಲಿಕ್ಕಾಗುವುದಿಲ್ಲ. ಅದು ಶತಕ್ರತುವಿನಿಂದ ಬಂದ ಭಯವಾದರೂ ಸರಿ! ಕ್ಷತ್ರಧರ್ಮವನ್ನು ಅನುಸರಿಸಿ ನಮ್ಮನ್ನು ಯುದ್ಧದಲ್ಲಿ

ಜಯಿಸಬಲ್ಲ ಯಾರೂ ನನಗೆ ಕಾಣುವುದಿಲ್ಲ. ಏಕೆಂದರೆ ಗಣಗಳೊಂದಿರುವ ಭೀಷ್ಮ, ದ್ರೋಣ, ಕೃಪರನ್ನು ಯುದ್ಧದಲ್ಲಿ ದೇವತೆಗಳೂ ಜಯಿಸಲು ಶಕ್ಯರಿಲ್ಲ. ಪಾಂಡವರು ಎಲ್ಲಿಂದ? ಸ್ವಧರ್ಮವನ್ನು ಅನುಸರಿಸಿ ಒಂದುವೇಳೆ ಕಾಲವು ಬಂದು ಯುದ್ಧದಲ್ಲಿ ಶಸ್ತ್ರದಿಂದ ನಿಧನರಾದರೂ ನಾವು ಸ್ವರ್ಗವನ್ನೇ ಸೇರುತ್ತೇವೆ. ಸಂಗ್ರಾಮದಲ್ಲಿ ನಾವು ಶರತಲ್ಪದಲ್ಲಿ ಮಲಗುವುದನ್ನು ಇಚ್ಛಿಸುವುದೇ ನಮ್ಮಂತಹ ಕ್ಷತ್ರಿಯರ ಮುಖ್ಯ ಧರ್ಮ! ಶತ್ರುಗಳಿಗೆ ತಲೆಬಾಗದೇ ಒಂದುವೇಳೆ ನಾವು ರಣದಲ್ಲಿ ವೀರಶಯನವನ್ನು ಹೊಂದಬೇಕಾಗಿ ಬಂದರೆ ಅದು ನಮಗೆ ಅತೃಪ್ತಿಯನ್ನು ನೀಡುವುದಿಲ್ಲ. ಉತ್ತಮ ಕುಲದಲ್ಲಿ ಹುಟ್ಟಿ, ಕ್ಷತ್ರಧರ್ಮದಲ್ಲಿ ನಡೆದುಕೊಂಡು ಬಂದ ಯಾರು ತಾನೇ ಭಯದಿಂದ ತನ್ನ ಪ್ರಾಣದ ಕುರಿತು ಚಿಂತಿಸಿ ಯಾರಿಗಾದರೂ ತಲೆಬಾಗಿದ್ದಿದೆ? ತನ್ನನ್ನು ತಾನು ಮೇಲೆತ್ತಿಕೊಳ್ಳಬೇಕು. ಕೆಳಗೆ ತಳ್ಳಿಕೊಳ್ಳಬಾರದು. ಉದ್ಯಮವೇ ಪೌರುಷ. ಮುರಿಯಬೇಕೇ ಹೊರತು ಬಾಗಬಾರದು! ಈ ಮಾತಂಗನ ವಚನವು ಏಳಿಗೆಯನ್ನು ಬಯಸಿದವರಿಗಿರುವುದು. ನನ್ನಂಥವನು ಕೇವಲ ಧರ್ಮಕ್ಕೆ ಮತ್ತು ಬ್ರಾಹ್ಮಣರಿಗೆ ಮಣಿಯುತ್ತಾನೆ. ಬೇರೆ ಯಾರ ಕುರಿತೂ ಚಿಂತಿಸದೇ ಹೇಗೆ ಬೇಕೋ ಹಾಗೆ ನಡೆದುಕೊಳ್ಳಬೇಕು. ಇದು ಕ್ಷತ್ರಿಯರ ಧರ್ಮ. ಇದೇ ಸದಾ ನನ್ನ ಮತವು. ನಾನು ಜೀವಂತವಾಗಿರುವಾಗ

ಹಿಂದೆ ನನ್ನ ತಂದೆಯು ಕೊಟ್ಟಿದ್ದ ರಾಜ್ಯಾಂಶವು ಅವರಿಗೆ ಪುನಃ ದೊರೆಯುವುದಿಲ್ಲ. ರಾಜ ಧೃತರಾಷ್ಟ್ರನು ಜೀವಿಸಿರುವವರೆಗೆ ನಾವಾಗಲೀ ಅವರಾಗಲೀ ಶಸ್ತ್ರಗಳನ್ನು ಎತ್ತದೇ ಉಪಜೀವನವನ್ನು ಮಾಡಬೇಕು. ಹಿಂದೆ ಈ ರಾಜ್ಯವನ್ನು ನಾನು ಬಾಲಕನಾಗಿರುವಾಗ ಅಜ್ಞಾನದಿಂದ ಅಥವಾ ಭಯದಿಂದ ಅವರಿಗೆ ಕೊಟ್ಟಿರಬಹುದು. ಆದರೆ ಇಂದು ನಾನು ಜೀವಂತವಾಗಿರುವಾಗ ಅದು ಪಾಂಡವರಿಗೆ ಪುನಃ ದೊರೆಯುವುದಿಲ್ಲ. ಸೂಜಿಯ ಮೊನೆಯು ಊರುವಷ್ಟು ಭೂಮಿಯನ್ನೂ ನಾನು ಪಾಂಡವರಿಗೆ ಬಿಟ್ಟುಕೊಡುವುದಿಲ್ಲ!”

ಆಗ ದಾಶಾರ್ಹನು ಜೋರಾಗಿ ನಕ್ಕು, ಸಿಟ್ಟಿನಿಂದ ಕಣ್ಣುಗಳನ್ನು ತಿರುಗಿಸುತ್ತಾ, ಕುರುಸಂಸದಿಯಲ್ಲಿ ದುರ್ಯೋಧನನಿಗೆ ಈ ಮಾತುಗಳನ್ನಾಡಿದನು:

“ವೀರ ಶಯನವನ್ನು ಬಯಸುತ್ತೀಯಾ? ಅದು ನಿನಗೆ ದೊರೆಯುತ್ತದೆ! ಅಮಾತ್ಯರೊಂದಿಗೆ ಸ್ಥಿರನಾಗು. ಮಹಾ ನಾಶವು ನಡೆಯಲಿದೆ! ಮೂಢ! ಪಾಂಡವರ ಕುರಿತು ಕೆಟ್ಟದ್ದನ್ನು ಏನನ್ನೂ ಮಾಡಲಿಲ್ಲ ಎಂದು ನೀನು ತಿಳಿದುಕೊಂಡಿರುವೆಯಲ್ಲ! ಅವೆಲ್ಲವೂ ನರಾಧಿಪರಿಗೆ ತಿಳಿದೇ ಇದೆ. ಮಹಾತ್ಮ ಪಾಂಡವರ ಐಶ್ವರ್ಯವನ್ನು ನೋಡಿ ಹೊಟ್ಟೆಕಿಚ್ಚಿನಿಂದ ಬೆಂದು ನೀನು ಮತ್ತು ಸೌಬಲನು ದ್ಯೂತದ

ಕೆಟ್ಟ ಉಪಾಯವನ್ನು ಮಾಡಿದಿರಿ! ಹೇಗೆ ತಾನೇ ಶ್ರೇಯಸ್ಕರರಾದ, ಸಾಧುಗಳಾದ ನಿನ್ನ ಬಾಂಧವರು ಅದಕ್ಕೆ ಸಮ್ಮತಿಯನ್ನು ಕೊಟ್ಟರು? ಅಕ್ಷದ್ಯೂತವು ಸಂತರ ಜ್ಞಾನವನ್ನೂ ಅಪಹರಿಸುತ್ತದೆ. ಅಸಂತರು ಅಲ್ಲಿ ಭೇದ ವ್ಯಸನಗಳನ್ನು ಹುಟ್ಟಿಸುತ್ತಾರೆ. ನಿನ್ನ ಪಾಪಿ ಅನುಯಾಯಿಗಳೊಂದಿಗೆ ಸೇರಿಕೊಂಡು, ಸದಾಚಾರಗಳನ್ನು ಕಡೆಗಣಿಸಿ, ಈ ಘೋರ ವ್ಯಸನವನ್ನು ತರುವ ದ್ಯೂತದ ಮುಖವಾಡವನ್ನು ನೀನೇ ಮಾಡಿರುವುದು. ಬೇರೆ ಯಾರುತಾನೇ ಅಣ್ಣನ ಭಾರ್ಯೆಯನ್ನು ನೀನು ಮಾಡಿದಂತೆ ಸಭೆಗೆ ಎಳೆದು ತಂದು ದ್ರೌಪದಿಗೆ ಮಾತನಾಡಿದಂತೆ ಮಾತನಾಡಿಯಾರು? ಕುಲೀನೆ, ಶೀಲಸಂಪನ್ನೆ, ಪಾಂಡುಪುತ್ರರ ಮಹಿಷಿ, ಅವರ ಪ್ರಾಣಕ್ಕಿಂತಲೂ ಹೆಚ್ಚಿನವಳಾದ ಅವಳನ್ನು ನೀನು ಉಲ್ಲಂಘಿಸಿ ನಡೆದುಕೊಂಡೆ. ಆ ಪರಂತಪ ಕೌಂತೇಯರು ಹೊರಡುವಾಗ ದುಃಶಾಸನನು ಕುರುಸಂಸದಿಯಲ್ಲಿ ಹೇಳಿದುದು ಕುರುಗಳೆಲ್ಲರಿಗೂ ಗೊತ್ತು. ನೀನಲ್ಲದೇ ಬೇರೆ ಯಾರುತಾನೆ ಸತತವೂ ಧರ್ಮಚಾರಿಗಳಾಗಿರುವ, ಕಷ್ಟದಲ್ಲಿಯೂ ಸಾಧುಗಳಂತೆ ನಡೆದುಕೊಂಡಿರುವ ತನ್ನದೇ ಬಂಧುಗಳಿಗೆ ಈ ರೀತಿ ಬಹಳ ಕಷ್ಟಗಳನ್ನು ಕೊಡುತ್ತಾನೆ? ಕ್ರೂರಿಗಳ, ಅನಾರ್ಯರ, ದುಷ್ಟ ಬಹಳಷ್ಟು ಮಾತುಗಳನ್ನು ಕರ್ಣ-ದುಃಶಾಸನರು ಮತ್ತು ನೀನೂ ಆಡಿದಿರಿ.

ತಾಯಿಯೊಂದಿಗೆ ಆ ಬಾಲಕರನ್ನು ವಾರಣಾವತದಲ್ಲಿ ಸುಟ್ಟುಹಾಕಲು ಪರಮ ಪ್ರಯತ್ನವನ್ನು ನೀನು ಮಾಡಿದೆ. ಆದರೆ ಅದು ಯಶಸ್ವಿಯಾಗಲಿಲ್ಲ. ಆಗ ಬಹುಕಾಲ ಪಾಂಡವರು ಮರೆಸಿಕೊಂಡು ತಾಯಿಯೊಂದಿಗೆ ಏಕಚಕ್ರದಲ್ಲಿ ಬ್ರಾಹ್ಮಣನ ಮನೆಯಲ್ಲಿ ವಾಸಿಸಬೇಕಾಯಿತು. ವಿಷಭರಿತ ಸರ್ಪಗಳಿಂದ ಕಚ್ಚಿಸಿಹಾಕುವ ಸರ್ವ ಉಪಾಯಗಳಿಂದ ಪಾಂಡವರನ್ನು ವಿನಾಶಗೊಳಿಸಲು ಪ್ರಯತ್ನಿಸಿದೆ. ಯಾವುದೂ ಯಶಸ್ವಿಯಾಗಲಿಲ್ಲ. ಇದೇ ಬುದ್ಧಿಯಿಂದ ನೀನು ಸದಾ ಪಾಂಡವರೊಂದಿಗೆ ಮೋಸಗಾರನಂತೆ ನಡೆದುಕೊಂಡಿರುವೆ! ಆ ಮಹಾತ್ಮ ಪಾಂಡವರ ವಿರುದ್ಧ ಅಪರಾಧಿಯಲ್ಲ ಎಂದು ನೀನು ಹೇಗೆ ಹೇಳುತ್ತೀಯೆ? ಕ್ರೂರಿಯಾಗಿ ಬಹಳ ಮಾಡಬಾರದವುಗಳನ್ನು ಮಾಡಿ, ಅನಾರ್ಯನಂತೆ ಮೋಸದಿಂದ ನಡೆದುಕೊಂಡು ಈಗ ಬೇರೆಯೇ ವೇಷವನ್ನು ತೋರಿಸುತ್ತಿದ್ದೀಯೆ!

ತಂದೆ-ತಾಯಿಗಳು, ಭೀಷ್ಮ, ದ್ರೋಣ ಮತ್ತು ವಿದುರರು ಸಂಧಿ ಮಾಡಿಕೋ ಎಂದು ಪುನಃ ಪುನಃ ಹೇಳಿದರೂ ನೀನು ಸಂಧಿ ಮಾಡಿಕೊಳ್ಳುತ್ತಿಲ್ಲ. ನಿನಗೆ ಮತ್ತು ಪಾರ್ಥ ಇಬ್ಬರಿಗೂ ಬಹಳ ಒಳ್ಳೆಯದಾದುದು ಶಾಂತಿ-ಸಂಧಿ. ಆದರೆ ಇದು ನಿನಗೆ ಇಷ್ಟವಾಗುತ್ತಿಲ್ಲವೆಂದರೆ ಇದಕ್ಕೆ ಕಾರಣ ಬುದ್ಧಿಯ ಕೊರತೆಯಿಲ್ಲದೇ ಬೇರೆ ಏನಿರಬಹುದು? ಸುಹೃದರ

ಮಾತುಗಳನ್ನು ಅತಿಕ್ರಮಿಸಿ ನಿನಗೆ ನೆಲೆಯು ದೊರಕುವುದಿಲ್ಲ. ನೀನು ಮಾಡಲು ಹೊರಟಿರುವುದು ಅಧರ್ಮ ಮತ್ತು ಅಯಶಸ್ಕರವಾದುದು."

ದಾಶಾರ್ಹನು ಹೀಗೆ ಹೇಳುತ್ತಿರಲು ದುಃಶಾಸನನು ಕುರುಸಂಸದಿಯಲ್ಲಿ ಕೋಪಿಷ್ಟ ದುರ್ಯೋಧನನಿಗೆ ಈ ಮಾತುಗಳನ್ನಾಡಿದನು:

"ರಾಜನ್! ಸ್ವ-ಇಚ್ಛೆಯಿಂದ ನೀನು ಪಾಂಡವರೊಂದಿಗೆ ಸಂಧಿ ಮಾಡಿಕೊಳ್ಳದೇ ಇದ್ದರೆ ಕೌರವರು ನಿನ್ನನ್ನು ಬಂಧಿಸಿ ಕುಂತೀಪುತ್ರನಿಗೆ ಕೊಡುತ್ತಾರೆ. ಭೀಷ್ಮ, ದ್ರೋಣ ಮತ್ತು ನಿನ್ನ ತಂದೆಯು ವೈಕರ್ತನನನ್ನು, ನಿನ್ನನ್ನು ಮತ್ತು ನನ್ನನು - ಈ ಮೂವರನ್ನು ಪಾಂಡವರಿಗೆ ಕೊಡಲಿದ್ದಾರೆ."

ತಮ್ಮನ ಈ ಮಾತನ್ನು ಕೇಳಿ ಧಾರ್ತರಾಷ್ಟ್ರ ಸುಯೋಧನನು ಕ್ರುದ್ಧನಾಗಿ ಮಹಾನಾಗನಂತೆ ಭುಸುಗುಟ್ಟುತ್ತಾ ತನ್ನ ಆಸನದಿಂದ ಮೇಲೆದ್ದನು. ಆ ಅಶಿಷ್ಟವಾಗಿ ಮಾತನಾಡುವ, ಮರ್ಯಾದೆಯನ್ನು ಕೊಡದ, ದುರಭಿಮಾನಿ ದುರ್ಮತಿಯು ಮಾನ್ಯರನ್ನು ಅವಮಾನಿಸಿ ವಿದುರ, ಮಹಾರಾಜ ಧೃತರಾಷ್ಟ್ರ, ಬಾಹ್ಲೀಕ, ಕೃಪ, ಸೋಮದತ್ತ, ಭೀಷ್ಮ, ದ್ರೋಣ, ಜನಾರ್ದನ ಎಲ್ಲರನ್ನೂ ಅನಾದರಿಸಿ ಹೊರ ಹೋದನು. ಅವನು ಹೊರಹೋಗುವುದನ್ನು ನೋಡಿ ಸಹೋದರರು ಅಮಾತ್ಯರು ಮತ್ತು ಸರ್ವ ರಾಜರೊಂದಿಗೆ ಆ ಮನುಜರ್ಷಭನನ್ನು ಹಿಂಬಾಲಿಸಿ ಹೋದರು.

ಕ್ರುದ್ಧನಾಗಿ ಸಭೆಯಿಂದ ಎದ್ದು ಭ್ರಾತೃಗಳೊಂದಿಗೆ ಹೊರಟು ಹೋದ ದುರ್ಯೋಧನನನ್ನು ನೋಡಿ ಭೀಷ್ಮ ಶಾಂತನವನು ಹೇಳಿದನು:

"ಧರ್ಮಾರ್ಥಗಳನ್ನು ತ್ಯಜಿಸಿ ತನ್ನ ಮನೋವಿಕಾರಗಳನ್ನು ಅನುಸರಿಸುವವನು ಸ್ವಲ್ಪವೇ ಸಮಯದಲ್ಲಿ ಅವನ ದುಹೃದಯರ ನಗೆಗೀಡಾಗುತ್ತಾನೆ. ಈ ರಾಜಪುತ್ರ ಧಾರ್ತರಾಷ್ಟ್ರನು ದುರಾತ್ಮನು. ಸರಿಯಾದುದನ್ನು ತಿಳಿಯದವನು. ಮಿಥ್ಯಾಭಿಮಾನೀ. ಮತ್ತು ರಾಜ್ಯಕ್ಕಾಗಿ ಕ್ರೋಧಲೋಭಗಳಿಗೆ ವಶನಾಗಿ ನಡೆದುಕೊಳ್ಳುವವನು. ಜನಾರ್ದನ! ಸರ್ವ ಕ್ಷತ್ರಿಯರ ಕಾಲವೂ ಪಕ್ವವಾಗಿದೆ ಎನ್ನಿಸುತ್ತಿದೆ. ಏಕೆಂದರೆ ಎಲ್ಲ ಪಾರ್ಥಿವರೂ ಮಂತ್ರಿಗಳೂ ಮೋಹದಿಂದ ಅವನನ್ನೇ ಅನುಸರಿಸುತ್ತಿದ್ದಾರೆ."

ಭೀಷ್ಮನ ಆ ಮಾತುಗಳನ್ನು ಕೇಳಿ ಪುಷ್ಕರೇಕ್ಷಣ ವೀರ್ಯವಾನ್ ದಾಶಾರ್ಹನು ಭೀಷ್ಮ-ದ್ರೋಣ ಪ್ರಮುಖರೆಲ್ಲರನ್ನೂ ಉದ್ದೇಶಿಸಿ ಹೇಳಿದನು:

"ಐಶ್ವರ್ಯದಿಂದ ಮಂದನಾಗಿರುವ ಈ ನೃಪನನ್ನು ಬಲವನ್ನುಪಯೋಗಿಸಿ ನಿಯಂತ್ರಿಸದೇ ಇರುವುದು ಎಲ್ಲ ಕುರುವೃದ್ಧರ ಮಹಾ ಅನ್ಯಾಯ ಮತ್ತು ಅಪರಾಧ. ಅರಿಂದಮರೇ! ಆ ಕಾರ್ಯಕ್ಕೆ ಈಗ ಕಾಲವೊದಗಿದೆ ಎಂದು ನನಗನ್ನಿಸುತ್ತದೆ. ಹೀಗೆ ಮಾಡುವುದರಿಂದ ಎಲ್ಲವೂ

ಒಳ್ಳೆಯದಾಗುತ್ತದೆ. ನಿಮಗೆ ಪ್ರತ್ಯಕ್ಷವಾಗಿ ನಾನು ಹಿತವಾದ ಏನನ್ನು ಹೇಳುತ್ತೇನೋ ಅದನ್ನು ನಿಮಗೆ ಅನುಕೂಲವಾದರೆ ಇಷ್ಟವಾದರೆ ಕೇಳಿ. ವೃದ್ಧ ಭೋಜರಾಜನ ದುರಾಚಾರಿ ಅನಾತ್ಮವಂತ ಮಗನು ಕೋಪಾವಿಷ್ಟನಾಗಿ ತಂದೆಯು ಜೀವಂತವಿರುವಾಗಲೇ ಐಶ್ವರ್ಯವನ್ನು ಅಪಹರಿಸಿದನು. ಬಾಂಧವರಿಂದ ಪರಿತ್ಯಕ್ತನಾದ ಈ ಉಗ್ರಸೇನ ಸುತ ಕಂಸನನ್ನು ಬಾಂಧವರ ಹಿತವನ್ನು ಬಯಸಿ, ನಾನು ಮಹಾಯುದ್ಧದಲ್ಲಿ ಶಿಕ್ಷಿಸಿದೆನು. ಅನಂತರ ಇತರ ಬಾಂಧವರೊಂದಿಗೆ ನಾನು ಆಹುಕ ಉಗ್ರಸೇನನನ್ನು ಸತ್ಕರಿಸಿ ಪುನಃ ರಾಜನನ್ನಾಗಿ ಮಾಡಿದೆವು. ಅವನಿಂದ ಭೋಜರಾಜ್ಯವು ವರ್ಧಿಸಿತು. ಕುಲಕ್ಕಾಗಿ ಕಂಸನೊಬ್ಬನನ್ನು ಪರಿತ್ಯಜಿಸಿ ಎಲ್ಲ ಯಾದವರೂ ಅಂಧಕ-ವೃಷ್ಣಿಯರೂ ಅಭಿವೃದ್ಧಿ ಹೊಂದಿ ಸುಖದಿಂದಿದ್ದಾರೆ.

ದೇವಾಸುರರು ತಮ್ಮ ತಮ್ಮ ಆಯುಧಗಳನ್ನು ಎತ್ತಿ ಹಿಡಿದು ಯುದ್ಧಕ್ಕೆ ತೊಡಗಿದಾಗ ಪರಮೇಷ್ಠೀ ಪ್ರಜಾಪತಿಯೂ ಹೇಳಿದ್ದನು. ಲೋಕದಲ್ಲಿರುವವೆಲ್ಲವೂ ಎರಡಾಗಿ ವಿನಾಶದ ಮಾರ್ಗದಲ್ಲಿರುವಾಗ ಭಗವಾನ್, ಲೋಕಭಾವನ, ದೇವ ಸೃಷ್ಟಿಕರ್ತನು ಹೇಳಿದನು: “ಅಸುರರು ದೈತ್ಯ ದಾನವರೊಂದಿಗೆ ಪರಾಭವ ಹೊಂದುತ್ತಾರೆ. ಆದಿತ್ಯ, ವಸುಗಳು ಮತ್ತು ರುದ್ರರು ದಿವೌಕಸರಾಗುತ್ತಾರೆ. ಈ

ಯುದ್ಧದಲ್ಲಿ ದೇವ, ಅಸುರ, ಮನುಷ್ಯ, ಗಂಧರ್ವ, ಉರಗ, ರಾಕ್ಷಸರು ಅತಿಕೋಪದಿಂದ ಪರಸ್ಪರರನ್ನು ಸಂಹರಿಸುತ್ತಾರೆ." ಹೀಗೆ ತನ್ನ ಮತವನ್ನು ಹೇಳಿ ಪರಮೇಷ್ಠೀ ಪ್ರಜಾಪತಿಯು ಧರ್ಮನಿಗೆ ಹೇಳಿದನು: "ದೈತ್ಯ-ದಾನವರನ್ನು ಬಂಧಿಸಿ ವರುಣನಿಗೆ ಒಪ್ಪಿಸು!" ಪರಮೇಷ್ಠಿಯು ಹೀಗೆ ನಿಯೋಗವನ್ನು ನೀಡಲು ಧರ್ಮನು ಎಲ್ಲ ದೈತ್ಯ ದಾನವರನ್ನೂ ಬಂದಿಸಿ ವರುಣನಿಗೆ ಕೊಟ್ಟನು. ಅನಂತರ ಜಲೇಶ್ವರ ವರುಣನು ಆ ದಾನವರನ್ನು ಧರ್ಮಪಾಶಗಳಿಂದ ಮತ್ತು ಅವನದೇ ಪಾಶಗಳಿಂದ ಬಂಧಿಸಿ ಸಾಗರದಲ್ಲಿರಿಸಿ ನಿತ್ಯವೂ ರಕ್ಷಿಸುತ್ತಾನೆ.

ಹಾಗೆ ದುರ್ಯೋಧನ, ಕರ್ಣ, ಶಕುನಿ ಸೌಬಲನನ್ನು ಮತ್ತು ದುಃಶಾಸನನನ್ನು ಬಂಧಿಸಿ ಪಾಂಡವರಿಗೆ ಸಲ್ಲಿಸಿ. ಕುಲಕ್ಕಾಗಿ ಪುರುಷನನ್ನು ತ್ಯಜಿಸಬೇಕು. ಗ್ರಾಮಕ್ಕಾಗಿ ಕುಲವನ್ನು ತ್ಯಜಿಸಬೇಕು. ಜನಪದಕ್ಕಾಗಿ ಗ್ರಾಮವನ್ನು, ಮತ್ತು ಆತ್ಮಕ್ಕಾಗಿ ಪೃಥ್ವಿಯನ್ನು ತ್ಯಜಿಸಬೇಕು. ದುರ್ಯೋಧನನನ್ನು ಬಂಧಿಸಿ ಪಾಂಡವರೊಂದಿಗೆ ಸಂಧಿಮಾಡಿಕೊಂಡರೆ ನಿನ್ನಿಂದಾಗಿ ಕ್ಷತ್ರಿಯರು ವಿನಾಶ ಹೊಂದುವುದಿಲ್ಲ."

## ಗಾಂಧಾರಿಯ ಹಿತವಚನ

ಕೃಷ್ಣನ ಮಾತನ್ನು ಕೇಳಿ ಜನೇಶ್ವರ ಧೃತರಾಷ್ಟ್ರನು ಸರ್ವಧರ್ಮಜ್ಞ ವಿದುರನಿಗೆ ಅವಸರದಲ್ಲಿ ಹೇಳಿದನು:



“ಅಯ್ಯಾ! ಹೋಗು! ಮಹಾಪ್ರಾಜ್ಞೆ, ದೀರ್ಘದರ್ಶಿನೀ ಗಾಂಧಾರಿಯನ್ನು ಕರೆದುಕೊಂಡು ಬಾ! ಅವಳ ಸಹಾಯದಿಂದ ನಾನು ಈ ದುರ್ಮತಿಯನ್ನು ಸರಿದಾರಿಗೆ ತರುತ್ತೇನೆ. ಅವಳು ಆ ದುರಾತ್ಮ ದುಷ್ಟಚೇತಸನನ್ನು ಶಾಂತಿಗೊಳಿಸಿದರೆ ಈ ಸುಹೃದಯಿ ಕೃಷ್ಣನ ವಚನದಂತೆ ನಾವು ನಡೆದುಕೊಳ್ಳಬಹುದು. ಅವಳು ಸರಿಯಾದ ಮಾತುಗಳನ್ನಾಡಿ ಲೋಭದಿಂದ ತುಂಬಿದ, ದುರ್ಬುದ್ಧಿ, ದುಷ್ಟ ಸಹಾಯಕರನ್ನು ಹೊಂದಿದ ಇವನಿಗೆ ಸರಿಯಾದ ದಾರಿಯನ್ನು ತೋರಿಸಲು ಸಮರ್ಥಳಾದಾಳು. ಅವಳು ದುರ್ಯೋಧನನು ಮಾಡಿ ತರುವ ಈ ಮಹಾ ಘೋರ ವ್ಯಸನವನ್ನು ನಿಲ್ಲಿಸಿ ನಮಗೆ ಅವ್ಯಯವಾದ ಚಿರರಾತ್ರಿಯ ಯೋಗಕ್ಷೇಮಗಳನ್ನು ತರಬಹುದು.”

ರಾಜನ ಮಾತನ್ನು ಕೇಳಿ ವಿದುರನು ಧೃತರಾಷ್ಟ್ರನ ಶಾಸನದಂತೆ ದೀರ್ಘದರ್ಶಿನೀ ಗಾಂಧಾರಿಯನ್ನು ಕರೆತಂದನು. ಧೃತರಾಷ್ಟ್ರನು ಹೇಳಿದನು:

“ಗಾಂಧಾರಿ! ಇಗೋ ನಿನ್ನ ಈ ದುರಾತ್ಮ ಮಗನು ನನ್ನ ಶಾಸನವನ್ನು ಮೀರಿ ನಡೆಯುತ್ತಿದ್ದಾನೆ. ಐಶ್ವರ್ಯಲೋಭದಿಂದ ಇದ್ದ ಐಶ್ವರ್ಯವನ್ನೂ ಜೀವವನ್ನೂ ನಗೆಗೀಡು ಮಾಡುತ್ತಿದ್ದಾನೆ. ಶಿಷ್ಟಾಚಾರವಿಲ್ಲದ

ಮರ್ಯಾದೆಯಿಲ್ಲದ ಆ ಮೂಢನು ಸುಹೃದಯರ ಮಾತನ್ನು ನಿರಾದರಿಸಿ ಪಾಪಿ ದುರಾತ್ಮರೊಡನೆ ಸಭೆಯಿಂದ ಹೊರ ಹೋಗಿದ್ದಾನೆ.”

ಪತಿಯ ಮಾತನ್ನು ಕೇಳಿ ಯಶಸ್ವಿನೀ, ರಾಜಪುತ್ರೀ, ಗಾಂಧಾರಿಯು ಮಹಾಶ್ರೇಯಸ್ಕರವಾದುದನ್ನು ಬಯಸಿ ಈ ಮಾತನ್ನಾಡಿದಳು:

“ರಾಜ್ಯವನ್ನಾಳಲು ಬಯಸುವ ಮಗನನ್ನು ಕೂಡಲೇ ಬರಹೇಳಿ! ಏಕೆಂದರೆ ಧರ್ಮಾರ್ಥಗಳನ್ನು ಕಳೆದುಕೊಂಡವನು ರಾಜ್ಯವನ್ನು ಆಳಲು ಶಕ್ಯನಲ್ಲ. ಧೃತರಾಷ್ಟ್ರ! ಈ ವಿಷಯದಲ್ಲಿ ನೀನೇ ಹೆಚ್ಚು ನಿಂದನೆಗೊಳಬೇಕಾದವನು. ಮಗನ ಮೇಲಿನ ಪ್ರೀತಿಯಿಂದ ಅವನು ಪಾಪಿಯೆಂದು ತಿಳಿದೂ ಅವನ ಮನಸ್ಸನ್ನು ಅನುಸರಿಸುತ್ತಾ ಬಂದಿರುವೆ. ಇಂದು ಕಾಮ-ಕ್ರೋಧಗಳಿಂದ ಪ್ರಲಬ್ಧನಾಗಿ ಹುಚ್ಚುಹಿಡಿದಿರುವ ಅವನನ್ನು ಬಲಾತ್ಕಾರವಾಗಿ ನೀನು ಹಿಂದೆ ತರಲು ಅಶಕ್ಯನಾಗಿದ್ದೀಯೆ. ಧೃತರಾಷ್ಟ್ರನು ಈ ರಾಜ್ಯವನ್ನು ಮೂಢ, ಹುಡುಗುಬುದ್ಧಿಯ, ದುರಾತ್ಮ, ದುಷ್ಟರ ಸಹಾಯಪಡೆದಿರುವ, ಲುಬ್ಧನಿಗೆ ಕೊಡುವಂಥಹ ಫಲವನ್ನು ಬೆಳೆಯಿಸಿದ್ದಾನೆ. ಏಕೆಂದರೆ ಯಾವ ಮಹಾಮತಿಯು ತನ್ನವರಲ್ಲಿಯೇ ಉಂಟಾದ ಭೇದವನ್ನು ಕಡೆಗಣಿಸಿಯಾನು? ನೀನೇ ಸ್ವಜನರಲ್ಲಿ ಒಡಕನ್ನು ತಂದರೆ ಶತ್ರುಗಳು

ಸಂತೋಷಪಡುವುಲ್ಲವೇ? ಸಾಮ-ದಾನಗಳಿಂದ ಆಪತ್ತನ್ನು ನಿಲ್ಲಿಸಬಹುದಾದಾಗ ಯಾರು ತಾನೇ ತನ್ನವರನ್ನು ದಂಡದಿಂದ ಹೊಡೆಯುತ್ತಾನೆ?”

ಧೃತರಾಷ್ಟ್ರನ ಶಾಸನದಂತೆ ಮತ್ತು ತಾಯಿಯ ವಚನದಂತೆ ಕ್ಷತ್ತನು ಪುನಃ ಅಮರ್ಷಣ ದುರ್ಯೋಧನನನ್ನು ಪ್ರವೇಶಿಸಿದನು. ತಾಯಿಯು ಏನು ಹೇಳುವಳೆಂದು ನಿರೀಕ್ಷಿಸಿದ್ದ ಅವನು ಕೆಂಪು ಕಣ್ಣುಗಳುಳ್ಳವನಾಗಿ, ಕೋಪದಲ್ಲಿದ್ದ ಹಾವಿನಂತೆ ಭುಸುಗುಟ್ಟುತ್ತಾ ಪುನಃ ಸಭೆಯನ್ನು ಪ್ರವೇಶಿಸಿದನು. ಹಾರಾಡುತ್ತಿದ್ದ ತನ್ನ ಮಗನು ಪ್ರವೇಶಿಸಿದುದನ್ನು ಕಂಡು ಗಾಂಧಾರಿಯು ಬೈಯುತ್ತಾ ಈ ಸಮರ್ಥ ಮಾತುಗಳನ್ನಾಡಿದಳು:

“ಮಗನೇ! ದುರ್ಯೋಧನ! ನಿನ್ನ ಮತ್ತು ನಿನ್ನ ಜೊತೆಯಿರುವವರ ಹಿತಕ್ಕಾಗಿ ಮತ್ತು ಮುಂದೆ ಸುಖವಾಗಲೆಂದು ಹೇಳುವ ನನ್ನ ಈ ಮಾತುಗಳನ್ನು ಅರ್ಥಮಾಡಿಕೋ! ನೀನು ಶಾಂತಿಯನ್ನುಂಟುಮಾಡುವುದರ ಮೂಲಕ ಭೀಷ್ಮನ, ತಂದೆಯ, ನನ್ನ ಮತ್ತು ದ್ರೋಣನೇ ಮೊದಲಾದ ಸುಹೃದಯರಿಗೆ ಗೌರವವನ್ನು ನೀಡುತ್ತೀಯೆ. ಕೇವಲ ಸ್ವ-ಇಚ್ಛೆಯಂತೆ ರಾಜ್ಯವನ್ನು ಪಡೆಯುವುದಕ್ಕಾಗಲೀ, ರಕ್ಷಿಸುವುದಕ್ಕಾಗಲೀ ಅಥವಾ ಭೋಗಿಸುವುದಕ್ಕಾಗಲೀ ಸಾಧ್ಯವಿಲ್ಲ. ಏಕೆಂದರೆ ಇಂದ್ರಿಯಗಳನ್ನು

ವಶದಲ್ಲಿಟ್ಟುಕೊಂಡಿರದವನು ತನ್ನ ರಾಜ್ಯವನ್ನು ಬಹುಕಾಲ ಇಟ್ಟುಕೊಳ್ಳುವುದಿಲ್ಲ. ವಿಜಿತಾತ್ಮ, ಮೇಧಾವಿಯೇ ರಾಜ್ಯವನ್ನು ಚೆನ್ನಾಗಿ ಪಾಲಿಸುತ್ತಾನೆ. ಕಾಮ-ಕ್ರೋಧಗಳು ಪುರುಷನನ್ನು ಅರ್ಥ-ಧರ್ಮಗಳಿಂದ ದೂರ ಎಳೆದೊಯ್ಯುತ್ತವೆ. ಈ ಇಬ್ಬರು ಶತ್ರುಗಳನ್ನು ಸೋಲಿಸಿ ರಾಜನು ಮಹಿಯನ್ನು ಗೆಲ್ಲುತ್ತಾನೆ. ಲೋಕೇಶ್ವರತ್ವವೂ ಪ್ರಭುತ್ವವೂ ಮಹತ್ತರವಾದವುಗಳು. ದುರಾತ್ಮರು ರಾಜ್ಯವನ್ನು ಪಡೆದರೂ ಆ ಸ್ಥಾನವನ್ನು ಬಹುಕಾಲ ರಕ್ಷಿಸಿಕೊಳ್ಳಲು ಶಕ್ಯರಿರುವುದಿಲ್ಲ. ಮಹತ್ತರವಾದುದನ್ನು ಬಯಸುವವನು ಇಂದ್ರಿಯಗಳನ್ನು ಅರ್ಥ-ಧರ್ಮಗಳ ನಿಯಂತ್ರಣದಲ್ಲಿರಿಸಿಕೊಂಡಿರಬೇಕು. ಇಂಧನಗಳನ್ನು ಸುಡುವುದರಿಂದ ಬೆಂಕಿಯು ಹೆಚ್ಚು ಉರಿಯುವಂತೆ ಇಂದ್ರಿಯಗಳನ್ನು ನಿಯಂತ್ರಿಸುವುದರಿಂದ ಬುದ್ಧಿಯು ಬೆಳೆಯುತ್ತದೆ. ಇವುಗಳನ್ನು ಕಟುವಾಗಿ ನಿಯಂತ್ರಿಸದೇ ಇದ್ದರೆ ಇವು ವಿಧೇಯವಲ್ಲದ ಪಳಗಿಸಲ್ಪಡದೇ ಇರುವ ಕುದುರೆಗಳು ದುರ್ಬಲ ಸಾರಥಿಯಿರುವ ರಥವನ್ನು ಹೇಗೋ ಹಾಗೆ ವಿನಾಶದ ದಾರಿಗೆ ಎಳೆದೊಯ್ಯುತ್ತವೆ. ತನ್ನನ್ನು ತಾನು ಗೆಲ್ಲದೇ ಅಮಾತ್ಯರನ್ನು ಗೆಲ್ಲಲು ಬಯಸುವವನು ತನ್ನನ್ನೂ ಅಮಾತ್ಯರನ್ನೂ ಗೆಲ್ಲದೇ ಅವಶನಾಗಿ ನಾಶಹೊಂದುತ್ತಾನೆ. ಆದರೆ ಯಾರು ದೇಶರೂಪದಲ್ಲಿರುವ ಆತ್ಮವನ್ನೇ ಮೊದಲು ಗೆಲ್ಲುತ್ತಾರೋ ಅವರು ಅಮಾತ್ಯರು

ಮತ್ತು ಮಿತ್ರರನ್ನು ಪಡೆಯುವುದರಲ್ಲಿ ಸೋಲುವುದಿಲ್ಲ. ಇಂದ್ರಿಯಗಳನ್ನು ವಶದಲ್ಲಿಟ್ಟುಕೊಂಡಿರುವವನನ್ನು, ಅಮಾತ್ಯರನ್ನು ಗೆದ್ದಿರುವುವವನನ್ನು, ಉಲ್ಲಂಘಿಸುವವರನ್ನು ಧೃಢವಾಗಿ ಶಿಕ್ಷಿಸುವವರನ್ನು, ಪರಿಶೀಲಿಸಿ ಕೆಲಸಮಾಡುವವರನ್ನು, ಮತ್ತು ಧೀರರನ್ನು ಶ್ರೀಯು ಅತ್ಯಂತವಾಗಿ ಸೇವಿಸುತ್ತಾಳೆ. ರಂಧ್ರಗಳು ಮುಚ್ಚಲ್ಪಟ್ಟ ಜಾಲದಲ್ಲಿ ಸಿಲುಕಿದ ಎರಡು ಮೀನುಗಳಂತೆ ಪ್ರಜ್ಞಾನಿಯ ಶರೀರದಲ್ಲಿರುವ ಕಾಮ ಕ್ರೋಧಗಳು ಶಕ್ತಿಯನ್ನು ಕಳೆದುಕೊಳ್ಳುತ್ತವೆ. ಕಾಮ, ಕ್ರೋಧ, ಲೋಭ, ದಂಭ ಮತ್ತು ದರ್ಪಗಳನ್ನು ಗೆಲ್ಲಲು ಚೆನ್ನಾಗಿ ತಿಳಿದಿರುವ ಭೂಮಿಪನು ಇಡೀ ಮಹಿಯನ್ನು ಆಳುತ್ತಾನೆ. ಇಂದ್ರಿಯ ನಿಗ್ರಹದಲ್ಲಿ ಸತತವೂ ನಿರತನಾಗಿರುವ ನೃಪನು ಅರ್ಥ-ಧರ್ಮಗಳನ್ನು ಪಡೆದು ಶತ್ರುಗಳನ್ನು ಸೋಲಿಸುತ್ತಾನೆ. ಕಾಮ ಕ್ರೋಧಗಳಿಂದ ತುಂಬಿ ಯಾರು ತನ್ನವರೊಡನೆ ಅಥವಾ ಇತರರೊಡನೆ ಸುಳ್ಳಾಗಿ ನಡೆದುಕೊಳ್ಳುತ್ತಾನೋ ಅವನಿಗೆ ಸಹಾಯಕರೇ ಇರುವುದಿಲ್ಲ.

ಮಗನೇ! ಒಂದಾಗಿರುವ, ಮಹಾಪ್ರಾಜ್ಞ, ಶೂರ, ಅರಿಗಳನ್ನು ಸದೆಬಡಿಯುವ ಪಾಂಡವರೊಡನೆ ನೀನು ಭೂಮಿಯನ್ನು ಸುಖವಾಗಿ ಭೋಗಿಸಬಲ್ಲೆ. ಭೀಷ್ಮ ಶಾಂತನವ ಮತ್ತು ಮಹಾರಥಿ ದ್ರೋಣನೂ ಕೂಡ ಹೇಳಿದಂತೆ ಕೃಷ್ಣ-

ಪಾಂಡವರು ಅಜೇಯರು. ಈ ಅಕ್ಲಿಷ್ಟಕಾರಿಣಿ, ಮಹಾಬಾಹು ಕೃಷ್ಣನ ಶರಣು ಹೋಗು. ಕೇಶವನು ಪ್ರಸನ್ನನಾದರೆ ಎರಡೂ ಪಕ್ಷಗಳಿಗೂ ಸುಖವಾಗುತ್ತದೆ. ಅರ್ಥವನ್ನು ಬಯಸುವ ಯಾವ ನರನು ಸುಹೃದಯಿಗಳ, ಪ್ರಾಜ್ಞರ ಮತ್ತು ವಿದ್ಯಾವಂತರ ಮಾತಿನಂತೆ ನಡೆಯುವುದಿಲ್ಲವೋ ಅವನು ಶತ್ರುಗಳಿಗೆ ಆನಂದವನ್ನು ನೀಡುತ್ತಾನೆ. ಯುದ್ಧದಲ್ಲಿ ಕಲ್ಯಾಣವಿಲ್ಲ, ಧರ್ಮಾರ್ಥಗಳಿಲ್ಲ. ಸುಖವು ಎಲ್ಲಿಂದ? ಯಾವಾಗಲೂ ವಿಜಯವೂ ನಿಶ್ಚಿತವಾದುದಲ್ಲ. ಆದುದರಿಂದ ಯುದ್ಧದ ಕುರಿತು ಯೋಚಿಸಬೇಡ. ಒಡಕಿನ ಭಯದಿಂದ ಬೀಷ್ಮ, ಮಹಾಪ್ರಾಜ್ಞನಾದ ನಿನ್ನ ತಂದೆ ಮತ್ತು ಬಾಹ್ಲೀಕರು ಪಾಂಡುಪುತ್ರರಿಗೆ ಕೊಟ್ಟಿದ್ದರು. ಈಗ ನಿನ್ನಲ್ಲಿರುವುದು, ನೀನು ನೋಡಿರುವುದು ಆ ಶಾಂತಿಯ ಫಲ. ಆ ಶೂರರು ಕಂಟಕರನ್ನೆಲ್ಲ ನಾಶಗೊಳಿಸಿರುವ ಈ ಭೂಮಿಯನ್ನು ನೀನು ಭೋಗಿಸುತ್ತಿದ್ದೀಯೆ. ಯಥೋಚಿತವಾಗಿರುವುದನ್ನು ಪಾಂಡುಪುತ್ರರಿಗೆ ಕೊಟ್ಟುಬಿಡು. ಇಷ್ಟಪಟ್ಟರೆ ಅಮಾತ್ಯರೊಂದಿಗೆ ಅರ್ಧ ಭೂಮಿಯನ್ನು ಭೋಗಿಸು. ನಿನ್ನ ಅಮಾತ್ಯರೊಂದಿಗೆ ಜೀವನ ಮಾಡಲು ಅರ್ಧ ಭೂಮಿಯು ಸಾಕು. ಸುಹೃದರ ಮಾತಿನಂತೆ ನಡೆದುಕೊಂಡರೆ ಯಶಸ್ಸನ್ನು ಪಡೆಯುತ್ತೀಯೆ. ಶ್ರೀಮಂತರಾಗಿರುವ, ಆತ್ಮವನ್ನು ನಿಯಂತ್ರಿಸಿಕೊಂಡಿರುವ, ಬುದ್ಧಿವಂತರಾದ,

ಜಿತೇಂದ್ರಿಯರಾದ ಪಾಂಡವರೊಂದಿಗೆ ಜಗಳವಾಡಿ ನೀನು ಮಹಾ ಸುಖದಿಂದ ವಂಚಿತನಾಗುತ್ತೀಯೆ. ಸುಹೃದಯರ ಕೋಪವನ್ನು ತಡೆದು ಯಥೋಚಿತವಾಗಿ ಪಾಂಡುಪುತ್ರರಿಗೆ ಅವರ ಭಾಗವನ್ನು ಕೊಟ್ಟು ರಾಜ್ಯವನ್ನು ಆಳು. ಅವರನ್ನು ಈ ಹದಿಮೂರು ವರ್ಷಗಳು ಕಾಡಿದ್ದುದು ಸಾಕು! ಕಾಮಕ್ರೋಧಗಳಿಂದ ಉರಿಯುವುದನ್ನು ಶಮನಗೊಳಿಸು. ಯಾರ ಸಂಪತ್ತನ್ನು ನಿನ್ನದಾಗಿರಿಸಿಕೊಂಡಿರುವೆಯೋ ಆ ಪಾರ್ಥರನ್ನು ಎದುರಿಸಲು ನೀನಾಗಲೀ, ಕ್ರುದ್ಧನಾದ ಸೂತಪುತ್ರನಾಗಲೀ, ನಿನ್ನ ತಮ್ಮ ದುಃಶಾಸನನಾಗಲೀ ಶಕ್ತರಿಲ್ಲ. ಭೀಷ್ಮ, ದ್ರೋಣ, ಕೃಪ, ಕರ್ಣ, ಭೀಮಸೇನ, ಧನಂಜಯ ಮತ್ತು ಧೃಷ್ಟದ್ಯುಮ್ನರು ಕುಪಿತರಾದರೆ ಎಲ್ಲ ಪ್ರಜೆಗಳೂ ಇಲ್ಲವಾಗುವುದು ಖಂಡಿತ. ಕ್ರೋಧದ ವಶದಲ್ಲಿ ಬಂದು ಕುರುಗಳನ್ನು ಕೊಲ್ಲಿಸಬೇಡ. ನಿನ್ನಿಂದಾಗಿ ಪಾಂಡವರು ಭೂಮಿಯಲ್ಲಿರುವ ಎಲ್ಲರನ್ನೂ ವಧಿಸದಿರಲಿ.

ಮೂಢ! ಭೀಷ್ಮ, ದ್ರೋಣ, ಕೃಪ ಮೊದಲಾದವರು ಸರ್ವ ಶಕ್ತಿಯನ್ನೂ ಉಪಯೋಗಿಸಿ ನಿನ್ನ ಪರವಾಗಿ ಹೋರಾಡುತ್ತಾರೆ ಎಂದು ನೀನು ತಿಳಿದುಕೊಂಡಿದ್ದೀಯೆ. ಆದರೆ ಅದು ಹಾಗೆ ಆಗುವುದಿಲ್ಲ. ಏಕೆಂದರೆ ವಿಜಿತಾತ್ಮರಾದ ಇವರಿಗೆ ನಿನ್ನ ಮೇಲೆ ಮತ್ತು ಪಾಂಡವರ ಮೇಲೆ ಇರುವ ಪ್ರೀತಿಯು ಸಮನಾದುದು. ಒಂದುವೇಳೆ ಇವರು ರಾಜಪಿಂಡದ

ಭಯದಿಂದ ಜೀವನವನ್ನು ಮುಡುಪಾಗಿಟ್ಟರೂ ಅವರು ರಾಜ ಯುಧಿಷ್ಠಿರನ ಮುಖವನ್ನು ನೇರವಾಗಿ ನೋಡಲಾರರು. ಲೋಭದಿಂದ ಸಂಪತ್ತನ್ನು ಗಳಿಸುವ ನರರು ಇಲ್ಲಿ ಕಂಡುಬರುವುದಿಲ್ಲ. ಆದುದರಿಂದ ಲೋಭವನ್ನು ತಡೆದು ಶಾಂತನಾಗು.””

## ದುರ್ಯೋಧನನು ಶ್ರೀಕೃಷ್ಣನನ್ನು ಬಂಧಿಸಲು ಪ್ರಯತ್ನಿಸಿದುದು

ತಾಯಿಯು ಹೇಳಿದ ಅರ್ಥವತ್ತಾದ ಮಾತುಗಳನ್ನು ಅನಾದರಿಸಿ ಪುನಃ ಸಿಟ್ಟಿನಿಂದ ಅವನು ಹೊರಟು ಅಕೃತಾತ್ಮರ ಬಳಿ ಹೋದನು. ಆಗ ಸಭೆಯಿಂದ ನಿರ್ಗಮಿಸಿ ಕೌರವನು ಜೂಜುಕೋರ ರಾಜ ಸೌಬಲ ಶಕುನಿಯೊಡನೆ ಮಂತ್ರಾಲೋಚನೆ ಮಾಡಿದನು. ದುರ್ಯೋಧನ, ಕರ್ಣ, ಸೌಬಲ ಶಕುನಿ ಮತ್ತು ದುಃಶಾಸನ ಈ ನಾಲ್ವರ ನಡುವೆ ಈ ಚರ್ಚೆಯಾಯಿತು:

“ಕ್ಷಿಪ್ರಕಾರೀ ಜನಾರ್ದನನು ರಾಜ ಧೃತರಾಷ್ಟ್ರ ಮತ್ತು ಶಾಂತನವನ ಸಹಾಯದಿಂದ ನಮ್ಮನ್ನು ಸೆರೆಹಿಡಿಯುವ ಮೊದಲು ನಾವೇ ಇಂದ್ರನು ವೈರೋಚನಿಯನ್ನು ಹೇಗೋ ಹಾಗೆ ಬಲವನ್ನುಪಯೋಗಿಸಿ ಸೋಲಿಸಿ ಹೃಷೀಕೇಶನನ್ನು ಬಂಧಿಸೋಣ! ವಾರ್ಷ್ಣೇಯನು ಬಂಧಿಯಾದುದನ್ನು ಕೇಳಿ ಹತಚೇತಸರಾದ ಪಾಂಡವರು ಹಲ್ಲು ಮುರಿದ ಹಾವಿನಂತೆ

> ನಿರುತ್ಸಾಹಿಗಳಾಗುತ್ತಾರೆ. ಏಕೆಂದರೆ ಈ ಮಹಾಬಾಹುವು ಅವರೆಲ್ಲರಿಗೆ ನೆರಳು ಮತ್ತು ರಕ್ಷೆ. ಸರ್ವಸಾತ್ವತರ ವರದ ಈ ಋಷಭನನ್ನು ಸೆರೆಹಿಡಿದರೆ ಸೋಮಕರೊಂದಿಗೆ ಪಾಂಡವರು ನಿರುದ್ಯಮರಾಗುತ್ತಾರೆ. ಆದುದರಿಂದ ಈ ಕ್ಷಿಪ್ರಕಾರಿಣೀ ಕೇಶವನನ್ನು ನಾವೇ, ಧೃತರಾಷ್ಟ್ರನು ಕೂಗಾಡಿದರೂ, ಬಂಧಿಸಿಟ್ಟು, ಶತ್ರುಗಳ ಮೇಲೆ ಆಕ್ರಮಣ ಮಾಡೋಣ!"

ಆ ಪಾಪಿ ದುಷ್ಟಚೇತಸರ ಅಭಿಪ್ರಾಯವನ್ನು, ಸನ್ನೆಗಳನ್ನು ಅರ್ಥಮಾಡಿಕೊಳ್ಳುವ ಕವಿ ಸಾತ್ಯಕಿಯು ಕೂಡಲೇ ತಿಳಿದುಕೊಂಡನು. ಅದಕ್ಕಾಗಿ ಹೊರಬಂದು ಹತ್ತಿರದಲ್ಲಿ ನಿಂತಿದ್ದ ಹಾರ್ದಿಕ್ಯ ಕೃತವರ್ಮನಿಗೆ ಹೇಳಿದನು:

> "ಬೇಗನೇ ಸೇನೆಯನ್ನು ಸಿದ್ಧಗೊಳಿಸು! ನಾನು ಅಕ್ಲಿಷ್ಟಕರ್ಮಿಗೆ ಹೇಳುವುದರೊಳಗೆ ನೀನು ಸನ್ನದ್ಧ ಸೇನೆಯನ್ನು ಸಭಾದ್ವಾರದಲ್ಲಿ ತಂದು ನಿಲ್ಲಿಸು."

ಸಿಂಹವು ಗಿರಿಗುಹೆಯನ್ನು ಪ್ರವೇಶಿಸುವಂತೆ ಆ ವೀರನು ಸಭೆಯನ್ನು ಪ್ರವೇಶಿಸಿ ಅವರ ಅಭಿಪ್ರಾಯವನ್ನು ಮಹಾತ್ಮ ಕೇಶವನಿಗೆ ಹೇಳಿದನು. ಧೃತರಾಷ್ಟ್ರ ವಿದುರರಿಗೂ ಇದನ್ನು ಹೇಳಿದನು. ಅವರ ಉಪಾಯದ ಕುರಿತು ಹೇಳಿ ನಸುನಗುತ್ತಾ ಹೇಳಿದನು:

> "ಈ ಮೂಢರು ಇಲ್ಲಿ ಸಾಧುಗಳು ನಿಷೇಧಿಸುವ, ಧರ್ಮ-ಅರ್ಥ-ಕಾಮಗಳಿಗೆ ಸಲ್ಲದ ಕೆಲಸವನ್ನು ಮಾಡಲು

ಬಯಸುತ್ತಿದ್ದಾರೆ. ಆದರೆ ಅವರು ಅದನ್ನು ಎಂದೂ ಸಾಧಿಸರಾರರು. ಈ ಮೂಢ ಪಾಪಾತ್ಮರು ಒಂದಾಗಿ ಕ್ರೋಧಲೋಭವಶಾನುಗರಾಗಿ, ಕಾಮ ಮತ್ತು ಸಿಟ್ಟಿನಿಂದ ಧರ್ಷಿತರಾಗಿ ಮಾಡಬಾರದುದನ್ನು ಮಾಡಲು ಹೊರಟಿದ್ದಾರೆ. ಈ ಅಲ್ಪಚೇತಸರು ಉತ್ತರೀಯದಲ್ಲಿ ಉರಿಯುತ್ತಿರುವ ಬೆಂಕಿಯನ್ನು ಹಿಡಿದಿಟ್ಟುಕೊಳ್ಳಲು ಪ್ರಯತ್ನಿಸುವ ಬಾಲಕರಂತೆ ಈ ಪುಂಡರೀಕಾಕ್ಷನನ್ನು ಸೆರೆಹಿಡಿಯಲು ಹೊರಟಿದ್ದಾರೆ.”

ಸಾತ್ಯಕಿಯ ಆ ಮಾತನ್ನು ಕೇಳಿ ದೀರ್ಘದರ್ಶಿ ವಿದುರನು ಕುರುಸಂಸದಿಯಲ್ಲಿ ಮಹಾಬಾಹು ಧೃತರಾಷ್ಟ್ರನಿಗೆ ಹೇಳಿದನು.

“ರಾಜನ್! ನಿನ್ನ ಮಕ್ಕಳೆಲ್ಲರಿಗೂ ಕೊನೆಯ ಗಳಿಗೆಯು ಬಂದುಬಿಟ್ಟಿದೆ! ಅಶಕ್ಯರಾಗಿದ್ದರೂ ಅಯಶಸ್ಸನ್ನು ತರುವ ಕೆಲಸವನ್ನು ಮಾಡಲು ಉದ್ಯುಕ್ತರಾಗಿದ್ದಾರೆ. ಎಲ್ಲರೂ ಒಂದಾಗಿ ಈ ವಾಸವನ ಅನುಜ ಪುಂಡರೀಕಾಕ್ಷನ ಮೇಲೆ ಅಕ್ರಮಣ ಮಾಡಿ ಸೆರೆಹಿಡಿಯಲು ಬಯಸುತ್ತಿದ್ದಾರಲ್ಲ! ಬೆಂಕಿಯ ಬಳಿ ಹೋಗಲು ಪತಂಗಗಳಿಗೆ ಹೇಗೆ ಅಸಾಧ್ಯವೋ ಹಾಗೆ ಈ ಪುರುಷ ಶಾರ್ದೂಲ, ಅಪ್ರಧೃಷ್ಯ, ದುರಾಸದನ ಬಳಿಹೋಗಲೂ ಅವರಿಗೆ ಸಾದ್ಯವಿಲ್ಲ. ಜನಾರ್ದನನು ಬಯಸಿದರೆ ಪ್ರಯತ್ನಿಸುತ್ತಿರುವ ಇವರೆಲ್ಲರನ್ನೂ ಕೃದ್ಧ

ಸಿಂಹವು ಮೃಗಗಳನ್ನು ಹೇಗೋ ಹಾಗೆ ಯಮಸಾದನಕ್ಕೆ ಕಳುಹಿಸುತ್ತಾನೆ. ಆದರೆ ಕೃಷ್ಣನು ಈ ನಿಂದನೀಯ ಕೆಸಲವನ್ನು ಎಂದೂ ಮಾಡುವುದಿಲ್ಲ. ಈ ಅಚ್ಯುತ ಪುರುಷೋತ್ತಮನು ಧರ್ಮವನ್ನು ದಾಟುವವನಲ್ಲ."

ವಿದುರನು ಹೀಗೆ ಹೇಳಲು ಕೇಶವನು ಧೃತರಾಷ್ಟ್ರನನ್ನು ನೋಡಿ, ಸುಹೃದಯರು ಕೇಳುವಂತೆ ಈ ಮಾತುಗಳನ್ನಾಡಿದನು:

"ರಾಜನ್! ಇವರು ತಮ್ಮ ಬಲವನ್ನುಪಯೋಗಿಸಿ ನನ್ನ ಸೆರೆಹಿಡಿಯ ಬಯಸಿದರೆ ಅವರಿಗೆ ಅದನ್ನು ಮಾಡುವುದಕ್ಕೆ ಬಿಡು. ಅವರನ್ನು ನಾನು ಏನು ಮಾಡಬೇಕೆಂದು ನನಗೆ ತಿಳಿದಿದೆ. ಇವರೆಲ್ಲರೂ ಸಿಟ್ಟಾಗಿ ಮಹಾ ಉತ್ಸಾಹದಿಂದ ಆಕ್ರಮಣ ಮಾಡಲು ಬಂದರೂ ನಾನು ನಿಂದನೀಯವಾದ ಪಾಪ ಕರ್ಮವನ್ನು ಎಂದೂ ಮಾಡುವುದಿಲ್ಲ. ಪಾಂಡವರದ್ದನ್ನು ಹಿಡಿದಿಟ್ಟುಕೊಂಡು ನಿನ್ನ ಮಕ್ಕಳು ತಮ್ಮದ್ದನ್ನೂ ಕಳೆದುಕೊಳ್ಳುತ್ತಾರೆ. ಆದರೆ ಇದನ್ನೇ ಮಾಡಲು ಅವರು ಇಚ್ಛಿಸಿದರೆ, ಯುಧಿಷ್ಠಿರನ ಕೆಲಸವು ಮುಗಿದಂತೆ. ಏಕೆಂದರೆ ಇಂದೇ ನಾನು ಇವರನ್ನು ಮತ್ತು ಇವರನ್ನು ಅನುಸರಿಸಿ ಬರುವವರನ್ನು ಹಿಡಿದು ಪಾರ್ಥರಿಗೆ ಕೊಡಬಹುದು. ನನಗೆ ಯಾವುದು ಅಸಾಧ್ಯವಾದುದು? ಆದರೆ ನಿನ್ನ ಸನ್ನಿಧಿಯಲ್ಲಿ ಕೋಪ ಮತ್ತು ಪಾಪಬುದ್ಧಿಯಲ್ಲಿ

ಹುಟ್ಟುವ ಈ ನಿಂದನೀಯ ಕೆಲಸವನ್ನು ಮಾಡುವುದಿಲ್ಲ. ಈ ದುರ್ಯೋಧನನನಿಗೆ ಮತ್ತು ಇತರ ಎಲ್ಲರಿಗೂ ಏನು ಮಾಡಬೇಕೆಂದು ಬಯಸಿರುವರೋ ಅದನ್ನು ಮಾಡಲು ಒಪ್ಪಿಗೆಯನ್ನು ಕೊಡುತ್ತೇನೆ.”

ಇದನ್ನು ಕೇಳಿ ಧೃತರಾಷ್ಟ್ರನು ವಿದುರನಿಗೆ ಹೇಳಿದನು:

“ಆ ಪಾಪಿ, ರಾಜ್ಯಲುಬ್ಧ ಸುಯೋಧನನನ್ನು ಅವನ ಮಿತ್ರರು, ಅಮಾತ್ಯರು, ಸೋದರರು ಮತ್ತು ಅನುಯಾಯಿಗಳೊಂದಿಗೆ ಬೇಗನೆ ಕರೆದುಕೊಂಡು ಬಾ! ಅವರನ್ನು ದಾರಿಗೆ ತರಲು ಮತ್ತೊಮ್ಮೆ ಪ್ರಯತ್ನಿಸೋಣ.”

ಆಗ ಕ್ಷತ್ತನು ಬೇಡವಂತಿದ್ದ, ರಾಜರಿಂದ ಸುತ್ತುವರೆಯಲ್ಪಟ್ಟಿದ್ದ ದುರ್ಯೋಧನನನ್ನು ಅವನ ಸಹೋದರರೊಂದಿಗೆ ಸಭೆಗೆ ಪ್ರವೇಶಗೊಳಿಸಿದನು. ಆಗ ರಾಜಾ ಧೃತರಾಷ್ಟ್ರನು ಕರ್ಣ-ದುಃಶಾಸನರೊಡನಿದ್ದ, ರಾಜರಿಂದ ಸುತ್ತುವರೆಯಲ್ಪಟ್ಟಿದ್ದ ದುರ್ಯೋಧನನಿಗೆ ಹೇಳಿದನು:

“ಕ್ರೂರಿ! ಪಾಪಭೂಯಿಷ್ಠ! ಕ್ಷುದ್ರಕರ್ಮಿಗಳ ಸಹಾಯದಿಂದ, ಪಾಪಿಗಳೊಂದಿಗೆ ಪಾಪ ಕರ್ಮವನ್ನೆಸಗಲು ಬಯಸುತ್ತಿದ್ದೀಯೆ! ಕುಲಪಾಂಸನ! ಅಶಕ್ಯವಾದರೂ ಅಯಶಸ್ಸನ್ನು ತರುವ, ಸಾಧುಗಳು ನಿಂದಿಸುವ, ಮೂಢನಾದ ನೀನೊಬ್ಬನೇ ಮಾಡಬಹುದಾದ ಕೆಲಸವನ್ನು ಮಾಡಲು

ಹೊರಟಿರುವೆ. ಅಪ್ರಧೃಷ್ಯನಾದ, ದುರಾಸದನಾದ ಈ ಪುಂಡರೀಕಾಕ್ಷನನ್ನು ನೀನು ಪಾಪಿಗಳ ಸಹಾಯದಿಂದ ನಿರ್ಬಲನನ್ನಾಗಿಸಿ ಸೆರೆಹಿಡಿಯಲು ಬಯಸುತ್ತೀಯಲ್ಲಾ! ಮಂದ! ಬಾಲಕನು ಚಂದ್ರನನ್ನು ಬಯಸುವಂತೆ ವಾಸವನೊಂದಿಗೆ ದೇವತೆಗಳೂ ಬಲಾತ್ಕರಿಸಲು ಶಕ್ಯನಲ್ಲದ ಇವನನ್ನು ಹಿಡಿಯಲು ನೀನು ಬಯಸುತ್ತಿದ್ದೀಯೆ. ಕೇಶವನನ್ನು ಸಮರದಲ್ಲಿ ದೇವ-ಮನುಷ್ಯ-ಗಂಧರ್ವ-ಸುರ-ಉರುಗರೂ ಕೂಡ ಸೋಲಿಸಲಾರರು ಎಂದು ನಿನಗೆ ತಿಳಿದಿಲ್ಲವೇ? ಕೈಯಲ್ಲಿ ಹಿಡಿದಿಟ್ಟುಕೊಳ್ಳಲಾರದ ಗಾಳಿಯಂತೆ, ಕೈಯಿಂದ ಮುಟ್ಟಲಾಗದ ಶಶಿಯಂತೆ, ತಲೆಯಲ್ಲಿ ಹೊರಲಿಕ್ಕಾಗದ ಭೂಮಿಯಂತೆ ಕೇಶವನನ್ನು ಬಲವನ್ನುಪಯೋಗಿಸಿ ಹಿಡಿಯಲಿಕ್ಕಾಗುವುದಿಲ್ಲ!"

ಧೃತರಾಷ್ಟ್ರನು ಹೀಗೆ ಹೇಳಲು ಕ್ಷತ್ತ ವಿದುರನೂ ಕೂಡ ಅಮರ್ಷಣ ಧಾರ್ತರಾಷ್ಟ್ರ ದುರ್ಯೋಧನನನ್ನು ನೋಡಿ ಹೇಳಿದನು:

"ಸೌಭದ್ವಾರದಲ್ಲಿ ದ್ವಿವಿದ ಎಂಬ ಹೆಸರಿನ ವಾನರೇಂದ್ರನು ಅತಿ ದೊಡ್ಡ ಶಿಲಾವರ್ಷದಿಂದ ಕೇಶವನನ್ನು ಮುಚ್ಚಿದನು. ಮಾಧವನನ್ನು ಹಿಡಿಯಲು ಬಯಸಿ ವಿಕ್ರಮದಿಂದ ಸರ್ವಯತ್ನಗಳನ್ನು ಮಾಡಿದರೂ ಹಿಡಿಯಲು ಆಗಲಿಲ್ಲ. ಅಂಥವನನ್ನು ಬಲವನ್ನುಪಯೋಗಿಸಿ ಹಿಡಿಯಲು

ಬಯಸುತ್ತಿರುವೆ. ನಿರ್ಮೋಚನದಲ್ಲಿ ಮಹಾಸುರರು ಆರುಸಾವಿರ ಪಾಶಗಳಿಂದಲೂ ಹಿಡಿಯಲು ಅಸಮರ್ಥರಾದ ಇವನನ್ನು ಬಲವನ್ನುಪಯೋಗಿಸಿ ಹಿಡಿಯಲು ಬಯಸುತ್ತಿರುವೆ. ಪ್ರಾಗ್ಜ್ಯೋತಿಷಕ್ಕೆ ಹೋಗಿದ್ದ ಶೌರಿಯನ್ನು ದಾನವರ ಸಹಿತ ನರಕನು ಹಿಡಿಯಲು ಅಸಮರ್ಥನಾದ. ಇವನನ್ನು ನೀನು ಬಲವನ್ನುಪಯೋಗಿಸಿ ಹಿಡಿಯಲು ಬಯಸುತ್ತಿರುವೆ. ಇವನು ಬಾಲ್ಯದಲ್ಲಿಯೇ ಶಿಶುವಾಗಿದ್ದಾಗ ಪೂತನಿಯನ್ನು ಕೊಂದನು ಮತ್ತು ಗೋವುಗಳನ್ನು ರಕ್ಷಿಸಲು ಗೋವರ್ಧನವನ್ನು ಎತ್ತಿ ಹಿಡಿದನು. ಇವನು ಅರಿಷ್ಟ, ಧೇನುಕ, ಮಹಾಬಲ ಚಾಣೂರ, ಅಶ್ವರಾಜ ಮತ್ತು ದುರಾಚಾರಿ ಕಂಸನನ್ನು ಕೊಂದಿರುವನು. ಇವನು ಜರಾಸಂಧ, ವಕ್ರ, ವೀರ್ಯವಾನ್ ಶಿಶುಪಾಲ ಮತ್ತು ಬಾಣರನ್ನು ಸಂಹರಿಸಿದ್ದಾನೆ. ಸಮರದಲ್ಲಿ ರಾಜರನ್ನು ಸದೆಬಡಿದಿದ್ದಾನೆ. ಇವನು ರಾಜಾ ವರುಣ ಮತ್ತು ಅಮಿತೌಜಸ ಪಾವಕನನ್ನು ಸೋಲಿಸಿದ್ದಾನೆ. ಸಾಕ್ಷಾತ್ ಶಚೀಪತಿಯನ್ನು ಗೆದ್ದು ಪಾರಿಜಾತವನ್ನು ಅಪಹರಿಸಿದನು. ಏಕಾರ್ಣವದಲ್ಲಿ ಮಲಗಿರುವಾಗ ಇವನು ಮಧು-ಕೈಟಭರನ್ನು ಸಂಹರಿಸಿದನು. ಇನ್ನೊಂದು ಜನ್ಮದಲ್ಲಿ ಹಯಗ್ರೀವನನ್ನು ಕೊಂದನು. ಇವನು ಕರ್ತ. ಇವನನ್ನು ಯಾರೂ ಮಾಡಿಲ್ಲ. ಇವನು ಪೌರುಷಗಳ ಕಾರಣ. ಯಾವುದನ್ನು ಬಯಸುತ್ತಾನೋ ಅದನ್ನು ಶೌರಿಯು ನಿರಾಯಾಸವಾಗಿ ಮಾಡುತ್ತಾನೆ. ಇಲ್ಲ!

ನಿನಗೆ ಈ ಗೋವಿಂದ, ಘೋರವಿಕ್ರಮಿ, ಅಚ್ಯುತ, ಕೃದ್ಧನಾದರೆ ಘೋರವಿಷದಂತಿರುವ, ತೇಜೋರಾಶಿ, ಅನಿರ್ಜಿತನು ಗೊತ್ತಿಲ್ಲ! ಅಗ್ನಿಯ ಬಳಿಸಾರುವ ಪತಂಗಗಳಂತೆ ಈ ಅಕ್ಲಿಷ್ಟಕರ್ಮಿ, ಮಹಾಬಾಹು ಕೃಷ್ಣನ ಮೇಲೆರಗಿ ನೀನು ಮತ್ತು ಅಮಾತ್ಯರು ಇಲ್ಲವಾಗುತ್ತೀರಿ!"

## ಕುರುಸಭೆಯಲ್ಲಿ ಶ್ರೀಕೃಷ್ಣನ ವಿಶ್ವರೂಪ ದರ್ಶನ

ವಿದುರನು ಹೀಗೆ ಹೇಳಲು ಶತ್ರುಪೂಗಹ ವೀರ್ಯವಾನ್ ಕೇಶವನು ಧಾರ್ತರಾಷ್ಟ್ರ ದುರ್ಯೋಧನನಿಗೆ ಹೇಳಿದನು.

"ಸುಯೋಧನ! ಮೋಹದಿಂದ ನೀನು ನಾನು ಒಬ್ಬನೇ ಎಂದು ತಿಳಿದುಕೊಂಡಿದ್ದೀಯೆ. ಆದುದರಿಂದ ದುರ್ಬುದ್ಧೇ! ನನ್ನನ್ನು ಬಲವನ್ನುಪಯೋಗಿಸಿ ಸೆರೆಹಿಡಿಯಲು ಬಯಸುತ್ತಿರುವೆ. ಇಲ್ಲಿಯೇ ಪಾಂಡವರೂ, ಹಾಗೆಯೇ ಎಲ್ಲ ಅಂಧಕ-ವೃಷ್ಣಿಯರೂ ಇದ್ದಾರೆ. ಇಲ್ಲಿಯೇ ಆದಿತ್ಯರೂ, ರುದ್ರರು, ವಸುಗಳೂ, ಮಹರ್ಷಿಗಳೂ ಇದ್ದಾರೆ!"

ಹೀಗೆ ಹೇಳಿ ಪರವೀರಹ ಕೇಶವನು ಜೋರಾಗಿ ನಕ್ಕನು. ಆ ಮಹಾತ್ಮ ಶೌರಿಯು ನಗುತ್ತಿದ್ದಂತೆ ಅವನಿಂದ ಬೆಂಕಿಯಂತೆ ಪ್ರಕಾಶಮಾನರಾದ ಅಂಗುಷ್ಠ ಮಾತ್ರದ ತ್ರಿದಶರು ಹೊರಹೊಮ್ಮಿದರು. ಅವನ ಹಣೆಯಲ್ಲಿ ಬ್ರಹ್ಮನಿದ್ದನು. ಎದೆಯಲ್ಲಿ ರುದ್ರನು ಕಾಣಿಸಿಕೊಂಡನು. ಭುಜದಿಂದ ಲೋಕಪಾಲಕರು ಮತ್ತು ಮುಖದಿಂದ ಅಗ್ನಿಯು ಹೊರಬಂದರು.



ಆದಿತ್ಯರು, ಸಾಧ್ಯರು, ವಸವರು, ಅಶ್ವಿನಿಯರು, ಮರುತರು, ಇಂದ್ರನೊಂದಿಗೆ ವಿಶ್ವೇದೇವರು, ಮತ್ತು ಯಕ್ಷ ಗಂಧರ್ವ ರಾಕ್ಷಸರ ರೂಪಗಳು ಕಂಡುಬಂದವು. ಅವನ ಎರಡು ತೋಳುಗಳಿಂದ ಸಂಕರ್ಷಣ-ಧನಂಜಯರು ಹೊರಬಂದರು. ಧನ್ವೀ ಅರ್ಜುನನು ಎಡಗಡೆಯಿಂದ ಮತ್ತು ಹಲಾಯುಧವನ್ನು ಹಿಡಿದ ರಾಮನು ಬಲಗಡೆಯಿಂದ. ಭೀಮ, ಯುಧಿಷ್ಠಿರ, ಮತ್ತು ಮಾದ್ರೀಪುತ್ರರಿಬ್ಬರು ಅವನ ಬೆನ್ನಿನಿಂದ ಮತ್ತು ಪ್ರದ್ಯುಮ್ನನೇ ಮೊದಲಾದ ಅಂಧಕ ವೃಷ್ಣಿಯರು ಮುಖದಿಂದ ಹೊರಬಂದು ಮಹಾಯುಧಗಳನ್ನು ಹಿಡಿದು ಕೃಷ್ಣನ ಎದಿರು ಬಂದರು. ಶಂಖ, ಚಕ್ರ, ಗದೆ, ಶಕ್ತಿ, ಶಾಂಙ್ರ್ಯ, ಲಾಂಗಲ ಮತ್ತು ನಂದಕಗಳು ತೋರಿಸಿಕೊಂಡವು. ಇನ್ನೂ ಇತರ ಸರ್ವ ಆಯುಧಗಳು ಕೃಷ್ಣನ ಎಲ್ಲ ನಾನಾ ಬಾಹುಗಳಲ್ಲಿ ಬೆಳಗುತ್ತಿದ್ದವು. ಅವನ ಎರಡೂ ಕಣ್ಣುಗಳಿಂದ, ಮೂಗಿನಿಂದ ಮತ್ತು ಎರಡು ಕಿವಿಗಳಿಂದ ಸುತ್ತಲೂ ಮಹಾರೌದ್ರವಾದ ಹೊಗೆಯಿಂದ ಕೂಡಿದ ಬೆಂಕಿಯು ಪ್ರಕಾಶಿಸಿ ಹೊರಬಂದಿತು. ಅವನ ರೂಮಕೂಪಗಳಿಂದ ಸೂರ್ಯನಂತೆ ಮರೀಚಿಗಳು ಹೊರಸೂಸಿದವು. ದ್ರೋಣ, ಭೀಷ್ಮ, ಮಹಾಮತಿ ವಿದುರ, ಮಹಾಭಾಗ ಸಂಜಯ ಮತ್ತು ತಪೋಧನ ಋಷಿಗಳನ್ನು ಬಿಟ್ಟು ಅಲ್ಲಿದ್ದ ರಾಜರು ಆ ಮಹಾತ್ಮ ಕೇಶವನ ಘೋರರೂಪವನ್ನು ನೋಡಿ ಚೇತನಗಳು ನಡುಗಿ ಕಣ್ಣುಗಳನ್ನು ಮುಚ್ಚಿದರು. ಭಗವಾನ್ ಜನಾರ್ದನನು ಅವರಿಗೆ ದಿವ್ಯ ದೃಷ್ಟಿಯನ್ನು ನೀಡಿದ್ದನು. ಸಭಾತಲದಲ್ಲಿ ಮಾಧವನ ಆ ಮಹದಾಶ್ಚರ್ಯವನ್ನು

ನೋಡಿ ದೇವದುಂದುಭಿಗಳು ಮೊಳಗಿದವು ಮತ್ತು ಪುಷ್ಪವೃಷ್ಠಿಯು ಸುರಿಯಿತು. ಇಡೀ ಭೂಮಿಯು ನಡುಗಿತು ಮತ್ತು ಸಾಗರವೂ ಕ್ಷೋಭೆಗೊಂಡಿತು. ಪಾರ್ಥಿವರೆಲ್ಲರೂ ಪರಮ ವಿಸ್ಮಿತರಾದರು. ಆಗ ಆ ಪುರುಷವ್ಯಾಘ್ರ ಅರಿಂದಮನು ತನ್ನದೇ ಸ್ವರೂಪವಾದ ಆ ದಿವ್ಯ, ಅದ್ಭುತ, ವಿಚಿತ್ರ ವೈಭವಯುಕ್ತ ರೂಪವನ್ನು ಹಿಂದೆ ತೆಗೆದುಕೊಂಡನು.

ಆಗ ಸಾತ್ಯಕಿ ಮತ್ತು ಹಾರ್ದಿಕ್ಯರಿಬ್ಬರ ಕೈಗಳನ್ನು ಹಿಡಿದು ಮಧುಸೂದನನು ಋಷಿಗಳಿಂದ ಅಪ್ಪಣೆಪಡೆದು ಹೊರಟನು. ನಾರದಾದಿ ಋಷಿಗಳು ಅಲ್ಲಿಯೇ ಅಂತರ್ಹಿತರಾದರು. ಆ ಕೋಲಾಹಲದಲ್ಲಿ ಅದೊಂದು ಅದ್ಭುತವಾಗಿಯೇ ನಡೆಯಿತು. ಅವನು ಹೋಗುತ್ತಿರುವುದನ್ನು ನೋಡಿ ರಾಜರೊಂದಿಗೆ ಕೌರವರು ಶತಕ್ರತುವನ್ನು ದೇವತೆಗಳು ಹೇಗೋ ಹಾಗೆ ಆ ನರವ್ಯಾಘ್ರನನ್ನು ಹಿಂಬಾಲಿಸಿದರು. ಆ ಸರ್ವ ರಾಜಮಂಡಲವನ್ನೂ ನಿರ್ಲಕ್ಷಿಸಿ ಅಮೇಯಾತ್ಮ ಶೌರಿಯು ಹೊಗೆಯಿಂದ ಹಿಂಬಾಲಿಸಲ್ಪಡುವ ಬೆಂಕಿಯಂತೆ ಹೊರ ಬಂದನು. ಆಗ ಶುಭ್ರವಾದ, ಗಂಟೆಗಳ ನಾದಮಾಡುತ್ತಿದ್ದ, ಹೇಮಜಾಲವಿಚಿತ್ರವಾದ, ಮಳೆಗಾಲದ ಮೋಡದಂತೆ ಜೋರಾಗಿ ಗುಡುಗುತ್ತ ಬಂದ, ವೈಯಾಘ್ರ ಚರ್ಮಗಳನ್ನು ಹೊದೆಸಿದ ಸೂಪಗಳಿರುವ, ಸೈನ್ಯ-ಸುಗ್ರೀವರನ್ನು ಕಟ್ಟಿದ್ದ ಮಹಾ ರಥದಲ್ಲಿ ದಾರುಕನು ಕಾಣಿಸಿಕೊಂಡನು. ಹಾಗೆಯೇ ವೃಷ್ಣಿಗಳ ನಾಯಕ, ವೀರ ಹಾರ್ದಿಕ್ಯ ಮಹಾರಥಿ ಕೃತವರ್ಮನು ರಥದಲ್ಲಿ ಕುಳಿತು ಕಾಣಿಸಿಕೊಂಡನು. ರಥದಲ್ಲಿ ಕುಳಿತು ಹೊರಡುತ್ತಿದ್ದ

ಅರಿಂದಮ ಶೌರಿಗೆ ಮಹಾರಾಜ ಧೃತರಾಷ್ಟ್ರನು ಪುನಃ ಹೇಳಿದನು:

> “ಜನಾರ್ದನ! ಪುತ್ರರ ಮೇಲೆ ನನಗೆ ಎಷ್ಟು ಬಲವಿದೆ ಎನ್ನುವುದನ್ನು ನೀನು ನೋಡಿದ್ದೀಯೆ. ಎಲ್ಲವೂ ನಿನ್ನ ಪ್ರತ್ಯಕ್ಷದಲ್ಲಿಯೇ ಇದೆ. ಪರೋಕ್ಷವಾಗಿ ಏನೂ ನಡೆಯುತ್ತಿಲ್ಲ. ಕುರುಗಳಲ್ಲಿ ಶಾಂತಿಯನ್ನು ಇಚ್ಛಿಸುವ, ಅದಕ್ಕಾಗಿ ಪ್ರಯತ್ನಿಸುತ್ತಿರುವ ನನ್ನ ಅವಸ್ಥೆಯು ನಿನಗೆ ತಿಳಿದೇ ಇದೆ. ನನ್ನ ಮೇಲೆ ಶಂಕಿಸಬಾರದು. ಪಾಂಡವರ ಕುರಿತು ನನಗೆ ಪಾಪತ್ವದ ಅಭಿಪ್ರಾಯವಿಲ್ಲ. ಏಕೆಂದರೆ ನಾನು ಸುಯೋಧನನಿಗೆ ಏನು ಹೇಳಿದೆನೆನ್ನುವುದು ನಿನಗೆ ತಿಳಿದೇ ಇದೆ. ನಾನು ಸರ್ವಯತ್ನಗಳಿಂದ ಶಾಂತಿಗೆ ಪ್ರಯತ್ನಪಟ್ಟಿದ್ದೇನೆ ಎನ್ನುವುದು ಎಲ್ಲ ಕುರುಗಳಿಗೂ ಪಾರ್ಥಿವ ರಾಜರಿಗೂ ತಿಳಿದಿದೆ.”

ಆಗ ಆ ಮಹಾಬಾಹುವು ಜನೇಶ್ವರ ಧೃತರಾಷ್ಟ್ರ, ದ್ರೋಣ, ಪಿತಾಮಹ ಭೀಷ್ಮ, ಕ್ಷತ್ತ, ಬಾಹ್ಲೀಕ ಮತ್ತು ಕೃಪರನ್ನು ಉದ್ದೇಶಿಸಿ ಹೇಳಿದನು:

> “ಕುರುಸಂಸದಿಯಲ್ಲಿ ಏನು ನಡೆಯಿತೋ ಅದು ನಿಮ್ಮ ಪ್ರತ್ಯಕ್ಷದಲ್ಲಿಯೇ ನಡೆಯಿತು. ಹೇಗೆ ಆ ಶಿಷ್ಟಾಚಾರಗಳಿಲ್ಲದ ಮೂಢನು ಸಿಟ್ಟಿನಿಂದ ಹಾರಿ ಮೇಲೇಳುತ್ತಿದ್ದನು! ಮಹೀಪತಿ ಧೃತರಾಷ್ಟ್ರನು ತನ್ನನ್ನು ಅನೀಶನೆಂದು ಕರೆದುಕೊಳ್ಳುವುದು ಸರಿಯಾದುದೇ! ನಿಮ್ಮೆಲ್ಲರನ್ನೂ ಬೀಳ್ಕೊಳ್ಳುತ್ತಿದ್ದೇನೆ.

యుధిష్ఠిరన బళి హోగుత్తేనే."

ಕೈಮುಗಿದು ರಥದಲ್ಲಿ ಕುಳಿತು ಹೊರಟ ಪುರುಷರ್ಷಭ ಶೌರಿಯನ್ನು ಭರತರ್ಷಭ ಪ್ರವೀರರಾದ, ಮಹೇಷ್ವಾಸರಾದ ಭೀಷ್ಮ, ದ್ರೋಣ, ಕ್ಷತ್ತ, ಧೃತರಾಷ್ಟ್ರ, ಬಾಹ್ಲೀಕ, ಅಶ್ವತ್ಥಾಮ, ವಿಕರ್ಣ ಮತ್ತು ಮಹಾರಥಿ ಯುಯುತ್ಸುವು ಹಿಂಬಾಲಿಸಿ ಹೋದರು. ಆಗ ಶುಭ್ರವಾದ, ಗಂಟೆಗಳ ನಾದಗೈಯುತ್ತಿದ್ದ ದೊಡ್ಡ ರಥದಲ್ಲಿ, ಕುರುಗಳು ನೋಡುತ್ತಿದ್ದಂತೆಯೇ ತನ್ನ ಸೋದರತ್ತೆಯನ್ನು ಕಾಣಲು ಹೊರಟನು.

## ಕೃಷ್ಣನ ಮೂಲಕ ಕುಂತಿಯು ಪಾಂಡವರಿಗೆ ಕಳುಹಿದ ಸಂದೇಶ

ಅವಳ ಮನೆಯನ್ನು ಪ್ರವೇಶಿಸಿ ಚರಣಗಳಿಗೆ ವಂದಿಸಿ ಕುರುಸಂಸದಿಯಲ್ಲಿ ನಡೆದುದನ್ನು ಸಂಕ್ಷಿಪ್ತವಾಗಿ ವರದಿಮಾಡಿದನು:

"ಸ್ವೀಕರಿಸಬೇಕಾಗಿದ್ದಂತಹ ಬಹುವಿಧದ ಮಾತುಗಳನ್ನು ಕಾರಣಗಳನ್ನು ಕೊಟ್ಟು, ಋಷಿಗಳು ಮತ್ತು ನಾನು ಹೇಳಿದೆವು. ಆದರೆ ಅವುಗಳನ್ನು ಸ್ವೀಕರಿಸಲಿಲ್ಲ. ದುರ್ಯೋಧನನ ವಶಕ್ಕೆ ಬಂದಿರುವ ಮತ್ತು ಅವನನ್ನು ಅನುಸರಿಸುವ ಎಲ್ಲರ ಕಾಲವು ಪಕ್ವವಾಗಿದೆ. ನನಗೆ ಪಾಂಡವರ ಕಡೆ ಶೀಘ್ರವಾಗಿ ಹೋಗಬೇಕಾಗಿದೆ. ಆದುದರಿಂದ ನಿನ್ನಲ್ಲಿ ಕೇಳುತ್ತಿದ್ದೇನೆ. ಪಾಂಡವರಿಗೆ ಹೇಳಲು ನಿನ್ನ ಸಂದೇಶವೇನೆಂದು ನನಗೆ

ಹೇಳು. ನಿನ್ನ ಮಾತನ್ನು ಕೇಳುತ್ತೇನೆ.”

ಕುಂತಿಯು ಹೇಳಿದಳು:

“ಕೇಶವ! ಧರ್ಮಾತ್ಮ ರಾಜಾ ಯುಧಿಷ್ಠಿರನಿಗೆ ಹೇಳು - ‘ನಿನ್ನ ಧರ್ಮವು ಕ್ಷೀಣಿಸುತ್ತಿದೆ. ಮಗನೇ! ವೃಥಾ ಕೆಲಸಮಾಡಬೇಡ! ಕೇವಲ ಕೇಳಿ ಕಲಿತವರಂತೆ ನಿನ್ನ ತಿಳುವಳಿಕೆಯು ಕಡಿಮೆ. ಬರಿಯ ಮಾತುಗಳನ್ನು ಅನುಸರಿಸುವ ಬುದ್ಧಿಯು ಒಂದೇ ಧರ್ಮವನ್ನು ನೋಡುತ್ತಿದೆ. ಸ್ವಯಂಭುವು ಸೃಷ್ಟಿಸಿದ ನಿನ್ನದೇ ಜಾತಿಯ ಧರ್ಮವನ್ನು ನೋಡು. ಅವನ ಬಾಹುಗಳಿಂದ ಹೊರಬಂದ ಕ್ಷತ್ರಿಯನು ಬಾಹವೀರ್ಯದಿಂದ ಜೀವಿಸಬೇಕು. ನಿತ್ಯವೂ ಕ್ರೂರಕರ್ಮಗಳಿಂದ ಪ್ರಜೆಗಳನ್ನು ಪರಿಪಾಲಿಸಬೇಕು. ಇದರ ಕುರಿತು ನಾನು ವೃದ್ಧರಿಂದ ಕೇಳಿದ್ದ ಉಪಮೆಯೊಂದು ಇದೆ. ಕೇಳು. ಹಿಂದೆ ರಾಜರ್ಷಿ ಮುಚುಕುಂದನಿಗೆ ಈ ಭೂಮಿಯನ್ನು ವೈಶ್ರವಣನು ಅವನ ಮೇಲಿನ ಪ್ರೀತಿಯಿಂದ ಕೊಟ್ಟಿದ್ದನು. ಆದರೆ ಅವನು ಹೀಗೆ ಹೇಳಿ ಅದನ್ನು ಸ್ವೀಕರಿಸಲಿಲ್ಲ: ‘ಬಾಹುವೀರ್ಯದಿಂದ ಗಳಿಸಿದ ರಾಜ್ಯವನ್ನು ಆಳಲು ಬಯಸುತ್ತೇನೆ!’ ಆಗ ವೈಶ್ರವಣನು ವಿಸ್ಮಿತನಾಗಿ ಪ್ರೀತನಾದನು. ರಾಜ ಮುಚುಕುಂದನು ಕ್ಷತ್ರಿಯಧರ್ಮವನ್ನು ಅನುಸರಿಸಿ ಬಾಹುವೀರ್ಯದಿಂದ ಇಡೀ ಭೂಮಿಯನ್ನು ಗೆದ್ದು ಚೆನ್ನಾಗಿ ಆಳಿದನು.

ಧರ್ಮದಿಂದ ನಡೆದುಕೊಳ್ಳುವ ಪ್ರಜೆಗಳನ್ನು ರಾಜನು ಸುರಕ್ಷಿಸಿದರೆ ಅವರ ಧರ್ಮದ ನಾಲ್ಕನೆಯ ಒಂದು ಭಾಗವು ರಾಜನಿಗೆ ತಗಲುತ್ತದೆ. ರಾಜನೇ ಆಚರಿಸುವ ಧರ್ಮವು ಅವನಿಗೆ ದೇವತ್ವವನ್ನು ಕಲ್ಪಿಸುತ್ತದೆ. ಅವನು ಅಧರ್ಮವನ್ನು ಆಚರಿಸಿದರೆ ನರಕಕ್ಕೇ ಹೋಗುತ್ತಾನೆ. ದಂಡನೀತಿಯು ಚಾತುರ್ವರ್ಣ್ಯಗಳು ಸ್ವಧರ್ಮಗಳಲ್ಲಿರುವಂತೆ ನಿಯಂತ್ರಿಸುತ್ತದೆ. ರಾಜನು ಅದನ್ನು ಸರಿಯಾಗಿ ಬಳಸುವುದರಿಂದ ಉತ್ತಮ ಧರ್ಮವನ್ನೂ ಪಡೆಯುತ್ತಾನೆ. ಯಾವಾಗ ರಾಜನು ದಂಡನೀತಿಯನ್ನು ಸಂಪೂರ್ಣವಾಗಿ ಜಾರಿಗೆ ತರುತ್ತಾನೋ ಆಗ ಕೃತಯುಗವೆಂಬ ಹೆಸರಿನ ಶ್ರೇಷ್ಠಕಾಲವು ಬರುತ್ತದೆ. ಕಾಲವು ರಾಜನ ಕಾರಣವೋ ರಾಜನು ಕಾಲದ ಕಾರಣವೋ ಎನ್ನುವ ಸಂಶಯ ಬೇಡ. ರಾಜನೇ ಕಾಲದ ಕಾರಣವಾಗುತ್ತಾನೆ. ರಾಜನೇ ಕೃತ, ತ್ರೇತ, ದ್ವಾಪರ ಯುಗಗಳನ್ನು ಸೃಷ್ಟಿಸುತ್ತಾನೆ. ನಾಲ್ಕನೆಯ ಯುಗಕ್ಕೂ ರಾಜನೇ ಕಾರಣನಾಗುತ್ತಾನೆ. ಕೃತದ ಕಾರಣದಿಂದ ರಾಜನು ಅತ್ಯಂತ ಸ್ವರ್ಗವನ್ನು ಅನುಭವಿಸುತ್ತಾನೆ. ತ್ರೇತದ ಕಾರಣದಿಂದ ರಾಜನು ಅತ್ಯಂತ ಸ್ವರ್ಗವನ್ನು ಅನುಭವಿಸುವುದಿಲ್ಲ. ದ್ವಾಪರ ಯುಗವನ್ನು ತಂದರೆ ರಾಜನು ಅವನಿಗೆ ಸಿಗಬೇಕಾಗಿದ್ದ ಭಾಗವನ್ನು ಮಾತ್ರ ಅನುಭವಿಸುತ್ತಾನೆ. ದುಷ್ಕರ್ಮಗಳನ್ನು ಮಾಡಿದ ರಾಜನು ಶಾಶ್ವತ ವರ್ಷಗಳ ವರೆಗೆ ನರಕದಲ್ಲಿ

ವಾಸಿಸುತ್ತಾನೆ. ಏಕೆಂದರೆ ರಾಜನ ದೋಷಗಳು ಜಗತ್ತಿಗೆ ಮತ್ತು ಜಗತ್ತಿನ ದೋಷಗಳು ಅವನಿಗೆ ತಗಲುತ್ತವೆ.

ನಿನ್ನ ಪಿತೃಪಿತಾಮಹರಿಗೆ ಉಚಿತವಾದ ರಾಜಧರ್ಮವನ್ನು ಅನುಸರಿಸು. ನೀನು ಯಾವ ರಾಜರ್ಷಿ ಪದವಿಯನ್ನು ಬಯಸುತ್ತೀಯೋ ಅದು ಇದಲ್ಲ. ಏಕೆಂದರೆ ದುರ್ಬಲ ಹೃದಯಿಯಾಗಿ, ಕರುಣಾಜನಕನಾಗಿ ಪ್ರಜಾಪಾಲನೆಯನ್ನು ಮಾಡುವ ನೃಪನಿಗೆ ಏನೂ ಫಲವು ದೊರಕುವುದಿಲ್ಲ. ಯಾವ ವಿಚಾರದಿಂದ ನೀನು ನಡೆದುಕೊಳ್ಳುತ್ತಿರುವೆಯೋ ಅದನ್ನು ಹಿಂದೆ ನಾವು ಯಾರೂ - ಪಾಂಡು, ನಾನು, ನಿನ್ನ ಪಿತಾಮಹರು ಆಶಿಸಿರಲಿಲ್ಲ. ನಾನು ಯಾವಾಗಲೂ ಯಜ್ಞ, ದಾನ, ತಪಸ್ಸು, ಶೌರ್ಯ, ಪ್ರಜಾಸಂತಾನ, ಮಹಾತ್ಮೆ, ಬಲ ಮತ್ತು ಓಜಸ್ಸುಗಳನ್ನು ಆಶಿಸಿದ್ದೆ. ಸರಿಯಾಗಿ ಆರಾಧಿಸಲ್ಪಟ್ಟ ಶುಭ ಮಾನುಷ ದೇವತೆಗಳಾದ ಬ್ರಾಹ್ಮಣರು ನಿತ್ಯ ಸ್ವಾಹಾ ಮತ್ತು ನಿತ್ಯ ಸ್ವಧಾಗಳಿಂದ ದೀರ್ಘ ಆಯುಸ್ಸನ್ನೂ, ಧನವನ್ನೂ ಪುತ್ರರನ್ನೂ ನೀಡುವರು. ಪಿತೃಗಳು ಮತ್ತು ದೇವತೆಗಳು ಪುತ್ರರಿಂದ ನಿತ್ಯವೂ ದಾನ, ಅಧ್ಯಯನ, ಯಜ್ಞ ಮತ್ತು ಪ್ರಜೆಗಳ ಪರಿಪಾಲನೆಯನ್ನು ಆಶಿಸುತ್ತಾರೆ.

ಇದು ಧರ್ಮ ಅಥವಾ ಅಧರ್ಮವೆನ್ನುವುದು ಜನ್ಮದಿಂದಲೇ ಹುಟ್ಟಿಕೊಳ್ಳುತ್ತದೆ. ಮಗೂ! ಒಳ್ಳೆಯ ಕುಲದಲ್ಲಿ ಹುಟ್ಟಿ

ವಿದ್ಯಾವಂತನಾಗಿ ವೃತ್ತಿಯಿಲ್ಲದೇ ಪೀಡಿತರಾಗಿ ಭೂಮಿಯನ್ನು ತಿರುಗಿ ಬಳಲಿದವರು ದಾನಪತಿ ಶೂರನನ್ನು ಸೇರಿ ತಮ್ಮ ಇಷ್ಟಾರ್ಥಗಳನ್ನು ಪೂರೈಸಿಕೊಂಡರೆ ಅದಕ್ಕಿಂತ ಶ್ರೇಷ್ಠವಾದ ಧರ್ಮವು ಯಾವುದಿದೆ? ಧಾರ್ಮಿಕನಾದವನು ದಾನದಿಂದಾಗಲೀ, ಬಲದಿಂದಾಗಲೀ ಹಾಗೆಯೇ ಸಾಮ್ಯದಿಂದಾಗಲೀ ಎಲ್ಲಕಡೆಗಳಿಂದ ರಾಜ್ಯಗಳನ್ನು ಪಡೆಯುತ್ತಾನೆ. ಬ್ರಾಹ್ಮಣನು ಸಂಚರಿಸಿ ಭಿಕ್ಷಬೇಡಬೇಕು. ಕ್ಷತ್ರಿಯನು ಪ್ರಜಾಪಾಲನೆ ಮಾಡಬೇಕು. ವೈಶ್ಯನು ಧನಾರ್ಜನೆ ಮಾಡಬೇಕು. ಮತ್ತು ಶೂದ್ರನು ಅವರೆಲ್ಲರ ಪರಿಚಾರಕನಾಗಿರಬೇಕು. ನಿನಗೆ ಭಿಕ್ಷಾಟನೆಯು ನಿಷಿದ್ಧ. ನೀನು ಕೃಷಿ-ವಾಣಿಜ್ಯಗಳಿಂದಲೂ ಜೀವಿಸುವಂತಿಲ್ಲ. ಕ್ಷತ್ರಿಯನಾಗಿರುವೆ. ಬಾಹುವೀರ್ಯದಿಂದ ಪೀಡಿತರಾದವರನ್ನು ಕಾಪಾಡಿ ಉಪಜೀವಿಸು. ವಶಪಡಿಸಿಕೊಂಡಿರುವ ಪಿತ್ರಾರ್ಜಿತವನ್ನು ಪುನಃ ಸಾಮ, ದಾನ, ಭೇದ, ದಂಡ ಅಥವಾ ನಯದಿಂದ ಪಡೆದುಕೋ.

ನಾನು ಬಾಂಧವರಿಲ್ಲದವಳಾಗಿದ್ದೇನೆ ಎನ್ನುವುದಕ್ಕಿಂತ ದುಃಖತರವಾದುದು ಇನ್ನೇನಿದೆ? ನಿನ್ನನ್ನು ಹೆತ್ತು ನಾನು ಪರರ ಕೂಳಿನ ನಿರೀಕ್ಷೆಯಲ್ಲಿದ್ದೇನೆ. ರಾಜಧರ್ಮದಿಂದ ಯುದ್ಧಮಾಡು! ಪಿತಾಮಹರನ್ನು ಮುಳುಗಿಸಬೇಡ! ಅನುಜರೊಂದಿಗೆ ಪಾಪಿಗಳ ದಾರಿಯಲ್ಲಿ ಹೋಗಬೇಡ.

ಪುಣ್ಯವನ್ನು ಕಳೆದುಕೊಳ್ಳಬೇಡ!

ಇದರ ಕುರಿತಾಗಿ ವಿದುರೆಯು ತನ್ನ ಪುತ್ರನೊಡನೆ ನಡೆಸಿದ ಪುರಾತನ ಐತಿಹಾಸಿಕ ಸಂವಾದವನ್ನು ಉದಾಹರಿಸುತ್ತಾರೆ. ಇದರಲ್ಲಿ ಬಹಳಷ್ಟು ಶ್ರೇಯಸ್ಕರ ವಿಷಯಗಳಿವೆ. ಇದನ್ನು ಯಥಾವತ್ತಾಗಿ ಅವನಿಗೆ ಹೇಳಬೇಕು.

ಕೇಶವ! ಅರ್ಜುನನಿಗೆ ಹೇಳು - 'ನೀನು ಹುಟ್ಟಿದಾಗ ನಾನು ನಾರಿಯರಿಂದ ಸುತ್ತುವರೆಯಲ್ಪಟ್ಟು ಆಶ್ರಮದಲ್ಲಿ ಕುಳಿತುಕೊಂಡಿದ್ದೆ. ಆಗ ಅಂತರಿಕ್ಷದಲ್ಲಿ ದಿವ್ಯರೂಪದ ಮನೋರಮ ಮಾತಾಯಿತು. 'ಕುಂತೀ! ನಿನ್ನ ಮಗನು ಸಹಸ್ರಾಕ್ಷಸಮನಾಗುತ್ತಾನೆ. ಇವನು ಸಂಗ್ರಾಮದಲ್ಲಿ ಸೇರುವ ಕುರುಗಳೆಲ್ಲರನ್ನೂ ಭೀಮಸೇನನ ಸಹಾಯದಿಂದ ಜಯಿಸಿ ಲೋಕವನ್ನು ಉದ್ಧರಿಸುತ್ತಾನೆ. ನಿನ್ನ ಮಗನು ವಾಸುದೇವನ ಸಹಾಯಕನಾಗಿ ರಣದಲ್ಲಿ ಕುರುಗಳನ್ನು ಕೊಂದು ಪೃಥ್ವಿಯನ್ನು ಗೆದ್ದು ಅವನ ಯಶಸ್ಸು ದಿವವನ್ನೂ ಮುಟ್ಟುತ್ತದೆ. ಕಳೆದುಹೋದ ಪಿತ್ರ್ಯಂಶವನ್ನು ಪುನಃ ಪಡೆದು ಬೆಳೆಸುತ್ತಾನೆ. ಸಹೋದರರೊಂದಿಗೆ ಈ ಶ್ರೀಮಾನನು ಮೂರು ಯಾಗಗಳನ್ನು ನೆರವೇರಿಸುತ್ತಾನೆ.'

ಅಚ್ಯುತ! ಆ ಸತ್ಯಸಂಧ, ಬೀಭತ್ಸು, ಸವ್ಯಸಾಚಿಯು ನಾನು ತಿಳಿದಂತೆ ಬಲವಂತನೂ ದುರಾಸದನೂ ಆಗಿದ್ದರೆ ಆ ಮಾತು

ಹೇಳಿದಂತೆಯೇ ಆಗುತ್ತದೆ. ಧರ್ಮವಿದೆಯಂತಾದರೆ ಇದು ಸತ್ಯವಾಗುತ್ತದೆ. ನೀನೂ ಕೂಡ ಹಾಗೆಯೇ ಎಲ್ಲವೂ ಆಗುವಂತೆ ಒದಗಿಸಿಕೊಡುತ್ತೀಯೆ. ಆ ಮಾತು ಆಡಿದುದನ್ನು ನಾನೂ ಕೂಡ ಪ್ರಶ್ನಿಸುವುದಿಲ್ಲ. ಮಹಾ ಧರ್ಮಕ್ಕೆ ನಮಸ್ಕರಿಸುತ್ತೇನೆ. ಧರ್ಮವು ಪ್ರಜೆಗಳನ್ನು ಪಾಲಿಸುತ್ತದೆ. ಇದನ್ನು ಧನಂಜಯನಿಗೆ ಹೇಳು. ಇದನ್ನು ನಿತ್ಯವೂ ಉದ್ಯುಕ್ತನಾಗಿರುವ ವೃಕೋದರನಿಗೆ ಹೇಳು: 'ಕ್ಷಾತ್ರಣಿಯು ಯಾವ ಕಾರಣಕ್ಕಾಗಿ ಹಡೆಯುತ್ತಾಳೆಯೋ ಅದರ ಕಾಲವು ಬಂದೊದಗಿದೆ. ಪುರುಷರ್ಷಭರು ವೈರವು ಎದುರಾದಾಗ ಹೇಡಿಗಳಾಗುವುದಿಲ್ಲ.' ನಿನಗೆ ತಿಳಿದೇ ಇದೆ. ಶತ್ರುಗಳನ್ನು ಅಂತ್ಯಗೊಳಿಸುವವರೆಗೆ ಆ ಶತ್ರುಕರ್ಶನ ಭೀಮನ ಬುದ್ಧಿಯು ಶಾಂತವಾಗುವುದಿಲ್ಲ. ಸರ್ವಧರ್ಮಗಳ ವಿಶೇಷತೆಯನ್ನು ತಿಳಿದುಕೊಂಡಿರುವ, ಮಹಾತ್ಮ ಪಾಂಡುವಿನ ಸೊಸೆ, ಕಲ್ಯಾಣೀ, ಯಶಸ್ವಿನೀ ಕೃಷ್ಣೆಗೆ ಇದನ್ನು ಹೇಳು: 'ಮಹಾಭಾಗೇ! ಉತ್ತಮ ಕುಲದಲ್ಲಿ ಹುಟ್ಟಿದವಳಿಗೆ ತಕ್ಕಂತೆ ನೀನು ನನ್ನ ಮಕ್ಕಳೆಲ್ಲರೊಡನೆ ವರ್ತಿಸಿದ್ದೀಯೆ.' ಕ್ಷತ್ರಧರ್ಮರತರಾದ ಆ ಮಾದ್ರೀಪುತ್ರರಿಬ್ಬರಿಗೂ ಹೇಳು: 'ಜೀವಕ್ಕಿಂತ ವಿಕ್ರಮದಿಂದ ಗಳಿಸಿದ ಭೋಗವನ್ನು ಆರಿಸಬೇಕು. ವಿಕ್ರಮದಿಂದ ಗಳಿಸಿದ ಸಂಪತ್ತು ಕ್ಷತ್ರಧರ್ಮದಿಂದ ಜೀವಿಸುವ ಮನುಷ್ಯನ ಮನಸ್ಸನ್ನು ಸದಾ

ಸಂತೋಷಗೊಳಿಸುತ್ತದೆ. ನೀವು ನೋಡುತ್ತಿರುವಾಗಲೇ ಸರ್ವಧರ್ಮಗಳನ್ನೂ ಗಳಿಸಿರುವ ಪಾಂಚಾಲಿಗೆ ಗಡುಸಾಗಿ ಮಾತನಾಡಿದ ಯಾರು ತಾನೇ ಕ್ಷಮೆಗೆ ಅರ್ಹರು? ರಾಜ್ಯವನ್ನು ಕಳೆದುಕೊಂಡಿದ್ದುದಾಗಲೀ, ದ್ಯೂತದಲ್ಲಿ ಸೋತಿದ್ದುದೂ, ಮಕ್ಕಳ ದೂರಹೋದುದು ಇವು ಯಾವುವೂ ನನ್ನ ಈ ದುಃಖಕ್ಕೆ ಕಾರಣವಲ್ಲ. ಆಗ ಆ ಬೃಹತೀ ಶ್ಯಾಮೆಯು ಸಭೆಯಲ್ಲಿ ಅಳುತ್ತಾ ಆ ಮಾನಭಂಗದ ಮಾತುಗಳನ್ನು ಕೇಳಬೇಕಾಯಿತಲ್ಲ ಎನ್ನುವುದು ನನ್ನ ಈ ದುಃಖವನ್ನು ಹೆಚ್ಚಿಸಿದೆ. ರಜಸ್ವಲೆಯಾಗಿದ್ದ, ಸದಾ ಕ್ಷತ್ರಧರ್ಮನಿರತಳಾಗಿರುವ ಆ ವರಾರೋಹೆ ಸತೀ ಕೃಷ್ಣೆಯು ನಾಥವತಿಯಾಗಿದ್ದರೂ ಅಲ್ಲಿ ಅನಾಥಳಾಗಿದ್ದಳು.’

ಮಹಾಬಾಹೋ! ಆ ಸರ್ವಶಸ್ತ್ರಭೃತರಲ್ಲಿ ಶ್ರೇಷ್ಠ ಪುರುಷವ್ಯಾಘ್ರ ಅರ್ಜುನನಿಗೆ ‘ದ್ರೌಪದಿಯ ದಾರಿಯಲ್ಲಿ ನಡೆ!’ ಎಂದು ಹೇಳು. ಅತ್ಯಂತ ಕೃದ್ಧರಾದ ಭೀಮಾರ್ಜುನರಿಬ್ಬರೂ ಯಮ ಅಂತಕನಂತೆ ದೇವತೆಗಳನ್ನೂ ಪರಾಗತಿಗೆ ಕಳುಹಿಸಬಲ್ಲರು ಎಂದು ನಿನಗೆ ತಿಳಿದೇ ಇದೆ. ದುಃಶಾಸನನು ಕೃಷ್ಣೆಯನ್ನು ಸಭೆಗೆ ಎಳೆದು ತಂದದ್ದು ಮತ್ತು ಭೀಮನಿಗೆ ಕಟುಕಾಗಿ ಮಾತನಾಡಿದುದು ಇವೆರಡರಿಂದಲೂ ಅವರು ಅಪಮಾನಿತರಾಗಿದ್ದರು. ಅವರಿಬ್ಬರಿಗೆ ಇದನ್ನು ಪುನಃ ನೆನಪಿಸಿಕೊಡು. ಪುತ್ರರೊಂದಿಗೆ ಮತ್ತು ಕೃಷ್ಣೆಯೊಂದಿಗೆ

> ಪಾಂಡವರ ಕುಶಲವನ್ನು ಕೇಳು. ಜನಾರ್ದನ! ತಿರುಗಿ ನಾನು ಕುಶಲದಿಂದಿದ್ದೇನೆಂದು ಅವರಿಗೆ ಹೇಳು. ಹೋಗು! ನಿನ್ನ ಪ್ರಯಾಣವು ಸುಖಕರವಾಗಲಿ. ನನ್ನ ಮುಕ್ಕಳನ್ನು ಪರಿಪಾಲಿಸು!"

ಅವಳನ್ನು ಪ್ರದಕ್ಷಿಣೆ ಮಾಡಿ ನಮಸ್ಕರಿಸಿ ಮಹಾಬಾಹು ಕೃಷ್ಣನು ಸಿಂಹದ ನಡೆಯನ್ನು ನಡೆಯುತ್ತಾ ಹೊರಟನು. ಆಗ ಅವನು ಭೀಷ್ಮಾದಿ ಕುರುಪುಂಗವರನ್ನು ಕಳುಹಿಸಿದನು. ರಥದಲ್ಲಿ ಕರ್ಣನನ್ನು ಏರಿಸಿಕೊಂಡು ಸಾತ್ಯಕಿಯೊಂದಿಗೆ ಪ್ರಯಾಣಿಸಿದನು.

ದಾಶಾರ್ಹನು ಹೊರಟುಹೋಗಲು ಕುರುಗಳು ಸೇರಿಕೊಂಡು ಕೇಶವನೊಂದಿಗೆ ನಡೆದ ಪರಮಾದ್ಭುತ ಮಹದಾಶ್ಚರ್ಯದ ಕುರಿತು ಮಾತನಾಡಿಕೊಂಡರು.

> "ಪ್ರಮೂಢ ಭೂಮಿಯ ಎಲ್ಲರೂ ಮೃತ್ಯುಪಾಶಕ್ಕೆ ಕಟ್ಟಲ್ಪಟ್ಟಿದ್ದಾರೆ. ದುರ್ಯೋಧನನ ಹುಡುಗಾಟದಿಂದ ಹೀಗಾಗಿದೆ!"

ಎಂದು ಅವರು ಆಡಿಕೊಂಡರು. ಆಗ ನಗರದಿಂದ ಹೊರಟ ಪುರುಷೋತ್ತಮನು ಬಹಳ ಸಮಯ ಕರ್ಣನೊಂದಿಗೆ ಸಮಾಲೋಚನೆ ಮಾಡಿದನು. ಅನಂತರ ರಾಧೇಯನನ್ನು ಕಳುಹಿಸಿ ಸರ್ವಯಾದವನಂದನನು ತುಂಬಾ ವೇಗದಿಂದ ಹೋಗುವಂತೆ ಕುದುರೆಗಳನ್ನು ಪ್ರಚೋದಿಸಿದನು. ದಾರುಕನಿಂದ ಪ್ರಚೋದಿತಗೊಂಡ

ಕುದುರೆಗಳು ಆಕಾಶವನ್ನೇ ಕುಡಿಯುವಂತೆ ಮನಸ್ಸು ಮಾರುತಗಳಂತೆ ಮಹಾ ವೇಗದಿಂದ ಹೋದವು. ಆ ದಾರಿಯನ್ನು ವೇಗವುಳ್ಳ ಗಿಡುಗಗಳಂತೆ ದಾಟಿ ಅವು ಆ ಶಾಂರ್ಙಧನ್ವಿಯನ್ನು ಸೂರ್ಯನು ನೆತ್ತಿಯ ಮೇಲಿರುವಾಗ ಉಪಪ್ಲವ್ಯಕ್ಕೆ ಕರೆದೊಯ್ದವು.

## ದುರ್ಯೋಧನನಿಗೆ ಭೀಷ್ಮ-ದ್ರೋಣರ ಸಲಹೆ

ಕುಂತಿಯ ಮಾತುಗಳನ್ನು ಕೇಳಿ ಮಹಾರಥಿಗಳಾದ ಭೀಷ್ಮ-ದ್ರೋಣರಿಬ್ಬರೂ ನಿಯಂತ್ರಿಸಲು ಅಸಾಧ್ಯನಾದ ದುರ್ಯೋಧನನಿಗೆ ಹೇಳಿದರು.

> “ಪುರುಷವ್ಯಾಘ್ರ! ಕೃಷ್ಣನ ಸನ್ನಿಧಿಯಲ್ಲಿ ಕುಂತಿಯು ಹೇಳಿದ ಅರ್ಥವತ್ತಾದ, ಧರ್ಮದಿಂದ ಕೂಡಿದ, ಉತ್ತಮವಾದ, ಅವ್ಯಗ್ರ ಮಾತುಗಳನ್ನು ಕೇಳಿದೆ. ವಾಸುದೇವನಿಗೆ ಸಮ್ಮತಿಯಿದ್ದಂತೆ ಕೌಂತೇಯರು ಮಾಡುತ್ತಾರೆ. ರಾಜ್ಯವನ್ನು ಪಡೆಯದೇ ಅವರು ಶಾಂತಿಮಾರ್ಗದಲ್ಲಿ ಹೋಗುವುದಿಲ್ಲ. ನೀನು ಪಾರ್ಥರಿಗೆ ಸಾಕಷ್ಟು ಕ್ಲೇಶಗಳನ್ನು ಕೊಟ್ಟಿದ್ದೀಯೆ. ಸಭೆಯಲ್ಲಿ ದ್ರೌಪದಿಯನ್ನೂ ಕಾಡಿಸಿದೆ. ಧರ್ಮಪಾಶಕ್ಕೆ ಬದ್ಧರಾಗಿದ್ದ ಅವರು ನಿನ್ನ ಅವೆಲ್ಲವನ್ನೂ ಸಹಿಸಿಕೊಂಡರು. ಅಸ್ತ್ರಗಳನ್ನು ಸಂಪಾದಿಸಿದ ಅರ್ಜುನನನ್ನು, ಧೃಢನಿಶ್ಚಯಿ ಭೀಮನನ್ನು, ಗಾಂಡೀವವನ್ನೂ, ಎರಡು ಅಕ್ಷಯ ಭತ್ತಳಿಕೆಗಳನ್ನು, ರಥವನ್ನೂ ಧ್ವಜವನ್ನೂ ಮತ್ತು ವಾಸುದೇವನ

ಸಹಾಯವನ್ನು ಪಡೆದಿರುವ ಯುಧಿಷ್ಠಿರನು ಈಗ ನಿನ್ನನ್ನು ಕ್ಷಮಿಸಲಾರ. ಹಿಂದೆ ವಿರಾಟನಗರದ ಯುದ್ಧದಲ್ಲಿ ಧೀಮತ ಪಾರ್ಥನು ನಮ್ಮೆಲ್ಲರನ್ನೂ ಸೋಲಿಸಿದುದನ್ನು ನೀನು ಪ್ರತ್ಯಕ್ಷವಾಗಿ ನೋಡಿದ್ದೀಯೆ. ಅವನು ಯುದ್ಧದಲ್ಲಿ ಘೋರಕರ್ಮಿ ದಾನವ ನಿವಾತಕವಚರನ್ನು ರೌದ್ರಾಸ್ತ್ರವನ್ನು ಬಳಸಿ ಆ ಅಸ್ತ್ರದ ಬೆಂಕಿಯಲ್ಲಿ ಅವರನ್ನು ಸುಟ್ಟನು. ಘೋಷಯಾತ್ರೆಯ ವೇಳೆಯಲ್ಲಿ ಕವಚಗಳನ್ನು ಧರಿಸಿ ರಥವನ್ನೇರಿದ್ದ ಅವನು ನಿನ್ನನ್ನು ಮತ್ತು ಕರ್ಣನೇ ಮೊದಲಾದವರನ್ನು ಬಿಡುಗಡೆ ಮಾಡಿದುದೂ ಅದರ ನಿದರ್ಶನವೇ. ಸಹೋದರ ಪಾಂಡವರೊಂದಿಗೆ ಶಾಂತನಾಗು. ಮೃತ್ಯುವಿನ ಹಲ್ಲಿಗೆ ಹೋಗುತ್ತಿರುವ ಈ ಪೃಥ್ವಿಯ ಎಲ್ಲರನ್ನೂ ರಕ್ಷಿಸು. ಈ ದೋಷವನ್ನು ಕಳೆದುಕೊಂಡು ಆ ಪುರುಷವ್ಯಾಘ್ರ, ಶುಚಿ, ಮೃದುವಾದಿ, ವತ್ಸಲ, ಧರ್ಮಶೀಲ ಹಿರಿಯಣ್ಣನ ಬಳಿ ಹೋಗು. ಧನುಸ್ಸನ್ನು ತೊರೆದು ಹುಬ್ಬು ಗಂಟಿಕ್ಕದೇ ಪ್ರಸನ್ನನಾಗಿರುವ ನಿನ್ನನ್ನು ಆ ಶ್ರೀಮಾನನು ನೋಡಿದರೂ ಅದು ಕುಲಕ್ಕೆ ಶಾಂತಿಯನ್ನು ತರುತ್ತದೆ. ಅಮಾತ್ಯರೊಂದಿಗೆ ಆ ರಾಜ ನೃಪಾತ್ಮಜನ ಬಳಿಹೋಗಿ ಭ್ರಾತೃತ್ವದಿಂದ ಅವನನ್ನು ಅಪ್ಪಿಕೋ. ಭೀಮನ ಅಣ್ಣ ಕುಂತೀಪುತ್ರ ಯುಧಿಷ್ಠಿರನು ಅಭಿವಾದಿಸುವ ನಿನ್ನನ್ನು ಸೌಹಾರ್ದತೆಯಿಂದ ತನ್ನೆರಡೂ ಕೈಗಳಿಂದ ಬರಮಾಡಿಕೊಳ್ಳುತ್ತಾನೆ. ಪ್ರಹರಿಗಳಲ್ಲಿ ಶ್ರೇಷ್ಠ

ಭೀಮನು ತನ್ನ ಎರಡೂ ಕೈಗಳಿಂದ ಸಿಂಹದಂತಿರುವ ನಿನ್ನ ತೊಡೆ ಬಾಹುಗಳನ್ನು ಸುತ್ತುವರೆಸಿ ಬಳಸಿ ಆಲಂಗಿಸುತ್ತಾನೆ. ಸಿಂಹಗ್ರೀವ ಗುಡಾಕೇಶ ಪಾರ್ಥ ಕುಂತೀಪುತ್ರ ಧನಂಜಯನು ಪುಷ್ಕರೇಕ್ಷಣ ನಿನ್ನನ್ನು ನಮಸ್ಕರಿಸುತ್ತಾನೆ. ಭೂಮಿಯಲ್ಲಿಯೇ ರೂಪದಲ್ಲಿ ಅಪ್ರತಿಮರಾಗಿರುವ ಆ ಅಶ್ವಿನೀಪುತ್ರರು ನಿನ್ನನ್ನು ಗುರುವಂತೆ ಪ್ರೇಮದ ಪೂಜೆಯಿಂದ ನಿನ್ನನ್ನು ಗೌರವಿಸುತ್ತಾರೆ. ಅಭಿಮಾನವನ್ನು ತೊರೆದು ಭಾತೃಗಳ ಬಳಿಸಾರಿ ಅವರನ್ನು ಸೇರಿಕೋ. ಆಗ ದಾಶಾರ್ಹಪ್ರಮುಖ ನೃಪರು ಆನಂದದಿಂದ ಕಣ್ಣೀರು ಸುರಿಸುತ್ತಾರೆ. ಆಗ ನೀನು ಸಹೋದರರೊಂದಿಗೆ ಇಡೀ ಪೃಥ್ವಿಯನ್ನೇ ಆಳು. ಹರ್ಷದಿಂದ ಈ ನೃಪರು ಪರಸ್ಪರರನ್ನು ಆಲಂಗಿಸಿ ಹಿಂದಿರುಗಲಿ.

ಈ ಯುದ್ಧವು ಬೇಡವೆನ್ನುವ ಸ್ನೇಹಿತರ ಕಾರಣವನ್ನು ಕೇಳು. ಈ ಯುದ್ಧದಿಂದ ಕ್ಷತ್ರಿಯರ ವಿನಾಶವು ಖಂಡಿತವೆಂದು ಕಾಣುತ್ತದೆ. ಕ್ಷತ್ರಿಯರ ನಾಶವನ್ನು ಸೂಚಿಸುವ ಜ್ಯೋತಿಷ್ಯ, ಮೃಗಪಕ್ಷಿಗಳ ದಾರುಣ ಸಂಕೇತಗಳು, ವಿವಿಧ ಉತ್ಪಾತಗಳು ಕಾಣುತ್ತಿವೆ. ಈ ವಿನಾಶದ ನಿಮಿತ್ತಗಳು ವಿಶೇಷತಃ ನಮ್ಮಲ್ಲಿ ಕಂಡುಬರುತ್ತಿವೆ. ಉರಿಯುತ್ತಿರುವ ಉಲ್ಕೆಗಳು ನಿನ್ನ ಪ್ರದೇಶದಲ್ಲಿ ಬಿದ್ದು ಕಾಡುತ್ತಿವೆ. ನಮ್ಮ ವಾಹನಗಳು ಹರ್ಷದಿಂದಿಲ್ಲ. ರೋದಿಸುತ್ತಿರುವಂತಿವೆ. ನಿನ್ನ ಸೇನೆಯ ಸುತ್ತಲೂ ಹದ್ದುಗಳು ಹಾರಾಡುತ್ತಿವೆ. ನಗರವಾಗಲೀ

ಅರಮನೆಯಾಗಲೀ ಮೊದಲಿನಂತಿಲ್ಲ. ಕೆಂಪಾಗಿರುವ ನಾಲ್ಕೂ ಕಡೆಗಳಲ್ಲಿ ನರಿಗಳು ಅಮಂಗಳಕರವಾಗಿ ಕೂಗುತ್ತಾ ಓಡಾಡುತ್ತಿವೆ. ತಂದೆ ತಾಯಿಯರ ಮತ್ತು ಹಿತೈಷಿಗಳಾದ ನಮ್ಮ ಮಾತಿನಂತೆ ಮಾಡು. ಯುದ್ಧ ಮತ್ತು ಶಾಂತಿ ಎರಡೂ ನಿನ್ನ ಕೈಯಲ್ಲಿದೆ. ಒಂದುವೇಳೆ ಸುಹೃದಯರ ಮಾತಿನಂತೆ ಮಾಡದೇ ಇದ್ದರೆ ಪಾರ್ಥನ ಬಾಣಗಳಿಂದ ಪೀಡಿತವಾದ ಸೇನೆಯನ್ನು ನೋಡಿ ಪರಿತಪಿಸುತ್ತೀಯೆ. ರಣದಲ್ಲಿ ಭೀಮನ ಅಟ್ಟಹಾಸವನ್ನು, ಗಾಂಡೀವದ ನಿಸ್ವನವನ್ನೂ ಕೇಳಿ ನನ್ನ ಈ ಮಾತನ್ನು ನೆನಪಿಸಿಕೊಳ್ಳುತ್ತೀಯೆ. ಈಗ ನಿನಗೆ ನಾವು ಹೇಳುವುದು ಅಸ್ವೀಕೃತವಾದರೂ ಆಗ ನಾವು ಹೇಳಿದಂತೆಯೇ ಆಗುತ್ತದೆ.”

ಅವರು ಹೀಗೆ ಹೇಳಲು ಅವನು ವಿಮನಸ್ಕನಾಗಿ, ದೃಷ್ಟಿಯನ್ನು ಕೆಳಗೆಮಾಡಿ, ಹುಬ್ಬುಗಳ ನಡುವೆ ಗಂಟುಮಾಡಿಕೊಂಡು ಚಿಂತಾಮಗ್ನನಾದನು. ಏನನ್ನೂ ಮಾತನಾಡಲಿಲ್ಲ. ಅವನು ಬೇಸರಗೊಂಡಿದ್ದುದನ್ನು ಕಂಡು ಆ ಇಬ್ಬರು ನರರ್ಷಭರೂ ಪರಸ್ಪರರನ್ನು ನೋಡಿ ಪುನಃ ಅವನಿಗೆ ಉತ್ತರಿಸಿ ಹೇಳಿದರು. ಭೀಷ್ಮನು ಹೇಳಿದನು:

“ಶುಶ್ರೂಷೆ ಮಾಡುವ, ಅನಸೂಯ, ಬ್ರಹ್ಮಣ್ಯ, ಸತ್ಯಸಂಗರ ಪಾರ್ಥನೊಂದಿಗೆ ನಾವು ಹೋರಾಡಬೇಕು ಎಂದರೆ

ಅದಕ್ಕಿಂತ ಹೆಚ್ಚಿನ ದುಃಖವು ಯಾವುದಿದೆ?”

ದ್ರೋಣನು ಹೇಳಿದನು:

“ನನ್ನ ಮಗ ಅಶ್ವತ್ಥಾಮನ ಮೇಲಿರುವುದಕ್ಕಿಂತ ಹೆಚ್ಚು ಪ್ರೀತಿಯು ನನಗೆ ಧನಂಜಯನ ಮೇಲಿದೆ. ರಾಜನ್! ಕಪಿಧ್ವಜನ ಮೇಲೆ ನನಗೆ ಗೌರವವೂ ಇದೆ. ಕ್ಷತ್ರಧರ್ಮವನ್ನು ಅನುಸರಿಸಿರುವ ನಾನು ಮಗನಿಗಿಂತ ಪ್ರಿಯಕರನಾಗಿರುವ ಧನಂಜಯನನ್ನು ವಿರೋಧಿಸಿ ಹೋರಾಡಬೇಕಲ್ಲ! ಕ್ಷತ್ರಿಯನಾಗಿ ಜೀವಿಸುವುದಕ್ಕೆ ಧಿಕ್ಕಾರ! ಲೋಕದಲ್ಲಿ ಯಾರ ಸಮನಾದ ಅನ್ಯ ಧನುರ್ಧರನಿಲ್ಲವೋ ಆ ಬೀಭತ್ಸುವು ನನ್ನ ಕೃಪೆಯಿಂದ ಅನ್ಯ ಧನುರ್ಧರರಿಗಿಂತ ಯಶಸ್ವಿಯಾಗಿದ್ದಾನೆ. ಮಿತ್ರದ್ರೋಹಿ, ದುಷ್ಟಭಾವನೆಯುಳ್ಳವನು, ನಾಸ್ತಿಕ, ಪ್ರಾಮಾಣಿಕನಾಗಿಲ್ಲದಿರುವವನು ಮತ್ತು ಶಠನು ಯಜ್ಞಕ್ಕೆ ಬಂದಿರುವ ಮೂರ್ಖನಂತೆ ಸಂತರಲ್ಲಿ ಗೌರವವನ್ನು ಪಡೆಯುವುದಿಲ್ಲ. ತಡೆಯಲ್ಪಟ್ಟರೂ ಪಾಪಾತ್ಮ ಪಾಪಿಗಳು ಪಾಪವನ್ನು ಮಾಡಲು ಇಚ್ಛಿಸುತ್ತಾರೆ. ಪಾಪದಿಂದ ಪ್ರಚೋದಿಸಲ್ಪಟ್ಟರೂ ಶುಭಾತ್ಮರು ಶುಭವನ್ನೇ ಮಾಡಲು ಬಯಸುತ್ತಾರೆ. ಮೋಸಕ್ಕೊಳಗಾದರೂ ಅವರು ಪ್ರಿಯವಾಗಿ ನಡೆದುಕೊಳ್ಳುತ್ತಾರೆ. ಆದರೆ ನಿನ್ನ ಅಹಿತತ್ವವು ನಿನಗೇ ದೋಷವನ್ನು ತರುತ್ತವೆ. ಕುರುವೃದ್ಧರು, ನಾನು, ಮತ್ತು

ವಿದುರರು. ಹಾಗೆಯೇ ವಾಸುದೇವನೂ ನಿನಗೆ ಹೇಳಿದ್ದೇವೆ. ಆದರೂ ನಿನಗೆ ಶ್ರೇಯಸ್ಸಾದುದು ಕಾಣುತ್ತಿಲ್ಲ. ನನ್ನಲ್ಲಿ ಬಲವಿದೆ ಎಂದು ಮೊಸಳೆ, ತಿಮಿಂಗಿಲಗಳಿಂದ ತುಂಬಿದ ಮಳೆಗಾಲದ ಗಂಗೆಯನ್ನು ಕೂಡಲೇ ದಾಟಿಬಿಡುತ್ತೇನೆ ಎನ್ನುವವನ ಹಾಗಿದ್ದೀಯೆ. ಇಂದು ನೀನು ಯುಧಿಷ್ಠಿರನ ಸಂಪತ್ತನ್ನು ಪಡೆದಿದ್ದೇನೆ ಎಂದು ತಿಳಿದುಕೊಂಡಿದ್ದೀಯೆ. ಆದರೆ ನೀನು ಲೋಭದಿಂದ ಕೇವಲ ಅವನು ಬಿಸುಡಿದ ಮಾಲೆಯನ್ನು ಹಿಡಿದು ಕೊಂಡು ಅವನ ಸಂಪತ್ತು ಎಂದು ಭ್ರಮಿಸಿಕೊಂಡಿದ್ದೀಯೆ. ಯುಧಿಷ್ಠಿರನ ಸಂಪತ್ತು ದುರ್ಯೋಧನನು ಕಸಿದುಕೊಂಡ ಕೇವಲ ಅವನ ರಾಜ್ಯವಲ್ಲ ಎಂದರ್ಥ. ರಾಜ್ಯವನ್ನು ಪಡೆದಿದ್ದರೂ ವನಸ್ಥನಾಗಿದ್ದ, ದ್ರೌಪದೀಸಹಿತನಾದ, ಆಯುಧ-ಭ್ರಾತೃಗಳಿಂದ ಆವೃತನಾಗಿರುವ ಪಾಂಡವನನ್ನು ಯಾರು ಅತಿಜೀವಿಸುತ್ತಾರೆ? ಯಾರ ನಿರ್ದೇಶನದಂತೆ ಎಲ್ಲ ರಾಜರೂ ಕಿಂಕರರಾಗಿ ನಿಲ್ಲುತ್ತಾರೋ ಆ ಐಲವಿಲನನ್ನು ಸೇರಿ ಧರ್ಮರಾಜನು ವಿರಾಜಿಸುತ್ತಿದ್ದಾನೆ. ಕುಬೇರಸದನವನ್ನು ಸೇರಿ ಅಲ್ಲಿಂದ ರತ್ನಗಳನ್ನು ಪಡೆದು ಪಾಂಡವರು ಸಮೃದ್ಧವಾಗಿರುವ ನಿನ್ನ ರಾಷ್ಟ್ರವನ್ನು ಆಕ್ರಮಣ ಮಾಡಿ ರಾಜ್ಯವಾಳಲು ಬಯಸುತ್ತಾರೆ. ನಾವು ದಾನಮಾಡಿದ್ದೇವೆ. ಆಹುತಿಗಳನ್ನು ನೀಡಿದ್ದೇವೆ. ಬ್ರಾಹ್ಮಣರನ್ನು ಧನದಿಂದ

ತೃಪ್ತಿಗೊಳಿಸಿದ್ದೇವೆ. ನಮ್ಮ ಆಯುಸ್ಸನ್ನು ಬದುಕಿದ್ದೇವೆ. ಇಬ್ಬರೂ ಕೃತಕೃತ್ಯರಾಗಿದ್ದೇವೆಂದು ತಿಳಿ. ಆದರೆ ನೀನು ಸುಖ, ರಾಜ್ಯ, ಮಿತ್ರರು ಮತ್ತು ಐಶ್ವರ್ಯಗಳನ್ನು ಕಡೆಗಣಿಸಿ ಪಾಂಡವರೊಂದಿಗೆ ಕಲಹ ಮಾಡಿ ಮಹಾ ವ್ಯಸನವನ್ನು ಹೊಂದುತ್ತೀಯೆ. ಆ ಸತ್ಯವಾದಿನೀ ದೇವಿ ಘೋರತಪಸ್ಸು ಮತ್ತು ವ್ರತನಿರತಳಾದ ದ್ರೌಪದಿಯು ಯಾರ ವಿಜಯವನ್ನು ಆಶಿಸುವಳೋ ಆ ಪಾಂಡವರನ್ನು ನೀನು ಜಯಿಸಲಾರೆ. ಯಾರ ಮಂತ್ರಿಯು ಜನಾರ್ದನನೋ, ಯಾರ ತಮ್ಮನು ಸರ್ವಶಸ್ತ್ರಭೃತರಲ್ಲಿ ಶ್ರೇಷ್ಠ ಧನಂಜಯನೋ ಆ ಪಾಂಡವನನ್ನು ನೀನು ಹೇಗೆ ಜಯಿಸಬಲ್ಲೆ? ಧೃತಿಮಂತರಾದ, ಜಿತೇಂದ್ರಿಯರಾದ, ಉಗ್ರತಾಪಸಿ ಬ್ರಾಹ್ಮಣರು ಯಾರಿಗೆ ಸಹಾಯ ಮಾಡುತ್ತಿದ್ದಾರೋ ಅಂತಹ ವೀರ ಪಾಂಡವನನ್ನು ನೀನು ಹೇಗೆ ಜಯಿಸಬಲ್ಲೆ? ವ್ಯಸನವೆಂಬ ಮಹಾಸಾಗರದಲ್ಲಿ ಮುಳುಗಿಹೋಗುತ್ತಿರುವ ಸ್ನೇಹಿತನಿಗೆ ಸ್ನೇಹಿತನು ಉಳಿಸಲು ಬಯಸುವವನು ಮಾಡುವವನಂತೆ ಪುನಃ ಹೇಳುತ್ತಿದ್ದೇನೆ. ಈ ಯುದ್ಧಮಾಡುವುದನ್ನು ನಿಲ್ಲಿಸು. ಕುರುವೃದ್ಧಿಗಾಗಿ ಆ ವೀರರೊಂದಿಗೆ ಶಾಂತಿಯನ್ನು ಮಾಡಿಕೋ. ನಿನ್ನ ಮಕ್ಕಳು, ಅಮಾತ್ಯರು, ಮತ್ತು ಸೇನೆಯೊಂದಿಗೆ ಪರಾಭವದ ಕಡೆ ಮುಂದುವರೆಯಬೇಡ!”

## ಕೃಷ್ಣನು ಹಸ್ತಿನಾಪುರದಲ್ಲಾದುದನ್ನು ಯುಧಿಷ್ಠಿರನಿಗೆ ವರದಿ ಮಾಡುವುದು

ಹಸ್ತಿನಾಪುರದಿಂದ ಉಪಪ್ಲವ್ಯಕ್ಕೆ ಬಂದು ಅರಿಂದಮ ಕೇಶವನು ಪಾಂಡವರಿಗೆ ಎಲ್ಲವನ್ನೂ ಹೇಳಿದನು. ಬಹಳ ಹೊತ್ತು ಮಾತುಕತೆಯಾಡಿ, ಪುನಃ ಪುನಃ ಮಂತ್ರಾಲೋಚನೆ ಮಾಡಿ ಶೌರಿಯು ವಿಶ್ರಾಮಾರ್ಥವಾಗಿ ತನ್ನ ಬಿಡಾರಕ್ಕೆ ಹೋದನು. ಸೂರ್ಯನು ಮುಳುಗಲು ವಿರಾಟನೇ ಮೊದಲಾದ ಸರ್ವ ಪ್ರಮುಖ ರಾಜರನ್ನು ಕಳುಹಿಸಿ ಐವರು ಪಾಂಡವ ಸಹೋದರರು ಸಂಧ್ಯಾವಂದನೆಯನ್ನು ಪೂರೈಸಿದರು. ಸಂಧ್ಯಾವಂದನೆಯನ್ನು ಮುಗಿಸಿ, ಅದರ ಕುರಿತೇ ಯೋಚಿಸಿ, ಮನಸ್ಸನ್ನು ಕಳೆದುಕೊಂಡ ಅವನು ಪುನಃ ಮಂತ್ರಾಲೋಚಿಸಲು ದಾಶಾರ್ಹ ಕೃಷ್ಣನಿಗೆ ಬರಲು ಕರೆ ಕಳುಹಿಸಿದನು. ಯುಧಿಷ್ಠಿರನು ಹೇಳಿದನು:

> "ಪುಂಡರೀಕಾಕ್ಷ! ನಾಗಪುರದಲ್ಲಿ ಧೃತರಾಷ್ಟ್ರಜನ ಸಭೆಗೆ ಹೋಗಿ ಏನು ಹೇಳಿದೆ ಎನ್ನುವುದನ್ನು ವಿವರಿಸಬೇಕು."

ವಾಸುದೇವನು ಹೇಳಿದನು:

> "ನಾನು ನಾಗಪುರದಲ್ಲಿ ಧೃತರಾಷ್ಟ್ರಜನ ಸಭೆಗೆ ಹೋಗಿ ನಿಜವಾದುದನ್ನೂ, ಪಾಲಿಸಬೇಕಾದುದನ್ನೂ ಮತ್ತು ಹಿತವಾದುದನ್ನೂ ಹೇಳಿದೆನು. ಆದರೆ ಆ ದುರ್ಮತಿಯು ಅದನ್ನು ಸ್ವೀಕರಿಸಲಿಲ್ಲ."

ಯುಧಿಷ್ಠಿರನು ಹೇಳಿದನು:

"ಹೃಷೀಕೇಶ! ಕ್ರೂರಿ ದುರ್ಯೋಧನನು ಕೆಟ್ಟ ದಾರಿಯನ್ನು ಹಿಡಿದಾಗ ಕುರುವೃದ್ಧ ಪಿತಾಮಹನು ಏನು ಹೇಳಿದನು? ಮಹಾಬಾಹು ಆಚಾರ್ಯ ಭಾರದ್ವಾಜನು ಏನು ಹೇಳಿದನು? ನಮ್ಮ ಕಿರಿಯ ತಂದೆಯಾದ, ಧರ್ಮಭೃತರಲ್ಲಿ ಶ್ರೇಷ್ಠನಾದ, ಪುತ್ರಶೋಕದಿಂದ ಸಂತಪ್ತನಾದ ಕ್ಷತ್ತನು ಧೃತರಾಷ್ಟ್ರಜನಿಗೆ ಏನು ಹೇಳಿದನು? ಅಲ್ಲಿ ಸಭೆಯಲ್ಲಿ ಸೇರಿದ್ದ ಎಲ್ಲ ನೃಪತಿಯರು ಏನು ಹೇಳಿದರು? ಅವರು ಹೇಳಿದುದನ್ನು ಯಥಾತತ್ವವಾಗಿ ಹೇಳು. ನೀನು ಈಗಾಗಲೇ ಕುರುಮುಖ್ಯರು ಕಾಮಲೋಭಗಳಿಂದ ತುಂಬಿದ, ಮೂಢನಾಗಿದ್ದರೂ ಪ್ರಾಜ್ಞನೆಂದು ತಿಳಿದುಕೊಂಡಿರುವ ಅವನಿಗೆ ಹೇಳಿದುದೆಲ್ಲವನ್ನೂ ಹೇಳಿದ್ದೀಯೆ. ಆದರೆ ಅಪ್ರಿಯವಾದುದು ನನ್ನ ಹೃದಯದಲ್ಲಿ ನಿಲ್ಲುವುದಿಲ್ಲ. ಅವರ ಮಾತುಗಳನ್ನು ಕೇಳಲು ಬಯಸುತ್ತೇನೆ, ಈ ಅವಕಾಶವು ಕಳೆದುಹೋಗದಂತೆ ಮಾಡು. ನೀನೇ ನಮಗೆ ಗತಿ. ನೀನೇ ನಾಥ. ನೀನೇ ಗುರು."

ವಾಸುದೇವನು ಹೇಳಿದನು:

"ರಾಜನ್! ಕುರುಗಳ ಮಧ್ಯೆ ಸಭೆಯಲ್ಲಿ ರಾಜಾ ಸುಯೋಧನನಿಗೆ ಹೇಳಿದ ಮಾತುಗಳನ್ನು ಕೇಳು. ನನ್ನ ಮಾತನ್ನು ಕೇಳಿ ಧೃತರಾಷ್ಟ್ರಜನು ಜೋರಾಗಿ ನಕ್ಕನು. ಆಗ

ಭೀಷ್ಮನು ಸಂಕೃದ್ಧನಾಗಿ ಈ ಮಾತುಗಳನ್ನಾಡಿದನು: “ದುರ್ಯೋಧನ! ಕುಲಾರ್ಥಕ್ಕಾಗಿ ನಾನು ಹೇಳುವುದನ್ನು ಅರ್ಥಮಾಡಿಕೋ! ಅದನ್ನು ಕೇಳಿ ನಿನ್ನ ಕುಲಕ್ಕೆ ಹಿತವಾದುದನ್ನು ಮಾಡು. ನನ್ನ ತಂದೆಯು ಲೋಕವಿಶ್ರುತ ಶಂತನು. ಆ ಪುತ್ರವಂತರಲ್ಲಿ ಶ್ರೇಷ್ಠನಿಗೆ ನಾನೊಬ್ಬನೇ ಮಗನಾಗಿದ್ದೆನು. ಎರಡನೆಯ ಮಗನನ್ನು ಪಡೆಯಬೇಕು ಎಂದು ಅವನ ಬುದ್ಧಿಯಲ್ಲಿ ಯೋಚನೆಯು ಬಂದಿತು. ಏಕೆಂದರೆ ತಿಳಿದವರು ಒಂದೇ ಮಗನೆಂದರೆ ಮಗನೇ ಇಲ್ಲದ ಹಾಗೆ ಎಂದು ಹೇಳುತ್ತಾರೆ. ಈ ಕುಲವು ನಾಶವಾಗಬಾರದು ಮತ್ತು ನನ್ನ ಯಶಸ್ಸು ಹೇಗೆ ಹರಡಬೇಕು ಎಂದು ಯೋಚಿಸಿದ ಅವನ ಬಯಕೆಯನ್ನು ತಿಳಿದುಕೊಂಡು ನಾನು ಕಾಲಿಯನ್ನು ತಾಯಿಯನ್ನಾಗಿ ಕರೆತಂದೆನು. ತಂದೆಗಾಗಿ ಮತ್ತು ಕುಲಕ್ಕಾಗಿ ನಾನು ರಾಜನಾಗಲಾರೆ ಮತ್ತು ಊರ್ಧ್ವರೇತನಾಗಿರುತ್ತೇನೆ ಎಂಬ ದುಷ್ಕರ ಪ್ರತಿಜ್ಞೆಯನ್ನು ಮಾಡಿದುದು ನಿನಗೆ ತಿಳಿದೇ ಇದೆ. ಆ ಪ್ರತಿಜ್ಞೆಯನ್ನು ಪಾಲಿಸುತ್ತಾ ನಾನು ಸಂತೋಷದಿಂದಿದ್ದೇನೆ. ನೋಡು! ಅವನಲ್ಲಿ ಮಹಾಬಾಹು, ಶ್ರೀಮಾನ್, ಕುರುಕುಲೋದ್ವಹ, ಧರ್ಮಾತ್ಮ, ನನ್ನ ಕಿರಿಯ ರಾಜ ವಿಚಿತ್ರವೀರ್ಯನು ಜನಿಸಿದನು. ತಂದೆಯ ಮರಣದ ನಂತರ ನನ್ನದಾಗಬೇಕಾಗಿದ್ದ ರಾಜ್ಯದಲ್ಲಿ ನಾನೇ ವಿಚಿತ್ರವೀರ್ಯನನ್ನು ರಾಜನನ್ನಾಗಿ ಸ್ಥಾಪಿಸಿದೆನು. ಮತ್ತು

ಅವನ ಕೆಳಗೆ ಸೇವಕನಾಗಿ ನಡೆದುಕೊಂಡೆನು. ಅವನಿಗೆ ಸದೃಶರಾದ ಪತ್ನಿಯರನ್ನು ನಾನು ಪಾರ್ಥಿವ ಗುಂಪನ್ನು ಗೆದ್ದು ಕರೆದುಕೊಂಡು ಬಂದೆ. ಅದನ್ನು ನೀನು ಬಹಳ ಸಾರಿ ಕೇಳಿದ್ದೀಯೆ. ಆಗ ಸಮರದಲ್ಲಿ ನನಗೆ ರಾಮನೊಂದಿಗೆ ನನ್ನ ದ್ವಂದ್ವಯುದ್ಧಮಾಡುವ ಸಮಯ ಬಂದೊದಗಿತು. ರಾಮನ ಭಯದಿಂದ ಅವನು ನಾಗಸಾಹ್ವಯವನ್ನು ಬಿಟ್ಟು ಓಡಿ ಹೋಗಿದ್ದ. ಪತ್ನಿಯರಲ್ಲಿ ತುಂಬಾ ತೊಡಗಿದ್ದ ಅವನು ಯಮಸದನವನ್ನು ಸೇರಿದನು. ಅರಾಜಕತ್ವದಿಂದ ಸುರೇಶ್ವರನು ರಾಷ್ಟ್ರದಲ್ಲಿ ಮಳೆಯನ್ನು ಸುರಿಸಲಿಲ್ಲ. ಆಗ ಹಸಿವು-ಭಯ ಪೀಡಿತರಾದ ಪ್ರಜೆಗಳು ಅವಸರದಲ್ಲಿ ನನ್ನಲ್ಲಿಗೇ ಬಂದು ಹೇಳಿದರು: "ಪ್ರಜೆಗಳೆಲ್ಲರೂ ನಾಶಗೊಳ್ಳುತ್ತಿದ್ದಾರೆ. ನೀನೇ ರಾಜನಾಗು! ಶಂತನುವಿನ ಕುಲವರ್ಧನ! ಈ ಬರಗಾಲವನ್ನು ಇಲ್ಲವಾಗಿಸು. ನಿನಗೆ ಮಂಗಳವಾಗಲಿ! ನಿನ್ನ ಪ್ರಜೆಗಳೆಲ್ಲರೂ ಅತಿ ತೀಕ್ಷ್ಣ ಮತ್ತು ದಾರುಣ ವ್ಯಾಧಿಗಳಿಂದ ಪೀಡಿತರಾಗಿದ್ದಾರೆ. ಕೆಲವರೇ ಉಳಿದುಕೊಂಡಿದ್ದಾರೆ. ಗಾಂಗೇಯ! ಅವರನ್ನು ರಕ್ಷಿಸಬೇಕು. ಈ ವ್ಯಾಧಿಗಳನ್ನು ಹೋಗಲಾಡಿಸು. ಪ್ರಜೆಗಳನ್ನು ಧರ್ಮದಿಂದ ಪಾಲಿಸು. ನೀನು ಜೀವಂತವಿರುವಾಗಲೇ ರಾಷ್ಟ್ರವು ವಿನಾಶಹೊಂದಲು ಬಿಡಬೇಡ!"

ಪ್ರಜೆಗಳ ಈ ಅತೀವ ಕ್ರೋಶವು ನನ್ನ ಮನಸ್ಸನ್ನು

ಅಲುಗಾಡಿಸಲಿಲ್ಲ. ಪ್ರತಿಜ್ಞೆಯನ್ನು ನೆನಪಿಸಿಕೊಂಡು ಅದನ್ನು ರಕ್ಷಿಸಲು ನಡೆದುಕೊಂಡೆ. ಆಗ ತುಂಬಾ ಸಂತಪ್ತರಾದ ಪೌರರು, ತಾಯಿ ಶುಭೆ ಕಾಲೀ, ಸೇವಕರು, ಪುರೋಹಿತರು, ಆಚಾರ್ಯರು, ವಿದ್ವಾನ್ ಬ್ರಾಹ್ಮಣರು "ರಾಜನಾಗು!" ಎಂದು ಒತ್ತಾಯಿಸಿದರು. "ನಿನ್ನನ್ನು ಪಡೆದ ಈ ಪ್ರತೀಪರಕ್ಷಿತ ರಾಷ್ಟ್ರವು ನಾಶಗೊಳ್ಳುತ್ತಿದೆ. ಮಹಾಮತೇ! ನೀನು ನಮಗಾಗಿಯಾದರೂ ರಾಜನಾಗಿ, ಉದ್ಧರಿಸು!" ಅವರ ಮಾತನ್ನು ಕೇಳಿ, ಕೈಮುಗಿದು ದುಃಖಿತನಾಗಿ ತುಂಬಾ ಆತುರನಾಗಿ ಅವರಿಗೆ ಪಿತೃಗೌರವಕ್ಕಾಗಿ ಮಗನು ಮಾಡಿದ ಮತ್ತು ಕುಲಕ್ಕಾಗಿ ಮಾಡಿದ ಅರಾಜನಾಗಿರುವ ಮತ್ತು ಊರ್ಧ್ವರೇತನಾಗಿರುವ ಪ್ರತಿಜ್ಞೆಯ ಕುರಿತು ಪುನಃ ಪುನಃ ಹೇಳಿದೆ. ಆಗ ನಾನು ಕೈಮುಗಿದು ತಾಯಿಗೆ "ಅಂಬ! ಶಾಂತನುವಿನಲ್ಲಿ ಹುಟ್ಟಿ, ಕೌರವ ವಂಶವನ್ನು ಬೆಂಬಲಿಸುವ ನಾನು ಪ್ರತಿಜ್ಞೆಯನ್ನು ಸುಳ್ಳಾಗಿ ಮಾಡಲಾರೆ" ಎಂದು ಪುನಃ ಪುನಃ ಹೇಳಿ ಸಮಾಧಾನಗೊಳಿಸಿದೆನು. "ವಿಶೇಷವಾಗಿ ನಿನಗೋಸ್ಕರ ಈ ನೇಗಿಲನ್ನು ನನ್ನ ಮೇಲೆ ಹೊರಿಸಬೇಡ. ನಾನು ನಿನ್ನ ದಾಸ ಮತ್ತು ಗುಲಾಮ." ಹೀಗೆ ನನ್ನ ತಾಯಿಯನ್ನೂ ಜನರನ್ನೂ ಸಮಾಧಾನಗೊಳಿಸಿ ನನ್ನ ತಮ್ಮನ ಪತ್ನಿಯರಿಗಾಗಿ ಮಹಾಮುನಿ ವ್ಯಾಸನನ್ನು ಬೇಡಿಕೊಂಡೆನು. ತಾಯಿಯೊಂದಿಗೆ ಆ ಋಷಿಯನ್ನು ಪೂಜಿಸಿ ಮಕ್ಕಳನ್ನು

ಕೇಳಿದಾಗ ಆ ಕೃತವಂತನು ಪ್ರಸಾದವಾಗಿ ಮೂವರು ಪುತ್ರರನ್ನು ಜನಿಸಿದನು. ಅಂಧನೆಂದು ನಿನ್ನ ತಂದೆಯು ರಾಜನಾಗಲಿಲ್ಲ. ಲೋಕವಿಶ್ರುತ ಮಹಾತ್ಮಾ ಪಾಂಡುವು ರಾಜನಾದನು. ಅವನು ರಾಜನಾಗಿದ್ದನು. ಅವನ ಪುತ್ರರು ಅವರ ತಂದೆಗೆ ಆನುವಂಶೀಕರು. ಕಲಹವನ್ನು ಮಾಡಬೇಡ! ಅವರಿಗೆ ಅರ್ಧ ರಾಜ್ಯವನ್ನು ಕೊಟ್ಟುಬಿಡು. ನಾನು ಬದುಕಿರುವಾಗ ಯಾವ ಪುರುಷನು ರಾಜ್ಯವನ್ನಾಳುತ್ತಾನೆ? ನನ್ನ ಮಾತುಗಳನ್ನು ಕಡೆಗಣಿಸಬೇಡ. ನಿನ್ನ ಶಾಂತಿಯು ಸದಾ ನನ್ನ ಮನಸ್ಸಿನಲ್ಲಿದೆ. ನಾನು ನೀನು ಮತ್ತು ಅವರಲ್ಲಿ ಭೇದ ತೋರಿಸುವುದಿಲ್ಲ. ನಿನ್ನ ತಂದೆ, ಗಾಂಧಾರಿ ಮತ್ತು ವಿದುರರ ಮತವೂ ಇದೇ ಆಗಿದೆ. ವೃದ್ಧರನ್ನು ಕೇಳಬೇಕಾದರೆ ನನ್ನ ಮಾತುಗಳನ್ನು ಶಂಕಿಸಬೇಡ. ಇಲ್ಲವಾದರೆ ಸರ್ವವನ್ನೂ – ನಿನ್ನನ್ನೂ ಭೂಮಿಯನ್ನೂ – ನಾಶಪಡಿಸುತ್ತೀಯೆ."

ಭೀಷ್ಮನು ಹೀಗೆ ಹೇಳಲು ವಚನಕ್ಷಮನಾದ ದ್ರೋಣನು ನೃಪರ ಮಧ್ಯೆ ಆ ದುರ್ಯೋಧನನಿಗೆ, ನಿನಗೆ ಹಿತವಾಗುವ ಈ ಮಾತನ್ನಾಡಿದನು: "ಅಯ್ಯಾ! ಹೇಗೆ ಪ್ರಾತೀಪ ಶಂತನುವು ಕುಲಕ್ಕಾಗಿ ನಡೆದುಕೊಂಡನೋ ಹಾಗೆ ದೇವವ್ರತ ಭೀಷ್ಮನು ಕುಲಕ್ಕಾಗಿ ನಿಂತಿದ್ದಾನೆ. ನರಪತಿ, ಸತ್ಯಸಂಧ, ಜಿತೇಂದ್ರಿಯ, ಕುರುಗಳ ರಾಜ, ಧರ್ಮಾತ್ಮ, ಸಮಾಹಿತ ಪಾಂಡುವೂ ಹಾಗೆಯೇ ಇದ್ದನು. ಆ ಕುರುವಂಶ ವಿವರ್ಧನನು ರಾಜ್ಯವನ್ನು

ಹಿರಿಯಣ್ಣ ಧೃತರಾಷ್ಟ್ರನಿಗೆ ಮತ್ತು ಕಿರಿಯ ತಮ್ಮ ಕ್ಷತ್ತನಿಗೆ ಒಪ್ಪಿಸಿದ್ದನು. ಅನಂತರ ಸಿಂಹಾಸನದಲ್ಲಿ ಈ ಅಚ್ಯುತನನ್ನು ಸ್ಥಾಪಿಸಿ ಆ ಅನಘ ಕೌರವ್ಯನು ಭಾರ್ಯೆಯರೊಡನೆ ವನಕ್ಕೆ ಹೋದನು. ಈ ಪುರುಷವ್ಯಾಘ್ರ ವಿದುರನಾದರೋ ವಿನೀತನಾಗಿ ತಾಳೆಯ ಮರದ ಗರಿಯನ್ನು ಬೀಸುತ್ತಾ ಕೆಳಗೆ ನಿಂತು ದಾಸನಂತೆ ಅವನ ಸೇವೆಗೈದನು. ಆಗ ಪ್ರಜೆಗಳೆಲ್ಲರೂ ನರಾಧಿಪ ಪಾಂಡುವನ್ನು ಹೇಗೋ ಹಾಗೆ ಜನೇಶ್ವರ ಧೃತರಾಷ್ಟ್ರನನ್ನು ಅನುಸರಿಸಿದರು. ಧೃತರಾಷ್ಟ್ರ ಮತ್ತು ವಿದುರರಿಗೆ ರಾಜ್ಯವನ್ನು ಬಿಟ್ಟು ಪರಪುರಂಜಯ ಪಾಂಡುವು ಭೂಮಿಯನ್ನೆಲ್ಲಾ ಸಂಚರಿಸಿದನು. ಸತ್ಯಸಂಗರ ವಿದುರನು ಕೋಶ, ದಾನ, ಸೇವಕರ ಮೇಲ್ವಿಚಾರಣೆ, ಮತ್ತು ಎಲ್ಲರಿಗೂ ಊಟಹಾಕಿಸುವುದು ಇವುಗಳನ್ನು ನೋಡಿಕೊಳ್ಳುತ್ತಿದ್ದನು. ಪರಪುರಂಜಯ ಮಹಾತೇಜಸ್ವಿ ಭೀಷ್ಮನು ರಾಜರೊಂದಿಗೆ ಸಂಧಿ-ಯುದ್ಧಗಳು, ಮತ್ತು ಕಪ್ಪ-ಕಾಣಿಕೆಗಳ ವಿಷಯಗಳನ್ನು ನೋಡಿಕೊಳ್ಳುತ್ತಿದ್ದನು. ಸಿಂಹಾಸನಸ್ಥನಾಗಿದ್ದ ನೃಪತಿ ಮಹಾಬಲಿ ಧೃತರಾಷ್ಟ್ರನು ಮಹಾತ್ಮ ವಿದುರನಿಂದ ಸತತವಾಗಿ ಸಲಹೆಗಳನ್ನು ಪಡೆಯುತ್ತಿದ್ದನು. ಅವನ ಕುಲದಲ್ಲಿ ಹುಟ್ಟಿ ಏಕೆ ಕುಲವನ್ನು ಒಡೆಯಲು ತೊಡಗಿದ್ದೀಯೆ? ಸಹೋದರರೊಂದಿಗೆ ಒಂದಾಗು. ಒಟ್ಟಿಗೇ ಭೋಗಗಳನ್ನು ಭುಂಜಿಸು. ನಾನು ಇದನ್ನು ಹೇಡಿತನದಿಂದ ಹೇಳುತ್ತಿಲ್ಲ.

ಹಣದ ಕಾರಣಕ್ಕಂತೂ ಅಲ್ಲವೇ ಅಲ್ಲ. ಭೀಷ್ಮನು ಕೊಟ್ಟಿದ್ದುದನ್ನು ತಿನ್ನುತ್ತಿದ್ದೇನೆ. ನಿನ್ನಿಂದಲ್ಲ! ನಿನ್ನಿಂದ ವೃತ್ತಿ ವೇತನವನ್ನು ಪಡೆಯಲು ಬಯಸುತ್ತಿಲ್ಲ. ಭೀಷ್ಮನು ಎಲ್ಲಿದ್ದಾನೋ ಅಲ್ಲಿ ದ್ರೋಣನು ಇರಲೇಬೇಕು. ಭೀಷ್ಮನು ಹೇಳಿದಂತೆ ಮಾಡು. ಪಾಂಡುಪುತ್ರರಿಗೆ ಅರ್ಧರಾಜ್ಯವನ್ನು ಕೊಡು. ಅವರಿಗೆ ಹೇಗೆ ಆಚಾರ್ಯನೋ ಹಾಗೆ ನಾನು ನಿನಗೂ ಕೂಡ. ನನಗೆ ಅಶ್ವತ್ಥಾಮನು ಹೇಗೋ ಹಾಗೆ ಆ ಶ್ವೇತಹಯನೂ ನನ್ನವನೇ. ಬಹಳಷ್ಟು ಏಕೆ ಪ್ರಲಪಿಸಬೇಕು? ಎಲ್ಲಿ ಧರ್ಮವಿದೆಯೋ ಅಲ್ಲಿ ಜಯವಿದೆ.”

ಅಮಿತತೇಜಸ್ವಿ ದ್ರೋಣನು ಹೀಗೆ ಹೇಳಲು ಸತ್ಯಸಂಗರ ಧರ್ಮವಿದು ವಿದುರನು ಚಿಕ್ಕಪ್ಪ ಭೀಷ್ಮನ ಕಡೆ ತಿರುಗಿ ಅವನ ಮುಖವನ್ನು ನೋಡುತ್ತಾ ಹೇಳಿದನು: “ದೇವವ್ರತ! ನಾನು ಹೇಳುವ ಮಾತನ್ನು ಕೇಳು. ಈ ಕುರುವಂಶವು ಪ್ರನಷ್ಟವಾಗುತ್ತಿದ್ದಾಗ ನೀನು ಪುನಃ ಚೇತರಿಸುವಂತೆ ಮಾಡಿದೆ. ಇದರಿಂದ ವಿಲಪಿಸುತ್ತಿರುವ ನನ್ನ ಮಾತನ್ನು ನೀನು ಕಡೆಗಾಣುತ್ತಿದ್ದೀಯೆ. ಈ ಕುಲದಲ್ಲಿ ಕುಲಪಾಂಸನನಾಗಿರುವ ದುರ್ಯೋಧನ ಎಂಬ ಹೆಸರಿನವನು ಯಾರು? ಲೋಭದಲ್ಲಿ ನೆಲೆಸಿದ, ಅನಾರ್ಯನಾದ, ಅಕೃತಜ್ಞನಾದ, ಲೋಭದಿಂದ ಚೇತನವನ್ನು ಕಳೆದುಕೊಂಡ, ತಂದೆಯ ಧರ್ಮಾರ್ಥದರ್ಶಿನಿ ಶಾಸ್ತ್ರಗಳನ್ನು ಅತಿಕ್ರಮಿಸುವ ಅವನ ಬುದ್ಧಿಯನ್ನು

ಅನುಸರಿಸುತ್ತಿರುವೆಯಲ್ಲ! ದುರ್ಯೋಧನನು ಕುರುಗಳು ನಶಿಸುವಂತೆ ಮಾಡುತ್ತಾನೆ! ಅವನಿಂದ ನಾಶಹೊಂದದಂತೆ ಮಾಡು. ಹಿಂದೆ ನನ್ನನ್ನೂ ಧೃತರಾಷ್ಟ್ರನನ್ನೂ ಓರ್ವ ಚಿತ್ರಕಾರನು ಬರೆದಂತೆ ರೂಪಿಸಿದ್ದೆ. ಪ್ರಜಾಪತಿಯು ಪ್ರಜೆಗಳನ್ನು ಸೃಷ್ಟಿಸಿ ಸಂಹರಿಸುವಂತೆ ನೀನು ನಮ್ಮನ್ನು ನಾಶಗೊಳಿಸಬೇಡ! ನಿನ್ನ ಕಣ್ಣೆದುರಿಗೇ ನಡೆಯುವ ಈ ಕುಲಕ್ಷಯವನ್ನು ಉಪೇಕ್ಷಿಸಬೇಡ! ಒದಗಿರುವ ವಿನಾಶದಿಂದ ಇಂದು ನಿನ್ನ ಬುದ್ಧಿಯು ನಷ್ಟವಾಗಿದೆಯೆಂದಾದರೆ ನನ್ನ ಮತ್ತು ಧೃತರಾಷ್ಟ್ರನೊಂದಿಗೆ ವನಕ್ಕೆ ಹೊರಡು! ಸುದುರ್ಮತಿ ಧಾರ್ತರಾಷ್ಟ್ರನನ್ನು ಬಂಧಿಸಿ ಅಥವಾ ಮೂರ್ಛೆಗೊಳಿಸಿ ಈ ರಾಜ್ಯವು ಪಾಂಡವರಿಂದ ಅಭಿರಕ್ಷಿತಗೊಳ್ಳುತ್ತದೆ. ಪ್ರಸೀದನಾಗು! ಅಮಿತ ತೇಜಸ್ವಿ ಪಾಂಡವರ, ಕುರುಗಳ ಮತ್ತು ರಾಜರ ಮಹಾ ವಿನಾಶವು ಕಾಣುತ್ತಿದೆ.”

ಹೀಗೆ ಹೇಳಿ ದೀನಮಾನಸ ವಿದುರನು ಸುಮ್ಮನಾದನು. ಚಿಂತೆಗೊಳಗಾಗಿ ಪುನಃ ಪುನಃ ಸಿಟ್ಟುಸಿರುಬಿಡುತ್ತಿದ್ದನು. ಆಗ ರಾಜ ಸುಬಲನ ಪುತ್ರಿಯು ಕುಲನಾಶನದ ಭೀತಿಯಿಂದ ರಾಜರ ಸಮಕ್ಷಮದಲ್ಲಿ ಕ್ರೂರಿ ಪಾಪಮತಿ ದುರ್ಯೋಧನನಿಗೆ ಕೋಪದಿಂದ ಧರ್ಮಾತ್ಮಯುಕ್ತವಾದ ಈ ಮಾತನ್ನು ಹೇಳಿದಳು: “ಈ ರಾಜಸಭೆಯನ್ನು ಪ್ರವೇಶಿಸಿದ ಪಾರ್ಥಿವರೇ! ಬ್ರಹ್ಮರ್ಷಿಗಳೇ! ಅನ್ಯ ಸಭಾಸದರೇ! ಕೇಳಿರಿ! ಅಮಾತ್ಯ,

ಸೇವಕರೊಂದಿಗೆ ನೀವು ಮಾಡಿದ ಪಾಪ ಮತ್ತು ನಿಮ್ಮ ಅಪರಾಧವನ್ನು ಹೇಳುತ್ತೇನೆ! ಕುರುಗಳ ಈ ರಾಜ್ಯವು ವಂಶಪಾರಂಪರಿಕವಾಗಿ ಭೋಗಿಸಲ್ಪಟ್ಟು ಬಂದಿದೆ. ಇದೇ ಕ್ರಮಾಗತವಾಗಿ ಬಂದಿರುವ ಕುಲಧರ್ಮ. ಕ್ರೂರಕರ್ಮಿಗಳೇ! ನೀವು ಪಾಪಬುದ್ಧಿಯಿಂದ ಕುರುಗಳ ರಾಜ್ಯವನ್ನು ಧ್ವಂಸಿಸುತ್ತಿದ್ದೀರಿ. ರಾಜ್ಯದಲ್ಲಿ ನೆಲೆಸಿರುವ ಮನೀಷೀ ಧೃತರಾಷ್ಟ್ರ ಮತ್ತು ಅವನ ತಮ್ಮ ದೀರ್ಘದರ್ಶಿ ವಿದುರನನ್ನು ಅತಿಕ್ರಮಿಸಿ ದುರ್ಯೋಧನ! ನೀನು ಹೇಗೆ ಮೋಹದಿಂದ ಇಂದು ನೃಪತ್ವವನ್ನು ಕೇಳುತ್ತಿದ್ದೀಯೆ? ಭೀಷ್ಮನಿರುವಾಗ ರಾಜ ಮತ್ತು ಕ್ಷತ್ತರು ಇಬ್ಬರು ಮಹಾನುಭಾವರೂ ಅವನ ಅಧಿಕಾರದಲ್ಲಿದ್ದಾರೆ. ಆದರೆ ಧರ್ಮವನ್ನು ತಿಳಿದಿರುವ ಮಹಾತ್ಮ ನದೀಜನು ರಾಜ್ಯವನ್ನು ಬಯಸುವುದಿಲ್ಲ. ಈ ರಾಜ್ಯವು ಅಪ್ರಧೃಷ್ಯವಾಗಿ ಪಾಂಡುವಿನದಾಗಿತ್ತು. ಇಂದು ಅವನ ಪುತ್ರರದ್ದಲ್ಲದೇ ಇತರರಿಗಾಗುವುದಿಲ್ಲ. ಈ ಅಖಿಲ ರಾಜ್ಯವು ಪಾಂಡವರದ್ದು. ಅವರ ಪಿತಾಮಹನಿಂದ ಬಂದಿರುವುದು ಮತ್ತು ಮಕ್ಕಳು ಮೊಮ್ಮಕ್ಕಳಿಗೆ ಹೋಗುವಂಥಹುದು. ಕುರುಮುಖ್ಯ, ಮಹಾತ್ಮ, ಸತ್ಯಸಂಧ, ಮನೀಷೀ ದೇವವ್ರತನು ಏನು ಹೇಳುತ್ತಾನೋ ಅದನ್ನು ನಾವೆಲ್ಲರೂ ನಾಶಗೊಳ್ಳದ ಧರ್ಮವೆಂದು ಸ್ವೀಕರಿಸಿ, ಸ್ವಧರ್ಮವೆಂದು ಪರಿಪಾಲಿಸಬೇಕು. ಈ ಮಹಾವ್ರತನ

ಅನುಜ್ಞೆಯಂತೆ ನೃಪ ಮತ್ತು ವಿದುರರು ಹೇಳಲಿ. ನಮ್ಮ ಸುಹೃದಯಿಗಳು ಧರ್ಮವನ್ನು ಮುಂದಿಟ್ಟುಕೊಂಡು ದೀರ್ಘಕಾಲದವರೆಗೆ ಅದರಂತೆಯೇ ಮಾಡಲಿ. ನ್ಯಾಯಗತವಾಗಿರುವ ಕುರುಗಳ ಈ ರಾಜ್ಯವನ್ನು ಧರ್ಮಪುತ್ರ ಯುಧಿಷ್ಠಿರನು, ರಾಜಾ ಧೃತರಾಷ್ಟ್ರನಿಂದ ಪ್ರಚೋದಿತನಾಗಿ, ಶಾಂತನವನನ್ನು ಮುಂದಿಟ್ಟುಕೊಂಡು ಆಳಲಿ.”

ಗಾಂಧಾರಿಯು ಹೀಗೆ ಹೇಳಲು ಜನೇಶ್ವರ ಧೃತರಾಷ್ಟ್ರನು ನೃಪರ ಮಧ್ಯದಲ್ಲಿ ದುರ್ಯೋಧನನಿಗೆ ಹೀಗೆ ಹೇಳಿದನು: “ಪುತ್ರಕ! ದುರ್ಯೋಧನ! ಈಗ ನಾನು ನಿನಗೆ ಏನು ಹೇಳುತ್ತೇನೋ ಅದನ್ನು ಕೇಳಿ, ನಿನಗೆ ತಂದೆಯ ಮೇಲೆ ಗೌರವವಿದೆಯಂತಾದರೆ ಅದರಂತೆ ನಡೆದುಕೋ! ನಿನಗೆ ಮಂಗಳವಾಗಲಿ! ಹಿಂದೆ ಪ್ರಜಾಪತಿ ಸೋಮನು ಕುರುಗಳ ವಂಶವನ್ನು ಸ್ಥಾಪಿಸಿದನು. ಸೋಮನಿಂದ ಆರನೆಯವನು ನಹುಷಾತ್ಮಜ ಯಯಾತಿಯಾಗಿದ್ದನು. ಅವನಿಗೆ ಐವರು ರಾಜರ್ಷಿಸತ್ತಮ ಮಕ್ಕಳಿದ್ದರು. ಅವರಲ್ಲಿ ಮಹಾತೇಜಸ್ವಿ ಪ್ರಭು ಯದುವು ಜ್ಯೇಷ್ಠನಾಗಿದ್ದನು. ನಮ್ಮ ವಂಶವನ್ನು ಬೆಳೆಸಿದ, ಕಿರಿಯವ ಪುರುವು ವೃಷಪರ್ವಣನ ಮಗಳು ಶರ್ಮಿಷ್ಠೆಯಲ್ಲಿ ಜನಿಸಿದ್ದನು. ಯದುವಾದರೋ ಅಮಿತ ತೇಜಸ್ವಿ ಕಾವ್ಯ ಶುಕ್ರನ ಮಗಳು ದೇವಯಾನಿಯ ಮಗನಾಗಿದ್ದನು. ಯಾದವರ ಕುಲಕರ ಬಲವಾನ್

ವೀರ್ಯಸಮ್ಮತನು ದರ್ಪದಿಂದ ತುಂಬಿ, ಮಂದಬುದ್ಧಿಯುಳ್ಳವನಾಗಿ ಕ್ಷತ್ರಿಯತ್ವವನ್ನು ಕೀಳಾಗಿ ಕಂಡನು. ಬಲದರ್ಪವಿಮೋಹಿತನಾದ ಅವನು ತಂದೆಯ ಶಾಸನದಂತೆ ನಡೆದುಕೊಳ್ಳಲಿಲ್ಲ. ಈ ಅಪರಾಜಿತನು ತಂದೆಯನ್ನೂ ಸಹೋದರರರನ್ನೂ ಅವಮಾನಿಸಿದನು. ಭೂಮಿಯ ನಾಲ್ಕೂ ಕಡೆಗಳಲ್ಲಿಯೂ ಯದುವು ಬಲಶಾಲಿಯಾಗಿದ್ದನು. ನೃಪತಿಗಳನ್ನು ವಶಪಡೆಸಿಕೊಂಡು ನಾಗಸಾಹ್ವಯದಲ್ಲಿ ವಾಸಿಸುತ್ತಿದ್ದನು. ಅವನ ತಂದೆ ನಹುಷಾತ್ಮಜ ಯಯಾತಿಯು ಅವನನ್ನು ಶಪಿಸಿ ರಾಜ್ಯದಿಂದ ಹೊರಹಾಕಿದನು. ಬಲದರ್ಪಿತನಾದ ಆ ಅಣ್ಣನನ್ನು ಅನುಸರಿಸಿದ ತನ್ನ ಇತರ ಮಕ್ಕಳನ್ನೂ ಕೂಡ ಕ್ರುದ್ಧನಾದ ಯಯಾತಿಯು ಶಪಿಸಿದನು. ಆ ನೃಪಸತ್ತಮನು ತನ್ನಂತೆ ನಡೆದುಕೊಂಡ ಕಿರಿಯ ಪುತ್ರ ವಿಧೇಯ ಪುರುವನ್ನು ರಾಜ್ಯದಲ್ಲಿರಿಸಿಕೊಂಡನು. ಹೀಗೆ ಜ್ಯೇಷ್ಠನಾದರೂ ಜಂಬಪಡುತ್ತಿದ್ದವನು ರಾಜ್ಯವನ್ನು ಪಡೆಯಲಿಲ್ಲ. ಆದರೆ ಕಿರಿಯವನಾಗಿದ್ದರೂ ವೃದ್ಧರ ಸೇವೆಯನ್ನು ಮಾಡುವವನು ರಾಜ್ಯವನ್ನು ಪಡೆದನು. ಹೀಗೆಯೇ ನನ್ನ ತಂದೆಯ ಅಜ್ಜ ಪ್ರತೀಪನು ಸರ್ವಧರ್ಮಜ್ಞನಾಗಿದ್ದು ಮೂರು ಲೋಕಗಳಲ್ಲಿಯೂ ವಿಶ್ರುತನಾದ ರಾಜನಾಗಿದ್ದನು. ರಾಜ್ಯವನ್ನು ಧರ್ಮದಿಂದ ಶಾಸನಮಾಡುತ್ತಿದ್ದ ಆ ಪಾರ್ಥಿವಸಿಂಹನಿಗೆ ಮೂವರು

ದೇವಕಲ್ಪರಾದ ಯಶಸ್ವೀ ಪುತ್ರರು ಜನಿಸಿದರು. ದೇವಾಪಿಯು ಜ್ಯೇಷ್ಠನಾಗಿದ್ದನು. ಬಾಹ್ಲೀಕನು ಅವನ ನಂತರದವನು. ಮೂರನೆಯವನು ನನ್ನ ಅಜ್ಜ ಧೃತಿಮಾನ್ ಶಂತನುವು. ಮಹಾತೇಜಸ್ವಿ, ರಾಜಸತ್ತಮ, ಧಾರ್ಮಿಕ, ಸತ್ಯವಾದೀ, ಪಿತುಶುಶ್ರೂಷಣರತನಾಗಿದ್ದ ದೇವಾಪಿಯಾದರೋ ಚರ್ಮರೋಗಿಯಾಗಿದ್ದನು. ಅವನು ಪೌರ-ಜಾನಪದಗಳಿಗೆ ಸಮ್ಮತನಾಗಿದ್ದನು. ಸಾಧು ಸತ್ಕೃತನಾಗಿದ್ದನು. ಎಲ್ಲರ - ಬಾಲಕ-ವೃದ್ಧರ ಮತ್ತು ದೇವತೆಗಳ ಹೃದಯಂಗಮನಾಗಿದ್ದನು. ಪ್ರಾಜ್ಞನೂ, ಸತ್ಯಸಂಧನೂ, ಸರ್ವಭೂತಹಿತರತನೂ ಆಗಿದ್ದ ಅವನು ತಂದೆ, ಶಾಸ್ತ್ರ ಮತ್ತು ಬ್ರಾಹ್ಮಣರ ಪ್ರಕಾರ ನಡೆದುಕೊಳ್ಳುತ್ತಿದ್ದನು. ಬಾಹ್ಲೀಕನ ಮತ್ತು ಮಹಾತ್ಮ ಶಂತನುವಿನ ಪ್ರಿಯ ಅಣ್ಣನಾಗಿದ್ದನು. ಆ ಮಹಾತ್ಮರ ಒಟ್ಟಿಗಿದ್ದ ಸೌಭ್ರಾತೃತ್ವವು ಉದಾಹರಣೀಯವಾಗಿತ್ತು. ಆಗ ಕಾಲವು ಪ್ರಾಪ್ತವಾದಾಗ ವೃದ್ಧ ನೃಪತಿಸತ್ತಮ ವಿಭುವು ಅವನ ಅಭಿಷೇಕಕ್ಕಾಗಿ ಶಾಸ್ತ್ರೋಕ್ತ ಸಾಮಗ್ರಿಗಳನ್ನು ಸಂಗ್ರಹಿಸಿ ಎಲ್ಲ ಮಂಗಲ ಕಾರ್ಯಗಳನ್ನೂ ಮಾಡತೊಡಗಿದನು. ಆಗ ಬ್ರಾಹ್ಮಣರು, ಹಿರಿಯರು ನಗರ-ಗ್ರಾಮಗಳೊಂದಿಗೆ ಎಲ್ಲರೂ ದೇವಾಪಿಯ ಅಭಿಷೇಕವನ್ನು ನಿಲ್ಲಿಸಿದರು. ಅವರು ಅಭಿಷೇಕವನ್ನು ನಿಲ್ಲಿಸುತ್ತಿದ್ದಾರೆ ಎಂದು ಕೇಳಿದ ರಾಜಾ ನೃಪತಿಯ

ಗಂಟಲಿನಲ್ಲಿ ಕಣ್ಣೀರು ತುಂಬಿಕೊಂಡಿತು ಮತ್ತು ತನ್ನ ಮಗನಿಗಾಗಿ ಬಹಳ ಶೋಕಿಸಿದನು. ಹೀಗೆ ದಾನಿ, ಧರ್ಮಜ್ಞ, ಸತ್ಯಸಂಧನು ಪ್ರಜೆಗಳಿಗೆ ಪ್ರಿಯನಾಗಿದ್ದರೂ ಚರ್ಮದ ದೋಷದಿಂದ ಪ್ರದೂಷಿತನಾದನು. ಹೀನಾಂಗನನ್ನು ರಾಜನನ್ನಾಗಿ ದೇವತೆಗಳು ಆನಂದಿಸುವುದಿಲ್ಲ. ಆದುದರಿಂದ ದ್ವಿಜರ್ಷಭರು ಆ ನೃಪಶ್ರೇಷ್ಠನನ್ನು ತಡೆದರು. ಆಗ ಅತ್ಯಂತ ವ್ಯಥಿತನಾದ ಪುತ್ರಶೋಕಸಮನ್ವಿತನಾದ ಅವನು ಮರಣಹೊಂದಲು, ಅದನ್ನು ನೋಡಿ ದೇವಾಪಿಯು ವನವನ್ನು ಸೇರಿದನು. ಬಾಹ್ಲೀಕನು ರಾಜ್ಯವನ್ನು ತ್ಯಜಿಸಿ ಅವನ ಸೋದರ ಮಾವನ ಕುಲದಲ್ಲಿ ನೆಲೆಸಿದನು. ತಂದೆ-ತಮ್ಮರನ್ನು ಪರಿತ್ಯಜಿಸಿ ಅಭಿವೃದ್ಧಿ ಹೊಂದಿದ ಪುರವನ್ನು ಪಡೆದನು. ತಂದೆಯ ಮರಣದ ನಂತರ ಬಾಹ್ಲೀಕನು ಹೊರಟುಹೋಗಲು ಲೋಕವಿಶ್ರುತ ಶಂತನುವು ರಾಜನಾಗಿ ರಾಜ್ಯವನ್ನಾಳಿದನು. ಹಾಗೆಯೇ ಜ್ಯೇಷ್ಠನಾದ ನಾನೂ ಕೂಡ ಹೀನಾಂಗನೆಂದು ಮತಿಮತನಾದ ಪಾಂಡುವಿನಿಂದ, ತುಂಬಾ ಆಲೋಚನೆಗಳ ನಂತರ, ರಾಜ್ಯದಿಂದ ಪರಿಭ್ರಂಷಿತನಾದೆ. ಕಿರಿಯವನಾಗಿದ್ದರೂ ಪಾಂಡುವು ರಾಜ್ಯವನ್ನು ಪಡೆದು ರಾಜನಾದನು. ಅವನ ಮರಣದ ನಂತರ ಈ ರಾಜ್ಯವು ಅವನ ಮಕ್ಕಳದ್ದಾಯಿತು. ಈ ರಾಜ್ಯಕ್ಕೆ ನಾನೇ ಭಾಗಿಯಾಗಿರದಿರುವಾಗ ನೀನು ಹೇಗೆ ಅದನ್ನು

ಬಯಸುತ್ತೀಯೆ? ನ್ಯಾಯಗತವಾಗಿ ಈ ರಾಜ್ಯವು ರಾಜಪುತ್ರ, ಮಹಾತ್ಮ ಯುಧಿಷ್ಠಿರನದ್ದು. ಅವನು ಕೌರವ ಜನರ ಒಡೆಯ. ಆ ಮಹಾನುಭಾವನೇ ಇದನ್ನು ಆಳುವವನು. ಅವನು ಸತ್ಯಸಂಧ, ಸತತವೂ ಅಪ್ರಮತ್ತನಾಗಿ, ಶಾಸ್ತ್ರಗಳಲ್ಲಿ ನೆಲೆಸಿದ್ದಾನೆ. ಬಂಧುಜನರ ಸಾಧು. ಪ್ರಜೆಗಳ ಪ್ರಿಯ. ಸುಹೃದಯರ ಅನುಕಂಪಿ. ಜಿತೇಂದ್ರಿಯ ಮತ್ತು ಸಾಧುಜನರ ನಾಯಕ. ಕ್ಷಮೆ, ತಿತಿಕ್ಷಾ, ದಮ, ಆರ್ಜವ, ಸತ್ಯವ್ರತತ್ವ, ಶ್ರುತ, ಅಪ್ರಮಾದ, ಭೂತಾನುಕಂಪನೆ, ಅನುಶಾಸನ ಈ ಸಮಸ್ತ ರಾಜಗುಣಗಳೂ ಯುಧಿಷ್ಠಿರನಲ್ಲಿವೆ. ರಾಜನ ಮಗನಲ್ಲದ, ಅನಾರ್ಯನಂತೆ ನಡೆದುಕೊಳ್ಳುವ, ಲುಬ್ಧನಾದ, ಬಂಧುಗಳಲ್ಲಿ ಪಾಪಬುದ್ಧಿಯನ್ನು ತೋರಿಸುವ, ದುರ್ವಿನೀತನಾದ ನೀನು ಹೇಗೆ ತಾನೇ ಕ್ರಮಾಗತವಾಗಿ ಬೇರೆಯವರದ್ದಾಗಿರುವ ಈ ರಾಜ್ಯವನ್ನು ಅಪಹರಿಸಲು ಸಾಧ್ಯ? ಹುಚ್ಚನ್ನು ತೊರೆದು ವಾಹನ ಪರಿಚಾರಕರೊಂದಿಗೆ ಅರ್ಧರಾಜ್ಯವನ್ನು ಬಿಟ್ಟುಕೊಡು. ಹಾಗೆ ಮಾಡಿದರೆ ಮಾತ್ರ ನೀನು ಮತ್ತು ನಿನ್ನ ಅನುಜರು ಉಳಿದ ಆಯುಸ್ಸನ್ನು ಜೀವಿಸಬಲ್ಲಿರಿ!”

ಭೀಷ್ಮ, ದ್ರೋಣ, ವಿದುರರು, ಗಾಂಧಾರಿ ಮತ್ತು ಧೃತರಾಷ್ಟ್ರರು ಹೀಗೆ ಹೇಳಿದರೂ ಆ ಮಂದನು ತನ್ನ ಬುದ್ಧಿಯನ್ನು ಬದಲಿಸಲಿಲ್ಲ. ಅವರನ್ನು ಕಡೆಗಣಿಸಿ, ರೋಷದಿಂದ ರಕ್ತಲೋಚನನಾಗಿ ಸಿಟ್ಟಿನಿಂದ ಮೇಲೆದ್ದನು.

ಅವನ ಹಿಂದೆ ಜೀವಿತವನ್ನು ತೊರೆದ ಇತರ ರಾಜರು ಹಿಂಬಾಲಿಸಿದರು. ಆ ದುಷ್ಟಚೇತಸನು ಅಲ್ಲಿದ್ದ ರಾಜ ಪಾರ್ಥಿವರಿಗೆ “ಇಂದು ಪುಷ್ಯ. ಕುರುಕ್ಷೇತ್ರಕ್ಕೆ ಪ್ರಯಾಣಿಸಿ!” ಎಂದು ಪುನಃ ಪುನಃ ಅಜ್ಞಾಪಿಸಿದನು. ಆಗ ಕಾಲಚೋದಿತರರಾದ ಆ ಪೃಥಿವೀ ಪಾಲಕರು ಸೈನಿಕರೊಂದಿಗೆ ಭೀಷ್ಮನನ್ನು ಸೇನಾಪತಿಯನ್ನಾಗಿ ಮಾಡಿಕೊಂಡು ಹೊರಟರು. ಹನ್ನೊಂದು ಅಕ್ಷೌಹಿಣೀ ಸೇನೆ ಮತ್ತು ಪಾರ್ಥಿವರು ಸಮಾಗತರಾಗಿದ್ದರು. ಅವರ ಪ್ರಮುಖನಾಗಿ ತಾಲಕೇತು ಭೀಷ್ಮನು ಮಿಂಚಿದನು. ಈಗ ಅಲ್ಲಿ ಹೋಗಿ ಯುಕ್ತವಾದುದು ಏನೆಂದು ತಿಳಿದಿದ್ದೀಯೋ ಅದನ್ನು ಮಾಡು. ನನ್ನ ಸಮಕ್ಷಮದಲ್ಲಿ ಭೀಷ್ಮ, ದ್ರೋಣ, ವಿದುರ, ಗಾಂಧಾರಿ ಮತ್ತು ಧೃತರಾಷ್ಟ್ರನು ಹೇಳಿದ ಮಾತನ್ನು ಮತ್ತು ಕುರುಸಂಸದಿಯಲ್ಲಿ ನಡೆದುದನ್ನು ನಿನಗೆ ಹೇಳಿದ್ದೇನೆ.

ಮೊದಲು ನಾನು ಸೌಭ್ರಾತ್ರುತ್ವವನ್ನು ಇಚ್ಛಿಸಿ, ಕುರುವಂಶದಲ್ಲಿ ಒಡಕು ಬರಬಾರದೆಂದು, ಪ್ರಜೆಗಳ ಅಭಿವೃದ್ಧಿಗಾಗಿ ಸಾಮವನ್ನು ಬಳಸಿದೆನು. ಯಾವಾಗ ಸಾಮವು ಸೋತಿತೋ ಆಗ ಪುನಃ ಭೇದವನ್ನು ಬಳಸಿದೆನು. ನಿಮ್ಮ ದೇವ ಮಾನುಷ ಸಂಹಿತ ಕರ್ಮಗಳನ್ನು ವರ್ಣಿಸಿದೆನು. ಯಾವಾಗ ಸುಯೋಧನನು ನನ್ನ ಸಾಮಪೂರ್ವಕ ವಾಕ್ಯವನ್ನು ಕೇಳಲಿಲ್ಲವೋ ಆಗ ಸರ್ವಪಾರ್ಥಿವರಲ್ಲಿ ಭೇದವನ್ನು ಬಿತ್ತಲು

ಪ್ರಯತ್ನಿಸಿದೆ. ನಾನು ಅದ್ಭುತ, ಘೋರ, ದಾರುಣ ಅಮಾನುಷ ಕರ್ಮಗಳನ್ನು ತೋರಿಸಿದೆನು. ರಾಜರನ್ನು ಹೆದರಿಸಿದೆನು; ಸುಯೋಧನನನ್ನು ತೃಣೀಕರಿಸಿದೆನು, ಮತ್ತು ರಾಧೇಯ-ಸೌಬಲರನ್ನು ಪುನಃ ಪುನಃ ಹಳಿದೆನು. ನಾನು ಪುನಃ ಪುನಃ ಧಾರ್ತರಾಷ್ಟ್ರರ ನ್ಯೂನತೆಗಳನ್ನು ತೋರಿಸಿ ನಿಂದಿಸಿದೆನು. ಸರ್ವ ನೃಪರನ್ನೂ ಮಾತು ಮತ್ತು ಸಲಹೆಗಳಿಂದ ಭೇದಿಸಲು ಪ್ರಯತ್ನಿಸಿದೆ. ಪುನಃ ಸಾಮವನ್ನು ಬಳಸಿ, ಕುರುವಂಶದಲ್ಲಿ ಭೇದವುಂಟಾಗಬಾರದೆಂದು, ಕಾರ್ಯಸಿದ್ಧಿಯಾಗಬೇಕೆಂದು ಈ ಲಾಭಗಳ ಕುರಿತು ಹೇಳಿದೆನು: "ಈ ಬಾಲಕ ಪಾಂಡವರು ಮಾನ, ಮದಗಳನ್ನು ತೊರೆದು ಧೃತರಾಷ್ಟ್ರ, ಭೀಷ್ಮ ಮತ್ತು ವಿದುರರಿಗೆ ಶರಣು ಬರುತ್ತಾರೆ. ಅವರು ರಾಜ್ಯವನ್ನು ನಿಮಗೆ ಒಪ್ಪಿಸಿ, ಅವರ ಈಶತ್ವವನ್ನು ತೊರೆಯುತ್ತಾರೆ. ರಾಜ, ಗಾಂಗೇಯ ಮತ್ತು ವಿದುರರು ಹೇಳಿದಂತಾಗಲಿ. ಎಲ್ಲವು ನಿನ್ನ ರಾಜ್ಯವಾಗಲಿ. ಐದು ಗ್ರಾಮಗಳನ್ನು ಬಿಟ್ಟುಕೊಡು. ನಿನ್ನ ತಂದೆಯು ಅವಶ್ಯವಾಗಿ ಅವರನ್ನು ಪೋಷಿಸಬಲ್ಲನು."

"ಇಷ್ಟು ಹೇಳಿದರೂ ಆ ದುಷ್ಟಾತ್ಮನು ತನ್ನ ಭಾವವನ್ನು ಬದಲಾಯಿಸಲಿಲ್ಲ. ಈಗ ನನಗೆ ಅವರ ಪಾಪಗಳಿಗೆ ನಾಲ್ಕನೆಯದಾದ ದಂಡವಲ್ಲದೇ ಬೇರೆ ಏನೂ ಕಾಣುತ್ತಿಲ್ಲ. ಅವರದೇ ವಿನಾಶಕ್ಕೆ ನರಾಧಿಪರು ಕುರುಕ್ಷೇತ್ರಕ್ಕೆ ಹೊರಟಿದ್ದಾರೆ. ಕುರುಸಂಸದಿಯಲ್ಲಿ ನಡೆದುದೆಲ್ಲವನ್ನೂ ನಿನಗೆ ಹೇಳಿದ್ದೇನೆ. ಪಾಂಡವ! ಯುದ್ಧವಿಲ್ಲದೇ

ಅವರು ನಿನಗೆ ರಾಜ್ಯವನ್ನು ಹಿಂದಿರುಗಿಸುವುದಿಲ್ಲ. ವಿನಾಶಕ್ಕೆ ಕಾರಣರಾಗುವ ಅವರು ಮೃತ್ಯುವನ್ನು ಎದುರಿಸಿದ್ದಾರೆ!"

## ಯುಧಿಷ್ಠಿರನ ಅನುಮಾನ

ವಾಸುದೇವನ ಆ ಮಾತುಗಳನ್ನು ನೆನಪಿಸಿಕೊಂಡು ಯುಧಿಷ್ಠಿರನು ಪುನಃ ವಾರ್ಷ್ಣೇಯನನ್ನು ಪ್ರಶ್ನಿಸಿದನು:

> "ಆ ಮಂದನು ಹೇಗೆ ಮಾತನಾಡಿದನು? ಅಚ್ಯುತ! ಈಗ ಕಾಲವು ನಮ್ಮ ಬಳಿ ಬಂದಿರುವಾಗ ನಮಗೆ ಒಳ್ಳೆಯದಾದುದು ಏನು? ಸ್ವಧರ್ಮವನ್ನು ತೊರೆಯದೇ ನಾವು ಹೇಗೆ ನಡೆದುಕೊಳ್ಳಬಹುದು? ದುರ್ಯೋಧನ, ಕರ್ಣ, ಶಕುನಿ ಸೌಬಲ, ನನ್ನ ಮತ್ತು ನನ್ನ ಸಹೋದರರ ಮತವನ್ನು ನೀನು ತಿಳಿದಿದ್ದೀಯೆ. ವಿದುರ ಮತ್ತು ಭೀಷ್ಮ ಇಬ್ಬರ ಮಾತುಗಳನ್ನೂ ನೀನು ಕೇಳಿದ್ದೀಯೆ. ಕುಂತಿಯ ಪ್ರಾಜ್ಞ ಮಾತುಗಳನ್ನು ಸಂಪೂರ್ಣವಾಗಿ ನೀನು ಕೇಳಿದ್ದೀಯೆ. ಅವೆಲ್ಲವನ್ನೂ ಬದಿಗಿಟ್ಟು, ಪುನಃ ಪುನಃ ವಿಚಾರಿಸಿ, ಏನೂ ಯೋಚಿಸದೇ ನಮಗೆ ಕ್ಷಮವಾದುದನ್ನು ಹೇಳು."

ಧರ್ಮರಾಜನ ಈ ಧರ್ಮಾರ್ಥಸಹಿತ ಮಾತನ್ನು ಕೇಳಿ ಕೃಷ್ಣನು ಮೇಘದುಂದುಭಿಯ ಧ್ವನಿಯಲ್ಲಿ ಈ ಮಾತನ್ನಾಡಿದನು:

> "ನಾನು ಯಾವ ಧರ್ಮಾರ್ಥಸಂಹಿತ ಹಿತಮಾತುಗಳನ್ನಾಡಿದೆನೋ ಅದು ನಿಕೃತಿಪ್ರಜ್ಞ ಕೌರವ್ಯನಿಗೆ

ತಾಗಲಿಲ್ಲ. ಆ ದುರ್ಬುದ್ಧಿಯು ಭೀಷ್ಮನದಾಗಲೀ ವಿದುರನದ್ದಾಗಲೀ, ನಾನು ಹೇಳಿದುದನ್ನಾಗಲೀ ಕೇಳಲಿಲ್ಲ. ಎಲ್ಲವನ್ನೂ ನಿರ್ಲಕ್ಷಿಸಿದನು. ಅವನು ಧರ್ಮವನ್ನು ಬಯಸುತ್ತಿಲ್ಲ. ಯಶಸ್ಸನ್ನು ಬಯಸುತ್ತಿಲ್ಲ. ದುರಾತ್ಮ ಕರ್ಣನನ್ನು ಆಶ್ರಯಿಸಿ ಎಲ್ಲವನ್ನೂ ಗೆದ್ದಿದ್ದೇನೆ ಎಂದು ತಿಳಿದುಕೊಂಡಿದ್ದಾನೆ. ಸುಯೋಧನನು ನನ್ನನ್ನು ಬಂಧಿಸಲೂ ಕೂಡ ಆಜ್ಞಾಪಿಸಿದನು. ಆದರೆ ಆ ದುರಾತ್ಮ ಶಾಸನಾತಿಗನ ಬಯಕೆಯು ಪೂರ್ತಿಯಾಗಲಿಲ್ಲ. ಅಚ್ಯುತ ವಿದುರನನ್ನು ಬಿಟ್ಟು ಭೀಷ್ಮನಾಗಲೀ ದ್ರೋಣನಾಗಲೀ ಅಲ್ಲಿ ಯುಕ್ತವಾದುದನ್ನು ಮಾತನಾಡಲಿಲ್ಲ. ಅವರೆಲ್ಲರೂ ಅವನನ್ನು ಅನುಸರಿಸುತ್ತಾರೆ. ಶಕುನಿ ಸೌಬಲ, ಕರ್ಣ-ದುಃಶಾಸನರೂ ಕೂಡ ಮೂಢರಂತೆ ಮೂಢ ಕೋಪಿಷ್ಟನಿಗೆ ನಿನ್ನ ಕುರಿತು ಅಯುಕ್ತ ಮಾತುಗಳನ್ನಾಡಿದರು. ಕೌರವರು ಏನು ಹೇಳಿದರೆಂದು ನಾನು ಪುನಃ ಹೇಳುವುದು ಏಕೆ? ಸಂಕ್ಷೇಪದಲ್ಲಿ ಆ ದುರಾತ್ಮರು ನಿನ್ನೊಡನೆ ಸರಿಯಾಗಿ ವರ್ತಿಸುತ್ತಿಲ್ಲ. ಅವನಲ್ಲಿ ಇರುವಷ್ಟು ಪಾಪವು ನಿನ್ನ ಸೈನಿಕರಲ್ಲಿ ಪಾರ್ಥಿವರು ಎಲ್ಲರಲ್ಲಿಯೂ ಇಲ್ಲ. ಅವನಲ್ಲಿ ಅಷ್ಟೊಂದು ಕಲ್ಯಾಣಗುಣಗಳ ಕೊರತೆಯಿದೆ. ನಾವೂ ಕೂಡ ಎಂದೂ ಪರಿತ್ಯಾಗಮಾಡಿ ಕೌರವರೊಂದಿಗೆ ಶಾಂತಿಯನ್ನು ಬಯಸುತ್ತಿಲ್ಲ. ಯುದ್ಧವಲ್ಲದೇ ಬೇರೆ ಯಾವ ದಾರಿಯೂ ಇಲ್ಲ."

ವಾಸುದೇವನಾಡಿದುದನ್ನು ಕೇಳಿ ಎಲ್ಲ ಪಾರ್ಥಿವರೂ ಏನನ್ನೂ ಹೇಳದೇ ರಾಜನ ಮುಖವನ್ನು ನೋಡಿದರು. ಮಹೀಕ್ಷಿತರ ಅಭಿಪ್ರಾಯವನ್ನು ಪಡೆದ ಯುಧಿಷ್ಠಿರನು ಭೀಮಾರ್ಜುನ ಮತ್ತು ಯಮಳರೊಂದಿಗೆ ಯೋಗವನ್ನು ಆಜ್ಞಾಪಿಸಿದನು. ಯೋಗವನ್ನು ಆಜ್ಞಾಪಿಸಿದಾಗ ಪಾಂಡವರ ಸೇನೆಯಲ್ಲಿ ಕಿಲಕಿಲಗಳುಂಟಾಯಿತು. ಸೈನಿಕರು ಬಹಳ ಹರ್ಷಿತರಾದರು. ಅವಧ್ಯರ ವಧೆಯನ್ನು ಕಂಡ ಧರ್ಮರಾಜ ಯುಧಿಷ್ಠಿರನು ಆಳವಾದ ನಿಟ್ಟಿಸುರು ಬಿಡುತ್ತಾ ಭೀಮಸೇನ ವಿಜಯರಿಗೆ ಇದನ್ನು ಹೇಳಿದನು:

> “ಯಾವ ಆಪತ್ತನ್ನು ತಡೆಯುವುದಕ್ಕಾಗಿ ನಾನು ವನವಾಸದ ದುಃಖವನ್ನು ಅನುಭವಿಸಿದೆನೋ ಅದು, ಪ್ರಯತ್ನವು ಪರಮ ಅನರ್ಥವೋ ಎನ್ನುವಂತೆ  ನಮ್ಮನ್ನು ಬಿಡುತ್ತಿಲ್ಲ. ನಾವು ಏನೆಲ್ಲ ಪ್ರಯತ್ನಗಳನ್ನು ಮಾಡಿದ್ದೇವೋ ಅವು ಹೀನ ಪ್ರಯತ್ನಗಳಾಗಿವೆ. ಪ್ರಯತ್ನದಿಂದ ನಾವು ಈ ಮಹಾ ಕಲಿಯನ್ನು ತಪ್ಪಿಸಲು ಅಸಮರ್ಥರಾಗಿದ್ದೇವೆ. ಏಕೆಂದರೆ ಸಂಗ್ರಾಮದಲ್ಲಿ ಅವಧ್ಯರನ್ನು ವಧಿಸುವ ಕಾರ್ಯವು ಹೇಗೆ ನಡೆಯುತ್ತದೆ? ಗುರುಗಳನ್ನೂ ವೃದ್ಧರನ್ನೂ ಕೊಂದು ಹೇಗೆ ನಮಗೆ ವಿಜಯವುಂಟಾಗುತ್ತದೆ?”

ಧರ್ಮರಾಜನ ಆ ಮಾತುಗಳನ್ನು ಕೇಳಿ ಪರಂತಪ ಸವ್ಯಸಾಚಿಯು ವಾಸುದೇವನು ಹೇಳಿದುದನ್ನೇ ಅವನಿಗೆ ಹೇಳಿದನು:

“ರಾಜನ್! ದೇವಕೀಪುತ್ರನು ಹೇಳಿದ, ಕುಂತಿ ಮತ್ತು ವಿದುರರು ಹೇಳಿ ಕಳುಹಿಸಿದ ಮಾತುಗಳನ್ನು ನೀನು ಕೇಳಲಿಲ್ಲವೇ? ಅವರಿಬ್ಬರೂ ಎಂದೂ ಅಧರ್ಮವಾದುದನ್ನು ಹೇಳುತ್ತಾರೆ ಎಂದು ನನಗೆ ಅನ್ನಿಸುವುದಿಲ್ಲ. ಯುದ್ಧವನ್ನು ಮಾಡದೇ ನಾವು ಹಿಂದಿರುಗುವುದು ಯುಕ್ತವಲ್ಲ.”

ಸವ್ಯಸಾಚಿಯನ್ನು ಕೇಳಿ ವಾಸುದೇವನೂ ಕೂಡ ಪಾರ್ಥನಿಗೆ “ಇದು ಸರಿ” ಎಂದು ಹೇಳಿದನು. ಅನಂತರ ಪಾಂಡವರು ಸೈನಿಕರೊಂದಿಗೆ ಯುದ್ಧಕ್ಕೆ ಧೃತಸಂಕಲ್ಪರಾಗಿ ಆ ರಾತ್ರಿಯನ್ನು ಸುಖವಾಗಿ ಕಳೆದರು.

## ಕೃಷ್ಣನು ಕರ್ಣನಲ್ಲಿ ಭೇದವನ್ನುಂಟುಮಾಡಲು ಪ್ರಯತ್ನಿಸಿದುದು

ಕೃಷ್ಣನು ಕರ್ಣನನ್ನು ತನ್ನ ರಥದಲ್ಲಿ ಕುಳ್ಳಿರಿಸಿಕೊಂಡು ಹೋದುದನ್ನು ತಿಳಿದ ಧೃತರಾಷ್ಟ್ರನು ಸಂಜಯನಿಗೆ ಹೇಳಿದನು:

“ಸಂಜಯ! ರಾಜಪುತ್ರರಿಂದ ಮತ್ತು ಅಮಾತ್ಯರಿಂದ ಪರಿವೃತನಾಗಿ ರಥದಲ್ಲಿ ಕರ್ಣನನ್ನು ಏರಿಸಿಕೊಂಡು ಹೊರಟ ಮಧುಸೂದನನು ರಥದಲ್ಲಿ ಕುಳಿತಿದ್ದ ಪರವೀರಹ ರಾಧೇಯನಿಗೆ ಏನು ಹೇಳಿದನು? ಗೋವಿಂದನು ಸೂತಪುತ್ರನಿಗೆ ಸಾಂತ್ವನದ ಯಾವ ಮಾತುಗಳನ್ನಾಡಿದನು? ದೊಡ್ಡ ಅಲೆಯಂತೆ ಅಥವಾ ಕಪ್ಪು ಮೋಡದಂತೆ ಧ್ವನಿಯುಳ್ಳ ಕೃಷ್ಣನು ಕರ್ಣನಿಗೆ, ಮೃದುವಾಗಿರಲಿ ಅಥವಾ

ಕಠೋರವಾಗಿರಲಿ, ಏನು ಹೇಳಿದ ಎನ್ನುವುದನ್ನು ನನಗೆ ಹೇಳು."

ಸಂಜಯನು ಹೇಳಿದನು:

"ಭಾರತ! ಆ ಸಂಭಾಷಣೆಯಲ್ಲಿ ಅಮೇಯಾತ್ಮ ಮಧುಸೂದನನು ರಾಧೇಯನಿಗೆ ಹೇಳಿದ ನಯವಾದ, ದಯೆಯಿಂದ ಕೂಡಿದ, ಪ್ರಿಯವಾದ, ಧರ್ಮಯುಕ್ತವಾದ, ಸತ್ಯವೂ ಹಿತವೂ ಆದ, ಹೃದಯದಲ್ಲಿ ಹಿಡಿದಿಟ್ಟುಕೊಳ್ಳಬೇಕಾದಂತಹ ಮಾತುಗಳನ್ನು ನನ್ನಿಂದ ಕೇಳು. ವಾಸುದೇವನು ಹೇಳಿದನು: "ರಾಧೇಯ! ವೇದಪಾರಂಗತ ಬ್ರಾಹ್ಮಣರನ್ನು ನೀನು ಉಪಾಸಿಸಿದ್ದೀಯೆ. ವಿನಯದಿಂದ, ಅನಸೂಯನಾಗಿ ಅವುಗಳ ಅರ್ಥವನ್ನು ಕೇಳಿ ತಿಳಿದುಕೊಂಡಿರುವೆ. ಸನಾತನ ವೇದಗಳನ್ನೂ ನೀನು ಅರಿತಿದ್ದೀಯೆ. ನೀನು ಧರ್ಮಶಾಸ್ತ್ರಗಳ ಸೂಕ್ಷ್ಮತೆಗಳಲ್ಲಿಯೂ ಪಳಗಿದ್ದೀಯೆ. ಮದುವೆಯ ಮೊದಲು ಕನ್ಯೆಗೆ ಹುಟ್ಟಿದವನು ಮದುವೆಯಾದ ಅವಳ ಗಂಡನಿಗೆ ಹುಟ್ಟಿದ ಮಕ್ಕಳಿಗೆ ಸಮನೆಂದು ಶಾಸ್ತ್ರವನ್ನು ತಿಳಿದ ಜನರು ಹೇಳುತ್ತಾರೆ. ಹಾಗೆ ಹುಟ್ಟಿದ ನೀನೂ ಕೂಡ ಧರ್ಮತಃ ಪಾಂಡುವಿನ ಮಗನಾಗಿದ್ದೀಯೆ. ಧರ್ಮಶಾಸ್ತ್ರಗಳ ಕಟ್ಟುಪಾಡುಗಳಂತೆ ಬಾ! ರಾಜನಾಗುವೆಯಂತೆ! ತಂದೆಯ ಕಡೆಯಿಂದ ಪಾರ್ಥರು



ಮತ್ತು ತಾಯಿಯ ಕಡೆಯಿಂದ ವೃಷ್ಣಿಗಳು. ಇವರಿಬ್ಬರೂ ನಿನ್ನವರೇ ಎನ್ನುವುದನ್ನು ತಿಳಿದುಕೋ! ನನ್ನ ಜೊತೆ ಇಂದು ಬಾ! ಯುಧಿಷ್ಠಿರನ ಹಿರಿಯ ಕೌಂತೇಯನೆಂದು ಪಾಂಡವರು ನಿನ್ನನ್ನು ಗುರುತಿಸಲಿ. ಐವರು ಪಾಂಡವ ಸಹೋದರರು, ಐವರು ದ್ರೌಪದಿಯ ಮಕ್ಕಳು ಮತ್ತು ಅಪರಾಜಿತ ಸೌಭದ್ರಿಯು ನಿನ್ನ ಪಾದಗಳನ್ನು ಹಿಡಿಯುತ್ತಾರೆ. ಪಾಂಡವರಿಗಾಗಿ ಸೇರಿರುವ ಎಲ್ಲ ಅಂಧಕ-ವೃಷ್ಣಿಯರು, ರಾಜರು, ರಾಜಪುತ್ರರು ನಿನ್ನ ಪಾದಗಳನ್ನು ಹಿಡಿಯುತ್ತಾರೆ. ಪಾರ್ಥಿವರು, ರಾಜರು, ರಾಜಕನ್ಯೆಯರು ಬಂಗಾರದ ಮತ್ತು ರಜತ ಕಲಶಗಳಲ್ಲಿ ಔಷಧಿ, ಸರ್ವಬೀಜಗಳು, ಸರ್ವರತ್ನಗಳನ್ನು, ಗಿಡಮೂಲಿಕೆಗಳನ್ನು ತಂದು ನಿನ್ನನ್ನು ಅಭಿಷೇಕಿಸುತ್ತಾರೆ. ಸಮಯ ಬಂದಾಗ ದ್ರೌಪದಿಯೂ ಕೂಡ ಆರನೆಯವನಾಗಿ ನಿನ್ನನ್ನು ಸೇರುತ್ತಾಳೆ. ಇಂದು ಚಾತುರ್ವೇದಗಳನ್ನು ತಿಳಿದಿರುವ ಬ್ರಾಹ್ಮಣವರ್ಗವು, ಪಾಂಡವರ ಪುರೋಹಿತನು ನಿನ್ನನ್ನು ವ್ಯಾಘ್ರಚರ್ಮದ ಮೇಲೆ ಕುಳ್ಳಿರಿಸಿ ಅಭಿಷೇಕಿಸುತ್ತಾನೆ. ಹಾಗೆಯೇ ಆ ಪುರುಷರ್ಷಭ ಸಹೋದರ ಪಂಚ ಪಾಂಡವರು, ಐವರು ದ್ರೌಪದೇಯರು, ಪಾಂಚಾಲ-ಚೇದಿಯರು ಮತ್ತು ನಾನೂ ಕೂಡ ನಿನ್ನನ್ನು ಪೃಥಿವೀಪತಿ ರಾಜನಾಗಿ ಅಭಿಷೇಕಿಸುತ್ತೇವೆ. ರಾಜನಾದ ನಿನಗೆ ಕುಂತೀಪುತ್ರ ಯುಧಿಷ್ಠಿರನು ಯುವರಾಜನಾಗುತ್ತಾನೆ.

ಧರ್ಮಾತ್ಮ ಸಂಶಿತವ್ರತ ಕುಂತೀಪುತ್ರ ಯುಧಿಷ್ಠಿರನು ನಿನ್ನ ಮೇಲೆ ಶ್ವೇತವ್ಯಾಜಿನವನ್ನು ಹಿಡಿದು ನಿನ್ನ ರಥದಲ್ಲಿ ನಿಲ್ಲುತ್ತಾನೆ. ಅಭಿಷಿಕ್ತನಾದ ಕೌಂತೇಯ ನಿನಗೆ ಮಹಾಬಲಿ ಭೀಮಸೇನನು ದೊಡ್ಡ ಶ್ವೇತಚತ್ರವನ್ನು ಹಿಡಿಯುತ್ತಾನೆ. ನೂರಾರು ಗಂಟೆಗಳ ಧ್ವನಿಗಳಿಂದ ಕೂಡಿದ, ವೈಯಾಘ್ರಚರ್ಮವನ್ನು ಹೊದೆಸಿದ, ಬಿಳಿಯ ಕುದುರೆಗಳನ್ನು ಕಟ್ಟಿರುವ ರಥದಲ್ಲಿ ನಿನ್ನನ್ನು ಅರ್ಜುನನು ಕರೆದೊಯ್ಯುತ್ತಾನೆ. ಅಭಿಮನ್ಯು, ನಕುಲ, ಸಹದೇವ, ಐವರು ದ್ರೌಪದೇಯರು ನಿತ್ಯವೂ ನಿನ್ನ ಸೇವೆಮಾಡುತ್ತಾರೆ. ಪಾಂಚಾಲರು, ಮಹಾರಥಿ ಶಿಖಂಡಿ, ಮತ್ತು ನಾನೂ ಕೂಡ ನಿನ್ನನ್ನು ಅನುಸರಿಸುತ್ತೇವೆ. ಎಲ್ಲ ಅಂಧಕ ವೃಷ್ಣಿಯರು, ದಾಶಾರ್ಹರು, ದಾಶಾರ್ಣರು ನಿನ್ನನ್ನು ಸುತ್ತುವರೆದಿರುತ್ತಾರೆ. ಪಾಂಡವ ಸಹೋದರರೊಂದಿಗೆ, ಜಪ-ಹೋಮಗಳಿಂದ ಸಂಯುಕ್ತನಾಗಿ, ಮಂಗಲ ವಿಧಗಳಿಂದ ರಾಜ್ಯವನ್ನು ಭೋಗಿಸು. ದ್ರವಿಡರು, ಕುಂತಲರು, ಆಂಧ್ರರು, ತಾಲಚರರು, ಚೂಚುಪರು, ಮತ್ತು ವೇಣುಪರು ನಿನ್ನ ಪುರೋಗಮರಾಗುತ್ತಾರೆ. ಇಂದು ಬಹಳ ಸೂತಮಾಗಧರು ಸ್ತುತಿಗಳಿಂದ ನಿನ್ನನ್ನು ಸ್ತುತಿಸುತ್ತಾರೆ. ಪಾಂಡವರು ವಸುಷೇಣನ ವಿಜಯವನ್ನು ಘೋಷಿಸುತ್ತಾರೆ. ನಕ್ಷತ್ರಗಳಿಂದ ಚಂದ್ರಮನು ಹೇಗೋ ಹಾಗೆ ನೀನು ಪಾರ್ಥರಿಂದ ಪರಿವೃತನಾಗಿ ರಾಜ್ಯವನ್ನು ಆಳಿ ಕುಂತಿಗೂ

ಆನಂದವನ್ನು ನೀಡುವೆ. ಸಹೋದರ ಪಾಂಡವರೊಂದಿಗಿರುವ ನಿನ್ನ ಸೌಭ್ರಾತೃತ್ವದಿಂದ ನಿನ್ನ ಮಿತ್ರರು ಹರ್ಷಪಡುತ್ತಾರೆ. ಶತ್ರುಗಳು ದುಃಖಿಸುತ್ತಾರೆ.”

ಕರ್ಣನು ಹೇಳಿದನು: “ಕೇಶವ! ನನ್ನ ಮೇಲಿನ ಸ್ನೇಹದಿಂದ, ಪ್ರೀತಿಯಿಂದ, ಸಖ್ಯದಿಂದ ಮತ್ತು ನನಗೆ ಶ್ರೇಯಸ್ಸಾಗಬೇಕೆಂದು ಇದನ್ನು ಹೇಳುತ್ತಿದ್ದೀಯೆ ಎನ್ನುವುದರಲ್ಲಿ ಸಂಶಯವಿಲ್ಲ. ನೀನು ಅಭಿಪ್ರಾಯಪಡುವಂತೆ ಧರ್ಮಶಾಸ್ತ್ರಗಳ ಕಟ್ಟುಪಾಡುಗಳಂತೆ ಧರ್ಮತಃ ನಾನು ಪಾಂಡುವಿನ ಮಗನೆಂದು ಎಲ್ಲವನ್ನೂ ತಿಳಿದಿದ್ದೇನೆ. ಕನ್ಯೆಯಾಗಿದ್ದಾಗಲೇ ಭಾಸ್ಕರನಿಂದ ಗರ್ಭವನ್ನು ಪಡೆದು ಆದಿತ್ಯನ ಮಾತಿನಂತೆ ಹುಟ್ಟಿದಾಗಲೇ ಅವಳು ನನ್ನನ್ನು ವಿಸರ್ಜಿಸಿದ್ದಳು. ಹೌದು ಕೃಷ್ಣ! ಧರ್ಮತಃ ನಾನು ಪಾಂಡುವಿನ ಪುತ್ರನಾಗಿ ಹುಟ್ಟಿದೆನು. ಆದರೆ ಕುಂತಿಯು ಸತ್ತು ಹುಟ್ಟಿದವನಂತೆ ನನ್ನನ್ನು ಬಿಸಾಡಿದಳು. ಸೂತ ಅಧಿರಥನು ನನ್ನನ್ನು ಕಂಡಕೂಡಲೇ ಮನೆಗೆ ಕರೆತಂದು ಪ್ರೀತಿಯಿಂದ ರಾಧೆಗೆ ಕೊಟ್ಟನು. ನನ್ನ ಮೇಲಿನ ಪ್ರೀತಿಯಿಂದ ಕೂಡಲೇ ಅವಳ ಎದೆಯ ಹಾಲು ಸುರಿಯಿತು. ಅವಳೂ ಕೂಡ ನನ್ನ ಮಲ ಮೂತ್ರಗಳನ್ನು ಸಹಿಸಿಕೊಂಡಳು. ನನ್ನಂಥವನು - ಧರ್ಮವನ್ನು ತಿಳಿದವನು ಮತ್ತು ಸತತವೂ ಧರ್ಮಶಾಸ್ತ್ರಗಳನ್ನು ಕೇಳುವುದರಲ್ಲಿ ನಿರತನಾದವನು - ಹೇಗೆ

ತಾನೇ ಅವಳಿಗೆ ಪಿಂಡವನ್ನು ನಿರಾಕರಿಸಬಲ್ಲ? ಸೂತ ಅಧಿರಥನು ನನ್ನನ್ನು ಮಗನೆಂದು ತಿಳಿದುಕೊಂಡಿದ್ದಾನೆ. ನಾನೂ ಕೂಡ ಪ್ರೀತಿಯಿಂದ ಅವನನ್ನು ತಂದೆಯೆಂದೇ ತಿಳಿದುಕೊಂಡಿದ್ದೇನೆ. ಅವನೇ ನನಗೆ ಪುತ್ರಪ್ರೀತಿಯಿಂದ ಶಾಸ್ತ್ರದೃಷ್ಟ ವಿಧಿಗಳಿಂದ ಜಾತಕರ್ಮಾದಿಗಳನ್ನು ಮಾಡಿಸಿದನು. ದ್ವಿಜರಿಂದ ನನಗೆ ವಸುಷೇಣನೆಂಬ ಹೆಸರನ್ನಿತ್ತನು. ನನಗೆ ಯೌವನ ಪ್ರಾಪ್ತಿಯಾದಾಗ ಅವನೇ ನನಗೆ ಭಾರ್ಯೆಯರನ್ನು ತಂದು ಮದುವೆಮಾಡಿಸಿದನು. ಅವರಲ್ಲಿ ನನಗೆ ಮಕ್ಕಳು ಮೊಮ್ಮಕ್ಕಳು ಹುಟ್ಟಿದ್ದಾರೆ. ಅವರ ಮೇಲೆ ನನ್ನ ಹೃದಯದಲ್ಲಿ ಕಾಮಬಂಧನವು ಬೆಳೆದುಕೊಂಡಿದೆ! ಸಕಲ ಭೂಮಿಯಾಗಲೀ, ಸುವರ್ಣದ ರಾಶಿಗಳಾಗಲೀ, ಹರ್ಷಗಳಾಗಲೀ, ಭಯಗಳಾಗಲೀ ನನ್ನ ಮಾತಿಗೆ ಸುಳ್ಳಾಗಿ ನಡೆದುಕೊಳ್ಳುವಂತೆ ಮಾಡಲಾರವು!

ಧೃತರಾಷ್ಟ್ರ ಕುಲದಲ್ಲಿ, ದುರ್ಯೋಧನನ ಆಶ್ರಯದಲ್ಲಿ, ಹದಿಮೂರು ವರ್ಷಗಳು ಈ ರಾಜ್ಯವನ್ನು ಅಡೆತಡೆಯಿಲ್ಲದೇ ಭೋಗಿಸಿದ್ದೇನೆ. ಸೂತರೊಂದಿಗೆ ಬಹಳಷ್ಟು ಇಷ್ಟಿ-ಯಜ್ಞಗಳನ್ನು ನಾನು ಮಾಡಿದ್ದೇನೆ. ಕುಟುಂಬದ ಆವಾಹ-ವಿವಾಹಗಳನ್ನೂ ಕೂಡ ನಾನು ಸೂತರೊಂದಿಗೇ ಮಾಡಿದ್ದೇನೆ. ನನ್ನನ್ನೇ ಅವಲಂಬಿಸಿ ಶಸ್ತ್ರಗಳನ್ನು ಮೇಲೆತ್ತಿ ದುರ್ಯೋಧನನು ಪಾಂಡವರೊಂದೆಗೆ ಹೋರಾಟ ಮಾಡುತ್ತಿದ್ದಾನೆ.

ಆದುದರಿಂದಲೇ ರಣದಲ್ಲಿ ರಥಗಳ ದ್ವಂದ್ವಯುದ್ಧದಲ್ಲಿ ಸವ್ಯಸಾಚಿಯ ವಿರುದ್ಧವಾಗಿ ನನ್ನನ್ನು ವಿಶ್ವಾಸದಿಂದ ಆರಿಸಿಕೊಂಡು, ಪರಮ ಹರ್ಷಿತನಾಗಿದ್ದಾನೆ. ಸಾವಾಗಲೀ, ಸೆರೆಯಾಗಲೀ, ಭಯವಾಗಲೀ, ಲೋಭವಾಗಲೀ ಧೀಮತ ಧಾರ್ತರಾಷ್ಟ್ರನಿಗೆ ನಾನು ಕೊಟ್ಟ ಮಾತನ್ನು ಮುರಿಯುವಂತೆ ಮಾಡಲಾರವು. ಇಂದು ನಾವು ರಥಗಳ ದ್ವಂದ್ವಯುದ್ಧವನ್ನು ಮಾಡದೇ ಇದ್ದರೆ ನನಗೆ ಮತ್ತು ಪಾರ್ಥ ಇಬ್ಬರಿಗೂ ಅಕೀರ್ತಿಯು ಲಭಿಸುತ್ತದೆ. ನೀನು ಒಳ್ಳೆಯದಕ್ಕಾಗಿಯೇ ಹೇಳುತ್ತಿದ್ದೀಯೆ ಮತ್ತು ನಿನ್ನ ಮಾರ್ಗದರ್ಶನದಿಂದ ಪಾಂಡವರು ಎಲ್ಲವನ್ನೂ ಸಾಧಿಸುವರು ಎನ್ನುವುದರಲ್ಲಿ ಸಂಶಯವೇ ಇಲ್ಲ.

ನಾವು ಇಲ್ಲಿ ಮಾತನಾಡಿದುದನ್ನು ಇಲ್ಲಿಯೇ ಇರಿಸಬೇಕು. ಅದರಲ್ಲಿಯೇ ಹಿತವಿದೆ ಎಂದು ನನಗನ್ನಿಸುತ್ತದೆ. ನಾನು ಕುಂತಿಯ ಮೊದಲು ಹುಟ್ಟಿದ ಮಗನೆಂದು ಆ ರಾಜಾ ಧರ್ಮಾತ್ಮ ಸಂಶಿತವ್ರತನಿಗೆ ಗೊತ್ತಾದರೆ ಅವನು ರಾಜ್ಯವನ್ನು ಸ್ವೀಕರಿಸುವುದಿಲ್ಲ. ಒಂದುವೇಳೆ ನನಗೆ ಈ ಸಂಪದ್ಭರಿತ ಮಹಾರಾಜ್ಯವನ್ನು ಒಪ್ಪಿಸಿದರೆ ಅದನ್ನು ನಾನು ದುರ್ಯೋಧನನಿಗೇ ಕೊಟ್ಟುಬಿಡುತ್ತೇನೆ. ಹೃಷೀಕೇಶನನ್ನು ಮಾರ್ಗದರ್ಶಕನನ್ನಾಗಿ ಮತ್ತು ಧನಂಜಯನನ್ನು ಸೇನಾಪತಿಯಾಗಿ ಪಡೆದಿರುವ ಧರ್ಮಾತ್ಮ ಯುಧಿಷ್ಠಿರನೇ

ಶಾಶ್ವತವಾಗಿ ರಾಜನಾಗಲಿ. ಯಾರೊಡನೆ ಮಹಾರಥಿ ಭೀಮ, ನಕುಲ ಸಹದೇವರು, ದ್ರೌಪದೇಯರು, ಉತ್ತಮೌಜ, ಯುಧಾಮನ್ಯು, ಸತ್ಯಧರ್ಮ ಸೋಮಕಿ, ಚೈದ್ಯ, ಚೇಕಿತಾನ, ಅಪರಾಜಿತ ಶಿಖಂಡೀ, ಇಂದ್ರಗೋಪಕ, ವರ್ಣ, ಕೇಕಯ ಸಹೋದರರು, ಇಂದ್ರಾಯುಧ, ಸವರ್ಣ, ಮಹಾರಥಿ ಕುಂತಿಭೋಜ, ಭೀಮಸೇನನ ಮಾವ ಮಹಾರಥಿ ಸೇನಜಿತ್, ವಿರಾಟನ ಪುತ್ರ ಶಂಖ ಮತ್ತು ನಿಧಿಗಾಗಿ ಜನಾರ್ದನ ನೀನಿರುವೆಯೋ ಅವನದ್ದೇ ರಾಷ್ಟ್ರವು ಈ ಭೂಮಿಯಾಗುವುದು. ಇಲ್ಲಿ ಸೇರಿರುವ ಮಹಾಸಂಖ್ಯೆಯ ಕ್ಷತ್ರಿಯರು ಒಂದು ಸಾಧನೆಯೇ! ಎಲ್ಲ ರಾಜರಲ್ಲಿಯೇ ಪ್ರಥಿತವಾಗಿರುವ ಬೆಳಗುತ್ತಿರುವ ಈ ರಾಜ್ಯವು ದೊರಕಿದಂತೆಯೇ!

ಧಾರ್ತರಾಷ್ಟ್ರನು ನಡೆಸುವ ಒಂದು ಶಸ್ತ್ರಯಜ್ಞವು ನಡೆಯಲಿಕ್ಕಿದೆ. ಈ ಯಜ್ಞದ ವೇತ್ತನು ನೀನಾಗುವೆ. ಈ ಕ್ರತುವಿನ ಅಧ್ವರ್ಯನೂ ನೀನಾಗುವೆ. ಅದರ ಹೋತನು ಸನ್ನದ್ಧನಾಗಿರುವ ಕಪಿಧ್ವಜ ಬೀಭತ್ಸುವು. ಗಾಂಡೀವವು ಸ್ರುಕ್ ಮತ್ತು ಪುರುಷರ ವೀರ್ಯವು ಆಜ್ಯವಾಗುತ್ತದೆ. ಸವ್ಯಸಾಚಿಯು ಪ್ರಯೋಗಿಸುವ ಐಂದ್ರ, ಪಾಶುಪತ, ಬ್ರಹ್ಮ, ಮತ್ತು ಸ್ಥೂಣಾಕರ್ಣ ಅಸ್ತ್ರಗಳು ಅದರಲ್ಲಿ ಮಂತ್ರಗಳಾಗುತ್ತವೆ. ಪರಾಕ್ರಮದಲ್ಲಿ ತಂದೆಯನ್ನು ಹೋಲುವ ಅಥವಾ

ಅವನಿಗಿಂತಲೂ ಅಧಿಕನಾಗಿರುವ ಸೌಭದ್ರನು ಅದರಲ್ಲಿ ಗ್ರಾವಸ್ತೋತ್ರಿಯ ಕೆಲಸವನ್ನು ಮಾಡುತ್ತಾನೆ. ರಣದಲ್ಲಿ ಗರ್ಜಿಸಿ ಆನೆಗಳ ಸೇನೆಯನ್ನು ಕೊನೆಗೊಳಿಸುವ ನರವ್ಯಾಘ್ರ ಸುಮಹಾಬಲ ಭೀಮನು ಅದರಲ್ಲಿ ಉದ್ಗಾತನೂ ಪ್ರಸ್ತೋತನೂ ಆಗುತ್ತಾನೆ. ಆ ಶಾಶ್ವತ ರಾಜ, ಧರ್ಮಾತ್ಮಾ, ಜಪ-ಹೋಮಗಳಲ್ಲಿ ಪಳಗಿರುವ ಯುಧಿಷ್ಠಿರನು ಅದರಲ್ಲಿ ಬ್ರಹ್ಮತ್ವವನ್ನು ಕೈಗೊಳ್ಳುತ್ತಾನೆ. ಶಂಖಗಳ ಶಬ್ಧ, ನಗಾರಿ ಭೇರಿಗಳ ಶಬ್ಧಗಳು, ಮತ್ತು ಕಿವಿ ಕಿವುಡು ಮಾಡುವ ಸಿಂಹನಾದಗಳು ಸುಬ್ರಹ್ಮಣ್ಯವಾಗುತ್ತವೆ. ಮಹಾವೀರರಾದ ಯಶಸ್ವಿಗಳಾದ ಮಾದ್ರೀಪುತ್ರ ನಕುಲ-ಸಹದೇವರಿಬ್ಬರೂ ಅದರಲ್ಲಿ ಶಾಮಿತ್ರರ ಕೆಲಸವನ್ನು ಮಾಡುತ್ತಾರೆ. ಈ ಯಜ್ಞದಲ್ಲಿ ರಥಗಳಿಗೆ ಕಟ್ಟಿದ ಶುಭ್ರವಾದ ಪತಾಕೆಗಳ ದಂಡಗಳು ಯೂಪಗಳಂತೆ ಇರುತ್ತವೆ. ಕರ್ಣಿನಾಲೀಕ, ನಾರಾಚ, ವತ್ಸದಂತ ಮತ್ತು ತೋಮರ ಬಾಣಗಳು ಸೋಮ ಕಲಶಗಳಾಗುತ್ತವೆ ಹಾಗೂ ಧನುಸ್ಸುಗಳು ಪವಿತ್ರಗಳಾಗುತ್ತವೆ. ಈ ಯಜ್ಞದಲ್ಲಿ ಕಪಾಲ-ಶಿರಗಳು ಪುರೋಡಾಷಗಳೂ, ರಕ್ತವು ಹವಿಸ್ಸಾಗಿಯೂ ಆಗುತ್ತವೆ. ಶುಭ್ರವಾದ ಶಕ್ತ್ಯಾಯುಧ ಮತ್ತು ಗದೆಗಳು ಅಗ್ನಿಯನ್ನು ಹೊತ್ತಿಸುವ ಮತ್ತು ಉರಿಸುವ ಕಟ್ಟಿಗೆಗಳಾದರೆ ದ್ರೋಣ ಮತ್ತು ಶರದ್ವತ ಕೃಪನ ಶಿಷ್ಯರು ಸದಸ್ಯರಾಗುತ್ತಾರೆ. ಅಲ್ಲಿ ಗಾಂಡೀವಧನ್ವಿಯು ಸುತ್ತುವರೆದು

ಬಿಡುವ ಮತ್ತು ದ್ರೋಣ-ದ್ರೌಣಿಯರು ಪ್ರಯೋಗಿಸುವ ಬಾಣಗಳು ತಲೆದಿಂಬುಗಳಾಗುತ್ತವೆ. ಸಾತ್ಯಕಿಯು ಪ್ರಾತಿಪ್ರಸ್ಥಾನಿಕನ ಕೆಲಸವನ್ನು ಮಾಡುತ್ತಾನೆ. ಧಾರ್ತರಾಷ್ಟ್ರನು ಅದರಲ್ಲಿ ದೀಕ್ಷಿತನಾಗುತ್ತಾನೆ ಮತ್ತು ಮಹಾಸೇನೆಯು ಅವನ ಪತ್ನಿ. ಯಜ್ಞಕರ್ಮಗಳು ರಾತ್ರಿಯೂ ಮುಂದುವರಿದರೆ ಆಗ ಅದರಲ್ಲಿ ಮಹಾಬಲ ಮಹಾಬಾಹು ಘಟೋತ್ಕಚನು ಶಾಮಿತ್ರನ ಕೆಲಸವನ್ನು ಮಾಡುತ್ತಾನೆ. ಅಗ್ನಿಯಿಂದ ಹುಟ್ಟಿದ ಪ್ರತಾಪವಾನ್ ಧೃಷ್ಟದ್ಯುಮ್ನನು ಈ ಯಜ್ಞದ ವೈತಾನ ಕರ್ಮಗಳಲ್ಲಿ ದಕ್ಷಿಣೆಯಾಗುತ್ತಾನೆ. ಅಂದು ಧಾರ್ತರಾಷ್ಟ್ರನನ್ನು ಸಂತೋಷಪಡಿಸಲು, ಇಂದು ಆ ಕೆಲಸಕ್ಕೆ ನಾನು ಪಶ್ಚಾತ್ತಾಪ ಪಡುತ್ತಿರುವ, ಪಾಂಡವರಿಗಾಡಿದ ಕಟುಕಾದ ಮಾತುಗಳಿಗೆ ಸವ್ಯಸಾಚಿಯು ನನ್ನನ್ನು ತುಂಡರಿಸುವುದನ್ನು ನೀನು ನೋಡಿದಾಗ ಅದು ಈ ಯಜ್ಞದ ಪುನಶ್ಚಿತಿಯಾಗುತ್ತದೆ. ಪಾಂಡವನು ಜೋರಾಗಿ ಘರ್ಜಿಸಿ ದುಃಶಾಸನನ ರುಧಿರವನ್ನು ಕುಡಿಯುವಾಗ ಅದು ಇದರ ಸುತ್ಯವಾಗುತ್ತದೆ. ಪಾಂಚಾಲರಿಬ್ಬರೂ ದ್ರೋಣ-ಭೀಷ್ಮರನ್ನು ಕೆಳಗುರುಳಿಸಿದಾಗ ಅದು ಯಜ್ಞದ ಅವಸಾನವಾಗುತ್ತದೆ. ಮಹಾಬಲ ಭೀಮಸೇನನು ದುರ್ಯೋಧನನನ್ನು ಕೊಂದಾಗ ಧಾರ್ತರಾಷ್ಟ್ರನ ಈ ಯಜ್ಞವು ಸಮಾಪ್ತವಾಗುತ್ತದೆ. ಸೊಸೆಯಂದಿರು ಮತ್ತು ಮಕ್ಕಳ ಸೊಸೆಯಂದಿರು

ಧೃತರಾಷ್ಟ್ರನನ್ನು ಸೇರಿ ಹತೇಶ್ವರರಾಗಿ, ಹತಸುತರಾಗಿ, ಹತನಾಥರಾಗಿ, ಗಾಂಧಾರಿಯೊಂದಿಗೆ ರೋದಿಸುತ್ತಾ ನಾಯಿ-ಹದ್ದು-ನರಿಗಳಿಂದ ಕೂಡಿದ ಯಜ್ಞಸ್ಥಳದಲ್ಲಿ ಸೇರಿದಾಗ ಅದು ಅವಭೃತವಾಗುತ್ತದೆ.

ವಿದ್ಯಾವೃದ್ಧರಾದ, ವಯೋವೃದ್ಧರಾದ ಈ ಕ್ಷತ್ರಿಯರು ನಿನ್ನಿಂದಾಗಿ ಕುವೀರರರಾಗಿ ವೃಥಾ ಮೃತ್ಯುವನ್ನು ಹೊಂದದಂತಾಗಲಿ. ಮೂರುಲೋಕಗಳಲ್ಲಿಯೂ ಪುಣ್ಯತಮವಾಗಿರುವ ಕುರುಕ್ಷೇತ್ರದಲ್ಲಿ ಸಮೃದ್ಧ ಕ್ಷತ್ರಮಂಡಲವು ಶಸ್ತ್ರಗಳ ಮೂಲಕ ನಿಧನ ಹೊಂದಲಿ. ಸಂಪೂರ್ಣವಾಗಿ ಕ್ಷತ್ರಿಯರು ಸ್ವರ್ಗವನ್ನು ಪಡೆಯುವಂತೆ ಬಯಸಿ ಅದರಂತೆ ಮಾಡು! ಎಲ್ಲಿಯವರೆಗೆ ಗಿರಿಗಳು ನಿಂತಿರುತ್ತವೆಯೋ, ನದಿಗಳು ಹರಿಯುತ್ತಿರುತ್ತವೆಯೋ ಅಲ್ಲಿಯವರೆಗೆ ಈ ಯುದ್ಧದ ಶಬ್ಧದ ಕೀರ್ತಿಯು ಕೇಳಿಬರುತ್ತದೆ ಶಾಶ್ವತವಾಗಿರುತ್ತದೆ. ಕ್ಷತ್ರಿಯರ ಯಶಸ್ಸನ್ನು ಹೆಚ್ಚಿಸುವ ಈ ಮಹಾಭಾರತ ಯುದ್ಧವನ್ನು ಬ್ರಾಹ್ಮಣರು ಸಮಾಗಮಗಳಲ್ಲಿ ಹೇಳುತ್ತಿರುತ್ತಾರೆ. ಕೌಂತೇಯನನ್ನು ಯುದ್ಧಕ್ಕೆ ಕರೆದುಕೊಂಡು ಬಾ. ಈ ಮಾತುಕತೆಯನ್ನು ಗೋಪನೀಯವಾಗಿರಿಸು.”

ಕರ್ಣನ ಮಾತನ್ನು ಕೇಳಿ ಪರವೀರಹ ಕೇಶವನು ಮೊದಲು

ಮುಗುಳ್ನಕ್ಕು, ನಂತರ ಜೋರಾಗಿ ನಕ್ಕು ಹೀಗೆ ಹೇಳಿದನು: “ಕರ್ಣ ! ರಾಜ್ಯಲಾಭವು ಕೂಡ ನಿನ್ನನ್ನು ಬದಲಾಯಿಸುವುದಿಲ್ಲವೇ? ನಾನು ಕೊಡುತ್ತಿರುವ ಈ ಪೃಥ್ವಿಯನ್ನು ಆಳಲು ಬಯಸುವುದಿಲ್ಲವೇ? ಪಾಂಡವರಿಗೇ ಜಯವೆನ್ನುವುದು ನಿಶ್ಚಿತ. ಅದರಲ್ಲಿ ಯಾವುದೇ ರೀತಿಯ ಸಂಶಯವಿಲ್ಲ. ಉಗ್ರ ವಾನರರಾಜನಿಂದ ಕೂಡಿದ ಧ್ವಜವುಳ್ಳ ಪಾಂಡವನಿಗೆ ಜಯವೇ ಕಾಣುತ್ತಿದೆ. ಭೌವನನು ಆ ದಿವ್ಯ ಇಂದ್ರಕೇತುವಿನಂತೆ ಪ್ರಕಾಶಿಸುವ ಧ್ವಜದಲ್ಲಿ ಮಾಯೆಯನ್ನು ಅಳವಡಿಸಿದ್ದಾನೆ. ಅದರಲ್ಲಿ ಭಯವನ್ನು ನೀಡುವ ಭೂತಗಳೂ ಭಯಾನಕ ದೃಶ್ಯಗಳೂ ಇವೆ. ಉದ್ದದಲ್ಲಿ ಮತ್ತು ಎಲ್ಲಕಡೆ ಒಂದು ಯೋಜನೆ ಅಳತೆಯಿರುವ ಆ ಧ್ವಜವನ್ನು ಬಿಡಿಸಿದಾಗ ಗಿರಿ-ಮರಗಳು ಅಡ್ಡವಾಗಿ ಬರಲಾರವು. ಧನಂಜಯನ ಶ್ರೀಮಾನ್ ಧ್ವಜವು ರೂಪದಲ್ಲಿ ಗಾಳಿಯಂತೆ ರಚಿಸಲ್ಪಟ್ಟಿದೆ. ಕೃಷ್ಣನು ಸಾರಥಿಯಾಗಿರುವ ಶ್ವೇತಾಶ್ವನನ್ನು ಸಂಗ್ರಾಮದಲ್ಲಿ ನೋಡುವಾಗ, ಐಂದ್ರ, ಅಗ್ನಿ ಮತ್ತು ಮರುತಾಸ್ತ್ರಗಳನ್ನು ಪ್ರಯೋಗಿಸುವುದನ್ನು, ಗಾಂಡೀವವನ್ನು ಎಳೆದಾಗ ನಿರ್ಘೋಷವನ್ನು ಕೇಳಿದಾಗ ತ್ರೇತವೂ ಇರುವುದಿಲ್ಲ, ಕೃತವೂ ಇರುವುದಿಲ್ಲ, ದ್ವಾಪರವೂ ಇರುವುದಿಲ್ಲ. ಸಂಗ್ರಾಮದಲ್ಲಿ ಜಪಹೋಮಸಮಾಯುಕ್ತನಾಗಿ ಮಹಾಸೇನೆಯನ್ನು ರಕ್ಷಿಸುತ್ತಿರುವ, ದುರ್ಧರ್ಷ ಆದಿತ್ಯನಂತೆ ಶತ್ರುಸೇನೆಯನ್ನು

ಸುಡುತ್ತಿರುವ ಕುಂತೀಪುತ್ರ ಯುಧಿಷ್ಠಿರನನ್ನು ಯಾವಾಗ ನೋಡುತ್ತೀಯೋ ಆಗ ಅಲ್ಲಿ ತ್ರೇತವೂ ಇರುವುದಿಲ್ಲ, ಕೃತವೂ ಇರುವುದಿಲ್ಲ, ದ್ವಾಪರವೂ ಇರುವುದಿಲ್ಲ. ಸಂಗ್ರಾಮದಲ್ಲಿ ಮಹಾಬಲ ಭೀಮಸೇನನು ಪ್ರತಿದ್ವಂದಿ ಆನೆಯನ್ನು ಕೊಂದು ಸೊಕ್ಕಿದ ದುಃಶಾಸನನ ರುಧಿರವನ್ನು ಕುಡಿದು ರಣದಲ್ಲಿ ನೃತ್ಯವಾಡುವುದನ್ನು ನೀನು ಯಾವಾಗ ನೋಡುತ್ತೀಯೋ, ಆಗ ಅಲ್ಲಿ ತ್ರೇತವೂ ಇರುವುದಿಲ್ಲ, ಕೃತವೂ ಇರುವುದಿಲ್ಲ, ದ್ವಾಪರವೂ ಇರುವುದಿಲ್ಲ. ಸಂಗ್ರಾಮದಲ್ಲಿ ಯಾವಾಗ ಮಹಾರಥಿ ಮಾದ್ರೀಪುತ್ರರು ಆನೆಗಳಂತೆ ಧಾರ್ತರಾಷ್ಟ್ರನ ಸೇನೆಯನ್ನು ಕ್ಷೋಭೆಗೊಳಿಸುತ್ತಿರುವುದನ್ನು, ಶಸ್ತ್ರಗಳ ಗುಂಪುಗಳನ್ನು ಸೀಳಿ ಶತ್ರುಗಳ ರಥಗಳನ್ನು ಧ್ವಂಸಿಸುತ್ತಿರುವುದನ್ನು ನೋಡುತ್ತೀಯೋ ಆಗ ಅಲ್ಲಿ ತ್ರೇತವೂ ಇರುವುದಿಲ್ಲ, ಕೃತವೂ ಇರುವುದಿಲ್ಲ, ದ್ವಾಪರವೂ ಇರುವುದಿಲ್ಲ. ಸಂಗ್ರಾಮದಲ್ಲಿ ಸವ್ಯಸಾಚಿಯು ದ್ರೋಣ, ಶಾಂತನವ, ಕೃಪ, ಸುಯೋಧನ, ಸೈಂಧವ ರಾಜ ಜಯದ್ರಥನನ್ನು ಯುದ್ಧದಲ್ಲಿ ಮುನ್ನುಗ್ಗಿಬರುವಾಗ ತಡೆಯುವುದನ್ನು ಯಾವಾಗ ನೋಡುತ್ತೀಯೋ ಆಗ ಅಲ್ಲಿ ತ್ರೇತವೂ ಇರುವುದಿಲ್ಲ, ಕೃತವೂ ಇರುವುದಿಲ್ಲ, ದ್ವಾಪರವೂ ಇರುವುದಿಲ್ಲ.

ಇಲ್ಲಿಂದ ಹಿಂದಿರುಗಿ ದ್ರೋಣ, ಶಾಂತನವ ಮತ್ತು ಕೃಪರಿಗೆ

ಹೇಳು. ಈ ತಿಂಗಳು ಬೆಳೆ ಮತ್ತು ಇಂಧನಗಳಿಂದ ಸಮೃದ್ಧವಾಗಿದ್ದು ಉತ್ತಮ ಸಮಯವಾಗಿದೆ. ಔಷಧಿಗಳು ಪಕ್ವವಾಗಿವೆ, ವನವು ಪುಷ್ಪ-ಫಲ ಭರಿತವಾಗಿದೆ, ಅತೀ ಕಡಿಮೆ ಸೊಳ್ಳೆಗಳಿವೆ. ದಾರಿಯು ಸುಲಭವಾಗಿದೆ. ನೀರು ರಸಭರಿತವಾಗಿದೆ. ಅತಿ ಸೆಖೆಯೂ ಛಳಿಯೂ ಇಲ್ಲದೇ ಸುಖಕರವಾಗಿದೆ. ಇಂದಿನಿಂದ ಏಳನೆಯ ದಿವಸ ಅಮವಾಸ್ಯೆಯಿದೆ. ಅಂದು ಸಂಗ್ರಾಮವನ್ನು ಪ್ರಾರಂಭಿಸಬೇಕು. ಏಕೆಂದರೆ ಅದರ ದೇವತೆಯು ಶಕ್ರನೆಂದು ಹೇಳುತ್ತಾರೆ. ಹಾಗೆಯೇ ಯುದ್ಧಕ್ಕಾಗಿ ಅಲ್ಲಿ ಬಂದು ಸೇರಿರುವ ಎಲ್ಲ ರಾಜರಿಗೂ ಹೇಳು: ಅವರು ಬಯಸಿದುದೆಲ್ಲವನ್ನು ನಾನು ನೆರವೇರಿಸಿಕೊಡುತ್ತೇನೆ. ದುರ್ಯೋಧನನ ವಶದಲ್ಲಿದ್ದು ಅವನನ್ನು ಅನುಸರಿಸುವ ರಾಜರು ರಾಜಪುತ್ರರು ಶಸ್ತ್ರಗಳಿಂದ ಸಾವನ್ನು ಪಡೆದು ಉತ್ತಮ ಗತಿಯನ್ನು ಹೊಂದುತ್ತಾರೆ."

ಕೇಶವನ ಹಿತವೂ ಶುಭವೂ ಆದ ಆ ಮಾತನ್ನು ಕೇಳಿ ಕರ್ಣನು ಕೃಷ್ಣ ಮಧುನಿಷೂದನನಿಗೆ ನಮಸ್ಕರಿಸಿ ಹೇಳಿದನು: "ಮಹಾಬಾಹೋ! ಗೊತ್ತಿದ್ದರೂ ನನ್ನನ್ನು ಏಕೆ ಮೋಹಗೊಳಿಸಲು ಬಯಸುವೆ? ಸಂಪೂರ್ಣ ಈ ಪೃಥ್ವಿಯ ವಿನಾಶವು ಬಂದಿದೆ. ಶಕುನಿ, ನಾನು, ದುಃಶಾಸನ, ಧೃತರಾಷ್ಟ್ರಸುತ ನೃಪತಿ ದುರ್ಯೋಧನರು ಇದರಲ್ಲಿ ನಿಮಿತ್ತಮಾತ್ರ. ಪಾಂಡವರ ಮತ್ತು ಕುರುಗಳ ರಕ್ತವನ್ನು

ಚೆಲ್ಲುವ ಘೋರ ಮಹಾಯುದ್ಧವು ಬಂದೊದಗಿದೆ ಎನ್ನುವುದರಲ್ಲಿ ಸಂಶಯವಿಲ್ಲ. ದುರ್ಯೋಧನನ ವಶರಾಗಿ ಅನುಸರಿಸುವ ರಾಜರು ರಾಜಪುತ್ರರು ರಣದಲ್ಲಿ ಶಸ್ತ್ರಾಗ್ನಿಯಲ್ಲಿ ಸುಟ್ಟು ಯುಮಸಾದನವನ್ನು ಸೇರುತ್ತಾರೆ. ಧಾರ್ತರಾಷ್ಟ್ರನ ಪರಾಭವವನ್ನು ಮತ್ತು ಯುಧಿಷ್ಠಿರನ ವಿಜಯವನ್ನು ಘೋಷಿಸುವ ವಿವಿಧ, ಮೈ ನವಿರೇಳಿಸುವ, ಬಹಳ ಘೋರ ಸ್ವಪ್ನಗಳು, ಘೋರ ನಿಮಿತ್ತಗಳು ಮತ್ತು ದಾರುಣ ಉತ್ಪಾತಗಳು ಕಾಣಿಸಿಕೊಳ್ಳುತ್ತಿವೆ.

ಪ್ರಾಣಿಗಳನ್ನು ಅಧಿಕವಾಗಿ ಪೀಡಿಸುವ ತೀಕ್ಷ್ಣ ಮಹಾದ್ಯುತಿ ಶನೈಶ್ಚರ ಗ್ರಹವು ರೋಹಿಣೀ ನಕ್ಷತ್ರವನ್ನು ಪೀಡಿಸುತ್ತಿದೆ. ಮಿತ್ರರ ನಾಶವನ್ನು ಸೂಚಿಸಿ ಅಂಗಾರಕನು ವಕ್ರಿಯಾಗಿ ಜ್ಯೇಷ್ಠಾ ಮತ್ತು ಅನುರಾಧಾ ನಕ್ಷತ್ರಗಳ ಬಳಿ ಸಾಗುತ್ತಿದ್ದಾನೆ. ಈ ಗ್ರಹವು ಚಿತ್ರಾ ನಕ್ಷತ್ರವನ್ನು ಪೀಡಿಸುತ್ತಿರುವುದರಿಂದ ವಿಶೇಷವಾಗಿ ಕುರುಗಳಿಗೆ ಮಹಾ ಭಯವು ಬಂದೊದಗಿದೆ. ಚಂದ್ರನ ಮೇಲಿರುವ ಕಲೆಯು ತಲೆಕೆಳಗಾಗಿದೆ. ರಾಹುವು ಸೂರ್ಯನನ್ನು ಸಮೀಪಿಸುತ್ತಿದ್ದಾನೆ. ಆಕಾಶದಿಂದ ಜೋರಾಗಿ ಶಬ್ಧಮಾಡುತ್ತಾ, ಕಂಪಿಸುತ್ತಾ ಉಲ್ಕೆಗಳು ಬೀಳುತ್ತಿವೆ. ಆನೆಗಳು ಇದ್ದಕ್ಕಿದ್ದಂತೆಯೇ ಘೀಳಿಡುತ್ತಿವೆ. ಕುದುರೆಗಳು ಕಣ್ಣೀರು ಸುರಿಸುತ್ತಿವೆ. ಅವು ಆಹಾರ-ನೀರುಗಳನ್ನು ಕೂಡ ಇಷ್ಟಪಡುತ್ತಿಲ್ಲ. ಈ ಸೂಚನೆಗಳು ಕಂಡುಬಂದಾಗ ಮಹಾ

ಭಯವು ಬರಲಿಕ್ಕಿದೆ ಎಂದು ಹೇಳುತ್ತಾರೆ. ಇವು ದಾರುಣ ಪ್ರಾಣಿನಾಶನವನ್ನು ಸೂಚಿಸುತ್ತವೆ. ಆನೆಗಳು, ಕುದುರೆಗಳು ಮತ್ತು ಮನುಷ್ಯರು ಕಡಿಮೆ ತಿನ್ನುವಂತೆ ಆದರೆ ಅಧಿಕವಾಗಿ ಮಲವಿಸರ್ಜನೆ ಮಾಡುವಂತೆ ತೋರುತ್ತಿದೆ. ಪರಾಭವದ ಸೂಚನೆಗಳೇನೆಂದು ತಿಳಿದವರು ಹೇಳುತ್ತಾರೋ ಅವೆಲ್ಲವೂ ಧಾರ್ತರಾಷ್ಟ್ರನ ಸೇನೆಯಲ್ಲಿವೆ. ಪಾಂಡವರ ವಾಹನಗಳು ಸಂತೋಷದಿಂದಿರುವಂತೆ ಕಾಣುತ್ತಿವೆ. ಮೃಗಗಳು ಪ್ರದಕ್ಷಿಣೆಯಾಗಿ ಚಲಿಸುತ್ತಿವೆ. ಇದು ಅವರ ಜಯದ ಲಕ್ಷಣ. ಧಾರ್ತರಾಷ್ಟ್ರನ ಮೃಗಗಳೆಲ್ಲವೂ ಅಪ್ರದಕ್ಷಿಣೆಯಾಗಿ ತಿರುಗುತ್ತಿವೆ. ಅಶರೀರವಾಣಿಗಳು ಕೇಳಿಬರುತ್ತಿವೆ. ಇದು ಅವರ ಸೋಲಿನ ಲಕ್ಷಣ. ಉತ್ತಮ ಪಕ್ಷಿಗಳಾದ ನವಿಲುಗಳು, ಹಂಸಗಳು, ಸಾರಸಗಳು, ಜಾತಕಗಳು, ಜೀವ ಮತ್ತು ಜೀವಕಗಳ ಗುಂಪುಗಳು ಪಾಂಡವರನ್ನು ಅನುಸರಿಸಿ ಹೋಗುತ್ತಿವೆ. ಆದರೆ ಹದ್ದು, ಕಾಗೆ, ಗಿಡುಗ, ತೋಳಗಳು, ರಾಕ್ಷಸರು ಮತ್ತು ಜೇನುಹುಳುಗಳು ಗುಂಪುಗಳಲ್ಲಿ ಕೌರವರನ್ನು ಹಿಂಬಾಲಿಸುತ್ತಿವೆ. ಧಾರ್ತರಾಷ್ಟ್ರನ ಸೇನೆಯಲ್ಲಿ ಭೇರಿಗಳು ಶಬ್ಧಮಾಡುತ್ತಿಲ್ಲ. ಆದರೆ ಪಾಂಡವರಲ್ಲಿ ಅವು ಹೊಡೆಯದೆಯೇ ಶಬ್ಧಮಾಡುತ್ತಿವೆಯಲ್ಲ! ಧಾರ್ತರಾಷ್ಟ್ರನ ಸೇನೆಯಲ್ಲಿ ಬಾವಿಗಳು ಹೋರಿಯಂತೆ ಶಬ್ಧಮಾಡುತ್ತಿವೆ. ಅದು ಅವರ ಪರಾಭವದ ಲಕ್ಷಣ. ದೇವತೆಗಳು ಮಾಂಸ ಮತ್ತು

ರಕ್ತಗಳ ಮಳೆಯನ್ನು ಸುರಿಸುತ್ತಿದ್ದಾರೆ. ಆಗಸದಲ್ಲಿ ಪ್ರಾಕಾರ, ಪರಿಖ ಮತ್ತು ವಪ್ರ ಚಾರುತೋರಣಗಳಿಂದ ಸಜ್ಜಿತವಾದ ಗಂಧರ್ವನಗರಿಯು ಕಾಣುತ್ತಿದೆ. ಸೂರ್ಯನನ್ನು ಕಪ್ಪುಬಣ್ಣದ ಕೊಪ್ಪರಿಗೆಯು ಆವರಿಸಿದಂತಿದೆ. ಉದಯ ಮತ್ತು ಅಸ್ತ ಸಂಧ್ಯೆಗಳು ಮಹಾಭಯವನ್ನು ತಿಳಿಸುತ್ತಿವೆ. ನರಿಗಳು ಘೋರವಾಗಿ ಗೋಳಿಡುತ್ತಿವೆ. ಇವು ಪರಾಭವದ ಲಕ್ಷಣಗಳು. ಸಾಯಂಕಾಲ ಕಪ್ಪು ಕೊರಳಿನ ಕೆಂಪುಕಾಲಿನ ಭಯಾನಕ ಪಕ್ಷಿಗಳು ಸೇನೆಯ ಎದುರುಮುಖವಾಗಿ ಹಾರುತ್ತಿವೆ. ಇದು ಪರಾಭವದ ಲಕ್ಷಣ. ಮೊದಲು ಬ್ರಾಹ್ಮಣರನ್ನು, ಗುರುಗಳನ್ನು, ನಂತರ ಭಕ್ತಿಯುಳ್ಳ ಸೇವಕರನ್ನು ದ್ವೇಷಿಸುತ್ತಿದ್ದಾರೆ. ಇದು ಪರಾಭವದ ಲಕ್ಷಣ. ಪೂರ್ವ ದಿಕ್ಕು ಕೆಂಪಾಗಿದೆ. ದಕ್ಷಿಣವು ಶಸ್ತ್ರವರ್ಣದ್ದಾಗಿದೆ. ಪಶ್ಚಿಮವು ಮಣ್ಣಿನ ಬಣ್ಣವನ್ನು ತಳೆದಿದೆ. ಧಾರ್ತರಾಷ್ಟ್ರನ ಎಲ್ಲ ದಿಕ್ಕುಗಳು ಹತ್ತಿ ಉರಿಯುವಂತಿವೆ. ಈ ಉತ್ಪಾತ ಲಕ್ಷಣಗಳು ಮಹಾಭಯವನ್ನು ಸೂಚಿಸುತ್ತವೆ.

ಸ್ವಪ್ನದ ಕೊನೆಯಲ್ಲಿ ಸಹೋದರರೊಂದಿಗೆ ಯುಧಿಷ್ಠಿರನು ಸಾವಿರ ಮೆಟ್ಟಿಲುಗಳಿರುವ ಅರಮನೆಯನ್ನು ಏರುತ್ತಿರುವುದನ್ನು ನಾನು ಕಂಡಿದ್ದೇನೆ. ಅವರೆಲ್ಲರೂ ಬಿಳೀಬಣ್ಣದ ಮುಂಡಾಸು, ಬಿಳೀ ವಸ್ತ್ರವನ್ನು ಧರಿಸಿದ್ದರು ಮತ್ತು ಎಲ್ಲರೂ ಶುಭ್ರ ಆಸನಗಳಲ್ಲಿ ಕುಳಿತುಕೊಳ್ಳುವುದನ್ನು ನೋಡಿದೆನು. ಅದೇ ಸ್ವಪ್ನದ ಕೊನೆಯಲ್ಲಿ ನೀನು ರಕ್ತದಿಂದ ತೋಯ್ದ

ಆಯುಧಗಳನ್ನು ನೆಲದಲ್ಲಿ ಮುಚ್ಚಿಡುತ್ತಿದ್ದುದನ್ನು ನೋಡಿದೆನು. ಅಮಿತೌಜಸ ಯುಧಿಷ್ಠಿರನು ಅಸ್ಥಿಗಳ ಗುಡ್ಡೆಯನ್ನೇರಿ ಸಂತೋಷದಿಂದ ಸುವರ್ಣಪಾತ್ರೆಯಲ್ಲಿ ಘೃತಪಾಯಸವನ್ನು ತಿನ್ನುತ್ತಿದ್ದನು. ನೀನು ನೀಡಿದ ವಸುಂಧರೆಯನ್ನು ಯುಧಿಷ್ಠಿರನು ನುಂಗುತ್ತಿರುವುದನ್ನು ನೋಡಿದೆನು. ಇದರಿಂದ ಅವನು ವಸುಂಧರೆಯನ್ನು ಭೋಗಿಸುತ್ತಾನೆ ಎನ್ನುವುದು ವ್ಯಕ್ತವಾಗುತ್ತದೆ. ಎತ್ತರ ಪರ್ವತವನ್ನು ಏರಿ ಭೀಮಕರ್ಮಿ, ಗದಾಪಾಣಿ, ನರವ್ಯಾಘ್ರ, ವೃಕೋದರನು ಈ ಭೂಮಿಯನ್ನು ವೀಕ್ಷಿಸುತ್ತಿರುವಂತಿದ್ದನು. ಅವನು ಮಹಾರಣದಲ್ಲಿ ನಮ್ಮೆಲ್ಲರನ್ನೂ ಸಂಹರಿಸುತ್ತಾನೆ ಎನ್ನುವುದು ಚೆನ್ನಾಗಿ ವ್ಯಕ್ತವಾಗಿದೆ. ಧರ್ಮವು ಎಲ್ಲಿರುವುದೋ ಅಲ್ಲಿ ಜಯವೆಂದು ನನಗೆ ತಿಳಿದಿದೆ. ಬಿಳಿಯ ಗಜವನ್ನೇರಿದ ಆ ಗಾಂಡೀವಿ ಧನಂಜಯನು ನಿನ್ನ ಜೊತೆಗೂಡಿ, ಪರಮಶ್ರೀಯಿಂದ ಬೆಳಗುತ್ತಾ, ನಮ್ಮೆಲ್ಲರನ್ನೂ – ಸಮರದಲ್ಲಿ ದುರ್ಯೋಧನನನ್ನು ಬೆಂಬಲಿಸಿ ಬರುವ ಪಾರ್ಥಿವರನ್ನು- ವಧಿಸುತ್ತಾನೆ ಎನ್ನುವುದರಲ್ಲಿ ನನಗೆ ಸಂಶಯವಿಲ್ಲ. ನಕುಲ ಸಹದೇವರು, ಮತ್ತು ಮಹಾರಥಿ ಸಾತ್ಯಕಿ, ಶುದ್ಧ ಕೇಯೂರ, ಹಾರ, ಮತ್ತು ಶುಕ್ಲ ಮಾಲ್ಯಾಂಬರಗಳನ್ನು ಧರಿಸಿದ್ದರು. ಆ ನರವ್ಯಾಘ್ರರು ಉತ್ತಮ ನರವಾಹನಗಳನ್ನೇರಿದ್ದರು. ಆ ಮೂವರೂ ಮಹಾಮಾತ್ರರ ಮೇಲೆ ಬಿಳಿಗೊಡೆಗಳನ್ನು

ಹಿಡಿಯಲಾಗಿತ್ತು. ಧಾರ್ತರಾಷ್ಟ್ರನ ಸೇನೆಯಲ್ಲಿ ಈ ಮೂವರು ಮಾತ್ರ ಬಿಳಿಯ ಮುಂಡಾಸನ್ನು ಧರಿಸಿರುವುದು ಕಂಡಿತು. ಅವರು ಯಾರೆಂದು ತಿಳಿದುಕೋ. ಅಶ್ವತ್ಥಾಮ, ಕೃಪ ಮತ್ತು ಸಾತ್ವತ ಕೃತವರ್ಮ! ಇತರ ಎಲ್ಲ ಪಾರ್ಥಿವರೂ ಕೆಂಪು ಮುಂಡಾಸಗಳನ್ನು ಧರಿಸಿ ಕಂಡುಬಂದರು. ಭೀಷ್ಮ-ದ್ರೋಣರು, ನಾನು ಮತ್ತು ಧಾರ್ತರಾಷ್ಟ್ರನೊಂದಿಗೆ ಒಂಟೆಗಳನ್ನು ಕಟ್ಟಿದ ವಾಹನಗಳನ್ನೇರಿ ಅಗಸ್ತ್ಯನ ದಿಕ್ಕಿನೆಡೆಗೆ ಹೋಗುತ್ತಿದ್ದೆವು. ಸ್ವಲ್ಪವೇ ಸಮಯದಲ್ಲಿ ನಾವು ಯಮಸಾದನವನ್ನು ಸೇರುವವರಿದ್ದೇವೆ. ನಾನು ಮತ್ತು ಆ ಕ್ಷತ್ರಮಂಡಲದಲ್ಲಿರುವ ಅನ್ಯ ರಾಜರು ಗಾಂಡೀವಾಗ್ನಿಯನ್ನು ಪ್ರವೇಶಿಸುತ್ತೇವೆ ಎನ್ನುವುದರಲ್ಲಿ ನನಗೆ ಸಂಶಯವಿಲ್ಲ.”

ಕೃಷ್ಣನು ಹೇಳಿದನು: “ಕರ್ಣ! ನನ್ನ ಮಾತುಗಳು ನಿನ್ನ ಹೃದಯವನ್ನು ಮುಟ್ಟುವುದಿಲ್ಲವಾದರೆ ಇಂದು ಈ ವಸುಂಧರೆಯ ವಿನಾಶವು ಬಂದೊದಗಿದೆ ಎಂದರ್ಥ. ಸರ್ವಭೂತಗಳ ವಿನಾಶವು ಉಪಸ್ಥಿತವಾಗಿರುವಾಗ ಅನ್ಯಾಯವು ನ್ಯಾಯವಾಗಿ ಕಾಣುವುದು ಹೃದಯವನ್ನು ಬಿಟ್ಟು ಹೋಗುವುದಿಲ್ಲ!”

ಕರ್ಣನು ಹೇಳಿದನು: “ಮಹಾಬಾಹೋ! ಈ ವೀರಕ್ಷಯವಿನಾಶದಿಂದ ಉತ್ತೀರ್ಣರಾಗಿ ಮಹಾರಣದಿಂದ

ಜೀವಂತರಾಗಿ ಉಳಿದು ಬಂದರೆ ಪುನಃ ನಾವು ಭೇಟಿಯಾಗೋಣ! ಅಥವಾ ಕೃಷ್ಣ! ಖಂಡಿತವಾಗಿಯೂ ಸ್ವರ್ಗದಲ್ಲಿ ನಮ್ಮ ಮಿಲನವಾಗುತ್ತದೆ. ಅಲ್ಲಿಯೇ ನಮ್ಮಿಬ್ಬರ ಪುನರ್ಮಿಲನವಾಗುವುದು ಎಂದು ನನಗನ್ನಿಸುತ್ತಿದೆ.”

ಹೀಗೆ ಹೇಳಿ ಕರ್ಣನು ಮಾಧವನನ್ನು ಬಿಗಿಯಾಗಿ ಅಪ್ಪಿಕೊಂಡನು. ಕೇಶವನಿಂದ ಬೀಳ್ಕೊಂಡು ರಥದಿಂದ ಕೆಳಕ್ಕಿಳಿದನು. ಬಂಗಾರದಿಂದ ವಿಭೂಷಿತವಾದ ತನ್ನ ರಥದಲ್ಲಿ ಕುಳಿತು ದೀನಮಾನಸನಾಗಿ ರಾಧೇಯನು ನಮ್ಮೊಂದಿಗೆ ಹಿಂದಿರುಗಿದನು. ಅನಂತರ ಸಾತ್ಯಕಿಯೊಂದಿಗೆ ಕೇಶವನು “ಹೋಗು! ಹೋಗು!” ಎಂದು ಪುನಃ ಪುನಃ ಸಾರಥಿಗೆ ಹೇಳುತ್ತಾ ಶೀಘ್ರವಾಗಿ ಪ್ರಯಾಣಿಸಿದನು.”

## ಕುಂತಿಯು ಕರ್ಣನನ್ನು ಭೇಟಿಮಾಡಿದುದು

ಸಂಧಾನ ಪ್ರಯತ್ನವು ಯಶಸ್ವಿಯಾಗದೇ ಕೃಷ್ಣನು ಕುರುಗಳಿಂದ ಪಾಂಡವರ ಕಡೆ ಹೊರಟುಹೋದನಂತರ ಕ್ಷತ್ತನು ಪೃಥೆಯ ಬಳಿ ಹೋಗಿ ಶೋಕದಿಂದ ಮೆಲ್ಲನೇ ಹೀಗೆ ಹೇಳಿದನು:

“ಜೀವಪುತ್ರೇ! ನನ್ನ ಭಾವವು ನಿತ್ಯವೂ ಅನುಗ್ರಹವಾದುದು ಎಂದು ನಿನಗೆ ತಿಳಿದಿದೆ. ನಾನೂ ಕೂಗಿಕೊಂಡರೂ ಕೂಡ ಸುಯೋಧನನು ನನ್ನ ಮಾತನ್ನು ಸ್ವೀಕರಿಸುವುದಿಲ್ಲ. ಅಲ್ಲಿ ಚೇದಿ, ಪಾಂಚಾಲ, ಕೇಕಯ, ಭೀಮಾರ್ಜುನರು, ಕೃಷ್ಣ,

ಯುಯುಧಾನರೊಡನೆ ಉಪಪ್ಲವದಲ್ಲಿ ನೆಲೆಸಿರುವ ರಾಜಾ ಯುಧಿಷ್ಠಿರನು ಜ್ಞಾತಿಸೌಹಾರ್ದತೆಯಿಂದ ಬಲವಂತನಾಗಿದ್ದರೂ ದುರ್ಬಲನಂತೆ ಧರ್ಮವನ್ನೇ ಬಯಸುತ್ತಿದ್ದಾನೆ. ಇಲ್ಲಿ ರಾಜಾ ಧೃತರಾಷ್ಟ್ರನು ವಯೋವೃದ್ಧನಾದರೂ ಶಾಂತಿಯನ್ನು ತರುತ್ತಿಲ್ಲ. ಪುತ್ರಮದದಿಂದ ಮತ್ತನಾಗಿ ವಿಧರ್ಮದ ಮಾರ್ಗದಲ್ಲಿ ನಡೆಯುತ್ತಿದ್ದಾನೆ. ಜಯದ್ರಥ, ಕರ್ಣ, ದುಃಶಾಸನ ಮತ್ತು ಸೌಬಲನ ದುರ್ಬುದ್ಧಿಯಿಂದ ಮಿಥೋಭೇದವು ಮುಂದುವರೆಯುತ್ತಿದೆ. ಆದರೆ ಅಧರ್ಮದಿಂದ ಆ ಧರ್ಮಿಷ್ಠನ ರಾಜ್ಯವನ್ನು ಈ ರೀತಿ ಅಪಹರಿಸಿದವರನ್ನು ಧರ್ಮವು ಹಿಂದೆ ಹಾಕುತ್ತದೆ. ಕುರುಗಳು ಬಲಾತ್ಕಾರವಾಗಿ ಧರ್ಮವನ್ನು ಅಪಹರಿಸಿದಾಗ ಯಾರು ತಾನೆ ಕೋಪಗೊಳ್ಳುವುದಿಲ್ಲ? ಕೇಶವನನ್ನು ಸೇರಿಕೊಂಡು ಪಾಂಡವರು ಬಂದು ಸದೆಬಡಿಯುತ್ತಾರೆ. ಆಗ ಈ ಕುರುಗಳ ವೀರನಾಶನವಾಗುತ್ತದೆ. ಇದನ್ನು ಚಿಂತಿಸಿ ನನಗೆ ಹಗಲಾಗಲೀ ರಾತ್ರಿಯಾಗಲೀ ನಿದ್ದೆಯೇ ಬರುವುದಿಲ್ಲ."

ಒಳ್ಳೆಯದನ್ನೇ ಬಯಸಿ ಅವನಾಡಿದ ಮಾತನ್ನು ಕೇಳಿದ ಕುಂತಿಯು ಏನನ್ನೋ ಕಳೆದುಕೊಳ್ಳುವಳಂತೆ ದುಃಖಾರ್ತಳಾಗಿ ಮನಸ್ಸಿನಲ್ಲಿಯೇ ವಿಮರ್ಶಿಸಿದಳು:

“ಯಾವುದಕ್ಕಾಗಿ ಈ ಮಹಾ ಕ್ಷಯಕಾರಕ ಜ್ಞಾತಿವಧೆಯು ನಡೆಯುತ್ತದೆಯೋ ಆ ಸಂಪತ್ತಿಗೆ ಧಿಕ್ಕಾರ! ಈ ಯುದ್ಧದಲ್ಲಿ ಸುಹೃದಯರ ವಧೆಯಾಗುತ್ತದೆ ಮತ್ತು ಪರಾಭವವೇ ದೊರೆಯುತ್ತದೆ. ಪಾಂಡವರು ಚೇದಿ, ಪಾಂಚಾಲ ಮತ್ತು ಯಾದವರೊಂದಿಗೆ ಸೇರಿಕೊಂಡು ಭಾರತರೊಂದಿಗೆ ಹೋರಾಡುತ್ತಾರೆ ಎಂದರೆ ಇದಕ್ಕಿಂತಲೂ ಹೆಚ್ಚಿನ ದುಃಖವು ಯಾವುದಿದೆ? ಯುದ್ಧದಲ್ಲಿ ಪರಾಭವದಂತೆ ಯುದ್ಧದಲ್ಲಿಯೇ ದೋಷವನ್ನು ಕಾಣುತ್ತಿದ್ದೇನೆ. ಜ್ಞಾತಿಕ್ಷಯದಲ್ಲಿ ಜಯವನ್ನು ಪಡೆಯುವುದಕ್ಕಿಂತ ಧನವಿಲ್ಲದೇ ಸಾಯುವುದೇ ಶ್ರೇಯಸ್ಕರವು. ಧಾರ್ತರಾಷ್ಟ್ರರ ಕಡೆಯಿರುವ ಪಿತಾಮಹ ಶಾಂತನವ, ಯೋಧರ ನಾಯಕ ಆಚಾರ್ಯ, ಮತ್ತು ಕರ್ಣ ನನ್ನ ಭಯವನ್ನು ಹೆಚ್ಚಿಸುತ್ತಿದ್ದಾರೆ. ಆಚಾರ್ಯ ದ್ರೋಣನು ಶಿಷ್ಯರ ಮೇಲಿನ ಪ್ರೀತಿಯಿಂದ ಯುದ್ಧವನ್ನು ಮಾಡದೇ ಇರಬಹುದು. ಪಿತಾಮಹನೂ ಕೂಡ ಪಾಂಡವರೊಂದಿಗೆ ಯುದ್ಧಮಾಡಲು ಹೇಗೆ ಮನಸ್ಸು ಮಾಡುತ್ತಾನೆ? ತಿಳಿಯದೇ ದುರ್ಮತಿ ಧಾರ್ತರಾಷ್ಟ್ರನನ್ನು ಅನುಸರಿಸಿ ಪಾಂಡವರನ್ನು ಸತತವಾಗಿ ಪಾಪದಿಂದ ದ್ವೇಷಿಸುವವನು ಕರ್ಣನು ಒಬ್ಬನೇ! ಪಾಂಡವರಿಗೆ ಸದಾ ಮಹಾ ಕೆಡುಕನ್ನು ಮಾಡಲು ಬದ್ಧನಾಗಿರುವ ವಿಶೇಷವಾಗಿ ಬಲವಂತನಾಗಿರುವ ಕರ್ಣನು ನನ್ನನ್ನು ಸುಡುತ್ತಿದ್ದಾನೆ. ಇಂದು ಅವನ ಕರುಣೆಯನ್ನು ಬೇಡಿ

ಬಳಿಹೋಗಿ ನಡೆದುದನ್ನು ತೋರಿಸಿಕೊಟ್ಟು, ಕರ್ಣನ ಮನಸ್ಸನ್ನು ಪಾಂಡವರ ಕಡೆ ಸೆಳೆಯುತ್ತೇನೆ. ಒಂದು ವಸಂತದಲ್ಲಿ ತಂದೆಯ ಮನೆಯಲ್ಲಿರುವಾಗ ಭಗವಾನ್ ದುರ್ವಾಸನು ಸಂತೃಪ್ತನಾಗಿ ದೇವತೆಗಳನ್ನು ಆಹ್ವಾನಿಸಬಲ್ಲ ವರವನ್ನು ನನಗೆ ನೀಡಿದ್ದನು. ಆಗ ರಾಜಾ ಕುಂತಿಭೋಜನಿಂದ ಪುರಸ್ಕೃತಳಾದ ನಾನು ಅಂತಃಪುರದಲ್ಲಿ ಹೃದಯದ ನೋವಿನಿಂದ ಬಹುವಿಧವಾಗಿ ಚಿಂತಿಸುತ್ತಿದ್ದೆ. ಮಂತ್ರಗಳ ಬಲಾಬಲವನ್ನೂ ಬ್ರಾಹ್ಮಣನ ವಾಗ್ಬಲವನ್ನೂ ಸ್ತ್ರೀಭಾವದಿಂದ ಮತ್ತು ಬಾಲಭಾವದಿಂದ ಪುನಃ ಪುನಃ ಚಿಂತಿಸತೊಡಗಿದೆನು. ಆಗ ನಂಬಿಕೆಯಿರುವ ಧಾತ್ರಿಕೆ ವತ್ತು ಗುಪ್ತ ಸಖೀಜನರೊಂದಿಗೆ ಆವೃತಳಾದ ನಾನು, ದೂಷಿತಳಾಗಬಾರದೆಂದು, ತಂದೆಯ ಚಾರಿತ್ರವನ್ನು ರಕ್ಷಿಸಬೇಕೆಂದು, ನನಗೆ ಒಳ್ಳೆಯದಾಗುವ ಹಾಗೆ ಹೇಗೆ ನಡೆದುಕೊಳ್ಳಲಿ, ನನ್ನಿಂದ ಹೇಗೆ ಅಪರಾಧವಾಗದೇ ಇರಲಿ ಎಂದು ಯೋಚಿಸುತ್ತಾ, ಆ ಬ್ರಾಹ್ಮಣನನ್ನು ನಮಸ್ಕರಿಸಿ, ಬಾಲಿಕೆಯ ಕುತೂಹಲದಿಂದ ಕನ್ಯೆ ಸತೀ ನಾನು ದೇವ ಅರ್ಕನನ್ನು ಹತ್ತಿರ ಕರೆದೆನು. ಕನ್ಯೆಯಾಗಿದ್ದಾಗ ನನ್ನ ಗರ್ಭದಲ್ಲಿದ್ದ, ಪುತ್ರನಂತೆ ಪರಿವರ್ತಿತನಾದ ಅವನು ಈಗ ಏಕೆ ನನ್ನ ಮಾತಿನಂತೆ ಭ್ರಾತೃಹಿತನಾಗಿ ಬೇಕಾದದನ್ನು ಮಾಡುವುದಿಲ್ಲ?”

ಕುಂತಿಯು ಈ ರೀತಿ ಯೋಚಿಸಿ ಆ ಉತ್ತಮ ಕಾರ್ಯವನ್ನು ಮಾಡಲು ನಿಶ್ಚಯಿಸಿದಳು. ಕಾರ್ಯಾರ್ಥಕ್ಕಾಗಿ ಯಾರಿಗೂ ತಿಳಿಯದಂತೆ ಭಾಗೀರಥಿಯ ಕಡೆ ನಡೆದಳು. ಗಂಗಾತೀರದಲ್ಲಿ ಪೃಥೆಯು ದಯಾಳು, ಸತ್ಯಸಂಗಿ ಮಗನು ಪಠಿಸುತ್ತಿರುವ ಮಂತ್ರಗಳ ಸದ್ದನ್ನು ಕೇಳಿದಳು. ಅವನು ಬಾಹುಗಳನ್ನು ಮೇಲೆತ್ತಿ ಪೂರ್ವಾಭಿಮುಖವಾಗಿ ನಿಂತಿರಲು ಆ ತಪಸ್ವಿನಿಯು ಅವನ ಹಿಂದೆ ಹೋಗಿ ಅವನ ಜಪವು ಮುಗಿಯುವುದಕ್ಕೆ ಮತ್ತು ತನ್ನ ಕಾರ್ಯವು ಸಿದ್ಧಿಯಾಗಲು ಕಾದು ನಿಂತಳು. ಕರ್ಣನ ಉತ್ತರೀಯದ ನೆರಳಲ್ಲಿ ನಿಂತಿದ್ದ ಆ ಕೌರವಪತ್ನಿ ವಾರ್ಷ್ಣೇಯಿಯು ಸೂರ್ಯನ ತಾಪದಿಂದ ಬಳಲಿ ಒಣಗಿದ್ದ ಪದ್ಮಮಾಲೆಯಂತೆ ತೋರಿದಳು. ಸೂರ್ಯನ ಕಿರಣಗಳು ಬೆನ್ನನ್ನು ಸುಡುವವರೆಗೆ ಆ ಯತವ್ರತನು ಜಪಿಸುತಿದ್ದನು. ಹಿಂದೆ ನಿಂತಿದ್ದ ಕುಂತಿಯನ್ನು ನೋಡಿ ಯಥಾನ್ಯಾಯವಾಗಿ ಆ ಮಹಾತೇಜಸ್ವಿ ಮಾನಿನೀ ಧರ್ಮಭೃತರಲ್ಲಿ ಶ್ರೇಷ್ಠನು ಕೈಮುಗಿದು ನಮಸ್ಕರಿಸಿದನು. ಕರ್ಣನು ಹೇಳಿದನು:

> "ರಾಧೇಯ, ಆದಿರಥಿ, ನಾನು ಕರ್ಣನು ನಿನಗೆ ನಮಸ್ಕರಿಸುತ್ತೇನೆ. ಇಲ್ಲಿಗೆ ನೀನು ಏಕೆ ಬಂದಿದ್ದೀಯೆ ಮತ್ತು ನಾನು ಏನು ಮಾಡಲಿ?"

ಕುಂತಿಯು ಹೇಳಿದಳು:

> "ನೀನು ಕೌಂತೇಯ! ರಾಧೇಯನಲ್ಲ. ಅಧಿರಥನು ನಿನ್ನ

ಪಿತನಲ್ಲ. ಕರ್ಣ ! ನೀನು ಸೂತಕುಲದಲ್ಲಿ ಜನಿಸಿದವನಲ್ಲ. ನನ್ನ ಮಾತನ್ನು ತಿಳಿದುಕೋ. ಕನ್ಯೆಯಾಗಿದ್ದಾಗ ನನಗೆ ನೀನು ಜ್ಯೇಷ್ಠನಾಗಿ ಹುಟ್ಟಿದೆ. ಕುಂತೀಭೋಜನ ಭವನದಲ್ಲಿ ಹೊಟ್ಟೆಯಲ್ಲಿ ನಿನ್ನನ್ನು ಹೊತ್ತಿದ್ದೆ. ನೀನು ಪಾರ್ಥನಾಗಿದ್ದೀಯೆ. ದೇವ ವಿರೋಚನ, ಎಲ್ಲವನ್ನೂ ಪ್ರಕಾಶಗೊಳಿಸುವ ಶಸ್ತ್ರಭೃತರಲ್ಲಿ ಶೇಷ್ಠ ತಪನನುನನ್ನಲ್ಲಿ ನಿನ್ನನ್ನು ಹುಟ್ಟಿಸಿದನು. ಕುಂಡಲ ಕವಚಗಳಿಂದೊಡಗೂಡಿ, ದುರ್ಧರ್ಷ ದೇವಗರ್ಭನಾದ ನೀನು ಶ್ರೀಯಿಂದ ಆವೃತನಾಗಿ ತಂದೆಯ ಮನೆಯಲ್ಲಿ ನನ್ನ ಮಗನಾಗಿ ಹುಟ್ಟಿದ್ದೆ. ನಿನ್ನ ಸಹೋದರರನ್ನು ತಿಳಿಯದೇ ಅಜ್ಞಾನದಿಂದ ಈ ರೀತಿ ಧಾರ್ತರಾಷ್ಟ್ರನ ಸೇವೆ ಮಾಡುವುದು ಪುತ್ರ ನಿನಗೆ ಸರಿಯಲ್ಲ. ಪುತ್ರ! ತಂದೆ-ತಾಯಿಯರ ಉದ್ದೇಶಗಳನ್ನು ಪೂರೈಸುವುದು ನರರ ಧರ್ಮಫಲವೆಂದು ಧರ್ಮನಿಶ್ಚಯವಾಗಿದೆ. ಹಿಂದೆ ಅರ್ಜುನನು ಸಂಪಾದಿಸಿದ, ನಂತರ ಕೆಟ್ಟ ಧಾರ್ತರಾಷ್ಟ್ರರಿಂದ ಮೋಸದಿಂದ ಅಪಹರಿಸಲ್ಪಟ್ಟ ಯುಧಿಷ್ಠಿರನ ಸಂಪತ್ತನ್ನು ಭೋಗಿಸು. ಇಂದು ಕುರುಗಳು ಕರ್ಣಾರ್ಜುನರು ಒಂದಾಗುವುದನ್ನು ನೋಡಲಿ. ನಿಮ್ಮಿಬ್ಬರ ಸೌಭ್ರಾತೃತ್ವವನ್ನು ನೋಡಿ ಕೆಟ್ಟ ಜನರು ತಲೆಬಾಗಲಿ. ರಾಮ-ಜನಾರ್ದನರಂತೆ ನೀವಿಬ್ಬರೂ ಕರ್ಣಾರ್ಜುನರಾಗಿರಿ. ನೀವಿಬ್ಬರೂ ಒಂದಾದರೆ ನಿಮಗೆ ಈ ಲೋಕದಲ್ಲಿ ಯಾವುದು ತಾನೇ ಅಸಾಧ್ಯ? ವೇದ

ಮತ್ತು ವೇದಾಂಗ ಈ ಐದರಿಂದ ಪರಿವೃತನಾದ ಬ್ರಹ್ಮನಂತೆ ನೀನು ಐವರು ಸಹೋದರರಿಂದ ಪರಿವೃತನಾಗಿ ಕಂಗೊಳಿಸುವೆ. ಶ್ರೇಷ್ಠ ಗುಣಗಳಿಂದ ಕೂಡಿದ ನೀನು ನನ್ನ ಜ್ಯೇಷ್ಠ. ಬಂಧುಗಳಲ್ಲಿ ಶ್ರೇಷ್ಠ! ಸೂತಪುತ್ರ ಎನ್ನುವ ಶಬ್ಧವು ನಿನಗೆ ಬೇಡ. ಪಾರ್ಥನೆಂದೆನಿಸಿಕೋ!"

ಆಗ ಕರ್ಣನು ಸೂರ್ಯಮಂಡಲದಿಂದ ವಾತ್ಸಲ್ಯಪೂರ್ವಕ ಮಾತನ್ನು ಕೇಳಿದನು. ದೂರದಿಂದ ಬಂದ ಆ ವಾತ್ಸಲ್ಯದ ಮಾತು ತಂದೆ ಭಾಸ್ಕರನದಾಗಿತ್ತು.

"ಕರ್ಣ! ಪೃಥೆಯು ಸತ್ಯವನ್ನೇ ಹೇಳಿದ್ದಾಳೆ. ತಾಯಿಯ ಮಾತಿನಂತೆ ಮಾಡು. ಅದರಂತೆ ನಡೆದುಕೊಂಡರೆ ನಿನಗೆ ಎಲ್ಲ ಶ್ರೇಯಸ್ಸಾಗುತ್ತದೆ."

ಹೀಗೆ ತಾಯಿ ಮತ್ತು ತಂದೆ ಸ್ವಯಂಭಾನುವು ಹೇಳಲು ಸತ್ಯಧೃತಿ ಕರ್ಣನ ಮನಸ್ಸು ಚಂಚಲವಾಗಲಿಲ್ಲ. ಕರ್ಣನು ಹೇಳಿದನು:

"ಕ್ಷತ್ರಿಯೇ! ನಿನ್ನ ನಿಯೋಗದಂತೆ ನಡೆದುಕೊಳ್ಳುವುದೇ ನನ್ನ ಧರ್ಮದ ದ್ವಾರ ಎಂದು ನೀನು ಹೇಳಿದುದರಲ್ಲಿ ನನಗೆ ಶ್ರದ್ಧೆಯಿಲ್ಲವೆಂದಲ್ಲ. ಆದರೆ ನನ್ನನ್ನು ಬಿಸುಟು ನೀನು ಸರಿಪಡಿಸಲಿಕ್ಕಾಗದಂತಹ ಪಾಪವನ್ನು ಮಾಡಿ, ನನಗೆ ದೊರಕಬೇಕಾಗಿದ್ದ ಯಶಸ್ಸು ಕೀರ್ತಿಗಳನ್ನು ನಾಶಪಡಿಸಿದ್ದೀಯೆ. ಕ್ಷತ್ರಿಯನಾಗಿ ಹುಟ್ಟಿಯೂ ಕ್ಷತ್ರಿಯರಿಗೆ

ಸಲ್ಲಬೇಕಾದ ಗೌರವವನ್ನು ಪಡೆಯಲಿಲ್ಲ. ನೀನು ನನಗೆ ಮಾಡಿದ ಈ ಅಹಿತ ಕಾರ್ಯವನ್ನು ಯಾವ ಶತ್ರುವು ತಾನೇ ಮಾಡಿಯಾನು? ಮಾಡಬೇಕಾದ ಸಮಯದಲ್ಲಿ ನನಗೆ ನೀನು ಈಗ ತೋರಿಸುವ ಅನುಕಂಪವನ್ನು ತೋರಿಸಲಿಲ್ಲ. ಸಂಸ್ಕಾರಗಳಿಂದ ವಂಚಿಸಿದ ನಿನ್ನ ಈ ಮಗನಿಗೆ ಈಗ ಹೀಗೆ ಮಾಡೆಂದು ಹೇಳುತ್ತಿದ್ದೀಯೆ. ತಾಯಿಯಂತೆ ನೀನು ಎಂದೂ ನನಗೆ ಹಿತವಾಗಿ ನಡೆದುಕೊಳ್ಳಲಿಲ್ಲ. ಈಗ ನೀನು ಕೇವಲ ನಿನ್ನ ಹಿತವನ್ನು ಬಯಸಿ ನನಗೆ ತಿಳಿಸಿ ಹೇಳುತ್ತಿದ್ದೀಯೆ! ಕೃಷ್ಣನ ಸಹಾಯಪಡೆದಿರುವ ಧನಂಜಯನ ಎದಿರು ಯಾರು ತಾನೇ ನಡುಗುವುದಿಲ್ಲ? ಈಗ ನಾನು ಪಾರ್ಥರನ್ನು ಸೇರಿದರೆ ಭಯದಿಂದ ಹಾಗೆ ಮಾಡಿದೆ ಎಂದು ಯಾರು ತಾನೇ ತಿಳಿದುಕೊಳ್ಳುವುದಿಲ್ಲ? ಇದೂವರೆಗೆ ಅವರ ಅಣ್ಣನೆಂದು ವಿದಿತನಾಗಿರದ ನನಗೆ ಈಗ ಯುದ್ಧದ ಸಮಯದಲ್ಲಿ ಗೊತ್ತಾಗಿದೆ. ಈಗ ಪಾಂಡವರ ಕಡೆ ಹೋದರೆ ಕ್ಷತ್ರಿಯರು ನನ್ನ ಕುರಿತು ಏನು ಹೇಳುತ್ತಾರೆ? ಧಾರ್ತರಾಷ್ಟ್ರರು ಸರ್ವಕಾಮಗಳಿಂದ ಸಂವಿಭಕ್ತರಾಗಿ ಸದಾ ನನ್ನನ್ನು ತುಂಬಾ ಪೂಜಿಸಿದ್ದಾರೆ. ಈಗ ನಾನು ಅದನ್ನು ಹೇಗೆ ನಿಷ್ಫಲವನ್ನಾಗಿ ಮಾಡಲಿ? ಈಗ ಶತ್ರುಗಳೊಂದಿಗೆ ವೈರವನ್ನು ಕಟ್ಟಿಕೊಂಡು ಅವರು ನಿತ್ಯವೂ ನನ್ನನ್ನು ವಸುಗಳು ವಾಸವನನ್ನು ಹೇಗೋ ಹಾಗೆ ಪೂಜಿಸುತ್ತಾರೆ, ನಮಸ್ಕರಿಸುತ್ತಾರೆ. ನನ್ನ ಶಕ್ತಿಯಿಂದ

ಶತ್ರುಗಳ ಶಕ್ತಿಯನ್ನು ಎದುರಿಸಬಲ್ಲರು ಎಂದು ತಿಳಿದುಕೊಂಡಿರುವ ಅವರ ಮನೋರಥವನ್ನು ಇಂದು ನಾನು ಹೇಗೆ ಒಡೆದು ಹಾಕಲಿ? ಸಾಧಿಸಲಸಾಧ್ಯವಾದ ಈ ಸಂಗ್ರಾಮವೆಂಬ ಸಾಗರವನ್ನು ದಾಟಿಸಲು ಸಾಧ್ಯಮಾಡಬಲ್ಲ ದೋಣಿಯಂತೆ ನನ್ನನ್ನು ನೋಡುತ್ತಿರುವ ಅವರನ್ನು ನಾನು ಹೇಗೆ ತೊರೆಯಬಲ್ಲೆನು? ಧಾರ್ತರಾಷ್ಟ್ರನನ್ನು ಅವಲಂಬಿಸಿ ಜೀವಿಸುವವರಿಗೆ ಇದೇ ಕಾಲವು ಬಂದಿದೆ. ನನ್ನ ಪ್ರಾಣವನ್ನು ರಕ್ಷಿಸಿಕೊಳ್ಳದೇ ನನ್ನ ಕರ್ತವ್ಯವನ್ನು ಮಾಡಬೇಕು. ಚೆನ್ನಾಗಿ ಪೋಷಿತರಾಗಿ ಕೃತಾರ್ಥರಾಗಿರುವವರು ಅವರಿಗೆ ಮಾಡಿದುದನ್ನು ಕಡೆಗಣಿಸಿ, ಸಮಯ ಬಂದಾಗ ಹಿಂದೆ ಪಡೆದ ಎಲ್ಲ ಲಾಭಗಳನ್ನೂ ಅಲ್ಲಗಳೆಯುವವರು ಪಾಪಿಷ್ಟರು. ರಾಜರನ್ನು ದುರ್ಬಲಗೊಳಿಸುವ ಆ ಭರ್ತೃಪಿಂಡಾಪಹಾರಿ ಪಾಪಕರ್ಮಿಗಳಿಗೆ ಈ ಲೋಕದಲ್ಲಿಯಾಗಲೀ ಪರಲೋಕದಲ್ಲಿಯಾಗಲೀ ಒಳ್ಳೆಯದಾಗುವುದಿಲ್ಲ. ಧೃತರಾಷ್ಟ್ರನ ಮಕ್ಕಳಿಗಾಗಿ ನಾನು ನನ್ನ ಬಲ ಶಕ್ತಿಗಳನ್ನು ಬಳಸಿ ನಿನ್ನ ಮಕ್ಕಳೊಂದಿಗೆ ಹೋರಾಡುತ್ತೇನೆ. ನಿನಗೆ ಸುಳ್ಳನ್ನು ಹೇಳುತ್ತಿಲ್ಲ. ಸತ್ಪುರುಷರಿಗೆ ಉಚಿತವಾದ ಮಾನವೀಯ ನಡತೆಯನ್ನು ರಕ್ಷಿಸಿ, ನನಗೆ ಒಳ್ಳೆಯದಾಗದಿದ್ದರೂ ಇಂದು ನಿನ್ನ ಮಾತಿನಂತೆ ಮಾಡುವುದಿಲ್ಲ.

ಆದರೂ ನನ್ನೊಡನೆ ನೀನು ನಡೆಸಿದ ಈ ಪ್ರಯತ್ನವು

ನಿಷ್ಫಲವಾಗುವುದಿಲ್ಲ. ಅವರನ್ನು ಎದುರಿಸಿ ಕೊಲ್ಲಬಲ್ಲೆನಾದರೂ ನಾನು ಯುದ್ಧದಲ್ಲಿ ನಿನ್ನ ಮಕ್ಕಳನ್ನು – ಅರ್ಜುನನನ್ನು ಬಿಟ್ಟು, ಯುಧಿಷ್ಠಿರ, ಭೀಮ, ಮತ್ತು ಯಮಳರನ್ನು – ಕೊಲ್ಲುವುದಿಲ್ಲ. ಯುಧಿಷ್ಠಿರನ ಬಲದಲ್ಲಿರುವ ಅರ್ಜುನನೊಂದಿಗೆ ನನ್ನ ಯುದ್ಧವು ನಡೆಯುತ್ತದೆ. ಅರ್ಜುನನನ್ನು ಕೊಂದು ನನಗೆ ನನ್ನ ಫಲವು ದೊರೆಯುತ್ತದೆ. ಅಥವಾ ಸವ್ಯಸಾಚಿಯಿಂದ ಹತನಾದರೆ ಯಶಸ್ಸನ್ನು ಪಡೆಯುತ್ತೇನೆ. ನಿನಗೆ ಐವರಿಗಿಂತ ಕಡಿಮೆ ಮಕ್ಕಳಿರುವುದಿಲ್ಲ. ಅರ್ಜುನನನು ಇಲ್ಲವಾದರೆ ಕರ್ಣನಿರುತ್ತಾನೆ ಅಥವಾ ನಾನು ಹತನಾದರೆ ಅರ್ಜುನನಿರುತ್ತಾನೆ.”

ಕರ್ಣನ ಈ ಮಾತುಗಳನ್ನು ಕೇಳಿ ಕುಂತಿಯು ದುಃಖದಿಂದ ನಡುಗಿದಳು. ಓಲಾಡದೇ ಧೈರ್ಯದಿಂದಿದ್ದ ಪುತ್ರ ಕರ್ಣನನ್ನು ಬಿಗಿದಪ್ಪಿ ಹೇಳಿದಳು:

“ಕರ್ಣ! ಹೀಗೆಯೇ ಆಗಲಿ! ನೀನು ಹೇಳಿದಂತೆ ಕೌರವರು ಕ್ಷಯ ಹೊಂದುತ್ತಾರೆ. ದೈವವು ಬಲವತ್ತರವಾದುದು. ನಿನ್ನ ನಾಲ್ವರು ತಮ್ಮಂದಿರಿಗೆ ನೀನು ನೀಡಿರುವ ಅಭಯವನ್ನು ನೆನಪಿನಲ್ಲಿಟ್ಟುಕೊಂಡು ಸಂಗರದಕ್ಕೆ ಪ್ರಾಯಶ್ಚಿತ್ತವನ್ನು ಮಾಡಿಕೋ. ಆರೋಗ್ಯವಾಗಿರು! ಮಂಗಳವಾಗಲಿ!”

ಪ್ರೀತಿಯಿಂದ ಕರ್ಣನು ಅವಳಿಗೆ ವಂದಿಸಿದನು. ಇಬ್ಬರೂ ಬೇರೆ ಬೇರೆ

ದಾರಿಗಳಲ್ಲಿ ಹೋದರು.

# ಮಹಾಭಾರತ ಯುದ್ಧ ಸಿದ್ಧತೆ

## ಪಾಂಡವ ಸೇನೆಯು ಕುರುಕ್ಷೇತ್ರಕ್ಕೆ ಹೋಗಿ ಬೀಡುಬಿಟ್ಟುದುದು

ಜನಾರ್ದನನ ಮಾತನ್ನು ಕೇಳಿ ಧರ್ಮರಾಜ ಯುಧಿಷ್ಠಿರನು ಕೇಶವನ ಸಮಕ್ಷಮದಲ್ಲಿಯೇ ಧರ್ಮಾತ್ಮಾ ಸಹೋದರರಿಗೆ ಹೇಳಿದನು:

> “ನೀವು ಕುರುಸಂಸದಿಯ ಸಭೆಯಲ್ಲಿ ಏನಾಯಿತೆಂದು ಕೇಳಿದಿರಿ. ಕೇಶವನೂ ಕೂಡ ಅವನ ಮಾತಿನಲ್ಲಿ ಅವೆಲ್ಲವನ್ನೂ ವರದಿಮಾಡಿದ್ದಾನೆ. ಆದುದರಿಂದ ನಮ್ಮ ವಿಜಯಕ್ಕಾಗಿ ಸೇರಿರುವ ಏಳು ಅಕ್ಷೌಹಿಣೀ ಸೇನೆಗಳ ವಿಭಾಗಗಳನ್ನು ಮಾಡಿ. ಅವುಗಳ ಏಳು ವಿಖ್ಯಾತ ನಾಯಕರನ್ನು ತಿಳಿದುಕೊಳ್ಳಿ – ದ್ರುಪದ, ವಿರಾಟ, ಧೃಷ್ಟದ್ಯುಮ್ನ, ಶಿಖಂಡಿ, ಸಾತ್ಯಕಿ, ಚೇಕಿತಾನ ಮತ್ತು ವೀರ್ಯವಾನ್ ಭೀಮಸೇನ. ಇವರೆಲ್ಲ ಸೇನಾಪ್ರಣೇತಾರರು ವೀರರು, ದೇಹವನ್ನು ತ್ಯಜಿಸಿದವರು, ಎಲ್ಲರೂ ವೇದವಿದರು, ಶೂರರು, ಎಲ್ಲರೂ ಸುಚರಿತವ್ರತರು, ವಿನಯಿಗಳು, ನೀತಿವಂತರು, ಎಲ್ಲರೂ ಯುದ್ಧ ವಿಶಾರದರು, ಇಷ್ಟ ಅಸ್ತ್ರಗಳಲ್ಲಿ ಕುಶಲರು, ಹಾಗೂ ಸರ್ವಾಸ್ತ್ರಯೋಧರು.

ಕುರುನಂದನ ಸಹದೇವ! ಸೇನಗಳ ಪ್ರವಿಭಾಗಗಳನ್ನು ತಿಳಿದಿರುವ, ಪಾವಕನಂತಿರುವ ಬಾಣಗಳನ್ನುಳ್ಳ ಬೀಷ್ಮನೊಡನೆ ರಣದಲ್ಲಿ ಹೋರಾಡಬಲ್ಲ, ಈ ಏಳೂ ಸೇನೆಗಳ ನೇತಾರನಾಗಬಲ್ಲ, ನಮ್ಮ ಸಮರ್ಥ ಸೇನಾಪತಿಯು ಯಾರಾಗಬಲ್ಲನೆಂಬ ನಿನ್ನ ಅಭಿಪ್ರಾಯವನ್ನು ಹೇಳು."

ಸಹದೇವನು ಹೇಳಿದನು:

"ನಮ್ಮ ದುಃಖದಲ್ಲಿ ಒಂದಾಗಿ ಸೇರಿಕೊಂಡ, ನಮಗೆ ಹತ್ತಿರದ ನೆಂಟನಾದ, ವೀರ್ಯವಾನ ಮಹೀಪತಿ, ಯಾರನ್ನು ಆಶ್ರಯಿಸಿ ನಮ್ಮ ಅಂಶವನ್ನು ಮರಳಿ ಪಡೆಯಬಹುದೋ ಆ ಧರ್ಮಜ್ಞ ಬಲವಾನ್, ಕೃತಾಸ್ತ್ರ, ಯುದ್ಧ ದುರ್ಮದ, ಮತ್ಸ್ಯ ವಿರಾಟನು ಸಂಗ್ರಾಮದಲ್ಲಿ ಭೀಷ್ಮ ಮತ್ತು ಆ ಮಹಾರಥಿಗಳನ್ನು ಸದೆಬಡಿಯಬಲ್ಲನು."

ವಾಕ್ಯವಿಶಾರದ ಸಹದೇವನು ಈ ವಾಕ್ಯಗಳಲ್ಲಿ ಹೇಳಲು, ನಕುಲನು ಈ ಮಾತುಗಳನ್ನು ಆಡಿದನು:

"ವಯಸ್ಸಿನಲ್ಲಿ, ಶಾಸ್ತ್ರದಲ್ಲಿ, ಧೈರ್ಯದಲ್ಲಿ, ಕುಲದಲ್ಲಿ, ಅಭಿಜನರಲ್ಲಿ ಹಿರಿಯವನಾದ; ಕುಲಾನ್ವಿತ, ಸರ್ವಶಾಸ್ತ್ರವಿಶಾರದ, ಭರಧ್ವಾಜನಿಂದ ಅಸ್ತ್ರಗಳನ್ನು ಕಲಿತ, ದುರ್ಧರ್ಷ, ಸತ್ಯಸಂಗರ; ಯಾರು ನಿತ್ಯವೂ ಮಹಾಬಲಿ ದ್ರೋಣ-ಭೀಷ್ಮರೊಡನೆ ಸ್ಪರ್ಧಿಸುತ್ತಾನೋ; ಶ್ಲಾಘನೀಯ,

ಪಾರ್ಥಿವ ಸಂಘದ ಪ್ರಮುಖ, ವಾಹಿನೀಪತಿ; ನೂರು ಶಾಖೆಗಳಿರುವ ವೃಕ್ಷದಂತೆ ಪುತ್ರಪೌತ್ರರಿಂದ ಪರಿವೃತನಾದ; ರೋಷದಿಂದ ದ್ರೋಣವಿನಾಶಕ್ಕಾಗಿ ಪತ್ನಿಯೊಡನೆ ಘೋರ ತಪಸ್ಸನ್ನು ತಪಿಸಿದ ಮಹೀಪತಿ; ಸಮಿತಿಗಳಿಗೆ ಶೋಭೆಯನ್ನು ತರುವ; ಸದಾ ನಮ್ಮ ತಂದೆಯ ಸಮನಾಗಿರುವ ಪಾರ್ಥಿವರ್ಷಭ, ನಮ್ಮೆಲ್ಲರ ಮಾವ ದ್ರುಪದನು ನಮ್ಮ ಸೇನೆಯ ಅಗ್ರಸ್ಥಾನದಲ್ಲಿ ಪ್ರಕಾಶಿಸುತ್ತಾನೆ. ಅವನು ಕೊನೆಯವರೆಗೂ ದ್ರೋಣ-ಭೀಷ್ಮರನ್ನು ಸಹಿಸುತ್ತಾನೆ ಎಂದು ನನ್ನ ಅಭಿಪ್ರಾಯ. ಏಕೆಂದರೆ ಆ ನೃಪನು ದಿವ್ಯಾಸ್ತ್ರಗಳನ್ನು ತಿಳಿದಿದ್ದಾನೆ. ಮತ್ತು ಆಂಗಿರಸನ ಸಖನಾಗಿದ್ದಾನೆ.”

ಮಾದ್ರೀಸುತರೀರ್ವರು ಹೀಗೆ ಹೇಳಲು ಕುರುನಂದನ ವಾಸವ ಸಮ ವಾಸವಿ ಸವ್ಯಸಾಚಿಯು ತನ್ನ ಅಭಿಪ್ರಾಯವನ್ನು ಹೇಳಿದನು:

“ತಪಃಪ್ರಭಾವದಿಂದ, ಋಷಿಗಳ ಸಂತೋಷದಿಂದ ಹುಟ್ಟಿದ ದಿವ್ಯಪುರುಷ - ಜ್ವಾಲವರ್ಣಿ, ಮಹಾಬಲ; ಧನ್ನುಸ್ಸನ್ನು ಹಿಡಿದು, ಕವಚವನ್ನು ಧರಿಸಿ, ದಿವ್ಯ ಶ್ರೇಷ್ಠ ಕುದುರೆಗಳನ್ನು ಕಟ್ಟಿದ ರಥವನ್ನೇರಿ, ಮಹಾಮೇಘದಂತೆ ಘರ್ಜಿಸುತ್ತಾ, ರಥಘೋಷಗಳೊಂದಿಗೆ ಅಗ್ನಿಕುಂಡದಿಂದ ಮೇಲೆದ್ದು ಬಂದ; ವೀರ್ಯವಾನ, ವೀರ, ಸಿಂಹಸಂಹನನ, ಸಿಂಹವಿಕ್ರಾಂತ, ವಿಕ್ರಮಿ, ಸಂಹೋರಸ್ಕ, ಮಹಾಬಾಹು, ಸಿಂಹವಕ್ಷ,

ಮಹಾಬಲ, ಸಿಂಹಪ್ರಗರ್ಜನ, ವೀರ, ಸಿಂಹಸ್ಕಂಧ, ಮಹಾದ್ಯುತಿ, ಸುಂದರ ಹುಬ್ಬುಳ್ಳವನು, ಸುಂದರ ಹಲ್ಲುಳ್ಳವನು, ಸುಹನು, ಸುಬಾಹು, ಸುಮುಖ, ಅಕೃಶ, ಸುಜತ್ರು, ಸುವಿಶಾಲಾಕ್ಷ, ಸುಪಾದ, ಸುಪ್ರತಿಷ್ಠಿತ, ಅಭೇದ್ಯ, ಸರ್ವಶಸ್ತ್ರಗಳನ್ನು ಕತ್ತರಿಸಿ ತಡೆಯ ಬಲ್ಲ; ದ್ರೋಣನ ವಿನಾಶಕ್ಕೆ ಜನಿಸಿದ, ಜಿತೇಂದ್ರಿಯ ಧೃಷ್ಟದ್ಯುಮ್ನನು ಭೀಷ್ಮನ ವಜ್ರ ಪ್ರಭಾವೀ, ಬೆಂಕಿಯನ್ನು ಉಗುಳುವ ಸರ್ಪಗಳಂತಿರುವ, ವೇಗದಲ್ಲಿ ಯಮದೂತರ ಸಮನಾಗಿರುವ, ಬೆಂಕಿಯಂತೆ ಬೀಳುವ, ಒಮ್ಮೆ ರಾಮನೇ ಎದುರಿಸಿದ, ಸಿಡಿಲುಬಡಿಯುವಂತೆ ದಾರುಣವಾದ ಬಾಣಗಳನ್ನು ಸಹಿಸಬಲ್ಲ ಎಂದು ನನಗನ್ನಿಸುತ್ತದೆ. ರಾಜನ್! ಧೃಷ್ಟದ್ಯುಮ್ನನನ್ನು ಬಿಟ್ಟು ಆ ಮಹಾವ್ರತ ಪುರುಷನನ್ನು ಸಹಿಸುವ ಬೇರೆ ಯಾರನ್ನೂ ನಾನು ಕಾಣುವುದಿಲ್ಲ. ಇದು ನನ್ನ ಬುದ್ಧಿಗೆ ಬಂದಿರುವ ಅಭಿಪ್ರಾಯ. ಹಿಂಡನ್ನು ನಡೆಸಿಕೊಂಡು ಹೋಗುವ ಮಾತಂಗದಂತೆ ಆ ಕ್ಷಿಪ್ರಹಸ್ತ, ಚಿತ್ರಯೋಧೀ, ಅಭೇದ್ಯಕವಚನು ಸೇನಾಪತಿಯಾಗಬಹುದೆಂದು ನನ್ನ ಮತ."

ಭೀಮನು ಹೇಳಿದನು:

"ರಾಜೇಂದ್ರ! ಸೇರಿರುವ ಸಿದ್ಧರು ಋಷಿಗಳು ಶಿಖಂಡಿಯು ಭೀಷ್ಮನ ವಧೆಗಾಗಿಯೇ ಉತ್ಪನ್ನನಾದನೆಂದು ಹೇಳುತ್ತಾರೆ.

ಶಿಖಂಡಿಯು ಸಂಗ್ರಾಮಮಧ್ಯದಲ್ಲಿ ದಿವ್ಯ ಅಸ್ತ್ರವನ್ನು ಪ್ರಯೋಗಿಸುವಾಗ ಅವನಲ್ಲಿ ಪುರುಷರು ಮಹಾತ್ಮ ರಾಮನ ರೂಪವನ್ನೇ ಕಾಣುತ್ತಾರೆ. ಯುದ್ಧದಲ್ಲಿ ಆಯುಧಪಾಣಿಯಾಗಿ ನಿಂತ ಶಿಖಂಡಿಯನ್ನು ಶಸ್ತ್ರಗಳಿಂದ ಭೇದಿಸುವ ಯಾರನ್ನೂ ನಾನು ಕಂಡಿಲ್ಲ. ಮಹಾವ್ರತ ಬೀಷ್ಮನನ್ನು ವೀರ ಶಿಖಂಡಿಯ ಹೊರತಾಗಿ ಬೇರೆ ಯಾರೂ ಎದುರಿಸಲಾರರು. ಅವನೇ ನಮ್ಮ ಸೇನಾಪತಿಯೆಂದು ನನಗನ್ನಿಸುತ್ತದೆ."

ಯುಧಿಷ್ಠಿರನು ಹೇಳಿದನು:

"ಮಕ್ಕಳೇ! ಜಗತ್ತಿನ ಎಲ್ಲದರ - ಈಗಿನ ಮತ್ತು ಹಿಂದೆ ಆಗಿಹೋದವುಗಳ – ಸಾರಾಸಾರಗಳು ಮತ್ತು ಬಲಾಬಲಗಳು ಎಲ್ಲವೂ ಧರ್ಮಾತ್ಮ ಕೇಶವನಿಗೆ ತಿಳಿದಿದೆ. ಕೃಷ್ಣ ದಾಶಾರ್ಹನು ಯಾರೆಂದು ಹೇಳುತ್ತಾನೋ ಅವನು ಕೃತಾಸ್ತ್ರನಾಗಿರಲಿ ಅಥವಾ ಅಕೃತಾಸ್ತ್ರನಾಗಿರಲಿ, ವೃದ್ಧನಾಗಿರಲಿ ಅಥವಾ ಯುವಕನಾಗಿರಲಿ ಅವನೇ ನಮ್ಮ ವಾಹಿನೀಪತಿಯಾಗಲಿ. ಇವನೇ ನಮ್ಮ ವಿಜಯ-ವಿಪರ್ಯಯಗಳ ಮೂಲ. ಅವನಲ್ಲಿಯೇ ನಮ್ಮ ಪ್ರಾಣಗಳು, ರಾಜ್ಯ, ಇರುವುದು-ಇಲ್ಲದಿರುವುದು, ಮತ್ತು ಸುಖ-ಅಸುಖಗಳು ನೆಲೆಸಿವೆ. ಇವನೇ ಧಾತಾ, ವಿಧಾತಾ. ಇವನಲ್ಲಿ ಸಿದ್ಧಿಯು ಪ್ರತಿಷ್ಠಿತವಾಗಿದೆ. ಕೃಷ್ಣ ದಾಶಾರ್ಹನು ಯಾರನ್ನು

ಸಮರ್ಥನೆಂದು ಹೇಳುತ್ತಾನೋ ಅವನೇ ನಮಗೆ ಸೇನಾಪತಿಯಾಗುತ್ತಾನೆ. ಮಾತನಾಡುವವರಲ್ಲಿ ಶ್ರೇಷ್ಠನು ಹೇಳಲಿ. ರಾತ್ರಿಯು ಮುಗಿಯಲು ಬಂದಿದೆ. ಕೃಷ್ಣನ ವಶವರ್ತಿಯಾಗಿರುವವನನ್ನು ಸೇನಾಪತಿಯನ್ನಾಗಿ ಮಾಡಿಕೊಂಡು, ಉಳಿದಿರುವ ರಾತ್ರಿಯನ್ನು ಕಳೆದು, ಮಂಗಲ ಕಾರ್ಯಗಳನ್ನು ಮುಗಿಸಿ, ಸುಹಾಸಿತ ಶಸ್ತ್ರಾಸ್ತ್ರಗಳೊಂದಿಗೆ ರಣರಂಗದ ಕಡೆ ಸಾಗೋಣ."

ಧೀಮತ ಧರ್ಮರಾಜನ ಆ ಮಾತನ್ನು ಕೇಳಿ ಪುಂಡರೀಕಾಕ್ಷನು ಧನಂಜಯನನ್ನು ನೋಡಿ ಹೇಳಿದನು:

"ಮಹಾರಾಜ! ನೀವು ಸೂಚಿಸಿರುವ ಸೇನೆಗಳ ನೇತಾರರೆಲ್ಲರೂ ಶೂರರು, ವಿಕ್ರಾಂತ ಯೋದ್ಧರು ಮತ್ತು ನಿನ್ನ ಶತ್ರುಗಳನ್ನು ಪುಡಿಮಾಡಲು ಸಮರ್ಥರು ಎಂದು ನನಗೂ ಅನ್ನಿಸುತ್ತದೆ. ಅವರು ಮಹಾಹವದಲ್ಲಿ ಇಂದ್ರನಲ್ಲಿಯೂ ಕೂಡ ಭಯವನ್ನು ಹುಟ್ಟಿಸುವರು. ಇನ್ನು ಲುಬ್ಧರಾದ ಪಾಪಚೇತಸರಾದ ಧಾರ್ತರಾಷ್ಟ್ರರೇನು? ನಾನೂ ಕೂಡ ನಿನ್ನ ಸಂತೋಷಕ್ಕಾಗಿ ಶಾಂತಿಯಿರಲಿ ಎಂದು ಮಹಾ ಪ್ರಯತ್ನವನ್ನು ಮಾಡಿದೆ. ನಾವು ಧರ್ಮದ ಋಣವನ್ನು ತೀರಿಸಿದಂತಾಗಿದೆ. ಮಾತನಾಡ ಬಯಸುವವರು ನಮ್ಮನ್ನು ನಿಂದಿಸಬಾರದು. ಆ ಬಾಲಬುದ್ಧಿಯ ಧಾರ್ತರಾಷ್ಟ್ರನು ತಾನು

ಕೃತಾರ್ಥನೆಂದುಕೊಂಡಿದ್ದಾನೆ. ರೋಗಿಯು ತಿಳಿದುಕೊಳ್ಳುವಂತೆ ತಾನು ಬಲಶಾಲಿಯೆಂದು ತಿಳಿದುಕೊಂಡಿದ್ದಾನೆ. ಆಗಲಿ! ಸೇನೆಯನ್ನು ಹೂಡು. ವಧಿಸಿಯೇ ಅವರನ್ನು ದಾರಿಗೆ ತರಬಹುದೆಂದು ನನಗನ್ನಿಸುತ್ತದೆ. ಧಾರ್ತರಾಷ್ಟ್ರರು ಧನಂಜಯನನ್ನು, ಸಂಕೃದ್ಧ ಭೀಮಸೇನನನ್ನು ಮತ್ತು ಯಮನಂತಿರುವ ಯಮಳರನ್ನು, ಅದ್ವಿತೀಯ ಯುಯುಧಾನನನ್ನು, ಅಮರ್ಷಣ ಧೃಷ್ಟದ್ಯುಮ್ನನನ್ನು, ಅಭಿಮನ್ಯುವವನ್ನು, ದ್ರೌಪದೇಯರನ್ನು, ವಿರಾಟ ದ್ರುಪದರನ್ನೂ, ಅಕ್ಷೌಹಿಣೀ ಪತಿಗಳನ್ನೂ, ದೃಢವಿಕ್ರಮರಾದ ಅನ್ಯ ನರೇಂದ್ರರನ್ನೂ ನೋಡಿ ಎದುರಿಸಲು ಅಶಕ್ತರಾಗುತ್ತಾರೆ. ಸಾರವತ್ತಾದ, ದುಷ್ಪ್ರಧರ್ಷವಾದ, ದುರಾಸದವಾದ ನಮ್ಮ ಬಲವು ಯುದ್ಧದಲ್ಲಿ ಧಾರ್ತರಾಷ್ಟ್ರನ ಬಲವನ್ನು ವಧಿಸುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ."

ಕೃಷ್ಣನು ಹೀಗೆ ಹೇಳಲು ನರೋತ್ತಮರು ಸಂಪ್ರಹೃಷ್ಟರಾದರು. ಆ ಪ್ರಹೃಷ್ಟಮನಸ್ಕರಲ್ಲಿ ಮಹಾ ನಾದವುಂಟಾಯಿತು. "ಯೋಗ" ಎಂದು ಕೂಗಲು ಸೇನೆಗಳು ತ್ವರೆಮಾಡಿ ಓಡತೊಡಗಿದವು. ಎಲ್ಲೆಡೆಯೂ ಆನೆ ಕುದುರೆಗಳ ಮತ್ತು ರಥಚಕ್ರಗಳ ಘೋಷವುಂಟಾಯಿತು. ಎಲ್ಲಕಡೆಯೂ ಶಂಖ-ದುಂದುಭಿ-ನಿರ್ಘೋಶಗಳ ತುಮುಲವಾಯಿತು. ಪಾಂಡವರನ್ನು ಸುತ್ತುವರೆದು ಹೊರಟ ಸೇನೆಗಳು ತುಂಬಿ ಹರಿಯುತ್ತಿರುವ ಗಂಗಾ

ಪ್ರವಾಹದಂತೆ ದುರ್ಧರ್ಷವಾಗಿ ಕಂಡಿತು. ಸೇನೆಯ ಮುಂದೆ ಭೀಮಸೇನ ಮತ್ತು ಕವಚಧಾರಿ ಮಾದ್ರೀಪುತ್ರರೀರ್ವರು ನಡೆದರು. ಭೀಮಸೇನನ ಹಿಂದೆ ಸೌಭದ್ರಿ, ದ್ರೌಪದೇಯರು, ಪಾರ್ಷತ ಧೃಷ್ಟದ್ಯುಮ್ನ, ಪಾಂಚಾಲರು ಮತ್ತು ಪ್ರಭದ್ರಕರು ನಡೆದರು. ಆಗ ಹುಣ್ಣಿಮೆಯಂದು ಸಮುದ್ರವು ಭೋರ್ಗರೆಯುವಂತೆ ಹರ್ಷದಿಂದ ಪ್ರಯಾಣಿಸುತ್ತಿರುವವರ ಘೋಷವು ದಿವವನ್ನು ಮುಟ್ಟುವಷ್ಟಾಯಿತು. ಹರ್ಷಿತರಾದ, ಸಂಪೂರ್ಣ ರಕ್ಷಿತರಾದ, ಶತ್ರುಸೇನೆಯನ್ನು ತುಂಡರಿಸಬಲ್ಲ ಆ ಯೋಧರ ಮಧ್ಯೆ ರಾಜಾ ಕುಂತೀಪುತ್ರ ಯುಧಿಷ್ಠಿರನು ನಡೆದನು. ಬಂಡಿಗಳು, ವ್ಯಾಪಾರದ ಬಂಡಿಗಳು, ವೇಶ್ಯಾವಾಟಿಕೆಗಳು, ಬಂಡಿಗಳ ಸರಣಿ, ಕೋಶಯಂತ್ರಗಳು, ಆಯುಧಗಳು, ವೈದ್ಯರು, ಚಿಕಿತ್ಸಕರು, ಸೇನೆಯನ್ನು ಹಿಂಬಾಲಿಸಿ ಬಂದಿರುವ ಕೃಷ-ದುರ್ಬಲರನ್ನೂ ಪರಿಚಾರಕರನ್ನೂ ಒಟ್ಟುಗೂಡಿಸಿಕೊಂಡು ರಾಜನು ಹೊರಟನು. ಪಾಂಚಾಲೀ ಸತ್ಯವಾದಿನೀ ದ್ರೌಪದಿಯು ಉಪಪ್ಲವ್ಯದಲ್ಲಿ ಇತರ ಸ್ತ್ರೀಯರೊಂದಿಗೆ ದಾಸೀದಾಸರೊಂದಿಗೆ ಉಳಿದುಕೊಂಡಳು.

ಅಲ್ಲಿ ಚಲಿಸುವ ಮತ್ತು ಸ್ಥಿರವಾಗಿರುವ ಸೇನೆಗಳಿಂದ ಮೂಲಭೂತ ರಕ್ಷಣೆಯನ್ನು ನೀಡಿ ಪಾಂಡುನಂದನರು ಪ್ರಯಾಣಿಸಿದರು. ಮಣಿವಿಭೂಷಿತ ರಥಗಳಲ್ಲಿ ಅವರು ಗೋವು ಹಿರಣ್ಯಗಳನ್ನು ಸತ್ತುವರೆದು ಸ್ತುತಿಸುತ್ತಿದ್ದ ಬ್ರಾಹ್ಮಣರಿಗೆ ನೀಡುತ್ತಾ ಪ್ರಯಾಣಿಸಿದರು. ಕೇಕಯರು, ಧೃಷ್ಟಕೇತು, ಕಾಶಿಯ ರಾಜನ ಮಗ, ಶ್ರೇಣಿಮಾನ್,

ವಸುದಾನ, ಅಪರಾಜಿತ ಶಿಖಂಡೀ ಇವರು ಹೃಷ್ಟರೂ ತುಷ್ಟರೂ ಆಗಿ, ಕವಚಗಳನ್ನು ಧರಿಸಿ, ಸಶಸ್ತ್ರರಾಗಿ, ಸಮಲಂಕೃತರಾಗಿ ಎಲ್ಲರೂ ರಾಜ ಯುಧಿಷ್ಠಿರನನ್ನು ಸುತ್ತುವರೆದು ಹಿಂಬಾಲಿಸಿದರು. ಹಿಂದೆ ವಿರಾಟ, ಯಜ್ಞಸೇನ, ಸೋಮಕಿ, ಸುಧರ್ಮ, ಕುಂತಿಭೋಜ, ಮತ್ತು ಧೃಷ್ಟದ್ಯುಮ್ನನ ಮಕ್ಕಳು - ನಲವತ್ತು ಸಾವಿರ ರಥಗಳು, ಅದರ ಐದುಪಟ್ಟು ಸಂಖ್ಯೆಯ ಕುದುರೆಗಳು, ಅದರ ಹತ್ತು ಪಟ್ಟು ಕಾಲಾಳುಗಳು, ಮತ್ತು ಅರವತ್ತು ಸಾವಿರ ಸವಾರಿ ಸೈನಿಕರಿದ್ದರು. ಅನಾಧೃಷ್ಟಿ, ಚೇಕಿತಾನ, ಚೇದಿರಾಜ ಮತ್ತು ಸಾತ್ಯಕಿ ಎಲ್ಲರೂ ವಾಸುದೇವ-ಧನಂಜಯರನ್ನು ಸುತ್ತುವರೆದು ನಡೆದರು. ಸೇನೆಗಳನ್ನು ರಚಿಸಿ ಕುರುಕ್ಷೇತ್ರವನ್ನು ಸೇರಿ ಪಾಂಡವರು ಘೀಳಿಡುವ ಹೋರಿಗಳಂತೆ ಕಂಡುಬಂದರು. ಆ ಅರಿಂದಮರು ಕುರುಕ್ಷೇತ್ರದಲ್ಲಿ ಇಳಿದು ಶಂಖಗಳನ್ನು ಊದಿದರು. ಹಾಗೆಯೇ ವಾಸುದೇವ-ಧನಂಜಯರೂ ಶಂಖಗಳನ್ನು ಊದಿದರು. ಸಿಡಿಲು ಬಡಿದಂತೆ ಕೇಳಿಬಂದ ಪಾಂಚಜನ್ಯದ ನಿರ್ಘೋಷವನ್ನು ಕೇಳಿ ಸರ್ವ ಸೇನೆಯಲ್ಲಿ ಎಲ್ಲಕಡೆಯೂ ಹರ್ಷೋದ್ಗಾರವಾಯಿತು. ತರಸ್ವಿಗಳ ಸಿಂಹನಾದಗಳೊಂದಿಗೆ ಶಂಖದುಂಧುಭಿಗಳು ಸೇರಿ ನಾದವು ಭೂಮಿ, ಅಂತರಿಕ್ಷ ಮತ್ತು ಸಾಗರಗಳನ್ನು ಸೇರಿತು.

ಆಗ ರಾಜಾ ಯುಧಿಷ್ಠಿರನು ಸಮಪ್ರದೇಶದಲ್ಲಿ, ಸುಂದರವಾದ, ಸಾಕಷ್ಟು ನೀರು ಮೇವುಗಳಿರುವಲ್ಲಿ, ಶ್ಮಶಾನ, ದೇವಾಲಯ, ಮಹರ್ಷಿಗಳ ಆಶ್ರಮ, ತೀರ್ಥಸ್ಥಾನಗಳನ್ನು ಬಿಟ್ಟು, ತನ್ನ ಸೇನೆಯನ್ನು

ಬೀಡುಬಿಡಿಸಿದನು. ಮಹೀಪತಿ ಕುಂತೀಪುತ್ರ ಯುಧಿಷ್ಠಿರನು ಮಂಗಳ, ಪುಣ್ಯ, ಉಪ್ಪಿಲ್ಲದ ಪ್ರದೇಶದಲ್ಲಿ ತನ್ನ ಬಿಡಾರವನ್ನು ಮಾಡಿಸಿಕೊಂಡನು. ವಾಹನಗಳು ವಿಶ್ರಾಂತಿಪಡೆದು ಸುಖಿಗಳಾದ ನಂತರ, ಪುನಃ ಅಲ್ಲಿಂದ ಹೊರಟು ನೂರಾರು ಸಹಸ್ರಾರು ಪೃಥಿವೀಪಾಲರಿಂದ ಆವೃತನಾಗಿ ಪುನಃ ಪ್ರಯಾಣಿಸಿದನು. ಪಾರ್ಥನೊಂದಿಗೆ ಕೇಶವನು ಸುತ್ತು ಹಾಕಿ ಧಾರ್ತರಾಷ್ಟ್ರನ ನೂರಾರು ಗುಪ್ತಚಾರಿ ಸೈನಿಕ ತುಕಡಿಗಳನ್ನು ಓಡಿಸಿದನು. ಪಾರ್ಷತ ಧೃಷ್ಟದ್ಯುಮ್ನನು ರಥೋದಾರ ಪ್ರತಾಪವಾನ್ ಯುಯುಧಾನ ಸಾತ್ಯಕಿಯೊಡನೆ ಶಿಬಿರವನ್ನು ಕುರುಕ್ಷೇತ್ರದಲ್ಲಿ ಸೂಪತೀರ್ಥ, ಶುದ್ಧ ನೀರಿನ, ಕಲ್ಲು-ಕೆಸರುಗಳಿಂದ ವರ್ಜಿತವಾದ ಪುಣ್ಯ ಹಿರಣ್ವತೀ ನದಿಯವರೆಗೆ ಅಳೆದರು. ಅಲ್ಲಿ ಕೇಶವನು ಒಂದು ಕೋಡಿಯನ್ನು ತೋಡಿಸಿ, ಗುಪ್ತ ಉದ್ದೇಶಗಳನ್ನು ತಿಳಿಸಿ ಹೇಳಿ ಬಲವೊಂದನ್ನು ಇರಿಸಿದನು. ಮಹಾತ್ಮ ಪಾಂಡವರ ಶಿಬಿರಗಳಿದ್ದ ಹಾಗೆ ಇತರ ನರೇಂದ್ರರಿಗೂ ಕೂಡ ಕೇಶವನು ಹೇರಳವಾಗಿ ನೀರು-ಕಟ್ಟಿಗೆಗಳನ್ನೂ, ಕಡುರಕ್ಷಣೆಗಳನ್ನೂ, ಭಕ್ಷ್ಯ-ಭೋಜ್ಯಾದಿಗಳನ್ನು ಒದಗಿಸಿ ನೂರಾರು ಸಹಸ್ರಾರು ಶಿಬಿರಗಳನ್ನು ಮಾಡಿಸಿದನು. ಅಲ್ಲಲ್ಲಿ ಪ್ರತ್ಯೇಕ ಪ್ರತ್ಯೇಕವಾಗಿ ನಿರ್ಮಿಸಲ್ಪಟ್ಟಿದ್ದ ಆ ವೈಭವೋಪೇತ ಶಿಬಿರಗಳು ಮಹೀತಲಕ್ಕೆ ಬಂದಿಳಿದ ವಿಮಾನಗಳಂತೆ ಶೋಭಿಸುತ್ತಿದ್ದವು. ಅಲ್ಲಿ ನೂರಾರು, ವೇತನಗಳನ್ನು ಪಡೆದ, ಪ್ರಾಜ್ಞ ಶಿಲ್ಪಿಗಳಿದ್ದರು. ಸವಿಶಾರದ, ಸರ್ವೋಪಕರಣಯುಕ್ತ ವೈದ್ಯರಿದ್ದರು. ಶಿಬಿರ ಶಿಬಿರಗಳಿಗೂ ರಾಜ

ಯುಧಿಷ್ಠಿರನು ಬೇಕಾದಷ್ಟು ಧನುಸ್ಸು-ಬಾಣಗಳನ್ನು, ಕವಚ-ಅಸ್ತ್ರಗಳನ್ನು, ಜೇನು-ತುಪ್ಪಗಳನ್ನು, ಪರ್ವತಗಳಂತೆ ತೋರುವ ರಾಶಿಗಟ್ಟಲೆ ಆಹಾರ ಪದಾರ್ಥಗಳನ್ನು, ಸಾಕಷ್ಟು ನೀರು, ಉತ್ತಮ ಹುಲ್ಲು, ಇದ್ದಿಲು-ಕಟ್ಟಿಗೆಗಳನ್ನು, ಮಹಾಯಂತ್ರಗಳನ್ನು, ಕಬ್ಬಿಣದ ಬಾಣ-ತೋಮರ-ಈಟಿ-ಕೊಡಲಿಗಳನ್ನು, ಧನುಸ್ಸು-ಕವಚಾದಿಗಳನ್ನು, ಮನುಷ್ಯರ ಎದೆಗಳನ್ನು ಸಿಂಗರಿಸುವ ಕವಚಗಳನ್ನು ಕೊಡಿಸಿದನು. ಮೊಳೆಗಳಿಂದ ಕೂಡಿದ ಲೋಹದ ಹೊದಿಕೆಗಳನ್ನು ಹೊದಿಸಿದ, ಪರ್ವತಗಳಂತೆ ತೋರುತ್ತಿದ್ದ, ನೂರಾರು ಸಹಸ್ರಾರು ಯೋಧರೊಂದಿಗೆ ಹೋರಾಡಬಲ್ಲ ಆನೆಗಳು ಅಲ್ಲಿ ಕಂಡುಬಂದವು. ಪಾಂಡವರು ಅಲ್ಲಿ ಬೀಡುಬಿಟ್ಟಿದ್ದಾರೆ ಎಂದು ತಿಳಿದು ಅವರ ಮಿತ್ರರು ಸೇನೆಗಳೊಂದಿಗೆ, ವಾಹನಗಳೊಂದಿಗೆ ಆ ಪ್ರದೇಶದಲ್ಲಿ ಬಂದು ಸೇರಿದರು. ಬ್ರಹ್ಮಚರ್ಯವನ್ನು ಆಚರಿಸಿದ, ಸೋಮವನ್ನು ಕುಡಿದ, ಭೂರಿದಕ್ಷಿಣೆಗಳನ್ನಿತ್ತ, ಮಹೀಕ್ಷಿತರು ಪಾಂಡುಪುತ್ರರ ಜಯಕ್ಕಾಗಿ ಬಂದು ಸೇರಿಕೊಂಡರು.

## ಪ್ರಯಾಣಕ್ಕೆ ಕೌರವ ಸೇನೆಯ ಸಿದ್ಧತೆ

ದಾಶಾರ್ಹನು ಹೊರಟು ಹೋದ ನಂತರ ರಾಜಾ ದುರ್ಯೋಧನನು ಕರ್ಣ, ದುಃಶಾಸನ ಮತ್ತು ಶಕುನಿಯರಿಗೆ ಹೇಳಿದನು:

“ಅಧೋಕ್ಷಜನು ಕಾರ್ಯವು ನಡೆಯಲಿಲ್ಲವೆಂದು
ಪಾರ್ಥರಲ್ಲಿಗೆ ಹೋಗಿ ಸಿಟ್ಟಿನಿಂದ ಖಂಡಿತವಾಗಿಯೂ

ಮಾತನಾಡಿರುತ್ತಾನೆ. ಇದರಲ್ಲಿ ಸಂಶಯವಿಲ್ಲ. ಏಕೆಂದರೆ ವಾಸುದೇವನು ಪಾಂಡವರು ಮತ್ತು ನನ್ನ ನಡುವೆ ಯುದ್ಧವಾಗಲೆಂದೇ ಇಷ್ಟಪಡುತ್ತಾನೆ. ಭೀಮಾರ್ಜುನರೂ ಕೂಡ ದಾಶಾರ್ಹನ ಅಭಿಮತವನ್ನು ಒಪ್ಪಿಕೊಳ್ಳುತ್ತಾರೆ. ಅಜಾತಶತ್ರುವು ಇಂದು ಭೀಮಾರ್ಜುನರ ವಶದಲ್ಲಿ ಬಂದು ಅವರನ್ನು ಅನುಸರಿಸುತ್ತಾನೆ. ನಾನು ಹಿಂದೆ ಆ ಎಲ್ಲ ಸಹೋದರರೊಂದಿಗೆ ಕೆಟ್ಟದ್ದಾಗಿ ವ್ಯವಹರಿಸಿದ್ದೇನೆ. ವಿರಾಟ-ದ್ರುಪದರಿಗೂ ಕೂಡ ನನ್ನ ಮೇಲೆ ವೈರವಿತ್ತು. ಆ ಇಬ್ಬರು ಸೇನಾಪ್ರಣೇತಾರರೂ ವಾಸುದೇವನ ವಶಾನುಗರು. ತುಮುಲವೂ ಲೋಮಹರ್ಷಣವೂ ಆದ ಯುದ್ಧವಾಗಲಿದೆ. ಆದುದರಿಂದ ತೆರವಿಲ್ಲದ ಎಲ್ಲ ಸಿದ್ಧತೆಗಳೂ ನಡೆಯಲಿ. ಶತ್ರುಗಳು ಸುಲಭವಾಗಿ ಆಕ್ರಮಣಿಸಲು ಅವಕಾಶವಿಲ್ಲದಂತೆ ವಸುಧಾಧಿಪರು ಕುರುಕ್ಷೇತ್ರದಲ್ಲಿ ಶಿಬಿರಗಳನ್ನು ನಿರ್ಮಿಸಿಕೊಳ್ಳಲಿ. ನೂರಾರು ಸಹಸ್ರಾರು ನೀರು-ಕಟ್ಟಿಗೆಗಳ ಸೌಕರ್ಯವಾಗಲಿ. ರತ್ನಗಳು, ಸಂಪತ್ತು, ವಿವಿಧ ಆಯುಧಗಳು, ಪತಾಕ-ಧ್ವಜಗಳನ್ನು ತಲುಪಿಸುವ ಅವಿಚ್ಛಿನ್ನ ಮಾರ್ಗವು ತಯಾರಿಸಲ್ಪಡಲಿ. ನಗರದಿಂದ ಹೊರಗೆ ಹೋಗುವ ದಾರಿಗಳನ್ನು ಸಮಮಾಡಲಿ. ನಾಳೆಯೇ ಪ್ರಯಾಣವೆಂದು ಘೋಷಿಸಿರಿ."

"ಹಾಗೆಯೇ ಮಾಡುತ್ತೇವೆ!" ಎಂದು ಭರವಸೆಯನ್ನು ನೀಡಿ ಅವರು

ಕಾರ್ಯನಿರತರಾದರು. ಮರುದಿನ ಹೃಷ್ಟರೂಪರಾಗಿ ಆ ಮಹಾತ್ಮರು ಮಹೀಕ್ಷಿತರ ವಿನಾಶಕ್ಕೆ ಹೊರಟರು. ಆ ರಾಜಶಾಸನವನ್ನು ಕೇಳಿ ಪಾರ್ಥಿವರೆಲ್ಲರೂ ಉತ್ಸಾಹದಿಂದ ಬೆಲೆಬಾಳುವ ಆಸನಗಳಿಂದ ಮೇಲೆದ್ದು, ನಿಧಾನವಾಗಿ ಪರಿಘಗಳಂತಿದ್ದ ಕಾಂಚನ ಅಂಗದಗಳನ್ನು ಧರಿಸಿದ್ದ, ಚಂದನ ಅಗರುಗಳಿಂದ ಭೂಷಿತವಾದ ತಮ್ಮ ಬಾಹುಗಳನ್ನು ಮುಟ್ಟಿಕೊಂಡರು. ಪುಂಡರೀಕಗಳಂತಿದ್ದ ತಮ್ಮ ಕೈಗಳಿಂದ ಮುಂಡಾಸುಗಳನ್ನು ಕಟ್ಟಿಕೊಂಡು, ಅಂತರೀಯ-ಉತ್ತರೀಯಗಳನ್ನೂ ಎಲ್ಲ ಭೂಷಣಗಳನ್ನೂ ತೊಟ್ಟುಕೊಂಡರು. ಅವರ ಸಾರಥಿ ಶ್ರೇಷ್ಠರು ರಥಗಳನ್ನೂ, ಹಯಕೋವಿದರು ಕುದುರೆಗಳನ್ನೂ, ನಿಷ್ಠೆಯುಳ್ಳ ಮಾವುತರು ಆನೆಗಳನ್ನೂ ಸಜ್ಜುಗೊಳಿಸಿದರು. ಅನಂತರ ಬಹಳಷ್ಟು ಬಣ್ಣ ಬಣ್ಣದ ಕಾಂಚನಕವಚಗಳನ್ನು ಮತ್ತು ಎಲ್ಲ ವಿವಿಧ ಶಸ್ತ್ರಗಳನ್ನೂ ಸಜ್ಜುಗೊಳಿಸಿದರು. ಪದಾತಿ ಪುರುಷರು ವಿವಿಧ ಶಸ್ತ್ರಗಳನ್ನೂ ಬಂಗಾರದ ಚಿತ್ರಗಳನ್ನುಳ್ಳ ಕವಚಗಳನ್ನೂ ಧರಿಸಿದರು. ಧಾರ್ತರಾಷ್ಟ್ರನ ಆ ನಗರವು ಉತ್ಸವದ ತಯಾರಿಯಲ್ಲಿರುವ ಸಂಪ್ರಹೃಷ್ಟ ಜನಸಂದಣಿಯಿಂದ ತುಂಬಿಹೋಗಿತ್ತು. ಜನಸಂದಣಿಯೆಂಬ ನೀರಿನಿಂದ, ರಥ-ಆನೆಗಳೆಂಬ ಮೀನುಗಳಿಂದ, ಶಂಖದುಂದುಭಿಗಳ ನಿರ್ಘೋಷದಿಂದ, ಕೋಶಸಂಚಯ ರತ್ನಗಳಿಂದ, ಚಿತ್ರಾಭರಣಗಳೆಂಬ ಅಲೆಗಳಿಂದ, ಶುಭ್ರ ಶಸ್ತ್ರಗಳೆಂಬ ನೊರೆಯಿಂದ, ಕರಾವಳಿಯ ಪರ್ವತಗಳಂತಿರುವ ಕಟ್ಟಡಗಳ ಸರಮಾಲೆಯಿಂದ ಆವೃತವಾಗಿ, ರಸ್ತೆ-ಮಾರುಕಟ್ಟೆಗಳ ಮಹಾಹ್ರದಗಳಿಂದ,

ಉದಯಿಸುತ್ತಿರುವ ಚಂದ್ರನಂತಿರುವ ಯೋಧರಿಂದ ಅದು ಚಂದ್ರೋದಯದ ಸಮಯದಲ್ಲಿನ ಮಹಾಸಾಗರದಂತೆ ಕಂಡುಬಂದಿತು.

## ದುರ್ಯೋಧನನ ಸೈನ್ಯವಿಭಾಗ

ರಾತ್ರಿಯು ಕಳೆಯಲು ರಾಜಾ ದುರ್ಯೋಧನನು ತನ್ನ ಹನ್ನೊಂದು ಸೇನೆಗಳನ್ನು ವಿಂಗಡಿಸಿದನು. ಆ ಮಹೀಪತಿಯು ತನ್ನ ಪುರುಷರನ್ನು, ಆನೆಗಳನ್ನು, ಕುದುರೆಗಳನ್ನು ಅವರವರ ಗುಣಗಳ ಆಧಾರದ ಮೇಲೆ ಸಾರವುಳ್ಳವರು, ಮಧ್ಯಮರು ಮತ್ತು ಕೀಳಾದವರೆಂದು ಬೇರೆ ಬೇರೆ ಸೇನೆಗಳಲ್ಲಿ ವಿಭಜಿಸಿದನು. ಮರದ ಕಾಂಡಗಳಿಂದ, ತೂಣೀರಗಳಿಂದ, ಕಲ್ಲುಬಂಡೆಗಳಿಂದ, ತೋಮರಗಳಿಂದ, ಈಟಿಗಳಿಂದ, ಕಲ್ಲುಗಳಿಂದ, ಧ್ವಜಗಳಿಂದ, ಪತಾಕೆಗಳಿಂದ, ಶರಾಸನ ತೋಮರಗಳಿಂದ, ವಿಚಿತ್ರರೀತಿಯ ಹಗ್ಗಗಳಿಂದ, ನೇಣುಗಳಿಂದ, ಕಂಬಳಿಗಳಿಂದ, ಕೂದಲನ್ನು ಎಳೆಯುವ ಆಯುಧಗಳಿಂದ, ಎಣ್ಣೆ, ಬೆಲ್ಲ, ಮರಳುಗಳಿಂದ, ವಿಷಸರ್ಪಗಳು ತುಂಬಿದ ಮಡಿಕೆಗಳಿಂದ, ಮರದ ಮೇಣಗಳಿಂದ, ಧೂಳುಗಳಿಂದ, ಗಂಟೆಗಳುಳ್ಳ ಫಲಕಗಳಿಂದ, ಕೊಡಲಿ ಖಡ್ಗಗಳಿಂದ, ವ್ಯಾಘ್ರ ಚರ್ಮ, ಚಿರತೆಯ ಚರ್ಮ, ವಸ್ತಿಗಳಿಂದ, ಶೃಂಗಗಳಿಂದ, ಪ್ರಾಸವೇ ಮೊದಲಾದ ವಿವಿಧ ಆಯುಧಗಳಿಂದ, ಕುಠಾರ, ಕುದ್ದಾಲ, ಎಳ್ಳೆಣ್ಣೆ-ಹರಳೆಣ್ಣೆಗಳಿಂದ ಸುಸಜ್ಜಿತರಾಗಿ, ಬಣ್ಣಬಣ್ಣದ ಉಡುಪುಗಳನ್ನು ಧರಿಸಿದ ಆ ಸೇನೆಯು ಪಾವಕನಂತೆ ಪ್ರಜ್ವಲಿಸುತ್ತಿತ್ತು. ಕವಚಿಗಳು, ಶೂರರು, ಶಸ್ತ್ರಗಳಲ್ಲಿ ಕೃತನಿಶ್ರಮರು, ಕುಲೀನರು,

ಹಯವಿಜ್ಞಾನವನ್ನು ತಿಳಿದವರು ಸಾರಥಿಗಳಾಗಿ ನಿವೇಶಿತರದರು. ಅರಿಷ್ಟಗಳನ್ನು ಕಟ್ಟಿದ, ಕಕ್ಷ್ಯಗಳನ್ನು ಕಟ್ಟಿದ, ಧ್ವಜಪತಾಕೆಗಳನ್ನು ಕಟ್ಟಿದ, ನಾಲ್ಕು ಕುದುರೆಗಳನ್ನು ಕಟ್ಟಿದ್ದ ರಥಗಳೆಲ್ಲವುಗಳೂ ಎಲ್ಲ ಶಸ್ತ್ರಗಳಿಂದ ತುಂಬಿದ್ದವು. ಎಲ್ಲವೂ ಸಂಹೃಷ್ಟ ವಾಹನಗಳಾಗಿದ್ದವು. ಎಲ್ಲವುಗಳಲ್ಲಿ ನೂರಾರು ಶರಾಸನಗಳಿದ್ದವು.

ಎರಡು ಕುದುರೆಗಳಿಗೆ ಒಬ್ಬ ಉಸ್ತುವಾರಿಯಿದ್ದನು. ಪಕ್ಕದಲ್ಲಿ ಇನ್ನೊಬ್ಬ ಸಾರಥಿಯಿದ್ದನು. ಇಬ್ಬರೂ ರಥಿಗಳಲ್ಲಿ ಶ್ರೇಷ್ಠರಾಗಿದ್ದರು. ಇಬ್ಬರು ರಥಿಕರೂ ಹಯವಿತ್ತರಾಗಿದ್ದರು. ಅಲ್ಲಿ ಎಲ್ಲೆಲ್ಲೂ ಗುಪ್ತ ನಗರಗಳಂತೆ ಶತ್ರುಗಳಿಗೆ ಜಯಿಸಲಸಾಧ್ಯವಾದ ಹಲವು ಸಾವಿರ ಹೇಮಮಾಲಿ ರಥಗಳಿದ್ದವು. ರಥಗಳಂತೆ ಆನೆಗಳಿಗೆ ಕೂಡ ಕಕ್ಷ್ಯಗಳನ್ನು ಕಟ್ಟಿದ್ದರು. ಅಲಂಕಾರಗೊಂಡು ರತ್ನವಂತ ಗಿರಿಗಳಂತೆ ಕಾಣುತ್ತಿದ್ದವು. ಪ್ರತಿಯೊಂದಕ್ಕೂ ಏಳು ಜನರಿದ್ದರು. ಅವರಲ್ಲಿ ಇಬ್ಬರು ಅಂಕುಶಧರರಾಗಿದ್ದರು, ಇಬ್ಬರು ಉತ್ತಮ ಧನುರ್ಧರರಾಗಿದ್ದರು, ಇಬ್ಬರು ಶ್ರೇಷ್ಠ ಖಡ್ಗಧರರಾಗಿದ್ದರು ಮತ್ತು ಒಬ್ಬನು ಶಕ್ತಿ ಮತ್ತು ಪತಾಕೆಗಳನ್ನು ಹಿಡಿದವನಾಗಿದ್ದನು. ಕೌರವನ ಬಲದಲ್ಲಿ ಸರ್ವಾಯುಧಕೋಷಕಗಳಿಂದ ತುಂಬಿದ ಸಹಸ್ರಾರು ಮತ್ತ ಗಜಗಳು ಇದ್ದವು. ಅಲ್ಲಿ ಸವಾರಿಯಲ್ಲಿರುವ ಹತ್ತು ಸಾವಿರ ವಿಚಿತ್ರಕವಚಗಳನ್ನು ಧರಿಸಿದ, ಪತಾಕೆಗಳನ್ನುಳ್ಳ, ಅಲಂಕೃತಗೊಂಡಿರುವ ಕುದುರೆಗಳಿದ್ದವು. ಪ್ರತಿಯೊಂದನ್ನು ಚೆನ್ನಾಗಿ ಹಿಡಿದಿದ್ದರು, ಸಂತೋಷದಲ್ಲಿಟ್ಟಿದ್ದರು, ಬಂಗಾರದ ಪಟ್ಟಿಗಳನ್ನು ಹೊದೆಸಿದ್ದರು, ಅನೇಕ ನೂರು ಸಾವಿರ

ಕುದುರೆಗಳಿದ್ದರೂ ಎಲ್ಲವನ್ನೂ ನಿಯಂತ್ರಣದಲ್ಲಿರಿಸಲಾಗಿತ್ತು. ಅಲ್ಲಿ ಹೇಮಮಾಲಿಗಳಾದ, ನಾನಾರೂಪವಿಕಾರಗಳ, ನಾನಾ ಕವಚ ಶಸ್ತ್ರಗಳನ್ನು ಧರಿಸಿದ ಪದಾತಿ ನರರಿದ್ದರು. ಒಂದು ರಥಕ್ಕೆ ಹತ್ತು ಆನೆಗಳಿದ್ದವು, ಒಂದು ಆನೆಗೆ ಹತ್ತು ಕದುರೆಸವಾರಿಗಳಿದ್ದವು. ಒಂದು ಕುದುರೆಗೆ ನಾಲ್ಕೂ ಕಾಲುಗಳಲ್ಲಿ ಹತ್ತು ಪಾದರಕ್ಷರಿದ್ದರು. ಒಡಕನ್ನು ಮುಚ್ಚಲು ಒಂದು ರಥಕ್ಕೆ ಐವತ್ತು ಆನೆಗಳನ್ನೂ, ನೂರು ಕುದುರೆಗಳನ್ನೂ, ಪ್ರತಿ ಕುದುರೆಗೆ ಏಳು ಪುರುಷರನ್ನೂ ಇಡಲಾಗಿತ್ತು.

ಒಂದು ಸೇನೆಯಲ್ಲಿ ಐನೂರು ಆನೆಗಳೂ ಮತ್ತು ಅಷ್ಟೇ ಸಂಖ್ಯೆಯ ರಥಗಳೂ ಇರುತ್ತವೆ. ಅಂತಹ ಹತ್ತು ಸೇನೆಗಳು ಒಂದು ಪೃತನವೆನಿಸಿಕೊಳ್ಳುತ್ತದೆ. ಹತ್ತು ಪೃತನಗಳು ಒಂದು ವಾಹಿನಿ. ಆದರೆ ವಾಹಿನೀ, ಪೃತನಾ, ಸೇನಾ, ಧ್ವಜಿನಿ, ಸಾದಿನೀ, ಅಕ್ಷೌಹಿಣೀ, ವರೂಥಿನೀ ಎಂದು ಪರ್ಯಾಯಶಬ್ಧಗಳನ್ನೂ ಬಳಸುತ್ತಾರೆ. ಹೀಗೆ ಧೀಮತ ಕೌರವನ ಸೇನೆಯು ರಚಿಸಲ್ಪಟ್ಟಿತ್ತು. ಹನ್ನೊಂದು ಮತ್ತು ಏಳು ಸೇರಿ ಒಟ್ಟು ಹದಿನೆಂಟು ಅಕ್ಷೌಹಿಣಿಗಳಿದ್ದವು: ಪಾಂಡವರ ಬಲದಲ್ಲಿ ಏಳೇ ಅಕ್ಷೌಹಿಣಿಗಳಿದ್ದವು. ಕೌರವರ ಬಲವು ಹನ್ನೊಂದು ಅಕ್ಷೌಹಿಣಿಯದಾಗಿತ್ತು.

ಐದು ಇಪ್ಪತ್ತೈದು ಸೈನಿಕರನ್ನು ಒಂದು ಪತ್ತಿ ಎನ್ನುತ್ತಾರೆ. ಅಂಥಹ ಮೂರು ಸೇನಾಮುಖ ಅಥವಾ ಗುಲ್ಮವೆನಿಸಿಕೊಳ್ಳುತ್ತವೆ. ಹತ್ತು ಗುಲ್ಮಗಳು ಒಂದು ಗಣವಾಗುತ್ತದೆ. ದುರ್ಯೋಧನನ ಸೇನೆಯಲ್ಲಿ

ಅಂಥಹ ಯುದ್ಧೋತ್ಸುಕರಾದ, ಪ್ರಹಾರಿಗಳಾದ ಹತ್ತು ಸಾವಿರ ಗಣಗಳಿದ್ದವು. ಅಲ್ಲಿ ಮಹಾಬಾಹು ರಾಜಾ ದುರ್ಯೋಧನನು ಶೂರರೂ ಬುದ್ಧಿವಂತರೂ ಆದವರನ್ನು ನೋಡಿ ಸೇನಾಪತಿಗಳನ್ನಾಗಿ ನಿಯೋಜಿಸಿದನು. ಪ್ರತ್ಯೇಕವಾಗಿ ಅಕ್ಷೌಹಿಣಿಗಳಿಗೆ ಪ್ರಣೇತ ನರಸತ್ತಮ ಪಾರ್ಥಿವರನ್ನು ಕರೆಯಿಸಿ ವಿಧಿಪೂರ್ವಕವಾಗಿ ಅಭಿಷೇಕಿಸಿದನು: ಕೃಪ, ದ್ರೋಣ, ಶಲ್ಯ, ಮಹಾರಥಿ ಸೈಂಧವ, ಕಾಂಬೋಜ ಸುದಕ್ಷಿಣ, ಕೃತವರ್ಮ, ದ್ರೋಣ ಪುತ್ರ, ಕರ್ಣ, ಭೂರಿಶ್ರವ, ಸೌಬಲ ಶಕುನಿ ಮತ್ತು ಮಹಾರಥಿ ಬಾಹ್ಲೀಕ. ದಿವಸ ದಿವಸವೂ, ಪ್ರತಿವೇಳೆಯೂ ಅವರಿಗೆ ಪ್ರತ್ಯಕ್ಷವಾಗಿ ವಿವಿಧ ಸೂಚನೆಗಳನ್ನು ಪುನಃ ಪುನಃ ಕೊಡುತ್ತಿದ್ದನು. ಹೀಗೆ ವಿನಯಿತರಾದ ಅವರೆಲ್ಲರೂ ಅವನ ಆಜ್ಞೆಯನ್ನು ಅನುಸರಿಸುವ ಸೈನಿಕರಾಗಿ ರಾಜನಿಗೆ ಪ್ರಿಯವಾದುದನ್ನು ಮಾಡಲು ಉತ್ಸುಕರಾಗಿದ್ದರು.

## ಭೀಷ್ಮ ಸೇನಾಪತ್ಯ

ಆಗ ಧೃತರಾಷ್ಟ್ರಜನು ಸರ್ವ ಮಹೀಪಾಲರೊಂದಿಗೆ ಅಂಜಲೀಬದ್ಧನಾಗಿ ಶಾಂತನವ ಭೀಷ್ಮನಿಗೆ ಹೇಳಿದನು:

> “ಸೇನಾಪ್ರಣೇತಾರನಿಲ್ಲದೇ ಯುದ್ಧವನ್ನು ಎದುರಿಸುವ ಅತಿದೊಡ್ಡ ಸೇನೆಯೂ ಕೂಡಾ ಇರುವೆಗಳ ಗುಂಪಿನಂತೆ ನಾಶಗೊಳ್ಳುತ್ತದೆ. ಬುದ್ಧಿವಂತರಾದ ಇಬ್ಬರ ಬುದ್ಧಿಗಳು ಎಂದೂ ಒಪ್ಪಂದದಲ್ಲಿರುವುದಿಲ್ಲ. ತಮ್ಮ ತಮ್ಮ

ಶೌರ್ಯಕ್ಕಾಗಿ ಪರಸ್ಪರರೊಂದಿಗೆ ಸ್ಪರ್ಧಿಸುತ್ತಿರುತ್ತಾರೆ. ಕುಶಗಳ ಗುಚ್ಛಗಳನ್ನೇ ಧ್ವಜಗಳನ್ನಾಗಿಸಿಕೊಂಡು ಬ್ರಾಹ್ಮಣರು ಅಮಿತೌಜಸ ಹೈಹಯರನ್ನು ಎದುರಿಸಿದ್ದರೆಂದು ಕೇಳಿದ್ದೇವೆ. ಆಗ ಅವರನ್ನು ವೈಶ್ಯರು ಮತ್ತು ಶೂದ್ರರೂ ಕೂಡ ಅನುಸರಿಸಿದ್ದರು. ಮೂರು ವರ್ಣದವರೂ ಒಂದಾಗಿರಲು ಕ್ಷತ್ರಿಯರ್ಷಭರು ಒಬ್ಬರೇ ಒಂದು ಕಡೆ ಇದ್ದರು. ಯುದ್ಧಮಾಡುವಾಗ ಆ ಮೂರು ವರ್ಣದವರಲ್ಲಿ ಪುನಃ ಪುನಃ ಒಡಕುಂಟಾಗುತ್ತಿತ್ತು. ಆದರೆ ಕ್ಷತ್ರಿಯರು ಒಬ್ಬರೇ ಆಗಿದ್ದರೂ ಆ ಮಹಾ ಬಲವನ್ನು ಜಯಿಸಿದರು. ಆಗ ದ್ವಿಜಸತ್ತಮರು ಕ್ಷತ್ರಿಯರನ್ನು ಕೇಳಿದರು. ಅವರಲ್ಲಿಯೇ ಧರ್ಮಜ್ಞರಾಗಿದ್ದವರು ಸತ್ಯವನ್ನು ಹೇಳಿದರು: “ರಣದಲ್ಲಿ ನಾವು ಒಬ್ಬನೇ ಮಹಾಬುದ್ಧಿಮತನನ್ನು ಕೇಳುತ್ತೇವೆ. ಆದರೆ ನೀವು ಪ್ರತಿಯೊಬ್ಬರೂ ತಮ್ಮದೇ ಬುದ್ಧಿಯಂತೆ ನಡೆದುಕೊಳ್ಳುತ್ತೀರಿ.” ಆಗ ಬ್ರಾಹ್ಮಣರು ಶೂರನಾದ ನ್ಯಾಯಗಳಲ್ಲಿ ಕುಶಲನಾದ ಒಬ್ಬ ದ್ವಿಜನನ್ನು ಸೇನಾಪತಿಯನ್ನಾಗಿ ಮಾಡಿದರು. ಆಗ ಅವರು ಕ್ಷತ್ರಿಯರನ್ನು ಗೆದ್ದರು. ಹೀಗೆ ಕುಶಲನೂ, ಶೂರನೂ, ಹಿತಸ್ಥಿತನೂ, ಅಕಲ್ಮಷನೂ ಆದವನನ್ನು ಸೇನಾಪತಿಯನ್ನಾಗಿ ಮಾಡಿ ರಣದಲ್ಲಿ ರಿಪುಗಳನ್ನು ಗೆಲ್ಲುತ್ತಾರೆ. ಉಶನಸನ ಸಮನಾಗಿರುವ, ಸದಾ ನನ್ನ ಹಿತೈಷಿಯಾಗಿರುವ,

ಸಂಹಾರಗೊಳಿಸಲಾಗದ, ಧರ್ಮದಲ್ಲಿ ನೆಲೆಸಿರುವ ನೀನು ನಮ್ಮ ಸೇನಾಪತಿಯಾಗು. ಆದಿತ್ಯರಿಗೆ ಸೂರ್ಯನಂತೆ, ಔಷಧಗಳಿಗೆ ಚಂದ್ರನಂತೆ, ಯಕ್ಷರಿಗೆ ಕುಬೇರನಂತೆ, ಮರುತರಿಗೆ ವಾಸವನಂತೆ, ಪರ್ವತಗಳಿಗೆ ಮೇರುವಂತೆ, ಪಕ್ಷಿಗಳಿಗೆ ಗರುಡನಂತೆ, ಭೂತಗಳಿಗೆ ಕುಮಾರನಂತೆ, ವಸುಗಳಿಗೆ ಅಗ್ನಿಯಂತೆ ನೀನು ನಮಗೆ. ಶಕ್ರನಿಂದ ರಕ್ಷಿಸಲ್ಪಟ್ಟ ದಿವೌಕಸರಂತೆ ನಾವೂ ಕೂಡ ನಿನ್ನ ರಕ್ಷಣೆಯಲ್ಲಿ ತ್ರಿದಶರಿಗೆ ಕೂಡ ಖಂಡಿತವಾಗಿ ಅನಾಧೃಷರಾಗುತ್ತೇವೆ. ಪಾವಕಿಯು ದೇವತೆಗಳನ್ನು ಹೇಗೋ ಹಾಗೆ ನೀನು ನಮ್ಮನ್ನು ಮುಂದಿದ್ದುಕೊಂಡು ನಡೆಸು. ವೃಷಭನನ್ನು ಕರುಗಳು ಹೇಗೋ ಹಾಗೆ ನಿನ್ನನ್ನು ನಾವು ಹಿಂಬಾಲಿಸುತ್ತೇವೆ."

ಭೀಷ್ಮನು ಹೇಳಿದನು:

"ಮಹಾಬಾಹೋ! ನೀನು ಹೇಳಿದಂತೆಯೇ ಆಗಲಿ. ಆದರೆ ನನಗೆ ನೀನು ಹೇಗೋ ಹಾಗೆ ಪಾಂಡವರೂ ಕೂಡ. ನಾನು ಅವರ ಶ್ರೇಯಸ್ಸನ್ನೂ ಬಯಸುತ್ತೇನೆ. ಆದರೆ ನಿನಗೋಸ್ಕರ ಹೋರಾಡುತ್ತೇನೆಂದು ಮಾತುಕೊಡುತ್ತೇನೆ. ಒಪ್ಪಂದದಂತೆ ಮಾಡುತ್ತೇನೆ. ಆ ನರವ್ಯಾಘ್ರ ಕುಂತೀಪುತ್ರ ಧನಂಜಯನನ್ನು ಬಿಟ್ಟು ಈ ಭುವಿಯಲ್ಲಿ ನನ್ನ ಸಮಾನನಾದ ಬೇರೆ ಯಾವ ಯೋದ್ಧಾರನನ್ನೂ ನಾನು ಕಂಡಿಲ್ಲ. ಆ ಮಹಾಬಾಹುವಿಗೆ ಎಲ್ಲ

ದಿವ್ಯಾಸ್ತ್ರಗಳೂ ತಿಳಿದಿವೆ. ಆದರೆ ಆ ಪಾಂಡವನು ನನ್ನೊಡನೆ ಮುಕ್ತವಾಗಿ ಯುದ್ಧಮಾಡಲು ಹಿಂಜರಿಯುತ್ತಾನೆ. ನನ್ನ ಶಸ್ತ್ರಬಲದಿಂದಲೇ ಈ ಸುರಾಸುರರಾಕ್ಷಸರೊಂದಿಗೆ ಈ ಜಗತ್ತನ್ನು ಒಂದೇ ಕ್ಷಣದಲ್ಲಿ ನಿರ್ಮನುಷ್ಯರನ್ನಾಗಿಸಬಲ್ಲೆ. ಆದರೆ ಪಾಂಡುವಿನ ಪುತ್ರರನ್ನು ನಾಶಗೊಳಿಸಲು ನನಗೆ ಉತ್ಸಾಹವಿಲ್ಲ. ಆದುದರಿಂದ ಪ್ರತಿದಿನವೂ ನಾನು ಹತ್ತುಸಾವಿರ ಯೋಧರನ್ನು ಸಂಹರಿಸುತ್ತೇನೆ. ಅವರು ನನ್ನನ್ನು ಮೊದಲು ಕೊಲ್ಲದೇ ಇದ್ದರೆ ನಾನು ಅವರ ಸೇನೆಯನ್ನು ಹೀಗೆ ಸಂಹರಿಸುವುದನ್ನು ಮುಂದುವರೆಸಿಕೊಂಡೇ ಇರುತ್ತೇನೆ. ನಾನು ಸ್ವಯಂ ನಿನ್ನ ಸೇನಾಪತಿಯಾಗಬೇಕಾದರೆ ನಾನು ಬಯಸುವ ಇನ್ನೊಂದು ಒಪ್ಪಂದದ ವಿಷಯವಿದೆ. ಅದನ್ನೂ ನೀನು ಕೇಳಬೇಕು. ಕರ್ಣನು ಮೊದಲು ಯುದ್ಧಮಾಡುತ್ತಾನೆ ಅಥವಾ ನಾನು. ಸೂತಪುತ್ರನು ಸದಾ ರಣದಲ್ಲಿ ನನ್ನೊಂದಿಗೆ ಸ್ಪರ್ಧಿಸುತ್ತಿರುತ್ತಾನೆ.”

ಕರ್ಣನು ಹೇಳಿದನು:

“ರಾಜನ್! ಗಾಂಗೇಯನು ಜೀವಿಸಿರುವವರೆಗೆ ನಾನು ಯುದ್ಧಮಾಡುವುದಿಲ್ಲ. ಭೀಷ್ಮನು ಹತನಾದ ನಂತರವೇ ಗಾಂಡೀವಧನ್ವಿಯೊಂದಿಗೆ ಯುದ್ಧಮಾಡುತ್ತೇನೆ.”

ಆಗ ಧೃತರಾಷ್ಟ್ರಾತ್ಮಜನು ಭೂರಿದಕ್ಷಿಣ ಭೀಷ್ಮನನ್ನು

ಸೇನಾಪತಿಯನ್ನಾಗಿ ಮಾಡಿದನು. ಅಭಿಷೇಕಿಸಿಸಲ್ಪಟ್ಟ ಭೀಷ್ಮನು ಮಿಂಚಿದನು. ಆಗ ರಾಜಶಾಸನದಂತೆ ನೂರಾರು ಭೇರೀ-ಶಂಖಗಳು ನಿನಾದಿತಗೊಂಡವು, ವಾದ್ಯಗಾರರು ಸಂತೋಷದಿಂದ ವಾದ್ಯಗಳನ್ನು ನುಡಿಸಿದರು. ಸಿಂಹನಾದಗಳು ಮತ್ತು ವಿವಿಧ ವಾಹನಗಳ ನಿಸ್ವನಗಳೂ ಕೇಳಿಬಂದವು. ಆಕಾಶವು ತಿಳಿಯಾಗಿದ್ದರೂ ರಕ್ತದ ಮಳೆಸುರಿದು ಕೆಸರುಮಾಡಿತು. ಸುಂಟರಗಾಳಿಗಳು, ಭೂಕಂಪ ಮತ್ತು ಆನೆಗಳ ಘೀಂಕಾರಗಳು ಎಲ್ಲ ಯೋಧರ ಮನಸ್ಸುಗಳನ್ನು ಬೀಳಿಸಿದವು. ಆಕಾಶದಿಂದ ಅಶರೀರವಾಣಿಗಳು ಕೇಳಿಸಿದವು. ದಿವದಲ್ಲಿ ಉಲ್ಕೆಗಳು ಬೆಳಗಿದವು. ನರಿಗಳು ಭಯದಿಂದ ಕೂಗಿ ಬರಲಿರುವ ಘೋರ ಘಟನೆಗಳನ್ನು ಸೂಚಿಸಿದವು. ರಾಜನು ಗಾಂಗೇಯನನ್ನು ಸೇನಾಪತಿಯನ್ನಾಗಿ ಅಭಿಷೇಕಿಸಿದಾಗ ಇವು ಮತ್ತು ಇನ್ನೂ ಇತರ ನೂರಾರು ಉಗ್ರರೂಪಿ ಶಕುನಗಳುಂಟಾದವು. ಅವನು ಪರಬಲಾರ್ದನ ಭೀಷ್ಮನನ್ನು ಸೇನಾಪತಿಯನ್ನಾಗಿ ಮಾಡಿ, ಗೋವು, ನಾಣ್ಯ ಮೊದಲಾದ ದಕ್ಷಿಣೆಗಳನ್ನಿತ್ತು ದ್ವಿಜಶ್ರೇಷ್ಠರಿಂದ ಆಶೀರ್ವಚನಗಳನ್ನು ಹೇಳಿಸಿ, ಜಯದ ಕಳೆಯನ್ನು ಹೆಚ್ಚಿಸಿಕೊಳ್ಳುತ್ತಾ, ಸೈನಿಕರಿಂದ ಸುತ್ತುವರೆಯಲ್ಪಟ್ಟು, ನದಿಯ ಮಗನನ್ನು ಮುಂದಿರಿಸಿಕೊಂಡು, ಸಹೋದರರೊಂದಿಗೆ ಮಹಾ ಕುರುಕ್ಷೇತ್ರಕ್ಕೆ ಹೊರಟನು.

ಕರ್ಣನೊಂದಿಗೆ ಕುರುಕ್ಷೇತ್ರಕ್ಕೆ ಸುತ್ತುಹಾಕಿ ನರಾಧಿಪ ಕೌರವನು ಸಮ ಪ್ರದೇಶದಲ್ಲಿ ಶಿಬಿರವನ್ನು ಅಳೆಯಿಸಿದನು. ಮಧುರವಾದ ವಿಪುಲ ಪ್ರದೇಶದಲ್ಲಿ ಶಿಬಿರಗಳನ್ನು ನಿರ್ಮಿಸಲಾಯಿತು. ಅದು

ಹಸ್ತಿನಾಪುರದಷ್ಟೇ ಸುಂದರವಾಗಿ ತೋರುತ್ತಿತ್ತು.

## ಬಲರಾಮನ ತೀರ್ಥಯಾತ್ರಾಗಮನ

ಆಪದ್ಧರ್ಮಾರ್ಥಕುಶಲನಾದ, ಮಾತನಾಡುವವರಲ್ಲಿ ಶ್ರೇಷ್ಠನಾದ ಮಹಾಬುದ್ಧಿ ಯುಧಿಷ್ಠಿರನು ಎಲ್ಲ ಸಹೋದರರರನ್ನೂ, ಸಾತ್ವತ ವಾಸುದೇವನನೂ ಕೂಡಿಸಿ ಸಾಂತ್ವಪೂರ್ವಕ ಈ ಮಾತನ್ನಾಡಿದನು:

> "ಸೇನೆಗಳಲ್ಲಿ ಸುತ್ತಾಡಿ. ಯಾವಾಗಲೂ ಅವು ರಕ್ಷಣೆಯಲ್ಲಿರಲಿ. ಮೊದಲನೆಯ ಯುದ್ಧವು ಪಿತಾಮಹನೊಂದಿಗೆ ನಡೆಯಲಿದೆ. ಆದುದರಿಂದ ಏಳು ಸೇನೆಗಳ ಪ್ರಣೇತಾರರನ್ನು ನನಗೆ ತೋರಿಸಿ."

ವಾಸುದೇವನು ಹೇಳಿದನು:

> "ಬಂದಿರುವ ಕಾಲಕ್ಕೆ ತಕ್ಕುದಾಗಿ ನೀನು ಹೇಳಿದ್ದೀಯೆ. ನೀನು ಹೇಳಿದುದು ಹಾಗೆಯೇ ಅರ್ಥವತ್ತಾಗಿದೆ. ಮಹಾಬಾಹೋ! ಅನಂತರ ನಿನ್ನ ಏಳು ಸೇನೆಗಳ ನಾಯಕರನ್ನು ನೀನು ಅಭಿಷೇಕಿಸಬೇಕೆಂದು ನನಗನ್ನಿಸುತ್ತದೆ."

ಆಗ ದ್ರುಪದ, ವಿರಾಟ, ಸಾತ್ಯಕಿ, ಪಾಂಚಾಲ್ಯ ಧೃಷ್ಟದ್ಯುಮ್ನ, ಪಾರ್ಥಿವ ಧೃಷ್ಟಕೇತು, ಪಾಂಚಾಲ್ಯ ಶಿಖಂಡಿ, ಮಾಗಧ ಸಹದೇವ ಈ ಏಳು ಮಹೇಷ್ವಾಸ ವೀರರನ್ನು ಕರೆಯಿಸಿ ಯುಧಿಷ್ಠಿರನು ತನ್ನ ಸೇನಾಪ್ರಣೇತಾರರನ್ನಾಗಿ ವಿಧಿವತ್ತಾಗಿ ಅಭಿಷೇಕಿಸಿದನು. ದ್ರೋಣನನ್ನು

ಕೊಲ್ಲಲು ಅಗ್ನಿಯಿಂದ ಉತ್ಪನ್ನನಾದ ಆ ಧೃಷ್ಟದ್ಯುಮ್ನನನ್ನು ಸರ್ವಸೇನಾಪತಿಯನ್ನಾಗಿ ನಿಯೋಜಿಸಿದನು. ಗುಡಾಕೇಶ ಧನಂಜಯನನ್ನು ಅವರೆಲ್ಲ ಸಮಸ್ತ ಮಹಾತ್ಮರಿಗೆ ಸೇನಾಪತಿಯನ್ನಾಗಿ ಮಾಡಿದನು. ಸಂಕರ್ಷಣನ ಅನುಜ, ಶ್ರೀಮಾನ್, ಮಹಾಬುದ್ಧಿ ಜನಾರ್ದನನನ್ನು ಅರ್ಜುನನಿಗೆ ನೇತಾರನಾಗಿ, ಕುದುರೆಗಳನ್ನು ನಿಯಂತ್ರಿಸುವವನನ್ನಾಗಿ ನಿಯೋಜಿಸಲಾಯಿತು.

ಆಗ ಮಹಾ ಕ್ಷಯವನ್ನು ತರುವ ಯುದ್ಧವು ಬರುತ್ತಿದೆ ಎನ್ನುವುದನ್ನು ಕಂಡ ಹಲಾಯುಧನು ಅಕ್ರೂರನೇ ಮೊದಲಾದ ಗದ, ಸಾಂಬ, ಉಲುಕಾದಿಗಳೊಡನೆ, ರುಕ್ಮಿಣಿಯ ಮಗ, ಆಹುಕಸುತ ಚಾರುದೇಷ್ಣರನ್ನು ಮುಂದಿಟ್ಟುಕೊಂಡು ರಾಜಾ ಪಾಂಡವನ ಭವನವನ್ನು ಪ್ರವೇಶಿಸಿದನು. ವ್ಯಾಘ್ರರಂತೆ ಬಲೋತ್ಕಟರಾಗಿರುವ ವೃಷ್ಣಿಮುಖ್ಯರಿಂದೊಡಗೂಡಿ ಮರುತ್ತುಗಳ ಮಧ್ಯೆ ವಾಸವನಂತೆ ಆ ಮಹಾಬಾಹು ನೀಲಕೌಶೇಯವಸನ, ಕೈಲಾಸಶಿಖರೋಪಮ, ಸಿಂಹದ ನಡುಗೆಯನ್ನುಳ್ಳ, ಮದಿರದಿಂದ ಕಣ್ಣುಗಳು ಕೆಂಪಾಗಿದ್ದ ಆ ಶ್ರೀಮಾನನು ಅಲ್ಲಿಗೆ ಆಗಮಿಸಿದನು. ಅವನನ್ನು ನೋಡಿ ಧರ್ಮರಾಜನೂ, ಮಹಾದ್ಯುತಿ ಕೇಶವನೂ, ಪಾರ್ಥ, ಭೀಮಕರ್ಮಿ ವೃಕೋದರನೂ ಎದ್ದು ನಿಂತರು. ಗಾಂಡೀವಧನ್ವಿಯೂ ಮತ್ತು ಅಲ್ಲಿದ್ದ ಇನ್ನೂ ಇತರ ರಾಜರು ಎಲ್ಲರೂ ಹಲಾಯುಧನನ್ನು ಪೂಜಿಸಿದರು. ಆಗ ರಾಜಾ ಪಾಂಡವನು ಅವನನ್ನು ಕೈಗಳಿಂದ ಮುಟ್ಟಲು ಅರಿಂದಮ ಹಲಾಯುಧನು ವಾಸುದೇವನ ನಾಯಕತ್ವದಲ್ಲಿದ್ದ ಎಲ್ಲರಿಗೂ

ಅಭಿವಾದಿಸಿ, ವೃದ್ಧರಾದ ವಿರಾಟ-ದ್ರುಪದರನ್ನು ನಮಸ್ಕರಿಸಿ ಯುಧಿಷ್ಠಿರನೊಡನೆ ಕುಳಿತುಕೊಂಡನು. ಆಗ ಅಲ್ಲಿ ಸೇರಿದ್ದ ಪಾರ್ಥಿವರು ಕುಳಿತುಕೊಳ್ಳಲು ವಾಸುದೇವನನ್ನು ನೋಡಿ ರೌಹಿಣೇಯನು ಮಾತನಾಡಿದನು:

> “ಮಹಾರೌದ್ರವಾದ ದಾರುಣ ಪುರುಷಕ್ಷಯವು ನಡೆಯುವುದಿದೆ. ಇದು ಖಂಡಿತವಾಗಿ ದೈವವು ನಿರ್ಧರಿಸಿದುದು. ಇದನ್ನು ನಿಲ್ಲಿಸಲು ಸಾಧ್ಯವಿಲ್ಲವೆಂದು ನನಗನ್ನಿಸುತ್ತದೆ. ಈ ಯುದ್ಧದಲ್ಲಿ ನೀವು ಮತ್ತು ನಿಮ್ಮ ಸುಹೃಜ್ಜನರು ಅರೋಗದ, ಅಕ್ಷಯವಾದ ದೇಹಗಳಿಂದ ಉತ್ತೀರ್ಣರಾಗುವುದನ್ನು ಕಾಣುತ್ತೇನೆಂದು ನಾನು ಬಯಸುತ್ತೇನೆ. ಸೇರಿರುವ ಪಾರ್ಥಿವ ಕ್ಷತ್ರಿಯರೆಲ್ಲರ ಕಾಲವು ಪಕ್ವವಾದುದು ನಿಶ್ಚಯ. ಮಾಂಸ-ರಕ್ತಗಳ ಮಹಾ ಕೆಸರು ಆಗಲಿಕ್ಕಿದೆ. ನಾನು ವಾಸುದೇವನಿಗೆ “ಮಧುಸೂದನ! ಸಂಬಂಧಿಗಳಲ್ಲಿ ಸಮವೃತ್ತಿಯನ್ನಿಟ್ಟುಕೊಂಡು ವರ್ತಿಸು” ಎಂದು ಏಕಾಂತದಲ್ಲಿ ಪುನಃ ಪುನಃ ಹೇಳಿದ್ದೇನೆ. ಪಾಂಡವರು ನಮಗೆ ಹೇಗೋ ಹಾಗೆ ನೃಪ ದುರ್ಯೋಧನನೂ ಕೂಡ. ಅವನಿಗೂ ಬೇಕಾದುದನ್ನು ಮಾಡಬೇಕು. ಅವನು ಪುನಃ ಪುನಃ ಕೇಳುತ್ತಿರುತ್ತಾನೆ. ಆದರೆ ನಿನಗೋಸ್ಕರವಾಗಿ ಮಧುಸೂದನನು ನನ್ನ ಮಾತಿನಂತೆ ನಡೆದುಕೊಳ್ಳುತ್ತಿಲ್ಲ. ಧನಂಜಯನನ್ನು ನೋಡಿ ಸರ್ವಭಾವದಿಂದ ನಿನಗೆ

ನಿಷ್ಟನಾಗಿದ್ದಾನೆ. ನಾನು ಏನೇ ಯೋಚಿಸಿದರೂ ಪಾಂಡವರ ಜಯವೇ ಖಂಡಿತ ಎಂದು ನಿಶ್ಚಯಿಸಿಯಾಗಿದೆ. ಏಕೆಂದರೆ ಇದೂ ಕೂಡ ವಾಸುದೇವನು ಬಯಸುವುದೇ. ಕೃಷ್ಣನಿಲ್ಲದೇ ನನಗೆ ಲೋಕವನ್ನು ನೋಡುವ ಉತ್ಸಾಹವಿಲ್ಲ. ಆದುದರಿಂದ ಕೇಶವನು ಬಯಸಿದುದನ್ನು ಅನುಸರಿಸುತ್ತೇನೆ. ಭೀಮ ಮತ್ತು ನೃಪ ದುರ್ಯೋಧನರಿಬ್ಬರೂ ವೀರರು, ನನ್ನ ಶಿಷ್ಯರು, ಗದಾಯುದ್ಧ ವಿಶಾರದರು. ಅವರಿಬ್ಬರ ಮೇಲಿನ ಸ್ನೇಹವು ಸಮನಾದುದು. ಆದುದರಿಂದ ನಾನು ಸರಸ್ವತಿಯ ತೀರ್ಥಗಳಲ್ಲಿ ನೆಲೆಸುತ್ತೇನೆ. ಕೌರವರ ನಾಶವನ್ನು, ಒಳಗೊಳ್ಳದೇ, ನೋಡಲಾರೆ.”

ಹೀಗೆ ಹೇಳಿ ಮಹಾಬಾಹು ರಾಮನು ಪಾಂಡವರಿಂದ ಬೀಳ್ಕೊಂಡು, ಮಧುಸೂದನನಿಂದ ತಡೆಯಲ್ಪಟ್ಟು ತೀರ್ಥಯಾತ್ರೆಗೆ ಹೋದನು.

## ರುಕ್ಮಿಯನ್ನು ಯಾರೂ ಯುದ್ಧಕ್ಕೆ ಸೇರಿಸಿಕೊಳ್ಳದೇ ಇದ್ದುದು

ಇದೇ ಸಮಯದಲ್ಲಿ ನೃಪತಿ ಹಿರಣ್ಯಲೋಮನೆಂಬ ಹೆಸರಿನಿಂದಲೂ ಕರೆಯಲ್ಪಡುವ, ಸಾಕ್ಷಾತ್ ಇಂದ್ರನ ಸಖನಾಗಿದ್ದ,  ಭೋಜರ ಯಶಸ್ವಿನೀ ಅಧಿಪತಿಯಾದ, ದಾಕ್ಷಿಣಾತ್ಯಪತಿ ಮಹಾತ್ಮ ಭೀಷ್ಮಕನ ಪುತ್ರ, ದಿಕ್ಕುಗಳಲ್ಲಿ ರುಕ್ಮಿ ಎಂದು ವಿಶ್ರುತನಾಗಿದ್ದನು. ಆ ಮಹಾಬಾಹುವು ಗಂಧಮಾದನವಾಸಿ ಕಿಂಪುರುಷಸಿಂಹನ ಶಿಷ್ಯನಾಗಿ ಧನುರ್ವೇದದ ನಾಲ್ಕೂ ಪಾದಗಳನ್ನು ಸಂಪೂರ್ಣವಾಗಿ ಕಲಿತು

ತೇಜಸ್ಸಿನಲ್ಲಿ ಗಾಂಡೀವಕ್ಕೆ ಮತ್ತು ಶಾಂರ್ಙಕ್ಕೆ ಸಮನಾದ ದಿವ್ಯವೂ ಅಕ್ಷಯವೂ ಆದ ಧನುವನ್ನು ಮಹೇಂದ್ರನಿಂದ ಪಡೆದಿದ್ದನು. ದಿವಿಚಾರಿಗಳ ಮೂರೇ ದಿವ್ಯ ಧನುಗಳಿವೆಯೆಂದು ಹೇಳುತ್ತಾರೆ - ವರುಣನ ಗಾಂಡೀವ, ಮಹೇಂದ್ರನ ವಿಜಯವೆಂಬ ಧನುಸ್ಸು, ಮತ್ತು ವಿಷ್ಣುವಿನ ತೇಜೋಮಯ ಶಾಂಙ್ರ ಧನುಸ್ಸು. ಆ ಪರಸೇನಾಭಯಾವಹ ಧನುಸ್ಸನ್ನು ಕೃಷ್ಣನು ಧರಿಸಿದ್ದನು. ಗಾಂಡೀವವನ್ನು ಅರ್ಜುನನು ಖಾಂಡವದಲ್ಲಿ ಅಗ್ನಿಯಿಂದ ಪಡೆದಿದ್ದನು. ಮಹಾತೇಜಸ್ವಿ ವಿಜಯವನ್ನು ರುಕ್ಮಿಯು ದ್ರುಮನಿಂದ ಪಡೆದಿದ್ದನು. ಮುರನ ಪಾಶಗಳನ್ನು ಕಡಿದು ಓಜಸ್ಸಿನಿಂದ ಮುರನನ್ನು ಕೊಂದು, ಭೂಮಿಯ ಮಗ ನರಕನನ್ನು ಗೆದ್ದು ಮಣಿಕುಂಡಲಗಳನ್ನು ದೊರಕಿಸಿಕೊಳ್ಳುವಾಗ, ಹದಿನಾರು ಸಾವಿರ ವಿವಿಧ ಸ್ತ್ರೀರತ್ನರನ್ನು ವಿಮೋಚನಗೊಳಿಸಿ ಹೃಷೀಕೇಶನು ಉತ್ತಮ ಶಾಂಙ್ರಧನುಸ್ಸನ್ನು ಪಡೆದಿದ್ದನು.

ಮೇಘದಂತೆ ಮೊಳಗುವ ವಿಜಯ ಧನುಸ್ಸನ್ನು ಪಡೆದು ರುಕ್ಮಿಯು ಜಗತ್ತಿಗೇ ಭಯವನ್ನುಂಟುಮಾಡುವಂತೆ ಪಾಂಡವರ ಬಳಿ ಬಂದನು. ಹಿಂದೆ ಸ್ವಬಾಹುಬಲದರ್ಪಿತನಾದ ಅವನು ತನ್ನ ತಂಗಿ ರುಕ್ಮಿಣಿಯನ್ನು ಧೀಮತ ವೀರ ವಾಸುದೇವನು ಅಪಹರಿಸಿದ್ದುದನ್ನು ಸಹಿಸಿರಲಿಲ್ಲ. ಕೇಶವನನ್ನು ಕೊಲ್ಲದೇ ಹಿಂದಿರುಗುವುದಿಲ್ಲವೆಂದು ಪ್ರತಿಜ್ಞೆಯನ್ನು ಮಾಡಿ ಆ ಸರ್ವಶಸ್ತ್ರಭೃತರಲ್ಲಿ ಶ್ರೇಷ್ಠನು ಬಹುದೂರದವರೆಗೆ ವ್ಯಾಪ್ತಗೊಂಡ, ವಿಚಿತ್ರ ಆಯುಧ ಕವಚಗಳನ್ನು ಧರಿಸಿದ, ಗಂಗೆಯಂತೆ ಭೋರ್ಗರೆಯುತ್ತಿರುವ ಚತುರಂಗ ಸೇನೆಯೊಂದಿಗೆ ವಾರ್ಷ್ಣೇಯನನ್ನು

ಬೆನ್ನುಹತ್ತಿದ್ದನು. ಯೋಗಗಳ ಈಶ್ವರ ಪ್ರಭು ವಾರ್ಷ್ಣೇಯನನ್ನು ಎದುರಿಸಿ ಸೋತು ನಾಚಿಕೊಂಡು ಅವನು ಕುಂಡಿನಕ್ಕೆ ಹಿಂದಿರುಗಲಿಲ್ಲ. ಪರವೀರಹ ಕೃಷ್ಣನಿಂದ ರಣದಲ್ಲಿ ಸೋಲನ್ನಪ್ಪಿದ ಸ್ಥಳದಲ್ಲಿಯೇ ಅವನು ಭೋಜಕಟ ಎಂಬ ಹೆಸರಿನ ಉತ್ತಮ ನಗರವನ್ನು ನಿರ್ಮಿಸಿದ್ದನು. ಅವನ ಆ ಮಹಾಸೇನೆ, ಆನೆ, ಕುದುರೆಗಳಿಂದ ತುಂಬಿದ ಆ ಪುರವು ಭುವಿಯಲ್ಲಿ ಭೋಜಕಟವೆಂಬ ಹೆಸರಿನಲ್ಲಿ ವಿಖ್ಯಾತವಾಗಿದೆ.

ಆ ಭೋಜರಾಜನು ಒಂದು ಅಕ್ಷೌಹಿಣೀ ಮಹಾಸೇನೆಯಿಂದ ಸುತ್ತುವರೆಯಲ್ಪಟ್ಟು, ಮಹಾವೀರ್ಯದಿಂದ, ಕವಚ, ಖಡ್ಗ, ಬಾಣ, ಬಿಲ್ಲು, ಧ್ವಜ ಮತ್ತು ರಥಗಳಿಂದ, ಆದಿತ್ಯವರ್ಣದಿಂದ ಬೆಳಗುತ್ತಾ ಪಾಂಡವರ ಬಳಿಬಂದು ಮಹಾಸೇನೆಯನ್ನು ಪ್ರವೇಶಿಸಿದನು. ವಾಸುದೇವನಿಗೆ ಪ್ರಿಯವಾದುದನ್ನು ಮಾಡಲು ಬಯಸುತ್ತಾನೆಂದು ಪಾಂಡವರಿಗೆ ತಿಳಿಸಿದನು. ಯುಧಿಷ್ಠಿರನಾದರೋ ಮುಂದುವರೆದು ಆ ರಾಜನನ್ನು ಪೂಜಿಸಿದನು. ಪಾಂಡುಸುತನಿಂದ ಯಥಾನ್ಯಾಯವಾಗಿ ಪೂಜಿತನಾಗಿ ಸುಸತ್ಕೃತನಾದ ನಂತರ, ರುಕ್ಮಿಯು ಅವರೆಲ್ಲರನ್ನೂ ಪ್ರತಿಪೂಜಿಸಿ ಸೈನಿಕರೊಂದಿಗೆ ವಿಶ್ರಮಿಸಿದನು. ವೀರರ ಮಧ್ಯೆ ಕುಂತೀಪುತ್ರ ಧನಂಜಯನಿಗೆ ಹೇಳಿದನು:

> “ಪಾಂಡವ! ಯುದ್ಧದಲ್ಲಿ ಭಯವಾದರೆ ನಾನು ಸಹಾಯ ಮಾಡಲು ಇದ್ದೇನೆ. ನಾನು ಕೊಡುವ ಸಹಾಯವು

ಶತ್ರುಗಳಿಗೂ ಸಹಿಸಲಾಗದಂತೆ ಮಾಡುತ್ತೇನೆ. ವಿಕ್ರಮದಲ್ಲಿ ನನ್ನನ್ನು ಹೋಲುವ ಪುರುಷನು ಯಾರೂ ಇಲ್ಲ. ಸಮರದಲ್ಲಿ ಶತ್ರುಗಳನ್ನು ಸಂಹರಿಸಿ ನಿನಗೆ ಕೊಡುತ್ತೇನೆ.”

ಇದನ್ನು ಧರ್ಮರಾಜ ಮತ್ತು ಕೇಶವನ ಸನ್ನಿಧಿಯಲ್ಲಿ, ಪಾರ್ಥಿವೇಂದ್ರರು ಮತ್ತು ಇತರ ಎಲ್ಲರೂ ಕೇಳುವ ಹಾಗೆ ಹೇಳಿದನು. ವಾಸುದೇವನನ್ನೂ, ಪಾಂಡವ ಧರ್ಮರಾಜನನ್ನೂ ನೋಡಿ ಧೀಮಾನ್ ಕೌಂತೇಯನು ಸಖಿಪೂರ್ವಕವಾಗಿ ಸಸುನಗುತ್ತಾ ಹೇಳಿದನು:

“ವೀರ! ಘೋಷಯಾತ್ರೆಯ ಸಮಯದಲ್ಲಿ ಸುಮಹಾಬಲರಾದ ಗಂಧರ್ವರೊಡನೆ ಯುದ್ಧಮಾಡುತ್ತಿರುವಾಗ ನನ್ನ ಸಹಾಯಕ್ಕೆಂದು ಯಾವ ಸಖನಿದ್ದನು? ದೇವದಾನವ ಸಂಕುಲವು ಖಾಂಡವದಲ್ಲಿ ಬೆಳಗಿ ಯುದ್ಧಮಾಡುತ್ತಿರುವಾಗ ನನಗೆ ಯಾರು ಸಹಾಯಕರಾಗಿದ್ದರು? ನಿವಾತಕವಚರು ಮತ್ತು ಕಾಲಕೇಯ ದಾನವರೊಂದಿಗೆ ಯುದ್ಧಮಾಡುವಾಗ ಅಲ್ಲಿ ನನಗೆ ಯಾರು ಸಹಾಯಕರಾಗಿದ್ದರು? ಹಾಗೆಯೇ ವಿರಾಟನಗರದ ಸಂಗರದಲ್ಲಿ ಬಹಳ ಕುರುಗಳೊಂದಿಗೆ ಯುದ್ಧಮಾಡುವಾಗ ಯಾರು ನನ್ನ ಸಹಾಯಕರಾಗಿದ್ದರು? ರಣದಲ್ಲಿ ರುದ್ರನಿಗೂ, ಶಕ್ರನಿಗೂ, ಕುಬೇರನಿಗೂ, ಯಮನಿಗೂ, ವರುಣನಿಗೂ, ಅಗ್ನಿಗೂ, ಕೃಪನಿಗೂ, ದ್ರೋಣನಿಗೂ ಮತ್ತು ಮಾಧವನಿಗೂ ನಮಸ್ಕರಿಸಿ, ದಿವ್ಯ ತೇಜೋಮಯ, ದೃಢ

> ಗಾಂಡೀವವನ್ನು ಧರಿಸಿ, ಅಕ್ಷಯ ಭತ್ತಳಿಕೆಗಳಿಂದ ಕೂಡಿದವನಾಗಿ, ದಿವ್ಯಾಸ್ತ್ರಗಳನ್ನು ಪಡೆದು, ಕೌರವರ ಕುಲದಲ್ಲಿ ಹುಟ್ಟಿ, ಪಾಂಡುವಿನ ವಿಶೇಷ ಪುತ್ರನಾಗಿ, ದ್ರೋಣನ ಶಿಷ್ಯನೆನಿಸಿಕೊಂಡಿರುವ, ವಾಸುದೇವನನ್ನು ಸಹಾಯಕನನ್ನಾಗಿ ಪಡೆದ ನಾನು ಅಯಶಸ್ಕರನಂತೆ ಭೀತನಾಗಿದ್ದೇನೆ ಎಂದು, ಸ್ವಯಂ ವಜ್ರಾಯುಧಕ್ಕಾದರೂ ಹೇಗೆ ತಾನೇ ಹೇಳಲಿ? ನನಗೆ ಹೆದರಿಕೆಯಿಲ್ಲ. ನನಗೆ ಸಹಾಯವೂ ಬೇಕಾಗಿಲ್ಲ. ನಿನಗಿಷ್ಟವಾದ ಹಾಗೆ, ನಿನಗೆ ಸರಿಯೆನಿಸುವ ಹಾಗಿ ಹೋಗು ಅಥವಾ ಅಲ್ಲಿ ನಿಲ್ಲು!"

ಆಗ ರುಕ್ಮಿಯು ಸಾಗರಸನ್ನಿಭ ಸೇನೆಯೊಂದಿಗೆ ಹಿಂದಿರುಗಿ ಹಾಗೆಯೇ ದುರ್ಯೋಧನನ ಬಳಿ ಹೋದನು. ಅಲ್ಲಿಗೆ ಹೋಗಿ ಆ ನರಾಧಿಪನು ಹಾಗೆಯೇ ಹೇಳಿದನು. ಅವನನ್ನು ಕೇಳಿದ ಆ ಶೂರಮಾನಿನಿಯೂ ಕೂಡ ಅವನನ್ನು ಹಾಗೆಯೇ ತಿರಸ್ಕರಿಸಿದನು. ಇಬ್ಬರೇ ಆ ಯುದ್ಧದಿಂದ ದೂರವಿದ್ದರು: ವಾರ್ಷ್ಣೇಯ ರೌಹಿಣೇಯ ಮತ್ತು ವಸುಧಾಧಿಪ ರುಕ್ಮಿ. ರಾಮನು ತೀರ್ಥಯಾತ್ರೆಗೆ ಮತ್ತು ಭೀಷ್ಮಕನ ಮಗನು ಹಾಗೆ ಹೋಗಲು ಪಾಂಡವೇಯರು ಪುನಃ ಮಂತ್ರಾಲೋಚನೆಗೆ ಕುಳಿತುಕೊಂಡರು. ಪಾರ್ಥಿವರ ಸಮಾಕುಲವಾಗಿದ್ದ ಧರ್ಮರಾಜನ ಆ ಸಮಿತಿಯು ಆಕಾಶದಲ್ಲಿ ತಾರೆಗಳ ಮಧ್ಯೆ ಇರುವ ಚಂದ್ರನಂತೆ ಶೋಭಿಸಿತು.

## ಧೃತರಾಷ್ಟ್ರ-ಸಂಜಯರ ಸಂವಾದ

ಹೋರಾಡಲು ಸೇನೆಗಳು ಸೇರಿರಲು ಮಹಾರಾಜ ಧೃತರಾಷ್ಟ್ರನು ಸಂಜಯನಿಗೆ ಹೇಳಿದನು:

“ಸಂಜಯ! ಬಾ! ಕುರುಪಾಂಡವ ಸೇನೆಗಳಲ್ಲಿ ಸೇನಾ ನಿವೇಶನಗಳಲ್ಲಿ ಏನೆಲ್ಲ ನಡೆಯಿತೋ ಅವೆಲ್ಲವನ್ನೂ ಏನನ್ನೂ ಬಿಡದೇ ನನಗೆ ಹೇಳು. ದೈವವೇ ಹೆಚ್ಚಿನದು ಮತ್ತು ಪುರುಷಪ್ರಯತ್ನಗಳು ಅನರ್ಥಕವೆಂದು ತಿಳಿದುಕೊಂಡಿದ್ದೇನೆ. ಕ್ಷಯವನ್ನು ಪ್ರಾರಂಭಿಸುವ ಯುದ್ಧದ ದೋಷಗಳನ್ನೂ ತಿಳಿದುಕೊಂಡಿದ್ದೇನೆ. ಆದರೂ ಕೆಟ್ಟ ಪ್ರಜ್ಞೆಯುಳ್ಳ, ಮೋಸದ ದ್ಯೂತವನ್ನಾಡುವ ಪುತ್ರನನ್ನು ನಿಯಂತ್ರಿಸಲು ಮತ್ತು ನನ್ನ ಹಿತದಲ್ಲಿರುವಂತೆ ಮಾಡಲೂ ಅಶಕ್ತನಾಗಿದ್ದೇನೆ. ದುರ್ಯೋಧನನ ಬಳಿಯಿರುವಾಗ ನನ್ನ ಬುದ್ಧಿಯು ದೋಷಗಳನ್ನು ಕಾಣುವುದಿಲ್ಲ. ಆದರೆ ಅವನಿಲ್ಲದಿರುವಾಗ ಪುನಃ ಅದು ಹಿಂದಿನ ಸ್ಥಿತಿಗೆ ಬರುತ್ತದೆ. ಆಗಬೇಕಾದುದು ಆಗಿಯೇ ಆಗುತ್ತದೆ. ಹಾಗಿರುವಾಗ ರಣದಲ್ಲಿ ದೇಹವನ್ನು ತ್ಯಾಗಿಸುವುದು ಪೂಜಿತವಾದ ಕ್ಷತ್ರಿಯಧರ್ಮವಲ್ಲವೇ?”

ಸಂಜಯನು ಹೇಳಿದನು:

“ಮಹಾರಾಜ! ನೀನು ಕೇಳಿರುವ ಈ ಪ್ರಶ್ನೆಯು ಯುಕ್ತವಾದುದೇ. ನಿನಗೆ ತಕ್ಕುದೇ ಆಗಿದೆ. ಆದರೆ ದೋಷಗಳನ್ನೆಲ್ಲವನ್ನೂ ದುರ್ಯೋಧನನ ಮೇಲೆ ಹಾಕುವುದು

ಸರಿಯಲ್ಲ. ಇದರ ಕುರಿತು ನಾನು ಹೇಳುವ ಮಾತುಗಳನ್ನು ಸಂಪೂರ್ಣವಾಗಿ ಕೇಳು. ತನ್ನದೇ ಕೆಟ್ಟ ನಡತೆಯಿಂದ ಅಶುಭವನ್ನು ಪಡೆದ ನರನು ದೈವವನ್ನಾಗಲೀ ಕಾಲವನ್ನಾಗಲೀ ನಿಂದಿಸುವುದು ಸರಿಯಲ್ಲ. ಸರ್ವ ದುಷ್ಟಪ್ರವೃತ್ತಿಯನ್ನು ಮುಂದುವರೆಸಿಕೊಂಡು ಹೋಗುವ ಮನುಷ್ಯನನ್ನು ನಿಂದನೀಯವಾದುಗಳನ್ನು ಮುಂದುವರೆಸಿಕೊಂಡು ಹೋಗಿದ್ದುದಕ್ಕೆ ಸರ್ವಲೋಕದಲ್ಲಿಯೂ ವಧ್ಯನಾಗುತ್ತಾನೆ. ಮೋಸದಿಂದ ದ್ಯೂತದಲ್ಲಿ ಸೋಲಿಸಲ್ಪಟ್ಟ ಪಾಂಡವರು ಅಮಾತ್ಯರೊಂದಿಗೆ ನಿನ್ನ ಮುಖವನ್ನೇ ನೋಡಿಕೊಂಡು ಎಲ್ಲ ದುಃಖಗಳನ್ನೂ ಸಹಿಸಿಕೊಂಡರು. ಪುರುಷನು ಶುಭ ಅಥವಾ ಅಶುಭ ಯಾವ ಕರ್ಮಗಳ ಕರ್ತಾರನೂ ಅಲ್ಲ. ಅಸ್ವತಂತ್ರನಾಗಿರುವ ಪುರುಷನು ದಾರಕ್ಕೆ ಕಟ್ಟಿದ ಯಂತ್ರದಂತೆ ಕರ್ಮಗಳನ್ನು ಮಾಡುತ್ತಾನೆ. ಕೆಲವರು ಈಶ್ವರನು ನಿರ್ಧರಿಸುತ್ತಾನೆ ಎಂದೂ ಕೆಲವರು ನಡೆಯುವುದೆಲ್ಲವೂ ನಮ್ಮ ಸ್ವ-ಇಚ್ಛೆಯಿಂದ ಆಗುವುದೆಂದೂ ಮತ್ತು ಅನ್ಯರು ಪೂರ್ವಕರ್ಮಗಳಿಂದ ಎಲ್ಲವೂ ನಡೆಯುವವೆಂದು - ಹೀಗೆ ಮೂರು ರೀತಿಯ ಅಭಿಪ್ರಾಯಗಳಿವೆ.”

## ದುರ್ಯೋಧನನು ಉಲೂಕನನ್ನು ಸಂದೇಶದೊಂದಿಗೆ

## ಪಾಂಡವರಲ್ಲಿಗೆ ಕಳುಹಿಸಿದುದು

ಹಿರಣ್ವತೀ ತೀರದಲ್ಲಿ ಮಹಾತ್ಮ ಪಾಂಡವರು ಬೀಡು ಬಿಟ್ಟಿರಲು ಮಹಾರಾಜ ದುರ್ಯೋಧನನು ಕರ್ಣನೊಂದಿಗೆ, ರಾಜೇಂದ್ರ ಸೌಬಲನೊಂದಿಗೆ ಮತ್ತು ದುಃಶಾಸನನೊಂದಿಗೆ ಇರುವಾಗ ಉಲೂಕನನ್ನು ಕರೆಯಿಸಿ ಹೀಗೆಂದನು:

> “ಉಲೂಕ! ಕೈತವ್ಯ! ಸೋಮಕರೊಂದಿಗಿರುವ ಪಾಂಡವರಲ್ಲಿಗೆ ಹೋಗು! ಹೋಗಿ ವಾಸುದೇವನು ಕೇಳುವಂತೆ ನನ್ನ ಮಾತುಗಳನ್ನು ಹೇಳು. “ಬಹಳ ವರ್ಷಗಳಿಂದ ಕಾದುಕೊಂಡಿರುವ ಲೋಕಭಯಂಕರವಾದ, ಪಾಂಡವರ ಮತ್ತು ಕುರುಗಳ ನಡುವಿನ ಯುದ್ಧವು ಬಂದೊದಗಿದೆ. ಕುರುಗಳ ಮಧ್ಯೆ ಸಂಜಯನು ಹೇಳಿದ ನೀವು ಜೋರಾಗಿ ಕೊಚ್ಚಿಕೊಂಡಿರುವವುಗಳನ್ನು ತೋರಿಸುವ ಕಾಲವು ಬಂದೊದಗಿದೆ. ನೀವು ಹೇಗೆ ಪ್ರತಿಜ್ಞೆ ಮಾಡಿದ್ದಿರೋ ಅವೆಲ್ಲವನ್ನೂ ಮಾಡಿತೋರಿಸಿ. ಪಾಂಡವ! ಕ್ರೂರವಾದ ರಾಜ್ಯಹರಣ, ವನವಾಸ, ಮತ್ತು ದ್ರೌಪದಿಯ ಪರಿಕ್ಲೇಶಗಳನ್ನು ಸ್ಮರಿಸಿಕೊಂಡು ಪುರುಷರಾಗಿರಿ. ಒಂದುವೇಳೆ ಕ್ಷತ್ರಿಯ ಗರ್ಭದಿಂದ ಹುಟ್ಟಿ ಬಂದಿರುವುದೇ ಆಗಿದ್ದರೆ ಬಲವನ್ನೂ, ಶೌರ್ಯವನ್ನೂ, ಉತ್ತಮ ಅಸ್ತ್ರಲಾಘವವನ್ನೂ, ಪೌರುಷವನ್ನೂ ಪ್ರದರ್ಶಿಸಿ ಕೋಪಕ್ಕೆ ಮುಕ್ತಾಯವನ್ನು ಮಾಡು. ಐಶ್ವರ್ಯದಿಂದ ಭ್ರಂಶಿತನಾಗಿ ದೀರ್ಘಕಾಲದವರೆಗೆ

ದೀನನಾಗಿ, ಪರಿಕ್ಲಿಷ್ಟಗಳನ್ನು ಅನುಭವಿಸಿರುವ ಯಾರ ಹೃದಯವು ತಾನೇ ಒಡೆಯುವುದಿಲ್ಲ? ಉತ್ತಮ ಕುಲದಲ್ಲಿ ಜನಿಸಿ, ಪರರ ವಿತ್ತವನ್ನು ಬಯಸುವವನ ರಾಜ್ಯವನ್ನೇ ಚೂರುಮಾಡಿ ಆಕ್ರಮಿಸಿರುವಾಗ ಯಾರು ತಾನೇ ಕೋಪದಿಂದ ಉರಿಯುವುದಿಲ್ಲ? ನೀನು ಹೇಳುವ ಮಹಾವಾಕ್ಯವನ್ನು ಕರ್ಮದ ಮೂಲಕ ಮಾಡಿ ತೋರಿಸು! ಕೆಲಸಮಾಡದೇ ಜಂಬಕೊಚ್ಚಿಕೊಳ್ಳುವವನನ್ನು ಸಂತರು ಕುಪುರುಷನೆಂದು ತಿಳಿಯುತ್ತಾರೆ. ಯುದ್ದಮಾಡುವವರು ಈ ಎರಡಕ್ಕಾಗಿ ಯುದ್ಧಮಾಡುತ್ತಾರೆ - ಶತ್ರುಗಳಿಂದ ಸ್ಥಾನವನ್ನು ಪಶಪಡೆಸಿಕೊಳ್ಳಲು ಮತ್ತು ರಾಜ್ಯವನ್ನು ಪುನಃ ಪಡೆದುಕೊಳ್ಳಲು. ಆದುದರಂತೆ ಪುರುಷನಂತೆ ನಡೆದುಕೋ. ನಾವು ಅಥವಾ ನೀನು ಗೆದ್ದು ಈ ಪೃಥ್ವಿಯನ್ನು ಆಳೋಣ. ಅಥವಾ ನಮ್ಮಿಂದ ಕೊಲ್ಲಲ್ಪಟ್ಟು ವೀರಸ್ವರ್ಗಕ್ಕೆ ಹೋಗುತ್ತೀಯೆ. ರಾಷ್ಟ್ರದಿಂದ ಹೊರಗಟ್ಟಿದುದನ್ನು, ವನವಾಸದ ಕ್ಲೇಶವನ್ನು, ಕೃಷ್ಣೆಯ ಪರಿಕ್ಲೇಶವನ್ನು ನೆನಪಿಸಿಕೊಂಡು ಪುರುಷನಾಗು. ಪುನಃ ಪುನಃ ಬಂದು ಚುಚ್ಚುವ ಅಪ್ರಿಯರ ವಚನಗಳಿಗೆ ಸಿಟ್ಟನ್ನು ತೋರಿಸು. ಏಕೆಂದರೆ ಸಿಟ್ಟೇ ಪೌರುಷದ ಲಕ್ಷಣ. ಸಂಗ್ರಾಮದಲ್ಲಿ ನಿನ್ನ ಕ್ರೋಧ, ಬಲ, ವೀರ್ಯ, ಜ್ಞಾನಯೋಗ ಮತ್ತು ಅಸ್ತ್ರಲಾಘವವನ್ನು ತೋರಿಸು. ಪುರುಷನಾಗು.”

“ಉಲೂಕ! ಆ ಶಂಡ, ಮೂಢ, ತುಂಬಾ ತಿನ್ನುವ, ಅವಿದ್ಯಕ ಭೀಮಸೇನನಿಗೆ ನನ್ನ ಮಾತುಗಳನ್ನು ಮತ್ತೊಮ್ಮೆ ಹೇಳು.
“ವೃಕೋದರ! ಅಶಕ್ತನಂತೆ ಸಭಾಮಧ್ಯದಲ್ಲಿ ಶಪಿಸಿರುವಂತೆ, ಒಂದುವೇಳೆ ಶಕ್ಯನಾದರೆ ದುಃಶಾಸನನ ರಕ್ತವನ್ನು ಕುಡಿ! ಆಯುಧಗಳಿಗೆ ಅರಕವಿಟ್ಟಾಗಿದೆ, ನಿನ್ನ ಸೈನಿಕರು ಮತ್ತು ಕುದುರೆಗಳು ದಷ್ಟಪುಷ್ಟವಾಗಿವೆ. ಕೇಶವನೊಂದಿಗೆ ಕುರುಕ್ಷೇತ್ರಕ್ಕೆ ಬಂದು ಯುದ್ಧಮಾಡು!””

## ಉಲೂಕವಾಕ್ಯ

ಪಾಂಡವರ ಸೇನಾನಿವೇಶನವನ್ನು ತಲುಪಿ ಕೈತವ್ಯನು ಪಾಂಡವ ಯುಧಿಷ್ಠಿರನನ್ನು ಭೇಟಿಮಾಡಿ ಹೀಗೆ ಹೇಳಿದನು:

> “ದೂತವಾಕ್ಯವನ್ನು ಹೇಗೆ ಹೇಳಬೇಕೆಂದು ನನಗೆ ತಿಳಿದಿಲ್ಲ. ದುರ್ಯೋಧನನ ಸಂದೇಶವನ್ನು ಹೇಳುತ್ತೇನೆ. ಕೇಳಿ ಕ್ರೋಧಿತನಾಗಬಾರದು.”

ಯುಧಿಷ್ಠಿರನು ಹೇಳಿದನು:

> “ಉಲೂಕ! ನಿನಗೆ ಭಯವಿಲ್ಲ. ಆ ಲುಬ್ಧನೂ ದೂರದೃಷ್ಟಿಯಿಲ್ಲದವನೂ ಆದ ಧಾರ್ತರಾಷ್ಟ್ರನ ಮತವೇನೆನ್ನುವುದನ್ನು ಭಯಪಟ್ಟುಕೊಳ್ಳದೇ ಹೇಳು.”

ಆಗ ಮಹಾತ್ಮ ಪಾಂಡವರ, ಸೃಂಜಯರ ಮತ್ತು ಯಶಸ್ವಿ ಕೃಷ್ಣ ಈ

ಎಲ್ಲ ದ್ಯುತಿಮತರ ಮಧ್ಯೆ, ಪುತ್ರರೊಂದಿಗಿದ್ದ ದ್ರುಪದ ಮತ್ತು ವಿರಾಟರ ಸನ್ನಿಧಿಯಲ್ಲಿ, ಎಲ್ಲ ಭೂಮಿಪರ ಮಧ್ಯೆ ಅವನು ಈ ಮಾತನ್ನಾಡಿದನು:

"ರಾಜ ಮಹಾಮನಸ್ವಿ ಧಾರ್ತರಾಷ್ಟ್ರನು ಕುರುವೀರರು ಕೇಳಿಸಿಕೊಳ್ಳುವಂತೆ ನಿನಗೆ ಇದನ್ನು ಹೇಳಿದ್ದಾನೆ. ನರಾಧಿಪ! ಕೇಳು! ದ್ಯೂತದಲ್ಲಿ ನೀನು ಸೋತೆ. ಸಭೆಗೆ ಕೃಷ್ಣೆಯನ್ನು ತರಲಾಯಿತು. ಇಷ್ಟೇ ಮನುಷ್ಯನು, ಪುರುಷ ಮಾನಿನಿಯು ಸಿಟ್ಟಾಗುವಂತೆ ಮಾಡಲು ಶಕ್ಯ. ಹನ್ನೆರಡು ವರ್ಷಗಳು ಹೊರಗಟ್ಟಲ್ಪಟ್ಟು ವನದಲ್ಲಿ ವಾಸಿಸಿದಿರಿ. ಒಂದು ವರ್ಷವನ್ನು ವಿರಾಟನ ದಾಸರಾಗಿದ್ದುಕೊಂಡು ಕಳೆದಿರಿ. ಕ್ರೂರವಾದ ರಾಜ್ಯಹರಣ, ವನವಾಸ, ಮತ್ತು ದ್ರೌಪದಿಯ ಪರಿಕ್ಲೇಶಗಳನ್ನು ಸ್ಮರಿಸಿಕೊಂಡು ಪುರುಷರಾಗಿರಿ. ಅಶಕ್ತತೆಯಿಂದ ಶಪಿಸಿದ ಪಾಂಡವ ಭೀಮಸೇನನು ಸಾಧ್ಯವಾದರೆ ದುಃಶಾಸನನ ರಕ್ತವನ್ನು ಕುಡಿಯಲಿ! ಆಯುಧಗಳು ಸಿದ್ಧವಾಗಿವೆ, ಕುರುಕ್ಷೇತ್ರವು ಅಕರ್ದಮವಾಗಿದೆ. ರಸ್ತೆಗಳು ಸಮನಾಗಿವೆ, ಯೋಧರೂ-ಕುದುರೆಗಳೂ ಸಿದ್ಧವಾಗಿವೆ. ಕೇಶವನನ್ನೊಡಗೂಡಿ ಯುದ್ಧಮಾಡು. ಯುದ್ಧದಲ್ಲಿ ಬೀಷ್ಮನನ್ನು ಇನ್ನೂ ಎದುರಾಗದೇ, ಗಂಧಮಾದನ ಪರ್ವತವನ್ನು ಏರಬಲ್ಲೆ ಎಂದು ಹೇಳಿಕೊಳ್ಳುವ ಮಂದನಂತೆ ಏಕೆ ಕೊಚ್ಚಿಕೊಳ್ಳುತ್ತಿದ್ದೀಯೆ? ಯುದ್ಧದಲ್ಲಿ ಶಚೀಪತಿಯ ಸಮನಾಗಿರುವ ಶ್ರೇಷ್ಠ ದ್ರೋಣನೊಂದಿಗೆ ಯುದ್ಧಮಾಡಿ

ಸಂಯುಗದಲ್ಲಿ ಗೆಲ್ಲದೇ ಹೇಗೆ ತಾನೇ ರಾಜ್ಯವನ್ನು ಬಯಸುತ್ತೀಯೆ? ಬ್ರಹ್ಮ ಮತ್ತು ಧನುರ್ವಿದ್ಯೆ ಇವೆರಡರ ಕೊನೆಯನ್ನೂ ಆಚಾರ್ಯನು ತಲುಪಿದ್ದಾನೆ. ಯುದ್ಧದಲ್ಲಿ ಅವನು ಗೆಲ್ಲಲಸಾಧ್ಯನು, ಅಕ್ಷೋಭ್ಯನು, ಅನೀಕಧರನು ಮತ್ತು ಅಚ್ಯುತನು. ಅಂಥಹ ದ್ರೋಣನನ್ನು ಯುದ್ಧದಲ್ಲಿ ಗೆಲ್ಲುತ್ತೇನೆ ಎನ್ನುವ ಒಣ ಮೋಹವನ್ನು ಹೊಂದಿರುವೆಯಲ್ಲ ಅದಾಗುವುದು ಸುಳ್ಳು. ಗಾಳಿಯಿಂದ ಮೇರುಪರ್ವತವು ಪುಡಿಯಾಯಿತೆಂದು ನಾವು ಕೇಳಿಲ್ಲವಲ್ಲ! ಆದರೆ ನೀನು ಹೇಳುವುದು ಸತ್ಯವಾದರೆ ಗಾಳಿಯೂ ಮೇರುವನ್ನು ಹಾರಿಸೀತು, ಆಕಾಶವು ಭೂಮಿಯ ಮೇಲೆ ಬಿದ್ದೀತು, ಯುಗವು ಬದಲಾದೀತು. ಆ ಅಸ್ತ್ರಧಾರೀ ಅರಿಮರ್ದನನನ್ನು ಎದುರಿಸಿ ಜೀವಿತಾಕಾಂಕ್ಷಿಯಾದ ಯಾರುತಾನೆ, ಆನೆಯಿರಲಿ, ಕುದುರೆಯಾಗಿರಲಿ ಅಥವಾ ಮನುಷ್ಯನಾಗಿರಲೀ ಪುನಃ ಒಳ್ಳೆಯದಾಗಿದ್ದುಕೊಂಡು ಮನೆಗೆ ಹಿಂದಿರುಗುತ್ತಾನೆ? ಭೂಮಿಯ  ಮೇಲೆ ನಡೆಯುವ ಯಾರುತಾನೇ ಹೇಗೆ ಅವರಿಬ್ಬರನ್ನೂ ಎದುರಿಸಿ ದಾರುಣವಾದ ರಣದಿಂದ ಜೀವಂತನಾಗಿ ಬಿಡುಗಡೆ ಹೊಂದುತ್ತಾನೆ? ಬಾವಿಯಲ್ಲಿರುವ ಕಪ್ಪೆಯಂತೆ ಏಕೆ ನೀನು ಸೇರಿರುವ ರಾಜರ ಗುಂಪನ್ನು – ದುರಾಧರ್ಷರಾದ, ದೇವಸೇನೆಯಂತೆ ಪ್ರಕಾಶಿತರಾದ, ದಿವಿಯಲ್ಲಿ ರಕ್ಷಿಸಲ್ಪಟ್ಟಿರುವ ತ್ರಿದಶರಂತಿರುವ ನರೇಂದ್ರರನ್ನು

> ಅರ್ಥಮಾಡಿಕೊಳ್ಳುತ್ತಿಲ್ಲ? ಪೂರ್ವದಿಂದ, ಪಶ್ಚಿಮದಿಂದ, ದಕ್ಷಿಣದಿಂದ, ಉತ್ತರದಿಂದ ಬಂದಿರುವ ಕಾಂಬೋಜರು, ಶಕರು, ಖಶರು, ಶಾಲ್ವರು, ಕುರುಗಳು, ಮಧ್ಯದೇಶದವರು, ಮ್ಲೇಚ್ಛರು, ಪುಲಿಂದರು, ದ್ರವಿಡರು, ಆಂಧ್ರರು ಮತ್ತು ಕಾಂಚಿಯವರು. ಯುದ್ಧದಲ್ಲಿ ಸೊಕ್ಕಿ ಬೆಳೆಯುವ ಈ ನಾನಾ ಜನೌಘವು ವೇಗವಾಗಿ ಹರಿಯುವ ಗಂಗೆಯಂತೆ ದಾಟಲಸಾಧ್ಯವಾದುದು. ಅಲ್ಪಬುದ್ಧೇ! ಮಂದ! ಆನೆಗಳ ಸೇನೆಗಳ ಮಧ್ಯ ನಿಂತಿರುವ ನನ್ನನ್ನು ಹೇಗೆ ಹೋರಾಡುತ್ತೀಯೆ?”

ರಾಜ ಧರ್ಮಪುತ್ರ ಯುಧಿಷ್ಠಿರನಿಗೆ ಹೀಗೆ ಹೇಳಿ ಉಲೂಕನು ಪುನಃ ಜಿಷ್ಣುವಿನ ಕಡೆ ತಿರುಗಿ ಹೇಳಿದನು:

> “ಅರ್ಜುನ! ಕೊಚ್ಚಿಕೊಳ್ಳದೆಯೇ ಯುದ್ಧಮಾಡು! ಅಷ್ಟೇಕೆ ಕೊಚ್ಚಿಕೊಳ್ಳುತ್ತಿದ್ದೀಯೆ? ಉಪಾಯದಿಂದ ಸಿದ್ಧಿ ದೊರೆಯುತ್ತದೆಯೇ ಹೊರತು ಕೊಚ್ಚಿಕೊಳ್ಳುವುದರಿಂದ ಸಿದ್ಧಿಯು ದೊರೆಯುವುದಿಲ್ಲ. ಜಂಬ ಕೊಚ್ಚಿಕೊಳ್ಳುವುದರಿಂದಲೇ ಲೋಕದಲ್ಲಿ ಕರ್ಮಗಳು ಫಲವನ್ನು ಕೊಡುತ್ತವೆಯಂತಾಗಿದ್ದರೆ ಎಲ್ಲರೂ ಬಹುವಾಗಿ ಕೊಚ್ಚಿಕೊಳ್ಳುವ ಕೆಟ್ಟ ದಾರಿಯಲ್ಲಿ ಹೋಗಿ ಯಶಸ್ವಿಗಳಾಗುತ್ತಿದ್ದರು. ನಿನಗೆ ವಾಸುದೇವನ

ಸಹಾಯವಿದೆಯೆಂದು ಬಲ್ಲೆ. ನಿನ್ನ ಗಾಂಡೀವವು ಆರು ಅಡಿ ಉದ್ದವಿದೆಯೆಂದು ಬಲ್ಲೆ. ನಿನ್ನ ಸದೃಶನಾದ ಯೋದ್ಧನು ಇಲ್ಲ ಎನ್ನುವುದನ್ನೂ ಬಲ್ಲೆ. ಆದರೂ ನಿನ್ನ ರಾಜ್ಯವನ್ನು ನಿನಗೆ ಅರಿವಿದ್ದಂತೆಯೇ ಅಪಹರಿಸಿಕೊಂಡಿದ್ದೇನೆ! ಕೇವಲ ಪರ್ಯಾಯಧರ್ಮದಿಂದ ಜೀವಿಗಳು ಸಿದ್ಧಿಯನ್ನು ಪಡೆಯುವುದಿಲ್ಲ. ಧಾತಾರನೇ ಭೂತಗಳ ಮನಸ್ಸನ್ನು ದಾಸನನ್ನಾಗಿ ಅಥವಾ ಒಡೆಯನನ್ನಾಗಿ ಮಾಡುತ್ತಾನೆ. ಈ ಹದಿಮೂರು ವರ್ಷಗಳು ಅಳುತ್ತಿರುವಾಗ ನಾನು ರಾಜ್ಯವನ್ನು ಭೋಗಿಸಿದೆ. ಬಾಂಧವರೊಂದಿಗೆ ನಿನ್ನನ್ನು ಸಂಹರಿಸಿ ನಾನು ಮುಂದೆಯೂ ಕೂಡ ಪ್ರಶಾಸನ ಮಾಡುತ್ತೇನೆ. ಪಣದಲ್ಲಿ ಗೆದ್ದು ನಿನ್ನನ್ನು ದಾಸನನ್ನಾಗಿ ಮಾಡಿದಾಗ ನಿನ್ನ ಗಾಂಡೀವವು ಎಲ್ಲಿತ್ತು? ಆಗ ಭೀಮಸೇನನ ಬಲವಾದರೂ ಎಲ್ಲಿತ್ತು? ಆಗ ನಿಮಗೆ ಮೋಕ್ಷವು ಭೀಮಸೇನನ ಗದೆಯಿಂದಾಗಲೀ ಪಾರ್ಥನ ಗಾಂಡೀವದಿಂದಾಗಲೀ ದೊರೆಯಲಿಲ್ಲ. ಅನಿಂದಿತೆ ಕೃಷ್ಣೆಯಿಂದಾಯಿತು! ಆ ಭಾಮಿನಿಯು ದಾಸ್ಯಕರ್ಮಗಳಲ್ಲಿ ವ್ಯವಸ್ಥಿತರಾಗಿದ್ದ, ಅಮಾನುಷರಾಗಿದ್ದ ನಿಮ್ಮ ದಾಸತ್ವವನ್ನು ಕೊನೆಗೊಳಿಸಿ ಬಿಡಿಸಿದಳು. ಆಗ ನಾನು ನಿಮ್ಮನ್ನು ಷಂಡತಿಲಕ್ಕೆ ಹೋಲಿಸಿ ಮಾತನಾಡಿದ್ದೆ. ಅದರಂತೆಯೇ ಪಾರ್ಥನು ವಿರಾಟನಗರದಲ್ಲಿ ಜಡೆಯನ್ನು ಕಟ್ಟಲಿಲ್ಲವೇ? ವಿರಾಟನ ಅಡುಗೆಮನೆಯಲ್ಲಿ ಅಡುಗೆ ಮಾಡುತ್ತ ಭೀಮಸೇನನು

ಸೋತುಹೋಗಿದ್ದ. ಇದೂ ಕೂಡ ನಿನ್ನ ಪೌರುಷವನ್ನು ಎತ್ತಿ ತೋರಿಸುತ್ತದೆ! ಹೋರಾಟದಲ್ಲಿ ಜಡೆಯನ್ನು ಕಟ್ಟಿ, ಸೊಂಟಬಂದಿಯನ್ನು ಕಟ್ಟಿ, ಪಲಾಯನ ಮಾಡಿದ್ದೆಯಲ್ಲ! ಇದೇ ಕ್ಷತ್ರಿಯರು ಕ್ಷತ್ರಿಯರಿಗೆ ಸದಾ ನೀಡುವ ದಂಡ! ವಾಸುದೇವನ ಭಯದಿಂದಾಗಲೀ, ನಿನ್ನ ಭಯದಿಂದಾಗಲೀ ನಾನು ರಾಜ್ಯವನ್ನು ಹಿಂದಿರುಗಿಸುವುದಿಲ್ಲ. ಕೇಶವನೊಂದಿಗೆ ಯುದ್ಧ ಮಾಡು. ಮಾಯೆಯಾಗಲೀ, ಇಂದ್ರಜಾಲವಾಗಲೀ ಅಥವಾ ಕುಹಕವಾಗಲೀ ಶಸ್ತ್ರವನ್ನು ಹಿಡಿದು ಯುದ್ಧಮಾಡುವವನನ್ನು ಬೆದರಿಸಲಾರದು. ಅದು ಅವನ ಕೋಪವನ್ನು ಮಾತ್ರ ಹೆಚ್ಚಿಸಬಲ್ಲದು. ಸಹಸ್ರ ವಾಸುದೇವರಾಗಲೀ ನೂರು ಫಲ್ಗುನಿಗಳಾಗಲೀ ನನ್ನ ರಭಸಕ್ಕೆ ಸಿಲುಕಿ ದಿಕ್ಕು ದಿಕ್ಕುಗಳಲ್ಲಿ ಹಾರಿ ಹೋಗುತ್ತಾರೆ. ಯುದ್ದದಲ್ಲಿ ಭೀಷ್ಮನನ್ನು ಎದುರಿಸು. ತಲೆಕುಟ್ಟಿ ಗಿರಿಯನ್ನು ಒಡೆ. ಎರಡು ಬಾಹುಗಳಿಂದ ಮಹಾ ಆಳವಾದ ಪುರುಷರ ಸಾಗರವನ್ನು ದಾಟಲು ಪ್ರಯತ್ನಿಸು. ಶಾರದ್ವತನು ಅದರ ದೊಡ್ಡ ಮೀನು. ವಿವಿಂಶತಿಯು ಸಣ್ಣ ಮೀನುಗಳ ಸಂಕುಲ. ಬೃಹದ್ಬಲನು ಅಲೆಗಳು. ಮತ್ತು ಸೌಮದತ್ತಿಯು ತಿಮಿಂಗಿಲ. ದುಃಶಾಸನನು ಭಿರುಗಾಳಿ. ಶಲ್ಯನು ಮೀನು. ಚಿತ್ರಾಯುಧಗಳ ಸುಷೇಣನು ನಾಗ. ಜಯದ್ರಥನು ಗಿರಿ. ಪುರುಮಿತ್ರನು ಗಾಧ. ದುರ್ಮರ್ಷಣನು ನೀರು. ಶಕುನಿಯು ಪ್ರಪಾತ. ಅಕ್ಷಯ ಶಸ್ತ್ರಗಳ

ಭಿರುಗಾಳಿಯಿಂದ ಮೇಲೇಳುವ ಈ ಸಮುದ್ರದಲ್ಲಿ ನೀನು ಬೀಳಲು ಆಯಾಸಗೊಂಡು ಚೇತನವನ್ನು ಕಳೆದುಕೊಳ್ಳುತ್ತೀಯೆ. ಸರ್ವ ಬಾಂಧವರನ್ನೂ ಕಳೆದುಕೊಂಡು ನೀನು ಆಗ ಪರಿತಾಪ ಪಡುತ್ತೀಯೆ. ಅಶುಚಿಯ ಮನಸ್ಸು ತ್ರಿದಿವದಿಂದ ಹೇಗೆ ಹಿಂದೆಸರಿಯುತ್ತದೆಯೋ ಹಾಗೆ ನಿನ್ನ ಮನಸ್ಸು ಭೂಮಿಯನ್ನು ಆಳಬೇಕೆನ್ನುವುದರಿಂದ ಹಿಂದೆ ಸರಿಯುತ್ತದೆ. ತಪಸ್ವಿಯಲ್ಲದವನಿಗೆ ಸ್ವರ್ಗವು ಹೇಗೋ ಹಾಗೆ ರಾಜ್ಯ ಪ್ರಶಾಸನೆಯು ನಿನಗೆ ದುರ್ಲಭವಾಗುತ್ತದೆ.”

## ಕೃಷ್ಣ-ಅರ್ಜುನರ ವಾಕ್ಯ

ತನ್ನ ವಾಕ್ಯ ಶಲಾಕೆಯಿಂದ ವಿಷಸರ್ಪದಂತಿದ್ದ ಅರ್ಜುನನನ್ನು ಪುನಃ ಪುನಃ ತಿವಿಯುತ್ತಾ ಉಲೂಕನು ಹೇಳಿದುದನ್ನೇ ಇನ್ನೊಮ್ಮೆ ಹೇಳಿದನು. ಅವನು ಮೊದಲು ಹೇಳಿದುದನ್ನು ಕೇಳಿಯೇ ಪಾಂಡವರು ತುಂಬಾ ರೋಷಿತರಾಗಿದ್ದರು. ಪುನಃ ಅದನ್ನೇ ಹೇಳಿದ ಕೈತವ್ಯನಿಂದ ಇನ್ನೂ ತುಂಬಾ ಕುಪಿತರಾದರು. ಎಲ್ಲರೂ ಎದ್ದು ನಿಂತು ತಮ್ಮ ತೋಳುಗಳನ್ನು ಬೀಸಿದರು. ವಿಷಪೂರಿತ ಸರ್ಪಗಳಂತೆ ಕೃದ್ಧರಾಗಿ ಪರಸ್ಪರರನ್ನು ವೀಕ್ಷಿಸತೊಡಗಿದರು. ಭೀಮಸೇನನು ತಲೆಯನ್ನು ಕೆಳಗೆ ಮಾಡಿಕೊಂಡು ಕೆಂಪಾಗಿದ್ದ ಕಡೆಗಣ್ಣಿನ ಓರೆನೋಟದಿಂದ ಕೇಶವನ್ನು ನೋಡಿ ವಿಷಕಾರುವ ಸರ್ಪದಂತೆ ನಿಟ್ಟುಸಿರು ಬಿಟ್ಟನು. ಕ್ರೋಧದಿಂದ ಅತಿ ಹೊಡೆತಕ್ಕೆ ಸಿಕ್ಕಿ ಆರ್ತನಾದ ವಾತಾತ್ಮಜನನ್ನು ನೋಡಿ ಕೈತವ್ಯನ

ಉತ್ಸಾಹವನ್ನು ಹೆಚ್ಚಿಸಲೋ ಎನ್ನುವಂತೆ ದಾಶಾರ್ಹನು ಅವನಿಗೆ ತಿರುಗಿ ಮಾತನಾಡಿದನು:

"ಕೈತವ್ಯ! ಶೀಘ್ರವೇ ಇಲ್ಲಿಂದ ಹೊರಟು ಸುಯೋಧನನಿಗೆ ಇದೆಲ್ಲವನ್ನೂ ಹೇಳು! ನಿನ್ನ ಮಾತನ್ನು ಕೇಳಿದ್ದಾರೆ ಮತ್ತು ಸ್ವೀಕರಿಸಿದ್ದಾರೆ. ನಿನ್ನ ಮತವೇನಿದೆಯೋ ಹಾಗೆಯೇ ಆಗಲಿ! ನನ್ನ ಈ ಮಾತುಗಳನ್ನು ಕೂಡ ಪುನಃ ಪುನಃ ಸುಯೋಧನನಿಗೆ ಹೇಳು. ದುರ್ಮತೇ! ಪುರುಷನಾಗು! ಇವೆಲ್ಲವೂ ನಾಳೆ ನಿನಗೆ ಕಾಣಿಸಿಕೊಳ್ಳುತ್ತವೆ. ಮೂಢ! ಈ ಜನಾರ್ದನನು ಯುದ್ಧಮಾಡುವುದಿಲ್ಲವೆಂದು ನೀನು ಯೋಚಿಸುತ್ತಿರುವೆ. ಪಾರ್ಥರಿಗೆ ಕೇವಲ ಸಾರಥಿ ಎಂದು ನಿನಗೆ ಭಯವಿಲ್ಲ. ಆದರೆ ಅದು ಒಂದು ಕ್ಷಣವೂ ಹಾಗಿರುವುದಿಲ್ಲ. ಕ್ರೋಧದಿಂದ ಅಗ್ನಿಯು ಹುಲ್ಲಿನ ರಾಶಿಯನ್ನು ಸುಡುವ ಹಾಗೆ ನಾನು ಈ ಎಲ್ಲ ಪಾರ್ಥಿವರನ್ನೂ ಸುಟ್ಟು ಹಾಕಬಲ್ಲೆ. ಯುಧಿಷ್ಠಿರನ ನಿಯೋಗದಂತೆ ನಾನು ಯುದ್ಧಮಾಡುವಾಗ ತನ್ನನ್ನು ಚೆನ್ನಾಗಿ ತಿಳಿದುಕೊಂಡಿರುವ ಮಹಾತ್ಮ ಫಲ್ಗುನನ ಸಾರಥ್ಯವನ್ನು ಮಾಡುತ್ತೇನೆ. ನಾಳೆ ನೀನು ಮೂರು ಲೋಕಗಳಿಗೆ ಹಾರಿ ಹೋದರೂ ಭೂತಲವನ್ನು ಹೊಕ್ಕರೂ ಅಲ್ಲಿ ಎದುರಿಗೆ ಅರ್ಜುನನ ರಥವು ಕಂಡುಬರುತ್ತದೆ. ಭೀಮಸೇನನ ಗರ್ಜನೆಯು ವ್ಯರ್ಥವೆಂದು ನಿನಗನ್ನಿಸಿದರೆ ದುಃಶಾಸನನ ರಕ್ತವನ್ನು ಕುಡಿದಾಯಿತೆಂದು ತಿಳಿದುಕೋ! ರಾಜಾ

ಯುಧಿಷ್ಠಿರನಾಗಲೀ, ಪಾರ್ಥನಾಗಲೀ, ಭೀಮಸೇನನಾಗಲೀ, ಯಮಳರಾಗಲೀ ನಿನ್ನ ಪ್ರತಿಕೂಲದ ಮಾತುಗಳಿಗೆ ಗಮನ ಕೊಡುವುದಿಲ್ಲ.”

ದುರ್ಯೋಧನನ ಆ ವಾಕ್ಯವನ್ನು ಕೇಳಿ ಭರತರ್ಷಭನು ತನ್ನ ಕೆಂಪಾದ ಕಣ್ಣುಗಳಿಂದ ಕೈತವ್ಯನನ್ನು ನೋಡಿದನು. ಮಹಾಯಶ ಗುಡಾಕೇಶನು ಕೇಶವನನ್ನು ನೋಡಿ, ತನ್ನ ವಿಪುಲ ಭುಜವನ್ನು ಹಿಡಿದು ಕೈತವ್ಯನಿಗೆ ಹೇಳಿದನು:

“ತನ್ನದೇ ವೀರ್ಯವನ್ನು ಸಮಾಶ್ರಯಿಸಿ ಶತ್ರುಗಳನ್ನು ಆಹ್ವಾನಿಸುವವನನ್ನು ಮತ್ತು ಭೀತನಾಗದೇ ತನ್ನ ಶಕ್ತಿಯನ್ನು ಸಂಪೂರ್ಣಗೊಳಿಸುವವನನ್ನೇ ಪುರುಷನೆಂದು ಹೇಳುತ್ತಾರೆ. ಇತರರ ವೀರ್ಯವನ್ನು ಸಮಾಶ್ರಯಿಸಿ ಶತ್ರುಗಳನ್ನು ಆಹ್ವಾನಿಸುವ, ಕ್ಷತ್ರಬಂಧುಗಳಿಗಿಂತ ಅಶಕ್ತನಾದವನೇ ಲೋಕದಲ್ಲಿ ಪುರುಷಾಧಮ. ಇತರರ ವೀರ್ಯದ ಆಧಾರದ ಮೇಲೆ ನೀನು ಸ್ವತಃ ವೀರನೆಂದು ತಿಳಿದುಕೊಂಡಿದ್ದೀಯೆ. ಸ್ವಯಂ ಕಾಪುರುಷನಾದ ಮೂಢನು ಪರರನ್ನು ಗೆಲ್ಲಲು ಬಯಸುತ್ತಾನೆ! ನೀನು ಎಲ್ಲ ರಾಜರಲ್ಲಿ ವೃದ್ಧನಾದ, ಹಿತಬುದ್ಧಿ, ಜಿತೇಂದ್ರಿಯ, ಮಹಾಬುದ್ಧಿಯನ್ನು ಮರಣಕ್ಕೆ ದೀಕ್ಷೆಕೊಟ್ಟು ಜಂಬ ಕೊಚ್ಚಿಕೊಳ್ಳುತ್ತಿದ್ದೀಯೆ! ದುರ್ಬುದ್ಧೇ! ಕುಲಪಾಂಸನ! ನಿನ್ನ ಭಾವವು ನಮಗೆ ತಿಳಿದಿದೆ!

ನಿನಗನಿಸುತ್ತದೆ ಪಾಂಡವರು ಗಾಂಗೇಯನನ್ನು ಸಂಹರಿಸಲು ಹಿಂಜರಿಯುತ್ತಾರೆಂದು. ಆದರೆ ಯಾರ ವೀರ್ಯವನ್ನು ಸಮಾಶ್ರಯಿಸಿ ಕೊಚ್ಚಿಕೊಳ್ಳುತ್ತಿದ್ದೀಯೋ ಆ ಭೀಷ್ಮನನ್ನೇ ಮೊದಲು ಎಲ್ಲ ಧನ್ವಿಗಳೂ ಕಣ್ಣುಮುಚ್ಚಿ ತೆರೆಯುವುದರೊಳಗೆ ಕೊಲ್ಲುತ್ತೇನೆ. ಕೈತವ್ಯ! ಭರತರಲ್ಲಿಗೆ ಹೋಗಿ ಧಾರ್ತರಾಷ್ಟ್ರ ಸುಯೋಧನನಿಗೆ ಹೇಳು! ಸವ್ಯಸಾಚೀ ಅರ್ಜುನನು ಹೇಳಿದ - ರಾತ್ರಿ ಕಳೆಯಲು ವಿಧ್ವಂಸವು ನಡೆಯಲಿದೆ! ಅದೀನಸತ್ವನಾಗಿ ಅವನು ಸಂತೋಷದಿಂದ ಸತ್ಯಸಂಧನಾಗಿ ಕುರುಗಳ ಮಧ್ಯದಲ್ಲಿ ನಾನು ಪಾಂಡವರ ಮತ್ತು ಶಾಲ್ವೇಯರ ಸೇನೆಯನ್ನು ಸಂಹರಿಸುತ್ತೇನೆಂದು ಹೇಳಿದೆಯಲ್ಲ, ಅದರ ಭಾರವು ನನ್ನ ಮೇಲಿದೆ. ದ್ರೋಣನನ್ನು ಬಿಟ್ಟು ಲೋಕವನ್ನೇ ಸಂಹರಿಸುತ್ತೇನೆ. ಪಾಂಡವರ ಭಯವು ನಿನಗೆ ತಿಳಿಯದಿರಲಿ. ನಿನಗೆ ರಾಜ್ಯವು ದೊರೆತಂತೆಯೇ. ಏಕೆಂದರೆ ನೀನು ಪಾಂಡವರು ನಾಶಹೊಂದಿದ್ದಾರೆ ಎಂದು ತಿಳಿದುಕೊಂಡಿದ್ದೀಯೆ. ದರ್ಪದಿಂದ ತುಂಬಿಹೋಗಿರುವ ನೀನು ನಿನ್ನಲ್ಲಿಯೇ ನಡೆಯುತ್ತಿರುವ ಅನರ್ಥವನ್ನು ಕಾಣುತ್ತಿಲ್ಲ. ಆದುದರಿಂದ ನಿಮ್ಮೆಲ್ಲರ ಸಮಕ್ಷಮದಲ್ಲಿ ಮೊದಲು ಕುರುವೃದ್ಧನನ್ನೇ ಕೊಲ್ಲುತ್ತೇನೆ. ಸೂರ್ಯೋದಯದಲ್ಲಿ ಸೇನೆಯೊಂದಿಗೆ, ಧ್ವಜ, ರಥಗಳಿಂದ ಸತ್ಯಸಂಧನನ್ನು ರಕ್ಷಿಸು. ನಿನಗೆ ದ್ವೀಪದಂತಿರುವ ಭೀಷ್ಮನನ್ನು ರಥದಿಂದ ನಾನೇ

ಬೀಳಿಸಿ ತೋರಿಸುತ್ತೇನೆ. ನಾಳೆ ನನ್ನ ಶರಜಾಲದಿಂದ ಪಿತಾಮಹನು ಗಾಯಗೊಂಡುದುದನ್ನು ನೋಡಿದಾಗ ಸುಯೋದನನು ಜಂಬಕೊಚ್ಚಿಕೊಳ್ಳುವುದೆಂದರೆ ಏನೆನ್ನುವುದನ್ನು ತಿಳಿಯುತ್ತಾನೆ. ಸುಯೋಧನ! ಕ್ರುದ್ಧನಾದ ಭೀಮಸೇನನು ನಿನ್ನ ಭ್ರಾತಾ ಆ ದೀರ್ಘದರ್ಶಿಯಲ್ಲದ, ಅಧರ್ಮಜ್ಞ, ನಿತ್ಯವೈರೀ, ಪಾಪಬುದ್ಧಿ, ಕ್ರೂರಕರ್ಮಿ, ದುಃಶಾಸನನಿಗೆ ಸಭಾಮಧ್ಯೆ ಹೇಳಿದ ಪ್ರತಿಜ್ಞೆಯನ್ನು ಸತ್ಯಗೊಳಿಸುವುದನ್ನು ಬೇಗನೇ ನೀನು ನೋಡುತ್ತೀಯೆ. ನಿನ್ನ ಅಭಿಮಾನದ, ದರ್ಪದ, ಕ್ರೋಧದ, ಪೌರುಷದ, ನಿಷ್ಠೂರದ, ಅವಲೇಪನದ, ಆತ್ಮ ಸಂಭಾವನೆಯ, ಕ್ರೂರತೆಯ, ಅಸ್ನೇಹಭಾವದ, ಧರ್ಮವಿದ್ವೇಷಣೆಯ, ಅಧರ್ಮದ, ಅತಿವಾದದ, ವೃದ್ಧರನ್ನು ಅತಿಕ್ರಮಿಸಿದುದರ, ವಕ್ರದೃಷ್ಟಿಯ, ಮತ್ತು ಎಲ್ಲ ಅಪನಯಗಳ ತೀವ್ರ ಫಲವನ್ನು ಬೇಗನೇ ಪಡೆಯುತ್ತೀಯೆ. ಏಕೆಂದರೆ ವಾಸುದೇವನ ಸಹಾಯವಿರುವ, ಕ್ರುದ್ಧನಾದ ನನ್ನಿಂದ ಜೀವಿತವಾಗಿರುವ ಅಥವ ರಾಜ್ಯದ ಆಸೆಯನ್ನು ಯಾವ ಕಾರಣದಿಂದ ಇಟ್ಟುಕೊಂಡಿದ್ದೀಯೆ? ಭೀಷ್ಮ-ದ್ರೋಣರನ್ನು ಶಾಂತಗೊಳಿಸಿದಾಗ, ಸೂತಪುತ್ರನನ್ನು ಕೆಳಗುರುಳಿಸಿದಾಗ ನೀನು ಜೀವನದಲ್ಲಿ, ರಾಜ್ಯದಲ್ಲಿ ಮತ್ತು ಪುತ್ರರಲ್ಲಿ ನಿರಾಶನಾಗುತ್ತೀಯೆ. ಭೀಮಸೇನನಿಂದ ಹತರಾಗಿ ನಿಧನರಾದ ನಿನ್ನ ಸಹೋದರರರನ್ನು ಮತ್ತು ಪುತ್ರರನ್ನು ನೋಡಿ

ನೀನು ದುಷ್ಕೃತಗಳನ್ನು ನೆನಪಿಸಿಕೊಳ್ಳುತ್ತೀಯೆ. ಕೇಶವನು ಎರಡು ಬಾರಿ ಪ್ರತಿಜ್ಞೆಗಳನ್ನು ಮಾಡುವುದಿಲ್ಲ. ನಾನು ಸತ್ಯವನ್ನು ಹೇಳುತ್ತಿದ್ದೇನೆ. ಪ್ರತಿಜ್ಞೆಯೆಲ್ಲವೂ ಸತ್ಯವಾಗುತ್ತವೆ."

ಈ ರೀತಿ ಹೇಳಲ್ಪಟ್ಟ ಕೈತವನು ಆ ಮಾತುಗಳನ್ನು ನೆನಪಿನಲ್ಲಿಟ್ಟುಕೊಂಡು ಅನುಜ್ಞೆಯನ್ನು ಪಡೆದು ಬಂದಹಾಗೆಯೇ ಪುನಃ ಹಿಂದಿರುಗಿದನು. ಪಾಂಡವರಿಂದ ಹಿಂದಿರುಗಿ ಕೈತವ್ಯನು ಕುರುಸಂಸದಿಗೆ ಹೋಗಿ ಹೇಳಿದುದೆಲ್ಲವನ್ನೂ ಧೃತರಾಷ್ಟ್ರಜನಿಗೆ ಹೇಳಿದನು. ಕೇಶವಾರ್ಜುನರ ವಾಕ್ಯವನ್ನು ಕೇಳಿ ಭರತರ್ಷಭನು ದುಃಶಾಸನ, ಕರ್ಣ ಮತ್ತು ಶಕುನಿಯರೊಂದಿಗೆ ಮಾತನಾಡಿದನು. ರಾಜನ ಸೇನೆ ಮತ್ತು ಮಿತ್ರಸೇನೆಗಳು ಬೆಳಗಾಗುವುದರೊಳಗೆ ಸಿದ್ಧರಾಗಿ ನಿಲ್ಲಬೇಕೆಂದು ಆಜ್ಞಾಪಿಸಿದನು. ಆಗ ಕರ್ಣನ ಆಜ್ಞೆಯಂತೆ ದೂತರು ರಥದಲ್ಲಿ, ಒಂಟೆಗಳ ಮೇಲೆ, ಮತ್ತು ಮಹಾವೇಗದ ಕುದುರೆಗಳ ಮೇಲೆ ಕುಳಿತು ಬೇಗನೆ ಸಂಪೂರ್ಣ ಸೇನೆಯನ್ನು ಸುತ್ತುವರೆದು ರಾಜರಿಗೆ "ಬೆಳಗಾಗುವುದರೊಳಗೆ ಸೇನೆಗಳನ್ನು ಕೂಡಿಸಿ!" ಎಂದು ಕರ್ಣನ ಆಜ್ಞೆಗಳನ್ನಿತ್ತರು.

## ಯುಧಿಷ್ಠಿರನು ಸೇನಾನಾಯಕತ್ವಗಳನ್ನು ನೀಡಿದುದು

ಉಲೂಕನ ಮಾತನ್ನು ಕೇಳಿ ಕುಂತೀಪುತ್ರ ಯುಧಿಷ್ಠಿರನು ಧೃಷ್ಟದ್ಯುಮ್ನನ ನಾಯಕತ್ವದಲ್ಲಿದ್ದ ಸೇನೆಯನ್ನು ಹೊರಡಿಸಿದನು. ಪದಾತಿಗಳಿಂದ, ಆನೆಗಳಿಂದ, ರಥಗಳಿಂದ, ಅಶ್ವವೃಂದಗಳಿಂದ

ಕೂಡಿದ ಚತುರ್ವಿಧ ಬಲವು ಪೃಥ್ವಿಯನ್ನೇ ನಡುಗಿಸುವಂತೆ ಭಯಂಕರವಾಗಿತ್ತು. ಭೀಮಸೇನನಿಂದ, ಅರ್ಜುನನಿಂದ ಮತ್ತು ಮಹಾರಥಿಗಳಿಂದ ರಕ್ಷಿತವಾದ ಧೃಷ್ಟದ್ಯುಮ್ನನ ವಶದಲ್ಲಿದ್ದ ಆ ಸೇನೆಯು ತಿಮಿಂಗಿಲಗಳಿಂದ ತುಂಬಿದ ಸಾಗರದಂತೆ ಅಸಾಧ್ಯವಾಗಿತ್ತು. ಅದರ ಮುಂದೆ ಮಹೇಷ್ವಾಸ, ಯುದ್ಧದುರ್ಮದ, ದ್ರೋಣನನ್ನು ಅರಸುತ್ತಿರುವ ಪಾಂಚಾಲ ಧೃಷ್ಟದ್ಯುಮ್ನನು ಸೇನೆಯನ್ನು ಕರೆದುಕೊಂಡು ಹೋಗುತ್ತಿದ್ದನು. ಯಥಾಬಲವಾಗಿ, ಉತ್ಸಾಹವಿದ್ದಂತೆ ರಥಿಗಳನ್ನು ಸೂಚಿಸಲಾಯಿತು: ಸೂತಪುತ್ರನಿಗೆ ಅರ್ಜುನ, ದುರ್ಯೋಧನನಿಗೆ ಭೀಮ, ಅಶ್ವತ್ಥಾಮನಿಗೆ ನಕುಲ, ಕೃತವರ್ಮನಿಗೆ ಶೈಬ್ಯ, ಸೈಂಧವನಿಗೆ ವಾರ್ಷ್ಣೇಯ ಯುಯುಧಾನನನ್ನು ಇಡಲಾಯಿತು. ಶಿಖಂಡಿಯನ್ನು ಪ್ರಮುಖವಾಗಿ ಭೀಷ್ಮನಿಗೆ, ಸಹದೇವನನ್ನು ಶಕುನಿಗೆ, ಚೇಕಿತಾನನನ್ನು ಶಲನಿಗೆ, ಧೃಷ್ಟಕೇತುವನ್ನು ಶಲ್ಯನಿಗೆ, ಗೌತಮನಿಗೆ ಉತ್ತಮೌಜಸನನ್ನು, ಮತ್ತು ಐವರು ದ್ರೌಪದೇಯರನ್ನು ತ್ರಿಗರ್ತರಿಗೆ ಇಡಲಾಯಿತು. ಸೌಭದ್ರನನ್ನು ವೃಷಸೇನನಿಗೆ ಮತ್ತು ಉಳಿದ ಮಹೀಕ್ಷಿತರಿಗೆ ಇರಿಸಲಾಯಿತು. ಏಕೆಂದರೆ ಅವನನ್ನು ಪಾರ್ಥನಿಗಿಂತಲೂ ಸಮರ್ಥನೆಂದು ತಿಳಿಯಲಾಗಿತ್ತು. ಈ ರೀತಿ ಯೋಧರನ್ನು ಪ್ರತ್ಯೇಕವಾಗಿ ಅಥವಾ ಒಟ್ಟಿಗೆ ವಿಭಜಿಸಿ ಮಹೇಷ್ವಾಸ ಜ್ವಾಲವರ್ಣಿಯು ದ್ರೋಣನನ್ನು ತನ್ನ ಪಾಲಿಗೆ ಇರಿಸಿಕೊಂಡನು. ಆಗ ಮಹೇಷ್ವಾಸ ಸೇನಾಪತಿ ಮೇಧಾವೀ ಧೃಷ್ಟದ್ಯುಮ್ನನು ವಿಧಿವತ್ತಾಗಿ ವ್ಯೂಹವನ್ನು ರಚಿಸಿ ಯುದ್ಧಕ್ಕೆ ಧೃತಮನಸ್ಕನಾಗಿ ಯಥಾವತ್ತಾಗಿ

ಪಾಂಡವರ ಸೇನೆಯನ್ನು ಆಯೋಜಿಸಿ ಪಾಂಡುಪುತ್ರರ ಜಯಕ್ಕಾಗಿ ರಣವನ್ನು ಸಿದ್ಧಗೊಳಿಸಿ ನಿಂತನು.

## ಕೌರವ ಸೇನೆಯಲ್ಲಿರುವ ರಥಾತಿರಥಿಗಳ ವರ್ಣನೆ

ಸೇನಾಪತ್ಯವನ್ನು ಪಡೆದು ಶಾಂತನವ ಭೀಷ್ಮನು ಸಂತೋಷದಿಂದ ದುರ್ಯೋಧನನಿಗೆ ಈ ಮಾತುಗಳನ್ನಾಡಿದನು:

> "ಸೇನಾನಿ ಶಕ್ತಿಪಾಣಿ ಕುಮಾರನನ್ನು ನಮಸ್ಕರಿಸಿ ನಾನು ಇಂದು ಸೇನಾಪತಿಯಾಗುತ್ತೇನೆನ್ನುವುದರಲ್ಲಿ ಸಂಶಯವಿಲ್ಲ. ಸೇನಾಕರ್ಮಗಳನ್ನೂ ವಿವಿಧ ವ್ಯೂಹಗಳನ್ನೂ, ಭೃತ್ಯರ ಮತ್ತು ಭೃತ್ಯರಲ್ಲದವರಿಂದ ಮಾಡಿಸಬೇಕಾದ ಕೆಲಸಗಳನ್ನೂ ಕೂಡ ನಾನು ತಿಳಿದುಕೊಂಡಿದ್ದೇನೆ. ಯಾತ್ರಾಯಾನಗಳಲ್ಲಿ, ಯುದ್ಧಗಳಲ್ಲಿ, ಲಬ್ಧಪ್ರಶಮನಗಳಲ್ಲಿ ಬೃಹಸ್ಪತಿಯು ತಿಳಿದಂತೆ ಚೆನ್ನಾಗಿ ತಿಳಿದುಕೊಂಡಿದ್ದೇನೆ. ದೇವಗಂಧರ್ವಮಾನುಷರ ಮಹಾರಂಭಗೊಳ್ಳುವ ವ್ಯೂಹಗಳನ್ನೂ ನಾನು ಭೇದಿಸಬಲ್ಲೆ. ಪಾಂಡವರ ಮೇಲಿರುವ ನಿನ್ನ ಉದ್ವೇಗವನ್ನು ನಾನು ಬಿಡಿಸುತ್ತೇನೆ. ಶಾಸ್ತ್ರಗಳಲ್ಲಿ ಹೇಳಿರುವಂತೆ ನಾನು ತತ್ವದಿಂದ ಹೋರಾಡುತ್ತೇನೆ. ನಿನ್ನ ವಾಹಿನಿಯನ್ನು ಪಾಲಿಸುತ್ತೇನೆ. ರಾಜನ್! ನಿನ್ನ ಮನಸ್ಸಿನ ಜ್ವರವನ್ನು ತೆಗೆದು ಹಾಕು."

ದುರ್ಯೋಧನನು ಹೇಳಿದನು:

> "ಗಾಂಗೇಯ! ನನಗೆ ದೇವಾಸುರರೇ ಇರಲಿ ಸಮಸ್ತರಲ್ಲಿ

ಭಯವೆನ್ನುವುದಿಲ್ಲ. ನಿನಗೆ ಸತ್ಯವನ್ನು ಹೇಳುತ್ತಿದ್ದೇನೆ. ದುರ್ಧರ್ಷನಾದ ನೀನು ಸೇನಾಪತ್ಯವನ್ನು ವಹಿಸಿರಲು ಮತ್ತು ಪುರುಷವ್ಯಾಘ್ರ ದ್ರೋಣನು ಇಷ್ಟಪಟ್ಟು ಯುದ್ಧಕ್ಕೆ ನಿಂತಿರಲು ಇನ್ನೇನು? ನೀವಿಬ್ಬರೂ ಪುರುಷಾಗ್ರರು ನಿಂತಿರುವಾಗ ನನಗೆ ವಿಜಯವು ದುರ್ಲಭವೇ ಅಲ್ಲ. ದೇವರಾಜ್ಯವೂ ಕೂಡ ನಿಶ್ಚಯಿಸಿದ್ದೇ. ಶತ್ರುಗಳಲ್ಲಿರುವ ಮತ್ತು ನಮ್ಮಲ್ಲಿ ಒಟ್ಟು ಎಷ್ಟು ಮಂದಿ ರಥರು ಮತ್ತು ಅತಿರಥರಿದ್ದಾರೆ ಎನ್ನುವುದನ್ನು ತಿಳಿಯಲು ಬಯಸುತ್ತೇನೆ. ಏಕೆಂದರ ಪಿತಾಮಹನು ಶತ್ರುಗಳ ಮತ್ತು ನಮ್ಮ ಕುರಿತು ಚೆನ್ನಾಗಿ ತಿಳಿದುಕೊಂಡಿದ್ದಾನೆ. ಈ ಎಲ್ಲ ವಸುಧಾಧಿಪರೊಂದಿಗೆ ಅದನ್ನು ಕೇಳಲು ಬಯಸುತ್ತೇನೆ."

ಭೀಷ್ಮನು ಹೇಳಿದನು:

"ಗಾಂಧಾರೇ! ನಿನ್ನ ಬಲದಲ್ಲಿರುವ ರಥರ ಸಂಖ್ಯೆಯನ್ನು, ಯಾರು ರಥರು ಮತ್ತು ಯಾರು ಅತಿರಥರು ಎನ್ನುವುದನ್ನು ಕೇಳು. ನಿನ್ನ ಸೇನೆಯಲ್ಲಿ ಸಹಸ್ರ, ಹತ್ತುಸಾವಿರ, ಹತ್ತು ಲಕ್ಷಗಟ್ಟಲೆ ರಥರಿದ್ದಾರೆ. ಅವರಲ್ಲಿ ಮುಖ್ಯರಾದವರನ್ನು ಕೇಳು. ನಿನ್ನ ಎಲ್ಲ ಸಹೋದರರೊಂದಿಗೆ ನೀನು ರಥೋದಾರರಲ್ಲಿ ಅಗ್ರನಾಗಿದ್ದೀಯೆ. ದುಃಶಾಸನನೇ ಮೊದಲಾಗಿ ಒಟ್ಟು ನೂರು ಸಹೋದರರು. ಎಲ್ಲರೂ ಪ್ರಹರಣದಲ್ಲಿ ಕುಶಲರು, ಭೇದಿಸುವುದರಲ್ಲಿ ವಿಶಾರದರು. ರಥದಲ್ಲಿ ನಿಂತು, ಆನೆಯ

ಮೇಲೆ ನಿಂತು, ಗದಾಯುದ್ಧ ಅಥವಾ ಖಡ್ಗಯುದ್ಧವನ್ನು ಮಾಡಬಲ್ಲರು. ಸಮ್ಯಂತಾರರು, ಪ್ರಹರ್ತಾರರು, ಭಾರಸಾಧನಗಳಲ್ಲಿ ಕೃತಾಸ್ತ್ರರು. ಎಲ್ಲರೂ ಅಸ್ತ್ರಗಳಲ್ಲಿ ದ್ರೋಣನ ಮತ್ತು ಶರದ್ವತ ಕೃಪನ ಶಿಷ್ಯರು. ಪಾಂಡವರಿಂದ ತಪ್ಪಿತಸ್ಥರೆಂದು ಮಾಡಲ್ಪಟ್ಟ ಈ ಮನಸ್ವೀ ಧಾರ್ತರಾಷ್ಟ್ರರು ಯುದ್ಧದುರ್ಮದರಾದ ಪಾಂಚಾಲರನ್ನು ರಣದಲ್ಲಿ ಸಂಹರಿಸುತ್ತಾರೆ. ನಂತರ ನಿನ್ನ ಸೇನಾಪತಿಯಾದ ನಾನಿದ್ದೇನೆ. ನಾನು ಪಾಂಡವರನ್ನು ಪುಡಿಮಾಡಿ ಶತ್ರುಗಳನ್ನು ವಿಧ್ವಂಸ ಮಾಡುತ್ತೇನೆ. ನನ್ನದೇ ಗುಣಗಳನ್ನು ಹೊಗಳಿಕೊಳ್ಳುವುದು ಸರಿಯಲ್ಲ. ನಾನು ನಿನಗೆ ಗೊತ್ತು. ಪ್ರಹಾರ ಮಾಡುವವರಲ್ಲಿ ಶ್ರೇಷ್ಠನಾದ ಭೋಜ ಕೃತವರ್ಮನು ಅತಿರಥ. ರಣದಲ್ಲಿ ನಿನ್ನ ಉದ್ದೇಶವನ್ನು ಸಿದ್ಧಿಗೊಳಿಸುತ್ತಾನೆ ಎನ್ನುವುದರಲ್ಲಿ ಸಂಶಯವಿಲ್ಲ. ಅಸ್ತ್ರವಿದರಿಂದ ಅನಾಧೃಷನಾದ, ಅತಿ ದೂರದವರೆಗೆ ಆಯುಧಗಳನ್ನು ಎಸೆಯಬಲ್ಲ, ದೃಢಾಯುಧನಾದ ಅವನು ಮಹೇಂದ್ರನು ದಾನವರನ್ನು ಹೇಗೋ ಹಾಗೆ ನಿನ್ನ ರಿಪುಗಳನ್ನು ಸಂಹರಿಸುತ್ತಾನೆ. ಮಹೇಷ್ವಾಸ ಮದ್ರರಾಜ ಶಲ್ಯನು ನನ್ನ ಅಭಿಪ್ರಾಯದಲ್ಲಿ ಅತಿರಥ. ಪ್ರತಿಯೊಂದು ರಣದಲ್ಲಿಯೂ ನಿತ್ಯವೂ ವಾಸುದೇವನೊಂದಿಗೆ ಸ್ಪರ್ಧಿಸುತ್ತಾನೆ. ತಂಗಿಯ ಮಕ್ಕಳನ್ನು ತೊರೆದು ರಥಸತ್ತಮ ಶಲ್ಯನು ನಿನ್ನವನಾಗಿದ್ದಾನೆ. ಇವನು

ಸಂಗ್ರಾಮದಲ್ಲಿ ಚಕ್ರ-ಗದಾಧರ ಕೃಷ್ಣನನ್ನು ಎದುರಿಸುತ್ತಾನೆ. ಅವನು ಸಾಗರದ ಅಲೆಗಳಂತೆ ವೇಗವಾಗಿ ಬಾಣಗಳನ್ನು ಪ್ರಯೋಗಿಸಿ ಶತ್ರುಗಳನ್ನು ಹೂಳುತ್ತಾನೆ. ಕೃತಾಸ್ತ್ರರಾದ ಭೂರಿಶ್ರವರೂ ನಿನ್ನ ಹಿತದಲ್ಲಿರುವ ಸುಹೃದಯಿಗಳು. ಮಹೇಷ್ವಾಸ ಸೌಮದತ್ತಿಯು ರಥಯೂಥಪರಲ್ಲಿ ಯೂಥಪನು. ಅಮಿತ್ರರ ಮಹಾ ಬಲಕ್ಷಯವನ್ನು ಮಾಡುತ್ತಾನೆ. ನನ್ನ ಪ್ರಕಾರ ಸಿಂಧುರಾಜನು ದ್ವಿಗುಣ ರಥ. ಆ ರಥಸತ್ತಮನು ಸಮರದಲ್ಲಿ ವಿಕ್ರಾಂತನಾಗಿ ಹೋರಾಡುತ್ತಾನೆ. ಹಿಂದೆ ದ್ರೌಪದೀಹರಣದಲ್ಲಿ ಪಾಂಡವರಿಂದ ಕಷ್ಟಕ್ಕೊಳಗಾಗಿದ್ದನು. ಆ ಪರಿಕ್ಲೇಶವನ್ನು ನೆನಪಿಸಿಕೊಂಡು ಆ ಪರವೀರಹನು ಯುದ್ಧ ಮಾಡುತ್ತಾನೆ. ಆಗ ಇವನೇ ದಾರುಣ ತಪಸ್ಸನ್ನು ಆಚರಿಸಿ ಯುದ್ಧದಲ್ಲಿ ಪಾಂಡವರನ್ನು ಎದುರಿಸುವ ದುರ್ಲಭ ವರವನ್ನು ಪಡೆದಿದ್ದಾನೆ. ಈ ರಥಶಾರ್ದೂಲನು ಆ ವೈರವನ್ನು ನೆನಪಿಸಿಕೊಂಡು ತ್ಯಜಿಸಲು ಕಷ್ಟವಾದ ಪ್ರಾಣವನ್ನು ತೊರೆದು ರಣದಲ್ಲಿ ಪಾಂಡವರೊಂದಿಗೆ ಹೋರಾಡುತ್ತಾನೆ.

ನನ್ನ ಅಭಿಪ್ರಾಯದಲ್ಲಿ ಕಾಂಬೋಜ ಸುದಕ್ಷಿಣನು ಒಬ್ಬ ರಥನಿಗೆ ಸಮ. ನಿನ್ನ ಉದ್ದೇಶ ಸಿದ್ಧಿಯನ್ನು ಬಯಸಿ ಅವನು ಸಮರದಲ್ಲಿ ಶತ್ರುಗಳೊಡನೆ ಹೋರಾಡುತ್ತಾನೆ. ಯುದ್ಧದಲ್ಲಿ ನಿನಗಾಗಿ ಹೋರಾಡುವ ಇಂದ್ರನಂತಿರುವ ಈ ರಥಸಿಂಹನ ಪರಾಕ್ರಮವನ್ನು ಕುರುಗಳು ನೋಡುತ್ತಾರೆ.

ತಿಗ್ಮವೇಗಪ್ರಹಾರಿಗಳಾದ ಕಾಂಬೋಜರ ರಥಸೇನೆಯು ಕೀಟಗಳ ಗುಂಪಿನಂತೆ ಬಂದು ಮುತ್ತುತ್ತವೆ. ಮಾಹಿಷ್ಮತೀವಾಸಿ, ನೀಲಿ ಕವಚವನ್ನು ತೊಡುವ ನೀಲನು ನಿನ್ನ ರಥರಲ್ಲಿ ಒಬ್ಬ. ಅವನು ಸೇನೆಯೊಂದಿಗೆ ಶತ್ರುಗಳೊಂದಿಗೆ ಕಾದಾಡುತ್ತಾನೆ. ಹಿಂದೆ ಸಹದೇವನೊಂದಿಗೆ ವೈರವನ್ನು ಕಟ್ಟಿಕೊಂಡಿದ್ದ ಆ ಪಾರ್ಥಿವನು ನಿನಗಾಗಿ ಸತತವೂ ಹೋರಾಡುತ್ತಾನೆ. ಅವಂತಿಯ ವಿಂದಾನುವಿಂದರು ಇಬ್ಬರೂ ಕೂಡಿ ರಥಸತ್ತಮರು. ಸಮರದಲ್ಲಿ ಇಬ್ಬರೂ ಪಳಗಿದವರು ಮತ್ತು ದೃಢವೀರ್ಯಪರಾಕ್ರಮಿಗಳು. ಇವರಿಬ್ಬರು ಪುರುಷವ್ಯಾಘ್ರರೂ ನಿನ್ನ ರಿಪುಸೇನೆಯನ್ನು ಭುಜಗಳಿಂದ ಪ್ರಯೋಗಿಸುವ ಗದೆ, ಪ್ರಾಸ, ಖಡ್ಗ, ನಾರಾಚ, ತೋಮರಗಳಿಂದ ಸುಟ್ಟು ಬಿಡುತ್ತಾರೆ. ಹಿಂಡಿನಲ್ಲಿ ಆಡುವ ಆನೆಗಳಂತೆ ಯುದ್ಧೋತ್ಸುಕರಾಗಿ ಸೇನೆಯಮಧ್ಯದಲ್ಲಿ ಇವರಿಬ್ಬರೂ ಯಮನಂತೆ ಸಂಚರಿಸುತ್ತಿರುತ್ತಾರೆ. ನನ್ನ ಅಭಿಪ್ರಾಯದಲ್ಲಿ ರಥರೆಂದೆನಿಸಿಕೊಂಡ ಐವರು ತ್ರಿಗರ್ತ ಸಹೋದರರು ಅಂದು ವಿರಾಟನಗರದಲ್ಲಿ ಪಾರ್ಥನೊಂದಿಗೆ ವೈರ ಕಟ್ಟಿಕೊಂಡರು. ಗಂಗೆಯಲ್ಲಿ ಅಲೆಗಳನ್ನು ಅನುಸರಿಸಿ ಹೋಗುವ ಮೊಸಳೆಗಳಂತೆ ಅವರು ಯುದ್ಧದಲ್ಲಿ ಪಾರ್ಥರ ಸೇನೆಯನ್ನು ವಿಕ್ಷೋಭಗೊಳಿಸುತ್ತಾರೆ. ಸತ್ಯರಥನ ನಾಯಕತ್ವದಲ್ಲಿರುವ ಈ ಐವರು ರಥರು ಹಿಂದೆ ದಿಕ್ಕುಗಳನ್ನು

ಗೆಲ್ಲುವ ಸಮಯದಲ್ಲಿ ಭೀಮಸೇನಾನುಜ ಶ್ವೇತವಾಹನ ಪಾಂಡವನು ಅವರಿಗೆ ಮಾಡಿದುದನ್ನು ಸ್ಮರಿಸಿಕೊಂಡು ಸಮರದಲ್ಲಿ ಯುದ್ಧಮಾಡುತ್ತಾರೆ. ಕ್ಷತ್ರಿಯರ ಧುರಂಧರರಾದ ಅವರು ಪಾರ್ಥರ ಮಹಾರಥಿಗಳನ್ನು ಎದುರಿಸಿ ಅವರಲ್ಲಿರುವ ಶೇಷ್ಠ ಶ್ರೇಷ್ಠರಾದ ಮಹೇಷ್ವಾಸರನ್ನು ಕೊಲ್ಲುತ್ತಾರೆ. ನಿನ್ನ ಮಗ ಲಕ್ಷ್ಮಣ ಮತ್ತು ದುಃಶಾಸನನ ಮಗ ಇಬ್ಬರು ಪುರುಷವ್ಯಾಘ್ರರೂ ಸಂಗ್ರಾಮದಿಂದ ಹಿಂದೆ ಸರಿಯುವವರಲ್ಲ. ಈ ಇಬ್ಬರು ತರುಣ, ಸುಕುಮಾರ, ತರಸ್ವೀ ರಾಜಪುತ್ರರೂ ಯುದ್ಧಗಳ ವಿಶೇಷಜ್ಞರು, ಎಲ್ಲದರಲ್ಲಿ ಪ್ರಣೇತಾರರು. ನನ್ನ ಅಭಿಪ್ರಾಯದಲ್ಲಿ ಅವರಿಬ್ಬರು ರಥಸತ್ತಮರು.

ಕ್ಷತ್ರಧರ್ಮರತರಾದ ವೀರರಿಬ್ಬರೂ ಮಹಾ ಕರ್ಮಗಳನ್ನು ಮಾಡುತ್ತಾರೆ. ನರರ್ಷಭ ದಂಡಧಾರನು ಏಕ ರಥ. ತನ್ನ ಸೇನೆಯಿಂದ ಪಾಲಿತನಾದ ಅವನು ಸಮರವನ್ನು ಸೇರಿ ಯುದ್ಧವನ್ನು ಮಾಡುತ್ತಾನೆ. ಕೋಸಲ ರಾಜ ಬೃಹದ್ಬಲನು ರಥಸತ್ತಮ. ಆ ದೃಢವೇಗಪರಾಕ್ರಮಿಯು ರಥನೆಂದು ನನಗನಿಸುತ್ತದೆ. ಈ ಉಗ್ರಾಯುಧ, ಮಹೇಷ್ವಾಸ, ಧಾರ್ತರಾಷ್ಟ್ರಹಿತರತನು ತನ್ನ ಸೇನೆಯನ್ನು ಹರ್ಷಗೊಳಿಸುತ್ತಾ ಸಂಗ್ರಾಮದಲ್ಲಿ ಹೋರಾಡುತ್ತಾನೆ.

ರಥಯೂಥಪಯೂಥಪನಾದ ಶಾರದ್ವತ ಕೃಪನು ಪ್ರಿಯ ಪ್ರಾಣವನ್ನು ಪರಿತ್ಯಜಿಸಿ ನಿನ್ನ ಶತ್ರುಗಳನ್ನು ಸುಟ್ಟುಬಿಡುತ್ತಾನೆ.

ಆ ಮಹರ್ಷಿ ಆಚಾರ್ಯ ಅಜೇಯನು ಕಾರ್ತಿಕೇಯನಂತೆ ಶರಸ್ತಂಭದಲ್ಲಿ ಶರದ್ವತ ಗೌತಮನಲ್ಲಿ ಜನಿಸಿದನು. ಇವನು ಸಮರದಲ್ಲಿ ಅಗ್ನಿಯಂತೆ ಸಂಚರಿಸಿ ವಿವಿಧ ಆಯುಧಗಳಿಂದ ಕೂಡಿದ ಬಹುವಿಧದ ಸೇನೆಗಳನ್ನು ಧ್ವಂಸಗೊಳಿಸುತ್ತಾನೆ.

ನಿನ್ನ ಸೋದರಮಾವ ಶಕುನಿಯು ಏಕರಥ. ಅವನು ಪಾಂಡವರೊಂದಿಗಿನ ವೈರವನ್ನು ಮುಂದಿಟ್ಟುಕೊಂಡು ಯುದ್ಧಮಾಡುತ್ತಾನೆ ಎನ್ನುವುದರಲ್ಲಿ ಸಂಶಯವಿಲ್ಲ. ಇವನ ಸೇನೆಗಳು ಗೆಲ್ಲಲಸಾಧ್ಯವಾದವುಗಳು. ಸಮರದಲ್ಲಿ ಹಿಂಜರಿಯದವುಗಳು. ವಿಕೃತಾಯುಧಗಳನ್ನು ಹೊಂದಿ ಅವು ವೇಗದಲ್ಲಿ ವಾಯುವೇಗಕ್ಕೆ ಸಮನಾದವುಗಳು. ದ್ರೋಣಪುತ್ರನು ಮಹೇಷ್ವಾಸ, ಸರ್ವ ಧನ್ವಿಗಳನ್ನು ಮೀರಿಸಿದವನು. ಸಮರದಲ್ಲಿ ಚಿತ್ರಯೋಧೀ. ದೃಢಾಸ್ತ್ರ ಮತ್ತು ಮಹಾರಥ. ಗಾಂಡೀವಧನುಸ್ಸನು ಹಿಡಿದವನಂತೆ ಇವನ ಧನುಸ್ಸಿನಿಂದ ಹೊರಟ ಬಾಣಗಳೂ ಕೂಡ ಒಂದಕ್ಕೊಂದು ತಾಗಿ ಒಂದೇ ಸಾಲಿನಲ್ಲಿ ಸಾಗುತ್ತವೆ. ಈ ಮಹಾಯಶನು ಇಚ್ಛಿಸಿದರೆ ಮೂರು ಲೋಕಗಳನ್ನೂ ಸುಡಬಲ್ಲವನಾದರೂ ಈ ವೀರನನ್ನು ರಥಸತ್ತಮರ ಲೆಖ್ಕಕ್ಕೆ ಸೇರಿಸಲು ಬರುವುದಿಲ್ಲ. ಆಶ್ರಮವಾಸಿಯಾಗಿದ್ದಾಗ ಇವನು ಸಾಕಷ್ಟು ಕ್ರೋಧ ಮತ್ತು ತೇಜಸ್ಸುಗಳನ್ನು ಬೆಳೆಸಿಕೊಂಡಿದ್ದಾನೆ. ದ್ರೋಣನಿಂದ ಅನುಗೃಹೀತನಾಗಿ ಈ ಉದಾರಧಿಯು ದಿವ್ಯಾಸ್ತ್ರಗಳನ್ನು

ಪಡೆದಿದ್ದಾನೆ. ಇವನಲ್ಲಿ ಒಂದೇ ಒಂದು ಮಹಾ ದೋಷವಿರುವ ಕಾರಣದಿಂದ ಅವನು ರಥ ಅಥವಾ ಅತಿರಥನೆಂದು ನನಗನಿಸುವುದಿಲ್ಲ. ಜೀವವು ಅವನಿಗೆ ಅತ್ಯಂತ ಪ್ರಿಯವಾದುದು. ಆ ದ್ವಿಜನು ಸದಾ ಬದುಕಿರಲು ಬಯಸುತ್ತಾನೆ. ಎರಡೂ ಸೇನೆಗಳಲ್ಲಿ ಅವನ ಸದೃಶರಾದವರು ಯಾರೂ ಇಲ್ಲ. ಇವನೊಬ್ಬನೇ ರಥದಲ್ಲಿ ದೇವತೆಗಳ ಸೇನೆಯನ್ನೂ ಸದೆಬಡಿಯ ಬಲ್ಲನು. ಈ ಸುಂದರನು ಕೈ ಚಪ್ಪಾಳೆಯ ಘೋಷದಿಂದ ಪರ್ವತಗಳನ್ನೂ ಸ್ಫೋಟಿಸಬಲ್ಲನು. ಅಸಂಖ್ಯ ಗುಣಗಳುಳ್ಳ ಈ ದಾರುಣದ್ಯುತಿ, ಪ್ರಹರ್ತ ವೀರನು ದಂಡಪಾಣಿ ಕಾಲನಂತೆ ಸಹಿಸಲಸಾಧ್ಯನಾಗಿ ಸುತ್ತಾಡುತ್ತಾನೆ. ಕ್ರೋಧದಲ್ಲಿ ಯುಗಾಂತದ ಅಗ್ನಿಯ ಸಮನಾದ ಈ ಸಿಂಹಗ್ರೀವ ಮಹಾಮತಿಯು ಯುದ್ಧದ ಬೆನ್ನು ಮುರಿಯುತ್ತಾನೆ ಎನ್ನುವುದರಲ್ಲಿ ಸಂಶಯವಿಲ್ಲ. ಇವನ ತಂದೆ, ವೃದ್ಧನಾದರೂ ಯುವಕರಿಗಿಂತ ಶ್ರೇಷ್ಠನಾಗಿರುವ ಮಹಾತೇಜಸ್ವಿಯು ರಣದಲ್ಲಿ ಮಹಾಕಾರ್ಯಗಳನ್ನು ಎಸಗುತ್ತಾನೆ ಎನ್ನುವುದರಲ್ಲಿ ನನಗೆ ಸಂಶಯವಿಲ್ಲ. ಅಸ್ತ್ರವೇಗಗಳ ಗಾಳಿಯಿಂದ ಉರಿಸಲ್ಪಟ್ಟು, ಒಣ ಕಟ್ಟಿಗೆಯಂತಿರುವ ಸೇನೆಯಿಂದ ಮೇಲೆದ್ದ ಬೆಂಕಿಯಿಂದ ಜಯದಲ್ಲಿ ಧೃತನಾಗಿರುವ ಇವನು ಪಾಂಡುಪುತ್ರರ ಸೇನೆಯನ್ನು ಸುಟ್ಟುಹಾಕುತ್ತಾನೆ. ರಥಯೂಥಪಯೂಥರ

ಯೂಥಪನಾಗಿರುವ ಆ ನರಷರ್ಷಭ ಭರದ್ವಾಜಾತ್ಮಜನು ನಿನ್ನ ಹಿತದಲ್ಲಿ ತೀವ್ರ ಕರ್ಮಗಳನ್ನು ಮಾಡುತ್ತಾನೆ. ಮೂರ್ಧಾಭಿಷಿಕ್ತರಾದ ಎಲ್ಲರ ಆಚಾರ್ಯ, ಈ ಸ್ಥವಿರ ಗುರುವು ಸೃಂಜಯರನ್ನು ಕೊನೆಗೊಳಿಸುತ್ತಾನೆ. ಆದರೆ ಧನಂಜಯನು ಇವನಿಗೆ ಪ್ರಿಯನಾದವನು. ತನ್ನ ಆಚಾರ್ಯತ್ವದ ಗುಣಗಳಿಂದ ಗೆದ್ದ ಈ ದೀಪವನ್ನು ನೆನಪಿನಲ್ಲಿಟ್ಟುಕೊಂಡು ಈ ಮಹೇಷ್ವಾಸನು ಅಕ್ಲಿಷ್ಟಕಾರಿ ಪಾರ್ಥನನ್ನು ಕೊಲ್ಲುವುದಿಲ್ಲ. ಭಾರದ್ವಾಜನು ಯಾವಾಗಲೂ ವೀರ ಪಾರ್ಥನ ಗುಣಗಳನ್ನು ವಿಸ್ತರಿಸಿ ಹೊಗಳುತ್ತಾನೆ. ತನ್ನ ಮಗನಿಗಿಂತಲೂ ಹೆಚ್ಚಾಗಿ ಇವನನ್ನು ಕಾಣುತ್ತಾನೆ. ಈ ಪ್ರತಾಪವಂತನು ಒಂದೇ ರಥದಲ್ಲಿ ದಿವ್ಯಾಸ್ತ್ರಗಳಿಂದ ರಣದಲ್ಲಿ ಒಂದಾಗಿ ಬಂದರೂ ದೇವ-ಗಂಧರ್ವ-ದಾನವರನ್ನು ಸಂಹರಿಸಬಲ್ಲನು. ರಾಜಶಾರ್ದೂಲ ನಿನ್ನ ಮಹಾರಥಿ ಪೌರವನು, ಪರವೀರರ ರಥಗಳನ್ನು ಸದೆಬಡಿಯಬಲ್ಲ ರಥನೆಂದು ನನ್ನ ಮತ. ತನ್ನ ಸೇನೆಯೊಂದಿಗೆ ಶತ್ರುವಾಹಿನಿಯನ್ನು ಸುಡುವ ಅವನು ಒಣಹುಲ್ಲನ್ನು ಬೆಂಕಿಯು ಹತ್ತಿ ಸುಡುವಂತೆ ಪಾಂಚಾಲರನ್ನು ಸುಟ್ಟುಹಾಕುತ್ತಾನೆ. ಆ ಸತ್ಯವ್ರತ, ರಥವರ, ರಾಜಪುತ್ರ, ಮಹಾರಥನು ನಿನ್ನ ಶತ್ರುಬಲದಲ್ಲಿ ಕಾಲನಂತೆ ಸಂಚರಿಸುತ್ತಾನೆ. ಈ ವಿಚಿತ್ರಕವಚಾಯುಧ ಯೋಧನು

ಸಂಗ್ರಾಮದಲ್ಲಿ ನಿನ್ನ ಶತ್ರುಗಳನ್ನು ಸಂಹರಿಸುತ್ತಾ ತಿರುಗಾಡುತ್ತಾನೆ. ನಿನ್ನ ರಥದ ಮುಂದಿರುವ ಕರ್ಣಪುತ್ರ ಮಹಾರಥಿ ಬಲಶಾಲಿಗಳಲ್ಲಿ ಶ್ರೇಷ್ಠ ವೃಷಸೇನನು ನಿನ್ನ ರಿಪುಗಳ ಬಲವನ್ನು ಸುಟ್ಟುಹಾಕುತ್ತಾನೆ. ನಿನ್ನ ರಥವರ್ಯ ಮಹಾತೇಜಸ್ವಿ, ಪರವೀರಹ, ಮಾಗಧ ಜಲಸಂಧನು ಸಮರದಲ್ಲಿ ಪ್ರಾಣಗಳನ್ನು ತೆಗೆದುಕೊಳ್ಳುತ್ತಾನೆ. ಗಜಸ್ಕಂಧವಿಶಾರದನಾದ ಈ ಮಹಾಬಾಹುವು ಸಂಗ್ರಾಮದಲ್ಲಿ ರಥದ ಮೇಲೆ ಹೋರಾಡಿ ಶತ್ರುವಾಹಿನಿಯನ್ನು ಕಡಿಮೆಮಾಡುತ್ತಾನೆ. ಈ ನರರ್ಷಭನು ರಥನೆಂದು ನನ್ನ ಅಭಿಪ್ರಾಯ. ಇವನು ನಿನಗೋಸ್ಕರ ಮಹಾರಣದಲ್ಲಿ ಪ್ರಾಣಗಳನ್ನೂ ಸಹ ತೊರೆಯುತ್ತಾನೆ. ಸಂಗರದಲ್ಲಿ ಇವನು ವಿಕ್ರಾಂತಯೋಧೀ ಮತ್ತು ಚಿತ್ರಯೋಧೀ. ಇವನು ಭಯವನ್ನು ತೊರೆದು ನಿನ್ನ ಶತ್ರುಗಳೊಂದಿಗೆ ಹೋರಾಡುತ್ತಾನೆ. ಸಮರದಲ್ಲಿ ಹಿಂದೆ ಸರಿಯದ ಬಾಹ್ಲೀಕನೂ ಅತಿರಥನೇ. ನನ್ನ ಅಭಿಪ್ರಾಯದಲ್ಲಿ ಆ ಶೂರನು ಯುದ್ಧದಲ್ಲಿ ವೈವಸ್ವತನಂತೆ. ಇವನು ಸಮರವನ್ನು ಸೇರಿ, ಶತ್ರುಗಳನ್ನು ರಣದಲ್ಲಿ ಕೊಲ್ಲದೇ ಸತತವಾಗಿ ಎಂದೂ ಹಿಂದಿರುಗುವುದಿಲ್ಲ. ನಿನ್ನ ಸೇನಾಪತಿ ಸತ್ಯವಾನನು ಮಹಾರಥ. ರಣದಲ್ಲಿ ಅದ್ಭುತಕರ್ಮಗಳನ್ನು ಮಾಡುತ್ತಾನೆ. ಆ ರಥನು ಪರರ ರಥವನ್ನು ಪುಡಿಮಾಡುತ್ತಾನೆ. ಇವನು ಸಮರವನ್ನು ನೋಡಿ

ಎಂದೂ ವ್ಯಥೆಪಡುವುದಿಲ್ಲ. ತನ್ನ ರಥದ ಮಾರ್ಗದಲ್ಲಿ ನಿಲ್ಲುವ ಶತ್ರುಗಳನ್ನು ಎದುರಿಸಿ ಅವರ ಮೇಲೆ ಬೀಳುತ್ತಾನೆ. ಸತ್ಪುರುಷರಿಗೆ ಉಚಿತವಾದ ವಿಕ್ರಾಂತ ಕರ್ಮಗಳನ್ನು ಮಾಡಿ ಈ ಪುರುಷೋತ್ತಮನು ನಿನಗಾಗಿ ಸುಮಹತ್ತರವದ ಯುದ್ಧವನ್ನು ಮಾಡುತ್ತಾನೆ. ರಾಕ್ಷಸೇಂದ್ರ, ಕ್ರೂರಕರ್ಮಿ, ಮಹಾಬಲಿ ಅಲಾಯುಧನು ಹಿಂದಿನ ವೈರವನ್ನು ನೆನಪಿಸಿಕೊಂಡು ಶತ್ರುಗಳನ್ನು ಸಂಹರಿಸುತ್ತಾನೆ. ಇವನು ರಾಕ್ಷಸ ಸೇನೆಯ ಎಲ್ಲರಲ್ಲಿ ರಥಸತ್ತಮನು. ಈ ಮಾಯಾವಿಯು ದೃಢವೈರಿಯು ಸಮರದಲ್ಲಿ ಸಂಚರಿಸುತ್ತಾನೆ. ಪ್ರಾಗ್ಜ್ಯೋತಿಷಾಧಿಪ ವೀರ ಭಗದತ್ತನು ಪ್ರತಾಪವಂತನು. ಈ ಗಜಾಂಕುಶಧರಶ್ರೇಷ್ಠನು ರಥದಲ್ಲಿಯೂ ವಿಶಾರದನು. ಹಿಂದೆ ಇವನೊಂದಿಗೆ ಗಾಂಡೀವಧನ್ವಿಯು ಯುದ್ಧ ಮಾಡಿದ್ದನು. ವಿಜಯವನ್ನು ಬಯಸಿದ್ದ ಇಬ್ಬರ ನಡುವೆ ಬಹುದಿನಗಳ ಯುದ್ಧ ನಡೆದಿತ್ತು. ಆಗ ಪಾಕಶಾಸನನನ್ನು ಸಖನೆಂದು ಮನ್ನಿಸಿ ಮಹಾತ್ಮ ಪಾಂಡವನೊಂದಿಗೆ ಅವನು ಸಂಧಿ ಮಾಡಿಕೊಂಡನು. ಈ ಗಜಸ್ಕಂಧ ವಿಶಾರದನು ಐರಾವತವನ್ನೇರಿ ದೇವತೆಗಳ ರಾಜ ವಾಸವನಂತೆ ಸಂಗ್ರಾಮದಲ್ಲಿ ಯುದ್ಧ ಮಾಡುತ್ತಾನೆ.

ಅಚಲ ಮತ್ತು ವೃಷಕ ಇಬ್ಬರು ಸಹೋದರರೂ ಒಟ್ಟಿಗೇ ರಥರು. ದುರಾಧರ್ಷರು. ನಿನ್ನ ಶತ್ರುಗಳನ್ನು

ವಿಧ್ವಂಸಮಾಡುತ್ತಾರೆ. ಅವರಿಬ್ಬರು ಗಾಂಧಾರಮುಖ್ಯರೂ ಬಲವಂತರು, ನರವ್ಯಾಘ್ರರು, ದೃಢಕ್ರೋಧರು, ಪ್ರಹಾರಿಗಳು, ತರುಣರು, ದರ್ಶನೀಯರು ಮತ್ತು ಮಹಾಬಲಿಗಳು. ನಿನ್ನ ಆ ಪ್ರೀತಿಯ ಸಖ, ನಿತ್ಯವೂ ಯುದ್ಧದ ಕೂಗನ್ನು ಕೂಗುವ, ಪಾಂಡವರೊಂದಿಗೆ ಜಗಳವಾಡಲು ನಿನ್ನನ್ನು ಪ್ರೋತ್ಸಾಹಿಸುತ್ತಿರುವ, ಪೌರುಷದ ಮಾತುಗಳನ್ನು ಕೊಚ್ಚುವ, ನಿನ್ನ ಮಂತ್ರಿ, ನೇತಾ, ಬಂಧು, ಸೊಕ್ಕಿನವ, ಅತ್ಯಂತ ಉಚ್ಛೃತನಾಗಿರುವ ನೀಚ ವೈಕರ್ತನ ಕರ್ಣನು ಪೂರ್ಣ ರಥನೂ ಅಲ್ಲ, ಅತಿರಥನೂ ಅಲ್ಲ. ವಿಚೇತನನಾಗಿ ಇವನು ತನ್ನ ಸಹಜ ಕವಚವನ್ನು ಕಳೆದುಕೊಂಡ. ಸತತವೂ ಕರುಣಿಯಾಗಿರುವ ಇವನು ದಿವ್ಯ ಕುಂಡಲಗಳೆರಡನ್ನೂ ಕಳೆದುಕೊಂಡ. ರಾಮನ ಶಾಪದಿಂದ ಮತ್ತು ಬ್ರಾಹ್ಮಣನಾಡಿದಂತೆ, ಕರಣಗಳನ್ನು ಕಳೆದುಕೊಂಡಿದುದರಿಂದ ಇವನು ಅರ್ಧ ರಥನೆಂದು ನನ್ನ ಮತ. ಇವನು ಫಲ್ಗುನನನ್ನು ಎದುರಿಸಿ ಪುನಃ ಜೀವಿತನಾಗಿ ಬರಲಾರ!"

ಆಗ ಶಸ್ತ್ರಭೃತರಲ್ಲಿ ಶ್ರೇಷ್ಠನಾದ ಮಹಾಬಾಹು ದ್ರೋಣನು ಹೇಳಿದನು:

"ಇದು ಯಥಾವತ್ತಾಗಿದೆ. ಎಂದೂ ಸುಳ್ಳಾಗುವುದಿಲ್ಲ. ರಣ ರಣದಲ್ಲಿಯೂ ಈ ಅತಿಮಾನಿಯು ವಿಮುಖನಾಗಿದ್ದುದೇ

ಕಂಡುಬಂದಿದೆ. ಕರುಣಿ, ಪ್ರಮಾದೀ ಕರ್ಣನು ಅರ್ಧರಥನೆಂದು ನನ್ನ ಮತವೂ ಹೌದು.”

ಇದನ್ನು ಕೇಳಿದ ರಾಧೇಯನು ಕ್ರೋಧದಿಂದ ಕಣ್ಣುಗಳನ್ನು ದೊಡ್ಡದಾಗಿ ಮಾಡಿಕೊಂಡು ಭೀಷ್ಮನಿಗೆ ಹರಿತ ಕೊಕ್ಕೆಗಳಂತಿರುವ ಈ ಮಾತುಗಳನ್ನಾಡಿದನು:

“ಪಿತಾಮಹ! ಅನಾಗಸನಾಗಿದ್ದರೂ ನನ್ನನ್ನು ನೀನು ಪದೇ ಪದೇ ದ್ವೇಷದಿಂದಲೋ ಎನ್ನುವಂತೆ ನಿನಗಿಷ್ಟ ಬಂದಹಾಗೆ ಬಾಣಗಳಂತಿರುವ ಮಾತುಗಳಿಂದ ಚುಚ್ಚುತ್ತೀಯೆ. ಆದರೆ ದುರ್ಯೋಧನನ ಸಲುವಾಗಿ ನಾನು ಇವೆಲ್ಲವನ್ನೂ ಸಹಿಸಿಕೊಳ್ಳುತ್ತೇನೆ. ನಾನೋರ್ವ ಕಾಪುರುಷನಂತೆ ಅಶಕ್ತನೋ ಎನ್ನುವ ರೀತಿಯಲ್ಲಿ ನೀನು ಅಭಿಪ್ರಾಯಪಡುತ್ತಿದ್ದೀಯೆ! ನೀನು ನನ್ನನ್ನು ಅರ್ಧರಥನೆಂದು ತಿಳಿದುಕೊಂಡಿದ್ದೀಯೆ ಎನ್ನುವುದರಲ್ಲಿ ಸಂಶಯವೇ ಇಲ್ಲ. ನೀನು ನಿತ್ಯವೂ ಸರ್ವ ಜಗತ್ತಿನ, ಅದರಲ್ಲೂ ಕುರುಗಳ, ಅಹಿತವನ್ನೇ ಬಯಸುತ್ತೀಯೆ ಎಂದು ಹೇಳಿದರೆ ಸುಳ್ಳಾಗಲಾರದು. ಆದರೆ ರಾಜನಿಗೆ ಇದು ತಿಳಿದಿಲ್ಲ. ಏಕೆಂದರೆ ಯಾರುತಾನೇ ಸಮನಾಗಿರುವ ಎಲ್ಲರೂ ರಾಜಕರ್ಮಗಳಲ್ಲಿ ತೊಡಗಿರುವಾಗ ಈ ರೀತಿಯ ತೇಜೋವಧೆಯನ್ನು ಮಾಡಿ ಯುದ್ಧದಲ್ಲಿ ಭೇದವನ್ನು ತರುತ್ತಾರೆ? ನಿನ್ನಂತೆಯೇ ಇರುವವರಲ್ಲಿ ಗುಣ

ನಿರ್ದೇಶನವನ್ನು ಮಾಡಿ ಅಪರಾಧವೆಸಗುತ್ತಿದ್ದೀಯೆ. ವಯಸ್ಸಿನಿಂದಾಗಲೀ, ಮುಖದ ಮೇಲೆ ಮೂಡಿದ ನೆರೆಗಳಿಂದಾಳಾಗಲೀ, ವಿತ್ತದಿಂದಾಗಲೀ, ಬಂಧುಗಳಿಂದಾಗಲೀ ಕ್ಷತ್ರಿಯರ ಮಹಾರಥತ್ವವನ್ನು ಅಳೆಯಲು ಸಾಧ್ಯವಿಲ್ಲ. ಕ್ಷತ್ರಿಯನು ಬಲದಲ್ಲಿ ಶ್ರೇಷ್ಠನೆನಿಸಿಕೊಳ್ಳುತ್ತಾನೆ. ದ್ವಿಜನು ಸಲಹೆಗಳಲ್ಲಿ ಶ್ರೇಷ್ಠನೆನಿಸಿಕೊಳ್ಳುತ್ತಾನೆ. ವೈಶ್ಯರು ಧನದಲ್ಲಿ ಮತ್ತು ಶೂದ್ರರು ಅಧಿಕ ವಯಸ್ಸಿನಿಂದ ಶ್ರೇಷ್ಠರೆನಿಸಿಕೊಳ್ಳುತ್ತಾರೆ. ಕಾಮದ್ವೇಷಗಳಿಗೊಳಗಾಗಿ ಮೋಹದಿಂದ ನೀನು ನಿನಗಿಷ್ಟವಾದ ಹಾಗೆ, ನಿನ್ನ ಗ್ರಹಿಕೆಗೆ ಬಂದ ಹಾಗೆ ರಥರು ಅತಿರಥರೆಂದು ಹೇಳುತ್ತಿದ್ದೀಯೆ. ದುರ್ಯೋಧನ! ಸರಿಯಾಗಿ ನೋಡು! ನಿನಗೆ ಕೆಟ್ಟದ್ದನ್ನೇ ಮಾಡುವ ಈ ದುಷ್ಟಭಾವನೆಯ ಭೀಷ್ಮನನ್ನು ತ್ಯಜಿಸು. ಭಿನ್ನವಾದ ಸೇನೆಯನ್ನು ಪುನಃ ಜೋಡಿಸುವುದು ಕಷ್ಟವಾಗುತ್ತದೆ. ಇನ್ನು ಬೇರೆ ಬೇರೆಕಡೆಗಳಿಂದ ಬಂದಿರುವ ಸೇನೆಗಳ ಗತಿಯೇನು? ಯುದ್ಧದಲ್ಲಿ ದ್ವಂದ್ವವು ಯೋಧರಲ್ಲಿ ಹುಟ್ಟಿಕೊಂಡು ಬಿಟ್ಟಿದೆ. ವಿಶೇಷವಾಗಿ ಇವನು ನಮ್ಮ ಎದುರಿಗೇ ತೇಜೋವಧೆಯನ್ನು ಮಾಡುತ್ತಿದ್ದಾನೆ. ರಥರ ವಿಜ್ಞಾನವೆಲ್ಲಿ, ಈ ಅಲ್ಪಚೇತಸ ಭೀಷ್ಮನೆಲ್ಲಿ? ಪಾಂಡವರ ಸೇನೆಗಳನ್ನು ನಾನೊಬ್ಬನೇ ತಡೆಯುತ್ತೇನೆ. ನನ್ನ ಅಮೋಘ ಬಾಣಗಳಿಗೆ ಸಿಲುಕಿ

ಪಾಂಚಾಲರೊಂದಿಗೆ ಪಾಂಡವರು ಹುಲಿಯನ್ನು ಕಂಡ ಎತ್ತುಗಳಂತೆ ದಿಕ್ಕು ದಿಕ್ಕುಗಳಲ್ಲಿ ಓಡಿ ಹೋಗುತ್ತಾರೆ. ಯುದ್ಧವಿಮರ್ದರೆಲ್ಲಿ? ಅಥವಾ ಸಲಹೆಗಳ ಉತ್ತಮ ಮಾತುಗಳೆಲ್ಲಿ? ಮತ್ತು ಆಯಸ್ಸು ಕಳೆದ ಮಂದಾತ್ಮನಾದ ಕಾಲಮೋಹಿತನಾದ ಭೀಷ್ಮನೆಲ್ಲಿ? ಇವನು ನಿತ್ಯವೂ ಸರ್ವ ಜಗತ್ತಿನೊಂದಿಗೆ ಸ್ಪರ್ಧಿಸುತ್ತಿರುತ್ತಾನೆ. ಕಣ್ಣು ಕಾಣಿಸದೇ ಇರುವ ಇವನು ಬೇರೆ ಯಾರನ್ನೂ ಪುರುಷನೆಂದು ಮನ್ನಿಸುವುದಿಲ್ಲ. ವೃದ್ಧರನ್ನು ಕೇಳಬೇಕು ಎಂದು ಶಾಸ್ತ್ರನಿದರ್ಶನವಿರುವುದು ಸತ್ಯ. ಆದರೆ ಅತಿವೃದ್ಧರಾದವರಿಗೆ ಇದು ಅನ್ವಯಿಸುವುದಿಲ್ಲ. ಏಕೆಂದರೆ ಅವರು ಪುನಃ ಬಾಲಕರಂತಾಗುತ್ತಾರೆ ಎಂದು ನನಗನ್ನಿಸುತ್ತದೆ. ನಾನೊಬ್ಬನೇ ಪಾಂಡವರನ್ನು ಸಂಹರಿಸುತ್ತೇನೆ ಎನ್ನುವುದರಲ್ಲಿ ಸಂಶಯವಿಲ್ಲ. ಆದರೆ ಆ ಸುಯುದ್ಧದ ಯಶಸ್ಸು ಭೀಷ್ಮನಿಗೆ ಹೋಗುತ್ತದೆ. ಏಕೆಂದರೆ ಭೀಷ್ಮನನ್ನು ನೀನು ನಿನ್ನ ಸೇನಾಪತಿಯನ್ನಾಗಿ ನಿಯೋಜಿಸಿದ್ದೀಯೆ. ಹೊಗಳಿಕೆಗಳು ಸೇನಾಪತಿಗೆ ಹೋಗುತ್ತವೆಯೇ ಹೊರತು ಯೋಧರಿಗೆ ಎಂದೂ ಇಲ್ಲ. ಗಾಂಗೇಯನು ಜೀವಿತನಾಗಿರುವಾಗ ಎಂದೂ ನಾನು ಯುದ್ದಮಾಡುವುದಿಲ್ಲ! ಭೀಷ್ಮನು ಹತನಾದಾಗ ಸರ್ವ ಮಹಾರಥರೊಂದಿಗೆ ಯುದ್ಧ ಮಾಡುತ್ತೇನೆ.”

ಭೀಷ್ಮನು ಹೇಳಿದನು:

“ಸಾಗರದಂತೆ ಬಹುಭಾರವಾಗಿರುವ ಧಾರ್ತರಾಷ್ಟ್ರನ ಈ ಸಂಗ್ರಾಮವು ನನ್ನ ಮೇಲೆ ಬಿದ್ದಿದೆ. ಇದರ ಚಿಂತೆ ಬಹಳ ವರ್ಷಗಳಿಂದ ನನಗಿತ್ತು. ರೋಮಾಂಚನಗೊಳಿಸುವ ಆ ಕಾಲವು ಪ್ರಾಪ್ತವಾಗಿರುವಾಗ ಈಗ ಭೇದವನ್ನುಂಟುಮಾಡುವ ಕಾರ್ಯವು ನನ್ನಿಂದಾಗಬಾರದು. ಸೂತಜ! ಈ ಕಾರಣದಿಂದ ನೀನು ಜೀವಿಸಿದ್ದೀಯೆ. ಇಲ್ಲದಿದ್ದರೆ ನಾನು ವೃದ್ಧನಾಗಿದ್ದರೂ ನೀನು ಶಿಶುವಂತಿದ್ದರೂ ರಣಯುದ್ಧದಲ್ಲಿ ನಿನಗಿರುವ ಶ್ರದ್ಧೆಯನ್ನು ಅಡಗಿಸಿ ಜೀವಿತವನ್ನು ಪುಡಿಮಾಡುತ್ತಿದ್ದೆ. ಜಾಮದಗ್ನಿ ರಾಮನು ಬಿಟ್ಟ ಮಹಾಸ್ತ್ರಗಳು ನನ್ನನ್ನು ಅಲುಗಾಡಿಸಲಿಲ್ಲ. ಇನ್ನು ನೀನೇನು ನನಗೆ ಮಾಡುತ್ತೀಯೆ? ಆತ್ಮಬಲವನ್ನು ಹೊಗಳಿಕೊಳ್ಳುವವರನ್ನು ಸಂತರು ಮೆಚ್ಚುವುದಿಲ್ಲ. ಕುಲಪಾಂಸನ! ಕುಪಿತನಾಗಿ ನನ್ನ ಬಗ್ಗೆ ಹೇಳಿಕೊಳ್ಳುತ್ತಿದ್ದೇನೆ. ಕಾಶಿರಾಜನ ಸ್ವಯಂವರದಲ್ಲಿ ಸೇರಿದ್ದ ಪಾರ್ಥಿವ ಕ್ಷತ್ರಿಯರನ್ನು ಒಟ್ಟಿಗೇ ಒಂದೇ ರಥದಲ್ಲಿ ಸೋಲಿಸಿ ಕನ್ಯೆಯರರನ್ನು ಅಪಹರಿಸಿದ್ದೆನು. ಹಾಗೆ ಸಹಸ್ರಾರು ವಿಶಿಷ್ಟರನ್ನು ಸೈನ್ಯಗಳೊಂದಿಗೆ ಆ ರಣದಲ್ಲಿ ಪುನಃ ನಾನು ಒಬ್ಬನೇ ಹೊಡೆದೋಡಿಸಿದೆನು. ಕುರುಗಳಲ್ಲಿ ವೈರಪುರುಷನಾದ ನಿನ್ನನ್ನು ಸೇರಿ ಇವರು ಮಹಾ ವಿನಾಶಕ್ಕೆ ಉಪಸ್ಥಿತರಾಗಿದ್ದಾರೆ. ಪ್ರಯತ್ನಿಸಿ ಪುರುಷನಾಗು. ದುರ್ಮತೇ!

ಯಾರೊಂದಿಗೆ ಸ್ಪರ್ಧಿಸುತ್ತಿರುವೆಯೋ ಆ ಪಾಂಡವರೊಂದಿಗೆ ಸಮರದಲ್ಲಿ ಯುದ್ಧಮಾಡು. ನಮ್ಮ ಯುದ್ಧದಿಂದ ನೀನು ಓಡಿ ಹೋಗುವುದನ್ನೂ ನೋಡುತ್ತೇನೆ.”

## ಪಾಂಡವ ಸೇನೆಯಲ್ಲಿರುವ ರಥಾತಿರಥಿಗಳ ವರ್ಣನೆ

ಆಗ ಮಹಾಮನಸ್ವಿ ರಾಜಾ ಧಾರ್ತರಾಷ್ಟ್ರನು ಹೇಳಿದನು:

“ಗಾಂಗೇಯ! ನನ್ನನ್ನು ನೋಡು! ಏಕೆಂದರೆ ಮಹಾ ಕಾರ್ಯವನ್ನೆಸಗಬೇಕಾಗಿದೆ. ಎಲ್ಲಕ್ಕಿಂತ ಮೊದಲು ನನಗೆ ಪರಮ ಶ್ರೇಯಸ್ಕರವಾದುದನ್ನು ಯೋಚಿಸಿ. ನೀವಿಬ್ಬರೂ ನನಗೆ ಮಹಾ ಕಾರ್ಯಗಳನ್ನು ಮಾಡುತ್ತೀರಿ. ಇನ್ನು ನಾನು ಶತ್ರುಗಳ ರಥಸತ್ತಮರ, ಅವರ ಅತಿರಥರ ಮತ್ತು ರಥಯೂಥಪರ ಕುರಿತು ಕೇಳಬಯಸುತ್ತೇನೆ. ಶತ್ರುಗಳ ಬಲಾಬಲಗಳನ್ನು ಕೇಳಲು ಬಯಸುತ್ತೇನೆ. ರಾತ್ರಿ ಕಳೆದು ಬೆಳಗಾದರೆ ಯುದ್ಧ ನಡೆಯಲಿದೆ!”

ಭೀಷ್ಮನು ಹೇಳಿದನು:

“ನೃಪ! ನಾನು ಇಲ್ಲಿರುವ ರಥರನ್ನು, ಅತಿರಥರನ್ನು ಮತ್ತು ಅರ್ಧರಥರನ್ನೂ ಎಣಿಸಿದ್ದೇನೆ. ಈಗ ನಿನಗೆ ಕುತೂಹಲವಿದ್ದರೆ ಪಾಂಡವರಲ್ಲಿದ್ದವರ ಕುರಿತು, ಪಾಂಡವರ ಬಲದಲ್ಲಿರುವ ರಥರ ಎಣಿಕೆಯನ್ನು ವಸುಧಾಧಿಪರೊಂದಿಗೆ ಕೇಳು. ಸ್ವಯಂ ರಾಜಾ ಪಾಂಡವ ಕುಂತಿನಂದನನು ರಥೋದಾರನು. ಅವನು

ಸಮರದಲ್ಲಿ ಅಗ್ನಿಯಂತೆ ಸಂಚರಿಸುತ್ತಾನೆ ಎನ್ನುವುದರಲ್ಲಿ ಸಂಶಯವಿಲ್ಲ. ಭೀಮಸೇನನು ಎಂಟು ರಥರ ಗುಣಸಮ್ಮಿತನಾಗಿದ್ದಾನೆ. ಸಾವಿರ ಆನೆಗಳ ಬಲವನ್ನುಳ್ಳ ಆ ಮಾನೀ ತೇಜಸ್ವಿಯು ಮನುಷ್ಯನಲ್ಲ. ಇಬ್ಬರು ಮಾದ್ರೀಪುತ್ರರೂ ರಥರು. ಈ ಪುರುಷರ್ಷಭರಿಬ್ಬರೂ ಅಶ್ವಿನಿಯರಂತೆ ರೂಪ ಮತ್ತು ತೇಜಸ್ಸುಗಳಿಂದ ಸಮನ್ವಿತರಾಗಿದ್ದಾರೆ. ತಮ್ಮ ಕ್ಲೇಶಗಳನ್ನು ಸ್ಮರಿಸಿಕೊಳ್ಳುತ್ತಾ ಇವರು ಸೇನೆಗಳ ಮುಂಬಾಗದಲ್ಲಿ ರುದ್ರರಂತೆ ಸಂಚರಿಸುತ್ತಿರುತ್ತಾರೆ ಎನ್ನುವುದರಲ್ಲಿ ನನಗೆ ಸಂಶಯವಿಲ್ಲ. ಈ ಎಲ್ಲ ಮಹಾತ್ಮರೂ ಶಾಲಸ್ಕಂಧಗಳಂತೆ ಎತ್ತರವಾಗಿದ್ದಾರೆ. ಪ್ರಮಾಣದಲ್ಲಿ ಅವರು ಉಳಿದ ಪುರುಷರಿಗಿಂತ ಒಂದು ಅಳತೆ ಹೆಚ್ಚಿನವರು. ಎಲ್ಲಾ ಪಾಂಡುಪುತ್ರರೂ ಮಹಾಬಲರು, ಸಿಂಹಸಂಹನನರು. ಎಲ್ಲರೂ ಬ್ರಹ್ಮಚರ್ಯವನ್ನು ಪಾಲಿಸುವವರು, ತಪಸ್ವಿಗಳು ಕೂಡ. ವಿನೀತರಾಗಿದ್ದರೂ ಈ ಪುರುಷವ್ಯಾಘ್ರರು ವ್ಯಾಘ್ರದಂತೆ ಬಲೋತ್ಕಟರು. ಎಲ್ಲರೂ ವೇಗದಲ್ಲಿ, ಎಸೆಯುವುದರಲ್ಲಿ ಮತ್ತು ಹೋರಾಡುವುದರಲ್ಲಿ ಅತಿಮಾನುಷರು. ದಿಗ್ವಿಜಯದ ಸಮಯದಲ್ಲಿ ಎಲ್ಲರೂ ಮಹೀಪಾಲರನ್ನು ಗೆದ್ದವರು. ಯಾವ ಪುರುಷನೂ ಅವರ ಆಯುಧಗಳನ್ನು, ಗದೆಗಳನ್ನು ಮತ್ತು ಶರಗಳನ್ನು ಬಳಸಲಾರ. ಅವರ ಧನುಸ್ಸನ್ನೂ ಕಟ್ಟಲಾರರು. ಅವರ ಗದೆಯನ್ನು

ಎತ್ತಲಾರರು. ಬಾಣಗಳನ್ನು ತಡೆಹಿಡಿಯಲಾರರು. ಬಾಲಕರಾಗಿದ್ದಾಗ ಕೂಡ ವೇಗದಲ್ಲಿ, ಗುರಿಯಿಡುವುದರಲ್ಲಿ, ಅಪಹರಿಸಿಕೊಂಡು ಹೋಗುವುದರಲ್ಲಿ, ತಿನ್ನುವುದರಲ್ಲಿ, ಮತ್ತು ಸೆಣಸಾಡುವುದರಲ್ಲಿ ಎಲ್ಲರೂ ನಿಮಗಿಂತ ವಿಶಿಷ್ಟರಾಗಿದ್ದರು. ವ್ಯಾಘ್ರರಂತೆ ಬಲೋತ್ಕಟರಾದ ಅವರು ರಣದಲ್ಲಿ ನಿನ್ನ ಸೈನ್ಯವನ್ನು ಎದುರಿಸಿ ವಿಧ್ವಂಸಗೊಳಿಸುತ್ತಾರೆ. ಅವರನ್ನು ಎದುರಿಸುವ ಸಾಹಸ ಮಾಡಬೇಡ! ಒಬ್ಬೊಬ್ಬರನ್ನಾಗಿ ಅವರು ಸಂಗ್ರಾಮದಲ್ಲಿ ಎಲ್ಲ ಮಹೀಕ್ಷಿತರನ್ನು ಕೊಲ್ಲಬಲ್ಲರು. ರಾಜಸೂಯದಲ್ಲಿ ಏನಾಯಿತೆನ್ನುವುದನ್ನು ಪ್ರತ್ಯಕ್ಷವಾಗಿ ನೀನು ನೋಡಿದ್ದೀಯೆ. ದ್ಯೂತದಲ್ಲಿ ದ್ರೌಪದಿಗಾದ ಪರಿಕ್ಲೇಶವನ್ನು ಮತ್ತು ಚಾಳಿಸುವ ಮಾತುಗಳನ್ನು ಸ್ಮರಿಸಿಕೊಂಡು ಅವರು ಸಂಗ್ರಾಮದಲ್ಲಿ ಕಾಲರಂತೆ ಸಂಚರಿಸುತ್ತಾರೆ. ನಾರಾಯಣನ ಸಹಾಯವನ್ನು ಪಡೆದಿರುವ ಲೋಹಿತಾಕ್ಷ ಗುಡಾಕೇಶನ ಸದೃಶನಾಗಿರುವ ರಥನು ಎರಡೂ ಸೇನೆಗಳಲ್ಲಿ ಕಂಡುಬರುವುದಿಲ್ಲ. ಹಿಂದೆ ದೇವತೆಗಳಲ್ಲಿಯಾಗಲೀ, ದಾನವರಲ್ಲಿಯಾಗಲೀ, ಉರಗರಲ್ಲಿಯಾಗಲೀ, ರಾಕ್ಷಸರಲ್ಲಿಯಾಗಲೀ, ಯಕ್ಷರಲ್ಲಿಯಾಗಲೀ, ಇನ್ನು ನರರಲ್ಲೇನು ಧೀಮಂತ ಪಾರ್ಥನಂತೆ ಸಮಾಯುಕ್ತನಾಗಿರುವ ರಥನನ್ನು ಭೂತದಲ್ಲಿಯಾಗಲೀ ಅಥವಾ ಭವಿಷ್ಯದಲ್ಲಿಯಾಗಲೀ ಇರುವವರೆಂದು ನಾನು ಕೇಳಿಲ್ಲ. ವಾಸುದೇವನು ಸಾರಥಿ.

ಧನಂಜಯನು ಯೋದ್ಧ. ಗಾಂಡೀವವು ದಿವ್ಯ ಧನುಸ್ಸು. ಕುದುರೆಗಳು ಗಾಳಿಯಂತೆ ಹೋಗಬಲ್ಲವುಗಳು. ಅವನ ದಿವ್ಯ ಕವಚವು ಅಭೇದ್ಯವಾದುದು. ಎರಡು ಮಹಾ ಭತ್ತಳಿಕೆಗಳು ಅಕ್ಷಯವಾದವುಗಳು. ಅವನ ಅಸ್ತ್ರಗುಚ್ಛಗಳು ಮಹೇಂದ್ರನದು, ರುದ್ರನದು, ಕುಬೇರನದು, ಯಮನದು, ವರುಣನದು. ಅವನ ಗದೆಯು ನೋಡಲು ಉಗ್ರವಾದುದು. ಅವನಲ್ಲಿ ಮುಖ್ಯವಾಗಿ ವಜ್ರಾದಿ ನಾನಾ ಪ್ರಹರಣಗಳಿವೆ. ಒಂದೇ ರಥದಲ್ಲಿ ಸಹಸ್ರಾರು ಹಿರಣ್ಯಪುರವಾಸಿನಿ ದಾನವರನ್ನು ಸಂಹರಿಸಿದನು. ಇವನ ಸದೃಶರಾದ ರಥರು ಯಾರಿದ್ದಾರೆ? ಈ ಸಂರಂಭೀ, ಬಲವಾನ್, ಸತ್ಯವಿಕ್ರಮಿ ಮಹಾಬಾಹುವು ತನ್ನ ಸೇನೆಯನ್ನು ರಕ್ಷಿಸಿಕೊಂಡು ನಿನ್ನ ಸೇನೆಯನ್ನು ಹೊಡೆದುರುಳಿಸಬಲ್ಲನು. ಧನಂಜಯನನ್ನು ನಾನು ಅಥವಾ ಆಚಾರ್ಯನು ಎದುರಿಸಬಲ್ಲೆವು. ಎರಡೂ ಸೇನೆಗಳಲ್ಲಿ ಮೂರನೆಯವರು ಯಾರೂ ಇಲ್ಲ. ಆ ರಥಿಯು ಬಾಣಗಳ ಮಳೆಯನ್ನು ಸುರಿಸಿ ಬೇಸಿಗೆಯ ಕೊನೆಯಲ್ಲಿ ಮಹಾ ಭಿರುಗಾಳಿಯಿಂದ ಎಬ್ಬಿಸಲ್ಪಟ್ಟ ಮೋಡಗಳಂತೆ ಮೇಲೇರುತ್ತಾನೆ. ಆದರೆ ವಾಸುದೇವನ ಸಹಾಯವನ್ನು ಪಡೆದ ಕೌಂತೇಯನು ತರುಣ ಮತ್ತು ಕೌಶಲಿ. ನಾವಿಬ್ಬರೂ ವಯಸ್ಸಾದವರು, ಜೀರ್ಣರಾದವರು.”

ಭೀಷ್ಮನ ಈ ಮಾತುಗಳನ್ನು ಕೇಳಿ, ಪಾಂಡವೇಯರ ಪುರಾತನ

ಸಾಮರ್ಥ್ಯವನ್ನು ತಮ್ಮ ಕಣ್ಮುಂದೆಯೇ ನಡೆಯಿತೋ ಎನ್ನುವಂತೆ ನೆನಪಿಸಿಕೊಂಡು, ಆವೇಗ ಚಿಂತೆಗಳಿಂದ ಕೂಡಿ ರಾಜರ ಕಾಂಚನಾಂಗದಿ, ಚಂದನ ರೂಷಿತ, ತುಂಬಿದ ಬಾಹುಗಳು ಸಡಿಲವಾಗಿ ಜೋತುಬಿದ್ದವು. ಭೀಷ್ಮನು ಹೇಳಿದನು:

"ಮಹಾರಾಜ! ದ್ರೌಪದೇಯರೆಲ್ಲರೂ ಐವರು ಮಹಾರಥರು. ವೈರಾಟೀ ಉತ್ತರನೂ ಕೂಡ ಮಹಾರಥನೆಂದು ನನ್ನ ಮತ. ಅಭಿಮನ್ಯುವು ರಥಯೂಥಪಯೂಥಪನು. ಸಮರದಲ್ಲಿ ಅವನು ಪಾರ್ಥನ ಅಥವಾ ವಾಸುದೇವನ ಸಮನಾಗುತ್ತಾನೆ. ಅಸ್ತ್ರಗಳಲ್ಲಿ ಲಘುತ್ವವನ್ನು ಹೊಂದಿದ, ಚಿತ್ರಯೋಧೀ, ಆ ಮನಸ್ವೀ ದೃಢವಿಕ್ರಮಿಯು ತನ್ನ ತಂದೆಗುಂಟಾದ ಪರಿಕ್ಲೇಶಗಳನ್ನು ಸಂಸ್ಮರಿಸಿಕೊಂಡು ವಿಕ್ರಮವನ್ನು ತೋರಿಸುತ್ತಾನೆ. ಮಾಧವ ಶೂರ ಸಾತ್ಯಕಿಯು ರಥಯೂಥಪಯೂಥಪನು. ಈ ವೃಷ್ಣಿಪ್ರವೀರನು ಭಯವಿಲ್ಲದವನು, ಜಯಿಸಲಸಾಧ್ಯನು. ಉತ್ತಮೌಜಸನು ಮಹಾರಥನೆಂದು ನನ್ನ ಮತ. ನರರ್ಷಭ ವಿಕ್ರಾಂತ ಯುಧಾಮನ್ಯುವು ರಥೋದಾರ. ಅವರಲ್ಲಿ ಬಹುಸಹಸ್ರ ರಥಗಳಿವೆ, ಆನೆಗಳಿವೆ ಮತ್ತು ಕುದುರೆಗಳಿವೆ. ಅವರು ತನುವನ್ನು ತ್ಯಜಿಸಿ ಕುಂತೀಪುತ್ರನನ್ನು ಸಂತೋಷಗೊಳಿಸಲೋಸುಗ ಪಾಂಡವರೊಂದಿಗೆ ನಿನ್ನ ಸೇನೆಯು ವಿರುದ್ಧ ಅಗ್ನಿ-ಮಾರುತಗಳಂತೆ ಪರಸ್ಪರರನ್ನು

ಕರೆಯುತ್ತಾ ಯುದ್ಧಮಾಡುವರು. ವೃದ್ಧರಾದ ವಿರಾಟ-ದ್ರುಪದರಿಬ್ಬರೂ ಸಮರದಲ್ಲಿ ಅಜೇಯರು. ಇಬ್ಬರು ಮಹಾವೀರ್ಯರೂ ಪುರುಷರ್ಷಭರೂ ನನ್ನ ಪ್ರಕಾರ ಮಹಾರಥರು. ವಯೋವೃದ್ಧರಾಗಿದ್ದರೂ ಇವರಿಬ್ಬರು ಕ್ಷತ್ರಧರ್ಮಪರಾಯಣರು ತಮ್ಮ ಪರಮ ಶಕ್ತಿಯನ್ನುಪಯೋಗಿಸಿ ವೀರರು ಹೋದ ಪಥದಲ್ಲಿ ನಿಲ್ಲುತ್ತಾರೆ. ಸಂಬಂಧದಿಂದ ಮತ್ತು ವೀರ್ಯಬಲಾನ್ವಯದಿಂದ ಈ ಇಬ್ಬರು ಆರ್ಯರು, ಮಹೇಷ್ವಾಸರು ಸ್ನೇಹಪಾಶದಿಂದ ಬಂಧಿತರಾಗಿದ್ದಾರೆ. ಕಾರಣಗಳನ್ನು ಪಡೆದು ನರರೆಲ್ಲರೂ ಶೂರರು ಅಥವಾ ಹೇಡಿಗಳಾಗುತ್ತಾರೆ. ಒಂದೇ ಮಾರ್ಗದಲ್ಲಿರುವ, ಪಾರ್ಥನಲ್ಲಿ ದೃಢಭಕ್ತಿಯನ್ನಿಟ್ಟಿರುವ ಇವರಿಬ್ಬರೂ ಪ್ರಾಣಗಳನ್ನು ತೊರೆದು ಶಕ್ತಿಯಿಂದ ಶತ್ರುಗಳೊಂದಿಗೆ ಹೋರಾಡುತ್ತಾರೆ. ಒಂದೊಂದು ಅಕ್ಷೌಹಿಣಿಯನ್ನು ಹೊಂದಿರುವ, ಯುದ್ಧದಲ್ಲಿ ದಾರುಣರಾದ ಇವರಿಬ್ಬರು ಸಂಬಂಧಿಭಾವವನ್ನು ರಕ್ಷಿಸಿಕೊಳ್ಳುತ್ತಾ ಮಹಾಕಾರ್ಯಗಳನ್ನೆಸಗುತ್ತಾರೆ. ಈ ಇಬ್ಬರು ಲೋಕವೀರರು, ಮಹೇಷ್ವಾಸರು ಆತ್ಮಗಳನ್ನು ತ್ಯಜಿಸಿ ತಮ್ಮ ಪ್ರತ್ಯಯಗಳನ್ನು ರಕ್ಷಿಸಿಕೊಳ್ಳುತ್ತಾ ಮಹಾಕಾರ್ಯಗಳನ್ನೆಸಗುತ್ತಾರೆ.

ಪಾಂಚಾಲರಾಜನ ಮಗ, ಪರಪುರಂಜಯ ಶಿಖಂಡಿಯು ಪಾರ್ಥನ ರಥಮುಖ್ಯನೆಂದು ನನ್ನ ಮತ. ಇವನು ಹಿಂದಿನ

ಸಂಸ್ಥಿತಿಯನ್ನು ನಾಶಪಡಿಸಿ, ನಿನ್ನ ಸೇನೆಗಳಲ್ಲಿ ತನ್ನ ಪರಮ ಯಶಸ್ಸನ್ನು ಪಸರಿಸುತ್ತಾ ಸಂಗ್ರಾಮದಲ್ಲಿ ಹೋರಾಡುತ್ತಾನೆ. ಅವನಲ್ಲಿ ಪಾಂಚಾಲರು ಮತ್ತು ಪ್ರಭದ್ರಕರ ಬಹಳ ಸೇನೆಗಳಿವೆ. ಅವನ ರಥಗುಂಪುಗಳೊಡನೆ ಅವನು ಮಹತ್ಕಾರ್ಯಗಳನ್ನು ಮಾಡುತ್ತಾನೆ. ಸರ್ವ ಸೇನೆಗಳ ಸೇನಾನೀ ದ್ರೋಣಶಿಷ್ಯ ಮಹಾರಥ ಧೃಷ್ಟದ್ಯುಮ್ನನು ಅತಿರಥನೆಂದು ನನ್ನ ಮತ. ಅವನು ಈ ಸಂಗ್ರಾಮದಲ್ಲಿ ರಣದಲ್ಲಿ ಶತ್ರುಗಳನ್ನು ತುಂಡರಿಸಿ ಸಂಕ್ರುದ್ಧ ಪಿನಾಕೀ ಭಗವಾನನು ಯುಗಕ್ಷಯದಲ್ಲಿ ಹೇಗೋ ಹಾಗೆ ಹೋರಾಡುತ್ತಾನೆ. ಅವನ ರಥಗಳ ಸೇನೆಯು ಸಂಯುಗದಲ್ಲಿ ಅತಿ ದೊಡ್ಡ ಸಾಗರದಂತೆ ಮತ್ತು ದೇವತೆಗಳದ್ದಂತೆ ಇದೆ ಎಂದು ರಣಪ್ರಿಯರು ಹೇಳುತ್ತಾರೆ. ಧೃಷ್ಟದ್ಯುಮ್ನನ ತನಯ ಕ್ಷತ್ರಧರ್ಮನು ಬಾಲಕನಾಗಿದ್ದರೂ ಅತ್ಯಂತ ಶ್ರಮ ಪಟ್ಟಿದುದಕ್ಕೆ ಅರ್ಧರಥನೆಂದು ನನ್ನ ಮತ. ಶಿಶುಪಾಲನ ಮಗ ವೀರ ಚೇದಿರಾಜ ಮಹೇಷ್ವಾಸ ಧೃಷ್ಟಕೇತುವು ಪಾಂಡವರ ಸಂಬಂಧಿ ಮತ್ತು ಮಹಾರಥ. ಈ ಚೇದಿಪತಿ ಶೂರನು ಮಗನೊಂದಿಗೆ ಮಹಾರಥಿಗಳಿಗೂ ಮಾಡಲಸಾಧ್ಯ ಮಹಾ ಕರ್ಮಗಳನ್ನು ಮಾಡುತ್ತಾನೆ. ಕ್ಷತ್ರಧರ್ಮರತನಾದ, ಪರಪುರಂಜಯ ಕ್ಷತ್ರದೇವನಾದರೋ ಪಾಂಡವರ ರಥೋತ್ತಮನೆಂದು ನನ್ನ ಮತ. ಜಯಂತ, ಅಮಿತೌಜಸ,

ಮಹಾರಥಿ ಸತ್ಯಜಿತ್ ಇವರೆಲ್ಲ ಮಹಾತ್ಮ ಪಾಂಚಾಲಸತ್ತಮರೂ ಮಹಾರಥರೇ. ಅವರು ಆವೇಶಗೊಂಡ ಆನೆಗಳಂತೆ ಸಮರದಲ್ಲಿ ಹೋರಾಡುತ್ತಾರೆ. ವಿಕ್ರಾಂತರಾದ ಅಜ ಮತ್ತು ಭೋಜರು ಪಾಂಡವರ ಮಹಾರಥರು. ಪಾಂಡವರ ಸಹಾಯಕ್ಕಾಗಿ ಪರಮ ಶಕ್ತಿಯನ್ನುಪಯೋಗಿಸುವರು. ಅವರಿಬ್ಬರೂ ಶೀಘ್ರಾಸ್ತ್ರರು, ಚಿತ್ರಯೋಧಿಗಳು, ಕುಶಲರು ಮತ್ತು ದೃಢವಿಕ್ರಮಿಗಳು. ಯುದ್ಧ ದುರ್ಮದರಾದ ಐವರು ಕೇಕಯ ಸಹೋದರರರೆಲ್ಲರೂ ರಥೋದಾರರು. ಎಲ್ಲರು ಕೆಂಪು ಧ್ವಜವುಳ್ಳವರು. ಕಾಶಿಕ, ಸುಕುಮಾರ, ನೀಲ, ರಾಜ ಸೂರ್ಯದತ್ತ, ಶಂಖ ಮತ್ತು ಮದಿರಾಶ್ವ ಇವರೆಲ್ಲರೂ ರಥೋದಾರರು. ಎಲ್ಲರೂ ಯುದ್ಧ ಲಕ್ಷಣವುಳ್ಳವರು. ಎಲ್ಲರೂ ಅಸ್ತ್ರ ವಿದುಷರು. ಎಲ್ಲರೂ ಮಹಾತ್ಮರೆಂದು ನನ್ನ ಮತ. ವಾರ್ಧಕ್ಷೇಮಿಯು ನನ್ನ ಮತದಲ್ಲಿ ಮಹಾನ್ ರಥ. ಚಿತ್ರಯುಧನೂ ಕೂಡ ನನ್ನ ಪ್ರಕಾರ ರಥಸತ್ತಮ. ಇವನು ಸಂಗ್ರಾಮದಲ್ಲಿ ಶೋಭಿಸುವವನು. ಕಿರೀಟಿಯ ಭಕ್ತನೂ ಹೌದು. ಚೇಕಿತಾನ ಮತ್ತು ಸತ್ಯಧೃತಿ ಇಬ್ಬರೂ ಪಾಂಡವರ ಮಹಾರಥರು. ಇವರಿಬ್ಬರು ಪುರುಷವ್ಯಾಘ್ರರೂ ರಥೋದಾರರೆಂದು ನನ್ನ ಮತ. ವ್ಯಾಘ್ರದತ್ತ ಮತ್ತು ಚಂದ್ರಸೇನ. ಇವರಿಬ್ಬರೂ ಪಾಂಡವರ ರಥೋದರರರು ಎನ್ನುವುದು ನನ್ನ ಮತ. ಅದರಲ್ಲಿ

ಸಶಯವಿಲ್ಲ. ಕ್ರೋಧಹಂತನೆಂಬ ಹೆಸರನ್ನುಳ್ಳ ಸೇನಾಬಿಂದುವು ವಾಸುದೇವ ಮತ್ತು ಭೀಮಸೇನನ ಸಮವೆಂದು ಕರೆಯುತ್ತಾರೆ. ಅವನು ವಿಕ್ರಮದಿಂದ ನಿನ್ನ ಸೈನಿಕರೊಂದಿಗೆ ಹೋರಾಡುತ್ತಾನೆ. ನನ್ನನ್ನು, ದ್ರೋಣನನ್ನು ಮತ್ತು ಕೃಪನನ್ನು ಹೇಗೆ ಸನ್ಮಾನಿಸುವೆಯೋ ಹಾಗೆ ಆ ಸಮರಶ್ಲಾಘೀ ರಥಸತ್ತಮನನ್ನೂ ನೀನು ಮನ್ನಿಸಬೇಕು. ಪರಮ ಶೀಘ್ರಾಸ್ತ್ರನಾಗಿರುವ ಶ್ಲಾಘನೀಯ ಕಾಶ್ಯನು ರಥೋತ್ತಮ. ಆ ಪರಪುರಂಜಯನು ಏಕರಥನೆಂದು ನನ್ನ ಮತ. ದ್ರುಪದನ ಮಗ ಯುವಕ ಅಮರಶ್ಲಾಘೀ ಸತ್ಯಜಿತುವು ಯುದ್ಧದಲ್ಲಿ ವಿಕ್ರಾಂತ ಮತ್ತು ನನ್ನ ಪ್ರಕಾರ ಎಂಟು ರಥರಿಗೆ ಸಮ. ಧೃಷ್ಟದ್ಯುಮ್ನನ ಸರಿಸಾಟಿಯಾದ ಅವನು ಅತಿರಥತ್ವವನ್ನು ಪಡೆಯುತ್ತಾನೆ. ಪಾಂಡವರ ಯಶಸ್ಸನ್ನು ಬಯಸಿ ಪರಮ ಕರ್ಮಗಳನ್ನು ಮಾಡುತ್ತಾನೆ. ಪಾಂಡವರಲ್ಲಿ ಅನುರಕ್ತನಾಗಿರುವ ರಥರಲ್ಲಿಯೂ ಅಪರನಾಗಿರುವ ಮಾಹಾನ್ ಪಾಂಡ್ಯರಾಜನು ಮಹಾವೀರ ಮತ್ತು ಶೂರ ಧುರಂಧರ. ಮಹೇಷ್ವಾಸ ದೃಢಧನ್ವಿಯು ಪಾಂಡವರ ರಥೋತ್ತಮ. ಶ್ರೇಣಿಮಾನ ಮತ್ತು ಪಾರ್ಥಿವ ವಸುದಾನರಿಬ್ಬರೂ ಅತಿರಥರೆಂದು ನನ್ನ ಮತ.

ಪಾಂಡವರ ಮಹಾರಥಿ ರೋಚಮಾನನು ರಣದಲ್ಲಿ ಶತ್ರುಸೇನೆಯೊಂದಿಗೆ ಅಮರನಂತೆ ಹೋರಾಡುತ್ತಾನೆ.

ಮಹೇಷ್ವಾಸ, ಮಹಾಬಲಿ, ಭೀಮಸೇನನ ಸೋದರಮಾವ, ಪುರುಜಿತ್ ಕುಂತಿಭೋಜನು ಅತಿರಥನೆಂದು ನನ್ನ ಅಭಿಪ್ರಾಯ. ಈ ಮಹೇಷ್ವಾಸನು ವೀರ, ಅನುಭವಿ ಮತ್ತು ನಿಪುಣ, ಚಿತ್ರಯೋಧಿ, ಶಕ್ತ ಮತ್ತು ರಥಪುಂಗವನೆಂದು ನನ್ನ ಅಭಿಪ್ರಾಯ. ಮಘವತನು ದಾನವರೊಂದಿಗೆ ಹೇಗೋ ಹಾಗೆ ಅವನು ವಿಕ್ರಮದಿಂದ ಯುದ್ಧಮಾಡುತ್ತಾನೆ. ಅವನ ಯೋಧರೆಲ್ಲರೂ ವಿಖ್ಯಾತರು ಮತ್ತು ಯುದ್ಧ ವಿಶಾರದರು. ತನ್ನ ತಂಗಿಗೆ ಒಳಿತನ್ನು ಮಾಡಲು, ಪಾಂಡವರ ಪ್ರಿಯಹಿತನಿರತನಾಗಿರುವ ಆ ವೀರ ನೃಪನು ಸಂಗರದಲ್ಲಿ ಮಹಾಕಾರ್ಯಗಳನ್ನೆಸಗುತ್ತಾನೆ. ಭೀಮಸೇನನ ಮಗ ಹೈಡಿಂಬಿ ರಾಕ್ಷಸೇಶ್ವರ ಬಹುಮಾಯಾವಿಯೂ ಕೂಡ. ರಥಸಮೂಹಗಳ ನಾಯಕನು. ಆ ಸಮರಪ್ರಿಯನು ಸಮರದಲ್ಲಿ ಮಾಯೆಯಿಂದ ಯುದ್ಧಮಾಡುತ್ತಾನೆ. ಅವನ ವಶವರ್ತಿ ಸಚಿವ ರಾಕ್ಷಸರೂ ಕೂಡ ಶೂರರು. ಇವರು ಮತ್ತು ಇತರ ನಾನಾ ಜನಪದೇಶ್ವರರು ಬಹುಸಂಖ್ಯೆಗಳಲ್ಲಿ ವಾಸುದೇವನ ನಾಯಕತ್ವದಲ್ಲಿ ಪಾಂಡವರಿಗಾಗಿ ಸೇರಿದ್ದಾರೆ. ಇವರು ಮಹಾತ್ಮ ಪಾಂಡವರ ಪ್ರಧಾನ ರಥಿಗಳು, ಅತಿರಥಿಗಳು, ಅರ್ಧರಥಿಗಳು ಎಂದು ಎನಿಸಿಕೊಂಡವರು. ಇವರು ಮಹೇಂದ್ರನಂತಿರುವ ವೀರ ಕಿರೀಟಿಯಿಂದ ಪಾಲಿಸಲ್ಪಟ್ಟ ಯುಧಿಷ್ಠಿರನ ಭಯಂಕರ ಸೇನೆಯನ್ನು

ನಡೆಸುವರು. ನಿನ್ನ ವಿರುದ್ಧ ಜಯವನ್ನು ಬಯಸಿ ಸಮರಕ್ಕೆ ಬಂದಿರುವ ಇವರೊಂದಿಗೆ ನಾನು ನಿನಗಾಗಿ ರಣದಲ್ಲಿ ಜಯವನ್ನು ಅಥವಾ ಮರಣವನ್ನು ಬಯಸಿ ಹೋರಾಡುತ್ತೇನೆ. ಚಕ್ರ-ಗಾಂಡೀವಧಾರಿಗಳಾದ ಪುರುಷೋತ್ತಮರಾದ ಪಾರ್ಥ-ವಾಸುದೇವರನ್ನು ಸಂಧ್ಯಾಸಮಯದಲ್ಲಿ ಸೂರ್ಯ-ಚಂದ್ರರನ್ನು ಎದುರಾಗುವಂತೆ ಎದುರಿಸುತ್ತೇನೆ.

ಸೇನೆಯೊಂದಿಗೆ ನಿನ್ನ ರಣದ ಮೂರ್ಧನಿಯಲ್ಲಿದ್ದುಕೊಂಡು ರಥೋದಾರ ಪಾಂಡುಪುತ್ರರ ಸೈನಿಕರನ್ನು ಎದುರಿಸುತ್ತೇನೆ. ಕೌರವೇಂದ್ರ! ಪ್ರಧಾನರಾದ ಈ ರಥ-ಅತಿರಥರ ಕುರಿತು ನಾನು ನಿನಗೆ ಹೇಳಿದ್ದೇನೆ. ಅರ್ಧರಥರೆನಿಸಿಕೊಂಡಿರುವ ಕೆಲವರ ಕುರಿತೂ ಕೂಡ ನಿನಗೆ ಹೇಳಿದ್ದೇನೆ. ಅರ್ಜುನ, ವಾಸುದೇವ ಮತ್ತು ಅಲ್ಲಿರುವ ಅನ್ಯ ಪಾರ್ಥಿವರೆಲ್ಲರನ್ನೂ ತಡೆದು ನಿನ್ನ ಸೇನೆಯನ್ನು ರಕ್ಷಿಸುತ್ತೇನೆ. ಆದರೆ ಬಾಣಗಳನ್ನು ಹಿಡಿದು ನನ್ನನ್ನು ಎದುರಿಸಿ ಬರುವ ಪಾಂಚಾಲ್ಯ ಶಿಖಂಡಿಯನ್ನು ನೋಡಿ ನಾನು ಅವನನ್ನು ಕೊಲ್ಲುವುದಿಲ್ಲ. ತಂದೆಗೆ ಪ್ರಿಯವಾದುದನ್ನು ಮಾಡಲೋಸುಗ ಹೇಗೆ ನಾನು ರಾಜ್ಯಪ್ರಾಪ್ತಿಯನ್ನು ಪರಿತ್ಯಜಿಸಿ ಬ್ರಹ್ಮಚರ್ಯದಲ್ಲಿ ಧೃತವ್ರತನಾದೆ ಎಂದು ಲೋಕಕ್ಕೇ ತಿಳಿದಿದೆ. ಚಿತ್ರಾಂಗದನನ್ನು ಕೌರವರ ರಾಜ್ಯಕ್ಕೆ ಅಭಿಷೇಕಿಸಿ, ಬಾಲಕ ವಿಚಿತ್ರವೀರ್ಯನನ್ನು ಯುವರಾಜನಾಗಿ ಅಭಿಷೇಕಿಸಿದೆನು.

ಪೃಥ್ವಿಯಲ್ಲಿ ಎಲ್ಲ ರಾಜರುಗಳಲ್ಲಿ ನನ್ನ ದೇವವ್ರತತ್ವವನ್ನು ಪಸರಿಸಿ ನಾನು ಸ್ತ್ರೀಯನ್ನು ಅಥವಾ ಹಿಂದೆ ಸ್ತ್ರೀಯಾಗಿದ್ದನೆಂದು ತಿಳಿದಿರುವವನನ್ನು ಎಂದೂ ಕೊಲ್ಲುವುದಿಲ್ಲ. ಶಿಖಂಡಿಯು ಮೊದಲು ಹೆಣ್ಣಾಗಿದ್ದ ಎಂದು ನೀನು ಕೇಳಿರಬಹುದು. ಹೆಣ್ಣಾಗಿ ಹುಟ್ಟಿ ನಂತರ ಗಂಡಾದ ಅವನೊಡನೆ ನಾನು ಯುದ್ಧಮಾಡುವುದಿಲ್ಲ. ಕುಂತೀಸುತರನ್ನು ಬಿಟ್ಟು ಸಮರದಲ್ಲಿ ಎದುರಾಗುವ ಅನ್ಯ ಎಲ್ಲ ಪಾರ್ಥಿವರನ್ನೂ ಸಂಹರಿಸುತ್ತೇನೆ."

ದುರ್ಯೋಧನನು ಹೇಳಿದನು:

"ಭರತಶ್ರೇಷ್ಠ! ಸಮರದಲ್ಲಿ ಬಾಣಗಳನ್ನು ಗುರಿಯಿಟ್ಟು ನಿನ್ನನ್ನು ಕೊಲ್ಲಲು ಬರುವ ಶಿಖಂಡಿಯನ್ನು ನೋಡಿಯೂ ಅವನನ್ನು ನೀನು ಕೊಲ್ಲದೇ ಇರಲು ಕಾರಣವೇನು? ಮೊದಲು ನೀನು ಹೇಳಿದ್ದೆ – ಸೋಮಕರೊಂದಿಗೆ ಪಾಂಡವರನ್ನು ವಧಿಸುತ್ತೇನೆಂದು. ಅದನ್ನು ನನಗೆ ಹೇಳು."

ಭೀಷ್ಮನು ಹೇಳಿದನು:

"ದುರ್ಯೋಧನ! ವಸುಧಾಧಿಪರೊಂದಿಗೆ ಕೇಳು. ಏಕೆ ನಾನು ಯುದ್ಧದಲ್ಲಿ ಎದುರಾದ ಶಿಖಂಡಿಯನ್ನು ಕೊಲ್ಲುವುದಿಲ್ಲವೆಂದು." ಆಗ ಭೀಷ್ಮನು ದುರ್ಯೋಧನನಿಗೆ ಅಂಬೋಪಾಽಖ್ಯಾನವನ್ನು ವರ್ಣಿಸಿ, ಹೇಳಿದನು:

“ಯುದ್ಧದಲ್ಲಿ ಪಾಂಚಾಲ ಶಿಖಂಡಿಯು ಧನುಸ್ಸನ್ನು ಹಿಡಿದು ನನ್ನೊಡನೆ ಯುದ್ಧಮಾಡಲು ಬಂದರೆ ನಾನು ಅವನನ್ನು ಒಂದು ಕ್ಷಣವೂ ನೋಡುವುದಿಲ್ಲ, ಅವನನ್ನು ಹೊಡೆಯುವುದೂ ಇಲ್ಲ. ಸ್ತ್ರೀಯರ, ಹಿಂದೆ ಸ್ತ್ರೀಯಾಗಿದ್ದವರ, ಸ್ತ್ರೀಯರ ಹೆಸರಿದ್ದವರ, ಸ್ತ್ರೀಯರ ರೂಪದಲ್ಲಿದ್ದವರ ಮೇಲೆ ನಾನು ಬಾಣಪ್ರಯೋಗ ಮಾಡುವುದಿಲ್ಲ ಎನ್ನುವ, ಸದಾ ನಡೆಸಿಕೊಂಡು ಬರುತ್ತಿರುವ ನನ್ನ ಈ ವ್ರತವು ಭೂಮಿಯಲ್ಲಿಯೇ ವಿಶ್ರುತವಾಗಿದೆ. ಈ ಕಾರಣದಿಂದಲೇ ನಾನು ಶಿಖಂಡಿಯನ್ನು ಹೊಡೆಯುವುದಿಲ್ಲ. ಮಗೂ! ಶಿಖಂಡಿಯ ಮಹಾ ಜನ್ಮವೇನೆಂದು ನಿನಗೆ ತಿಳಿಸಿದ್ದೇನೆ. ಸಮರದಲ್ಲಿ ಆ ಆತತಾಯಿಯನ್ನು ನಾನು ಸಂಹರಿಸುವುದಿಲ್ಲ. ಸ್ತ್ರೀಯನ್ನು ಕೊಲ್ಲುವುದರ ಮೊದಲು ಭೀಷ್ಮನು ತನ್ನನ್ನು ಕೊಂದುಕೊಳ್ಳುತ್ತಾನೆ. ಆದುದರಿಂದ ಅವನು ಸಮರದಲ್ಲಿ ನಿಂತಿರುವುದನ್ನು ನೋಡಿಯೂ ನಾನು ಅವನನ್ನು ಕೊಲ್ಲುವುದಿಲ್ಲ.”

ಇದನ್ನು ಕೇಳಿದ ಕೌರವ್ಯ ರಾಜಾ ದುರ್ಯೋಧನನು ಒಂದು ಕ್ಷಣ ಯೋಚಿಸಿ ಅದು ಭೀಷ್ಮನಿಗೆ ಯುಕ್ತವಾದುದು ಎಂದು ತೀರ್ಮಾನಿಸಿದನು.

## ಭೀಷ್ಮಾದಿಗಳ ಶಕ್ತಿಯ ಕುರಿತ ಚರ್ಚೆ

ರಾತ್ರಿಯು ಕಳೆದು ಬೆಳಗಾಗಲು ದುರ್ಯೋಧನನು ಪುನಃ ಸರ್ವ ಸೇನೆಯ ಮಧ್ಯೆ ಪಿತಾಮಹನನ್ನು ಕೇಳಿದನು:

"ಗಾಂಗೇಯ! ಪಾಂಡವನ ಈ ಉತ್ತಮ ಸೈನ್ಯವನ್ನು, ನರ-ನಾಗ-ಅಶ್ವ ಮತ್ತು ಮಹಾರಥಗಳ ಸಂಕುಲದಿಂದ ಕೂಡಿದ, ಧೃಷ್ಟದ್ಯುಮ್ನನ ನಾಯಕತ್ವದಲ್ಲಿ ಲೋಕಪಾಲಕರಂತಿರುವ ಭೀಮಾರ್ಜುನರೇ ಮೊದಲಾದವರ ರಕ್ಷಣೆಯಲ್ಲಿರುವ, ಗೆಲ್ಲಲಸಾಧ್ಯವಾದ, ತಡೆಯಲಸಾಧ್ಯವಾದ ಸಾಗರದಂತೆ ಉಕ್ಕಿ ಬರುತ್ತಿರುವ, ದೇವತೆಗಳಿಂದಲೂ ಅಲುಗಾಡಿಸಲಸಾಧ್ಯವಾದ ಈ ಸೇನಾ ಸಾಗರವನ್ನು ನೀನಾಗಲೀ, ಅಥವಾ ಮಹೇಷ್ವಾಸ ಆಚಾರ್ಯನಾಗಲೀ, ಅಥವಾ ಮಹಾಬಲಿ ಕೃಪನಾಗಲೀ, ಅಥವಾ ಸಮರಶ್ಲಾಘೀ ಕರ್ಣನಾಗಲೀ ಅಥವಾ ದ್ವಿಜಸತ್ತಮ ದ್ರೌಣಿಯಾಗಲೀ ಎಷ್ಟುಸಮಯದಲ್ಲಿ ಮುಗಿಸಬಲ್ಲರು? ಏಕೆಂದರೆ ನನ್ನ ಬಲದಲ್ಲಿರುವ ನೀವೆಲ್ಲರೂ ದಿವ್ಯಾಸ್ತ್ರವಿದುಷರು. ಇದನ್ನು ತಿಳಿಯಲು ನಾನು ಇಚ್ಛಿಸುತ್ತೇನೆ. ನಿತ್ಯವೂ ಇದರ ಕುರಿತು ನನ್ನ ಹೃದಯದಲ್ಲಿ ಪರಮ ಕುತೂಹಲವಿದೆ. ಅದನ್ನು ನನಗೆ ಹೇಳಬೇಕು."

ಭೀಷ್ಮನು ಹೇಳಿದನು:

"ಪೃಥಿವೀಪತೇ! ಅಮಿತ್ರರ ಮತ್ತು ನಮ್ಮವರ ಬಲಾಬಲಗಳ

ಕುರಿತು ನೀನು ಕೇಳಿರುವ ಇದು ನಿನಗೆ ಅನುರೂಪವಾದುದು. ರಣದಲ್ಲಿ ನನ್ನ ಶಕ್ತಿಯ ಗಡಿಯೇನೆನ್ನುವುದನ್ನು, ರಣದಲ್ಲಿ ನನ್ನ ಭುಜಗಳ ಅಸ್ತ್ರವೀರ್ಯವನ್ನು ಕೇಳು. ಸಾಮಾನ್ಯ ಜನರು ಯುದ್ಧಮಾಡುವಾಗ ಆರ್ಜವದಿಂದಲೇ ಯುದ್ಧ ಮಾಡಬೇಕು. ಮಾಯಾವಿಯೊಂದಿಗೆ ಮಾಯಾಯುದ್ಧವನ್ನು ಮಾಡಬೇಕು. ಇದು ಧರ್ಮನಿಶ್ಚಯ. ಪಾಂಡವರ ಸೇನೆಯನ್ನು ದಿನ ದಿನವೂ ಮಧ್ಯಾಹ್ನದ ಮೊದಲ ಭಾಗವನ್ನಾಗಿಸಿ ನಾನು ಕೊಲ್ಲಬಲ್ಲೆ. ಹತ್ತುಸಾವಿರ ಯೋಧರನ್ನು ಒಂದು ಭಾಗವನ್ನಾಗಿ ಮಾಡಿಕೊಂಡು ಒಂದು ಸಾವಿರ ರಥಿಕರು ಒಂದು ಭಾಗವಾಗುತ್ತಾರೆ ಎಂದು ನನ್ನ ಮತ. ಈ ರೀತಿಯ ವಿಧಾನದಿಂದ ಸದಾ ಸನ್ನದ್ಧನಾಗಿ ಮೇಲೆ ನಿಂತಿದ್ದರೆ ನಾನು ಈ ಸೇನೆಯನ್ನು ಸಮಯದಲ್ಲಿ ಕೊನೆಗಾಣಿಸಬಹುದು. ಒಂದುವೇಳೆ ನೂರುಸಾವಿರರನ್ನು ಸಂಹರಿಸುವ ಮಹಾ ಅಸ್ತ್ರಗಳನ್ನು ಪ್ರಯೋಗಿಸಿದರೆ ಸಮರದಲ್ಲಿ ನಿಂತು ಒಂದು ತಿಂಗಳಲ್ಲಿ ಕೊಲ್ಲಬಹುದು.”

ಭೀಷ್ಮನ ಆ ಮಾತುಗಳನ್ನು ಕೇಳಿ ರಾಜಾ ದುರ್ಯೋಧನನು ಅಂಗಿರಸರಲ್ಲಿ ಶ್ರೇಷ್ಠನಾದ ದ್ರೋಣನನ್ನು ಪ್ರಶ್ನಿಸಿದನು.

“ಆಚಾರ್ಯ! ಪಾಂಡುಪುತ್ರರ ಸೈನಿಕರನ್ನು ಎಷ್ಟು ಸಮಯದಲ್ಲಿ ಕೊಲ್ಲಬಲ್ಲಿರಿ?” ಇದಕ್ಕೆ ನಗುತ್ತಾ ದ್ರೋಣನು

> ಉತ್ತರಿಸಿದನು. “ಕುರುಶ್ರೇಷ್ಠ! ಮುದುಕನಾಗಿದ್ದೇನೆ. ಪ್ರಾಣವು ಮಂದವಾಗಿ ನಡೆದುಕೊಳ್ಳುತ್ತಿದೆ. ಶಾಂತನವ ಭೀಷ್ಮನಂತೆ ನಾನೂ ಕೂಡ ಅಸ್ತ್ರಾಗ್ನಿಯಿಂದ ಪಾಂಡವರ ಸೇನೆಯನ್ನು ಒಂದು ತಿಂಗಳಲ್ಲಿ ಸುಡಬಲ್ಲೆನೆಂದೆನಿಸುತ್ತದೆ. ಇದು ನನ್ನ ಶಕ್ತಿಯ ಮಿತಿ. ಮತ್ತು ಇದು ನನ್ನ ಬಲದ ಮಿತಿ.”

ಎರಡೇ ತಿಂಗಳುಗಳು ಸಾಕೆಂದು ಶಾರದ್ವತ ಕೃಪನು ಹೇಳಿದನು. ದ್ರೌಣಿಯಾದರೋ ಹತ್ತು ರಾತ್ರಿಗಳಲ್ಲಿ ಬಲಕ್ಷಯಮಾಡುತ್ತೇನೆಂದು ಪ್ರತಿಜ್ಞೆಮಾಡಿದನು. ಮಹಾಸ್ತ್ರಗಳನ್ನು ತಿಳಿದಿದ್ದ ಕರ್ಣನು ಐದು ರಾತ್ರಿಗಳಲ್ಲೆಂದು ಪ್ರತಿಜ್ಞೆ ಮಾಡಿದನು. ಸೂತಪುತ್ರನ ಆ ಮಾತುಗಳನ್ನು ಕೇಳಿ ಸಾಗರಗೆಯ ಸುತನು ಜೋರಾಗಿ ನಕ್ಕು ಹಾಸ್ಯದ ಈ ಮಾತುಗಳನ್ನಾಡಿದನು:

> “ರಾಧೇಯ! ರಣದಲ್ಲಿ ನೀನು ಎಲ್ಲಿಯವರೆಗೆ ಬಾಣಖಡ್ಗಧನುರ್ಧರನಾದ ಪಾರ್ಥನನ್ನು, ಜೊತೆಯಲ್ಲಿ ರಥವನ್ನೋಡಿಸುವ ಅಚ್ಯುತ ವಾಸುದೇವನನ್ನು ಎದುರಿಸುವುದಿಲ್ಲವೋ ಅಲ್ಲಿಯ ವರೆಗೆ ನಿನಗಿಷ್ಟ ಬಂದುದನ್ನು ಹೇಳಬಹುದು. ನಂತರವೂ ನಿನಗಿಷ್ಟವಾದಂತೆ ಹೇಳಿಕೊಳ್ಳಬಹುದು!”

## ಅರ್ಜುನವಾಕ್ಯ

ಇದನ್ನು ಕೇಳಿದ ಕೌಂತೇಯನು ಎಲ್ಲ ತಮ್ಮಂದಿರನ್ನೂ ಕರೆಯಿಸಿ

ಏಕಾಂತದಲ್ಲಿ ಈ ಮಾತನ್ನಾಡಿದನು:

“ಧಾರ್ತರಾಷ್ಟ್ರನ ಸೇನೆಯಲ್ಲಿರುವ ನನ್ನ ಚಾರಕರು ಅವರ ಪ್ರವೃತ್ತಿಗಳನ್ನು ಬೆಳಿಗ್ಗೆ ಬಂದು ಹೇಳಿದರು. ದುರ್ಯೋಧನನು ಆಪಗೇಯ ಮಹಾವ್ರತನಿಗೆ ಕೇಳಿದನಂತೆ - “ಪ್ರಭೋ! ಪಾಂಡವರ ಸೇನೆಯನ್ನು ನಾಶಪಡಿಸಲು ಎಷ್ಟು ಸಮಯವು ಬೇಕಾಗುತ್ತದೆ?” ಸುದುರ್ಮತಿ ಧಾರ್ತರಾಷ್ಟ್ರನಿಗೆ ಅವನು ಒಂದು ತಿಂಗಳು ಎಂದು ಹೇಳಿದನಂತೆ. ದ್ರೋಣನೂ ಕೂಡ ಅಷ್ಟೇ ಸಮಯ ಸಾಕೆಂದು ಹೇಳಿದನೆಂದು ತಿಳಿದಿದ್ದೇವೆ. ಗೌತಮನು ಅದಕ್ಕೂ ಎರಡು ಪಟ್ಟು ಸಮಯ ಬೇಕೆಂದನಂತೆ. ಮಹಾಸ್ತ್ರವಿದು ದ್ರೌಣಿಯು ಹತ್ತು ರಾತ್ರಿಗಳಲ್ಲಿ ಎಂದು ಪ್ರತಿಜ್ಞೆ ಮಾಡಿದನೆಂದು ಕೇಳಿದ್ದೇವೆ. ಹಾಗೆಯೇ ದಿವ್ಯಾಸ್ತ್ರವಿದು ಕರ್ಣನು ಕುರುಸಂಸದಿಯಲ್ಲಿ ಐದೇ ದಿವಸಗಳಲ್ಲಿ ಸೈನ್ಯವನ್ನು ಸಂಹರಿಸುವುದಾಗಿ ಪ್ರತಿಜ್ಞೆಮಾಡಿದ್ದಾನೆ. ಆದುದರಿಂದ ನಾನೂ ಕೂಡ ಅರ್ಜುನ! ನಿನ್ನ ಮಾತನ್ನು ಕೇಳ ಬಯಸುತ್ತೇನೆ. ಎಷ್ಟು ಸಮಯದಲ್ಲಿ ನೀನು ಯುದ್ಧದಲ್ಲಿ ಶತ್ರುಗಳನ್ನು ಇಲ್ಲವಾಗಿಸುವೆ?”

ಪಾರ್ಥಿವನಿಂದ ಇದನ್ನು ಕೇಳಿದ ಗುಡಾಕೇಶ ಧನಂಜಯನು ವಾಸುದೇವನನ್ನು ನೋಡಿ ಈ ಮಾತುಗಳಲ್ಲಿ ಉತ್ತರಿಸಿದನು:

“ಇವರೆಲ್ಲರೂ ಮಹಾತ್ಮರು, ಕೃತಾಸ್ತ್ರರು ಮತ್ತು

ಚಿತ್ರಯೋಧಿಗಳು. ಮಹಾರಾಜ! ಇವರು ನಿನ್ನ ಸೇನೆಯನ್ನು ಸಂಹರಿಸುವರು ಎನ್ನುವುದರಲ್ಲಿ ಸಂಶಯವಿಲ್ಲ. ನಿನ್ನ ಮನಸ್ಸಿನಲ್ಲಿ ಜ್ವರವಿಲ್ಲದಿರಲಿ. ಸತ್ಯವನ್ನೇ ಹೇಳುತ್ತಿದ್ದೇನೆ. ವಾಸುದೇವನ ಸಹಾಯದಿಂದ ನಾನು ಒಂದೇ ರಥದಲ್ಲಿ ನಿಮಿಷದಲ್ಲಿಯೇ ಅಮರರನ್ನೂ ಸೇರಿಸಿ ಮೂರು ಲೋಕಗಳನ್ನು, ಅದರಲ್ಲಿರುವ ಸ್ಥಾವರ ಜಂಗಮಗಳೊಂದಿಗೆ, ಹಿಂದೆ ಇದ್ದ, ಈಗ ಇರುವ ಮತ್ತು ಮುಂದೆ ಇರಬಹುದಾದವುಗಳನ್ನೂ ಸಂಹರಿಸಬಲ್ಲೆ ಎಂದು ನನಗನ್ನಿಸುತ್ತದೆ. ಕೈರಾತನೊಂದಿಗೆ ದ್ವಂದ್ವಯುದ್ಧದಲ್ಲಿ ಪಶುಪತಿಯು ನನಗೆ ಕರುಣಿಸಿದ್ದ ಆ ಘೋರ ಅಸ್ತ್ರವು ನನ್ನಲ್ಲಿದೆ. ಯಾವುದನ್ನು ಪ್ರಯೋಗಿಸಿ ಯುಗಾಂತ್ಯದಲ್ಲಿ ಪಶುಪತಿಯು ಸರ್ವಭೂತಗಳನ್ನು ಸಂಹರಿಸುವನೋ ಅದು ನನ್ನಲ್ಲಿದೆ. ಅದು ಗಾಂಗೇಯನಿಗೆ ತಿಳಿದಿಲ್ಲ, ದ್ರೋಣನಿಗೂ ಇಲ್ಲ, ಗೌತಮನಿಗೂ ಇಲ್ಲ, ದ್ರೋಣಸುತನಿಗೂ ಇಲ್ಲ. ಇನ್ನು ಸೂತಜನಿಗೇನು? ಆದರೆ ರಣದಲ್ಲಿ ದಿವ್ಯಾಸ್ತ್ರಗಳನ್ನು ಬಳಸಿ ಸಾಮಾನ್ಯಜನರನ್ನು ಸಂಹರಿಸುವುದು ಸರಿಯಲ್ಲ. ನಾವು ಶತ್ರುಗಳೊಂದಿಗೆ ಆರ್ಜವದಿಂದಲೇ ಯುದ್ಧಮಾಡಿ ವಿಜಯಿಗಳಾಗುತ್ತೇವೆ. ಈ ಎಲ್ಲ ಪುರುಷವ್ಯಾಘ್ರರೂ ನಿನ್ನ ಸಹಾಯಕರು ಎಲ್ಲರೂ ದಿವ್ಯಾಸ್ತ್ರವಿದುಷರು. ಎಲ್ಲರೂ ಯುದ್ಧವನ್ನು ಇಷ್ಟಪಡುವವರು. ಇವರೆಲ್ಲರೂ ವೇದಾಂತ

ಅವಭೃತಸ್ನಾನಗಳನ್ನು ಮಾಡಿದವರು, ಅಪರಾಜಿತರು. ಪಾಂಡವ! ಸಮರದಲ್ಲಿ ದೇವತೆಗಳ ಸೇನೆಯನ್ನೂ ಸಂಹರಿಸಬಲ್ಲರು. ಶಿಖಂಡೀ, ಯುಯುಧಾನ, ಪಾರ್ಷತ ಧೃಷ್ಟದ್ಯುಮ್ನ, ಭೀಮಸೇನ, ಯಮಳರು, ಯುಧಾಮನ್ಯು, ಉತ್ತಮೌಜ, ಯುದ್ಧದಲ್ಲಿ ಭೀಷ್ಮ-ದ್ರೋಣರ ಸಮನಾದ ವಿರಾಟ-ದ್ರುಪದರು, ನೀನೂ ಕೂಡ, ತ್ರೈಲೋಕ್ಯಗಳನ್ನು ಕಿತ್ತೊಗೆಯಲು ಸಮರ್ಥನಾಗಿದ್ದೀಯೆ. ನೀನು ಯಾವ ಪುರುಷನನ್ನು ಕ್ರೋಧದಿಂದ ನೋಡುತ್ತೀಯೋ ಅವನ ನಾಶವು ಕ್ಷಿಪ್ರವಾಗಿ ಆಗುತ್ತದೆ ಎನ್ನುವುದನ್ನು ನಾನು ತಿಳಿದುಕೊಂಡಿದ್ದೇನೆ.”

## ಕೌರವಸೇನಾನಿರ್ಯಾಣ

ಆಗ ವಿಮಲ ಪ್ರಭಾತದಲ್ಲಿ ಧಾರ್ತರಾಷ್ಟ್ರ ದುರ್ಯೋಧನನಿಂದ ಪ್ರಚೋದಿತರಾಗಿ ರಾಜರು ಪಾಂಡವರ ಕಡೆ ಪ್ರಯಾಣಿಸಿದರು. ಎಲ್ಲರೂ ಸ್ನಾನಮಾಡಿ ಶುಚರಾಗಿದ್ದರು. ಎಲ್ಲರೂ ಮಾಲೆಗಳನ್ನು ಧರಿಸಿದ್ದರು, ಬಿಳಿಯ ವಸ್ತ್ರಗಳನ್ನುಟ್ಟಿದ್ದರು, ಶಸ್ತ್ರಗಳನ್ನು ಹಿಡಿದಿದ್ದರು, ಧ್ವಜಗಳನ್ನು ಹೊಂದಿದ್ದರು, ಸ್ವಸ್ತಿ ವಾಚನಗಳನ್ನು ಕೇಳಿದ್ದರು ಮತ್ತು ಅಗ್ನಿಗಳಲ್ಲಿ ಆಹುತಿಗಳನ್ನಿತ್ತಿದ್ದರು. ಎಲ್ಲರೂ ವೇದವಿದರಾಗಿದ್ದರು, ಎಲ್ಲರೂ ಶೂರರೂ, ಸುಚರಿತವ್ರತರೂ ಆಗಿದ್ದರು. ಎಲ್ಲರೂ ಕರ್ಮಗಳನ್ನು ಮಾಡಿಮುಗಿಸಿದ್ದರು. ಎಲ್ಲರೂ ಯುದ್ಧಕ್ಕೆ



ಲಕ್ಷಣರಾಗಿದ್ದರು. ಯುದ್ಧದಲ್ಲಿ ಪರಮ ಲೋಕಗಳನ್ನು ಗೆಲ್ಲುವ ಉದ್ದೇಶವನ್ನಿಟ್ಟುಕೊಂಡಿದ್ದ ಆ ಮಹಾಬಲರು ಎಲ್ಲರೂ ಏಕಾಗ್ರಮನಸ್ಕರಾಗಿದ್ದರು ಮತ್ತು ಪರಸ್ಪರರಲ್ಲಿ ಶ್ರದ್ಧೆಯನ್ನಿಟ್ಟಿದ್ದರು. ಮೊದಲು ಅವಂತಿಯ ವಿಂದಾನುವಿಂದರಿಬ್ಬರೂ ಕೇಕಯ ಮತ್ತು ಬಾಹ್ಲೀಕರೊಂದಿಗೆ ಎಲ್ಲರೂ ಭಾರದ್ವಾಜನನ್ನು ಮುಂದಿಟ್ಟುಕೊಂಡು ಹೊರಟರು. ಅನಂತರ ಅಶ್ವತ್ಥಾಮ, ಶಾಂತನವ, ಸೈಂಧವ ಜಯದ್ರಥ, ದಕ್ಷಿಣದವರು, ಪಶ್ಚಿಮದವರು, ಪರ್ವತವಾಸಿ ರಥರು, ಗಾಂಧಾರರಾಜ ಶಕುನಿ, ಪೂರ್ವದೇಶದವರೆಲ್ಲರೂ, ಶಕರು, ಕಿರಾತರು, ಯವನರು, ಶಿಬಿಗಳು, ವಸಾತರು ತಮ್ಮ ತಮ್ಮ ಸೇನೆಗಳಿಂದ ಸುತ್ತುವರೆಯಲ್ಪಟ್ಟು ಒಟ್ಟಿಗೇ ಹೊರಟರು. ಈ ಮಹಾರಥಿಗಳು ಎಲ್ಲರೂ ಎರಡನೆಯ ಸೇನೆಯಾಗಿ ಹೊರಟರು. ಅನಂತರ ಸೇನೆಯೊಂದಿಗೆ ಕೃತವರ್ಮ, ಮಹಾಬಲಿಗಳಾದ ತ್ರಿಗರ್ತರು, ಭ್ರಾತೃಗಳಿಂದ ಪರಿವೃತನಾದ ನೃಪತಿ ದುರ್ಯೋಧನ, ಶಲ, ಭೂರಿಶ್ರವ, ಶಲ್ಯ, ಕೌಸಲ್ಯ ಬೃಹದ್ಬಲ ಇವರು ಧಾರ್ತರಾಷ್ಟ್ರನನ್ನು ಮುಂದಿಟ್ಟುಕೊಂಡು ಹಿಂದಿನಿಂದ ಹೊರಟರು. ಯುದ್ಧಮಾಡಲಿರುವ ಈ ಕವಚಧಾರೀ ಮಹಾರಥಿಗಳು ಸಮನಾದ ಪಥದಲ್ಲಿ ಪ್ರಯಾಣಿಸಿ ಕುರುಕ್ಷೇತ್ರದ ಇನ್ನೊಂದು ಅರ್ಧದಲ್ಲಿ ವಸತಿಮಾಡಿಕೊಂಡರು. ದುರ್ಯೋಧನನಾದರೋ ಎಂಥಹ ಶಿಬಿರಗಳನ್ನು ಮಾಡಿಸಿದನೆಂದರೆ ಅವು ಎರಡನೆಯ ಹಸ್ತಿನಾಪುರವೋ ಎಂಬಂತೆ ಸಮಲಂಕೃತವಾಗಿದ್ದವು. ನಗರವಾಸಿ ಕುಶಲ ಜನರಿಗೂ ಕೂಡ ತಮ್ಮ

ನಗರ ಮತ್ತು ಶಿಬಿರದ ವ್ಯತ್ಯಾಸವನ್ನು ತಿಳಿಯಲಿಕ್ಕಾಗಲಿಲ್ಲ. ಮಹೀಪತಿ ಕೌರವ್ಯನು ತನಗಿದ್ದ ಹಾಗಿನ ನೂರಾರು ಸಹಸ್ರಾರು ದುರ್ಗಗಳನ್ನು ಇತರ ರಾಜರಿಗೂ ಮಾಡಿಸಿದನು. ಆ ರಣಾಂಗಣದಲ್ಲಿ ಐದು ಯೋಜನ ವಿಸ್ತೀರ್ಣದಲ್ಲಿ ನೂರಾರು ಗುಂಪು ಸೇನಾನಿವೇಶಗಳನ್ನು ಕಟ್ಟಲಾಗಿತ್ತು. ಅಲ್ಲಿ ಆ ಪೃಥಿವೀಪಾಲರು ಅವರವರ ಉತ್ಸಾಹ ಮತ್ತು ಬಲಕ್ಕೆ ತಕ್ಕಂತೆ ದ್ರವ್ಯಗಳಿಂದ ತುಂಬಿದ ಸಹಸ್ರಾರು ಶಿಬಿರಗಳನ್ನು ಪ್ರವೇಶಿಸಿದರು. ರಾಜ ದುರ್ಯೋಧನನು ಸೈನ್ಯದೊಂದಿಗಿರುವ ಆ ಮಹಾತ್ಮರಿಗೆ ಅನುತ್ತಮ ಭಕ್ಷ್ಯ ಭೋಜ್ಯಗಳ ವ್ಯವಸ್ಥೆಯನ್ನೂ ಮಾಡಿಸಿದ್ದನು. ಜೊತೆಗಿರುವ ಆನೆಗಳು, ಕುದುರೆಗಳು, ಮನುಷ್ಯರು, ಶಿಲ್ಪಿಗಳು, ಉಪಜೀವಿಗಳು, ಹಿಂಬಾಲಿಸಿ ಬಂದಿರುವ ಸೂತ, ಮಾಗಧ, ಬಂದಿನರು, ವರ್ತಕರು, ಲೆಕ್ಕ ಮಾಡುವವರು, ವೇಶ್ಯೆಯರು, ಮತ್ತು ಪ್ರೇಕ್ಷಕ ಜನರು ಎಲ್ಲರನ್ನೂ ರಾಜ ಕೌರವನು ವಿಧಿವತ್ತಾಗಿ ನೋಡಿಕೊಂಡನು.

## ಪಾಂಡವಸೇನಾನಿರ್ಯಾಣ

ಹಾಗೆಯೇ ರಾಜ ಕೌಂತೇಯ ಧರ್ಮಪುತ್ರ ಯುಧಿಷ್ಠಿರನೂ ಧೃಷ್ಟದ್ಯುಮ್ನನ ನಾಯಕತ್ವದಲ್ಲಿದ್ದ ವೀರರನ್ನು ಪ್ರಚೋದಿಸಿದನು. ಚೇದಿ, ಕಾಶಿ ಮತ್ತು ಕರೂಷಣರ ನೇತಾರ ದೃಢವಿಕ್ರಮಿ ಸೇನಾಪತಿ ಅಮಿತ್ರಘ್ನ ಧೃಷ್ಟಕೇತು, ವಿರಾಟ, ದ್ರುಪದ, ಯುಯುಧಾನ, ಶಿಖಂಡಿ, ಮತ್ತು ಮಹೇಷ್ವಾಸರಾದ ಪಾಂಚಾಲರಿಬ್ಬರು ಯುಧಾಮನ್ಯು-

ಉತ್ತಮೌಜಸರು ಹೊರಟರು. ವಿಚಿತ್ರ ಕವಚಗಳನ್ನು ಧರಿಸಿದ್ದ, ಬೆಳಗುತ್ತಿರುವ ಕುಂಡಲಗಳನ್ನು ಧರಿಸಿದ, ಅರಳಿನಿಂದ ಅವಸಿಕ್ತರಾಗಿದ್ದ ಆ ಶೂರ ಮಹೇಷ್ವಾಸರು ತುಪ್ಪವನ್ನು ಸುರಿಸಿ ಭುಗಿಲೆದ್ದ ಅಗ್ನಿಗಳಂತೆ ಮತ್ತು ಪ್ರಜ್ವಲಿಸುತ್ತಿರುವ ಗ್ರಹಗಳಂತೆ ಶೋಭಿಸಿದರು. ಮಹೀಪತಿ ನರರ್ಷಭನು ಸೈನ್ಯವನ್ನು ಯಥಾಯೋಗವಾಗಿ ಪೂಜಿಸಿ ಆ ಸೇನೆಗಳಿಗೆ ಪ್ರಯಾಣಿಸಲು ಆಜ್ಞೆಯನ್ನಿತ್ತನು. ಮೊದಲು ಪಾಂಡುನಂದನನು ಅಭಿಮನ್ಯು, ಬೃಹಂತ ಮತ್ತು ದ್ರೌಪದೇಯರೆಲ್ಲರನ್ನೂ ಧೃಷ್ಟದ್ಯುಮ್ನನ ನಾಯಕತ್ವದಲ್ಲಿ ಕಳುಹಿಸಿದನು. ಎರಡನೆಯ ಸೇನೆಯಾಗಿ ಯುಧಿಷ್ಠಿರನು ಭೀಮ, ಯುಯುಧಾನ, ಪಾಂಡವ ಧನಂಜಯರನ್ನು ಕಳುಹಿಸಿದನು. ಸಂತೋಷದಿಂದ ಧ್ವಜಗಳನ್ನು ಏರಿಸುವ, ಅಲ್ಲಲ್ಲಿ ಓಡಾಡತ್ತಿರುವ ಯೋಧರ ಶಬ್ಧವು ಆಕಾಶವನ್ನು ಮುಟ್ಟಿತು. ಸ್ವಯಂ ಮಹೀಪತಿಯು ವಿರಾಟ ದ್ರುಪದರೇ ಮೊದಲಾದ ಪೃಥಿವೀಪಾಲರೊಂದಿಗೆ ಹಿಂದೆ ನಡೆದನು. ಧೃಷ್ಟದ್ಯುಮ್ನನು ನಡೆಸುತ್ತಿದ್ದ ಆ ಭೀಮಧನ್ವಿಗಳ ಸೇನೆಯು ಪ್ರವಾಹವಾಗಿ ಮತ್ತು ಸ್ತಿಮಿತಗೊಂಡು ಹರಿಯುತ್ತಿರುವ ಗಂಗೆಯಂತೆ ತೋರಿತು. ಆಗ ಬುದ್ಧಿವಂತನು ಧೃತರಾಷ್ಟ್ರನ ಪುತ್ರರನ್ನು ಮೋಹಗೊಳಿಸಲು ಬುದ್ಧಿಯನ್ನುಪಯೋಗಿಸಿ ತನ್ನ ಸೇನೆಗಳನ್ನು ವಿಂಗಡಿಸಿದನು. ಮೊದಲನೆಯದರಲ್ಲಿ ಮಹೇಷ್ವಾಸರಾದ ದ್ರೌಪದೇಯರು, ಅಭಿಮನ್ಯು, ಪಾಂಡವ ನಕುಲ ಸಹದೇವರು ಮತ್ತು ಸರ್ವ ಪ್ರಭದ್ರಕರೂ ಇದ್ದರು. ಅವರಲ್ಲಿ ಹತ್ತು ಸಾವಿರ ಕುದುರೆಗಳು, ಎರಡು ಸಾವಿರ ಆನೆಗಳು, ಒಂದು ಲಕ್ಷ ಪದಾತಿಗಳು ಮತ್ತು ಐನೂರು

ರಥಗಳಿದ್ದವು. ದುರ್ಧರ್ಷ ಭೀಮಸೇನನು ಈ ಮೊದಲನೆಯ ಸೇನೆಯನ್ನು ನೋಡಿಕೊಂಡನು. ಮಧ್ಯಮ ಸೇನೆಯಲ್ಲಿ ವಿರಾಟ, ಮಾಗಧ ಜಯತ್ಸೇನ, ಮಹಾರಥಿ, ವೀರ್ಯವಂತ, ಮಹಾತ್ಮ, ಗದೆ-ಧನುಸ್ಸುಗಳನ್ನು ಹಿಡಿದ ಪಾಂಚಲರಿಬ್ಬರು - ಯುಧಾಮನ್ಯು, ಉತ್ತಮೌಜಸರು, ಮತ್ತು ಅವರ ಮಧ್ಯೆ ವಾಸುದೇವ-ಧನಂಜಯರಿಬ್ಬರಿದ್ದರು. ಆ ಸೇನೆಯಲ್ಲಿ ಅತಿ ಉತ್ಸಾಹಿಗಳಾದ ಪ್ರಹರಗಳಲ್ಲಿ ಕುಶಲರಾದ ಇಪ್ಪತ್ತುಸಾವಿರ ಧ್ವಜಗಳನ್ನು ಹಿಡಿದ ಶೂರ ಕವಚಧಾರೀ ನರರಿದ್ದರು. ಐದು ಸಾವಿರ ಆನೆಗಳಿದ್ದವು. ಎಲ್ಲೆಡೆಯಲ್ಲಿಯೂ ರಥಗಳಿದ್ದವು. ಧನುಸ್ಸು, ಖಡ್ಗ ಮತ್ತು ಗದೆಗಳನ್ನು ಧರಿಸಿದ ಶೂರ ಪದಾತಿಗಳಿದ್ದರು. ಮುಂದೆ ಹೋಗುತ್ತಿರುವ ಸಹಸ್ರಗಳನ್ನು ಸಹಸ್ರಗಳು ಹಿಂಬಾಲಿಸಿದವು. ಸ್ವಯಂ ಯುಧಿಷ್ಠಿರನಿದ್ದ ಸೇನೆಯಲ್ಲಿ ಸೇನಾಸಾಗರದಲ್ಲಿ ಇನ್ನುಳಿದ ಪೃಥಿವೀಪಾಲಕರು ಸೇರಿಕೊಂಡಿದ್ದರು. ಅದರಲ್ಲಿ ಸಹಸ್ರಾರು ಆನೆಗಳು, ಲಕ್ಷಗಟ್ಟಲೆ ಕುದುರೆಗಳು. ಸಹಸ್ರಾರು ರಥಗಳು, ಹಾಗೆಯೇ ಪದಾತಿಗಳಿದ್ದರು. ಅವರನ್ನು ಆಶ್ರಯಿಸಿ ಅವನು ಧಾರ್ತರಾಷ್ಟ್ರ ಸುಯೋಧನನೊಡನೆ ಯುದ್ಧಮಾಡಲು ಹೊರಟನು. ಅದರ ಹಿಂದಿನಿಂದ ನೂರಾರು ಸಹಸ್ರಾರು ಲಕ್ಷಲಕ್ಷ ಜನರು ಸಾವಿರಾರು ಸೇನೆಗಳಲ್ಲಿ ಜೋರಾಗಿ ಕೂಗುತ್ತಾ ಪ್ರಯಾಣಿಸಿದರು. ಅಲ್ಲಿ ಸಂತೋಷಗೊಂಡ ಸಹಸ್ರಾರು ಲಕ್ಷ ಜನರು ಸಹಸ್ರಾರು ಭೇರಿಗಳನ್ನು ಲಕ್ಷಗಟ್ಟಲೆ ಶಂಖಗಳನ್ನು ಮೊಳಗಿಸಿದರು.

# ಅಂಬೋಪಾಽಖ್ಯಾನ

## ಭೀಷ್ಮನು ಸ್ವಯಂವರದಿಂದ ಕಾಶಿಕನ್ಯೆಯರನ್ನು ಅಪಹರಿಸಿದುದು

ಭೀಷ್ಮನ ತಂದೆ ಭರತರ್ಷಭ ಧರ್ಮಾತ್ಮ ಮಹಾರಾಜಾ ಶಂತನುವು ಸಮಯದಲ್ಲಿ ದೈವನಿಶ್ಚಿತ ಅಂತ್ಯವನ್ನು ಸೇರಿದನು. ಆಗ ಭೀಷ್ಮನು ಪ್ರತಿಜ್ಞೆಯನ್ನು ಪರಿಪಾಲಿಸಿ ತಮ್ಮ ಚಿತ್ರಾಂಗದನನ್ನು ಮಹಾರಾಜನನ್ನಾಗಿ ಅಭಿಷೇಕಿಸಿದನು. ಅವನು ನಿಧನವನ್ನು ಹೊಂದಲು ಸತ್ಯವತಿಯ ಸಲಹೆಯಂತೆ ನಡೆದುಕೊಂಡು ಯಥಾವಿಧಿಯಾಗಿ ವಿಚಿತ್ರವೀರ್ಯನನ್ನು ರಾಜನನ್ನಾಗಿ ಅಭಿಷೇಕಿಸಲಾಯಿತು. ಇನ್ನೂ ಚಿಕ್ಕವನಾಗಿದ್ದರೂ ವಿಚಿತ್ರವೀರ್ಯನನ್ನು ಧರ್ಮತಃ ಭೀಷ್ಮನು ಅಭಿಷೇಕಿಸಿದನು. ಆ ಧರ್ಮಾತ್ಮನಾದರೋ ಸಲಹೆಗಳಿಗೆ ಭೀಷ್ಮನನ್ನೇ ನೋಡುತ್ತಿದ್ದನು. ಅವನಿಗೆ ವಿವಾಹ ಮಾಡಲು ಬಯಸಿ ಭೀಷ್ಮನು ಅವನಿಗೆ ಅನುರೂಪವಾದ ಕುಲವು ಯಾವುದೆಂದು ಮನಸ್ಸಿನಲ್ಲಿಯೇ ಚಿಂತಿಸತೊಡಗಿದನು. ಆಗ ರೂಪದಲ್ಲಿ ಅಪ್ರತಿಮರಾದ, ಎಲ್ಲ ಮೂವರು ಕಾಶೀರಾಜ ಸುತೆ ಕನ್ಯೆಯರ - ಅಂಬಾ, ಅಂಬಿಕಾ ಮತ್ತು ಇನ್ನುಬ್ಬಳು ಅಂಬಾಲಿಕಾ - ಸ್ವಯಂವರವೆಂದು ಕೇಳಿದನು. ಪೃಥ್ವಿಯ ಎಲ್ಲ ರಾಜರನ್ನೂ ಆಹ್ವಾನಿಸಲಾಗಿತ್ತು. ಹಿರಿಯವಳು ಅಂಬಾ. ಅಂಬಿಕೆಯು ಮಧ್ಯದವಳು.

ರಾಜಕನ್ಯೆ ಅಂಬಾಲಿಕೆಯು ಕಿರಿಯವಳು. ಆಗ ಭೀಷ್ಮನು ಒಬ್ಬನೇ ರಥದಲ್ಲಿ ಕಾಶೀಪತಿಯ ಪುರಿಗೆ ಹೋದನು. ಅಲ್ಲಿ ಸ್ವಲಂಕೃತರಾದ ಮೂವರು ಕನ್ಯೆಯರನ್ನೂ, ಸುತ್ತುವರೆದಿದ್ದ ಪಾರ್ಥಿವ ರಾಜರನ್ನೂ ನೋಡಿದನು. ಆಗ ಅವನು ನಿಂತ ಆ ನೃಪರೆಲ್ಲರನ್ನೂ ಸಮರಕ್ಕೆ ಆಹ್ವಾನಿಸಿ, ಆ ಕನ್ಯೆಯರನ್ನು ರಥದ ಮೇಲೇರಿಸಿಕೊಂಡನು. ಅವರನ್ನು ವೀರ್ಯಶುಲ್ಕವೆಂದು ತಿಳಿದು ರಥದ ಮೇಲೇರಿಸಿಕೊಂಡು ಅಲ್ಲಿ ಸಮಾಗತರಾಗಿದ್ದ ಸರ್ವ ಪಾರ್ಥಿವರಿಗೆ ಕೂಗಿ “ಭೀಷ್ಮ ಶಾಂತನವನು ಕನ್ಯೆಯರನ್ನು ಅಪಹರಿಸುತ್ತಿದ್ದಾನೆ” ಎಂದು ಪುನಃ ಪುನಃ ಹೇಳಿದನು:

> “ಸರ್ವ ಪಾರ್ಥಿವರೇ! ಪರಮ ಶಕ್ತಿಯನ್ನುಪಯೋಗಿಸಿ
> ಇವರನ್ನು ನೀವು ಬಿಡಿಸಿಕೊಳ್ಳಿ! ನರಾಧಿಪರೇ! ನಿಮ್ಮ
> ಕಣ್ಣೆದುರಿಗೇ ನಾನು ಇವರನ್ನು ಬಲಾತ್ಕಾರವಾಗಿ
> ಕೊಂಡೊಯ್ಯುತ್ತಿದ್ದೇನೆ!”

ಆಗ ಪೃಥಿವೀಪಾಲರು ಕೃದ್ಧರಾಗಿ ಆಯುಧಗಳನ್ನು ಹಿಡಿದೆತ್ತಿ “ರಥಗಳನ್ನು ಹೂಡಿ! ಹೂಡಿ!” ಎಂದು ಸಾರಥಿಗಳನ್ನು ಪ್ರಚೋದಿಸಿದರು. ಮೇಘಗಳಂತೆ ಗರ್ಜಿಸುವ ರಥಗಳ ಮೇಲೆ, ಗಜಗಳ ಮೇಲೆ ಗಜಯೋದ್ಧರು, ಇತರ ಮಹೀಪಾಲರು ರಥಗಳ ಮೇಲೆ ಆಯುಧಗಳನ್ನು ಎತ್ತಿ ಹಿಡಿದು ಆಕ್ರಮಣಿಸಿದರು. ಆಗ ಆ ಮಹೀಪಾಲರೆಲ್ಲರೂ ರಥಗಳ ಮಹಾ ಸಮೂಹದೊಂದಿಗೆ ಎಲ್ಲ ಕಡೆಯಿಂದ ಭೀಷ್ಮನನ್ನು ಸುತ್ತುವರೆದರು. ಅವನು ಮಹಾ ಶರವರ್ಷದಿಂದ, ದೇವರಾಜನು ದಾನವರನ್ನು ಹೇಗೋ ಹಾಗೆ ಆ ಎಲ್ಲ

ನೃಪರನ್ನೂ ಸೋಲಿಸಿ ತಡೆದನು. ಒಂದೊಂದೇ ಬಾಣಗಳಿಂದ ಅವರ ಬಣ್ಣಬಣ್ಣದ ಬಂಗಾರದಿಂದ ಪರಿಷ್ಕೃತಗೊಂಡಿದ್ದ ಧ್ವಜಗಳನ್ನು ಅವನು ಭೂಮಿಯ ಮೇಲೆ ಬೀಳಿಸಿದನು. ರಣದಲ್ಲಿ ನಗುತ್ತಾ, ಉರಿಯುವ ಶರಗಳಿಂದ ಅವರ ಕುದುರೆಗಳನ್ನು, ಆನೆಗಳನ್ನು ಮತ್ತು ಸಾರಥಿಗಳನ್ನೂ ಕೆಳಗುರುಳಿಸಿದನು. ಭೀಷ್ಮನ ಲಾಘವವನ್ನು ನೋಡಿ ಅವರು ಭಗ್ನರಾಗಿ ನಿವೃತ್ತರಾದರು. ಮಹೀಕ್ಷಿತರನ್ನು ಗೆದ್ದು ಅವನು ಹಸ್ತಿನಪುರಕ್ಕೆ ಬಂದನು. ಅಲ್ಲಿ ಅವನು ಸತ್ಯವತಿಗೆ ತಮ್ಮನಿಗಾಗಿ ತಂದ ಆ ಕನ್ಯೆಯರ ಮತ್ತು ನಡೆದ ಕಾರ್ಯಗಳ ಕುರಿತು ನಿವೇದಿಸಿದನು.

ಅಂಬೆಯು ಶಾಲ್ವನ ಬಳಿ ಹೋಗಲು ಭೀಷ್ಮನಲ್ಲಿ ಅನುಮತಿಯನ್ನು ಕೇಳಿದುದು

ಆಗ ಭೀಷ್ಮನು ತಾಯಿ ದಾಶೇಯಿಯ ಬಳಿಹೋಗಿ ನಮಸ್ಕರಿಸಿ ಹೇಳಿದನು:

> “ಪಾರ್ಥಿವರನ್ನು ಸೋಲಿಸಿ ವೀರ್ಯ ಶುಲ್ಕವಾಗಿ ಈ ಕಾಶೀಪತಿಯ ಕನ್ಯೆಯರನ್ನು ವಿಚಿತ್ರವೀರ್ಯನಿಗೆಂದು ಗಳಿಸಿದ್ದೇನೆ.”

ಆಗ ನೆತ್ತಿಯನ್ನು ಆಘ್ರಾಣಿಸಿ ಕಣ್ಣಲ್ಲಿ ನೀರನ್ನು ತುಂಬಿಸಿಕೊಂಡು ಸತ್ಯವತಿಯು ಹೇಳಿದಳು:

> “ಪುತ್ರ! ನೀನು ಗೆದ್ದು ಬಂದುದು ಒಳ್ಳೆಯದಾಯಿತು.

ಹರ್ಷವಾಯಿತು.”

ಸತ್ಯವತಿಯ ಅನುಮತಿಯಂತೆ ವಿವಾಹವನ್ನಿಟ್ಟುಕೊಳ್ಳಲಾಯಿತು. ಆಗ ಕಾಶಿಪತಿಯ ಹಿರಿಯ ಮಗಳು ನಾಚಿಕೊಂಡು ಈ ಮಾತನ್ನಾಡಿದಳು:

“ಭೀಷ್ಮ! ನೀನು ಧರ್ಮಜ್ಞನಾಗಿದ್ದೀಯೆ. ಸರ್ವಶಾಸ್ತ್ರವಿಶಾರದನಾಗಿದ್ದೀಯೆ. ನನ್ನ ಈ ಧರ್ಮದ ಮಾತುಗಳನ್ನು ಕೇಳಿ ಅಗತ್ಯವಾದುದನ್ನು ಮಾಡಬೇಕು. ಹಿಂದೆಯೇ ನಾನು ಶಾಲ್ವಪತಿಯನ್ನು ಮನಸಾರೆ ವರನೆಂದು ಆರಿಸಿಕೊಂಡಿದ್ದೆ. ಅವನೂ ಕೂಡ ನನ್ನನ್ನು ಹಿಂದೆ ವರಿಸಿದ್ದನು. ಆದರೆ ಇದು ತಂದೆಗೆ ತಿಳಿಯದೇ ರಹಸ್ಯವಾಗಿಯೇ ಇತ್ತು. ಶಾಸ್ತ್ರಗಳನ್ನು ತಿಳಿದಿರುವ ನೀನು ಹೇಗೆ ತಾನೇ ಇನ್ನೊಬ್ಬನನ್ನು ಬಯಸುವವಳನ್ನು ಮನೆಯಲ್ಲಿ, ವಿಶೇಷವಾಗಿ ಕೌರವರ ಮನೆಯಲ್ಲಿ, ವಾಸಿಸಲು ಬಿಡಬಲ್ಲೆ? ಇದನ್ನು ತಿಳಿದು ಯೋಚಿಸಿ ನಿಶ್ಚಯಿಸಿ ಮಾಡಬೇಕಾದುದನ್ನು ಮಾಡಬೇಕು. ಶಾಲ್ವರಾಜನು ನನಗೆ ನಿಶ್ಚಿತನಾದವನೆಂದು ತೋರುತ್ತದೆ. ಹೋಗಲು ಬಿಡು! ನನ್ನ ಮೇಲೆ ಕೃಪೆ ಮಾಡು. ನೀನು ಭೂಮಿಯಲ್ಲಿಯೇ ಸತ್ಯವ್ರತನೂ ವೀರನೂ ಎಂದು ನಾನು ಕೇಳಿದ್ದೇನೆ.”

## ಶಾಲ್ವನು ಅಂಬೆಯನ್ನು ತಿರಸ್ಕರಿಸಿದುದು

ಆಗ ಭೀಷ್ಮನು ಕಾಲೀ ಸತ್ಯವತಿಯ, ಹಾಗೆಯೇ ಮಂತ್ರಿಗಳು, ದ್ವಿಜರು

ಮತ್ತು ಪುರೋಹಿತರ ಅನುಜ್ಞೆಯನ್ನು ಪಡೆದು ಆ ಹಿರಿಯ ಕನ್ಯೆ ಅಂಬೆಗೆ ಅನುಜ್ಞೆಯನ್ನಿತ್ತನು. ಅವನಿಂದ ಅನುಜ್ಞಾತಳಾಗಿ ಆ ಕನ್ಯೆಯು ಶಾಲ್ವಪತಿಯ ಪುರಕ್ಕೆ ಹೋದಳು. ಹೋಗುವಾಗ ಅವಳು ವೃದ್ಧ ದ್ವಿಜರಿಂದ ರಕ್ಷಿತಳಾಗಿದ್ದಳು. ಅವಳನ್ನು ಓರ್ವ ದಾಸಿಯೂ ಅನುಸರಿಸಿ ಹೋದಳು. ಆ ದೂರವನ್ನು ಪ್ರಯಾಣಿಸಿ ನರಾಧಿಪನನ್ನು ತಲುಪಿದಳು. ರಾಜ ಶಾಲ್ವನ ಬಳಿಹೋಗಿ ಅವಳು ಈ ಮಾತುಗಳನ್ನಾಡಿದಳು: "ಮಹಾಬಾಹೋ! ನಿನ್ನನ್ನು ಬಯಸಿ ನಾನು ಬಂದಿದ್ದೇನೆ."

ಶಾಲ್ವಪತಿಯು ಮುಗುಳ್ನಗುತ್ತಾ ಅವಳಿಗೆ ಹೇಳಿದನು:

> "ವರವರ್ಣಿನೀ! ಈ ಮೊದಲು ಬೇರೆಯವನಳಾಗಿದ್ದವಳನ್ನು ನನ್ನ ಭಾರ್ಯೆಯನ್ನಾಗಿಸಿಕೊಳ್ಳಲು ಬಯಸುವುದಿಲ್ಲ. ಪುನಃ ಆ ಭಾರತನ ಬಳಿ ಹೋಗು. ಭೀಷ್ಮನು ಬಲಾತ್ಕರಿಸಿ ಕರೆದುಕೊಂಡು ಹೋದವಳನ್ನು ನಾನು ಇಚ್ಛಿಸುವುದಿಲ್ಲ. ಮಹಾಯುದ್ಧಲ್ಲಿ ಪೃಥಿವೀಪತಿಗಳನ್ನು ಗೆದ್ದು ನಿನ್ನನ್ನು ಕರೆದುಕೊಂಡು ಹೋಗುವಾಗ ನೀನು ಸಂತೋಷದಿಂದಲೇ ಅವನನ್ನು ಅನುಸರಿಸಿ ಹೋಗಿದ್ದೆ. ಈ ಮೊದಲು ಇನ್ನೊಬ್ಬನದ್ದಾಗಿರುವವಳನ್ನು ನಾನು ಪತ್ನಿಯನ್ನಾಗಿ ಬಯಸುವುದಿಲ್ಲ. ನನ್ನಂತಹ ವಿಜ್ಞಾನಗಳನ್ನು ತಿಳಿದವನು ಮತ್ತು ಇತರರಿಗೆ ಧರ್ಮದ ಆದೇಶವನ್ನು ನೀಡುವವನು ಹೇಗೆ ತಾನೇ ಇನ್ನೊಬ್ಬನ ಅರಮನೆಯನ್ನು ಪ್ರವೇಶಿಸಿದವಳನ್ನು

ಸ್ವೀಕರಿಸಿಯಾನು? ಕಾಲವನ್ನು ವ್ಯರ್ಥಮಾಡಬೇಡ. ನಿನಗಿಷ್ಟವಾದಲ್ಲಿಗೆ ಹೋಗು.”

ಅನಂಗಶರಪೀಡಿತಳಾದ ಅಂಬೆಯು ಅವನಿಗೆ ಹೇಳಿದಳು:

“ಮಹೀಪಾಲ! ಹೀಗೆ ಹೇಳಬೇಡ! ಹಾಗೇನೂ ನಡೆದಿಲ್ಲ. ಭೀಷ್ಮನು ಕರೆದುಕೊಂಡು ಹೋಗುವಾಗ ನಾನು ಸಂತೋಷಪಟ್ಟಿರಲಿಲ್ಲ. ಅವನು ಪೃಥಿವೀಪತಿಗಳನ್ನು ಗೆದ್ದು ಬಲಾತ್ಕಾರವಾಗಿ ಕರೆದೊಯ್ಯುತ್ತಿರುವಾಗ ನಾನು ಅಳುತ್ತಿದ್ದೆ. ನನ್ನನ್ನು – ಈ ಬಾಲೆ, ಭಕ್ತೆ, ಅನಾಗಸಳನ್ನು - ಪ್ರೀತಿಸು! ಭಕ್ತರನ್ನು ಪರಿತ್ಯಜಿಸುವುದನ್ನು ಧರ್ಮವೆಂದು ಹೇಳಲ್ಪಡುವುದಿಲ್ಲ. ಸಮರದಿಂದ ಹಿಂಜರಿಯದ ಗಾಂಗೇಯನ ಸಲಹೆಯನ್ನು ಕೇಳಿ, ಅವನಿಂದ ಅನುಜ್ಞಾತಳಾಗಿ ನಾನು ನಿನ್ನ ಮನೆಗೆ ಬಂದಿದ್ದೇನೆ. ಆ ಮಹಾಬಾಹು ಭೀಷ್ಮನಾದರೋ ನನ್ನನ್ನು ಬಯಸುವುದಿಲ್ಲ. ತನ್ನ ತಮ್ಮನಿಗಾಗಿ ಭೀಷ್ಮನು ಇದನ್ನು ಮಾಡಿದನೆಂದು ನಾನು ಕೇಳಿದ್ದೇನೆ. ಕರೆದುಕೊಂಡ ಹೋದ ನನ್ನ ತಂಗಿಯರಾದ ಅಂಬಿಕಾ-ಅಂಬಾಲಿಕೆಯರನ್ನು ಗಾಂಗೇಯನು ತನ್ನ ತಮ್ಮ ವಿಚಿತ್ರವೀರ್ಯನಿಗೆ ಕೊಟಿದ್ದಾನೆ. ನನ್ನ ನೆತ್ತಿಯ ಮೇಲೆ ಕೈಯಿಟ್ಟು ಹೇಳುತ್ತಿದ್ದೇನೆ - ನಿನ್ನನ್ನು ಬಿಟ್ಟು ಬೇರೆ ಯಾವ ನರನನ್ನೂ ನಾನು ಎಂದೂ ಯೋಚಿಸಿಲ್ಲ. ಹಿಂದೆ

ಇನ್ನೊಬ್ಬರವಳಾಗಿ ನಾನು ನಿನ್ನ ಬಳಿ ಬಂದಿಲ್ಲ. ನನ್ನ ಆತ್ಮದ ಮೇಲೆ ಆಣೆಯಿಟ್ಟು ಸತ್ಯವನ್ನೇ ಹೇಳುತ್ತಿದ್ದೇನೆ. ತಾನಾಗಿಯೇ ಬಂದಿರುವ, ಇದಕ್ಕೂ ಮೊದಲು ಬೇರೆಯವರದ್ದಾಗಿರದ, ನಿನ್ನ ಕರುಣೆಯನ್ನು ಬಯಸುವ ಕನ್ಯೆ ನನ್ನನ್ನು ಪ್ರೀತಿಸು."

ಈ ರೀತಿ ಅವಳು ಮಾತನಾಡಿದರೂ ಶಾಲ್ವನು ಕಾಶೀಪತಿಯ ಮಗಳನ್ನು ಹಾವು ಜೀರ್ಣವಾದ ಚರ್ಮವನ್ನು ಹೇಗೋ ಹಾಗೆ ತೊರೆದನು. ಈ ರೀತಿ ಬಹುವಿಧಗಳಲ್ಲಿ ಮಾತುಗಳಲ್ಲಿ ಬೇಡಿಕೊಂಡರೂ ಶಾಲ್ವಪತಿಯು ಆ ಕನ್ಯೆಯಲ್ಲಿ ಆಸಕ್ತಿಯನ್ನು ತೋರಿಸಲಿಲ್ಲ. ಆಗ ಆ ಕಾಶಿಪತಿಯ ಹಿರಿಯ ಮಗಳು ಕೋಪಾವಿಷ್ಟಳಾಗಿ, ಕಣ್ಣೀರು ಸುರಿಸಿ, ಕಣ್ಣೀರು ಉದ್ವೇಗಗಳು ತುಂಬಿದ ಧ್ವನಿಯಲ್ಲಿ ಹೇಳಿದಳು:

"ವಿಶಾಂಪತೇ! ನಿನ್ನಿಂದ ತ್ಯಕ್ತಳಾಗಿ ನಾನು ಎಲ್ಲೆಲ್ಲಿ ಹೋಗುತ್ತೇನೋ ಅಲ್ಲಿ ಸಂತರು ನನ್ನನ್ನು ರಕ್ಷಿಸುತ್ತಾರೆ. ಸತ್ಯವನ್ನೇ ಹೇಳುತ್ತೇನೆ."

ಈ ರೀತಿ ಮಾತನಾಡಿದರೂ ಶಾಲ್ವರಾಜನು ಕರುಣೆಯಿಂದ ಪರಿವೇದಿಸುತ್ತಿರುವ ಅವಳನ್ನು ಕ್ರೂರವಾಗಿ ಪರಿತ್ಯಜಿಸಿದನು.

"ಹೋಗು! ಹೋಗು! ಸುಶ್ರೋಣೀ! ಭೀಷ್ಮನಿಗೆ ಹೆದರುತ್ತೇನೆ. ಮತ್ತು ನೀನು ಭೀಷ್ಮನ ಸ್ವತ್ತು"

ಎಂದು ಶಾಲ್ವನು ಪುನಃ ಪುನಃ ಹೇಳಿದನು. ದೀರ್ಘದರ್ಶಿಯಲ್ಲದ

ಶಾಲ್ವನು ಹೀಗೆ ಹೇಳಲು ಅವಳು ದೀನಳಾಗಿ ಕುರರಿಯಂತೆ ರೋದಿಸುತ್ತಾ ಪುರದಿಂದ ಹೊರಬಂದಳು.

## ಶೈತವಕ್ಯ-ಅಂಬೆಯರ ಸಂವಾದ

ನಗರದಿಂದ ಹೊರಡುವಾಗ ಅವಳು ಚಿಂತಿಸಿದಳು:

> “ನನ್ನಂತಹ ವಿಷಮ ಪರಿಸ್ಥಿತಿಯಲ್ಲಿರುವ ಯುವತಿಯು ಭೂಮಿಯ ಮೇಲೇ ಇಲ್ಲ. ಬಾಂಧವರನ್ನು ಕಳೆದುಕೊಂಡಿದ್ದೇನೆ. ಶಾಲ್ವನಿಂದ ನಿರಾಕೃತಳಾಗಿದ್ದೇನೆ. ನಾನು ಪುನಃ ವಾರಣಾಸಾಹ್ವಯಕ್ಕೆ ಹೋಗಲು ಶಕ್ಯವಿಲ್ಲ. ಶಾಲ್ವನನ್ನು ಬಯಸಿದ ಕಾರಣದಿಂದ ಭೀಷ್ಮನಿಂದ ಅನುಜ್ಞಾತಳಾಗಿದ್ದೇನೆ. ಆಹೋ! ನನ್ನನ್ನೇ ನಿಂದಿಸಲೇ ಅಥವಾ ದುರಾಸದನಾದ ಭೀಷ್ಮನನ್ನು ದೂರಲೇ? ಅಥವಾ ನನ್ನ ಸ್ವಯಂವರವನ್ನು ಆಯೋಜಿಸಿದ ಮೂಢ ತಂದೆಯನ್ನು ದೂರಲೇ? ಹಿಂದೆ ಘೋರ ಯುದ್ಧವು ನಡೆಯುತ್ತಿರುವಾಗ ನಾನು ಭೀಷ್ಮನ ರಥದಿಂದ ಕೆಳಗೆ ಹಾರಿ ಶಾಲ್ವನಿಗಾಗಿ ಓಡಿ ಹೋಗದೇ ಇದ್ದುದೇ ನಾನು ಮಾಡಿದ ತಪ್ಪು. ಅದರ ಫಲವನ್ನೇ ಮೂಢಳಂತೆ ನಾನು ಈಗ ಅನುಭವಿಸಬೇಕಾಗಿದೆ! ಭೀಷ್ಮನಿಗೆ ಧಿಕ್ಕಾರ! ನನ್ನನ್ನು ಈ ರೀತಿ ವೀರ್ಯಶುಲ್ಕದ ಸ್ತ್ರೀಪಣವನ್ನಾಗಿ ಇರಿಸಿದ ನನ್ನ ಮಂದ ಮೂಢಚೇತಸ ತಂದೆಗೆ ಧಿಕ್ಕಾರ. ನನಗೇ ಧಿಕ್ಕಾರ! ಶಾಲ್ವರಾಜನಿಗೆ ಧಿಕ್ಕಾರ!

ಧಾತಾರನಿಗೂ ಧಿಕ್ಕಾರ! ಇವರ ದುರ್ನೀತಭಾವದಿಂದ ನಾನು ಈ ಅಧಿಕ ಆಪತ್ತನ್ನು ಹೊಂದಿದ್ದೇನೆ. ಮಾನವನು ಎಂದೂ ಭಾಗ್ಯವು ಕೊಟ್ಟಿರುವುದನ್ನು ಪಡೆಯುತ್ತಾನೆ. ಆದರೆ ಭೀಷ್ಮ ಶಾಂತನವನು ನನ್ನ ಕಷ್ಟಗಳನ್ನು ತಂದವರಲ್ಲಿ ಮುಖ್ಯನು. ಆದುದರಿಂದ ತಪಸ್ಸನ್ನು ಮಾಡಿ ಅಥವಾ ಯುದ್ಧವನ್ನು ಮಾಡಿ ಭೀಷ್ಮನೊಂದಿಗೆ ಸೇಡು ತೀರಿಸಿಕೊಳ್ಳುವುದೇ ಸರಿಯೆಂದು ತೋರುತ್ತಿದೆ. ಏಕೆಂದರೆ ನನ್ನ ದುಃಖಗಳಿಗೆ ಅವನೇ ಕಾರಣನೆಂದು ನನಗನ್ನಿಸುತ್ತದೆ. ಆದರೆ ಯಾವ ಮಹೀಪತಿಯು ತಾನೇ ಯುದ್ಧದಲ್ಲಿ ಭೀಷ್ಮನನ್ನು ಜಯಿಸಲು ಮುಂದೆ ಬರುತ್ತಾನೆ?”

ಹೀಗೆ ನಿಶ್ಚಯಿಸಿ ಅವಳು ನಗರದಿಂದ ಹೊರಬಂದಳು. ಪುಣ್ಯಶೀಲ ಮಹಾತ್ಮ ತಾಪಸರ ಆಶ್ರಮವನ್ನು ತಲುಪಿ ಅಲ್ಲಿ ತಾಪಸರಿಂದ ಪರಿವಾರಿತಳಾಗಿ ರಾತ್ರಿಯನ್ನು ಕಳೆದಳು. ತನಗೆ ನಡೆದುದೆಲ್ಲವನ್ನೂ - ಅಪಹರಣ, ಬಿಡುಗಡೆ ಮತ್ತು ಶಾಲ್ವನಿಂದ ತಿರಸ್ಕೃತಳಾದುದು - ಎಲ್ಲವನ್ನೂ ವಿಸ್ತಾರವಾಗಿ ಏನನ್ನೂ ಬಿಡದೇ ಆ ಶುಚಿಸ್ಮಿತೆಯು ಅವರಿಗೆ ಹೇಳಿದಳು. ಆಗ ಅಲ್ಲಿ ಶೈಖಾವತ್ಯದ ಮಹಾನ್‌ಬ್ರಾಹ್ಮಣ, ಸಂಶಿತವ್ರತ, ತಪೋವೃದ್ಧ, ಶಾಸ್ತ್ರ-ಅರಣ್ಯಕಗಳ ಗುರುವಿದ್ದನು. ಆ ಮಹಾತಪಸ್ವಿ ಮುನಿ ಶೈಖಾವತ್ಯನು ಆರ್ತಳಾದ, ಬಿಸಿಯುಸಿರು ಬಿಡುತ್ತಿದ್ದ, ಸತೀ, ಬಾಲಕಿ, ದುಃಖಶೋಕಪರಾಯಣೆಗೆ ಹೇಳಿದನು:

> “ಭದ್ರೇ! ಹೀಗಿರುವಾಗ ಆಶ್ರಮದಲ್ಲಿರುವ ಮಹಾಭಾಗ ತಪೋನಿತ್ಯ ಮಹಾತ್ಮ ತಪಸ್ವಿಗಳಾದರೋ ಏನು ಮಾಡಲು ಶಕ್ಯರು?”

ಅವಳು ಅವನಿಗೆ ಹೇಳಿದಳು:

> “ನನಗೆ ಅನುಗ್ರಹವನ್ನು ಮಾಡಬೇಕು. ನಾನು ಪ್ರವ್ರಾಜಿತಳಾಗಲು ಬಯಸುತ್ತೇನೆ. ದುಶ್ಚರ ತಪಸ್ಸನ್ನು ತಪಿಸುತ್ತೇನೆ. ಹಿಂದಿನ ದೇಹಗಳಲ್ಲಿರುವಾಗ ನಾನು ಮೂಢ ಕರ್ಮಗಳನ್ನು ಮಾಡಿದ್ದಿರಬಹುದು. ಮಾಡಿದ ಪಾಪಗಳಿಗೆ ಈ ಫಲವು ದೊರಕಿದೆ ಎನ್ನುವುದು ಖಂಡಿತ. ತಾಪಸರೇ! ಶಾಲ್ವನಿಂದ ತನ್ನವಳೆಂದು ಹೇಳಿಸಿಕೊಳ್ಳದೇ, ಸಮಾಧಾನವನ್ನು ಪಡೆಯದೇ, ನಿರಾಕೃತಳಾಗಿ ನನ್ನವರ ಬಳಿ ಪುನಃ ಹೋಗಲು ಬಯಸುವುದಿಲ್ಲ. ತಪಸ್ಸಿನ ಕುರಿತು ಉಪದೇಶವನ್ನು ಪಡೆಯಲು ಬಯಸುತ್ತೇನೆ. ದೇವಸಂಕಾಶರಾದ ನೀವು ನನಗೆ ಕೃಪರಾಗಬೇಕು.”

ಅವನು ಆ ಕನ್ಯೆಗೆ ಆಶ್ವಾಸನೆಯನ್ನಿತ್ತನು. ದೃಷ್ಟಾಂತ, ಆಗಮ, ಕಾರಣಗಳಿಂದ ಸಂತವಿಸಿದನು. ದ್ವಿಜರೊಂದಿಗೆ ಕಾರ್ಯವನ್ನು ಮಾಡುತ್ತೇವೆಂದು ಪ್ರತಿಜ್ಞೆಗೈದನು.

## ಹೋತ್ರವಾಹನ-ಅಂಬಾ ಸಂವಾದ

ಆಗ ಆ ಎಲ್ಲ ತಾಪಸರೂ ಆ ಕನ್ಯೆಗೆ ಧರ್ಮವತ್ತಾದ ಯಾವ ಕಾರ್ಯವನ್ನು ಮಾಡಬೇಕೆಂದು ಚಿಂತಿಸುತ್ತಾ ಕಾರ್ಯವಂತರಾದರು. ಕೆಲವು ತಾಪಸರು ಅವಳನ್ನು ತಂದೆಯ ಮನೆಗೆ ಕಳುಹಿಸಬೇಕೆಂದು ಹೇಳಿದರು. ಕೆಲವು ದ್ವಿಜೋತ್ತಮರು ನಮ್ಮನ್ನೇ ದೂರುವ ಮನಸ್ಸುಮಾಡಿದರು. ಕೆಲವರು ಶಾಲ್ವಪತಿಯ ಬಳಿ ಹೋಗಿ ಅವನನ್ನು ಒಪ್ಪಿಸಬೇಕೆಂದು ಅಭಿಪ್ರಾಯಪಟ್ಟರು. ಇನ್ನು ಕೆಲವರು ಅವಳನ್ನು ಅವನು ತ್ಯಜಿಸಿದ್ದಾನಾದ್ದರಿಂದ ಬೇಡ ಎಂದರು. ಹೀಗೆ ಕೆಲ ಸಮಯವು ಕಳೆಯಲು ಎಲ್ಲ ಸಂಶಿತವ್ರತ ತಾಪಸರೂ ಅವಳಿಗೆ ಪುನಃ ಹೇಳಿದರು:

> “ಭದ್ರೇ! ಮನೀಷಿಗಳು ಈ ವಿಷಯದಲ್ಲಿ ಏನು ತಾನೇ ಮಾಡಬಲ್ಲರು? ಈ ರೀತಿ ಅಲೆದಾಡುವುದನ್ನು ಬಿಡು. ಹಿತವಚನವನ್ನು ಕೇಳು. ನಿನ್ನ ತಂದೆಯ ಮನೆಗೆ ಹೋಗುವುದು ನಿನಗೆ ಒಳ್ಳೆಯದು. ನಿನ್ನ ತಂದೆ ರಾಜನು ಅನಂತರ ಏನು ಮಾಡಬೇಕೋ ಅದನ್ನು ಮಾಡುತ್ತಾನೆ. ಅಲ್ಲಿ ನೀನು ಸರ್ವ ಗುಣಗಳಿಂದ ಸುತ್ತುವರೆಯಲ್ಪಟ್ಟು ಸುಖದಿಂದ ವಾಸಿಸುವೆ. ತಂದೆಯಂತಹ ಗತಿಯು ನಾರಿಗೆ ಬೇರೆ ಯಾರೂ ಇಲ್ಲ. ನಾರಿಗೆ ಪತಿ ಅಥವ ಪಿತರೇ ಗತಿಯು. ಸುಖದಲ್ಲಿರುವಾಗ ಪತಿಯು ಗತಿಯಾದರೆ ಕಷ್ಟದಲ್ಲಿರುವಾಗ ಪಿತನು ಗತಿ. ವಿಶೇಷವಾಗಿ ಸುಕುಮಾರಿಯಾಗಿರುವ ನಿನಗೆ ಪರಿವ್ರಾಜಕತ್ವವು ತುಂಬಾ ದುಃಖಕರವಾದುದು. ರಾಜಪುತ್ರಿಯಾಗಿರುವ ನೀನು

ಪ್ರಕೃತಿಯಲ್ಲಿಯೇ ಕುಮಾರಿಯಾಗಿರುವೆ. ಆಶ್ರಮವಾಸದಲ್ಲಿ ಬಹಳ ದೋಷಗಳಿವೆಯೆಂದು ತಿಳಿದಿದ್ದೇವೆ. ಇವ್ಯಾವುದೂ ನಿನ್ನ ತಂದೆಯ ಮನೆಯಲ್ಲಿ ಇರುವುದಿಲ್ಲ."

ಆಗ ಆ ಬ್ರಾಹ್ಮಣರು ತಪಸ್ವಿನಿಗೆ ಈ ಮಾತನ್ನೂ ಹೇಳಿದರು:

"ನಿರ್ಜನವಾದ ಗಹನ ವನದಲ್ಲಿ ಏಕಾಂಗಿಯಾರುವ ನಿನ್ನನ್ನು ನೋಡಿ ರಾಜೇಂದ್ರರು ನಿನ್ನನ್ನು ಬಯಸುತ್ತಾರೆ. ಆದುದರಿಂದ ಆ ಮಾರ್ಗದಲ್ಲಿ ಹೋಗಲು ಮನಸ್ಸು ಮಾಡಬೇಡ!"

ಅಂಬೆಯು ಹೇಳಿದಳು:

"ಕಾಶೀನಗರದಲ್ಲಿ ತಂದೆಯ ಮನೆಗೆ ಪುನಃ ಹೋಗಲು ಶಕ್ಯವಿಲ್ಲ. ಬಾಂಧವರಿಗೆ ನಾನು ಗೊತ್ತಿಲ್ಲದವಳಾಗಿಬಿಡುತ್ತೇನೆ ಎನ್ನುವುದರಲ್ಲಿ ಸಂಶಯವಿಲ್ಲ. ತಾಪಸರೇ! ಏಕೆಂದರೆ ನಾನು ಬಾಲ್ಯದಲ್ಲಿ ತಂದೆಯ ಮನೆಯಲ್ಲಿ ವಾಸಿಸಿದ್ದುದು ಬೇರೆಯಾಗಿತ್ತು. ನನ್ನ ತಂದೆಯಿರುವಲ್ಲಿಗೆ ಹೋಗಿ ಅಲ್ಲಿ ವಾಸಿಸುವುದಿಲ್ಲ. ನಿಮಗೆ ಮಂಗಳವಾಗಲಿ. ತಾಪಸರಿಂದ ಪರಿಪಾಲಿತಳಾಗಿ ತಪಸ್ಸನ್ನು ತಪಿಸಲು ಬಯಸುತ್ತೇನೆ. ಇದರ ನಂತರದ ಲೋಕದಲ್ಲಿ ನನಗೆ ಈ ರೀತಿಯ ದೌರ್ಭಾಗ್ಯವಾಗಲೀ ಆಪತ್ತಾಗಲೀ ಬರದಿರಲೆಂದು ನಾನು ತಪಸ್ಸನ್ನು ತಪಿಸುತ್ತೇನೆ."

ಹೀಗೆ ಆ ವಿಪ್ರರು ಅದು ಇದು ಎಂದು ಯೋಚಿಸುತ್ತಿರುವಾಗ ಆ ವನಕ್ಕೆ ರಾಜರ್ಷಿ ತಪಸ್ವೀ ಹೋತ್ರವಾಹನನು ಬಂದನು. ಆಗ ಆ ತಾಪಸರೆಲ್ಲರೂ ಆ ನೃಪನನ್ನು ಪೂಜಿಸಿದರು. ಪೂಜೆ, ಆಸನ, ಉದಕಗಳನ್ನಿತ್ತು ಸ್ವಾಗತಿಸಿದರು. ಅವನು ಕುಳಿತುಕೊಂಡು ವಿಶ್ರಾಂತಿಯನ್ನು ಪಡೆದು ಪರಸ್ಪರರನ್ನು ಕೇಳಿದ ನಂತರ ವನೌಕಸರು ಮಾತುಕಥೆಯನ್ನು ಪುನಃ ಕನ್ಯೆಯ ಕಡೆ ನಡೆಸಿದರು. ಕಾಶೀರಾಜನ ಅಂಬೆಯ ಆ ಕಥೆಯನ್ನು ಕೇಳಿ ಅವಳ ತಾಯಿಯ ತಂದೆಯಾದ ಅವನು ನಡುಗುತ್ತಾ ಮೇಲೆದ್ದು, ಕನ್ಯೆಯನ್ನು ತೊಡೆಯ ಮೇಲೇರಿಸಿಕೊಂಡು ಸಮಾಧಾನಗೊಳಿಸಿದನು. ಅವನು ಅವಳ ವ್ಯಸನದ ಮೂಲವನ್ನು ಸಂಪೂರ್ಣವಾಗಿ ಕೇಳಲು ಅವಳೂ ಕೂಡ ಅವನಿಗೆ ನಡೆದುದೆಲ್ಲವನ್ನೂ ವಿಸ್ತಾರದಿಂದ ನಿವೇದಿಸಿದಳು. ಆಗ ಆ ರಾಜರ್ಷಿಯು ತುಂಬಾ ದುಃಖಶೋಕಸಮನ್ವಿತನಾದನು. ಏನು ಮಾಡಬೇಕೆಂದು ಆ ಸುಮಹಾತಪಸ್ವಿಯು ಯೋಚಿಸಿದನು. ಕಂಪಿಸುತ್ತಾ ಅವನು ಆರ್ತಳೂ ಸುದುಃಖಿತಳೂ ಆಗಿದ್ದ ಕನ್ಯೆಗೆ ಹೇಳಿದನು:

> “ಭದ್ರೇ! ತಂದೆಯ ಮನೆಗೆ ಹೋಗಬೇಡ! ನಿನ್ನ ತಾಯಿಯ ತಂದೆ ನಾನು. ನಾನು ನಿನ್ನ ದುಃಖವನ್ನು ಕಳೆಯುತ್ತೇನೆ. ಮಗಳೇ! ನನ್ನಲ್ಲಿ ವಿಶ್ವಾಸವಿಡು. ನಿನ್ನ ಮನಸ್ಸನ್ನು ಒಣಗಿಸುತ್ತಿರುವ ಬಯಕೆಯನ್ನು ನಾನು ಪೂರೈಸಿಕೊಡುತ್ತೇನೆ. ನನ್ನ ಮಾತಿನಂತೆ ಜಾಮದಗ್ನಿ ತಪಸ್ವಿ ರಾಮನಲ್ಲಿಗೆ ಹೋಗು. ರಾಮನು ನಿನ್ನ ಮಹಾ ದುಃಖ ಶೋಕಗಳನ್ನು ನಿವಾರಿಸುತ್ತಾನೆ.

ಅವನ ಮಾತಿನಂತೆ ನಡೆದುಕೊಳ್ಳದೇ ಇದ್ದರೆ ಭೀಷ್ಮನನ್ನು ಅವನು ರಣದಲ್ಲಿ ಕೊಲ್ಲುತ್ತಾನೆ. ಕಾಲಾಗ್ನಿಸಮನಾದ ತೇಜಸ್ಸುಳ್ಳ ಆ ಭಾರ್ಗವಶ್ರೇಷ್ಠನಲ್ಲಿಗೆ ಹೋಗು. ಆ ಮಹಾತಪಸ್ವಿಯು ನಿನ್ನನ್ನು ಸಮ ಮಾರ್ಗದಲ್ಲಿ ನೆಲೆಸುತ್ತಾನೆ."

ಆಗ ಒಂದೇಸಮನೆ ಕಣ್ಣೀರು ಸುರಿಸುತ್ತಿದ್ದ ಅವಳು ತನ್ನ ತಾಯಿಯ ತಂದೆ ಹೋತ್ರವಾನನನಿಗೆ ಪುನಃ ಪುನಃ ಹೇಳಿದಳು:

"ತಲೆಬಾಗಿ ನಮಸ್ಕರಿಸಿ ನಿನ್ನ ಶಾಸನದಂತೆ ಹೋಗುತ್ತೇನೆ. ಆದರೆ ಲೋಕವಿಶ್ರುತನಾದ ಆ ಅರ್ಯನನ್ನು ಇಂದು ನಾನು ಕಾಣಬಲ್ಲೆನೇ? ಭಾರ್ಗವನು ಹೇಗೆ ನನ್ನ ಈ ತೀವ್ರ ದುಃಖವನ್ನು ಕೊನೆಗೊಳಿಸಬಲ್ಲನು? ಇದನ್ನು ಕೇಳಲು ಬಯಸುತ್ತೇನೆ. ನಂತರ ಅಲ್ಲಿಗೆ ಹೋಗುತ್ತೇನೆ."

## ಅಕೃತವ್ರಣ-ಅಂಬಾ ಸಂವಾದ

ಹೋತ್ರವಾಹನನು ಹೇಳಿದನು:

"ವತ್ಸೇ! ಮಹಾವನದಲ್ಲಿ ಉಗ್ರತಪಸ್ಸಿನಲ್ಲಿ ನಿರತನಾಗಿರುವ ಸತ್ಯಸಂಧ ಮಹಾಬಲ ಜಾಮದಗ್ನಿಯನ್ನು ನೀನು ಕಾಣುತ್ತೀಯೆ. ಗಿರಿಶ್ರೇಷ್ಠವಾದ ಮಹೇಂದ್ರದಲ್ಲಿ ಋಷಿಗಳು, ವೇದವಿದುಷರು, ಮತ್ತು ಗಂಧರ್ವಾಪ್ಸರೆಯರು ನಿತ್ಯವೂ ರಾಮನನ್ನು ಉಪಾಸಿಸುತ್ತಾರೆ. ಅಲ್ಲಿಗೆ ಹೋಗು! ನಿನಗೆ ಮಂಗಳವಾಗಲಿ. ಮೊದಲು ಆ ತಪೋವೃದ್ಧ ದೃಢವ್ರತನಿಗೆ

ಶಿರಸಾ ವಂದಿಸಿ ನಾನು ಹೇಳಿದುದನ್ನು ಅವನಿಗೆ ಹೇಳು. ಯಾವ ಕಾರ್ಯವಾಗಬೇಕೆಂದು ಬಯಸುತ್ತೀಯೋ ಅದನ್ನೂ ಹೇಳು. ನನ್ನ ಹೆಸರನ್ನು ಹೇಳು. ರಾಮನು ಎಲ್ಲವನ್ನೂ ನಿನಗೆ ಮಾಡುತ್ತಾನೆ. ವೀರ, ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠ, ಜಮದಗ್ನಿಸುತ ರಾಮನು ನನ್ನ ಸಖ. ಪ್ರೀತಿಯ ಸ್ನೇಹಿತ."

ಪಾರ್ಥಿವ ಹೋತ್ರವಾಹನನು ಕನ್ಯೆಗೆ ಹೀಗೆ ಹೇಳುತ್ತಿರಲು ಅಲ್ಲಿಗೆ ರಾಮನ ಪ್ರಿಯ ಅನುಚರ ಅಕೃತವ್ರಣನು ಆಗಮಿಸಿದನು. ಆಗ ಸಹಸ್ರಾರು ಸಂಖ್ಯೆಗಳಲ್ಲಿ ಆ ಮುನಿಗಳೆಲ್ಲರೂ ಒಟ್ಟಿಗೇ ಮೇಲೆದ್ದರು. ರಾಜಾ ವಯೋವೃದ್ಧ ಸೃಂಜಯ ಹೋತ್ರವಾಹನನೂ ಕೂಡ ಹಾಗೆಯೇ ಮಾಡಿದನು. ಆಗ ಆ ವನೌಕಸರಿಬ್ಬರೂ ಯಥಾನ್ಯಾಯವಾಗಿ ಅನ್ಯೋನ್ಯರನ್ನು ಪ್ರಶ್ನಿಸಿ, ಒಟ್ಟಿಗೇ ಸುತ್ತುವರೆಯಲ್ಪಟ್ಟು ಕುಳಿತುಕೊಂಡರು. ಆಗ ಅವರಿಬ್ಬರೂ ಪ್ರೀತಿ, ಹರ್ಷ, ಮುದದಿಂದ ಕೂಡಿದ ಮನೋರಮ ದಿವ್ಯ ಕಥೆಗಳನ್ನು ಹೇಳಿ ಮಾತನಾಡಿದರು. ಆಗ ಮಾತಿನ ಕೊನೆಯಲ್ಲಿ ರಾಜರ್ಷಿ ಮಹಾತ್ಮ ಹೋತ್ರವಾಹನನು ಶ್ರೇಷ್ಠ ರಾಮನ ಕುರಿತು ಮಹರ್ಷಿ ಅಕೃತವ್ರಣನಲ್ಲಿ ಕೇಳಿದನು:

"ಮಹಾಬಾಹೋ! ಪ್ರತಾಪವಾನ್ ಜಾಮದಗ್ನಿಯು ಈಗ ಎಲ್ಲಿ ಕಾಣಲು ಸಿಗುತ್ತಾನೆ? ವೇದವಿದರಲ್ಲಿ ಶ್ರೇಷ್ಠನಾದ ಅವನನ್ನು ನೋಡಲು ಶಕ್ಯವಿದೆಯೇ?"

ಅಕೃತವ್ರಣನು ಹೇಳಿದನು:

“ಪ್ರಭೋ! ರಾಮನು ರಾಜರ್ಷಿ ಸೃಂಜಯನು ನನ್ನ ಪ್ರಿಯ ಸಖನೆಂದು ಸತತವಾಗಿ ನಿನ್ನ ಕುರಿತೇ ಹೇಳುತ್ತಿರುತ್ತಾನೆ. ನಾಳೆ ಪ್ರಭಾತದಲ್ಲಿ ರಾಮನು ಇಲ್ಲಿರುತ್ತಾನೆಂದು ನನಗನ್ನಿಸುತ್ತದೆ. ನಿನ್ನನ್ನು ನೋಡಲು ಬಯಸಿ ಇಲ್ಲಿಗೇ ಬರುವ ಅವನನ್ನು ನೀನು ಕಾಣುತ್ತೀಯೆ. ಈ ಕನ್ಯೆಯಾದರೋ ಏಕೆ ವನಕ್ಕೆ ಬಂದಿದ್ದಾಳೆ? ಇವಳು ಯಾರವಳು? ಮತ್ತು ನಿನಗೇನಾಗಬೇಕು? ಇದನ್ನು ತಿಳಿಯಲು ಬಯಸುತ್ತೇನೆ.”

ಹೋತ್ರವಾಹನನು ಹೇಳಿದನು:

“ವಿಭೋ! ಇವಳು ನನ್ನ ಮಗಳ ಮಗಳು. ಕಾಶಿರಾಜ ಸುತೆ. ಈ ಶುಭೆ ಹಿರಿಯವಳು ಸ್ವಯಂವರದಲ್ಲಿ ತನ್ನ ಇಬ್ಬರು ತಂಗಿಯರೊಂದಿಗೆ ನಿಂತಿದ್ದಳು. ಇವಳು ಅಂಬೆಯೆಂದು ವಿಖ್ಯಾತಳಾದ ಕಾಶಿಪತಿಯ ಜೇಷ್ಠ ಮಗಳು. ಅಂಬಿಕಾ ಮತ್ತು ಅಂಬಾಲಿಕೆಯರು ಇವಳ ಇತರ ಕಿರಿಯರು. ಆಗ ಕಾಶಿಪುರಿಯಲ್ಲಿ ಕ್ಷತ್ರಿಯ ಪಾರ್ಥಿವರೆಲ್ಲರೂ ಕನ್ಯನಿಮಿತ್ತವಾಗಿ ಸೇರಿದ್ದರು. ಅಲ್ಲಿ ಮಹಾ ಉತ್ಸವವೇ ನಡೆದಿತ್ತು. ಆಗ ಮಹಾವೀರ್ಯಶಾಲೀ ಶಾಂತನವ ಭೀಷ್ಮನು ಮಹಾತೇಜಸ್ವಿ ನೃಪರನ್ನು ಸದೆಬಡಿದು ಮೂವರು ಕನ್ಯೆಯರನ್ನೂ ಅಪಹರಿಸಿದನು. ಪೃಥಿವೀಪಾಲರನ್ನು ಗೆದ್ದು ಆ ವಿಶುಧ್ಧಾತ್ಮ ಭಾರತ ಭೀಷ್ಮನು ಕನ್ಯೆಯರೊಡನೆ ಗಜಾಹ್ವಯಕ್ಕೆ

ಹಿಂದಿರುಗಿದನು. ಅನಂತರ ಸತ್ಯವತಿಗೆ ಹೇಳಿ ಪ್ರಭುವು ತಮ್ಮ ವಿಚಿತ್ರವೀರ್ಯನ ವಿವಾಹವನ್ನು ಆಜ್ಞಾಪಿಸಿದನು. ಆಗ ವಿವಾಹದ ಸಿದ್ಧತೆಗಳನ್ನು ನೋಡಿ ಈ ಕನ್ಯೆಯು ಮಂತ್ರಿಗಳ ಮಧ್ಯದಲ್ಲಿ ಗಾಂಗೇಯನಿಗೆ ಹೇಳಿದಳು: “ವೀರ! ಶಾಲ್ವಪತಿಯನ್ನು ನಾನು ಮನಸಾರೆ ಪತಿಯನ್ನಾಗಿ ಆರಿಸಿಕೊಂಡಿದ್ದೇನೆ. ಇನ್ನೊಬ್ಬನ ಮೇಲೆ ಮನಸ್ಸಿಟ್ಟಿರುವ ನನ್ನನ್ನು ಕೊಡುವುದು ಸರಿಯಲ್ಲ.” ಅವಳ ಮಾತನ್ನು ಕೇಳಿ ಭೀಷ್ಮನು ಮಂತ್ರಿಗಳೊಂದಿಗೆ ಸಮಾಲೋಚನೆ ಮಾಡಿ ಸತ್ಯವತಿಯ ಅಭಿಪ್ರಾಯದಂತೆಯೂ ಇವಳನ್ನು ವಿಸರ್ಜಿಸಲು ನಿಶ್ಚಯಿಸಿದನು. ಭೀಷ್ಮನಿಂದ ಅನುಜ್ಞಾತಳಾಗಿ ಸಂತೋಷಗೊಂಡು ಈ ಕನ್ಯೆಯು ಸೌಭಪತಿಗೆ ಹೇಳಿದಳು: “ಪಾರ್ಥಿವರ್ಷಭ! ಭೀಷ್ಮನು ನನ್ನನ್ನು ಬಿಟ್ಟಿದ್ದಾನೆ. ಧರ್ಮವನ್ನು ಪ್ರತಿಪಾದಿಸು. ಹಿಂದೆಯೇ ನಾನು ನಿನ್ನನ್ನು ಮನಸಾ ಆರಿಸಿಕೊಂಡಿದ್ದೆ.” ಇವಳ ಚಾರಿತ್ರವನ್ನು ಶಂಕಿಸಿ ಶಾಲ್ವನೂ ಕೂಡ ಇವಳನ್ನು ತ್ಯಜಿಸಿದನು. ಆ ಇವಳು ಈ ತಪೋವನವನ್ನು ಸೇರಿ ತುಂಬಾ ತಪಸ್ಸಿನಲ್ಲಿ ನಿರತಳಾಗಿದ್ದಾಳೆ. ಅವಳ ವಂಶದ ವಿವರಗಳನ್ನು ಹೇಳಿಕೊಂಡಾಗ ನಾನು ಇವಳನ್ನು ಗುರುತಿಸಿದೆ. ಭೀಷ್ಮನೇ ಈ ದುಃಖಕ್ಕೆ ಕಾರಣನೆಂದು ಇವಳ ಅಭಿಪ್ರಾಯ.”

ಅಂಬೆಯು ಹೇಳಿದಳು:

“ಭಗವನ್! ಪೃಥಿವೀಪತಿಯು ಹೇಳಿದಂತೆಯೇ ನಡೆದಿದೆ. ಸೃಂಜಯ ಹೋತ್ರವಾಹನನು ನನ್ನ ತಾಯಿಯ ಶರೀರಕರ್ತ. ನನ್ನ ನಗರಕ್ಕೆ ಹಿಂದಿರುಗಲು ಉತ್ಸಾಹವಿಲ್ಲ. ಅವಮಾನ ಭಯವೂ ಇದೆ. ನಾಚಿಕೆಯೂ ಆಗುತ್ತಿದೆ. ಭಗವಾನ್ ರಾಮನು ಏನು ಹೇಳುತ್ತಾನೋ ಅದನ್ನೇ ಮಾಡಬೇಕೆಂದು ನನಗನ್ನಿಸುತ್ತಿದೆ.”

## ಪರಶುರಾಮ-ಅಂಬಾ ಸಂವಾದ

ಅಕೃತವ್ರಣನು ಹೇಳಿದನು:

“ಭದ್ರೇ! ಇಲ್ಲಿ ಎರಡು ದುಃಖಗಳಿವೆ. ಯಾವುದನ್ನು ಹೋಗಲಾಡಿಸಲು ಬಯಸುವೆ? ಯಾವುದರ ಪ್ರತೀಕಾರವನ್ನು ಬಯಸುತ್ತೀಯೆ? ಸತ್ಯವನ್ನು ನನಗೆ ಹೇಳು! ಒಂದುವೇಳೆ ಸೌಭಪತಿಯನ್ನು ಸೇರಬೇಕೆಂದು ನಿನ್ನ ಮನಸ್ಸಿದ್ದರೆ ಮಹಾತ್ಮ ರಾಮನು ನಿನಗೋಸ್ಕರವಾಗಿ ಅವನ ಮೇಲೆ ನಿಬಂಧನೆಯನ್ನು ಹಾಕಬಲ್ಲನು. ಅಥವಾ ಆಪಗೇಯ ಭೀಷ್ಮನನ್ನು ರಣದಲ್ಲಿ ಸೋಲುವುದನ್ನು ನೋಡಬೇಕೆಂದು ಇಚ್ಛಿಸಿದರೆ ಆ ಧೀಮತ ಭಾರ್ಗವ ರಾಮನು ಅದನ್ನೂ ಮಾಡಬಲ್ಲನು. ನಿನ್ನ ಮತ್ತು ಸೃಂಜಯನ ಮಾತನ್ನು ಕೇಳಿ ಅನಂತರ ಯಾವುದನ್ನು ಮಾಡಬೇಕೆಂದು ಯೋಚಿಸೋಣ.”

ಅಂಬೆಯು ಹೇಳಿದಳು:

“ಭಗವನ್! ಭೀಷ್ಮನು ತಿಳಿಯದೆಯೇ ನನ್ನನ್ನು ಅಪಹರಿಸಿದನು. ಏಕೆಂದರೆ ಭೀಷ್ಮನಿಗೆ ನನ್ನ ಮನಸ್ಸು ಶಾಲ್ವನಿಗೆ ಹೋಗಿತ್ತೆಂದು ತಿಳಿದಿರಲಿಲ್ಲ. ಈ ವಿಚಾರವನ್ನು ಮನಸ್ಸಿನಲ್ಲಿಟ್ಟುಕೊಂಡು ಯಥಾನ್ಯಾಯವಾದ ಉಪಾಯವನ್ನು ನೀವೇ ನಿಶ್ಚಯಿಸಬೇಕು ಮತ್ತು ಅದರಂತೆ ಮಾಡಬೇಕು. ಕುರುಶಾರ್ದೂಲ ಭೀಷ್ಮ ಅಥವಾ ಶಾಲ್ವರಾಜ ಇಬ್ಬರಲ್ಲಿ ಒಬ್ಬರ ಮೇಲೆ ಅಥವಾ ಇಬ್ಬರ ಮೇಲೂ, ಯಾವುದು ಸರಿಯೋ, ಅದನ್ನು ಮಾಡು. ನನ್ನ ದುಃಖದ ಮೂಲವನ್ನು ಯಥಾವತ್ತಾಗಿ ಹೇಳಿದ್ದೇನೆ. ಅದರ ಕುರಿತು ಯಾವುದು ಸರಿಯೋ ಅದನ್ನು ಮಾಡಬೇಕು.”

ಅಕೃತವ್ರಣನು ಹೇಳಿದನು:

“ಭದ್ರೇ! ನೀನು ಹೇಳಿದುದೆಲ್ಲವೂ ಧರ್ಮದ ಪ್ರಕಾರವೇ ಇವೆ. ಇನ್ನು ನನ್ನ ಮಾತನ್ನೂ ಕೇಳು. ಒಂದುವೇಳೆ ಆಪಗೇಯನು ನಿನ್ನನ್ನು ಗಜಸಾಹ್ವಯಕ್ಕೆ ಕರೆದುಕೊಂಡು ಹೋಗದೇ ಇದ್ದಿದ್ದರೆ ರಾಮನ ಹೇಳಿಕೆಯನ್ನು ತಲೆಯಲ್ಲಿ ಹೊತ್ತು ಶಾಲ್ವನು ನಿನ್ನನ್ನು ಸ್ವೀಕರಿಸುತ್ತಿದ್ದನು. ಆದರೆ ನಿನ್ನನ್ನು ಅವನು ಗೆದ್ದು ಅಪಹರಿಸಿಕೊಂಡು ಹೋದುದರಿಂದ ಶಾಲ್ವರಾಜನಿಗೆ ನಿನ್ನ ಮೇಲೆ ಸಂಶಯ ಬಂದಿದೆ. ಭೀಷ್ಮನು ಪೌರುಷದ ಸೊಕ್ಕಿನಲ್ಲಿದ್ದಾನೆ. ಗೆದ್ದ ಜಂಬದಲ್ಲಿದ್ದಾನೆ. ಆದುದರಿಂದ ನೀನು

ಭೀಷ್ಮನಿಗೆ ಪ್ರತಿಕ್ರಿಯೆ ಮಾಡಿಸುವುದು ಯುಕ್ತವಾಗಿದೆ.”

ಅಂಬೆಯು ಹೇಳಿದಳು:

> “ಬ್ರಹ್ಮನ್! ಒಂದುವೇಳೆ ನಾನು ರಣದಲ್ಲಿ ಭೀಷ್ಮನನ್ನು ಕೊಲ್ಲಬಹುದಾಗಿದ್ದರೆ ಎನ್ನುವ ಮಹಾ ಕಾಮವು ನಿತ್ಯವೂ ನನ್ನ ಹೃದಯದಲ್ಲಿ ಬೆಳೆಯುತ್ತಿದೆ. ದೋಷವು ಭೀಷ್ಮನ ಮೇಲಾದರೂ ಅಥವಾ ಶಾಲ್ವರಾಜನ ಮೇಲಾದರೂ ಹೋಗಲಿ. ಆದರೆ ಯಾರ ಕೃತ್ಯದಿಂದ ನಾನು ತುಂಬಾ ದುಃಖಿತಳಾಗಿದ್ದೇನೋ ಅವನನ್ನು ಶಿಕ್ಷಿಸಬೇಕು.”

ಈ ರೀತಿ ಅವರು ಮಾತನಾಡಿಕೊಳ್ಳುತ್ತಿರುವಾಗ ದಿನವು ಕಳೆಯಿತು. ಮತ್ತು ಸುಖ ಶೀತೋಷ್ಣ ಮಾರುತವು ಬೀಸಿ ರಾತ್ರಿಯೂ ಕಳೆಯಿತು. ಆಗ ಶಿಷ್ಯರಿಂದ ಪರಿವೃತನಾಗಿ ಜಟಾಚೀರಧರ ಮುನಿ ರಾಮನು ಪ್ರಜ್ವಲಿಸುವ ತೇಜಸ್ಸಿನೊಂದಿಗೆ ಆಗಮಿಸಿದನು. ಕೈಯಲ್ಲಿ ಧನುಸ್ಸು, ಖಡ್ಗ ಮತ್ತು ಪರಶುಗಳನ್ನು ಹಿಡಿದು ಧೂಳಿಲ್ಲದೇ ಹೊಳೆಯುತ್ತಾ ಅವನು ಸೃಂಜಯರ ನೃಪನನ್ನು ಸಮೀಪಿಸಿದನು. ಆಗ ಆ ತಾಪಸನನ್ನು ನೋಡಿ ಆ ರಾಜ ಮಹಾತಪಸ್ವಿ, ಆ ತಪಸ್ವಿನಿ ಕನ್ಯೆ ಮತ್ತು ಎಲ್ಲರೂ ಕೈಮುಗಿದು ನಿಂತುಕೊಂಡರು. ಭಾರ್ಗವನನ್ನು ಮಧುಪರ್ಕದಿಂದ ಪೂಜಿಸಿದರು. ಯಥಾಯೋಗವಾಗಿ ಪೂಜಿಸಲ್ಪಟ್ಟು ಅವನು ಅವರೊಂದಿಗೆ ಕುಳಿತುಕೊಂಡನು. ಆಗ ರಾಜರ್ಷಿ ಸೃಂಜಯ ಮತ್ತು ಜಾಮದಗ್ನಿ ಇಬ್ಬರೂ ಹಿಂದೆ ನಡೆದುದರ ಕುರಿತು

ಮಾತುಕಥೆಯನ್ನಾಡಿದರು. ಆಗ ಮಾತಿನ ಕೊನೆಯಲ್ಲಿ ಮಧುರ ಕಾಲದಲ್ಲಿ ರಾಜರ್ಷಿಯು ಮಹಾಬಲ ಭೃಗುಶ್ರೇಷ್ಠ ರಾಮನಿಗೆ ಅರ್ಥವತ್ತಾದ ಈ ಮಾತುಗಳನ್ನಾಡಿದನು:

> "ರಾಮ! ಇವಳು ನನ್ನ ಮಗಳ ಮಗಳು, ಕಾಶಿರಾಜಸುತೆ. ಇವಳನ್ನು ಕೇಳಿ ಹೇಗೆ ತಿಳಿಯುತ್ತದೆಯೋ ಹಾಗೆ ಮಾಡು."

"ಆಗಲಿ. ಹೇಳು!" ಎಂದು ರಾಮನು ಅವಳಿಗೆ ಹೇಳಲು ಅವಳು ಬೆಂಕಿಯಂತ ಕಣ್ಣೀರನ್ನು ಸುರಿಸುತ್ತಾ ರಾಮನಲ್ಲಿಗೆ ಬಂದಳು. ಆ ಶುಭೆಯು ರಾಮನ ಚರಣಗಳಿಗೆ ಶಿರಸಾ ನಮಸ್ಕರಿಸಿ, ಪದ್ಮದಲಗಳಂತಿರುವ ಕೈಗಳಿಂದ ಮುಟ್ಟಿ, ನಿಂತುಕೊಂಡಳು. ಕಣ್ಣೀರುತುಂಬಿದ ಕಣ್ಣುಗಳ ಆ ಶೋಕವತಿಯು ರೋದಿಸಿದಳು. ಶರಣ್ಯ ಭೃಗುನಂದನನ ಶರಣು ಹೊಕ್ಕಳು. ರಾಮನು ಹೇಳಿದನು:

> "ನೃಪಾತ್ಮಜೇ! ಸೃಂಜಯನಿಗೆ ನೀನು ಹೇಗೋ ಹಾಗೆ ನನಗೂ ಕೂಡ. ನಿನ್ನ ಮನೋದುಃಖವೇನೆಂದು ಕೇಳು. ನಿನ್ನ ಮಾತನ್ನು ಮಾಡಿಕೊಡುತ್ತೇನೆ."

ಅಂಬೆಯು ಹೇಳಿದಳು:

> "ಮಹಾವ್ರತ! ಇಂದು ನಿನ್ನ ಶರಣು ಹೊಕ್ಕಿದ್ದೇನೆ. ನನ್ನನ್ನು ಘೋರವಾದ ಈ ಶೋಕದ ಕೆಸರು-ಕೂಪದಿಂದ ಉದ್ಧರಿಸು."

ಅವಳ ರೂಪ, ವಯಸ್ಸು, ಅಭಿನವ ಮತ್ತು ಪರಮ ಸೌಕುಮಾರ್ಯವನ್ನು

ನೋಡಿ ರಾಮನು ಚಿಂತಾಪರನಾದನು. "ಇವಳು ಏನನ್ನು ಹೇಳಲಿದ್ದಾಳೆ?" ಎಂದು ವಿಮರ್ಶಿಸಿ ಭೃಗುಸತ್ತಮ ರಾಮನು ಒಂದು ಕ್ಷಣ ಯೋಚಿಸಿ ಕೃಪೆಯಿಂದ ಅವಳನ್ನು ನೋಡಿದನು. "ಹೇಳು!" ಎಂದು ಪುನಃ ರಾಮನು ಹೇಳಲು ಶುಚಿಸ್ಮಿತೆಯು ಭಾರ್ಗವನಿಗೆ ನಡೆದುದೆಲ್ಲವನ್ನೂ ಹೇಳಿದಳು. ರಾಜಪುತ್ರಿಯ ಆ ಮಾತುಗಳನ್ನು ಕೇಳಿ ಜಾಮದಗ್ನಿಯು ನಿಶ್ಚಿತಾರ್ಥವನ್ನು ಆ ವರಾರೋಹೆಗೆ ತಿಳಿಸಿದನು.

> "ಭಾಮಿನೀ! ಕುರುಶ್ರೇಷ್ಠ ಭೀಷ್ಮನಿಗೆ ಹೇಳಿ ಕಳುಹಿಸುತ್ತೇನೆ. ಆ ನರಾಧಿಪನು ನನ್ನ ಮಾತುಗಳನ್ನು ಕೇಳಿ ಧರ್ಮಯುಕ್ತವಾದುದನ್ನು ಮಾಡುತ್ತಾನೆ. ನಾನು ಹೇಳಿದ ಮಾತಿನಂತೆ ನಡೆದುಕೊಳ್ಳದೇ ಇದ್ದರೆ ನಾನು ಅಸ್ತ್ರತೇಜಸ್ಸಿನಿಂದ ಅಮಾತ್ಯರೊಂದಿಗೆ ಜಾಹ್ನವೀಸುತನನ್ನು ರಣದಲ್ಲಿ ಸುಟ್ಟುಹಾಕುತ್ತೇನೆ. ಅಥವಾ ನಿನಗೆ ಆ ಕಡೆ ಮನಸ್ಸು ತಿರುಗಿದರೆ ಮೊದಲು ನಾನು ವೀರ ಶಾಲ್ವಪತಿಯನ್ನು ಕಾರ್ಯಗತನಾಗುವಂತೆ ಮಾಡುತ್ತೇನೆ."

ಅಂಬೆಯು ಹೇಳಿದಳು:

> "ಭೃಗುನಂದನ! ಮೊದಲೇ ನನ್ನ ಮನಸ್ಸು ಶಾಲ್ವರಾಜನ ಮೇಲೆ ಹೋಗಿದೆ ಎಂದು ತಿಳಿದಕೂಡಲೇ ಭೀಷ್ಮನು ನನ್ನನ್ನು ಬಿಟ್ಟುಬಿಟ್ಟಿದ್ದಾನೆ. ಸೌಭರಾಜನಲ್ಲಿಗೆ ಹೋಗಿ ಅವನಿಗೆ ನನ್ನ ಕಷ್ಟದ ಮಾತುಗಳನ್ನಾಡಿದೆನು. ಅವನಾದರೋ ನನ್ನ

ಚಾರಿತ್ರವನ್ನು ಶಂಕಿಸಿ ನನ್ನನ್ನು ಸ್ವೀಕರಿಸಲಿಲ್ಲ.ಇವೆಲ್ಲವನ್ನೂ ಸ್ವಬುದ್ಧಿಯಿಂದ ವಿಮರ್ಶಿಸಿ ಈ ವಿಷಯದಲ್ಲಿ ಏನನ್ನು ಮಾಡಬೇಕೆನ್ನುವುದನ್ನು ಚಿಂತಿಸಬೇಕಾಗಿದೆ. ಅಲ್ಲಿ ನನ್ನನ್ನು ವಶಮಾಡಿಕೊಂಡು ಬಲಾತ್ಕಾರವಾಗಿ ಎತ್ತಿಕೊಂಡು ಹೋದ ಮಹಾವ್ರತ ಭೀಷ್ಮನೇ ನನ್ನ ಈ ವ್ಯಸನದ ಮೂಲ. ಈ ರೀತಿಯ ದುಃಖವನ್ನು ನನಗೆ ತಂದೊದಗಿಸಿದ, ಯಾರಿಂದ ಈ ಮಹಾ ದುಃಖವನ್ನು ಹೊತ್ತು ತಿರುಗುತ್ತಿದ್ದೇನೋ ಆ ಭೀಷ್ಮನನ್ನು ಕೊಲ್ಲು! ಅವನು ಲುಬ್ಧ, ಸೊಕ್ಕಿನವ, ವಿಜಯಶಾಲಿಯೆಂದು ಜಂಬವಿದೆ. ಆದುದರಿಂದ ಅವನೊಂದಿಗೆ ಸೇಡು ತೀರಿಸಿಕೊಳ್ಳುವುದು ಯುಕ್ತವಾಗಿದೆ. ಭಾರತನು ನನ್ನನ್ನು ಅಪಹರಿಸಿಕೊಂಡು ಹೋಗುತ್ತಿರುವಾಗ ಆ ಮಹಾವ್ರತನನ್ನು ಕೊಲ್ಲಬೇಕೆನ್ನುವ ಸಂಕಲ್ಪವು ನನ್ನ ಹೃದಯದಲ್ಲಿ ಬಂದಿತ್ತು. ನನ್ನ ಬಯಕೆಯನ್ನು ಪೂರೈಸು. ಪುರಂದರನು ವೃತ್ರನನ್ನು ಹೇಗೋ ಹಾಗೆ ಭೀಷ್ಮನನ್ನು ಸಂಹರಿಸು!”

## ಪರಶುರಾಮನು ಅಂಬೆಯೊಂದಿಗೆ ಭೀಷ್ಮನಲ್ಲಿಗೆ ಹೊರಟಿದುದು

ಹೀಗೆ ಭೀಷ್ಮನನ್ನು ಕೊಲ್ಲು! ಎಂದು ಅವಳು ಹೇಳಲು ರಾಮನು ರೋದಿಸುತ್ತಿರುವ ಆ ಕನ್ಯೆಯನ್ನು ಒತ್ತಾಯಿಸುತ್ತಾ ಪುನಃ ಪುನಃ

ಹೇಳಿದನು:

"ಕಾಶ್ಯೇ! ಬ್ರಹ್ಮವಿದರ ಕಾರಣಕ್ಕಲ್ಲದೇ ನಾನು ಇಷ್ಟಪಟ್ಟು ಶಸ್ತ್ರಗಳನ್ನು ಹಿಡಿಯುವುದಿಲ್ಲ. ನಾನು ನಿನಗಾಗಿ ಇನ್ನೇನು ಮಾಡಬೇಕು? ಭೀಷ್ಮ ಮತ್ತು ಶಾಲ್ವ ಇಬ್ಬರು ರಾಜರೂ ನನ್ನ ಇಚ್ಛೆಯಂತೆ ನಡೆದುಕೊಳ್ಳುತ್ತಾರೆ. ಅದನ್ನು ನಾನು ಮಾಡುತ್ತೇನೆ. ಶೋಕಿಸಬೇಡ! ಆದರೆ ಬ್ರಾಹ್ಮಣರ ನಿಯೋಗವಿಲ್ಲದೇ ಶಸ್ತ್ರಗಳನ್ನು ಎಂದೂ ಹಿಡಿಯುವುದಿಲ್ಲ. ಅದು ನಾನು ಮಾಡಿದ ಪ್ರತಿಜ್ಞೆ."

ಅಂಬೆಯು ಹೇಳಿದಳು:

"ಹೇಗಾದರೂ ಮಾಡಿ ಭೀಷ್ಮನಿಂದುಂಟಾದ ನನ್ನ ಈ ದುಃಖವನ್ನು ಹೋಗಲಾಡಿಸು. ಈಶ್ವರ! ಬೇಗನೇ ಅವನನ್ನು ಕೊಲ್ಲು!"

ರಾಮನು ಹೇಳಿದನು:

"ಕಾಶಿಕನ್ಯೇ! ಇನ್ನೊಮ್ಮೆ ಹೇಳು. ಬೇಕಾದರೆ ಭೀಷ್ಮನು ನಿನ್ನ ಚರಣಗಳಿಗೆ ಶಿರಸಾ ವಂದಿಸಿಯಾನು. ಅವನು ನನ್ನ ಮಾತನ್ನು ಸ್ವೀಕರಿಸುತ್ತಾನೆ."

ಅಂಬೆಯು ಹೇಳಿದಳು:

"ರಾಮ! ನನಗೆ ಪ್ರಿಯವಾದುದನ್ನು ಮಾಡಲು

ಬಯಸುವೆಯಾದರೆ ರಣದಲ್ಲಿ ಭೀಷ್ಮನನ್ನು ಸಂಹರಿಸು. ನೀನು ಭರವಸೆಯಿತ್ತುದನ್ನು ಸತ್ಯವಾಗಿಸಬೇಕು!"

ರಾಮ ಮತ್ತು ಅಂಬೆಯರು ಈ ರೀತಿ ಮಾತನಾಡಿಕೊಳ್ಳುತ್ತಿರಲು ಅಕೃತವ್ರಣನು ಜಾಮದಗ್ನಿಗೆ ಈ ಮಾತನ್ನಾಡಿದನು:

"ಮಹಾಬಾಹೋ! ಶರಣಾಗತಳಾಗಿರುವ ಕನ್ಯೆಯನ್ನು ತ್ಯಜಿಸಬಾರದು. ಅಸುರನಂತೆ ಗರ್ಜಿಸುತ್ತಿರುವ ಭೀಷ್ಮನನ್ನು ರಣದಲ್ಲಿ ಕೊಲ್ಲು. ಒಂದುವೇಳೆ ನೀನು ಭೀಷ್ಮನನ್ನು ರಣಕ್ಕೆ ಕರೆದರೆ ಅವನು ಸೋತಿದ್ದೇನೆಂದು ಅಥವಾ ನಿನ್ನ ಮಾತಿನಂತೆ ಮಾಡುತ್ತೇನೆ ಎಂದು ಹೇಳುತ್ತಾನೆ. ಆಗ ಈ ಕನ್ಯೆಯ ಕಾರ್ಯವನ್ನು ಮಾಡಿಕೊಟ್ಟಾದ ಹಾಗಾಗುತ್ತದೆ ಮತ್ತು ನಿನ್ನ ಮಾತನ್ನೂ ಸತ್ಯವಾಗಿಸಿದಂತಾಗುತ್ತದೆ. ಕ್ಷತ್ರಿಯರೆಲ್ಲರನ್ನೂ ಗೆದ್ದು ನೀನು ಬ್ರಾಹ್ಮಣರಿಗೆ ಕೇಳಿಸುವಂತೆ ನೀನು ಈ ಪ್ರತಿಜ್ಞೆಯನ್ನೂ ಮಾಡಿದ್ದೆ. ರಣದಲ್ಲಿ ಬ್ರಾಹ್ಮಣನಾಗಲೀ, ಕ್ಷತ್ರಿಯನಾಗಲೀ, ವೈಶ್ಯನಾಗಲೀ, ಶೂದ್ರನಾಗಲೀ ಬ್ರಹ್ಮದ ವಿರುದ್ಧರಾದವರನ್ನು ಕೊಲ್ಲುತ್ತೇನೆ ಎಂದು. ಜೀವದ ಆಸೆಯಿಂದ ಭೀತರಾಗಿ ಶರಣು ಬಂದ ಪ್ರಪನ್ನರನ್ನು ನಾನು ಜೀವಂತವಿರುವಾಗ ಎಂದೂ ಪರಿತ್ಯಜಿಸಲಾರೆ. ಯಾರಾದರೂ ರಣದಲ್ಲಿ ಸೇರಿರುವ ಎಲ್ಲ ಕ್ಷತ್ರಿಯರನ್ನು ಜಯಿಸಿದರೂ ಆ ಸೊಕ್ಕಿನವನನ್ನು ನಾನು ಕೊಲ್ಲುತ್ತೇನೆ ಎಂದು. ಇದೇ ರೀತಿ

ಕುರುಕುಲೋದ್ವಹ ಭೀಷ್ಮನು ವಿಜಯವನ್ನು ಸಾಧಿಸಿದ್ದಾನೆ. ಸಂಗ್ರಾಮದದಲ್ಲಿ ಅವನನ್ನು ಎದುರಿಸಿ ಯುದ್ಧ ಮಾಡು!”

ರಾಮನು ಹೇಳಿದನು:

“ಋಷಿಸತ್ತಮ! ಹಿಂದೆ ಮಾಡಿದ ಪ್ರತಿಜ್ಞೆಯನ್ನು ನಾನು ನೆನಪಿಸಿಕೊಳ್ಳುತ್ತಿದ್ದೇನೆ. ಸಾಮದಿಂದ ಏನು ದೊರೆಯುತ್ತದೆಯೋ ಅದನ್ನು ಮಾಡುತ್ತೇನೆ. ಕಾಶಿಕನ್ಯೆಯ ಮನಸ್ಸಿನಲ್ಲಿರುವುದು ಮಹಾ ಕಾರ್ಯವು. ಕನ್ಯೆಯನ್ನು ಕರೆದುಕೊಂಡು ಸ್ವಯಂ ನಾನೇ ಅವನಿರುವಲ್ಲಿಗೆ ಹೋಗುತ್ತೇನೆ. ಒಂದುವೇಳೆ ರಣಶ್ಲಾಘೀ ಭೀಷ್ಮನು ನನ್ನ ಮಾತಿನಂತೆ ಮಾಡದಿದ್ದರೆ ಆ ಉದ್ರಿಕ್ತನನ್ನು ಕೊಲ್ಲುತ್ತೇನೆ. ಇದು ನನ್ನ ನಿಶ್ಚಯ. ಏಕೆಂದರೆ ನಾನು ಬಿಟ್ಟ ಬಾಣಗಳು ಶರೀರಿಗಳ ದೇಹವನ್ನು ಹೊಗುವುದಿಲ್ಲ. ಇದನ್ನು ನೀನು ಹಿಂದೆ ಕ್ಷತ್ರಿಯರೊಂದಿಗಿನ ಸಂಗರದಲ್ಲಿ ತಿಳಿದುಕೊಂಡಿದ್ದೀಯೆ.”

ಹೀಗೆ ಹೇಳಿ ರಾಮನು ಮಹಾಮನಸ್ವಿ ಬ್ರಹ್ಮವಾದಿಗಳೊಂದಿಗೆ ಪ್ರಯಾಣದ ಮನಸ್ಸು ಮಾಡಿ ಮೇಲೆದ್ದನು. ರಾತ್ರಿಯನ್ನು ಅಲ್ಲಿಯೇ ಕಳೆದು, ತಾಪಸರು ಅಗ್ನಿಗಳಲ್ಲಿ ಆಹುತಿಗಳನ್ನಿತ್ತು, ಜಪಗಳನ್ನು ಜಪಿಸಿ, ಭೀಷ್ಮನನ್ನು ಕೊಲ್ಲಲೋಸುಗ ಹೊರಟರು. ಆಗ ರಾಮನು ಆ ಬ್ರಾಹ್ಮಣರ್ಷಭರೊಂದಿಗೆ ಮತ್ತು ಕನ್ಯೆಯೊಂದಿಗೆ ಕುರುಕ್ಷೇತ್ರಕ್ಕೆ ಆಗಮಿಸಿದನು. ಮಹಾತ್ಮ ಭೃಗುಶ್ರೇಷ್ಠನ ನಾಯಕತ್ವದಲ್ಲಿ ಎಲ್ಲ

ತಾಪಸರೂ ಸರಸ್ವತೀ ತೀರದಲ್ಲಿ ಬೀಡುಬಿಟ್ಟರು.

## ಪರಶುರಾಮ-ಭೀಷ್ಮರ ಸಂವಾದ

ಸಮ ಪ್ರದೇಶದಲ್ಲಿ ನೆಲೆಸಿದ ಮೂರನೆಯ ದಿವಸದಲ್ಲಿ ಆ ಮಹಾವ್ರತನು ತಾನು ಬಂದಿದ್ದೇನೆ ಎಂದು ಸಂದೇಶವನ್ನು ಭೀಷ್ಮನಿಗೆ ಕಳುಹಿಸಿದನು. ತನ್ನ ದೇಶದ ಗಡಿಗೆ ಆ ಮಹಾಬಲ ತೇಜೋನಿಧಿ ಪ್ರಭುವು ಬಂದಿದ್ದಾನೆಂದು ಕೇಳಿ ಭೀಷ್ಮನು ಪ್ರೀತಿಯಿಂದ ಗೋವುಗಳನ್ನು ಮುಂದಿರಿಸಿಕೊಂಡು ಬ್ರಾಹ್ಮಣರು, ಮತ್ತು ದೇವಕಲ್ಪ ಋತ್ವಿಗರು ಹಾಗೂ ಪುರೋಹಿತರಿಂದ ಸುತ್ತುವರೆಯಲ್ಪಟ್ಟು ಅವನಲ್ಲಿಗೆ ಹೋದನು. ಅವನು ಬಂದಿರುದುದನ್ನು ನೋಡಿ ಪ್ರತಾಪವಾನ್ ಜಾಮದಗ್ನಿಯು ಆ ಪೂಜೆಯನ್ನು ಸ್ವೀಕರಿಸಿ ಈ ಮಾತುಗಳನ್ನಾಡಿದನು:

> “ಭೀಷ್ಮ! ಯಾವ ಬುದ್ಧಿಯನ್ನು ಬಳಸಿ ನೀನು ಮೊದಲು ಬಯಸದೇ ಇದ್ದ ಕಾಶಿರಾಜಸುತೆಯನ್ನು ಕರೆದುಕೊಂಡು ಹೋದೆ, ಮತ್ತು ನಂತರ ಅವಳನ್ನು ವಿಸರ್ಜಿಸಿದೆ? ನಿನ್ನ ಕಾರಣದಿಂದ ಇವಳು ಧರ್ಮದ ಮೇಲ್ಮಟ್ಟದಿಂದ ಕೀಳುಮಟ್ಟಕ್ಕೆ ತಳ್ಳಲ್ಪಟ್ಟಿದ್ದಾಳೆ. ಏಕೆಂದರೆ ನಿನ್ನಿಂದ ಮುಟ್ಟಲ್ಪಟ್ಟ ಇವಳೊಂದಿಗೆ ಯಾರು ತಾನೇ ಹೋಗಲು ಬರುತ್ತದೆ? ನಿನ್ನಿಂದ ಕರೆದುಕೊಂಡು ಹೋದವಳೆಂದು ಶಾಲ್ವನೂ ಕೂಡ ಇವಳನ್ನು ಹಿಂದೆ ಕಳುಹಿಸಿದ್ದಾನೆ. ಆದುದರಿಂದ ನನ್ನ ನಿಯೋಗದಂತೆ ಇವಳನ್ನು ನೀನು

ಸ್ವೀಕರಿಸು. ಈ ರಾಜಪುತ್ರಿಯು ಸ್ವಧರ್ಮವನ್ನು ಪಡೆಯಲಿ. ರಾಜನಾದ ನೀನು ಇವಳನ್ನು ಅಪಮಾನಿಸುವುದು ಸರಿಯಲ್ಲ.

ಅವನು ತುಂಬಾ ಕುಪಿತನಾಗಿಲ್ಲವೆಂದು ಗ್ರಹಿಸಿ ಭೀಷ್ಮನು ಹೇಳಿದನು:

“ಬ್ರಹ್ಮನ್! ಇವಳನ್ನು ನಾನು ಪುನಃ ನನ್ನ ತಮ್ಮನಿಗೆ ಏನು ಮಾಡಿದರೂ ಕೊಡಲಾರೆ. ಇವಳು ಮೊದಲು “ನಾನು ಶಾಲ್ವನವಳು” ಎಂದು ನನಗೆ ಹೇಳಿದಳು. ಆದರ ನಂತರವೇ ನಾನು ಸೌಭಪುರಕ್ಕೆ ಹೋಗಲು ಅನುಮತಿಯನ್ನು ಕೂಡ ಕೊಟ್ಟೆ. ಭಯದಿಂದಾಗಲೀ, ಅನುಕ್ರೋಷದಿಂದಾಗಲೀ, ಅರ್ಥ-ಕಾಮಗಳ ಲೋಭದಿಂದಾಗಲೀ ಕ್ಷತ್ರ ಧರ್ಮವನ್ನು ತೊರೆಯುವುದಿಲ್ಲ. ಇದು ನಾನು ನಡೆಸಿಕೊಂಡು ಬಂದಿರುವ ವ್ರತ.”

ಆಗ ಕ್ರೋಧದಿಂದ ಕಣ್ಣುಗಳನ್ನು ತಿರುಗಿಸುತ್ತಾ ರಾಮನು ಭೀಷ್ಮನಿಗೆ

“ಕುರುಪುಂಗವ! ನನ್ನ ಮಾತಿನಂತೆ ಮಾಡದೇ ಇದ್ದರೆ ಇಂದೇ ಅಮಾತ್ಯರೊಂದಿಗೆ ನಿನ್ನನ್ನು ಕೊಲ್ಲುತ್ತೇನೆ” ಎಂದು ಪುನಃ ಪುನಃ ಹೇಳಿದನು.

ರಾಮನು ಹೀಗೆ ಕ್ರೋಧದಿಂದ ಕಣ್ಣುಗಳನ್ನು ತಿರುಗಿಸುತ್ತಾ ಆವೇಶದಲ್ಲಿ ಹೇಳಿದನು. ಭೀಷ್ಮನು ಪುನಃ ಪುನಃ ಆ ಅರಿಂದಮನನ್ನು ಪ್ರೀತಿಯ ಮಾತುಗಳಿಂದ ಯಾಚಿಸಿದನು. ಆದರೂ ಭೃಗುಶಾರ್ದೂಲನು

ಶಾಂತನಾಗಲಿಲ್ಲ. ಆಗ ಭೀಷ್ಮನು ಆ ಬ್ರಾಹ್ಮಣಸತ್ತಮನಿಗೆ ಇನ್ನೊಮ್ಮೆ ಶಿರಸಾ ನಮಸ್ಕರಿಸಿ ಕೇಳಿದನು:

> “ಯಾವ ಕಾರಣಕ್ಕಾಗಿ ನೀನು ನನ್ನೊಡನೆ ಯುದ್ಧ ಮಾಡಲು ಬಯಸುತ್ತೀಯೆ? ಮಹಾಬಾಹೋ! ಬಾಲಕನಾಗಿರುವಾಗಲೇ ನನಗೆ ಚತುರ್ವಿಧದ ಅಸ್ತ್ರಗಳನ್ನು ನೀನು ಉಪದೇಶಿಸಿದ್ದೆ. ನಾನು ನಿನ್ನ ಶಿಷ್ಯ ಭಾರ್ಗವ!”

ಆಗ ರಾಮನು ಕ್ರೋಧದಿಂದ ರಕ್ತಲೋಚನನಾಗಿ ಅವನಿಗೆ ಹೇಳಿದನು:

> “ಭೀಷ್ಮ! ನಾನು ನಿನ್ನ ಗುರುವೆಂದು ನೀನು ತಿಳಿದಿದ್ದೀಯೆ. ಆದರೂ ನೀನು ನನ್ನ ಪ್ರೀತಿಗಾಗಿ ಈ ಕಾಶಿಸುತೆಯನ್ನು ಹಿಂದೆ ತೆಗೆದುಕೊಳ್ಳುತ್ತಿಲ್ಲವಲ್ಲ! ಅನ್ಯಥಾ ನಿನಗೆ ಶಾಂತಿಯಿಲ್ಲವೆಂದು ತಿಳಿದುಕೋ! ಇವಳನ್ನು ಸ್ವೀಕರಿಸಿ ನಿನ್ನ ಕುಲವನ್ನು ರಕ್ಷಿಸು. ನಿನ್ನಿಂದ ಕೀಳುಸ್ಥಾನಕ್ಕೆ ತಳ್ಳಲ್ಪಟ್ಟ ಅವಳು ಭರ್ತಾರನನ್ನು ಪಡೆಯುವುದಿಲ್ಲ.”

ಹೀಗೆ ಹೇಳುತ್ತಿರುವ ಪರಪುರಂಜಯ ರಾಮನಿಗೆ ಭೀಷ್ಮನು ಹೇಳಿದನು:

> “ಬ್ರಹ್ಮರ್ಷೇ! ಇದು ಹೀಗೆ ಆಗುವುದೇ ಇಲ್ಲ. ನೀನು ಏಕೆ ಸುಮ್ಮನೆ ಶ್ರಮಪಡುತ್ತೀಯೆ? ನನ್ನ ಪುರಾತನ ಗುರುವೆಂದು ನಿನ್ನಲ್ಲಿ ಪ್ರಸಾದವನ್ನು ಬೇಡುತ್ತಿದ್ದೇನೆ. ಇವಳನ್ನು ನಾನು ಹಿಂದೆಯೇ ತ್ಯಜಿಸಿಯಾಗಿದೆ. ಸ್ತ್ರೀಯರ ಮಹಾದೋಷಗಳನ್ನು

ತಿಳಿದಿರುವ ಯಾರುತಾನೇ ಇನ್ನೊಬ್ಬನಲ್ಲಿ ಪ್ರೀತಿಯನ್ನಿಟ್ಟುಕೊಂಡಿರುವವಳನ್ನು ಹಾವಿನಂತೆ ತನ್ನ ಮನೆಯಲ್ಲಿ ಇರಿಸಿಕೊಳ್ಳುತ್ತಾನೆ? ವಾಸವನ ಭಯದಿಂದಲೂ ನಾನು ಧರ್ಮವನ್ನು ತೊರೆಯುವುದಿಲ್ಲ ನನ್ನ ಮೇಲೆ ಕರುಣೆ ತೋರು. ಅಥವಾ ನನಗೇನು ಮಾಡಬೇಕೋ ಅದನ್ನು ಬೇಗನೇ ಮಾಡು. ಮಹಾಬುದ್ಧಿ ಮಹಾತ್ಮ ಮರುತ್ತನು ಪುರಾಣಗಳಲ್ಲಿ ಈ ಗೀತ ಶ್ಲೋಕವನ್ನು ಹೇಳಿದ್ದಾನೆ: “ಗುರುವು ಬಯಸಿದುದನ್ನು ಮಾಡಬೇಕು. ಅವನು ತಿಳಿಯದೇ ಇದ್ದಿರಬಹುದು. ತಪ್ಪು-ಸರಿಗಳನ್ನು ಅರಿಯದೇ ಇದ್ದಿರಬಹುದು. ಅಥವಾ ಧರ್ಮದ ದಾರಿಯನ್ನು ತಪ್ಪಿರಬಹುದು.” ನೀನು ಗುರುವೆಂಬ ಪ್ರೇಮದಿಂದ ನಾನು ನಿನ್ನನ್ನು ತುಂಬಾ ಸಮ್ಮಾನಿಸುತ್ತೇನೆ. ಗುರುವಿನ ನಡತೆಯು ನಿನಗೆ ತಿಳಿದಿಲ್ಲ. ಆದುದರಿಂದ ನಾನು ನಿನ್ನೊಂದಿಗೆ ಯುದ್ಧ ಮಾಡುತ್ತೇನೆ. ಆದರೆ ಸಮರದಲ್ಲಿ ಗುರುವನ್ನು, ಅದರಲ್ಲೂ ವಿಶೇಷವಾಗಿ ಬ್ರಾಹ್ಮಣನನ್ನು, ನಾನು ಕೊಲ್ಲುವುದಿಲ್ಲ. ತಪೋವೃದ್ಧನಾದ ನಿನ್ನಲ್ಲಿ ನನಗೆ ವಿಶೇಷವಾದ ಕ್ಷಾಂತಿಯಿದೆ. ಆದರೆ ಆಯುಧವನ್ನು ಹಿಡಿದೆತ್ತಿ ಹೋರಾಡುವ ಅಥವಾ ಯುದ್ಧದಲ್ಲಿ ಪಲಾಯನ ಮಾಡದೇ ಇದ್ದ ಬ್ರಾಹ್ಮಣನನ್ನು ಕ್ಷತ್ರಿಯನಾದವನು ಕೊಂದರೆ ಅವನಿಗೆ ಬ್ರಹ್ಮಹತ್ಯಾ ದೋಷವಿಲ್ಲವೆಂದು ಧರ್ಮನಿಶ್ಚಯವಿದೆ. ಕ್ಷತ್ರಿಯರ

ಧರ್ಮದಲ್ಲಿರುವ ಕ್ಷತ್ರಿಯನು ನಾನು. ಇನ್ನೊಬ್ಬನು ಹೇಗೆ ವರ್ತಿಸುತ್ತಾನೋ ಅದರ ಪ್ರಕಾರ ಪ್ರವರ್ತಿಸಿದರೆ ಅವನು ಅಧರ್ಮವನ್ನು ಪಡೆಯುವುದಿಲ್ಲ. ಅಂಥಹ ನರನು ಶ್ರೇಯಸ್ಸನ್ನು ಪಡೆಯುತ್ತಾನೆ. ಅರ್ಥ, ಧರ್ಮ, ಅಥವಾ ದೇಶಕಾಲಗಳಲ್ಲಿ ಸಮರ್ಥನಾದವನು ಅವನಿಗಾಗುವ ಲಾಭಗಳ ಕುರಿತು ಸಂಶಯವಿದ್ದರೆ ಆ ಸಂಶಯವನ್ನು ಹೋಗಲಾಡಿಸಿಕೊಂಡರೆ ಒಳ್ಳೆಯದು. ಅಸಂಶಯವಾಗಿದ್ದುದನ್ನು ನ್ಯಾಯವೆಂದು ನಿರ್ಣಯಿಸಿ ನೀನು ವರ್ತಿಸುತ್ತಿರುವುದರಿಂದ ನಾನು ನಿನ್ನೊಂದಿಗೆ ಮಹಾರಣದಲ್ಲಿ ಯುದ್ಧಮಾಡುತ್ತೇನೆ. ನನ್ನ ಬಾಹುವೀರ್ಯವನ್ನೂ ಅತಿಮಾನುಷ ವಿಕ್ರಮವನ್ನೂ ನೋಡು! ಇಲ್ಲಿಯ ವರೆಗೆ ಬಂದೂ ನನಗೆ ಏನು ಶಕ್ಯವಾಗುತ್ತದೆಯೋ ಅದನ್ನು ಮಾಡುತ್ತೇನೆ. ನಿನ್ನೊಂದಿಗೆ ಕುರುಕ್ಷೇತ್ರದಲ್ಲಿ ಹೋರಾಡುತ್ತೇನೆ. ಇಷ್ಟವಾದಷ್ಟೂ ದ್ವಂದ್ವಯುದ್ಧ ಮಾಡು! ಸಿದ್ಧನಾಗು! ಅಲ್ಲಿ ನಿನ್ನನ್ನು ಕೊಲ್ಲುತ್ತೇನೆ. ನನ್ನ ನೂರಾರು ಶರಗಳಿಂದ ಹೊಡೆಯಲ್ಪಟ್ಟು ಮಹಾರಣದಲ್ಲಿ ನನ್ನ ಶಸ್ತ್ರಗಳಿಂದ ಪುನೀತನಾಗಿ ಗೆದ್ದ ಲೋಕಗಳನ್ನು ಸೇರುತ್ತೀಯೆ! ಆದುದರಿಂದ ಹೋಗಿ ಕುರುಕ್ಷೇತ್ರಕ್ಕೆ ಹಿಂದಿರುಗು. ಅಲ್ಲಿಯೇ ನಿನ್ನನ್ನು ಯುದ್ಧದಲ್ಲಿ ಭೇಟಿಯಾಗುತ್ತೇನೆ. ಹಿಂದೆ ಎಲ್ಲಿ ನೀನು ನಿನ್ನ ಪಿತೃಗಳಿಗೆ ಪವಿತ್ರವಾಗಿದ್ದೆಯೋ ಅಲ್ಲಿಯೇ ನಿನ್ನನ್ನು

ಕೊಂದು ನಾನು ಶೌಚವನ್ನು ಮಾಡುತ್ತೇನೆ. ಅಲ್ಲಿ ಬೇಗ ಹೋಗು. ಹಿಂದಿನಿಂದ ನಿನಗಿರುವ ಈ ಬ್ರಾಹ್ಮಣನೆಂಬ ದರ್ಪವನ್ನು ಕಳೆಯುತ್ತೇನೆ. ನಾನೊಬ್ಬನೇ ಲೋಕದ ಕ್ಷತ್ರಿಯರನ್ನು ಸೋಲಿಸಿದೆ ಎಂದು ಬಹಳಷ್ಟು ಪರಿಷತ್ತುಗಳಲ್ಲಿ ಕೊಚ್ಚಿಕೊಳ್ಳುತ್ತಾ ಬಂದಿದ್ದೀಯೆ! ನನ್ನನ್ನು ಕೇಳು! ಆ ಸಮಯದಲ್ಲಿ ಭೀಷ್ಮನು ಹುಟ್ಟಿರಲಿಲ್ಲ. ಅಥವಾ ಯುದ್ಧದಲ್ಲಿ ನಿನಗಿರುವ ದರ್ಪ ಮತ್ತು ಆಸೆಯನ್ನು ಕಳೆಯುವ ನನ್ನಂಥಹ ಕ್ಷತ್ರಿಯನೂ ಕೂಡ ಇರಲಿಲ್ಲ. ಈಗ ನಾನು - ಪರಪುರಂಜಯ ಭೀಷ್ಮನು - ಹುಟ್ಟಿದ್ದೇನೆ. ಯುದ್ಧದಲ್ಲಿ ನಿನ್ನ ದರ್ಪವನ್ನು ಮುರಿಯುತ್ತೇನೆ ಎನ್ನುವುದರಲ್ಲಿ ಸಂಶಯವಿಲ್ಲ."

## ಪರಶುರಾಮ-ಭೀಷ್ಮರು ಕುರುಕ್ಷೇತ್ರದಲ್ಲಿ ಯುದ್ಧಕ್ಕೆ ಅಣಿಯಾದುದು

ಆಗ ರಾಮನು ನಗುತ್ತಾ ಭೀಷ್ಮನಿಗೆ ಹೇಳಿದನು:

"ಭೀಷ್ಮ! ಒಳ್ಳೆಯದಾಯಿತು! ನನ್ನೊಡನೆ ಸಂಗರದಲ್ಲಿ ಯುದ್ಧಮಾಡಲು ಇಚ್ಛಿಸುತ್ತಿದ್ದೀಯೆ. ನಾನು ನಿನ್ನೊಂದಿಗೆ ಕುರುಕ್ಷೇತ್ರಕ್ಕೆ ಹೋಗುತ್ತೇನೆ. ಹೇಳಿದಂತೆ ಮಾಡುತ್ತೇನೆ. ನೀನೂ ಕೂಡ ಅಲ್ಲಿಗೆ ಹೋಗು! ಅಲ್ಲಿ ನನ್ನ ನೂರಾರು ಶರಗಳ ಚಿತೆಯ ಮೇಲೆ ನೀನು ನನ್ನಿಂದ ಕೊಲ್ಲಲ್ಪಟ್ಟು, ಹದ್ದು, ಬಕ ಮತ್ತು ಕಾಗೆಗಳಿಗೆ ಆಹಾರವಾಗುವುದನ್ನು ನಿನ್ನ ತಾಯಿ

ಜಾಹ್ನವಿಯು ನೋಡಲಿ! ನನ್ನಿಂದ ಕೊಲ್ಲಲ್ಪಟ್ಟು ಕೃಪಣನಾಗಿರುವ ನಿನ್ನನ್ನು ನೋಡಿ ಸಿದ್ಧಚಾರಣಸೇವಿತೆ ದೇವಿಯು ಇಂದು ರೋದಿಸಲಿ! ಯುದ್ಧಕಾಮುಕನಾದ, ಆತುರನಾದ, ಬುದ್ಧಿಯಿಲ್ಲದ ನಿನ್ನಂತವನನ್ನು ಜೀವಂತ ನೋಡಲು ಮಹಾಭಾಗೆ ನದೀ ಭಗೀರಥಸುತೆಯು ಅರ್ಹಳಲ್ಲ. ಬಾ! ನನ್ನೊಂದಿಗೆ ನಡೆ! ಇದೇ ಆ ಯುದ್ಧವು ನಡೆಯಲಿ! ರಥಾದಿ ಸರ್ವವನ್ನೂ ತೆಗೆದುಕೊಂಡು ಬಾ!"

ಹೀಗೆ ಹೇಳಲು ಭೀಷ್ಮನು ಪರಪುರಂಜಯ ರಾಮನಿಗೆ ಶಿರಸಾ ನಮಸ್ಕರಿಸಿ ಹಾಗೆಯೇ ಆಗಲಿ ಎಂದನು. ಹೀಗೆ ಹೇಳಿ ರಾಮನು ಯುದ್ಧೋತ್ಸುಕನಾಗಿ ಕುರುಕ್ಷೇತ್ರಕ್ಕೆ ಹೋದನು. ಭೀಷ್ಮನು ನಗರವನ್ನು ಪ್ರವೇಶಿಸಿ ಸತ್ಯವತಿಗೆ ನಿವೇದಿಸಿ, ತಾಯಿಯನ್ನು ನಮಸ್ಕರಿಸಿದನು. ಸ್ವಸ್ತಿ ಅಯನಗಳನ್ನು ಪೂರೈಸಿದನು. ದ್ವಿಜಾತಿಯವರು ಪುಣ್ಯಾಹ ಸ್ವಸ್ತಿಗಳನ್ನು ವಾಚಿಸಿದರು. ಬಿಳಿಯ ಕುದುರೆಗಳನ್ನು ಕಟ್ಟಿದ್ದ, ಎಲ್ಲ ಅನುಕೂಲಗಳನ್ನು ಹೊಂದಿದ್ದ, ದೃಢವಾಗಿ ಕಟ್ಟಲ್ಪಟ್ಟಿದ್ದ, ಹುಲಿಯ ಚರ್ಮವನ್ನು ಹೊದಿಸಿದ್ದ, ಮಹಾಶಸ್ತ್ರಗಳು ಮತ್ತು ಸರ್ವ ಉಪಕರಣಗಳಿಂದ ಕೂಡಿದ್ದ, ಸುಂದರ ಬೆಳ್ಳಿಯ ರಥವನ್ನೇರಿದನು. ಅದನ್ನು ವೀರ, ಕುಲೀನ, ಹಯಶಾಸ್ತ್ರವಿಶಾರದನಾದ, ಶಿಷ್ಟ, ಬಹಳಷ್ಟು ಯುದ್ಧಗಳನ್ನು ನೋಡಿದ್ದ ಸೂತನು ನಡೆಸುತ್ತಿದ್ದನು. ಭೀಷ್ಮನು ಬಿಳಿಯ ಬಂಗಾರದ ಕವಚವನ್ನು ಧರಿಸಿದ್ದನು. ಬಿಳಿಯ ಧನುಸ್ಸನ್ನೂ ಹಿಡಿದು ಹೊರಟನು. ಬಿಳಿಯ ಕೊಡೆಯನ್ನು ಅವನ ನೆತ್ತಿಯ ಮೇಲೆ

ಹಿಡಿಯಲಾಗಿತ್ತು. ಬಿಳಿಯ ಚಾಮರಗಳನ್ನೂ ಬೀಸುತ್ತಿದ್ದರು. ಅವನ ಬಟ್ಟೆ ಬಿಳಿಯಾಗಿತ್ತು, ಕಿರೀಟವು ಬಿಳಿಯಾಗಿತ್ತು ಮತ್ತು ಸರ್ವ ಆಭರಣಗಳು ಬಿಳಿಯವಾಗಿದ್ದವು. ಜಯದ ಕುರಿತು ಆಶೀರ್ವಚನಗಳನ್ನು ಸ್ತುತಿಸುತ್ತಿರಲು ಭೀಷ್ಮನು ಗಜಸಾಹ್ವಯದಿಂದ ಹೊರಟು ರಣಕ್ಷೇತ್ರ ಕುರುಕ್ಷೇತ್ರಕ್ಕೆ ಬಂದನು. ಮನಸ್ಸು ಮಾರುತಗಳ ವೇಗವನ್ನು ಹೊಂದಿದ್ದ ಆ ಕುದುರೆಗಳು ಸೂತನಿಂದ ಚೋದಿತರಾಗಿ ಅವನನ್ನು ಆ ಪರಮ ಯುದ್ಧಕ್ಕೆ ಕರೆತಂದವು. ಆಗ ಭೀಷ್ಮ ಮತ್ತು ಪ್ರತಾಪವಾನ್ ರಾಮ ಇಬ್ಬರೂ ಪರಸ್ಪರರ ಪರಾಕ್ರಾಂತರಾಗಿ ಯುದ್ಧಕ್ಕೆ ಕಾತರರಾಗಿ ಕುರುಕ್ಷೇತ್ರಕ್ಕೆ ಬಂದರು. ಆ ಅತಿತಪಸ್ವಿನಿ ರಾಮನನ್ನು ನೋಡಿದಾಗ ಭೀಷ್ಮನು ತನ್ನ ಶಂಖಪ್ರವರವನ್ನು ಹಿಡಿದು ಜೋರಾಗಿ ಊದಿದನು. ಆಗ ಅಲ್ಲಿ ರಣದಲ್ಲಿ ದ್ವಿಜರು, ತಾಪಸರು, ವನೌಕಸರು ಮತ್ತು ಆಕಾಶದಲ್ಲಿ ಋಷಿಗಣಗಳೊಂದಿಗೆ ದೇವತೆಗಳು ಕಂಡುಬಂದರು. ಹಾಗೆಯೇ ದಿವ್ಯ ಮಾಲೆಗಳೂ, ದಿವ್ಯವಾದ್ಯಗಳು, ಮೇಘವೃಂದಗಳು ಮತ್ತೆ ಮತ್ತೆ ಕೇಳಿಬಂದವು. ಆಗ ಭಾರ್ಗವನನ್ನು ಹಿಂಬಾಲಿಸಿ ಬಂದಿದ್ದ ತಾಪಸರೆಲ್ಲರೂ ರಣವನ್ನು ಸುತ್ತುವರೆದು ಪ್ರೇಕ್ಷಕರಾದರು. ಸರ್ವಭೂತಹಿತೈಷಿಣೀ ಮಾತಾ ದೇವಿಯು ಕಾಣಿಸಿಕೊಂಡು ಭೀಷ್ಮನಿಗೆ ಹೇಳಿದಳು:

> "ರಾಜನ್! ಇದೇನು ಮಾಡುತ್ತಿರುವೆ? ನಾನು ಜಾಮದಗ್ನಿಗೆ ಹೋಗಿ ಪುನಃ ಪುನಃ ಕೇಳಿಕೊಳ್ಳುತ್ತೇನೆ - ಭೀಷ್ಮನೊಂದಿಗೆ ಯುದ್ಧಮಾಡಬೇಡ! ಅವನು ನಿನ್ನ ಶಿಷ್ಯ" ಎಂದು. ಪುತ್ರ!

ವಿಪ್ರನಿಗೆ ನಿರ್ಬಂಧಗಳನ್ನು ಮಾಡಬೇಡ. ಜಾಮದಗ್ನಿಯೊಡನೆ ಸಮರದಲ್ಲಿ ಯುದ್ಧಮಾಡಬೇಡ!”

ಎಂದು ಭೀಷ್ಮನನ್ನು ಬೈದಳು.

“ಈ ಕ್ಷತ್ರಿಯಹರನು ಹರತುಲ್ಯಪರಾಕ್ರಮಿಯೆಂದು ನಿನಗೆ ತಿಳಿದಿಲ್ಲವೇ? ಅಂತಹ ರಾಮನೊಂದಿಗೆ ನೀನು ಯುದ್ಧಮಾಡಲು ಇಚ್ಛಿಸುತ್ತಿರುವೆಯಲ್ಲ?”

ಆಗ ಭೀಷ್ಮನು ಕೈಮುಗಿದು ನಮಸ್ಕರಿಸಿ ದೇವಿಗೆ ಸ್ವಯಂವರದಲ್ಲಿ ನಡೆದುದೆಲ್ಲವನ್ನೂ ಮತ್ತು ಹೇಗೆ ಅವನು ಮೊದಲು ರಾಮನ ಕರುಣೆಯನ್ನು ಯಾಚಿಸಿದ್ದ ಎನ್ನುವುದನ್ನೂ, ಹಿಂದೆ ಕಾಶಿರಾಜಸುತೆಯು ಮಾಡಿದುದೆಲ್ಲವನ್ನೂ ಹೇಳಿದನು. ಆಗ ಅವನ ಜನನಿ ಮಹಾನದಿಯು ರಾಮನ ಬಳಿ ಹೋದಳು. ಆ ದೇವಿಯು ಭೀಷ್ಮನಿಗೋಸ್ಕರವಾಗಿ ಋಷಿ ಭಾರ್ಗವನಲ್ಲಿ ಕ್ಷಮೆಯನ್ನು ಕೇಳಿಕೊಂಡಳು. “ಶಿಷ್ಯನಾದ ಭೀಷ್ಮನೊಂದಿಗೆ ಯುದ್ಧಮಾಡಬೇಡ” ಎಂದೂ ಹೇಳಿದಳು. ಆಗ ಅವನು ಯಾಚಿಸುತ್ತಿರುವ ಅವಳಿಗೆ ಹೇಳಿದನು:

“ಭೀಷ್ಮನನ್ನೇ ಹಿಂದಿರುಗುವಂತೆ ಮಾಡು! ನನಗೆ ಬೇಕಾದುದನ್ನು ಅವನು ಮಾಡುತ್ತಿಲ್ಲ! ಆದುದರಿಂದಲೇ ಇಲ್ಲಿಗೆ ಬಂದಿದ್ದೇವೆ.”

ಆಗ ಗಂಗೆಯು ಮಗನ ಮೇಲಿನ ಪ್ರೀತಿಯಿಂದ ಪುನಃ ಭೀಷ್ಮನಲ್ಲಿಗೆ

ಬಂದಳು. ಆಗ ಅವನು ಕ್ರೋಧದಿಂದ ಕಣ್ಣುಗಳನ್ನು ತಿರುಗಿಸಿ ಅವಳ ಮಾತಿನಂತೆ ಮಾಡಲಿಲ್ಲ. ಆಗ ಧರ್ಮಾತ್ಮ ಭೃಗುಶ್ರೇಷ್ಠ ಮಹಾತಪಸ್ವಿ ದ್ವಿಜಸತ್ತಮನು ಕಾಣಿಸಿಕೊಂಡು ಪುನಃ ಯುದ್ಧಕ್ಕೆ ಆಹ್ವಾನಿಸಿದನು.

## ಪರಶುರಾಮ-ಭೀಷ್ಮರ ಯುದ್ಧ

ರಣದಲ್ಲಿ ನಿಂತಿದ್ದ ಅವನಿಗೆ ಭೀಷ್ಮನು ನಗುತ್ತಾ ಹೇಳಿದನು:

> "ರಥದ ಮೇಲೆ ನಿಂತು ನೆಲದ ಮೇಲೆ ನಿಂತಿರುವ ನಿನ್ನೊಂದಿಗೆ ಯುದ್ಧಮಾಡಲು ಉತ್ಸಾಹವಾಗುತ್ತಿಲ್ಲ. ರಣದಲ್ಲಿ ನನ್ನೊಂದಿಗೆ ಯುದ್ಧಮಾಡಲು ಬಯಸುವೆಯಾದರೆ ರಥವನ್ನೇರು! ಕವಚವನ್ನು ಧರಿಸು!"

ಆಗ ಆ ರಣದಲ್ಲಿ ರಾಮನು ನಗುತ್ತಾ ಭೀಷ್ಮನಿಗೆ ಹೇಳಿದನು:

> "ಭೀಷ್ಮ! ಮೇದಿನಿಯೇ ನನ್ನ ರಥ. ವೇದಗಳು ನಡೆಸುವ ಅಶ್ವಗಳಂತೆ. ಗಾಳಿಯು ನನ್ನ ಸಾರಥಿ. ವೇದಮಾತರೆಯು ನನ್ನ ಕವಚ. ಇವುಗಳಿಂದ ಸುರಕ್ಷಿತನಾಗಿ ನಾನು ರಣದಲ್ಲಿ ನಿನ್ನೊಂದಿಗೆ ಯುದ್ಧ ಮಾಡುತ್ತೇನೆ."

ಹೀಗೆ ಹೇಳಿ ಸತ್ಯವಿಕ್ರಮಿ ರಾಮನು ಭೀಷ್ಮನನ್ನು ಮಹಾ ಶರಗಳ ಮಳೆಯಿಂದ ಎಲ್ಲ ಕಡೆಯಿಂದಲೂ ಮುಚ್ಚಿದನು. ಆಗ ಭೀಷ್ಮನು ಜಾಮದಗ್ನ್ಯನನ್ನು ದಿವ್ಯ ರಥದ ಮೇಲೆ ಸರ್ವಾಯುಧಧರನಾಗಿ, ಶ್ರೀಮತ್ ಅದ್ಭುತ ಸುಂದರನಾಗಿ ವ್ಯವಸ್ಥಿತನಾಗಿದ್ದುದು

ಕಂಡುಬಂದಿತು. ಅವನ ಪುಣ್ಯ ಮನಸ್ಸಿನಿಂದ ನಿರ್ಮಿಸಿದ ರಥವು ನಗರದಂತೆ ವಿಸ್ತೀರ್ಣವಾಗಿತ್ತು. ಕಾಂಚನಗಳಿಂದ ವಿಭೂಷಿತರಾದ ದಿವ್ಯಾಶ್ವಗಳನ್ನು ಕಟ್ಟಲಾಗಿತ್ತು. ಸನ್ನದ್ಧವಾಗಿತ್ತು. ಆ ಮಹಾಬಾಹುವುವಿನ ಧ್ವಜವು ಸೋಮಾಲಂಕೃತ ಲಕ್ಷಣದ್ದಾಗಿತ್ತು. ಆ ಧನುರ್ಧರನು ತೂಣೀರಗಳನ್ನು ಕಟ್ಟಿಕೊಂಡಿದ್ದನು. ಉಗುರುಗಳಿಗೆ ಗೋಧಗಳನ್ನು ಕಟ್ಟಿಕೊಂಡಿದ್ದನು. ಆ ಯೋಧನಿಗೆ ಭಾರ್ಗವನ ಅತ್ಯಂತ ಪ್ರಿಯ ಸಖ, ವೇದವಿದ ಅಕೃತವ್ರಣನು ಸಾರಥ್ಯವನ್ನು ಮಾಡುತ್ತಿದ್ದನು. ಮನಸ್ಸಿನಲ್ಲಿ ಅತೀವ ಹರ್ಷಗೊಂಡು ಭಾರ್ಗವನು ಯುದ್ಧದಲ್ಲಿ ಭೀಷ್ಮನನ್ನು ಮುಂದೆ ಬಾ ಎಂದು ಪುನಃ ಪುನಃ ಕೂಗಿ ಕರೆಯುತ್ತಿದ್ದನು. ಆಗ ಆದಿತ್ಯನಂತೆ ಬೆಳಗುತ್ತಿದ್ದ, ಅನಾದೃಷ್ಯನಾದ, ಮಹಾಬಲ ಕ್ಷತ್ರಿಯಾಂತಕ ರಾಮನನ್ನು ಭೀಷ್ಮನು ಏಕನಾಗಿ ಏಕನನ್ನು ಎದುರಿಸಿದನು. ರಾಮನು ಮೂರು ಬಾಣಗಳನ್ನು ಬಿಟ್ಟು ಅವನ ಕುದುರೆಗಳನ್ನು ತಡೆದಾಗ ಭೀಷ್ಮನು ರಥದಿಂದ ಕೆಳಗಿಳಿದು ಧನುಸ್ಸನ್ನು ಆ ಋಷಿಸತ್ತಮನ ಪಾದಗಳಲ್ಲಿಟ್ಟನು. ಆಗ ದ್ವಿಜಸತ್ತಮ ರಾಮನನ್ನು ಅರ್ಚಿಸಿ ವಿಧಿವತ್ತಾಗಿ ಅಭಿವಂದಿಸಿ ಈ ಉತ್ತಮ ವಾಕ್ಯಗಳನ್ನು ಹೇಳಿದನು:

> “ರಾಮ! ನನಗಿಂತ ನೀನು ವಿಶಿಷ್ಟನಾಗಿದ್ದೀಯೆ. ಮತ್ತು ಅಧಿಕನಾಗಿದ್ದೀಯೆ. ಆದರೂ ಗುರು ಧರ್ಮಶೀಲನಾದ ನಿನ್ನೊಂದಿಗೆ ಯುದ್ಧ ಮಾಡುತ್ತಿದ್ದೇನೆ. ನನಗೆ ಜಯವನ್ನು ಆಶೀರ್ವದಿಸು!”

ರಾಮನು ಹೇಳಿದನು:

> “ಮಹಾಬಾಹೋ! ಒಳ್ಳೆಯದನ್ನು ಬಯಸುವವನಿಗೆ ಇದೇ ಕರ್ತವ್ಯ. ತಮಗಿಂತಲೂ ವಿಶಿಷ್ಟವಾಗಿರುವವರೊಂದಿಗೆ ಯುದ್ಧಮಾಡುವವರ ಧರ್ಮವೇ ಇದು. ಈ ರೀತಿ ಬರದೇ ಇದ್ದಿದ್ದರೆ ನಾನು ನಿನ್ನನ್ನು ಶಪಿಸತ್ತಿದ್ದೆನು. ಈಗ ಹೋಗು! ನಿನ್ನಲ್ಲಿರುವ ಬಲವನ್ನು ಅವಲಂಬಿಸಿ ರಣದಲ್ಲಿ ಯುದ್ಧಮಾಡು. ಆದರೆ ನಾನು ಜಯವನ್ನು ಬಯಸುವುದಿಲ್ಲ. ಏಕೆಂದರೆ ನಿನ್ನನ್ನು ಗೆಲ್ಲಲೇ ನಾನು ಇಲ್ಲಿ ನಿಂತಿದ್ದೇನೆ. ಹೋಗು! ಧರ್ಮದಿಂದ ಯುದ್ಧಮಾಡು! ನಿನ್ನ ನಡತೆಯನ್ನು ಮೆಚ್ಚಿದ್ದೇನೆ.”

ಆಗ ಭೀಷ್ಮನು ಅವನನ್ನು ನಮಸ್ಕರಿಸಿ ಬೇಗನೇ ರಥವನ್ನೇರಿದನು. ಇನ್ನೊಮ್ಮೆ ಹೇಮ ವಿಭೂಷಿತ ಶಂಖವನ್ನು ರಣದಲ್ಲಿ ಊದಿದನು. ಆಗ ಪರಸ್ಪರರನ್ನು ಗೆಲ್ಲಲು ಬಯಸಿದ ಅವನ ಮತ್ತು ಭೀಷ್ಮನ ನಡುವೆ ಬಹಳ ದಿನಗಳ ಮಹಾ ಯುದ್ಧವು ನಡೆಯಿತು. ರಣದಲ್ಲಿ ಮೊದಲು ಅವನು ಭೀಷ್ಮನನ್ನು ಒಂಬೈನೂರಾ ಅರವತ್ತು ಅಗ್ನಿವರ್ಚಸ ಕಂಕಪತ್ರಿ ಬಾಣಗಳಿಂದ ಹೊಡೆದನು. ಭೀಷ್ಮನ ನಾಲ್ಕು ಕುದುರೆಗಳು ಮತ್ತು ಸೂತನು ತಡೆಹಿಡಿಯಲ್ಪಟ್ಟರು. ಆದರೆ ಅವನು ಸಮರದಲ್ಲಿ ಕವಚಗಳಿಂದ ರಕ್ಷಿತನಾಗಿ ನಿಂತನು. ದೇವತೆಗಳಿಗೂ ಬ್ರಾಹ್ಮಣರಿಗೂ ನಮಸ್ಕರಿಸಿ ಭೀಷ್ಮನು ನಗುತ್ತಾ ರಣದಲ್ಲಿ ನಿಂತಿದ್ದ ರಾಮನಿಗೆ

ಹೇಳಿದನು:

> “ನೀನು ಮರ್ಯಾದೆಗಳನ್ನು ದಾಟಿದರೂ ಆಚಾರ್ಯನೆಂದು ಗೌರವಿಸಿದೆ. ಬ್ರಹ್ಮನ್! ಧರ್ಮಸಂಗ್ರಹದ ಮಾರ್ಗವೇನೆಂದು ಇನ್ನೊಮ್ಮೆ ನನ್ನನ್ನು ಕೇಳು. ನಿನ್ನ ದೇಹದಲ್ಲಿ ನೆಲೆಸಿರುವ ವೇದಗಳನ್ನು, ಬ್ರಾಹ್ಮಣ್ಯವನ್ನು ಮತ್ತು ಸುಮಹತ್ತರವಾಗಿ ತಪಿಸಿದ ತಪವನ್ನು ನಾನು ಹೊಡೆಯಲಾರೆನು. ನೀನು ಸಮಾಸ್ಥಿತನಾಗಿರುವ ಕ್ಷತ್ರಧರ್ಮಕ್ಕೆ ಹೊಡೆಯುತ್ತೇನೆ. ಏಕೆಂದರೆ ಶಸ್ತ್ರಗಳನ್ನು ಹಿಡಿದು ಬ್ರಾಹ್ಮಣನು ಕ್ಷತ್ರಿಯತ್ವವನ್ನು ಪಡೆಯುತ್ತಾನೆ. ನನ್ನ ಧನುಸ್ಸಿನ ವೀರ್ಯವನ್ನು ನೋಡು! ನನ್ನ ಬಾಹುಗಳ ಬಲವನ್ನು ನೋಡು! ನಾನು ನಿನ್ನ ಬಿಲ್ಲು ಬಾಣಗಳನ್ನು ತುಂಡರಿಸುತ್ತೇನೆ!”

ಆಗ ಭೀಷ್ಮನು ಹರಿತಾದ ಭಲ್ಲವನ್ನು ರಾಮನ ಮೇಲೆ ಎಸೆಯಲು ಅದು ಅವನ ದನುಸ್ಸಿನ ತುದಿಯನ್ನು ತುಂಡುಮಾಡಿ ನೆಲಕ್ಕೆ ಬೀಳಿಸಿತು. ಭೀಷ್ಮನು ಜಾಮದಗ್ನಿಯ ರಥದ ಮೇಲೆ ಒಂಬೈನೂರು ನೇರ ಕಂಕಪತ್ರಿ ಬಾಣಗಳನ್ನು ಪ್ರಯೋಗಿಸಿದನು. ಅವನ ದೇಹಕ್ಕೆ ಗುರಿಯಾಗಿಟ್ಟ, ಗಾಳಿಯಿಂದ ವೇಗವಾಗಿ ಹೋದ ಆ ಶರಗಳು ರಕ್ತಕಾರುವ ನಾಗಗಳಂತೆ ಹಾರಿಹೋದವು. ಅವನ ಇಡೀ ದೇಹವು ಗಾಯಗಳಿಂದ ಒದ್ದೆಯಾಗಿ ರಕ್ತವು ಸುರಿಯಲು ರಾಮನು ಧಾತುಗಳನ್ನು ಸುರಿಸುತ್ತಿದ್ದ ಮೇರು ಪರ್ವತದಂತೆ ತೋರಿದನು. ಹೇಮಂತ ಋತುವಿನ ಅಂತ್ಯದಲ್ಲಿ

ಕೆಂಪು ಹೂವುಗಳಿಂದ ತುಂಬಿದ ಅಶೋಕದಂತೆ ಅಥವಾ ಕಿಂಶುಕವೃಕ್ಷದಂತೆ ರಾಮನು ಕಾಣಿಸಿದನು. ಆಗ ಕ್ರೋಧಸಮನ್ವಿತನಾಗಿ ರಾಮನು ಇನ್ನೊಂದು ಧನುಸ್ಸನ್ನು ಎತ್ತಿಕೊಂಡು ಹೇಮಪುಂಖಗಳ, ಹರಿತ ಬಾಣಗಳ ಮಳೆಯನ್ನು ಸುರಿಸಿದನು. ಆ ರೌದ್ರ ಮರ್ಮಭೇದೀ ಸರ್ಪಾನಲವಿಷಗಳಂತಿರುವ ಬಹು ಬಾಣಗಳು ಭೀಷ್ಮನನ್ನು ಹೊಡೆದು ತತ್ತರಿಸುವಂತೆ ಮಾಡಿದವು. ಆಗ ಅವನು ಪುನಃ ಚೇತರಿಸಿಕೊಂಡು ಕೋಪದಿಂದ ರಾಮನನ್ನು ನೂರಾರು ಬಾಣಗಳಿಂದ ಹೊಡೆದನು. ಆ ಅಗ್ನಿ-ಅರ್ಕ ಸಂಕಾಶ, ವಿಷಗಳಂತಿದ್ದ ಹರಿತ ಬಾಣಗಳ ರಾಶಿಯಿಂದ ಹೊಡೆತ ತಿಂದು ರಾಮನು ಮೂರ್ಛೆಗೊಂಡಂತಾದನು. ಆಗ ಭೀಷ್ಮನು ಕೃಪಾವಿಷ್ಟನಾಗಿ "ಕ್ಷತ್ರಧರ್ಮಕ್ಕೆ ಧಿಕ್ಕಾರ! ಯುದ್ಧಕ್ಕೆ ಧಿಕ್ಕಾರ!" ಎಂದು ಹೇಳಿ ತನ್ನನ್ನು ನಾನೇ ನಿಂದಿಸಿಕೊಂಡನು. ಶೋಕವೇಗಪರಿಪ್ಲುತನಾಗಿ ತಪ್ಪಾಯಿತೆಂದು ಹೇಳಿದನು: "

> ಅಹೋ! ಕ್ಷತ್ರನಾಗಿ ನಾನು ಇಂದು ಈ ಪಾಪವನ್ನು ಮಾಡಿದೆನು. ನನ್ನ ಗುರು, ಧರ್ಮಾತ್ಮಾ ಬ್ರಾಹ್ಮಣನನ್ನು ಈ ರೀತಿಯಾಗಿ ಬಾಣಗಳಿಂದ ಪೀಡಿಸಿದೆನಲ್ಲ!"

ಆಗ ಅವನು ಜಾಮದಗ್ನಿಗೆ ಇನ್ನು ಹೊಡೆಯಲಿಲ್ಲ! ಅಷ್ಟರಲ್ಲಿಯೇ ಸಹಸ್ರಾಂಶುವು ಪೃಥ್ವಿಯನ್ನು ಬೆಳಗಿಸಿ ದಿವಸಕ್ಷಯದಲ್ಲಿ ಅಸ್ತಮವಾಗಲು ಅವರ ಯುದ್ಧವೂ ನಿಂತಿತು.

ಕುಶಲಸಮ್ಮತನಾದ ಸೂತನು ತನ್ನ, ಕುದುರೆಗಳ ಮತ್ತು ಭೀಷ್ಮನ

ದೇಹಗಳಿಂದ ಚುಚ್ಚಿಕೊಂಡಿದ್ದ ಬಾಣಗಳನ್ನು ಕಿತ್ತನು. ಪ್ರಭಾತದಲ್ಲಿ ಸೂರ್ಯನು ಉದಯಿಸಲು, ಕುದುರೆಗಳಿಗೆ ಸ್ನಾನಮಾಡಿಸಿ, ಹುಲ್ಲಿನಲ್ಲಿ ಹೊರಳಾಡಿಸಿ, ನೀರು ಕುಡಿಸಿ, ಆಯಾಸವನ್ನು ಕಳೆದುಕೊಂಡು ಯುದ್ಧಕ್ಕೆ ಹಿಂದಿರುಗಿದನು. ತನ್ನ ರಥದ ಮೇಲೆ ಕುಳಿತು ಕವಚಗಳನ್ನು ಧರಿಸಿ ಮೊದಲೇ ಬಂದಿದ್ದ ಭೀಷ್ಮನನ್ನು ನೋಡಿ ಪ್ರತಾಪವಾನ್ ರಾಮನು ಸಿದ್ಧತೆಗಳನ್ನು ಮಾಡಿಕೊಂಡನು. ಆಗ ಭೀಷ್ಮನು ಸಮರಕಾಂಕ್ಷಿಣಿಯಾಗಿ ಬರುತ್ತಿದ್ದ ರಾಮನನ್ನು ನೋಡಿ ತಕ್ಷಣವೇ ಶ್ರೇಷ್ಠ ಧನುಸ್ಸನ್ನು ಬದಿಗಿಟ್ಟು ರಥದಿಂದ ಕೆಳಗಿಳಿದನು. ಅವನನ್ನು ನಮಸ್ಕರಿಸಿ ರಥವನ್ನೇರಿ ಯುದ್ಧಮಾಡಲೋಸುಗ ಭಯವಿಲ್ಲದೇ ಜಾಮದಗ್ನಿಯ ಎದುರು ನಿಂತನು. ಆಗ ಅವನು ಭೀಷ್ಮನನ್ನು ಮಹಾ ಶರವರ್ಷದಿಂದ ಮುಚ್ಚಿದನು. ಭೀಷ್ಮನೂ ಕೂಡ ಶರವರ್ಷವನ್ನು ಸುರಿಸಿ ಅವನನ್ನು ಮುಚ್ಚಿದನು. ಸಂಕ್ರುದ್ಧ ಜಾಮದಗ್ನಿಯು ಪುನಃ ಬೆಂಕಿಯನ್ನು ಕಾರುವ ಸರ್ಪಗಳಂತಿರುವ ಪತತ್ರಿ ಬಾಣಗಳನ್ನು ಭೀಷ್ಮನ ಮೇಲೆ ಪ್ರಯೋಗಿಸಿದನು. ತಕ್ಷಣವೇ ಅವನು ಅವುಗಳನ್ನು ನೂರಾರು ಸಹಸ್ರ ಹರಿತ ಭಲ್ಲೆಗಳಿಂದ ಅಂತರಿಕ್ಷದಲ್ಲಿಯೇ ಪುನಃ ಪುನಃ ತುಂಡರಿಸಿದನು. ಆಗ ಪ್ರತಾಪವಾನ್ ಜಾಮದಗ್ನಿಯು ದಿವ್ಯಾಸ್ತ್ರಗಳನ್ನು ಭೀಷ್ಮನ ಮೇಲೆ ಪ್ರಯೋಗಿಸತೊಡಗಿದನು. ಅವುಗಳನ್ನೂ ಅವನು ತಡೆಹಿಡಿದೆನು.

ಅಸ್ತ್ರಗಳಿಂದಲೇ ಭೀಷ್ಮನ ಕ್ರಿಯೆಯು ಅಧಿಕವಾಗಲು ದಿವಿಯಲ್ಲಿ ಎಲ್ಲೆಡೆಯಿಂದ ಮಹಾನಾದವುಂಟಾಯಿತು. ಆಗ ಅವನು ವಾಯುವಾಸ್ತ್ರವನ್ನು ಜಾಮದಗ್ನಿಯ ಮೇಲೆ ಪ್ರಯೋಗಿಸಿದನು.

ಗುಹ್ಯಕಾಸ್ತ್ರದಿಂದ ರಾಮನು ಅದನ್ನು ತುಂಡರಿಸಿದನು. ಭೀಷ್ಮನು ಆಗ್ನೇಯಾಸ್ತ್ರವನ್ನು ಅನುಮಂತ್ರಿಸಿ ಪ್ರಯೋಗಿಸಲು ವಿಭು ರಾಮನು ಅದನ್ನು ವಾರುಣದಿಂದ ತಡೆದನು. ಹೀಗೆ ಭೀಷ್ಮನು ರಾಮನ ದಿವ್ಯಾಸ್ತ್ರಗಳನ್ನು ತಡೆಗಟ್ಟಲು ತೇಜಸ್ವಿ ದಿವ್ಯಾಸ್ತ್ರವಿದು ಅರಿಂದಮ ರಾಮನೂ ಕೂಡ ಅವನ ಅಸ್ತ್ರಗಳನ್ನು ತಡೆದನು. ಆಗ ಆ ದ್ವಿಜೋತ್ತಮ ಜಾಮದಗ್ನ್ಯ ಮಹಾಬಲ ರಾಮನು ಸಂಕ್ರುದ್ಧನಾಗಿ ಭೀಷ್ಮನ ಬಲದಿಯಲ್ಲಿ ಬಂದು ಎದೆಯನ್ನು ಚುಚ್ಚಿದನು. ಆಗ ಭೀಷ್ಮನು ನೋವಿನಿಂದ ಬಳಲಿ ಆ ಉತ್ತಮ ರಥದಲ್ಲಿಯೇ ಒರಗಿದನು. ಎದೆಯಲ್ಲಿ ರಾಮಬಾಣಪೀಡಿತನಾಗಿ ನೋವಿನಲ್ಲಿದ್ದ ಅವನನ್ನು ಮತ್ತು ರಥವನ್ನು ಸೂತನು ಯುದ್ಧದಿಂದ ದೂರ ಕರೆದೊಯ್ದನು. ಭೀಷ್ಮನು ಅಚೇತಸನಾಗಿ ಒಯ್ಯಲ್ಪಡುತ್ತಿದ್ದುದನ್ನು ನೋಡಿದ ಅಕೃತವ್ರಣ ಮತ್ತು ಕಾಶಿಕನ್ಯೆಯೇ ಮೊದಲಾದ ರಾಮನ ಅನುಚರರೆಲ್ಲರೂ ಸಂತೋಷಗೊಂಡು ಕೂಗಿದರು. ಆಗ ಭೀಷ್ಮನಿಗೆ ಎಚ್ಚರ ಬಂದು ಸೂತನಿಗೆ ಹೇಳಿದನು:

> “ಸೂತ! ರಾಮನಿರುವಲ್ಲಿಗೆ ಕರೆದುಕೊಂಡು ಹೋಗು!
> ವೇದನೆಯು ಕಳೆದು ನಾನು ಸಿದ್ಧನಾಗಿದ್ದೇನೆ.”

ಆಗ ಸೂತನು ಅವನನ್ನು ಗಾಳಿಯಂತೆ ಹೋಗಬಲ್ಲ ಪರಮ ಶೋಭಿತ ಕುದುರೆಗಳಿಂದ ರಣಕ್ಕೆ ಕರೆದೊಯ್ದನು. ಆಗ ಅವನು ರಾಮನನ್ನು ಸೇರಿ ಸಿಟ್ಟಿನಿಂದ ಆ ಸಿಟ್ಟಾಗುವವನನ್ನು ಗೆಲ್ಲಲು ಬಯಸಿ ಅವನನ್ನು

ಬಾಣಜಾಲಗಳಿಂದ ಮುಚ್ಚಿದನು. ಆದರೆ ರಾಮನು ಅವನ ಪ್ರತಿಯೊಂದಕ್ಕೂ ಮೂರು ಬಾಣಗಳನ್ನು ಬಿಟ್ಟು, ಭೀಷ್ಮನ ಬಾಣಗಳು ಅವನನ್ನು ತಲುಪುವ ಮೊದಲೇ ಕತ್ತರಿಸಿದನು. ಆ ಮಹಾಹವದಲ್ಲಿ ಭೀಷ್ಮನ ಸುಸಂಶಿತ ನೂರಾರು ಬಾಣಗಳನ್ನು ರಾಮನ ಬಾಣಗಳು ಎರಡಾಗಿ ತುಂಡರಿಸಲು ಅವರೆಲ್ಲರೂ ಸಂತೋಷಗೊಂಡರು. ಆಗ ಭೀಷ್ಮನು ಜಾಮದಗ್ನಿ ರಾಮನನ್ನು ಕೊಲ್ಲಬೇಕೆಂದು ಬಯಸಿ ಉರಿಯುತ್ತಿರುವ ಪ್ರಭೆಯುಳ್ಳ, ಮೃತ್ಯುವನ್ನು ಕೂಡಿರುವ ಶರವನ್ನು ಪ್ರಯೋಗಿಸಿದನು. ಆ ಬಾಣದಿಂದ ಗಾಢವಾಗಿ ಹೊಡೆತತಿಂದು ರಾಮನು ತಕ್ಷಣವೇ ಮೂರ್ಛೆಗೊಂಡು ನೆಲದ ಮೇಲೆ ಬಿದ್ದನು. ರಾಮನು ನೆಲದ ಮೇಲೆ ಮಲಗಿರಲು ಎಲ್ಲರೂ ಹಾಹಾಕಾರ ಮಾಡಿದರು. ಸೂರ್ಯನೇ ಕೆಳಗೆ ಬಿದ್ದನೋ ಎನ್ನುವಂತೆ ಜಗತ್ತು ಸಂವಿಗ್ನಗೊಂಡಿತು.

ಆಗ ಸುಸಂವಿಗ್ನರಾದ ಎಲ್ಲ ತಪೋಧರನೂ ಕಾಶ್ಯೆಯೊಂದಿಗೆ ತಕ್ಷಣವೇ ಭೃಗುನಂದನನಲ್ಲಿಗೆ ಧಾವಿಸಿದರು. ಅವನನ್ನು ಮೆಲ್ಲಗೆ ತಬ್ಬಿಕೊಂಡು, ಕೈಗಳಿಂದ ತಣ್ಣೀರನ್ನು ಚುಮುಕಿಸಿ ಜಯ ಆಶೀರ್ವಚನಗಳಿಂದ ಆಶ್ವಾಸವನ್ನಿತ್ತರು. ವಿಹ್ವಲನಾದ ರಾಮನು ಮೇಲೆದ್ದು ಧನುಸ್ಸಿಗೆ ಬಾಣವನ್ನು ಹೂಡಿ “ಭೀಷ್ಮ ! ನಿಲ್ಲು ! ನಿನ್ನನ್ನು ಕೊಲ್ಲುತ್ತೇನೆ !” ಎಂದು ಹೇಳಿದನು. ಮಹಾಹವದಲ್ಲಿ ಬಿಟ್ಟ ಆ ಬಾಣವು ಭೀಷ್ಮನ ಎಡಬದಿಗೆ ಬಂದು ಪೆಟ್ಟುತಿಂದ ಮರದಂತೆ ಅವನನ್ನು ಚೆನ್ನಾಗಿ ಗಾಯಗೊಳಿಸಿ ಸಂವಿಗ್ನನನ್ನಾಗಿಸಿತು. ಮಹಾಹವೆಯಲ್ಲಿ ಶೀಘ್ರಾಸ್ತ್ರದಿಂದ ರಾಮನು

ಭೀಷ್ಮನ ಕುದುರೆಗಳನ್ನು ಕೊಂದು ಲೋಮವಾಹಿ ಬಾಣಗಳನ್ನು ಅವನ ಮೇಲೆ ಪ್ರಯೋಗಿಸಿದನು. ಆಗ ಭೀಷ್ಮನೂ ಕೂಡ ತಡೆಯಲಸಾಧ್ಯವಾದ ಶ್ರೀಘ್ರಾಸ್ತ್ರವನ್ನು ಪ್ರಯೋಗಿಸಲು ಆ ಶರಗಳು ಮಧ್ಯದಲ್ಲಿಯೇ ನಿಂತುಕೊಂಡವು. ಅವನ ಮತ್ತು ರಾಮನ ಬಾಣಗಳು ಆಕಾಶವನ್ನು ಎಲ್ಲೆಡೆಯಲ್ಲಿಯೂ ಆವೃತಗೊಂಡವು. ಶರಜಾಲದಿಂದ ಸಮಾವೃತನಾದ ಸೂರ್ಯನು ಸುಡಲಿಲ್ಲ. ಮೋಡಗಳೋ ಎನ್ನುವಂತಿರುವ ಅವುಗಳ ಮೂಲಕ ಗಾಳಿಯು ಸುಳಿದಾಡಿ ಶಬ್ಧವನ್ನುಂಟು ಮಾಡಿತು. ಆಗ ಗಾಳಿಯು ಉಂಟಾಗಿಸಿದ ಘರ್ಷಣೆ ಮತ್ತು ಸೂರ್ಯನ ಕಿರಣಗಳು ಸೇರಿ ಅಲ್ಲಿ ಪ್ರಾಕೃತಿಕವಾಗಿಯೇ ಬೆಂಕಿ ಎದ್ದಿತು. ತಮ್ಮಲ್ಲಿಯೇ ಉಂಟಾದ ಬೆಂಕಿಯಿಂದ ಸುಟ್ಟು ಆ ಬಾಣಗಳೆಲ್ಲವೂ ಉರಿದು ಭಸ್ಮೀಭೂತವಾಗಿ ಭೂಮಿಯ ಮೇಲೆ ಬಿದ್ದವು. ಸಂಕ್ರುದ್ಧನಾಗಿ ರಾಮನು ಭೀಷ್ಮನ ಮೇಲೆ ನೂರುಗಟ್ಟಲೆ, ಸಾವಿರಗಟ್ಟಲೆ, ಕೋಟಿಗಟ್ಟಲೆ, ಹತ್ತು ಸಾವಿರ, ನೂರುಕೋಟಿಗಟ್ಟಲೆ ಬಾಣಗಳನ್ನು ಪ್ರಯೋಗಿಸಲು ಅವನು ರಣದಲ್ಲಿ ನಾಗಗಳಂಥಹ ಶರಗಳಿಂದ ಅವುಗಳನ್ನು ಕತ್ತರಿಸಿ ಸರ್ಪಗಳಂತೆ ಅವುಗಳನ್ನು ಭೂಮಿಯ ಮೇಲೆ ಬೀಳಿಸಿದನು. ಹೀಗೆ ಆಗಿನ ಆ ಯುದ್ಧವು ನಡೆಯಿತು. ಸಂಧ್ಯಾಕಾಲವು ಕಳೆಯಲು ಭೀಷ್ಮನ ಗುರುವು ಯುದ್ಧದಿಂದ ಹಿಂದೆಸರಿದನು.

ಅವನನ್ನು ಪುನಃ ಎದುರಿಸಿದಾಗ ಭೀಷ್ಮ ಮತ್ತು ರಾಮನ ನಡುವೆ ಇನ್ನೊಂದು ಅತಿದಾರುಣ ತುಮುಲಯುದ್ಧವು ನಡೆಯಿತು. ಆಗ ದಿವಸ

ದಿವಸವೂ ಆ ದಿವ್ಯಾಸ್ತ್ರವಿದು ಧರ್ಮಾತ್ಮ ವಿಭು ಶೂರನು ಅನೇಕ ದಿವ್ಯಾಸ್ತ್ರಗಳನ್ನು ಪ್ರಯೋಗಿಸಿದನು. ಭೀಷ್ಮನು ತ್ಯಜಿಸಲು ದುಷ್ಕರವಾದ ಪ್ರಾಣವನ್ನೂ ತ್ಯಜಿಸಿ ಆ ತುಮುಲಯುದ್ಧದಲ್ಲಿ ಅವುಗಳನ್ನು ಪ್ರತಿಘಾತಿಸುವ ಅಸ್ತ್ರಗಳಿಂದ ನಿಷ್ಫಲಗೊಳಿಸಿದನು. ಸಂಯುಗದಲ್ಲಿ ಬಹಳಷ್ಟು ಅಸ್ತ್ರಗಳನ್ನು ಅಸ್ತ್ರಗಳಿಂದ ಹತಗೊಳಿಸಲು ಆ ಮಹಾತೇಜಸ್ವಿ ಭಾರ್ಗವನು ಪ್ರಾಣವನ್ನೂ ತ್ಯಜಿಸಿ ಕ್ರೋಧಿತನಾದನು. ಆಗ ಮಹಾತ್ಮ ಜಾಮದಗ್ನಿಯು ಕೋಪದಿಂದ ಘೋರರೂಪದ ಕಾಲನೇ ಬಿಸುಟ ಅಸ್ತ್ರದಂತಿರುವ, ಉಲ್ಕೆಯಂತೆ ಉರಿಯುತ್ತಿರುವ, ಬಾಯಿ ತೆರೆದಿರುವ, ತೇಜಸ್ಸಿನಿಂದ ಲೋಕಗಳನ್ನು ಆವರಿಸಿದ ಶಕ್ತಿಯನ್ನು ಭೀಷ್ಮನ ಮೇಲೆ ಎಸೆದನು. ಆಗ ಅವನು ಉರಿಯುತ್ತಾ ಅಂತಕಾಲದಂತೆ, ಸೂರ್ಯನಂತೆ ಬೆಳಗುತ್ತಾ ಹತ್ತಿರ ಬರುತ್ತಿದ್ದ ಅದನ್ನು ಮೂರುತುಂಡುಗಳನ್ನಾಗಿಸಿ ಭೂಮಿಯ ಮೇಲೆ ಬೀಳಿಸಿದನು. ಆಗ ಪುಣ್ಯಗಂಧೀ ಗಾಳಿಯು ಬೀಸಿತು. ಅದು ತುಂಡಾಗಲು ಕ್ರೋಧದೀಪ್ತನಾದ ರಾಮನು ಇನ್ನೂ ಹನ್ನೆರಡು ಘೋರ ಶಕ್ತಿಗಳನ್ನು ಎಸೆದನು. ಅವುಗಳ ರೂಪವನ್ನು ವರ್ಣಿಸಲು, ಅವುಗಳ ತೇಜಸ್ಸು ಮತ್ತು ಲಾಘವಗಳ ಕುರಿತು ಹೇಳಲೂ ಅಸಾಧ್ಯವಾಗಿತ್ತು. ಎಲ್ಲ ಕಡೆಗಳಿಂದಲೂ ಮಹಾ ಉಲ್ಕೆಗಳಂತಿರುವ, ಅಗ್ನಿಗಳಂತಿರುವ, ಲೋಕಸಂಕ್ಷಯದಲ್ಲಿ ದ್ವಾದಶಾದಿತ್ಯರು ಹೇಗೋ ಹಾಗೆ ನಾನಾರೂಪಗಳಲ್ಲಿ ಉಗ್ರ ತೇಜಸ್ಸಿನಿಂದ ಉರಿಯುತ್ತಿರುವ ಅವುಗಳನ್ನು ನೋಡಿ ಭೀಷ್ಮನು ವಿಹ್ವಲನಾದನು. ಬಂದೆರಗುತ್ತಿದ್ದ ಆ ಬಾಣಗಳ ಜಾಲವನ್ನು ನೋಡಿ ತನ್ನದೇ ಶರಜಾಲದಿಂದ ಒಡೆದು ಆ

ಹನ್ನೆರಡೂ ಘೋರರೂಪೀ ಶಕ್ತಿಗಳನ್ನು ರಣದಲ್ಲಿ ಭೀಷ್ಮನು ತುಂಡರಿಸಿದನು. ಆಗ ಮಹಾತ್ಮ ಜಾಮದಗ್ನಿಯು ಇನ್ನೊಂದು ಹೇಮದಂಡದ ಘೋರ ಶಕ್ತಿಗಳನ್ನು ಎಸೆದನು. ಬಂಗಾರದಿಂದ ಮಾಡಲ್ಪಟ್ಟಿದ್ದ ಅದು ವಿಚಿತ್ರವಾಗಿದ್ದು ಮಹಾ ಉಲ್ಕೆಗಳಂತೆ ಜ್ವಲಿಸುತ್ತಿದ್ದವು. ಅವುಗಳನ್ನೂ ಕೂಡ ತೋಮರಗಳಿಂದ ತಡೆದು ಖಡ್ಗದಿಂದ ಭೀಷ್ಮನು ಕೆಳಗೆ ಬೀಳಿಸಿ, ದಿವ್ಯ ಬಾಣಗಳಿಂದ ಜಾಮದಗ್ನಿಯ ದಿವ್ಯ ರಥವನ್ನೂ ಕುದುರೆಗಳನ್ನೂ ಸಾರಥಿಯೊಂದಿಗೆ ಮುಚ್ಚಿದನು. ಅವನು ಪ್ರಯೋಗಿಸಿದ ಹಾವುಗಳಂತಿದ್ದ ಹೇಮಚಿತ್ರ ಶಕ್ತಿಗಳನ್ನು ನೋಡಿ ಕ್ರೋಧಾವಿಷ್ಟನಾದ ಆ ಮಹಾತ್ಮ ಹೈಹಯೇಶಪ್ರಮಾಥಿಯು ಪುನಃ ದಿವ್ಯಾಸ್ತ್ರಗಳನ್ನು ಬಳಸಿದನು. ಆಗ ಮಿಡತೆಗಳ ಗುಂಪಿನಂತಿರುವ, ತುದಿಗಳಲ್ಲಿ ರೆಕ್ಕೆಗಳನ್ನುಳ್ಳ, ಉರಿಯುತ್ತಿರುವ ಬಾಣಗಳ ರಾಶಿಯು ಭೀಷ್ಮನ ಶರೀರವನ್ನು, ಕುದುರೆಗಳನ್ನು, ರಥದೊಂದಿಗೆ ಸೂತನನ್ನು ತುಂಬಾ ಆಳವಾಗಿ ಚುಚ್ಚಿದವು. ಅದರ ಹೊಡೆತದಿಂದಾಗ ಅವನ ರಥ, ಕುದುರೆಗಳು ಮತ್ತು ಸಾರಥಿಯೂ, ರಥದ ಎರಡು ಚಕ್ರಗಳೊಂದಿಗೆ ಎಲ್ಲ ರೀತಿಯಲ್ಲಿ ಮುರಿದು ಬಿದ್ದವು. ಆ ಬಾಣವರ್ಷವು ಮುಗಿಯಲು ಭೀಷ್ಮನೂ ಕೂಡ ಶರಗಳ ಮಳೆಯನ್ನು ಗುರುವಿನ ಮೇಲೆ ಸುರಿಸಿದನು. ಬಾಣಗಳಿಂದ ಗಾಯಗೊಂಡ ಆ ಬ್ರಹ್ಮರಾಶಿಯು ತುಂಬಾ ಕಡೆಗಳಿಂದ ಒಂದೇ ಸಮನೆ ರಕ್ತವನ್ನು ಸುರಿಸಿದನು. ರಾಮನು ಹೇಗೆ ಬಾಣಜಾಲಗಳಿಂದ ನೋಯುತ್ತಿದ್ದನೋ ಹಾಗೆ ಭೀಷ್ಮನೂ ಕೂಡ ಗಾಢವಾಗಿ ತುಂಬಾ

ನೋವಿನಲ್ಲಿದ್ದನು. ಕೊನೆಯಲ್ಲಿ ಮಧ್ಯಾಹ್ನದ ನಂತರ ಸೂರ್ಯನು ಅಸ್ತವಾಗಲು ಅವರ ಯುದ್ಧವೂ ನಿಂತಿತು.

ಪ್ರಭಾತದಲ್ಲಿ ವಿಮಲ ಸೂರ್ಯನು ಉದಯವಾಗಲು ಪುನಃ ಭೀಷ್ಮನೊಡನೆ ಭಾರ್ಗವನ ಯುದ್ಧವು ನಡೆಯಿತು. ಆಗ ಬೆಳಗುತ್ತಾ ನಿಂತಿದ್ದ ಪ್ರಹರಿಗಳಲ್ಲಿ ಶ್ರೇಷ್ಠ ರಾಮನು ಭೀಷ್ಮನ ಮೇಲೆ ಶಕ್ರನು ಪರ್ವತಗಳ ಮೇಲೆ ಹೇಗೋ ಹಾಗೆ ಶರವರ್ಷಗಳನ್ನು ಸುರಿಸಿದನು. ಆ ಶರವರ್ಷದಿಂದ ಹೊಡೆಯಲ್ಪಟ್ಟ ಅವನ ಸೂತನು ರಥದಲ್ಲಿಯೇ ಕುಸಿದು ಬಿದ್ದು ಭೀಷ್ಮನ ಮನಸ್ಸನ್ನು ದುಃಖಗೊಳಿಸಿದನು. ಆಗ ಅವನಲ್ಲಿ ಮಹಾ ಕಶ್ಮಲವು ಪ್ರವೇಶಿಸಿ ಭೀಷ್ಮನ ಸೂತನು ಶರಘಾತದಿಂದ ಮೂರ್ಛೆಗೊಂಡು ಭೂಮಿಯ ಮೇಲೆ ಬಿದ್ದನು. ರಾಮಬಾಣಪೀಡಿತನಾಗಿ ಅವನು ಅಸುವನ್ನು ನೀಗಿದನು. ಒಂದು ಕ್ಷಣ ಭೀಷ್ಮನಲ್ಲಿ ಭೀತಿಯು ಆವೇಶಗೊಂಡಿತು. ಸೂತನು ಹತನಾಗಲು ಅವನು ಪ್ರಮತ್ತಮನಸ್ಕನಾಗಿದ್ದಾಗ ರಾಮನು ಭೀಷ್ಮನ ಮೇಲೆ ಮೃತ್ಯುಸಮ್ಮಿತ ಶರಗಳನ್ನು ಎಸೆದನು. ಸೂತನ ವ್ಯಸನದಿಂದ ತತ್ತರಿಸುತ್ತಿದ್ದ ಅವನ ಮೇಲೆ ಆ ಭಾರ್ಗವನು ಬಲವಾದ ಧನುಸ್ಸನ್ನು ಜೋರಾಗಿ ಎಳೆದು ಬಾಣಗಳಿಂದ ಹೊಡೆದನು. ರಕ್ತಕುಡಿಯುವ ಆ ಶರವು ಅವನನ್ನು ಚುಚ್ಚಿ ಹೊರಬಂದು ಭೀಷ್ಮನೊಂದಿಗೇ ನೆಲದ ಮೇಲೆ ಬಿದ್ದಿತು. ಭೀಷ್ಮನು ನಿಹತನಾದೆನೆಂದು ತಿಳಿದು ರಾಮನು ಮೇಘದಂತೆ ಜೋರಾಗಿ ಪುನಃ ಪುನಃ ಹರ್ಷೋದ್ಗಾರ ಮಾಡಿದನು. ಭೀಷ್ಮನು ಹಾಗೆ ಬೀಳಲು ರಾಮನು ಸಂತೋಷಗೊಂಡು ಅವನ



ಅನುಯಾಯಿಗಳೊಂದಿಗೆ ಮಹಾನಾದವನ್ನು ಕೂಗಿದನು. ಆದರೆ ಯುದ್ಧವನ್ನು ನೋಡಲು ಬಂದಿದ್ದ ಕೌರವರು ಭೀಷ್ಮನ ಪಕ್ಕದಲ್ಲಿ ನಿಂತು ಅವನು ಬಿದ್ದುದನ್ನು ನೋಡಿ ಆರ್ತರಾದರು.

ಅಲ್ಲಿ ಬಿದ್ದಾಗ ಭೀಷ್ಮನು ಸೂರ್ಯ-ಹುತಾಶನರಂತೆ ಹೊಳೆಯುತ್ತಿದ್ದ ಎಂಟು ದ್ವಿಜರನ್ನು ನೋಡಿದನು. ಅವರು ಅವನನ್ನು ರಣದ ಮಧ್ಯದಲ್ಲಿ ತಮ್ಮ ಬಾಹುಗಳಿಂದ ಮೇಲೆತ್ತಿ ಹಿಡಿದು ನಿಲ್ಲಿಸಿದರು. ಆ ವಿಪ್ರರಿಂದ ಹಿಡಿಯಲ್ಪಟ್ಟ ಭೀಷ್ಮನು ನೆಲವನ್ನು ಮುಟ್ಟಲಿಲ್ಲ. ಆ ವಿಪ್ರ ಬಾಂಧವರ ಬೆಂಬಲದಿಂದ ಅಂತರಿಕ್ಷದಲ್ಲಿಯೇ ನಿಂತಿದ್ದನು. ಅವರು ಅಂತರಿಕ್ಷದಿಂದ ನೀರಿನ ಹನಿಗಳನ್ನು ಚುಮುಕಿಸಿದರು. ಆಗ ಆ ಬ್ರಾಹ್ಮಣರು ಅವನನ್ನು ಹಿಡಿದು “ಹೆದರಬೇಡ! ಎಲ್ಲವೂ ಸರಿಯಾಗುತ್ತದೆ!” ಎಂದು ಉಪಚರಿಸಿದರು. ಆಗ ಅವರ ಮಾತುಗಳಿಂದ ತೃಪ್ತನಾಗಿ ಭೀಷ್ಮನು ಒಮ್ಮೆಲೇ ಮೇಲೆದ್ದನು. ರಥದಲ್ಲಿದ್ದ ಮಾತೆ ಶ್ರೇಷ್ಠ ಸರಿತಾಳನ್ನು ನೋಡಿದನು. ಯುದ್ಧದಲ್ಲಿ ಆ ಮಹಾನದಿಯೇ ಅವನ ಕುದುರೆಗಳ ಕಡಿವಾಣಗಳನ್ನು ಹಿಡಿದು ನಡೆಸುತ್ತಿದ್ದಳು. ಭೀಷ್ಮನಾದರೋ ಅರ್ಷ್ಟಿಷೇಣನನ್ನು ಹೇಗೋ ಹಾಗೆ ಜನನಿಯ ಪಾದಗಳನ್ನು ಪೂಜಿಸಿ ರಥವನ್ನೇರಿದನು. ಅವಳು ಅವನ ರಥವನ್ನೂ ಕುದುರೆಗಳನ್ನೂ ಉಪಕರಣಗಳನ್ನೂ ರಕ್ಷಿಸಿದ್ದಳು. ಪುನಃ ಕೈಮುಗಿದು ನಮಸ್ಕರಿಸಿ ಭೀಷ್ಮನು ಅವಳನ್ನು ಕಳುಹಿಸಿಕೊಟ್ಟನು. ಆಗ ಅವನು ಆ ಗಾಳಿಯ ವೇಗವುಳ್ಳ ಕುದುರೆಗಳನ್ನು ಸ್ವಯಂ ನಿಯಂತ್ರಿಸುತ್ತಾ ದಿನವು ಕಳೆಯುವವರೆ ಜಾಮದಗ್ನಿಯೊಂದಿಗೆ ಯುದ್ಧ ಮಾಡಿದನು. ಆಗ

ಅವನು ವೇಗವಂತ ಮಹಾಬಲಶಾಲಿ ಬಾಣವನ್ನು ಬಿಟ್ಟು ರಾಮನ ಹೃದಯವನ್ನು ಚುಚ್ಚಿದನು. ಬಾಣದ ವೇಗದಿಂದ ಪೀಡಿತನಾದ ರಾಮನು ಧನುವನ್ನು ಬಿಟ್ಟು ತೊಡೆಗಳನ್ನೂರಿ ನೆಲದ ಮೇಲೆ ಬಿದ್ದು ಮೋಹವಶನಾದನು. ಸಹಸ್ರಭೂರಿಗಳನ್ನಿತ್ತ ರಾಮನು ಹಾಗೆ ಬೀಳಲು ಮೋಡಗಳು ಆಕಾಶವನ್ನು ಕವಿದು ರಕ್ತದ ಮಳೆಯನ್ನು ಸುರಿಸಿದವು. ಭಿರುಗಾಳಿ ಮತ್ತು ಭೂಕಂಪಗಳೊಡನೆ ನೂರಾರು ಉಲ್ಕೆಗಳು ಬಿದ್ದವು. ಒಮ್ಮಿಂದೊಮ್ಮೆಲೇ ಸ್ವರ್ಭಾನುವು ಉರಿಯುತ್ತಿರುವ ಸೂರ್ಯನನ್ನು ಮುಚ್ಚಿದನು. ಚಂಡಮಾರುತವು ಬೀಸಿತು. ಭೂಮಿಯು ನಡುಗಿತು. ಹದ್ದು, ಕಾಗೆಗಳು ಮತ್ತು ಬಕಪಕ್ಷಿಗಳು ಗುಂಪಾಗಿ ಸಂತೋಷದಿಂದ ಹಾರಾಡತೊಡಗಿದವು. ಕೆಂಪಾಗಿದ್ದ ದಿಗಂತದಲ್ಲಿ ನರಿಯು ದಾರುಣವಾಗಿ ಮತ್ತೆ ಮತ್ತೆ ಕೂಗಿತು. ಹೊಡೆಯದೆಯೇ ದುಂದುಭಿಗಳು ಅತಿ ಜೋರಾಗಿ ಶಬ್ಧಮಾಡಿದವು. ಮಹಾತ್ಮ ರಾಮನು ಮೂರ್ಛಿತನಾಗಿ ನೆಲದ ಮೇಲೆ ಬೀಳಲು ಈ ಘೋರ ಉತ್ಪಾತಗಳು ನಡೆದವು. ಕೋಮಲ ಕಿರಣಗಳ ಮಸುಕಿದ ರವಿಯು ಮರೀಚಿಮಂಡಲದಲ್ಲಿ ಅಸ್ತನಾದನು. ಸುಖ ಶೀತ ಮಾರುತಗಳೊಂದಿಗೆ ರಾತ್ರಿಯು ಪಸರಿಸಿತು. ಆಗ ಅವರಿಬ್ಬರೂ ಯುದ್ಧದಿಂದ ಹಿಂದೆ ಸರಿದರು. ಹೀಗೆ ಯುದ್ಧಕ್ಕೆ ವಿರಾಮವಾಯಿತು. ಬೆಳಗಾಗಲು ಪುನಃ ಘೋರಯುದ್ಧವು ನಡೆಯಿತು. ಹೀಗೆ ಕಾಲ ಕಾಲದಲ್ಲಿ ಇಪ್ಪತ್ತು ಮತ್ತು ಅನ್ಯ ಮೂರು ದಿನಗಳು ನಡೆಯಿತು.

ಆ ರಾತ್ರಿ ಭೀಷ್ಮನು ಬ್ರಾಹ್ಮಣರಿಗೆ, ಪಿತೃಗಳಿಗೆ, ದೇವತೆಗಳೆಲ್ಲರಿಗೂ,

ರಾತ್ರಿ ಸಂಚರಿಸುವ ಎಲ್ಲ ಭೂತಗಳಿಗೂ, ರಾತ್ರಿಗೂ ತಲೆಬಾಗಿ ನಮಸ್ಕರಿಸಿ, ಏಕಾಂತದ ಶಯನವನ್ನು ತಲುಪಿ ಮನಸ್ಸಿನಲ್ಲಿಯೇ ಚಿಂತಿಸಿದನು:

> “ಜಾಮದಗ್ನಿ ಮತ್ತು ನನ್ನ ಈ ಪರಮದಾರುಣ ಮತ್ತು ಮಹಾತ್ಯಯ ಯುದ್ಧವು ಈಗ ಬಹಳ ದಿನಗಳಿಂದ ನಡೆಯುತ್ತಿದೆ. ನಾನು ಮಹಾವೀರ್ಯ, ಮಹಾಬಲ, ವಿಪ್ರ ಜಾಮದಗ್ನಿ ರಾಮನನ್ನು ಸಮರ ರಣದಲ್ಲಿ ಜಯಿಸಲು ಸಾದ್ಯನಾಗಿಲ್ಲ. ಪ್ರತಾಪವಾನ್ ಜಾಮಗ್ನಿಯನ್ನು ನಾನು ಜಯಿಸಲು ಶಕ್ಯನೆಂದಾದರೆ ಪ್ರಸನ್ನರಾಗಿ ದೇವತೆಗಳು ಈ ರಾತ್ರಿ ನನಗೆ ಕಾಣಿಸಿಕೊಳ್ಳಲಿ.”

ಹೀಗೆ ಯೋಚಿಸುತ್ತಾ ರಾತ್ರಿ ಅವನು ಬಾಣಗಳಿಂದ ಗಾಯಗೊಂಡ ಬಲಭಾಗದಲ್ಲಿ ಮಲಗಿದನು. ಬೆಳಗಾಗುತ್ತದೆ ಎನ್ನುವ ಸಮಯದಲ್ಲಿ ಅವನು ರಥದಿಂದ ಬಿದ್ದಾಗ ಮೇಲೆತ್ತಿ ಹೆದರಬೇಡ ಎಂದು ಸಂತವಿಸಿ ಧೈರ್ಯವನ್ನಿತ್ತಿದ್ದ ವಿಪ್ರರೇ ಸ್ವಪ್ನದಲ್ಲಿ ಕಾಣಿಸಿಕೊಂಡರು. ಅವನನ್ನು ಸುತ್ತುವರೆದು ಹೇಳಿದರು:

> “ಎದ್ದೇಳು ! ಗಾಂಗೇಯ ! ಭಯಪಡಬೇಡ ! ನಿನಗೆ ಯಾವ ರೀತಿಯ ಭಯವೂ ಇಲ್ಲ. ನಮ್ಮದೇ ಶರೀರವಾಗಿರುವ ನಿನ್ನನ್ನು ನಾವು ರಕ್ಷಿಸುತ್ತೇವೆ ! ಜಾಮದಗ್ನಿ ರಾಮನು ರಣದಲ್ಲಿ ಎಂದೂ ನಿನ್ನನ್ನು ಗೆಲ್ಲಲಾರನು. ನೀನೇ ಸಮರದಲ್ಲಿ ರಾಮನನ್ನು

ಗೆಲ್ಲುತ್ತೀಯೆ. ನೀನು ಈ ಪ್ರಿಯವಾದ ಅಸ್ತ್ರವನ್ನು ಗುರುತಿಸುತ್ತೀಯೆ. ಏಕೆಂದರೆ ನಿನ್ನ ಪೂರ್ವದ ದೇಹಧಾರಣೆಯಲ್ಲಿ ಇದನ್ನು ನೀನು ತಿಳಿದಿದ್ದೆ. ಪ್ರಸ್ವಾಪವೆಂಬ ಹೆಸರಿನ ಇದನ್ನು ಪ್ರಜಾಪತಿಗಾಗಿ ವಿಶ್ವಕರ್ಮನು ನಿರ್ಮಿಸಿದನು. ಇದು ರಾಮನಿಗೂ ಅಥವಾ ಭೂಮಿಯಲ್ಲಿರುವ ಯಾವ ಪುರುಷನಿಗೂ ಗೊತ್ತಿಲ್ಲ. ಅದನ್ನು ಸ್ಮರಿಸಿಕೊಂಡು ಚೆನ್ನಾಗಿ ಪ್ರಯೋಗಿಸು. ಈ ಅಸ್ತ್ರದಿಂದ ರಾಮನು ಸಾಯುವುದಿಲ್ಲ. ಇದರಿಂದ ನೀನು ಯಾವುದೇ ಪಾಪವನ್ನೂ ಹೊಂದುವುದಿಲ್ಲ. ಈ ಬಾಣದ ಬಲದಿಂದ ಪೀಡಿತನಾಗಿ ಜಾಮದಗ್ನಿಯು ನಿದ್ದೆಮಾಡುತ್ತಾನೆ ಅಷ್ಟೆ. ಇದರಿಂದ ಅವನನ್ನು ಸೋಲಿಸಿ ನಿನಗೆ ಪ್ರಿಯವಾದ ಸಂಬೋದನಾಸ್ತ್ರದಿಂದ ಅವನನ್ನು ಪುನಃ ಎಚ್ಚರಿಸಬಲ್ಲೆ. ಪ್ರಭಾತದಲ್ಲಿ ರಥದಲ್ಲಿದ್ದು ಹೀಗೆ ಮಾಡು. ಮಲಗಿರುವ ಅಥವಾ ಸತ್ತಿರುವವರನ್ನು ನಾವು ಸಮನಾಗಿ ಕಾಣುತ್ತೇವಲ್ಲವೇ? ರಾಮನು ಎಂದೂ ಸಾಯುವುದಿಲ್ಲ. ಆದುದರಿಂದ ನೆನಪಿಗೆ ತಂದುಕೊಂಡು ಈ ಪ್ರಸ್ವಾಪವನ್ನು ಬಳಸು."

ಹೀಗೆ ಹೇಳಿ ಆ ಎಂಟು ಒಂದೇ ರೂಪದವರಾದ, ಭಾಸ್ವರಮೂರ್ತರಾದ ದ್ವಿಜೋತ್ತಮರೆಲ್ಲರೂ ಅಂತರ್ಹಿತರಾದರು.

## ಪರಶುರಾಮ-ಭೀಷ್ಮರ ಪರಸ್ಪರ ಬ್ರಹ್ಮಾಸ್ತ್ರ ಪ್ರಯೋಗ

ರಾತ್ರಿಯು ಕಳೆದು ಭೀಷ್ಮನು ಎಚ್ಚೆತ್ತನು. ಕಂಡ ಸ್ವಪ್ನದ ಕುರಿತು ಯೋಚಿಸಿ ಅವನಿಗೆ ಉತ್ತಮ ಹರ್ಷವಾಯಿತು. ಆಗ ಸರ್ವಭೂತಗಳ ರೋಮಹರ್ಷಣವನ್ನುಂಟುಮಾಡುವ ಅವನ ಮತ್ತು ರಾಮನ ಅದ್ಭುತ ತುಮುಲ ಯುದ್ಧವು ನಡೆಯಿತು. ಭಾರ್ಗವನು ಭೀಷ್ಮನ ಮೇಲೆ ಬಾಣಮಯ ಮಳೆಯನ್ನು ಸುರಿಸಿದನು. ಅವನು ಅದನ್ನು ಶರಜಾಲದಿಂದ ತಡೆದನು. ಪರಮಸಂಕ್ರುದ್ಧ ಆ ಮಹಾತಪಸ್ವಿಯು ಪುನಃ ಭೀಷ್ಮನ ಮೇಲೆ ಶಕ್ತಿಯನ್ನು ಎಸೆದನು. ಇಂದ್ರನ ವಜ್ರದಂತೆ ಕಠಿನವಾಗಿದ್ದ, ಯಮದಂಡದಂತೆ ಪ್ರಭೆಯುಳ್ಳ, ಅಗ್ನಿಯಂತೆ ಜ್ವಲಿಸುತ್ತಿರುವ ಅದು ರಣಭೂಮಿಯನ್ನು ಎಲ್ಲಕಡೆಯಿಂದಲೂ ಕಬಳಿಸುತ್ತಿರುವಂತಿತ್ತು. ಆಗ ಅದು ಆಕಾಶದಲ್ಲಿ ಸಂಚರಿಸುವ ಮಿಂಚಿನಂತೆ ಭೀಷ್ಮನ ಭುಜದ ಮೇಲೆ ಬಿದ್ದಿತು ರಾಮನಿಂದ ಹೊಡೆಯಲ್ಪಟ್ಟ ಅವನ ದೇಹದಿಂದ ಗಿರಿಯಿಂದ ಖನಿಜಗಳು ಸುರಿಯುವಂತೆ ಕೆಂಪು ರಕ್ತವು ಸುರಿಯಿತು. ಆಗ ಅವನು ಜಾಮದಗ್ನಿಯ ಮೇಲೆ ತುಂಬಾ ಕೋಪಗೊಂಡು ಸರ್ಪವಿಷೋಪಮವಾದ, ಮೃತ್ಯುಸಂಕಾಶ ಬಾಣವನ್ನು ಕಳುಹಿಸಿದನು. ಅದು ಅವನ ಹಣೆಯನ್ನು ಹೊಡೆಯಲು ಆ ವೀರ ದ್ವಿಜಸತ್ತಮನು ಶೃಂಗವಿರುವ ಪರ್ವತದಂತೆ ಶೋಭಿಸಿದನು. ಅವನು ಬಲವನ್ನುಪಯೋಗಿಸಿ ಅದನ್ನು ಕಿತ್ತೊಗೆದು

ಕಾಲಾಂತಕನಂತಿರುವ ಘೋರ ಶತ್ರುನಿಬರ್ಹಣ ಬಾಣವನ್ನು ಬಲವಾಗಿ ಎಳೆದು ಹೂಡಿದನು. ಹಾವಿನಂತೆ ಭುಸುಗುಟ್ಟುತ್ತ ಬಂದು ಅದು ಭೀಷ್ಮನ ಎದೆಯಮೇಲೆ ಬಿದ್ದಿತು. ಆಗ ಅವನು ರಕ್ತವನ್ನು ಕಾರುತ್ತಾ ಮೂರ್ಛೆಹೊಂದಿ ನೆಲದ ಮೇಲೆ ಬಿದ್ದನು. ಪುನಃ ಎಚ್ಚೆತ್ತು ಅವನು ಧೀಮತ ಜಮದಗ್ನಿಯ ಮೇಲೆ ವಿಮಲವಾದ ಅಗ್ನಿಯಂತೆ ಉರಿಯುತ್ತಿರುವ ಶಕ್ತಿಯನ್ನು ಎಸೆದನು. ಅದು ಆ ದ್ವಿಜಮುಖ್ಯನ ಎದೆಯ ಮೇಲೆ ಬಿದ್ದಿತು. ವಿಹ್ವಲನಾದ ಅವನು ನಡುಗಿದನು. ಆಗ ಅವನ ಸಖ, ವಿಪ್ರ, ಮಹಾತಪಸ್ವಿ ಅಕೃತವ್ರಣನು ಅವನನ್ನು ಅಪ್ಪಿಕೊಂಡು ಶುಭವಾಕ್ಯಗಳಿಂದ ಆಶ್ವಾಸನೆಗಳನ್ನಿತ್ತನು. ಆಗ ಕ್ರೋಧಾಮರ್ಷಸಮನ್ವಿತನಾದ ಮಹಾವ್ರತ ರಾಮನು ಪರಮಾಸ್ತ್ರ ಬ್ರಹ್ಮವನ್ನು ಪ್ರಯೋಗಿಸತೊಡಗಿದನು. ಅದನ್ನು ಎದುರಿಸಲು ಭೀಷ್ಮನೂ ಕೂಡ ಆ ಉತ್ತಮ ಬ್ರಹ್ಮಾಸ್ತ್ರವನ್ನು ಹೂಡಿದನು. ಅದು ಯುಗಾಂತದ ಜ್ವಾಲೆಗಳಂತೆ ತೋರಿತು. ಭೀಷ್ಮನನ್ನಾಗಲೀ ರಾಮನನ್ನಾಗಲೀ ತಾಗಲು ಅಸಮರ್ಥರಾದ ಆ ಎರಡು ಬ್ರಹ್ಮಾಸ್ತ್ರಗಳು ಮಧ್ಯದಲ್ಲಿಯೇ ಕೂಡಿದವು. ಆಗ ಇಡೀ ಆಕಾಶವೇ ಹತ್ತಿ ಉರಿಯುತ್ತಿರುವಂತೆ ತೋರಿತು. ಎಲ್ಲ ಭೂತಗಳೂ ಆರ್ತರಾದರು. ಅಸ್ತ್ರತೇಜದಿಂದ ಪೀಡಿತರಾದ ಋಷಿಗಳು, ಗಂಧರ್ವರು ಮತ್ತು ದೇವತೆಗಳು ಕೂಡ ಪರಮ ಸಂತಾಪವನ್ನು ಹೊಂದಿದರು. ಪರ್ವತ-ವನ-ವೃಕ್ಷಗಳಿಂದ ಕೂಡಿದ ಭೂಮಿಯು ನಡುಗಿತು. ಸಂತಪ್ತರಾದ ಭೂತಗಳು ಉತ್ತಮ ವಿಷಾದವನ್ನೂ ಹೊಂದಿದರು. ದಶ ದಿಕ್ಕುಗಳಲ್ಲಿ

ಹೊಗೆಯು ತುಂಬಿ ಆಕಾಶವು ಹತ್ತಿ ಉರಿಯತೊಡಗಿತು. ಆಕಾಶಗಾಮಿಗಳು ಆಕಾಶದಲ್ಲಿ ನಿಲ್ಲದಂತಾದರು. ದೇವಾಸುರರಾಕ್ಷಸರಿಂದ ಕೂಡಿದ ಲೋಕಗಳು ಹಾಹಾಕಾರ ಮಾಡುತ್ತಿರಲು ಇದೇ ಸಮಯವೆಂದು ಭೀಷ್ಮನು ಬ್ರಹ್ಮವಾದಿಗಳು ಹೇಳಿದ ಪ್ರಿಯವಾದ ಪ್ರಸ್ವಾಪ ಅಸ್ತ್ರವನ್ನು ಹೂಡಲು ಬಯಸಿದನು. ಹೀಗೆ ಯೋಚಿಸಲು ಆ ಅಸ್ತ್ರವೂ ಕೂಡ ಅವನ ಮನಸ್ಸಿನಲ್ಲಿ ಹೊಳೆಯಿತು.

## ಪರಶುರಾಮ-ಭೀಷ್ಮರು ಯುದ್ಧದಿಂದ ಹಿಂದೆಸರಿದುದು

ಆಗ "ಭೀಷ್ಮ! ಪ್ರಸ್ವಾಪವನ್ನು ಪ್ರಯೋಗಿಸಬೇಡ!" ಎಂದು ದಿವಿಯಲ್ಲಿ ಮಹಾ ಹಲಹಲ ಶಬ್ಧವು ಕೇಳಿಬಂದಿತು. ಹೀಗೆ ಹೇಳಿದರೂ ಅವನು ಆ ಅಸ್ತ್ರವನ್ನು ಭೃಗುನಂದನನ ಮೇಲೆ ಗುರಿಯಿಟ್ಟನು. ಅವನು ಪ್ರಸ್ವಾಪವನ್ನು ಪ್ರಯೋಗಿಸುವುದರಲ್ಲಿರುವಾಗ ನಾರದನು ಹೇಳಿದನು:

> "ಕೌರವ್ಯ! ಯೋಚಿಸು! ದೇವಗಣಗಳು ದಿವಿಯಲ್ಲಿ ನಿಂತಿರುವರು. ಇಂದು ಅವರೂ ಕೂಡ ನಿನ್ನನ್ನು ತಡೆಯುತ್ತಿದ್ದಾರೆ. ಪ್ರಸ್ವಾಪವನ್ನು ಪ್ರಯೋಗಿಸಬೇಡ! ರಾಮನು ತಪಸ್ವೀ, ಬ್ರಹ್ಮಣ್ಯ, ಬ್ರಾಹ್ಮಣ ಮತ್ತು ನಿನ್ನ ಗುರು. ಅವನ ಅಪಮಾನವನ್ನು ಎಂದೂ ಮಾಡಬೇಡ!"

ಆಗ ಭೀಷ್ಮನು ದಿವಿಯಲ್ಲಿದ್ದ ಆ ಎಂಟು ಬ್ರಹ್ಮವಾದಿಗಳನ್ನು ನೋಡಿದೆನು. ಅವರು ಮುಗುಳ್ನಗುತ್ತಾ ಮೆಲ್ಲನೆ ನನಗೆ ಹೇಳಿದರು:

“ಭರತಶ್ರೇಷ್ಠ! ನಾರದನು ಹೇಳಿದಂತೆಯೇ ಮಾಡು. ಇದು ಲೋಕಗಳ ಪರಮ ಶ್ರೇಯಸ್ಸನ್ನು ತರುತ್ತದೆಯೆಂದು ತಿಳಿ.”

ಆಗ ಭೀಷ್ಮನು ಪ್ರಸ್ವಾಪನವನ್ನು ಹಿಂದೆತೆಗೆದುಕೊಂಡನು. ಆ ಯುದ್ಧದಲ್ಲಿ ಯಥಾವಿಧಿಯಾಗಿ ಬ್ರಹ್ಮಾಸ್ತ್ರವನ್ನು ಬೆಳಗಿಸಿದನು! ಆ ಅಸ್ತ್ರವನ್ನು ಹಿಂದೆ ತೆಗೆದುಕೊಂಡುದುದನ್ನು ನೋಡಿದ ರಾಮನು ರೋಷಗೊಂಡು

“ಮಂದಬುದ್ಧಿಯವನಾದ ನಾನು ಭೀಷ್ಮನಿಂದ ಗೆಲ್ಲಲ್ಪಟ್ಟೆ!”

ಎಂದು ಹೇಳಿ ಒಮ್ಮೆಲೇ ಯುದ್ಧವನ್ನು ತ್ಯಜಿಸಿದನು. ಆಗ ಜಾಮದಗ್ನಿಯು ತನ್ನ ತಂದೆಯನ್ನೂ ಇತರ ಪಿತೃಗಳನ್ನೂ ನೋಡಿದನು. ಅವರು ಅವನನ್ನು ಸುತ್ತುವರೆದು ನಿಂತು ಈ ಸಾಂತ್ವನದ ಮಾತುಗಳನ್ನಾಡಿದರು:

“ವತ್ಸ! ಸಾಹಸಿಯೊಂದಿಗೆ ಇಂತಹ ಸಾಹಸವನ್ನು – ವಿಶೇಷತಃ ಭೀಷ್ಮನಂತಹ ಕ್ಷತ್ರಿಯನೊಂದಿಗೆ ಯುದ್ಧ ಮಾಡಲು - ಎಂದೂ ಮಾಡಬೇಡ!

ಯುದ್ಧಮಾಡುವುದಾದರೋ ಕ್ಷತ್ರಿಯರ ಧರ್ಮ. ಸ್ವಾಧ್ಯಾಯ ವ್ರತಚರ್ಯೆಗಳು ಬ್ರಾಹ್ಮಣರ ಪರಮ ಧನ. ಹಿಂದೆ ಯಾವುದೋ ಕಾರಣದಿಂದ ನಾವು ನಿನಗೆ ಶಸ್ತ್ರಧಾರಣದ ಉಪದೇಶವನ್ನು ನೀಡಿದ್ದೆವು. ಅದರಿಂದ ನೀನು ಉಗ್ರ ಕಾರ್ಯವನ್ನು ಎಸಗಿದ್ದೀಯೆ. ಭೀಷ್ಮನೊಡನೆ ಮಾಡಿದ ಈ

ಯುದ್ಧದೊಂದಿಗೆ ಮುಗಿಸು. ಸಾಕಷ್ಟು ಯುದ್ಧ ಮಾಡಿದ್ದೀಯೆ. ಇನ್ನು ನಿಲ್ಲಿಸು! ನಿನಗೆ ಮಂಗಳವಾಗಲಿ! ಇದನ್ನು ಸಮಾಪ್ತಗೊಳಿಸು. ಧನುರ್ಧಾರಣೆಯನ್ನು ವಿಸರ್ಜಿಸಿ ತಪಸ್ಸನ್ನು ತಪಿಸು! ಈ ಶಾಂತನವ ಭೀಷ್ಮನನ್ನು ಎಲ್ಲ ದೇವತೆಗಳೂ ತಡೆಯುತ್ತಿದ್ದಾರೆ. ಈ ರಣದಿಂದ ಹಿಂದಿರುಗು ಎಂದು ಪ್ರಚೋದಿಸುತ್ತಿದ್ದಾರೆ. ಪುನಃ ಪುನಃ "ರಾಮನೊಂದಿಗೆ ಹೋರಾಡಬೇಡ. ಅವನು ನಿನ್ನ ಗುರು ಎಂದೂ, ರಾಮನನ್ನು ರಣದಲ್ಲಿ ಗೆಲ್ಲಲು ನಿನಗೆ ಅಥವಾ ಅನ್ಯರಿಗೆ ಸಾಧ್ಯವಿಲ್ಲ" ಎಂದೂ ಹೇಳುತ್ತಿದ್ದಾರೆ. ನಿನಗೆ ನಾವು ಗುರುಗಳು. ಆದುದರಿಂದ ನಿನ್ನನ್ನು ತಡೆಯುತ್ತಿದ್ದೇವೆ. ಭೀಷ್ಮನು ವಸುಗಳಲ್ಲಿಯೇ ಶ್ರೇಷ್ಠನಾದವನು. ಅದೃಷ್ಟ! ನೀನು ಬದುಕಿರುವೆ. ಶಂತನು ಪುತ್ರ ಗಾಂಗೇಯನು ಮಹಾಯಶಸ್ವಿ ವಸುಗಳಲ್ಲೊಬ್ಬನು. ಅವನನ್ನು ನೀನು ಹೇಗೆ ರಣದಲ್ಲಿ ಗೆಲ್ಲಲು ಶಕ್ಯ? ಹಿಂದೆ ಸರಿ. ಪಾಂಡವಶ್ರೇಷ್ಠ, ಪುರಂದರಸುತ, ಬಲೀ, ನರ, ಪಜಾಪತಿ, ವೀರ, ಪೂರ್ವದೇವ, ಸನಾತನ, ಸವ್ಯಸಾಚಿ, ಮೂರು ಲೋಕಗಳಲ್ಲಿಯೂ ವೀರ್ಯವಂತನೆಂದು ವಿಖ್ಯಾತನಾದ ಅರ್ಜುನನು ಕಾಲಬಂದಾಗ ಮೃತ್ಯುವಾಗುತ್ತಾನೆ ಎಂದು ಸ್ವಯಂಭುವು ವಿಹಿಸಿದ್ದಾನೆ."

ಹೀಗೆ ಹೇಳಿದ ತಂದೆ ಮತ್ತು ಪಿತೃಗಳಿಗೆ ರಾಮನು ಹೇಳಿದನು:

“ನಾನು ಯುದ್ಧದಿಂದ ಹಿಂದೆ ಸರಿಯುವುದಿಲ್ಲವೆಂದು ವ್ರತವನ್ನಿಟ್ಟುಕೊಂಡಿದ್ದೇನೆ. ಈ ಹಿಂದೆ ನಾನು ಎಂದೂ ರಣದ ನೆತ್ತಿಯಿಂದ ಹಿಂಜರಿದಿರಲಿಲ್ಲ. ಬೇಕಾದರೆ ಪಿತಾಮಹರು ಆಪಗೇಯನನ್ನು ಯುದ್ಧದಿಂದ ಹಿಂದೆಸರಿಸಿ. ನಾನು ಮಾತ್ರ ಎಂದೂ ಯುದ್ಧದಿಂದ ಹಿಂದೆಸರಿಯುವುದಿಲ್ಲ.”

ಆಗ ಋಚೀಕನ ಮುಂದಾಳುತ್ವದಲ್ಲಿ ನಾರದನೂ ಸೇರಿ ಮುನಿಗಳು ಒಟ್ಟಾಗಿ ಬಂದು ಭೀಷ್ಮನಿಗೆ ಹೇಳಿದರು:

“ಮಗೂ! ರಣದಿಂದ ಹಿಂದೆಸರಿ. ದ್ವಿಜೋತ್ತಮನನ್ನು ಗೌರವಿಸು.”

“ಇಲ್ಲ” ಎಂದು ಭೀಷ್ಮನು ಕ್ಷತ್ರಧರ್ಮವನ್ನು ಅಪೇಕ್ಷಿಸದೆಯೇ ಅವರಿಗೆ ಹೇಳಿದನು.

“ಲೋಕದಲ್ಲಿ ಇದು ನನ್ನ ವ್ರತ! ನಾನು ಎಂದೂ ಯುದ್ಧದಿಂದ ಬೆನ್ನಮೇಲೆ ಬಾಣಗಳಿಂದ ಪೆಟ್ಟು ತಿನ್ನದೇ ವಿಮುಖನಾಗಿ ಹಿಂದಿರುಗುವುದಿಲ್ಲವೆಂದು! ಇದನ್ನು ನಾನು ಶಾಶ್ವತವಾಗಿ ಲೋಭಕ್ಕಾಗಲೀ, ಕಾರ್ಪಣ್ಯದಿಂದಾಗಲೀ, ಭಯದಿಂದಾಗಲೀ, ಅರ್ಥಕ್ಕಾಗಲೀ ತ್ಯಜಿಸುವುದಿಲ್ಲ ಎಂದು ನನ್ನ ಬುದ್ಧಿಯು ನಿಶ್ಚಯಿಸಿದೆ.”

ಆಗ ನಾರದಪ್ರಮುಖ ಮುನಿಗಳೆಲ್ಲರೂ ಭೀಷ್ಮನ ಮಾತೆ

ಭಾಗೀರಥಿಯೂ ರಣಮಧ್ಯವನ್ನು ಪ್ರವೇಶಿಸಿದರು. ಆಗಲೂ ಅವನು ಮೊದಲಿನಂತೆ ಶರವನ್ನು ಧನುಸ್ಸಿಗೆ ಹೂಡಿದ್ದನು, ದೃಢನಿಶ್ಚಯನಾಗಿ ಆಹವದಲ್ಲಿ ಯುದ್ಧಮಾಡಲು ನಿಂತಿದ್ದನು. ಆಗ ಅವರು ಎಲ್ಲರೂ ಒಟ್ಟಿಗೆ ಇನ್ನೊಮ್ಮೆ ಭೃಗುನಂದನ ರಾಮನಿಗೆ ಹೇಳಿದರು:

> "ಭಾರ್ಗವ! ವಿಪ್ರರ ಹೃದಯವು ಬೆಣ್ಣೆಯಿಂದ್ದಂತೆ. ಶಾಂತನಾಗು! ಈ ಯುದ್ಧದಿಂದ ಹಿಂದೆಸರಿ! ಭೀಷ್ಮನಿಂದ ನೀನು ಅವಧ್ಯ. ಭೀಷ್ಮನೂ ನಿನ್ನಿಂದ ಅವಧ್ಯ."

ಹೀಗೆ ಅವರೆಲ್ಲರೂ ಯುದ್ಧವನ್ನು ತಡೆದರು ಮತ್ತು ಪಿತೃಗಳು ಭೃಗುನಂದನನನ್ನು ಶಸ್ತ್ರವನ್ನು ಕೆಳಗಿಡುವಂತೆ ಮಾಡಿದರು. ಆಗ ಭೀಷ್ಮನು ಪುನಃ ಮೇಲೇರುತ್ತಿರುವ ದೀಪ್ಯಮಾನ ಗ್ರಹಗಳಂತಿದ್ದ ಆ ಎಂಟು ಬ್ರಹ್ಮವಾದಿಗಳನ್ನು ನೋಡಿದನು. ಸಮರದಲ್ಲಿ ನಿಂತಿದ್ದ ಭೀಷ್ಮನಿಗೆ ಅವರು ಪ್ರೀತಿಯಿಂದ ಹೇಳಿದರು:

> "ಮಹಾಬಾಹೋ! ಗುರು ರಾಮನಲ್ಲಿಗೆ ಹೋಗಿ ಲೋಕಕ್ಕೆ ಹಿತವಾದುದನ್ನು ಮಾಡು."

ಸುಹೃದಯರ ಮಾತಿನಂತೆ ರಾಮನು ಹಿಂದೆಸರಿದುದನ್ನು ನೋಡಿ ಲೋಕಗಳ ಹಿತವನ್ನು ಮಾಡಲೋಸುಗ ಅವನಿಗೆ ಹೇಳಿದ ಮಾತನ್ನು ಭೀಷ್ಮನು ಅನುಸರಿಸಿದನು. ಅವನು ರಾಮನ ಬಳಿ ಹೋಗಿ, ತುಂಬಾ ಗಾಯಗೊಂಡವನಂತೆ ವಂದಿಸಿದನು. ಮಹಾತಪಸ್ವಿ ರಾಮನಾದರೋ ಪ್ರೀತಿಯಿಂದ ಮುಗುಳ್ನಗುತ್ತಾ ಅವನಿಗೆ ಹೇಳಿದನು:

> “ನಿನ್ನಂಥಹ ಕ್ಷತ್ರಿಯನು ಭೂಮಿಯ ಮೇಲೆ ನಡೆಯುವವ ಯಾರೂ ಲೋಕದಲ್ಲಿಯೇ ಇಲ್ಲ. ಭೀಷ್ಮ ! ಹೋಗುವವನಾಗು ! ನಿನ್ನಿಂದ ಈ ಯುದ್ಧದಲ್ಲಿ ನಾನು ತುಂಬಾ ತೃಪ್ತನಾಗಿದ್ದೇನೆ.”

ಭೀಷ್ಮನ ಸಮಕ್ಷಮದಲ್ಲಿಯೇ ಆ ಕನ್ಯೆ ಅಂಬೆಯನ್ನು ಕರೆದು ಭಾರ್ಗವನು ತಪಸ್ವಿಗಳ ಮಧ್ಯೆ ಈ ದೀನ ಮಾತುಗಳನ್ನಾಡಿದನು:

> “ಭಾಮಿನೀ ! ಈ ಲೋಕಗಳೆಲ್ಲವುಗಳ ಮುಂದೆ ನನ್ನಲ್ಲಿದ್ದ ಪರಮ ಶಕ್ತಿಯನ್ನುಪಯೋಗಿಸಿ ಮಹಾ ಪೌರಷವನ್ನು ತೋರಿಸಿದ್ದೇನೆ. ನನ್ನ ಉತ್ತಮ ಅಸ್ತ್ರಗಳನ್ನು ತೋರಿಸಿಯೂ ನಾನು ಶಸ್ತ್ರಭೃತರಲ್ಲಿ ಶ್ರೇಷ್ಠನಾದ ಭೀಷ್ಮನನ್ನು ಯುದ್ಧದಲ್ಲಿ ಮೀರಿಸಲು ಶಕ್ಯನಾಗಲಿಲ್ಲ. ಇದು ನನ್ನ ಶಕ್ತಿಯ ಮಿತಿ. ಇದು ನನ್ನ ಬಲದ ಮಿತಿ. ನಿನಗಿಷ್ಟವಾದಲ್ಲಿಗೆ ಹೋಗುವವಳಾಗು. ಅಥವಾ ನಿನಗೆ ಬೇರೆ ಏನಾದರೂ ಮಾಡಲೇ? ಭೀಷ್ಮನನ್ನೇ ಶರಣು ಹೋಗು. ನಿನಗೆ ಬೇರೆ ಗತಿಯೇ ಇಲ್ಲವೆನಿಸುತ್ತದೆ. ಏಕೆಂದರೆ ಮಹಾಸ್ತ್ರಗಳನ್ನು ಪ್ರಯೋಗಿಸಿ ಭೀಷ್ಮನು ನನ್ನನ್ನು ಗೆದ್ದಿದ್ದಾನೆ.”

ಹೀಗೆ ಹೇಳಿ ಮಹಾಮನಸ್ವಿ ರಾಮನು ನಿಟ್ಟಿಸುರು ಬಿಡುತ್ತಾ ಸುಮ್ಮನಾದನು. ಆಗ ಕನ್ಯೆಯು ಭೃಗುನಂದನನಿಗೆ ಹೇಳಿದಳು:

> “ಭಗವನ್ ! ಇನ್ನು ನೀನು ಹೇಳಿದಂತೆಯೇ ! ಈ ಉದಾರಧೀ ಭೀಷ್ಮನು ಯುದ್ಧದಲ್ಲಿ ದೇವತೆಗಳಿಗೂ ಅಜೇಯನು.

ಯಥಾಶಕ್ತಿಯಾಗಿ ಯಥೋತ್ಸಾಹವಾಗಿ ನೀನು, ರಣದಲ್ಲಿ ನಿನ್ನ ವಿವಿಧ ವೀರ್ಯ ಅಸ್ತ್ರಗಳನ್ನು ಕೆಳಗಿಡದೆಯೇ ನನ್ನ ಕೆಲಸವನ್ನು ಮಾಡಿದ್ದೀಯೆ. ಕೊನೆಯಲ್ಲಿಯೂ ಯುದ್ಧದಲ್ಲಿ ಅವನನ್ನು ಮೀರಿಸಲು ಸಾಧ್ಯವಾಗಲಿಲ್ಲ. ಆದರೆ ನಾನು ಪುನಃ ಎಂದೂ ಭೀಷ್ಮನಲ್ಲಿಗೆ ಹೋಗುವುದಿಲ್ಲ. ಎಲ್ಲಿ ಸ್ವಯಂ ನಾನೇ ಭೀಷ್ಮನನ್ನು ಸಮರದಲ್ಲಿ ಬೀಳಿಸಬಲ್ಲೆನೋ ಅಲ್ಲಿಗೆ ಹೋಗುತ್ತೇನೆ.”

ಹೀಗೆ ಹೇಳಿ ರೋಷವ್ಯಾಕುಲಲೋಚನಳಾದ ಆ ಕನ್ಯೆಯು ಭೀಷ್ಮನ ವಧೆಯನ್ನೇ ಚಿಂತಿಸುತ್ತಾ ತಪಸ್ಸಿನ ಧೃತ ಸಂಕಲ್ಪವನ್ನು ಮಾಡಿ ಹೊರಟು ಹೋದಳು. ಆ ಮುನಿ ಭೃಗುಸತ್ತಮ ರಾಮನು ನನ್ನನ್ನು ಬೀಳ್ಕೊಂಡು ಎಲ್ಲಿಂದ ಬಂದಿದ್ದನೋ ಆ ಮಹೇಂದ್ರ ಪರ್ವತಕ್ಕೆ ಮುನಿಗಳ ಸಹಿತ ಹೊರಟು ಹೋದನು. ಭೀಷ್ಮನು ನಾನು ರಥವನ್ನೇರಿ, ದ್ವಿಜಾತಿಯವರು ಸ್ತುತಿಸುತ್ತಿರಲು ನಗರವನ್ನು ಪ್ರವೇಶಿಸಿ ತಾಯಿ ಸತ್ಯವತಿಗೆ ನಡೆದುದೆಲ್ಲವನ್ನೂ ನಿವೇದಿಸಿದನು. ಅವಳೂ ಕೂಡ ಭೀಷ್ಮನನ್ನು ಅಭಿನಂದಿಸಿದಳು. ಆ ಕನ್ಯೆಯ ಕೆಲಸಗಳ ವೃತ್ತಾಂತವನ್ನು ತಿಳಿಯಲೋಸುಗ ಭೀಷ್ಮನು ಪ್ರಾಜ್ಞ ಪುರುಷರನ್ನು ನಿಯೋಜಿಸಿದನು. ಅವರು ಅವನ ಪ್ರಿಯಹಿತಗಳಲ್ಲಿ ನಿರತರಾಗಿ ದಿವಸ ದಿವಸವೂ ಅಂಬೆಯ ಓಡಾಟಗಳನ್ನು, ಮಾತುಗಳನ್ನು ಮತ್ತು ನಡತೆಗಳನ್ನು ಅವನಿಗೆ ವರದಿ ಮಾಡಿದರು.

ಅವಳು ತಪಸ್ಸಿಗೆ ಹಠಮಾಡಿ ವನಕ್ಕೆ ಹೋದಾಗಿನಿಂದಲೇ ಭೀಷ್ಮನು ವ್ಯಥಿತನೂ, ದೀನನೂ, ಬುದ್ಧಿಕಳೆದುಕೊಂಡಂಥವನೂ ಆದನು. ಏಕೆಂದರೆ ಬ್ರಹ್ಮವಿದನಾದ ಸಂಶಿತವ್ರತ ತಾಪಸನನ್ನು ಬಿಟ್ಟು ಬೇರೆ ಯಾವ ಕ್ಷತ್ರಿಯನೂ ವೀರ್ಯದಿಂದ ಅವನನ್ನು ಯುದ್ಧದಲ್ಲಿ ಜಯಿಸಲಾರನು! ಭಯದಿಂದ ಅವನು ಇದನ್ನು ನಾರದ ಮತ್ತು ವ್ಯಾಸನಿಗೂ ಕೂಡ ಹೇಳುವ ಕಾರ್ಯವನ್ನು ಮಾಡಿದನು. ಅವರು ಅವನಿಗೆ ಹೇಳಿದರು:

> "ಭೀಷ್ಮ! ಕಾಶಿಸುತೆಯ ಕುರಿತು ವಿಷಾದಪಡಬೇಡ. ದೈವವನ್ನು ಪುರುಷ ಕಾರಣಗಳಿಂದ ಯಾರುತಾನೇ ತಡೆಯಲು ಪ್ರಯತ್ನಿಸಬೇಕು?"

## ಅಂಬೆಯ ತಪಸ್ಸು

ಕನ್ಯೆ ಅಂಬೆಯಾದರೋ ಯಮುನಾತೀರದ ಆಶ್ರಮಮಂಡಲವನ್ನು ಪ್ರವೇಶಿಸಿ ಅತಿಮಾನುಷ ತಪಸ್ಸನ್ನು ತಪಿಸಿದಳು. ಆ ತಪೋಧನೆಯು ನಿರಾಹಾರಳಾಗಿ, ಕೃಶಳಾಗಿ, ರೂಕ್ಷಳಾಗಿ, ಜಟಿಲಳಾಗಿ, ಹೊಲಸುತುಂಬಿಕೊಂಡು ಆರು ತಿಂಗಳು ಗಾಳಿಯನ್ನೇ ಸೇವಿಸುತ್ತಾ ಅಲುಗಾಡದೇ ನಿಂತಿದ್ದಳು. ಇನ್ನೊಂದು ವರ್ಷ ಆ ಭಾಮಿನಿಯು ಯಮುನಾತೀರವನ್ನು ಸೇರಿ ನಿರಾಹಾರಳಾಗಿ ನೀರಿನಲ್ಲಿಯೇ ವಾಸಿಸಿ ಕಳೆದಳು. ಅನಂತರ ತೀವ್ರಕೋಪದಿಂದ ಪಾದದ ಅಂಗುಷ್ಠದ ಮೇಲೆ ನಿಂತುಕೊಂಡು ಕೇವಲ ಒಂದು ಒಣ ಎಲೆಯನ್ನು ತಿಂದುಕೊಂಡು

ಒಂದು ವರ್ಷವನ್ನು ಕಳೆದಳು. ಹೀಗೆ ಆ ರೋದಸಿಯು ಹನ್ನೆರಡು ವರ್ಷಗಳು ತಪಿಸಿದಳು. ಅವಳ ಬಾಂಧವರೂ ಕೂಡ ಅವಳನ್ನು ತಡೆಯಲು ಶಕ್ಯರಾಗಲಿಲ್ಲ. ಆಗ ಅವಳು ಸಿದ್ಧಚಾರಣಸೇವಿತ ಮಹಾತ್ಮ ತಾಪಸ ಪುಣ್ಯಶೀಲರ ಆಶ್ರಮ ಭೂಮಿಗೆ ಹೋದಳು. ಅಲ್ಲಿ ಪುಣ್ಯದೇಶಗಳಲ್ಲಿ ಸ್ನಾನಮಾಡುತ್ತಾ ಹಗಲು ರಾತ್ರಿ ಕಾಶಿಕನ್ಯೆಯು ತನಗಿಷ್ಟವಾದ ಹಾಗೆ ತಿರುಗಾಡಿದಳು. ನಂದಾಶ್ರಮ, ನಂತರ ಶುಭ ಉಲೂಕಾಶ್ರಮ, ಚ್ಯವನಾಶ್ರಮ, ಬ್ರಹ್ಮಸ್ಥಾನ, ದೇವರು ಯಾಜಿಸಿದ, ದೇವರ ಅರಣ್ಯ ಪ್ರಯಾಗ, ಭೋಗವತಿ, ಕೌಶಿಕಾಶ್ರಮ, ಮಾಂಡವ್ಯಾಶ್ರಮ, ದಿಲೀಪನ ಆಶ್ರಮ, ರಾಮಸರೋವರ, ಪೈಲಗಾರ್ಗನ ಆಶ್ರಮ - ಈ ತಿರ್ಥಗಳಲ್ಲಿ ಕಾಶಿಕನ್ಯೆಯು ದೇಹವನ್ನು ತೊಳೆದು ತೀವ್ರ ತಪಸ್ಸಿನಲ್ಲಿದ್ದಳು. ಆಗ ಭೀಷ್ಮನ ಮಾತೆಯು ಜಲದಿಂದ ಮೇಲೆದ್ದು ಅವಳಿಗೆ ಹೇಳಿದಳು:

> "ಭದ್ರೇ! ಏಕೆ ಈ ಕಷ್ಟಪಡುತ್ತಿರುವೆ? ಕಾರಣವನ್ನು ನನಗೆ ಹೇಳು."

ಅವಳಿಗೆ ಆ ಅನಿಂದಿತೆಯು ಕೈಮುಗಿದು ಹೇಳಿದಳು:

> "ಚಾರುಲೋಚನೇ! ಭೀಷ್ಮನು ಸಮರದಲ್ಲಿ ರಾಮನನ್ನು ಗೆದ್ದನು. ಯುದ್ಧ ಮಾಡಲು ಬರುವ ಆ ಮಹೀಪತಿಯೊಡನೆ ಬೇರೆ ಯಾರುತಾನೇ ಹೋರಾಡಲು ಬಯಸುವರು? ನಾನು ಭೀಷ್ಮನ ವಿನಾಶಕ್ಕೆ ಈ ಸುದಾರುಣ ತಪಸ್ಸನ್ನು ತಪಿಸುತ್ತಿದ್ದೇನೆ. ದೇವೀ! ಆ ನೃಪನನ್ನು ಕೊಲ್ಲಬಹುದೆಂದು

ನಾನು ಭೂಮಿಯಲ್ಲಿ ಅಲೆದಾಡುತ್ತಿದ್ದೇನೆ. ಈ ದೇಹದಲ್ಲಿ ಅಥವಾ ಇನ್ನೊಂದರಲ್ಲಿ ಇದೇ ನನ್ನ ವ್ರತದಿಂದ ಬಯಸುವ ಫಲ."

ಆಗ ಸಾಗರಗೆಯು ಅವಳಿಗೆ ಹೇಳಿದಳು:

"ಭಾಮಿನೀ! ನೀನು ಸುತ್ತಿ ಬಳಸಿ ಹೋಗುತ್ತಿದ್ದೀಯೆ. ನಿನ್ನ ಈ ಆಸೆಯನ್ನು ಪೂರೈಸಲು ನೀನು ಶಕ್ಯಳಾಗುವುದಿಲ್ಲ. ಭೀಷ್ಮನ ವಿನಾಶಕ್ಕಾಗಿ ನೀನು ವ್ರತವನ್ನು ಆಚರಿಸುತ್ತಿದ್ದೀಯೆ. ಒಂದುವೇಳೆ ವ್ರತಸ್ಥಳಾಗಿದ್ದುಕೊಂಡೇ ನೀನು ಶರೀರವನ್ನು ತೊರೆದರೆ ಮಳೆನೀರಿನಿಂದ ತುಂಬಿಕೊಳ್ಳುವ ಕುಟಿಲ ನದಿಯಾಗುತ್ತೀಯೆ. ಅಸಾದ್ಯ ತೀರ್ಥವಾಗುತ್ತೀಯೆ. ಮಳೆನೀರಿನಿಂದ ತುಂಬಿ ಭಯಂಕರ ಪ್ರವಾಹವಾಗಿ ಎಂಟು ತಿಂಗಳು ಎಲ್ಲರಿಗೂ ಘೋರವೂ ಭಯಂಕರಿಯೂ ಆಗುತ್ತೀಯೆ."

ಹೀಗೆ ಕಾಶಿಕನ್ಯೆಗೆ ಹೇಳಿ ಭೀಷ್ಮನ ಮಾತೆ ಮಹಾಭಾಗೆ ಭಾಮಿನಿಯು ಮುಗುಳ್ನಗುತ್ತಾ ಹಿಂದಿರುಗಿದಳು.

ಆ ವರವರ್ಣಿನಿಯು ಕೆಲವೊಮ್ಮೆ ಎಂಟು ತಿಂಗಳು ಮತ್ತು ಕೆಲವೊಮ್ಮೆ ಹತ್ತು ತಿಂಗಳು ಏನನ್ನೂ ತಿನ್ನದೇ ನೀರನ್ನೂ ಕುಡಿಯದೇ ಪುನಃ ತಪಸ್ಸನ್ನಾಚರಿಸಿದಳು. ಆ ಕಾಶಿಪತಿಯ ಸುತೆಯು ಅಲ್ಲಿ ಇಲ್ಲಿ ತಿರುಗಾಡುತ್ತ ತೀರ್ಥದ ಆಸೆಯಿಂದ ಪುನಃ ವತ್ಸಭೂಮಿಗೆ

ಆಗಮಿಸಿದಳು. ಅವಳು ವತ್ಸಭೂಮಿಯಲ್ಲಿ ಮಳೆನೀರಿನಿಂದ ತುಂಬಿ ಹರಿಯುವ ಬಹಳ ಮೊಸಳೆಗಳಿರುವ, ಕಷ್ಟದ ತೀರ್ಥ, ಕುಟಿಲ ನದಿಯಾದಳೆಂದು ಹೇಳುತ್ತಾರೆ. ತಪಸ್ಸಿನ ಪ್ರಭಾವದಿಂದ ಆ ಕನ್ಯೆಯ ಅರ್ಧಭಾಗವು ನದಿಯಾಗಿ ಹರಿಯಿತು ಮತ್ತು ಇನ್ನೊಂದು ಅರ್ಧಭಾಗವು ಕನ್ಯೆಯಾಗಿಯೇ ಉಳಿಯಿತು.

## ಅಂಬೆಯ ಅಗ್ನಿಪ್ರವೇಶ

ಆಗ ಅಲ್ಲಿದ್ದ ತಾಪಸರೆಲ್ಲ ತಪಸ್ಸಿನಲ್ಲಿ ಧೃತನಿಶ್ಚಯಳಾದ ಅವಳು ಹಿಂದಿರುಗದೇ ಇದ್ದುದನ್ನು ನೋಡಿ “ಏನು ಕಾರ್ಯ?” ಎಂದು ಅವಳನ್ನು ಪ್ರಶ್ನಿಸಿದರು. ಆಗ ಆ ಕನ್ಯೆಯು ತಪೋವೃದ್ಧ ಋಷಿಗಳಿಗೆ ಹೇಳಿದಳು: “ಭೀಷ್ಮನಿಂದ ನಿರಾಕೃತಳಾಗಿ ಪತಿಧರ್ಮದಿಂದ ವಂಚಿತಳಾಗಿದ್ದೇನೆ. ತಪೋಧನರೇ! ಅವನ ವಧೆಗೋಸ್ಕರ ದೀಕ್ಷಿತಳಾಗಿದ್ದೇನೆಯೇ ಹೊರತು ಉತ್ತಮ ಲೋಕಗಳಿಗಲ್ಲ. ಭೀಷ್ಮನನ್ನು ಕೊಂದು ಶಾಂತಿಯು ದೊರೆಯುತ್ತದೆ ಎಂದು ನಿಶ್ಚಯಿಸಿದ್ದೇನೆ. ಯಾರಿಂದಾಗಿ ನಾನು ಈ ನಿರಂತರ ದುಃಖವನ್ನು ಅನುಭವಿಸುತ್ತಿರುವೆನೋ, ಯಾರಿಂದಾಗಿ ಶಾಶ್ವತವಾಗಿ ಪತಿಲೋಕವನ್ನು ಕಳೆದುಕೊಂಡಿದ್ದೇನೋ, ಯಾರಿಂದಾಗಿ ನಾನು ಹೆಣ್ಣು ಅಲ್ಲದ ಪುರುಷನೂ ಅಲ್ಲದ ಜೀವನವನ್ನು ನಡೆಸುತ್ತಿದ್ದೇನೋ ಆ ಗಾಂಗೇಯನನ್ನು ಯುದ್ಧದಲ್ಲಿ ಸಂಹರಿಸಿ



ನಾನು ಹಿಂದೆ ಸರಿಯುತ್ತೇನೆ. ಇದು ನನ್ನ ಹೃದಯದ ಸಂಕಲ್ಪ. ಇದರ ಹೊರತಾದ ಉದ್ದೇಶವಿಲ್ಲ. ಸ್ತ್ರೀಯಾಗಿದ್ದುಕೊಂಡು ನನಗೆ ಮಾಡಬೇಕಾದುದು ಏನೂ ಇಲ್ಲ. ಪುರುಷನಾಗಲು ನಿಶ್ಚಯಿಸಿದ್ದೇನೆ. ಇದರಿಂದ ಭೀಷ್ಮನಿಗೆ ಪ್ರತೀಕಾರ ಮಾಡಬಲ್ಲೆ. ನನ್ನನ್ನು ಪುನಃ ತಡೆಯಬೇಡಿ."

ಆಗ ಆ ಮಹರ್ಷಿಗಳ ಮಧ್ಯದಲ್ಲಿಯೇ ತನ್ನದೇ ರೂಪದಲ್ಲಿ ಶೂಲಪಾಣಿ ದೇವ ಉಮಾಪತಿಯು ಆ ಭಾಮಿನಿಗೆ ಕಾಣಿಸಿಕೊಂಡನು. ವರವೇನನ್ನು ಕೊಡಲೆಂದು ಕೇಳಲು ಅವಳು ನನ್ನ ಪರಾಜಯವನ್ನು ಕೇಳಿಕೊಂಡಳು. "ವಧಿಸುತ್ತೀಯೆ!" ಎಂದು ದೇವನು ಆ ಮನಸ್ವಿನಿಗೆ ಉತ್ತರಿಸಿದನು. ಆಗ ಪುನಃ ಆ ಕನ್ಯೆಯು ರುದ್ರನನ್ನು ಕೇಳಿದಳು:

> "ದೇವ! ಸ್ತ್ರೀಯಾಗಿರುವ ನಾನು ಯುದ್ಧದಲ್ಲಿ ಜಯವನ್ನು ಪಡೆಯಲು ಹೇಗೆ ಸಾಧ್ಯ? ಸ್ತ್ರೀಭಾವದಿಂದ ನನ್ನ ಮನಸ್ಸು ಗಾಢವಾದ ಶಾಂತಿಯನ್ನು ಪಡೆದಿದೆ. ನೀನು ಭೀಷ್ಮಪರಾಜಯವನ್ನು ಕೇಳಿಸಿದ್ದೀಯೆ. ಅದು ಹೇಗೆ ಸತ್ಯವಾಗಿಸಬಹುದೋ, ಹೇಗೆ ನಾನು ಭೀಷ್ಮ ಶಾಂತನವನನ್ನು ಯುದ್ಧದಲ್ಲಿ ಎದುರಿಸಿ ಕೊಲ್ಲಬಲ್ಲೆನೋ, ಹಾಗೆ ಮಾಡು."

ಮಹಾದೇವ ವೃಷಧ್ವಜನು ಆ ಕನ್ಯೆಗೆ ಹೇಳಿದನು:

> "ಭದ್ರೇ! ನನ್ನ ಮಾತು ಸುಳ್ಳಾಗುವುದಿಲ್ಲ. ಹೇಳಿದುದು ಸತ್ಯವಾಗುತ್ತದೆ. ರಣದಲ್ಲಿ ಭೀಷ್ಮನನ್ನು ವಧಿಸುತ್ತೀಯೆ. ಮತ್ತು ಪುರುಷತ್ವವನ್ನೂ ಪಡೆಯುತ್ತೀಯೆ. ಅನ್ಯ ದೇಹಕ್ಕೆ ಹೋದಾಗಲೂ ಕೂಡ ಇವೆಲ್ಲವನ್ನೂ ನೆನಪಿಸಿಕೊಳ್ಳುತ್ತೀಯೆ. ಮಹಾರಥಿ ದ್ರುಪದನ ಕುಲದಲ್ಲಿ ಹುಟ್ಟಿ ಸುಸಮ್ಮತನಾದ ಶೀಘ್ರಾಸ್ತ್ರನೂ ಚಿತ್ರಯೋಧಿಯೂ ಆಗುತ್ತೀಯೆ. ಏನು ಹೇಳಿದೆನೋ ಅವೆಲ್ಲವೂ ನಡೆಯುತ್ತವೆ. ಕಾಲಬಂದಾಗ

ನಂತರ ಹೇಗೋ ನೀನು ಪುರುಷನಾಗುತ್ತೀಯೆ.”

ಹೀಗೆ ಹೇಳಿ ಆ ವಿಪ್ರರು ನೋಡುತ್ತಿದ್ದಂತೆಯೇ ಮಹಾತೇಜಸ್ವಿ ಕಪರ್ದೀ ವೃಷಭಧ್ವಜನು ಅಲ್ಲಿಯೇ ಅಂತರ್ಧಾನನಾದನು. ಆಗ ಆ ಅನಿಂದಿತೆ ವರವರ್ಣಿನಿಯು ಆ ಮಹರ್ಷಿಗಳು ನೋಡುತ್ತಿದ್ದಂತೆಯೇ ವನದಲ್ಲಿದ್ದ ಕಟ್ಟಿಗೆಗಳನ್ನು ಒಟ್ಟುಹಾಕಿದಳು. ಹಿರಿಯ ಕಾಶಿಸುತೆಯು ಯಮುನಾನದಿಯ ತೀರದಲ್ಲಿ ಅತಿದೊಡ್ಡ ಚಿತೆಯನ್ನು ಮಾಡಿ, ಹುತಾಶನನನ್ನು ಹಚ್ಚಿ, ಉರಿಯುತ್ತಿರುವ ಅಗ್ನಿಯಲ್ಲಿ ರೋಷದಿಂದ ಉರಿಯುವ ಚೇತನದಿಂದ “ಭೀಷ್ಮವಧಾಯ” ಎಂದು ಹೇಳಿ ಹುತಾಶನನನ್ನು ಪ್ರವೇಶಿಸಿದಳು.

## ಅಂಬೆಯು ದ್ರುಪದನಲ್ಲಿ ಮಗಳಾಗಿ ಹುಟ್ಟಿದುದು; ಶಿಖಂಡಿಯೆಂಬ ಮಗನಾಗಿ ಪಾಲನೆಗೊಂಡಿದುದು

ಮಹೀಪತಿ ದ್ರುಪದನ ಪ್ರಿಯ ಮಹಿಷಿಯು ಅಪುತ್ರವತಿಯಾಗಿದ್ದಳು. ಇದೇ ಸಮಯದಲ್ಲಿ ಮಹೀಪತಿ ದ್ರುಪದನು ಮಕ್ಕಳಿಗೋಸ್ಕರ ಶಂಕರನನ್ನು ತೃಪ್ತಿಪಡಿಸಿದನು. ಭೀಷ್ಮನ ವಧೆಗೋಸ್ಕರ ನಿಶ್ಚಯಿಸಿ ಘೋರ ತಪಸ್ಸಿನಲ್ಲಿ ನಿರತನಾದನು. ತನಗೆ ಪುತ್ರನಾಗಲಿ ಎಂದು ಕೇಳಿಕೊಂಡು ಅವನು ಮಹಾದೇವನಿಂದ ಕನ್ಯೆಯನ್ನು ಪಡೆದನು.

“ಭಗವನ್! ಭೀಷ್ಮನಿಗೆ ಪ್ರತೀಕಾರವನ್ನುಂಟುಮಾಡುವ
ಮಗನನ್ನು ಇಚ್ಛಿಸುತ್ತೇನೆ.”

ಎಂದು ಕೇಳಿಕೊಳ್ಳಲು ದೇವದೇವನು

"ನಿನಗೆ ಹೆಣ್ಣು ಮತ್ತು ಗಂಡಾಗುವುದು ಆಗುತ್ತದೆ. ಮಹೀಪಾಲ! ಹಿಂದಿರುಗು! ಇದಕ್ಕಿಂತ ಬೇರೆಯಾದುದು ಆಗುವುದಿಲ್ಲ."

ಅವನು ನಗರಕ್ಕೆ ಹೋಗಿ ಇದನ್ನು ಪತ್ನಿಗೆ ಹೇಳಿದನು:

"ದೇವೀ! ಪುತ್ರನಿಗಾಗಿ ಮಹಾ ತಪಸ್ಸನ್ನಾಚರಿಸಿ ಪ್ರಯತ್ನಿಸಿದೆ. ಕನ್ಯೆಯಾಗಿ ಮುಂದೆ ಪುರುಷನಾಗುತ್ತಾನೆಂದು ಶಂಭುವು ಹೇಳಿದ್ದಾನೆ. ಪುನಃ ಪುನಃ ಬೇಡಿಕೊಳ್ಳಲು ದೇವ ಶಿವನು ಆಗಲಿರುವುದಕ್ಕಿಂತ ಬೇರೆಯಾಗಿ ಆಗುವುದಿಲ್ಲ ಎಂದನು."

ಆಗ ಆ ಮನಸ್ವಿನೀ, ದ್ರುಪದರಾಜನ ಪತ್ನಿಯು ಋತುಕಾಲದಲ್ಲಿ ನಿಯತಳಾಗಿರಲು ದ್ರುಪದನು ಅವಳನ್ನು ಸೇರಿದನು. ಯಥಾಕಾಲದಲ್ಲಿ ವಿಧಿಯು ಕಂಡ ಕಾರಣದಿಂದ ಪಾರ್ಷತನು ಅವಳಿಗೆ ಗರ್ಭವನ್ನು ನೀಡಿದನು. ದ್ರುಪದನ ಪ್ರಿಯ ಭಾರ್ಯೆ ಆ ದೇವಿ ರಾಜೀವಲೋಚನೆಯು ಆ ಗರ್ಭವನ್ನು ಹೊತ್ತಳು. ಪುತ್ರಸ್ನೇಹದಿಂದ ಆ ಮಹಾಬಾಹುವು ಅವಳ ಸುಖಕ್ಕಾಗಿ ಉಪಚಾರ ಮಾಡಿದನು. ಅಪುತ್ರನಾಗಿದ್ದ ರಾಜ ದೃಪದ ಮಹೀಪತಿಗೆ ಅವಳು ಸುಂದರ ಕನ್ಯೆಗೆ ಜನ್ಮವಿತ್ತಳು. ಆದರೆ ದ್ರುಪದನ ಯಶಸ್ವಿನೀ ಪತ್ನಿಯು ಅಪುತ್ರನಾಗಿದ್ದ ಆ ರಾಜನಿಗೆ "ನನಗೆ ಪುತ್ರನು ಹುಟ್ಟಿದ್ದಾನೆ" ಎಂದು ಹೇಳಿದಳು. ಆಗ ರಾಜ ದ್ರುಪದನು ಆ ಮುಚ್ಚಿಟ್ಟ ಮಗಳಿಗೆ ಪುತ್ರನಂತೆ ಎಲ್ಲ ಪುತ್ರಕರ್ಮಗಳನ್ನೂ ನೆರವೇರಿಸಿದನು. ಇವನು ಮಗನೆಂದು ಹೇಳುತ್ತಾ

ದ್ರುಪದನ ಮಹಿಷಿಯು ಸರ್ವಯತ್ನದಿಂದ ಆ ಸುಳ್ಳನ್ನು ರಕ್ಷಿಸಿದಳು. ಪಾರ್ಷತಳನ್ನು ಬಿಟ್ಟು ಬೇರೆ ಯಾರಿಗೂ ಇಡೀ ನಗರದಲ್ಲಿ ಅದು ಗೊತ್ತಿರಲಿಲ್ಲ. ಅವಳ ಮಾತಿನಲ್ಲಿ ಶ್ರದ್ಧೆಯನ್ನಿಟ್ಟ ಆ ದೇವ ಅದ್ಭುತತೇಜಸನು ಆ ಕನ್ಯೆಯನ್ನು ಗಂಡೆಂದೇ ಹೇಳಿಕೊಂಡು ಬಂದನು. ಪಾರ್ಥಿವನು ಗಂಡು ಮಗುವಿಗೆ ಮಾಡಬೇಕಾದ ಜಾತಕರ್ಮಗಳೆಲ್ಲವನ್ನೂ ಅವಳಿಗೆ ಮಾಡಿಸಿ ಶಿಖಂಡೀ ಎಂಬ ಹೆಸರನ್ನಿತ್ತನು. ಭೀಷ್ಮನೊಬ್ಬನೇ ಚಾರರ ಮತ್ತು ನಾರದನ ಮಾತುಗಳಿಂದ, ದೇವವಾಕ್ಯದಿಂದ ಮತ್ತು ಅಂಬೆಯ ತಪಸ್ಸಿನಿಂದ ಸತ್ಯವನ್ನು ತಿಳಿದಿದ್ದನು.

## ಹಿರಣ್ಯವರ್ಮನ ಕನ್ಯೆಯೊಡನೆ ಕನ್ಯೆ ಶಿಖಂಡಿಯ ವಿವಾಹ

ದ್ರುಪದನು ತನ್ನ ಸ್ವಜನರಲ್ಲಿ ಸರ್ವ ಬಹಳ ಯತ್ನಗಳನ್ನೂ ಮಾಡಿದನು. ಅವನು ಚಿತ್ರಕಲೆಯಲ್ಲಿ ಮತ್ತು ಶಿಲ್ಪಕಲೆಯಲ್ಲಿ ಪಾರಂಗತನಾದನು. ಅವನು ಅಸ್ತ್ರಗಳನ್ನು ಕಲಿಯಲು ದ್ರೋಣನ ಶಿಷ್ಯನೂ ಆದನು. ಅವನ ತಾಯಿ ವರವರ್ಣಿನಿಯು ರಾಜನಲ್ಲಿ ತನ್ನ ಪುತ್ರನಂತಿದ್ದ ಕನ್ಯೆಗೆ ಪತ್ನಿಯನ್ನು ಹುಡುಕಲು ಒತ್ತಾಯಿಸಿದಳು. ತನ್ನ ಕನ್ಯೆಯು ಯೌವನವನ್ನು ಪಡೆದುದನ್ನು ನೋಡಿ ಪಾರ್ಷತನು ಆಗ ಅವಳನ್ನು ಸ್ತ್ರೀಯೆಂದು ತಿಳಿದು ಚಿಂತಿಸಿ ತನ್ನ ಪತ್ನಿಯೊಡನೆ ಹೇಳಿದನು:

> "ನನ್ನ ಮಗಳು ಯೌವನವನ್ನು ಪಡೆದು ನನ್ನ ಶೋಕವನ್ನು ಹೆಚ್ಚಿಸಿದ್ದಾಳೆ. ಶೂಲಪಾಣಿಯ ವಚನದಂತೆ ನಾನು ಇವಳನ್ನು

> ಅಡಗಿಸಿಟ್ಟೆ. ಮಹಾರಾಜ್ಞಿ! ಅದು ಎಂದೂ ಸುಳ್ಳಾಗುವುದಿಲ್ಲ! ಹೇಗೆ ತಾನೇ ತ್ರೈಲೋಕ್ಯಕರ್ತನು ಸುಳ್ಳು ಹೇಳಿಯಾನು?"

ಭಾರ್ಯೆಯು ಹೇಳಿದಳು:

> "ರಾಜನ್! ಇಷ್ಟವಾದರೆ ನಾನು ಹೇಳುವುದನ್ನು ಕೇಳು. ನನ್ನ ಮಾತನ್ನು ಕೇಳಿ ನಿನ್ನ ಕಾರ್ಯವನ್ನು ಮಾಡಬೇಕು. ಇವನಿಗೆ ವಿಧಿವತ್ತಾಗಿ ಪತ್ನಿಯನ್ನು ಪಡೆಯುವ ಕಾರ್ಯವನ್ನು ಮಾಡೋಣ. ಅವನ ಮಾತು ಸತ್ಯವಾಗುತ್ತದೆ ಎಂದು ನನ್ನ ಬುದ್ಧಿಯು ನಿಶ್ಚಯಿಸಿದೆ."

ಹೀಗೆ ಆ ಕಾರ್ಯದ ಕುರಿತು ನಿಶ್ಚಯ ಮಾಡಿದ ದಂಪತಿಗಳು ದಶಾರ್ಣಾಧಿಪದಿಯ ಮಗಳು ಕನ್ಯೆಯನ್ನಾಗಿ ಆರಿಸಿದರು. ಆಗ ರಾಜಾ ದ್ರುಪದನು ಎಲ್ಲ ರಾಜಕುಲಗಳನ್ನು ವಿಚಾರಿಸಿ ದಾಶಾರ್ಣಕ ನೃಪನ ತನುಜೆಯನ್ನು ಶಿಖಂಡಿಯ ಪತ್ನಿಯನ್ನಾಗಿ ವರಿಸಿದನು. ದಾಶಾರ್ಣಕ ನೃಪನು ಹಿರಣ್ಯವರ್ಮನೆಂದು ಖ್ಯಾತನಾಗಿದ್ದನು. ಆ ಮಹೀಪಾಲನು ತನ್ನ ಕನ್ಯೆಯನ್ನು ಶಿಖಂಡಿಗೆ ಕೊಟ್ಟನು. ಆ ರಾಜನು ದಶಾರ್ಣರಿಗೆ ಮಹಾ ಮಹೀಪತಿಯಾಗಿದ್ದನು. ಹಿರಣ್ಯವರ್ಮನು ದುರ್ಧರ್ಷನೂ, ಮಹಾಸೇನನೂ, ಮಹಾಮನಸ್ವಿಯೂ ಆಗಿದ್ದನು. ವಿವಾಹವು ಮುಗಿದನಂತರ ಆ ಕನ್ಯೆಯು ಕನ್ಯೆ ಶಿಖಂಡಿನಿಯಂತೆ ಯೌವನವನ್ನು ಪಡೆದಳು. ಪತ್ನಿಯನ್ನು ಮಾಡಿಕೊಂಡು ಶಿಖಂಡಿಯು ಕಾಂಪಿಲ್ಯ ನಗರಕ್ಕೆ ಹಿಂದಿರುಗಿದನು. ಆದರೆ ಕೆಲ ಸಮಯ ಆ ಕನ್ಯೆಯು ಅವನು

ಸ್ತ್ರೀಯೆಂದು ತಿಳಿಯಲೇ ಇಲ್ಲ.

ಶಿಖಂಡಿನಿಯ ಕುರಿತು ಗೊತ್ತಾದ ನಂತರ ಹಿರಣ್ಯವರ್ಮನ ಕನ್ಯೆಯು ನಾಚಿಕೊಳ್ಳುತ್ತಾ ಶಿಖಂಡಿನಿಯು ಪಂಚಾಲರಾಜನ ಮಗಳೆಂದು ತನ್ನ ದಾಸಿಯರಿಗೂ ಸಖಿಗಳಿಗೂ ಹೇಳಿದಳು. ಆಗ ದಾಶಾರ್ಣಿಕ ದಾಸಿಯರು ಪರಮ ದುಃಖಿತರಾಗಿ ಆರ್ತರಾಗಿ ವಿಷಯವನ್ನು ಅಲ್ಲಿಗೆ ಹೇಳಿಕಳುಹಿಸಿದರು. ಕಳುಹಿಸಿದವರು ಎಲ್ಲವನ್ನು – ಮೋಸವು ಹೇಗೆ ನಡೆಯಿತೋ ಹಾಗೆ - ನಿವೇದಿಸಿದರು. ಆಗ ಪಾರ್ಥಿವನು ಕುಪಿತನಾದನು. ಆದರೆ ಶಿಖಂಡಿಯು ಪುರುಷನಂತೆಯೇ ರಾಜಕುಲದಲ್ಲಿ ಸ್ತ್ರೀತ್ವವನ್ನು ಉಲ್ಲಂಘಿಸಿ ಸಂತೋಷದಿಂದ ಓಡಾಡಿಕೊಂಡಿದ್ದನು. ಇದನ್ನು ಕೇಳಿದ ರಾಜೇಂದ್ರ ಹಿರಣ್ಯವರ್ಮನು ರೋಷದಿಂದ ಆರ್ತನಾದನು. ತೀವ್ರಕೋಪಸಮನ್ವಿತನಾದ ರಾಜಾ ದಾಶಾರ್ಣಕನು ದ್ರುಪದನ ನಿವೇಶನಕ್ಕೆ ದೂತನನ್ನು ಕಳುಹಿಸಿಕೊಟ್ಟನು. ಹಿರಣ್ಯವರ್ಮನ ದೂತನು ದ್ರುಪದನ ಬಳಿ ಬಂದು, ಒಬ್ಬನನ್ನೇ ಏಕಾಂತದಲ್ಲಿ ಕರೆದು ರಹಸ್ಯದಲ್ಲಿ ಈ ಮಾತನ್ನಾಡಿದನು:

> “ರಾಜನ್! ನಿನ್ನಿಂದ ಮೋಸಗೊಂಡು, ಅಪಮಾನಿತನಾಗಿ ದಾಶಾರ್ಣರಾಜನು ನಿನಗೆ ಈ ಮಾತನ್ನು ಹೇಳಿಕಳುಹಿಸಿದ್ದಾನೆ. “ನೃಪತೇ! ನನ್ನನ್ನು ನೀನು ಅಪಮಾನಗೊಳಿಸಿದ್ದೀಯೆ. ನೀನು ಕೆಟ್ಟ ಸಲಹೆಗಳನ್ನು ಕೊಟ್ಟಿದ್ದೀಯೆ. ನನ್ನ ಕನ್ಯೆಯನ್ನು ನಿನ್ನ ಕನ್ಯೆಗೋಸ್ಕರ

ಮೋಸಗೊಳಿಸಿ ತೆಗೆದುಕೊಂಡಿದ್ದೀಯೆ. ಇಂದು ಆ ಮೋಸದ ಫಲವನ್ನು ನೀನು ಪಡೆಯುತ್ತೀಯೆ! ನಿನ್ನನ್ನು ನಿನ್ನ ಜನರು ಅಮಾತ್ಯರೊಂದಿಗೆ ಮುಗಿಸಿಬಿಡುತ್ತೇನೆ. ಸ್ಥಿರನಾಗು!""

## ದ್ರುಪದನ ಸಂದಿಗ್ಧತೆ

ದೂತನು ಹೀಗೆ ಹೇಳಲು ದ್ರುಪದನು ಕಳ್ಳತನ ಮಾಡುವಾಗಲೇ ಸಿಕ್ಕಿಬಿದ್ದವನಂತೆ ಏನನ್ನೂ ಮಾತನಾಡಲಿಲ್ಲ. ಅದು ಹಾಗಲ್ಲವೆಂದು ಸೂಚನೆಯನ್ನು ನೀಡಲು ತನ್ನ ಸಂಬಂಧಿಗಳ ಅನುಸಾಂತ್ವನದ ಮೂಲಕ, ಮಧುರ ಸಂಭಾಷಣೆ ಮಾಡಬಲ್ಲ ದೂತರ ಮೂಲಕ ತೀವ್ರ ಪ್ರಯತ್ನ ಮಾಡಿದನು. ಆ ರಾಜನು ಇನ್ನೊಮ್ಮೆ ಆ ಪಾಂಚಾಲಸುತೆಯು ಕನ್ಯೆಯೆಂದು ಪರೀಕ್ಷಿಸಿ ಸತ್ಯವನ್ನು ತಿಳಿದುಕೊಂಡು ತ್ವರೆಮಾಡಿ ಹೊರಟನು. ಅವನು ತನ್ನ ಧಾತ್ರಿಗಳ ಮಾತಿನಂತೆ ಮಗಳಿಗೆ ಮೋಸವಾಗಿದೆ ಎಂದು ತನ್ನ ಎಲ್ಲ ಅಮಿತೌಜಸ ಮಿತ್ರರಿಗೆ ಹೇಳಿ ಕಳುಹಿಸಿದನು. ಆ ರಾಜಸತ್ತಮನು ಸೇನೆಗಳನ್ನು ಒಟ್ಟುಗೂಡಿಸಿ ದ್ರುಪದನ ಮೇಲೆ ಧಾಳಿಯಿಡಲು ನಿಶ್ಚಯಿಸಿದನು. ಆಗ ಮಹೀಪತಿ ಹಿರಣ್ಯವರ್ಮನು ಪಾಂಚಾಲ್ಯ ರಾಜನ ಕುರಿತು ತನ್ನ ಮಿತ್ರರೊಡನೆ ಸಮಾಲೋಚನೆ ಮಾಡಿದನು. ಆ ಮಹಾತ್ಮ ರಾಜರು ನಿಶ್ಚಯಿಸಿದರು:

"ಒಂದುವೇಳೆ ರಾಜನ ಶಿಖಂಡಿನಿಯು ಕನ್ಯೆಯೇ ಆಗಿದ್ದರೆ ನಾವು ಪಾಂಚಾಲರಾಜನನ್ನು ಮನೆಯಿಂದ ಬಂಧಿಸಿ ಕರೆದುಕೊಂಡು ಬರೋಣ. ಇನ್ನೊಬ್ಬನನ್ನು ಪಾಂಚಾಲ

ನರೇಶ್ವರನನ್ನಾಗಿ ಮಾಡಿ ನೃಪತಿ ದ್ರುಪದನನ್ನು
ಶಿಖಂಡಿಯೊಡನೆ ಸಂಹರಿಸೋಣ!”

ಆಗ ಆ ಕ್ಷತ್ತ್ರಾರರ ಈಶ್ವರನು ದೂತನನ್ನು ಪುನಃ ಪಾರ್ಷತನಿಗೆ “ನಿನ್ನನ್ನು ಕೊಲ್ಲುತ್ತೇವೆ. ನಿಲ್ಲು!” ಎಂದು ಹೇಳಿ ಕಳುಹಿಸಿದನು. ಸ್ವಭಾವದಲ್ಲಿ ನಾಚಿಕೆಯುಳ್ಳವನಾದ, ತಪಿತಸ್ಥನಾದ ನರಾಧಿಪ ಪೃಥಿವೀಪತಿ ದ್ರುಪದನು ತೀವ್ರ ಭಯಪಟ್ಟನು. ಶೋಕಕರ್ಶಿತ ನರಾಧಿಪ ದ್ರುಪದನು ದಾಶಾರ್ಣನಿಗೆ ದೂತನನ್ನು ಕಳುಹಿಸಿ, ಏಕಾಂತದಲ್ಲಿ ಪತ್ನಿಯೊಡನೆ ಮಾತನಾಡಿದನು. ಮಹಾ ಭಯದಿಂದ ಆವಿಷ್ಟನಾದ, ಶೋಕದಿಂದ ಹೃದಯವನ್ನು ಕಳೆದುಕೊಂಡ ಪಾಂಚಾಲರಾಜನು ಶಿಖಂಡಿಯ ತಾಯಿ ಪ್ರಿಯೆಗೆ ಹೇಳಿದನು:

“ನನ್ನ ಸಂಬಂಧೀ ಸುಮಹಾಬಲ ನೃಪತಿ ಹಿರಣ್ಯವರ್ಮನು ಕೋಪದಿಂದ ದೊಡ್ಡ ಸೇನೆಯೊಂದಿಗೆ ನನ್ನನ್ನು ಆಕ್ರಮಣಿಸಲಿದ್ದಾನೆ. ಮೂಢನಾದ ನಾನು ಈ ಕನ್ಯೆಯ ಕುರಿತು ಈಗ ಏನು ಮಾಡಲಿ? ನಿನ್ನ ಪುತ್ರ ಶಿಖಂಡಿಯು ಕನ್ಯೆಯೆಂದು ಶಂಕಿಸುತ್ತಿದ್ದಾರೆ. ಇದರಲ್ಲಿ  ಸತ್ಯವೇನೆಂದು ನಿಶ್ಚಯಿಸಿ ಮಿತ್ರರು, ಅನುಯಾಯಿಗಳ ಸೇನೆಗಳೊಂದಿಗೆ ನಾನು ಅವನನ್ನು ವಂಚಿಸಿದ್ದೇನೆ ಎಂದು ತೀರ್ಮಾನಿಸಿ ನನ್ನನ್ನು ಕಿತ್ತೊಗೆಯಲು ಬಯಸಿದ್ದಾನೆ. ಇದರಲ್ಲಿ ಯಾವುದು ಸತ್ಯ ಯಾವುದು ಸುಳ್ಳು ಎನ್ನುವುದನ್ನು ಹೇಳು. ನಿನ್ನಿಂದ ಸತ್ಯವಾಕ್ಯವನ್ನು ಕೇಳಿ ಏನು

ಮಾಡಬೇಕೋ ಅದನ್ನು ಮಾಡುತ್ತೇನೆ.

ಸಂಶಯಕ್ಕೊಳಗಾಗಿರುವ ನನಗೆ, ಬಾಲಕಿ ಶಿಖಂಡಿನಿಗೆ ಮತ್ತು ನಿನಗೂ ಮಹಾ ಕಷ್ಟವು ಬಂದೊದಗಿದೆ. ನಾನು ಕೇಳುತ್ತಿದ್ದೇನೆ. ನಮ್ಮೆಲ್ಲರನ್ನೂ ಬಿಡುಗಡೆಗೊಳಿಸಲು ಸತ್ಯವನ್ನು ಹೇಳು. ಸತ್ಯವನ್ನು ತಿಳಿದುಕೊಂಡು ಇದರ ಕುರಿತು ಏನು ಮಾಡಬೇಕೋ ಅದನ್ನು ಮಾಡುತ್ತೇನೆ. ಶಿಖಂಡಿನಿಗೆ ನೀನು ಹೆದರಬೇಡ! ಈ ವಿಷಯದಲ್ಲಿ ಸತ್ಯವನ್ನು ತಿಳಿದುಕೊಂಡೇ ಮುಂದುವರೆಯುತ್ತೇನೆ. ಪುತ್ರಧರ್ಮತನಾದ ನಾನೇ ವಂಚಿತನಾಗಿದ್ದೇನೆ. ಅಂಥಹ ನನ್ನಿಂದ ಮಹೀಪತಿ ರಾಜಾ ದಾಶಾರ್ಣಕನು ವಂಚಿತನಾಗಿದ್ದಾನೆ. ಆದುದರಿಂದ ಇದರಲ್ಲಿ ನಿನಗೆ ತಿಳಿದಿರುವುದನ್ನು ಸತ್ಯವಾಗಿ ಹೇಳು!"

ತನಗೆ ಗೊತ್ತಿದ್ದರೂ ಶತ್ರುವನ್ನು ತನಗಿದು ಗೊತ್ತಿರಲಿಲ್ಲವೆಂದು ತೋರಿಸಿಕೊಡಲು ನರೇಂದ್ರನು ಹೀಗೆ ಒತ್ತಾಯಿಸಿ ಕೇಳಲು ಆ ದೇವಿಯು ಮಹೀಪತಿಗೆ ಉತ್ತರಿಸಿದಳು. ಆಗ ಶಿಖಂಡಿನಿಯ ಮಾತೆಯು ಕನ್ಯೆ ಶಿಖಂಡಿನಿಯ ಕುರಿತು ಇದ್ದಹಾಗೆ ನರಾಧಿಪ ಪತಿಗೆ ಹೇಳಿದಳು:

"ರಾಜನ್! ಪುತ್ರನಿಲ್ಲದಿರುವ ನಾನು ಸವತಿಯರ ಭಯದಿಂದ ಕನ್ಯೆ ಶಿಖಂಡಿಯು ಗಂಡೆಂದು ಅವಳು ಹುಟ್ಟಿದಾಗಿನಿಂದ ಹೇಳಿಕೊಂಡು ಬಂದಿದ್ದೇನೆ. ನೀನು ನನ್ನ ಮೇಲಿನ ಪ್ರೀತಿಯಿಂದ ಈ ಕನ್ಯೆಗೆ ಪುತ್ರನಿಗಾಗಬೇಕಾದ ಕರ್ಮಗಳನ್ನು

ಮಾಡಿದೆ. ದಶಾರ್ಣಾಧಿಪತಿಯ ಮಗಳನ್ನು ಅವನಿಗೆ ಪತ್ನಿಯನ್ನಾಗಿ ಮಾಡಿದೆ. ಇವಳು ಕನ್ಯೆಯಾಗಿ ನಂತರ ಗಂಡಾಗುತ್ತಾಳೆಂದು ಹಿಂದೆ ದೇವವಾಕ್ಯವು ತೋರಿಸಿಕೊಟ್ಟಿದುದರಿಂದ ಇದನ್ನು ನೀನು ಉಪೇಕ್ಷಿಸಿದೆ."

ಇದನ್ನು ಕೇಳಿ ಯಜ್ಞಸೇನ ದ್ರುಪದನು ಎಲ್ಲ ಸತ್ಯವನ್ನೂ ತನ್ನ ಮಂತ್ರಿಗಳಿಗೆ ನಿವೇದಿಸಿದನು. ಆಗ ರಾಜನು ಮಂತ್ರಿಗಳೊಂದಿಗೆ ಪ್ರಜೆಗಳ ರಕ್ಷಣೆಗೆ ಏನು ಮಾಡಬೇಕೆಂದು ಮಂತ್ರಾಲೋಚನೆ ಮಾಡಿದನು. ದಾಶಾರ್ಣಕನೊಂದಿಗೆ ಇನ್ನೂ ಸಂಬಂಧವಿದೆ ಎಂದು ತಿಳಿದು ತಾನೇ ಮೋಸವನ್ನು ಮಾಡಿದ್ದೇನೆಂದು ಸ್ವೀಕರಿಸಿ ಮಂತ್ರಿಗಳೊಂದಿಗೆ ಒಂದು ನಿಶ್ಚಯಕ್ಕೆ ಬಂದನು. ಸ್ವಭಾವತಃ ಸುರಕ್ಷಿತವಾಗಿದ್ದ ನಗರವನ್ನು ಆಪತ್ಕಾಲದಲ್ಲಿ ಇನ್ನೂ ಹೆಚ್ಚಿನ ರಕ್ಷಣೆಯನ್ನು ಎಲ್ಲಕಡೆಯಲ್ಲಿ ಎಲ್ಲವನ್ನೂ ಮಾಡಿ ನೀಡಿದನು. ದಶಾರ್ಣಪತಿಯೊಡನೆ ವಿರೋಧವನ್ನು ತಂದುಕೊಂಡು ರಾಜನು ಪತ್ನಿಯೊಂದಿಗೆ ಪರಮ ಆರ್ತನಾದನು.

"ಸಂಬಂಧಿಯೊಂದಿಗೆ ನಾನು ಹೇಗೆ ಈ ಮಹಾ ಯುದ್ಧವನ್ನು ಮಾಡಬಲ್ಲೆ?"

ಎಂದು ಚಿಂತಿಸಿ ಮನಸ್ಸಿನಲ್ಲಿಯೇ ದೈವವನ್ನು ಅರ್ಚಿಸಿದನು. ಅವನು ದೇವಪರನಾಗಿದ್ದು ಅರ್ಚನೆಗಳನ್ನು ಮಾಡುತ್ತಿರುವುದನ್ನು ನೋಡಿ ದೇವಿ ಭಾರ್ಯೆಯು ಅವನಿಗೆ ಹೇಳಿದಳು:

“ದೇವತೆಗಳಿಗೆ ಶರಣುಹೋಗುವುದನ್ನು ಸದಾ ಸತ್ಯವೆಂದು ಸಾಧುಗಳು ಅಭಿಪ್ರಾಯ ಪಡುತ್ತಾರೆ. ಅದರಲ್ಲೂ ನಾವು ದುಃಖದ ಸಾಗರವನ್ನು ಸೇರಿ ತುಂಬಾ ಅರ್ಚಿಸುತ್ತಿದ್ದೇವೆ. ಭೂರಿದಕ್ಷಿಣೆಗಳನ್ನಿತ್ತು ಸರ್ವ ದೇವತೆಗಳ ಪೂಜೆಗಳು ನಡೆಯಲಿ. ದಾಶಾರ್ಣನನ್ನು ತಡೆಯಲು ಅಗ್ನಿಯಗಳಲ್ಲಿ ಹೋಮಗಳೂ ನಡೆಯಲಿ. ಯುದ್ಧಮಾಡದೇ ಇವನನ್ನು ಹೇಗೆ ಹಿಂದೆ ಕಳುಹಿಸಬಹುದು ಎನ್ನುವುದರ ಕುರಿತು ಚಿಂತಿಸು. ದೇವತೆಗಳ ಪ್ರಸಾದದಿಂದ ಎಲ್ಲವೂ ಆಗುತ್ತದೆ. ಮಂತ್ರಿಗಳೊಂದಿಗೆ ಸಮಾಲೋಚನೆ ಮಾಡಿ ನಿರ್ಧರಿಸಿದಂತೆ ಪುರದ ಅವಿನಾಶಕ್ಕೆ ಏನು ಬೇಕೋ ಅದನ್ನು ಮಾಡು. ದೈವವು ನಿಶ್ಚಯಿಸಿದ್ದುದು ಮನುಷ್ಯನ ಪ್ರಯತ್ನದಿಂದ ಚೆನ್ನಾಗಿ ಸಿದ್ಧಿಯಾಗುತ್ತದೆ. ಪರಸ್ಪರ ವಿರೋಧವಾಗಿದ್ದರೆ ಯಾವುದೂ ಸಿದ್ಧಿಯಾಗುವುದಿಲ್ಲ. ಆದುದರಿಂದ ಸಚಿವರೊಂದಿಗೆ ನಗರಕ್ಕೆ ಬೇಕಾದುದನ್ನು ಮಾಡು. ಇಷ್ಟವಾದಂತೆ ದೇವತೆಗಳ ಅರ್ಚನೆಯನ್ನೂ ಮಾಡು.”

ಅವರಿಬ್ಬರೂ ಶೋಕಪರಾಯಣರಾಗಿ ಹೀಗೆ ಮಾತನಾಡಿಕೊಳ್ಳುತ್ತಿರುವುದನ್ನು ನೋಡಿ ಆ ಮನಸ್ವಿನೀ ಕನ್ಯೆ ಶಿಖಂಡಿನಿಯು ನಾಚಿಕೆಗೊಂಡಳು. “ನನ್ನಿಂದಾಗಿ ಇವರಿಬ್ಬರೂ ದುಃಖಿತರಾಗಿದ್ದಾರೆ!” ಎಂದು ಅವಳು ಚಿಂತಿಸಿದಳು. ಹೀಗೆ ಯೋಚಿಸಿ ಅವಳು ಪ್ರಾಣವನ್ನು ಕಳೆದುಕೊಳ್ಳಲು ನಿಶ್ಚಯಿಸಿದಳು. ತುಂಬಾ

ಶೋಕಪರಾಯಣಳಾದ ಅವಳು ಹೀಗೆ ನಿಶ್ಚಯಿಸಿ ಭವನವನ್ನು ತೊರೆದು ಗಹನ ನಿರ್ಜನ ವನಕ್ಕೆ ತೆರಳಿದಳು. ಆ ಸ್ಥಳವನ್ನು ಯಕ್ಷ ಸ್ಥೂಣಾಕರ್ಣನು ಪಾಲಿಸುತ್ತಿದ್ದನು. ಅವನ ಭಯದಿಂದ ಜನರು ಆ ವನವನ್ನು ವಿಸರ್ಜಿಸಿದ್ದರು. ಸ್ಥೂಣನು ಅಲ್ಲಿ ಲಾಜದ ಹೊಗೆಯಿಂದ ಕೂಡಿದ, ಎತ್ತರ ಗೋಡೆಗಳು ಮತ್ತು ತೋರಣಗಳಿದ್ದ, ಸುಣ್ಣವನ್ನು ಬಳಿದ ಇಟ್ಟಿಗೆಯ ಮನೆಯನ್ನು ಹೊಂದಿದ್ದನು. ಅದನ್ನು ಪ್ರವೇಶಿಸಿ ದ್ರುಪದನ ಮಗಳು ಶಿಖಂಡಿಯು ಬಹುದಿನಗಳು ಊಟಮಾಡದೇ ಶರೀರವನ್ನು ಒಣಗಿಸಿದಳು. ಜೇನಿನ ಬಣ್ಣದ ಕಣ್ಣುಗಳ ಯಕ್ಷ ಸ್ಥೂಣನು ಅವಳಿಗೆ ಕಾಣಿಸಿಕೊಂಡು ಕೇಳಿದನು.

> “ಏನನ್ನು ಮಾಡಲು ಹೊರಟಿರುವೆ? ಬೇಗನೆ ಹೇಳು. ಅದನ್ನು ನಾನು ಮಾಡುತ್ತೇನೆ.”

ಅದು ಅಶಕ್ಯವೆಂದು ಅವಳು ಯಕ್ಷನಿಗೆ ಪುನಃ ಪುನಃ ಹೇಳಿದಳು. ಗುಹ್ಯಕನು ಅವಳಿಗೆ ಮಾಡುತ್ತೇನೆ ಎಂದು ಉತ್ತರಿಸಿದನು:

> “ನೃಪಾತ್ಮಜೇ! ಧನೇಶ್ವರನ ಅನುಚರನು ನಾನು. ವರಗಳನ್ನು ನೀಡುತ್ತೇನೆ. ಕೊಡಲಾಗದಂತಿದ್ದರೂ ಕೊಡುತ್ತೇನೆ. ಏನನ್ನು ಹುಡುಕುತ್ತಿದ್ದೀಯೋ ಅದನ್ನು ಹೇಳು.”

ಆಗ ಶಿಖಂಡಿಯು ಆ ಯಕ್ಷಪ್ರಧಾನ ಸ್ಥೂಣಾಕರ್ಣನಿಗೆ ಎಲ್ಲವನ್ನೂ ನಿವೇದಿಸಿದಳು:

“ಯಕ್ಷ! ನನ್ನ ತಂದೆಯು ತೊಂದರೆಯಲ್ಲಿದ್ದಾನೆ ಮತ್ತು ಬೇಗನೇ ವಿನಾಶ ಹೊಂದುತ್ತಾನೆ. ಸಂಕ್ರುದ್ಧನಾದ ದಶಾರ್ಣಾಧಿಪತಿಯು ಅವನ ಮೇಲೆ ಧಾಳಿಯಿಡುತ್ತಿದ್ದಾನೆ. ಆ ನೃಪ ಹೇಮಕವಚನು ಮಹಾಬಲಶಾಲಿ ಮತ್ತು ಮಹೋತ್ಸಾಹೀ. ಆದುದರಿಂದ ನನ್ನನ್ನೂ, ನನ್ನ ಮಾತಾಪಿತೃಗಳನ್ನೂ ರಕ್ಷಿಸು. ನನ್ನ ದುಃಖವನ್ನು ಕಳೆಯುತ್ತೀಯೆಂದು ನೀನು ಪ್ರತಿಜ್ಞೆಯನ್ನು ಮಾಡಿರುವೆ. ನಿನ್ನ ಪ್ರಸಾದದಿಂದ ನಾನು ಅನಿಂದಿತ ಪುರುಷನಾಗಲಿ. ಆ ರಾಜನು ನನ್ನ ಪುರಕ್ಕೆ ಬರುವುದರೊಳಗೆ ನೀನು ನನ್ನ ಮೇಲೆ ಕರುಣೆಯನ್ನು ತೋರಿಸು.”

## ಕನ್ಯೆ ಶಿಖಂಡಿನಿಗೆ ಪುರುಷತ್ವ ಪ್ರಾಪ್ತಿ

ಶಿಖಂಡಿಯ ಮಾತನ್ನು ಕೇಳಿ ದೈವದಿಂದ ಪೀಡಿತನಾದ ಯಕ್ಷನು ಮನಸ್ಸಿನಲ್ಲಿಯೇ ಚಿಂತಿಸಿ ಉತ್ತರಿಸಿದನು:

“ಭದ್ರೇ! ನಿನಗಿಷ್ಟವಾದುದನ್ನು ಮಾಡುತ್ತೇನೆ. ಆದರೆ ನನ್ನ ಒಪ್ಪಂದವನ್ನು ಕೇಳು. ಕೆಲವೇ ಕಾಲದವರೆಗೆ ನಾನು ನಿನಗೆ ನನ್ನ ಈ ಪುರುಷನ ಲಿಂಗವನ್ನು ನೀಡುತ್ತೇನೆ. ನಂತರ ನೀನು ಬರಬೇಕು. ಸತ್ಯವನ್ನು ಹೇಳುತ್ತಿದ್ದೇನೆ. ಸಂಕಲ್ಪಿಸಿದುದನ್ನು ಸಿದ್ಧಿಯಾಗಿಸುವುದರಲ್ಲಿ ನಾನು ಪ್ರಭು. ಕಾಮರೂಪಿ ವಿಹಂಗಮ. ನನ್ನ ಪ್ರಸಾದದಿಂದ ನಿನ್ನ ಬಂಧುಗಳನ್ನೂ ಪುರವನ್ನೂ ಉಳಿಸುತ್ತಿದ್ದೇನೆ. ನಿನ್ನ ಈ ಸ್ತ್ರೀಲಿಂಗವನ್ನು

ಧರಿಸುತ್ತೇನೆ. ಸತ್ಯವಾಗಿ ಭರವಸೆಯನ್ನು ನೀಡು. ನಿನಗೆ ಪ್ರಿಯವಾದುದನ್ನು ಮಾಡುತ್ತೇನೆ."

ಶಿಖಂಡಿಯು ಹೇಳಿದಳು:

"ನಿನ್ನ ಈ ಲಿಂಗವನ್ನು ಪುನಃ ನಿನಗೆ ಕೊಡುತ್ತೇನೆ. ನಿಶಾಚರ! ಕೆಲವು ಕಾಲದ ಸ್ತ್ರೀತ್ವವನ್ನು ಧರಿಸು. ಪಾರ್ಥಿವ ಹೇಮವರ್ಮಣಿ ದಾಶಾರ್ಣನು ಹಿಂದಿರುಗಿದ ನಂತರ ನಾನು ಕನ್ಯೆಯಾಗುತ್ತೇನೆ. ನೀನು ಪುರುಷನಾಗುತ್ತೀಯೆ."

ಹೀಗೆ ಹೇಳಿ ಅವರಿಬ್ಬರೂ ಅಲ್ಲಿ ಒಪ್ಪಂದವನ್ನು ಮಾಡಿಕೊಂಡರು. ಅನ್ಯೋನ್ಯರ ಲಿಂಗಗಳನ್ನು ಬದಲಾಯಿಸಿಕೊಂಡರು. ಯಕ್ಷ ಸ್ಥೂಣನು ಸ್ತ್ರೀಲಿಂಗವನ್ನು ಧರಿಸಿದನು. ಶಿಖಂಡಿಯು ಯಕ್ಷನ ದೀಪ್ತ ರೂಪವನ್ನು ಪಡೆದನು.

ಪಾಂಚಾಲ್ಯ ಶಿಖಂಡಿಯು ಪುಂಸತ್ವವನ್ನು ಪಡೆದು ಹೃಷ್ಟನಾಗಿ ನಗರವನ್ನು ಪ್ರವೇಶಿಸಿ ತಂದೆಯ ಬಳಿ ಹೋದನು. ನಡೆದುದೆಲ್ಲವನ್ನೂ ದ್ರುಪದನಿಗೆ ಹೇಳಿದನು. ಅದನ್ನು ಕೇಳಿ ದ್ರುಪದನು ಪರಮ ಹರ್ಷವನ್ನು ತಾಳಿದನು. ಪತ್ನಿಯೊಂದಿಗೆ ಮಹೇಶ್ವರನ ಮಾತನ್ನು ಸ್ಮರಿಸಿಕೊಂಡನು. ಆಗ ನೃಪನು ದಶಾರ್ಣಾಧಿಪತಿಗೆ

"ನನ್ನ ಈ ಮಗನು ಪುರುಷನೇ. ನನ್ನನ್ನು ನೀನು ನಂಬಬೇಕು!"

ಎಂದು ಹೇಳಿ ಕಳುಹಿಸಿದನು. ಅಷ್ಟರಲ್ಲಿಯೇ ದುಃಖ ಮತ್ತು ಕೋಪ

ಸಮನ್ವಿತ ದಾಶಾರ್ಣಕ ರಾಜನು ಪಾಂಚಾಲರಾಜ ದ್ರುಪದನಲ್ಲಿಗೆ ಬಂದುಬಿಟ್ಟಿದ್ದನು. ಕಾಂಪಿಲ್ಯವನ್ನು ಸೇರಿ ದಶರ್ಣಾಧಿಪತಿಯು ಬ್ರಹ್ಮವಿದರಲ್ಲಿ ಶ್ರೇಷ್ಠನೋರ್ವನನ್ನು ಸತ್ಕರಿಸಿ ದೂತನನ್ನಾಗಿ ಕಳುಹಿಸಿದನು: "ನನ್ನ ವಚನದಂತೆ ದೂತ! ನೃಪಾಧಮ ಪಾಂಚಾಲ್ಯನಿಗೆ ಹೇಳು.

> "ದುರ್ಮತೇ! ನನ್ನ ಕನ್ಯೆಯನ್ನು ನಿನ್ನ ಕನ್ಯೆಗೆ ತೆಗೆದುಕೊಂಡಿರುವೆಯಲ್ಲ ಅದರ ಫಲವನ್ನು ಇಂದು ನೀನು ಪಡೆಯುತ್ತೀಯೆ ಎನ್ನುವುದರಲ್ಲಿ ಸಂಶಯವಿಲ್ಲ.""

ಹೀಗೆ ಹೇಳಲು ದಾಶಾರ್ಣನೃಪತಿಯ ಹೇಳಿಕೆಯಂತೆ ಆ ದೂತನು ನಗರಕ್ಕೆ ಹೊರಟನು. ಆ ಪುರೋಹಿತನು ದ್ರುಪದನ ಪುರವನ್ನು ಸೇರಿದನು. ಆಗ ರಾಜಾ ಪಾಂಚಾಲಕನು ಶಿಖಂಡಿಯೊಡನೆ ಅವನನ್ನು ಗೋವು-ಅರ್ಘ್ಯಗಳನ್ನಿತ್ತು ಸತ್ಕರಿಸತೊಡಗಿದನು. ಆ ಪೂಜೆಗಳನ್ನು ಸ್ವೀಕರಿಸದೇ ಅವನು ಇದನ್ನು ಹೇಳಿದನು:

> "ವೀರ ರಾಜ ಕಾಂಚನವರ್ಮನು ನಿನಗೆ ಇದನ್ನು ಹೇಳಿ ಕಳುಹಿಸಿದ್ದಾನೆ. "ದುರ್ಮತೇ! ನಿನ್ನ ಮಗಳಿಗಾಗಿ ನೀನು ನಡೆಸಿದ ಈ ಅಧಮಾಚಾರ ವಂಚನೆಗಳ ಪಾಪಗಳನ್ನು ಮಾಡಿದ್ದುದರ ಫಲವನ್ನು ಹೊಂದುತ್ತೀಯೆ. ಇಂದು ರಣಮೂರ್ಧನಿಯಲ್ಲಿ ನನಗೆ ಯುದ್ಧವನ್ನು ನೀಡು. ಸದ್ಯ ನಿನ್ನನ್ನು ಅಮಾತ್ಯ-ಸುತ-ಬಾಂಧವರೊಂದಿಗೆ ಮುಗಿಸುತ್ತೇನೆ."

ದಶಾರ್ಣಪತಿಯ ದೂತನು ಮಂತ್ರಿಗಳ ಮಧ್ಯದಲ್ಲಿ ಹೇಳಿದ ಆ ನಿಂದನೆಯ ಮಾತುಗಳನ್ನು ಪಾರ್ಥಿವನು ಬಲಾತ್ಕಾರವಾಗಿ ಕೇಳಬೇಕಾಯಿತು. ಆಗ ದ್ರುಪದನು ಶಿರಬಾಗಿ ಹೇಳಿದನು:

> “ಬ್ರಹ್ಮನ್! ನೀನು ಹೇಳಿದ ನನ್ನ ಸಂಬಂಧಿಯ ಮಾತುಗಳಿಗೆ ಉತ್ತರವನ್ನು ನಮ್ಮ ದೂತನೇ ಪ್ರತಿಯಾಗಿ ಹೇಳುತ್ತಾನೆ.” ಆಗ ದ್ರುಪದನೂ ಕೂಡ ಮಹಾತ್ಮ ಹಿರಣ್ಯವರ್ಮಣನಲ್ಲಿಗೆ ವೇದಪಾಂಗತ ಬ್ರಾಹ್ಮಣನನ್ನು ದೂತನನ್ನಾಗಿ ಕಳುಹಿಸಿದನು. ಅವನು ರಾಜ ದಶಾರ್ಣಪತಿಯ ಬಂದು ದ್ರುಪದನು ಹೇಳಿ ಕಳುಹಿಸಿದುದನ್ನು ಹೇಳಿದನು: “ನನ್ನ ಮಗನು ನಿಜವಾಗಿಯೂ ಕುಮಾರನು. ಶೋಧನೆಯಾಗಲಿ. ಯಾರೋ ಸುಳ್ಳುಹೇಳಿದ್ದಾರೆ. ಅವರು ಹೇಳಿದುದನ್ನು ನಂಬಬಾರದು.”

ದ್ರುಪದನನ್ನು ಕೇಳಿ ಆ ರಾಜನು ವಿಮರ್ಶಿಸಿ ಸುಂದರ ರೂಪಿನ ಉತ್ತಮ ಯುವತಿಯರನ್ನು ಶಿಖಂಡಿಯು ಸ್ತ್ರೀಯೋ ಪುರುಷನೋ ಎಂದು ತಿಳಿಯಲು ಕಳುಹಿಸಿದನು. ಕಳುಹಿಸಲ್ಪಟ್ಟ ಅವರು ಸತ್ಯವೇನೆಂದು ತಿಳಿದು ಸಂತೋಷದಿಂದ ಅವೆಲ್ಲವನ್ನೂ – ಶಿಖಂಡಿಯು ಪುರುಷನೆಂದು- ಮಹಾನುಭಾವ ದಶಾರ್ಣರಾಜ ರಾಜನಿಗೆ ವರದಿಮಾಡಿದರು. ಇದನ್ನು ಕೇಳಿ ರಾಜನು ಅತ್ಯಂತ ಹರ್ಷಿತನಾದನು. ತನ್ನ ಸಂಬಂಧಿಯನ್ನು ಭೇಟಿಮಾಡಿ ಸಂತೋಷದಲ್ಲಿ ಅಲ್ಲಿ ತಂಗಿದನು. ಆ ಜನೇಶ್ವರನು ಸಂತೋಷದಿಂದ ಶಿಖಂಡಿಗೆ ಬಹು ಸಂಪತ್ತನ್ನು-

ಆನೆಗಳು, ಕುದುರೆಗಳು, ಗೋವುಗಳು ಮತ್ತು ದಾಸಿಯರನ್ನು ಬಹು ನೂರು ಸಂಖ್ಯೆಗಳಲ್ಲಿ ಕೊಟ್ಟು, ಗೌರವಿಸಲ್ಪಟ್ಟು, ತನ್ನ ಮಗಳನ್ನು ಹಿಂದಿರುಗಿಸಿ, ಮರಳಿದನು. ತನ್ನ ಮೇಲಿದ್ದ ಆರೋಪವನ್ನು ಕಳೆದುಕೊಂಡ ಶಿಖಂಡಿಯು ಪಾರ್ಥಿವ ಹೇಮವರ್ಮಣಿ ದಾಶಾರ್ಣನು ಹಿಂದಿರುಗಲು ಸಂತೋಷಗೊಂಡನು.

ಅಷ್ಟರಲ್ಲಿಯೇ ಸ್ವಲ್ಪ ಕಾಲದ ನಂತರ ಲೋಕಾನುಯಾತ್ರೆಯನ್ನು ಮಾಡುತ್ತಾ ನರವಾಹನ ಕುಬೇರನು ಸ್ಥೂಣನ ಮನೆಗೆ ಬಂದನು. ಅವನ ಮನೆಯ ಮೇಲೇ ಹಾರಾಡುತ್ತಾ ಆ ಧನಾಧಿಗೋಪ್ತನು ಅವಲೋಕಿಸಿದನು. ಈ ಸ್ವಲಂಕೃತವಾದ ವಿಚಿತ್ರ ಮಾಲೆಗಳಿಂದ ಕೂಡಿದ ಇದು ಯಕ್ಷ ಸ್ಥೂಣನ ಮನೆಯೆಂದು ಗುರುತಿಸಿದನು. ಲಾಜ, ಗಂಧ, ಚಪ್ಪರಗಳಿಂದ, ಅಭ್ಯರ್ಚಿಸಿದ ಧೂಪದ ಕಂಪಿನಿಂದ ತುಂಬಿದ, ಧ್ವಜ-ಪತಾಕೆಗಳಿಂದ ಅಲಂಕೃತವಾದ, ಭಕ್ಷಾನ್ನ, ಪಾನೀಯಗಳ ಹೊಳೆಯೇ ಹರಿದಿತ್ತು.  ಸರ್ವತವೂ ಸಮಲಂಕೃತವಾದ ಅವನ ಆ ಸ್ಥಾನವನ್ನು ನೋಡಿ ಯಕ್ಷಪತಿಯು ಅನುಸರಿಸಿ ಬಂದ ಯಕ್ಷರಿಗೆ ಹೇಳಿದನು:

> "ಅಮಿತವಿಕ್ರಮಿಗಳೇ! ಈ ಸ್ವಲಂಕೃತ ಮನೆಯು ಸ್ಥೂಣನದು. ಆದರೆ ಆ ಮಹಾಮಂದಬುದ್ಧಿಯು ಹೊರಬಂದು ನನ್ನ ಮುಂದೆ ಹೊರಳುವುದಿಲ್ಲವಲ್ಲ? ನಾನು ಇಲ್ಲಿದ್ದೇನೆಂದೂ ತಿಳಿದೂ ಆ ಸುಮಂದಾತ್ಮನು ನನ್ನ ಮುಂದೆ ಹರಿದು

ಬರುತ್ತಿಲ್ಲ. ಆದುದರಿಂದ ಅವನಿಗೆ ಮಹಾದಂಡವನ್ನು ವಿಧಿಸಬೇಕೆಂದು ನನಗನ್ನಿಸುತ್ತದೆ.”

ಯಕ್ಷರು ಹೇಳಿದರು:

“ರಾಜನ್! ರಾಜ ದ್ರುಪದನಿಗೆ ಶಿಖಂಡಿನೀ ಎಂಬ ಮಗಳು ಜನಿಸಿದ್ದಳು. ಯಾವುದೋ ಕಾರಣದಿಂದ ಇವನು ಅವಳಿಗೆ ತನ್ನ ಪುರುಷಲಕ್ಷಣವನ್ನು ಕೊಟ್ಟಿದ್ದಾನೆ. ಅವಳ ಸ್ತ್ರೀಲಕ್ಷಣವನ್ನು ಸ್ವೀಕರಿಸಿ ಸ್ತ್ರೀಯಂತೆ ಅವನು ಮನೆಯ ಒಳಗೆಯೇ ಇರುತ್ತಾನೆ. ಸ್ತ್ರೀರೂಪವನ್ನು ಧರಿಸಿರುವ ಅವನು ನಾಚಿಕೊಂಡು ನಿನ್ನ ಎದುರು ಬರುತ್ತಿಲ್ಲ. ಇದೇ ಕಾರಣದಿಂದ ಸ್ಥೂಣನು ಇಂದು ನಿನಗೆ ಕಾಣುತ್ತಿಲ್ಲ. ಇದನ್ನು ಕೇಳಿ ವಿಮಾನದಲ್ಲಿದ್ದುಕೊಂಡೇ ನ್ಯಾಯವಾದುದನ್ನು ಮಾಡು.”

“ಸ್ಥೂಣನನ್ನು ಕರೆತನ್ನಿ! ಅವನನ್ನು ಶಿಕ್ಷಿಸುತ್ತೇನೆ!” ಎಂದು ಯಕ್ಷಾಧಿಪನು ಪುನಃ ಪುನಃ ಹೇಳಿದನು. ಯಕ್ಷೇಂದ್ರನು ಕರೆಯಿಸಿಕೊಳ್ಳಲು ಅವನು ಸ್ತ್ರೀಸ್ವರೂಪದಲ್ಲಿ ಬಂದು ಬಹುನಾಚಿಕೆಯಿಂದ ನಿಂತುಕೊಂಡನು. ಸಂಕ್ರುದ್ಧನಾದ ಧನದನು ಅವನಿಗೆ ಶಪಿಸಿದನು:

“ಗುಹ್ಯಕರೇ! ಈ ಪಾಪಿಯು ಸ್ತ್ರೀಯಾಗಿಯೇ ಇರಲಿ!”

ಮಹಾತ್ಮ ಯಕ್ಷಪತಿಯು ಹೀಗೆ ಹೇಳಿದನು:

“ಪಾಪಬುದ್ಧೆ! ಶಿಖಂಡಿಯಿಂದ ಸ್ತ್ರೀಲಕ್ಷಣವನ್ನು

ತೆಗೆದುಕೊಂಡು ನೀನು ಯಕ್ಷರನ್ನು ಅಪಮಾನಿಸಿರುವೆ. ಇದೂವರೆಗೂ ಯಾರೂ ಮಾಡದಿರುವುದನ್ನು ನೀನು ಮಾಡಿದ್ದೀಯೆ. ಆದುದರಿಂದ ಇಂದಿನಿಂದ ನೀನು ಸ್ತ್ರೀಯಾಗಿಯೂ ಅವನು ಪುರುಷನಾಗಿಯೂ ಇರುತ್ತೀರಿ."

ಆಗ ಅವನ ಶಾಪಕ್ಕೆ ಅಂತ್ಯವನ್ನು ಮಾಡಬೇಕೆಂದು ಸ್ಥೂಣನ ಪರವಾಗಿ ಯಕ್ಷರು ಪುನಃ ಪುನಃ ವೈಶ್ರವಣನನ್ನು ಬೇಡಿಕೊಂಡರು. ಆಗ ಮಹಾತ್ಮ ಯಕ್ಷೇಂದ್ರನು ತನ್ನ ಅನುಗಾಮಿ ಎಲ್ಲ ಯಕ್ಷಗಣಗಳಿಗೆ ಶಾಪದ ಅಂತ್ಯದ ಕುರಿತು ಹೇಳಿದನು:

"ರಣದಲ್ಲಿ ಶಿಖಂಡಿನಿಯು ಸತ್ತ ನಂತರ ಯಕ್ಷ ಸ್ಥೂಣನು ಸ್ವರೂಪವನ್ನು ಪಡೆಯುತ್ತಾನೆ. ಮಹಾಮನಸ್ವಿ ಸ್ಥೂಣನು ಉದ್ವೇಗಪಡದಿರಲಿ."

ಹೀಗೆ ಹೇಳಿ ಭಗವಾನ ದೇವ ಯಕ್ಷಪೂಜಿತನು ಆ ಎಲ್ಲ ನಿಮೇಷಾಂತರಚಾರಿಗಳೊಂದಿಗೆ ಹೊರಟು ಹೋದನು. ಸ್ಥೂಣನಾದರೋ ಶಾಪವನ್ನು ಪಡೆದು ಅಲ್ಲಿಯೇ ವಾಸಿಸಿದನು.

ಸ್ವಲ್ಪ ಸಮಯದಲ್ಲಿಯೇ ಶಿಖಂಡಿಯು ಆ ಕ್ಷಪಾಚರನಲ್ಲಿಗೆ ಬಂದನು. ಅವನ ಬಳಿಬಂದು "ಭಗವನ್! ಬಂದಿದ್ದೇನೆ!" ಎಂದು ಹೇಳಿದನು. ಅವನಿಗೆ ಸ್ಥೂಣನು "ಸಂತೋಷವಾಯಿತು!" ಎಂದು ಪುನಃ ಪುನಃ ಪುನಃ ಹೇಳಿದನು. ಪ್ರಾಮಾಣಿಕನಾಗಿ ಬಂದಿರುವ ರಾಜಪುತ್ರ ಶಿಖಂಡಿಯನ್ನು ನೋಡಿ ಅವನು ನಡೆದ ವೃತ್ತಾಂತವೆಲ್ಲವನ್ನೂ

ಶಿಖಂಡಿಗೆ ಹೇಳಿದನು:

> “ಪಾರ್ಥಿವಾತ್ಮಜ! ನಿನ್ನಿಂದಾಗಿ ನಾನು ವೈಶ್ರವಣನಿಂದ ಶಪಿಸಲ್ಪಟ್ಟಿದ್ದೇನೆ. ಹೊರಟು ಹೋಗು! ನಿನಗಿಚ್ಛೆಬಂದಂತೆ ಸುಖವಾಗುವ ಹಾಗೆ ಲೋಕಗಳನ್ನು ಸಂಚರಿಸು. ಇಲ್ಲಿಗೆ ನೀನು ಬಂದಿರುವುದು ಮತ್ತು ಪೌಲಸ್ತ್ಯನ ದರ್ಶನ ಎಲ್ಲವೂ ಹಿಂದೆ ವಿಧಿ ನಿರ್ಮಿತವಾದುದೆಂದು ಅನಿಸುತ್ತದೆ. ಅದನ್ನು ತಪ್ಪಿಸಲು ಸಾಧ್ಯವಿಲ್ಲ.”

ಯಕ್ಷ ಸ್ಥೂಣನು ಹೀಗೆ ಹೇಳಲು ಶಿಖಂಡಿಯು ಮಹಾಹರ್ಷದಿಂದ ನಗರಕ್ಕೆ ಹಿಂದಿರುಗಿದನು. ವಿವಿಧ ಗಂಧ-ಮಾಲೆ-ಮಹಾಧನಗಳಿಂದ ದ್ವಿಜಾತಿಯವರನ್ನೂ, ದೇವತೆಗಳನ್ನೂ ಚೈತ್ಯಗಳಲ್ಲಿಯೂ ಚೌರಾಹಗಳಲ್ಲಿಯೂ ಪೂಜಿಸಿದನು. ಪಾಂಚಾಲ್ಯ ದ್ರುಪದನೂ ಸಹ ಬಾಂಧವರೊಂದಿಗೆ ಶಿಖಂಡಿಯ ಸಿದ್ಧಿ-ಏಳಿಗೆಗಳಿಂದ ಪರಮ ಸಂತೋಷವನ್ನು ಹೊಂದಿದನು. ಮೊದಲು ಸ್ತ್ರೀಯಾಗಿದ್ದ ಪುತ್ರ ಶಿಖಂಡಿಯನ್ನು ಅವನು ಶಿಷ್ಯನನ್ನಾಗಿ ದ್ರೋಣನಿಗೆ ಕೊಟ್ಟನು. ಕೌರವ-ಪಾಂಡವರೊಂದಿಗೆ ನೃಪಾತ್ಮಜ ಶಿಖಂಡಿಯೂ ಪಾರ್ಷತ ಧೃಷ್ಟದ್ಯುಮ್ನನೂ ನಾಲ್ಕು ಭಾಗಗಳ ಧನುರ್ವೇದವನ್ನು ಕಲಿತರು. ಭೀಷ್ಮನು ದ್ರುಪದನಲ್ಲಿ ನಿಯೋಜಿಸಿದ್ದ ಜಡ, ಕುರುಡ, ಕಿವುಡರಂತೆ ನಟಿಸುತ್ತಿದ್ದ ಚಾರರು ಅವನಿಗೆ ನಡೆದ ಇವೆಲ್ಲವನ್ನೂ ಹೇಳಿದರು. ಹೀಗೆ ದ್ರುಪದಾತ್ಮಜ ಶಿಖಂಡೀ ರಥಸತ್ತಮನು ಹೆಣ್ಣಾಗಿದ್ದು ಗಂಡಾದನು.

ಅಂಬಾ ಎಂಬ ಹೆಸರಿನಿಂದ ವಿಶ್ರುತಳಾದ ಕಾಶಿಪತಿಯ ಜೇಷ್ಠ ಕನ್ಯೆಯು ದ್ರುಪದನ ಕುಲದಲ್ಲಿ ಶಿಖಂಡಿಯಾಗಿ ಹುಟ್ಟಿದಳು.

# ಭೀಷ್ಮ ಪರ್ವ




# ಮಹಾಭಾರತ ಯುದ್ಧಾರಂಭ

## ವ್ಯಾಸದರ್ಶನ

**ಹೀಗೆ ಪೂರ್ವ-ಪಶ್ಚಿಮ ಮುಖಗಳಾಗಿ ಸೇರಿದ್ದ ಅವರನ್ನು ನೋಡಿ ಭಗವಾನ್ ಋಷಿ, ಸರ್ವವೇದವಿದರಲ್ಲಿ ಶ್ರೇಷ್ಠ ವ್ಯಾಸ ಸತ್ಯವತೀ ಸುತ, ಭರತರ ಪಿತಾಮಹ, ಭೂತ-ಭವ್ಯ-ಭವಿಷ್ಯಗಳನ್ನು ತಿಳಿದಿರುವ, ಭಗವಾನನು ತನ್ನ ಪುತ್ರರ ಅನ್ಯಾಯದ ಕುರಿತು ಯೋಚಿಸಿ ಶೋಕಿಸಿ ಆರ್ತನಾಗಿರುವ ರಾಜ ವೈಚಿತ್ರವೀರ್ಯನಿಗೆ ರಹಸ್ಯದಲ್ಲಿ ಇದನ್ನು**

ಹೇಳಿದನು:

"ರಾಜನ್! ನಿನ್ನ ಪುತ್ರರು ಮತ್ತು ಅನ್ಯ ಭೂಮಿಪರ ಕಾಲವು ಬಂದಾಗಿದೆ. ಅವರು ಸಂಗ್ರಾಮದಲ್ಲಿ ಪರಸ್ಪರರರನ್ನು ಕೊಲ್ಲುತ್ತಾರೆ. ಕಾಲದ ಬದಲಾವಣೆಗಳಿಂದ ಆಗುವ ಈ ವಿನಾಶವನ್ನು ಕಾಲಪರ್ಯಾಯವೆಂದು ತಿಳಿದು ಮನಸ್ಸಿನಲ್ಲಿ ಶೋಕಪಡಬೇಡ. ಈ ಸಂಗ್ರಾಮವನ್ನು ನೋಡಲು ಬಯಸುವೆಯಾದರೆ ನಿನಗೆ ಕಣ್ಣುಗಳನ್ನು ಕೊಡುತ್ತೇನೆ. ಅದನ್ನು ನೋಡು!"

ಧೃತರಾಷ್ಟ್ರನು ಹೇಳಿದನು:

"ಬ್ರಹ್ಮರ್ಷಿಸತ್ತಮ! ಜ್ಞಾತಿವಧೆಯನ್ನು ನೋಡಲು ನನಗೆ ಇಷ್ಟವಿಲ್ಲ. ಆದರೆ ನಿನ್ನ ತೇಜಸ್ಸಿನಿಂದ ಈ ಯುದ್ಧದ ಕುರಿತು ಯಾವುದನ್ನೂ ಬಿಟ್ಟುಹೋಗದ ಹಾಗೆ ಕೇಳುತ್ತೇನೆ."

ಅವನು ಸಂಗ್ರಾಮವನ್ನು ನೋಡಲು ಇಚ್ಛಿಸುವುದಿಲ್ಲ. ಕೇಳಲು ಬಯಸುತ್ತಾನೆ ಎಂದು ತಿಳಿದ ಈಶ್ವರ ವ್ಯಾಸನು ಸಂಜಯನಿಗೆ ವರವನ್ನಿತ್ತನು. ವ್ಯಾಸನು ಹೇಳಿದನು:

"ರಾಜನ್! ಈ ಸಂಜಯನು ನಿನಗೆ ಯುದ್ಧದಲ್ಲಿ ನಡೆಯುವ ಸಕಲ ಸಮಾಚಾರಗಳನ್ನೂ ಹೇಳುತ್ತಾನೆ. ಸಂಗ್ರಾಮದಲ್ಲಿ ಎಲ್ಲವೂ ಇವನಿಗೆ ಕಾಣುವಂತಾಗುತ್ತದೆ. ದಿವ್ಯದೃಷ್ಟಿಯಿಂದ ಸಮನ್ವಿತನಾದ ಈ ಸಂಜಯನು ಸರ್ವಜ್ಞನಾಗುತ್ತಾನೆ ಮತ್ತು

ನಿನಗೆ ಯುದ್ಧದ ಎಲ್ಲವನ್ನೂ ಹೇಳುತ್ತಾನೆ. ಬಹಿರಂಗವಾಗಿರಲಿ ಅಥವಾ ರಹಸ್ಯವಾಗಿರಲಿ, ರಾತ್ರಿಯಾಗಿರಲಿ ಅಥವಾ ದಿನವಾಗಿರಲಿ, ಮನಸ್ಸಿನಲ್ಲಿ ಯೋಚಿಸಿದ್ದು ಕೂಡ ಎಲ್ಲವೂ ಸಂಜಯನಿಗೆ ತಿಳಿಯುತ್ತದೆ. ಇವನನ್ನು ಶಸ್ತ್ರಗಳು ಭೇದಿಸುವುದಿಲ್ಲ. ಇವನನ್ನು ಶ್ರಮವು ಬಾಧಿಸುವುದಿಲ್ಲ. ಈ ಗಾವಲ್ಗಣಿಯು ಜೀವಂತನಾಗಿಯೇ ಯುದ್ಧದಿಂದ ಆಚೆ ಬರುತ್ತಾನೆ. ನಾನಾದರೋ ಈ ಕುರುಗಳ ಮತ್ತು ಪಾಂಡವರ ಎಲ್ಲರ ಕೀರ್ತಿಯನ್ನು ಪಸರಿಸುತ್ತೇನೆ. ಶೋಕಿಸಬೇಡ. ಇದು ಮೊದಲೇ ದೈವನಿಶ್ಚಯವಾದುದು. ಇದರ ಕುರಿತು ಶೋಕಿಸಬಾರದು. ಅದನ್ನು ತಡೆಯಲು ಶಕ್ಯವಿಲ್ಲ. ಎಲ್ಲಿ ಧರ್ಮವಿದೆಯೋ ಅಲ್ಲಿ ಜಯವಿದೆ.”

## ನಿಮಿತ್ತಗಳು

ಹೀಗೆ ಹೇಳಿ ಕುರುಗಳ ಪ್ರಪಿತಾಮಹ ಭಗವಾನನು ಪುನಃ ಧೃತರಾಷ್ಟ್ರನಿಗೆ ಹೇಳಿದನು:

“ಮಹಾರಾಜ! ಭಯವನ್ನು ಸೂಚಿಸುವ ಈ ನಿಮಿತ್ತಗಳ ಪ್ರಕಾರ ಈ ಯುದ್ಧದಲ್ಲಿ ಮಹಾ ಕ್ಷಯವುಂಟಾಗುತ್ತದೆ. ಗಿಡುಗ, ಹದ್ದು, ಕಾಗೆ, ಮತ್ತು ಕಂಕಗಳು ಗುಂಪುಗುಂಪಾಗಿ ಮರಗಳ ಮೇಲೆ ಬಂದಿಳಿಯುತ್ತಿವೆ ಮತ್ತು ಕೆಳಗೆ ನೋಡುತ್ತಾ

ಕಾಯುತ್ತಿವೆ. ಉಗ್ರವಾದವುಗಳು ಯುದ್ಧದಲ್ಲಿ ಕುದುರೆ ಆನೆಗಳ ಮಾಂಸವನ್ನು ಭಕ್ಷಿಸಲು ಕಾಯುತ್ತ ಕುಳಿತಿವೆ. ಖಟಾ ಖಟಾ ಎಂದು ಭೈರವ ಭಯವೇದನೆಯನ್ನುಂಟುಮಾಡುವ ಕೂಗನ್ನು ಕೂಗುತ್ತಾ ಕಾಗೆಗಳು ಮಧ್ಯದಿಂದ ದಕ್ಷಿಣಾಭಿಮುಖವಾಗಿ ಹಾರಿಹೋಗುತ್ತಿವೆ. ಬೆಳಿಗ್ಗೆ ಮತ್ತು ಸಂಧ್ಯಾಕಾಲಗಳೆರಡೂ ಹೊತ್ತು ನಿತ್ಯವೂ ನಾನು ಉದಯ-ಅಸ್ತಮಾನಗಳ ವೇಳೆಗಳಲ್ಲಿ ಸೂರ್ಯನನ್ನು ಕಬಂಧ (ತಲೆಯಿಲ್ಲದ ದೇಹ) ಗಳಿಂದ ಸುತ್ತುವರೆದಿದ್ದುದನ್ನು ನೋಡುತ್ತಿದ್ದೇನೆ. ಮೂರು ಬಣ್ಣದ - ಬಿಳಿ ಮತ್ತು ಕೆಂಪು ರೆಕ್ಕೆಗಳ ಹಾಗೂ ಕಪ್ಪು ಕೊರಳಿನ – ಪಕ್ಷಿಗಳು ಸಂಧ್ಯಾಸಮಯದಲ್ಲಿ ಸೂರ್ಯನನ್ನು ಗುಂಪಾಗಿ ಮುತ್ತುತ್ತಿವೆ. ಪ್ರಜ್ವಲಿಸುವ ಸೂರ್ಯ, ಚಂದ್ರ, ನಕ್ಷತ್ರಗಳನ್ನು ವಿಶೇಷದಿನಗಳಲ್ಲದಿದ್ದರೂ ನಾನು ಆಹೋ ರಾತ್ರಿ ನೋಡುತ್ತಿದ್ದೇನೆ. ಇದರಿಂದ ಕ್ಷಯವಾಗುತ್ತದೆ. ಕಾರ್ತೀಕ ಪೂರ್ಣಿಮೆಯಂದೂ ಪ್ರಭೆಯನ್ನು ಕಳೆದುಕೊಂಡ ಚಂದ್ರನು ಕಾಣದಂತಾಗಿದ್ದೇನೆ. ಅವನು ನಭಸ್ತಲದಲ್ಲಿ ಅಗ್ನಿವರ್ಣದ ಮಂಡಲದಲ್ಲಿ ಕಾಣುತ್ತಾನೆ. ಪರಿಘದಂಥಹ ಬಾಹುಗಳಿಂದ ವೀರ ಪಾರ್ಥಿವರು, ರಾಜಪುತ್ರರು, ಶೂರರು ಭೂಮಿಯಲ್ಲಿ ಹತರಾಗಿ ಮಲಗುತ್ತಾರೆ. ನಿತ್ಯವೂ ರಾತ್ರಿಯ ಅಂತರಿಕ್ಷದಲ್ಲಿ ವರಾಹ ವೃಷದಂಶಗಳೀರ್ವರ ರೌದ್ರ ರೋದನೆಯು ಕ್ಷಯವನ್ನು ಸೂಚಿಸುತ್ತಿದೆ. ದೇವತೆಗಳ ಪ್ರತಿಮೆಗಳೂ ಕೂಡ

ಅಲುಗಾಡುತ್ತಿವೆ ಮತ್ತು ನಗುತ್ತಿವೆ. ಕೆಲವೊಮ್ಮೆ ರಕ್ತವನ್ನು ಕಾರುತ್ತಿವೆ, ಮುಕ್ಕರಿಸಿ ಬೀಳುತ್ತಿವೆ. ಬಾರಿಸದೆಯೇ ನಗಾರಿಗಳು ಶಬ್ಧಮಾಡುತ್ತಿವೆ. ಕ್ಷತ್ರಿಯರ ಮಹಾರಥಗಳು ಕುದುರೆಗಳನ್ನು ಕಟ್ಟದೆಯೇ ನಡೆಯುತ್ತಿವೆ. ಕೋಕಿಲಗಳು, ಮರಕುಟುಕಗಳು, ನೀರು ಕಾರುಂಡೆಗಳು, ಗಿಳಿಗಳು, ಸಾರಸಗಳು, ನವಿಲುಗಳು ದಾರುಣವಾಗಿ ಕೂಗುತ್ತಿವೆ. ಶಸ್ತ್ರಾಭರಣಗಳನ್ನು ಹಿಡಿದ ಕವಚಧಾರಿಗಳು ಕುದುರೆಗಳ ಮೇಲೆ ಏರುತ್ತಿದ್ದಾರೆ. ಅರುಣೋದಯದಲ್ಲಿ ನೂರಾರು ಚಿಟ್ಟೆಗಳು ಕಾಣುತ್ತಿವೆ. ಎರಡೂ ಸಂಧ್ಯೆಗಳಲ್ಲಿ ಹೊಳೆಯುತ್ತಿರುವ ದಿಕ್ಕುಗಳು ಬಾಯಾರಿಕೆಗೊಂಡಿವೆಯೋ ಎನ್ನುವಂತೆ ರಕ್ತ ಮತ್ತು ಎಲುಬುಗಳ ಮಳೆಯಾಗುತ್ತಿವೆ. ತ್ರೈಲೋಕ್ಯಗಳಲ್ಲಿ ಸಾಧುಸಮ್ಮತಳಾದ ಅರುಂಧತಿಯು ವಸಿಷ್ಠನನ್ನು ಹಿಂದೆ ಹಾಕಿದಳೆಂದು ತೋರುತ್ತಿದೆ. ರೋಹಿಣಿಯನ್ನು ಪೀಡಿಸುತ್ತಿರುವಂತೆ ಶನೈಶ್ಚರನು ನಿಂತಿದ್ದಾನೆ. ಚಂದ್ರನ ಲಕ್ಷಣವಾಗಿರುವ ಜಿಂಕೆಯು ತನ್ನ ಸ್ಥಾನವನ್ನು ತಪ್ಪಿ ಮಹಾಭಯವುಂಟಾಗಲಿದೆ. ಮೋಡಗಳಿಲ್ಲದಿದ್ದರೂ ಆಕಾಶದಲ್ಲಿ ಮಹಾಘೋರ ಶಬ್ಧವು ಕೇಳಿಬರುತ್ತಿದೆ. ವಾಹನ ಪ್ರಾಣಿಗಳೆಲ್ಲವೂ ಅಳುತ್ತಾ ಕಣ್ಣೀರನ್ನು ಬೀಳಿಸುತ್ತಿವೆ.

ಕತ್ತೆಗಳು ಗೋವುಗಳನ್ನು ಹುಟ್ಟಿಸುತ್ತಿವೆ. ಗಂಡು ಮಕ್ಕಳು ತಾಯಿಯರೊಂದಿಗೆ ರಮಿಸುತ್ತಿದ್ದಾರೆ. ವನದಲ್ಲಿ ಮರಗಳು

ಅಕಾಲದಲ್ಲಿ ಹೂವು-ಹಣ್ಣುಗಳನ್ನು ಬಿಡುತ್ತಿವೆ. ಗರ್ಭಿಣಿ ರಾಜಪುತ್ರಿಯರು ವಿಭೀಷಣರಾದವರನ್ನು ಹುಟ್ಟಿಸುತ್ತಿದ್ದಾರೆ. ಮಾಂಸಭಕ್ಷಕ ಪ್ರಾಣಿಗಳು ಪಕ್ಷಿಗಳೊಂದಿಗೆ ಸೇರಿ ಮೃಗಗಳನ್ನು ಭಕ್ಷಿಸುತ್ತಿವೆ. ಮೂರು ಕೋಡುಗಳ, ನಾಲ್ಕು ಕಣ್ಣುಗಳ, ಐದು ಕಾಲುಗಳ, ಎರಡು ಲಿಂಗಗಳಿರುವ, ಎರಡು ತಲೆಗಳಿರುವ, ಎರಡು ಬಾಲಗಳಿರುವ, ಮತ್ತು ಹಲ್ಲುಗಳಿರುವ, ಮೂರು ಪಾದ-ಕೋಡುಗಳಿರುವ, ನಾಲ್ಕು ಹಲ್ಲುಗಳಿರುವ ಕುದುರೆಗಳೂ ಅಶಿವ ಪಶುಗಳೂ ಹುಟ್ಟಿ, ಅಗಲವಾಗಿ ಬಾಯಿಗಳನ್ನು ಕಳೆದು ಅಶಿವ ಸ್ವರಗಳಲ್ಲಿ ಕೂಗುತ್ತಿವೆ. ನಿನ್ನ ಪುರದಲ್ಲಿ ಬ್ರಹ್ಮವಾದಿಗಳ ಸ್ತ್ರೀಯರು ಮತ್ತು ಇತರರು ಗರುಡ-ಮಯೂರಗಳಿಗೆ ಜನ್ಮ ನೀಡುತ್ತಿದ್ದಾರೆ. ಕುದುರೆಗಳು ಹಸುವಿನ ಕರುಗಳಿಗೆ ಮತ್ತು ನಾಯಿಯು ನರಿ-ಕೋಳಿಗಳಿಗೆ ಜನ್ಮ ನೀಡುತ್ತಿವೆ. ಜಿಂಕೆಗಳೂ ಗಿಳಿಗಳೂ ಅಶುಭವಾಗಿ ಕೂಗುತ್ತಿವೆ. ಕೆಲವು ಸ್ತ್ರೀಯರು ನಾಲ್ಕು-ಐದು ಕನ್ಯೆಯರಿಗೆ ಜನ್ಮನೀಡುತ್ತಿದ್ದಾರೆ. ಹುಟ್ಟಿದಕೂಡಲೇ ಅವರು ನರ್ತಿಸುತ್ತಿದ್ದಾರೆ, ಹಾಡುತ್ತಿದ್ದಾರೆ ಮತ್ತು ನಗುತ್ತಿದ್ದಾರೆ. ಅತಿ ಕೀಳುಸ್ತರದ ಜನರು ನಗುತ್ತಿದ್ದಾರೆ, ಕುಣಿಯುತ್ತಿದ್ದಾರೆ ಮತ್ತು ಹಾಡುತ್ತಿದ್ದಾರೆ. ಇದು ಮಹಾ ಭಯವನ್ನು ಸೂಚಿಸುತ್ತದೆ. ಕಾಲಚೋದಿತರಾಗಿ ಶಿಶುಗಳು ಸಶಸ್ತ್ರರ ಚಿತ್ರಗಳನ್ನು ಬರೆಯುತ್ತಿವೆ, ದಂಡಗಳನ್ನು ಹಿಡಿದು ಅನ್ಯೋನ್ಯರನ್ನು

ಓಡಿಸುತ್ತಿದ್ದಾರೆ. ಯುದ್ಧದ ಉತ್ಸುಕರಾಗಿ ನಗರವನ್ನೇ ಪುಡಿಮಾತೊಡಗಿದ್ದಾರೆ. ಕಮಲಗಳು ಮತ್ತು ಕುಮುದಗಳು ಮರಗಳಲ್ಲಿ ಬೆಳೆಯುತ್ತಿವೆ. ಉಗ್ರವಾದ ಭಿರುಗಾಳಿಯು ಬೀಸುತ್ತಿದೆ. ಧೂಳು ಕಡಿಮೆಯಾಗುತ್ತಿಲ್ಲ. ಭೂಮಿಯು ಕಂಪಿಸುತ್ತಿದೆ.

ರಾಹುವು ಸೂರ್ಯಗ್ರಸ್ತ ಮಾಡುತ್ತಿದ್ದಾನೆ. ಶ್ವೇತ (ಕೇತು) ಗ್ರಹವು ಚಿತ್ರಾನಕ್ಷತ್ರವನ್ನು ದಾಟಿ ನಿಂತಿದೆ. ಇವು ವಿಶೇಷವಾಗಿ ಕುರುಗಳ ಅಭಾವವನ್ನು ಸೂಚಿಸುತ್ತವೆ. ಮಹಾಘೋರ ಧೂಮಕೇತುವು ಪುಷ್ಯವನ್ನು ದಾಟಿ ನಿಂತಿದೆ. ಈ ಮಹಾಗ್ರಹವು ಎರಡೂ ಸೇನೆಗಳಿಗೆ ಘೋರ ಅಮಂಗಳವನ್ನುಂಟುಮಾಡುತ್ತದೆ. ಅಂಗಾರಕ (ಮಂಗಳ) ನು ಮಘದಲ್ಲಿ ಮತ್ತು ಶ್ರವಣದಲ್ಲಿ ಬೃಹಸ್ಪತಿ (ಗುರು) ಯು ವಕ್ರವಾಗಿದ್ದಾರೆ. ಸೂರ್ಯಪುತ್ರ (ಶನಿ) ನು ಭಗಾ (ಉತ್ತರಾ) ನಕ್ಷತ್ರವನ್ನು ದಾಟಿ ಪೀಡಿಸುತ್ತಿದ್ದಾನೆ. ಶುಕ್ರಗ್ರಹವು ಪೂರ್ವಭಾದ್ರಪದವನ್ನು ಹಿಂದೆ ಹಾಕಿ ಉತ್ತರ ಭಾದ್ರಪದವನ್ನು ನೋಡುತ್ತಿದೆ. ಬೆಂಕಿ ಹೊಗೆಗಳಿಂದ ಪ್ರಜ್ವಲಿಸುತ್ತಿರುವ ಕಪ್ಪು ಗ್ರಹ (ರಾಹು)ವು ಜ್ಯೇಷ್ಠಾ ನಕ್ಷತ್ರವನ್ನು ದಾಟಿ ನಿಂತಿದ್ದಾನೆ. ಘೋರವಾಗಿ ಪ್ರಜ್ವಸಿಸುತ್ತಿರುವ ಧೃವ ನಕ್ಷತ್ರವು ಬಲಗಡೆ ಉರುಳುತ್ತಿದೆ. ಕ್ರೂರ ಗ್ರಹ (ರಾಹು)ವು ಚಿತ್ರಾ ಮತ್ತು ಸ್ವಾತಿ ನಕ್ಷತ್ರಗಳ

ನಡುವೆ ನಿಂತಿದ್ದಾನೆ. ಪಾವಕಪ್ರಭ ಲೋಹಿತಾಂಗ (ಮಂಗಳ)ನು ವಕ್ರ ವಕ್ರವಾಗಿ ಮಾಡಿಕೊಂಡು ಬ್ರಹ್ಮರಾಶಿ (ಗುರು) ಯೊಂದಿಗೆ ಶ್ರವಣಾ ಲಕ್ಷತ್ರದಲ್ಲಿ ವ್ಯವಸ್ಥಿತನಾಗಿದ್ದಾನೆ.

ಫಲಮಾಲಿನೀ ಪೃಥ್ವಿಯು ಸರ್ವ ಸಸ್ಯಗಳನ್ನು ಹೊತ್ತಿದ್ದಾಳೆ. ಗೋಧಿಯ ಸಸ್ಯಗಳಿಗೆ ಐದು ತಲೆಗಳಿವೆ ಮತ್ತು ಭತ್ತಕ್ಕೆ ಹತ್ತು ತಲೆಗಳಿವೆ. ಈ ಜಗತ್ತಿನಲ್ಲಿಯೇ ಸರ್ವಲೋಕಗಳಲ್ಲಿಯೂ ಪ್ರಧಾನವೆನಿಸಿಕೊಂಡ ಗೋವುಗಳು ಕರುಗಳನ್ನು ಹೆತ್ತ ನಂತರ ರಕ್ತವನ್ನೇ ಹಾಲನಾಗಿ ನೀಡುತ್ತಿವೆ. ಧನುಸ್ಸುಗಳಿಂದ ಹೊಳೆಯುವ ಕಿರಣಗಳು ಹೊರಸೂಸುತ್ತಿವೆ. ಖಡ್ಗಗಳು ಚೆನ್ನಾಗಿ ಹೊಳೆಯುತ್ತಿವೆ. ಸಂಗ್ರಾಮವು ಬಂದಾಗಿದೆ ಎನ್ನುವುದನ್ನು ಶಸ್ತ್ರಗಳು ವ್ಯಕ್ತಪಡಿಸುತ್ತಿವೆ. ಶಸ್ತ್ರಗಳ, ನೀರಿನ, ಕವಚಗಳ ಮತ್ತು ಧ್ವಜಗಳ ಬಣ್ಣವು ಅಗ್ನಿವರ್ಣದಂತೆ ತೋರುತ್ತಿದೆ. ಮಹಾ ಕ್ಷಯವಾಗುವುದಿದೆ. ಮೃಗಪಕ್ಷಿಗಳು ಉರಿಯುತ್ತಿರುವ ಮುಖಗಳಿಂದ ಘೋರ ಕೂಗುಗಳನ್ನು ಕೂಗುತ್ತಾ ಓಡಾಡುತ್ತಿವೆ. ಮಹಾಭಯವನ್ನು ಸೂಚಿಸುತ್ತಿವೆ. ಒಂದೇ ರೆಕ್ಕೆಯುಳ್ಳ, ಒಂದೇ ಕಣ್ಣುಳ್ಳ, ಒಂದೇ ಕಾಲಿರುವ ಘೋರ ಪಕ್ಷಿಯೊಂದು ರಾತ್ರಿ ಆಕಾಶದಲ್ಲಿ, ಕೇಳುವವರು ರಕ್ತಕಾರುವ ಹಾಗೆ, ರೌದ್ರವಾಗಿ ಕೂಗಿ ಭಯಪಡಿಸುತ್ತಿದೆ. ಕೆಂಪು ಮತ್ತು ಬಿಳಿಯ ಶಿಖೆಗಳ ಎರಡು ಗ್ರಹಗಳು ಪ್ರಜ್ವಲಿಸುತ್ತಾ ನಿಂತಿವೆ. ಉದಾರ ಸಪ್ತರ್ಷಿಗಳ

ನಕ್ಷತ್ರಮಂಡಲಗಳ ಪ್ರಭೆಯನ್ನು ಮುಚ್ಚಿವೆ. ಪ್ರಜ್ವಲಿಸುತ್ತಿರುವ ಎರಡು ಗ್ರಹಗಳು ಬೃಹಸ್ಪತಿ-ಶನೈಶ್ಚರರು ವಿಶಾಖಾ ನಕ್ಷತ್ರದ ಸಮೀಪದಲ್ಲಿ ಒಂದು ವರ್ಷ ನೆಲೆಸಿದ್ದಾರೆ. ಕೃತ್ತಿಕಾ ನಕ್ಷತ್ರದ ಪ್ರಥಮದಲ್ಲಿ ತೀವ್ರ ಗ್ರಹವು ಪ್ರಜ್ವಲಿಸುತ್ತಾ, ಧೂಮಕೇತುವಿನಂತೆ ಹೊಳೆಯುತ್ತಾ ಅದರ ಮುಖವನ್ನು ಮುಚ್ಚುತ್ತಿದೆ. ಪೂರ್ವದಲ್ಲಿರುವ ಎಲ್ಲ ಮೂರು ನಕ್ಷತ್ರಗಳ ಮೇಲೆ ಬುಧನು ಅಭೀಕ್ಷ್ಣ ದೃಷ್ಠಿಯನ್ನು ಬೀರಿ ಮಹಾ ಭಯವನ್ನು ಹುಟ್ಟಿಸುತ್ತಿದ್ದಾನೆ. ಹಿಂದೆ ಹದಿನಾಲ್ಕನೆಯ, ಹದಿನೈದನೆಯ ಅಥವಾ ಹದಿನಾರನೆಯ ದಿನ ಅಮವಾಸ್ಯೆಯಾಗುತ್ತಿತ್ತು. ಈಗಿನ ಹಾಗೆ ತ್ರಯೋದಶಿಯಂದು ಅಮವಾಸ್ಯೆಯಾದದ್ದನ್ನು ನಾನು ಅರಿಯೆ! ಒಂದೇ ತಿಂಗಳಿನಲ್ಲಿ ಚಂದ್ರ ಮತ್ತು ಸೂರ್ಯಗ್ರಹಣಗಳೆರಡೂ ತ್ರಯೋದಶಿಯಂದು ನಡೆದಿದೆ. ಅಕಾಲದಲ್ಲಾದ ಈ ಗ್ರಹಣಗಳು ಪ್ರಜೆಗಳ ನಾಶವನ್ನು ಸೂಚಿಸುತ್ತವೆ. ದಿಕ್ಕುಗಳಲ್ಲೆಲ್ಲಾ ಧೂಳುತುಂಬಿ ಎಲ್ಲಕಡೆಗಳಿಂದಲೂ ಆನೆಕಲ್ಲಿನ ಮಳೆಯಾಗುತ್ತಿದೆ. ಉತ್ಪಾತವನ್ನು ಸೂಚಿಸುವ ಮೇಘಗಳು ರಾತ್ರಿಯಲ್ಲಿ ರೌದ್ರ ರಕ್ತದ ಮಳೆಯನ್ನು ಸುರಿಸುತ್ತಿವೆ. ಕೃಷ್ಣಪಕ್ಷದ ಚತುರ್ದಶಿಯಂದು ಪುನಃ ತೀವ್ರ ಮಾಂಸದ ಮಳೆಯು ಆಯಿತು. ಅರ್ಧರಾತ್ರಿಯಲ್ಲಿ ಮಹಾಘೋರ ರಾಕ್ಷಸರು ಅತೃಪ್ತರಾಗಿದ್ದರು. ನದಿಗಳು ವಿರುದ್ಧ ದಿಕ್ಕುಗಳಲ್ಲಿ

ಹರಿಯುತ್ತವೆ. ನದಿಗಳ ನೀರು ರಕ್ತವಾಗಿವೆ. ನೊರೆತುಂಬಿ ಬಾವಿಗಳು ಹೋರಿಗಳಂತೆ ಭುಸುಗುಟ್ಟುತ್ತಿವೆ. ಒಣಗಿದ ವಜ್ರದಂತೆ ಉಲ್ಕೆಗಳು ಭುಸುಗುಟ್ಟುತ್ತಾ ಕೆಳಗೆ ಬೀಳುತ್ತಿವೆ. ಇಂದಿನ ಈ ರಾತ್ರಿಯು ಕಳೆದು ಉದಯದಲ್ಲಿ ಭಾನು ಮೇಲೆದ್ದಾಗ ನಾಲ್ಕೂ ಕಡೆಗಳಲ್ಲಿ ಎಲ್ಲದಿಕ್ಕುಗಳಲ್ಲಿ ಉರಿಯುತ್ತಿರುವ ಮಹಾ ಉಲ್ಕೆಯು ಕಾಣಿಸಿಕೊಳ್ಳುತ್ತದೆ. ಆದಿತ್ಯವು ಮೇಲೆದ್ದಾಗ ಭೂಮಿಯು ಸಹಸ್ರಾರು ಭೂಮಿಪಾಲರ ರಕ್ತವನ್ನು ಕುಡಿಯುತ್ತದೆ ಎಂದು ಮಹರ್ಷಿಗಳು ಹೇಳುತ್ತಾರೆ.

ಕೈಲಾಸ-ಮಂದರಗಳೆರಡರಲ್ಲಿ ಮತ್ತು ಹಾಗೆಯೇ ಹಿಮವತ್ ಗಿರಿಯಲ್ಲಿ ಸಹಸ್ರಾರು ಶಿಖರಗಳು ಮಹಾಶಬ್ಧದೊಂದಿಗೆ ಬೀಳುತ್ತಿವೆ. ಭೂಮಿಯ ಮಹಾ ಕಂಪನದಿಂದ ನಾಲ್ಕು ಸಾಗರಗಳು ಪುನಃ ಪುನಃ ಕ್ಷೋಭಗೊಂಡು ದಡಗಳನ್ನು ನುಂಗುವವೋ ಎನ್ನುವಹಾಗೆ ಮೇಲೆ ಏರುತ್ತಿವೆ. ಉಗ್ರ ಗಾಳಿಗಳು ವೃಕ್ಷಗಳನ್ನು ಕಿತ್ತು ಬೀಳಿಸುತ್ತಿವೆ. ಗ್ರಾಮ ಮತ್ತು ನಗರಗಳಲ್ಲಿ ಚೈತ್ಯ ವೃಕ್ಷಗಳು ಬೀಳುತ್ತಿವೆ. ದ್ವಿಜರು ಆಹುತಿಯನ್ನು ಹಾಕಿದಾಗ ಅಗ್ನಿಯು ಹಳದಿ, ಕೆಂಪು ಮತ್ತು ನೀಲಿ ಬಣ್ಣಗಳನ್ನು ತಾಳುತ್ತಿದೆ. ಅದರ ಜ್ವಾಲೆಯು ಎಡಕ್ಕೆ ಬಾಗಿ ಧೂಮಯುಕ್ತ ದುರ್ಗಂಧವನ್ನು ನೀಡುತ್ತಿದೆ, ಪಟಪಟ ಶಬ್ಧಮಾಡುತ್ತಿದೆ. ಸ್ಪರ್ಷ, ಗಂಧ, ರಸಗಳು ವಿಪರೀತವಾಗಿವೆ.

ರಾಜರ ಧ್ವಜಗಳು ಮತ್ತೆ ಮತ್ತೆ ಕಂಪಿಸುತ್ತಾ ಹೊಗೆಯಾಡುತ್ತಿವೆ, ಕಿಡಿಗಳ ಮಳೆಯನ್ನು ಸುರಿಸುತ್ತಿವೆ. ಭೇರಿಗಳು ಬೂದಿಯನ್ನು ಚೆಲ್ಲುತ್ತಿವೆ. ಪ್ರಾಸಾದ ಶಿಖರಗಳ ತುದಿಯಲ್ಲಿ ಮತ್ತು ಪುರದ್ವಾರಗಳಲ್ಲಿ ಹದ್ದುಗಳು ಎಡಗಡೆಯಿಂದ ಮಂಡಲಾಕಾರದಲ್ಲಿ ಕುಳಿತು ಉಗ್ರವಾಗಿ ಪರಿತಪಿಸುತ್ತಿವೆ. ಪೃಥಿವೀಕ್ಷಿತರ ಸಾವನ್ನು ಸೂಚಿಸುತ್ತಾ ಧ್ವಜಾಗ್ರದಲ್ಲಿ ನಿಂತು ಎಲ್ಲ ಪಕ್ಷಿಗಳೂ ಪಕ್ವಾ ಪಕ್ವಾ ಎಂದು ಜೋರಾಗಿ ಕೂಗುತ್ತಿವೆ. ಯಾವುದೋ ಯೋಚನೆಯಲ್ಲಿದ್ದುಕೊಂಡು ನಡುಗುತ್ತಿರುವ ಆನೆಗಳು ಮಲ ಮೂತ್ರಗಳನ್ನು ಮಾಡುತ್ತಾ ಅಲ್ಲಲ್ಲಿ ಹೋಗುತ್ತಿವೆ. ಸಹಸ್ರಾರು ಆನೆ ಕುದುರೆಗಳು ದೀನರಾಗಿ ರೋದಿಸುತ್ತಿವೆ. ಇದನ್ನು ಕೇಳಿ ನೀನು ಕಾಲಕ್ಕೆ ತಕ್ಕುದಾಗಿದುದನ್ನು – ಈ ಲೋಕವು ಪ್ರಜೆಗಳಿಲ್ಲದಂತೆ ತಡೆಗಟ್ಟಲು ಏನು ಬೇಕೋ ಅದನ್ನು ಏರ್ಪಡಿಸು.”

ತಂದೆಯ ಮಾತನ್ನು ಕೇಳಿ ಧೃತರಾಷ್ಟ್ರನು ಈ ಮಾತನ್ನಾಡಿದನು:

“ಮೊದಲೇ ವಿಧಿಯು ಇಷ್ಟಪಟ್ಟಂತೆ ನಡೆಯುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ. ಕ್ಷತ್ರಿಯರು ಕ್ಷತ್ರಧರ್ಮದಂತೆ ಯುದ್ಧದಲ್ಲಿ ವಧಿಸಲ್ಪಟ್ಟರೆ ಅವರು ಕೇವಲ ವೀರಲೋಕವನ್ನು ಪಡೆದು ಸುಖವನ್ನು ಹೊಂದುತ್ತಾರೆ. ಈ ಪುರುಷವ್ಯಾಘ್ರರು

ಮಹಾಹವದಲ್ಲಿ ಪ್ರಾಣಗಳನ್ನು ತ್ಯಜಿಸಿ ಈ ಲೋಕದಲ್ಲಿ ಕೀರ್ತಿಯನ್ನೂ ಪರಲೋಕದಲ್ಲಿ ದೀರ್ಘಕಾಲದ ಮಹಾ ಸುಖವನ್ನೂ ಪಡೆಯುತ್ತಾರೆ."

ಪುತ್ರ ಧೃತರಾಷ್ಟ್ರನು ಹೀಗೆ ಹೇಳಲು ಆ ಕವೀಂದ್ರ ಮುನಿಯು ಪರಮ ಧ್ಯಾನನಿರತನಾದನು. ಆ ಕಾಲವಾದೀ ಮಹಾತಪಸ್ವಿಯು ಪುನಃ ಈ ಮಾತುಗಳನ್ನಾಡಿದನು:

"ಪಾರ್ಥಿವೇಂದ್ರ! ಕಾಲವು ಜಗತ್ತನ್ನು ಸಂಕ್ಷಿಪ್ತಗೊಳಿಸುತ್ತದೆ ಎನ್ನುವುದು ನಿಸ್ಸಂಶಯ. ಅದೇ ಪುನಃ ಲೋಕಗಳನ್ನು ಸೃಷ್ಟಿಸುತ್ತದೆ. ಇಲ್ಲಿ ಯಾವುದೂ ಶಾಶ್ವತವಲ್ಲವೆಂದು ತಿಳಿ. ಆದುದರಿಂದ ನಿನ್ನ ದಾಯಾದಿಗಳಿಗೆ, ಕುರುಗಳಿಗೆ, ಸಂಬಂಧಿಗಳಿಗೆ ಮತ್ತು ಸ್ನೇಹಿತರಿಗೆ ಧರ್ಮದ ದಾರಿಯನ್ನು ತೋರಿಸಿ ಇದನ್ನು ತಡೆಯಲು ನೀನು ಸಮರ್ಥನಿದ್ದೀಯೆ. ಜ್ಞಾತಿವಧೆಯು ಪಾಪವೆಂದು ಹೇಳುತ್ತಾರೆ. ನನಗೆ ಅಪ್ರಿಯವಾಗುವ ಹಾಗೆ ಮಾಡಬೇಡ. ಕಾಲನೇ ನಿನ್ನ ಈ ಪುತ್ರರೂಪದಲ್ಲಿ ಜನಿಸಿದ್ದಾನೆ. ವೇದಗಳಲ್ಲಿ ವಧೆಯ ಪೂಜನೆಯಿಲ್ಲ. ಇದು ಎಂದೂ ಹಿತವಾದುದಲ್ಲ. ಕುಲಧರ್ಮವನ್ನು ಕೊಲ್ಲುವವನು ತನ್ನ ದೇಹವನ್ನೇ ಕೊಂದುಕೊಂಡಂತೆ. ಒಳ್ಳೆಯ ದಾರಿಯಲ್ಲಿ ಹೋಗಲು ಶಕ್ಯನಾದರೂ ಕಾಲವು ನಡೆಸಿದಂತೆ ನಡೆಯುತ್ತಿರುವೆ. ಈ

ಕುಲದ ಮತ್ತು ಹಾಗೆಯೇ ಮಹೀಕ್ಷಿತರ ವಿನಾಶಕ್ಕೆ ರಾಜ್ಯದ ರೂಪದಲ್ಲಿ ಅನರ್ಥವು ಆಗಮಿಸಿದೆ. ಅಸುಖವನ್ನುಂಟುಮಾಡುವುದನ್ನು ತ್ಯಜಿಸಬೇಕು. ಪ್ರಜ್ಞೆಯನ್ನು ಕಳೆದುಕೊಳ್ಳುತ್ತಿರುವೆ. ನಿನ್ನ ಸುತರಿಗೆ ಪರಮ ಧರ್ಮವನ್ನು ತೋರಿಸಿಕೊಡು. ಯಾವುದರಿಂದ ಪಾಪವನ್ನು ಪಡೆಯುವೆಯೋ ಆ ರಾಜ್ಯದಿಂದ ನಿನಗೇನು? ಧರ್ಮ ಮತ್ತು ಕೀರ್ತಿಗಳನ್ನು ಪಾಲಿಸಿ ಯಶಸ್ಸು ಸ್ವರ್ಗಗಳನ್ನು ಪಡೆಯುತ್ತೀಯೆ. ಪಾಂಡವರಿಗೆ ರಾಜ್ಯವು ದೊರೆಯಲಿ. ಕೌರವರು ಶಾಂತಿಯಲ್ಲಿ ನಡೆದುಕೊಳ್ಳಲಿ.”

ವಿಪ್ರೇಂದ್ರನು ಹೀಗೆ ಹೇಳುತ್ತಿರಲು ಅಂಬಿಕಾಸುತ ವಾಕ್ಯಜ್ಞ ಧೃತರಾಷ್ಟ್ರನು ಮಧ್ಯದಲ್ಲಿಯೇ ಬಾಯಿಹಾಕಿ ದುಃಖದಿಂದ ವಾಕ್ಪತಿಗೆ ಪುನಃ ಹೇಳಿದನು:

“ಭಾವಾಭಾವಗಳೆರಡೂ ನಿನಗೆಷ್ಟು ತಿಳಿದಿದೆಯೋ ಅಷ್ಟು ನನಗೂ ಯಥಾವತ್ತಾಗಿ ತಿಳಿದಿದೆ. ಅಪ್ಪಾ! ಲೋಕದಲ್ಲಿ ಸ್ವಾರ್ಥವು ಸಮ್ಮೋಹನಗೊಳಿಸುತ್ತದೆ. ನಾನೂ ಕೂಡ ಲೋಕಾತ್ಮಕನಂತೆ ಎಂದು ತಿಳಿ. ನಿನ್ನ ಅತುಲಪ್ರಭಾವವನ್ನು ಪ್ರಸಾದಿಸು. ನೀನೇ ನನಗೆ ಗತಿಯನ್ನು ತೋರಿಸುವ ಧೀರ. ಮಹರ್ಷೇ! ಅವರು ನನ್ನ ವಶದಲ್ಲಿಯೂ ಇಲ್ಲ. ಕೆಟ್ಟದ್ದನ್ನು ಮಾಡಲು ನನಗೆ ಮನಸ್ಸಿಲ್ಲ. ನೀನೇ ಧರ್ಮ, ಪವಿತ್ರ, ಕೀರ್ತಿ

ಮತ್ತು ಧೃತಿ-ಸ್ಮೃತಿ. ನೀನು ಕುರುಗಳ ಮತ್ತು ಪಾಂಡವರ ಪಿತಾಮಹನೂ ಕೂಡ.”

## ವಿಜಯಿಗಳಾಗುವವರ ಲಕ್ಷಣ

ವ್ಯಾಸನು ಹೇಳಿದನು:

“ನೃಪತೇ! ನಿನ್ನ ಮನಸ್ಸಿನಲ್ಲಿ ಏನು ನಡೆಯುತ್ತಿದೆಯೋ ಅದನ್ನು ಇಷ್ಟವಿದ್ದಷ್ಟು ಹೇಳು. ನಿನ್ನ ಸಂಶಯವನ್ನು ಹೋಗಲಾಡಿಸುತ್ತೇನೆ.”

ಧೃತರಾಷ್ಟ್ರನು ಹೇಳಿದನು:

“ಭಗವನ್! ಸಂಗ್ರಾಮದಲ್ಲಿ ವಿಜಯಿಗಳಾಗುವವರಲ್ಲಿರುವ ಲಕ್ಷಣಗಳೆಲ್ಲವನ್ನೂ ತತ್ವತಃ ತಿಳಿಯ ಬಯಸುತ್ತೇನೆ.”

ವ್ಯಾಸನು ಹೇಳಿದನು:

“ಅವರ ಅಗ್ನಿಯು ಪ್ರಸನ್ನ ಪ್ರಭೆಯನ್ನು ಹೊಂದಿರುವನು. ಜ್ವಾಲೆಗಳು ಊರ್ಧ್ವಮುಖವಾಗಿರುತ್ತವೆ. ಜ್ವಾಲೆಗಳು ಬಲಬದಿಗೆ ವಾಲಿರುತ್ತವೆ. ಧೂಮವಿರುವುದಿಲ್ಲ. ಅದರಲ್ಲಿ ಹಾಕಿದ ಆಹುತಿಗಳು ಪುಣ್ಯ ಗಂಧವನ್ನು ಸೂಸುತ್ತವೆ. ಇವುಗಳು ಮುಂದಾಗುವ ಜಯವನ್ನು ಸೂಚಿಸುತ್ತವೆ ಎಂದು ಹೇಳುತ್ತಾರೆ. ಅಲ್ಲಿ ಶಂಖ ಮೃದಂಗಗಳು ಗಂಭೀರ ಘೋಷಗಳನ್ನೂ ಮಹಾಸ್ವನಗಳನ್ನು ನುಡಿಸುತ್ತವೆ. ಸೂರ್ಯ-

ಚಂದ್ರರು ಅತೀ ಶುದ್ಧ ಬೆಳಕನ್ನು ನೀಡುತ್ತವೆ. ಇವುಗಳು ಮುಂದಾಗುವ ಜಯವನ್ನು ಸೂಚಿಸುತ್ತವೆ ಎಂದು ಹೇಳುತ್ತಾರೆ. ಹೊರಟಿರುವಾಗ ಎದುರಿನಿಂದ ಕಾಗೆಗಳ ವಿಕಾರವಲ್ಲದ ಧ್ವನಿಯು ಕೇಳಿಸಿದರೆ ಅದು ಕಾರ್ಯಸಿದ್ಧಿಯನ್ನು ಸೂಚಿಸುತ್ತದೆ. ಅವು ಹಿಂದಿನಿಂದ ಧ್ವನಿಮಾಡಿದರೆ “ಬೇಗ ಹೋಗು! ಕೆಲಸವಾಗುತ್ತದೆ!” ಎಂದೂ ಮುಂದೆ ಬಂದು ಕೂಗಿದರೆ “ನೀನಿಂದು ಹೊರಟ ಕಾರ್ಯವು ಆಗುವುದಿಲ್ಲ! ಹಿಂದಿರುಗುವುದು ಒಳ್ಳೆಯದು!” ಎಂದೂ ಸೂಚಿಸುತ್ತದೆ. ಎಲ್ಲಿ ಪಕ್ಷಿಗಳು, ರಾಜಹಂಸಗಳು, ಗಿಳಿಗಳು, ಕ್ರೌಂಚಗಳು, ಮತ್ತು ಮರಕುಟುಗಗಳು ಕಲ್ಯಾಣಧ್ವನಿಯಲ್ಲಿ ಕೂಗುತ್ತವೆಯೋ, ಗುಂಪುಗುಂಪಾಗಿ ಪ್ರದಕ್ಷಿಣಾಕಾರದಲ್ಲಿ ಹಾರುತ್ತವೆಯೋ ಅಲ್ಲಿ ಜಯವು ನಿಶ್ಚಿತವೆಂದು ವಿಪ್ರರು ಹೇಳುತ್ತಾರೆ. ಯಾರ ಅಲಂಕಾರಗಳು, ಕವಚಗಳು ಮತ್ತು ಗುರಾಣಿಗಳು, ಸೈನಿಕರ ಮುಖಗಳು ಪ್ರಶಾಂತವಾಗಿ ಬಂಗಾರದ ಬಣ್ಣದಲ್ಲಿ ಹೊಳೆದು ಕಣ್ಣುಕುಕ್ಕಿ ಅವುಗಳನ್ನು ನೋಡಲೂ ಕಷ್ಟವಾಗಿರುತ್ತದೆಯೋ ಅವರ ಸೇನೆಯು ಶತ್ರುಗಳನ್ನು ಜಯಿಸುತ್ತದೆ. ಎಲ್ಲಿ ಯೋಧರ ಸಂತೋಷದ ಕೂಗು, ಸತ್ವ ಮತ್ತು ಮಾಲೆಗಳು ಮಾಸುವುದಿಲ್ಲವೋ ಅವರು ರಣದಲ್ಲಿ ರಿಪುಗಳನ್ನು ಗೆಲ್ಲುತ್ತಾರೆ. ಯುದ್ಧರಂಗವನ್ನು ಪ್ರವೇಶಿಸುವವನಿಗೆ ಇಷ್ಟವಾದ ಗಾಳಿಬೀಸಿದರೆ, ಯುದ್ಧಕ್ಕೆ ಹೊರಡುವವನಿಗೆ ಹಣವನ್ನಿತ್ತರೆ,

ಮೊದಲೇ ಯುದ್ಧವನ್ನು ಪ್ರತಿಷೇದಿಸಿದರೆ ಅಂಥವರು ಯುದ್ಧದ ಪ್ರಯೋಜನವನ್ನು ಮೊದಲೇ ಕಂಡುಕೊಳ್ಳುತ್ತಾರೆ. ಶಬ್ಧ, ರೂಪ, ರಸ, ಸ್ಪರ್ಶ ಮತ್ತು ಗಂಧಗಳು ಎಲ್ಲಿ ಬದಲಾಗದೇ ಶುಭವಾಗಿರುವವೋ, ಎಲ್ಲಿ ಯೋಧರು ಸದಾ ಹೃಷ್ಟರಾಗಿರುವರೋ ಅವರ ಜಯವು ನಿಶ್ಚಯಿಸಿದ್ದು. ಗಾಳಿ, ಮೋಡ, ಪಕ್ಷಿಗಳು ಅವರ ಹಿಂದಿನಿಂದ ಬರುತ್ತವೆ. ಮೋಡದಲ್ಲಿ ಕಾಮನ ಬಿಲ್ಲುಗಳು ಅವರನ್ನು ಅನುಸರಿಸುತ್ತವೆ. ಇವು ಜಯಹೊಂದುವವರ ಲಕ್ಷಣಗಳು.

ಆದರೆ ಬೇಗನೆ ಸಾಯುವವರಲ್ಲಿ ಈ ಚಿಹ್ನೆಗಳು ವಿರುದ್ಧವಾಗಿರುತ್ತವೆ. ಸೇನೆಯು ಸಣ್ಣದಾಗಿರಲಿ ಅಥವಾ ದೊಡ್ಡದಾಗಿರಲಿ, ಯೋಧಗಣಗಳ ಹರ್ಷವೊಂದೇ ಜಯದ ಲಕ್ಷಣವೆನಿಸಿಕೊಳ್ಳುತ್ತದೆ. ಓರ್ವನೇ ಸೈನಿಕನು ಭಯಪಟ್ಟು ಓಡಿಹೋಗುವಾಗ ಅತಿ ದೊಡ್ಡ ಸೇನೆಯನ್ನೂ ಒಡೆಯಬಲ್ಲ. ಭಯಗೊಂಡ ಅವನು ಶೂರಯೋಧರನ್ನೂ ಕೂಡ ಹೆದರಿಸಬಲ್ಲನು. ಒಡೆದು ಚದುರಿಹೋದ ಮಹಾ ಸೇನೆಯನ್ನು, ಓಡಿ ಹೋದ ಮೃಗಗಣಗಳಂತೆ ಅಥವಾ ಮಹಾವೇಗದಿಂದ ಹರಿಯುವ ನೀರಿನಂತೆ, ಪುನಃ ಒಟ್ಟುಗೂಡಿಸುವುದು ಬಹಳ ಕಷ್ಟ. ಎಲ್ಲಕಡೆಯಿಂದಲೂ ಬಿದ್ದ ಮಹಾಸೇನೆಯನ್ನು ಸಮಾಧಾನಪಡಿಸುವುದು ಸಾಧ್ಯವಿಲ್ಲ. ಭಯಪಟ್ಟುಕೊಂಡವರು ಶೂರ ಯೋಧರನ್ನು ಕೂಡ

ಹೆದರಿಸುತ್ತಾರೆ. ಭೀತರಾದವರನ್ನು, ಭಗ್ನರಾದವರನ್ನು ನೋಡಿ ಭಯವು ಇನ್ನೂ ಹೆಚ್ಚಾಗುತ್ತದೆ. ಶತ್ರುಗಳಿಂದ ಒಡೆಯಲ್ಪಟ್ಟು ದಿಕ್ಕುಗಳಿಗೆ ಚದುರಿಹೋದ ಮಹಾಸೇನೆಯನ್ನು ಮಹಾಸೇನೆಯ ಚತುರಂಗ ಬಲಗಳ ಮಹೀಪತಿಯು ಶೂರನಾಗಿದ್ದರೂ ಪುನಃ ಸ್ಥಾಪಿಸಲು ಶಕ್ಯವಿರುವುದಿಲ್ಲ. ಮೊದಲೇ ಸತತ ಪ್ರಯತ್ನಮಾಡಿ, ಪರಸ್ಪರರ ಒಪ್ಪಂದ ಮಾಡಿಕೊಂಡು ಗಳಿಸಿದ ವಿಜಯವನ್ನು ಶ್ರೇಷ್ಠವಾದದೆಂದೂ, ಮತ್ತು ಶತ್ರುಗಳಲ್ಲಿ ಭೇದದ ಉಪಾಯದಿಂದ ಗಳಿಸಿದ ವಿಜಯವು ಮಧ್ಯಮವಾದುದೆಂದೂ ಹೇಳುತ್ತಾರೆ. ಯುದ್ಧದಲ್ಲಿ ಕೊಂದು ಗಳಿಸಿದ ವಿಜಯವನ್ನು, ಹೊಡಿದುರಿಳಿಸಿದ ಮಹಾದೋಷವಿರುವುದರಿಂದ ವ್ಯಂಗ್ಯವಾದುದೆಂದು ಹೇಳುತ್ತಾರೆ. ಪರಸ್ಪರರನ್ನು ಚೆನ್ನಾಗಿ ತಿಳಿದುಕೊಂಡಿರುವ, ಪರಸ್ಪರರೊಂದಿಗೆ ಸಂತೋಷದಿಂದಿರುವ, ಅವಧೂತರಾಗಿರುವ, ಸುನಿಶ್ಚಿತರಾಗಿರುವ ಐವತ್ತು ಶೂರರಾದರೂ ಮಹಾ ಸೇನೆಯನ್ನು ಮಥಿಸಬಲ್ಲರು. ಐವರು ಅಥವಾ ಆರು ಅಥವಾ ಏಳು ಮಂದಿಯಾದರೂ ವಿಜಯವನ್ನು ಹಿಂದಿರುಗಿಸಬಲ್ಲರು. ವೈನತೇಯ ಗರುಡನು ಪಕ್ಷಿಗಳ ಮಹಾಗುಂಪೇ ಬಂದರೂ ಇನ್ನೊಬ್ಬರ ಸಹಾಯವನ್ನು ಕೇಳುವುದಿಲ್ಲ. ಸೇನೆಯು ದೊಡ್ಡದಾಗಿದೆಯೆಂದು ಜಯವಾಗುವುದಿಲ್ಲ. ದೈವದ ಮೇಲೆ ಅವಲಂಬಿಸಿರುವ

ಜಯವು ನಿಶ್ಚಯವಾದುದಲ್ಲ. ಸಂಗ್ರಾಮದಲ್ಲಿ ಜಯವಾದವರಿಗೂ ಅತ್ಯಂತ ಕ್ಷಯವಾಗುತ್ತದೆ.”

ಹೀಗೆ ಧೀಮತ ಧೃತರಾಷ್ಟ್ರನಿಗೆ ಹೇಳಿ ವ್ಯಾಸನು ಹೋದನು. ವ್ಯಾಸನಾಡಿದುದನ್ನು ಕೇಳಿ ಧೃತರಾಷ್ಟ್ರನಾದರೋ ಯೋಚನೆಯಲ್ಲಿ ಬಿದ್ದನು. ಒಂದು ಕ್ಷಣ ಆಲೋಚಿಸಿ, ಮತ್ತೆ ಮತ್ತೆ ನಿಟ್ಟಿಸಿರು ಬಿಡುತ್ತಾ ಸಂಜಯನನ್ನು ಕೇಳಿದನು:

“ಸಂಜಯ! ಯುದ್ಧದಲ್ಲಿ ಸಂತೋಷಪಡುವ ಈ ಶೂರ ಮಹೀಪಾಲರು ಅನ್ಯೋನ್ಯರನ್ನು ಶಸ್ತ್ರಗಳಿಂದ ಹೊಡೆಯುವವರಿದ್ದಾರೆ. ಭೂಮಿಗಾಗಿ ಈ ಪಾರ್ಥಿವರು ತಮ್ಮ ಜೀವವನ್ನು ತೊರೆದವರಾಗಿ ಪರಸ್ಪರರನ್ನು ಕೊಂದು ಯಮಕ್ಷಯವನ್ನು ವೃದ್ಧಿಸದೇ ಶಾಂತರಾಗುವವರಲ್ಲ. ಭೂಮಿಯ ಐಶ್ವರ್ಯವನ್ನು ಇಚ್ಛಿಸುವ ಅವರು ಪರಸ್ಪರರನ್ನು ಸಹಿಸುತ್ತಿಲ್ಲ. ಹಾಗಿದ್ದರೆ ಭೂಮಿಗೆ ಬಹಳ ಗುಣಗಳಿರಬಹುದೆಂದು ನನಗನ್ನಿಸುತ್ತದೆ. ಅವುಗಳನ್ನು ನನಗೆ ಹೇಳು! ಬಹಳಷ್ಟು ಸಹಸ್ರ, ಲಕ್ಷ, ಕೋಟಿ, ಅರ್ಬುದ ಸಂಖ್ಯೆಗಳಲ್ಲಿ ಲೋಕವೀರರು ಕುರಜಾಂಗಲದಲ್ಲಿ ಬಂದು ಸೇರಿದ್ದಾರೆ. ಹೀಗೆ ಬಂದಿರುವವರ ದೇಶ ನಗರಗಳ ಲಕ್ಷಣಗಳ ಕುರಿತು ಸರಿಯಾಗಿ ಕೇಳಲು ಬಯಸುತ್ತೇನೆ. ಆ ಅಮಿತ ತೇಜಸ್ವಿ ವಿಪ್ರರ್ಷಿ ವ್ಯಾಸದ ಕರುಣೆಯಿಂದ ನೀನು ದಿವ್ಯ ಬುದ್ಧಿಯ

ದೀಪದ ಬೆಳಕಿನಿಂದ ಜ್ಞಾನದ ದೃಷ್ಟಿಯನ್ನು
ಪಡೆದುಕೊಂಡಿರುವೆ.”

ಆಗ ಸಂಜಯನು ಧೃತರಾಷ್ಟ್ರನಿಗೆ ಭೂಮಿಯ ಗುಣಗಳ ಕುರಿತೂ ಭಾರತವರ್ಷದ ನದೀ-ದೇಶಗಳ ಕುರಿತೂ, ವ್ಯಾಸನು ತನಗೆ ಕರುಣಿಸಿದ ದಿವ್ಯದೃಷ್ಠಿಯಿಂದ ನೋಡಿ, ವರ್ಣಿಸಿದನು.

## ಸೈನ್ಯಶಿಕ್ಷಣ

ಸೋಮಕರೊಂದಿಗೆ ಕುರುಕ್ಷೇತ್ರಕ್ಕೆ ಬಂದಿಳಿದ ಮಹಾಬಲಿ ಪಾಂಡವರು ಗೆಲ್ಲುವ ಆಸೆಯನ್ನಿಟ್ಟುಕೊಂಡು ಕೌರವರನ್ನು ಎದುರಿಸಿದರು. ವೇದಾಧ್ಯಯನ ಸಂಪನ್ನರಾದ ಅವರೆಲ್ಲರೂ ಯುದ್ಧವನ್ನು ಆನಂದಿಸುವವರಾಗಿದ್ದರು. ಯುದ್ಧದಲ್ಲಿ ಜಯವನ್ನು ಆಶಿಸುತ್ತಾ ರಣದಲ್ಲಿ ವಧೆಯನ್ನು ಎದುರಿಸಿದರು. ಆ ದುರ್ಧರ್ಷರು ಧಾರ್ತರಾಷ್ಟ್ರನ ವಾಹಿನಿಯನ್ನು ಎದುರಿಸಿ ಪೂರ್ವಾಭಿಮುಖರಾಗಿ ಪಶ್ಚಿಮಭಾಗದಲ್ಲಿ ಸೈನಿಕರೊಂದಿಗೆ ಬೀಡುಬಿಟ್ಟರು. ಯುಧಿಷ್ಠಿರನು ವಿಧಿವತ್ತಾಗಿ ಸಮಂತಪಂಚಕದ ಹೊರಗೆ ಸಹಸ್ರಾರು ಶಿಬಿರಗಳನ್ನು ಮಾಡಿಸಿದನು. ಕೇವಲ ಬಾಲಕ ವೃದ್ಧರು ಉಳಿದಿದ್ದ ಇಡೀ ಭೂಮಿಯು ಕುದುರೆ-ಪುರುಷ-ರಥ-ಕುಂಜರಗಳಿಲ್ಲದೇ ಶೂನ್ಯವಾಗಿ ತೋರಿತು. ಸೂರ್ಯನು ಸುಡುವ ಜಂಬೂದ್ವೀಪದ ಎಲ್ಲ ಕಡೆಗಳಿಂದ ಸೇನೆಗಳನ್ನು ಒಟ್ಟುಗೂಡಿಸಲಾಗಿತ್ತು. ದೇಶ, ನದಿ, ಶೈಲ, ವನಗಳನ್ನು ದಾಟಿ ಬಂದ ಸರ್ವವರ್ಣದವರೂ ಬಹುಯೋಜನ ಮಂಡಲಗಳಲ್ಲಿ ಒಟ್ಟಾಗಿದ್ದರು.

ರಾಜ ಯುದಿಷ್ಠಿರನು ಅವರ ವಾಹನಗಳೊಂದಿಗೆ ಎಲ್ಲರಿಗೂ ಅನುತ್ತಮ ಭಕ್ಷಭೋಜ್ಯಗಳನ್ನು ನಿಯೋಜಿಸಿದನು. ಅವರಿಗೆ ವಿವಿಧ ಸಂಜ್ಞೆಗಳನ್ನು ಕೊಟ್ಟನು. ಇವುಗಳನ್ನು ಹೇಳುವುದರಿಂದ ಅವರು ಪಾಂಡವರ ಕಡೆಯವರೆಂದು ಹೇಳಬಹುದಾಗಿತ್ತು. ಹಾಗೆಯೇ ಆ ಕೌರವ್ಯನು ಯುದ್ಧಕಾಲದಲ್ಲಿ ಗುರುತಿಸಲಿಕ್ಕಾಗಿ ಎಲ್ಲರಿಗೂ ಸಂಜ್ಞೆಗಳನ್ನೂ ಆಭರಣಗಳನ್ನೂ ಆಯೋಜಿಸಿದನು.

ಪಾರ್ಥರ ಧ್ವಜಾಗ್ರವನ್ನು ನೋಡಿದ ಮಹಾಮನಸ್ವಿ ಧಾರ್ತರಾಷ್ಟ್ರನು ನೆತ್ತಿಯ ಮೇಲೆ ಹಿಡಿದಿದ್ದ ಬಿಳಿಯ ಕೊಡೆಯ ನೆರಳಿನಲ್ಲಿ, ಸಹಸ್ರಾರು ಆನೆಗಳ ಮಧ್ಯೆ, ತಮ್ಮಂದಿರಿಂದ ಪರಿವಾರಿತನಾಗಿ ಸರ್ವ ಮಹೀಪಾಲರೊಂದಿಗೆ ಪಾಂಡವರ ವಿರುದ್ಧ ವ್ಯೂಹವನ್ನು ರಚಿಸಿದನು. ದುರ್ಯೋಧನನನ್ನು ನೋಡಿ ಸಂತೋಷದಿಂದ ಸರ್ವ ಪಾಂಡವಸೈನಿಕರೂ ಸಹಸ್ರಾರು ಮಹಾಶಂಖಗಳನ್ನು ಊದಿದರು ಮತ್ತು ಭೇರಿಗಳನ್ನು ಬಾರಿಸಿದರು. ಪ್ರಹೃಷ್ಟರಾಗಿದ್ದ ತಮ್ಮ ಸೇನೆಯನ್ನು ನೋಡಿ ಪಾಂಡವರೂ ವಾಸುದೇವನೂ ಹೃಷ್ಟಮನಸ್ಕರಾದರು. ಯೋಧರನ್ನು ಹರ್ಷಗೊಳಿಸುತ್ತಾ ವಾಸುದೇವ-ಧನಂಜಯರಿಬ್ಬರು ಪುರುಷವ್ಯಾಘ್ರರೂ ರಥದಲ್ಲಿ ನಿಂತು ದಿವ್ಯ ಶಂಖಗಳನ್ನು ಊದಿದರು. ಪಾಂಚಜನ್ಯ ಮತ್ತು ದೇವದತ್ತ ಇವೆರಡರ ನಿರ್ಘೋಷವನ್ನು ಕೇಳಿ ಪ್ರಾಣಿಗಳೊಂದಿಗೆ ಯೋಧರೂ ಮಲಮೂತ್ರಗಳನ್ನು ವಿಸರ್ಜಿಸಿದರು. ಗರ್ಜಿಸುವ ಸಿಂಹದ ಕೂಗನ್ನು ಕೇಳಿ ಇತರ ಮೃಗಗಳು ಭಯಪಡುವಂತೆ ಧಾರ್ತರಾಷ್ಟ್ರನ ಸೇನೆಯು ಶಂಖನಾದವನ್ನು ಕೇಳಿ

ತಲ್ಲಣಿಸಿತು. ಮೇಲೆದ್ದ ಧೂಳಿನಿಂದ ಭೂಮಿಯಲ್ಲಿ ಏನೂ ಕಾಣದಂತಾಯಿತು. ಆದಿತ್ಯನು ಮುಳುಗಿದನೋ ಎನ್ನುವಂತೆ ಸೈನ್ಯಗಳನ್ನು ಧೂಳು ಆವರಿಸಿತು. ಅಲ್ಲಿ ಕಪ್ಪು ಮೋಡಗಳು ಸೇನೆಗಳನ್ನು ಸುತ್ತುವರೆದು ರಕ್ತ-ಮಾಂಸಗಳಿಂದ ಕೂಡಿದ ಮಳೆಯನ್ನು ಸುರಿಸಿದ ಅದ್ಭುತವು ನಡೆಯಿತು. ಆಗ ಕಲ್ಲು-ಮಣ್ಣುಗಳಿಂದ ಕೂಡಿದ ಜೋರಾದ ಭಿರುಗಾಳಿಯು ಕೆಳಗಿನಿಂದ ಬೀಸಿ ಆ ಧೂಳಿನಿಂದ ಸೇನೆಗಳನ್ನು ಬಡಿದು ಹೊಡೆಯಿತು. ಯುದ್ಧಕ್ಕೆ ಸಂತೋಷದಿಂದ ಕುರುಕ್ಷೇತ್ರದಲ್ಲಿ ನಿಂತಿರುವ ಆ ಎರಡೂ ಸೇನೆಗಳೂ ಅಲ್ಲೋಲಕಲ್ಲೋಲಗೊಳ್ಳುತ್ತಿರುವ ಸಾಗರಗಳಂತೆ ತೋರಿದವು. ಅವರ ಆ ಸೇನೆಗಳ ಸಮಾಗಮವು ಯುಗಾಂತದಲ್ಲಿ ಎರಡು ಸಾಗರಗಳು ಸೇರುವಂತೆ ಅದ್ಭುತವಾಗಿತ್ತು. ಕೌರವರು ಒಟ್ಟುಸೇರಿಸಿದ ಸೇನಾಸಮೂಹಗಳಿಂದ ಬಾಲಕ ವೃದ್ಧರನ್ನು ಬಿಟ್ಟು ಭೂಮಿಯಲ್ಲಾ ಬರಿದಾಗಿತ್ತು. ಆಗ ಕುರು-ಪಾಂಡವ-ಸೋಮಕರು ಒಪ್ಪಂದವನ್ನು ಮಾಡಿಕೊಂಡು ಯುದ್ಧಗಳಲ್ಲಿ ನಿಯಮ-ಧರ್ಮಗಳನ್ನು ಸ್ಥಾಪಿಸಿದರು.

> “ಈ ಯುದ್ಧವು ಮುಗಿದನಂತರ ನಾವು ಪರಸ್ಪರರೊಡನೆ ಪ್ರೀತಿಯಿಂದಲೇ ಇರಬೇಕು. ಮೊದಲಿನಂತೆಯೇ ಪರಸ್ಪರರಲ್ಲಿ ನಡೆದು ಕೊಳ್ಳಬೇಕು. ವಾಕ್ಯುದ್ಧದಲ್ಲಿ ಪ್ರವೃತ್ತರಾದವರನ್ನು ವಾಕ್ಯುದ್ಧದಿಂದಲೇ ಎದುರಿಸಬೇಕು. ಸೇನೆಯನ್ನು ಬಿಟ್ಟು ಹೋಗುವವರನ್ನು ಎಂದೂ ಕೊಲ್ಲಬಾರದು. ರಥದಲ್ಲಿರುವವನೊಡನೆ ರಥದಲ್ಲಿರುವವನೇ, ಆನೆಯ

ಸವಾರನೊಡನೆ ಆನೆಯ ಸವಾರಿಯೇ, ಕುದುರೆಯ ಸವಾರನೊಡನೆ ಕುದುರೆಯ ಸವಾರನೇ, ಮತ್ತು ಪದಾತಿಯೊಡನೆ ಪದಾತಿಯೇ ಯುದ್ಧಮಾಡಬೇಕು. ಯೋಗ, ವೀರ್ಯ, ಉತ್ಸಾಹ ಮತ್ತು ವಯಸ್ಸಿಗೆ ತಕ್ಕಂತೆ, ಎಚ್ಚರಿಕೆಯನ್ನಿತ್ತು ಹೊಡೆಯಬೇಕು. ಸಿದ್ಧನಾಗಿರದೇ ಇರುವವನನ್ನು ಅಥವಾ ಭಯಭೀತನಾದವನ್ನು ಹೊಡೆಯಬಾರದು. ಇನ್ನೊಬ್ಬರೊಡನೆ ಹೋರಾಡುತ್ತಿರುವವನನ್ನು, ಬುದ್ಧಿ ಕಳೆದುಕೊಂಡಿರುವವನನ್ನು, ಹಿಂದೆ ಓಡಿಹೋಗುತ್ತಿರುವನನ್ನು, ಶಸ್ತ್ರವನ್ನು ಕಳೆದುಕೊಂಡವನನ್ನು, ಕವಚವಿಲ್ಲದವನನ್ನು ಎಂದೂ ಹೊಡೆಯಬಾರದು. ಸೂತರನ್ನು, ಕಟ್ಟಿದ ಪ್ರಾಣಿಗಳನ್ನು, ಶಸ್ತ್ರಗಳ ಸರಬರಾಜುಮಾಡುವವರನ್ನು, ಭೇರಿ-ಶಂಖಗಳನ್ನು ನುಡಿಸುವವರನ್ನು ಎಂದೂ ಹೊಡೆಯಬಾರದು."

ಈ ರೀತಿ ಒಪ್ಪಂದವನ್ನು ಮಾಡಿಕೊಂಡು ಕುರು-ಪಾಂಡವ-ಸೋಮಕರು ಪರಸ್ಪರರನ್ನು ವೀಕ್ಷಿಸಿ ಪರಮ ವಿಸ್ಮಿತರಾದರು. ಅಲ್ಲಿ ತಂಗಿದ ಆ ಮಹಾತ್ಮ ಪುರುಷರ್ಷಭರು ಸೈನಿಕರೊಂದಿಗೆ ಹೃಷ್ಟರೂಪರೂ ಸುಮನಸ್ಕರೂ ಆದರು.

ಸೇನೆಗಳನ್ನು ವಿಧಾನತಃ ವ್ಯೂಹಗಳಲ್ಲಿ ರಚಿಸುವಾಗ ದುರ್ಯೋಧನನು ದುಃಶಾಸನನಿಗೆ ಹೀಗೆ ಹೇಳಿದನು:

“ದುಃಶಾಸನ! ಈ ರಥಗಳನ್ನು ತಕ್ಷಣವೇ ಭೀಷ್ಮನ ರಕ್ಷಣೆಗೆ ಬಳಸು. ಎಲ್ಲ ಸೇನೆಗಳನ್ನೂ ಶೀಘ್ರವಾಗಿ ಪ್ರಚೋದಿಸು. ಬಹಳ ವರ್ಷಗಳಿಂದ ಬಯಸುತ್ತಿರುವ, ಸೇನೆಗಳೊಂದಿಗೆ ಪಾಂಡವರ ಮತ್ತು  ಕೌರವರ ಸಮಾಗಮದ ಅವಕಾಶವು ಈಗ ಬಂದೊದಗಿದೆ. ಭೀಷ್ಮನ ರಕ್ಷಣೆಯನ್ನು ಬೇರೆ ಯಾವ ಕೆಲಸವೂ ಮುಖ್ಯವಾದುದಲ್ಲವೆಂದು ತಿಳಿದಿದ್ದೇನೆ. ಏಕೆಂದರೆ ಉಳಿಸಿಕೊಂಡರೆ ಇವನು ಸೋಮಕ-ಸೃಂಜಯರೊಂದಿಗೆ ಪಾರ್ಥರನ್ನು ಸಂಹರಿಸುತ್ತಾನೆ. “ನಾನು ಶಿಖಂಡಿಯನ್ನು ಸಂಹರಿಸುವುದಿಲ್ಲ. ಅವನು ಹಿಂದೆ ಸ್ತ್ರೀಯಾಗಿದ್ದನೆಂದು ಹೇಳುತ್ತಾರೆ. ಆದುದರಿಂದ ರಣದಲ್ಲಿ ನಾನು ಅವನನ್ನು ವರ್ಜಿಸುತ್ತೇನೆ” ಎಂದು ಆ ವಿಶುದ್ಧಾತ್ಮನು ಹೇಳಿದ್ದನು. ಆದುದರಿಂದ ವಿಶೇಷವಾಗಿ ಭೀಷ್ಮನನ್ನು ರಕ್ಷಿಸಬೇಕೆಂದು ನನ್ನ ವಿಚಾರ. ನನ್ನವರೆಲ್ಲರೂ ಶಿಖಂಡಿಯ ವಧೆಗೆ ನಿಲ್ಲಲಿ. ಹಾಗೆಯೇ ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣಗಳಿಂದ ಬಂದ ಸರ್ವ ಶಸ್ತ್ರಾಸ್ತ್ರಕುಶಲರೂ ಪಿತಾಮಹನನ್ನು ರಕ್ಷಿಸಲಿ. ಸಿಂಹವು ಮಹಾಬಲಶಾಲಿಯಾಗಿದ್ದರೂ ರಕ್ಷಣೆಯಿಲ್ಲದಿದ್ದರೆ ತೋಳವು ಕೊಂದುಹಾಕುತ್ತದೆ. ನರಿಯಂತಿರುವ ಶಿಖಂಡಿಯಿಂದ ಕೊಲ್ಲಲ್ಪಡದಂತೆ ಈ ಸಿಂಹವನ್ನು ರಕ್ಷಿಸೋಣ. ದುಃಶಾಸನ! ಪಾರ್ಥನಿಂದ ಸಂರಕ್ಷಿಸಲ್ಪಟ್ಟ ಮತ್ತು ಭೀಷ್ಮನಿಂದ ವಿವರ್ಜಿತನಾದ ಶಿಖಂಡಿಯು ಗಾಂಗೇಯನನ್ನು ಕೊಲ್ಲದಹಾಗೆ

ಮಾಡು.”

ಆಗ ರಾತ್ರಿಯು ಕಳೆಯಲು “ಹೊರಡಿ! ಹೊರಡಿ!” ಎಂಬ ಭೂಮಿಪಾಲರ ಕೂಗಿನ ಮಹಾ ಶಬ್ಧವುಂಟಾಯಿತು. ಎಲ್ಲ ಕಡೆಗಳಿಂದಲೂ ಶಂಖ-ದುಂದುಭಿಗಳ ನಿರ್ಘೋಷ, ಸಿಂಹನಾದ, ಕುದುರೆಗಳ ಹೇಂಕಾರದ ಶಬ್ಧ, ರಥಚಕ್ರಗಳ ಶಬ್ಧ, ಆನೆಗಳ ಘೀಳು, ಯೋಧರ ಗರ್ಜನೆ, ಚಪಾಳೆ, ತೋಳುಗಳನ್ನು ಚಪ್ಪರಿಸುವ ಶಬ್ಧ ಹೀಗೆ ತುಮುಲವುಂಟಾಯಿತು. ಸೂರ್ಯನು ಉದಯಿಸಿದಾಗ ಕುರುಪಾಂಡವ ಸೇನೆಗಳ, ಧಾರ್ತರಾಷ್ಟ್ರರ ಮತ್ತು ಪಾಂಡವರ ಆ ಮಹಾಸೇನೆಯು ಎಲ್ಲವೂ ಏನೂ ಬಿಡದೇ ಕಂಡಿತು. ಅಲ್ಲಿ ಬಂಗಾರದಿಂದ ಅಲಂಕರಿಸಿಸಲ್ಪಟ್ಟ ಆನೆಗಳು ಮತ್ತು ರಥಗಳು ವಿದ್ಯುತ್ತಿನಿಂದೊಡಗೂಡಿದ ಮೋಡಗಳಂತೆ ಹೊಳೆದು ಕಾಣುತ್ತಿದ್ದವು. ಬಹುಸಂಖ್ಯೆಯಲ್ಲಿದ್ದ ಆ ರಥಗಳ ಸೇನೆಗಳು ನಗರಗಳಂತೆ ತೋರುತ್ತಿದ್ದವು. ಅಲ್ಲಿ ಭೀಷ್ಮನು ಪೂರ್ಣಚಂದ್ರನಂತೆ ಅತೀವವಾಗಿ ಶೋಭಿಸುತ್ತಿದ್ದನು. ಯೋಧರೂ ಕೂಡ ಧನುಸ್ಸು, ಖಡ್ಗ, ಗದೆ, ಶಕ್ತಿ, ತೋಮರ ಮೊದಲಾದ ಶುಭ್ರ ಪ್ರಹರಣಗಳನ್ನು ಹಿಡಿದು ತಮ್ಮ ತಮ್ಮ ಸೇನೆಗಳಲ್ಲಿ ನಿಂತಿದ್ದರು. ಆನೆಗಳು, ರಥಗಳು, ಪದಾತಿಗಳು ಮತ್ತು ತುರಗಗಳು ನೂರಾರು ಸಹಸ್ರಾರು ಸಂಖ್ಯೆಗಳಲ್ಲಿ ರಚಿಸಲ್ಪಟ್ಟಿದ್ದರು. ಕೌರವರಲ್ಲಿ ಮತ್ತು ಪಾಂಡವರಲ್ಲಿ ಸಹಸ್ರಾರು ಹೊಳೆಯುತ್ತಿರುವ ಬಹುವಿಧದ ಆಕಾರಗಳ ಧ್ವಜಗಳು ಹಾರಾಡುತ್ತಿರುವುದು ಕಂಡುಬಂದವು. ಕಾಂಚನದ, ಮಣಿಗಳಿಂದ ಅಲಂಕರಿಸಲ್ಪಟ್ಟ,

ಅಗ್ನಿಯಂತೆ ಬೆಳಗುತ್ತಿರುವ ಆ ಕವಚಧಾರಿ ರಾಜರ ಸಹಸ್ರಾರು ಧ್ವಜಗಳು ಮಿಂಚುತ್ತಿದ್ದವು. ಮಹೇಂದ್ರನ ಸದನಕ್ಕೆ ಕಟ್ಟಿದ ಶುಭ್ರವಾದ ಮಹೇಂದ್ರ ಧ್ವಜಗಳಂತೆ ಯುದ್ಧಕಾಂಕ್ಷಿಣರಾದ, ಸನ್ನದ್ಧರಾದ ಆ ವೀರರು ಕಾಣುತ್ತಿದ್ದರು. ಚರ್ಮದ ಕೈಬಂದಿಗಳನ್ನು ಧರಿಸಿ ಆಯುಧಗಳನ್ನು ಮೇಲೆತ್ತಿ ಹಿಡಿದು, ಮುಖಗಳನ್ನು ಮೇಲೆಮಾಡಿಕೊಂಡು ಆ ಋಷಭಾಕ್ಷ ಮನುಷ್ಯೇಂದ್ರರು ಸೇನೆಗಳ ಮುಂದೆ ನಿಂತಿದ್ದರು. ಸೌಬಲ ಶಕುನಿ, ಶಲ್ಯ, ಸೈಂಧವ ಜಯದ್ರಥ, ಅವಂತಿಯ ವಿಂದ-ಅನುವಿಂದರು, ಕಾಂಬೋಜದ ಸುದಕ್ಷಿಣ, ಶ್ರುತಾಯುಧ, ಕಲಿಂಗದ ರಾಜ ಜಯತ್ಸೇನ, ಕೌಶಲ್ಯ, ಬೃಹದ್ಬಲ, ಕೃತವರ್ಮ – ಈ ಹತ್ತು ಪುರುಷವ್ಯಾಘ್ರರು ಶೂರರು, ಪರಿಘದಂತಹ ಬಾಹುಗಳುಳ್ಳವರು, ಭೂರಿದಕ್ಷಿಣೆಗಳನ್ನಿತ್ತು ಯಜ್ಞಗಳನ್ನು ಮಾಡಿದವರು ಅಕ್ಷೌಹಿಣಿಗಳ ನಾಯಕರು. ಇವರು ಇನ್ನೂ ಇತರ ಬಹಳಷ್ಟು ದುರ್ಯೋಧನನ ವಶಾನುಗ ನೀತಿಮಂತ ಮತ್ತು ಮಹಾಬಲ ರಾಜರು ಮತ್ತು ರಾಜಪುತ್ರರು ಎಲ್ಲರೂ ಕೃಷ್ಣಾಜಿನಗಳನ್ನು ಕಟ್ಟಿ, ಧ್ವಜ, ಮಾಲೆಗಳನ್ನು ಕಟ್ಟಿಕೊಂಡು ತಮ್ಮ ತಮ್ಮ ಸೇನೆಗಳಲ್ಲಿ ಯುದ್ಧ ಸನ್ನದ್ಧರಾಗಿರುವುದು ಕಂಡಿತು. ಈ ಹತ್ತು ಸಮೃದ್ಧ ವಾಹಿನಿಗಳಲ್ಲಿದ್ದ ಅವರು ಸಂತೋಷದಿಂದ ದುರ್ಯೋಧನನಿಗಾಗಿ ಬ್ರಹ್ಮಲೋಕಕ್ಕೆ ಹೋಗಲು ದೀಕ್ಷಿತರಾಗಿದ್ದರು.

ಹನ್ನೊಂದನೆಯದು ಎಲ್ಲ ಸೇನೆಗಳ ಮುಂದೆ ಇದ್ದ, ಶಾಂತನವನು ಅಗ್ರಣಿಯಾಗಿದ್ದ ಧಾರ್ತರಾಷ್ಟ್ರೀ ಕೌರವರ ಮಹಾಸೇನೆ. ಬಿಳಿಯ

ಮುಂಡಾಸು, ಬಿಳಿಯ ಕುದುರೆ, ಬಿಳಿಯ ಕವಚಗಳಿಂದ ಆ ಅಚ್ಯುತ ಭೀಷ್ಮನು ಉದಯಿಸುತ್ತಿರುವ ಚಂದ್ರಮನಂತೆ ತೋರಿದನು. ಬಂಗಾರದ ತಾಲಧ್ವಜವಿರುವ ಬೆಳ್ಳಿಯ ರಥದ ಮೇಲೆ ನಿಂತಿದ್ದ ಭೀಷ್ಮನು ಕುರುಪಾಂಡವರಿಗೆ ಬಿಳಿಯ ಮೋಡಗಳ ಮಧ್ಯೆ ಇರುವ ಸೂರ್ಯನಂತೆ ಕಂಡನು. ಸೇನೆಗಳ ಮುಂದೆ ಇರುವ ಭೀಷ್ಮನನ್ನು ನೋಡಿ ಮಹೇಷ್ವಾಸ ಧೃಷ್ಟದ್ಯುಮ್ನನ ನಾಯಕತ್ವದಲ್ಲಿದ್ದ ಪಾಂಡವರು ಮತ್ತು ಸೃಂಜಯರು ನಡುಗಿದರು. ಬಾಯಿಕಳೆದಿದ್ದ ಮಹಾಸಿಂಹವನ್ನು ನೋಡಿ ಕ್ಷುದ್ರಮೃಗಗಳು ಹೇಗೋ ಹಾಗೆ ಧೃಷ್ಟದ್ಯುಮ್ನನ ನಾಯಕತ್ವದಲ್ಲಿದ್ದ ಎಲ್ಲರೂ ಭೀತರಾಗಿ ಪುನಃ ಪುನಃ ನಡುಗಿದರು. ಇವು ಶ್ರೀಜುಷ್ಟವಾಗಿದ್ದ ಕೌರವನ ಹನ್ನೆರಡು ವಾಹಿನಿಗಳು.

ಹಾಗೆಯೇ ಮಹಾಪುರುಷರಿಂದ ಪಾಲಿತವಾದ ಏಳು ಅಕ್ಷೋಹಿಣಿಗಳೂ ರಣರಂಗದಲ್ಲಿದ್ದವು. ಪರಸ್ಪರರನ್ನು ಎದುರಿಸಿ ಸೇರಿದ್ದ ಆ ಎರಡೂ ಸೇನೆಗಳೂ ಮಹಾ ಉನ್ಮತ್ತ ಮೊಸಳೆಗಳಿಂದ ಕೂಡಿದ ಯುಗಾಂತದ ಸಾಗರಗಳಂತೆ ಕಂಡವು. ಈ ತರಹ ಸೇನೆಗಳು ಯುದ್ಧಕ್ಕಾಗಿ ಈ ವಿಧದಲ್ಲಿ ಸೇರಿರುವುದನ್ನು ಇದಕ್ಕೂ ಮೊದಲು ನೋಡಿರಲಿಲ್ಲ ಕೇಳಿರಲಿಲ್ಲ.

ಆ ದಿನ ಸೋಮನು ಮಘಾನಕ್ಷತ್ರದಲ್ಲಿದ್ದನು. ಆಕಾಶದಲ್ಲಿ ಏಳು ಮಹಾಗ್ರಹಗಳು ಬೆಳಗುತ್ತಿರುವುದು ಕಂಡುಬರುತ್ತಿತ್ತು. ಉದಯಕಾಲದಲ್ಲಿ ಸೂರ್ಯನು ಎರಡಾಗಿದ್ದನೋ ಎನ್ನುವಂತೆ

ತೋರುತ್ತಿತ್ತು. ಅಲ್ಲದೇ ಆ ಭಾನುವು ಆಕಾಶದಲ್ಲಿ ಕಾಣಿಸಿಕೊಂಡಾಗ ಜ್ವಾಲೆಗಳೊಂದಿಗೆ ಉರಿಯುತ್ತಿರುವಂತೆ ತೋರುತ್ತಿದ್ದನು. ಉರಿದು ಬೆಳಗುತ್ತಿರುವಂತಿದ್ದ ದಿಕ್ಕುಗಳಿಂದ ಮೃತದೇಹಗಳನ್ನು ಭಕ್ಷಿಸುವ ನರಿ-ಕಾಗೆಗಳು ಕೆಳಗುರುಳುವ ಶರೀರಗಳ ಮಾಂಸ-ರಕ್ತಗಳ ಭೋಜನಗಳಿಗಾಗಿ ಕಾದು ಕೂಗುತ್ತಿರುವುದು ಕೇಳಿ ಬರುತ್ತಿತ್ತು. ಅರಿಂದಮ ವೃದ್ಧ ಕುರುಪಿತಾಮಹ ಮತ್ತು ಭರದ್ವಾಜಾತ್ಮಜರು, ಮಾಡಿಕೊಂಡ ಒಪ್ಪಂದದಂತೆ ಧೃತರಾಷ್ಟ್ರನಿಗಾಗಿ ಪಾರ್ಥರನ್ನು ಎದುರಿಸಿ ಯುದ್ಧಮಾಡುವವರಾಗಿದ್ದರೂ, ಪ್ರತಿದಿನವೂ ಬೆಳಿಗ್ಗೆ ಎದ್ದು ಮನಸ್ಸನ್ನು ಸಂಯಮದಲ್ಲಿರಿಸಿಕೊಂಡು "ಪಾಂಡುಪುತ್ರರಿಗೆ ಜಯವಾಗಲಿ!" ಎಂದು ಹೇಳುತ್ತಿದ್ದರು. ಸರ್ವಧರ್ಮವಿಶೇಷಜ್ಞ ದೇವವ್ರತನು ಮಹೀಪಾಲರನ್ನು ಕರೆದು ಈ ಮಾತನ್ನಾಡಿದನು:

> "ಕ್ಷತ್ರಿಯರೇ! ಸ್ವರ್ಗದ ಈ ಮಹಾದ್ವಾರವು ತೆರೆದುಕೊಂಡಿದೆ. ಇದರ ಮೂಲಕ ಶಕ್ರ ಮತ್ತು ಬ್ರಹ್ಮನ ಲೋಕಗಳನ್ನು ಸೇರಿ. ಹಿಂದೆ ಹೋಗಿರುವ ಹಿಂದಿನವರು ಇದೇ ದಾರಿಯಲ್ಲಿ ಹೋಗಿದ್ದರು. ಯುದ್ಧದಲ್ಲಿ ಅವ್ಯಗ್ರಮನಸ್ಕರಾಗಿ ಇರುವಂತೆ ನಿಮ್ಮನ್ನು ನೀವು ನೋಡಿಕೊಳ್ಳಿ. ಏಕೆಂದರೆ ನಾಭಾಗ, ಯಯಾತಿ, ಮಾಂಧಾತ, ನಹುಷ, ನೃಗ ಮೊದಲಾದವರು ಇಂತಹದೇ ಕರ್ಮಗಳಿಂದ ಸಂಸಿದ್ಧರಾಗಿ ಪರಮ ಗತಿಯನ್ನು ಪಡೆದರು. ಮನೆಯಲ್ಲಿ ವ್ಯಾಧಿಯಿಂದ ಮರಣಹೊಂದುವುದು ಕ್ಷತ್ರಿಯರಿಗೆ ಅಧರ್ಮ. ಯುದ್ಧದಲ್ಲಿ ನಿಧನವನ್ನು

ಹೊಂದುವುದೇ ಇವರ ಸನಾತಮ ಧರ್ಮ."

## ಕೌರವ ಸೇನಾವ್ಯೂಹ

ಭೀಷ್ಮನು ಹೀಗೆ ಹೇಳಲು ಮಹೀಪಾಲರು ಉತ್ತಮ ರಥಗಳಿಂದ ಶೋಭಿಸುತ್ತಿದ್ದ ತಮ್ಮ ತಮ್ಮ ಸೇನೆಗಳಿಗೆ ತೆರಳಿದರು. ಆದರೆ ವೈಕರ್ತನ ಕರ್ಣನು ಮಾತ್ರ ತನ್ನ ಅಮಾತ್ಯ- ಬಂಧುಗಳೊಂದಿಗೆ ಭೀಷ್ಮನ ಸಮರದಲ್ಲಿ ಶಸ್ತ್ರವನ್ನು ಕೆಳಗಿಟ್ಟನು. ಆಗ ಕರ್ಣನಿಲ್ಲದೇ ತವಕಗೊಂಡ ಧಾರ್ತರಾಷ್ಟ್ರರು ಮತ್ತು ರಾಜರು ಹತ್ತೂ ದಿಕ್ಕುಗಳನ್ನು ಸಿಂಹನಾದದಿಂದ ಮೊಳಗಿಸುತ್ತಾ ಹೊರಟರು. ಶ್ವೇತ ಛತ್ರಗಳಿಂದ, ಪತಾಕೆಗಳಿಂದ, ಧ್ವಜ, ಆನೆ, ಕುದುರೆಗಳಿಂದ, ರಥಗಳಿಂದ, ಪಾದಾತಿಗಳಿಂದ ಆ ಸೇನೆಗಳು ಶೋಭಿಸಿದವು. ಭೇರಿ-ಪಣವಗಳ ಶಬ್ಧಗಳಿಂದ, ಪಟಹಗಳ ನಿಸ್ವನಗಳಿಂದ, ರಥಗಾಲಿಗಳ ನಿನಾದಗಳಿಂದ ಮಹಿಯು ವ್ಯಾಕುಲಿತವಾಯಿತು. ಕಾಂಚನದ ಅಂಗದ-ಕೇಯೂರಗಳು ಮತ್ತು ಧನುಸ್ಸುಗಳಿಂದ ಆ ಮಹಾರಥರು ಉರಿಯುತ್ತಿರುವ ಜಂಗಮ ಪರ್ವತಗಳಂತೆ ತೋರುತ್ತಿದ್ದರು. ಮಹಾ ತಾಲವೃಕ್ಷ ಮತ್ತು ಐದು ನಕ್ಷತ್ರಗಳ ಧ್ವಜದ ಕುರುಚಮೂಪತಿ ಭೀಷ್ಮನು ವಿಮಲ ಆಕಾಶದಲ್ಲಿರುವ ಆದಿತ್ಯನಂತೆ ನಿಂತಿದ್ದನು. ಕೌರವನ ಆ ಎಲ್ಲ ಮಹೇಷ್ವಾಸ ರಾಜರೂ ಶಾಂತನವನ ಆದೇಶದಂತೆ ತಮ್ಮ ತಮ್ಮ ಸ್ಥಳಗಳಲ್ಲಿ ನಿಂತುಕೊಂಡರು.

ಶೈಬ್ಯನು ಎಲ್ಲ ರಾಜರೊಂದಿಗೆ ರಾಜಾರ್ಹವಾದ, ಪತಾಕೆಗಳುಳ್ಳ

ಮಾತಂಗರಾಜನ ಮೇಲೆ ನಡೆದನು. ಧ್ವಜದಲ್ಲಿ ಸಿಂಹದ ಬಾಲವಿದ್ದ ಪದ್ಮವರ್ಣಿ ಅಶ್ವತ್ಥಾಮನು ಸರ್ವ ಸೇನೆಗಳ ಮುಂದೆ ಹೋಗಿ ನಿಂತುಕೊಂಡನು. ಶ್ರುತಾಯು, ಚಿತ್ರಸೇನ, ಪುರುಮಿತ್ರ, ವಿವಿಂಶತಿ, ಶಲ್ಯ, ಭೂರಿಶ್ರವ, ವಿಕರ್ಣ – ಈ ಏಳು ಮಹೇಷ್ವಾಸರು, ವರವರ್ಣದ ಕವಚಗಳನ್ನು ಧರಿಸಿ ರಥಗಳಲ್ಲಿ ನಿಂತು ದ್ರೋಣಪುತ್ರನನ್ನು ಮುಂದಿಟ್ಟುಕೊಂಡು, ಭೀಷ್ಮನ ಮುಂದೆ ಸಾಗಿದರು. ಅವರ ಉತ್ತಮ ರಥಗಳಿಗೆ ಕಟ್ಟಿದ್ದ ಎತ್ತರವಾದ ಬಂಗಾರದ ಧ್ವಜಗಳು ಹೊಳೆಯುತ್ತಿದ್ದವು. ಆಚಾರ್ಯ ಮುಖ್ಯ ದ್ರೋಣನ ಬಂಗಾರದ ಧ್ವಜದಲ್ಲಿ ಕಮಂಡಲು ವಿಭೂಷಿತ ವೇದಿಯ ಜೊತೆ ಧನುಸ್ಸು ಇತ್ತು. ಅನೇಕ ಶತಸಹಸ್ರ ಸೇನೆಗಳು ಹಿಂಬಾಲಿಸುತ್ತಿರುವ ದುರ್ಯೋಧನನ ಮಹಾ ಧ್ವಜವು ಮಣಿಮಯ ಆನೆಯ ಚಿಹ್ನೆಯನ್ನು ಹೊಂದಿತ್ತು. ಅವನ ರಥದಲ್ಲಿ ಪ್ರಮುಖ ರಥಿಗಳಾದ ಪೌರವ-ಕಲಿಂಗರು, ಕಾಂಬೋಜದ ಸುದಕ್ಷಿಣ, ಕ್ಷೇಮಧನ್ವಿ ಸುಮಿತ್ರರು ನಿಂತಿದ್ದರು. ವೃಷಭದ ಚಿಹ್ನೆಯ ಧ್ವಜವಿರುವ ಮಹಾರ್ಹ ರಥದಲ್ಲಿ, ತನ್ನ ಸೇನೆಯನ್ನು ಎಳೆದುಕೊಂಡು ಹೋಗುತ್ತಿರುವಂತೆ ಮಾಗಧ ನೃಪನು ನಡೆದನು. ಶುಭ್ರ ಮೋಡಗಳಂತೆ ತೋರುತ್ತಿದ್ದ ಆ ಪೂರ್ವದವರ ಮಹಾಸೇನೆಯನ್ನು ಅಂಗಪತಿ ಮತ್ತು ಮಹಾತ್ಮ ಕೃಪರು ರಕ್ಷಿಸುತ್ತಿದ್ದರು. ವರಾಹದ ಮುಖ್ಯ ಧ್ವಜವನ್ನು ಹೊಂದಿದ ರಜತ ರಥದಲ್ಲಿ ತನ್ನ ಸೇನೆಯ ಪ್ರಮುಖನಾಗಿ ಜಯದ್ರಥನು ವಿರಾಜಿಸುತ್ತಿದ್ದನು. ಒಂದು ಲಕ್ಷ ರಥಗಳು, ಎಂಟು ಸಾವಿರ ಆನೆಗಳು ಮತ್ತು ಆರು ಸಾವಿರ ಅಶ್ವಾರೂಢರು ಅವನ

ವಶದಲ್ಲಿದ್ದರು. ಆ ಧ್ವಜಿನೀ ಪ್ರಮುಖ ಸಿಂಧುಪತಿಯಿಂದ ಪಾಲಿತಗೊಂಡ ಅನಂತ ರಥ-ಆನೆ-ಕುದುರೆಗಳಿಂದ ಕೂಡಿದ ಮಹಾಬಲವು ಶೋಭಿಸಿತು. ಅರವತ್ತು ಸಾವಿರ ರಥಗಳು ಮತ್ತು ಒಂದು ಲಕ್ಷ ಆನೆಗಳ ಸೇನೆಯ ಪತಿ ಕಲಿಂಗನು ಕೇತುಮತನೊಂದಿಗೆ ಹೊರಟನು. ಅವನ ಪರ್ವತಸಂಕಾಶ ಮಹಾಗಜಗಳು ಯಂತ್ರ-ತೋಮರ-ತೂಣೀರಗಳಿಂದ ಮತ್ತು ಶೋಭಿಸುವ ಪತಾಕೆಗಳಿಂದ ವಿರಾಜಿಸಿದವು. ಕಲಿಂಗರಾಜನಾದರೋ ಎತ್ತರ ಪಾದಪದ ಧ್ವಜ, ಶ್ವೇತ ಛತ್ರ, ನಿಷ್ಕ-ಚಾಮರಗಳಿಂದ ಶೋಭಿಸಿದನು. ಕೇತುಮಾನನೂ ಕೂಡ ವಿಚಿತ್ರ ಪರಮ ಅಂಕುಶದ ಆನೆಯನ್ನು ಏರಿ ಸಮರದಲ್ಲಿ ಮೇಘವನ್ನೇರಿದ ಭಾನುವಂತೆ ಕಂಡನು. ವಜ್ರಧರನಂತೆ ತೇಜಸ್ಸಿನಿಂದ ಬೆಳಗುತ್ತಿದ್ದ ರಾಜಾ ಭಗದತ್ತನು ಉತ್ತಮ ಆನೆಯ ಮೇಲೆ ಕುಳಿತು ಹೊರಟನು. ಆನೆಯ ಹೆಗಲಮೇಲೇರಿ ಹೋಗುತ್ತಿರುವ ಭಗದತ್ತನೊಂದಿಗೆ, ಕೇತುಮಂತನನ್ನು ಅನುಸರಿಸಿ ಅವಂತಿಯ ವಿಂದಾನುವಿಂದರು ಹೊರಟರು. ದ್ರೋಣ, ರಾಜ ಶಾಂತನವ, ಆಚಾರ್ಯಪುತ್ರ, ಬಾಹ್ಲೀಕ, ಕೃಪರಿಂತ ರಚಿತಗೊಂಡ ಆ ವ್ಯೂಹವು ಅನೇಕ ರಥಗಳಿಂದ ಕೂಡಿದ್ದು, ಆನೆಗಳು ಅದರ ಉತ್ತಮಾಂಗಗಳು, ರಾಜರು ತಲೆಗಳು, ಕುದುರೆಗಳು ಅದರ ರೆಕ್ಕೆಗಳಾಗಿದ್ದು, ಎಲ್ಲಕಡೆಯಿಂದಲೂ ಮೇಲೆ ನೋಡುತ್ತಾ ಉಗ್ರವಾಗಿ ತೋರುತ್ತಿತ್ತು.

ಆಗ ಮುಹೂರ್ತಕಾಲದಲ್ಲಿಯೇ ಉತ್ಸಾಹದಿಂದ ಬಂದಿರುವ ಯೋಧರ ಹೃದಯವನ್ನು ಕಂಪಿಸುವ ತುಮುಲ ಶಬ್ಧವು ಕೇಳಿಬಂದಿತು. ಶಂಖ-

ದುಂದುಭಿಗಳ ನಿರ್ಘೋಷದಿಂದ, ಆನೆಗಳ ಘೀಳಿನಿಂದ, ರಥಚಕ್ರಗಳ ಘೋಷದಿಂದ ವಸುಂಧರೆಯು ಅತೀವ ನೋವಿಗೊಳಗಾದಳು. ಆಗ ಕ್ಷಣದಲ್ಲಿ ಆಕಾಶ ದಿಕ್ಕುಗಳು ಕುದುರೆಗಳ ಹೇಂಕಾರ ಮತ್ತು ಯೋಧರ ಗರ್ಜನೆಗಳ ಶಬ್ಧಗಳಿಂದ ತುಂಬಿತು. ಧಾರ್ತರಾಷ್ಟ್ರರ ಮತ್ತು ಪಾಂಡವರ ಸೇನೆಗಳು ಪರಸ್ಪರರನ್ನು ಸೇರಿ ತತ್ತರಿಸಿದವು. ಅಲ್ಲಿ ಬಂಗಾರದಿಂದ ವಿಭೂಷಿತ ಆನೆ-ರಥಗಳು ಮಿಂಚಿನಿಂದ ಕೂಡಿದ ಮೋಡಗಳಂತೆ ಹೊಳೆಯುತ್ತಿದ್ದವು. ಕೌರವ ಸೇನೆಯ ಬಹುವಿಧಾಕಾರದ ಧ್ವಜಗಳು ಮತ್ತು ಕಾಂಚನಾಂಗದರ ಸುರುಳಿಗಳು ಉರಿಯುತ್ತಿರುವ ಪಾವಕನಂತೆ ತೋರಿದವು. ಕೌರವರ ಮತ್ತು ಪಾಂಡವರ ಶುಭ ಮಹೇಂದ್ರ ಧ್ವಜಗಳು ಮಹೇಂದ್ರನ ಸದನದಂತೆ ತೋರಿದವು. ಸನ್ನದ್ಧರಾಗಿದ್ದ ಪ್ರಜ್ವಲಿಸುವ ಸೂರ್ಯನಂತೆ ಪ್ರಭೆಯುಳ್ಳ ಕಾಂಚನ ಕವಚಗಳನ್ನುಳ್ಳ ಆ ವೀರರು ಪ್ರಜ್ವಲಿಸುತ್ತಿರುವ ಗ್ರಹಗಳಂತೆ ಕಂಡುಬಂದರು. ಬಣ್ಣ ಬಣ್ಣದ ಕರಬಂಧಗಳನ್ನು ಧರಿಸಿದ್ದ, ಆಯುಧಗಳನ್ನು ಎತ್ತಿಹಿಡಿದ ಋಷಭಾಕ್ಷ ಮಹೇಷ್ವಾಸ ಪತಾಕಿಗಳು ಸೇನೆಗಳ ಮುಂದೆ ಇದ್ದರು.

ಭೀಷ್ಮನನ್ನು ಹಿಂದಿನಿಂದ ಧಾರ್ತರಾಷ್ಟ್ರರಾದ ದುಃಶಾಸನ, ದುರ್ವಿಷಹ, ದುರ್ಮುಖ, ವಿವಿಂಶತಿ, ಚಿತ್ರಸೇನ ಮತ್ತು ವಿಕರ್ಣರು ರಕ್ಷಿಸುತ್ತಿದ್ದರು. ಅವರನ್ನು ಅನುಸರಿಸಿ ಸತ್ಯವ್ರತ, ಪುರುಮಿತ್ರ, ಜಯ, ಭೂರಿಶ್ರವ, ಶಲ, ಹಾಗೂ ಇಪ್ಪತ್ತು ಸಾವಿರ ರಥಗಳು ಹೋದವು. ಅಭೀಷಾಹರು, ಶೂರಸೇನರು, ಶಿಬಿಗಳು, ವಸಾತಯರು, ಶಾಲ್ವರು,

ಮತ್ಸ್ಯರು, ಅಂಬಷ್ಠರು, ತ್ರಿಗರ್ತರು, ಕೇಕಯರು, ಸೌವೀರರು, ಕಿತವರು, ಪ್ರಾಚ್ಯರು, ಪತೀಚ್ಯರು, ಉದೀಚ್ಯರು, ಮಾಲವರು – ಈ ಹನ್ನೆರಡು ಜನಪದಗಳು, ಎಲ್ಲರೂ ತನುವನ್ನು ತ್ಯಜಿಸಿದ ಶೂರರು, ಮಹಾ ರಥಗುಂಪುಗಳೊಂದಿಗೆ ಪಿತಾಮಹನನ್ನು ರಕ್ಷಿಸುತ್ತಿದ್ದರು. ಹತ್ತು ಸಾವಿರ ತರಸ್ವಿ ಆನೆಗಳ ಸೇನೆಯೊಂದಿಗೆ ನೃಪತಿ ಮಾಗಧನು ಆ ಸೇನೆಯನ್ನು ಅನುಸರಿಸಿದನು.

ಸೇನೆಗಳ ಮಧ್ಯೆ ರಥಗಳ ಚಕ್ರಗಳನ್ನು ಕಾಯುವವರು ಮತ್ತು ಆನೆಗಳ ಪಾದಗಳನ್ನು ರಕ್ಷಿಸುತ್ತಿದ್ದವರ ಸಂಖ್ಯೆಯೇ ೬೦ ಲಕ್ಷವಾಗಿತ್ತು. ದನುಸ್ಸು, ಖಡ್ಗ ತೋಮರಗಳನ್ನು ಹಿಡಿದು ಸೇನೆಗಳ ಮುಂದೆ ಹೋಗುತ್ತಿದ್ದ ಪದಾತಿಗಳ ಸಂಖ್ಯೆಯು ಅನೇಕ ಲಕ್ಷಗಳಾಗಿತ್ತು. ಅವರು ಉಗುರು-ಪ್ರಾಸಗಳನ್ನು ಬಳಸಿ ಹೋರಾಡುತ್ತಿದ್ದರು. ಹನ್ನೊಂದು ಅಕ್ಷೌಹಿಣಿಯ ದುರ್ಯೋಧನನ ಸೇನೆಯು ಗಂಗೆಯಿಂದ ಅಗಲಿದ ಯಮುನೆಯಂತೆ ತೋರಿತು.

## ಪಾಂಡವ ಸೇನಾವ್ಯೂಹ

ಧಾರ್ತರಾಷ್ಟ್ರರ ಸೇನೆಗಳು ವ್ಯೂಹಗೊಂಡಿದನ್ನು ನೋಡಿದ ಪಾಂಡವ ಧರ್ಮಾತ್ಮ ಧರ್ಮರಾಜನು ಧನಂಜಯನಿಗೆ ಹೇಳಿದನು:

> “ಅಯ್ಯಾ! ಮಹರ್ಷಿ ಬೃಹಸ್ಪತಿಯ ಮಾತುಗಳಂತೆ ಕಡಿಮೆಯಿರುವ ಸೇನೆಯು ಒಂದಕ್ಕೊಂದು ತಾಗಿಕೊಂಡು ಸಂಹತವಾಗಿರಬೇಕು. ದೊಡ್ಡ ಸೇನೆಯು ಬೇಕಾದಷ್ಟು

ವಿಸ್ತಾರವಾಗಿ ಹರಡಿಕೊಳ್ಳಬಹುದು. ದೊಡ್ಡ ಸೇನೆಯೊಂದಿಗೆ ಯುದ್ಧಮಾಡುವಾಗ ಸಣ್ಣಸೇನೆಯ ಮುಖವು ಸೂಚಿಯ ಮೊನೆಯಂತಿರಬೇಕು. ಹೇಗೆ ನೋಡಿದರೂ ನಮ್ಮ ಸೇನೆಯು ಶತ್ರುಸೈನ್ಯಕ್ಕಿಂತ ಸಣ್ಣದು. ಮಹರ್ಷಿಯ ಈ ಮಾತನ್ನು ತಿಳಿದುಕೊಂಡು ವ್ಯೂಹವನ್ನು ರಚಿಸು."

ಧರ್ಮರಾಜನನ್ನು ಕೇಳಿ ಫಲ್ಗುಣನು ಉತ್ತರಿಸಿದನು.

"ರಾಜನ್! ವಜ್ರವೆಂಬ ಹೆಸರಿನಿಂದ ಕರೆಯಲ್ಪಡುವ, ವಜ್ರಪಾಣಿಯೇ ಹೇಳಿಕೊಟ್ಟಿರುವ, ಪರಮ ದುರ್ಜಯವಾದ ವಜ್ರವೆಂಬ ವ್ಯೂಹವನ್ನು ನಿನಗೆ ರಚಿಸುತ್ತೇನೆ. ಒಡೆದುಹೋದ ಭಿರುಗಾಳಿಯಂತೆ ಮುನ್ನುಗ್ಗುವ, ಸಮರದಲ್ಲಿ ಶತ್ರುಗಳಿಗೆ ದುಃಸ್ಸಹನಾದ, ಪ್ರಹರಿಗಳಲ್ಲಿ ಶ್ರೇಷ್ಠ ಭೀಮನು ಇದರ ಮುಂದೆ ನಿಂತು ಹೋರಾಡುತ್ತಾನೆ. ಆ ಯುದ್ಧದ ಉಪಾಯಗಳನ್ನು ಕಂಡುಕೊಂಡಿರುವ ಆ ಪುರುಷಸತ್ತಮನು ತನ್ನ ತೇಜಸ್ಸಿನಿಂದಲೇ ರಿಪು ಸೇನೆಗಳನ್ನು ಸದೆಬಡಿಯುತ್ತಾ ಮುಂದೆ ನಮ್ಮ ಅಗ್ರಣಿಯಾಗಿ ಹೋರಾಡುತ್ತಾನೆ. ಅವನನ್ನು ನೋಡಿ ದುರ್ಯೋಧನನ ನಾಯಕತ್ವದಲ್ಲಿರುವ ಪಾರ್ಥಿವರೆಲ್ಲರೂ ಸಿಂಹನನ್ನು ಕಂಡ ಕ್ಷುದ್ರಮೃಗಗಳಂತೆ ಸಂಭ್ರಾಂತರಾಗಿ ಹಿಂದೆಸರಿಯುತ್ತಾರೆ. ನಾವೆಲ್ಲರೂ ಗೋಡೆಯಂತಿರುವ ಭೀಮನ ಹಿಂದೆ, ವಜ್ರಪಾಣಿಯ ಹಿಂದೆ

ಅಮರರು ಹೇಗೋ ಹಾಗೆ ಅಭಯರಾಗಿ ಆಶ್ರಯ ಪಡೆಯೋಣ. ಆ ಉಗ್ರಕರ್ಮಿ ಸಂಕ್ರುದ್ಧ ವೃಕೋದರನನ್ನು ನೋಡಿ ಉಸಿರನ್ನು ಹಿಡಿದುಕೊಂಡಿರಬಹುದಾದ ಪುರುಷರು ಈ ಲೋಕದಲ್ಲಿ ಯಾರೂ ಇಲ್ಲ. ವಜ್ರಸಾರದಿಂದ ತುಂಬಿದ ದೃಢವಾದ ಗದೆಯನ್ನು ಬೀಸಿ ಭೀಮಸೇನನು ಮಹಾವೇಗದಿಂದ ನಡೆದು ಸಮುದ್ರವನ್ನು ಕೂಡ ಬತ್ತಿಸಬಲ್ಲನು. ಕೇಕಯ ಧೃಷ್ಟಕೇತು ಮತ್ತು ಚೇಕಿತಾನರು ಅಮಾತ್ಯರೊಂದಿಗೆ ನಿನ್ನನ್ನು ನೋಡಿಕೊಳ್ಳಲು ನಿಂತಿರುತ್ತಾರೆ.”

ಹಾಗೆ ಹೇಳಿದ ಪಾರ್ಥನನ್ನು ಸರ್ವಸೇನೆಗಳೂ ಅನುಕೂಲಕರ ಮಾತುಗಳಿಂದ ರಣರಂಗದಲ್ಲಿ ಗೌರವಿಸಿದರು. ಹೇಳಿದ ಹಾಗೆಯೇ ಧನಂಜಯನು ಮಾಡಿದನು. ಆ ಸೇನೆಗಳನ್ನು ವ್ಯೂಹದಲ್ಲಿ ರಚಿಸಿ ಫಲ್ಗುನನು ಮುಂದುವರೆದನು.

ಕುರುಗಳ ಸೇನೆಯನ್ನು ಗುರಿಯನ್ನಾಗಿಟ್ಟುಕೊಂಡು ಹೋಗುತ್ತಿದ್ದ ಪಾಂಡವರ ಮಹಾಸೇನೆಯು ನೆರೆಬಂದ ಗಂಗೆಯು ಹರಿದು ಬರುತ್ತಿರುವಂತೆ ಕಂಡಿತು. ಅವರ ಅಗ್ರಣಿಗಳಾಗಿ ಭೀಮಸೇನ, ಧೃಷ್ಟದ್ಯುಮ್ನ, ನಕುಲ, ಸಹದೇವರು ಮತ್ತು ಧೃಷ್ಟಕೇತು ಇದ್ದರು. ಅವರನ್ನು ಹಿಂದಿನಿಂದ ರಕ್ಷಿಸುತ್ತ, ಒಂದು ಅಕ್ಷೌಹಿಣೀ ಸೇನೆಯೊಂದಿಗೆ, ಸಹೋದರರು ಮತ್ತು ಮಕ್ಕಳನ್ನು ಕೂಡಿಕೊಂಡು ರಾಜ ವಿರಾಟನು ಹೊರಟನು. ಭೀಮನ ಚಕ್ರಗಳನ್ನು ಮಾದ್ರೀಪುತ್ರರು ರಕ್ಷಿಸುತ್ತಿದ್ದರು.

ಸೌಭದ್ರಿಯೊಂದಿಗೆ ದ್ರೌಪದೇಯರು ಆ ತರಸ್ವಿನಿಯನ್ನು ಹಿಂದಿನಿಂದ ರಕ್ಷಿಸುತ್ತಿದ್ದರು. ಅವರನ್ನು ಧೃಷ್ಟದ್ಯುಮ್ನನು ಪ್ರಭದ್ರಕ ರಥಮುಖ್ಯರ, ಶೂರರ ಸೇನೆಯೊಂದಿಗೆ ರಕ್ಷಿಸಿದನು. ಅವರ ನಂತರ ಅರ್ಜುನನಿಂದ ರಕ್ಷಿತನಾಗಿ ಶಿಖಂಡಿಯು ಭೀಷ್ಮನ ವಿನಾಶಕ್ಕೆ ಮುಂದುವರೆದನು. ಅರ್ಜುನನ ಹಿಂದೆ ಮಹಾರಥಿ ಯುಯುಧಾನನಿದ್ದನು. ಅರ್ಜುನನ ರಥಚಕ್ರಗಳನ್ನು ಪಾಂಚಾಲರಾದ ಯುಧಮನ್ಯು-ಉತ್ತಮೌಜಸರು ರಕ್ಷಿಸುತ್ತಿದ್ದರು. ಸೇನೆಯ ಮಧ್ಯೆ ಕುಂತೀಪುತ್ರ ರಾಜಾ ಯುಧಿಷ್ಠಿರನು ಅಚಲವಾಗಿರುವ ಪರ್ವತಗಳು ಚಲಿಸುತ್ತಿರುವವೋ ಎಂಬಂತಿದ್ದ ಮದಿಸಿದ ಬಹಳಷ್ಟು ಆನೆಗೊಳಡನಿದ್ದನು. ಮಹಾಮನಸ್ವಿ ಪರಾಕ್ರಮೀ ಪಾಂಚಾಲ್ಯ ಯಜ್ಞಸೇನನು ಪಾಂಡವನಿಗಾಗಿ ಒಂದು ಅಕ್ಷೌಹಿಣೀ ಸೇನೆಯೊಂದಿಗೆ ವಿರಾಟನನ್ನು ಅನುಸರಿಸಿ ಹೋಗುತ್ತಿದ್ದನು. ಆ ರಾಜರ ರಥಗಳ ಮೇಲೆ ನಾನಾ ಚಿಹ್ನೆಗಳನ್ನು ಧರಿಸಿದ, ಉತ್ತಮ ಕನಕ ಭೂಷಣಗಳ ಮತ್ತು ಆದಿತ್ಯ-ಚಂದ್ರರ ಕಾಂತಿಯುಳ್ಳ ಮಹಾಧ್ವಜಗಳಿದ್ದವು.

ಅವರು ಮುಂದುವರೆದ ನಂತರ ಮಹಾರಥಿ ಧೃಷ್ಟದ್ಯುಮ್ನನು ಸಹೋದರರು ಮತ್ತು ಪುತ್ರರೊಡಗೂಡಿ ಯುಧಿಷ್ಠಿರನನ್ನು ಹಿಂದಿನಿಂದ ರಕ್ಷಿಸಿದನು. ಕೌರವರ ಮತ್ತು ಪಾಂಡವರ ರಥಗಳಲ್ಲಿರುವ ವಿವಿಧ ಧ್ವಜಗಳಲ್ಲಿ ಅರ್ಜುನನೊಬ್ಬನದೇ ಧ್ವಜದಲ್ಲಿದ್ದ ಮಹಾಕಪಿಯು ಎದ್ದು ಕಾಣಿಸುತ್ತಿದ್ದನು. ಭೀಮಸೇನನ ರಕ್ಷಣೆಗೆಂದು ಖಡ್ಗ-ಶಕ್ತಿ-ಮುಷ್ಟಿಪಾಣಿಗಳಾದ ಅನೇಕ ಶತಸಹಸ್ರ ಪದಾತಿಗಳು ಮುಂದೆ

ಹೋಗುತ್ತಿದ್ದರು. ಮದದ ನೀರು ಸುರಿಯುತ್ತಿರುವ, ಶೂರ, ಹೇಮಮಯಜಾಲಗಳಿಂದ ಬೆಳಗುತ್ತಿರುವ ಪರ್ವತಗಳಂತಿದ್ದ, ಮಳೆಸುರಿಸುವ ಮೋಡಗಳಂತಿದ್ದ, ಕಮಲಗಳ ಸುಗಂಧವನ್ನು ಸೂಸುತ್ತಿದ್ದ, ಚಲಿಸುತ್ತಿರುವ ಪರ್ವತಗಳಂತಿದ್ದ ಹತ್ತು ಸಾವಿರ ಆನೆಗಳು ರಾಜನನ್ನು ಹಿಂಬಾಲಿಸಿದವು. ಪರಿಘದಂತಿದ್ದ ಉಗ್ರ ಗದೆಯನ್ನು ಬೀಸುತ್ತ ದುರಾದರ್ಷ ಮಹಾಮನಸ್ವಿ ಭೀಮಸೇನನು ಮಹಾ ಸೇನೆಯನ್ನು ಪುಡಿಮಾಡುವಂತಿದ್ದನು. ಕಿರಣಮಾಲಿನಿ ಸುಡುತ್ತಿರುವ ಸೂರ್ಯನನ್ನು ನೋಡುವುದು ಹೇಗೆ ಕಷ್ಟವೋ ಹಾಗೆ ಸರ್ವ ಯೋಧರೂ ಅವನನ್ನು ನೇರವಾಗಿ ನೋಡಲು ಅಶಕ್ಯರಾದರು. ಸರ್ವತೋಮುಖವಾದ, ಭೇದಿಸಲು ಕಷ್ಟವಾದ, ಚಾಪವಿದ್ಯುಧ್ವಜದ ವಜ್ರವೆಂಬ ಹೆಸರಿನ ಈ ವ್ಯೂಹವನ್ನು ಘೋರ ಗಾಂಡೀವಧನ್ವಿಯು ರಕ್ಷಿಸುತ್ತಿದ್ದನು. ಹೀಗೆ ಕೌರವ ಸೇನೆಗೆ ಪ್ರತಿವ್ಯೂಹವನ್ನು ರಚಿಸಿ ಪಾಂಡವರು ಕಾಯುತ್ತಿದ್ದರು. ಪಾಂಡವರಿಂದ ರಕ್ಷಿತವಾದ ಆ ಸೇನೆಯು ಮನುಷ್ಯ ಲೋಕದಲ್ಲಿ ಅಜೇಯವಾಗಿದ್ದಿತು.

ಸೇನೆಗಳು ಸಂಧ್ಯೆಯಲ್ಲಿ ಸೂರ್ಯೋದಯವನ್ನು ಕಾಯುತ್ತಿರಲು ಮೋಡಗಳಿಲ್ಲದ ಆಕಾಶದಿಂದ ತುಂತುರು ಹನಿಗಳು ಬಿದ್ದವು ಮುತ್ತು ಗುಡುಗಿನ ಶಬ್ಧವು ಕೇಳಿಬಂದಿತು. ಎಲ್ಲ ಕಡೆಯಿಂದಲೂ ಒಣ ಹವೆಯು ಬೀಸತೊಡಗಿತು. ಅದು ನೆಲದಿಂದ ಮೊನಚಾದ ಕಲ್ಲಿನ ಹರಳುಗಳನ್ನು ಮೇಲೆಬ್ಬಿಸಿ ಹರಡಿತು. ಮತ್ತು ದಟ್ಟವಾದ ಧೂಳು ಮೇಲೆದ್ದು ಕತ್ತಲೆ ಆವರಿಸಿತು. ಪೂರ್ವದಲ್ಲಿ ಮಹಾ ಉಲ್ಕೆಗಳು ಬಿದ್ದವು ಮತ್ತು

ಉದಯಿಸುತ್ತಿರುವ ಸೂರ್ಯನನ್ನು ಹೊಡೆದು ಮಹಾ ಶಬ್ಧದೊಂದಿಗೆ ಒಡೆದು ಚೂರಾಗುತ್ತಿದ್ದವು. ಸೇನೆಗಳು ಈ ರೀತಿ ಸಜ್ಜಾಗಿರುವಾಗ ಕಾಂತಿಯನ್ನು ಕಳೆದುಕೊಂಡ ಸೂರ್ಯನು ಉದಯಿಸಿದನು. ಶಬ್ಧದೊಂದಿಗೆ ಭೂಮಿಯು ನಡುಗಿ ಬಿರಿಯಿತು. ಆಗ ಬಹಳಷ್ಟು ಗುಡುಗಿನ ಶಬ್ಧವು ಎಲ್ಲ ಕಡೆಗಳಿಂದ ಕೇಳಿ ಬಂದಿತು. ಧೂಳು ಎಷ್ಟು ದಟ್ಟವಾಗಿತ್ತೆಂದರೆ ಏನೂ ಕೂಡ ಕಾಣುತ್ತಿರಲಿಲ್ಲ. ಕಿಂಕಿಣೀಜಾಲಗಳಿಂದ ಕಟ್ಟಲ್ಪಟ್ಟ, ಕಾಂಚನ ಮಾಲೆಗಳಿಂದ ಅಲಂಕರಿಸಲ್ಪಟ್ಟ, ಆದಿತ್ಯ ಸಮ ತೇಜಸ್ಸುಳ್ಳ ಆ ಎತ್ತರ ಧ್ವಜಗಳು ಗಾಳಿಯ ವೇಗಕ್ಕೆ ಅಲುಗಾಡಿ ತಾಲವೃಕ್ಷದ ಅಡವಿಯಂತೆ ಎಲ್ಲವೂ ಝಣಝಣಿಸಿದವು. ಹೀಗೆ ಆ ಯುದ್ಧನಂದಿನ ಪುರುಷವ್ಯಾಘ್ರ ಪಾಂಡವರು ದುರ್ಯೋಧನನ ವಾಹಿನಿಗೆ ಪ್ರಹಿವ್ಯೂಹವನ್ನು ರಚಿಸಿ ವ್ಯವಸ್ಥಿತರಾದರು. ಗದಾಪಾಣಿಯಾಗಿ ಮುಂದೆ ನಿಂತಿದ್ದ ಭೀಮಸೇನನು ಯೋಧರ ಮಜ್ಜೆಗಳನ್ನೇ ಹೀರಿಕೊಳ್ಳುತ್ತಾನೋ ಎಂದು ತೋರುತ್ತಿದ್ದನು.

ಎರಡೂ ಸೇನೆಗಳ ವ್ಯೂಹಗಳೂ ಸಮನಾಗಿ ಹೃಷ್ಟರೂಪವಾಗಿದ್ದವು. ಎರಡೂ ಸೇನೆಗಳೂ ಸಮನಾಗಿ ವನರಾಜಿಯಂತೆ ಪ್ರಕಾಶಿತರಾಗಿ ಸುಂದರವಾಗಿದ್ದವು. ಅವೆರಡೂ ಆನೆ-ರಥ-ಅಶ್ವಗಳಿಂದ ಪೂರ್ಣಗೊಂಡಿದ್ದವು. ಎರಡೂ ಸೇನೆಗಳೂ ದೊಡ್ಡವಾಗಿದ್ದವು ಮತ್ತು ಭೀಮರೂಪಿಗಳಾಗಿದ್ದವು. ಎರಡೂ ಒಬ್ಬರನ್ನೊಬ್ಬರು ಸಹಿಸಿಕೊಳ್ಳಲಾರದಂತಿದ್ದವು. ಎರಡೂ ಕಡೆಯವರು ಸ್ವರ್ಗವನ್ನೇ ಜಯಿಸಬಲ್ಲರೋ ಎಂದು ತೋರುತ್ತಿದ್ದವು. ಎರಡೂ ಕಡೆಯವರೂ

ಸತ್ಪುರುಷರಿಂದ ರಕ್ಷಿಸಲ್ಪಟ್ಟಿತ್ತು. ಧಾರ್ತರಾಷ್ಟ್ರರ ಕೌರವ ಸೇನೆಯು ಪಶ್ಚಿಮಕ್ಕೆ ಮುಖಮಾಡಿತ್ತು. ಪಾಂಡವರು ಪೂರ್ವದಿಕ್ಕಿಗೆ ಮುಖಮಾಡಿ ಯುದ್ಧಮಾಡುವವರಿದ್ದರು. ಕೌರವರದ್ದು ದೈತ್ಯೇಂದ್ರನ ಸೇನೆಯಂತಿತ್ತು. ಪಾಂಡವರದ್ದು ದೇವೇಂದ್ರಸೇನೆಯಂತಿತ್ತು. ಪಾಂಡವರ ಹಿಂದಿನಿಂದ ಗಾಳಿಯು ಬೀಸಿತು, ಧಾರ್ತರಾಷ್ಟ್ರರಲ್ಲಿ ಶ್ವಾಪದಗಳು ಬೊಗಳಿದವು. ದುರ್ಯೋಧನನ ಆನೆಗಳು ಅವರ ಗಜೇಂದ್ರರ ತೀವ್ರ ಮದಗಂಧವನ್ನು ಸಹಿಸಲಾರದೇ ಹೋದವು.

ಕುರುಗಳ ಮಧ್ಯದಲ್ಲಿ ದುರ್ಯೋಧನನು ಮದವೊಡೆದ, ಬಲವಾದ ಜಾತಿಯ, ಪದ್ಮವರ್ಣದ ಆನೆಯ ಮೇಲೆ ಸುವರ್ಣದ ಕಕ್ಷೆಯಲ್ಲಿ ಕುಳಿತಿದ್ದನು. ಬಂದಿ-ಮಾಗಧರು ಅವನನ್ನು ಸಂಸ್ತುತಿಸುತ್ತಿದ್ದರು. ಬಂಗಾರದ ಸರಪಳಿಯಿದ್ದ ಚಂದ್ರಪ್ರಭೆಯ ಶ್ವೇತಛತ್ರವು ಅವನ ಶಿರದ ಮೇಲೆ ಹೊಳೆಯುತ್ತಿತ್ತು. ಅವನನ್ನು ಸತ್ತುವರೆದು ಗಾಂಧಾರರಾಜ ಶಕುನಿಯು ಪರ್ವತೀಯರು ಮತ್ತು ಗಾಂಧಾರರೊಂದಿಗೆ ರಕ್ಷಿಸುತ್ತಿದ್ದನು. ಸರ್ವಸೇನೆಗಳ ಅಗ್ರಸ್ಥಾನದಲ್ಲಿದ್ದ ವೃದ್ಧ ಭೀಷ್ಮನು ಶ್ವೇತ ಛತ್ರ, ಶ್ವೇತ ಧನುಸ್ಸು ಮತ್ತು ಶಂಖಗಳು, ಶ್ವೇತ ಕಿರೀಟ, ಶ್ವೇತ ಧ್ವಜ, ಮತ್ತು ಶ್ವೇತ ಅಶ್ವಗಳೊಂದಿಗೆ ಶ್ವೇತಶೈಲದಂತೆ ಪ್ರಕಾಶಿಸುತ್ತಿದ್ದನು. ಅವನ ಸೇನೆಯಲ್ಲಿ ಧೃತರಾಷ್ಟ್ರನ ಎಲ್ಲ ಮಕ್ಕಳೂ, ಬಾಹ್ಲೀಕ ದೇಶದ ನಾಯಕ ಶಲ, ಅಂಬಷ್ಠರೆಂಬ ಕ್ಷತ್ರಿಯರು, ಹಾಗೆಯೇ ಸಿಂಧು ಮತ್ತು ಪಂಚನದಿಗಳ ಶೂರ ಸೌವೀರರು ಇದ್ದರು. ಸರ್ವರಾಜರ ಗುರು ಮಹಾಬಾಹು ದೀನಸತ್ವ ಮಹಾತ್ಮ ದ್ರೋಣನು ಕೆಂಪು ಕುದುರೆಗಳನ್ನು

ಕಟ್ಟಿದ್ದ ಬಂಗಾರದ ರಥದಲ್ಲಿ ಹಿಂದಿನಿಂದ ಇಂದ್ರನಂತೆ ರಕ್ಷಿಸುತ್ತಿದ್ದನು. ಎಲ್ಲ ಸೇನೆಗಳ ಮಧ್ಯೆ ವಾರ್ದ್ಧಕ್ಷತ್ರಿ, ಭೂರಿಶ್ರವ, ಪುರುಮಿತ್ರ, ಜಯ, ಶಾಲ್ವ, ಮತ್ಸ್ಯರು, ಕೇಕಯ ಸಹೋದರರು ಎಲ್ಲರೂ ತಮ್ಮ ಆನೆಗಳ ಸೇನೆಗಳೊಂದಿಗೆ ಹೋರಾಡುತ್ತಿದ್ದರು. ಮಹಾತ್ಮ ಶಾರದ್ವತ ಮಹೇಷ್ವಾಸ ಚಿತ್ರಯೋಧೀ ಗೌತಮನು ಶಕ-ಕಿರಾತ-ಯವನ-ಪಹ್ಲವರ ಸೇನೆಗಳೊಂದಿಗೆ ಉತ್ತರ ದಿಕ್ಕಿಗೆ ಹೋಗಿ ನೆಲೆಸಿದನು. ಮಹಾರಥರಾದ ಅಂಧಕ-ವೃಷ್ಣಿ-ಭೋಜ-ಸೌರಾಷ್ಟ್ರರಿಂದ ಉತ್ತಮ ಆಯುಧಗಳನ್ನು ಹೊಂದಿದ್ದ ಮಹಾಬಲವು ಕೃತವರ್ಮನಿಂದ ರಕ್ಷಿತಗೊಂಡು ಕೌರವ ಸೇನೆಯ ದಕ್ಷಿಣ ದಿಕ್ಕಿಗೆ ಹೋಗಿ ನಿಂತಿತು. ಮೃತ್ಯುವಾಗಲೀ ಜಯವಾಗಲೀ ಅರ್ಜುನನಿಂದಲೇ ಎಂದು ಸೃಷ್ಟಿಸಲ್ಪಟ್ಟಿರುವ ಸಂಶಪ್ತಕರೆಂಬ ಹತ್ತು ಸಾವಿರ ಕೃತಾಸ್ತ್ರ ರಥಿಕರು ಅರ್ಜುನನ್ನೇ ಎದುರಿಸಿಸಲು ಶೂರರಾದ ತ್ರಿಗರ್ತರೊಂದಿಗೆ ಹೊರಟರು.

ಕೌರವ ಸೇನೆಯಲ್ಲಿ ನೂರು ಸಾವಿರ ಆನೆಗಳಿದ್ದವು. ಪ್ರತಿ ಆನೆಗೆ ನೂರು ರಥಿಕರನ್ನೂ, ಒಂದು ರಥಕ್ಕೆ ನೂರು ಅಶ್ವಯೋಧರನ್ನೂ ಇಡಲಾಗಿತ್ತು. ಪ್ರತಿ ಅಶ್ವಯೋಧನಿಗೂ ಹತ್ತು ಧಾನುಷ್ಕರಿದ್ದರು. ಪ್ರತಿ ಧಾನುಷ್ಕಕ್ಕೂ ಹತ್ತು ಚರ್ಮಿಗಳಿದ್ದರು. ಹೀಗೆ ಕೌರವ ಸೇನೆಯನ್ನು ಬೀಷ್ಮನು ವ್ಯೂಹವನ್ನಾಗಿ ರಚಿಸಿದ್ದನು. ದಿವಸ ದಿವಸವೂ ಅಗ್ರಣೀ ಶಾಂತನವ ಭೀಷ್ಮನು ಮಾನುಷ, ದೇವ, ಗಾಂಧರ್ವ, ಅಸುರ ವ್ಯೂಹಗಳನ್ನು ರಚಿಸುತ್ತಿದ್ದನು. ವಿಪುಲವಾಗಿ ಮಹಾರಥರಿಂದ ಕೂಡಿದ, ಘೋರಗರೆಯುವ ಸಮುದ್ರದಂತಿರುವ ಧಾರ್ತರಾಷ್ಟ್ರರ ಸೇನೆಯು

ಭೀಷ್ಮನಿಂದ ವ್ಯೂಹಗೊಂಡು ಪಶ್ಚಿಮ ಮುಖವಾಗಿ ಯುದ್ಧಕ್ಕೆ ನಿಂತಿತು. ಆ ಸೇನೆಯು ಅನಂತವಾಗಿಯೂ ಭಯಂಕರವಾಗಿಯೂ ತೋರುತ್ತಿತ್ತು. ಆದರೆ ಕೇಶವ-ಅರ್ಜುನರು ನೇತಾರರಾಗಿದ್ದ ಪಾಂಡವರ ಸೇನೆಯು ಅತ್ಯಂತ ದೊಡ್ಡದಾಗಿ, ಗೆಲ್ಲಲಸಾಧ್ಯವಾಗಿ ತೋರುತ್ತಿತ್ತು.

## ಯುಧಿಷ್ಠಿರ-ಅರ್ಜುನರ ಸಂವಾದ

ಯುದ್ಧಸನ್ನದ್ಧವಾಗಿದ್ದ ಧಾರ್ತರಾಷ್ಟ್ರರ ಅತಿ ದೊಡ್ಡ ಸೇನೆಯನ್ನು ನೋಡಿ ಕುಂತೀಪುತ್ರ ರಾಜಾ ಯುಧಿಷ್ಠಿರನಿಗೆ ವಿಷಾದವುಂಟಾಯಿತು. ಭೀಷ್ಮನು ರಚಿಸಿದ್ದ ಆ ಅಭೇದ್ಯ ವ್ಯೂಹವನ್ನು ನೋಡಿ ಪಾಂಡವನು ಅದು ಅಭೇದ್ಯವೆಂದು ಅರಿತು ವಿಷಣ್ಣನಾಗಿ ಅರ್ಜುನನಿಗೆ ಹೇಳಿದನು:

> “ಧನಂಜಯ! ಮಹಾಬಾಹೋ! ಯಾರ ಯೋದ್ಧನು ಪಿತಾಮಹನೋ ಆ ಧಾರ್ತರಾಷ್ಟ್ರರನ್ನು ಯುದ್ಧದಲ್ಲಿ ನಾವು ಹೇಗೆ ಎದುರಿಸಬಲ್ಲೆವು? ಆ ಅಮಿತ್ರಕರ್ಶಿ, ಭೂರಿತೇಜಸ ಭೀಷ್ಮನು ಶಾಸ್ತ್ರಗಳಲ್ಲಿರುವಂತೆ ವಿಧಿವತ್ತಾಗಿ ರಚಿಸಿರುವ ಈ ವ್ಯೂಹವು ಅಭೇದ್ಯವಾದುದು. ನಮ್ಮ ಈ ಸೇನೆಯಿಂದ ನನಗೆ ಸಂಶಯಬಂದೊದಗಿದೆ. ಹೇಗೆ ತಾನೇ ನಾವು ಈ ಮಹಾ ವ್ಯೂಹವನ್ನು ಎದುರಿಸಿ ವಿಜಯವನ್ನು ಪಡೆಯಬಹುದು?”

ಆಗ ಅಮಿತ್ರಹ ಅರ್ಜುನನು ಕೌರವ ಸೇನೆಯನ್ನು ನೋಡಿಯೇ ದುಃಖಿತನಾದ ಯುಧಿಷ್ಠಿರನಿಗೆ ಹೇಳಿದನು:

> “ವಿಶಾಂಪತೇ! ಗುಣಯುಕ್ತರಾದ ಶೂರರನ್ನು ಅಧಿಕ

ಸಂಖ್ಯೆಯಲ್ಲಿದ್ದರೂ ಕಡಿಮೆ ಸಂಖ್ಯೆಯಲ್ಲಿರುವವರು ಹೆಚ್ಚಿನ ಬುದ್ಧಿಯನ್ನುಪಯೋಗಿಸಿ ಹೇಗೆ ಜಯಿಸಬಹುದು ಎನ್ನುವುದನ್ನು ಕೇಳು. ನೀನು ಅನಸೂಯನಾಗಿದ್ದೀಯೆ ಎಂಬ ಕಾರಣದಿಂದ ನಿನಗೆ ನಾನು ಹೇಳುತ್ತೇನೆ. ಇದನ್ನು ಋಷಿ ನಾರದನೂ, ಭೀಷ್ಮ-ದ್ರೋಣರೂ ತಿಳಿದಿದ್ದಾರೆ. ಇದೇ ವಿಷಯದ ಕುರಿತು ದೇವಾಸುರರ ಯುದ್ಧದಲ್ಲಿ ಹಿಂದೆ ಪಿತಾಮಹನು ಮಹೇಂದ್ರಾದಿ ದಿವೌಕಸರಿಗೆ ಹೇಳಿರಲಿಲ್ಲವೇ? ವಿಜಯವನ್ನು ಬಯಸುವವರು ಸತ್ಯ, ಅಹಿಂಸೆ, ಧರ್ಮ ಮತ್ತು ಉದ್ಯಮದಿಂದ ಗೆಲ್ಲುವಷ್ಟು ಬಲ-ವೀರ್ಯಗಳಿಂದ ಗೆಲ್ಲುವುದಿಲ್ಲ. ಅಧರ್ಮ, ಲೋಭ, ಮೋಹಗಳನ್ನು ತೊರೆದು ಉದ್ಯಮದಲ್ಲಿ ನಿರತರಾಗಿ ಅಹಂಕಾರವಿಲ್ಲದೇ ಯುದ್ಧಮಾಡಬೇಕು. ಧರ್ಮವೆಲ್ಲಿದೆಯೋ ಅಲ್ಲಿ ಜಯ. ಈ ರಣದಲ್ಲಿ ಜಯವು ನಿಶ್ಚಯವಾಗಿಯೂ ನಮ್ಮದೇ ಎಂದು ತಿಳಿ. ನಾರದನು ನಮಗೆ ಹೇಳಿದಂತೆ ಕೃಷ್ಣನೆಲ್ಲಿರುವನೋ ಅಲ್ಲಿ ಜಯವಿರುವುದು. ಜಯವು ಕೃಷ್ಣನಲ್ಲಿರುವ ಗುಣ. ಅದು ಮಾಧವನ ಹಿಂದೆ ಅನುಸರಿಸಿ ಹೋಗುತ್ತದೆ. ವಿಜಯ ಮಾತ್ರವಲ್ಲದೇ ಸನ್ನತಿಯೂ ಇವನ ಇನ್ನೊಂದು ಗುಣ. ಅನಂತ ತೇಜಸ್ಸುಳ್ಳ ಗೋವಿಂದನು ಅಸಂಖ್ಯ ಶತ್ರುಗಳಿಂದಲೂ ವ್ಯಥೆಗೊಳ್ಳಲಾರನು. ಸನಾತನತಮ ಪುರುಷ ಕೃಷ್ಣನು ಎಲ್ಲಿರುವನೋ ಅಲ್ಲಿ ಜಯ. ಹಿಂದೆ ಇವನೇ

> ವಿಕುಂಠ ಹರಿಯಾಗಿ ಸಿಡಿಲಿನ ಶಬ್ಧದ ಧ್ವನಿಯಲ್ಲಿ ಸುರಾಸುರರಿಗೆ ಕೂಗಿ "ನಿಮ್ಮಲ್ಲಿ ಯಾರು ಗೆಲ್ಲುತ್ತೀರಿ?" ಎಂದು ಕೇಳಿದ್ದನು. "ಕೃಷ್ಣನು ನಮ್ಮೊಡನಿರುವುದರಿಂದ ನಮಗೇ ಜಯ" ಎಂದು ಹೇಳಿ ಶಕ್ರಾದಿ ಸುರರು ಅಲ್ಲಿಯೇ ಅವನ ಪ್ರಸಾದದಿಂದ ಅವರನ್ನು ಗೆದ್ದು ತ್ರೈಲೋಕ್ಯವನ್ನು ಪಡೆದರು. ಆದುದರಿಂದ ನಿನ್ನ ವ್ಯಥೆಗೆ ಯಾವುದೇ ಕಾರಣವು ನನಗೆ ಕಾಣುತ್ತಿಲ್ಲ. ಜಯವನ್ನು ಆಶಿಸುತ್ತಿರುವ ವಿಶ್ವಭುಕ್ ತ್ರಿದಶೇಶ್ವರನು ನಿನ್ನೊಡನೆ ಇದ್ದಾನೆ."

ಆಗ ರಾಜಾ ಯುಧಿಷ್ಠಿರನು ತನ್ನ ಸೇನೆಯನ್ನೂ ಭೀಷ್ಮನ ಸೇನೆಗಳಿಗೆ ಪ್ರತಿವ್ಯೂಹವಾಗಿ ರಚಿಸಿ ಪ್ರತಿಚೋದಿಸಿದನು:

> "ಪಾಂಡವರು ಶಾಸ್ತ್ರಗಳಲ್ಲಿ ಹೇಳಿರುವಂತೆ ಸೇನೆಗಳನ್ನು ಪ್ರತಿವ್ಯೂಹವಾಗಿ ರಚಿಸಿದ್ದಾರೆ. ಕುರೂದ್ವಹರೇ! ಒಳ್ಳೆಯ ಯುದ್ಧವನ್ನು ಮಾಡಿ ಸ್ವರ್ಗವನ್ನು ಪಡೆಯಿರಿ!"

ಮಧ್ಯದಲ್ಲಿ ಶಿಖಂಡಿಯ ಸೇನೆಯನ್ನು ಸವ್ಯಸಾಚಿಯು ರಕ್ಷಿಸುತ್ತಿದ್ದನು. ಧೃಷ್ಟದ್ಯುಮ್ನನ ಸೇನೆಯನ್ನು ಸ್ವಯಂ ಭೀಮನು ಪರಿಪಾಲಿಸುತ್ತಿದ್ದನು. ದಕ್ಷಿಣಭಾಗದ ಸೇನೆಯನ್ನು ಸುಂದರ, ಸಾತ್ವತಾಗ್ರ್ಯ, ಶಕ್ರನಂತಿರುವ ಧನುಷ್ಮತ ಯುಯುಧಾನನು ಪಾಲಿಸುತ್ತಿದ್ದನು. ಆನೆಗಳ ಹಿಂಡಿನ ಮಧ್ಯೆ ಯುಧಿಷ್ಠಿರನು ಮಹೇಂದ್ರನ ಯಾನದಂತಿದ್ದ ಉತ್ತಮ ಧ್ವಜಸ್ಥಂಭವಿರುವ, ಚಿನ್ನ-ರತ್ನಗಳಿಂದ ಅಲಂಕರಿಸಲ್ಪಟ್ಟಿದ್ದ,

ಕಾಂಚನದಂತಿದ್ದ ಕುದುರೆಗಳನ್ನು ಕಟ್ಟಿದ ರಥದಲ್ಲಿ ಕುಳಿತಿದ್ದನು. ಮೇಲೆ ಎತ್ತಿ ಹಿಡಿದ ದಂತದ ಸ್ಥಂಭಕ್ಕೆ ಕಟ್ಟಿದ್ದ ಶ್ವೇತ ಛತ್ರವು ಅತೀವವಾಗಿ ಬೆಳಗುತ್ತಿರಲು, ಆ ನರೇಂದ್ರನನ್ನು ಸಂಸ್ತುತಿಸುತ್ತಾ ಮಹರ್ಷಿಗಳು ಪ್ರದಕ್ಷಿಣೆ ಹಾಕಿ ನಡೆಯುತ್ತಿದ್ದರು. ಪುರೋಹಿತರು, ಮಹರ್ಷಿ-ವೃದ್ಧರು, ಮತ್ತು ಸಿದ್ಧರೂ ಕೂಡ ಜಪ, ಮಂತ್ರ, ಔಷಧಿಗಳಿಂದ ಅವನನ್ನು ಸುತ್ತುವರೆದು ಶತ್ರುವಧೆಯನ್ನು ಹೇಳುತ್ತಾ ಸ್ವಸ್ತಿವಾಚನ ಮಾಡಿದರು. ಆಗ ಆ ಕುರೂತ್ತಮ ಮಹಾತ್ಮನು ಬ್ರಾಹ್ಮಣರಿಗೆ ವಸ್ತ್ರಗಳು, ಗೋವುಗಳು, ಫಲ-ಪುಷ್ಪಗಳು ಮತ್ತು ನಾಣ್ಯಗಳನ್ನಿತ್ತು ಅಮರರೊಂದಿಗೆ ಶಕ್ರನಂತೆ ಮುಂದುವರೆದನು.

ನೂರು ಗಂಟೆಗಳನ್ನು ಕಟ್ಟಿದ್ದ, ಉತ್ತಮ ಜಾಂಬೂನದ ಚಿನ್ನದ ಚಿತ್ರಗಳನ್ನು ಪಡೆದಿದ್ದ, ಶ್ವೇತ ಹಯ ಮತ್ತು ಚಕ್ರಗಳ ಅರ್ಜುನನ ರಥವು ಅಗ್ನಿಯ ತೇಜಸ್ಸನ್ನು ಪಡೆದು ಸಹಸ್ರ ಸೂರ್ಯರಂತೆ ವಿಭ್ರಾಜಿಸುತ್ತಿತ್ತು. ಕೇಶವನು ಹಿಡಿದಿದ್ದ ಆ ಕಪಿಧ್ವಜ ರಥದಲ್ಲಿ ಯಾರ ಸಮನಾದ ಧನುರ್ಧರನು ಈ ಪೃಥ್ವಿಯಲ್ಲಿಯೇ ಇಲ್ಲವೋ, ಇರಲಿಲ್ಲವೋ ಮತ್ತು ಮುಂದೆ ಎಂದೂ ಇರುವುದಿಲ್ಲವೋ ಅವನು ಗಾಂಡೀವ ಬಾಣಗಳನ್ನು ಕೈಯಲ್ಲಿ ಹಿಡಿದು ನಿಂತಿದ್ದನು. ದುರ್ಯೋಧನನ ಸೇನೆಯನ್ನು ಪುಡಿಮಾಡುವನೋ ಅಂತಿರುವ, ಅತೀವ ರೌದ್ರ, ಭಯವನ್ನುಂಟುಮಾಡುವ ರೂಪವುಳ್ಳ, ಅನಯುಧನಾಗಿಯೂ ತನ್ನ ಉತ್ತಮ ಭುಜಗಳಿಂದ ನರ, ಅಶ್ವ, ಆನೆಗಳನ್ನು ಭಸ್ಮಮಾಡಬಲ್ಲ ಭುಜದ್ವಯಗಳ ಆ ಭೀಮಸೇನನು

ಯಮಳರಿಬ್ಬರೊಂದಿಗೆ ವೀರರಥರ ಸೇನೆಯನ್ನು ರಕ್ಷಿಸುತ್ತಿದ್ದನು. ಮತ್ತಿನಲ್ಲಿರುವ ಸಿಂಹದ ಆಟದ ನಡುಗೆಯುಳ್ಳ, ಲೋಕದಲ್ಲಿ ಮಹೇಂದ್ರನ ಹಾಗಿರುವ, ಸೇನೆಯ ಮುಂದೆ ಹೋಗುತ್ತಿರುವ ಆ ದುರಾಸದ, ವಾರಣರಾಜದರ್ಪ, ವೃಕೋದರನನ್ನು ನೋಡಿ ಕೌರವ ಯೋಧರು ಭಯವಿಗ್ನರಾಗಿ ಸತ್ವವನ್ನು ಕಳೆದುಕೊಂಡು ಕೆಸರಿನಲ್ಲಿ ಸಿಕ್ಕಿಕೊಂಡ ಆನೆಗಳಂತೆ ಭಯಭೀತರಾಗಿದ್ದರು.

ಅನೀಕಮಧ್ಯದಲ್ಲಿ ನಿಂತಿದ್ದ ರಾಜಪುತ್ರ, ದುರಾಸದ, ಭರತಶ್ರೇಷ್ಠ, ಗುಡಾಕೇಶನಿಗೆ ಜನಾರ್ದನನು ಹೇಳಿದನು:

> “ತನ್ನ ಸಿಟ್ಟಿನಿಂದ ನಮ್ಮ ಸೇನೆಯನ್ನು ಸುಡುತ್ತಿರುವ, ನಮ್ಮ ಸೇನೆಯನ್ನು ಸಿಂಹದಂತೆ ನೋಡುತ್ತಿರುವ ಅವನೇ ಮೂರುನೂರು ಅಶ್ವಮೇಧಗಳನ್ನು ಮಾಡಿದ ಕುರುವಂಶಧ್ವಜ ಭೀಷ್ಮ. ಈ ಸೇನೆಗಳು ಆ ಮಹಾನುಭಾವನನ್ನು ಉರಿಯುತ್ತಿರುವ ಸೂರ್ಯನನ್ನು ಮೋಡಗಳು ಹೇಗೋ ಹಾಗೆ ಸುತ್ತುವರೆದಿವೆ. ಇವರನ್ನು ಕೊಂದು ಭರತರ್ಷಭನಿಂದ ಯುದ್ಧವನ್ನು ಬಯಸು.”

ಅಲ್ಲಿ ಎರಡೂ ಸೇನೆಗಳಲ್ಲಿ ಯೋಧರು ಸಂತೋಷಗೊಂಡು ಹರ್ಷಿಸಿದರು. ಇಬ್ಬರಲ್ಲಿಯೂ ಹೂವಿನ ಮಾಲೆಗಳ ಮತ್ತು ಸುಗಂಧಗಳ ಸುವಾಸನೆಯು ಹೊರಬರುತ್ತಿತ್ತು. ಹೋರಾಡಲು ಸೇರಿದ್ದ ಸೇನೆಗಳ ವ್ಯೂಹಗಳು ಪರಸ್ಪರರನ್ನು ಎದುರಿಸಿ ಮರ್ದಿಸುವುದು ತುಂಬಾ

ದೊಡ್ಡದಾಗಿತ್ತು. ವಾದ್ಯಗಳ ಶಬ್ಧ, ಶಂಖ-ಭೇರಿಗಳ ತುಮುಲಗಳು ಆನೆಗಳ ಮತ್ತು ಹರ್ಷಗೊಂಡಿದ್ದ ಸೈನಿಕರ ಕೂಗಿನೊಂದಿಗೆ ಸೇರಿತು.

ಪಾಂಡವ ಸೇನೆಯು ಯುದ್ಧವ್ಯೂಹದಲ್ಲಿ ರಚಿಸಿಕೊಂಡಿದ್ದುದನ್ನು ನೋಡಿದ ರಾಜಾ ದುರ್ಯೋಧನನು ಆಚಾರ್ಯನ ಬಳಿಬಂದು ಹೇಳಿದನು:

"ಆಚಾರ್ಯ ! ಪಾಂಡುಪುತ್ರರ ಈ ಮಹಾ ಸೇನೆಯನ್ನು ಬುದ್ಧಿವಂತಿಕೆಯಿಂದ ನಿನ್ನ ಶಿಷ್ಯ ದ್ರುಪದಪುತ್ರನು ವ್ಯೂಹದಲ್ಲಿ ರಚಿಸಿದುದನ್ನು ನೋಡು ! ಅಲ್ಲಿ ಯುದ್ಧದಲ್ಲಿ ಶೂರರಾದ ಮಹೇಷ್ವಾಸ ಭೀಮಾರ್ಜುನರಿದ್ದಾರೆ, ಯುಯುಧಾನ, ವಿರಾಟ, ದ್ರುಪದ, ಧೃಷ್ಟಕೇತು, ಚೇಕಿತಾನ, ಕಾಶಿರಾಜ, ಪುರುಜಿತ, ಕುಂತಿಭೋಜ, ಶೈಬ್ಯ, ಯುಧಾಮನ್ಯು, ಉತ್ತಮೌಜಸ್ಸು, ಸೌಭದ್ರ, ದ್ರೌಪದಿಯ ಮಕ್ಕಳು - ಎಲ್ಲರೂ ಮಹಾರಥಿಗಳೇ ಇದ್ದಾರೆ. ನಮ್ಮಲ್ಲಿರುವ ವಿಶಿಷ್ಟ ನಾಯಕರನ್ನೂ ತಿಳಿದುಕೋ ! ನಿನ್ನ ಸೂಚನೆಗಾಗಿ ನಾನು ಹೇಳುತ್ತೇನೆ. ನೀನು, ಭೀಷ್ಮ, ಕರ್ಣ, ಯುದ್ಧದಲ್ಲಿ ಸದಾ ಜಯವನ್ನೇ ಹೊಂದುವ ಕೃಪ, ಅಶ್ವತ್ಥಾಮ, ವಿಕರ್ಣ, ಮತ್ತು ಸೌಮದತ್ತಿ. ಇನ್ನೂ ಇತರ ಬಹಳ ಮಂದಿ ಶೂರರು, ನಾನಾ ಶಸ್ತ್ರಗಳನ್ನು ಪ್ರಹರಮಾಡಬಲ್ಲರು, ಎಲ್ಲಾ ಯುದ್ಧ ವಿಶಾರದರು ನನಗಾಗಿ ತಮ್ಮ ಜೀವನವನ್ನು ಮುಡುಪಾಗಿಟ್ಟಿದ್ದಾರೆ. ಭೀಷ್ಮನಿಂದ ರಕ್ಷಿಸಲ್ಪಟ್ಟ ನಮ್ಮ

ಸೇನೆಯು ಪರ್ಯಾಪ್ತವಾಗಿಲ್ಲ. ಆದರೆ ಭೀಮನ ರಕ್ಷಣೆಯಲ್ಲಿರುವ ಅವರ ಸೇನೆಯು ಪರ್ಯಾಪ್ತವಾಗಿದೆ. ಈಗ ನೀವೆಲ್ಲರೂ ನಿಮ್ಮ ನಿಮ್ಮ ಸ್ಥಾನಗಳಲ್ಲಿ ನಿಂತು ಎಲ್ಲ ಕಡೆಗಳಿಂದಲೂ ಭೀಷ್ಮನನ್ನು ರಕ್ಷಿಸಬೇಕು.”



ಅವನಿಗೆ ಹರ್ಷವನ್ನುಂಟುಮಾಡಲೋಸುಗ ಪ್ರತಾಪವಾನ್ ಕುರುವೃದ್ಧ ಪಿತಾಮಹನು ಸಿಂಹನಾದ ಮಾಡಿ ಜೋರಾಗಿ ಶಂಖವನ್ನು ಊದಿದನು. ಅದೇ ಸಮಯದಲ್ಲಿ ಒಂದೇ ಸಮನೆ ಶಂಖಗಳು, ಭೇರಿಗಳು, ಪಣವಾನಕಗಳು, ಮತ್ತು ಗೋಮುಖಗಳು ಮೊಳಗಿದವು. ಆ

ಶಬ್ಧವು ಎಲ್ಲ ಕಡೆಯೂ ತುಂಬಿತು. ಆಗ ಬಿಳಿಯ ಕುದುರೆಗಳನ್ನು ಕಟ್ಟಿದ್ದ ಮಹಾರಥದಲ್ಲಿ ನಿಂತಿದ್ದ ಮಾಧವ ಪಾಂಡವರೂ ಕೂಡ ದಿವ್ಯ ಶಂಖಗಳನ್ನು ಊದಿದರು. ಹೃಷೀಕೇಶನು ಪಾಂಚಜನ್ಯವನ್ನೂ, ಧನಂಜಯನು ದೇವದತ್ತವನ್ನೂ, ಭೀಮಕರ್ಮಿ ವೃಕೋದರನು ಪೌಂಡ್ರವೆಂಬ ಮಹಾಶಂಖವನ್ನೂ, ಕುಂತೀಪುತ್ರ ರಾಜ ಯುಧಿಷ್ಠಿರನು ಅನಂತವಿಜಯವನ್ನೂ, ನಕುಲನು ಸುಘೋಷವನ್ನೂ, ಸಹದೇವನು ಪಣಿಪುಷ್ಪಕವನ್ನೂ ಊದಿದರು. ಹಾಗೆಯೇ ಮಹಾ ಧನುಸ್ಸನ್ನು ಹಿಡಿದಿದ್ದ ಕಾಶೀರಾಜ, ಮಹಾರಥಿ ಶಿಖಂಡಿ, ಧೃಷ್ಟದ್ಯುಮ್ನ, ವಿರಾಟ, ಸೋಲರಿಯದ ಸಾತ್ಯಕಿ, ದ್ರುಪದ, ದ್ರೌಪದಿಯ ಮಕ್ಕಳು ಮತ್ತು ಸರ್ವ ಪೃಥ್ವೀಪತಿಗಳೂ, ಮಹಾಬಾಹು ಸೌಭದ್ರ ಅಭಿಮನ್ಯುವೂ ಬೇರೆ ಬೇರೆಯಾಗಿ ತಮ್ಮ ತಮ್ಮ ಶಂಖಗಳನ್ನು ಊದಿದರು. ಲೋಕವನ್ನೇ ತುಂಬಿದ ಆ ಶಂಖಘೋಷವು ಪೃಥಿವ್ಯಾಕಾಶಗಳಲ್ಲಿ ಮಾರ್ದನಿಗೊಂಡು ಕೌರವರ ಎದೆಗಳನ್ನು ನಡುಗಿಸಿತು.

## ಅರ್ಜುನವಿಷಾದ

ಶಸ್ತ್ರಗಳನ್ನು ಹಿಡಿದು ಕದನ ಕುತೂಹಲಿಗಳಾಗಿ ತನ್ನ ಎದಿರು ನಿಂತ ಧಾರ್ತರಾಷ್ಟ್ರ ಕೌರವರನ್ನು ನೋಡಿ ಕಪಿಧ್ವಜ ಅರ್ಜುನನು ಬಿಲ್ಲನ್ನೆತ್ತಿ ಹಿಡಿದು ಸರ್ವೇಂದ್ರಿಯ ನಿಯಾಮಕನಾದ ಶ್ರೀಕೃಷ್ಣನನ್ನು ಕುರಿತು ಈ ಮಾತನ್ನು ಹೇಳಿದನು:

“ಅಚ್ಯುತ ! ಎರಡೂ ಸೇನೆಗಳ ನಡುವೆ ನನ್ನ ರಥವನ್ನು ಒಯ್ದು

ನಿಲ್ಲಿಸು. ಈ ರಣರಂಗದಲ್ಲಿ ಕಾದಲು ಕಾದುಕುಳಿತವರನ್ನೂ, ಯಾರು ನನ್ನೆದುರು ಯುದ್ಧಮಾಡಲು ಉತ್ಸುಕರಾಗಿ ನಿಂತಿದ್ದಾರೆ ಎನ್ನುವುದನ್ನು ನಾನೊಮ್ಮೆ ನೋಡುತ್ತೇನೆ. ದುರ್ಬುದ್ಧಿ ದುರ್ಯೋಧನನಿಗೆ ಒಳ್ಳೆಯದನ್ನು ಮಾಡಲೆಂದು ಇಲ್ಲಿಗೈತಂದ ಯುದ್ಧಕುತೂಹಲಿಗಳು ಯಾರೆಂಬುದನ್ನು ಒಮ್ಮೆ ನೋಡುತ್ತೇನೆ."

ಗುಡಾಕೇಶ ಅರ್ಜುನನು ಹೀಗೆ ಹೇಳಲು, ಹೃಷೀಕೇಶನು ರಥವನ್ನು ಎರಡೂ ಸೇನೆಗಳ ನಡುವೆ ಭೀಷ್ಮ-ದ್ರೋಣರೇ ಮೊದಲಾದ ಸರ್ವ ಮಹೀಕ್ಷಿತರ ಮುಂದೆ ತಂದು ನಿಲ್ಲಿಸಿ



“ಪಾರ್ಥ ! ಸೇರಿರುವ ಈ ಕುರುಗಳನ್ನು ನೋಡು !”

ಎಂದನು. ಆ ಎರಡೂ ಸೇನೆಗಳಲ್ಲಿ ತಂದೆಗೆ ಸಮಾನರಾದವರು, ಅಜ್ಜಂದಿರು, ಗುರುಗಳು, ಸೋದರ ಮಾವಂದಿರು, ಒಡಹುಟ್ಟಿದವರು, ಮಕ್ಕಳು, ಮೊಮ್ಮಕ್ಕಳು, ಗೆಳೆಯರು, ಮಾವಂದಿರು, ಮತ್ತು ಸುಹೃದಯರು ನಿಂತಿರುವುದನ್ನು ಪಾರ್ಥನು ಕಂಡನು. ಅಲ್ಲಿ ಸೇರಿದ್ದ ಆ ಎಲ್ಲ ಬಂಧುಗಳನ್ನೂ ನೋಡಿದ ಕೌಂತೇಯನು ಕರುಣೆಯುಂಟಾಗಿ ನೊಂದುಕೊಂಡು ಈ ಮಾತುಗಳನ್ನಾಡಿದನು:

“ಕೃಷ್ಣ ! ಇಲ್ಲಿ ಯುದ್ಧಕಾಗಿ ಕಲೆತ ಈ ಸ್ವಜನರನ್ನು ಕಂಡು ನನ್ನ ಅವಯವಗಳೆಲ್ಲ ಸಡಿಲಾಗುತ್ತಿವೆ. ಬಾಯಿ ಒಣಗುತ್ತಿದೆ. ಮೈ ನಡುಗುತ್ತಿದೆ. ನವಿರೇಳುತ್ತಿದೆ. ಗಾಂಡೀವ ಧನುಸ್ಸು ಕೈಯಿಂದ ಜಾರುತ್ತಿದೆ. ಚರ್ಮ ಸುಡುತ್ತಿದೆ. ನಿಲ್ಲುವುದಕ್ಕೂ ತ್ರಾಣವಿಲ್ಲ. ಮನಸ್ಸು ಗಾಬರಿಗೊಂಡಿದೆ. ಕೇಶವ ! ಕೆಟ್ಟ ಶಕುನಗಳು ಕಾಣುತ್ತಿವೆ. ಈ ಯುದ್ಧದಲ್ಲಿ ಸ್ವಜನರನ್ನು ಕೊಂದರೆ ಏನು ಶ್ರೇಯಸ್ಸೋ ಕಾಣೆ. ಗೋವಿಂದ ! ಕೃಷ್ಣ ! ನನಗೆ ಇದರಿಂದ ದೊರೆಯುವ ವಿಜಯವೂ ಬೇಡ. ರಾಜ್ಯವೂ ಬೇಡ. ಸುಖವೂ ಬೇಡ. ಈ ರಾಜ್ಯದಿಂದಾಗಲೀ ಭೋಗಗಳಿಂದಾಗಲೀ, ಬದುಕಿನಿಂದಾಗಲೀ ನಮಗೆ ಆಗಬೇಕಾಗಿದ್ದೇನಿದೆ? ರಾಜ್ಯ, ಭೋಗ, ಸುಖಗಳನ್ನು ನಾವು ಯಾರಿಗಾಗಿ ಕೋರುತ್ತಿದ್ದೇವೋ ಆ ಗುರುಗಳು, ಪಿತೃಗಳು, ಮಕ್ಕಳು, ಪಿತಾಮಹರು,

ಮಾತುಲರು, ಮಾವಂದಿರು, ಮೊಮ್ಮಕ್ಕಳು, ಮೈದುನರು ಮತ್ತು ಇತರ ಸಂಬಂಧಿಕರೆಲ್ಲರೂ ಇಲ್ಲಿ ಯುದ್ಧೋದ್ಯಮಿಗಳಾಗಿ ಬಂದಿದ್ದಾರೆ. ಇವರು ನನ್ನನ್ನು ಕೊಲ್ಲುವಂತಿದ್ದರೂ ನಾನವರನ್ನು ಕೊಲ್ಲಲಾರೆ. ನನಗೆ ಮೂರುಲೋಕದ ಒಡೆತನ ಸಿಗುವಹಾಗಿದ್ದರೂ ಕೊಲ್ಲಲಾರದವನು ಈ ಭೂಮಿಯ ಒಡೆತನದ ಆಸೆಗಾಗಿ ಕೊಂದೇನೇ? ಈ ಕೌರವರನ್ನು ಕೊಲ್ಲುವುದರಿಂದ ನಮಗಾಗುವ ಸಂತೋಷವೇನು? ಪಾತಕಿಗಳಾಗಿದ್ದರೂ ಈ ಬಂಧುಗಳನ್ನು ಕೊಂದು ನಮಗೆ ಪಾಪವೇ ಗಂಟು ಬಿದ್ದೀತು! ಬಂಧುಗಳಾದ ಕೌರವರನ್ನು ಕೊಲ್ಲುವುದು ಸರಿಯಲ್ಲ. ನಮ್ಮವರನ್ನೇ ಕೊಂದು ನಾವು ಹೇಗೆ ಸುಖಿಗಳಾದೇವು? ಇವರಾದರೋ ದುರಾಸೆಯಿಂದ ಬುದ್ಧಿಗೆಟ್ಟು ಮಿತ್ರದ್ರೋಹದಿಂದಾಗುವ ಪಾಪವನ್ನೂ ಕುಲನಾಶದಿಂದಾಗುವ ದೋಷವನ್ನೂ ತಿಳಿಯದವರಾಗಿದ್ದಾರೆ. ಕುಲಕ್ಷಯದಿಂದಾಗುವ ಕೇಡನ್ನು ತಿಳಿಯಬಲ್ಲ ನಮಗಾದರೂ ಈ ಪಾಪದಿಂದ ನಿವೃತ್ತರಾಗಬೇಕೆಂದು ತಿಳಿಯಬಾರದೇಕೆ? ಕುಲವು ನಾಶವಾಗಲು ಸನಾತನ ಕುಲಧರ್ಮಗಳು ನಾಶವಾಗುವುವು. ಧರ್ಮವು ನಷ್ಟವಾಗಲು ಕುಲವನ್ನೆಲ್ಲ ಅಧರ್ಮವೇ ಆವರಿಸಿಬಿಡುವುದು. ಅಧರ್ಮವೇ ಬೆಳೆದಾಗ ಕುಲಸ್ತ್ರೀಯರು ಕೆಡುವರು. ಹೆಂಗಸರು ಶೀಲಭ್ರಷ್ಟೆಯರಾಗಿ

ಕೆಟ್ಟಾಗ ಜಾತಿಗಳ ಬೆರಕೆಯಾಗುವುದು. ಈ ವರ್ಣಸಾಂಕರ್ಯವು ಕುಲಘಾತಕರನ್ನೂ ಕುಲವನ್ನೂ ಕೂಡಿಯೇ ನರಕಕ್ಕೆ ಬೀಳಿಸುವುದು. ಅಂಥವರ ಪಿತೃಗಳು ಪಿಂಡಪ್ರದಾನವಿಲ್ಲದವರೂ ಜಲತರ್ಪಣವಿಲ್ಲದವರೂ ಆಗಿ ನರಕಕ್ಕೆ ಬೀಳುವರು. ಜಾತಿಯ ಬೆರಕೆಗೆ ಕಾರಣರಾದ ಕುಲಘಾತಕರ ಈ ದೋಷಗಳಿಂದ ಬಹುಕಾಲದಿಂದ ಅನುಸರಿಸಿಕೊಂಡು ಬಂದ ಕಾಲಧರ್ಮಗಳೂ, ಜಾತಿಧರ್ಮಗಳು ಕೆಟ್ಟು ಹೋಗುವವು. ಕುಲಧರ್ಮವನ್ನು ಕೆಡಿಸಿಕೊಂಡ ಮನುಷ್ಯರಿಗೆ ನರಕವಾಸವು ತಪ್ಪಿದ್ದಲ್ಲವೆಂಬುದನ್ನು ಕೇಳಿದ್ದೇವೆ. ರಾಜ್ಯದ ಲಾಭದಿಂದ ದೊರೆಯಬಹುದಾದ ಸುಖದ ಲೋಭದಿಂದ ಸ್ವಜನರನ್ನು ಕೊಲ್ಲಲು ಮುಂದಾಗಿರುವ ನಾವು ದೊಡ್ಡದೊಂದು ಪಾಪಕಾರ್ಯವನ್ನು ಮಾಡಲು ಹೊರಟಿದ್ದೀವಲ್ಲ ! ಅಯ್ಯೋ ! ಪ್ರತೀಕಾರವನ್ನು ಮಾಡದ, ಶಸ್ತ್ರವನ್ನು ಹಿಡಿಯದ ನನ್ನನ್ನು ಆಯುಧಪಾಣಿಗಳಾದ ಕೌರವರೇ ಕೊಂದುಬಿಟ್ಟರೆ ಎಷ್ಟೋ ಕ್ಷೇಮವಾದೀತು !”

ಇದನ್ನು ಹೇಳಿ ದುಃಖದಿಂದ ಕದಡಿದ ಮನಸ್ಸುಳ್ಳ ಅರ್ಜುನನು ಬಿಲ್ಲು ಬಾಣಗಳನ್ನು ಬಿಸುಟು ರಥದಲ್ಲಿ ಕುಳಿತುಬಿಟ್ಟನು. ಹೀಗೆ ಕನಿಕರದಿಂದ ಕಂಬನಿದುಂಬಿ ದುಃಖಿಸುತ್ತಿರುವ ಅರ್ಜುನನನಿಗೆ ಮಧುಸೂದನನು ಹೇಳಿದನು:



“ಒಳ್ಳೆಯವರಿಗೆ ಹೇಳಿಸಿದಲ್ಲದ, ಸ್ವರ್ಗವನ್ನು ದೊರಕಿಸದ, ಹಾಗೂ ಅಪಕೀರ್ತಿಕರವಾದ ಇಂಥ ಕೊಳಕು ಬುದ್ಧಿಯು ಈ ವಿಷಮಕಾಲದಲ್ಲಿ ನಿನಗೆಲ್ಲಿಂದ ಬಂದಿತು? ಪಾರ್ಥ! ನಪುಂಸಕನಂತೆ ನುಡಿಯದಿರು! ನಿನ್ನಂಥವರಿಗೆ ಇದು ಹೇಳಿಸಿದುದಲ್ಲ. ಹಗೆಗಳನ್ನು ಗೆಲ್ಲಬಲ್ಲ ನೀನು ಕೀಳಾದ ಈ ಎದೆಯಳುಕನ್ನು ತೊರೆದು ಎದ್ದು ನಿಲ್ಲು!”

ಅರ್ಜುನನು ಹೇಳಿದನು:

“ಮಧುಸೂದನ! ಪೂಜಾರ್ಹರಾಗಿರುವ ಭೀಷ್ಮನನ್ನೂ, ದ್ರೋಣನನ್ನೂ ಯುದ್ಧದಲ್ಲಿ ಎದುರಿಸಿ ಬಾಣಗಳಿಂದ ಹೇಗೆ ಹೊಡೆದೇನು? ಮಹಾನುಭಾವ ಗುರುಗಳನ್ನು ಕೊಂದು ರಾಜ್ಯಸುಖವನ್ನು ಪಡೆಯುವುದಕ್ಕಿಂತ ಕೊಲ್ಲದೆಯೆ ತಿರಿದು ತಿನ್ನುವುದು ಲೇಸು. ಸುಖಾಪೇಕ್ಷಿ ಗುರುಗಳನ್ನು ಕೊಂದರೆ ಅವರ ನೆತ್ತರಿನಿಂದ ತೋಯುವ ಭೋಗವನ್ನಲ್ಲವೆ ನಾವು ಉಣ್ಣಬೇಕು? ನಾವು ಗೆಲ್ಲುವೆವೋ ಅವರೇ ಗೆಲ್ಲುವರೋ! ಇವುಗಳಲ್ಲಿ ಯಾವುದು ಮೇಲಾದುದು ಎಂದು ಏನೂ ತಿಳಿಯದಾಗಿದೆ. ಯಾರನ್ನು ಕೊಂದು ನಾವು ಬದುಕಲು ಬಯಸುವುದಿಲ್ಲವೋ ಆ ಕೌರವರೇ ಇದಿರು ಬಂದು ನಿಂತಿದ್ದಾರೆ. ವ್ಯಸನದಿಂದಲೂ ಪಾಪಭೀತಿಯಿಂದಲೂ ಎದೆಗಾರಿಕೆಯನ್ನು ಕಳೆದುಕೊಂಡಿದ್ದೇನೆ. ಧರ್ಮದ

ವಿಚಾರದಲ್ಲಿಯೂ ಮನಸ್ಸು ಮಂಕಾಗಿದೆ. ನಾನು ನಿನ್ನ ಶಿಷ್ಯನಾಗಿ ಶರಣುಬಂದಿದ್ದೇನೆ. ಯಾವುದು ಶ್ರೇಯವೆಂದು ನೀನೇ ನಿರ್ಣಯಿಸಿ ದಾರಿ ತೋರು! ದೇವತೆಗಳ ಒಡೆತನದಿಂದಾಗಲೀ, ಬಂಧುಗಳಿಲ್ಲದ ಈ ಸಂಪದ್ಭರಿತ ಭೂಮಿಯ ಒಡೆತನದಿಂದಾಗಲೀ ನನ್ನ ಇಂದ್ರಿಯಗಳನ್ನು ಹಿಂಡಿಬಿಡುವ ಈ ನೋವು ಮಾಯವಾಗದು. ಇದಕ್ಕೆ ಉಪಾಯವನ್ನು ಕಾಣದಾಗಿದ್ದೇನೆ."

ಪರಂತಪ ಗುಡಾಕೇಶ ಅರ್ಜುನನು ಹೃಷೀಕೇಶ ಕೃಷ್ಣನಿಗೆ ಹೀಗೆ ಹೇಳಿ "ಗೋವಿಂದ! ನಾನು ಯುದ್ಧಮಾಡಲಾರೆ!" ಎಂದು ಸುಮ್ಮನಾದನು. ಎರಡೂ ಸೇನೆಗಳ ನಡುವೆ ಶೋಕಿಸುತ್ತಾ ಕುಳಿತಿದ್ದ ಅರ್ಜುನನನ್ನು ನೋಡಿ ಹೃಷೀಕೇಶನು ಸಾಂಖ್ಯ, ಕರ್ಮ, ಜ್ಞಾನ, ಕರ್ಮಸಂನ್ಯಾಸ, ಭಕ್ತಿ ಮೊದಲಾದ ಯೋಗಗಳನ್ನು ವರ್ಣಿಸುತ್ತಾ ತನ್ನ ವಿಶ್ವರೂಪವನ್ನೂ ತೋರಿಸಿ, ಯುದ್ಧಕ್ಕೆ ಸಿದ್ಧನಾಗುವಂತೆ ಪ್ರಚೋದಿಸಿದನು.

## ವಿಶ್ವರೂಪದರ್ಶನ

ಅರ್ಜುನನು ಹೇಳಿದನು:

"ನನ್ನಮೇಲಿನ ಅನುಗ್ರಹದಿಂದ ಆಧ್ಯಾತ್ಮವೆಂದು ಕರೆಯಲ್ಪಡುವ ಯಾವ ಪರಮಗುಹ್ಯವಾದ ಮಾತನ್ನು ನೀನು ಹೇಳಿದೆಯೋ ಅದರಿಂದ ನನ್ನೀ ಮೋಹವು ತೊಲಗಿತು.

ಕಮಲಪತ್ರಾಕ್ಷ! ಭೂತಗಳ ಹುಟ್ಟುವಿಕೆ ಮತ್ತು ನಾಶದ ಕುರಿತು, ನಿನ್ನ ಅವ್ಯಯವಾದ ಮಹಾತ್ಮೆಯನ್ನೂ ವಿಸ್ತಾರವಾಗಿ ನಾನು ಕೇಳಿದೆ. ನಿನ್ನನ್ನು ನೀನು ಹೇಗೆಂದು ಹೇಳಿಕೊಂಡಿರುವೆಯೋ ಅದು ಹಾಗೆಯೇ ಸರಿ. ನಿನ್ನ ಐಶ್ವರ ರೂಪವನ್ನು ನೋಡಲು ಬಯಸುತ್ತೇನೆ. ಒಂದುವೇಳೆ ನಾನು ಅದನ್ನು ನೋಡಲು ಶಕ್ಯನಾಗಿದ್ದರೆ ಯೋಗೇಶ್ವರ! ನನಗೆ ನಿನ್ನ ಅವ್ಯಯ ಆತ್ಮನನ್ನು ತೋರಿಸು!"

ಶ್ರೀಭಗವಾನನು ಹೇಳಿದನು:

"ಪಾರ್ಥ! ನನ್ನ ನೂರಾರು ಸಹಸ್ರಾರು ನಾನಾವಿಧಗಳ, ನಾನಾ ವರ್ಣ-ಆಕೃತಿಗಳ ದಿವ್ಯ ರೂಪಗಳನ್ನು ನೋಡು! ಆದಿತ್ಯರನ್ನೂ, ವಸುಗಳನ್ನೂ, ರುದ್ರರನ್ನೂ, ಅಶ್ವಿಯರನ್ನೂ, ಮತ್ತು ಮರುತರನ್ನೂ ನೋಡು. ಹಿಂದೆ ನೋಡದೇ ಇರದ ಆಶ್ಚರ್ಯಗಳನ್ನೂ ನೋಡು! ಇಂದು ಚರಾಚರಗಳಿಂದ ಕೂಡಿದ ಸಂಪೂರ್ಣ ಜಗತ್ತು ಇಲ್ಲಿಯೇ ಇದೆ. ನೋಡು! ಬೇರೆ ಯಾವುದನ್ನು ನೋಡಲಿಚ್ಛಿಸುತ್ತೀಯೋ ಅವುಗಳನ್ನು ನನ್ನ ದೇಹದಲ್ಲಿಯೇ ನೋಡು! ಆದರೆ ನಿನ್ನ ಇದೇ ಕಣ್ಣುಗಳಿಂದ ನನ್ನನ್ನು ನೀಡು ನೋಡಲು ಶಕ್ತನಿಲ್ಲ. ನಿನಗೆ ದಿವ್ಯಚಕ್ಷುಗಳನ್ನು ಕೊಡುತ್ತೇನೆ. ನನ್ನ ಐಶ್ವರಯೋಗವನ್ನು ನೋಡು!"



ಹೀಗೆ ಹೇಳಿ ಮಹಾಯೋಗೇಶ್ವರ ಹರಿಯು ಪಾರ್ಥನಿಗೆ ಅನೇಕ ವಕ್ತ್ರನಯನಗಳುಳ್ಳ, ಅನೇಕ ಅದ್ಭುತದರ್ಶನಗಳುಳ್ಳ, ಅನೇಕದಿವ್ಯಾಭರಣಗಳ, ಅನೇಕ ದಿವ್ಯ ಆಯುಧಗಳನ್ನು ಹಿಡಿದಿರುವ, ದಿವ್ಯಮಾಲಾಂಬರಧರನಾಗಿ, ದಿವ್ಯಗಂಧಾನುಲೇಪನನಾಗಿ, ಸರ್ವವೂ ಆಶ್ಚರ್ಯಮಯವಾಗಿರುವ, ದೇವ, ಅನಂತ, ವಿಶ್ವತೋಮುಖವಾದ ತನ್ನ ಪರಮ ಐಶ್ವರ ರೂಪವನ್ನು ತೋರಿಸಿದನು. ಒಂದುವೇಳೆ ದಿವಿಯಲ್ಲಿ ಒಮ್ಮೆಗೇ ಸಹಸ್ರ ಸೂರ್ಯರ ಬೆಳಕು ಉದ್ಭವಾದರೆ ಅದು ಆ ಮಹಾತ್ಮನ ಬೆಳಕಿಗೆ ಸಮಾನವಾದೀತು ! ಆಗ ಪಾಂಡವನು

ಅನೇಕಪ್ರಕಾರವಾಗಿ ವಿಂಗಡವಾಗಿರುವ ಜಗತ್ತೆಲ್ಲವೂ ಆ ದೇವದೇವ ಶರೀರದಲ್ಲಿ ಏಕಸ್ಥವಾಗಿದ್ದುದನ್ನು ನೋಡಿದನು. ಧನಂಜಯನು ವಿಸ್ಮಯಾವಿಷ್ಟನಾಗಿ, ರೋಮಾಂಚನಗೊಂಡು, ದೇವನಿಗೆ ಶಿರಸಾ ಸಮಸ್ಕರಿಸಿ, ಕೈಮುಗಿದು ಹೇಳಿದನು:

"ದೇವಾ! ನಿನ್ನ ದೇಹದಲ್ಲಿ ಎಲ್ಲ ದೇವತೆಗಳನ್ನೂ, ಬೇರೆಬೇರೆ ಪ್ರಾಣಿಗಳ ಗುಂಪುಗಳನ್ನು, ಕಮಲಾಸನಸ್ಥನಾಗಿರುವ ಈಶ ಬ್ರಹ್ಮನನ್ನೂ, ಸರ್ವ ಋಷಿಗಳನ್ನೂ ಉರುಗರನ್ನೂ ಕಾಣುತ್ತಿದ್ದೇನೆ. ವಿಶ್ವೇಶ್ವರ! ವಿಶ್ವರೂಪ! ನಿನ್ನನ್ನು ಅನೇಕ ಬಾಹು, ಉದರ, ವಕ್ತ್ರ, ನೇತ್ರಗಳನ್ನುಳ್ಳವನಾಗಿ ಸರ್ವತವೂ ಅನಂತರೂಪನನ್ನಾಗಿ ನೋಡುತ್ತಿದ್ದೇನೆ. ಅಂತವೂ ಇಲ್ಲ. ಮದ್ಯವೂ ಇಲ್ಲ. ಮತ್ತೆ ಪ್ರಾರಂಭವೂ ಇಲ್ಲವೆಂದು ಕಾಣುತ್ತಿದ್ದೇನೆ. ಕಿರೀಟಿಯೂ, ಗದಿಯೂ, ಚಕ್ರಿಯೂ, ತೇಜೋರಾಶಿಯೂ, ಸರ್ವತವೂ ಬೆಳಗುತ್ತಿರುವವ, ದುರ್ನಿರೀಕ್ಷ್ಯನಾದ, ಎಲ್ಲೆಲ್ಲಿಯೂ ಅನಲ ಮತ್ತು ಅರ್ಕರಂತೆ ಜ್ವಾಲೆಗಳಿಂದ ಬೆಳಗುತ್ತಿರುವ ಅಪ್ರಮೇಯನಾದ ನಿನ್ನನ್ನು ನೋಡುತ್ತಿದ್ದೇನೆ. ಅರಿತುಕೊಳ್ಳಬೇಕಾಗಿರುವ ಪರಮ ಅಕ್ಷರನು ನೀನು. ಈ ವಿಶ್ವದ ಪರಮ ನಿಧಾನವು ನೀನು. ನೀನು ಅವ್ಯಯ, ಶಾಶ್ವತ ಮತ್ತು ಧರ್ಮಗೋಪ್ತ. ನೀನು ಸನಾತನ ಪುರುಷನೆಂದು ನನಗನ್ನಿಸುತ್ತಿದೆ. ಆದಿ, ಮಧ್ಯ, ಅಂತಗಳಿಲ್ಲದ, ಅನಂತವೀರ್ಯನಾದ, ಅನಂತಬಾಹುಗಳನ್ನುಳ್ಳ, ಶಶಿ-

ಸೂರ್ಯರನ್ನೇ ನೇತ್ರಗಳನ್ನಾಗುಳ್ಳ, ಅಗ್ನಿಯಂತೆ ಉರಿಯುತ್ತಿರುವ, ನಿನ್ನದೇ ತೇಜಸ್ಸಿನಿಂದ ಈ ವಿಶ್ವವನ್ನು ಸುಡುತ್ತಿರುವ ನಿನ್ನನ್ನು ನೋಡುತ್ತಿದ್ದೇನೆ. ದಿವಿ ಮತ್ತು ಭೂಮಿಯ ನಡುವಿನದೆಲ್ಲವೂ ನಿನ್ನೊಬ್ಬನಿಂದಲೇ ವ್ಯಾಪ್ತವಾಗಿರುವುದು. ಮಹಾತ್ಮನ್! ನಿನ್ನ ಈ ಉಗ್ರ ಅದ್ಭುತ ರೂಪವನ್ನು ನೋಡಿ ಲೋಕತ್ರಯಗಳು ಪ್ರವ್ಯಥಿತವಾಗುತ್ತಿವೆ. ಈ ಸುರಸಂಘಗಳು ನಿನ್ನನ್ನೇ ಪ್ರವೇಶಿಸುತ್ತಿವೆ. ಕೆಲವರು ಭೀತರಾಗಿ ಕೈಮುಗಿದು ನಿಂತಿರುವರು. ಮಹರ್ಷಿ-ಸಿದ್ಧ ಗಣಗಳು “ಸ್ವಸ್ತಿ” ಎಂದು ಹೇಳುತ್ತಾ ನಿನ್ನನ್ನು ಪುಷ್ಕಲ ಸ್ತುತಿಗಳಿಂದ ಸ್ತುತಿಸುತ್ತಿದ್ದಾರೆ. ರುದ್ರರು, ಆದಿತ್ಯರು, ಸಾಧ್ಯರು, ವಿಶ್ವೇದೇವರು, ಅಶ್ವಿನಿಗಳು, ಮರುತರು, ಊಷ್ಮಪರು, ಗಂಧರ್ವರು, ಯಕ್ಷರು, ಅಸುರರು, ಮತ್ತು ಸಿದ್ಧ ಸಂಘಗಳೆಲ್ಲರೂ ವಿಸ್ಮಿತರಾಗಿ ನಿನ್ನನ್ನು ನೋಡುತ್ತಿದ್ದಾರೆ. ಮಹಾಬಾಹೋ! ಬಹುವಕ್ತ್ರನೇತ್ರಗಳನ್ನುಳ್ಳ, ಬಹು ಬಾಹು, ತೊಡೆ, ಪಾದಗಳನ್ನುಳ್ಳ, ಬಹು ಉದರಗಳನ್ನುಳ್ಳ, ಬಹುದಂಷ್ಟ್ರಕರಾಲನಾಗಿರುವ ನಿನ್ನನ್ನು ನೋಡಿ ನಾನೂ ಲೋಕಗಳೂ ಪ್ರವ್ಯಥಿತವಾಗಿದ್ದೇವೆ. ವಿಷ್ಣೋ! ನಭವನ್ನು ಸ್ಪರ್ಶಿಸುವ, ಅನೇಕ ವರ್ಣಗಳಲ್ಲಿ ಬೆಳಗುತ್ತಿರುವ, ಅಗಲ ತೆರೆದ ಬಾಯಿಯುಳ್ಳ, ಹೊಳೆಯುವ ವಿಶಾಲನೇತ್ರಗಳನ್ನುಳ್ಳ ನಿನ್ನನ್ನು ನೋಡಿಯೇ ನಾನು ಅಂತರಾತ್ಮದಲ್ಲಿ

ಪ್ರವಥಿತನಾಗಿದ್ದೇನೆ. ಧೃತಿ ಮತ್ತು ಶಾಂತಿಯನ್ನು ಪಡೆಯದಂತಾಗಿದ್ದೇನೆ. ಕಾಲಾನಲನಂತಿರುವ ದಂಷ್ಟ್ರಾಕರಾಲ ಮುಖಗಳನ್ನು ನೋಡಿಯೇ ನನಗೆ ದಿಕ್ಕು ತೋಚದಂತಾಗಿದೆ. ನೆಲೆಯು ದೊರೆಯುತ್ತಿಲ್ಲ. ದೇವೇಶ! ಜಗನ್ನಿವಾಸ! ಪ್ರಸನ್ನನಾಗು.

ಅವನಿಪಾಲಸಂಘಗಳೊಡನೆ ಈ ಧೃತರಾಷ್ಟ್ರನ ಮಕ್ಕಳೆಲ್ಲರೂ, ಭೀಷ್ಮ, ದ್ರೋಣ, ಸೂತಪುತ್ರರೊಂದಿಗೆ ನಮ್ಮ ಯೋಧಮುಖ್ಯರೊಂದಿಗೆ ಕೋರೆದಾಡೆಗಳಿಂದ ವಿಕರವಾಗಿ ಭಯಂಕರವಾಗಿರುವ ನಿನ್ನ ಮುಖಗಳನ್ನು ತ್ವರೆಮಾಡಿ ಹೊಗುತ್ತಿರುವರು. ಕೆಲವರು ಹಲ್ಲುಸಂದುಗಳಲ್ಲಿ ಸಿಲುಕಿಕೊಂಡು ಚೂರ್ಣಿತ ಉತ್ತಮಾಂಗಗಳೊಡನೆ ಕಾಣುತ್ತಿದ್ದಾರೆ. ಹೇಗೆ ನದಿಗಳ ನೀರು ಬಹುವೇಗದಿಂದ ಸಮುದ್ರಕ್ಕೆ ಅಭಿಮುಖವಾಗಿಯೇ ಓಡುತ್ತವೆಯೋ ಹಾಗೆಯೇ ಈ ನರಲೋಕವೀರರು ಪ್ರಜ್ವಲಿಸುತ್ತಿರುವ ನಿನ್ನ ಬಾಯಿಗಳೊಳಗೆ ಹೊಗುತ್ತಿರುವರು. ಹೇಗೆ ಧಗಧಗನೆ ಉರಿಯುತ್ತಿರುವ ಬೆಂಕಿಯನ್ನು ನಾಶಗೊಳ್ಳಲು ಪತಂಗಗಳು ಸಮೃದ್ಧವೇಗದಿಂದ ಮುನ್ನುಗ್ಗುತ್ತವೆಯೋ ಹಾಗೆ ಲೋಕಗಳು ನಾಶಗೊಳ್ಳಲು ನಿನ್ನ ಮುಖಗಳನ್ನೂ ಸಮೃದ್ಧವೇಗದಿಂದ ಹೊಗುತ್ತಿವೆ. ಸುತ್ತಲೂ ಸಮಗ್ರವಾದ ಲೋಕಗಳನ್ನೂ ಉರಿಯುತ್ತಿರುವ ವದನಗಳಿಂದ ನುಂಗುತ್ತಾ

ಚಪ್ಪರಿಸುತ್ತಿದ್ದೀಯೆ. ವಿಷ್ಣೋ! ಸಮಗ್ರ ಜಗತ್ತೂ ನಿನ್ನ ತೇಜಸ್ಸಿನಿಂದ ತುಂಬಿಕೊಂಡು ಉಗ್ರ ಪ್ರಭೆಗಳಿಂದ ಪರಿತಪಿಸುತ್ತಿವೆ. ಉಗ್ರರೂಪನಾದ ನೀನು ಯಾರು? ನನಗೆ ಹೇಳು. ದೇವವರ! ಪ್ರಸನ್ನನಾಗು. ನಿನಗೆ ನಮಸ್ಕಾರ. ಆದ್ಯನಾದ ನಿನ್ನನ್ನು ಅರಿಯಲಿಚ್ಛಿಸುತ್ತೇನೆ. ನಿನ್ನ ಪ್ರವೃತ್ತಿಯನ್ನು ನಾನು ತಿಳಿಯಲಾರೆನು."

ಶ್ರೀಭಗವಾನನು ಹೇಳಿದನು:

"ಲೋಕವನ್ನು ಕ್ಷಯಗೊಳಿಸುವ, ಪ್ರವೃದ್ಧನಾಗಿರುವ ಕಾಲನು ನಾನು (I am time grown old). ಇಲ್ಲಿ ನಾನು ಲೋಕಗಳನ್ನು ಸಮಾಹರಣಮಾಡಲು ತೊಡಗಿರುವೆನು. ನೀನಿಲ್ಲದಿದ್ದರೂ ಅಲ್ಲಿ ಒಂದೊಂದು ಸೇನೆಯಲ್ಲಿಯೂ ನಿಂತಿರುವ ಯೋಧರು ಇಲ್ಲವಾಗುವರು. ಆದುದರಿಂದ ಎದ್ದೇಳು. ಯಶಸ್ಸನ್ನು ಪಡೆ. ಶತ್ರುಗಳನ್ನು ಗೆದ್ದು ಸಮೃದ್ಧ ರಾಜ್ಯವನ್ನು ಗೆಲ್ಲು! ಇವರೆಲ್ಲರೂ ಈ ಮೊದಲೇ ನನ್ನಿಂದ ಹತರಾಗಿರುವವರು. ಸವ್ಯಸಾಚಿನ್! ನೀನು ನಿಮಿತ್ತಮಾತ್ರನಾಗು! ನನ್ನಿಂದ ಹತರಾಗಿರುವ ದ್ರೋಣ, ಭೀಷ್ಮ, ಜಯದ್ರಥ, ಕರ್ಣ ಮತ್ತು ಇತರ ಯೋಧವೀರರನ್ನೂ ಕೊಲ್ಲು. ವ್ಯಥೆಪಡಬೇಡ. ಯುದ್ಧಮಾಡು. ರಣದಲ್ಲಿ ನಿನ್ನ ದಾಯಾದಿಗಳನ್ನು ಗೆಲ್ಲುವೆ."



ಕೇಶವನ ಈ ಮಾತನ್ನು ಕೇಳಿ ನಡುಗುತ್ತಿದ್ದ ಕಿರೀಟಿಯು ಅಂಜಲೀಬದ್ಧನಾಗಿ ಕೃಷ್ಣನಿಗೆ ಮತ್ತೆ ಮತ್ತೆ ನಮಸ್ಕರಿಸುತ್ತ, ಹೆದರಿ ಹೆದರಿಕೊಂಡು ನಮಸ್ಕರಿಸುತ್ತಾ, ಕಣ್ಣೀರುತುಂಬಿದ ಕಂಠದಲ್ಲಿ ಹೇಳಿದನು:

> “ಹೃಷೀಕೇಶ! ನಿನ್ನ ಪ್ರಕೀರ್ತಿಯಿಂದ ಜಗತ್ತು ಪ್ರಹರ್ಷಗೊಂಡಿದೆ. ಅನುರಾಗದಿಂದ ಕೂಡಿಕೊಂಡಿದೆ. ರಾಕ್ಷಸರು ಭೀತರಾಗಿ ದಿಕ್ಕು ದಿಕ್ಕುಗಳಲ್ಲಿ ಓಡಿ ಹೋಗುತ್ತಿದ್ದಾರೆ. ಮತ್ತು ಸಿದ್ಧಸಂಘಗಳೆಲ್ಲವೂ ನಮಸ್ಕರಿಸುತ್ತಿವೆ. ಮಹಾತ್ಮನ್! ಬ್ರಹ್ಮನಿಗೂ ಆದಿಕರ್ತೃವಾಗಿರುವ ದೊಡ್ಡವನಾಗಿರುವ ನಿನಗೆ ಏಕೆ ನಮಸ್ಕರಿಸುವುದಿಲ್ಲ? ಅನಂತ! ದೇವೇಶ! ಜಗನ್ನಿವಾಸ! ಸತ್ತ-ಅಸತ್ತರನ್ನೂ ಮೀರಿರುವವ ಅಕ್ಷರನು ನೀನು. ನೀನು ಆದಿದೇವ. ಪುರುಷ. ಪುರಾಣ. ನೀನು ಈ ವಿಶ್ವದ ಪರಮ ನಿಧಾನ. ತಿಳಿಯಬೇಕಾದುದೆಲ್ಲವನ್ನೂ ತಿಳಿತಿರುವೆ. ತಿಳಿಯಬೇಕಾಗಿರುವುದೂ ನೀನೆ. ನೀನು ಪರಂಧಾಮ. ಅನಂತರೂಪ! ವಿಶ್ವವೆಲ್ಲವೂ ನಿನ್ನಿಂದಲೇ ವ್ಯಾಪ್ತವಾಗಿದೆ. ನೀನು ವಾಯು, ಯಮ, ಅಗ್ನಿ, ವರುಣ, ಶಶಾಂಕ, ಪ್ರಜಾಪತಿ ಪ್ರಪಿತಾಮಹನೂ ಕೂಡ. ನಿನಗೆ ನಮಸ್ಕಾರ! ಸಾವಿರ ನಮಸ್ಕಾರಗಳು! ಮತ್ತೆ ಇನ್ನೊಮ್ಮೆ ನಮಸ್ಕಾರ! ನಿನಗೆ ನಮಸ್ಕಾರ! ಸರ್ವ! ನಿನಗೆ ಮುಂದಿನಿಂದ ನಮಸ್ಕಾರ.

ಹಿಂದಿನಿಂದ ನಮಸ್ಕಾರ. ಎಲ್ಲ ಕಡೆಗಳಿಂದ ನಿನಗೆ ನಮಸ್ಕಾರ. ಅನಂತ ವೀರ್ಯ ಮತ್ತು ಅಮಿತವಿಕ್ರಮನು ನೀನು. ಸರ್ವವನ್ನೂ ಚೆನ್ನಾಗಿ ವ್ಯಾಪಿಸಿರುವೆ.

ಆದುದರಿಂದ ಸರ್ವನಾಗಿರುವೆ. ನಿನ್ನ ಈ ಮಹಿಮೆಗಳನ್ನು ಅರಿಯದೆ, ಸಖನೆಂದು ತಿಳಿದು, “ಎಲೆ ಕೃಷ್ಣ!”, “ಎಲೆ ಯಾದವ!”, “ಎಲೆ ಗೆಳೆಯ!” ಎಂದು ದಿಟ್ಟತನದಿಂದ ಅಥವಾ ಪ್ರಣಯದಿಂದ ಅಥವಾ ಪ್ರಮಾದದಿಂದ ಏನು ಹೇಳಿರುವೆನೋ; ವಿಹಾರ, ಶಯ್ಯೆ, ಆಸನ ಮತ್ತು ಭೋಜನಗಳಲ್ಲಿ ಅಪಹಾಸಕ್ಕಾಗಿ ಒಬ್ಬನೇ ಇರುವಾಗ ಅಥವಾ ಇತರರ ಸಮಕ್ಷಮದಲ್ಲಿ ಏನು ಅಸತ್ಕಾರ ಮಾಡಿದೆನೋ ಅದನ್ನು ಅಪ್ರಮೇಯನಾದ ನೀನು ಕ್ಷಮಿಸಬೇಕು! ಈ ಲೋಕದ ಚರಾಚರಗಳ ಪಿತನಾಗಿರುವೆ. ನೀನು ಇದರ ಗರೀಯ ಗುರುವೂ ಪೂಜ್ಯನೂ ಆಗಿರುವೆ. ಅಪ್ರತಿಮಪ್ರಭಾವ! ಲೋಕತ್ರಯದಲ್ಲಿಯೂ ನಿನ್ನ ಸಮನಾದವನು ಇಲ್ಲ. ಇನ್ನು ನಿನಗಿಂತ ಹೆಚ್ಚಿನವನು ಎಲ್ಲಿ? ಆದುದರಿಂದ ಪ್ರಣಾಮಮಾಡಿ, ಕಾಯದಿಂದ ಅಡ್ಡಬಿದ್ದು ಈಶ ಈಡ್ಯನಾದ ನಿನ್ನನ್ನು ಪ್ರಸನ್ನಗೊಳಿಸುತ್ತಿದ್ದೇನೆ. ತಂದೆಯು ಮಗನನ್ನು, ಸಖನು ಸಖನನ್ನು ಮತ್ತು ಪ್ರಿಯನು ಪ್ರಿಯೆಯನ್ನು ಸಹಿಸಿಕೊಳ್ಳುವಂತೆ ದೇವ! ಸಹಿಸಿಕೊಳ್ಳಬೇಕು. ಹಿಂದೆ ಎಂದೂ ನೋಡಿರದುದನ್ನು ಕಂಡು ಹರ್ಷಿತನಾಗಿದ್ದೇನೆ.

ಮತ್ತು ಭಯದಿಂದ ನನ್ನ ಮನಸ್ಸು ತುಂಬಾ ವ್ಯಥಿತಗೊಂಡಿದೆ. ದೇವ! ನನಗೆ ಅದೇ ರೂಪವನ್ನು ತೋರಿಸು. ದೇವೇಶ! ಜಗನ್ನಿವಾಸ! ಪ್ರಸನ್ನನಾಗು! ಕಿರೀಟಿಯೂ, ಗದಿಯೂ, ಚಕ್ರವನ್ನು ಹಿಡಿದಿರುವವನೂ ಆಗಿದ್ದ ಅದೇ ನಿನ್ನನ್ನು ನೋಡಲು ಬಯಸುತ್ತೇನೆ. ಸಹಸ್ರಬಾಹೋ! ವಿಶ್ವಮೂರ್ತೇ! ಅದೇ ಚತುರ್ಭುಜಗಳ ರೂಪದಿಂದ ತೋರು!"

ಶ್ರೀಭಗವಾನನು ಹೇಳಿದನು:

"ಅರ್ಜುನ! ನಾನು ನಿನ್ನ ಮೇಲೆ ಪ್ರಸನ್ನನಾಗಿರುವುದರಿಂದ ನಿನಗೆ ನಾನು ತೇಜೋಮಯವೂ, ವಿಶ್ವವೂ, ಅನಂತವೂ, ಆದಿಯಲ್ಲಿರುವುದೂ ಆದ ಈ ಪರಮ ರೂಪವನ್ನು ಆತ್ಮಯೋಗದಿಂದ ತೋರಿಸಿದೆ. ಇದಕ್ಕೂ ಮೊದಲು ನೀನಲ್ಲದೇ ಬೇರೆ ಯಾರೂ ನನ್ನನ್ನು ಹೀಗೆ ಕಂಡದ್ದಿಲ್ಲ. ವೇದ, ಯಜ್ಞ, ಅಧ್ಯಯನ, ದಾನಗಳಿಂದಾಗಲೀ ಕ್ರಿಯೆಗಳಿಂದಾಗಲೀ, ಉಗ್ರ ತಪಸ್ಸುಗಳಿಂದಗಲೀ ನನ್ನ ಈ ರೂಪವನ್ನು ನರಲೋಕದಲ್ಲಿ ನಿನ್ನ ಹೊರತು ಮತ್ತೊಬ್ಬನಿಂದ ನೋಡಲು ಶಕ್ಯವಿಲ್ಲ. ನನ್ನ ಈ ಘೋರ ರೂಪವನ್ನು ಕಂಡು ನಿನಗೆ ವ್ಯಥೆಯಾಗದಿರಲಿ. ವಿಮೂಢಭಾವವೂ ಆಗದಿರಲಿ. ಭಯವನ್ನು ಕಳೆದುಕೊಂಡು ಪುನಃ ನೀನು ಪ್ರೀತಮನಸ್ಕನಾಗು. ನನ್ನ ಅದೇ ರೂಪವನ್ನು ಇಗೋ ನೋಡು!"

ಹೀಗೆ ಅರ್ಜುನನಿಗೆ ಹೇಳಿ ವಾಸುದೇವನು ಪುನಃ ತನ್ನ ಮೊದಲಿನ ರೂಪವನ್ನು ತೋರಿಸಿದನು. ಪುನಃ ಸೌಮ್ಯರೂಪವನ್ನು ತಳೆದು ಭೀತನಾಗಿದ್ದ ಅವನನ್ನು ಆ ಮಹಾತ್ಮನು ಸಂತವಿಸಿದನು. ಅರ್ಜುನನು ಹೇಳಿದನು:

> "ಜನಾರ್ದನ! ಸೌಮ್ಯವಾದ ನಿನ್ನ ಈ ಮಾನುಷರೂಪವನ್ನು ನೋಡಿ ಈಗ ಸಚೇತನಗೊಂಡು ಸ್ವಭಾವವನ್ನು ಹಿಂದೆ ಪಡೆದಿದ್ದೇನೆ."

ಶ್ರೀಭಗವಾನನು ಹೇಳಿದನು:

> "ದೊರೆಯಲು ತುಂಬಾ ಕಷ್ಟವಾದ ಆದರೆ ನೀನು ನೋಡಿದ ನನ್ನ ಈ ರೂಪವನ್ನು ನೋಡಲು ದೇವತೆಗಳೂ ಕೂಡ ನಿತ್ಯವೂ ಬಯಸುತ್ತಿರುತ್ತಾರೆ. ನೀನು ಹೇಗೆ ನನ್ನನ್ನು ನೋಡಿದೆಯೋ ಹಾಗೆ ನೋಡಲು ವೇದಗಳಿಂದ ಸಾಧ್ಯವಿಲ್ಲ. ತಪಸ್ಸಿನಿಂದ ಆಗುವುದಿಲ್ಲ. ದಾನಗಳಿಂದ ಮತ್ತು ಇಜ್ಯಗಳಿಂದ ಆಗುವುದಿಲ್ಲ. ಅರ್ಜುನ! ಅನನ್ಯ ಭಕ್ತಿಯಿಂದ ಈ ವಿಧದ ನನ್ನನ್ನು ಇದ್ದಹಾಗೆ ತಿಳಿದುಕೊಳ್ಳಲು ಮತ್ತು ನೋಡಲು ಸಾಧ್ಯ. ನನಗಾಗಿಯೇ ಮಾಡುವವನು, ನಾನೇ ಪರಮಗತಿಯೆಂದು ತಿಳಿದುಕೊಂಡಿರುವವನು, ನನ್ನ ಭಕ್ತನು, ಸಂಗವರ್ಜಿತನಾಗಿ, ಸರ್ವಭೂತಗಳಲ್ಲಿ ನಿರ್ವೈರನಾಗಿರುವವನು ನನ್ನನ್ನೇ ಸೇರುತ್ತಾನೆ."

## ಯುಧಿಷ್ಠಿರನು ಭೀಷ್ಮಾದಿಗಳನ್ನು ಸಮ್ಮಾನಿಸಿದುದು

ಧನಂಜಯನು ಬಾಣ-ಗಾಂಡೀವಗಳನ್ನು ಧರಿಸಿದುದನ್ನು ನೋಡಿ ಮಹಾರಥಿಗಳು ಪುನಃ ಮಹಾನಾದಗೈದರು. ಆ ವೀರ ಪಾಂಡವರು, ಸೋಮಕರು ಮತ್ತು ಅವರ ಅನುಯಾಯಿಗಳು ಸಾಗರ ಸಂಭವ ಶಂಖಗಳನ್ನು ಹರ್ಷಿತರಾಗಿ ಊದಿದರು. ಆಗ ಭೇರಿಗಳು, ಪೇಶಿಗಳು, ಕ್ರಕಚಗಳು, ಗೋವಿಷಾಣಿಕಗಳು ಒಟ್ಟಿಗೇ ಮೊಳಗಿ ಮಹಾ ಶಬ್ಧವುಂಟಾಯಿತು. ಆಗ ದೇವತೆಗಳು, ಗಂಧರ್ವರು, ಪಿತೃಗಳು, ಮತ್ತು ಸಿದ್ಧಚಾರಣ ಸಂಘಗಳು ನೋಡಲು ಆಕಾಶದಲ್ಲಿ ಒಂದುಗೂಡಿದರು. ಮಹಾಭಾಗ ಋಷಿಗಳೂ ಕೂಡ ಶತಕ್ರತುವನ್ನು ಮುಂದಿಟ್ಟುಕೊಂಡು ಒಟ್ಟಿಗೇ ಆ ಮಹಾ ಯುದ್ಧವನ್ನು ನೋಡಲು ಒಂದುಗೂಡಿದರು. ಆಗ ಯುದ್ಧಕ್ಕೆ ಸುಸಮುದ್ಯತವಾಗಿ ಸಾಗರದಂತೆ ಮುಂದೆ ಚಲಿಸುತ್ತಿದ್ದ ಆ ಸೇನೆಗಳನ್ನು ನೋಡಿ ವೀರ ಯುಧಿಷ್ಠಿರನು ಕವಚವನ್ನು ಕಳಚಿ, ಶ್ರೇಷ್ಠ ಆಯುಧವನ್ನು ಕೆಳಗಿಟ್ಟು, ಬೇಗನೆ ರಥದಿಂದ ಕೆಳಗಿಳಿದು, ಕಾಲ್ನಡುಗೆಯಲ್ಲಿಯೇ, ಕೈಗಳನ್ನು ಮುಗಿದು ನಡೆದನು. ಧರ್ಮರಾಜ ಯುಧಿಷ್ಠಿರನು ರಿಪುವಾಹಿನಿಯಲ್ಲಿದ್ದ ಪಿತಾಮಹನನ್ನೇ ನೋಡಿ ಮಾತನಾಡಲು ಪೂರ್ವಾಭಿಮುಖವಾಗಿ ನಡೆದನು. ಅವನು ಹೋಗುತ್ತಿರುವುದನ್ನು ನೋಡಿ ಕುಂತೀಪುತ್ರ ಧನಂಜಯನು ಕೂಡಲೇ ತನ್ನ ರಥದಿಂದ ಕೆಳಗಿಳಿದು ಇತರ ಸಹೋದರರೊಂದಿಗೆ ಅವನನ್ನು ಅನುಸರಿಸಿ ನಡೆದನು. ಭಗವಾನ್ ವಾಸುದೇವನೂ ಹಿಂದೆ ನಡೆದನು. ಹಾಗೆಯೇ ಉತ್ಸುಕ ಮುಖ್ಯ ರಾಜರೂ ಹಿಂಬಾಲಿಸಿದರು.



ಅರ್ಜುನನು ಹೇಳಿದನು:

“ರಾಜನ್! ಇದೇನು ಮಾಡುತ್ತಿದ್ದೀಯೆ? ನಮ್ಮನ್ನು ತೊರೆದು ಕಾಲ್ನಡುಗೆಯಲ್ಲಿಯೇ ಪೂರ್ವಾಭಿಮುಖವಾಗಿ ಶತ್ರುಸೇನೆಗಳ ಕಡೆ ಹೋಗುತ್ತಿರುವೆಯಲ್ಲಾ?”

ಭೀಮಸೇನನು ಹೇಳಿದನು:

“ರಾಜೇಂದ್ರ! ಕವಚಾಯುಧಗಳನ್ನು ಕೆಳಗಿಟ್ಟು, ಕವಚಗಳಿಂದ ಕೂಡಿದ ಅರಿಸೇನೆಗಳ ಕಡೆ ತಮ್ಮಂದಿರನ್ನು ತೊರೆದು ಎಲ್ಲಿಗೆ ಹೋಗುತ್ತಿದ್ದೀಯೆ?”

ನಕುಲನು ಹೇಳಿದನು:

“ಭಾರತ! ನೀನು ನನ್ನ ಹಿರಿಯಣ್ಣ. ಈ ರೀತಿ ನೀನು ಹೋಗುತ್ತಿರುವುದರಿಂದ ಭೀತಿಯು ನನ್ನ ಹೃದಯವನ್ನು ನೋಯಿಸುತ್ತಿದೆ. ಹೇಳು! ನೀನು ಎಲ್ಲಿಗೆ ಹೋಗುತ್ತಿರುವೆ?”

ಸಹದೇವನು ಹೇಳಿದನು:

“ಸದ್ಯದಲ್ಲಿಯೇ ಮಹಾಭಯಂಕರ ಯುದ್ಧಮಾಡಲಿಕ್ಕಿರುವ ಈ ರಣಸಮೂಹದಲ್ಲಿ ಶತ್ರುಗಳ ಕಡೆ ಎಲ್ಲಿಗೆ ಹೋಗುತ್ತೀಯೆ ನೃಪ!”

ತಮ್ಮಂದಿರು ಈ ರೀತಿ ಕೇಳುತ್ತಿದ್ದರೂ ಯುಧಿಷ್ಠಿರನು ಏನನ್ನೂ

ಮಾತನಾಡದೇ ಮುಂದುವರೆದನು. ಮಹಾಪ್ರಾಜ್ಞ ಮಹಾಮನಸ್ವಿ ವಾಸುದೇವನು ಅವರಿಗೆ ನಗುತ್ತಾ "ಇವನ ಅಭಿಪ್ರಾಯವು ನನಗೆ ತಿಳಿದಿದೆ" ಎಂದನು.

> "ಈ ಪಾರ್ಥಿವನು ಭೀಷ್ಮ, ದ್ರೋಣ, ಗೌತಮ ಮತ್ತು ಶಲ್ಯರೇ ಮೊದಲಾದ ಗುರುಗಳನ್ನು ಗೌರವಿಸಿ ಎಲ್ಲ ಶತ್ರುಗಳೊಂದಿಗೆ ಹೋರಾಡುತ್ತಾನೆ. ಗುರುಗಳನ್ನು ಗೌರವಿಸಿ ನಮಸ್ಕರಿಸಿ ಯುದ್ಧಮಾಡುವವನು ಮಹತ್ತರ ಆಪತ್ತುಗಳನ್ನೂ ಜಯಿಸುತ್ತಾನೆಂದು ಹಿಂದಿನ ಕಲ್ಪಗಳಿಂದ ಕೇಳುತ್ತೇವೆ. ತನಗಿಂತಲೂ ಮಹತ್ತರರನ್ನು ಯಥಾಶಾಸ್ತ್ರವಾಗಿ ನಮಸ್ಕರಿಸಿ ಯುದ್ಧಮಾಡುವವನಿಗೆ ಯುದ್ಧದಲ್ಲಿ ಜಯವು ಖಂಡಿತವಾದುದು ಎಂದು ನನಗನ್ನಿಸುತ್ತದೆ."

ಕೃಷ್ಣನು ಹೀಗೆ ಹೇಳಲು ಧಾರ್ತರಾಷ್ಟ್ರನ ಸೇನೆಯಲ್ಲಿ ಮಹಾ ಹಾಹಾಕಾರವಾಯಿತು. ಇನ್ನೊಂದು ಕಡೆಯಲ್ಲಿ ನಿಃಶಬ್ಧವಾಯಿತು. ದೂರದಿಂದಲೇ ಯುಧಿಷ್ಠಿರನನ್ನು ನೋಡಿ ಧಾರ್ತರಾಷ್ಟ್ರನ ಸೈನಿಕರು ತಮ್ಮೊಂದಿಗೇ ಮಾತನಾಡಿಕೊಂಡರು:

> "ಇವನು ಕುಲಪಾಂಸನ! ಈ ರಾಜನು ಹೆದರಿಕೊಂಡಿದ್ದಾನೆ ಎನ್ನುವುದು ವ್ಯಕ್ತವಾಗುತ್ತಿದೆ. ಯುಧಿಷ್ಠಿರನು ಸೋದರರೊಂದಿಗೆ ಶರಣಾಗಲು ಬೇಡಿಕೊಂಡು ಭೀಷ್ಮನಲ್ಲಿಗೆ ಬರುತ್ತಿದ್ದಾನೆ. ಧನಂಜಯ, ಪಾಂಡವ ವೃಕೋದರ, ನಕುಲ

ಸಹದೇವರು ನಾಯಕರಾಗಿರುವಾಗ ಈ ಪಾಂಡವನು ಏಕೆ ಭೀತನಾಗಿದ್ದಾನೆ? ಭುವಿಯಲ್ಲಿ ಪ್ರಸಿದ್ಧನಾದರೂ, ಯುದ್ಧದ ಕುರಿತು ಹೃದಯದಲ್ಲಿ ಭೀತಿಪಡುತ್ತಿರುವ ಈ ಅಲ್ಪಸತ್ವನು ಕ್ಷತ್ರಿಯಕುಲದಲ್ಲಿಯೇ ಜನಿಸಿರಲಿಕ್ಕಿಲ್ಲ!”

ಆಗ ಆ ಕ್ಷತ್ರಿಯರೆಲ್ಲರೂ ಕೌರವರನ್ನು ಪ್ರಶಂಸಿಸಿದರು. ಸಂತೋಷದಿಂದ ಸುಮನಸ್ಕರಾಗಿ ತಮ್ಮ ಅಂಗವಸ್ತ್ರಗಳನ್ನು ಪುನಃ ಪುನಃ ಮೇಲೆತ್ತಿ ಬೀಸಿದರು. ಆಗ ಅಲ್ಲಿರುವ ಯೋಧರೆಲ್ಲರೂ ಸೋದರರೊಂದಿಗೆ ಯುಧಿಷ್ಠಿರನನ್ನೂ ಜೊತೆಗೆ ಕೇಶವನನ್ನೂ ನಿಂದಿಸಿದರು. ಆಗ ಯುಧಿಷ್ಠಿರನನ್ನು ಧಿಕ್ಕರಿಸಿ ಕೌರವ ಸೈನ್ಯವು ಪುನಃ ನಿಃಶಬ್ಧವಾಯಿತು. ಯುಧಿಷ್ಠಿರನು ಹೀಗೆ ಮಾಡಲು ಎರಡೂ ಸೇನೆಗಳಲ್ಲಿ

“ರಾಜನು ಏನು ಹೇಳುತ್ತಾನೆ? ಭೀಷ್ಮನು ಏನೆಂದು ಉತ್ತರಿಸುತ್ತಾನೆ? ಸಮರಶ್ಲಾಘೀ ಭೀಮ ಮತ್ತು ಕೃಷ್ಣಾರ್ಜುನರು ಏನು ಹೇಳುತ್ತಾರೆ?”

ಎಂದು ಮಹಾ ಸಂಶಯವುಂಟಾಯಿತು. ಅವನು ಶರಶಕ್ತಿಗಳಿಂದ ಕೂಡಿದ್ದ ಶತ್ರುಗಳ ಸೇನೆಯನ್ನು ಪ್ರವೇಶಿಸಿ, ತಮ್ಮದಿಂರಿಂದ ಸುತ್ತುವರೆಯಲ್ಪಟ್ಟು ಭೀಷ್ಮನನ್ನು ಸಮೀಪಿಸಿದನು. ರಾಜಾ ಪಾಂಡವನು ಯುದ್ಧಕ್ಕೆ ಸಿದ್ಧನಾಗಿದ್ದ ಶಾಂತನವ ಭೀಷ್ಮನ ಪಾದಗಳನ್ನು ಕೈಗಳಿಂದ ಹಿಡಿದುಕೊಂಡು ಹೇಳಿದನು:

“ತಾತ! ದುರ್ಧರ್ಷ! ನಿನ್ನೊಡನೆ ಯುದ್ಧಮಾಡಲು

ಕರೆಸಿಕೊಂಡಿರುವೆ! ಅನುಜ್ಞೆಯನ್ನು ನೀಡು. ಜಯವಾಗಲೆಂದು ಆಶೀರ್ವದಿಸು!"

ಭೀಷ್ಮನು ಹೇಳಿದನು:

"ಭಾರತ! ಹೀಗೆ ನೀನು ನನ್ನ ಬಳಿ ಬರದೇ ಇದ್ದಿದ್ದರೆ ನಿನಗೆ ಪರಾಭವವಾಗಲೆಂದು ಶಪಿಸುತ್ತಿದ್ದೆ. ಪುತ್ರ! ಪ್ರೀತನಾಗಿದ್ದೇನೆ. ಯುದ್ಧಮಾಡು. ಜಯವನ್ನು ಹೊಂದು. ಯುದ್ಧದಲ್ಲಿ ನಿನಗೆ ಅನ್ಯ ಏನೆಲ್ಲ ಅಭಿಲಾಷೆಗಳಿವೆಯೋ ಅವುಗಳನ್ನೂ ಪಡೆಯುತ್ತೀಯೆ. ನನ್ನಿಂದ ಏನನ್ನು ಬಯಸುತ್ತೀಯೋ ಆ ವರವನ್ನು ಕೇಳು. ಇದೇ ರೀತಿ ನಡೆದರೆ ನಿನಗೆ ಪರಾಜಯವಿಲ್ಲ. ಮನುಷ್ಯನು ಹಣದ ದಾಸನೇ ಹೊರತು ಹಣವು ಎಂದೂ ಯಾರ ದಾಸನೂ ಆಗಿರುವುದಿಲ್ಲ. ಇದು ಸತ್ಯ. ಹಣದಿಂದಲೇ ನಾನು ಕೌರವರಿಗೆ ಬದ್ಧನಾಗಿದ್ದೇನೆ. ಆದುದರಿಂದ ಈ ಕ್ಲೀಬವಾಕ್ಯವನ್ನು ಹೇಳುತ್ತಿದ್ದೇನೆ. ಹಣದಿಂದ ನಾನು ಅಪಹೃತನಾಗಿದ್ದೇನೆ. ಯುದ್ಧದಿಂದ ಬೇರೆ ಏನನ್ನು ಇಚ್ಛಿಸುತ್ತೀಯೆ?"

ಯುಧಿಷ್ಠಿರನು ಹೇಳಿದನು:

"ಮಹಾಪ್ರಾಜ್ಞ! ನಿತ್ಯವೂ ನನ್ನ ಹಿತೈಷಿಯಾಗಿ ಸಲಹೆ ನೀಡುತ್ತಿರು. ಸತತವೂ ಕೌರವನಿಗೋಸ್ಕರ ಯುದ್ಧಮಾಡು. ಇದೇ ನನ್ನ ವರ."

ಭೀಷ್ಮನು ಹೇಳಿದನು:

"ರಾಜನ್! ಇದರಲ್ಲಿ ನಿನಗೆ ಏನು ಸಹಾಯಮಾಡಲಿ? ನಿನ್ನ ಶತ್ರುಗಳಿಗಾಗಿ ಹೋರಾಡುತ್ತಿದ್ದೇನೆ. ನಿನ್ನ ಬಯಕೆಯೇನೆನ್ನುವುದನ್ನು ಹೇಳು!"

ಯುಧಿಷ್ಠಿರನು ಹೇಳಿದನು:

"ಅಪರಾಜಿತನಾದ ನಿನ್ನನ್ನು ಸಂಗ್ರಾಮದಲ್ಲಿ ಹೇಗೆ ಜಯಿಸಬಹುದು? ನಿನಗೆ ಶ್ರೇಯಸ್ಕರವೆಂದು ಕಂಡರೆ ನನಗೆ ಹಿತವಾದ ಈ ಸಲಹೆಯನ್ನು ನೀಡು."

ಭೀಷ್ಮನು ಹೇಳಿದನು:

"ಕೌಂತೇಯ! ಆಹವದಲ್ಲಿ ನನ್ನೊಂದಿಗೆ ಯುದ್ಧಮಾಡಿ ಗೆಲ್ಲುವ ಯಾವ ಪುರುಷನನ್ನೂ, ಸಾಕ್ಷಾತ್ ಶತಕ್ರತುವೂ ಕೂಡ, ನಾನು ಕಾಣುವುದಿಲ್ಲ."

ಯುಧಿಷ್ಠಿರನು ಹೇಳಿದನು:

"ಪಿತಾಮಹ! ನಿನಗೆ ನಮಸ್ಕಾರಗಳು! ಅದನ್ನು ಪುನಃ ನಿನ್ನಲ್ಲಿ ಕೇಳುತ್ತಿದ್ದೇನೆ. ಸಮರದಲ್ಲಿ ಶತ್ರುಗಳು ನಿನ್ನನ್ನು ಗೆಲ್ಲುವ ಉಪಾಯವನ್ನು ಹೇಳು."

ಭೀಷ್ಮನು ಹೇಳಿದನು:

“ಮಗೂ! ಸಮರದಲ್ಲಿ ನನ್ನನ್ನು ಜಯಿಸಬಲ್ಲ ಶತ್ರುವನ್ನು ನಾನು ಕಾಣುವುದಿಲ್ಲ. ನನ್ನ ಮೃತ್ಯುಕಾಲವು ಇನ್ನೂ ಬಂದಿಲ್ಲ. ಪುನಃ ಬರುವುದನ್ನು ಮಾಡು!”

ಭೀಷ್ಮನ ವಾಕ್ಯವನ್ನು ಶಿರಸಾ ಸ್ವೀಕರಿಸಿ ಯುಧಿಷ್ಠಿರನು ಪುನಃ ಅವನನ್ನು ವಂದಿಸಿದನು. ಅನಂತರ ಆ ಮಹಾಬಾಹುವು ಸರ್ವಸೈನ್ಯಗಳಿಗೂ ಕಾಣಿಸುವಂತೆ ಮಧ್ಯದಲ್ಲಿ ತಮ್ಮಂದಿರನ್ನೊಡಗೂಡಿ ಆಚಾರ್ಯನ ರಥದ ಕಡೆ ನಡೆದನು. ಅವನು ಆ ದುರ್ಧರ್ಷ ದ್ರೋಣನನ್ನು ಪ್ರದಕ್ಷಿಣೆಮಾಡಿ ನಮಸ್ಕರಿಸಿ ತನಗೆ ಶ್ರೇಯಸ್ಸನ್ನು ನೀಡುವಂತಹ ಮಾತುಗಳನ್ನಾಡಿದನು.

“ಭಗವನ್! ವಿಗತಕಲ್ಮಶನಾದ ನಿನ್ನೊಡನೆ ಯುದ್ಧಮಾಡಲು ಆಮಂತ್ರಿತನಾಗಿದ್ದೇನೆ. ನಿನ್ನಿಂದ ಅನುಜ್ಞಾತನಾಗಿ ಸರ್ವ ಶತ್ರುಗಳನ್ನೂ ಗೆಲ್ಲಬಲ್ಲೆನು.”

ದ್ರೋಣನು ಹೇಳಿದನು:

“ಮಹಾರಾಜ! ಯುದ್ಧದ ನಿಶ್ಚಯವನ್ನು ಮಾಡಿ ಒಂದುವೇಳೆ ನೀನು ನನ್ನಲ್ಲಿಗೆ ಬಾರದೇ ಇದ್ದಿದ್ದರೆ ನಾನು ನಿನಗೆ ಎಲ್ಲೆಡೆಯಿಂದ ಪರಾಭವವಾಗಲೆಂದು ಶಪಿಸುತ್ತಿದ್ದೆ. ಯುಧಿಷ್ಠಿರ! ನಿನ್ನಿಂದ ಪೂಜಿತನಾಗಿ ತುಷ್ಟನಾಗಿದ್ದೇನೆ. ಅನುಮತಿಯನ್ನಿತ್ತಿದ್ದೇನೆ. ಯುದ್ಧ ಮಾಡು! ವಿಜಯವನ್ನು ಹೊಂದುವೆ! ಈಗ ನಿನಗಿಷ್ಟವಾದುದನ್ನು ಮಾಡಲು ಬಿಡು.

ನೀನು ಏನನ್ನು ಬಯಸುತ್ತೀಯೆ ಹೇಳು. ಹೀಗಿರುವಾಗ ಯುದ್ಧದಲ್ಲಿ ಸಹಾಯವನ್ನು ಬಿಟ್ಟು ಬೇರೆ ಏನನ್ನು ಬಯಸುತ್ತೀಯೆ? ಮನುಷ್ಯನು ಹಣದ ದಾಸನೇ ಹೊರತು ಹಣವು ಎಂದೂ ಯಾರ ದಾಸನೂ ಆಗಿರುವುದಿಲ್ಲ. ಇದು ಸತ್ಯ. ಹಣದಿಂದಲೇ ನಾನು ಕೌರವರಿಗೆ ಬದ್ಧನಾಗಿದ್ದೇನೆ. ಆದುದರಿಂದ ನಾನು ಒಬ್ಬ ಶಂಡನಂತೆ ಹೇಳುತ್ತಿದ್ದೇನೆ - ಯುದ್ಧದಲ್ಲಿ ಸಹಾಯವಲ್ಲದೇ ಬೇರೆ ಏನನ್ನು ಬಯಸುತ್ತೀಯೆಂದು. ನಾನು ಕೌರವನಿಗಾಗಿ ಹೋರಾಡುತ್ತೇನೆ. ಆದರೆ ನನ್ನ ಆಸೆಯು ನಿನ್ನ ಜಯದ ಕುರಿತಾಗಿದೆ."

ಯುಧಿಷ್ಠಿರನು ಹೇಳಿದನು:

"ಬ್ರಹ್ಮನ್! ನನ್ನ ಜಯವನ್ನು ಬಯಸು. ನನ್ನ ಹಿತದಲ್ಲಿ ಸಲಹೆ ನೀಡು. ಕೌರವನ ಕಡೆಯಿಂದ ಯುದ್ಧಮಾಡು. ಇದು ನಾನು ಆರಿಸಿಕೊಳ್ಳುವ ವರ."

ದ್ರೋಣನು ಹೇಳಿದನು:

"ರಾಜನ್! ಹರಿಯೇ ಮಂತ್ರಿಯಾಗಿರುವ ನಿನಗೆ ವಿಜಯವು ನಿಶ್ಚಯಿಸಿದ್ದು. ಇದು ನನಗೂ ಕೂಡ ತಿಳಿದಿದೆ. ರಣದಲ್ಲಿ ಶತ್ರುಗಳನ್ನು ಜಯಿಸುತ್ತೀಯೆ. ಧರ್ಮವು ಎಲ್ಲಿದೆಯೋ ಅಲ್ಲಿ ಕೃಷ್ಣ. ಕೃಷ್ಣನೆಲ್ಲಿರುವನೋ ಅಲ್ಲಿ ಜಯ. ಕೌಂತೇಯ! ಹೋಗು. ಯುದ್ಧಮಾಡು. ಕೇಳು. ಇನ್ನೇನು ಹೇಳಲಿ?"

ಯುಧಿಷ್ಠಿರನು ಹೇಳಿದನು:

“ದ್ವಿಜಶ್ರೇಷ್ಠ! ನಾನು ನಿನ್ನಲ್ಲಿ ಕೇಳುತ್ತಿದ್ದೇನೆ. ಹೇಳುವುದನ್ನು ಕೇಳು. ಸಂಗ್ರಾಮದಲ್ಲಿ ನಾವು ಹೇಗೆ ನಿನ್ನನ್ನು ಸೋಲಿಸಿ ಜಯವನ್ನು ಪಡೆಯಬಹುದು?”

ದ್ರೋಣನು ಹೇಳಿದನು:

“ರಾಜನ್! ರಣದಲ್ಲಿ ನಾನು ಯುದ್ಧ ಮಾಡುತ್ತಿರುವ ವರೆಗೆ ನಿನಗೆ ವಿಜಯವಿಲ್ಲ. ಸೋದರರೊಂದಿಗೆ ಬೇಗನೆ ನನ್ನ ಸಾವಿಗೆ ಪ್ರಯತ್ನಿಸು.”

ಯುಧಿಷ್ಠಿರನು ಹೇಳಿದನು:

“ಮಹಾಬಾಹೋ! ಹಾಗಿದ್ದರೆ ನಿನ್ನ ವಧೆಯ ಉಪಾಯವನ್ನು ಹೇಳು. ನಿನಗೆ ನಮಸ್ಕಾರಗಳು. ಇದನ್ನು ತಿಳಿಸಿಕೊಡು. ಕೇಳಿಕೊಳ್ಳುತ್ತಿದ್ದೇನೆ.”

ದ್ರೋಣನು ಹೇಳಿದನು:

“ಮಗೂ! ರಣದಲ್ಲಿ ನಿಂತಿರುವ, ಸುಸಂರಬ್ಧನಾಗಿ ಶರವರ್ಷಗಳನ್ನು ಸುರಿಸುತ್ತಾ ಯುದ್ಧಮಾಡುತ್ತಿರುವ ನನ್ನನ್ನು ಕೊಲ್ಲುವ ಯಾವ ಶತ್ರುವನ್ನೂ ನಾನು ಕಾಣೆ! ಶಸ್ತ್ರಗಳನ್ನು ಕೆಳಗಿಟ್ಟು, ಅಚೇತನನಾಗಿ ಪ್ರಾಯಗತನಾದ ನನ್ನನ್ನು ಮಾತ್ರ ಯುದ್ಧದಲ್ಲಿ ಯೋಧರು ಕೊಲ್ಲಬಹುದು. ನಿನಗೆ ಸತ್ಯವನ್ನೇ

ಹೇಳುತ್ತಿದ್ದೇನೆ. ನನಗೆ ಶ್ರದ್ಧೆಯಿರುವವನ ಕ್ರೂರವಾದ ಸುಮಹಾ ಅಪ್ರಿಯ ವಾಕ್ಯಗಳನ್ನು ಕೇಳಿ ನಾನು ರಣದಲ್ಲಿ ಶಸ್ತ್ರಗಳನ್ನು ತ್ಯಜಿಸಿಯೇನು. ನಿನಗೆ ಸತ್ಯವನ್ನೇ ಹೇಳುತ್ತಿದ್ದೇನೆ."

ಭಾರದ್ವಾಜನ ಈ ಮಾತನ್ನು ಕೇಳಿ ಧೀಮತನು ಆ ಆಚಾರ್ಯನ ಅನುಮತಿಯನ್ನು ಪಡೆದು ಶಾರದ್ವತನ ಕಡೆ ನಡೆದನು. ಆ ವಾಕ್ಯವಿಶಾರದ ರಾಜನು ಕೃಪನನ್ನೂ ಪ್ರದಕ್ಷಿಣೆ ಮಾಡಿ ನಮಸ್ಕರಿಸಿ ಆ ದುರ್ಧರ್ಷತಮನಿಗೆ ಈ ಮಾತನ್ನಾಡಿದನು:

"ಗುರೋ! ಕಲ್ಮಷಗಳನ್ನು ಕಳೆದುಕೊಂಡು ನಿನ್ನೊಂದಿಗೆ ಯುದ್ಧಮಾಡುತ್ತೇನೆ. ಅಪ್ಪಣೆ ಕೊಡಬೇಕು. ಈ ರಿಪುಗಳೆಲ್ಲರನ್ನೂ ಜಯಿಸುತ್ತೇನೆ. ಅನುಜ್ಞೆ ನೀಡಬೇಕು!"

ಕೃಪನು ಹೇಳಿದನು:

"ಯುದ್ಧವನ್ನು ನಿಶ್ಚಯಿಸಿ ನೀನು ನನ್ನ ಬಳಿ ಬರದೇ ಇದ್ದಿದ್ದರೆ ನಾನು ನಿನ್ನ ಸರ್ವಶಃ ಸೋಲಾಗಲೆಂದು ಶಪಿಸುತ್ತಿದ್ದೆ. ಮನುಷ್ಯನು ಹಣದ ದಾಸನೇ ಹೊರತು ಹಣವು ಎಂದೂ ಯಾರ ದಾಸನೂ ಆಗಿರುವುದಿಲ್ಲ. ಇದು ಸತ್ಯ. ಹಣದಿಂದಲೇ ನಾನು ಕೌರವರಿಗೆ ಬದ್ಧನಾಗಿದ್ದೇನೆ. ಅವರ ಉದ್ದೇಶಕ್ಕೆ ಹೋರಾಡಬೇಕೆಂದು ನನ್ನ ಅಭಿಪ್ರಾಯವಿದೆ. ಆದುದರಿಂದ ಶಂಡನಂತೆ ಹೇಳುತ್ತಿದ್ದೇನೆ. ನಿನ್ನ ಪರವಾಗಿ ಯುದ್ಧಮಾಡುವುದನ್ನು ಬಿಟ್ಟು ಬೇರೆ ಏನನ್ನು

ಬಯಸುತ್ತೀಯೆ?”

ಯುಧಿಷ್ಠಿರನು ಹೇಳಿದನು:

“ಆಚಾರ್ಯ! ಅದು ಹಾಗಿದೆಯೆಂದೇ ನಿನ್ನನ್ನು ಕೇಳಿಕೊಳ್ಳುತ್ತೇನೆ. ನನ್ನ ಮಾತನ್ನು ಕೇಳು.”

ಇದನ್ನು ಹೇಳಿ ವ್ಯಥಿತನಾದ ರಾಜನು ಚೇತನವನ್ನು ಕಳೆದುಕೊಂಡು ಏನನ್ನೂ ಹೇಳದೇ ಸುಮ್ಮನಾದನು. ಆದರೆ ಅವನು ಹೇಳಬಯಸಿದುದನ್ನು ತಿಳಿದುಕೊಂಡ ಗೌತಮನು ಉತ್ತರಿಸಿದನು:

“ಮಹೀಪಾಲ! ನಾನು ಅವಧ್ಯ! ಯುದ್ಧಮಾಡು! ಜಯವನ್ನು ಹೊಂದು! ನೀನು ಬಂದಿದುದರಿಂದ ಪ್ರೀತನಾಗಿದ್ದೇನೆ. ಪ್ರತಿದಿನ ಬೆಳಿಗ್ಗೆ ಎದ್ದು ನಿನ್ನ ಜಯಕ್ಕಾಗಿ ಆಶಿಸುತ್ತೇನೆ. ನಿನಗೆ ಸತ್ಯವನ್ನೇ ಹೇಳುತ್ತಿದ್ದೇನೆ.”

ಗೌತಮನಾಡಿದ ಈ ಮಾತುಗಳನ್ನು ಕೇಳಿ ರಾಜನು ಕೃಪನಿಂದ ಅನುಮತಿಯನ್ನು ಪಡೆದು ಮದ್ರರಾಜನಿರುವಲ್ಲಿಗೆ ಹೋದನು. ಆಗ ಅವನು ಆ ದುರ್ಧರ್ಷ ಶಲ್ಯನಿಗೂ ಪ್ರದಕ್ಷಿಣೆ ಮಾಡಿ ನಮಸ್ಕರಿಸಿ ತನಗೆ ಶ್ರೇಯಸ್ಸನ್ನು ಕೊಡುವ ಈ ಮಾತುಗಳನ್ನು ಹೇಳಿದನು:

“ಗುರೋ! ವಿಗತಕಲ್ಮಶನಾಗಿ ನಿನ್ನೊಡನೆ ಯುದ್ಧ ಮಾಡುತ್ತೇನೆ. ಮಹಾರಾಜ! ರಿಪುಗಳನ್ನು ಜಯಿಸಲು ನಿನ್ನ ಅನುಜ್ಞೆಯನ್ನು ನೀಡು!”

ಶಲ್ಯನು ಹೇಳಿದನು:

“ಯುದ್ಧ ಮಾಡಲು ನಿಶ್ಚಯ ಮಾಡಿ ನೀನು ನನ್ನಲ್ಲಿಗೆ ಬರದಿದ್ದರೆ ರಣದಲ್ಲಿ ನಿನ್ನ ಪರಾಭವವಾಗಲೆಂದು ಶಪಿಸುತ್ತಿದ್ದೆ. ನಿನ್ನಿಂದ ತೃಪ್ತನಾಗಿದ್ದೇನೆ. ಗೌರವಿಸಲ್ಪಟ್ಟಿದ್ದೇನೆ. ಏನನ್ನು ಬಯಸುತ್ತೀಯೋ ಅದು ನಿನ್ನದಾಗಲಿ! ನಿನಗೆ ಅಪ್ಪಣೆಯನ್ನೂ ಕೊಡುತ್ತಿದ್ದೇನೆ. ಯುದ್ಧಮಾಡು. ಜಯವನ್ನು ಪಡೆ. ವೀರ! ಬೇರೆ ಏನಾದರೂ ಕೇಳುವುದಿದ್ದರೆ ಹೇಳು. ನಿನಗೆ ಏನನ್ನು ಕೊಡಲಿ? ಹೀಗಿರುವಾಗ ಯುದ್ಧದಲ್ಲಿ ಸಹಾಯವೊಂದನ್ನು ಬಿಟ್ಟು ಬೇರೆ ಏನನ್ನು ಬಯಸುತ್ತೀಯೆ? ಮನುಷ್ಯನು ಹಣದ ದಾಸನೇ ಹೊರತು ಹಣವು ಎಂದೂ ಯಾರ ದಾಸನೂ ಆಗಿರುವುದಿಲ್ಲ. ಇದು ಸತ್ಯ. ಹಣದಿಂದಲೇ ನಾನು ಕೌರವರಿಗೆ ಬದ್ಧನಾಗಿದ್ದೇನೆ. ತಂಗಿಯ ಮಗನೇ! ನೀನು ಏನನ್ನು ಬಯಸುತ್ತೀಯೋ ಅದನ್ನು ಮಾಡುತ್ತೇನೆ. ಶಂಡನಂತೆ ಹೇಳುತ್ತಿದ್ದೇನೆ. ಯುದ್ಧದಲ್ಲಿ ಸಹಾಯದ ಹೊರತು ಏನನ್ನು ಬಯಸುತ್ತೀಯೆ?”

ಯುಧಿಷ್ಠಿರನು ಹೇಳಿದನು:

“ಮಹಾರಾಜ! ನಿತ್ಯವೂ ನನ್ನ ಹಿತದಲ್ಲಿ ಉತ್ತಮ ಸಲಹೆಗಳನ್ನು ನೀಡು. ಬೇಕಾದರೆ ಶತ್ರುಗಳಿಗಾಗಿ ಯುದ್ಧಮಾಡು. ಇದೇ ನಾನು ಆರಿಸಿಕೊಳ್ಳುವ ವರ.”

ಶಲ್ಯನು ಹೇಳಿದನು:

“ನೃಪಸತ್ತಮ! ಹೇಳು! ಇದರಲ್ಲಿ ನಿನಗೆ ನಾನು ಏನು ಸಹಾಯವನ್ನು ಮಾಡಬೇಕು? ಕೌರವರು ಧನವನ್ನಿತ್ತು ನನ್ನನ್ನು ಆರಿಸಿಕೊಂಡಿರುವುದರಿಂದ ಅವರಿಗಾಗಿ ನಾನು ಯುದ್ಧಮಾಡಲು ಬಯಸುತ್ತೇನೆ.”

ಯುಧಿಷ್ಠಿರನು ಹೇಳಿದನು:

“ಉದ್ಯೋಗದ ಸಮಯದಲ್ಲಿ ನೀನು ನನಗೆ ಏನು ವರವನ್ನು ನೀಡಿದ್ದೆಯೋ ಅದನ್ನೇ ಸತ್ಯವಾಗಿಸು. ಸಂಗ್ರಾಮದಲ್ಲಿ ಸೂತಪುತ್ರನ ತೇಜೋವಧೆಯನ್ನು ಮಾಡು!”

ಶಲ್ಯನು ಹೇಳಿದನು:

“ಕುಂತೀಪುತ್ರ! ನೀನು ಬಯಸಿದ ಹಾಗೆ ಇದು ನಡೆಯುತ್ತದೆ. ಹೋಗು! ವಿಸ್ರಬ್ಧನಾಗಿ ಯುದ್ಧಮಾಡು. ನಿನಗೆ ಜಯದ ಭರವಸೆಯನ್ನು ನೀಡುತ್ತೇನೆ!”

ಆಗ ಮಾತುಲ ಮಾದ್ರಕೇಶ್ವರನಿಂದ ಅನುಮತಿಯನ್ನು ಪಡೆದು ಕೌಂತೇಯನು ಸಹೋದರರಿಂದ ಪರಿವಾರಿತನಾಗಿ ಆ ಮಹಾಸೇನೆಯಿಂದ ನಿರ್ಗಮಿಸಿದನು. ಅಷ್ಟರಲ್ಲಿ ವಾಸುದೇವನು ರಾಧೇಯನನ್ನು ರಣರಂಗದಲ್ಲಿ ಭೇಟಿಯಾಗಿ, ಪಾಂಡವರ ಪರವಾಗಿ ಇದನ್ನು ಹೇಳಿದನು:

> “ಕರ್ಣ ! ಭೀಷ್ಮನ ದ್ವೇಷದಿಂದಾಗಿ ನೀನು ಯುದ್ಧಮಾಡುತ್ತಿಲ್ಲವೆಂದು ನಾನು ಕೇಳಿದ್ದೇನೆ. ಭೀಷ್ಮನು ಸಾಯುವವರೆಗೆ ನಮ್ಮನ್ನು ವರಿಸು ! ರಾಧೇಯ ! ಭೀಷ್ಮನ ಮೃತ್ಯುವಾದ ಬಳಿಕ ಯುದ್ಧದಲ್ಲಿ ನಿನಗೆ ಸರಿಯೆಂದು ಹೇಗನಿಸುತ್ತದೆಯೋ ಹಾಗೆ ಧಾರ್ತರಾಷ್ಟ್ರನ ಸಹಾಯವನ್ನು ಮಾಡುವಿಯಂತೆ !”

ಕರ್ಣನು ಹೇಳಿದನು:

> “ಕೇಶವ ! ಧಾರ್ತರಾಷ್ಟ್ರನಿಗೆ ವಿಪ್ರಿಯವಾಗಿ ಮಾಡಲಾರೆ. ದುರ್ಯೋಧನನ ಹಿತೈಷಿಣಿಯಾಗಿ ಪ್ರಾಣವನ್ನೇ ತ್ಯಜಿಸುತ್ತೇನೆ. ನಿನಗಿದು ತಿಳಿದೇ ಇದೆ.”

ಅವನ ಆ ಮಾತನ್ನು ಕೇಳಿ ಕೃಷ್ಣನು ಯುಧಿಷ್ಠಿರನನ್ನು ಮುಂದಿರಿಸಿಕೊಂಡು ಹಿಂದಿರುಗುತ್ತಿದ್ದ ಪಾಂಡವರೊಂದಿಗೆ ಕೂಡಿಕೊಂಡನು. ಆಗ ಸೈನ್ಯದ ಮಧ್ಯೆ ಪಾಂಡವಾಗ್ರಜನು ಕೂಗಿ ಹೇಳಿದನು:

> “ಯಾರಾದರೂ ನಮ್ಮ ಪಕ್ಷವನ್ನು ಸೇರಬೇಕೆಂದಿದ್ದರೆ ನಾನು ಅವನನ್ನು ನನ್ನ ಸಹಾಯಕನೆಂದು ಸ್ವೀಕರಿಸುತ್ತೇನೆ !”

ಆಗ ಯುಯುತ್ಸುವು ಅವರನ್ನು ನೋಡಿ, ಪ್ರೀತಾತ್ಮಾ ಧರ್ಮರಾಜ ಕುಂತೀಪುತ್ರ ಯುಧಿಷ್ಠಿರನಿಗೆ ಇದನ್ನು ಹೇಳಿದನು:

"ಮಹಾರಾಜ! ನೀನು ನನ್ನನ್ನು ಸ್ವೀಕರಿಸಿದರೆ ನಾನು ಬಹಿರಂಗವಾಗಿ ಧಾರ್ತರಾಷ್ಟ್ರರ ವಿರುದ್ಧವಾಗಿ ನಿನ್ನ ಪರವಾಗಿ ರಣದಲ್ಲಿ ಹೋರಾಡುತ್ತೇನೆ."

ಯುಧಿಷ್ಠಿರನು ಹೇಳಿದನು:

"ಬಾ! ಬಾ ಯುಯುತ್ಸೋ! ನಾವೆಲ್ಲರೂ ನಿನ್ನ ಈ ಅಪಂಡಿತ ಸಹೋದರರನ್ನು ಎದುರಿಸಿ ಯುದ್ಧಮಾಡೋಣ! ವಾಸುದೇವನೊಂದಿಗೆ ನಾವೆಲ್ಲರೂ ಹೇಳುತ್ತಿದ್ದೇವೆ. ನಿನ್ನನ್ನು ಸ್ವೀಕರಿಸಿದ್ದೇನೆ. ನನ್ನ ಕಾರಣಕ್ಕಾಗಿ ಯುದ್ಧಮಾಡು. ನೀನೇ ಧೃತರಾಷ್ಟ್ರನ ವಂಶದ ತಂತುವೂ ಅವನಿಗೆ ಪಿಂಡವನ್ನು ನೀಡುವವನೂ ಎಂದು ತೋರುತ್ತಿದ್ದೀಯೆ. ನಾವು ನಿನ್ನನ್ನು ಸ್ವೀಕರಿಸುವಂತೆ ನೀನೂ ನಮ್ಮನ್ನು ಸ್ವೀಕರಿಸು. ಅತ್ಯಮರ್ಷಣ ದುರ್ಬುದ್ಧಿ ಧಾರ್ತರಾಷ್ಟ್ರನು ಇಲ್ಲವಾಗುತ್ತಾನೆ!"

ಆಗ ಕೌರವ್ಯ ಯುಯುತ್ಸುವು, ದುಂದುಭಿಗಳು ಕೇಳುತ್ತಿರಲು, ದುರ್ಯೋಧನನನ್ನು ತ್ಯಜಿಸಿ ಪಾಂಡುಪುತ್ರರ ಸೇನೆಗೆ ಹೋದನು. ಯುಧಿಷ್ಠಿರನು ಸಂಪ್ರಹೃಷ್ಟನಾಗಿ ಅನುಜರೊಂದಿಗೆ ಪುನಃ ಬೆಳಗುತ್ತಿದ್ದ ಕನಕೋಜ್ಜ್ವಲ ಕವಚವನ್ನು ಧರಿಸಿದನು. ಆ ಎಲ್ಲ ಪುರುಷರ್ಷಭರೂ ತಮ್ಮ ತಮ್ಮ ರಥಗಳನ್ನೇರಿ ಮೊದಲಿನಂತೆಯೇ ಪುನಃ ವ್ಯೂಹಗಳನ್ನು ರಚಿಸಿಕೊಂಡರು. ಆ ಪುರುಷರ್ಷಭರು ನೂರಾರು ದುಂದುಭಿಗಳನ್ನೂ ನೂರಾರು ಪುಷ್ಕರಗಳನ್ನೂ ಮೊಳಗಿಸಿದರು. ವಿವಿಧ

ಸಿಂಹನಾದಗಳನ್ನೂ ಗೈದರು. ರಥದ ಮೇಲೇರಿದ್ದ ಆ ಪುರುಷವ್ಯಾಘ್ರ ಪಾಂಡವರನ್ನು ಪುನಃ ಕಂಡು ಧೃಷ್ಟದ್ಯುಮ್ನನೇ ಮೊದಲಾದ ಪಾರ್ಥಿವರೆಲ್ಲರೂ ಸಂತೋಷಭರಿತರಾದರು. ಗೌರವಿಸಬೇಕಾದವರನ್ನು ಗೌರವಿಸಿದ ಪಾಂಡುಪುತ್ರರ ಗೌರವವನ್ನು ನೋಡಿ ಅಲ್ಲಿದ್ದ ಮಹೀಕ್ಷಿತರು ಅವರನ್ನು ತುಂಬಾ ಗೌರವಿಸಿದರು. ಆ ಮಹಾತ್ಮರ ಕಾಲಕ್ಕೆ ತಕ್ಕುದಾದ ಸೌಹಾರ್ದತೆ, ಕೃಪೆ, ಮತ್ತು ಕುಲದವರ ಮೇಲಿದ್ದ ಅವರ ದಯೆಯ ಕುರಿತು ಇತರ ನೃಪರು ಮಾತನಾಡಿಕೊಂಡರು. ಎಲ್ಲಾ ಕಡೆಗಳಿಂದಲೂ "ಸಾಧು ! ಸಾಧು !" ಎಂದು ಮನಸ್ಸು ಮತ್ತು ಹೃದಯಗಳಿಗೆ ಹರ್ಷವನ್ನು ಕೊಡುವ ಆ ಕೀರ್ತಿಮತರ ಪುಣ್ಯ ಹೊಗಳಿಕೆಯ ಮಾತುಗಳೇ ಕೇಳಿಬಂದವು. ಮ್ಲೇಚ್ಛರಾಗಿರಲಿ ಅಥವಾ ಆರ್ಯರಾಗಿರಲಿ ಯಾರೆಲ್ಲ ಅಲ್ಲಿ ಪಾಂಡುಪುತ್ರರ ಆ ನಡತೆಯನ್ನು ನೋಡಿದರೋ ಅಥವಾ ಕೇಳಿದರೋ ಅವರು ಗದ್ಗದರಾಗಿ ಕಣ್ಣೀರಿಟ್ಟರು. ಆಗ ಆ ಮನಸ್ವಿಗಳು ಹರ್ಷಿತರಾಗಿ ನೂರಾರು ಮಹಾ ಭೇರಿಗಳನ್ನೂ ನೂರಾರು ಪುಷ್ಕರಗಳನ್ನೂ ಬಾರಿಸಿದರು ಮತ್ತು ಆಕಳ ಹಾಲಿನ ಬಣ್ಣದ ಶಂಖಗಳನ್ನೂ ಊದಿದರು.

# ಮೊದಲನೆಯ ದಿನದ ಯುದ್ಧ

ಸಹೋದರರೊಂದಿಗೆ ದುರ್ಯೋಧನನು ಭೀಷ್ಮನನ್ನು ಪ್ರಮುಖನನ್ನು ಮಾಡಿ ಸೇನೆಯನ್ನು ಕೂಡಿಕೊಂಡು ಹೊರಟನು. ಹಾಗೆಯೇ

ಪಾಂಡವರೆಲ್ಲರೂ ಭೀಮಸೇನನನ್ನು ಮುಂದಿಟ್ಟುಕೊಂಡು ಭೀಷ್ಮನೊಂದಿಗೆ ಯುದ್ಧವನ್ನು ಬಯಸಿ ಹೃಷ್ಟಮಾನಸರಾಗಿ ಹೊರಟರು. ಕ್ರಕಚಗಳ ಕಿಲಕಿಲ ಶಬ್ಧ, ಗೋವಿನ ಕೊಂಬಿನ ವಾದ್ಯ, ಭೇರೀ ಮೃದಂಗ ಮತ್ತು ಹಯಕುಂಜರಗಳ ನಿಃಸ್ವನಗಳು ಕಿವುಡು ಮಾಡುವಂತಿತ್ತು. ಎರಡೂ ಸೇನೆಗಳು – ಪಾಂಡವರು ಕೌರವರನ್ನು ಮತ್ತು ಕೌರವರು ಪಾಂಡವರನ್ನು ಜೋರಾಗಿ ಕೂಗುತ್ತಾ ಆಕ್ರಮಣ ಮಾಡಲಾಯಿತು. ಆಗ ಅಲ್ಲಿ ಮಹಾ ತುಮುಲವುಂಟಾಯಿತು. ಪರಸ್ಪರರನ್ನು ಕೊನೆಗೊಳಿಸಲು ಸೇರಿದ್ದ ಆ ಪಾಂಡವ ಧಾರ್ತರಾಷ್ಟ್ರರ ಮಹಾ ಸೇನೆಗಳು ಶಂಖಮೃದಂಗ ನಿಸ್ವನಗಳಿಂದ ಗಾಳಿಗೆ ವನಗಳು ತೂರಾಡುತ್ತಿರುವಂತೆ ತೂರಾಡುತ್ತಿದ್ದವು. ನರೇಂದ್ರ-ನಾಗ-ಅಶ್ವ-ರಥಸಂಕುಲಗಳು ಆ ಅಶಿವ ಮುಹೂರ್ತದಲ್ಲಿ ಪರಸ್ಪರರನ್ನು ಧಾಳಿಮಾಡುವಾಗ ಭಿರುಗಾಳಿಯಿಂದ ಮೇಲೆಬ್ಬಿಸಿದ ಸಾಗರಗಳಂತೆ ಸೇನೆಗಳ ತುಮುಲ ಘೋಷವಾಯಿತು. ಆ ಲೋಮಹರ್ಷಣ ಶಬ್ಧ ತುಮುಲವು ಮೇಲೇರಲು ಮಹಾಬಾಹು ಭೀಮಸೇನನು ಗೂಳಿ ಹೋರಿಯಂತೆ ಕೂಗಿದನು. ಶಂಖದುಂದುಭಿ ನಿರ್ಘೋಷ, ಆನೆಗಳ ಘೀಳು, ಸೇನೆಗಳ ಸಿಂಹನಾದಕ್ಕಿಂತಲೂ ಭೀಮಸೇನನ ರವವು ಜೋರಾಗಿತ್ತು. ಸೇನೆಗಳಲ್ಲಿದ್ದ ಸಹಸ್ರಾರು ಕುದುರೆಗಳೆಲ್ಲವುಗಳ ಹೇಷಾರವಕ್ಕಿಂತ ಭೀಮಸೇನನ ಕೂಗು ಜೋರಾಗಿದ್ದಿತು. ಶಕ್ರನ ಸಿಡಿಲುಬಡಿದ ಮೋಡಗಳು ಗರ್ಜಿಸುವಂತಿದ್ದ ಆ ನಿನದವನ್ನು ಕೇಳಿ ಕೌರವ ಸೇನೆಯು ತತ್ತರಿಸಿತು. ಸಿಂಹದ ಕೂಗನ್ನು ಕೇಳಿ ಇತರ

ಮೃಗಗಳು ಹೇಗೋ ಹಾಗೆ ಅವನ ಶಬ್ಧವನ್ನು ಕೇಳಿ ಎಲ್ಲ ಪ್ರಾಣಿಗಳೂ ಮಲಮೂತ್ರಗಳನ್ನು ವಿಸರ್ಜಿಸಿದವು. ಮಹಾಮೋಡದಂತೆ ಗರ್ಜಿಸುತ್ತಾ ಘೋರರೂಪವನ್ನು ತಾಳಿದ ಅವನು ಧಾರ್ತರಾಷ್ಟ್ರರನ್ನು ಭಯಪಡಿಸುತ್ತಾ ಸೇನೆಗಳ ಮೇಲೆ ಎರಗಿದನು. ತಮ್ಮ ಕಡೆ ಮುನ್ನುಗ್ಗಿ ಬರುತ್ತಿರುವ ಅವನನ್ನು ಸೋದರರು ಸುತ್ತುವರೆದು ಮೇಘಗಳು ದಿವಾಕರನನ್ನು ಹೇಗೋ ಹಾಗೆ ಶರವ್ರಾತಗಳಿಂದ ಮುಚ್ಚಿದರು.

ದುರ್ಯೋಧನ, ದುರ್ಮುಖ, ದುಃಸಹ, ಶಲ, ದುಃಶಾಸನ, ಅತಿರಥ, ದುರ್ಮರ್ಷಣ, ವಿವಿಂಶತಿ, ಚಿತ್ರಸೇನ, ವಿಕರ್ಣ, ಪುರುಮಿತ್ರ, ಜಯ, ಭೋಜ, ವೀರ್ಯವಾನ್ ಸೌಮದತ್ತಿ – ಇವರು ವಿದ್ಯುತ್ತಿನಿಂದ ಕೂಡಿದ ಮೇಘಗಳಂತೆ ಗುಡುಗುತ್ತಿರುವ ಮಹಾ ಚಾಪಗಳಿಗೆ ವಿಷೋಪಮವಾದ ಹರಿತ ನಾರಾಚಗಳನ್ನು ಹೂಡಿ ಅವನ ಮೇಲೆ ಬಿಟ್ಟರು. ಆಗ ಆ ಧಾರ್ತರಾಷ್ಟ್ರರನ್ನು ದ್ರೌಪದೀಪುತ್ರರು, ಸೌಭದ್ರಿ, ನಕುಲ-ಸಹದೇವರು, ಮತ್ತು ಧೃಷ್ಟದ್ಯುಮ್ನರು ಮಹಾವೇಗದಿಂದ ಆಕ್ರಮಣಮಾಡಿ ಗಿರಿಶಿಖರಗಳನ್ನು ವಜ್ರಗಳಿಂದ ಹೊಡೆಯುವಂತೆ ನಿಶಿತ ಶರಗಳಿಂದ ಹೊಡೆದರು. ಧನುಸ್ಸಿನ ಠೇಂಕಾರದ ಭಯಂಕರ ಶಬ್ಧಗಳಿಂದೊಡಗೂಡಿದ ಆ ಪ್ರಥಮ ಹೋರಾಟದಲ್ಲಿ ಕೌರವರಾಗಲೀ ಪಾಂಡವರಾಗಲೀ ಯಾರೂ ಹಿಮ್ಮೆಟ್ಟಲಿಲ್ಲ. ದ್ರೋಣಶಿಷ್ಯರ ಲಾಘವವು ಕಂಡುಬಂದಿತು. ಅನೇಕ ಬಾಣಗಳನ್ನು ಬಿಡುತ್ತಿದ್ದ ಅವರು ತಮ್ಮ ಗುರಿಯನ್ನು ತಪ್ಪುತ್ತಿರಲಿಲ್ಲ. ಆಗ ಧನುಸ್ಸುಗಳ ಠೇಂಕಾರದ ನಿರ್ಘೋಷವು ಒಂದು ಕ್ಷಣವೂ ನಿಲ್ಲಲಿಲ್ಲ. ನಭಸ್ತಲದಿಂದ ಉಲ್ಕೆಗಳು

ಬೀಳುವಂತೆ ಉರಿಯುವ ಬಾಣಗಳು ಹಾರಿ ಬೀಳುತ್ತಿದ್ದವು. ಅನ್ಯ ಎಲ್ಲ ಮಹೀಪಾಲರೂ ದರ್ಶನೀಯವಾಗಿದ್ದ ಆ ಭಯಂಕರ ದಾಯಾದಿಗಳ ಹೋರಾಟವನ್ನು ಪ್ರೇಕಕರಾಗಿ ನೋಡುತ್ತಿದ್ದರು. ಆಗ ಆ ಮಹಾರಥರು ಪರಸ್ಪರರ ಕೃತ್ಯಗಳನ್ನು ಸ್ಮರಿಸಿಕೊಂಡು ಸಿಟ್ಟಿಗೆದ್ದು ಅನ್ಯೋನ್ಯರನ್ನು ಸ್ಪರ್ಧಿಸಿ ಹೋರಾಡಿದರು.

ಕುರುಪಾಂಡವರ ಆನೆ-ಕುದುರೆ-ರಥಸಂಕುಲಗಳು ರಣದಲ್ಲಿ ಚಿತ್ರಪಟದಲ್ಲಿರುವವುಗಳಂತೆ ಅತಿಸುಂದರವಾಗಿ ಕಂಡಿತು. ಪಾರ್ಥಿವರೆಲ್ಲರೂ ಧನುರ್ಬಾಣಗಳನ್ನು ಹಿಡಿದು ದುರ್ಯೋಧನನ ಶಾಸನದಂತೆ ಸೇನೆಗಳೊಂದಿಗೆ ಆಕ್ರಮಿಸಿದರು. ಸಾವಿರಾರು ಪಾರ್ಥಿವರು ಯುಧಿಷ್ಠಿರನ ಆದೇಶದಂತೆ ಸಂತೋಷದಿಂದ ದುರ್ಯೋಧನನ ಸೇನೆಯ ಮೇಲೆ ಬಿದ್ದರು. ಎರಡೂ ಸೇನೆಗಳ ತೀವ್ರ ಹೋರಾಟದಲ್ಲಿ ಸೇನೆಗಳಿಂದ ಮೇಲೆದ್ದ ಧೂಳು ಆದಿತ್ಯನನ್ನು ಅಂತರ್ಧಾನಗೊಳಿಸಿತು. ಅಲ್ಲಿ ತಮ್ಮವರ, ಶತ್ರುಗಳ, ಯುದ್ಧಮಾಡುತ್ತಿರುವವರ, ಗಾಯಗೊಂಡು ಹಿಂದೆ ಸರಿಯುವವರ ಮಧ್ಯೆ ಅಂತರವೇ ತಿಳಿಯುತ್ತಿರಲಿಲ್ಲ. ನಡೆಯುತ್ತಿರುವ ಆ ಮಹಾಭಯಂಕರ ತುಮುಲ ಯುದ್ಧದಲ್ಲಿ ಎಲ್ಲ ಸೇನೆಗಳಲ್ಲಿಯೂ ಭೀಷ್ಮನು ಮಿಂಚಿದನು.

## ದ್ವಂದ್ವಯುದ್ಧ

ಆ ರೌದ್ರ ದಿವಸದ ಪೂರ್ವಾಹ್ಣದಲ್ಲಿ ರಾಜರ ದೇಹವನ್ನು

ತುಂಡರಿಸುವ ಮಹಾಘೋರ ಯುದ್ಧವು ಪ್ರಾರಂಭವಾಯಿತು. ಸಂಗ್ರಾಮದಲ್ಲಿ ಜಯವನ್ನು ಬಯಸಿದ ಸಿಂಹಗಳದ್ದಂತಿದ್ದ ಕುರು-ಪಾಂಡವರ ಕೋಪದ ಕೂಗು ಭೂಮಿ-ಆಕಾಶಗಳಲ್ಲಿ ಮೊಳಗಿತು. ಅಂಗೈಗಳ ಕಿಲ ಕಿಲ ಶಬ್ಧವು ಶಂಖದ ಶಬ್ಧದೊಂದಿಗೆ ಸೇರಿತು. ಪ್ರತಿಗರ್ಜಿಸುತ್ತಿರುವ ಶೂರರ ಸಿಂಹನಾದಗಳೂ ಉದ್ಭವಿಸಿದವು. ಚಪ್ಪಾಳೆಗಳ ಹೊಡೆತದ ಶಬ್ಧ, ಬಿಲ್ಲಿನ ಠೇಂಕಾರ, ಪದಾತಿಗಳ ಪಾದಶಬ್ಧ, ಕುದುರೆಗಳ ಹೀಂಕಾರ, ಅಂಕುಶಗಳು ಮತ್ತು ಆಯುಧಗಳು ಬೀಳುವ ಶಬ್ಧ, ಅನ್ಯೋನ್ಯರನ್ನು ಹೊಡೆಯುತ್ತಿರುವ ಆನೆಗಳ ಗಂಟೆಗಳ ಶಬ್ಧ, ಮತ್ತು ಗುಡುಗಿನಂತಿರುವ ರಥನಿರ್ಘೋಷ ಈ ಎಲ್ಲ ಲೋಮಹರ್ಷಣ ತುಮುಲ ಶಬ್ಧಗಳು ಕೇಳಿಬಂದವು. ಅವರು ಎಲ್ಲರೂ ಮನಸ್ಸನ್ನು ಕ್ರೂರಮಾಡಿಕೊಂಡು ಜೀವಿತವನ್ನು ತ್ಯಜಿಸಿ ಧ್ವಜಗಳನ್ನು ಮೇಲೆತ್ತಿ ಹಿಡಿದು ಪಾಂಡವರ ಮೇಲೆ ಆಕ್ರಮಣ ಮಾಡಿದರು. ಸ್ವಯಂ ಶಾಂತನವನು ಕಾಲದಂಡದಂತಿರುವ ಘೋರ ಕಾರ್ಮುಕವನ್ನು ಹಿಡಿದು ಧನಂಜಯನನ್ನು ಆಕ್ರಮಣಿಸಿದನು. ತೇಜಸ್ವಿ ಅರ್ಜುನನೂ ಕೂಡ ಲೋಕವಿಶ್ರುತ ಗಾಂಡೀವ ಧನುಸ್ಸನ್ನು ಹಿಡಿದು ರಣಮೂರ್ಧನಿಯಲ್ಲಿ ಗಾಂಗೇಯನ ಮೇಲೆ ಎರಗಿದನು. ಅವರಿಬ್ಬರು ಕುರುಶಾರ್ದೂಲರೂ ಪರಸ್ಪರರನ್ನು ವಧಿಸಲು ಬಯಸಿದ್ದರು. ಬಲೀ ಗಾಂಗೇಯನಾದರೋ ರಣದಲ್ಲಿ ಪಾರ್ಥನನ್ನು ಹೊಡೆದು ಅಲುಗಾಡಿಸಲೂ ಆಗಲಿಲ್ಲ. ಹಾಗೆಯೇ ಪಾಂಡವನೂ ಕೂಡ ಯುದ್ಧದಲ್ಲಿ ಭೀಷ್ಮನನ್ನು ಅಲುಗಾಡಿಸಲೂ ಇಲ್ಲ.

ಮಹೇಷ್ವಾಸ ಸಾತ್ಯಕಿಯು ಕೃತವರ್ಮನನ್ನು ಎದುರಿಸಿದನು. ಅವರ ಮಧ್ಯೆ ಲೋಮಹರ್ಷಣ ತುಮುಲ ಯುದ್ಧವು ನಡೆಯಿತು. ಸಾತ್ಯಕಿಯು ಕೃತವರ್ಮನನ್ನೂ ಕೃತವರ್ಮನು ಸಾತ್ಯಕಿಯನ್ನೂ ಘೋರ ಶರಗಳಿಂದ ಹೊಡೆದು ಚುಚ್ಚಿ ಪರಸ್ಪರರನ್ನು ದುರ್ಬಲಗೊಳಿಸಿದರು. ಸರ್ವಾಂಗಗಳಲ್ಲಿಯೂ ಬಾಣಗಳಿಂದ ಗಾಯಗೊಂಡ ಅವರಿಬ್ಬರು ಮಹಾಬಲರೂ ವಸಂತದಲ್ಲಿ ಹೂಬಿಟ್ಟಿರುವ ಕುಂಶುಕ ವೃಕ್ಷಗಳಂತೆ ಶೋಭಿಸಿದರು.

ಮಹೇಷ್ವಾಸ ಅಭಿಮನ್ಯುವು ಬೃಹದ್ಬಲನೊಂದಿಗೆ ಯುದ್ಧಮಾಡಿದನು. ಕೋಸಲಕ ರಾಜನು ಸೌಭದ್ರಿಯ ಧ್ವಜವನ್ನು ತುಂಡರಿಸಿದನು ಮತ್ತು ಸಾರಥಿಯನ್ನು ಬೀಳಿಸಿದನು. ಸೌಭದ್ರಿಯಾದರೋ ರಥಸಾರಥಿಗಳನ್ನು ಉರುಳಿಸಿದುದಕ್ಕೆ ಕ್ರುದ್ಧನಾಗಿ ಬೃಹದ್ಬಲನನ್ನು ಒಂಭತ್ತು ಶರಗಳಿಂದ ಹೊಡೆದನು. ಇತರ ಎರಡು ಭಲ್ಲಗಳಿಂದ ಅರಿಮರ್ದನನು ಅವನ ಧ್ವಜವನ್ನು ಕತ್ತರಿಸಿದನು, ಒಂದರಿಂದ ಚಕ್ರರಕ್ಷಕರನ್ನೂ ಮತ್ತು ಒಂದರಿಂದ ಸಾರಥಿಯನ್ನೂ ಹೊಡೆದನು. ಅವರಿಬ್ಬರೂ ಕ್ರುದ್ಧರಾಗಿ ಅನ್ಯೋನ್ಯರನ್ನು ತೀಕ್ಷ್ಣ ಶರಗಳಿಂದ ದುರ್ಬಲಗೊಳಿಸಿದರು.

ಭೀಮಸೇನನು ಆ ಮಾನಿನಿ, ದರ್ಪಿ, ವೈರವನ್ನು ಸಾಧಿಸಿದ, ಮಹಾರಥ ದುರ್ಯೋಧನನೊಂದಿಗೆ ಯುದ್ಧಮಾಡಿದನು. ಆ ಇಬ್ಬರು ನರಶಾರ್ದೂಲರೂ, ಕುರುಮುಖ್ಯರೂ, ಮಹಾಬಲರೂ ರಣದಲ್ಲಿ ಅನ್ಯೋನ್ಯರ ಮೇಲೆ ಶರವರ್ಷಗಳನ್ನು ಸುರಿಸಿ ಹೋರಾಡಿದರು. ಆ

ಮಹಾತ್ಮ, ಕೃತಕೃತ್ಯ, ಚಿತ್ರಯೋಧಿಗಳಿಬ್ಬರನ್ನೂ ನೋಡಿ ಸರ್ವಭೂತಗಳಿಗೂ ವಿಸ್ಮಯವುಂಟಾಯಿತು.

ದುಃಶಾಸನನಾದರೋ ಮಹಾರಥ ನಕುಲನೊಂದಿಗೆ ಯುದ್ಧಮಾಡಿದನು ಮತ್ತು ಬಹಳಷ್ಟು ಮರ್ಮಭೇದಿ ನಿಶಿತ ಬಾಣಗಳಿಂದ ಹೊಡೆದನು. ಮಾದ್ರೀಸುತನು ನಸುನಗುತ್ತಾ ನಿಶಿತ ಬಾಣಗಳಿಂದ ಅವನ ಧ್ವಜವನ್ನೂ, ಶರಗಳನ್ನೂ, ಧ್ವಜವನ್ನೂ ತುಂಡರಿಸಿದನು. ಮತ್ತೆ ಇಪ್ಪತ್ತೈದು ಕ್ಷುದ್ರಕ (ತಲೆ ಚಿಕ್ಕದಾಗಿರುವ ಬಾಣ) ಗಳಿಂದ ಅವನನ್ನು ಗಾಯಗೊಳಿಸಿದನು. ದುಃಶಾಸನನಾದರೋ ಎರಡು ಬಾಣಗಳಿಂದ ನಕುಲನ ಧ್ವಜವನ್ನು ಉರುಳಿಸಿದನು.

ದುರ್ಮುಖನು ಮಹಾಬಲ ಸಹದೇವನನ್ನು ಎದುರಿಸಿ ಯುದ್ಧಮಾಡಿದನು. ಯುದ್ಧಮಾಡುತ್ತಾ ಶರವರ್ಷಗಳಿಂದ ಗಾಯಗೊಳಿಸಿದನು. ಆಗ ವೀರ ಸಹದೇವನು ತೀಕ್ಷ್ಣ ಶರದಿಂದ ದುರ್ಮುಖನ ಸಾರಥಿಯನ್ನು ಕೆಳಗುರುಳಿಸಿದನು. ಆ ಇಬ್ಬರು ಯುದ್ಧ ದುರ್ಮದರೂ ಅನ್ಯೋನ್ಯರನ್ನು ಎದುರಿಸಿ ಹೊಡೆಯಲು ಮತ್ತು ತಿರುಗಿ ಹೊಡೆಯಲು ಬಯಸಿ ಘೋರ ಶರಗಳಿಂದ ಪರಸ್ಪರರನ್ನು ಪೀಡಿಸಿದರು.

ಸ್ವಯಂ ರಾಜಾ ಯುಧಿಷ್ಠಿರನು ಮದ್ರರಾಜನನ್ನು ಎದುರಿಸಿದನು. ಮದ್ರಾಧಿಪನು ಅವನು ನೋಡುತ್ತಿದ್ದಂತೆಯೇ ಅವನ ಚಾಪವನ್ನು ಎರಡಾಗಿ ತುಂಡರಿಸಿದನು. ತುಂಡಾದ ಧನುಸ್ಸನ್ನು ಬಿಸುಟು

ಯುಧಿಷ್ಠಿರನು ವೇಗದಿಂದ ಬಲವತ್ತವಾದ ಇನ್ನೊಂದು ಕಾರ್ಮುಕವನ್ನು ತೆಗೆದುಕೊಂಡನು. ಆಗ ರಾಜನು ಸನ್ನತಪರ್ವ ಶರಗಳಿಂದ ಮದ್ರೇಶ್ವರನನ್ನು ಹೊಡೆದು ಸಂಕ್ರುದ್ಧನಾಗಿ "ನಿಲ್ಲು! ನಿಲ್ಲು!" ಎಂದು ಹೇಳಿದನು.

ಧೃಷ್ಟದ್ಯುಮ್ನನು ದ್ರೋಣನನ್ನು ಎದುರಿಸಿದನು. ಸಂಕ್ರುದ್ಧನಾದ ದ್ರೋಣನು ಯುದ್ಧಮಾಡುತ್ತಿರುವ ಅವನ ಶತ್ರುಗಳ ಅಸುವನ್ನು ನೀಗಿಸುವ ದೃಢ ಕಾರ್ಮುಕವನ್ನು ಮೂರು ಭಾಗಗಳಾಗಿ ತುಂಡುಮಾಡಿದನು. ಮತ್ತು ಕಾಲದಂಡದಂತಿರುವ ಇನ್ನೊಂದು ಮಹಾಘೋರ ಶರವನ್ನು ಕಳುಹಿಸಲು ಅದು ಅವನ ದೇಹಕ್ಕೆ ತಾಗಿತು. ಆಗ ಅನ್ಯ ಧನುಸ್ಸನ್ನು ತೆಗೆದುಕೊಂಡು ಹದಿನಾಲ್ಕು ಸಾಯಕಗಳಿಂದ ದ್ರುಪದಪುತ್ರನು ದ್ರೋಣನನ್ನು ಹಿಂದಿರುಗಿ ಹೊಡೆದನು. ಅವರಿಬ್ಬರೂ ಅನ್ಯೋನ್ಯರ ಮೇಲೆ ಕ್ರುದ್ಧರಾಗಿ ಘೋರವಾಗಿ ರಣದಲ್ಲಿ ಹೊಡೆದಾಡಿದರು.

ರಣದಲ್ಲಿ ರಭಸನಾಗಿದ್ದ ಶಂಖನು ರಭಸನಾಗಿದ್ದ ಸೌಮದತ್ತಿಯನ್ನು ಎದುರಿಸಿ "ನಿಲ್ಲು! ನಿಲ್ಲು!" ಎಂದು ಹೇಳಿದನು. ಆ ವೀರನು ರಣದಲ್ಲಿ ಅವನ ಬಲಭುಜವನ್ನು ಸೀಳಿದನು. ಆಗ ಸೌಮದತ್ತಿಯು ಶಂಖನನ್ನು ಹೆಗಲ ಮೇಲೆ ಹೊಡೆದನು. ಆ ಇಬ್ಬರು ದರ್ಪದವರ ನಡುವಿನ ಯುದ್ಧವು ಬೇಗನೇ ವೃತ್ರ-ವಾಸವರ ನಡುವಿನ ಸಮರದಂತೆ ಘೋರ ರೂಪವನ್ನು ತಾಳಿತು.

ಕ್ರುದ್ಧ ರೂಪಿ ಮಹಾರಥ ಧೃಷ್ಟಕೇತುವು ಕ್ರುದ್ಧ ಬಾಹ್ಲೀಕನನ್ನು ರಣದಲ್ಲಿ ಎದುರಿಸಿದನು. ಆಗ ಬಾಹ್ಲೀಕನು ಅಮರ್ಷಣ ಧೃಷ್ಟಕೇತುವನ್ನು ಬಹಳ ಶರಗಳಿಂದ ಗಾಯಗೊಳಿಸಿ ಸಿಂಹನಾದಗೈದನು. ಸಂಕ್ರುದ್ಧನಾದ ಚೇದಿರಾಜನಾದರೋ ಬಾಹ್ಲೀಕನನ್ನು ಒಂಭತ್ತು ಶರಗಳಿಂದ ಹೊಡೆದನು. ಮದಿಸಿದ ಆನೆಯು ಮದಿಸಿದ ಆನೆಯೊಂದಿಗೆ ಹೋರಾಡುವಂತೆ ಎಬ್ಬರೂ ಸಮರದಲ್ಲಿ ಹೋರಾಡಿದರು. ಅವರಿಬ್ಬರೂ ಕ್ರುದ್ಧರಾಗಿ ಮತ್ತೆ ಮತ್ತೆ ಗರ್ಜಿಸುತ್ತಿದ್ದರು. ಅಂಗಾರಕ ಬುಧರಂತೆ ಸಂಕ್ರುದ್ಧರಾಗಿ ಪರಸ್ಪರ ಹೋರಾಡಿದನು.

ಶಕ್ರನು ಬಲನನ್ನು ಹೇಗೋ ಹಾಗೆ ಕ್ರೂರಕರ್ಮಿ ಘಟೋತ್ಕಚನು ಕ್ರೂರಕರ್ಮಿಗಳ ರಾಕ್ಷಸ ಅಲಂಬುಸನನ್ನು ಎದುರಿಸಿದನು. ಸಂಕ್ರುದ್ಧನಾದ ಘಟೋತ್ಕಚನು ಆ ಮಹಾಬಲ ರಾಕ್ಷಸನನ್ನು ತೊಂಭತ್ತು ತೀಕ್ಷ್ಣ ಸಾಯಕಗಳಿಂದ ಚುಚ್ಚಿದನು. ಅಲಂಬುಸನಾದರೋ ಮಹಾಬಲ ಭೈಮಸೇನಿಯನ್ನು ಬಹಳ ಸನ್ನತಪರ್ವ ಶರಗಳಿಂದ ತಡೆದನು. ಶರಗಳಿಂದ ಚುಚ್ಚಲ್ಪಟ್ಟು ಯುದ್ಧಮಾಡುತ್ತಿರುವ ಅವರಿಬ್ಬರೂ ದೇವಾಸುರರ ಯುದ್ಧದಲ್ಲಿ ಮಹಾಬಲರಾದ ಬಲ-ಶಕ್ರರಂತೆ ಶೋಭಿಸಿದರು.

ಬಲಶಾಲಿ ಶಿಖಂಡಿಯು ದ್ರೌಣಿಯನ್ನು ಎದುರಿಸಿದನು. ಅಶ್ವತ್ಥಾಮನು ಶಿಖಂಡಿಯನ್ನು ಸುತೀಕ್ಷ್ಣ ನರಾಚದಿಂದ ಚೆನ್ನಾಗಿ ಹೊಡೆದು

ಕಂಪಿಸುವಂತೆ ಮಾಡಿದನು. ಆಗ ಶಿಖಂಡಿಯೂ ಕೂಡ ದ್ರೋಣಪುತ್ರನನ್ನು ಸುಪೀತವಾದ, ತೀಕ್ಷ್ಣ ನಿಶಿತ ಸಾಯಕಗಳಿಂದ ಹೊಡೆದನು. ಆಗ ಅವರಿಬ್ಬರೂ ಹೋರಾಟದಲ್ಲಿ ಬಹುವಿಧದ ಶರಗಳಿಂದ ಅನ್ಯೋನ್ಯರನ್ನು ಗಾಯಗೊಳಿಸಿದರು.

ಶೂರ ಭಗದತ್ತನನ್ನು ವಾಹಿನೀಪತಿ ವಿರಾಟನು ತ್ವರೆಮಾಡಿ ಎದುರಿಸಿ ಯುದ್ಧವನ್ನು ಪ್ರಾರಂಭಿಸಿದನು. ಭಗದತ್ತನ ಶರವರ್ಷಗಳಿಂದ ಪೀಡಿತನಾದ ವಿರಾಟನು ಸಂಕ್ರುದ್ಧನಾಗಿ ಪರ್ವತದ ಮೇಲೆ ಮೋಡವು ಮಳೆ ಸುರಿಸುವಂತೆ ಶರಗಳ ಮಳೆಯನ್ನು ಸುರಿಸಿದನು. ತಕ್ಷಣವೇ ಭಗದತ್ತನು ವಿರಾಟನನ್ನು ಉದಯಿಸುತ್ತಿರುವ ಸೂರ್ಯನನ್ನು ಮೋಡಗಳು ಹೇಗೋ ಹಾಗೆ ಮುಚ್ಚಿಬಿಟ್ಟನು.

ಶಾರದ್ವತ ಕೃಪನು ಕೈಕೇಯ ಬೃಹತ್ಕ್ಷತ್ರನನ್ನು ಎದರಿಸಿ ಬಂದನು. ಅವನನ್ನು ಕೃಪನು ಶರವರ್ಷದಿಂದ ಮುಸುಕು ಹಾಕಿದನು. ಕೃದ್ಧನಾದ ಕೇಕಯನು ಗೌತಮನನ್ನು ಶರವೃಷ್ಟಿಯಿಂದ ತುಂಬಿಸಿದನು. ಅವರು ಅನ್ಯೋನ್ಯರ ಕುದುರೆಗಳನ್ನು ಕೊಂದು ಧನುಸ್ಸುಗಳನ್ನು ಕತ್ತರಿಸಿದರು. ವಿರಥರಾದ ಆ ಇಬ್ಬರು ಅಮರ್ಷಣರು ಖಡ್ಗಯುದ್ಧದಲ್ಲಿ ತೊಡಗಿದರು. ಅವರ ಯುದ್ಧವು ಘೋರರೂಪವೂ ಸುದಾರುಣವೂ ಆಗಿದ್ದಿತು.

ರಾಜ ದ್ರುಪದನಾದರೋ ಹೃಷ್ಟರೂಪ ಸೈಂಧವ ಜಯದ್ರಥನನ್ನು ಎದುರಿಸಿದನು. ರಾಜ ಸೈಂಧವಕನು ದ್ರುಪದನನ್ನು ಮೂರು

ವಿಶಿಖಿಗಳಿಂದ ಹೊಡೆದನು. ಅವನೂ ಕೂಡ ಅವನನ್ನು ಪ್ರತಿಘಾತಿಗೊಳಿಸಿದನು. ಶುಕ್ರ-ಅಂಗಾರಕರಂತಿರುವ ಅವರಿಬ್ಬರ ನಡುವೆ ಘೋರರೂಪದ ಸುದಾರುಣ, ಆದರೆ ನೋಡುವವರಿಗೆ ಸಂತೋಷವನ್ನುಂಟುಮಾಡುವ ಯುದ್ಧವು ನಡೆಯಿತು.

ಧಾರ್ತರಾಷ್ಟ್ರ ವಿಕರ್ಣನಾದರೋ ಮಹಾಬಲ ಸುತಸೋಮನನೊಂದಿಗೆ ವೇಗದ ಅಶ್ವಗಳಿಂದ ಯುದ್ಧವನ್ನು ಪ್ರಾರಂಭಿಸಿದನು. ಆದರೆ ಶರಗಳಿಂದ ಗಾಯಗೊಳಿಸಿದರೂ ವಿಕರ್ಣನು ಸುತಸೋಮನನ್ನು ಅಲುಗಾಡಿಸಲಾಗಲಿಲ್ಲ. ಸುತಸೋಮನೂ ವಿಕರ್ಣನನ್ನು ಹಾಗೆ ಮಾಡಲು ಆಗಲಿಲ್ಲ. ಅದೊಂದು ಅದ್ಭುತವಾಗಿತ್ತು.

ಮಹಾರಥ ಪರಾಕ್ರಮೀ ಚೇಕಿತಾನನು ಪಾಂಡವರಿಗೋಸ್ಕರ ಕೃದ್ಧನಾಗಿ ನರವ್ಯಾಘ್ರ ಸುಶರ್ಮನನ್ನು ಎದುರಿಸಿದನು. ಸುಶರ್ಮನಾದರೋ ಮಹಾರಥ ಚೇಕಿತಾನನನ್ನು ಮಹಾ ಶರವರ್ಷದಿಂದ ತಡೆದನು. ಚೇಕಿತಾನನಾದರೋ ಸಂರಬ್ಧನಾಗಿ ಸುಶರ್ಮನನ್ನು ಮಹಾಮೇಘವು ಪರ್ವತವನ್ನು ಮುಚ್ಚುವಂತೆ ಬಾಣಗಳಿಂದ ಮುಚ್ಚಿದನು.

ಪರಾಕ್ರಮೀ ಶಕುನಿಯು ಪರಾಕ್ರಾಂತ ಪ್ರತಿವಿಂಧ್ಯನನ್ನು ಮದಿಸಿದ ಆನೆಯು ಮದಿಸಿದ ಆನೆಯನ್ನು ಹೇಗೋ ಹಾಗೆ ಎದುರಿಸಿದನು. ಸಂಕ್ರುದ್ಧನಾದ ಯುಧಿಷ್ಠಿರನ ಮಗನಾದರೋ ಸಂಗ್ರಾಮದಲ್ಲಿ ನಿಶಿತಬಾಣಗಳಿಂದ ಮಘವತನು ದಾನವನನ್ನು ಹೊಡೆಯುವಂತೆ

ಸೌಬಲನನ್ನು ಗಾಯಗೊಸಿದನು. ಆಹವದಲ್ಲಿ ಮಹಾಪ್ರಾಜ್ಞ ಶಕುನಿಯು ಪ್ರತಿವಿಂಧ್ಯನೊಡನೆ ಪ್ರತಿಯುದ್ಧವನ್ನು ಮಾಡಿ ಅವನನ್ನು ಸಂನತಪರ್ವ ಶರಗಳಿಂದ ಗಾಯಗೊಳಿಸಿದನು.

ಕಾಂಬೋಜರ ಮಹಾರಥ ಸುದಕ್ಷಿಣನನ್ನಾದರೋ ಪರಾಕ್ರಾಂತ ಶ್ರುತಕರ್ಮನು ಸಂಯುಗದಲ್ಲಿ ಎದುರಿಸಿದನು. ಸುದಕ್ಷಿಣನು ಮೈನಾಕಪರ್ವತದಂತಿದ್ದ ಮಹಾರಥ ಸಹದೇವನ ಮಗನನ್ನು ಹೊಡೆದೂ ಅಲುಗಾಡಿಸಲಕ್ಕಾಗಲಿಲ್ಲ. ಆಗ ಶ್ರುತಕರ್ಮನು ಕ್ರುದ್ಧನಾಗಿ ಮಹಾರಥ ಕಾಂಬೋಜನನ್ನು ಬಹಳ ಶರಗಳಿಂದ ಚುಚ್ಚಿ ಎಲ್ಲಕಡೆ ಗಾಯಗೊಳಿಸಿದನು.

ಸಂಕ್ರುದ್ಧನಾದ ಇರವಾನನು ಪ್ರಯತ್ನಮಾಡಿ ಅಮರ್ಷಣ ಶ್ರುತಾಯುಷನೊಂದಿಗೆ ಪ್ರತಿಯುದ್ಧವನ್ನು ಮಾಡಿದನು. ಅರ್ಜುನನ ಮಹಾರಥ ಮಗನು ಸಮರದಲ್ಲಿ ಅವನ ಕುದುರೆಗಳನ್ನು ಕೊಂದು ಮಹಾ ಗರ್ಜನೆಯನ್ನು ಮಾಡಲು ಸೇನೆಯು ಅವನನ್ನು ಮೆಚ್ಚಿತು. ಆಗ ಅವನೂ ಸಂಕ್ರುದ್ಧನಾಗಿ ಸಮರದಲ್ಲಿ ಫಾಲ್ಗುನಿಯ ಕುದುರೆಗಳನ್ನು ಗದೆಯ ತುದಿಯಿಂದ ಹೊಡೆದುರುಳಿಸಿದನು. ಆಗ ಯುದ್ಧವು ಮುಂದುವರೆಯಿತು.

ಅವಂತಿಯ ವಿಂದಾನುವಿಂದರು ಸೇನೆ ಮತ್ತು ಮಕ್ಕಳೊಂದಿಗೆ ಮಹಾರಥ ವೀರ ಕುಂತಿಭೋಜನನ್ನು ಎದುರಿಸಿದರು. ಅಲ್ಲಿ ಮಹಾಸೇನೆಯೊಂದಿಗೆ ಸ್ಥಿರವಾಗಿದ್ದುಕೊಂಡು ಯುದ್ಧಮಾಡುತ್ತಿರುವ

ಅವಂತಿಯವರ ಅದ್ಭುತ ಪರಾಕ್ರಮವು ಕಾಣಿಸಿತು. ಅನುವಿಂದನು ಗದೆಯಿಂದ ಕುಂತಿಭೋಜನನ್ನು ಹೊಡೆದನು. ಆಗ ತಕ್ಷಣವೇ ಕುಂತಿಭೋಜನು ಅವನನ್ನು ಶರವ್ರಾತಗಳಿಂದ ಮುಚ್ಚಿದನು. ಕುಂತಿಭೋಜನ ಮಗನೂ ಕೂಡ ವಿಂದನನ್ನು ಸಾಯಕಗಳಿಂದ ಹೊಡೆದನು. ಅಗ ಅವನು ಪ್ರತಿಯಾಗಿ ಹೊಡೆಯಲು ಅಲ್ಲಿ ಅದ್ಭುತವಾಯಿತು.

ಕೇಕಯ ಸಹೋದರರೈವರು ಗಾಂಧಾರರ ಐವರನ್ನು ಸಸೈನ್ಯದೊಂದಿಗೆ ಅವರ ಸೇನೆಯೊಂದಿಗೆ ಯುದ್ಧಮಾಡತೊಡಗಿದರು. ಧಾರ್ತರಾಷ್ಟ್ರ ವೀರಬಾಹುವು ರಥಸತ್ತಮ ವೈರಾಟಿ ಉತ್ತರನನೊಂದಿಗೆ ನಿಶಿತ ಶರಗಳಿಂದ ಯುದ್ಧಮಾಡಿದನು. ಉತ್ತರನೂ ಕೂಡ ಆ ಧೀರನನ್ನು ನಿಶಿತ ಬಾಣಗಳಿಂದ ಹೊಡೆದನು. ಸಮರದಲ್ಲಿ ಚೇದಿರಾಜನು ಉಲೂಕನನ್ನು ಎದುರಿಸಿದನು. ಉಲೂಕನೂ ಕೂಡ ಅವನು ನಿಶಿತ ಲೋಮವಾಹಿ ಬಾಣಗಳಿಂದ ಹೊಡೆದನು. ಸಂಕ್ರುದ್ಧರಾಗಿ ಅನ್ಯೋನ್ಯರನ್ನು ಗಾಯಗೊಳಿಸುತ್ತಿರುವ ಆ ಇಬ್ಬರು ಅಪರಾಜಿತರ ಯುದ್ಧವು ಘೋರರೂಪವನ್ನು ತಾಳಿತು.

ಹೀಗೆ ಕೌರವರ ಮತ್ತು ಪಾಂಡವರ ನಡುವೆ ಸಹಸ್ರಾರು ರಥ-ಆನೆ-ಕುದುರೆ-ಪದಾತಿಗಳ ದ್ವಂದ್ವಯುದ್ಧವೂ ಸಂಕುಲಯುದ್ಧವೂ ನಡೆಯಿತು. ಒಂದು ಕ್ಷಣ ಆ ಯುದ್ಧವು ನೋಡಲು ಮಧುರವಾಗಿತ್ತು. ಅನಂತರ ಉನ್ಮತ್ತವಾದಂತೆ ಏನೂ ತಿಳಿಯಲಿಲ್ಲ. ಸಮರದಲ್ಲಿ ಗಜಾರೂಢರು

ಗಜಾರೂಡರೊಡನೆ, ರಥಿಗಳು ರಥಿಗಳೊಂದಿಗೆ, ಅಶ್ವಾರೋಹಿಗಳು ಅಶ್ವಾರೋಹಿಗಳೊಂದಿಗೆ, ಮತ್ತು ಪದಾತಿಗಳು ಪದಾತಿಗಳೊಂದಿಗೆ ಕಾದಾಡಿದರು. ಸಮರದಲ್ಲಿ ಶೂರರು ಪರಸ್ಪರರೊಂದಿಗೆ ಹೋರಾಡುತ್ತಿರಲು ಯುದ್ಧವು ತುಂಬಾ ದುರ್ಧರ್ಷವೂ ವ್ಯಾಕುಲವೂ ಆಯಿತು. ಅಲ್ಲಿ ಸೇರಿದ್ದ ದೇವ-ಋಷಿಗಳೂ, ಸಿದ್ಧ-ಚಾರಣರೂ ದೇವಾಸುರರ ರಣಕ್ಕೆ ಸಮನಾದ ಆ ಘೋರ ರಣಯುದ್ಧವನ್ನು ನೋಡಿದರು. ಆಗ ಸಹಸ್ರಾರು ಆನೆಗಳೂ, ರಥಗಳೂ, ಅಶ್ವಗಳೂ ಮತ್ತು ಮನುಷ್ಯರೂ ತಮ್ಮ ಸ್ವಭಾವಗಳಲ್ಲಿ ವಿಪರೀತರಾದಂತೆ ಕಂಡರು. ಅಲ್ಲಲ್ಲಿಯೇ ರಥ-ಆನೆ-ಪದಾತಿಗಳು ಪುನಃ ಪುನಃ ಅದೇ ಸ್ಥಳದಲ್ಲಿಯೇ ಯುದ್ಧಮಾಡುತ್ತಿರುವಂತೆ ತೋರುತ್ತಿತ್ತು.

## ಸಂಕುಲಯುದ್ಧ

ಮಕ್ಕಳು ತಂದೆಯನ್ನು, ತಂದೆಯರು ತಮ್ಮ ಔರಸ ಪುತ್ರರನ್ನು, ಸಹೋದರರು ಸಹೋದರರನ್ನು, ಅಳಿಯರು ಮಾವಂದಿರನ್ನು, ಮಾವಂದಿರು ಅಳಿಯರನ್ನು, ಸಖನು ಸಖನನ್ನು ಗುರುತಿಸಲಿಲ್ಲ. ಪಾಂಡವರು ಕುರುಗಳೊಂದಿಗೆ ಆವಿಷ್ಟರಾದವರಂತೆ ಯುದ್ಧಮಾಡಿದರು. ನೊಗಗಳು ನೊಗಗಳಿಗೆ ಹೊಡೆದು ಕೆಲವು ನರವ್ಯಾಘ್ರರು ರಥಗಳು ಮುರಿದು ಕೆಳಗೆ ಬಿದ್ದರು. ರಥದ ಚಕ್ರಗಳೊಂದಿಗೆ ರಥಚಕ್ರಗಳು ತಾಗಿದವು. ಇನ್ನು ಕೆಲವರು ಗುಂಪು ಗುಂಪಾಗಿ ಪರಸ್ಪರರನ್ನು ಕೊಲ್ಲಲು ಹೋರಾಡಿದರು. ಕೆಲವು ರಥಗಳು

ಇತರ ರಥಗಳಿಂದ ತಡೆಗಟ್ಟಲ್ಪಟ್ಟು ಚಲಿಸಲು ಸಾಧ್ಯವಾಗುತ್ತಿರಲಿಲ್ಲ. ಮದವೊಡೆದ ಮಹಾಕಾಯ ಗಜಗಳು ಗಜಗಳನ್ನು ಎದುರಿಸಿ ಸಿಟ್ಟಿಗೆದ್ದು ಕ್ರುದ್ಧರಾಗಿ ತಮ್ಮ ದಂತಗಳಿಂದ ಪರಸ್ಪರರನ್ನು ಇರಿದವು. ತೋಮರ ಪತಾಕೆಗಳನ್ನುಳ್ಳ ಆನೆಗಳು ಶತ್ರುಗಳ ಆನೆಗಳನ್ನು ಎದುರಿಸಿ, ವೇಗದಿಂದ ಮಹಾಗಜಗಳ ದಂತಗಳಿಂದ ಸೀಳಲ್ಪಟ್ಟು ಪರಮ ನೋವಿನಿಂದ ಕೂಗಿದವು. ಅಂಕುಶಗಳಿಂದ ಉತ್ತಮ ಶಿಕ್ಷಣವನ್ನು ಪಡೆದ, ಚೆನ್ನಾಗಿ ನಡೆದುಕೊಳ್ಳುತ್ತಿದ್ದ, ಮದವೊಡೆಯದೇ ಇದ್ದ ಆನೆಗಳು ಮದವೊಡೆದ ಆನೆಗಳನ್ನು ಎದುರಾದವು. ಕೆಲವು ಮದವೊಡೆದ ಗಜಗಳೂ ಕೂಡ ಇತರ ಮಹಾಗಜಗಳನ್ನು ಎದುರಿಸಿ ಕ್ರೌಂಚಪಕ್ಷಿಗಳಂತೆ ರೋದಿಸುತ್ತಾ ಅಲ್ಲಲ್ಲಿ ಸ್ವತಂತ್ರರಾಗಿ ಓಡುತ್ತಿದ್ದವು. ಚೆನ್ನಾಗಿ ಪಳಗಿದ, ಕರಟವೊಡೆದು ಸುರಿಯುತ್ತಿದ್ದ ಮದಿಸಿದ ವರವಾರಣ ಆನೆಗಳು ಖಡ್ಗ, ತೋಮರ, ನಾರಾಚಗಳಿಂದ ಹೊಡೆಯಲ್ಪಟ್ಟು ತುಂಡು ತುಂಡಾಗಿ ಕೆಳಗೆ ಉರುಳಿ ಅಸುವನ್ನು ನೀಗಿದವು. ಕೆಲವು ಭೈರವ ಕೂಗನ್ನು ಕೂಗುತ್ತಾ ದಿಕ್ಕಾಪಾಲಾಗಿ ಓಡಿದವು. ವಿಶಾಲ ಎದೆಯ, ಪ್ರಹಾರಿ ಗಜಗಳ ಪಾದರಕ್ಷಕರಾದರೋ ಖಡ್ಗ, ಧನುಸ್ಸು, ಹೊಳೆಯುತ್ತಿರುವ ಪರಶು, ಗದೆ, ಮುಸಲ, ಭಿಂಡಿಪ, ತೋಮರ, ಆಯಸ, ಪರಿಘ, ಹರಿತವಾದ ಹೊಳೆಯುತ್ತಿರುವ ತ್ರಿಶೂಲಗಳನ್ನು ಹಿಡಿದು ಕ್ರುದ್ಧರಾಗಿ ಅಲ್ಲಿಂದಲ್ಲಿಗೆ ಓಡುತ್ತಾ ಪರಸ್ಪರರನ್ನು ಕೊಲ್ಲುತ್ತಿರುವುದು ಕಂಡುಬಂದಿತು.

ಆ ಶೂರರು ಅನ್ಯೋನ್ಯರನ್ನು ಹೊಡೆದು ಕೊಲ್ಲುತ್ತಿರುವಾಗ

ನರರಕ್ತದಿಂದ ತೋಯ್ದ ಆ ಆಯುಧಗಳು ಪ್ರಕಾಶಮಾನವಾಗಿ ಹೊಳೆಯುತ್ತಿವೆಯೋ ಎನ್ನುವಂತೆ ಕಂಡಿವು. ವೀರಬಾಹುಗಳು ಖಡ್ಗಗಳನ್ನು ಬೀಸುವ ಮತ್ತು ಶತ್ರುಗಳ ಮರ್ಮಾಂಗಗಳ ಮೇಲೆ ಬೀಳಿಸುವ ಶಬ್ಧವು ಜೋರಾಗಿ ಕೇಳತೊಡಗಿತು. ಗದೆ-ಮುಸಲಗಳಿಂದ ಪುಡಿಯಾದ, ಉತ್ತಮ ಖಡ್ಗಗಳಿಂದ ತುಂಡಾದ, ಆನೆಗಳ ದಂತಗಳಿಂದ ಇರಿಯಲ್ಪಟ್ಟ, ಆನೆಗಳಿಂದ ತುಳಿಯಲ್ಪಟ್ಟ ನರರ ಆಕ್ರೋಶವು ಅಲ್ಲಲ್ಲಿ ಬೇರೆ ಬೇರೆಯಾಗಿ ಕೇಳಿಬಂದವು. ಆ ದಾರುಣ ಕೂಗು ಪ್ರೇತಗಳ ಕೂಗಿನಂತಿತ್ತು. ಚಾಮರ ಪೀಡಧಾರಿ ಹಯಾರೋಹಿ ಅಶ್ವಗಳೂ ಕೂಡ ಹಂಸಗಳಂತೆ ಮಹಾವೇಗದಿಂದ ಪರಸ್ಪರರನ್ನು ಆಕ್ರಮಿಸಿದವು. ಅವರು ಪ್ರಯೋಗಿಸಿದ ಬಂಗಾರದಿಂದ ವಿಭೂಷಿತ ಮಹಾಪ್ರಾಸಗಳು, ಶುಭ್ರವಾದ ತೀಕ್ಷ್ಣ ಬಾಣಗಳು ಹಾವುಗಳಂತೆ ಹಾರಾಡತೊಡಗಿದವು. ಕೆಲವು ಅಶ್ವಾರೋಹಿಗಳು ವೇಗವಾಗಿ ಹೋಗುತ್ತಿರುವಾಗ ಮಹಾ ರಥಗಳಲ್ಲಿರುವ ವೀರ ರಥಿಗಳ ಶಿರಗಳನ್ನು ಕತ್ತರಿಸಿದರು. ಬಾಣಗಳ ಗೋಚರದಲ್ಲಿ ಬಂದ ಬಹಳಷ್ಟು ಅಶ್ವಾರೋಹಿಗಳನ್ನೂ ಕೂಡ ರಥದಲ್ಲಿರುವವರು ಭಲ್ಲ-ಸಂನತಪರ್ವಗಳಿಂದ ಸಂಹರಿಸಿದರು. ಹೊಸದಾಗಿ ಉದಯಿಸುತ್ತಿದ್ದ ಮೇಘಗಳಂತಿದ್ದ ಕನಕಭೂಷಣ ಮದಿಸಿದ ಆನೆಗಳು ಕುದುರೆಗಳನ್ನು ತಮ್ಮ ಕಾಲುಗಳಿಂದಲೇ ತುಳಿದು ಸಾಯಿಸಿದವು. ಕುಂಭಗಳ ಮೇಲೆ ಮತ್ತು ಪಾರ್ಶ್ವಗಳಲ್ಲಿ ಪ್ರಾಸಗಳಿಂದ ಪೆಟ್ಟುತಿಂದ ಕೆಲವು ಆನೆಗಳು ಪರಮ ನೋವಿನಿಂದ ಕೂಗಿದವು. ಆ ಗೊಂದಲದಲ್ಲಿ ಕೆಲವು

ವರವಾರಣಗಳು ಅಶ್ವಾರೋಹಿಗಳನ್ನೂ ಅಶ್ವಗಳನ್ನೂ ಮೇಲೆ ಹಾರಿಸಿ ತಕ್ಷಣವೇ ನೆಲಕ್ಕೆ ಹಾಕಿ ಭೈರವ ಕೂಗನ್ನು ಕೂಗುತ್ತಿದ್ದವು. ಅಶ್ವಾರೋಹಿಗಳೊಡನೆ ಅಶ್ವಗಳನ್ನೂ ದಂತಗಳಿಂದ ಮೇಲೆತ್ತಿ ಕೆಳಗೆ ಹಾಕಿ ಆನೆಗಳು ಧ್ವಜಗಳೊಂದಿಗೆ ರಥಗಳನ್ನೂ ಧ್ವಂಸಮಾಡಿ ನಡೆದವು. ಮದವು ಸೋರುತ್ತಿದ್ದ ಕೆಲವು ಮದಿಸಿದ ಮಹಾಗಜಗಳು ಅಶ್ವಾರೋಹಿಗಳೊಡನೆ ಕುದುರೆಗಳನ್ನೂ ತಮ್ಮ ಸೊಂಡಿಲು ಕಾಲುಗಳಿಂದ ಸಂಹರಿಸಿದವು. ಕೆಲವು ಆನೆಗಳು ತಮ್ಮ ಸೊಂಡಿಲುಗಳಿಂದ ಕುದುರೆಗಳೊಂದಿಗೆ ರಥಗಳನ್ನೂ ಎಳೆದುಕೊಂಡು ಎಲ್ಲ ದಿಕ್ಕುಗಳಿಗೆ ಕೂಗುತ್ತಾ ಓಡಿ ಹೋದವು. ಶುಭ್ರವಾದ ತೀಕ್ಷ್ಣ ಆಶುಗಗಳು ಹಾವುಗಳಂತೆ ಹಾರಾಡಿ ಮನುಷ್ಯರ ಮತ್ತು ಕುದುರೆಗಳ ಲೋಹದ ಕವಚಗಳನ್ನೂ ಭೇದಿಸಿ ದೇಹಗಳನ್ನು ಚುಚ್ಚಿದವು.

ವೀರಬಾಹುಗಳಿಂದ ಪ್ರಯೋಗಿಸಲ್ಪಟ್ಟ ಶುಭ್ರ ಶಕ್ತ್ಯಾಯುಧಗಳು ಅಲ್ಲಲ್ಲಿ ಮಹಾ ಉಲ್ಕೆಗಳಂತೆ ಘೋರವಾಗಿ ಬೀಳುತ್ತಿದ್ದವು. ಚಿರತೆ ಮತ್ತು ಹುಲಿಯ ಚರ್ಮಗಳಿಂದ ಮಾಡಿದ ಚೀಲಗಳಲ್ಲಿ ಇರಿಸಿದ್ದ ವಿಮಲ ಖಡ್ಗಗಳಿಂದ ಶತ್ರುಗಳನ್ನು ರಣದಲ್ಲಿ ಸಂಹರಿಸಿದರು. ಒಂದು ಭಾಗ ಕತ್ತರಿಸಲ್ಪಟ್ಟವರೂ ಕೂಡ ಕ್ರುದ್ಧರಾಗಿ ಖಡ್ಗ-ಚರ್ಮ-ಪರಶುಗಳಿಂದ ಶತ್ರುಗಳನ್ನು ಹೊಡೆಯುತ್ತಿರುವುದು ಕಂಡುಬಂದಿತು. ಕೆಲವರು ಶಕ್ತಿಯಿಂದ ಸೀಳಲ್ಪಟ್ಟರೆ ಕೆಲವರು ಪರಶುವಿನಿಂದ ತುಂಡಾದರು. ಕೆಲವರು ಆನೆಗಳ ತುಳಿತಕ್ಕೆ ಸಿಲುಕಿದರೆ ಇನ್ನು ಕೆಲವರು ಕುದುರೆಗಳಿಂದ ಒದೆಯಲ್ಪಟ್ಟು ಬಿದ್ದಿದ್ದರು. ಕೆಲವರು ರಥಚಕ್ರಕ್ಕೆ

ಸಿಲುಕಿ ತುಂಡಾದರೆ ಕೆಲವರು ನಿಶಿತ ಬಾಣಗಳಿಂದ ತುಂಡಾಗಿದ್ದರು. ಅಲ್ಲಲ್ಲಿ ನರರು ಬಾಂಧವರನ್ನು ಕೂಗಿ ಕರೆಯುತ್ತಿದ್ದರು. ಅಂಗಗಳನ್ನು ಕಳೆದುಕೊಂಡ, ದೇಹಗಳು ತುಂಡಾದ, ಬಾಹುಗಳೂ ಭುಜಗಳೂ ತುಂಡಾಗಿದ್ದ, ಪಕ್ಕೆಗಳು ಸೀಳಿಹೋದ ಅವರು ಕೆಲವರು ಜೀವವನ್ನು ಉಳಿಸಿಕೊಳ್ಳಲು ಬಯಸಿ ತಂದೆಯರನ್ನು, ಕೆಲವರು ಮಕ್ಕಳನ್ನು, ಕೆಲವರು ಬಾಂಧವರೊಂದಿಗೆ ಸಹೋದರರರನ್ನು, ಮಾವಂದಿರನ್ನು, ಅಳಿಯರನ್ನು, ಇತರರರನ್ನೂ ಕೂಗಿ ಕರೆಯುವ ಆಕ್ರಂದನವು ಎಲ್ಲೆಡೆಯೂ ಕಾಣಿಸಿತು. ಕೆಲವರು ಬಾಯಾರಿಕೆಯಿಂದ ಬಳಲಿ, ಕ್ಷೀಣಶಕ್ತಿಯುಳ್ಳವರಾಗಿ, ಯುದ್ಧದಲ್ಲಿ ಭೂಮಿಯ ಮೇಲೆ ಬಿದ್ದು ನೀರನ್ನೇ ಯಾಚಿಸುತ್ತಿದ್ದರು. ರಕ್ತದ ಪ್ರವಾಹದಿಂದ ತೋಯ್ದು ಹೋಗಿದ್ದ ಮತ್ತು ನೋವಿನಿಂದ ಬಹಳ ಸಂಕಟಪಡುತ್ತಿದ್ದವರು ತಮ್ಮನ್ನು ತಾವೇ ಮತ್ತು ಅಲ್ಲಿದ್ದ ಧಾರ್ತರಾಷ್ಟ್ರರನ್ನೂ ಬಹುವಾಗಿ ನಿಂದಿಸಿದರು. ಇತರ ಶೂರ ಕ್ಷತ್ರಿಯರು ಪರಸ್ಪರರ ಮೇಲೆ ವೈರವನ್ನೇ ಸಾಧಿಸುತ್ತಾ ಶಸ್ತ್ರಗಳನ್ನು ಬಿಡುತ್ತಿರಲಿಲ್ಲ. ನೋವಿನಿಂದ ಅಳುತ್ತಲೂ ಇರಲಿಲ್ಲ. ಕೆಲವರು ಯುದ್ಧಮಾಡುವುದರಲ್ಲಿಯೇ ಸಂತುಷ್ಟರಾಗಿ ಪರಸ್ಪರರನ್ನು ಪೀಡಿಸುತ್ತಿದ್ದರು. ಹಲ್ಲು ಕಟ-ಕಟಾಯಿಸಿ ಪ್ರದರ್ಶಿಸುತ್ತಿದ್ದರು. ಕೋಪದಿಂದ ಅವುಡುಕಚ್ಚುತ್ತಿದ್ದರು. ಗಂಟಿಕ್ಕಿದ ಹುಬ್ಬುಗಳ ಕ್ರೂರದೃಷ್ಟಿಯಿಂದ ಒಬ್ಬರನ್ನೊಬ್ಬರು ನೋಡುತ್ತಿದ್ದರು. ಇನ್ನು ಕೆಲವು ದೃಢಸತ್ತ್ವರು ಮಹಾಬಲಶಾಲಿಗಳು ಶರಪೀಡಿತರಾಗಿ ಗಾಯಗಳಿಂದ ಆರ್ತರಾಗಿ ಕಷ್ಟದಲ್ಲಿದ್ದರೂ ಕೂಡ ಮೌನಿಗಳಾಗಿ ಅದನ್ನು

ಸಹಿಸಿಕೊಂಡಿದ್ದರು.

ಅನ್ಯ ಶೂರರು ವಿರಥರಾಗಿ ಇನ್ನೊಂದು ರಥವನ್ನೇರಲು ಪ್ರಾರ್ಥಿಸಿಕೊಳ್ಳುವಾಗಲೇ, ಸಂಯುಗದಲ್ಲಿ ಓಡಿಬರುತ್ತಿದ್ದ ವರವಾರಣಗಳಿಂದ ಬೀಳಿಸಲ್ಪಟ್ಟು ಕಾಲಿಗೆ ಸಿಕ್ಕಿ ಮುದ್ದೆಯಾಗುತ್ತಿದ್ದರು. ಆಗ ಅವರು ಹೂಗಳಿಂದ ಕೂಡಿದ ಕಿಂಶುಕವೃಕ್ಷಗಳಂತೆ ಶೋಭಿಸುತ್ತಿದ್ದರು. ಆ ವೀರವರಕ್ಷಯಕಾರಕ ಮಹಾಭಯಂಕರ ಯುದ್ಧವು ನಡೆಯುತ್ತಿರಲು ಎರಡೂ ಸೇನೆಗಳಿಂದ ಬಹಳ ಭೈರವ ಕೂಗುಗಳು ಕೇಳಿಬರುತ್ತಿದ್ದವು. ರಣದಲ್ಲಿ ತಂದೆಯು ಪುತ್ರನನ್ನು, ಪುತ್ರನು ತಂದೆಯನ್ನು, ಅಳಿಯನು ಮಾವನನ್ನು, ಮಾವನು ಅಳಿಯನನ್ನು, ಸಖನನ್ನು ಸಖನು, ಸಂಬಂಧಿಯು ಬಾಂಧವನನ್ನು ಕೊಂದರು. ಹೀಗೆ ಅಲ್ಲಿ ಕುರುಗಳು ಪಾಂಡವರೊಂದಿಗೆ ಯುದ್ಧ ಮಾಡಿದರು. ಆ ಮರ್ಯಾದೆಗಳಿಲ್ಲದ ಮಹಾಹವದಲ್ಲಿ ಭೀಷ್ಮನ ಬಳಿಬಂದ ಪಾರ್ಥರ ಸೇನೆಯು ಭಯದಿಂದ ಕಂಪಿಸಿತು. ಆಗ ಐದು ನಕ್ಷತ್ರಗಳ ಮತ್ತು ತಾಲವೃಕ್ಷ ಚಿಹ್ನೆಯ  ಧ್ವಜಪಟವು ಬೆಳ್ಳಿಯ ಧ್ವಜಕಂಪದಲ್ಲಿ ಹಾರಾಡುತ್ತಿರಲು ಮಹಾಬಾಹು ಭೀಷ್ಮನು ಆ ಮಹಾರಥದಲ್ಲಿ ಮೇರುಪರ್ವತದಲ್ಲಿ ಚಂದ್ರಮನಂತೆ ಪ್ರಕಾಶಿಸಿದನು.

ಅಭಿಮನ್ಯು ಪರಾಕ್ರಮ

ಆ ದಿನದ ದಾರುಣ ಪೂರ್ವಾಹ್ಣವು ಕಳೆಯಲು ಆ ಮಹಾರೌದ್ರ ಮಹಾವೀರಕ್ಷಯ ಯುದ್ಧದಲ್ಲಿ ದುರ್ಯೋಧನನಿಂದ ಪ್ರಚೋದಿತರಾಗಿ ದುರ್ಮುಖ, ಕೃತವರ್ಮ, ಕೃಪ, ಶಲ್ಯ, ಮತ್ತು ವಿವಿಂಶತಿಯರು

ಭೀಷ್ಮನ ರಕ್ಷಣೆಗಾಗಿ ನಿಂತರು. ಈ ಐವರು ಅತಿರಥರಿಂದ ರಕ್ಷಿತನಾದ ಆ ಮಹಾರಥನು ಪಾಂಡವರ ಸೇನೆಗಳೊಳಗೆ ನುಗ್ಗಿದನು. ಚೇದಿ, ಕಾಶಿ, ಕರೂಷ ಮತ್ತು ಪಾಂಚಾಲರ ಮಧ್ಯೆ ಭೀಷ್ಮನ ತಾಲಚಿಹ್ನೆಯಿಂದ ಭೂಷಿತವಾದ ಧ್ವಜದಿಂದ ಅನೇಕರಥಗಳಲ್ಲಿ ಕುಳಿತು ಯುದ್ಧಮಾಡುತ್ತಿರುವನೋ ಎನ್ನುವಂತೆ ತೋರುತ್ತಿದ್ದನು. ಭೀಷ್ಮನು ಆಯುಧಗಳೊಡನೆ ಶಿರಗಳನ್ನೂ ಬಾಹುಗಳನ್ನೂ ಮಹಾವೇಗದ ಭಲ್ಲಗಳಿಂದಲೂ ಸಂನತಪರ್ವಗಳಿಂದಲೂ ಕತ್ತರಿಸಿದನು. ನೃತ್ಯಮಾಡುತ್ತಿರುವನೋ ಎನ್ನುವಂತಿದ್ದ ಭೀಷ್ಮನ ರಥಮಾರ್ಗದಲ್ಲಿ ಆನೆಗಳಿಂದ ಮರ್ಮಗಳಲ್ಲಿ ಪೆಟ್ಟುತಿಂದು ಕೆಲವರು ಆರ್ತಸ್ವರಗಳಿಂದ ಕೂಗಿದರು. ಅಭಿಮನ್ಯುವು ಸಂಕ್ರುದ್ಧನಾಗಿ ಕಂದು ಬಣ್ಣದ ಉತ್ತಮ ಕುದುರೆಗಳನ್ನು ಕಟ್ಟಿದ ರಥದಲ್ಲಿ ನಿಂತು ಭೀಷ್ಮರಥದ ಕಡೆ ಬಂದನು. ಬಂಗಾರದ, ಬಣ್ಣಬಣ್ಣದ, ಕರ್ಣಿಕಾರ ಧ್ವಜದ ಆ ರಥಸತ್ತಮನು ಭೀಷ್ಮನ ಮೇಲೆ ಶರವರ್ಷವನ್ನು ಸುರಿಸಿದನು. ಆ ವೀರನು ತಾಲಕೇತು ಭೀಷ್ಮನ ಧ್ವಜವನ್ನು ತೀಕ್ಷ್ಣ ಪತ್ರಿಗಳಿಂದ ಹೊಡೆದು ಅವನ ಅನುಚರರೊಂದಿಗೆ ಯುದ್ಧಮಾಡಿದನು. ಕೃತವರ್ಮನನ್ನು ಒಂದು ಮತ್ತು ಶಲ್ಯನನ್ನು ಐದು ಆಯಸಗಳಿಂದ ಮತ್ತು ಪ್ರಪಿತಾಮಹನನ್ನು ಒಂಭತ್ತು ಮೊನಚಾದ ಆನರ್ಚಗಳಿಂದ ಹೊಡೆದನು. ಆಕರ್ಣಾಂತವಾಗಿ ಧನುಸ್ಸನ್ನು ಸೆಳೆದು ಸರಿಯಾಗಿ ಗುರಿಯಿಟ್ಟು ಹೊಡೆದ ಒಂದೇ ಬಾಣದಿಂದ ಬಂಗಾರದಿಂದ ವಿಭೂಷಿತವಾದ ಭೀಷ್ಮನ ಧ್ವಜವನ್ನು ತುಂಡರಿಸಿದನು. ಎಲ್ಲ ಆವರಣಗಳನ್ನೂ

ಭೇದಿಸುವ ಸಂನತಪರ್ವಣ ಭಲ್ಲದಿಂದ ದುರ್ಮುಖನ ಸಾರಥಿಯ ಶಿರವನ್ನು ದೇಹದಿಂದ ಕತ್ತರಿಸಿದನು. ಕಾರ್ತಸ್ವರ ವಿಭೂಷಿತವಾದ ಕೃಪನ ಧನುಸ್ಸನ್ನು ನಿಶಿತಾಗ್ರ ಭಲ್ಲದಿಂದ ಕತ್ತರಿಸಿ, ಅವನನ್ನೂ ತೀಕ್ಷ್ಣಮುಖ ಶರಗಳಿಂದ ಹೊಡೆದನು.

ಆ ಮಹಾರಥನು ಪರಮ ಕ್ರುದ್ಧನಾಗಿ ನರ್ತಿಸುತ್ತಿರುವನೋ ಎನ್ನುವಂತೆ ಅವರನ್ನು ಪ್ರಹರಿಸಿದನು. ಅವನ ಕೈಚಳಕವನ್ನು ಕಂಡು ದೇವತೆಗಳು ಕೂಡ ಸಂತೋಷಪಟ್ಟರು. ಕಾರ್ಷ್ಣಿಯ ಲಕ್ಷ್ಯವೇದಿತ್ವವನ್ನು ಕಂಡು ಭೀಷ್ಮನೇ ಮೊದಲಾದ ರಥರು ಇವನು ಸಾಕ್ಷಾತ್ ಧನಂಜಯನಂತೆ ಸತ್ತ್ವವಂತನೆಂದು ಅಭಿಪ್ರಾಯಪಟ್ಟರು. ಅವನ ಕೈಚಳಕವನ್ನು ಪ್ರದರ್ಶಿಸುವ ಧನುಸ್ಸು ಗಾಂಡೀವದಂತೆಯೇ ದಿಕ್ಕುಗಳಲ್ಲಿ ಮೊಳಗುವಂತೆ ಧ್ವನಿಸುತ್ತಿತ್ತು. ಮಹಾವೇಗದಿಂದ ಅವನನ್ನು ತಲುಪಿ ಪರವೀರಹ ಭೀಷ್ಮನು ಸಮರದಲ್ಲಿ ಒಂಭತ್ತು ಆಶುಗಗಳಿಂದ ಆರ್ಜುನಿಯನ್ನು ಚೆನ್ನಾಗಿ ಪ್ರಹರಿಸಿದನು. ಆ ಪರಮೌಜಸ ಯತವ್ರತನು ಅವನ ಧ್ವಜವನ್ನು ಮೂರು ಭಲ್ಲೆಗಳಿಂದ ತುಂಡರಿಸಿದನು ಮತ್ತು ಸಾರಥಿಯನ್ನು ಮೂರು ಬಾಣಗಳಿಂದ ಹೊಡೆದನು. ಹಾಗೆಯೇ ಕೃತವರ್ಮ, ಕೃಪ ಮತ್ತು ಶಲ್ಯರು ಅವನನ್ನು ಒಟ್ಟಿಗೇ ಹೊಡೆದರೂ ಕಾರ್ಷ್ಣಿಯು ಮೈನಾಕ ಪರ್ವತದಂತೆ ವಿಚಲಿತನಾಗಲಿಲ್ಲ. ಧಾರ್ತರಾಷ್ಟ್ರರ ಮಹಾರಥಿಗಳಿಂದ ಸುತ್ತುವರೆಯಲ್ಪಟ್ಟ ಆ ಶೂರ ಕಾರ್ಷ್ಣನು ಆ ಐವರು ಪಂಚರಥಿಗಳ ಮೇಲೆ ಶರವರ್ಷಗಳನ್ನು ಸುರಿಸಿದನು. ಆಗ ಅವರ ಮಹಾಸ್ತ್ರಗಳನ್ನೂ ಶರವೃಷ್ಟಿಯಿಂದ

ನಿವಾರಿಸಿ, ಬಲವಾನ್ ಕಾರ್ಷ್ಣಿಯು ಭೀಷ್ಮನ ಮೇಲೆ ಬಾಣಗಳನ್ನು ಬಿಟ್ಟು ಸಿಂಹನಾದಮಾಡಿದನು.

ಅಲ್ಲಿ ಭೀಷ್ಮನನ್ನು ಶರಗಳಿಂದ ಪೀಡಿಸಿ ವಿಜಯಕ್ಕೆ ಪ್ರಯತ್ನಿಸುತ್ತಿದ್ದ ಅವನ ಬಾಹುಗಳ ಮಹಾ ಬಲವು ಗೋಚರಿಸಿತು. ಆ ಪರಾಕ್ರಾಂತನ ಮೇಲೆ ಭೀಷ್ಮನೂ ಕೂಡ ಶರಗಳನ್ನು ಪ್ರಯೋಗಿಸಿದನು. ಆದರೆ ಅವನು ಸಮರದಲ್ಲಿ ಭೀಷ್ಮಚಾಪದಿಂದ ಬಿಡಲ್ಪಟ್ಟ ಶರಗಳನ್ನು ತುಂಡರಿಸಿದನು. ಆ ವೀರನು ಒಂಭತ್ತು ಅಮೋಘ ಶರಗಳಿಂದ ಭೀಷ್ಮನ ಧ್ವಜವನ್ನು ತುಂಡರಿಸಿದನು. ಆಗ ಆ ಮಹಾಸ್ಕಂಧದಮೇಲೆ ಹೊಳೆಯುತ್ತಿದ್ದ ಹೇಮವಿಭೂಷಿತ ತಾಲಧ್ವಜವು ಸೌಭದ್ರಿಯ ವಿಶಿಖಗಳಿಂದ ತುಂಡಾಗಿ ಭುವಿಯ ಮೇಲೆ ಬಿದ್ದಿತು. ಸೌಭದ್ರಿಯ ಬಾಣಗಳಿಂದ ಬಿದ್ದ ಧ್ವಜವನ್ನು ನೋಡಿ ಭೀಮನು ಕೂಗಿ ಸೌಭದ್ರಿಯನ್ನು ಹರ್ಷಗೊಳಿಸಿದನು.

ಆ ಕ್ಷಣದಲ್ಲಿ ಮಹಾಬಲ ಮಹಾರೌದ್ರ ಭೀಷ್ಮನು ಬಹಳ ದಿವ್ಯ ಮಹಾಸ್ತ್ರಗಳನ್ನು ಪ್ರಯೋಗಿಸಲು ತೊಡಗಿದನು. ಆಗ ಪ್ರಪಿತಾಮಹನು ಅಮೇಯಾತ್ಮ ಸೌಭದ್ರನನ್ನು ಹತ್ತು ಸಾವಿರ ನತಪರ್ವ ಶರಗಳಿಂದ ಮುಚ್ಚಿದನು. ಆಗ ಪಾಂಡವರ ಹತ್ತು ಮಹಾರಥರು ತ್ವರೆಮಾಡಿ ರಥಗಳಲ್ಲಿ ಸೌಭದ್ರನನ್ನು ರಕ್ಷಿಸಲು ಧಾವಿಸಿದರು: ಪುತ್ರನೊಂದಿಗೆ ವಿರಾಟ, ಧೃಷ್ಟದ್ಯುಮ್ನ, ಭೀಮ, ಐವರು ಕೇಕಯರು ಮತ್ತು ಸಾತ್ಯಕಿ. ರಣದಲ್ಲಿ ವೇಗದಿಂದ ಮೇಲೆಬೀಳುತ್ತಿದ್ದ ಅವರನ್ನು ಶಾಂತನವ

ಭೀಷ್ಮನು ಪಾಂಚಾಲ್ಯ-ಸಾತ್ಯಕಿಯರನ್ನು ಮೂರು ಬಾಣಗಳಿಂದ ಹೊಡೆದನು. ಆಕರ್ಣಾಂತವಾಗಿ ಧನುಸ್ಸನ್ನು ಎಳೆದು ನಿಶಿತ ಪತ್ರಿ ಕ್ಷುರ ಒಂದರಿಂದ ಭೀಮಸೇನನ ಧ್ವಜವನ್ನು ತುಂಡರಿಸಿದನು. ಸುವರ್ಣಮಯವಾದ ಕೇಸರಿಯ ಚಿಹ್ನೆಯುಳ್ಳ ಭೀಮಸೇನನ ಧ್ವಜವು ಭೀಷ್ಮನಿಂದ ಕತ್ತರಿಸಲ್ಪಟ್ಟು ರಥದಿಂದ ಬಿದ್ದಿತು. ಭೀಮಸೇನನು ರಣದಲ್ಲಿ ಶಾಂತನವ ಭೀಷ್ಮನನ್ನು ಮೂರು ಬಾಣಗಳಿಂದ ಹೊಡೆದು ಕೃಪನನ್ನು ಒಂದರಿಂದಲೂ, ಕೃತವರ್ಮನನ್ನು ಎಂಟರಿಂದಲೂ ಹೊಡೆದನು.

## ಉತ್ತರನ ವಧೆ



ಸೊಂಡಿಲನ್ನು ಮೇಲೆತ್ತಿ ಹಿಡಿದ ಆನೆಯ ಮೇಲೆ ವೈರಾಟಿ ಉತ್ತರನು ರಾಜ ಮದ್ರಾಧಿಪತಿಯ ಕಡೆ ಧಾವಿಸಿದನು. ವೇಗದಿಂದ ಮೇಲೆ ಬೀಳುತ್ತಿದ್ದ ಆ ವಾರಣರಾಜನ ಅಪ್ರತಿಮ ವೇಗವನ್ನು ರಣದಲ್ಲಿ ರಥೀ ಶಲ್ಯನು ತಡೆದನು. ಬಹು ಕ್ರುದ್ಧವಾದ ಆ ಗಜೇಂದ್ರವು ಒಂದು ಕಾಲನ್ನು ಅವನ ರಥದ ನೊಗದ ಮೇಲಿಟ್ಟು ರಥವನ್ನು ಎಳೆಯುತ್ತಿದ್ದ ನಾಲ್ಕೂ ಕುದುರೆಗಳನ್ನು ಏಕಕಾಲದಲ್ಲಿ ಸಂಹರಿಸಿತು. ಕುದುರೆಗಳು ಹತವಾಗಿದ್ದ ಅದೇ ರಥದಲ್ಲಿ ನಿಂತು ಮದ್ರಾಧಿಪನು ಉತ್ತರನ ಮೃತ್ಯುರೂಪವಾಗಿದ್ದ ಭುಜಗೋಪಮ ಲೋಹದ ಶಕ್ತಿಯನ್ನು ಎಸೆದನು. ಅದು ಅವನ ತನು-ತ್ರಾಣಗಳನ್ನು ಭೇದಿಸಲು ಅವನು ವಿಪುಲ ತಮವನ್ನು ಪ್ರವೇಶಿಸಿ, ಅಂಕುಶ ತೋಮರಗಳು ಕಳಚಿ ಬೀಳಲು ಆನೆಯ ಮೇಲಿಂದ ಕೆಳಗೆ ಬಿದ್ದನು. ಅನಂತರ ಶಲ್ಯನು ಖಡ್ಗವೊಂದನ್ನು ಹಿಡಿದು ಆ ಉತ್ತಮ ರಥದಿಂದ ಕೆಳಗೆ ಹಾರಿ ಆ ವಾರಣೇಂದ್ರದ ಮಹಾ ಸೊಂಡಿಲನ್ನು ವಿಕ್ರಮದಿಂದ ಕತ್ತರಿಸಿದನು. ಶರವ್ರಾತದಿಂದ ಮರ್ಮಗಳಲ್ಲಿ ಪೆಟ್ಟುತಿಂದು, ಸೊಂಡಿಲು ತುಂಡಾಗಿದ್ದ ಆ ಆನೆಯು ಭಯಂಕರ ಆರ್ತಸ್ವರವನ್ನು ಕೂಗಿ ಬಿದ್ದು ಅಸುನೀಗಿತು. ಇದನ್ನು ಮಾಡಿ ಮಹಾರಥ ಮದ್ರರಾಜನು ತಕ್ಷಣವೇ ಹೊಳೆಯುತ್ತಿರುವ ಕೃತವರ್ಮನ ರಥವನ್ನು ಏರಿದನು.

ಉತ್ತರನು ಹತನಾದುದನ್ನು ಮತ್ತು ಶಲ್ಯನು ಕೃತವರ್ಮನೊಡನೆ ಇರುವುದನ್ನು ನೋಡಿ ವೈರಾಟಿಯ ಶುಭ ಸಹೋದರ ಶಂಖನು ಕ್ರೋಧದಿಂದ ಹವಿಸ್ಸಿನಿಂದ ಪ್ರಜ್ವಲಿಸುವ ಅಗ್ನಿಯಂತೆ ಉರಿದೆದ್ದನು.

ಕಾರ್ತಸ್ವರವಿಭೂಷಿತವಾದ ಮಹಾಚಾಪವನ್ನು ಸೆಳೆದು ಆ ಬಲಿಯು ಮದ್ರಾಧಿಪ ಶಲ್ಯನನ್ನು ಸಂಹರಿಸಲು ಧಾವಿಸಿ ಬಂದನು. ಮಹಾ ರಥ ಸಮೂಹಗಳಿಂದ ಸುತ್ತಲೂ ಸುತ್ತುವರೆಯಲ್ಪಟ್ಟು, ಬಾಣಮಯ ಮಳೆಯನ್ನು ಸುರಿಸುತ್ತಾ ಶಲ್ಯನ ರಥದ ಕಡೆ ಧಾವಿಸಿದನು. ಮದಿಸಿದ ಆನೆಯ ವಿಕ್ರಮವುಳ್ಳ ಅವನು ಮೇಲೆ ಬೀಳಲು ಕೌರವರ ಏಳು ರಥಿಕರು ಮೃತ್ಯುವಿನ ದಾಡೆಗಳ ಮಧ್ಯೆ ಹೋಗುತ್ತಿರುವ ಮದ್ರರಾಜನನ್ನು ರಕ್ಷಿಸುವ ಸಲುವಾಗಿ ಅವನನ್ನು ಎಲ್ಲ ಕಡೆಗಳಿಂದ ಸುತ್ತುವರೆದರು. ಆಗ ಮಹಾಬಾಹು ಭೀಷ್ಮನು ಮೋಡದಂತೆ ಗರ್ಜಿಸುತ್ತಾ ನಾಲ್ಕು ಮೊಳ ಉದ್ದದ ಧನುಸ್ಸನ್ನು ಹಿಡಿದು ಶಂಖನ ಕಡೆಗೆ ಧಾವಿಸಿದನು. ಅವನನ್ನು ಆಕ್ರಮಣಿಸಿ ಬರುತ್ತಿದ್ದ ಆ ಮಹೇಷ್ವಾಸ ಮಹಾಬಲನನ್ನು ನೋಡಿ ಪಾಂಡವ ಸೇನೆಯು ಭಿರುಗಾಳಿಗೆ ಸಿಲುಕಿದ ನಾವೆಯಂತೆ ಸಂತ್ರಸ್ತಗೊಂಡಿತು.

ಭೀಷ್ಮನಿಂದ ಅವನನ್ನು ರಕ್ಷಿಸಲೋಸುಗ ಅರ್ಜುನನು ತ್ವರೆಮಾಡಿ ಶಂಖನ ಮುಂದೆ ಬಂದು ನಿಲ್ಲಲು ಯುದ್ಧವು ನಡೆಯಿತು. ಯುದ್ಧದಲ್ಲಿ ಯುದ್ಧಮಾಡುತ್ತಿರುವ ಯೋಧರಲ್ಲಿ ಮಹಾ ಹಾಹಾಕಾರವುಂಟಾಯಿತು. ತೇಜಸ್ಸು ತೇಜಸ್ಸನ್ನು ಸೇರಿದಂತೆ ಎಂದು ವಿಸ್ಮಿತರಾದರು. ಆಗ ಗದಾಪಾಣಿ ಶಲ್ಯನು ಮಹಾರಥದಿಂದ ಕೆಳಗಿಳಿದು ಶಂಖನ ನಾಲ್ಕೂ ಕುದುರೆಗಳನ್ನು ವಧಿಸಿದನು. ಒಡನೆಯೇ ಶಂಖನು ಖಡ್ಗವನ್ನು ಹಿಡಿದು ಅಶ್ವಗಳು ಹತವಾಗಿದ್ದ ರಥದಿಂದ ಹಾರಿ ಬೀಭತ್ಸುವಿನ ರಥವನ್ನು ಏರಿ ಶಾಂತನಾದನು. ಆಗ ಭೀಷ್ಮನ ರಥದಿಂದ ವೇಗವಾಗಿ ಬರುತ್ತಿದ್ದ

ಪತತ್ರಿಗಳು ಅಂತರಿಕ್ಷ-ಭೂಮಿಗಳನ್ನು ಎಲ್ಲಕಡೆಗಳಿಂದಲೂ ಮುಸುಕಿಬಿಟ್ಟವು. ಪ್ರಹರಿಗಳಲ್ಲಿ ಶ್ರೇಷ್ಠ ಭೀಷ್ಮನು ಮಾರ್ಗಣಗಳಿಂದ ಪಾಂಚಾಲ, ಮತ್ಸ್ಯ, ಕೇಕಯ ಮತ್ತು ಪ್ರಭದ್ರಕರನ್ನು ಉರುಳಿಸಿದನು. ಅನಂತರ ಅವನು ಪಾಂಡವ ಸವ್ಯಸಾಚಿಯನ್ನು ಬಿಟ್ಟು ಪಾಂಚಾಲ್ಯ ದ್ರುಪದನ ಸೇನೆಗೆ ಮುತ್ತಿಗೆ ಹಾಕಿ, ಆ ಪ್ರಿಯ ಸಂಬಂಧಿಯನ್ನು ಬಹಳ ಶರಗಳಿಂದ ಮುಚ್ಚಿದನು. ಛಳಿಗಾಲದ ಅಂತ್ಯದಲ್ಲಿ ಕಾಡ್ಗಿಚ್ಚು ವನಗಳನ್ನು ಸುಟ್ಟುಹಾಕುವಂತೆ ಅವನ ಶರಗಳು ದ್ರುಪದನ ಸೇನೆಯನ್ನು ಸುಟ್ಟುಬಿಟ್ಟಂತೆ ತೋರಿತು. ರಣದಲ್ಲಿ ಭೀಷ್ಮನು ಹೊಗೆಯಿಲ್ಲದ ಬೆಂಕಿಯಂತೆ ನಿಂತಿದ್ದನು.

ಪಾಂಡವರ ಯೋಧರಿಗೆ ಮಧ್ಯಾಹ್ನದಲ್ಲಿ ತೇಜಸ್ಸಿನಿಂದ ಉರಿಯುತ್ತಿರುವ ಸೂರ್ಯನನ್ನು ಹೇಗೋ ಹಾಗೆ ಭೀಷ್ಮನನ್ನು ನೋಡಲು ಶಕ್ಯವಾಗಲಿಲ್ಲ. ಛಳಿಯಿಂದ ಆರ್ದಿತರಾದ ಹಸುಗಳು ತ್ರಾತಾರನನ್ನು ಪಡೆಯದೇ ಹುಡುಕಾಡುವಂತೆ ಭಯಪೀಡಿತರಾದ ಪಾಂಡವರು ಎಲ್ಲಕಡೆ ನೋಡತೊಡಗಿದರು. ಪಾಂಡುಸೈನ್ಯಗಳಲ್ಲಿ ಹತರಾಗದೇ ಉಳಿದ ಸೇನೆಯಲ್ಲಿ ನಿರುತ್ಸಾಹವುಂಟಾಗಿ ಮಹಾ ಹಾಹಾಕಾರವುಂಟಾಯಿತು. ಆಗ ಶಾಂತನವ ಭೀಷ್ಮನು ನಿಲ್ಲಿಸದೇ ಧನುಸ್ಸನ್ನು ಮಂಡಲಾಕಾರವಾಗಿ ಸೆಳೆದು ಉರಿಯುತ್ತಿದ್ದ ತೀಕ್ಷ್ಣಮೊನೆಗಳಿಂದ ಕೂಡಿದ ಸರ್ಪಗಳಂತಿರುವ ಬಾಣಗಳನ್ನು ಬಿಡುತ್ತಲೇ ಇದ್ದನು. ಆ ಯತವ್ರತನು ಎಲ್ಲ ದಿಕ್ಕುಗಳನ್ನೂ ಒಂದೇ ಮಾರ್ಗವಾಗಿ ಮಾಡುತ್ತಾ ಪಾಂಡವರಥಿಕರನ್ನು ಕರೆ ಕರೆದು

ಹೊಡೆದನು. ಅವನಿಂದ ಸದೆಬಡಿಯಲ್ಪಟ್ಟ ಆ ಸೇನೆಯು ಭಗ್ನವಾಗಲು ದಿನಕರನು ಅಸ್ತನಾದನು. ಎಲ್ಲಕಡೆ ಏನೂ ಕಾಣುತ್ತಿರಲಿಲ್ಲ. ಭೀಷ್ಮನು ನಿಲ್ಲಿಸದೇ ಇದ್ದುದನ್ನು ನೋಡಿ ಪಾಂಡವರು ತಮ್ಮ ಸೇನೆಗಳನ್ನು ಮಹಾಹವದಿಂದ ಹಿಂದೆ ತೆಗೆದುಕೊಂಡರು.

# ಎರಡನೆಯ ದಿನದ ಯುದ್ಧ

ಮೊದಲನೆಯ ದಿವಸ ಸೈನ್ಯವು ಹಿಂದೆಸರಿಯಲು, ಯುದ್ಧದಲ್ಲಿ ಭೀಷ್ಮನು ಉತ್ಸಾಹಿಯಾಗಿರಲು, ಹಾಗೆಯೇ ದುರ್ಯೋಧನನು ಸಂತೋಷದಿಂದಿರಲು ಧರ್ಮರಾಜನು ತಕ್ಷಣವೇ ಸಹೋದರರೊಂದಿಗೆ, ಎಲ್ಲ ಜನೇಶ್ವರರೊಡಗೂಡಿ ಒಟ್ಟಿಗೇ ಜನಾರ್ದನನ ಬಳಿಸಾರಿದನು. ಭೀಷ್ಮನ ವಿಕ್ರಮವನ್ನು ನೋಡಿ ಚಿಂತಾಕ್ರಾಂತನಾಗಿ ರಾಜನು ಪರಮ ಶುಚಿಯಿಂದ ವಾರ್ಷ್ಣೇಯನಿಗೆ ಹೇಳಿದನು.

> “ಕೃಷ್ಣ! ಗ್ರೀಷ್ಮದಲ್ಲಿ ಬೆಂಕಿಯು ಒಣಹುಲ್ಲನ್ನು ಸುಡುವಂತೆ ಶರಗಳಿಂದ ನನ್ನ ಸೈನ್ಯವನ್ನು ದಹಿಸುತ್ತಿರುವ ಈ ಭೀಮಪರಾಕ್ರಮಿ ಭೀಷ್ಮನನ್ನು ನೋಡು! ಅಗ್ನಿಯು ಹವಿಸ್ಸುಗಳನ್ನು ನೆಕ್ಕುವಂತೆ ನನ್ನ ಸೈನ್ಯವನ್ನು ನೆಕ್ಕುತ್ತಿರುವ ಈ ಮಹಾತ್ಮನನ್ನು ನಾವು ಹೇಗೆ ನೋಡಲೂ ಕೂಡ ಶಕ್ಯರಾಗುತ್ತಿಲ್ಲ? ಈ ಪುರುಷವ್ಯಾಘ್ರ ಧನುಷ್ಮಂತ

ಮಹಾಬಲನ ಬಾಣಗಳಿಂದ ಪೀಡಿತವಾದ ನನ್ನ ಸೈನ್ಯವು ಓಡಿಹೋಗುತ್ತಿದೆ. ಸಂಯುಗದಲ್ಲಿ ನಾವು ಕ್ರುದ್ಧನಾದ ಯಮನನ್ನಾದರೂ, ವಜ್ರಪಾಣಿಯನ್ನಾದರೂ, ಪಾಶಪಾಣಿ ವರುಣನನ್ನಾದರೂ ಅಥವಾ ಗದಾಧರ ಕುಬೇರನನ್ನಾದರೂ ಜಯಿಸಬಲ್ಲೆವು. ಆದರೆ ಮಹಾತೇಜಸ್ವಿ ಮಹಾಬಲ ಭೀಷ್ಮನನ್ನು ಜಯಿಸಲು ಸಾಧ್ಯವಿಲ್ಲ. ಕೇಶವ! ನಾನು ಬುದ್ಧಿ ದೌರ್ಬಲ್ಯದಿಂದ ಭೀಷ್ಮನನ್ನು ಆಕ್ರಮಣ ಮಾಡಿ ಭೀಷ್ಮನೆಂಬ ಅಗಾಧ ಸಮುದ್ರವನ್ನು ದಾಟಲು ಯಾವ ನೌಕೆಯೂ ಇಲ್ಲದೇ ಮುಳುಗಿ ಹೋಗುವವನಿದ್ದೇನೆ. ಗೋವಿಂದ! ನಾನು ವನಕ್ಕೆ ಹೋಗುತ್ತೇನೆ. ಅಲ್ಲಿಯ ಜೀವನವೇ ನನಗೆ ಶ್ರೇಯಸ್ಕರವಾದುದು. ಈ ಪೃಥಿವೀಪಾಲರನ್ನು ಭೀಷ್ಮನೆಂಬ ಮೃತ್ಯುವಿಗೆ ಕೊಡಲಾರೆ. ಮಹಾಸ್ತ್ರವಿದು ಭೀಷ್ಮನು ನನ್ನ ಈ ಸೇನೆಯನ್ನು ಧ್ವಂಸಮಾಡಿಬಿಡುತ್ತಾನೆ. ಹೇಗೆ ಪತಂಗಗಳು ವಿನಾಶಕ್ಕಾಗಿಯೇ ಉರಿಯುತ್ತಿರುವ ಬೆಂಕಿಯಲ್ಲಿ ಧಾವಿಸಿ ಹೋಗುತ್ತವೆಯೋ ಹಾಗೆ ನನ್ನ ಸೈನಿಕರೂ ವಿನಾಶಹೊಂದುತ್ತಾರೆ. ರಾಜ್ಯಕ್ಕಾಗಿ ಪರಾಕ್ರಮವನ್ನು ತೋರಿಸಲು ಹೊರಟ ನಾನೂ ಕ್ಷಯವನ್ನು ಹೊಂದುತ್ತಿದ್ದೇನೆ. ನನ್ನ ವೀರ ಸಹೋದರರು ಕೂಡ ಶರಪೀಡಿತರಾಗಿ ಕೃಶರಾಗಿದ್ದಾರೆ. ನನ್ನಿಂದಾಗಿ ಭ್ರಾತೃಸೌಹಾರ್ದತೆಯಿಂದ ಇವರು ರಾಜ್ಯದಿಂದ ಮತ್ತು ಸುಖದಿಂದ ನನ್ನ ತಮ್ಮಂದಿರು

ಭ್ರಷ್ಟರಾಗಿದ್ದಾರೆ. ಇಂದು ದುರ್ಲಭವಾದ ಜೀವಿತವನ್ನು ಬಹುವಾಗಿ ಮನ್ನಿಸುತ್ತೇನೆ. ಉಳಿದ ಜೀವನವನ್ನು ದುಶ್ಚರವಾದ ತಪಸ್ಸನ್ನು ತಪಿಸುತ್ತೆನೆ. ಈ ಮಿತ್ರರನ್ನು ರಣದಲ್ಲಿ ಕೊಲೆಗೀಡುಮಾಡುವುದಿಲ್ಲ. ನನ್ನ ಬಹಳ ಸಹಸ್ರಾರು ರಥಗಳನ್ನು ಮಹಾಬಲ, ಪ್ರಹರಿಗಳಲ್ಲಿ ಪ್ರವರನಾದ ಭೀಷ್ಮನು ದಿವ್ಯಾಸ್ತ್ರಗಳಿಂದ ಸತತವಾಗಿ ಸಂಹರಿಸುತ್ತಲೇ ಇದ್ದಾನೆ. ಯಾವ ಕಾರ್ಯವನ್ನು ನಾನು ಮಾಡಬೇಕೆನ್ನುವುದನ್ನು ಬೇಗ ಹೇಳು ಮಾಧವ! ಈ ಸಮರದಲ್ಲಿ ಸವ್ಯಸಾಚಿಯು ಮಧ್ಯಸ್ಥನಾಗಿರುವಂತೆ ನನಗೆ ಕಾಣುತ್ತಿದೆ. ಮಹಾಭುಜ ಭೀಮನೊಬ್ಬನೇ ಪರಮ ಶಕ್ತಿಯಿಂದ, ಕ್ಷತ್ರಧರ್ಮವನ್ನು ನೆನಪಿನಲ್ಲಿಟ್ಟುಕೊಂಡು ಕೇವಲ ಬಾಹುವೀರ್ಯದಿಂದ ಯುದ್ಧಮಾಡುತ್ತಿದ್ದಾನೆ. ವೀರರನ್ನು ಘಾತಿಗೊಳಿಸಬಲ್ಲ ಗದೆಯಿಂದ ಆ ಮಹಾಮನನು ಯಥೋತ್ಸಾಹದಿಂದ ಗಜ-ಅಶ್ವ-ಪದಾತಿಗಳೊಡನೆ ಕಷ್ಟಸಾಧ್ಯವಾದ ಕೆಲಸವನ್ನು ಮಾಡುತ್ತಿದ್ದಾನೆ. ಆದರೆ ಇವನು ತನ್ನ ಬಲವನ್ನುಪಯೋಗಿಸಿ ಋಜುಮಾರ್ಗದಿಂದಲೇ ಯುದ್ಧಮಾಡುತ್ತಿದ್ದರೆ ಶತ್ರುಸೈನ್ಯವನ್ನು ಸಂಹರಿಸಲು ನೂರು ವರ್ಷಗಳೇ ಬೇಕಾಗಬಹುದು. ಈ ನಿನ್ನ ಸಖನೊಬ್ಬನೇ ನಮ್ಮ ಪಕ್ಷದಲ್ಲಿ ಮಹಾಸ್ತ್ರಗಳನ್ನು ತಿಳಿದವನಾಗಿದ್ದರೂ ಮಹಾತ್ಮ ಭೀಷ್ಮ-ದ್ರೋಣರು ಸುಡುತ್ತಿದ್ದರೂ ನಮ್ಮವರನ್ನು ಅವನು

ಉಪೇಕ್ಷಿಸುತ್ತಿದ್ದಾನೆ. ಮಹಾತ್ಮ ಭೀಷ್ಮನ ಮತ್ತು ದ್ರೋಣನ ದಿವ್ಯಾಸ್ತ್ರಗಳು ಪುನಃ ಪುನಃ ಸರ್ವ ಕ್ಷತ್ರಿಯರನ್ನೂ ದಹಿಸುತ್ತಿವೆ. ಕೃಷ್ಣ! ಸುಸಂರಬ್ಧನಾಗಿರುವ ಭೀಷ್ಮನು ಸರ್ವ ಪಾರ್ಥಿವರೊಂದಿಗೆ ನಮ್ಮನ್ನು ಬೇಗನೇ ವಿನಾಶಗೊಳಿಸುತ್ತಾನೆ. ಇವನ ಪರಾಕ್ರಮವೇ ಅಂಥಹುದು. ಮಹಾರಥ, ಮಹೇಷ್ವಾಸ ಭೀಷ್ಮನೆಂಬುವ ದಾವಾಗ್ನಿಯನ್ನು ಆರಿಸಬಲ್ಲ ಮೋಡವು ರಣದಲ್ಲಿದ್ದರೆ ನೀನು ತೋರಿಸು. ಗೋವಿಂದ! ನಿನ್ನ ಪ್ರಸಾದದಿಂದ ಪಾಂಡವರು ದ್ವೇಷಿಗಳನ್ನು ಸಂಹರಿಸಿ ಸ್ವರಾಜ್ಯವನ್ನು ಹಿಂದೆ ಪಡೆದು ಬಾಂಧವರೊಂದಿಗೆ ಸಂತೋಷದಿಂದಿರಬಲ್ಲರು.”

ಹೀಗೆ ಹೇಳಿ ಮಹಾಮನಸ್ವಿ ಪಾರ್ಥನು ಶೋಕದಿಂದ ಹತಚೇತನನಾಗಿ, ಮನಸ್ಸನ್ನು ಒಳಸೆಳೆದುಕೊಂಡು ಬಹಳ ಹೊತ್ತಿನವರೆಗೆ ಧ್ಯಾನಮಗ್ನನಾದನು. ದುಃಖದಿಂದ ಹತಚೇತಸನಾದ ಶೋಕಾರ್ತ ಪಾಂಡವನನ್ನು ಅರ್ಥಮಾಡಿಕೊಂಡು ಗೋವಿಂದನು ಸರ್ವಪಾಂಡವರನ್ನೂ ಹರ್ಷಗೊಳಿಸುತ್ತಾ ಅಲ್ಲಿ ಹೇಳಿದನು:

“ಭರತಶ್ರೇಷ್ಠ! ಶೋಕಿಸಬೇಡ! ಸರ್ವಲೋಕಗದ ಧನ್ವಿಗಳಾದ ಈ ಶೂರರನ್ನು ತಮ್ಮಂದಿರಾಗಿರುವ ನೀನು ಶೋಕಿಸಬಾರದು. ನಿನಗೆ ಪ್ರಿಯವಾದುದನ್ನು ಮಾಡಲೆಂದೇ ನಾನು, ಮಹಾರಥ ಸಾತ್ಯಕಿ, ವೃದ್ಧರಾದ ವಿರಾಟ-ದ್ರುಪದರಿಬ್ಬರು, ಪಾರ್ಷತ

ಧೃಷ್ಟದ್ಯುಮ್ನ, ಹಾಗೆಯೇ ಸರ್ವ ರಾಜರೂ ಸೇನೆಗಳೊಂದಿಗೆ ನಿನ್ನ ಪ್ರಸನ್ನತೆಯನ್ನು ನಿರೀಕ್ಷಿಸುತ್ತಿದ್ದಾರೆ ಮತ್ತು ನಿನ್ನ ಭಕ್ತರಾಗಿದ್ದಾರೆ. ಈ ಪಾರ್ಷತ ಮಹಾಬಲ ಧೃಷ್ಟದ್ಯುಮ್ನನು ನಿತ್ಯವೂ ನಿನ್ನ ಹಿತವನ್ನು ಬಯಸಿ, ಪ್ರಿಯರತನಾಗಿ ಸೇನಾಪತ್ಯವನ್ನು ವಹಿಸಿಕೊಂಡಿದ್ದಾನೆ. ಮಹಾಬಾಹೋ! ಈ ಶಿಖಂಡಿಯೂ ಕೂಡ ಭೀಷ್ಮನ ಸಾವಿಗಾಗಿಯೇ ಅಲ್ಲವೇ?"

ಇದನ್ನು ಕೇಳಿ ರಾಜನು ವಾಸುದೇವನು ಕೇಳುವಂತೆ ಆ ಸಮಿತಿಯಲ್ಲಿ ಮಹಾರಥ ಧೃಷ್ಟದ್ಯುಮ್ನನಿಗೆ ಹೇಳಿದನು:

"ಧೃಷ್ಟದ್ಯುಮ್ನ! ನಾನು ಹೇಳುವುದನ್ನು ಮನಸ್ಸಿಟ್ಟು ಕೇಳು. ಈಗ ನಾನು ಹೇಳಲಿರುವ ಮಾತನ್ನು ಅತಿಕ್ರಮಿಸಬಾರದು. ವಾಸುದೇವನ ಸಮ್ಮತಿಯಂತೆ ಹಿಂದೆ ದೇವತೆಗಳಿಗೆ ಕಾರ್ತ್ತಿಕೇಯನು ಹೇಗೆ ನಿತ್ಯ ಸೇನಾಪತಿಯಾಗಿದ್ದನೋ ಹಾಗೆ ನೀನೂ ಕೂಡ ನಾವು ಪಾಂಡವರ ಸೇನಾನಿಯಾಗಿದ್ದೀಯೆ. ವಿಕ್ರಮದಿಂದ ನೀನು ಕೌರವರನ್ನು ಜಯಿಸು. ನಾನು ಮತ್ತು ಹಾಗೆಯೇ ಭೀಮ, ಕೃಷ್ಣ, ಮಾದ್ರೀಪುತ್ರರಿಬ್ಬರು, ಜೊತೆಗೆ ಕವಚಗಳನ್ನು ಧರಿಸಿದ ದ್ರೌಪದೇಯರೂ, ಮತ್ತು ಅನ್ಯ ಪ್ರಧಾನ ಪೃಥಿವೀಪಾಲರೂ ನಿನ್ನನ್ನು ಅನುಸರಿಸುತ್ತೇವೆ."

ಆಗ ಧೃಷ್ಟದ್ಯುಮ್ನನು ಎಲ್ಲರನ್ನೂ ಹರ್ಷಗೊಳಿಸುತ್ತಾ ಹೇಳಿದನು:

"ಪಾರ್ಥ! ಹಿಂದೆ ಶಂಭುವು ವಿಹಿಸಿದ ದ್ರೋಣಾಂತಕನು

ನಾನು. ರಣದಲ್ಲಿ ಭೀಷ್ಮನನ್ನೂ ಮತ್ತು ಹಾಗೆಯೇ ಕೊಬ್ಬಿರುವ ದ್ರೋಣ, ಕೃಪ, ಶಲ್ಯ, ಜಯದ್ರಥ ಎಲ್ಲರನ್ನೂ ಇಂದು ರಣದಲ್ಲಿ ಎದುರಿಸಿ ಯುದ್ಧಮಾಡುತ್ತೇನೆ.”

## ಪಾಂಡುಸೇನಾ ವ್ಯೂಹ

ಆಗ ಶತ್ರುಸೂದನ ಪಾರ್ಥಿವೇಂದ್ರ ಪಾರ್ಷತನು ಯುದ್ಧೋದ್ಯುಕ್ತನಾಗಲು ಮಹೇಷ್ವಾಸ ಯುದ್ಧ ದುರ್ಮದ ಪಾಂಡವರು ಜೋರಾಗಿ ರಣಘೋಷಗೈದರು. ಆಗ ಪಾರ್ಥನು ಸೇನಾಪತಿ ಪಾರ್ಷತನಿಗೆ ಹೇಳಿದನು:

> “ಸರ್ವಶತ್ರುಗಳನ್ನು ನಾಶಗೊಳಿಸಬಲ್ಲ ಕ್ರೌಂಚಾರುಣವೆಂಬ ಹೆಸರಿನ ವ್ಯೂಹವನ್ನು ಆಗ ದೇವಾಸುರಯುದ್ಧದಲ್ಲಿ ಬೃಹಸ್ಪತಿಯು ಇಂದ್ರನಿಗೆ ಹೇಳಿದ್ದನು. ಪರ ಸೇನೆಯ ವಿನಾಶಕ್ಕಾಗಿ ಅದೇ ವ್ಯೂಹವನ್ನು ರಚಿಸು. ಹಿಂದೆ ಎಂದೂ ನೋಡಿರದ ಅದನ್ನು ಕುರುಗಳೊಂದಿಗೆ ರಾಜರು ನೋಡಲಿ.”

ಆ ನರದೇವನು ವಿಷ್ಣುವಿಗೆ ವಜ್ರಭೃತನು ಹೇಳಿದಂತೆ ಹೇಳಲು, ಪ್ರಭಾತದಲ್ಲಿ ಸರ್ವ ಸೈನ್ಯಗಳ ಅಗ್ರಸ್ಥಾನದಲ್ಲಿ ಧನಂಜಯನನ್ನು ನಿಲ್ಲಿಸಿದನು. ಸೂರ್ಯನ ಪಥದಲ್ಲಿ ಹೋಗುತ್ತಿರುವ ಅವನ ಧ್ವಜವು ಅದ್ಭುತವೂ ಮನೋರಮವೂ ಆಗಿತ್ತು. ಪುರುಹೂತನ ಶಾಸನದಂತೆ ವಿಶ್ವಕರ್ಮನು ಅದನ್ನು ನಿರ್ಮಿಸಿದ್ದನು. ಕಾಮನಬಿಲ್ಲಿನ ಬಣ್ಣಗಳಿಂದ ಕೂಡಿದ, ಪತಾಕೆಗಳಿಂದ ಅಲಂಕೃತವಾದ, ಆಕಾಶದಲ್ಲಿ ಹಾರಾಡುವ

ಪಕ್ಷಿಯಂತಿರುವ, ಗಂಧರ್ವನಗರದಂತಿರುವ, ನೃತ್ಯಮಾಡುತ್ತಿರುವುದೋ ಎನ್ನುವಂತೆ ಚಲಿಸುತ್ತಿದ್ದ ಆ ರತ್ನವತ ರಥವು ಗಾಂಡೀವಧನ್ವಿ ಪಾರ್ಥನಿಂದ ಭಾನುವಿನಿಂದ ಸ್ವಯಂಭುವು ಹೇಗೋ ಹಾಗೆ ಪರಮೋಪೇತವಾಗಿತ್ತು. ಮಹಾ ಸೇನೆಯಿಂದ ಆವೃತನಾದ ರಾಜಾ ದ್ರುಪದನು ಅದರ ಶಿರವಾದನು. ಕುಂತಿಭೋಜ-ಚೈದ್ಯರು ಅದರ ಕಣ್ಣುಗಳಾದರು. ದಾಶಾರ್ಣಕರು, ಪ್ರಯಾಗರು, ದಾಶೇರಕಗಣಗಳೊಂದಿಗೆ ಅನುಸರಿಸಿ ಹೋಗುತ್ತಿದ್ದ ಕಿರಾತರೂ ಕುತ್ತಿಗೆಯ ಭಾಗದಲ್ಲಿದ್ದರು. ಪಟಚ್ಚರರು, ಹುಂಡರು, ಪೌರವಕರು, ಮತ್ತು ನಿಷಾದರ ಸಹಿತ ಯುಧಿಷ್ಠಿರನು ಅದರ ಪೃಷ್ಠಭಾಗದಲ್ಲಿದ್ದನು. ಭೀಮಸೇನ ಮತ್ತು ಪಾರ್ಷತ ಧೃಷ್ಟದ್ಯುಮ್ನರು ಅದರ ಎರಡು ರೆಕ್ಕೆಗಳಾಗಿದ್ದರು. ದ್ರೌಪದೇಯರು, ಅಭಿಮನ್ಯು, ಸಾತ್ಯಕಿ, ಪಿಶಾಚರು, ದರದರು, ಪುಂಡ್ರರು, ಕುಂಡೀವಿಷರೊಂದಿಗೆ ಮಡಕ, ಲಡಕ, ತಂಗಣ, ಪರತಂಗಣರು, ಬಾಹ್ಲಿಕರು, ತಿತ್ತಿರರು, ಚೋಲರು, ಪಾಂಡ್ಯರು ಈ ಜನಪದದವರು ವ್ಯೂಹದ ಬಲಭಾಗದಲ್ಲಿದ್ದರು. ಅಗ್ನಿವೇಷ್ಯ, ಜಗತ್ತುಂಡ, ಪಲದಾಶರು, ಶಬರರು, ತುಂಬುಪಾಶರು, ವತ್ಸರು, ನಾಕುಲರೊಂದಿಗೆ ನಕುಲ ಸಹದೇವರು ವ್ಯೂಹದ ಎಡಭಾಗದಲ್ಲಿದ್ದರು. ವ್ಯೂಹದ ಎರಡೂ ರೆಕ್ಕೆಗಳಲ್ಲಿ ಹತ್ತುಸಾವಿರ ರಥಗಳೂ, ಶಿರಸ್ಸಿನಲ್ಲಿ ಲಕ್ಷ ರಥಗಳೂ, ಪೃಷ್ಠಭಾಗದಲ್ಲಿ ಹತ್ತುಕೋಟಿ ಇಪ್ಪತ್ತು ಸಾವಿರ ರಥಗಳೂ, ಕತ್ತಿನಲ್ಲಿ ಒಂದು ಲಕ್ಷ ಎಪ್ಪತ್ತು ಸಾವಿರ ರಥಗಳೂ ಇದ್ದವು. ರೆಕ್ಕೆಗಳ ಅಗ್ರಭಾಗಗಳಲ್ಲಿ ಮತ್ತು ಚಿಕ್ಕ ಚಿಕ್ಕ ಪುಕ್ಕಗಳ ಪ್ರದೇಶದಲ್ಲಿ ಮತ್ತು

ರೆಕ್ಕೆಗಳ ಅಂತ್ಯದಲ್ಲಿ ಆನೆಗಳು ಗುಂಪು-ಗುಂಪಾಗಿ ಪರ್ವತೋಪಾದಿಗಳಲ್ಲಿ ಚಲಿಸುತ್ತಿದ್ದವು. ಕೇಕಯ, ಕಾಶಿರಾಜ ಮತ್ತು ಶೈಬ್ಯರೊಂದಿಗೆ ವಿರಾಟನು ಮೂವತ್ತು ಸಾವಿರ ರಥಗಳೊಂದಿಗೆ ಆ ವ್ಯೂಹದ ಕಟಿಪ್ರದೇಶವನ್ನು ರಕ್ಷಿಸುತ್ತಿದ್ದರು. ಹೀಗೆ ಪಾಂಡವರು ಮಹಾವ್ಯೂಹವನ್ನು ರಚಿಸಿ ಕವಚಗಳನ್ನು ಧರಿಸಿ ಸೂರ್ಯೋದಯವನ್ನು ಬಯಸಿ ಯುದ್ಧಸನ್ನದ್ಧರಾಗಿ ನಿಂತಿದ್ದರು. ಅವರ ಆನೆಗಳು ಮತ್ತು ರಥಗಳ ಮೇಲೆ ಸೂರ್ಯನಂತೆ ಪ್ರಕಾಶಮಾನವಾಗಿ ಶುಭ್ರ ಮಹಾ ಶ್ವೇತ ಛತ್ರಗಳು ಶೋಭಿಸುತ್ತಿದ್ದವು.

## ಕೌರವ ಸೇನಾ ವ್ಯೂಹ

ಅಮಿತತೇಜಸ ಪಾರ್ಥರ ಅಭೇದ್ಯವಾದ ಮಹಾಘೋರ ಕ್ರೌಂಚವ್ಯೂಹವನ್ನು ನೋಡಿ ದುರ್ಯೋಧನನು ಆಚಾರ್ಯ, ಕೃಪ, ಶಲ್ಯ, ಸೌಮದತ್ತಿ, ವಿಕರ್ಣ, ಅಶ್ವತ್ಥಾಮ, ದುಃಶಾಸನನೇ ಮೊದಲಾದ ಸಹೋದರರೆಲ್ಲರ ಹಾಗೂ ಯುದ್ಧಕ್ಕಾಗಿ ಸೇರಿರುವ ಬಹಳಷ್ಟು ಅನ್ಯ ಶೂರರ ಬಳಿಸಾರಿ ಅವರನ್ನು ಹರ್ಷಗೊಳಿಸುತ್ತಾ ಕಾಲಕ್ಕೆ ತಕ್ಕುದಾದ ಈ ಮಾತನ್ನು ಆಡಿದನು.

> “ನೀವೆಲ್ಲರೂ ನಾನಾ ಶಸ್ತ್ರಪ್ರಹರಣಮಾಡಬಲ್ಲರಿ ಮತ್ತು ಶಸ್ತ್ರಾಸ್ತ್ರಗಳನ್ನು ತಿಳಿದಿರುವಿರಿ. ನೀವೆಲ್ಲರಲ್ಲಿ ಒಬ್ಬೊಬ್ಬರೂ ಸೈನ್ಯದೊಂದಿಗಿರುವ ಪಾಂಡುಪುತ್ರರನ್ನು ರಣದಲ್ಲಿ ಕೊಲ್ಲಲು ಸಮರ್ಥರಾಗಿದ್ದೀರಿ. ನೀವೆಲ್ಲ ಒಟ್ಟಿಗೆ ಇರುವಾಗ ಇನ್ನೇನು?

ಭೀಷ್ಮನಿಂದ ರಕ್ಷಿತವಾದ ನಮ್ಮ ಸೇನೆಯು ಅಪರ್ಯಾಪ್ತವಾದುದು. ಆದರೆ ಪಾರ್ಥಿವಸತ್ತಮ ಅವರ ಬಲವು ಪರ್ಯಾಪ್ತವಾದುದು. ಸಂಸ್ಥಾನಿಕರು, ಶೂರಸೇನರು, ವೇಣಿಕರು, ಕುಕುರರು, ಆರೇವಕರು, ತ್ರಿಗರ್ತರು, ಮದ್ರಕರು, ಯವನರು ಶತ್ರುಂಜಯನ ಸಹಿತ ಮತ್ತು ದುಃಶಾಸನ, ವೀರ ವಿಕರ್ಣ, ನಂದೋಪನಂದಕರು ಮತ್ತು ಚಿತ್ರಸೇನನ ಸಹಿತ, ಪಾಣಿಭದ್ರಕರ ಸಹಿತ ಸೈನ್ಯವನ್ನು ಮುಂದಿಟ್ಟುಕೊಂಡು ಭೀಷ್ಮನನ್ನು ರಕ್ಷಿಸಲಿ.”

ಆಗ ಪಾಂಡವರನ್ನು ಪ್ರತಿಬಾಧಿಸಲು ದ್ರೋಣ, ಭೀಷ್ಮ ಮತ್ತು ಧಾರ್ತರಾಷ್ಟ್ರರು ಮಹಾವ್ಯೂಹವನ್ನು ರಚಿಸಿದರು. ಮಹಾಸೇನೆಯಿಂದ ಎಲ್ಲ ಕಡೆಗಳಿಂದಲೂ ಸುತ್ತುವರೆಯಲ್ಪಟ್ಟು ಭೀಷ್ಮನು ಸುರರಾಜನಂತೆ ಮಹಾ ಸೇನೆಯನ್ನು ಎಳೆದುಕೊಂಡು ಹೋದನು. ಅವನನ್ನು ಹಿಂಬಾಲಿಸಿ ಪ್ರತಾಪವಾನ್ ಮಹೇಷ್ವಾಸ ಭಾರದ್ವಾಜನು ಕುಂತಲರು, ದಶಾರ್ಣರು, ಮಾಗಧರು, ವಿದರ್ಭರು, ಮೇಕಲರು, ಕರ್ಣಪ್ರಾವರರೂ ಸರ್ವಸೇನೆಗಳ ಸಹಿತ ಭೀಷ್ಮನ ಯುದ್ಧವನ್ನು ಶೋಭಿಸುತ್ತಾ ನಡೆದನು. ಗಾಂಧಾರರು, ಸಿಂಧು-ಸೌವೀರರು, ಶಿಬಿ, ವಸಾತಯರು ಮತ್ತು ಶಕುನಿಯರು ಸ್ವಸೇನೆಗಳೊಂದಿಗೆ ಭಾರದ್ವಾಜನನ್ನು ರಕ್ಷಿಸಿದರು. ರಾಜಾ ದುರ್ಯೋಧನನು ಸರ್ವಸೋದರರೊಂದಿಗೆ ಅಶ್ವಾತಕ-ವಿಕರ್ಣ-ಶರ್ಮಿಲ-ಕೋಸಲ-ದರದ-ಚೂಚುಪ-ಕ್ಷುದ್ರಕ-ಮಾಲವರನ್ನು ಕೂಡಿಕೊಂಡು ಸೌಬಲನ ವಾಹಿನಿಯನ್ನು ರಕ್ಷಿಸಿದನು. ಭೂರಿಶ್ರವ, ಶಲ,

ಶಲ್ಯ, ಭಗದತ್ತ, ಅವಂತಿಯ ವಿಂದಾನುವಿಂದರು ಎಡಪಾರ್ಶ್ವವನ್ನು ರಕ್ಷಿಸುತ್ತಿದ್ದರು. ಸೌಮದತ್ತಿ, ಸುಶರ್ಮ, ಕಾಂಬೋಜ, ಸುದಕ್ಷಿಣ, ಶತಾಯು, ಶ್ರುತಾಯುಗಳು ಬಲಭಾಗದಲ್ಲಿದ್ದರು. ಅಶ್ವತ್ಥಾಮ, ಕೃಪ ಮತ್ತು ಕೃತವರ್ಮರು ಒಟ್ಟಿಗೇ ಮಹಾಸೇನೆಗಳೊಂದಿಗೆ ಸೇನೆಯ ಪೃಷ್ಠಭಾಗದಲ್ಲಿದ್ದರು. ಅವರನ್ನು ಹಿಂಬಾಲಿಸಿ ಹೋಗುತ್ತಿದ್ದ ನಾನಾ ದೇಶಗಳ ಜನೇಶ್ವರರು, ಕೇತುಮಾನ್, ವಸುದಾನ ಮತ್ತು ಕಾಶ್ಯನ ಮಗ ಅಭಿಭೂ ಇವರು ಹಿಂಬಾಗವನ್ನು ರಕ್ಷಿಸಿದರು. ಆಗ ಕೌರವರೆಲ್ಲರೂ ಯುದ್ಧಕ್ಕೆ ಹರ್ಷಿತರಾಗಿ ಶಂಖಗಳನ್ನು ಊದಿದರು ಮತ್ತು ಮುದಿತರಾಗಿ ಸಿಂಹನಾದಗೈದರು.

ಹೃಷ್ಟರಾಗಿದ್ದ ಅವರನ್ನು ಕೇಳಿ ಕುರುವೃದ್ಧ ಪಿತಾಮಹ ಪ್ರತಾಪವಾನನು ಸಿಂಹನಾದವನ್ನು ಮಾಡಿ ಜೋರಾಗಿ ಶಂಖವನ್ನು ಊದಿದನು. ಶಂಖ, ಭೇರಿ, ಪಣವ, ಢಕ್ಕೆ, ಮೃದಂಗ, ಅನಕ ಮೊದಲಾದವುಗಳು ಮೊಳಗಿದವು ಮತ್ತು ತುಮುಲಶಬ್ಧವುಂಟಾಯಿತು. ಶ್ವೇತಹಯಗಳನ್ನು ಕಟ್ಟಿದ್ದ ಮಹಾ ರಥದಲ್ಲಿ ಕುಳಿತಿದ್ದ ಕೃಷ್ಣ-ಧನಂಜಯರಿಬ್ಬರೂ ಹೇಮರತ್ನ ಪರಿಷ್ಕೃತ ಶ್ರೇಷ್ಠ ಶಂಖಗಳನ್ನು ಊದಿದರು. ಹೃಷೀಕೇಶನು ಪಾಂಚಜನ್ಯವನ್ನೂ, ಧನಂಜಯನು ದೇವದತ್ತವನ್ನೂ, ಭೀಮಕರ್ಮಿ ವೃಕೋದರನು ಮಹಾಶಂಖ ಪೌಂಡ್ರವನ್ನೂ, ರಾಜಾ ಕುಂತೀಪುತ್ರ ಯುಧಿಷ್ಠಿರನು ಅನಂತವಿಜಯವನ್ನೂ, ನಕುಲ-ಸಹದೇವನು ಸುಘೋಷ-ಮಣಿಪುಷ್ಪಕಗಳನ್ನೂ ಊದಿದರು. ಕಾಶಿರಾಜ, ಶೈಭ್ಯ, ಶಿಖಂಡೀ,

ಧೃಷ್ಟದ್ಯುಮ್ನ, ವಿರಾಟ, ಸಾತ್ಯಕಿ, ಪಾಂಚಾಲ್ಯ, ಮತ್ತು ದ್ರೌಪದಿಯ ಐವರು ಮಕ್ಕಳು ಎಲ್ಲರೂ ಮಹಾಶಂಖಗಳನ್ನು ಊದಿದರು ಮತ್ತು ಸಿಂಹನಾದ ಗೈದರು. ಅಲ್ಲಿ ಸೇರಿದ್ದ ವೀರರ ಆ ಸುಮಹಾ ಘೋಷದ ತುಮುಲವು ಭೂಮಿ-ಆಕಾಶಗಳಲ್ಲಿ ಮೊಳಗಿತು. ಹೀಗೆ ಪ್ರಹೃಷ್ಟರಾದ ಕುರುಪಾಂಡವರು ಪರಸ್ಪರರನ್ನು ಸುಡುತ್ತಾ ಪುನಃ ಯುದ್ಧಕ್ಕೆ ತೊಡಗಿದರು.

## ಭೀಷ್ಮಾರ್ಜುನರ ಯುದ್ಧ

ಸೇನೆಗಳ ವ್ಯೂಹಗಳನ್ನು ಸಮನಾಗಿ ರಚಿಸಿ ಸುಂದರ ಧ್ವಜಗಳಿಂದ ಸನ್ನದ್ಧವಾಗಿದ ಆ ಅಪಾರಸೇನೆಯು ಸಾಗರದಂತೆ ಬಲಶಾಲಿಯಾಗಿ ತೋರಿತು. ಅವರ ಮಧ್ಯೆ ನಿಂತಿದ್ದ ರಾಜಾ ದುರ್ಯೋಧನನು ತನ್ನವರೆಲ್ಲರಿಗೆ “ಕವಚಧಾರಿಗಳೇ! ಯುದ್ಧಮಾಡಿ!” ಎಂದು ಹೇಳಿದನು. ಮೇಲೆ ಧ್ವಜಗಳು ಹಾರಾಡುತ್ತಿರಲು ಅವರು ಎಲ್ಲರೂ ಮನಸ್ಸನ್ನು ಕ್ರೂರವನ್ನಾಗಿಸಿಕೊಂಡು, ಜೀವವನ್ನು ತೊರೆದು ಪಾಂಡವರ ಮೇಲೆ ಆಕ್ರಮಣ ಮಾಡಿದರು. ಆಗ ಕೌರವರ ಮತ್ತು ಪಾಂಡವರ ನಡುವೆ ರಥ-ಗಜ-ಅಶ್ವ-ಪದಾತಿಗಳ ಲೋಮಹರ್ಷಣ ತುಮುಲ ಯುದ್ಧವು ನಡೆಯಿತು. ರಥಿಗಳು ಬಿಟ್ಟ ಸುತೇಜನ ಹರಿತ ರುಕ್ಮಪುಂಖ ಬಾಣಗಳು ಆನೆ-ಕುದುರೆಗಳ ಮೇಲೆ ಬೀಳುತ್ತಿದ್ದವು. ಹೀಗೆ ಸಂಗ್ರಾಮವು ಪ್ರಾರಂಭವಾಗಲು ಧನುಸ್ಸನ್ನು ಎತ್ತಿಕೊಂಡು, ಕವಚಗಳನ್ನು ಧರಿಸಿ ಮಹಾಬಾಹು ಭೀಮಪರಾಕ್ರಮಿ ಭೀಷ್ಮನು

ಆಕ್ರಮಣ ಮಾಡಿದನು. ಕುರುಪಿತಾಮಹ ವೃದ್ಧನು ಸೌಭದ್ರ, ಭೀಮಸೇನ, ಶೈನ, ಕೇಕಯ, ವಿರಾಟ, ಧೃಷ್ಟದ್ಯುಮ್ನ ಈ ನರವೀರರು ಮತ್ತು ಚೇದಿ-ಮತ್ಸ್ಯರ ಮೇಲೆ ಶರವರ್ಷಗಳನ್ನು ಸುರಿಸಿ ಹೊಡೆದನು. ಆ ವೀರಸಮಾಗಮದಲ್ಲಿ ಮಹಾವ್ಯೂಹವು ಕಂಪಿಸಿತು. ಎಲ್ಲ ಸೇನೆಗಳಲ್ಲಿಯೂ ಮಹಾ ಅಸ್ತವ್ಯಸ್ತವಾಯಿತು. ಅಶ್ವಯೋಧರು, ಧ್ವಜವುಳ್ಳವರು, ಆನೆಗಳು ಮತ್ತು ರಥಿಕರು ಅಪಾರ ಸಂಖ್ಯೆಯಲ್ಲಿ ಮರಣವನ್ನಪ್ಪಿದರು. ಪಾಂಡವರ ರಥಸೈನ್ಯವು ದಿಕ್ಕುಪಾಲಾಗಿ ಓಡಿ ಹೋಯಿತು.

ನರವ್ಯಾಘ್ರ ಅರ್ಜುನನಾದರೋ ಮಹಾರಥ ಭೀಷ್ಮನನ್ನು ನೋಡಿ ಕ್ರುದ್ಧನಾಗಿ ವಾರ್ಷ್ಣೇಯನಿಗೆ ಹೇಳಿದನು:

> “ಪಿತಾಮಹನಿರುವಲ್ಲಿಗೆ ಕೊಂಡೊಯ್ಯಿ! ವಾರ್ಷ್ಣೇಯ! ದುರ್ಯೋಧನನ ಹಿತರತನಾಗಿ ಈ ಭೀಷ್ಮನು ಸಂಕ್ರುದ್ಧನಾಗಿ ನನ್ನ ಸೇನೆಯನ್ನು ನಾಶಗೊಳಿಸುತ್ತಿದ್ದಾನೆ ಎನ್ನುವುದು ಸ್ಪಷ್ಟವಾಗಿ ಕಾಣುತ್ತಿದೆ. ಈ ದೃಢಧನ್ವಿಯಿಂದ ರಕ್ಷಿತರಾಗಿ ದ್ರೋಣ, ಕೃಪ, ಶಲ್ಯ ಮತ್ತು ವಿಕರ್ಣರು ದುರ್ಯೋಧನನ ನಾಯಕತ್ವದಲ್ಲಿ ಧಾರ್ತರಾಷ್ಟ್ರರ ಸಹಿತ ಪಾಂಚಾಲರನ್ನು ನಾಶಮಾಡಿಬಿಡುತ್ತಾರೆ. ನನ್ನ ಸೇನೆಯ ಕಾರಣದಿಂದ ನಾನು ಭೀಷ್ಮನನ್ನು ಕಳುಹಿಸುತ್ತೇನೆ.”

ಅವನಿಗೆ ವಾಸುದೇವನು ಹೇಳಿದನು:

“ಧನಂಜಯ! ಪ್ರಯತ್ನಿಸುವವನಾಗು! ಪಿತಾಮಹನ ರಥದ ಬಳಿ ಇಗೋ ನಿನ್ನನ್ನು ತಲುಪಿಸುತ್ತೇನೆ.”

ಹೀಗೆ ಹೇಳಿ ಶೌರಿಯು ಆ ಲೋಕವಿಶ್ರುತ ರಥವನ್ನು ಭೀಷ್ಮನ ರಥದ ಬಳಿ ಕೊಂಡೊಯ್ದನು. ಅನೇಕ ಪತಾಕೆಗಳು ಹಾರಾಡುತ್ತಿದ್ದ, ಬೆಳ್ಳಕ್ಕಿಯ ಚುಕ್ಕೆಗಳಂತೆ ಅಪ್ಪಟ ಬಿಳಿಯ ಕುದುರೆಗಳನ್ನು ಕಟ್ಟಿದ್ದ, ಮಹಾಭಯಂಕರವಾಗಿ ಘರ್ಜನೆ ಮಾಡುತ್ತಿದ್ದ ವಾನರನನ್ನು ಧ್ವಜದಲ್ಲಿರಿಸಿದ್ದ ಆ ಆದಿತ್ಯವರ್ಚಸ ರಥವು ಮಹಾ ಮೇಘನಾದದಿಂದ ಕೂಡಿತ್ತು. ಬರುವಾಗ ಕೌರವ ಶೂರಸೇನೆಯನ್ನು ಸಂಹರಿಸುತ್ತಾ, ಶೀಘ್ರ ಬಾಣಗಳನ್ನು ಬಿಡುತ್ತಾ, ಸುಹೃದಯರ ಶೋಕವನ್ನು ನಾಶಪಡಿಸುವ ಪಾಂಡವ ಅರ್ಜುನನು ಮದೋದಕವನ್ನು ಸುರಿಸುವ ಆನೆಯಂತೆ ಮಹಾ ವೇಗದಿಂದ ಮೇಲೆ ಬೀಳುತ್ತಾ ರಣದಲ್ಲಿ ಶೂರರನ್ನು ಸಾಯಕಗಳಿಂದ ಗಾಯಗೊಳಿಸಿ ಬೀಳಿಸುತ್ತಾ, ಸೈಂಧವಪ್ರಮುಖರಾದ ಪ್ರಾಚ್ಯ-ಸೌವೀರ-ಕೇಕಯರು ರಕ್ಷಿಸುತ್ತಿದ್ದ ಭೀಷ್ಮ ಶಾಂತನವನ ಮೇಲೆ ಜೋರಾಗಿ ಆಕ್ರಮಣ ಮಾಡಿದನು. ಆಗ ಕೌರವರ ಪಿತಾಮಹ ಭೀಷ್ಮನು ಅರ್ಜುನನನ್ನು ಎಪ್ಪತ್ತೇಳು ನಾರಾಚಗಳಿಂದ ಪ್ರಹರಿಸಿದನು. ದ್ರೋಣನು ಇಪ್ಪತ್ತೈದು ಬಾಣಗಳಿಂದಲೂ, ಕೃಪನು ಐವತ್ತು ಬಾಣಗಳಿಂದಲೂ, ದುರ್ಯೋಧನನು ಅರವತ್ನಾಲ್ಕು ಬಾಣಗಳಿಂದಲೂ, ಶಲ್ಯನು ಒಂಭತ್ತು ಬಾಣಗಳಿಂದಲೂ, ಸೈಂಧವನು ಒಂಭತ್ತರಿಂದಲೂ, ಶಕುನಿಯು ಐದರಿಂದಲೂ, ವಿಕರ್ಣನು ಹತ್ತು ಭಲ್ಲಗಳಿಂದಲೂ ಪಾಂಡವನನ್ನು ಹೊಡೆದರು. ಎಲ್ಲ ಕಡೆಗಳಿಂದ ಅವರ

ನಿಶಿತ ಶರಗಳಿಂದ ಹೊಡೆಯಲ್ಪಟ್ಟರೂ ಬಾಣದ ಏಟಿಗೊಳಗಾದ ಪರ್ವತದಂತೆ ಆ ಮಹೇಷ್ವಾಸ ಮಹಾಬಾಹುವು ವ್ಯಥಿತನಾಗಲಿಲ್ಲ. ಆಗ ಆ ನರವ್ಯಾಘ್ರ ಕಿರೀಟೀ ಅಮೇಯಾತ್ಮನು ಭೀಷ್ಮನನ್ನು ಇಪ್ಪತ್ತೈದು ಬಾಣಗಳಿಂದಲೂ, ಕೃಪನನ್ನು ಒಂಭತ್ತು ಬಾಣಗಳಿಂದಲೂ, ದ್ರೋಣನನ್ನು ಆರರಿಂದಲೂ, ವಿಕರ್ಣನನ್ನು ಮೂರು ಬಾಣಗಳಿಂದಲೂ, ಶಲ್ಯನನ್ನು ಮೂರು ಬಾಣಗಳಿಂದಲೂ ರಾಜಾ ದುರ್ಯೋಧನನನ್ನು ಐದರಿಂದಲೂ ಮರಳಿ ಹೊಡೆದನು.

ಧನಂಜಯನನ್ನು ಸಾತ್ಯಕಿ, ವಿರಾಟ, ಧೃಷ್ಟದ್ಯುಮ್ನ, ದ್ರೌಪದೇಯರು ಮತ್ತು ಅಭಿಮನ್ಯುವು ಸುತ್ತುವರೆದರು. ಆಗ ಸೋಮಕರೊಂದಿಗೆ ಕೂಡಿ ಪಾಂಚಾಲ್ಯನು ಗಾಂಗೇಯನ ಪ್ರಿಯರತ, ಮಹೇಷ್ವಾಸ ದ್ರೋಣನನ್ನು ಆಕ್ರಮಣಿಸಿದನು. ರಥಿಗಳಲ್ಲಿ ಶ್ರೇಷ್ಠ ಭೀಷ್ಮನಾದರೋ ಪಾಂಡವನನ್ನು ಲೋಹದ, ನಿಶಿತ ಬಾಣಗಳಿಂದ ವೇಗವಾಗಿ ಹೊಡೆಯಲು ಕೌರವರು ಆಕ್ರೋಶಮಾಡಿದರು. ಪ್ರಹೃಷ್ಟರಾದ ಅವರ ಆ ಸಂತೋಷದ ಕೂಗನ್ನು ಕೇಳಿ ಪ್ರತಾಪವಾನ್ ರಥಸಿಂಹನು ಅವರ ಮಧ್ಯೆ ಪ್ರವೇಶಿಸಿದನು. ಆ ರಥಸಿಂಹರ ಮಧ್ಯೆ ಪ್ರವೇಶಿಸಿದ ಧನಂಜಯನು ಮಹಾರಥರನ್ನು ಗುರಿಯಾಗಿಟ್ಟುಕೊಂಡು ಧನುಸ್ಸಿನೊಂದಿಗೆ ಆಟವಾಡತೊಡಗಿದನು. ಆಗ ರಾಜಾ ದುರ್ಯೋಧನನು ಸಂಯುಗದಲ್ಲಿ ಪಾರ್ಥನು ತನ್ನ ಸೇನೆಯನ್ನು ಪೀಡಿಸುವುದನ್ನು ನೋಡಿ ಭೀಷ್ಮನಿಗೆ ಹೇಳಿದನು:

“ಅಯ್ಯಾ! ಈ ಬಲೀ ಪಾಂಡುಸುತನು ಕೃಷ್ಣನ ಸಹಿತ ನೀನು

ಮತ್ತು ದ್ರೋಣನು ಜೀವಂತವಿರುವಾಗಲೇ ಪ್ರಯತ್ನಿಸುತ್ತಿರುವ ಸರ್ವ ಸೇನೆಗಳನ್ನು ಬುಡಸಹಿತ ಕಿತ್ತೊಗೆಯುತ್ತಿದ್ದಾನಲ್ಲ! ನಿನ್ನಿಂದಾಗಿ ಮಹಾರಥ ಕರ್ಣನೂ ಕೂಡ ಶಸ್ತ್ರವನ್ನು ಕೆಳಗಿಟ್ಟಿದ್ದಾನೆ. ಆದುದರಿಂದಲೇ ಸದಾ ನನ್ನ ಹಿತವನ್ನೇ ಬಯಸುವ ಅವನು ರಣದಲ್ಲಿ ಪಾರ್ಥನೊಂದಿಗೆ ಯುದ್ಧಮಾಡುತ್ತಿಲ್ಲ! ಗಾಂಗೇಯ! ಫಲ್ಗುನನನ್ನು ಕೊಲ್ಲುವಂತಹುದನ್ನು ಮಾಡು!"

ಅವನು ಹೀಗೆ ಹೇಳಲು ದೇವವ್ರತನು "ಕ್ಷತ್ರಧರ್ಮಕ್ಕೆ ಧಿಕ್ಕಾರ!" ಎಂದು ಹೇಳಿ ಪಾರ್ಥನ ರಥದ ಬಳಿ ನಡೆದನು. ಇಬ್ಬರೂ ಶ್ವೇತಹಯರೂ ಸಂಘರ್ಷಣೆಗೆ ಸಿದ್ಧರಾಗಿರುವುದನ್ನು ನೋಡಿ ಪಾರ್ಥಿವರು ಜೋರಾಗಿ ಸಿಂಹನಾದಗೈದರು ಮತ್ತು ಶಂಖಗಳ ಶಬ್ಧಗಳನ್ನು ಮಾಡಿದರು. ದ್ರೌಣಿ, ದುರ್ಯೋಧನ ಮತ್ತು ವಿಕರ್ಣರು ರಣದಲ್ಲಿ ಭೀಷ್ಮನನ್ನು ಸುತ್ತುವರೆದು ಯುದ್ಧಕ್ಕೆ ನಿಂತರು. ಹಾಗೆಯೇ ಪಾಂಡವರೆಲ್ಲರೂ ಧನಂಜಯನನ್ನು ಸುತ್ತುವರೆದು ಯುದ್ಧಕ್ಕೆ ನಿಂತರು. ಆಗ ಮಹಾಯುದ್ಧವು ನಡೆಯಿತು. ರಣದಲ್ಲಿ ಗಾಂಗೇಯನಾದರೋ ಪಾರ್ಥನನ್ನು ಒಂಭತ್ತು ಶರಗಳಿಂದ ಹೊಡೆದನು. ಅವನನ್ನು ಅರ್ಜುನನು ಹತ್ತು ಮರ್ಮವೇಧಿಗಳಿಂದ ತಿರುಗಿ ಹೊಡೆದನು. ಸಮರಶ್ಲಾಘೀ ಪಾಂಡವ ಅರ್ಜುನನು ಚೆನ್ನಾಗಿ ಗುರಿಯಿಟ್ಟ ಸಹಸ್ರ ಬಾಣಗಳಿಂದ ಭೀಷ್ಮನನ್ನು ಎಲ್ಲ ಕಡೆಗಳಿಂದಲೂ ಮುಚ್ಚಿಬಿಟ್ಟನು. ಪಾರ್ಥನ ಆ ಶರಜಾಲವನ್ನು ಭೀಷ್ಮ ಶಾಂತನವನು ಶರಜಾದಿಂದ

ತಡೆದನು. ಇಬ್ಬರೂ ಪರಮ ಸಂಹೃಷ್ಟರಾಗಿದ್ದರು. ಇಬ್ಬರೂ ಯುದ್ಧದಲ್ಲಿ ಪರಸ್ಪರರನ್ನು ಶ್ಲಾಘಿಸುತ್ತಿದ್ದರು. ಒಬ್ಬರು ಪ್ರಹರಿಸಿದರೆ ಇನ್ನೊಬ್ಬರು ಅದಕ್ಕೆ ಪ್ರತಿಯಾಗಿ ಪ್ರಹರಿಸುತ್ತಿದ್ದರು. ಅವರಿಬ್ಬರ ಯುದ್ಧದಲ್ಲಿ ವ್ಯತ್ಯಾಸವೇ ಕಾಣಲಿಲ್ಲ. ಭೀಷ್ಮನ ಚಾಪದಿಂದ ಪ್ರಯೋಗಿಸಲ್ಪಟ್ಟ ಗುಂಪು ಗುಂಪಾದ ಶರಜಾಲಗಳು ಅರ್ಜುನನ ಸಾಯಕಗಳಿಂದ ಚೂರು ಚೂರಾಗಿ ಕೆಳಗೆ ಬೀಳುವುದು ಕಾಣುತ್ತಿತ್ತು. ಹಾಗೆಯೇ ಅರ್ಜುನನು ಬಿಟ್ಟ ಶರಜಾಲಗಳು ಗಾಂಗೇಯನ ಶರಗಳಿಂದ ತುಂಡಾಗಿ ನೆಲದ ಮೇಲೆ ಬೀಳುತ್ತಿದ್ದವು. ಅರ್ಜುನನು ಇಪ್ಪತ್ತೈದು ನಿಶಿತ ಬಾಣಗಳಿಂದ ಭೀಷ್ಮನನ್ನು ಚುಚ್ಚಿದನು. ಭೀಷ್ಮನೂ ಕೂಡ ಪಾರ್ಥನನ್ನು ಮೂವತ್ತು ಬಾಣಗಳಿಂದ ಹೊಡೆದನು. ಆ ಇಬ್ಬರು ಸುಮಹಾಬಲ ಅರಿಂದಮರು ಅನ್ಯೋನ್ಯರ ಕುದುರೆಗಳನ್ನೂ ರಥಗಳ ಈಷದಂಡಗಳನ್ನೂ, ರಥಚಕ್ರಗಳನ್ನೂ ಹೊಡೆದು ಆಟವಾಡುತ್ತಿದ್ದರು.

ಆಗ ಪ್ರಹರಿಗಳಲ್ಲಿ ಶ್ರೇಷ್ಠ ಭೀಷ್ಮನು ಕ್ರುದ್ಧನಾಗಿ ವಾಸುದೇವನ ಎದೆಗೆ ಮೂರು ಬಾಣಗಳಿಂದ ಹೊಡೆದನು. ಭೀಷ್ಮನ ಚಾಪದಿಂದ ಹೊರಟ ಬಾಣಗಳು ತಾಗಿದ ಮಧುಸೂದನನು ರಣದಲ್ಲಿ ಹೂಬಿಟ್ಟ ಕಿಂಶುಕದಂತೆ ರಾರಾಜಿಸಿದನು. ಪೆಟ್ಟುತಿಂದ ಮಾಧವನನ್ನು ನೋಡಿ ಕ್ರುದ್ಧನಾದ ಅರ್ಜುನನು ತುಂಬಾ ಕ್ರುದ್ಧನಾಗಿ ಯುದ್ಧದಲ್ಲಿ ಗಾಂಗೇಯನ ಸಾರಥಿಯನ್ನು ಮೂರು ಶರಗಳಿಂದ ಹೊಡೆದನು. ಆ ವೀರರಿಬ್ಬರೂ ಅನ್ಯೋನ್ಯರನ್ನು ವಧಿಸಲು ಪ್ರಯುತ್ನ ಮಾಡುತ್ತಿದ್ದರೂ ಯುದ್ಧದಲ್ಲಿ ಅನ್ಯೋನ್ಯರನ್ನು ಮೀರಲು ಶಕ್ಯರಾಗಲಿಲ್ಲ.

ಮಂಡಲಾಕಾರವಾಗಿ, ವಿಚಿತ್ರವಾಗಿ, ಮುಂದೆ ಮತ್ತು ಹಿಂದೆ ಚಲಿಸುವುದು ಮೊದಲಾದ ಸಾಮರ್ಥ್ಯ ಲಾಘವಗಳನ್ನು ಸಾರಥಿಗಳು ತೋರಿಸಿಕೊಡುತ್ತಿದ್ದರು. ಪ್ರಹಾರಗಳ ಮಧ್ಯದಲ್ಲಿ ಇಬ್ಬರು ಮಹಾರಥರೂ ತರ್ಕಿಸುತ್ತಿದ್ದರು. ಪುನಃ ಪುನಃ ಮಧ್ಯಮಾರ್ಗವನ್ನು ಹಿಡಿದು ಯುದ್ಧಮಾಡುತ್ತಿದ್ದರು. ಇಬ್ಬರೂ ಸಿಂಹನಾದ ಮಿಶ್ರಿತ ಶಂಖಧ್ವನಿಯನ್ನು ಮಾಡುತ್ತಿದ್ದರು. ಹಾಗೆಯೇ ಇಬ್ಬರು ಮಹಾರಥರೂ ಧನುಷ್ಟೇಂಕಾರವನ್ನೂ ಮಾಡುತ್ತಿದ್ದರು. ಅವರ ಶಂಖಪ್ರಣಾದದಿಂದ ಮತ್ತು ರಥಚಕ್ರಗಳ ಶಬ್ಧದಿಂದ ಭೂಮಿಯು ಸೀಳಿ, ನಡುಗಿ ಮಹಾಶಬ್ಧವುಂಟಾಯಿತು. ಅವರಿಬ್ಬರಲ್ಲಿ ಯಾವುದೇ ಅಂತರವು ಕಾಣಲಿಲ್ಲ. ಸಮರದಲ್ಲಿ ಆ ಬಲಿ ಶೂರರಿಬ್ಬರೂ ಅನ್ಯೋನ್ಯರಂತೆಯೇ ಇದ್ದರು. ಕೌರವರು ಧ್ವಜಚಿಹ್ನೆಯಿಂದ ಮಾತ್ರ ಭೀಷ್ಮನನ್ನು ಗುರುತಿಸುತ್ತಿದ್ದರು. ಹಾಗೆಯೇ ಪಾಂಡುಸುತರು ಪಾರ್ಥನನ್ನು ಕೇವಲ ಧ್ವಜಚಿಹ್ನೆಯಿಂದ ಗುರುತಿಸುತ್ತಿದ್ದರು. ನರಶ್ರೇಷ್ಠರ ಅಂಥಹ ಪರಾಕ್ರಮವನ್ನು ನೋಡಿ ಸರ್ವಭೂತಗಳೂ ವಿಸ್ಮಯಗೊಂಡವು. ಹೇಗೆ ಧರ್ಮದಲ್ಲಿ ಸ್ಥಿತನಾಗಿರುವವನಲ್ಲಿ ಯಾವುದೇ ರೀತಿಯ ನ್ಯೂನತೆಗಳು ಕಂಡುಬರುವುದಿಲ್ಲವೋ ಹಾಗೆ ಅವರಿಬ್ಬರಲ್ಲಿ ಯಾವುದೇ ರೀತಿಯ ಕುಂದುಗಳು ಕಾಣುತ್ತಿರಲಿಲ್ಲ.

ಇಬ್ಬರೂ ಬಾಣಗಳ ಬಲೆಗಳಿಂದ ಮುಚ್ಚಿಹೋಗಿರುವುದು ಕಾಣುತ್ತಿತ್ತು. ಪುನಃ ತಕ್ಷಣವೇ ಇಬ್ಬರೂ ರಣದಲ್ಲಿ ಪ್ರಕಾಮಾನರಾಗಿರುತ್ತಿದ್ದರು. ಅಲ್ಲಿ ಅವರ ಪರಾಕ್ರಮವನ್ನು ಕಂಡು ದೇವತೆಗಳು, ಗಂಧರ್ವ-ಚಾರಣ-

ಋಷಿಗಳೊಂದಿಗೆ ಅನ್ಯೋನ್ಯರಲ್ಲಿ ಮಾತನಾಡಿಕೊಳ್ಳುತ್ತಿದ್ದರು:

> "ಯುದ್ಧದಲ್ಲಿ ಮಗ್ನರಾಗಿರುವ ಈ ಇಬ್ಬರು ಮಹಾರಥರನ್ನು ಗೆಲ್ಲಲು ಲೋಕದ ದೇವಾಸುರಗಂಧರ್ವರಿಂದಲೂ ಎಂದೂ ಸಾಧ್ಯವಿಲ್ಲ. ಮಹಾದ್ಭುತವಾದ ಈ ಯುದ್ಧವು ಲೋಕಗಳಲ್ಲಿ ಆಶ್ಚರ್ಯವನ್ನುಂಟುಮಾಡುತ್ತಿದೆ. ಹೀಗೆ ಕಾಣುವ ಯುದ್ಧವು ಮುಂದೆ ಎಂದೂ ನಡೆಯಲಿಕ್ಕಿಲ್ಲ. ಧನುಸ್ಸು ರಥಗಳೊಂದಿಗೆ ರಣದಲ್ಲಿ ಸಾಯಕಗಳನ್ನು ಬಿತ್ತುತ್ತಿರುವ ಭೀಷ್ಮನನ್ನು ಧೀಮತ ಪಾರ್ಥನು ಗೆಲ್ಲಲಾರ. ಹಾಗೆಯೇ ಯುದ್ಧದಲ್ಲಿ ಧನುರ್ಧರನಾದ ದೇವತೆಗಳಿಗೂ ದುರಾಸದನಾದ ಪಾಂಡವನನ್ನು ರಣದಲ್ಲಿ ಗೆಲ್ಲಲು ಭೀಷ್ಮನಿಗೂ ಸಾಧ್ಯವಿಲ್ಲ."

ಗಾಂಗೇಯ-ಅರ್ಜುನರ ಯುದ್ಧವನ್ನು ಪ್ರಶಂಸಿಸುವ ಈ ಮಾತುಗಳು ಎಲ್ಲ ಕಡೆಯಿಂದಲೂ ಕೇಳಿ ಬರುತ್ತಿತ್ತು. ಆಗ ಕೌರವ ಮತ್ತು ಪಾಂಡವೇಯರ ಯೋಧರು ಅಲ್ಲಿ ಪರಾಕ್ರಮದಿಂದ ಅನ್ಯೋನ್ಯರನ್ನು ಸಂಹರಿಸಿದರು. ಹರಿತ ಅಲಗಿನ ಖಡ್ಗಗಳಿಂದ, ಫಳ-ಫಳಿಸುವ ಪರಶುಗಳಿಂದ, ಶರಗಳಿಂದ, ನಾನಾವಿಧದ ಅನೇಕ ಶಸ್ತ್ರಗಳಿಂದ ಎರಡೂ ಸೇನೆಗಳ ವೀರರು ಪರಸ್ಪರರನ್ನು ಯುದ್ಧದಲ್ಲಿ ಕಡಿದುರುಳಿಸುತ್ತಿದ್ದರು. ಹೀಗೆ ಸುದಾರುಣವಾದ ಘೋರ ಯುದ್ಧವು ನಡೆಯುತ್ತಿರಲು ದ್ರೋಣ ಮತ್ತು ಪಾಂಚಾಲ್ಯನ ನಡುವೆ ಮಹಾ ದ್ವಂದ್ವಯುದ್ಧವು ನಡೆಯಿತು.

## ಧೃಷ್ಟದ್ಯುಮ್ನ-ದ್ರೋಣರ ಯುದ್ಧ

ದ್ರೋಣನಾದರೋ ನಿಶಿತ ಬಾಣಗಳಿಂದ ಧೃಷ್ಟದ್ಯುಮ್ನನನ್ನು ಗಾಯಗೊಳಿಸಿದನು. ಅವನ ಸಾರಥಿಯನ್ನು ಕೂಡ ಭಲ್ಲದಿಂದ ಹೊಡೆದು ರಥದಿಂದ ಬೀಳಿಸಿದನು. ಸಂಕ್ರುದ್ಧನಾಗಿ ಧೃಷ್ಟದ್ಯುಮ್ನನ ನಾಲ್ಕು ಕುದುರೆಗಳನ್ನು ಉತ್ತಮ ಸಾಯಕಗಳಿಂದ ಪೀಡಿಸಿದನು. ಆಗ ಧೃಷ್ಟದ್ಯುಮ್ನನು ನಗುತ್ತಾ ದ್ರೋಣನನ್ನು ತೊಂಭತ್ತು ನಿಶಿತ ಬಾಣಗಳಿಂದ ಹೊಡೆದು "ನಿಲ್ಲು! ನಿಲ್ಲು!" ಎಂದು ಹೇಳಿದನು. ಪುನಃ ಅಮೇಯಾತ್ಮ ಪ್ರತಾಪವಾನ್ ಭಾರದ್ವಾಜನು ಅಮರ್ಷಣ ಧೃಷ್ಟದ್ಯುಮ್ನನನ್ನು ಶರಗಳಿಂದ ಮುಚ್ಚಿಬಿಟ್ಟನು. ಪಾರ್ಷತನ ವಧೆಗೆಂದು ಮುಟ್ಟಲು ವಜ್ರದಂತೆ ಕಠೋರವಾಗಿದ್ದ, ಮೃತ್ಯುದಂಡದಂತಿರುವ ಘೋರ ಶರವನ್ನು ಎತ್ತಿಕೊಂಡನು. ಭಾರದ್ವಾಜನು ಆ ಬಾಣವನ್ನು ಹೂಡಿದ್ದುದನ್ನು ನೋಡಿ ಸರ್ವ ಸೈನ್ಯಗಳಲ್ಲಿ ಮಹಾ ಹಾಹಾಕಾರವುಂಟಾಯಿತು. ಅವನೊಬ್ಬನೇ ವೀರನು ಸಮರದಲ್ಲಿ ಗಿರಿಯಂತೆ ಅಚಲನಾಗಿ ನಿಂತಿದ್ದನು. ತನ್ನ ಮೃತ್ಯುವಾಗಿಯೇ ಭಾರದ್ವಾಜನು ಬಿಟ್ಟ ಆ ಘೋರವಾಗಿ ಉರಿಯುತ್ತಾ ಬರುತ್ತಿರುವ ಬಾಣವನ್ನು ಅವನು ಶರವೃಷ್ಟಿಯಿಂದ ಕತ್ತರಿಸಿದನು. ಸುದುಷ್ಕರವಾದ ಆ ಕೆಲಸವನ್ನು ಮಾಡಿದ ಧೃಷ್ಟದ್ಯುಮ್ನನನ್ನು ನೋಡಿ ಪಾಂಚಾಲ ಪಾಂಡವರೆಲ್ಲರೂ ಒಟ್ಟಿಗೇ ಹರ್ಷೋದ್ಗಾರ ಮಾಡಿದರು.

ಆಗ ಆ ಪರಾಕ್ರಮಿಯು ದ್ರೋಣನ ಸಾವನ್ನು ಬಯಸಿ

ಸ್ವರ್ಣವೈಡೂರ್ಯಭೂಷಿತವಾದ ಮಹಾವೀಗದ ಶಕ್ತಿಯನ್ನು ಎಸೆದನು. ವೇಗದಿಂದ ಬೀಳುತ್ತಿರುವ ಆ ಕನಕಭೂಷಣ ಶಕ್ತಿಯನ್ನು ಭಾರದ್ವಾಜನು ನಗುತ್ತಾ ಮೂರು ಭಾಗಗಳಾಗಿ ತುಂಡರಿಸಿದನು. ಶಕ್ತಿಯು ನಾಶವಾದುದನ್ನು ನೋಡಿ ಪ್ರತಾಪವಾನ್ ಧೃಷ್ಟದ್ಯುಮ್ನನು ದ್ರೋಣನ ಮೇಲೆ ಬಾಣಗಳ ಮಳೆಯನ್ನು ಸುರಿಸಿದನು. ಆ ಶರವರ್ಷವನ್ನು ನಿಲ್ಲಿಸಿ ಮಹಾಯಶ ದ್ರೋಣನು ದ್ರುಪದಪುತ್ರನ ಧನುಸ್ಸನ್ನು ಮಧ್ಯದಲ್ಲಿ ತುಂಡರಿಸಿದನು. ಧನುಸ್ಸು ತುಂಡಾಗಲು ಆ ಬಲೀ ಮಹಾಯಶಸ್ವಿಯು ಲೋಹನಿರ್ಮಿತವಾಗಿದ್ದ ಭಾರವಾದ ಗದೆಯನ್ನು ತಿರುತಿರುಗಿಸಿ ದ್ರೋಣನ ಮೇಲೆ ಎಸೆದನು. ವೇಗವಾಗಿ ಎಸೆಯಲ್ಪಟ್ಟ ದ್ರೋಣನ ಜೀವವನ್ನು ಕಳೆಯಬಲ್ಲ ಆ ಗದೆಯು ಬರುತ್ತಿರಲು ಅಲ್ಲಿ ಭಾರದ್ವಾಜನ ಅದ್ಭುತ ವಿಕ್ರಮವು ಕಂಡಿತು. ಹೇಮವಿಭೂಷಿತವಾದ ಗದೆಯನ್ನು ಲಾಘವದಿಂದ ವ್ಯರ್ಥಗೊಳಿಸಿದನು. ಆ ಗದೆಯನ್ನು ವ್ಯರ್ಥಗೊಳಿಸಿ ಪಾರ್ಷತನ ಮೇಲೆ ಹರಿತವಾದ, ಶಿಲಾಶಿತವಾದ ಸ್ವರ್ಣಪುಂಖ ಭಲ್ಲೆಗಳನ್ನು ಪ್ರಯೋಗಿಸಿದನು. ಅದು ಅವನ ಕವಚವನ್ನು ಭೇದಿಸಿ ಅವನ ರಕ್ತವನ್ನು ಕುಡಿದವು. ಮಹಾಮನಸ್ವಿ ಧೃಷ್ಟದ್ಯುಮ್ನನು ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಪರಾಕ್ರಮದಿಂದ ಐದು ಶರಗಳಿಂದ ಹೊಡೆದನು. ಆಗ ರಕ್ತದಿಂದ ತೋಯ್ದುಹೋಗಿದ್ದ ಅವರಿಬ್ಬರು ನರರ್ಷಭರೂ ವಸಂತಸಮಯದಲ್ಲಿ ಹೂಬಿಟ್ಟ ಮುತ್ತುಗದ ಮರಗಳಂತೆ ಶೋಭಿಸಿದರು. ಆಗ ಕೋಪಗೊಂಡ ದ್ರೋಣನು ಪರಾಕ್ರಮದಿಂದ

ದ್ರುಪದನ ಧನುಸ್ಸನ್ನು ಪುನಃ ತುಂಡರಿಸಿದನು. ಆಗ ಆ ದನುಸ್ಸು ಮುರಿದವನನ್ನು ಅಮೇಯಾತ್ಮನು ಸನ್ನತಪರ್ವ ಬಾಣಗಳಿಂದ ಮೋಡವು ಮಳೆಯಿಂದ ಗಿರಿಯನ್ನು ಮುಚ್ಚುವಂತೆ ಮುಚ್ಚಿದನು. ಭಲ್ಲದಿಂದ ಅವನ ಸಾರಥಿಯನ್ನು ರಥದಿಂದ ಬೀಳಿಸಿದನು. ಅವನು ನಾಲ್ಕು ಕುದುರೆಗಳನ್ನೂ ನಾಲ್ಕು ನಿಶಿತ ಶರಗಳಿಂದ ವಧಿಸಿದನು. ಸಮರದಲ್ಲಿ ಆಗ ಇನ್ನೊಂದು ಭಲ್ಲದಿಂದ ಅವನ ಕೈಯಲ್ಲಿದ್ದ ಧನುಸ್ಸನ್ನು ತುಂಡರಿಸಿ ಸಿಂಹನಾದಗೈದನು. ಧನುಸ್ಸು ತುಂಡಾಗಲು, ರಥವನ್ನು ಕಳೆದುಕೊಂಡ, ಅಶ್ವಗಳನ್ನು ಕಳೆದುಕೊಂಡ, ಸಾರಥಿಯನ್ನು ಕಳೆದುಕೊಂಡ ಅವನು ಮಹಾ ಪೌರುಷವನ್ನು ತೋರಿಸುತ್ತಾ ಗದೆಯನ್ನು ಹಿಡಿದು ಇಳಿದುಬಂದನು. ರಥದಿಂದ ಕೆಳಗಿಳಿಯುತ್ತಿದ್ದಾಗಲೇ ವೇಗವಾಗಿ ಅವನ ಗದೆಯನ್ನೂ ಪುಡಿಮಾಡಿ ಬೀಳಿಸಿದನು. ಅದೊಂದು ಅದ್ಭುತವಾಗಿತ್ತು. ಆಗ ಆ ಸುಭುಜ ಬಲಿಯು ವಿಶಾಲವಾಗಿದ್ದ, ನೂರು ಚಂದ್ರರಂತೆ ಪ್ರಕಾಶಮಾನವಾಗಿದ್ದ ಗುರಾಣಿಯನ್ನೂ ವಿಪುಲ ದಿವ್ಯ ಖಡ್ಗವನ್ನೂ ಹಿಡಿದು ವೇಗದಿಂದ ದ್ರೋಣನನ್ನು ವಧಿಸಲು ಇಚ್ಛಿಸಿ, ವನದಲ್ಲಿ ಸಿಂಹವು ಮದಿಸಿದ ಆನೆಯ ಮೇಲೆ ಬೀಳುವಂತೆ ಓಡಿ ಬಂದನು. ಆಗ ಅಲ್ಲಿ ಎಲ್ಲರೂ ಭಾರದ್ವಾಜನ ಪೌರುಷವನ್ನೂ, ಲಾಘವವನ್ನೂ, ಅಸ್ತ್ರಯೋಗವನ್ನೂ, ಬಾಹುಗಳ ಬಲವನ್ನೂ ಕಂಡರು. ಪಾರ್ಷತನನ್ನು ಶರವರ್ಷಗಳಿಂದ ತಡೆದನು. ಬಲಶಾಲಿಯಾಗಿದ್ದರೂ ಅವನು ಮುಂದುವರೆಯಲು ಶಕ್ತನಾಗಲಿಲ್ಲ.

ಅಲ್ಲಿ ಮಹಾರಥ ಧೃಷ್ಟದ್ಯುಮ್ನನು ಖಡ್ಗ ಗುರಾಣಿಗಳನ್ನು ಹಿಡಿದು

ಶರಗಳಿಂದ ತಡೆಯಲ್ಪಟ್ಟು ನಿಂತಿರುವುದನ್ನು ಭೀಮಸೇನನು ನೋಡಿದನು. ಆಗ ಮಹಾಬಾಹು ಬಲೀ ಭೀಮನು ಸಮರದಲ್ಲಿ ಪಾರ್ಷತನಿಗೆ ಸಹಾಯ ಮಾಡಲು ಬೇಗನೇ ಅಲ್ಲಿಗೆ ಧಾವಿಸಿದನು. ಅವನು ದ್ರೋಣನನ್ನು ಏಳು ಬಾಣಗಳಿಂದ ಹೊಡೆದನು ಮತ್ತು ಬೇಗನೆ ಪಾರ್ಷತನನ್ನು ತನ್ನ ರಥದ ಮೇಲೇರಿಸಿಕೊಂಡನು. ಆಗ ರಾಜಾ ದುರ್ಯೋಧನನು ಭಾರದ್ವಾಜನ ರಕ್ಷಣೆಗೆ ಮಹಾ ಸೇನೆಯಿಂದ ಕೂಡಿದ ಕಲಿಂಗನನ್ನು ಪ್ರಚೋದಿಸಿದನು. ತಕ್ಷಣವೇ ದುರ್ಯೋಧನನ ಶಾಸನದಂತೆ ಕಲಿಂಗರ ಮಹಾಸೇನೆಯು ಭೀಮನನ್ನು ಎದುರಿಸಿತು. ರಥಿಗಳಲ್ಲಿ ಶ್ರೇಷ್ಠನಾದ ದ್ರೋಣನೂ ಕೂಡ ಪಾಂಚಾಲ್ಯನನ್ನು ಬಿಟ್ಟು ವೃದ್ಧರಾದ ವಿರಾಟ-ದ್ರುಪದರ ಒಟ್ಟಿಗೆ ಯುದ್ಧಮಾಡಿದನು. ಧೃಷ್ಟದ್ಯುಮ್ನನೂ ಕೂಡ ಸಮರದಲ್ಲಿ ಧರ್ಮರಾಜನನ್ನು ಸೇರಿದನು. ಆಗ ಸಮರದಲ್ಲಿ ಕಲಿಂಗರು ಮತ್ತು ಮಹಾತ್ಮ ಭೀಮನ ನಡುವೆ ಜಗತ್ತನ್ನೇ ನಾಶಗೊಳಿಸುವಂತಹ ಘೋರರೂಪವಾದ ಭಯಾನಕ ಲೋಮಹರ್ಷಣ ತುಮುಲ ಯುದ್ಧವು ನಡೆಯಿತು.

## ಕಲಿಂಗ-ನಿಷಾದರೊಡನೆ ಭೀಮನ ಯುದ್ಧ

ದುರ್ಯೋಧನನಿಂದ ಹಾಗೆ ಆದೇಶಗೊಂಡ ಮಹಾಬಲ ಕಲಿಂಗನು ಮಹಾಸೇನೆಯಿಂದ ರಕ್ಷಿತನಾಗಿ ಭೀಮನ ರಥದ ಬಳಿ ಬಂದನು. ಮಹಾಯುಧಗಳನ್ನು ಹಿಡಿದು ರಥ-ಆನೆ-ಕುದುರೆಗಳಿಂದ ಕೂಡಿದ ಕಲಿಂಗ ಮಹಾಸೇನೆಯು ರಭಸದಿಂದ ತನ್ನ ಮೇಲೆ ಬೀಳಲು

ಭೀಮಸೇನನು ಕಲಿಂಗರನ್ನು, ಮತ್ತು ಚೇದಿಗಳೊಂಡನೆ ಬಂದಿದ್ದ ನೈಷಾದೀ ಕೇತುಮಂತನನ್ನೂ ಪೀಡಿಸಿದನು. ಸಂಕ್ರುದ್ಧನಾದ ಶ್ರುತಾಯುವು ರಾಜಾ ಕೇತುಮತ ಮತ್ತು ಚೇದಿಸೇನೆಗಳೊಂದಿಗೆ ರಣದಲ್ಲಿ ಭೀಮನನ್ನು ಎದುರಿಸಿದನು. ಕಲಿಂಗರ ಜನಾಧಿಪನು ಅನೇಕ ಸಹಸ್ರ ರಥಗಳೊಂದಿಗೆ, ಹತ್ತು ಸಾವಿರ ಆನೆಗಳೊಂದಿಗೆ, ಕೇತುಮಾನ ನಿಷಾದರೊಂದಿಗೆ ರಣದಲ್ಲಿ ಭೀಮಸೇನನನ್ನು ಎಲ್ಲ ಕಡೆಗಳಿಂದ ಸುತ್ತುವರೆದರು. ಭೀಮಸೇನನನ್ನು ಮುಂದಿಟ್ಟುಕೊಂಡು ಚೇದಿ-ಮತ್ಸ್ಯ-ಕರೂಷರು ತಕ್ಷಣವೇ ಬಂದು ರಾಜರೊಂದಿಗೆ ನಿಷಾದರನ್ನು ಎದುರಿಸಿದರು. ಆಗ ಘೋರರೂಪವಾದ ಭಯಾನಕ ಯುದ್ಧವು ನಡೆಯಿತು. ಪರಸ್ಪರರನ್ನು ಕೊಲ್ಲಲು ಬಯಸುತ್ತಿದ್ದ ಸೈನಿಕರು ಅವರು ತಮ್ಮವರೋ ಅಥವಾ ಶತ್ರುಗಳೋ ಎಂದೂ ಯೋಚಿಸುತ್ತಿರಲಿಲ್ಲ. ಶತ್ರುಗಳೊಂದಿಗೆ ಭೀಮನು ಮಾಡಿದ ಯುದ್ಧವು ಇಂದ್ರನು ಮಹಾ ದೈತ್ಯಸೇನೆಯೊಡನೆ ಮಾಡಿದಂತೆ ಘೋರವಾಗಿತ್ತು. ಅವನು ಸೈನ್ಯದೊಂದಿಗೆ ಯುದ್ಧಮಾಡುವಾಗ ಸಾಗರವೇ ಗರ್ಜಿಸುತ್ತಿದೆಯೋ ಎನ್ನುವಂತೆ ಮಹಾ ಶಬ್ಧವುಂಟಾಯಿತು. ಅನ್ಯೋನ್ಯರನ್ನು ಕತ್ತರಿಸುತ್ತಾ ಯೋಧರು ಭೂಮಿಯನ್ನೇ ಮೊಲದ ರಕ್ತದಿಂದ ತೋಯ್ದಂತೆ ಚಿತೆಯನ್ನಾಗಿ ಮಾಡಿದರು. ಯೋಧರು ತಮ್ಮವರು ಅಥವ ಪರರು ಯಾರು ಎಂದು ತಿಳಿದುಕೊಳ್ಳದೆಯೇ ಸಂಹರಿಸುತ್ತಿದ್ದರು. ಆ ಸಮರ ದುರ್ಜಯ ಶೂರರು ಕೈಗೆ ಸಿಕ್ಕಿದವರನ್ನು, ತಮ್ಮವರೇ ಆಗಿದ್ದರೂ, ಕೊಲ್ಲುತ್ತಿದ್ದರು.

ಹೀಗೆ ಅತಿ ದೊಡ್ಡದಾದ ಕಲಿಂಗ ಮತ್ತು ನಿಷಾದ ಸೇನೆಗಳಿಗೂ ಚಿಕ್ಕದಾದ ಚೇದಿಸೇನೆಗಳಿಗೂ ಮಹಾ ಯುದ್ಧವು ನಡೆಯಿತು. ಯಥಾಶಕ್ತಿ ಪೌರುಷವನ್ನು ತೋರಿಸಿ ಮಹಾಬಲ ಚೇದಯರು ಭೀಮಸೇನನನ್ನು ಬಿಟ್ಟು ಪಲಾಯನ ಮಾಡಿದರು. ಚೇದಿಯೋಧರು ಹಿಮ್ಮೆಟ್ಟಲು ಪಾಂಡವನು ಸ್ವಬಾಹುಬಲವನ್ನು ಆಶ್ರಯಿಸಿ ಸರ್ವ ಕಲಿಂಗರನ್ನೂ ತಡೆದನು. ರಥದಲ್ಲಿದ್ದ ಮಹಾಬಲ ಭೀಮಸೇನನು ಕಲಿಂಗರ ಸೇನೆಯು ಹರಿತ ಬಾಣಗಳ ಮಳೆಸುರಿಸುತ್ತಿದ್ದರೂ ವಿಚಲಿತನಾಗಲ್ಲ. ಶಕ್ರದೇವನೆಂದು ಖ್ಯಾತನಾದ ಕಲಿಂಗನ ಮಗ ಮಹಾರಥ ಮಹೇಷ್ವಾಸನು ಪಾಂಡವನನ್ನು ಶರಗಳಿಂದ ಹೊಡೆದನು. ಆಗ ಮಹಾಬಾಹು ಭೀಮನು ಸುಂದರವಾದ ಧನುಸ್ಸನ್ನು ಠೇಂಕರಿಸಿ ಸ್ವಬಾಹುಬಲವನ್ನು ಆಶ್ರಯಿಸಿ ಕಲಿಂಗರೊಂದಿಗೆ ಯುದ್ಧಮಾಡಿದನು. ಶಕ್ರದೇವನು ಅನೇಕ ಸಾಯಕಗಳನ್ನು ಬಿಟ್ಟು ಭೀಮಸೇನನ ಕುದುರೆಗಳನ್ನು ಕೊಂದನು ಮತ್ತು ಬೇಸಗೆಯ ಕೊನೆಯಲ್ಲಿ ಮೋಡಗಳು ಹೇಗೋ ಹಾಗೆ ಸಾಯಕಗಳ ಶರವರ್ಷಗಳನ್ನು ಸುರಿಸಿದನು. ಕುದುರೆಗಳು ಸತ್ತರೂ ರಥದ ಮೇಲೆ ನಿಂತು ಮಹಾಬಲ ಭೀಮಸೇನನು ಲೋಹಮಯ ಗದೆಯನ್ನು ಶಕ್ತಿಯನ್ನೆಲ್ಲ ಉಪಯೋಗಿಸಿ ಶಕ್ರದೇವನ ಮೇಲೆ ಎಸೆದನು. ಕಲಿಂಗನ ಮಗನು ಅವನಿಂದ ಹತನಾಗಿ ಧ್ವಜ-ಸೂತರೊಂದಿಗೆ ರಥದಿಂದ ಧರಣೀತಲಕ್ಕೆ ಬಿದ್ದನು.

ತನ್ನ ಮಗನು ತೀರಿಕೊಂಡಿದುದನ್ನು ಕಂಡು ಕಲಿಂಗರ ಜನಾಧಿಪನು ಅನೇಕ ಸಹಸ್ರ ರಥಗಳೊಂದಿಗೆ ಭೀಮಸೇನನನ್ನು ಎಲ್ಲ ಕಡೆಗಳಿಂದ

ಸುತ್ತುವರೆದನು. ಆಗ ಮಹಾಬಾಹು ಭೀಮನು ಭಾರವಾದ ಮಹಾಗದೆಯನ್ನು ಬಿಟ್ಟು ದಾರುಣ ಕರ್ಮವನ್ನು ಮಾಡಲೆಸಗಿ ಖಡ್ಗವನ್ನೂ ಅಪ್ರತಿಮವಾಗಿದ್ದ ನಕ್ಷತ್ರ-ಅರ್ಧಚಂದ್ರಗಳ ಮತ್ತು ನೂರುಕುಂಭಗಳ ಚಿತ್ರವಿರುವ ಗುರಾಣಿಯನ್ನು ಹಿಡಿದು ಕೆಳಗಿಳಿದನು. ಕಲಿಂಗ ಜನೇಶ್ವರನು ಕ್ರುದ್ಧನಾಗಿ ಧನುಸ್ಸನ್ನು ಟೇಂಕರಿಸಿ ಘೋರವಾದ ಸರ್ಪವಿಷೋಪಮವಾದ ಬಾಣವೊಂದನ್ನು ಹಿಡಿದು ಭೀಮಸೇನನ ವಧಾಕಾಂಕ್ಷಿಯಾಗಿ ಪ್ರಯೋಗಿಸಿದನು. ವೇಗದಿಂದ ಬಂದು ಬೀಳುತ್ತಿದ್ದ ಆ ನಿಶಿತ ಶರದಿಂದ ಪ್ರೇರಿತನಾಗಿ ಭೀಮಸೇನನು ಅದನ್ನು ವಿಪುಲ ಖಡ್ಗದಿಂದ ಎರಡಾಗಿ ತುಂಡರಿಸಿದನು. ಸಂಹೃಷ್ಟನಾಗಿ ಜೋರಾಗಿ ಸಿಂಹನಾದಗೈದು ಸೇನೆಗಳನ್ನು ತತ್ತರಿಸುವಂತೆ ಮಾಡಿದನು. ಆಗ ಕ್ರುದ್ಧನಾದ ಕಲಿಂಗನು ಭೀಮಸೇನನ ಮೇಲೆ ಹದಿನಾಲ್ಕು ಶೀಘ್ರವಾದ, ಶಿಲಾಶಿತ ತೋಮರಗಳನ್ನು ಪ್ರಯೋಗಿಸಿದನು. ಅವುಗಳು ತಲುಪುವುದರೊಳಗೆ ಆಕಾಶಮಾರ್ಗದಲ್ಲಿರುವಾಗಲೇ ಪಾಂಡವನು ಸಂಭ್ರಾಂತನಾಗಿ ಶ್ರೇಷ್ಠ ಖಡ್ಗದಿಂದ ತಕ್ಷಣವೇ ತುಂಡುಮಾಡಿದನು. ಆ ಹದಿನಾಲ್ಕು ತೋಮರಗಳನ್ನು ಕತ್ತರಿಸಿ ಪುರುಷರ್ಷಭ ಭೀಮನು ಭಾನುಮಂತನನ್ನು ನೋಡಿ ಧಾವಿಸಿ ಬಂದನು. ಆಗ ಭಾನುಮಂತನು ಭೀಮನನ್ನು ಶರವರ್ಷಗಳಿಂದ ಹೊಡೆದು ನಭಸ್ಥಲವನ್ನೂ ಮೊಳಗಿಸುವ ಬಲವತ್ತಾದ ಸಿಂಹನಾದವನ್ನು ಕೂಗಿದನು.

ಅದನ್ನು ಸಹಿಸದ ಭೀಮನು ಸಿಂಹನಾದಗೈದನು. ಆಗ ಅವನ ಆ ಮಹಾಸ್ವರದಿಂದ ಮಹಾಸ್ವನವು ಮೊಳಗಿತು. ಅವನ ಶಬ್ಧದಿಂದ

ವಿತ್ರಸ್ತರಾದ ಕಲಿಂಗರ ಸೇನೆಯು ಸಮರದಲ್ಲಿ ಭೀಮನು ಮನುಷ್ಯನಲ್ಲವೆಂದು ಅಭಿಪ್ರಾಯಪಟ್ಟಿತು. ಆಗ ಭೀಮನು ವಿಪುಲ ಸ್ವನದಲ್ಲಿ ಕೂಗಿ, ವೇಗವಾಗಿ ಉತ್ತಮ ಆನೆಯ ಎರಡೂ ದಂತಗಳನ್ನು ಬಲವಾಗಿ ಹಿಡಿದು ಥಂಗನೆ ಗಜರಾಜನ ಮೇಲೆ ಹಾರಿ ಹೋಗಿ ಮಹಾ ಖಡ್ಗದಿಂದ ಭಾನುಮಂತನನ್ನು ಮಧ್ಯದಲ್ಲಿಯೇ ಕತ್ತರಿಸಿದನು. ಆ ಯೋಧ ರಾಜಪುತ್ರನನ್ನು ಸಂಹರಿಸಿದ ಅರಿಂದಮನು ಅತಿಭಾರವಾದ ಖಡ್ಗವನ್ನು ಆನೆಯ ಮೇಲೆ ಪ್ರಯೋಗಿಸಿ ಅದನ್ನೂ ಬೀಳಿಸಿದನು. ಭುಜಗಳು ತುಂಡಾಗಲು ಆ ಗಜಯೂಥಪವು ಸಿಂಧುವೇಗದಿಂದ ಕೊರೆಯಲ್ಪಟ್ಟು ಬೀಳುವ ಪರ್ವತದಂತೆ ಕೂಗಿ ಬಿದ್ದಿತು. ಅದು ಕೆಳಗೆ ಬೀಳುವುದರೊಳಗೆ ಭಾರತನು ಆನೆಯಿಂದ ಕೆಳಗೆ ಹಾರಿ ಖಡ್ಗವನ್ನು ಹಿಡಿದುಕೊಂಡೇ ಅದೀನಾತ್ಮನಾಗಿ ಕವಚಗಳನ್ನು ಧರಿಸಿ ನೆಲದ ಮೇಲೆ ನಿಂತನು. ಅನೇಕ ಮಾರ್ಗಗಳಲ್ಲಿ ಭಯವಿಲ್ಲದೇ ಚಲಿಸುತ್ತಾ ಅನೇಕ ಆನೆಗಳನ್ನು ಬೀಳಿಸಿದನು. ಅವನು ಅಗ್ನಿಚಕ್ರದಂತೆ ಎಲ್ಲಕಡೆ ಕಡೆಯುತ್ತಿರುವುದು ಕಂಡುಬಂದಿತು. ಅಶ್ವವೃಂದಗಳನ್ನೂ, ಆನೆಗಳನ್ನೂ, ರಥಾನೀಕಗಳನ್ನು, ಪದಾತಿಗಳ ಸಂಕುಲಗಳನ್ನೂ ಸಂಹರಿಸಿ ರಕ್ತದಿಂದ ತೋಯ್ದು ಹೋದನು. ರಿಪುಬಲೋತ್ಕಟ ಮಹಾವೇಗೀ ಭೀಮನು ರಣದಲ್ಲಿ ಗಿಡುಗದಂತೆ ಸಂಚರಿಸಿ ಅವರ ಶರೀರ-ಶಿರಗಳನ್ನು ಕತ್ತರಿಸಿದನು. ಸಂಯುಗದಲ್ಲಿ ಹರಿತವಾದ ಖಡ್ಗದಿಂದ ಒಬ್ಬನೇ ಕಾಲ್ನಡುಗೆಯಲ್ಲಿಯೇ ಗಜಯೋಧಿಗಳನ್ನು ಕೊಲ್ಲುತ್ತಾ ಶತ್ರುಗಳ ಭಯವರ್ಧಕನು ಕಾಲಾಂತಕನಂತೆ ಅವರನ್ನು

ಭಯದಿಂದ ಮೋಹಗೊಳಿಸಿದನು.

ಆ ಮೂಢರು ಜೋರಾಗಿ ಕೂಗಿಕೊಳ್ಳುತ್ತಾ ಅವನ ಮೇಲೆ ಎರಗುತ್ತಿದ್ದರು. ಅವನು ಉತ್ತಮ ವೇಗದಿಂದ ಮಹಾರಣದಲ್ಲಿ ಸಂಚರಿಸುತ್ತಿದ್ದನು. ರಥಿಗಳನ್ನೂ ರಥಸಂಕುಲಗಳನ್ನು ಆ ಬಲವಾನ ಅರಿಮರ್ದಮನು ಕತ್ತರಿಸಿ ಸಂಹರಿಸಿದನು. ಭೀಮಸೇನನು ಅನೇಕ ಮಾರ್ಗಗಳಲ್ಲಿ ಸಂಚರಿಸುತ್ತಿರುವಂತೆ ಕಾಣುತ್ತಿತ್ತು. ಅವನು ಭ್ರಾಂತ, ಉದ್ಭ್ರಾಂತ, ಅವಿದ್ಧ, ಆಪ್ಲುತ, ಪ್ರಸೃತ, ಸೃತ, ಸಂಪಾತ, ಸಮುದೀರ್ಣ ಮುಂತಾದ ವರಸೆಗಳನ್ನು ಪ್ರದರ್ಶಿಸಿದನು. ಕೆಲವರನ್ನು ಮಹಾತ್ಮ ಪಾಂಡವನು ಖಡ್ಗದಿಂದ ಕತ್ತರಿಸಿದರೆ ಇನ್ನು ಕೆಲವರನ್ನು ಮರ್ಮಗಳನ್ನು ಭೇದಿಸಿ ಕೆಳಗೆ ಬೀಳಿಸಿ ಅಸುನೀಗಿಸುತ್ತಿದ್ದನು. ಆನೆಗಳ ದಂತ ಸೊಂಡಿಲುಗಳು ತುಂಡಾದವು. ಇತರ ಆನೆಗಳ ಕುಂಭಸ್ಥಲಗಳು ಒಡೆದವು. ಇಂತಹ ಆನೆಗಳು ನೋವನ್ನು ತಡೆಯಲಾರದೇ ತಮ್ಮದೇ ಸೇನೆಗಳ ಮೇಲೆ ಎರಗಿ ಮಹಾರವವನ್ನು ಕೂಗಿ ಸೈನಿಕರನ್ನು ಸಂಹರಿಸುತ್ತಿದ್ದವು. ಕತ್ತರಿಸಿ ಬಿದ್ದಿದ್ದ ತೋಮರಗಳು, ಧನುಸ್ಸುಗಳು, ಮಹಾಗಾತ್ರದ ಶಿರಗಳು, ಚಿತ್ರವಿಚಿತ್ರವಾಗಿದ್ದ ಬಂಗಾರದದಾರಗಳಿಂದ ಉಜ್ವಲವಾಗಿದ್ದ ಆನೆಗಳ ನಡುವಿಗೆ ಕಟ್ಟುವ ಹಗ್ಗಗಳು, ಕಂಠಾಭರಣಗಳು, ಶಕ್ತಿ, ಪತಾಕೆ, ಕಣಪಗಳು, ತೂಣೀರಗಳು, ವಿಚಿತ್ರ ಯಂತ್ರಗಳು, ಧನುಸ್ಸುಗಳು, ಶುಭ್ರ ಅಗ್ನಿಕುಂಡಗಳು, ಚಾವಟಿಗಳು, ಅಂಕುಶಗಳು, ವಿವಿಧ ಗಂಟೆಗಳು, ಸುವರ್ಣಖಚಿತ ಖಡ್ಗಮುಷ್ಟಿಗಳು, ಬಿದ್ದ ಮತ್ತು ಬೀಳುತ್ತಿರುವ ಮಾವುತರು ಎಲ್ಲವೂ ಒಟ್ಟಿಗೇ

ಕಾಣತೊಡಗಿತು. ದೇಹ ಮತ್ತು ಶ್ರೇಷ್ಠ ಸೊಂಡಿಲುಗಳು ಕತ್ತರಿಸಲ್ಪಟ್ಟು ಸತ್ತು ಬಿದ್ದಿದ್ದ ಆನೆಗಳ ರಾಶಿಗಳಿಂದ ಕೆಳಕ್ಕೆ ಕುಸಿದು ಹರಡಿಕೊಂಡಿರುವಂತೆ ರಣಭೂಮಿಯು ವ್ಯಾಪ್ತವಾಗಿ ಕಾಣುತ್ತಿತ್ತು. ಹೀಗೆ ಮಹಾಗಜಗಳನ್ನು ಮರ್ದಿಸಿ ನರರ್ಷಭನು ಅಶ್ವಗಳನ್ನೂ ಅಶ್ವಾರೋಹಿಗಳನ್ನೂ ಬೀಳಿಸತೊಡಗಿದನು. ಆಗ ಅವನ ಮತ್ತು ಅವರ ಮಧ್ಯೆ ಘೋರ ಯುದ್ಧವು ನಡೆಯಿತು.

ಆಗ ಕುದುರೆಗಳ ಲಗಾಮು, ಕಟ್ಟುವ ಹಗ್ಗ, ಜೀನು, ಪ್ರಾಸ, ಅಮೂಲ್ಯವಾದ ಋಷ್ಟಗಳು, ಕವಚಗಳು, ಗುರಾಣಿಗಳು, ಬಣ್ಣಬಣ್ಣದ ಕಂಬಳಿಗಳು ಅಲ್ಲಲ್ಲಿ ಮಹಾಹವದಲ್ಲಿ ಚದುರಿ ಬಿದ್ದಿರುವುದು ಕಂಡುಬಂದಿತು. ವಿಚಿತ್ರ ಯಂತ್ರಗಳಿಂದಲೂ, ವಿಮಲ ಖಡ್ಗಗಳಿಂದಲೂ ಹರಡಿಹೋದ ವಸುಧೆಯನ್ನು ಅವನು ಶಬಲ ಕುಸುಮಗಳು ಹರಡಿರುವಂತೆ ಮಾಡಿದನು. ಕೆಲವೊಮ್ಮೆ ಆ ಮಹಾಬಲ ಪಾಂಡವನು ರಥದ ಮೇಲೆ ಹಾರಿ ಖಡ್ಗದಿಂದ ಅಲ್ಲಿರುವವರನ್ನು ಕೊಂದು ಕೆಳಗೆ ಹಾರುತ್ತಿದ್ದನು. ಕ್ಷಣದಲ್ಲಿಯೇ ಹಾರುತ್ತಿದ್ದನು. ಯಶಸ್ವಿಯು ದಿಕ್ಕುಗಳಲ್ಲಿ ಓಡುತ್ತಿದ್ದನು. ಚಿತ್ರವಿಚಿತ್ರವಾದ ಮಾರ್ಗಗಳಲ್ಲಿ ಸಂಚರಿಸುತ್ತಿರುವುದನ್ನು ನೋಡಿ ರಣದಲ್ಲಿ ವಿಸ್ಮಿತರಾದರು. ಕೆಲವರನ್ನು ಕಾಲಿನಿಂದ ತುಳಿದು ಕೊಂದನು. ಅನ್ಯರನ್ನು ನೆಲಕ್ಕೆ ಬಡಿದು ಕೊಲ್ಲುತ್ತಿದ್ದನು. ಅನ್ಯರನ್ನು ಖಡ್ಗದಿಂದ ಕತ್ತರಿಸಿ ಮತ್ತೆ ಕೇಲವರನ್ನು ಕೂಗಿ ಹೆದರಿಸಿ ಕೊಲ್ಲುತ್ತಿದ್ದನು. ಕೆಲವರು ಅವನ ನಡುಗೆಯ ತೊಡೆಗಳ ವೇಗದಿಂದಲೇ ಭೂತಲದಲ್ಲಿ ಬಿದ್ದರು. ಇನ್ನು ಕೆಲವರು ಅವನನ್ನು

ನೋಡಿಯೇ ಭೀತರಾಗಿ ಪಂಚತ್ವವನ್ನು ಸೇರಿದರು. ಈ ರೀತಿ ಭೀಮಸೇನನ ಉಪದ್ರವಕ್ಕೆ ಒಳಗಾದರೂ ತರಸ್ವಿ ಕಲಿಂಗರ ಮಹಾ ಸೇನೆಯು ರಣದಲ್ಲಿ ಭೀಷ್ಮನನ್ನು ಸುತ್ತುವರೆದಿದ್ದರು. ಆಗ ಕಲಿಂಗ ಸೈನ್ಯಗಳ ಪ್ರಮುಖ ಶ್ರುತಾಯುಷನು ಭೀಮಸೇನನನ್ನು ನೋಡಿ ಧಾವಿಸಿದನು.

ಅವನು ಬರುತ್ತಿರುವುದನ್ನು ನೋಡಿ ಅಮೇಯಾತ್ಮ ಕಲಿಂಗನು ಒಂಭತ್ತು ಶರಗಳಿಂದ ಭೀಮಸೇನನ ಎದೆಗೆ ಹೊಡೆದನು. ಅಂಕುಶದಿಂದ ಚುಚ್ಚಲ್ಪಟ್ಟ ಆನೆಯಂತೆ ಕಲಿಂಗಬಾಣದಿಂದ ಹೊಡೆಯಲ್ಪಟ್ಟ ಭೀಮಸೇನನು ಇಂಧನಗಳಿಂದ ಪ್ರಜ್ವಲಿಸುವ ಅಗ್ನಿಯಂತೆ ಕ್ರೋಧದಿಂದ ಉರಿದೆದ್ದನು. ಅದೇ ಸಮಯದಲ್ಲಿ ರಥಸಾರಥಿ ಅಶೋಕನು ಹೇಮಪರಿಷ್ಕೃತ ರಥವನ್ನು ತಂದು ಭೀಮನಿಗೆ ರಥವನ್ನಿತ್ತನು. ಶತ್ರುಸೂದನ ಕೌಂತೇಯನು ತಕ್ಷಣವೇ ಆ ರಥವನ್ನು ಏರಿ “ನಿಲ್ಲು! ನಿಲ್ಲು!” ಎಂದು ಹೇಳುತ್ತಾ ಕಲಿಂಗನನ್ನು ಎದುರಿಸಿದನು. ಆಗ ಬಲವಾನ್ ಶ್ರುತಾಯುವು ಕೈಚಳಕವನ್ನು ಪ್ರದರ್ಶಿಸುತ್ತಾ ಸಂಕ್ರುದ್ಧನಾಗಿ ಭೀಮನ ಮೇಲೆ ನಿಶಿತ ಬಾಣಗಳನ್ನು ಪ್ರಯೋಗಿಸಿದನು. ಮಹಾಯಶ ಕಲಿಂಗನು ಆ ಶ್ರೇಷ್ಠ ಧನುಸ್ಸಿನಿಂದ ಒಂಭತ್ತು ನಿಶಿತ ಬಾಣಗಳನ್ನು ಪ್ರಯೋಗಿಸಿ ಹೊಡೆಯಲು ದಂಡದಿಂದ ಹೊಡೆಯಲ್ಪಟ್ಟ ಹಾವಿನಂತೆ ಭೀಮನು ತುಂಬಾ ಸಿಟ್ಟಿಗೆದ್ದನು. ಕ್ರುದ್ಧನಾಗಿ ಬಲವಾದ ಚಾಪವನ್ನು ತೆಗೆದುಕೊಂಡು ಬಲಿಗಳಲ್ಲಿ ಶ್ರೇಷ್ಠ ಪಾರ್ಥ ಭೀಮನು ಕಲಿಂಗನನ್ನು ಏಳು ಆಯಸಗಳಿಂದ ಹೊಡೆದನು. ಎರಡು ಕ್ಷುರಗಳಿಂದ

ಕಲಿಂಗನ ಚಕ್ರರಕ್ಷಕರಾದ ಮಹಾಬಲಿ ಸತ್ಯದೇವ ಮತ್ತು ಸತ್ಯರನ್ನು ಯಮಸಾದನಕ್ಕೆ ಕಳುಹಿಸಿದನು. ಆಗ ಪುನಃ ಅಮೇಯಾತ್ಮ ಭೀಮನು ಮೂರು ನಿಶಿತ ನಾರಾಚಗಳಿಂದ ರಣದಲ್ಲಿ ಕೇತುಮಂತನನ್ನು ಯಮಸಾದನಕ್ಕೆ ಕಳುಹಿಸಿದನು. ಆಗ ಸಂಕ್ರುದ್ಧರಾದ ಕಲಿಂಗರು ಅಮರ್ಷಣ ಭೀಮಸೇನನನ್ನು ಅನೇಕ ಸಾವಿರ ಕ್ಷತ್ರಿಯ ಸೈನ್ಯಗಳಿಂದ ಸುತ್ತುವರೆದರು. ಆಗ ಕಲಿಂಗರು ಭೀಮಸೇನನನ್ನು ಶಕ್ತಿ-ಗದೆ-ಖಡ್ಗ-ತೋಮರ-ಋಷ್ಟಿ-ಪರಶಾಯುಧಗಳಿಂದ ಮುತ್ತಿಗೆ ಹಾಕಿದರು. ಆ ಘೋರ ಶರವೃಷ್ಟಿಯನ್ನು ತಡೆದು ತಕ್ಷಣವೇ ಗದೆಯನ್ನು ಹಿಡಿದು ಮಹಾಬಲ ಭೀಮನು ಕೆಳಗೆ ಧುಮುಕಿ ಎಪ್ಪತ್ತು ವೀರರನ್ನು ಯಮಸಾದನಕ್ಕೆ ಕಳುಹಿಸಿದನು.

ಪುನಃ ಆ ಅರಿಮರ್ದನನು ಎರಡು ಸಾವಿರ ಕಲಿಂಗರನ್ನು ಮೃತ್ಯುಲೋಕಕ್ಕೆ ಕಳುಹಿಸಿ ಅದ್ಭುತವಾಯಿತು. ಹೀಗೆ ಮಹಾವ್ರತ ಭೀಷ್ಮನನ್ನು ರಕ್ಷಿಸುತ್ತಿದ್ದ ಕಲಿಂಗರ ಸೇನೆಗಳನ್ನು ಪುನಃ ಪುನಃ ಆ ವೀರನು ಸಮರದಲ್ಲಿ ಮರ್ದಿಸಿದನು. ಮಹಾತ್ಮ ಪಾಂಡವನಿಂದ ಆರೋಹಿಗಳು ಹತರಾಗಲು ಆನೆಗಳು ಅವನ ಬಾಣಗಳನ್ನು ತಡೆದುಕೊಳ್ಳಲಾಗದೇ ಜೋರಾಗಿ ಕೂಗುತ್ತಾ ತಮ್ಮ ಸೇನೆಯನ್ನೇ ತುಳಿದು ಹಾಕುತ್ತಾ ಗಾಳಿಯಿಂದ ಚದುರಿದ ಮೋಡಗಳಂತೆ ಓಡಿ ಹೋಗುತ್ತಿದ್ದವು.  ಆಗ ಮಹಾಬಾಹು ಬಲೀ ಭೀಮನು ಶಂಖವನ್ನು ಊದಿ ಸರ್ವಕಲಿಂಗ ಸೇನೆಗಳ ಮನಸ್ಸುಗಳನ್ನು ಕಂಪಿಸಿದನು. ಕಲಿಂಗರನ್ನು ಮೋಹವು ಆವೇಶಗೊಂಡಿತು. ಎಲ್ಲೆಡೆಯೂ ಸೈನ್ಯಗಳು

ವಾಹನಗಳು ಕಂಪಿಸತೊಡಗಿದವು. ಭೀಮನು ಸಮರದಲ್ಲಿ ಗಜೇಂದ್ರನಂತೆ ಎಲ್ಲಕಡೆ ಅನೇಕ ಮಾರ್ಗಗಳಿಂದ ಚಲಿಸಿ ಅತ್ತಿತ್ತ ಓಡಿ, ಮತ್ತೆ ಮತ್ತೆ ಹಾರುತ್ತಾ ಸಮ್ಮೋಹವನ್ನುಂಟುಮಾಡಿದನು. ಮಹಾಸರೋವರದಲ್ಲಿ ಮೊಸಳೆಯೊಂದು ತಡೆಯಿಲ್ಲದೇ ಅಲ್ಲೋಲಕಲ್ಲೋಲ ಮಾಡುವಂತೆ ಭೀಮಸೇನನ ಭಯದಿಂದ ತ್ರಸ್ತವಾದ ಸೈನ್ಯವು ಕಂಪಿಸಿತು. ಅದ್ಭುತಕರ್ಮಿ ಭೀಮನಿಂದ ತ್ರಾಸಿತರಾದ ವೀರರು ಗುಂಪುಗುಂಪಾಗಿ ಓಡಿ ಹೋಗುತ್ತಿದ್ದರು. ಪುನಃ ಹಿಂದಿರುಗಿ ಅವನೊಂದಿಗೆ ಯುದ್ಧಮಾಡುತ್ತಿದ್ದರು.

ಆಗ ಪಾಂಡವರ ಧ್ವಜಿನೀಪತಿ ಪಾರ್ಷತನು ತನ್ನ ಸೇನೆಗೆ “ಸರ್ವ ಕಲಿಂಗ ಯೋಧರೊಡನೆ ಯುದ್ಧಮಾಡಿ!” ಎಂದು ಆಜ್ಞಾಪಿಸಿದನು. ಸೇನಾಪತಿಯ ಮಾತನ್ನು ಕೇಳಿ ಶಿಖಂಡಿಪ್ರಮುಖ ಗಣಗಳು ರಥಸೇನೆ ಪ್ರಹಾರಿಗಳೊಂದಿಗೆ ಭೀಮನಿದ್ದಲ್ಲಿಗೆ ಧಾವಿಸಿ ಬಂದಿತು. ಪಾಂಡವ ಧರ್ಮರಾಜನೂ ಮೇಘವರ್ಣದ ಮಹಾ ಗಜಸೇನೆಯೊಂದಿಗೆ ಅವರನ್ನು ಹಿಂಬಾಲಿಸಿ ಬಂದನು. ಹೀಗೆ ಪಾರ್ಷತನು ತನ್ನ ಎಲ್ಲ ಸೇನೆಗಳನ್ನೂ ಒಟ್ಟುಗೂಡಿಸಿಕೊಂಡು ಸತ್ಪುರುಷರಿಗೆ ಉಚಿತವಾದಂತೆ ಭೀಮಸೇನನ ಪೃಷ್ಠಭಾಗವನ್ನು ರಕ್ಷಿಸಿದನು. ಏಕೆಂದರೆ ಪಾಂಚಾಲರಾಜನಿಗೆ ಲೋಕದಲ್ಲಿ ಭೀಮ-ಸಾತ್ಯಕಿಯರನ್ನು ಬಿಟ್ಟು ಬೇರೆ ಯಾರೂ ಪ್ರಾಣಕ್ಕಿಂತಲೂ ಹೆಚ್ಚು ಪ್ರಿಯರಾದವರು ಇರಲಿಲ್ಲ. ಪರವೀರಹ ಪಾರ್ಷತನು ಕಲಿಂಗರ ಮಧ್ಯೆ ಸಂಚರಿಸುತ್ತಿದ್ದ ಮಹಾಬಾಹು ಅರಿಂದಮ ಭೀಮಸೇನನನ್ನು ನೋಡಿದನು. ಆಗ

ಪರಂತಪನಿಗೆ ಅತೀವ ಹರ್ಷವಾಗಿ ಅವನು ಕೂಗಿದನು, ಶಂಖವನ್ನು ಊದಿದನು ಮತ್ತು ಸಿಂಹನಾದಗೈದನು. ಭೀಮಸೇನನೂ ಕೂಡ ಹತ್ತಿರದಲ್ಲಿಯೇ, ಪಾರಿವಾಳಗಳ ಬಣ್ಣದ ಕುದುರೆಗಳನ್ನು ಕಟ್ಟಿದ ಹೇಮಪರಿಷ್ಕೃತ ರಥದಲ್ಲಿ ಕೋವಿದಾರ ಧ್ವಜನನ್ನು ನೋಡಿ ಆಶ್ವಾಸಿತನಾದನು. ಕಲಿಂಗರಿಂದ ಸುತ್ತುವರೆಯಲ್ಪಟ್ಟ ಅಮೇಯಾತ್ಮ ಭೀಮಸೇನನನ್ನು ನೋಡಿ ಅವನಿಗೆ ಸಹಾಯಮಾಡಲು ಧೃಷ್ಟದ್ಯುಮ್ನನು ಇನ್ನೂ ಹತ್ತಿರಕ್ಕೆ ಬಂದನು. ದೂರದಿಂದ ಸಾತ್ಯಕಿಯು ಸಮರದಲ್ಲಿ ಕಲಿಂಗರೊಡನೆ ಯುದ್ಧಮಾಡುತ್ತಿದ್ದ ಆ ಇಬ್ಬರು ಮನಸ್ವಿ, ವೀರ ಧೃಷ್ಟದ್ಯುಮ್ನ-ವೃಕೋದರರರನ್ನು ನೋಡಿದನು. ವಿಜಯಿಗಳಲ್ಲಿ ಶ್ರೇಷ್ಠ ಪುರುಷರ್ಷಭ ಶೈನಿಯು ವೇಗದಿಂದ ಅಲ್ಲಿಗೆ ಬಂದು ಪಾರ್ಥ-ಪಾರ್ಷತರ ಹಿಂಬಾಗದ ರಕ್ಷಣೆಯನ್ನು ವಹಿಸಿಕೊಂಡನು. ಅಲ್ಲಿ ಅವನು ಧನುಸ್ಸನ್ನು ಹಿಡಿದು ತನ್ನನ್ನೇ ರೌದ್ರನನ್ನಾಗಿಸಿಕೊಂಡು ಸಮರದಲ್ಲಿ ಶತ್ರುಗಳೊಂದಿಗೆ ಕಾದು ಕೊಂದನು.

ಅಲ್ಲಿ ಭೀಮನು ಕಲಿಂಗರ ಮಾಂಸ-ಶೋಣಿತ-ಕರ್ದಮಗಳ ರಕ್ತಪ್ರವಾಹದ ನದಿಯನ್ನೇ ಸೃಷ್ಟಿಸಿದ್ದನು. ಕಲಿಂಗರ ಮತ್ತು ಪಾಂಡವರ ಸೇನೆಗಳ ಮಧ್ಯೆ ಭೀಮಸೇನನು ಸುದುಸ್ತಾರ ನದಿಯನ್ನು ಹರಿಸಿದ್ದನು. ಹಾಗಿರುವ ಭೀಮಸೇನನನ್ನು ನೋಡಿ ನಿನ್ನವರು “ಕಲಿಂಗರೊಡನೆ ಯುದ್ಧಮಾಡುತ್ತಿರುವ ಇವನು ಭೀಮರೂಪದ ಕಾಲ!” ಎಂದು ಕೂಗಿಕೊಳ್ಳುತ್ತಿದ್ದರು. ಆಗ ರಣದಲ್ಲಿ ಆ ಕೂಗನ್ನು ಕೇಳಿ ಶಾಂತನವ ಭೀಷ್ಮನು ತ್ವರೆಮಾಡಿ ಬಂದು ಸೇನೆಯೊಂದಿಗೆ ಭೀಮನನ್ನು

ಎಲ್ಲಕಡೆಗಳಿಂದ ಸುತ್ತುವರೆದನು. ಆಗ ಭೀಷ್ಮನ ಹೇಮಪರಿಷ್ಕೃತ ರಥವನ್ನು ಸಾತ್ಯಕಿ, ಭೀಮಸೇನ ಮತ್ತು ಪಾರ್ಷತ ಧೃಷ್ಟದ್ಯುಮ್ನರು ಮುತ್ತಿಗೆ ಹಾಕಿದರು. ಅವರೆಲ್ಲರೂ ಗಾಂಗೇಯನನ್ನು ಸುತ್ತುವರೆದು ಪ್ರತಿಯೊಬ್ಬರೂ ಮೂರು ಮೂರು ಘೋರ ಬಾಣಗಳಿಂದ ಭೀಷ್ಮನನ್ನು ಚುಚ್ಚಿದರು. ಅವೆಲ್ಲವನ್ನು ತಡೆದು ದೇವವ್ರತನು ಪ್ರಯತ್ನಿಸಿ ಆ ಮಹೇಷ್ವಾಸರನ್ನು ಮೂರು ಮೂರು ಜಿಹ್ಮಗಗಳಿಂದ ಹೊಡೆದನು. ಸಾವಿರ ಶರಗಳಿಂದ ಆ ಮಹಾರಥರನ್ನು ತಡೆಹಿಡಿದು, ಭೀಮನ ಕಾಂಚನಸನ್ನಹ ಕುದುರೆಗಳನ್ನು ಶರಗಳಿಂದ ಕೊಂದನು. ಕುದುರೆಗಳು ಹತವಾದರೂ ರಥದಲ್ಲಿಯೇ ನಿಂತು ಪ್ರತಾಪವಾನ್ ಭೀಮಸೇನನು ಬೇಗನೇ ಗಾಂಗೇಯನ ರಥದ ಮೇಲೆ ಶಕ್ತಿಯನ್ನು ಎಸೆದನು. ಅದು ತಲುಪುವುದರೊಳಗೇ ದೇವವ್ರತನು ಅದನ್ನು ಮೂರು ಭಾಗಗಳನ್ನಾಗಿ ತುಂಡರಿಸಿ ಭೂಮಿಯ ಮೇಲೆ ಬೀಳಿಸಿದನು. ಆಗ ಉಕ್ಕಿನ ಭಾರವಾದ ಬಲವತ್ತಾದ ಗದೆಯನ್ನು ಹಿಡಿದು ಭೀಮಸೇನನು ವೇಗದಿಂದ ರಥದ ಕೆಳಗೆ ಧುಮುಕಿದನು.

ಆಗ ಭೀಮನ ಪ್ರಿಯಕಾಮಿ ಸಾತ್ಯಕಿಯೂ ಕೂಡ ಕುರುವೃದ್ಧನ ಸಾರಥಿಯನ್ನು ಸಾಯಕಗಳಿಂದ ಉರುಳಿಸಿದನು. ರಥಿಗಳಲ್ಲಿ ಶ್ರೇಷ್ಠನಾದ ಭೀಷ್ಮನ ಸಾರಥಿಯು ಹತನಾಗಲು ಕುದುರೆಗಳು ವಾಯುವೇಗದಿಂದ ಅವನನ್ನು ರಣರಂಗದಿಂದ ಆಚೆಗೆ ಕೊಂಡೊಯ್ದವು. ಮಹಾವ್ರತನು ಹಿಂದೆಸರಿಯಲು ಭೀಮಸೇನನು ಒಣಹುಲ್ಲನ್ನು ಸುಡುತ್ತಿರುವ ಬೆಂಕಿಯಂತೆ ಜ್ವಾಜಲ್ಯಮಾನನಾಗಿ ಸುಡುತ್ತಿದ್ದನು. ಅವನು

ಸರ್ವಕಲಿಂಗರನ್ನೂ ಸಂಹರಿಸಿ ಸೇನಾಮಧ್ಯದಲ್ಲಿ ನಿಂತುಕೊಂಡನು. ಕೌರವರು ಯಾರೂ ಅವನೊಂದಿಗೆ ಯುದ್ಧಮಾಡಲು ಉತ್ಸುಕರಾಗಿರಲಿಲ್ಲ. ರಥಿಗಳಲ್ಲಿ ಶ್ರೇಷ್ಠ ಧೃಷ್ಟದ್ಯುಮ್ನನು ಆ ಯಶಸ್ವಿಯನ್ನು ತನ್ನ ರಥದಲ್ಲಿ ಏರಿಸಿಕೊಂಡು ಎಲ್ಲ ಸೈನ್ಯಗಳೂ ನೋಡುತ್ತಿದ್ದಂತೆ ಕರೆದುಕೊಂಡು ಹೋದನು. ಪಾಂಚಾಲರಿಂದ ಮತ್ತು ಮತ್ಸ್ಯರಿಂದ ಗೌರವಿಸಿಕೊಂಡ ಅವನು ಧೃಷ್ಟದ್ಯುಮ್ನನನ್ನು ಆಲಂಗಿಸಿ ಸಾತ್ಯಕಿಯಿರುವಲ್ಲಿಗೆ ಹೋದನು. ಆಗ ಸತ್ಯವಿಕ್ರಮ ಯದುವ್ಯಾಘ್ರನು ಭೀಮಸೇನನನ್ನು ಸಂತೋಷಗೊಳಿಸುತ್ತಾ ಧೃಷ್ಟದ್ಯುಮ್ನನು ನೋಡುತ್ತಿದ್ದಂತೆ ಹೇಳಿದನು:

> “ಒಳ್ಳೆಯದಾಯಿತು! ನಿನ್ನಿಂದ ಕಲಿಂಗರಾಜ, ರಾಜಪುತ್ರ ಕೇತುಮಾನ, ಕಾಲಿಂಗ ಶಕ್ರದೇವ ಮತ್ತು ಕಲಿಂಗರು ಹತರಾದರು. ನಿನ್ನ ಬಲವೀರ್ಯದಿಂದ ಕಲಿಂಗ ಸೇನೆಗಳ ಗಜಾಶ್ವರಥಸಂಕುಲಗಳ ಮಹಾವ್ಯೂಹಗಳು ನಾಶವಾದವು.”

ಹೀಗೆ ಹೇಳಿ ಆಪ್ತನಾದ ದೀರ್ಘಬಾಹು ಅರಿಂದಮ ಶೈನಿಯು ರಥದಿಂದಿಳಿದು ಪಾಂಡವನನ್ನು ಬಿಗಿದಪ್ಪಿದನು. ಆಗ ಪುನಃ ತನ್ನ ರಥವನ್ನೇರಿ ಮಹಾರಥನು ಭೀಮನ ಬಲವನ್ನು ವೃದ್ಧಿಸಿ ಕ್ರುದ್ಧನಾಗಿ ಕೌರವರನ್ನು ವಧಿಸಲು ಉಪಕ್ರಮಿಸಿದನು.

## ಅಭಿಮನ್ಯು-ಅರ್ಜುನರ ಪರಾಕ್ರಮ

ಆ ದಿನದ ಅಪರಾಹ್ಣವು ಕಳೆಯಲು ರಥನಾಗಾಶ್ವಪದಾತಿಗಳ

ಮಹಾಕ್ಷಯವು ಮುಂದುವರೆದಿರಲು ಪಾಂಚಾಲ್ಯನು ಈ ಮೂವರು ಮಹಾರಥ ಮಹಾತ್ಮರೊಂದಿಗೆ - ದ್ರೋಣಪುತ್ರ, ಶಲ್ಯ ಮತ್ತು ಕೃಪ - ಯುದ್ಧದಲ್ಲಿ ತೊಡಗಿದ್ದನು. ಆ ಮಹಾಬಲ ಪಾಂಚಾಲದಾಯಾದನು ಹತ್ತು ಹರಿತ ಆಶುಗಗಳಿಂದ ದ್ರೌಣಿಯ ಲೋಕವಿಶ್ರುತ ಕುದುರೆಗಳನ್ನು ಸಂಹರಿಸಿದನು. ಆಗ ಹತವಾಹನನಾದ ದ್ರೌಣಿಯು ತಕ್ಷಣವೇ ಶಲ್ಯನ ರಥವನ್ನು ಏರಿ ಪಾಂಚಾಲದಾಯದನ ಮೇಲೆ ಬಾಣಗಳಿಂದ ಆಕ್ರಮಣ ಮಾಡಿದನು. ಧೃಷ್ಟದ್ಯುಮ್ನನು ದ್ರೌಣಿಯೊಂದಿಗೆ ಯುದ್ಧದಲ್ಲಿ ನಿರತನಾಗಿದ್ದುದನ್ನು ನೋಡಿ ಸೌಭದ್ರನು ವೇಗದಿಂದ ನಿಶಿತ ಶರಗಳನ್ನು ಎರಚುತ್ತಾ ಎದುರಿಸಿದನು. ಅವನು ಶಲ್ಯನನ್ನು ಇಪ್ಪತ್ತೈದು ಶರಗಳಿಂದ, ಕೃಪನನ್ನು ಒಂಭತ್ತರಿಂದ ಮತ್ತು ಅಶ್ವತ್ಥಾಮನನ್ನು ಎಂಟು ಬಾಣಗಳಿಂದ ಹೊಡೆದನು. ಆಗ ತಕ್ಷಣವೇ ಆರ್ಜುನಿಯನ್ನು ದ್ರೌಣಿಯು ಪತ್ರಿಗಳಿಂದ, ಶಲ್ಯನು ಹನ್ನೆರಡು ಮತ್ತು ಕೃಪನು ಮೂರು ನಿಶಿತಬಾಣಗಳಿಂದ ಹೊಡೆದರು. ಧೃತರಾಷ್ಟ್ರನ ಮೊಮ್ಮಗ ಲಕ್ಷ್ಮಣನು ಸೌಭದ್ರಿಯನ್ನು ಎದುರಿಸಲು, ಆಗ ಸಂಹೃಷ್ಟರಾದ ಅವರಿಬ್ಬರ ನಡುವೆ ಯುದ್ಧವು ನಡೆಯಿತು. ದೌರ್ಯೋಧನಿಯಾದರೋ ಸಂಕ್ರುದ್ಧನಾಗಿ ಸೌಭದ್ರನನ್ನು ಒಂಭತ್ತು ಶರಗಳಿಂದ ಹೊಡೆದನು. ಆಗ ಈ ಅದ್ಭುತವಾಯಿತು. ಸಂಕ್ರುದ್ಧನಾದ ಅಭಿಮನ್ಯುವಾದರೋ ತಮ್ಮನನ್ನು ಐವತ್ತು ಶರಗಳಿಂದ ತನ್ನ ಹಸ್ತಲಾಘವದಿಂದ ಹೊಡೆದನು. ಆಗ ಲಕ್ಷ್ಮಣನೂ ಕೂಡ ಪತ್ರಿಗಳಿಂದ ಅವನ ಮುಷ್ಟಿಪ್ರದೇಶಕ್ಕೆ ಹೊಡೆದು ದನುಸ್ಸನ್ನು ತುಂಡರಿಸಿದನು. ಆಗ ಜನರು ಕೂಗಾಡಿದರು. ತುಂಡಾಗಿದ್ದ

ಧನುಸ್ಸನ್ನು ಬಿಸಾಡಿ ಪರವೀರಹ ಸೌಭದ್ರನು ಇನ್ನೊಂದು ಚಿತ್ರವಾದ, ವೇಗವತ್ತರವಾದ ಕಾರ್ಮುಕವನ್ನು ಎತ್ತಿಕೊಂಡನು. ಆ ಇಬ್ಬರು ಪುರುಷರ್ಷಭರೂ ಸಮರದಲ್ಲಿ ಹರ್ಷಿತರಾಗಿ, ಪ್ರತಿಗೆ ಪ್ರತಿಮಾಡುವುದರಲ್ಲಿ ಇಚ್ಛೆಯುಳ್ಳವರಾಗಿದ್ದು ಅನ್ಯೋನ್ಯರನ್ನು ತೀಕ್ಷ್ಣ ವಿಶಿಖಗಳಿಂದ ಹೊಡೆಯುತ್ತಿದ್ದರು. ಆಗ ರಾಜಾ ಜನೇಶ್ವರ ದುರ್ಯೋಧನನು ಅಭಿಮನ್ಯುವಿನಿಂದ ತನ್ನ ಮಗ ಮಹಾರಥನು ಪೀಡಿತನಾಗುತ್ತಿರುವುದನ್ನು ಕಂಡು ಅಲ್ಲಿಗೆ ಬಂದನು. ದುರ್ಯೋಧನನು ಅಲ್ಲಿಗೆ ಬರಲು ಎಲ್ಲ ಜನಾಧಿಪರೂ ಕೂಡ ರಥಸಂಕುಲಗಳಿಂದ ಆರ್ಜುನಿಯನ್ನು ಎಲ್ಲ ಕಡೆಗಳಿಂದ ಸುತ್ತುವರೆದರು. ಯುದ್ಧದಲ್ಲಿ ಆ ಸುದುರ್ಜಯ ಶೂರರಿಂದ ಪರಿವೃತನಾಗಿದ್ದರೂ ಆ ಕೃಷ್ಣತುಲ್ಯ ಪರಾಕ್ರಮಿಯು ಸ್ವಲ್ಪವೂ ವ್ಯಥಿತನಾಗಲಿಲ್ಲ.

ಸಂಸಕ್ತನಾಗಿದ್ದ ಸೌಭದ್ರನನ್ನು ನೋಡಿ ಧನಂಜಯನು ತನ್ನ ಮಗನನ್ನು ರಕ್ಷಿಸಲು ಬಯಸಿ ಸಂಕ್ರುದ್ಧನಾಗಿ ಅಲ್ಲಿಗೆ ಧಾವಿಸಿದನು. ಆಗ ರಥ-ಆನೆ-ಅಶ್ವಗಳೊಡನೆ ಭೀಷ್ಮ-ದ್ರೋಣರನ್ನು ಮುಂದಿರಿಸಿಕೊಂಡು ರಾಜರು ಒಟ್ಟಿಗೇ ಸವ್ಯಸಾಚಿಯನ್ನು ಎದುರಿಸಿದರು. ಒಮ್ಮಿಂದೊಮ್ಮೆಲೇ ಆನೆ-ರಥ-ಕುದುರೆಗಳ ಚಲನವಲನದಿಂದ ಭೂಮಿಯಲ್ಲಿ ತೀವ್ರವಾದ ಧೂಳೆದ್ದು ಅದು ಸೂರ್ಯನ ಮಾರ್ಗದ ವರೆಗೂ ತಲುಪಿದುದು ಕಂಡುಬಂದಿತು. ಅವನ ಬಾಣಪಥಕ್ಕೆ ಸಿಲುಕಿ ಸಹಸ್ರಾರು ಆನೆಗಳು ಮತ್ತು ನೂರಾರು ಭುಮಿಪಾಲರು ಎಲ್ಲಕಡೆ ಓಡಿ ಹೋಗತೊಡಗಿದರು. ಎಲ್ಲ ಭೂತಗಳು ನೋವಿನಿಂದ ಕೂಗಿದವು. ದಿಕ್ಕುಗಳು ಕತ್ತಲೆಯಿಂದ

ತುಂಬಿದವು. ಕುರುಗಳ ಅನಯತೇಯ ತೀವ್ರ ದಾರುಣ ಫಲಿತಾಂಶವು ಕಂಡುಬರುತ್ತಿತ್ತು. ಕಿರೀಟಿಯ ಶರಸಂಘಗಳಿಂದ ತುಂಬಿ ಅಂತರಿಕ್ಷವಾಗಲೀ, ದಿಕ್ಕುಗಳಾಗಲೀ, ಭೂಮಿಯಾಗಲೀ, ಭಾಸ್ಕರನಾಗಲೀ ಕಾಣಲಿಲ್ಲ. ಅನೇಕ ಧ್ವಜಗಳು ನಾಶವಾದವು, ಕುದುರೆ-ಆನೆ-ರಥಿಕರು ಹತರಾದರು. ಕೆಲವು ರಥಯೂಥಪರೂ ಓಡಿಹೋಗುತ್ತಿರುವುದು ಕಂಡುಬಂದಿತು. ಅನ್ಯ ವಿರಥರಾದ ರಥಿಗಳು ಎಲ್ಲಕಡೆ ಅಲ್ಲಲ್ಲಿ ಆಯುಧಗಳನ್ನು ಹಿಡಿದು, ಅಂಗದ-ಭುಜಾಭರಣಗಳೊಂದಿಗೆ ಓಡಿಹೋಗುತ್ತಿರುವುದು ಕಂಡುಬಂದಿತು. ಅರ್ಜುನನ ಭಯದಿಂದ ಹಯಾರೂಢರು ಕುದುರೆಗಳನ್ನು ಮತ್ತು ಗಜಾರೂಢರು ಆನೆಗಳನ್ನು ಬಿಟ್ಟು ಎಲ್ಲ ಕಡೆ ಓಡಿ ಹೋಗುತ್ತಿದ್ದರು.

ಅರ್ಜುನನಿಂದ ಹೊಡೆಯಲ್ಪಟ್ಟು ರಥಗಳು, ಆನೆಗಳು, ಕುದುರೆಗಳು ಮತ್ತು ನರಾಧಿಪರು ಬಿದ್ದುದು ಮತ್ತು ಬೀಳುತ್ತಿರುವುದು ಕಂಡುಬಂದಿತು. ಗದೆಯನ್ನೆತ್ತಿಹಿಡಿದ ಮತ್ತು ಖಡ್ಗಗಳನ್ನೂ ಹಿಡಿದ ಕೈಗಳನ್ನೂ, ಪ್ರಾಸ-ತೂಣೀರ-ಶರ-ಧನುಸ್ಸು-ಅಂಕುಶ-ಪತಾಕೆಗಳನ್ನು ಹಿಡಿದ ಕೈಗಳನ್ನು ಮತ್ತು ನರರನ್ನು ಅವುಗಳೊಂದಿಯೇ ಅರ್ಜುನನು ಉಗ್ರವಾದ ಬಾಣಗಳಿಂದ ಕತ್ತರಿಸುತ್ತಿದ್ದನು. ಆಗ ಅವನ ಮುಖವು ರೌದ್ರಾಕಾರವನ್ನು ತಾಳಿತ್ತು. ರಣಭೂಮಿಯಲ್ಲಿ ಹರಡಿ ಬಿದ್ದಿರುವ ಪರಿಘ-ಮುದ್ಗರ-ಪ್ರಾಸ-ಭಿಂಡಿಪಾಲ-ಕತ್ತಿ-ತೀಕ್ಷ್ಣ ಗಂಡುಗೊಡಲಿ-ತೋಮರ--ಕವಚ-ತುಂಡಾದ ಬಿಲ್ಲುಗಳು-ಧ್ವಜ-ಗುರಾಣಿ-ವ್ಯಜನಗಳು-ಛತ್ರಗಳು-ಹೇಮದಂಡಗಳು-ಚಾಮರಗಳು-ಚಾವಟಿಗಳು-

ನೊಗಪಟ್ಟಿಗಳು-ಮತ್ತು ಅಂಕುಶಗಳು ರಾಶಿರಾಶಿಯಾಗಿ ಕಂಡವು. ಆಗ ಅರ್ಜುನನೊಂದಿಗೆ ಸಮರದಲ್ಲಿ ಪ್ರತಿಯುದ್ಧ ಮಾಡಬಲ್ಲ ಯಾವ ಪುರುಷನೂ ಕೌರವ ಸೇನೆಯಲ್ಲಿ ಇರಲಿಲ್ಲ. ಯಾರು ಯಾರು ಪಾರ್ಥನನ್ನು ಎದುರಿಸಿ ಯುದ್ಧಮಾಡಿದರೋ ಅವರೆಲ್ಲರೂ ತೀಕ್ಷ್ಣ ವಿಶಿಖಗಳಿಂದ ಪರಲೋಕಕ್ಕೆ ಕೊಂಡೊಯ್ಯಲ್ಪಟ್ಟರು. ಕೌರವ ಯೋಧರು ಹಾಗೆ ದಿಕ್ಕಾಪಾಲಾಗಿ ಓಡಿಹೋಗುತ್ತಿರಲು ಅರ್ಜುನ-ವಾಸುದೇವರು ಅವರ ಉತ್ತಮ ಶಂಖಗಳನ್ನು ಊದಿದರು.

ಆ ಬಲವು ಪ್ರಭಗ್ನವಾಗುತ್ತಿರುವುದನ್ನು ನೋಡಿ ದೇವವ್ರತನು ಶೂರ ಭಾರದ್ವಾಜನಿಗೆ ಮುಗುಳ್ನಕ್ಕು ಹೇಳಿದನು:

> “ಈ ವೀರ ಬಲೀ ಪಾಂಡುಸುತನು ಕೃಷ್ಣನೊಂದಿಗೆ ಸೈನ್ಯಗಳನ್ನು ನಾಶಪಡಿಸುತ್ತಿದ್ದಾನೆ. ಕಾಲಾಂತಕ ಯಮನೋಪಾದಿಯಲ್ಲಿ ಕಾಣುವ ರೂಪವುಳ್ಳ ಇವನನ್ನು ಇಂದು ಸಮರದಲ್ಲಿ ಗೆಲ್ಲಲು ಖಂಡಿತ ಸಾಧ್ಯವಿಲ್ಲ. ಅನ್ಯೋನ್ಯರನ್ನು ನೋಡಿ ಓಡಿಹೋಗುತ್ತಿರುವ ಈ ಮಹಾಸೇನೆಯನ್ನು ವರೂಥಿನಿಯನ್ನು ಹಿಂದೆ ಕರೆತರಲೂ ಕೂಡ ಶಕ್ಯವಿಲ್ಲ. ಸರ್ವಲೋಕಗಳ ದೃಷ್ಟಿಗಳನ್ನು ಸರ್ವಥಾ ಸಂಹರಿಸಲಿದ್ದಾನೆಯೋ ಎನ್ನುವಂತೆ ಭಾನುಮತನು ಗಿರಿಶ್ರೇಷ್ಠನಲ್ಲಿ ಅಸ್ತನಾಗುತ್ತಿದ್ದಾನೆ. ಹಿಂದೆಸರಿಯುವ ಕಾಲವು ಬಂದೊದಗಿದೆಯೆಂದು ನನಗನ್ನಿಸುತ್ತದೆ. ಆಯಾಸಗೊಂಡ,

ಭೀತರಾದ ಯೋಧರು ಎಂದೂ ಯುದ್ಧಮಾಡಲಾರರು.”

ಹೀಗೆ ಆಚಾರ್ಯಸತ್ತಮ ದ್ರೋಣನಿಗೆ ಹೇಳಿ ಮಹಾರಥ ಭೀಷ್ಮನು ಕೌರವರನ್ನು ಹಿಂದಕ್ಕೆ ಕರೆಸಿಕೊಂಡನು. ಸೂರ್ಯನು ಅಸ್ತವಾಗಲು, ಸಂಧ್ಯಾಕಾಲವುಂಟಾಗಲು, ಪಾಂಡವರು ಮತ್ತು ಕೌರವರು ಸೇನೆಗಳನ್ನು ಹಿಂದೆತೆಗೆದುಕೊಂಡರು.

# ಮೂರನೆಯ ದಿನದ ಯುದ್ಧ

ರಾತ್ರಿಯು ಕಳೆದು ಪ್ರಭಾತವಾಗಲು ಶಾಂತನವ ಭೀಷ್ಮನು ಸೇನೆಗಳಿಗೆ ಯುದ್ಧಕ್ಕೆ ಹೊರಡುವಂತೆ ಆದೇಶವಿತ್ತನು. ಧಾರ್ತರಾಷ್ಟ್ರರ ವಿಜಯಾಕಾಂಕ್ಷಿಯಾದ ಕುರುಪಿತಾಮಹ ಶಾಂತನವ ಭೀಷ್ಮನು ಗಾರುಡ ಮಹಾವ್ಯೂಹವನ್ನು ರಚಿಸಿದನು. ಗರುಡನ ಕೊಕ್ಕಿನ ಪ್ರದೇಶತಲ್ಲಿ ಸ್ವಯಂ ದೇವವ್ರತನಿದ್ದನು. ಭರದ್ವಾಜ ಮತ್ತು ಕೃತವರ್ಮರು ಅದರ ಕಣ್ಣುಗಳಾಗಿದ್ದರು. ಅದರ ಶೀರ್ಷಭಾಗದಲ್ಲಿ ಅಶ್ವತ್ಥಾಮ-ಕೃಪರೂ, ತ್ರಿಗರ್ತರು, ಕೇಕಯರು, ವಾಟದಾನರೂ ಇದ್ದರು. ಭೂರಿಶ್ರವ, ಶಲ, ಶಲ್ಯ, ಭಗದತ್ತ, ಮದ್ರಕ, ಸಿಂಧು-ಸೌವೀರರು, ಪಂಚನದರು ಜಯದ್ರಥನ ಸಹಿತ ಅದರ ಕುತ್ತಿಗೆಯ ಭಾಗದಲ್ಲಿ ಸೇರಿದ್ದರು. ಹಿಂಬಾಗದಲ್ಲಿ ರಾಜಾ ದುರ್ಯೋಧನನು ಸೋದರರು ಮತ್ತು ಅನುಗರಿಂದ ಆವೃತನಾಗಿದ್ದನು. ಅವಂತಿಯ ವಿಂದಾನುವಿಂದರು, ಕಾಂಬೋಜರು ಮತ್ತು ಶಕರೊಂದಿಗೆ ಶೂರಸೇನರು

ಅದರ ಪುಕ್ಕಗಳಾದರು. ದಾಶೇರಕಣಗಳೊಂದಿಗೆ ಮಾಗಧರು ಮತ್ತು ಕಲಿಂಗರು ಕವಚಧಾರಿಗಳಾಗಿ ವ್ಯೂಹದ ಬಲಗಡೆಯಲ್ಲಿ ನಿಂತಿದ್ದರು. ಕಾನನರು, ವಿಕುಂಜರು, ಮುಕ್ತರು, ಪುಂಡ್ರದೇಶದವರು ಬೃಹದ್ಬಲನ ಸಹಿತ ಎಡಭಾಗದಲ್ಲಿ ನಿಂತಿದ್ದರು.

ಆ ಸೇನೆಯ ವ್ಯೂಹವನ್ನು ನೋಡಿ ಪರಂತಪ ಸವ್ಯಸಾಚಿಯು ಧೃಷ್ಟದ್ಯುಮ್ನನ ಸಹಿತ ಪ್ರತಿವ್ಯೂಹವಾಗಿ ಅರ್ಧಚಂದ್ರದ ವ್ಯೂಹವನ್ನು ರಚಿಸಿದನು. ಆ ವ್ಯೂಹವು ಅತಿದಾರುಣವಾಗಿತ್ತು. ಅದರ ದಕ್ಷಿಣ ಶೃಂಗದಲ್ಲಿ ಭೀಮಸೇನನು ನಾನಾಶಸ್ತ್ರಸಂಪನ್ನರಾದ ನಾನಾದೇಶದ ನೃಪರಿಂದ ಆವೃತನಾಗಿ ರಾರಾಜಿಸಿದನು. ಅವನ ಹಿಂದೆ ಮಹಾರಥ ವಿರಾಟ-ದ್ರುಪದರೂ, ತದನಂತರ ನೀಲಾಯುಧರೊಂದಿಗೆ ನೀಲನೂ ಇದ್ದರು. ನೀಲನ ಅನಂತರ ಮಹಾರಥ ಧೃಷ್ಟಕೇತುವು ಚೇದಿ-ಕಾಶಿ-ಕರೂಷ-ಪೌರವರಿಂದ ಸಂವೃತನಾಗಿ ನಿಂತಿದ್ದನು. ಆ ಮಹಾಸೇನೆಯ ಮಧ್ಯದಲ್ಲಿ ಧೃಷ್ಟದ್ಯುಮ್ನ-ಶಿಖಂಡಿಯರು ಪಾಂಚಾಲ-ಪ್ರಭದ್ರಕರೊಂದಿಗೆ ನಿಂತಿದ್ದರು. ಅಲ್ಲಿಯೇ ಗಜಸೇನೆಯಿಂದ ಸಂವೃತನಾಗಿ ಧರ್ಮರಾಜನೂ, ಅನಂತರ ಸಾತ್ಯಕಿಯೂ, ದ್ರೌಪದಿಯ ಐವರು ಪುತ್ರರೂ, ಅಭಿಮನ್ಯುವೂ, ಅವನ ಪಕ್ಕದಲ್ಲಿಯೇ ಇರವಾನನೂ, ಅವನ ನಂತರ ಭೈಮಸೇನಿ ಘಟೋತ್ಕಚನೂ ಅನಂತರ ಮಹಾರಥ ಕೇಕಯರೂ ಇದ್ದರು. ಆಗ ಎಡಭಾಗವನ್ನು ಸರ್ವಜಗತ್ತಿನ ರಕ್ಷಕನಾದ ಜನಾರ್ದನನಿಂದ ರಕ್ಷಣೆಯನ್ನು ಪಡೆದ ದ್ವಿಪದರಲ್ಲಿ ಶ್ರೇಷ್ಠನು ನಿಂತಿದ್ದನು. ಈ ರೀತಿಯಾಗಿ ಮಹಾವ್ಯೂಹವನ್ನು

ಪ್ರತಿವ್ಯೂಹವಾಗಿ ರಚಿಸಿ ಪಾಂಡವರು ಧಾರ್ತರಾಷ್ಟ್ರರ ಮತ್ತು ಅವರ ಪಕ್ಷದಲ್ಲಿ ಸೇರಿದವರ ವಧೆಗಾಗಿ ಸಿದ್ಧರಾದರು.

ಆಗ ಪರಸ್ಪರರನ್ನು ಕೊಲ್ಲುವುದರಲ್ಲಿ ನಿರತರಾದ ಕೌರವರು ಮತ್ತು ಪರರ ರಥಸಂಕುಲಗಳ ನಡುವೆ ಯುದ್ಧವು ಪ್ರಾರಂಭವಾಯಿತು. ಅಲ್ಲಲ್ಲಿ ಅಶ್ವಸೇನೆಗಳು ರಥಸೇನೆಗಳು ಪರಸ್ಪರರನ್ನು ಕೊಲ್ಲುವುದರಲ್ಲಿ ತೊಡಗಿರುವುದು ಕಂಡುಬಂದಿತು. ಓಡುತ್ತಿರುವ ಮತ್ತು ಪುನಃ ಪುನಃ ಬೀಳುತ್ತಿರುವ ರಥಗಳ ತುಮುಲ ಶಬ್ಧವು ದುಂದುಭಿಸ್ವನಗಳೊಂದಿಗೆ ಮಿಶ್ರಿತವಾಯಿತು. ಪರಸ್ಪರರನ್ನು ಕೊಲ್ಲುತ್ತಿರುವ ಪ್ರಹರಿಸುತ್ತಿರುವ ಕೌರವರ ಮತ್ತು ಪಾಂಡವರ ನರವೀರರ ತುಮುಲವು ಆಕಾಶವನ್ನೇ ವ್ಯಾಪಿಸಿತು.

## ಸಂಕುಲ ಯುದ್ಧ

ಅತಿರಥ ಧನಂಜಯನು ಅಲ್ಪವೇ ಸಮಯದಲ್ಲಿ ಶರಗಳಿಂದ ಕೌರವ ರಥಸೇನೆಯನ್ನು ವಧಿಸಿ ರಥಯೂಥಪರನ್ನು ಬೀಳಿಸಿದನು. ಯುಗಕ್ಷಯದಲ್ಲಿ ಕಾಲನಂತೆ ಪಾರ್ಥನು ಅವರನ್ನು ವಧಿಸುತ್ತಿರಲು ಧಾರ್ತರಾಷ್ಟ್ರರು ರಣದಲ್ಲಿ ಪಾಂಡವನೊಂದಿಗೆ ಪ್ರತಿಯುದ್ಧಮಾಡಲು, ಬೆಳಗುವ ಯಶಸ್ಸನ್ನು ಬಯಸುತ್ತಾ ಮೃತ್ಯುವನ್ನೇ ಪಲಾಯನವನ್ನಾಗಿ ಮಾಡಿಕೊಂಡು ಪ್ರಯತ್ನಿಸಿದರು. ಏಕಾಗ್ರಚಿತ್ತರಾಗಿ ಅವರು ಪಾಂಡವರ ಸೇನೆಗಳನ್ನು ಅನೇಕ ಬಾರಿ ಧ್ವಂಸಗೊಳಿಸಿದರು. ರಥಗಳು ಮುರಿದು ಯೋಧರು ಓಡಿಹೋಗುತ್ತಿದ್ದರು. ಹಿಂದಿರುಗಿ ಬರುತ್ತಿದ್ದರು ಕೂಡ.

ಅವರಲ್ಲಿ ಪಾಂಡವರ್ಯಾರು ಕೌರವರ್ಯಾರು ಯಾರಿಗೂ ಗೊತ್ತಾಗುತ್ತಿರಲಿಲ್ಲ. ದಿವಾಕರನನ್ನು ಮುಸುಕುವಷ್ಟು ಧೂಳು ಭುಮಿಯಲ್ಲಿ ಎದ್ದಿತು. ಅಲ್ಲಿ ದಿಕ್ಕುಗಳ್ಯಾವುವು ಉಪದಿಕ್ಕುಗಳ್ಯಾವು ಯಾವುದೂ ತಿಳಿಯುತ್ತಿರಲಿಲ್ಲ. ಅಲ್ಲಲ್ಲಿ ಅನುಮಾನದಿಂದ ಹೆಸರು-ಗೋತ್ರಗಳನ್ನು ಹೇಳಿಕೊಂಡು ಯುದ್ಧಮಾಡುತ್ತಿದ್ದರು. ಏನು ಮಾಡಿದರೂ ಧೀಮತ ಸತ್ಯಸಂಧ ಭಾರದ್ವಾಜನಿಂದ ರಕ್ಷಿತವಾದ ಕೌರವರ ವ್ಯೂಹವನ್ನು ಭೇದಿಸಲು ಸಾಧ್ಯವಾಗಲಿಲ್ಲ. ಹಾಗೆಯೇ ಸವ್ಯಸಾಚಿಯಿಂದ ರಕ್ಷಿತವಾದ, ಭೀಮನಿಂದ ಸುರಕ್ಷಿತವಾದ ಮಹಾವ್ಯೂಹವನ್ನು ಭೇದಿಸಲಾಗಲಿಲ್ಲ. ಎರಡೂ ಸೇನೆಗಳಲ್ಲಿ ಸೇನೆಯ ಅಗ್ರಭಾಗವನ್ನು ಬಿಟ್ಟು, ರಥ-ಗಜಗಳನ್ನು ತೊರೆದು ಹೊರಗೆ ನಿಂತು ಯುದ್ಧಮಾಡುತ್ತಿದ್ದರು.

ಆ ಮಹಾಹವದಲ್ಲಿ ಹೊಳೆಯುತ್ತಿರುವ ತುದಿಯ ಋಷ್ಟಿಗಳಿಂದ ಮತ್ತು ಪ್ರಾಸಗಳಿಂದ ಹಯಾರೋಹಿಗಳು ಹಯಾರೋಹಿಗಳನ್ನು ಬೀಳಿಸುತ್ತಿದ್ದರು. ಆ ಅತಿಭಯಂಕರ ಸಮರದಲ್ಲಿ ರಥಿಗಳು ಕನಕಭೂಷಣ ಶರಗಳಿಂದ ಹೊಡೆದು ರಥಿಗಳನ್ನು ಕೆಳಗುರುಳಿಸುತ್ತಿದ್ದರು. ಗಜಾರೋಹಿಗಳು ಗಜಾರೋಹಿಗಳನ್ನು ಒಟ್ಟುಗೂಡಿ, ಸಂಸಕ್ತರಾಗಿ, ನಾರಾಚ-ಶರ-ತೋಮರಗಳಿಂದ ಬೀಳಿಸುತ್ತಿದ್ದರು. ಪರಸ್ಪರರನ್ನು ಕೊಲ್ಲಲು ಬಯಸಿ ಸಂಪ್ರಹೃಷ್ಟರಾದ ಪದಾತಿಗಳು ರಣದಲ್ಲಿ ಪದಾತಿಗಳನ್ನು ಭಿಂಡಿಪಾಲ-ಪರಶುಗಳಿಂದ ಹೊಡೆದು ಕೆಳಗುರುಳಿಸುತ್ತಿದ್ದರು. ಎರಡೂ ಸೇನೆಗಳಲ್ಲಿ ಪದಾತಿಗಳು

ರಥಿಗಳನ್ನೂ, ರಥಿಗಳು ಪದಾತಿಗಳನ್ನೂ ನಿಶಿತ ಶರಗಳಿಂದ ಕೆಳಗೆ ಬೀಳಿಸುತ್ತಿದ್ದರು. ಗಜಾರೋಹಿಗಳು ಹಯಾರೋಹಿಗಳನ್ನೂ ಹಯಾರೋಹಿಗಳು ಗಜಾರೋಹಿಗಳನ್ನೂ ಬೀಳಿಸಲು ತೊಡಗಿ ಅಲ್ಲಿ ಅದ್ಭುತವಾಯಿತು. ಅಲ್ಲಲ್ಲಿ ಪದಾತಿಗಳು ಗಜಾರೋಹಿಗಳನ್ನೂ, ಅವರನ್ನು ಗಜಯೋಧರೂ ಉರುಳಿಸುವುದು ಕಂಡುಬಂದಿತು. ನೂರಾರು ಸಹಸ್ರಾರು ಪದಾತಿಸಂಘಗಳು ಹಯಾರೋಹರಿಂದ ಮತ್ತು ಸಾದಿಸಂಘಗಳು ಪದಾತಿಸಂಘಗಳಿಂದ ಬೀಳುವುದು ಕಂಡುಬಂದಿತು. ಆ ರಣಾಂಗಣದ ಸುತ್ತಲೂ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದ ಧ್ವಜಗಳಿಂದಲೂ, ಧನುಸ್ಸುಗಳಿಂದಲೂ, ತೋಮರಗಳಿಂದಲೂ, ಪ್ರಾಸಗಳಿಂದಲೂ, ಗದೆಗಳಿಂದಲೂ, ಪರಿಘಗಳಿಂದಲೂ, ಕಂಪನಗಳಿಂದಲೂ, ಶಕ್ತ್ಯಾಯುಧಗಳಿಂದಲೂ, ಚಿತ್ರ-ವಿಚಿತ್ರವಾದ ಕವಚಗಳಿಂದಲೂ, ಕಣಪಗಳಿಂದಲೂ, ಅಂಕುಶಗಳಿಂದಲೂ, ಥಳಥಳಿಸುತ್ತಿದ್ದ ಖಡ್ಗಗಳಿಂದಲೂ, ಸುವರ್ಣಮಯ ರೆಕ್ಕೆಗಳುಳ್ಳ ಬಾಣಗಳಿಂದಲೂ, ಶೂಲಗಳಿಂದಲೂ, ಬಣ್ಣದ ಕಂಬಳಿಗಳಿಂದಲೂ, ಬಹುಮೂಲ್ಯವಾದ ರತ್ನಗಂಬಳಿಗಳಿಂದಲೂ ಆ ಭೂಮಿಯು ನಾನಾ ಬಣ್ಣದ ಪುಷ್ಪಹಾರಗಳಿಂದ ಅಲಂಕೃತವಾಗಿದೆಯೋ ಎನ್ನುವಂತೆ ತೋರುತ್ತಿತ್ತು. ನರ-ಅಶ್ವಗಳ ಕಾಯಗಳಿಂದ, ಬಿದ್ದಿದ್ದ ಆನೆಗಳಿಂದ, ಮಾಂಸಶೋಣಿತಕರ್ದಮಗಳಿಂದ ಕೂಡಿದ ಭೂಮಿಯು ಅಗಮ್ಯರೂಪವಾಗಿದ್ದಿತು. ಭೂಮಿಯ ಧೂಳು ರಣಶೋಣಿತದೊಂದಿಗೆ ಸೇರಿ ಕೆಸರುಂಟಾಯಿತು. ಎಲ್ಲ ದಿಕ್ಕುಗಳೂ ಧೂಳಿಲ್ಲದೇ

ನಿರ್ಮಲವಾದವು. ಎಲ್ಲೆಡೆಯಲ್ಲಿಯೂ ಅಗಣಿತ ಕಬಂಧಗಳು (ರುಂಡಗಳಿಲ್ಲದ ಮುಂಡಗಳು) ಎದ್ದು ಓಡಾಡುತ್ತಿರುವುದು ಕಂಡುಬಂದಿತು. ಇದು ಜಗತ್ತಿನ ಭೂತಗಳ ವಿನಾಶದ ಚಿಹ್ನೆ. ನಡೆಯುತ್ತಿರುವ ಆ ಮಹಾರೌದ್ರ ಸುದಾರುಣ ಯುದ್ಧದಲ್ಲಿ ರಥಿಗಳು ಎಲ್ಲಕಡೆ ಓಡಿಹೋಗುತ್ತಿರುವುದು ಕಂಡುಬಂದಿತು.

ಆಗ ದ್ರೋಣ, ಭೀಷ್ಮ, ಜಯದ್ರಥ, ಪುರುಮಿತ್ರ, ವಿಕರ್ಣ, ಶಕುನಿ - ಈ ಸಮರದುರ್ಧರ್ಷ ಸಿಂಹತುಲ್ಯಪರಾಕ್ರಮಿಗಳು ಪುನಃ ಪುನಃ ಪಾಂಡವರ ಸೇನೆಗಳನ್ನು ಸದೆಬಡಿದರು. ಹಾಗೆಯೇ ಭೀಮಸೇನ, ಘಟೋತ್ಕಚ, ಸಾತ್ಯಕಿ, ಚೇಕಿತಾನ ಮತ್ತು ದ್ರೌಪದೇಯರೂ ಕೂಡ ಕೌರವರನ್ನು, ಸರ್ವರಾಜರೊಂದಿಗೆ ದೇವತೆಗಳು ದಾನವರನ್ನು ಹೇಗೋ ಹಾಗೆ ಓಡಿಸಿದರು. ಹಾಗೆ ಸಮರದಲ್ಲಿ ಅನ್ಯೋನ್ಯರನ್ನು ಸಂಹರಿಸುತ್ತಿದ್ದ ಕ್ಷತ್ರಿಯರ್ಷಭರು ರಕ್ತದಿಂದ ತೋಯ್ದು ಘೋರರೂಪಿಗಳಾಗಿ ದಾನವರಂತೆ ರಾಜಿಸಿದರು. ಎರಡೂ ಸೇನೆಗಳಲ್ಲಿ ವೀರರು ರಿಪುಗಳನ್ನು ಸೋಲಿಸಿ ನಭಸ್ತಲದಲ್ಲಿರುವ ಮಹಾಮಾತ್ರ ಗ್ರಹಗಳಂತೆ ತೋರುತ್ತಿದ್ದರು. ಆಗ ದುರ್ಯೋಧನನು ಸಹಸ್ರ ರಥಗಳೊಂದಿಗೆ ಪಾಂಡವರನ್ನು ಮತ್ತು ಘಟೋತ್ಕಚನನ್ನು ಎದುರಿಸಿದನು. ಹಾಗೆಯೇ ಪಾಂಡವರೆಲ್ಲರೂ ಮಹಾಸೇನೆಯೊಂದಿಗೆ ಅರಿಂದಮ ಶೂರ ದ್ರೋಣ-ಭೀಷ್ಮರೊಂದಿಗೆ ಪ್ರತಿಯುದ್ಧ ಮಾಡಿದರು. ಕ್ರುದ್ಧನಾದ ಕಿರೀಟಿಯು ಸಮರ್ಥಿಸುತ್ತಿದ್ದ ಪಾರ್ಥಿವೋತ್ತಮರ ಮೇಲೆರಗಿದನು. ಆರ್ಜುನಿ-ಸಾತ್ಯಕಿಯರು ಸೌಬಲನ ಬಲವನ್ನು

ಎದುರಿಸಿದರು. ಆಗ ಪುನಃ ಸಮರದಲ್ಲಿ ಜಯವನ್ನು ಬಯಸುತ್ತಿದ್ದ ಕೌರವರು ಮತ್ತು ಶತ್ರುಗಳ ನಡುವೆ ಲೋಮಹರ್ಷಣ ಸಂಗ್ರಾಮವು ನಡೆಯಿತು.

## ಪಾಂಡವಯೋಧರ ಪರಾಕ್ರಮ, ಭೀಷ್ಮ-ದುರ್ಯೋಧನರ ಸಂವಾದ

ಫಲ್ಗುನನನ್ನು ನೋಡಿ ಕ್ರುದ್ಧರಾದ ಪಾರ್ಥಿವರು ಅನೇಕ ಸಹಸ್ರ ರಥಗಳಿಂದ ಅವನನ್ನು ಎಲ್ಲಕಡೆಗಳಿಂದಲೂ ಸುತ್ತುವರೆದರು. ಹೀಗೆ ರಥವೃಂದದಿಂದ ಕೋಟೆಯನ್ನಾಗಿಸಿಕೊಂಡು ಅನೇಕ ಸಹಸ್ರ ಶರಗಳಿಂದ ಎಲ್ಲ ಕಡೆಗಳಿಂದ ಅವನನ್ನು ಹೊಡೆದರು. ಕ್ರುದ್ಧರಾಗಿ ವಿಮಲ ತೀಕ್ಷ್ಣ ಶಕ್ತಿಗಳನ್ನೂ, ಗದೆಗಳನ್ನೂ, ಪರಿಘಗಳನ್ನೂ, ಪ್ರಾಸಗಳನ್ನೂ, ಪರಶುಗಳನ್ನೂ, ಮುದ್ಗರ-ಮುಸಲಗಳನ್ನೂ ಫಲ್ಗುನನ ರಥದ ಮೇಲೆ ಎಸೆದರು. ಹೀಗೆ ಪತಂಗಗಳಂತೆ ಎಲ್ಲಕಡೆಗಳಿಂದ ಸುರಿಯುತ್ತಿರುವ ಶಸ್ತ್ರಗಳನ್ನು ಪಾರ್ಥನು ಕನಕಭೂಷಣ ಶರಗಳಿಂದ ತಡೆದನು. ಅಲ್ಲಿ ಆ ಬೀಭತ್ಸುವಿನ ಅತಿಮಾನುಷ ಹಸ್ತಲಾಘವವನ್ನು ನೋಡಿ ದೇವ-ದಾನವ-ಗಂಧರ್ವ-ಪಿಶಾಚ-ಉರಗ-ರಾಕ್ಷಸರು “ಸಾಧು! ಸಾಧು!” ಎಂದು ಫಲ್ಗುನನನ್ನು ಗೌರವಿಸಿದರು. ಶೂರ ಸೌಬಲರೊಂದಿಗೆ ಗಾಂಧಾರರು ಮಹಾಸೇನೆಯೊಡನೆ ಸಾತ್ಯಕಿ ಮತ್ತು ಅಭಿಮನ್ಯುವನ್ನು ತಡೆದರು. ಅಲ್ಲಿ ಕ್ರುದ್ಧರಾದ ಸೌಬಲಕರು ವಾರ್ಷ್ಣೇಯನ ಉತ್ತಮ ರಥವನ್ನು ಯುದ್ಧದಲ್ಲಿ ಕ್ರೋಧದಿಂದ

ನಾನಾವಿಧದ ಶಸ್ತ್ರಗಳಿಂದ ಎಳ್ಳಿನ ಗಾತ್ರದಷ್ಟು ಚೂರು ಚೂರು ಮಾಡಿದರು. ಆಗ ಮಹಾಭಯದಿಂದ ಪರಂತಪ ಸಾತ್ಯಕಿಯು ರಥವನ್ನು ಬಿಟ್ಟು ಬೇಗನೇ ಅಭಿಮನ್ಯುವಿನ ರಥವನ್ನೇರಿದನು. ಅವರಿಬ್ಬರೂ ಒಂದೇ ರಥದಲ್ಲಿದ್ದು ಸೌಬಲನ ಸೇನೆಯನ್ನು ಬೇಗನೆ ನಿಶಿತ ಸನ್ನತಪರ್ವ ಶರಗಳಿಂದ ನಾಶಗೊಳಿಸಿದರು.

ಇನ್ನೊಂದೆಡೆ ದ್ರೋಣ-ಭೀಷ್ಮರು ರಣದಲ್ಲಿ ಧರ್ಮರಾಜನ ಸೇನೆಯನ್ನು ಎದುರಿಸಿ ಅದನ್ನು ತೀಕ್ಷ್ಣವಾದ ಕಂಕಪತ್ರಗಳಿಂದ ಕೂಡಿದ ಶರಗಳಿಂದ ನಾಶಗೊಳಿಸುತ್ತಿದ್ದರು. ಆಗ ರಾಜ ಧರ್ಮಸುತ ಮತ್ತು ಮಾದ್ರೀಪುತ್ರ ಪಾಂಡವರೀರ್ವರು ದ್ರೋಣನ ಸರ್ವಸೇನೆಗಳ ಮೇಲೆ ಧಾಳಿಮಾಡಿದರು. ಅಲ್ಲಿ ಹಿಂದೆ ದೇವಾಸುರರ ನಡುವೆ ನಡೆದ ಸುದಾರುಣ ಯುದ್ಧದಂತೆ ಲೋಮಹರ್ಷಣ ತುಮುಲ ಮಹಾಯುದ್ಧವು ನಡೆಯಿತು. ಮಹಾಕಾರ್ಯಗಳನ್ನೆಸಗುತ್ತಿದ್ದ ಭೀಮಸೇನ-ಘಟೋತ್ಕಚರಿಬ್ಬರ ಬಳಿ ಬಂದು ದುರ್ಯೋಧನನು ಅವರಿಬ್ಬರನ್ನು ತಡೆದನು. ಯುದ್ಧಮಾಡುತ್ತಿರುವ ಹೈಡಿಂಬಿಯ ಪರಾಕ್ರಮವು ಅವನ ತಂದೆಯನ್ನೂ ಮೀರಿಸಿತ್ತು. ಭೀಮಸೇನನಾದರೋ ಸಂಕ್ರುದ್ಧನಾಗಿ, ನಗು ನಗುತ್ತಾ ಧುರ್ಯೋಧನನ ಎದೆಗೆ ಗುರಿಯಿಟ್ಟು ಬಾಣಪ್ರಯೋಗ ಮಾಡಿದನು. ಆಗ ರಾಜಾ ದುರ್ಯೋಧನನು ಶ್ರೇಷ್ಠ ಪ್ರಹಾರದಿಂದ ಮೂರ್ಛೆಗೊಂಡು ರಥದಲ್ಲಿಯೇ ಕುಸಿದು ಕುಳಿತನು. ಅವನು ಮೂರ್ಛಿತನಾದುದನ್ನು ತಿಳಿದು ಸಾರಥಿಯು ತ್ವರೆಮಾಡಿ ಅವನನ್ನು ರಣದಿಂದ ಆಚೆ ಕರೆದೊಯ್ದನು. ಆಗ ಸೈನ್ಯವು ಒಡೆಯಿತು.

ಎಲ್ಲಕಡೆ ಓಡಿ ಹೋಗುತ್ತಿರುವ ಕೌರವ ಸೇನೆಯನ್ನು ಭೀಮನು ತೀಕ್ಷ್ಣ ಶರಗಳಿಂದ, ಅವರ ಹಿಂದೆ ಓಡಿಹೋಗಿ, ಸಂಹರಿಸಿದನು. ರಥಶ್ರೇಷ್ಠ ಪಾರ್ಷತ ಮತ್ತು ಧರ್ಮಪುತ್ರ ಪಾಂಡವರು ದ್ರೋಣ ಮತ್ತು ಗಾಂಗೇಯರು ನೋಡುತ್ತಿದ್ದಂತೆಯೇ ಶತ್ರುಸೇನೆಗಳನ್ನು ತೀಕ್ಷ್ಣವಾದ ವಿಶಿಖಗಳಿಂದ ಹೊಡೆದು ಸಂಹರಿಸುತ್ತಿದ್ದರು. ಓಡಿಹೋಗುತ್ತಿರುವ ದುರ್ಯೋಧನನ ಸೈನ್ಯವನ್ನು ಮಹಾರಥರಾದ ಭೀಷ್ಮ-ದ್ರೋಣರಿಬ್ಬರೂ ತಡೆದು ನಿಲ್ಲಿಸಲು ಶಕ್ಯರಾಗಲಿಲ್ಲ. ಭೀಷ್ಮದ್ರೋಣರು ತಡೆಯುತ್ತಿದ್ದರೂ ಅವರ ಕಣ್ಣೆದುರಿಗೇ ಆ ಸೇನೆಯು ಓಡಿ ಹೋಗುತ್ತಿತ್ತು. ಒಂದೇ ರಥದಲ್ಲಿ ನಿಂತು ಸೌಭದ್ರ-ಶಿನಿಪುಂಗವರು ಸೌಬಲಿಯ ಸೇನೆಗಳನ್ನು ಸಮರದಲ್ಲಿ ಎಲ್ಲಕಡೆ ಓಡಿಸಿದರು. ಆಗ ಸಹಸ್ರಾರು ರಥಗಳು ಒಂದೆಡೆಯಿಂದ ಇನ್ನೊಂದೆಡೆಗೆ ಓಡಿಹೋಗುತ್ತಿದ್ದವು. ಅವರಿಬ್ಬರು ಶೈನ-ಕುರುಪುಂಗವರು ಅಮವಾಸ್ಯೆಯಂದು ನಭಸ್ತಲದಲ್ಲಿ ಒಂದೇಕಡೆ ಸೋಮ-ಸೂರ್ಯರಂತೆ ಶೋಭಿಸುತ್ತಿದ್ದರು.

ಆಗ ಕ್ರುದ್ಧನಾದ ಅರ್ಜುನನಾದರೋ ಕೌರವ ಸೈನ್ಯದ ಮೇಲೆ ಮೋಡಗಳು ಮಳೆಸುರಿಸುವಂತೆ ಶರವರ್ಷಗಳನ್ನು ಸುರಿಸಿದನು. ಪಾರ್ಥನ ಶರಗಳಿಂದ ವಧಿಸಲ್ಪಡುತ್ತಿದ್ದ ಕೌರವ ಸೇನೆಯು ವಿಷಾದ-ಭಯ ಕಂಪಿತಗೊಂಡು ಓಡಿಹೋಯಿತು. ಓಡಿಹೋಗುತ್ತಿರುವವರನ್ನು ನೋಡಿ ದುರ್ಯೋಧನನ ಹಿತೈಷಿಗಳಾದ ಮಹಾರಥ ಭೀಷ್ಮ-ದ್ರೋಣರಿಬ್ಬರೂ ಸಂರಬ್ಧರಾಗಿ ಅವರನ್ನು ತಡೆಯಲು ಪ್ರಯತ್ನಿಸಿದರು. ಆಗ ರಾಜಾ ದುರ್ಯೋಧನನು ಎಚ್ಚೆತ್ತು ಎಲ್ಲಕಡೆ ಹೋಗುತ್ತಿರುವ ಆ

ಸೈನ್ಯವನ್ನು ನಿಲ್ಲಿಸಿದನು. ಎಲ್ಲೆಲ್ಲಿ ದುರ್ಯೋಧನನನ್ನು ಯಾರ್ಯಾರು ನೋಡಿದರೋ ಅಲ್ಲಲ್ಲಿ ಮಹಾರಥ ಕ್ಷತ್ರಿಯರು ಹಿಂದಿರುಗಿದರು. ಅವರು ಹಿಂದಿರುಗುತ್ತಿರುವುದನ್ನು ನೋಡಿಯೇ ಇತರ ಜನರು ಅನ್ಯೋನ್ಯರೊಡನೆ ಸ್ಪರ್ಧಿಸುತ್ತಾ, ನಾಚಿಕೆಗೊಂಡು, ಹಿಂದಿರುಗಿ ಬರುತ್ತಿದ್ದರು. ಹಿಂದಿರುಗಿ ಬರುತ್ತಿರುವವರ ವೇಗವು ಚಂದ್ರೋದಯದ ಹೊತ್ತಿನಲ್ಲಿ ಸಮುದ್ರವು ಭರವುಕ್ಕಿ ಬರುವಂತಿತ್ತು. ಹಿಂದಿರುಗುತ್ತಿದ್ದ ಅವರನ್ನು ನೋಡಿ ರಾಜಾ ಸುಯೋಧನನು ತ್ವರೆಮಾಡಿ ಹೋಗಿ ಭೀಷ್ಮ ಶಾಂತನವನಿಗೆ ಈ ಮಾತುಗಳನ್ನಾಡಿದನು:

> “ಭಾರತ! ಪಿತಾಮಹ! ನಾನು ಹೇಳುವುದನ್ನು ಚೆನ್ನಾಗಿ ಕೇಳು. ನೀನು ಜೀವಿತವಿರುವಾಗ, ಅಸ್ತ್ರವಿದರಲ್ಲಿ ಶ್ರೇಷ್ಠ ದ್ರೋಣನು ಪುತ್ರನೊಡನೆ ಮತ್ತು ಸುಹೃಜ್ಜನರೊಡನೆ, ಮಹೇಷ್ವಾಸ ಕೃಪ ನೀವುಗಳು ಜೀವಿತವಿರುವಾಗಲೇ ಈ ರೀತಿ ಸೇನೆಗಳು ಪಲಾಯನಮಾಡುತ್ತಿವೆಯೆಂದರೆ ಅದು ಅನುರೂಪವೆಂದು ನನಗನ್ನಿಸುವುದಿಲ್ಲ. ಪಾಂಡವರೂ ಯಾವರೀತಿಯಲ್ಲಿಯೂ ಸಂಗ್ರಾಮದಲ್ಲಿ ನಿನ್ನ, ಹಾಗೆಯೇ ದ್ರೋಣ, ದ್ರೌಣಿ, ಕೃಪರಿಗಿಂತ ಅತಿಬಲವಂತರಲ್ಲ. ಸೇನೆಗಳನ್ನು ವಧಿಸುತ್ತಿರುವ ಇವರನ್ನು ಕ್ಷಮಿಸುತ್ತಿರುವೆಯೆಂದರೆ ಪಾಂಡುಸುತರ ಮೇಲೆ ಇನ್ನೂ ನಿನಗೆ ಅನುಗ್ರಹವಿದೆಯೆಂದಾಯಿತು. ಯುದ್ಧದ ಮೊದಲೇ ನೀನು ರಣದಲ್ಲಿ ಪಾಂಡವರು, ಪಾರ್ಷತ ಮತ್ತು ಸಾತ್ಯಕಿಯೊಡನೆ ಯುದ್ಧ ಮಾಡುವುದಿಲ್ಲವೆಂದು ನನಗೆ

ಹೇಳಬೇಕಾಗಿತ್ತು. ನಿನ್ನ ಆ ಮಾತನ್ನು ಕೇಳಿ ಆಗಲೇ ಕರ್ಣನ ಸಹಿತ ನಿನ್ನ, ಆಚಾರ್ಯನ ಕೃಪನ ಜೊತೆಗೂಡಿ ಆಲೋಚಿಸಿ ಕಾರ್ಯವನ್ನು ಕೈಗೊಳ್ಳುತ್ತಿದ್ದೆ. ನಾನು ನಿಮ್ಮಿಬ್ಬರನ್ನೂ ಪರಿತ್ಯಜಿಸುವ ಸ್ಥಿತಿಯಲ್ಲಿಲ್ಲವಾದುದರಿಂದ ನೀವಿಬ್ಬರೂ ಪುರುಷರ್ಷಭರೂ ನಿಮಗೆ ತಕ್ಕುದಾದ ವಿಕ್ರಮದಿಂದ ಯುದ್ಧಮಾಡಬೇಕು."

ಈ ಮಾತನ್ನು ಕೇಳಿ ಭೀಷ್ಮನು ಪುನಃ ಪುನಃ ನಗುತ್ತಾ, ನಂತರ ಕ್ರೋಧದಿಂದ ಕಣ್ಣುಗಳನ್ನು ತಿರುಗಿಸುತ್ತಾ ದುರ್ಯೋಧನನಿಗೆ ಹೇಳಿದನು:

"ರಾಜನ್! ಹಿಂದೆಯೇ ನಾನು ಬಹಳಷ್ಟು ಯುಕ್ತವಾದ ಹಿತವಚನಗಳನ್ನು ನಿನಗೆ ಹೇಳಿದ್ದೇನೆ. ಪಾಂಡವರು ಯುದ್ಧದಲ್ಲಿ ವಾಸವನೊಡನೆ ದೇವತೆಗಳಿಗೂ ಅಜೇಯರು. ವೃದ್ಧನಾದ ನಾನು ಎಷ್ಟು ಮಾಡಲು ಶಕ್ಯನೋ ಅಷ್ಟನ್ನು ಇಂದು ಮಾಡುತ್ತೇನೆ. ಯಥಾಶಕ್ತಿ ಬಾಂಧವರೊಂದಿಗೆ ಇವರನ್ನು ಯಮಲೋಕಕ್ಕೆ ಕಳುಹಿಸುವುದನ್ನು ಮಾಡುತ್ತೇನೆ. ಇಂದು ನೀನು ನೋಡುತ್ತಿರುವಾಗಲೋ ಸರ್ವಲೋಕವೂ ನೋಡುತ್ತಿರಲು ಪಾಂಡುಸುತರನ್ನು ಅವರ ಬಂಧುಗಳು ಮತ್ತು ಸರ್ವಸೈನ್ಯಗಳೊಂದಿಗೆ ತಡೆಯುತ್ತೇನೆ."

ಹೀಗೆ ಭೀಷ್ಮನು ದುರ್ಯೋಧನನಿಗೆ ಹೇಳಲು ಕೌರವರು ಮುದಿತರಾಗಿ

ಜೋರಾಗಿ ಶಂಖಗಳನ್ನು ಊದಿದರು ಮತ್ತು ಭೇರಿಗಳನ್ನು ಮೊಳಗಿಸಿದರು. ಆಗ ಪಾಂಡವರೂ ಕೂಡ ಆ ಮಹಾ ನಿನಾದವನ್ನು ಕೇಳಿ ಶಂಖಗಳನ್ನು ಊದಿದರು ಮತ್ತು ಭೇರಿ-ಮುರಜಗಳನ್ನು ಮೊಳಗಿಸಿದರು.

## ಭೀಷ್ಮನ ಪರಾಕ್ರಮ, ಕೃಷ್ಣನ ಚಕ್ರಧಾರಣೆ

ಆ ದಿನದ ಪೂರ್ವಾಹ್ಣವು ಹೆಚ್ಚಾಗಿ ಕಳೆದುಹೋಗಿರಲು ಜಯವನ್ನು ಪಡೆದ ಮಹಾತ್ಮ ಪಾಂಡವರು ಹೃಷ್ಟರಾಗಿದ್ದರು. ಸರ್ವಧರ್ಮಗಳ ವಿಶೇಷಜ್ಞ ದೇವವ್ರತನು ವೇಗಿ ಅಶ್ವಗಳೊಂದಿಗೆ, ದುರ್ಯೋಧನನ ಮಹಾ ಸೇನೆಯಿಂದ ಎಲ್ಲಕಡೆಗಳಿಂದಲೂ ರಕ್ಷಿತನಾಗಿ ಪಾಂಡವರ ಸೇನೆಯನ್ನು ಎದುರಿಸಿದನು. ಆಗ ಕೌರವರು ಮತ್ತು ಪಾಂಡವರೊಡನೆ ಲೋಮಹರ್ಷಣ ತುಮುಲ ಯುದ್ಧವು ಪ್ರಾರಂಭವಾಯಿತು. ಗಿರಿಗಳು ಸೀಳಿಹೋಗುತ್ತಿವೆಯೋ ಎನ್ನುವಂತೆ ಅಲ್ಲಿ ಧನುಸ್ಸುಗಳ ಠೇಂಕಾರ ಮತ್ತು ಚಪ್ಪಾಳೆಗಳ ಮಹಾ ಶಬ್ಧವುಂಟಾಯಿತು. “ನಿಲ್ಲು!”, “ನಿಂತಿದ್ದೇನೆ!”, “ಇಗೋ ಹೊಡೆಯುತ್ತೇನೆ!”, “ಪಲಾಯನ ಮಾಡು!”, “ಸ್ಥಿರನಾಗಿರು!”, “ಸ್ಥಿರನಾಗಿದ್ದೇನೆ. ಪ್ರಹರಿಸು!” ಎಂಬ ಶಬ್ಧಗಳು ಎಲ್ಲೆಡೆಯಲ್ಲಿ ಕೇಳಿಬಂದವು. ಬಂಗಾರದ ಕವಚಗಳ ಮೇಲೆ, ಕಿರೀಟಗಳೂ ಮತ್ತು ಧ್ವಜಗಳ ಮೇಲೆ ಬೀಳುತ್ತಿದ್ದ ಶಸ್ತ್ರಾಸ್ತ್ರಗಳ ಧ್ವನಿಯು ಪರ್ವತಗಳ ಮೇಲೆ ಬೀಳುವ ಕಲ್ಲುಗಳ ಧ್ವನಿಯನ್ನು ಹೋಲುತ್ತಿತ್ತು. ನೂರಾರು ಸಹಸ್ರಾರು ವಿಭೂಷಿತ ಉತ್ತಮಾಂಗಗಳು ಮತ್ತು ಬಾಹುಗಳು ಭೂಮಿಯ ಮೇಲೆ

ಬಿದ್ದು ಕುಣಿಯುತ್ತಿದ್ದವು. ಕೆಲವೆಡೆ ರುಂಡವನ್ನು ಕಳೆದುಕೊಂಡಿದ್ದರೂ ಪುರುಷಸತ್ತಮರ ಮುಂಡಗಳು ಧನುಸ್ಸುಗಳನ್ನು ಮತ್ತು ಇತರ ಆಯುಧಗಳನ್ನು ಎತ್ತಿ ಹಿಡಿದು ನಿಲ್ಲುತ್ತಿದ್ದವು. ಆಗ ಮಹಾವೇಗದಿಂದ, ಆನೆಗಳ ಅಂಗಾಂಗಗಳೇ ರೌದ್ರಶಿಲೆಗಳಾಗಿ, ಮಾಂಸ-ರಕ್ತಗಳ ಮಿಶ್ರಣದ ಕೆಸರಿನ ರಕ್ತವಾಹಿನೀ ನದಿಯು ಹರಿಯತೊಡಗಿತು. ಶ್ರೇಷ್ಠ ಅಶ್ವ-ನರ-ನಾಗಗಳ ಶರೀರಗಳಿಂದ ಹುಟ್ಟಿದ ಅದು ನರಿ-ಹದ್ದುಗಳಿಗೆ ಸಂತೋಷವನ್ನು ನೀಡುತ್ತಾ ಪರಲೋಕದ ಮುಖವಾಗಿ ಹರಿಯುತ್ತಿತ್ತು. ಧಾರ್ತರಾಷ್ಟ್ರರ ಮತ್ತು ಪಾಂಡವರ ನಡೆದ ಯುದ್ಧದಂತೆ ಹಿಂದೆ ಏನನ್ನೂ ನೋಡಿರಲಿಲ್ಲ ಅಥವಾ ಕೇಳಿರಲಿಲ್ಲ. ಯುದ್ಧದಲ್ಲಿ ಕೆಳಬಿದ್ದಿದ್ದ ಯೋಧರಿಂದ ಮತ್ತು ನೀಲಗಿರಿಶೃಂಗಗಳಂತೆ ಬಿದ್ದಿರುವ ಆನೆಗಳ ಶೃಂಗಗಳಿಂದ ಆವೃತವಾಗಿರುವ ಅಲ್ಲಿ ರಥಗಳು ಚಲಿಸಲೂ ದಾರಿಯಿರಲಿಲ್ಲ. ಅಲ್ಲಿ ಹರಡಿ ಬಿದ್ದಿದ್ದ ಕವಚ, ಬಣ್ಣಬಣ್ಣದ ಧ್ವಜಗಳು ಮತ್ತು ಛತ್ರಗಳಿಂದ ಆ ರಣಸ್ಥಾನವು ಶರತ್ಕಾಲದ ನಭಸ್ತಲದಂತೆ ಶೋಭಿಸುತ್ತಿತ್ತು. ಕೆಲವರು ತಮ್ಮ ಕರುಳುಗಳು ಶರಗಳಿಂದ ಕತ್ತರಿಸಲ್ಪಟ್ಟು ಹೊರಬಂದು ಪೀಡಿತರಾಗಿದ್ದರೂ ಅಭೀತರಾಗಿ ಕೋಪದಿಂದ ಶತ್ರುಗಳನ್ನು ಬೆನ್ನಟ್ಟಿ ಓಡುತ್ತಿದ್ದರು. ರಣದಲ್ಲಿ ಬಿದ್ದಿರುವವರು "ತಾತ! ಭ್ರಾತ! ಸಖ! ಬಂಧೋ! ನನ್ನ ಮಾವ! ನನ್ನನ್ನು ಮೇಲೆತ್ತು! ನನ್ನನ್ನು ಬಿಟ್ಟುಹೋಗಬೇಡ!" ಎಂದು ಕೂಗುತ್ತಿದ್ದರು. ಅನ್ಯರು "ಎದ್ದು ಬಾ!", "ಹೋಗಬೇಡ!". "ಏತಕ್ಕೆ ಹೆದರುತ್ತೀಯೆ?", "ಎಲ್ಲಿಗೆ ಹೋಗುತ್ತಿರುವೆ?" "ಸಮರದಲ್ಲಿ ನಾನು

ಸ್ಥಿತನಾಗಿದ್ದೇನೆ. ಹೆದರದಿರು!” ಎಂದು ಕೂಗುತ್ತಿದ್ದರು.

ಅಲ್ಲಿ ಶಾಂತನವ ಭೀಷ್ಮನು ಕಾರ್ಮುಕವನ್ನು ಮಂಡಲಾಕಾರವಾಗಿರಿಸಿಕೊಂಡು ವಿಷಸರ್ಪೋಪಮವಾದ ಉರಿಯುತ್ತಿರುವ ಬಾಣಗಳನ್ನು ಪ್ರಯೋಗಿಸಿದನು. ಆ ಯತವ್ರತನು ಶರಗಳಿಂದ ದಿಕ್ಕುಗಳೆಲ್ಲವನ್ನೇ ಒಂದೇ ಮಾಡಿ ಪಾಂಡವರ ರಥಗಳನ್ನು ನೋಡಿ ನೋಡಿ ಹೊಡೆದನು. ಅವನು ತನ್ನ ಕೈಚಳಕವನ್ನು ಪ್ರದರ್ಶಿಸುತ್ತಾ ರಥದಲ್ಲಿ ನಿಂತು ನೃತ್ಯವಾಡುತ್ತಿರುವಂತೆ, ಉರಿಯುತ್ತಿರುವ ಕೊಳ್ಳಿಯ ಗಾಲಿಯಂತೆ ಅಲ್ಲಲ್ಲಿ ಕಾಣುತ್ತಿದ್ದನು. ಆ ಶೂರನು ಒಬ್ಬನೇ ಆಗಿದ್ದರೂ ಅವನ ಹಸ್ತಲಾಘವದಿಂದ ಪಾಂಡವ-ಸೃಂಜಯರಿಗೆ ಅವನು ಅನೇಕ ಲಕ್ಷಗಳಂತೆ ಕಾಣುತ್ತಿದ್ದನು. ಭೀಷ್ಮನು ಮಾಯೆಯಿಂದ ತನ್ನನ್ನು ಅನೇಕರೂಪಗಳನ್ನಾಗಿ ಮಾಡಿಕೊಂಡಿರಬಹುದೆಂದು ಅಲ್ಲಿರುವವರು ಭಾವಿಸಿದರು. ಪೂರ್ವದಲ್ಲಿ ಅವನನ್ನು ನೋಡಿದ ಜನರು ಪಶ್ಚಿಮದಲ್ಲಿಯೂ ಅವನನ್ನು ನೋಡುತ್ತಿದ್ದರು. ಉತ್ತರದಲ್ಲಿ ಒಂದು ಕ್ಷಣ ಕಾಣಿಸಿಕೊಂಡರೆ ಪುನಃ ದಕ್ಷಿಣದಲ್ಲಿ ಕಾಣಿಸಿಕೊಳ್ಳುತ್ತಿದ್ದನು. ಹೀಗೆ ಸಮರದಲ್ಲಿ ವೀರ ಗಾಂಗೇಯನು ಕಾಣುತ್ತಿದ್ದನು. ಪಾಂಡವರು ಕೇವಲ ಅವನ ಚಾಪದಿಂದ ಬರುತ್ತಿರುವ ಅನೇಕ ವಿಶಿಖ ಬಾಣಗಳನ್ನು ಕಾಣುತ್ತಿದ್ದರೇ ಹೊರತು ಅವನನ್ನು ನೋಡಲು ಶಕ್ಯರಾಗಿರಲಿಲ್ಲ. ವಾಹಿನಿಯನ್ನು ಸಂಹರಿಸುವ ಕೆಲಸವನ್ನು ಮಾಡುತ್ತಾ ಅಮಾನುಷ ರೂಪದಿಂದ ರಣದಲ್ಲಿ ಸಂಚರಿಸುತ್ತಿರುವ ಭೀಷ್ಮನ ಕುರಿತು ಅಲ್ಲಿದ್ದ ಅನೇಕ ವೀರರು

ಬಹುವಿಧಗಳಲ್ಲಿ ಮಾತನಾಡಿಕೊಳ್ಳುತ್ತಿದ್ದರು:

> “ಪತಂಗಗಳಂತೆ ವಿಧಿಚೋದಿತರಾಗಿ ಸಹಸ್ರರ ವಿನಾಶಕ್ಕಾಗಿ ಸಂಕ್ರುದ್ಧನಾಗಿರುವ ಭೀಷ್ಮನೆಂಬ ಅಗ್ನಿಯಲ್ಲಿ ರಾಜರು ಬೀಳುತ್ತಿದ್ದಾರೆ.”

ಲಘುವೇಧಿ ಭೀಷ್ಮನು ನರ-ನಾಗ-ಅಶ್ವಗಳ ಮೇಲೆ ಬಿಟ್ಟ ಅನೇಕ ಶರಗಳಲ್ಲಿ ಯಾವುದೂ ವ್ಯರ್ಥವಾಗುತ್ತಿರಲಿಲ್ಲ. ಚೆನ್ನಾಗಿ ಚೂಪಾಗಿರುವ ಒಂದೇ ಒಂದು ಪತತ್ರಿ ಬಾಣದಿಂದಲೇ ವಜ್ರದಿಂದ ಉತ್ತಮ ಪರ್ವತವನ್ನು ಹೇಗೋ ಹಾಗೆ ಮುಳ್ಳಿನ ಕವಚಗಳಿಂದ ಕೂಡಿದ ಆನೆಯನ್ನು ಸೀಳಿಬಿಡುತ್ತಿದ್ದನು. ಅವನು ಒಂದೇ ಒಂದು ಸುತೀಕ್ಷ್ಣ ನಾರಾಚದಿಂದ ಕವಚಗಳನ್ನು ಧರಿಸಿದ್ದರೂ ಎರಡು ಅಥವಾ ಮೂರು ಗಜಾರೋಹಿಗಳನ್ನು ಸೇರಿಸಿ ಕೊಲ್ಲುತ್ತಿದ್ದನು. ಯುದ್ಧದಲ್ಲಿ ಯಾರು ಯಾರು ಯಾವಾಗಲಾದರೂ ಭೀಷ್ಮನನ್ನು ಎದುರಿಸಿದರೆಂದರೆ ಮುಹೂರ್ತದಲ್ಲಿಯು ಅವರು ನೆಲದಮೇಲೆ ಬೀಳುತ್ತಿರುವ ದೃಶ್ಯವು ಕಾಣುತ್ತಿತ್ತು. ಹೀಗೆ ಭೀಷ್ಮನ ಅತುಲ ವೀರ್ಯದಿಂದ ವಧಿಸಲ್ಪಟ್ಟ ಧರ್ಮರಾಜನ ಮಹಾಸೇನೆಯು ಸಹಸ್ರಭಾಗಗಳಾಗಿ ಒಡೆದು ಹೋಯಿತು. ಮಹಾತ್ಮ ವಾಸುದೇವ-ಪಾರ್ಥರು ನೋಡುತ್ತಿದ್ದಂತೆಯೇ ಶರವರ್ಷಗಳಿಂದ ತಾಪಿತವಾದ ಮಹಾಸೇನೆಯು ಚೆಲ್ಲಾಪಿಲ್ಲಿಯಾಯಿತು. ಭೀಷ್ಮನ ಬಾಣಗಳಿಂದ ಪೀಡಿತರಾಗಿ ಓಡಿ ಹೋಗುತ್ತಿರುವ ಮಹಾರಥರನ್ನು ನಿಲ್ಲಿಸಲು ಪ್ರಯತ್ನಿಸಿದರೂ ಆ

ವೀರರಿಗೆ ಸಾಧ್ಯವಾಗಲಿಲ್ಲ. ಮಹೇಂದ್ರಸಮನಾದ ವೀರನಿಂದ ವಧಿಸಲ್ಪಡುತ್ತಿರುವ ಆ ಮಹಾಸೇನೆಯು ಒಡೆದುಹೋಯಿತು. ಇಬ್ಬರೂ ಒಟ್ಟಿಗೇ ಓಡಿಹೋಗುತ್ತಿರಲಿಲ್ಲ. ವಧಿಸಲ್ಪಟ್ಟ ನರನಾಗಾಶ್ವಗಳಿಂದ, ಕೆಳಗೆ ಬಿದ್ದ ಧ್ವಜಕೂಬರಗಳಿಂದ ಪಾಂಡುಪುತ್ರರ ಸೇನೆಯು ಹಾಹಾಕಾರಮಾಡಿ ಚೇತನವನ್ನು ಕಳೆದುಕೊಂಡಿತು. ಅಲ್ಲಿ ದೈವಬಲವೇ ಮಾಡುವಂತೆ ತಂದೆಯರು ಪುತ್ರರನ್ನು, ಪುತ್ರರು ತಂದೆಯನ್ನು, ಪ್ರಿಯರು ಸಖರನ್ನು ಸಂಹರಿಸಿದರು. ಪಾಂಡುಪುತ್ರರ ಕೆಲವು ಸೈನಿಕರು ಕವಚವನ್ನು ಕಳಚಿ, ಕೂದಲನ್ನು ಬಿಚ್ಚಿ ಓಡಿಹೋಗುತ್ತಿರುವುದು ಕಂಡುಬಂದಿತು. ಪಾಂಡುಪುತ್ರನ ಸೇನೆಯು ಭ್ರಾಂತಗೊಂಡ ಗೋವುಗಳ ಸಮೂಹದಂತೆ, ಭ್ರಾಂತರಾಗಿ, ಆರ್ತಸ್ವರದಲ್ಲಿ ಕೂಗುತ್ತಾ ರಥಯೂಥಪರು ಓಡಿಹೋಗುತ್ತಿರುವುದು ಕಂಡುಬಂದಿತು.

ಒಡೆದುಹೋಗುತ್ತಿರುವ ಆ ಸೈನ್ಯವನ್ನು ನೋಡಿ ದೇವಕಿನಂದನನು ಉತ್ತಮ ರಥವನ್ನು ಹಿಡಿದು ನಿಲ್ಲಿಸಿ ಪಾರ್ಥ ಬೀಭತ್ಸುವಿಗೆ ಹೇಳಿದನು:

> “ಪಾರ್ಥ! ನೀನು ಬಯಸುತ್ತಿದ್ದ ಸಮಯವು ಈಗ ಬಂದೊದಗಿದೆ. ಮೋಹವೇನಾದರೂ ಇದ್ದರೆ ಅದನ್ನು ಕೊಡವಿ ಹಾಕಿ ಇವನನ್ನು ಹೊಡೆ! ಹಿಂದೆ ನೀನು ರಾಜರ ಸಮಾಗಮದಲ್ಲಿ ಭೀಷ್ಮ-ದ್ರೋಣ ಪ್ರಮುಖರೆಲ್ಲರನ್ನೂ, ಧಾರ್ತರಾಷ್ಟ್ರನ ಸೈನಿಕರನ್ನೂ, ಅವರ

> ಅನುಯಾಯಿಗಳೊಂದಿಗೆ ಯಾರು ನನ್ನೊಂದಿಗೆ ಯುದ್ಧಮಾಡುವರೋ ಅವರನ್ನು ಸಂಹರಿಸುತ್ತೇನೆ ಎಂದು ಹೇಳಿದ್ದೆಯಲ್ಲ ಆ ಮಾತನ್ನು ಸತ್ಯಮಾಡು. ಎಲ್ಲ ಕಡೆಗಳಲ್ಲಿ ಒಡೆದು ಹೋಗುತ್ತಿರುವ ನಿನ್ನ ಸೈನ್ಯವನ್ನು, ಯುಧಿಷ್ಠಿರಬಲದಲ್ಲಿ ಓಡಿಹೋಗುತ್ತಿರುವ ಸರ್ವ ಮಹೀಪಾಲರನ್ನೂ ನೋಡು. ಸಮರದಲ್ಲಿ ಅಂತಕನಂತೆ ಬಾಯಿಕಳೆದುಕೊಂಡಿರುವ ಭೀಷ್ಮನನ್ನು ನೋಡಿ ಸಿಂಹನನ್ನು ನೋಡಿದ ಕ್ಷುದ್ರಮೃಗಗಳಂತೆ ಭಯಾರ್ತರಾಗಿ ನಾಶಹೊಂದುತ್ತಿದ್ದಾರೆ.”

ಹೀಗೆ ಹೇಳಿದ ವಾಸುದೇವನಿಗೆ ಧನಂಜಯನು ಉತ್ತರಿಸಿದನು:

> “ಎಲ್ಲಿ ಈ ಸೇನಾಸಾಗರವನ್ನು ಪ್ರಹರಿಸುತ್ತಿರುವ ಭೀಷ್ಮನಿರುವಲ್ಲಿಗೆ ಕುದುರೆಗಳನ್ನು ಓಡಿಸು!”

ಆಗ ರಜತವರ್ಣದ ಕುದುರೆಗಳನ್ನು ಮಾಧವನು ಸೂರ್ಯನಂತೆ ದುಷ್ಪ್ರೇಕ್ಷನಾಗಿದ್ದ ಭೀಷ್ಮನ ರಥವಿರುವಲ್ಲಿಗೆ ಓಡಿಸಿದನು. ಭೀಷ್ಮನೊಡನೆ ಯುದ್ಧಮಾಡಲು ಬಂದ ಮಹಾಬಾಹು ಪಾರ್ಥನನ್ನು ನೋಡಿ ಯುಧಿಷ್ಠಿರನ ಮಹಾಸೇನೆಯು ಹಿಂದಿರುಗಿತು. ಕುರುಶ್ರೇಷ್ಠ ಭೀಷ್ಮನು ಮತ್ತೆ ಮತ್ತೆ ಸಿಂಹದಂತೆ ಗರ್ಜಿಸುತ್ತಾ ಧನಂಜಯನ ರಥವನ್ನು ಬೇಗನೆ ಶರವರ್ಷಗಳಿಂದ ಮುಚ್ಚಿದನು. ಕ್ಷಣದಲ್ಲಿಯೇ ಆ ಮಹಾ ಶರವರ್ಷದಿಂದ, ಹಯ-ಸಾರಥಿಗಳೊಂದಿಗೆ ಅವನ ರಥವು

ಮುಚ್ಚಿಹೋಗಿ ಕಾಣದಂತಾಯಿತು. ಆದರೆ ಸತ್ತ್ವವಾನ್ ವಾಸುದೇವನು ಸಂಭ್ರಾಂತನಾಗದೇ ಧೈರ್ಯದಲ್ಲಿದ್ದುಕೊಂಡೇ ಭೀಷ್ಮನ ಸಾಯಕಗಳಿಂದ ಹೊಡೆಯಲ್ಪಟ್ಟ ಆ ಅಶ್ವಗಳನ್ನು ನಡೆಸುತ್ತಲೇ ಇದ್ದನು. ಆಗ ಪಾರ್ಥನು ಮೋಡದಂತೆ ಶಬ್ಧಮಾಡುತ್ತಿದ್ದ ದಿವ್ಯ ಧನುಸ್ಸನ್ನು ಹಿಡಿದು ಭೀಷ್ಮನ ಧನುಸ್ಸನ್ನು ಮೂರು ಶರಗಳಿಂದ ತುಂಡುಮಾಡಿ ಬೀಳಿಸಿದನು. ಧನುಸ್ಸು ತುಂಡಾಗಲು ಭೀಷ್ಮನು ನಿಮಿಷಾಂತರದಲ್ಲಿ ಇನ್ನೊಂದು ಮಹಾಧನುಸ್ಸನ್ನು ಸಜ್ಜುಗೊಳಿಸಿದನು. ಮೋಡದಂತೆ ಶಬ್ಧಮಾಡುತ್ತಿದ್ದ ಆ ಧನುಸ್ಸನ್ನು ಎರಡೂ ಕೈಗಳಿಂದ ಸೆಳೆಯಲು ಕ್ರುದ್ಧನಾದ ಅರ್ಜುನನು ಆ ಧನುಸ್ಸನ್ನು ಕೂಡ ತುಂಡರಿಸಿದನು. ಆಗ ಶಂತನುವಿನ ಮಗನು ಅವನ ಹಸ್ತಲಾಘವವನ್ನು ಪ್ರಶಂಸಿಸಿದನು:

> “ಸಾಧು ಪಾರ್ಥ ! ಮಹಾಬಾಹೋ ! ಸಾಧು ! ಭೋ ಪಾಂಡುನಂದನ ! ಧನಂಜಯ ! ಈ ಮಹತ್ಕಾರ್ಯವು ನಿನಗೇ ಯುಕ್ತರೂಪವಾದುದು. ಪುತ್ರ ! ನಿನ್ನ ಈ ಸುದೃಢತೆಗೆ ಮೆಚ್ಚಿದ್ದೇನೆ. ನನ್ನೊಂದಿಗೆ ಯುದ್ಧಮಾಡು !”

ಹೀಗೆ ಸಮರದಲ್ಲಿ ಪಾರ್ಥನನ್ನು ಪ್ರಶಂಸಿಸಿ ಆ ವೀರನು ಬೇರೆ ಮಹಾ ಧನುಸ್ಸನ್ನು ತೆಗೆದುಕೊಂಡು ಪಾರ್ಥನ ರಥದ ಮೇಲೆ ಶರಗಳನ್ನು ಪ್ರಯೋಗಿಸಿದನು. ಲಘುತ್ವದಿಂದ ಮಂಡಲಾಕಾರದಲ್ಲಿ ನಡೆಸಿ ಅವನ ಶರಗಳನ್ನು ವ್ಯರ್ಥಗೊಳಿಸಿ ವಾಸುದೇವನು ಕುದುರೆಗಳನ್ನು ಓಡಿಸುವುದರಲ್ಲಿ ತನಗಿದ್ದ ಪರಮ ಶಕ್ತಿಯನ್ನು ತೋರಿಸಿದನು. ಆಗಲೂ

ಕೂಡ ಸುದೃಢರಾದ ವಾಸುದೇವ-ಧನಂಜಯರನ್ನು ಭೀಷ್ಮನು ಎಲ್ಲ ಅಂಗಾಂಗಳಿಗೆ ನಿಶಿತ ಬಾಣಗಳಿಂದ ಹೊಡೆದು ಗಾಯಗೊಳಿಸಿದನು. ಭೀಷ್ಮನ ಶರಗಳಿಂದ ಗಾಯಗೊಂಡ ಆ ನರವ್ಯಾಘ್ರರಿಬ್ಬರು ಗೂಳಿಗಳ ಕಾದಾಟದಲ್ಲಿ ಕೊಂಬುಗಳಿಂದ ಗೀರಲ್ಪಟ್ಟ ಚಿಹ್ನೆಗಳಿರುವ ಎರಡು ಗೂಳಿಗಳಂತೆ ಶೋಭಿಸಿದರು. ಸಂರಬ್ಧನಾದ ಭೀಷ್ಮನು ಪುನಃ ಸಂಕ್ರುದ್ಧನಾಗಿ ಸನ್ನತಪರ್ವ ಶರಗಳಿಂದ ಇಬ್ಬರೂ ಕೃಷ್ಣರನ್ನೂ ಎಲ್ಲ ಕಡೆಗಳಿಂದ ಮುಚ್ಚಿದನು. ರೋಷಿತನಾಗಿ ಆಗಾಗ ಜೋರಾಗಿ ನಗುತ್ತಾ ಭೀಷ್ಮನು ತೀಕ್ಷ್ಣ ಶರಗಳಿಂದ ವಾರ್ಷ್ಣೇಯನನ್ನು ಹೊಡೆದು ನಡುಗಿಸಿದನು. ಆಗ ಕೃಷ್ಣನು ಭೀಷ್ಮನ ಪರಾಕ್ರಮವನ್ನು ಮತ್ತು ಮಹಾಬಾಹು ಪಾರ್ಥನು ಮೃದುವಾಗಿ ಯುದ್ಧಮಾಡುತ್ತಿರುವುದನ್ನು ನೋಡಿದನು. ಯುದ್ಧದಲ್ಲಿ ಸೇನೆಗಳ ಮಧ್ಯದಲ್ಲಿದ್ದುಕೊಂಡು ಆದಿತ್ಯನಂತೆ ಉರಿಯುತ್ತಾ ಭೀಷ್ಮನು ಎಡೆಬಿಡದೆ ಬಾಣಗಳ ಮಳೆಯನ್ನು ಸುರಿಸುತ್ತಿದ್ದನು. ಯುಗಾಂತದಂತೆ ಯುಧಿಷ್ಠಿರನ ಬಲದಲ್ಲಿದ್ದ ಶ್ರೇಷ್ಠ ಶ್ರೇಷ್ಠ ಪಾಂಡುಪುತ್ರರ ಸೈನಿಕರನ್ನು ನಾಶಮಾಡುತ್ತಿರುವ ಭೀಷ್ಮನನ್ನು ನೋಡಿದನು. ಅದನ್ನು ನೋಡಿ ಸಹಿಸಲಾಗದೇ ಪರವೀರಹ ಅಮೇಯಾತ್ಮ ಭಗವಾನ್ ಕೇಶವನು ಚಿಂತಿಸಿದನು:

“ಯುಧಿಷ್ಠಿರನ ಬಲವು ಇಲ್ಲವಾಗುತ್ತಿದೆ. ಒಂದೇ ಹಗಲಿನಲ್ಲಿ ರಣದಲ್ಲಿ ದೇವದಾನವರನ್ನೂ ನಾಶಮಾಡಬಲ್ಲ ಭೀಷ್ಮನಿಗೆ ಸೇನೆಗಳೊಂದಿಗೆ ಮತ್ತು ಅನುಯಾಯಿಗಳೊಂದಿಗೆ ಯುದ್ಧದಲ್ಲಿ

> ಪಾಂಡುಸುತರು ಯಾವ ಲೆಕ್ಕಕ್ಕೆ? ಮಹಾತ್ಮ ಪಾಂಡವನ ಮಹಾಸೇನೆಯು ಓಡಿಹೋಗುತ್ತಿದೆ. ಭಗ್ನವಾಗಿ ಓಡಿಹೋಗುತ್ತಿರುವ ಸೋಮಕರನ್ನು ನೋಡಿ ಕೌರವರು ರಣದಲ್ಲಿ ಪಿತಾಮಹನಿಗೆ ಹರ್ಷವನ್ನುಂಟುಮಾಡುತ್ತಾ ಬೆನ್ನಟ್ಟಿ ಹೋಗುತ್ತಿದ್ದಾರೆ. ಆದುದರಿಂದ ಇಂದು ಪಾಂಡವರಿಗೋಸ್ಕರ ನಾನು ಕವಚವನ್ನು ಧರಿಸಿ ಭೀಷ್ಮನನ್ನು ಕೊಂದು, ಮಹಾತ್ಮ ಪಾಂಡವರ ಈ ಭಾರವನ್ನು ನಾಶಪಡಿಸುತ್ತೇನೆ. ಅರ್ಜುನನೂ ಕೂಡ ತೀಕ್ಷ್ಣಶರಗಳಿಂದ ವಧಿಸುತ್ತಿರುವ ಭೀಷ್ಮನ ಮೇಲಿನ ಗೌರವದಿಂದ ರಣದಲ್ಲಿ ತನ್ನ ಕರ್ತವ್ಯವನ್ನು ತಿಳಿಯದವನಾಗಿದ್ದಾನೆ.”

ಅವನು ಹಾಗೆ ಯೋಚಿಸುತ್ತಿರಲು ಪಿತಾಮಹನು ಪುನಃ ಸಂಕ್ರುದ್ಧನಾಗಿ ಶರಗಳನ್ನು ಪಾರ್ಥನ ರಥದ ಮೇಲೆ ಪ್ರಯೋಗಿಸಿದನು. ಆ ಬಹಳ ಸಂಖ್ಯೆಯ ಶರಗಳು ದಿಕ್ಕುಗಳೆಲ್ಲವನ್ನು ಮುಚ್ಚಿಬಿಟ್ಟವು. ಆಗ ಅಂತರಿಕ್ಷವಾಗಲೀ, ದಿಕ್ಕುಗಳಾಗಲೀ, ಭೂಮಿಯಾಗಲೀ, ರಶ್ಮಿಮಾಲೀ ಭಾಸ್ಕರನಾಗಲೀ ಕಾಣಲಿಲ್ಲ. ಗಾಳಿಯು ಭಯಂಕರವಾಗಿಯೂ, ಹೊಗೆಯಿಂದ ತುಂಬಿಕೊಂಡು ಬೀಸತೊಡಗಿತು. ಎಲ್ಲ ದಿಕ್ಕುಗಳೂ ಕ್ಷೋಭೆಗೊಂಡವು. ಆಗ ರಾಜ ಶಾಂತನವನ ಆದೇಶದಂತೆ ದ್ರೋಣ, ವಿಕರ್ಣ, ಜಯದ್ರಥ, ಭೂರಿಶ್ರವ, ಕೃತವರ್ಮ, ಕೃಪ, ಶ್ರುತಾಯು, ಅಂಬಷ್ಠಪತಿ, ವಿಂದಾನುವಿಂದರು, ಸುದಕ್ಷಿಣ, ಪ್ರಾಚಿಯವರು, ಸೌವೀರಗಣರೆಲ್ಲರೂ, ವಸಾತಯರು, ಕ್ಷುದ್ರಕಮಾಲರು ತ್ವರೆಮಾಡಿ

ಕಿರೀಟಿಯನ್ನು ಸುತ್ತುವರೆದರು. ಶತ್ರುಪಕ್ಷದ ಲಕ್ಷೋಪಲಕ್ಷ ಅಶ್ವ-ಪದಾತಿ-ರಥಸೈನ್ಯಗಳು ಮತ್ತು ಗಜಸೈನ್ಯಗಳು ಕಿರೀಟಿಯನ್ನು ಘೇರಾಯಿಸಿ ನಿಂತಿರುವುದನ್ನು ಸಾತ್ಯಕಿಯು ದೂರದಿಂದಲೇ ನೋಡಿದನು. ಅರ್ಜುನ ವಾಸುದೇವರು ಪದಾತಿ-ನಾಗ-ಅಶ್ವ-ರಥಗಳಿಂದ ಸುತ್ತುವರೆಯಲ್ಪಟ್ಟಿರುವುದನ್ನು ನೋಡಿ ಶಸ್ತ್ರಭೃತರಲ್ಲಿ ವರಿಷ್ಠನಾದ ಶಿನಿಪ್ರವೀರನು ತಕ್ಷಣವೇ ಅಲ್ಲಿಗೆ ಧಾವಿಸಿ ಬಂದನು.

ಮಹಾಧನುಷ್ಮಂತನಾದ ಶಿನಿಪ್ರವೀರನು ಆ ಸೇನೆಗಳ ಮೇಲೆ ಎರಗಿದನು. ವೃತ್ರನಿಷೂದನನಿಗೆ ವಿಷ್ಣುವು ಹೇಗೆ ಸಹಾಯಮಾಡಿದನೋ ಹಾಗೆ ಅವನು ಅರ್ಜುನನಿಗೆ ಸಹಾಯಮಾಡಿದನು. ನಾಗಾಶ್ವರಥಧ್ವಜಗಳು ಬಹುಸಂಖ್ಯೆಗಳಲ್ಲಿ ನಾಶವಾಗಿರುವುದನ್ನು, ಎಲ್ಲ ಯೋಧರು ಭೀಷ್ಮನಿಂದ ಪೀಡಿತರಾಗಿರುವುದನ್ನು, ಯುಧಿಷ್ಠಿರನ ಸೇನೆಯು ಓಡಿಹೋಗುತ್ತಿರುವುದನ್ನು ನೋಡಿ ಶಿನಿಪ್ರವೀರನು ಹೇಳಿದನು:

> “ಕ್ಷತ್ರಿಯರೇ! ಎಲ್ಲಿಗೆ ಓಡಿಹೋಗುತ್ತಿದ್ದೀರಿ? ಪುರಾಣಗಳಲ್ಲಿ ಹೇಳಿರುವ, ಸತ್ಯವಂತರು ಮುಂದಿಟ್ಟಿರುವ ಕ್ಷತ್ರಿಯ ಧರ್ಮವು ಇದಲ್ಲ. ನೀವು ಮಾಡಿರುವ ಪ್ರತಿಜ್ಞೆಯನ್ನು ಬಿಡಬೇಡಿ. ನಿಮ್ಮ ವೀರಧರ್ಮವನ್ನು ಪರಿಪಾಲಿಸಿ!”

ಆ ಮಾತನ್ನು ವಾಸವಾನುಜನು ಕೇಳಿದನು. ಎಲ್ಲಕಡೆ ಓಡಿಹೋಗುತ್ತಿರುವ ನರೇಂದ್ರಮುಖ್ಯರನ್ನು ನೋಡಿ, ಪಾರ್ಥನ ಮೃದು

ಯುದ್ಧವನ್ನೂ ಯುದ್ಧದಲ್ಲಿ ಎಲ್ಲರನ್ನೂ ವಧಿಸುತ್ತಿರುವ ಭೀಷ್ಮನನ್ನೂ ನೋಡಿದನು. ಆಗ ಅದನ್ನು ಸಹಿಸಲಾಗದೇ ಮಹಾತ್ಮ ಸರ್ವದಶಾರ್ಹರ ಭರ್ತನು ಎಲ್ಲಕಡೆ ಕುರುಗಳನ್ನು ಉರುಳಿಸುತ್ತಿದ್ದ ಯಶಸ್ವಿನಿ ಶೈನೇಯನನ್ನು ಪ್ರಶಂಸಿಸುತ್ತಾ ಹೇಳಿದನು:

> "ಶಿನಿಪ್ರವೀರ! ಯಾರು ಹೋಗುತ್ತಿದ್ದಾರೋ ಅವರು ಹೋಗಲಿ ಬಿಡು. ಸಾತ್ವತ! ಇಲ್ಲಿ ಯಾರು ನಿಂತಿದ್ದಾರೋ ಅವರು ಕೂಡ ಹೋಗಲಿ. ಇಂದು ನಾನು ಭೀಷ್ಮನನ್ನು ರಥದಿಂದ ಮತ್ತು ದ್ರೋಣನನ್ನೂ ಗಣಗಳೊಂದಿಗೆ ಯುದ್ಧದಲ್ಲಿ ಬೀಳಿಸುವುದನ್ನು ನೋಡು! ಕೌರವರಲ್ಲಿ ಯಾವ ರಥನೂ ರಣದಲ್ಲಿ ಇಂದು ಕ್ರುದ್ಧನಾದ ನನ್ನಿಂದ ಪ್ರಾಣವುಳಿಸಿಕೊಂಡು ಹೋಗುವುದಿಲ್ಲ. ಆದುದರಿಂದಲೇ ಈಗ ಉಗ್ರ ಚಕ್ರವನ್ನು ಹಿಡಿದು ಆ ಮಹಾವ್ರತನ ಪ್ರಾಣವನ್ನು ಅಪಹರಿಸಿಬಿಡುತ್ತೇನೆ. ಸಸೈನ್ಯನಾದ ಭೀಷ್ಮನನ್ನು ಮತ್ತು ಹಾಗೆಯೇ ರಥಪ್ರವೀರ ದ್ರೋಣನನ್ನು ಕೊಂದು ಧನಂಜಯ, ರಾಜ, ಭೀಮ ಮತ್ತು ಯಮಳರಿಗೆ ಪ್ರಿಯವನ್ನುಂಟುಮಾಡುತ್ತೇನೆ. ಇಂದು ಸಂತುಷ್ಟನಾಗಿ ಧೃತರಾಷ್ಟ್ರಪುತ್ರರೆಲ್ಲರನ್ನೂ ಮತ್ತು ಅವರ ಪಕ್ಷದಲ್ಲಿರುವು ನರೇಂದ್ರಮುಖ್ಯರನ್ನೂ ಸಂಹರಿಸಿ ರಾಜಾ ಅಜಾತಶತ್ರುವಿಗೆ ರಾಜ್ಯವನ್ನು ದೊರಕಿಸಿಕೊಡುತ್ತೇನೆ."

ಆಗ ವಸುದೇವಪುತ್ರನು ಸೂರ್ಯನ ಪ್ರಭೆಯುಳ್ಳ, ವಜ್ರಸಮ

ಪ್ರಭಾವವನ್ನುಳ್ಳ, ಸುತ್ತಲೂ ಚೂಪಾದ ಅಲಗುಗಳ ಸುನಾಭ ಚಕ್ರವನ್ನು ಕೈಯಲ್ಲಿ ಹಿಡಿದು ಕುದುರೆಗಳ ಲಗಾಮುಗಳನ್ನು ಕೆಳಗಿಟ್ಟು, ರಥದಿಂದ ಕೆಳಕ್ಕೆ ಧುಮುಕಿದನು. ತನ್ನ ಗಂಭೀರ ನಡುಗೆಯಿಂದ ಭೂಮಿಯನ್ನೇ ನಡುಗಿಸುತ್ತಾ, ಬೆಳೆದು ಕೊಬ್ಬಿದ ದರ್ಪದಿಂದ ಕೂಡಿದ ಮದಾಂಧ ಸಲಗವನ್ನು ಸಿಂಹವು ಕೊಲ್ಲಲು ಬರುತ್ತಿರುವಂತೆ ವೇಗದಿಂದ ಕೃಷ್ಣನು ಭೀಷ್ಮನ ಬಳಿ ಬಂದನು. ಸೇನೆಗಳ ಮಧ್ಯದಲ್ಲಿದ್ದ ಭೀಷ್ಮನ ಕಡೆ ಕ್ರುದ್ಧನಾದ ಮಹೇಂದ್ರನ ತಮ್ಮ, ಪ್ರಮಾಥಿಯು ಕ್ರುದ್ಧನಾಗಿ ರಭಸದಿಂದ ಹೋಗುತ್ತಿರಲು ಅವನ ಪೀತಾಂಬರವು ಪಟಟನೆ ಹಾರಾಡುತ್ತಿರಲು ಅವನು ಮಿಂಚಿನಿಂದ ಕೂಡಿದ ಘನ ಮೋಡದಂತೆ ಪ್ರಕಾಶಿಸಿದನು. ಶೌರಿಯ ಆ ಸುದರ್ಶನ ಚಕ್ರವು ಪದ್ಮದಂತೆ ರಾರಾಜಿಸಿತು. ಅವನ ಸುಂದರ ಭುಜವೇ ದಂಟಾಗಿತ್ತು. ನಾರಾಯಣನ ನಾಭಿಯಿಂದ ಹುಟ್ಟಿದ ಉದಯಿಸುತ್ತಿರುವ ಸೂರ್ಯನ ವರ್ಣದ ಪದ್ಮದಂತೆ ರಾರಾಜಿಸುತ್ತಿತ್ತು. ಕೃಷ್ಣನ ಕೋಪವೆಂಬ ಸೂರ್ಯದಿಂದ ಅದು ಅರಳುವಂತಿತ್ತು. ಕ್ಷುರದ ಅಂಚಿನಂತೆ ಆ ಸುಜಾತಪತ್ರದ ತುದಿಗಳು ತೀಕ್ಷ್ಣವಾಗಿದ್ದವು. ಅವನ ದೇಹವೇ ಅದು ಉಗಮಿಸಿದ ಸರೋವರದಂತಿತ್ತು. ನಾರಾಯಣನ ಬಾಹುವೇ ದಂಟಾಗಿದ್ದ ಅದು ರಾರಾಜಿಸುತ್ತಿತ್ತು. ಕ್ರುದ್ಧನಾಗಿ ಚಕ್ರವನ್ನು ಹಿಡಿದು ಗಟ್ಟಿಯಾಗಿ ಗರ್ಜಿಸುತ್ತಾ ಬರುತ್ತಿದ್ದ ಮಹೇಂದ್ರಾವರಜನನ್ನು ನೋಡಿ ಕುರುಗಳ ಕ್ಷಯವಾಗುತ್ತಿದೆಯೆಂದು ಯೋಚಿಸಿ ಸರ್ವ ಭೂತಗಳೂ ಜೋರಾಗಿ ಕೂಗಿದವು. ಚಕ್ರವನ್ನು ಹಿಡಿದ ಆ ವಾಸುದೇವನು ಜೀವಲೋಕಗಳನ್ನೇ



ಮುಗಿಸಿಬಿಡುವನೋ ಎಂಬಂತೆ ತೋರಿದನು. ಸಮಸ್ತ ಭೂತಗಳನ್ನು ಸುಟ್ಟು ಭಸ್ಮಮಾಡಲು ಹುಟ್ಟಿಕೊಂಡಿರುವ ಕಾಲಾಗ್ನಿಯೋ ಎಂಬಂತೆ ಆ ಲೋಕಗುರುವು ಕಾಣಿಸಿದನು.

ಚಕ್ರವನ್ನು ಹಿಡಿದು ತನ್ನಕಡೆ ಓಡಿ ಬರುತ್ತಿದ್ದ ದ್ವಿಪದರಲ್ಲಿ ವರಿಷ್ಠ, ದೇವನನ್ನು ನೋಡಿ ಗಾಭರಿಗೊಳ್ಳದೇ ಕಾರ್ಮುಕಬಾಣಗಳನ್ನು ಹಿಡಿದು ರಥದಲ್ಲಿಯೇ ನಿಂತಿದ್ದ ಶಾಂತನವನು ಹೇಳಿದನು:

> "ಬಾ! ಬಾ! ದೇವೇಶ! ಜಗನ್ನಿವಾಸ! ಶಾಂಙ್ರಚಕ್ರಪಾಣೇ! ನಿನಗೆ ನಮಸ್ಕಾರ! ಲೋಕನಾಥ! ಭೂತಶರಣ್ಯ! ನನ್ನನ್ನು ಹೊಡೆದು ಈ ಉತ್ತಮ ರಥದಿಂದ ಉರುಳಿಸು. ಕೃಷ್ಣ! ಇಂದು ನಿನ್ನಿಂದ ಹತನಾಗಿ ಇಲ್ಲಿ ಮತ್ತು ಪರಲೋಕಗಳಲ್ಲಿ ಶ್ರೇಯಸ್ಸನ್ನು ಪಡೆಯುತ್ತೇನೆ. ಅಂಧಕವೃಷ್ಣಿನಾಥ! ಮೂರು ಲೋಕಗಳ ವೀರ! ನಿನ್ನಿಂದ ಹೊಡೆಯಲ್ಪಟ್ಟು ನಾನು ಸಂಭಾವಿತನಾಗುತ್ತೇನೆ."

ಆಗ ರಥದಿಂದ ಹಾರಿ ತ್ವರೆಮಾಡಿ ಯದುಪ್ರವೀರನನ್ನು ಬೆನ್ನಟ್ಟಿ ಹೋಗಿ ಪಾರ್ಥನು ಹರಿಯ ದಪ್ಪನೆಯ ನೀಳವಾದ ಉತ್ತಮ ಬಾಹುಗಳನ್ನು ತನ್ನ ವಿಶಾಲ ದಪ್ಪ ತೋಳುಗಳಿಂದ ಹಿಡಿದುಕೊಂಡನು. ಹಾಗೆ ಹಿಡಿದುಕೊಂಡಿದ್ದರೂ ತುಂಬಾ ರೋಷಗೊಂಡಿದ್ದ ಆ ಆದಿದೇವ ಯೋಗಿ ವಿಷ್ಣುವು ಅತ್ಯಂತ ವೇಗದಿಂದ - ಬಿರುಗಾಳಿಯಲ್ಲಿ ವೃಕ್ಷವು ಬುಡವನ್ನೂ ಎಳೆದುಕೊಂಡು ಹೋಗುವಂತೆ- ಜಿಷ್ಣುವನ್ನೂ

ಎಳೆದುಕೊಂಡು ಹೋದನು. ಭೀಷ್ಮನ ಸಮೀಪಕ್ಕೆ ತನ್ನನ್ನು ಸೆಳೆದುಕೊಂಡು ಶೀಘ್ರವಾಗಿ ಓಡುತ್ತಿದ್ದ ಅವನ ಪಾದಗಳನ್ನು ಪಾರ್ಥನು ಬಲದಿಂದ ಹಿಡಿದುಕೊಂದನು. ಕಿರೀಟಮಾಲಿಯು ಹಾಗೆ ಬಲವಾಗಿ ಹಿಡಿದುಕೊಂಡು ಅವನನ್ನು ಹತ್ತನೆಯ ಹೆಜ್ಜೆಯಲ್ಲಿ ಹೇಗೋ ತಡೆದನು. ನಿಂತು ತನ್ನ ಕೈಗಳನ್ನು ಹಿಡಿದಿದ್ದ ಕೃಷ್ಣನಿಗೆ ಪ್ರೀತನಾಗಿ ಕಾಂಚನಚಿತ್ರಮಾಲೀ ಅರ್ಜುನನು ಹೇಳಿದನು:

> "ಕೇಶವ! ಕೋಪವನ್ನು ಉಪಸಂಹರಿಸು! ನೀನು ಪಾಂಡವರ ಗತಿ! ಪ್ರತಿಜ್ಞೆಮಾಡಿದಂತೆ ಮಾಡದೇ ಇರುವುದಿಲ್ಲ. ಮಕ್ಕಳ ಮತ್ತು ಸೋದರರ ಆಣೆಯಾಗಿ, ನಿನ್ನೊಡನೆ ಕೂಡಿಕೊಂಡು ಕುರುಗಳ ಅಂತ್ಯವನ್ನು ಮಾಡುತ್ತೇನೆ."

ಆಗ ಅವನ ಪ್ರತಿಜ್ಞೆಯನ್ನೂ ಆಣೆಯನ್ನೂ ಕೇಳಿ ಜನಾರ್ದನನು ಪ್ರೀತಿಮನಸ್ಕನಾದನು. ಕೌರವ ಸತ್ತಮನಿಗೆ ಪ್ರಿಯವಾದುದನ್ನು ಮಾಡುವುದರಲ್ಲಿಯೇ ಸ್ಥಿತನಾಗಿದ್ದ ಅವನು ಚಕ್ರದೊಂದಿಗೆ ಪುನಃ ರಥವನ್ನೇರಿದನು. ಅವನು ಆ ಕಡಿವಾಣಗಳನ್ನು ಪುನಃ ಹಿಡಿದನು. ಆ ವೈರಿಗಳ ಸಂಹಾರಿ ಶೌರಿಯು ಶಂಖವನ್ನು ಹಿಡಿದು ಆ ಪಾಂಚಜನ್ಯದ ಧ್ವನಿಯಿಂದ ದಿಶಗಳನ್ನು ಮೊಳಗಿಸಿದನು. ಕೊರಳಿಸ ಸರ, ತೋಳ್ಬಂದಿಗಳು ಮತ್ತು ಕುಂಡಲಗಳು ಅಸ್ತವ್ಯಸ್ತವಾಗಿದ್ದ, ಬಿಲ್ಲಿನಂತೆ ಬಾಗಿದ್ದ ಕಣ್ಣಿನ ಹುಬ್ಬುಗಳು ಧೂಳಿನಿಂದ ತುಂಬಿದ, ಶಂಖವನ್ನು ಹಿಡಿದ ಆ ವಿಶುದ್ಧದಂಷ್ಟ್ರನನ್ನು ನೋಡಿ ಕುರುಪ್ರವೀರರು ಜೋರಾಗಿ

ಕೂಗಿದರು. ಆಗ ಕುರುಗಳ ಸರ್ವ ಸೇನೆಗಳಲ್ಲಿ ಮೃದಂಗ-ಭೇರಿ-ಪಟಹ-ಪ್ರಣಾದಗಳ, ರಥದ ಗಾಲಿಗಳ ಧ್ವನಿಯೂ, ದುಂದುಭಿಗಳ ಧ್ವನಿಯೂ, ಉಗ್ರ ಸಿಂಹನಾದಗಳೂ ಕೇಳಿಬಂದವು. ಪಾರ್ಥನ ಗಾಂಡೀವದ ಘೋಷವು ಮೋಡಗಳಂತೆ ಮೊಳಗಿ ನಭ-ದಿಶಗಳನ್ನು ತಲುಪಿತು. ಆ ಪಾಂಡವನ ಚಾಪದಿಂದ ಹೊರಬಂದ ವಿಮಲ ಪ್ರಸನ್ನ ಬಾಣಗಳು ಎಲ್ಲ ದಿಶಗಳಲ್ಲಿ ಹಾರಿದವು. ಕೌರವರ ಅಧಿಪನು, ಭೀಷ್ಮ ಮತ್ತು ಭೂರಿಶ್ರವರೊಂದಿಗೆ, ಸೇನೆಯೊಂದಿಗೆ ಆಕಾಶವನ್ನು ಸುಡುವ ಧೂಮಕೇತುವಿನಂತಿರುವ ಬಾಣವನ್ನು ಹಿಡಿದು ಅವನ ಕಡೆ ಮುನ್ನುಗ್ಗಿದನು.

ಅರ್ಜುನನ ಮೇಲೆ ಭೂರಿಶ್ರವನು ಏಳು ಸುವರ್ಣಪುಂಖಗಳ ಭಲ್ಲೆಗಳನ್ನು, ದುರ್ಯೋಧನನು ಉಗ್ರವೇಗದ ತೋಮರವನ್ನು, ಶಲ್ಯನು ಗದೆಯನ್ನು ಮತ್ತು ಶಾಂತನವನು ಶಕ್ತಿಯನ್ನು ಎಸೆದರು. ಭೂರಿಶ್ರವನು ಪ್ರಯೋಗಿಸಿದ್ದ ಆ ಏಳು ಬಾಣಗಳನ್ನು ಅವನು ತನ್ನದೇ ಏಳು ಬಾಣಗಳಿಂದ ತಡೆದನು ಮತ್ತು ಹರಿತ ಬಾಣದಿಂದ ದುರ್ಯೋಧನನ ಬಾಹುಗಳಿಂದ ಪ್ರಯೋಗಿಸಲ್ಪಟ್ಟ ತೋಮರವನ್ನು ತುಂಡರಿಸಿದನು. ಆಗ ಆ ವೀರನು ತನ್ನ ಮೇಲೆ ವಿದ್ಯುತ್ಪ್ರಭೆಯಿಂದ ಬೀಳುತ್ತಿದ್ದ ಶಾಂತನವನು ಪ್ರಯೋಗಿಸಿದ ಶಕ್ತಿಯನ್ನು ಮತ್ತು ಮದ್ರಾಧಿಪನು ಬಿಸುಟ ಗದೆಯನ್ನು ಎರಡು ಬಾಣಗಳಿಂದ ತುಂಡರಿಸಿದನು. ತನ್ನ ಭುಜಗಳೆರಡರಿಂದ ಬಲವನ್ನುಪಯೋಗಿಸಿ ಬಣ್ಣದ, ಅಪ್ರಮೇಯ ಗಾಂಡೀವ ಧನುಸ್ಸನ್ನು ಎಳೆದು ವಿಧಿವತ್ತಾಗಿ ತುಂಬಾ ಘೋರವಾದ

ಅದ್ಭುತ ಮಾಹೇಂದ್ರಾಸ್ತ್ರವನ್ನು ಅಂತರಿಕ್ಷದಲ್ಲಿ ಪ್ರಕಟಗೊಳಿಸಿದನು. ಆ ಮಹಾತ್ಮ, ಮಹಾಧನುಷ್ಮಾನ್ ಕಿರೀಟಮಾಲಿಯು ಆ ಉತ್ತಮ ಅಸ್ತ್ರದ ಮೂಲಕ ನಿರ್ಮಲವಾದ ಅಗ್ನಿಗೆ ಸಮನಾಗಿ ಪ್ರಜ್ವಲಿಸುತಿದ್ದ ಬಾಣಗಳ ಜಾಲದಿಂದ ಸೇನೆಗಳೆಲ್ಲವನ್ನೂ ತಡೆದನು. ಪಾರ್ಥನ ಧನುಸ್ಸಿನಿಂದ ಪ್ರಮುಕ್ತವಾದ ಶಿಲೀಮುಖಗಳು ರಥಗಳು, ಧ್ವಜಾಗ್ರಗಳು, ಧನುಸ್ಸುಗಳು, ಮತ್ತು ಬಾಹುಗಳನ್ನು ಕತ್ತರಿಸಿ, ಶತ್ರುಗಳ ನರೇಂದ್ರ, ನಾಗೇಂದ್ರ, ತುರಂಗಗಳ ದೇಹಗಳನ್ನು ಪ್ರವೇಶಿಸಿದವು. ಪಾರ್ಥನು ಹರಿತವಾದ ಒಂದೇಸಮನೆ ಸುರಿಯುತ್ತಿರುವ ಧಾರೆಗಳಂತಿರುವ ಶರಗಳಿಂದ ದಿಕ್ಕುಗಳನ್ನೂ ಉಪದಿಕ್ಕುಗಳನ್ನೂ ತುಂಬಿಸಿದನು. ಕಿರೀಟಮಾಲಿಯು ಗಾಂಡೀವ ಶಬ್ಧದಿಂದಲೇ ಅವರ ಮನಸ್ಸುಗಳಲ್ಲಿ ವ್ಯಥೆಯನ್ನುಂಟುಮಾಡಿದನು.

ಹೀಗೆ ಘೋರತಮ ಯುದ್ಧವು ನಡೆಯುತ್ತಿರಲು ಶಂಖಸ್ವನಗಳು, ದುಂದುಭಿಗಳ ನಿಸ್ವನಗಳು, ರಣಕೂಗುಗಳು ಉಗ್ರ ಗಾಂಡೀವ ನಿಸ್ವನದಲ್ಲಿ ಅಡಗಿಹೋದವು. ಆಗ ಗಾಂಡೀವಶಬ್ಧವನ್ನು ಕೇಳಿ ವಿರಾಟರಾಜನೇ ಮೊದಲಾದ ನರವೀರರು, ವೀರನಾದ ಪಾಂಚಾಲರಾಜ ದ್ರುಪದನು ದೀನಸತ್ತ್ವರಾಗಿ ಆ ಪ್ರದೇಶಕ್ಕೆ ಆಗಮಿಸಿದರು. ಎಲ್ಲೆಲ್ಲಿ ಗಾಂಡೀವಧನುಸ್ಸಿನ ಶಬ್ಧವು ಕೇಳಿಬರುತ್ತಿತ್ತೋ ಅಲ್ಲಲ್ಲಿ ಕೌರವ ಸೈನಿಕರೆಲ್ಲರೂ ದೈನ್ಯರಾಗಿ ನಿಂತುಬಿಡುತ್ತಿದ್ದರು. ಅವನನ್ನು ಎದುರಿಸಲು ಯಾರೂ ಹೋಗುತ್ತಿರಲಿಲ್ಲ. ಆ ಘೋರವಾದ ನೃಪಸಂಪ್ರಹಾರದಲ್ಲಿ ರಥಗಳು ಸೂತರೊಂದಿಗೆ ಪ್ರವೀರರು

ಹತರಾದರು. ನಾರಾಚಗಳ ಹೊಡೆದಕ್ಕೆ ಸಿಲುಗಿ ಆನೆಗಳು, ಶುಭರುಕ್ಮಕಕ್ಷೆಗಳ ಮಹಾಪತಾಕೆಗಳು ಸುಟ್ಟು ಬಿದ್ದವು. ಕಿರೀಟಿಯಿಂದ ದೇಹ-ಕಾಯಗಳು ಒಡೆದು ಸತ್ತ್ವಗಳನ್ನು ಕಳೆದುಕೊಂಡು ತಕ್ಷಣವೇ ಬೀಳುತ್ತಿದ್ದರು. ಉಗ್ರವೇಗದಿಂದ ಬರುತ್ತಿದ್ದ ಪಾರ್ಥನ ಪತ್ರಿಗಳು ಮತ್ತು ನಿಶಿತ ಶಿತಾಗ್ರಗಳುಳ್ಳ ಭಲ್ಲೆಗಳಿಂದ ದೃಢಹತರಾಗಿ ಬೀಳುತ್ತಿದ್ದರು. ಸೇನಾಮುಖಗಳಲ್ಲಿದ್ದ ದೊಡ್ಡ ದೊಡ್ಡ ಧ್ವಜಗಳೂ, ಯಂತ್ರಗಳೂ, ಸ್ತಂಭಗಳೂ ಮುರಿದು ಬಿದ್ದವು. ಧನಂಜಯನಿಂದ ಹೊಡೆಯಲ್ಪಟ್ಟು ಪಾದತಿಸಮೂಹಗಳು, ರಥಗಳು, ಕುದುರೆಗಳು ಮತ್ತು ನಾಗಗಳು ತಕ್ಷಣವೇ ಸತ್ತ್ವಗಳನ್ನು ಕಳೆದುಕೊಂಡು ಪೆಟ್ಟುಬಿದ್ದ ಸ್ಥಳಗಳನ್ನು ಗಟ್ಟಿಯಾಗಿ ಹಿಡಿದುಕೊಂಡು ಭೂಮಿಯ ಮೇಲೆ ಬೀಳುತ್ತಿದ್ದವು. ಆ ಅಸ್ತ್ರಶ್ರೇಷ್ಠ ಐಂದ್ರದ ಪ್ರಭಾವದಿಂದ ತನು-ದೇಹಗಳು ತುಂಡಾಗಿ ಬಿದ್ದಿದ್ದರು. ಕಿರೀಟಿಯ ನಿಶಿತ ಶರೌಘಗಳಿಂದ ಕ್ಷತರಾದ ಮನುಷ್ಯರ ದೇಹಗಳಿಂದ ಹೊರಟ ರಕ್ತದ ಕೋಡಿಯು ನರದೇಹಗಳೇ ನೊರೆಯಾಗಿರುವ ಒಂದು ಘೋರ ನದಿಯಾಗಿ ಪರಿಣಮಿಸಿತು.

ಅತೀವ ವೇಗದಿಂದ ದೊಡ್ಡಪ್ರವಾಹದಿಂದ ಭೈರವ ರೂಪವನ್ನು ತಾಳಿ ಹರಿಯುತ್ತಿತ್ತು. ಆನೆ-ಕುದುರೆಗಳ ಹೆಣಗಳು ಅದರ ಎರಡು ದಡಗಳಾಗಿದ್ದವು. ನರೇಂದ್ರರ ಮಜ್ಜೆ ಮಾಂಸಗಳ ಮಿಶ್ರಣವು ಆ ರಕ್ತನದಿಯ ಕೆಸರಾಗಿತ್ತು. ಅನೇಕ ರಾಕ್ಷಸ ಭೂತಗಣಗಳು ಅದನ್ನು ಸೇವಿಸುತ್ತಿದ್ದರು. ಕಪೋಲದವರೆಗೂ ಹರಡಿದ್ದ ತಲೆಕೂದಲುಗಳು ಅದರ ದಂಡೆಯಲ್ಲಿರುವ ಹುಲ್ಲುಗಾವಲಿನಂತಿತ್ತು. ಶರೀರಗಳು ಇನ್ನೂ

ಬೀಳುತ್ತಿರಲು ಅದು ನಾನಾ ಕವಲುಗಳಾಗಿ ಹರಿದು ಸಹಸ್ರವಾಹಿನಿಯಂತಿತ್ತು. ಮನುಷ್ಯರ, ಕುದುರೆಗಳ ಮತ್ತು ಆನೆಗಳು ಅದರಲ್ಲಿರುವ ಕಲ್ಲುಹರಳುಗಳಂತಿದ್ದವು. ಆ ಕಂಕಮಾಲೆಯನ್ನು ನಾಯಿಗಳು, ಹದ್ದುಗಳೂ, ತೋಳಗಳೂ, ರಣಹದ್ದುಗಳೂ, ಕಾಗೆಗಲೂ, ಮಾಂಸಾಶಿಗಳ ಸಮೂಹಗಳೂ, ಕಿರುಬಗಳೂ ಸುತ್ತುವರೆದಿದ್ದವು.

ಎಲ್ಲಕಡೆಯಲ್ಲಿಯೂ ವ್ಯಾಪಿಸಿರುವ, ಅರ್ಜುನನ ಬಾಣಸಮೂಗಳಿಂದ ಉತ್ಪನ್ನವಾದ, ಮಾಂಸ-ಮಜ್ಜೆ-ರಕ್ತಗಳಿಂದ ಕೂಡಿ ಹರಿಯುತ್ತಿದ್ದ ಭಯಂಕರವಾದ ಆ ಕ್ರೂರ ಮಹಾವೈತರಣಿಯಂತೆ ತೋರುವ ರಕ್ತನದಿಯನ್ನು ನೋಡಿದರು.  ಆಗ ಚೇದಿ-ಪಾಂಚಾಲ-ಕರೂಷ-ಮತ್ಸ್ಯರು ಮತ್ತು ಪಾರ್ಥರು ಎಲ್ಲರೂ ಒಟ್ಟಿಗೇ ಶತ್ರುಸೇನೆಯ ಧ್ವಜಪತಿಗಳನ್ನು ಮೃಗಗಳನ್ನು ಸಿಂಹಗಳು ತತ್ತರಿಸುವಂತೆ ಸಿಂಹನಾದಗೈದರು. ಅತಿ ಹರ್ಷದಿಂದ ಗಾಂಡೀವ ಧನ್ವಿ ಮತ್ತು ಜನಾರ್ದನರೂ ನಾದಗೈದರು. ಆಗ ರವಿಯು ತನ್ನ ಕಿರಣಗಳನ್ನು ಮುದುಡಿಕೊಳುತ್ತಿರುವುದನ್ನು ನೋಡಿ, ಶಸ್ತ್ರಗಳಿಂದ ಗಾಯಗೊಂಡವರಾಗಿ, ಸುಘೋರವಾದ ಸಹಿಸಲಸಾಧ್ಯವಾದ ಯುಗಾಂತಕಲ್ಪವಾದ ಆ ಐಂದ್ರಾಸ್ತ್ರವನ್ನು ಕಂಡು, ವಿಭಾವಸುವು ಲೋಹಿತರಾಜಿಯುಕ್ತನಾಗಿ ರಾತ್ರಿಯು ಸಂಧಿಗತವಾದುದನ್ನು ನೋಡಿ, ಭೀಷ್ಮ-ದ್ರೋಣ-ದುರ್ಯೋಧನ-ಬಾಹ್ಲೀಕರೊಂದಿಗೆ ಕೌರವರು ಹಿಮ್ಮೆಟ್ಟಿದರು. ಲೋಕಗಳಲ್ಲಿ ಕೀರ್ತಿಯನ್ನೂ ಯಶಸ್ಸನ್ನೂ ಪಡೆದು, ಶತ್ರುಗಳನ್ನೂ ಗೆದ್ದು ಧನಂಜಯನು ನರೇಂದ್ರರು ಮತ್ತು

ಸೋದರರೊಂದಿಗೆ ಕರ್ಮವನ್ನು ಸಮಾಪ್ತಗೊಳಿಸಿ ರಾತ್ರಿ ಶಿಬಿರಕ್ಕೆ ಬಂದನು.

ಆಗ ನಿಶಾಮುಖದಲ್ಲಿ ಕುರುಗಳ ಕಡೆಯಲ್ಲಿ ಘೋರತರ ಗಲಾಟೆಯು ಕೇಳಿಬಂತು: "ಅರ್ಜುನನು ಇಂದು ಹತ್ತು ಸಾವಿರ ರಥಗಳನ್ನೂ ಏಳುನೂರು ಆನೆಗಳನ್ನೂ ಸಂಹರಿಸಿದ್ದಾನೆ. ಪೂರ್ವದವರೂ, ಸೌವೀರಗಣಗಳೆಲ್ಲವೂ, ಕ್ಷುದ್ರಕಮಾಲರೂ ಕೆಳಗುರುಳಿದ್ದಾರೆ. ಧನಂಜಯನು ಮಾಡಿದ ಈ ಮಹಾಕೃತ್ಯವನ್ನು ಬೇರೆ ಯಾರೂ ಮಾಡಲು ಶಕ್ಯರಿಲ್ಲ. ಲೋಕ ಮಹಾರಥ ಕಿರೀಟಿಯು ತನ್ನ ಬಾಹುವೀರ್ಯದಿಂದ ಭೀಷ್ಮನೊಂದಿಗೆ ಶ್ರುತಾಯು, ರಾಜಾ ಅಂಬಷ್ಠಪತಿ, ಹಾಗೆಯೇ ದುರ್ಮರ್ಷಣ-ಚಿತ್ರಸೇನರು, ದ್ರೋಣ, ಕೃಪ, ಸೈಂಧವ, ಬಾಹ್ಲೀಕ, ಭೂರಿಶ್ರವ, ಶಲ್ಯ, ಶಲರನ್ನೂ ಗೆದ್ದಿದ್ದಾನೆ." ಹೀಗೆ ಮಾತನಾಡಿಕೊಳ್ಳುತ್ತಾ ನಿನ್ನವರು ಎಲ್ಲ ಗಣಗಳೂ ಹೆಚ್ಚು ಬೆಳಕು ಕೊಡುತ್ತಿದ್ದ ಸಾವಿರಾರು ಪಂಜುಗಳನ್ನೂ ಪ್ರಕಾಶಮಾನ ದೀವಟಿಗೆಗಳನ್ನೂ ತೆಗೆದುಕೊಂಡು ತಮ್ಮ ತಮ್ಮ ಶಿಬಿರಗಳಿಗೆ ತೆರಳಿದರು. ಕಿರೀಟಿಯ ಬಾಣಗಳ ಪ್ರಹಾರದಿಂದ ತತ್ತರಿಸಿದ್ದ ಯೋಧರೆಲ್ಲರೂ ಕುರುಗಳ ಧ್ವಜಗಳ ನಿವೇಶನಗಳಲ್ಲಿ ವಿಶ್ರಾಂತಿಪಡೆದರು.

# ನಾಲ್ಕನೆಯ ದಿನದ ಯುದ್ಧ

ರಾತ್ರಿಯು ಕಳೆಯಲು ಭಾರತರ ಸೇನೆಗಳ ಪ್ರಮುಖ ಮಹಾತ್ಮ ಭೀಷ್ಮನು ಕೋಪೋದ್ರಿಕ್ತನಾಗಿ ಸಮಗ್ರ ಸೇನೆಗಳಿಂದ ಆವೃತನಾಗಿ ದಾಯಾದಿಗಳೊಡನೆ ಯುದ್ಧಮಾಡಲು ಹೊರಟನು. ಅವನನ್ನು ದ್ರೋಣ, ದುರ್ಯೋಧನ, ಬಾಹ್ಲೀಕ, ಹಾಗೆಯೇ ದುರ್ಮರ್ಷಣ, ಚಿತ್ರಸೇನ, ಜಯದ್ರಥರು ಇತರ ರಾಜರ ಬಲಗಳೊಂದಿಗೆ ಸುತ್ತುವರೆದು ಮುಂದುವರೆದರು. ಆ ಮಹಾತ್ಮ, ಮಹಾರಥ, ತೇಜಸ್ವಿ, ವೀರ್ಯವಂತ ರಾಜಮುಖ್ಯರಿಂದ ಆವೃತನಾದ ಅವನು ದೇವತೆಗಳಿಂದ ಸುತ್ತುವರೆಯಲ್ಪಟ್ಟ ವಜ್ರಪಾಣಿಯಂತೆ ರಾರಾಜಿಸಿದನು. ಆ ಸೇನೆಯ ಮುಂದೆ ಸಾಗುತ್ತಿದ್ದ ಮಹಾಗಜಗಳ ಭುಜಗಳ ಮೇಲೆ ಕೆಂಪುಬಣ್ಣದ, ಹಳದೀ ಬಣ್ಣದ, ಕಪ್ಪು ಬಣ್ಣದ ಮತ್ತು ಬಿಳೀ ಬಣ್ಣದ ಮಹಾ ಪತಾಕೆಗಳು ಹಾರಾಡುತ್ತಿದ್ದವು. ಮಹಾರಥಗಳಿಂದ, ವಾರಣ-ವಾಜಿಗಳಿಂದ ಕೂಡಿದ್ದ ರಾಜ ಶಾಂತನುವಿನ ಆ ಸೇನೆಯು ಮಿಂಚಿನಿಂದ ಕೂಡಿದ ಮೇಘಗಳಂತೆ ಮತ್ತು ಮಳೆಬರುವ ಮುನ್ನ ದಿವಿಯಲ್ಲಿ ಮೋಡಗಳು ತುಂಬಿಕೊಂಡಿರುವಂತೆ ಕಂಡಿತು. ಶಾಂತನವನಿಂದ ರಕ್ಷಿತವಾದ ರಣಾಭಿಮುಖವಾಗಿದ್ದ ಕುರುಗಳ ಉಗ್ರ ಮಹಾಸೇನೆಯು ಸಮುದ್ರವನ್ನು ಸೇರುವ ಗಂಗೆಯಂತೆ ಭಯಂಕರ ವೇಗದಲ್ಲಿ ಅರ್ಜುನನ ಮೇಲೆ ಎರಗಿತು. ನಾನಾ ವಿಧದ ಗೂಢಸಾರಗಳನ್ನು ಹೊಂದಿದ್ದ, ಗಜ-ಅಶ್ವ-ಪದಾತಿ-ರಥಪಕ್ಷಗಳಿಂದ ಕೂಡಿದ್ದ ಮಹಾ ಮೇಘ ಸಮನಾಗಿದ್ದ ಆ ವ್ಯೂಹವನ್ನು ದೂರದಿಂದ ಕಪಿರಾಜಕೇತುವು ನೋಡಿದನು. ಆ ಕೇತುಮತ ನರರ್ಷಭ ಶ್ವೇತಹಯ

ವೀರ ಮಹಾತ್ಮನು ಸೈನ್ಯಮುಖದಲ್ಲಿದ್ದುಕೊಂಡು ತನ್ನವರೆಲ್ಲರಿಂದ ಆವೃತನಾಗಿ ಸೇನೆಗಳ ವಧೆಗೆಂದು ಹೊರಟನು.
ಧಾರ್ತರಾಷ್ಟ್ರರೊಂದಿಗೆ ಕೌರವೇಯರು ಉತ್ತಮ ಸೂಪಸ್ಕರಗಳಿಂದ ಕೂಡಿದ ಯದುಗಳ ಋಷಭನೊಂದಿಗಿರುವ ಕಪಿಧ್ವಜನನ್ನು ರಣದಲ್ಲಿ ನೋಡಿ ವಿಷಾದಿತರಾದರು.

ಆಯುಧಗಳನ್ನು ಎತ್ತಿಹಿಡಿದಿದ್ದ ಲೋಕಮಹಾರಥ ಕಿರೀಟಿಯಿಂದ ರಕ್ಷಿತವಾಗಿ ಮುಂದುವರೆಯುತ್ತಿದ್ದ ಆ ವ್ಯೂಹವು ನಾಲ್ಕೂ ಕಡೆಗಳಲ್ಲಿ ನಾಲ್ಕು ಸಾವಿರ ಆನೆಗಳನ್ನು ಹೊಂದಿತ್ತು. ಹಿಂದಿನ ದಿನ ಧರ್ಮರಾಜನು ಹೇಗೆ ವ್ಯೂಹವನ್ನು ರಚಿಸಿದ್ದನೋ ಅದರಂತೆಯೇ ಆಯಾ ಸ್ಥಳಗಳಲ್ಲಿ ಚೇದಿಮುಖ್ಯರೊಂದಿಗೆ ಪಾಂಚಾಲಮುಖ್ಯರು ನಿಂತಿದ್ದರು. ಆಗ ಮಹಾವೇಗದಿಂದ ಕೂಡಿ ಸಹಸ್ರಾರು ಭೇರಿಗಳು ಮೊಳಗಿದವು. ಎಲ್ಲ ಸೇನೆಗಳಲ್ಲಿ ಸಿಂಹನಾದಗಳೊಂದಿಗೆ ಶಂಖಸ್ವನ, ದುಂದುಭಿ ನಿಸ್ವನಗಳು ಕೇಳಿಬಂದವು. ಆಗ ವೀರರ ಬಾಣಗಳ ಮಹಾಸ್ವನಗಳು ಅವರ ಧನುಸ್ಸಿನ ಟೇಂಕಾರಗಳು ಸೇರಿ, ಕ್ಷಣದಲ್ಲಿಯೇ ಭೇರಿ-ಪಣವ-ಪ್ರಣಾದಗಳ ಮತ್ತು ಶಂಖಗಳ ಮಹಾಸ್ವನಗಳು ಕೇಳಿಬಂದವು. ಶಂಖಧ್ವನಿಯು ಅಂತರಿಕ್ಷದಲ್ಲಿ ಆವೃತವಾದುದನ್ನು, ಭೂಮಿಯಿಂದ ಮೇಲೆದ್ದ ಧೂಳಿನ ಜಾಲವು ಉಂಟಾದುದನ್ನು ಬೆಳಕನ್ನು ಮಹಾ ಕತ್ತಲೆಯು ಆವರಿಸಿದುದನ್ನು ನೋಡಿ ವೀರರು ತಕ್ಷಣವೇ ಮೇಲೆರಗಿದರು. ರಥಿಕನಿಂದ ಹೊಡೆಯಲ್ಪಟ್ಟ ರಥಿಕನು ಸೂತ, ಕುದುರೆ, ಧ್ವಜಗಳೊಂದಿಗೆ ಕೆಳಗುರುಳಿದನು. ಆನೆಗಳು

ಆನೆಗಳಿಂದ ಹೊಡೆಯಲ್ಪಟ್ಟು ಮತ್ತು ಪದಾತಿಗಳು ಪದಾತಿಗಳಿಂದ ಹೊಡೆಯಲ್ಪಟ್ಟು ಬಿದ್ದರು. ಅಶ್ವವೃಂದಗಳು ಅಶ್ವವೃಂದಗಳಿಂದ ಆವರ್ತನ-ಪ್ರತ್ಯಾವರ್ತನಗಳಿಂದ ನಡೆದು ಬಾಣಗಳಿಂದ ಸಾಯುತ್ತಿದ್ದ, ಪ್ರಾಸ-ಖಡ್ಗಗಳಿಂದ ಸಂಹರಿಸಲ್ಪಡುತ್ತಿದ್ದ ದೃಶ್ಯವು ಅದ್ಭುತವಾಗಿತ್ತು. ವೀರರ ಸುವರ್ಣ ತಾರಾಗಣಗಳಿಂದ ವಿಭೂಷಿತವಾದ ಕತ್ತಿ ಮತ್ತು ಗುರಾಣಿಗಳು, ಪರಶುಗಳು, ಪ್ರಾಸಗಳು, ಖಡ್ಗಗಳು ತುಂಡಾಗಿ ಭೂಮಿಯ ಮೇಲೆ ಬಿದ್ದಿದ್ದವು. ಮದಿಸಿದ ಆನೆಗಳ ಕೋರೆದಾಡೆಗಳ ಮತ್ತು ಸೊಂಡಿಲುಗಳ ಪ್ರಹಾರದಿಂದಾಗಿ ರಥಿಗಳು ಸೂತರೊಂದಿಗೆ ಬಿದ್ದರು. ಗಜರ್ಷಭರೂ ಕೂಡ ರಥರ್ಷಭರ ಬಾಣಗಳಿಂದ ಹತರಾಗಿ ಭೂಮಿಯ ಮೇಲೆ ಬಿದ್ದರು. ಆನೆಗಳ ಸಮೂಹಗಳು ವೇಗದಿಂದ ಬಂದು ಕುದುರೆಸವಾರರನ್ನು ಕೆಡವಿ ನೆಲದ ಮೇಲೆ ಬಿದ್ದ ಮನುಷ್ಯರ ಆಕ್ರಂದನ ಮತ್ತು ದೇಹದ ಕೆಳಗೆ ಕೋರೆದಾಡೆಗಳಿಂದ ಆಘಾತಗೊಂಡ ಕುದುರೆಸವಾರರು ಮತ್ತು ಪದಾತಿಗಳ ಆರ್ತಸ್ವರವು ಕೇಳಿಬರುತ್ತಿತ್ತು. ಕುದುರೆ ಸವಾರರು ಮತ್ತು ಪದಾತಿಗಳ ಆ ಮಹಾಭಯದಿಂದ ನಾಗಾಶ್ವರಥಿಗರು ಸಂಭ್ರಾಂತರಾದರು.

ಆಗ ಭೀಷ್ಮನು ಮಹಾರಥರಿಂದ ಪರಿವಾರಿತನಾದ ಕಪಿರಾಜಕೇತುವನ್ನು ನೋಡಿದನು. ಐದು ತಾಳೇಮರಗಳಷ್ಟು ಎತ್ತರದ ತಾಲವೃಕ್ಷ ಚಿಹ್ನೆಯ ಧ್ವಜದ, ವೇಗಿಗಳಾದ ವೀರ ಕುದುರೆಗಳನ್ನು ಕಟ್ಟಿದ್ದ ರಥವುಳ್ಳ ಶಾಂತನವನು ಮಹಾ ಅಸ್ತ್ರಗಳನ್ನು ಹೊಂದಿದ್ದ, ಪ್ರದೀಪ್ತನಾಗಿದ್ದ ಕಿರೀಟಿಯನ್ನು ಎದುರಿಸಿದನು. ಹಾಗೆಯೇ

ಶಕ್ರಪ್ರತಿಮಾನಕಲ್ಪನಾದ ಇಂದ್ರಾತ್ಮಜನನ್ನು ದ್ರೋಣಪ್ರಮುಖರಾದ ಕೃಪ, ಶಲ್ಯ, ವಿವಂಶತಿ, ದುರ್ಯೋಧನ ಮತ್ತು ಸೌಮದತ್ತಿಯರು ಎದುರಿಸಿದರು. ಆಗ ರಥಾನೀಕದ ಎದುರಿನಿಂದ ಸರ್ವಾಸ್ತ್ರವಿದು, ಕಾಂಚನ-ಬಣ್ಣದ ಕವಚಗಳನ್ನು ತೊಟ್ಟಿದ್ದ ಶೂರ ಅರ್ಜುನನ ಸುತ ಅಭಿಮನ್ಯುವು ವೇಗದಿಂದ ಅಲ್ಲಿಗೆ ಬಂದೊದಗಿದನು. ಆ ಮಹಾರಥರ ಮಹಾಸ್ತ್ರಗಳನ್ನು ನಿರಸನಗೊಳಿಸಿ ಕಾರ್ಷ್ಣಿಯು ಸಹಿಸಲಸಾಧ್ಯ ಕರ್ಮವನ್ನು ಮಾಡಿ ತೋರಿಸಿ, ಮಹಾಮತ್ರದಿಂದ ಅರ್ಪಿಸಿದ ಆಹುತಿಯನ್ನು ತೆಗೆದುಕೊಂಡ ಭಗವಾನ್ ಅಗ್ನಿಯಂತೆ ಪ್ರಜ್ವಲಿಸಿದನು.

ಆಗ ಬೇಗನೇ ರಕ್ತದ ನೀರು ಮತ್ತು ನೊರೆಗಳ ನದಿಯನ್ನು ರಚಿಸಿ ರಿಪುಗಳನ್ನು ಯಮನಲ್ಲಿಗೆ ಕಳುಹಿಸಿ ಅದೀನ ಸತ್ತ್ವ ಭೀಷ್ಮನು ಸೌಭದ್ರನನ್ನು ಅತಿಕ್ರಮಿಸಿ ಮಹಾರಥ ಪಾರ್ಥನಲ್ಲಿಗೆ ಹೋದನು. ಆಗ ಅವನ ಅದ್ಭುತ ದರ್ಶನದಿಂದ ನಗುತ್ತಾ ಕಿರೀಟಮಾಲಿಯು ಗಾಂಡೀವವನ್ನು ಮಹಾಸ್ವನದಿಂದ ಟೇಂಕರಿಸಿ ವಿಪಾಠಜಾಲವೆಂಬ ಮಹಾಸ್ತ್ರಜಾಲದಿಂದ ನಾಶಮಾಡತೊಡಗಿದನು. ಸರ್ವಧನುರ್ಧರರಲ್ಲಿ ಉತ್ತಮನಾದ ಮಹಾತ್ಮ ಭೀಷ್ಮನ ಮೇಲೆ ಕಪಿರಾಜಕೇತುವು ಬೇಗನೆ ವಿಮಲ ಭಲ್ಲಗಳ ಶರಜಾಲಗಳ ಮಳೆಯನ್ನು ಸುರಿಸಿದನು. ಈ ರೀತಿ ಸತ್ಪುರುಷೋತ್ತಮರಾದ ಭೀಷ್ಮ-ಧನಂಜಯರಿಬ್ಬರ ಧನುಸ್ಸುಗಳ ಭಯಂಕರ ನಿನಾದವನ್ನೂ, ದೈನ್ಯರಹಿತವಾದ ಆ ದ್ವೈರಥಯುದ್ಧವನ್ನು ಕುರುಸೃಂಜಯರೂ ಲೋಕವೂ ನೋಡಿತು.

## ಅಭಿಮನ್ಯುವಿನಿಂದ ಸಾಮ್ಯಮನಿಪುತ್ರ ವಧೆ

ದ್ರೌಣಿ, ಭೂರಿಶ್ರವ, ಶಲ್ಯ, ಚಿತ್ರಸೇನ, ಮತ್ತು ಸಾಮ್ಯಮನಿಯ ಮಗ ಇವರು ಸೌಭದ್ರನನ್ನು ಎದುರಿಸಿ ಯುದ್ಧಮಾಡಿದರು. ಆನೆಗಳಂತಿರುವ ಆ ಐದು ಮನುಜವ್ಯಾಘ್ರರ ಮಧ್ಯದಲ್ಲಿ ಒಂಟಿ ಸಿಂಹದ ಮರಿಯಂತೆ ಅವನು ಅತಿತೇಜಸ್ಸಿನಿಂದಿರುವುದನ್ನು ಜನರು ನೋಡಿದರು. ಕಾರ್ಷ್ಣಿಯು ಶೌರ್ಯದಲ್ಲಿಯಾಗಲೀ ಪರಾಕ್ರಮದಲ್ಲಿಯಾಗಲೀ, ಅಸ್ತ್ರಗಳಲ್ಲಿಯೂ ಲಾಘವದಲ್ಲಿಯೂ ಯಾರೂ ಅಲಕ್ಷಿಸುವ ಹಾಗಿರಲಿಲ್ಲ. ಯುದ್ಧದಲ್ಲಿ ತನ್ನ ಮಗ ಅರಿಂದಮನ ವಿಕ್ರಮವನ್ನು ನೋಡಿ ಪಾರ್ಥನು ಸಿಂಹನಾದಗೈದನು. ಆ ಸೈನ್ಯವನ್ನು ಪೀಡಿಸುತ್ತಿದ್ದ ಅಭಿಮನ್ಯುವನ್ನು ನೋಡಿ ಕೌರವರು ಎಲ್ಲ ಕಡೆಗಳಿಂದ ಅವನನ್ನು ಸುತ್ತುವರೆದರು. ಆಗ ಸೌಭದ್ರನು ದೀನಶತ್ರುಗಳಾದ ಧ್ವಜವುಳ್ಳ ಧಾರ್ತರಾಷ್ಟ್ರರೊಡನೆ ದೀನನಾಗದೆ ತೇಜಸ್ಸು ಮತ್ತು ಬಲಗಳಿಂದ ಪ್ರತಿಯುದ್ಧಮಾಡಿದನು. ಸದಾ ಎಳೆದಿದ್ದಿರುವ ಅವನ ಆದಿತ್ಯ ಸಮ ಪ್ರಭೆಯುಳ್ಳ ಮಹಾ ಚಾಪವನ್ನು ಯುದ್ಧಮಾಡುತ್ತಿದ್ದ ಶತ್ರುಗಳು ನೋಡಿದರು. ಅವನು ದ್ರೌಣಿಯನ್ನು ಒಂದೇ ಇಷುಣದಿಂದ ಹೊಡೆದು ಶಲ್ಯನನ್ನು ಐದರಿಂದ ಮತ್ತು ಸಾಮ್ಯಮನಿಯ ಧ್ವಜವನ್ನು ಎಂಟು ಬಾಣಗಳಿಂದ ಹೊಡೆದನು. ಸೌಮದತ್ತಿಯು ಪ್ರಯೋಗಿಸಿದ್ದ ರುಕ್ಮದಂಡದ ಮಹಾಶಕ್ತಿಯನ್ನು ಸರ್ಪದಂತೆ ಹರಿತವಾಗಿದ್ದ ಪತ್ರಿಣದಿಂದ ತುಂಡರಿಸಿದನು. ಅರ್ಜುನದಾಯಾದನು ಶಲ್ಯನು ನೋಡುತ್ತಿದ್ದಂತೆಯೇ ನೂರಾರು ಶರಗಳನ್ನು ಪ್ರಯೋಗಿಸಿ ಸಮರದಲ್ಲಿ ಅವನ ಕುದುರೆಗಳನ್ನು

ಸಂಹರಿಸಿದನು.

ಆಗ ಸಂರಬ್ಧರಾದ ಭೂರಿಶ್ರವ, ಶಲ್ಯ, ದ್ರೌಣಿ, ಸಾಮ್ಯಮನಿ ಮತ್ತು ಶಲರು ಕಾರ್ಷ್ಣಿಯ ಬಾಹುಬಲದಡಿಯಲ್ಲಿ ಯುದ್ಧಮಾಡಲಾರದವರಂತಾದರು. ಆಗ ದುರ್ಯೋಧನನಿಂದ ಪ್ರಚೋದಿತರಾದ ತ್ರಿಗರ್ತರು ಮತ್ತು ಮದ್ರರು ಕೇಕಯರೊಂದಿಗೆ, ಒಟ್ಟು ಇಪ್ಪತ್ತೈದು ಸಾವಿರ ಧನುವೇದವಿದು ಮುಖ್ಯರು ಯುದ್ಧದಲ್ಲಿ ಶತ್ರುಗಳಿಗೆ ಅಜೇಯರಾದವರು ಪುತ್ರನೊಂದಿಗೆ ಕಿರೀಟಿಯನ್ನು ಸಂಹರಿಸಲು ಸುತ್ತುವರೆದರು. ಅಲ್ಲಿ ತಂದೆ ಮತ್ತು ಮಗ ಇಬ್ಬರು ರಥರ್ಷಭರೂ ಸುತ್ತುವರೆಯಲ್ಪಟ್ಟಿರುವುದನ್ನು ಸೇನಾಪತಿ ಧೃಷ್ಟದ್ಯುಮ್ನನು ನೋಡಿದನು. ಆ ಪರಂತಪನು ಅನೇಕ ಸಹಸ್ರ ವಾರಣ-ರಥ ಸೇನೆಗಳಿಂದ ಆವೃತನಾಗಿ, ಸಹಸ್ರಾರು ಕುದುರೆಗಳ ಮತ್ತು ಪದಾತಿಸೇನೆಗಳಿಂದ ಆವೃತನಾಗಿ, ಸಂಕ್ರುದ್ಧನಾಗಿ ಧನುಸ್ಸನ್ನು ಟೇಂಕರಿಸುತ್ತಾ, ಸೇನೆಯನ್ನು ಹುರುದುಂಬಿಸುತ್ತಾ ಮದ್ರರು ಮತ್ತು ಕೇಕಯ ಸೇನೆಗಳಿರುವಲ್ಲಿಗೆ ಬಂದನು. ಆ ಕೀರ್ತಿಮತ ದೃಢಧನ್ವಿಯಿಂದ ರಕ್ಷಿತಗೊಂಡು ಯುದ್ಧ ಮಾಡುತ್ತಿದ್ದ ರಥನಾಗಾಶ್ವಗಳಿಂದ ಕೂಡಿದ್ದ ಸೇನೆಯು ಶೋಭಿಸಿತು. ಅರ್ಜುನನ ಹತ್ತಿರ ಬರುತ್ತಲೇ ಪಾಂಚಾಲ್ಯನು ಶಾರದ್ವತನ ಜತ್ರುಪ್ರದೇಶಕ್ಕೆ ಗುರಿಯಿಟ್ಟು ಮೂರು ಬಾಣಗಳನ್ನು ಹೊಡೆದನು. ಆಗ ಅವನು ಹತ್ತು ಬಾಣಗಳಿಂದ ಹತ್ತು ಮದ್ರಕರನ್ನು ಸಂಹರಿಸಿ ಹೃಷ್ಟನಾಗಿ ಒಂದೇ ಭಲ್ಲದಿಂದ ಕೃತವರ್ಮನ ಕುದುರೆಯನ್ನು ಹೊಡೆದನು. ಪರಂತಪ

ಮಹಾತ್ಮನು ಪೌರವನ ಮಗ ದಮನನನ್ನೂ ವಿಪುಲಾಗ್ರವಾದ ನಾರಾಚದಿಂದ ಸಂಹರಿಸಿದನು.

ಆಗ ಸಾಮ್ಯಮನಿಯ ಮಗನು ಯುದ್ಧ ದುರ್ಮದ ಪಾಂಚಾಲ್ಯನನ್ನು ಮೂವತ್ತು ಬಾಣಗಳಿಂದ ಮತ್ತು ಅವನ ಸಾರಥಿಯನ್ನು ಹತ್ತರಿಂದ ಹೊಡೆದನು. ಅತಿಯಾಗಿ ಗಾಯಗೊಂಡ ಮಹೇಷ್ವಾಸನು ಕಟಬಾಯಿಯನ್ನು ನೆಕ್ಕುತ್ತಾ ತಕ್ಷಣವೇ ತೀಕ್ಷ್ಣ ಭಲ್ಲದಿಂದ ಅವನ ಕಾರ್ಮುಕವನ್ನು ಕತ್ತರಿಸಿದನು. ಮರುಕ್ಷಣದಲ್ಲಿಯೇ ಇಪ್ಪತ್ತೈದು ಬಾಣಗಳಿಂದ ಅವನನ್ನು ಹೊಡೆದು ಅವನ ಕುದುರೆಗಳನ್ನೂ, ಪಕ್ಷರಕ್ಷಕರ ಸಾರಥಿಗಳಿಬ್ಬರನ್ನೂ ಸಂಹರಿಸಿದನು. ಕುದುರೆಗಳು ಹತರಾದ ರಥದ ಮೇಲೆಯೇ ನಿಂತುಕೊಂಡು ಮಹಾತ್ಮ ಸಾಮ್ಯಮನಿಯ ಮಗನು ಪಾಂಚಾಲ್ಯನ ಮಗನನ್ನು ನೋಡಿದನು. ತಕ್ಷಣವೇ ಮಹಾಘೋರ ಲೋಹಮಯ ಖಡ್ಗವನ್ನು ಕೈಯಲ್ಲಿ ಹಿಡಿದು ರಥದಿಂದ ಧುಮುಕಿ ಕಾಲ್ನಡುಗೆಯಲ್ಲಿಯೇ ದ್ರುಪದಾತ್ಮಜನ ಕಡೆ ಧಾವಿಸಿದನು. ವೇಗವಾಗಿ ಬರುತ್ತಿದ್ದ ದೊಡ್ಡ ಜಲಪ್ರವಾಹದಂತೆ ಮತ್ತು ಆಕಾಶದಿಂದ ಬೀಳುತ್ತಿದ್ದ ಸರ್ಪದಂತೆ ತೋರುತ್ತಿದ್ದ ಅವನು ಖಡ್ಗವನ್ನು ತಿರುಗಿಸುತ್ತ ಅಂತಕನಂತೆ ತೋರುತ್ತಿದ್ದನು. ಶಸ್ತ್ರದೊಂದಿಗೆ ಸೂರ್ಯನಂತೆ ಬೆಳಗುತ್ತಿರುವ ಆ ಮತ್ತವಾರಣವಿಕ್ರಮನನ್ನು ಅಲ್ಲಿ ಪಾಂಡವರೂ ಪಾರ್ಷತ ಧೃಷ್ಟದ್ಯುಮ್ನನೂ ನೋಡಿದರು. ಹರಿತ ಖಡ್ಗವನ್ನೂ, ಬಾಣವನ್ನು ತಡೆಯುವ ಗುರಾಣಿಯನ್ನೂ ಹಿಡಿದು ಉರಿಯುತ್ತಾ ಬಾಣವೇಗದಿಂದ ರಥದಕಡೆ ಓಡಿಬರುತ್ತಿದ್ದ ಅವನನ್ನು

ರಥದ ಬಳಿ ಬಂದ ಕೂಡಲೇ ಸೇನಾಪತಿಯು ಕ್ರುದ್ಧನಾಗಿ ಗದೆಯಿಂದ ಅವನ ಶಿರವನ್ನು ಒಡೆದನು. ಹೊಡೆತಕ್ಕೆ ಸಿಕ್ಕ ಅವನ ಪ್ರಭೆಯುಳ್ಳ ಖಡ್ಗವೂ ಗುರಾಣಿಯೂ ವೇಗದಿಂದ ಅವನ ಕೈಯಿಂದ ಬೀಳಲು ಅವನೂ ಭೂಮಿಯ ಮೇಲೆ ಬಿದ್ದನು. ಗದಾಗ್ರದಿಂದ ಅವನನ್ನು ಕೊಂದು ಭೀಮವಿಕ್ರಮ ಮಹಾತ್ಮ ಪಾಂಚಾಲರಾಜಪುತ್ರನು ಪರಮ ಯಶಸ್ಸನ್ನು ಪಡೆದನು.

ಆ ಮಹೇಷ್ವಾಸ ಮಹಾರಥ ರಾಜಪುತ್ರನು ಹತನಾಗಲು ಕೌರವ ಸೈನ್ಯದಲ್ಲಿ ಮಹಾ ಹಾಹಾಕಾರವುಂಟಾಯಿತು. ಆಗ ಮಗನು ನಿಹತನಾದುದನ್ನು ನೋಡಿ ಕ್ರುದ್ಧನಾದ ಸಾಮ್ಯಮನಿಯು ವೇಗದಿಂದ ಯುದ್ಧದುರ್ಮದ ಪಾಂಚಾಲ್ಯನ್ನು ಆಕ್ರಮಿಸಿದನು. ಅಲ್ಲಿ ಸಮರದಲ್ಲಿ ಅವರಿಬ್ಬರು ರಥಶ್ರೇಷ್ಠ ವೀರರೂ ಒಟ್ಟಿಗೇ ಯುದ್ಧಮಾಡುವುದನ್ನು ಕುರುಗಳ ಮತ್ತು ಪಾಂಡವರ ಎಲ್ಲ ರಾಜರು ನೋಡಿದರು. ಆಗ ಕ್ರುದ್ಧನಾದ ಪರವೀರಹ ಸಾಮ್ಯಮನಿಯು ಮಹಾಗಜವನ್ನು ಅಂಕುಶದಿಂದ ತಿವಿಯುವಂತೆ ಪಾರ್ಷತನನ್ನು ಮೂರು ಬಾಣಗಳಿಂದ ಹೊಡೆದನು. ಆಗ ಸಮಿತಿಶೋಭನ ಶಲ್ಯನೂ ಕೂಡ ಶೂರ ಪಾರ್ಷತನನ್ನು ಕ್ರುದ್ಧನಾಗಿ ಎದೆಯಮೇಲೆ ಹೊಡೆದನು. ಆಗ ಯುದ್ಧವು ಮುಂದುವರೆಯಿತು.

## ಭೀಮಯುದ್ಧ

ಶಲ್ಯನ ಒಂಭತ್ತು ಬಾಣಗಳಿಂದ ಪೀಡಿತನಾದ ಧೃಷ್ಟದ್ಯುಮ್ನನು

ಸಂಕ್ರುದ್ಧನಾಗಿ ಮದ್ರಾಧಿಪತಿಯನ್ನು ಆಯಸಗಳಿಂದ ಪೀಡಿಸತೊಡಗಿದನು. ಅಲ್ಲಿ ಶಲ್ಯನ ವೇಗವನ್ನು ತಡೆದ ಪಾರ್ಷತನ ಅದ್ಭುತ ಪರಾಕ್ರಮವು ಕಂಡಿತು. ರಣದಲ್ಲಿ ಸಂರಬ್ಧರಾಗಿದ್ದ ಅವರಿಬ್ಬರ ನಡುವೆ ಯಾವುದೇ ವ್ಯತ್ಯಾಸವು ಕಾಣುತ್ತಿರಲಿಲ್ಲ. ಮುಹೂರ್ತಕಾಲ ಇಬ್ಬರೂ ಒಂದೇ ಸಮನಾಗಿ ಯುದ್ಧಮಾಡಿದರು. ಆಗ ಶಲ್ಯನು ಸಂಯುಗದಲ್ಲಿ ಧೃಷ್ಟದ್ಯುಮ್ನನ ಧನುಸ್ಸನ್ನು ಹಳದೀ ಬಣ್ಣದ ನಿಶಿತ ಭಲ್ಲದಿಂದ ಕತ್ತರಿಸಿದನು. ಮತ್ತು ಮಳೆಗಾಲದಲ್ಲಿ ಮೋಡಗಳು ಒಂದೇ ಸಮನೆ ಮಳೆಸುರಿಸಿ ಗಿರಿಯನ್ನು ಮುಚ್ಚಿಬಿಡುವಂತೆ ಶರವರ್ಷದಿಂದ ಅವನನ್ನು ಮುಚ್ಚಿಬಿಟ್ಟನು. ಅಭಿಮನ್ಯುವಾದರೋ ಧೃಷ್ಟದ್ಯುಮ್ನನು ಪೀಡಿತನಾದುದನ್ನು ನೋಡಿ ಸಂಕ್ರುದ್ಧನಾಗಿ ವೇಗದಿಂದ ಮದ್ರರಾಜನ ರಥದ ಬಳಿ ಧಾವಿಸಿ ಬಂದನು. ಮದ್ರಾದಿಪನ ರಥದ ಸಮೀಪ ಬರುತ್ತಲೇ ಅತಿ ಕೋಪದಿಂದ ಕಾರ್ಷ್ಣಿಯು ಅಮೇಯಾತ್ಮ ಆರ್ತಯನಿಯನ್ನು ಮೂರು ವಿಶಿಖಗಳಿಂದ ಹೊಡೆದನು. ಆಗ ಆರ್ಜುನಿಯನ್ನು ರಣದಲ್ಲಿ ಎದುರಿಸಲು ಬಯಸಿ ಕೌರವರು ಕೂಡಲೇ ಮದ್ರರಾಜನ ರಥವನ್ನು ಸುತ್ತುವರೆದು ನಿಂತರು. ದುರ್ಯೋಧನ, ವಿಕರ್ಣ, ದುಃಶಾಸನ, ವಿವಿಂಶತಿ, ದುರ್ಮರ್ಷಣ, ದುಃಸ್ಸಹ, ಚಿತ್ರಸೇನ, ದುರ್ಮುಖ, ಸತ್ಯವ್ರತ, ಪುರುಮಿತ್ರ ಇವರು ಮದ್ರಾಧಿಪನ ರಥವನ್ನು ರಕ್ಷಿಸುತ್ತಾ ರಣದಲ್ಲಿ ನಿಂತರು.

ಅವರನ್ನು ಸಂಕ್ರುದ್ಧನಾದ ಭೀಮಸೇನ, ಧೃಷ್ಟದ್ಯುಮ್ನ, ದ್ರೌಪದೇಯರು, ಅಭಿಮನ್ಯು, ಮಾದ್ರೀಪುತ್ರ ಪಾಂಡವರಿಬ್ಬರು ನಾನಾ ರೂಪದ

ಶಸ್ತ್ರಗಳನ್ನು ಪ್ರಯೋಗಿಸುತ್ತಾ ಪರಸ್ಪರರನ್ನು ವಧಿಸಲು ಬಯಸಿ ಎದುರಿಸಿದರು. ಭಯವನ್ನುಂಟು ಮಾಡುತ್ತಿದ್ದ ಕೌರವರ ಮತ್ತು ಶತ್ರುಗಳ ಆ ಹತ್ತು ಹತ್ತು ರಥಿಕರ ನಡುವೆ ಯುದ್ಧವು ನಡೆಯುತ್ತಿರಲು ಇತರ ರಥಿಕರು ಪ್ರೇಕ್ಷಕರಾದರು. ಆ ಮಹಾರಥರು ಅನೇಕರೂಪದ ಶಸ್ತ್ರಗಳನ್ನು ಪ್ರಯೋಗಿಸುತ್ತಾ ಅನ್ಯೋನ್ಯರನ್ನು ಹೊಡೆಯುತ್ತಾ ಪ್ರಹರಿಸ ತೊಡಗಿದರು. ಎಲ್ಲರೂ ಅನ್ಯೋನ್ಯರನ್ನು ಕೊಲ್ಲಲು ತವಕರಾಗಿದ್ದರು. ಮಹಾಸ್ತ್ರಗಳನ್ನು ಪ್ರಯೋಗಿಸುತ್ತಾ ಸಹನೆಯಿಲ್ಲದೇ ಅವರು ಅನ್ಯೋನ್ಯರ ಮೇಲೆ ಎರಗಿದರು. ಮಹಾರಣದಲ್ಲಿ ಸಂಕ್ರುದ್ಧರಾಗಿ ತುಂಬಾ ವೇಗದಿಂದ ಧೃಷ್ಟದ್ಯುಮ್ನನನ್ನು ದುರ್ಯೋಧನು ನಾಲ್ಕು ನಿಶಿತ ಬಾಣಗಳಿಂದಲೂ, ದುರ್ಮರ್ಷಣನು ಇಪ್ಪತ್ತು, ಚಿತ್ರಸೇನನು ಐದು, ದುರ್ಮುಖನು ಒಂಭತ್ತು, ದುಃಸ್ಸಹನು ಏಳರಿಂದ, ವಿವಿಂಶತಿಯು ಐದರಿಂದ ಮತ್ತು ದುಃಶಾಸನನು ಮೂರು ಬಾಣಗಳಿಂದ ಹೊಡೆದರು. ಅವರಲ್ಲಿ ಒಬ್ಬೊಬ್ಬರನ್ನೂ ಇಪ್ಪತ್ತೈದು ಬಾಣಗಳಿಂದ ಹೊಡೆದು ಶತ್ರುತಾಪನ ಪಾರ್ಷತನು ತನ್ನ ಹಸ್ತಲಾಘವವನ್ನು ಪ್ರದರ್ಶಿಸಿದನು. ಸಮರದಲ್ಲಿ ಸತ್ಯವ್ರತ ಮತ್ತು ಪುರುಮಿತ್ರರನ್ನು ಹತ್ತು-ಹತ್ತು ಬಾಣಗಳಿಂದ ಹೊಡೆದನು. ಮಾತೃನಂದನರಾದ ಮಾದ್ರೀಪುತ್ರರಿಬ್ಬರೂ ಸಮರದಲ್ಲಿ ಮಾತುಲನನ್ನು ಶರವ್ರಾತಗಳಿಂದ ಪ್ರಹರಿಸಿದುದು ಒಂದು ಅದ್ಭುತವೆನಿಸಿತು. ಆಗ ಶಲ್ಯನು ತನ್ನ ತಂಗಿಯ ಮಕ್ಕಳಾದ ರಥಿಗಳಲ್ಲಿ ಶ್ರೇಷ್ಠರಾದ ಅವರಿಬ್ಬರನ್ನು ಅನೇಕ ಶರಗಳಿಂದ ಹೊಡೆದನು. ಪ್ರತಿಯಾಗಿ ಮಾಡಲು ಬಯಸಿದ ಮಾದ್ರೀಪುತ್ರರಿಬ್ಬರೂ

ವಿಚಲಿತರಾಗಲಿಲ್ಲ.

ಅದೇ ಸಮಯದಲ್ಲಿ ಮಹಾಬಲ ಪಾಂಡವ ಭೀಮಸೇನನು ದುರ್ಯೋಧನನನ್ನು ನೋಡಿ ಯುದ್ಧವನ್ನೇ ಮುಗಿಸಲು ನಿಶ್ಚಯಿಸಿ ಗದೆಯನ್ನು ಕೈಗೆ ತೆಗೆದುಕೊಂಡನು. ಅದನ್ನು ಹಿಡಿದು ಶಿಖರದಿಂದ ಕೂಡಿದ ಕೈಲಾಸ ಪರ್ವತದಂತೆ ತೋರುತ್ತಿದ್ದ ಆ ಮಹಾಬಾಹು ಭೀಮಸೇನನನ್ನು ನೋಡಿ ನಿನ್ನ ಪುತ್ರರು ಭಯದಿಂದ ಪಲಾಯನಗೈದರು. ಸಂಕ್ರುದ್ಧನಾದ ದುರ್ಯೋಧನನಾದರೋ ವೇಗಶಾಲಿಗಳಾದ ಮಾಗಧರ ಹತ್ತು ಸಾವಿರ ಆನೆಗಳ ಸೇನೆಯನ್ನು ಪ್ರಚೋದಿಸಿ, ಮಾಗಧನನ್ನು ಮುಂದೆ ಮಾಡಿಕೊಂಡು ಭೀಮಸೇನನನ್ನು ಎದುರಿಸಿದನು. ತನ್ನ ಮೇಲೆ ಎರಗುತ್ತಿರುವ ಆ ಗಜಸೇನೆಯನ್ನು ನೋಡಿ ವೃಕೋದರನು ಗದೆಯನ್ನು ಹಿಡಿದು ರಥದಿಂದ ಧುಮುಕಿ ಸಿಂಹದಂತೆ ಗರ್ಜಿಸಿದನು. ಲೋಹಮಯ ಭಾರ ಮಹಾ ಗದೆಯನ್ನು ಹಿಡಿದು ಬಾಯಿ ಕಳೆದು ಬರುತ್ತಿರುವ ಅಂತಕನಂತೆ ಗಜಸೇನೆಯ ಮೇಲೆ ಎರಗಿದನು. ವಜ್ರವನ್ನು ಹಿಡಿದ ವಾಸವನಂತೆ ಮಹಾಬಾಹು ಬಲೀ ಭೀಮಸೇನನು ಗದೆಯಿಂದ ಆನೆಗಳನ್ನು ಸಂಹರಿಸುತ್ತಾ ಸಮರದಲ್ಲಿ ಸಂಚರಿಸಿದನು. ಮನೋಹೃದಯಗಳನ್ನು ಕಂಪಿಸುವಂತೆ ಕೂಗುತ್ತಿದ್ದ ಭೀಮನ ಮಹಾ ಗರ್ಜನೆಯಿಂದಲೇ ಆನೆಗಳು ಒಂದುಕಡೆ ಸೇರಿ ಪ್ರಾಣತೊರೆಯುತ್ತಿದ್ದವು. ಆಗ ದ್ರೌಪದೀಪುತ್ರರು, ಮಹಾರಥ ಸೌಭದ್ರ, ನಕುಲ, ಸಹದೇವರು ಮತ್ತು ಧೃಷ್ಟದ್ಯುಮ್ನರು ಗಿರಿಗಳ ಮೇಲೆ ಮೋಡಗಳು ಮಳೆಸುರಿಸುವಂತೆ ಆನೆಗಳ ಮೇಲೆ ಬಾಣಗಳ

ಮಳೆಯನ್ನು ಸುರಿಸುತ್ತಾ ಭೀಮನನ್ನು ಹಿಂದಿನಿಂದ ರಕ್ಷಿಸುತ್ತಿದ್ದರು. ಕ್ಷುರ, ಕ್ಷುರಪ್ರ, ಭಲ್ಲ, ಪೀತ, ಅಂಜಲಿಕಗಳಿಂದ ಪಾಂಡವರು ಗಜಯೋಧಿಗಳ ಶಿರಗಳನ್ನು ಕತ್ತರಿಸುತ್ತಿದ್ದರು. ಕಲ್ಲಿನ ಮಳೆಯಂತೆ ತಲೆಗಳು, ವಿಭೂಷಿತ ಬಾಹುಗಳು, ಅಂಕುಶಗಳೊಂದಿರುವ ಕೈಗಳು ಬೀಳುತ್ತಿದ್ದವು. ಗಜಯೋಧಿಗಳ ತಲೆಯು ಕತ್ತರಿಸಿ ಬಿದ್ದು ಕೇವಲ ಮುಂಡಗಳು ಆನೆಗಳ ಮೇಲಿರಲು ಅವು ಪರ್ವತದ ಮೇಲಿರುವ ರೆಂಬೆಗಳು ತುಂಡಾದ ಬೋಳು ಮರಗಳಂತೆ ತೋರಿದವು. ಧೃಷ್ಟದ್ಯುಮ್ನನಿಂದ ಕೆಳಗುರುಳಿಸಲ್ಪಟ್ಟ, ಬೀಳಿಸಲ್ಪಡುತ್ತಿರುವ ಮಹಾ ಗಜಗಳು ಕಂಡುಬಂದವು.

ಆಗ ಮಹೀಪಾಲ ಮಾಗಧನು ಐರಾವತದಂದಿರುವ ಆನೆಯೊಂದನ್ನು ಸೌಭದ್ರನ ರಥದ ಕಡೆ ಕಳುಹಿಸಿದನು. ಮಾಗಧನ ಆ ಉತ್ತಮ ಗಜವು ಮೇಲೆ ಬೀಳುತ್ತಿರುವುದನ್ನು ಕಂಡು ಸೌಭದ್ರನು ಅದನ್ನು ಒಂದೇ ಬಾಣದಿಂದ ಸಂಹರಿಸಿದನು. ಕಾರ್ಷ್ಣಿಯು ತಕ್ಷಣವೇ ರಜತಪುಂಖ ಭಲ್ಲದಿಂದ ಆನೆಯನ್ನು ಕಳೆದುಕೊಂಡ ಆ ರಾಜನ ಶಿರವನ್ನು ತುಂಡರಿಸಿದನು. ಇಂದ್ರನು ಗಿರಿಗಳ ರೆಕ್ಕೆಗಳನ್ನು ಕತ್ತರಿಸಿದಂತೆ ಭೀಮಸೇನನೂ ಕೂಡ ಆ ಗಜಸೇನೆಯನ್ನು ಕತ್ತರಿಸುತ್ತಾ ಹೋದನು. ವಜ್ರದ ಹೊಡೆತಕ್ಕೆ ಸಿಕ್ಕ ಗಿರಿಗಳಂತೆ ಭೀಮಸೇನನ ಒಂದೊಂದು ಗದಾ ಪ್ರಹಾರಕ್ಕೆ ಒಂದೊಂದು ಆನೆಯು ಸತ್ತು ಬೀಳುತ್ತಿರುವುದು ಕಂಡಿತು. ಆ ಪರ್ವತೋಪಮ ಗಜಗಳು ದಂತಗಳು ಮುರಿದು, ಸೊಂಡಿಲುಗಳು ತುಂಡಾಗಿ, ತೊಡೆಗಳು ಒಡೆದು ಹೋಗಿ, ಹಿಂಬಾಗಗಳು ಭಗ್ನವಾಗಿ,

ಕುಂಭಗಳು ಒಡೆದುಹೋಗಿ ಬಿದ್ದಿದ್ದವು. ಕೆಲವು ಕೂಗುತ್ತಿದ್ದವು, ಕೆಲವು ಸಂಕಟಪಡುತ್ತಿದ್ದವು, ಕೆಲವು ಆನೆಗಳು ಸಮರದಿಂದ ಓಡಿ ಹೋಗುತ್ತಿದ್ದವು, ಕೆಲವು ಮಲಮೂತ್ರ ವಿಸರ್ಜನೆ ಮಾಡುತ್ತಿದ್ದವು. ಭೀಮಸೇನನ ಮಾರ್ಗದಲ್ಲಿ ಪರ್ವತೋಪಮ ಆನೆಗಳು ಸತ್ತು ಬಿದ್ದಿದ್ದವು. ಕೆಲವು ಮೂರ್ಛೆಹೋಗಿ ಬಾಯಲ್ಲಿ ನೊರೆಯನ್ನು ಸುರಿಸುತ್ತಿದ್ದವು. ಕೆಲವು ಮಹಾಗಜಗಳು ಕುಂಭವು ಒಡೆದು ರಕ್ತವನ್ನು ಕಾರುತ್ತಿದ್ದವು. ಕೆಲವು ಧರೆಗುರುಳಿದ ಪರ್ವತಗಳಂತೆ ಭೂಮಿಯಮೇಲೆ ಒದ್ದಾಡುತ್ತಿದ್ದವು. ರಕ್ತ-ಮೇಧಸ್ಸಿನಿಂದ ತೋಯ್ದುಹೋದ ಅಂಗಾಗಗಳಿಂದ, ಮಾಂಸಮಜ್ಜೆಗಳು ಮೆತ್ತಿಕೊಂಡಿದ್ದ ಭೀಮನು ದಂಡವನ್ನು ಹಿಡಿದ ಅಂತಕನಂತೆ ಸಂಚರಿಸುತ್ತಿದ್ದನು. ಆನೆಗಳ ರಕ್ತದಿಂದ ಲೇಪನಗೊಂಡ ಆ ಗದೆಯಿಂದ ವೃಕೋದರನು ಪಿನಾಕವನ್ನು ಹಿಡಿದ ಪಿನಾಕಿಯಂತೆ ಘೋರನೂ ಭಯಂಕರನೂ ಆಗಿ ತೋರುತ್ತಿದ್ದನು. ಕ್ರುದ್ಧನಾದ ಭೀಮಸೇನನನಿಂದ ತಪ್ಪಿಸಿಕೊಳ್ಳುತ್ತಿರುವ ಆ ಆನೆಗಳು ಅವಸರದಲ್ಲಿ ಓಡುತ್ತ ಕೌರವರ ಸೇನೆಯವರನ್ನೇ ತುಳಿಯುತ್ತಿದ್ದವು.

ಸೌಭದ್ರ ಪ್ರಮುಖರಾದ ಮಹೇಷ್ವಾಸ ಮಹಾರಥರು ಯುದ್ಧಮಾಡುತ್ತಿರುವ ಆ ವೀರನನ್ನು ದೇವತೆಗಳು ವಜ್ರಾಯುಧವನ್ನು ರಕ್ಷಿಸುವಂತೆ ರಕ್ಷಿಸುತ್ತಿದ್ದರು. ಆನೆಗಳ ರಕ್ತದಿಂದ ನೆನೆದು ರಕ್ತದಿಂದ ಬಳಿಯಲ್ಪಟ್ಟ ಗದೆಯನ್ನು ತಿರುಗಿಸುತ್ತಿದ್ದ ಭೀಮಸೇನನು ಕೃತಾಂತನಂತೆ ರೌದ್ರಾತ್ಮನಾಗಿ ಕಂಡನು. ಗದೆಯನ್ನು ಎಲ್ಲ ದಿಕ್ಕುಗಳಲ್ಲಿಯೂ

ವ್ಯಾಯಾಮ ಮಾಡುತ್ತಿದ್ದಾನೋ ಎನ್ನುವಂತೆ ತಿರುಗಿಸುತ್ತಿದ್ದ ಅವನು ಪ್ರಳಯಕಾಲದಲ್ಲಿ ಶಂಕರನು ನರ್ತಿಸುವಂತೆ ನರ್ತಿಸುತ್ತಿರುವುದು ಕಂಡುಬಂದಿತು. ಯಮನ ದಂಡದಂತಿರುವ ಭಾರವಾದ ಇಂದ್ರನ ವಜ್ರಾಯುಧ ಸಮಾನ ಧ್ವನಿಯಿಂದ ಕೂಡಿದ್ದ ಗದೆಯು ರೌದ್ರವಾಗಿ ಕಾಣುತ್ತಿತ್ತು. ಕೂದಲು, ಮಜ್ಜೆಗಳಿಂದ ಮಿಶ್ರಿತ ಲೇಪನಗೊಂಡು, ರಕ್ತದಿಂದ ತೋಯ್ದು ಅದು ಪಶುಗಳನ್ನು ಸಂಹರಿಸುವ ಕ್ರುದ್ಧ ರುದ್ರನ ಪಿನಾಕದಂತಿತ್ತು. ಪ್ರಲಯಕಾಲದಲ್ಲಿ ಪಶುಗಳನ್ನು ಹೊಡೆದು ಕೊಲ್ಲುವಂತೆ, ಗೋಪಾಲಕನು ಹೊಡೆದೋಡಿಸುವಂತೆ ಭೀಮನು ಗಜಸೇನೆಯನ್ನು ಬೆನ್ನಟ್ಟಿ ಹೊಡೆಯುತ್ತಿದ್ದನು. ಮಾರ್ಗದಲ್ಲಿ ಎಲ್ಲ ಕಡೆಗಳಿಂದಲೂ ಗದೆಯ ಪ್ರಹಾರಕ್ಕೆ ಸಿಲುಕಿದ ಆನೆಗಳು ಕೌರವ ಸೇನೆಗಳನ್ನೇ ತುಳಿದು ಪಲಾಯನ ಮಾಡುತ್ತಿದ್ದವು. ಭಿರುಗಾಳಿಯು ಮೋಡಗಳನ್ನು ಚಿಂದಿಮಾಡಿ ಚದುರಿಸುವಂತೆ ಭೀಮನು ಆನೆಗಳನ್ನು ತುಂಡುಮಾಡಿ ಶ್ಮಶಾನದಲ್ಲಿ ಶೂಲಪಾಣಿಯಂತೆ ಯುದ್ಧದಲ್ಲಿ ನಿಂತಿದ್ದನು.

ಆ ಗಜಸೇನೆಯು ಹತವಾಗಲು ದುರ್ಯೋಧನನು ಭೀಮಸೇನನನ್ನು ಕೊಲ್ಲಬೇಕೆಂದು ಸರ್ವ ಸೇನೆಗಳನ್ನು ಪ್ರಚೋದಿಸಿದನು. ಆಗ ಅವನ ಶಾಸನದಂತೆ ಸರ್ವ ಸೇನೆಗಳೂ ಭೈರವ ಕೂಗನ್ನು ಕೂಗುತ್ತಾ ಭೀಮಸೇನನ ಮೇಲೆ ಎರಗಿದರು. ಭರತ ಬಂದಾಗ ಮೇಲುಕ್ಕುವ ಸಾಗರದಂತೆ ಬೀಳುತ್ತಿದ್ದ ಆ ದುಷ್ಪಾರ ಸೇನೆಯು ದೇವತೆಗಳಿಗೂ ದುರುತ್ಸಹವಾಗಿ ಅಪಾರವಾಗಿತ್ತು. ರಥ-ಗಜ-ಅಶ್ವಗಳಿಂದ ತುಂಬಿತ್ತು.

ಶಂಖ ದುಂದುಭಿಗಳ ನಾದದಿಂದ ಕೂಡಿತ್ತು. ಅಮಿತ ಸರೋವರದಂತೆ ಅನಂತವೂ ಅಪಾರವೂ ಆಗಿತ್ತು. ಮಹಾಸಾಗರವನ್ನು ದಡವು ಹೇಗೋ ಹಾಗೆ ಸಮರದಲ್ಲಿ ಕ್ಷೋಭೆಗೊಂಡು ಮೇಲೇಳುತ್ತಿದ್ದ ಆ ಸೇನಾಸಾಗರವನ್ನು ಭೀಮಸೇನನು ಬಲದಿಂದ ತಡೆದನು. ನಂಬಲಿಕ್ಕಾಗದ ಭೀಮಸೇನನ ಆ ಅಮಾನುಷ ಅದ್ಭುತ ಆಶ್ಚರ್ಯ ಕೃತ್ಯಗಳು ಆ ಸಮರದಲ್ಲಿ ಕಂಡುಬಂದಿತು. ಭೂಮಿಯನ್ನು ನಡುಗಿಸುತ್ತಾ ಬರುತ್ತಿದ್ದ ಆ ಎಲ್ಲರನ್ನೂ ಕುದುರೆ, ರಥ, ಕುಂಜರಗಳೊಂದಿಗೆ, ಸ್ವಲ್ಪವೂ ಭಯಪಡದೇ ಭೀಮಸೇನನು ಗದೆಯಿಂದ ಹೊಡೆದನು. ರಥಿಗಳಲ್ಲಿ ಶ್ರೇಷ್ಠ ಭೀಮನು ಗದೆಯಿಂದ ಆ ಬಲಗಳನ್ನು ತಡೆದು ತುಮುಲದಲ್ಲಿ ಮೇರುಗಿರಿಯಂತೆ ಅಚಲನಾಗಿ ನಿಂತನು. ಆ ಘೋರವಾದ ಪರಮದಾರುಣ ತುಮುಲದ ಸಮಯದಲ್ಲಿ ಅವನ ಸಹೋದರರು, ಪುತ್ರರು, ಧೃಷ್ಟದ್ಯುಮ್ನ, ದ್ರೌಪದೇಯರು, ಅಭಿಮನ್ಯು ಮತ್ತು ಮಹಾರಥ ಶಿಖಂಡಿಯರು ಮಹಾಬಲ ಭೀಮಸೇನನನ್ನು ಭಯಗೊಂಡು ಬಿಟ್ಟು ಹೋಗಲಿಲ್ಲ. ಆಗ ಅಂತಕ ದಂಡಪಾಣಿಯಂತೆ ಉಕ್ಕಿನಿಂದ ಮಾಡಿದ ಭಾರವಾದ ಮಹಾ ಗದೆಯನ್ನು ಹಿಡಿದು ಅವನು ಕೌರವ ಯೋಧರ ಮೇಲೆ ಬಿದ್ದು ರಥವೃಂದಗಳನ್ನೂ ವಾಜಿವೃಂದಗಳನ್ನೂ ಸದೆಬಡಿದನು. ಯುಗಾಂತದಲ್ಲಿ ಅಗ್ನಿಯಂತೆ ಭೀಮನು ಸಮರದಲ್ಲಿ ಸಂಚರಿಸುತ್ತಾ ಯುಗಾಂತದಲ್ಲಿ ಕಾಲನಂತೆ ಸರ್ವರನ್ನೂ ಸಂಹರಿಸತೊಡಗಿದನು. ಪಾಂಡವನು ತನ್ನ ತೊಡೆಗಳ ವೇಗದಿಂದಲೇ ರಥಜಾಲಗಳನ್ನು ಸೆಳೆದು

ಆನೆಗಳು ಜೊಂಡುಹುಲ್ಲನ್ನು ಮುರಿದು ಧ್ವಂಸಮಾಡುವಂತೆ ಮರ್ದಿಸುತ್ತಿದ್ದನು. ರಥಗಳಿಂದ ರಥಿಕರನ್ನೂ, ಆನೆಗಳಿಂದ ಗಜಯೋಧರನ್ನೂ, ಕುದುರೆಗಳಿಂದ ಸವಾರರನ್ನೂ ಕೆಳಕ್ಕೆ ಸೆಳೆದು, ಭೂಮಿಯಲ್ಲಿರುವ ಪದಾತಿಗಳನ್ನೂ ಕೆಡವಿ ಕೊಲ್ಲುತ್ತಿದ್ದನು.

ಅಲ್ಲಲ್ಲಿ ಸತ್ತು ಬಿದ್ದಿದ್ದ ಮನುಷ್ಯ-ಗಜ-ವಾಜಿಗಳಿಂದ ಆ ರಣಾಂಗಣವು ಮೃತ್ಯುವಿನಿಂದ ಆಘಾತಗೊಂಡಿದೆಯೋ ಎಂಬಂತೆ ಆಯಿತು. ಪಶುಗಳನ್ನು ಸಂಹರಿಸುವ ಕ್ರುದ್ಧ ರುದ್ರನ ಪಿನಾಕದಂತೆ ಮತ್ತು ಯಮದಂಡದಂತೆ ಉಗ್ರವಾದ, ಇಂದ್ರನ ವಜ್ರದಂತೆ ರೌದ್ರವಾಗಿ ಶಬ್ಧಮಾಡುತ್ತಿದ್ದ ಭೀಮನ ಗದೆಯನ್ನು ನೋಡಿದರು. ಗದೆಯನ್ನು ತಿರುಗಿಸುತ್ತಿದ್ದ ಆ ಮಹಾತ್ಮ ಕೌಂತೇಯನ ರೂಪವು ಯುಗಕ್ಷಯದಲ್ಲಿ ಕಾಲನಂತೆ ಮಹಾಘೋರವಾಗಿತ್ತು. ಆ ಮಹಾಸೇನೆಯು ಪುನಃ ಪುನಃ ಪಲಾಯನಗೊಳ್ಳುತ್ತಿರಲು, ಮೃತ್ಯುವಿನಂತೆ ಬರುತ್ತಿದ್ದ ಅವನನ್ನು ನೋಡಿ ಸರ್ವರೂ ಬೇಸತ್ತರು. ಎಲ್ಲೆಲ್ಲಿ ಪಾಂಡವನು ಗದೆಯನ್ನೆತ್ತಿ ಬರುತ್ತಿರುವುದನ್ನು ನೋಡುತ್ತಿದ್ದರೋ ಅಲ್ಲಲ್ಲಿ ಸರ್ವ ಸೈನ್ಯಗಳು ಹಿಮ್ಮೆಟ್ಟುತ್ತಿದ್ದರು. ಸೈನ್ಯಗಳನ್ನು ಸೀಳುತ್ತಿದ್ದ, ಅಂತಕನು ಬಾಯಿ ತೆರೆದು ಜೀವಕೋಟಿಯನ್ನು ನುಂಗುವಂತೆ ಕಾಣುತ್ತಿದ್ದ, ಮಹಾಗದೆಯನ್ನು ಹಿಡಿದಿದ್ದ, ಬಲೌಘ, ಅಪರಾಜಿತ, ಭೀಮಕರ್ಮಿ, ವೃಕೋದರನನ್ನು ನೋಡಿ ಭೀಷ್ಮನು ತಕ್ಷಣವೇ ಅಲ್ಲಿಗೆ ಧಾವಿಸಿ ಬಂದನು. ಮಹಾಮೇಘಘೋಷದ ರಥದಲ್ಲಿ ಆದಿತ್ಯವರ್ಚನನಾಗಿ ಮಳೆಸುರಿಸುವ ಮೇಘಗಳಂತೆ ಶರವರ್ಷಗಳಿಂದ ಮುಸುಕು ಹಾಕಿದ್ದ,

ಅಂತಕನಂತೆ ಬಾಯಿತೆರೆದು ಬರುತ್ತಿದ್ದ ಭೀಷ್ಮನನ್ನು ನೋಡಿ ಮಹಾಬಾಹು ಭೀಮನು ಪರಮ ಕುಪಿತನಾಗಿ ಅವನನ್ನು ಎದುರಿಸಿದನು.

## ಸಾತ್ಯಕಿ-ಭೂರಿಶ್ರವರ ಯುದ್ಧ

ಅದೇ ಕ್ಷಣದಲ್ಲಿ ಶಿನಿಪ್ರವೀರ ಸಾತ್ಯಕಿಯು ದೃಢವಾದ ಧನುಸ್ಸಿನಿಂದ ಶತ್ರುಗಳನ್ನು ಸಂಹರಿಸಿ ದುರ್ಯೋಧನನ ಸೇನೆಯನ್ನು ನಡುಗಿಸುತ್ತಾ ಪಿತಾಮಹನ ಮೇಲೆ ಎರಗಿದನು. ರಜತಪ್ರಕಾಶದಿಂದ ಹೊಳೆಯುತ್ತಿರುವ ಕುದುರೆಗಳಿಂದ ಬರುತ್ತಿರುವ, ದೃಢ ಧನುಸ್ಸಿನಿಂದ ಶರಗಳನ್ನು ಸುರಿಸುತ್ತಿದ್ದ ಅವನನ್ನು ಕೌರವ ಗಣಗಳಲ್ಲಿ ಯಾರೂ ತಡೆಯಲು ಶಕ್ಯರಾಗಿರಲಿಲ್ಲ. ಆಗ ಅಲಂಬುಸನೆಂಬ ರಾಕ್ಷಸ ರಾಜನು ನಿಶಿತ ಶರಾಗ್ರಗಳಿಂದ ಅವನನ್ನು ಹೊಡೆಯಲು ಶಿನಿಪ್ರವೀರನು ಅವನನ್ನು ನಾಲ್ಕು ಬಾಣಗಳಿಂದ ಗಾಯಗೊಳಿಸಿ ಆಕ್ರಮಣ ಮಾಡಿದನು. ವೃಷ್ಣಿವರನು ಶತ್ರುಗಳ ಮಧ್ಯದಲ್ಲಿ ಬಾಣಗಳನ್ನು ಸುರಿಸುತ್ತಾ ತನ್ನ ಮೇಲೆ ಬೀಳಲು ಬರುತ್ತಿದ್ದ ಕುರುಪುಂಗವರನ್ನು ಬಾರಿ ಬಾರಿ ಹೊಡೆದಟ್ಟುತ್ತಿದ್ದನು. ಮಧ್ಯಾಹ್ನದಲ್ಲಿ ಸುಡುತ್ತಿರುವ ಸೂರ್ಯನಂತಿದ್ದ ಆ ವರಿಷ್ಠನನ್ನು ತಡೆಯಲು ಸೋಮದತ್ತನ ಮಗನ ಹೊರತಾಗಿ ಅಲ್ಲಿ ಬೇರೆ ಯಾರೂ ಇರಲಿಲ್ಲ. ತನ್ನ ರಥರು ಪಲಾಯನಮಾಡುತ್ತಿರುವುದನ್ನು ನೋಡಿ ಸಾತ್ಯಕಿಯೊಡನೆ ಪ್ರತಿಯುದ್ಧ ಮಾಡಲು ಇಚ್ಛಿಸಿ ಸೌಮದತ್ತಿ ಭೂರಿಶ್ರವನು ಉಗ್ರವೇಗದ ಧನುಸ್ಸನ್ನು

ಹಿಡಿದು ಮುಂದೆ ಬಂದನು.

ಆಗ ಭೂರಿಶ್ರವನು ಸಂಕ್ರುದ್ಧನಾಗಿ ಸಲಗವನ್ನು ಅಂಕುಶದಿಂದ ಬಾಧೆಗೊಳಿಸುವಂತೆ ಒಂಭತ್ತು ಬಾಣಗಳಿಂದ ಸಾತ್ಯಕಿಯನ್ನು ಹೊಡೆದನು. ಅಮೇಯಾತ್ಮ ಸಾತ್ಯಕಿಯೂ ಕೂಡ ಸರ್ವಲೋಕವೂ ನೋಡುತ್ತಿರಲು ಕೌರವನನ್ನು ಸನ್ನತಪರ್ವ ಶರಗಳಿಂದ ಹೊಡೆದನು. ಆಗ ರಾಜಾ ದುರ್ಯೋಧನನು ಸೋದರರಿಂದ ಪರಿವಾರಿತನಾಗಿ ರಣದಲ್ಲಿ ಸೋಮದತ್ತಿಯನ್ನು ಎಲ್ಲ ಕಡೆಗಳಿಂದ ಸುತ್ತುವರೆದನು. ಹಾಗೆಯೇ ಪಾಂಡವರೆಲ್ಲರೂ ರಭಸದಿಂದ ರಣದಲ್ಲಿ ಸಾತ್ಯಕಿಯನ್ನು ಎಲ್ಲಕಡೆಗಳಿಂದ ಸುತ್ತುವರೆದು ಯುದ್ಧಕ್ಕೆ ನಿಂತರು.

## ಭೀಮಸೇನ-ಧಾರ್ತರಾಷ್ಟ್ರರ ಯುದ್ಧ

ಭೀಮಸೇನನಾದರೋ ಸಂಕ್ರುದ್ಧನಾಗಿ ಗದೆಯನ್ನು ಎತ್ತಿ ಹಿಡಿದು ದುರ್ಯೋಧನನ ನಾಯಕತ್ವದಲ್ಲಿದ್ದ ಧೃತರಾಷ್ಟ್ರನ ಪುತ್ರರೆಲ್ಲರನ್ನೂ ತಡೆದನು. ಅನೇಕ ಸಹಸ್ರ ರಥಗಳೊಂದಿಗಿದ್ದ, ಕ್ರೋಧಾಮರ್ಷಸಮನ್ವಿತನಾದ ಧೃತರಾಷ್ಟ್ರನ ಮಗ ನಂದಕನಾದರೋ ಮಹಾಬಲ ಭೀಮಸೇನನನ್ನು ಆರು ಶಿಲಾಶಿತ ನಿಶಿತ ಕಂಕಪತ್ರಗಳಿಂದ ಹೊಡೆದನು. ಕ್ರುದ್ಧನಾದ ದುರ್ಯೋಧನನಾದರೋ ಮಹಾಬಲ ಭೀಮಸೇನನನ್ನು ಉಕ್ಕಿನ ಮೂರು ನಿಶಿತ ಮಾರ್ಗಣಗಳಿಂದ ಹೊಡೆದನು. ಆಗ ಮಹಾಬಾಹು ಭೀಮನು ತನ್ನ ರಥಶ್ರೇಷ್ಠ ರಥವನ್ನೇರಿ ವಿಶೋಕನಿಗೆ ಇದನ್ನು ಹೇಳಿದನು:

“ಈ ಮಹಾರಥ ಮಹಾಬಲಿ ಶೂರ ಧಾರ್ತರಾಷ್ಟ್ರರು ಯುದ್ಧದಲ್ಲಿ ನನ್ನನ್ನೇ ಕೊಲ್ಲಲು ಉದ್ಯುಕ್ತರಾಗಿದ್ದಾರೆ. ಸಾರಥೇ! ಇಂದು ಇವರನ್ನು ನೀನು ನೋಡುತ್ತಿರುವ ಹಾಗೆಯೇ ಸಂಹರಿಸುತ್ತೇನೆ. ಅದರಲ್ಲಿ ಸಂಶಯವಿಲ್ಲ. ಆದುದರಿಂದ ನನ್ನ ಕುದುರೆಗಳನ್ನು ವ್ಯವಸ್ಥಿತವಾಗಿ ನಡೆಸಲು ಪ್ರಯತ್ನಿಸು.”

ಹೀಗೆ ಹೇಳಿ ಪಾರ್ಥನು ದುರ್ಯೋಧನನನ್ನು ಹತ್ತು ಕನಕಭೂಷಣ ತೀಕ್ಷ್ಣ ಶರಗಳಿಂದ ಹೊಡೆದನು. ಮತ್ತು ಮೂರು ಬಾಣಗಳಿಂದ ನಂದಕನ ಎದೆಗೆ ಹೊಡೆದನು. ದುರ್ಯೋಧನನು ಮಹಾಬಲ ಭೀಮನನ್ನು ಅರವತ್ತು ಮತ್ತು ಅನ್ಯ ಮೂರು ನಿಶಿತ ಶರಗಳಿಂದ ವಿಶೋಕನನ್ನು ಹೊಡೆದನು. ನಗುತ್ತಾ ಆ ರಾಜನು ಹೊಳೆಯುತ್ತಿದ್ದ ಭೀಮನ ಧನುಸ್ಸನ್ನು ಮುಷ್ಟಿದೇಶದಲ್ಲಿ ತೀಕ್ಷ್ಣವಾದ ಮೂರು ಶರಗಳಿಂದ ತುಂಡರಿಸಿದನು. ಧನ್ವಿ ದುರ್ಯೋಧನನ ತೀಕ್ಷ್ಣ ವಿಶಿಖಗಳಿಂದ ಪೀಡಿತನಾದ ಸಾರಥಿ ವಿಶೋಕನನ್ನು ನೋಡಿ ಅಸಹನೆಯಿಂದ ಕ್ರುದ್ಧನಾದ ಭೀಮನು ದುರ್ಯೋಧನನ ವಧಾರ್ಥವಾಗಿ ಬೇಗನೇ ಇನ್ನೊಂದು ದಿವ್ಯ ಧನುಸ್ಸನ್ನು ಎತ್ತಿಕೊಂಡನು. ಮತ್ತು ಲೋಮವಾಹಿನಿ ಕ್ಷುರಪ್ರವನ್ನು ತೆಗೆದುಕೊಂಡು ಭೀಮನು ನೃಪತಿಯ ಉತ್ತಮ ಕಾರ್ಮುಕವನ್ನು ತುಂಡರಿಸಿದನು. ಕತ್ತರಿಸಲ್ಪಟ್ಟ ತನ್ನ ಧನುಸ್ಸನ್ನು ಬಿಸುಟು ಕ್ರೋಧದಿಂದ ಭುಗಿಲೆದ್ದು ಇನ್ನೂ ದೊಡ್ಡದಾದ ಮತ್ತು ವೇಗವತ್ತರವಾದ ಬೇರೆ ಕಾರ್ಮುಕವನ್ನು ತೆಗೆದುಕೊಂಡು ಕಾಲಮೃತ್ಯು ಸಮಪ್ರಭೆಯ ಘೋರವನ್ನು ವಿಶಿಖವನ್ನು ಹೂಡಿ ಅದರಿಂದ

ಸಂಕ್ರುದ್ಧನಾಗಿ ಭೀಮಸೇನನ ಎದೆಗೆ ಹೊಡೆದನು. ಅತ್ಯಂತ ಗಾಢವಾಗಿ ಹೊಡೆತತಿಂದ ಅವನು ನೋವಿನಿಂದ ವ್ಯಥಿತನಾಗಿ ತಾನು ಕುಳಿತಿದ್ದಲ್ಲಿಯೇ ಸರಿದು ಕುಳಿತುಕೊಂಡನು. ನಿಷಣ್ಣನಾಗಿ ರಥದಲ್ಲಿ ಕುಳಿತಂತೆಯೇ ಒಂದು ಕ್ಷಣ ಮೂರ್ಛಿತನಾದನು. ವ್ಯಥಿತನಾದ ಭೀಮನನ್ನು ಕಂಡು ಅಭಿಮನ್ಯುವೇ ಮೊದಲಾದ ಪಾಂಡವರ ಮಹಾರಥ ಮಹೇಷ್ವಾಸರು ಸಹಿಸಲಾರದೇ ಅವ್ಯಗ್ರರಾಗಿ ದುರ್ಯೋಧನನ ತಲೆಯ ಮೇಲೆ ತಿಗ್ಮತೇಜಸ್ಸಿನ ಶಸ್ತ್ರಗಳ ತುಮುಲ ವೃಷ್ಟಿಯನ್ನೇ ಸುರಿಸಿದರು.

ಸ್ಮೃತಿಯನ್ನು ಪಡೆದುಕೊಂಡ ಮಹಾಬಲ ಭೀಮಸೇನನು ಆಗ ಮೂರು ಮತ್ತು ಪುನಃ ಐದು ಬಾಣಗಳಿಂದ ಹೊಡೆದನು. ಆ ಮಹೇಷ್ವಾಸ ಪಾಂಡವನು ಶಲ್ಯನನ್ನು ಇಪ್ಪತ್ತೈದು ರುಕ್ಮಪುಂಖ ಶರಗಳಿದ ಹೊಡೆದನು. ಅವನು ನೋವಿನಿಂದ ಪೀಡಿತನಾಗಿ ಪಲಾಯನ ಮಾಡಿದನು. ಆಗ ಧೃತರಾಷ್ಟ್ರನ ಹದಿನಾಲ್ಕು ಮಕ್ಕಳು - ಸೇನಾಪತಿ, ಸುಷೇಣ, ಜಲಸಂಧ, ಸುಲೋಚನ, ಉಗ್ರ, ಭೀಮರಥ, ಭೀಮ, ಭೀಮಬಾಹು, ಅಲೋಲುಪ, ದುಮುಖ, ದುಷ್ಪ್ರಧರ್ಷ, ವಿವಿತ್ಸು, ವಿಕಟ ಮತ್ತು ಸಮ - ಭೀಮನನ್ನು ಆಕ್ರಮಿಸಿದರು. ಕ್ರೋಧಸಂರಕ್ತಲೋಚನರಾದ ಅವರು ಒಂದಾಗಿ ಅನೇಕ ಬಾಣಗಳನ್ನು ಪ್ರಯೋಗಿಸುತ್ತಾ ಭೀಮಸೇನನನ್ನು ಬಹಳವಾಗಿ ಬಾಧೆಪಡೆಸಿದರು. ಮಹಾಬಲ ವೀರ ಪಾಂಡವ ಭೀಮಸೇನನು ಅವರನ್ನು ನೋಡಿ ಕುರಿಗಳ ಮಧ್ಯೆಯಿರುವ ತೋಳದಂತೆ ಕಟವಾಯಿಯನ್ನು ನೆಕ್ಕುತ್ತಾ

ಸೇನಾಪತಿಯ ಶಿರವನ್ನು ಕ್ಷುರಪ್ರದಿಂದ ಕತ್ತರಿಸಿದನು. ಜಲಸಂಧನನ್ನು ಹೊಡೆದು ಅವನನ್ನು ಯಮಸಾದನಕ್ಕೆ ಕಳುಹಿಸಿದನು. ಹಾಗೆಯೇ ಸುಷೇಣನನ್ನೂ ಸಂಹರಿಸಿ ಮೃತ್ಯುವಲ್ಲಿಗೆ ಕಳುಹಿಸಿದನು. ಕುಂಡಲಗಳಿಂದ ವಿಭೂಷಿತವಾಗಿದ್ದ, ಕಿರೀಟವನ್ನು ಧರಿಸಿದ್ದ, ಚಂದ್ರನಂತಿದ್ದ ಉಗ್ರನ ಶಿರವನ್ನು ಭಲ್ಲದಿಂದ ಭೂಮಿಗೆ ಉರುಳಿಸಿದನು. ಭೀಮನು ಸಮರದಲ್ಲಿ ಎಪ್ಪತ್ತು ಬಾಣಗಳಿಂದ ಭೀಮಬಾಹುವನ್ನು ಅವನ ಕುದುರೆ, ಧ್ವಜ ಮತ್ತು ಸಾರಥಿಯೊಂದಿಗೆ ಪರಲೋಕಕ್ಕೆ ಕಳುಹಿಸಿದನು. ಭೀಮಸೇನನು ನಗುತ್ತಾ ರಭಸದಿಂದ ಬರುತ್ತಿದ್ದ ಭೀಮ ಮತ್ತು ಭೀಮರಥ ಸಹೋದರರರನ್ನು ಯಮಸಾದನಕ್ಕೆ ಕಳುಹಿಸಿದನು. ಆಗ ಮಹಾಮೃಧದಲ್ಲಿ ಭೀಮನು ಕ್ಷುರಪ್ರದಿಂದ ಸುಲೋಚನನನ್ನು ಸರ್ವಸೈನ್ಯಗಳು ನೋಡುತ್ತಿದ್ದಂತೆ ಯಮಸಾದನಕ್ಕೆ ಕಳುಹಿಸಿದನು. ಭೀಮಸೇನನ ಆ ಪರಾಕ್ರಮವನ್ನು ನೋಡಿ ಮಹಾತ್ಮನಿಂದ ವಧಿಸಲ್ಪಡುತ್ತಿದ್ದ ಅಲ್ಲಿ ಉಳಿದಿದ್ದ ಧೃತರಾಷ್ಟ್ರನ ಪುತ್ರರಾದರೋ ಭೀಮನ ಭಯದಿಂದ ಪೀಡಿತರಾಗಿ ದಿಕ್ಕು ದಿಕ್ಕುಗಳಲ್ಲಿ ಓಡಿ ಹೋದರು.

ಆಗ ಶಾಂತನವನು ಎಲ್ಲ ಮಹಾರಥರಿಗೆ ಹೇಳಿದನು:

> "ಪಾರ್ಥಿವರೇ! ಈ ಭೀಮನು ರಣದಲ್ಲಿ ಕ್ರುದ್ಧನಾಗಿ ಮಹಾರಥರಾದ, ಶ್ರೇಷ್ಠ, ಜ್ಯೇಷ್ಠ, ಶೂರ ಧಾರ್ತರಾಷ್ಟ್ರರನ್ನು ಸಂಹರಿಸುತ್ತಿದ್ದಾನೆ. ನೀವೆಲ್ಲರೂ ಒಟ್ಟಾಗಿ ಆ ಉಗ್ರಧನ್ವಿಯನ್ನು

ಬಂಧಿಸಿರಿ!”

ಹೀಗೆ ಹೇಳಲು ಧಾರ್ತರಾಷ್ಟ್ರನ ಸೈನಿಕರೆಲ್ಲರೂ ಸಂಕ್ರುದ್ಧರಾಗಿ ಮಹಾಬಲ ಭೀಮಸೇನನ ಮೇಲೆ ಎರಗಿದರು. ಮದೋದಕವನ್ನು ಸುರಿಸುತ್ತಿದ್ದ ಆನೆಯ ಮೇಲಿದ್ದ ಭಗದತ್ತನು ಒಡನೆಯೇ ಎಲ್ಲಿ ಭೀಮನಿದ್ದನೋ ಅಲ್ಲಿಗೆ ಧಾವಿಸಿ ಬಂದನು. ರಣದಲ್ಲಿ ಬರುತ್ತಲೇ ಅವನು ಭೀಮಸೇನನನ್ನು ಶಿಲಾಶಿತಗಳಿಂದ ಮೋಡಗಳು ಭಾಸ್ಕರನನ್ನು ಮುಚ್ಚಿಬಿಡುವಂತೆ ಅದೃಷ್ಯನನ್ನಾಗಿ ಮಾಡಿಬಿಟ್ಟನು. ಯುದ್ಧದಲ್ಲಿ ಸ್ವಬಾಹುಬಲಗಳನ್ನು ಆಶ್ರಯಿಸಿದ್ದ ಅಭಿಮನ್ಯುವೇ ಮೊದಲಾದ ಮಹಾರಥರು ಭೀಮನನ್ನು ಹಾಗೆ ಮುಚ್ಚಿದುದನ್ನು ಸಹಿಸಲಾರದೇ ಆ ಅನೆಯನ್ನು ಎಲ್ಲಕಡೆಗಳಿಂದಲೂ ಸುತ್ತುವರೆದು ಅದನ್ನು ಎಲ್ಲ ಕಡೆಗಳಿಂದಲೂ ಬಾಣಗಳಿಂದ ಹೊಡೆದರು. ನಾನಾ ಚಿಹ್ನೆಗಳಿಂದ ಸುತೇಜಸರಾದ ಅವರ ಶಸ್ತ್ರವೃಷ್ಟಿಯಿಂದ ಗಾಯಗೊಂಡ ಆ ಪ್ರಾಗ್ಜ್ಯೋತಿಷದ ಆನೆಯು ಶರೀರಾದ್ಯಂತ ರಕ್ತ ಸುರಿಸುತ್ತಾ ರಣದಲ್ಲಿ ಒಂದು ಪ್ರೇಕ್ಷಣೀಯವಾಯಿತು. ಬಾಲಸೂರ್ಯನ ನಸುಗೆಂಪಾದ ಕಿರಣಗಳಿಂದ ತೊಳೆಯಲ್ಪಟ್ಟ ದೊಡ್ಡದೊಂದು ಕಾರ್ಮುಗಿಲಿನಂತೆ ಕಾಣುತ್ತಿತ್ತು. ಆ ಮದಸ್ರಾವೀ ಆನೆಯು ಭಗದತ್ತನಿಂದ ಪ್ರಚೋದಿಸಲ್ಪಟ್ಟು ಕಾಲನು ಬಿಟ್ಟ ಅಂತಕನಂತೆ ತನ್ನ ಪದಾಘಾತದಿಂದ ಭೂಮಿಯನ್ನೇ ಕಂಪಿಸುತ್ತಾ ವೇಗವನ್ನು ದ್ವಿಗುಣವಾಗಿಸಿಕೊಂಡು ಅವರೆಲ್ಲರ ಮೇಲೆ ಎರಗಿತು. ಅದರ ಅಸಹ್ಯವಾದ ಆ ಮಹಾರೂಪವನ್ನು ನೋಡಿ ಮಹಾರಥರೆಲ್ಲರೂ

ಅದನ್ನು ಸಹಿಸಿಕೊಳ್ಳಲಾರದೇ ಹತೋತ್ಸಾಹರಾದರು.

## ಘಟೋತ್ಕಚನ ಮಯಾಯುದ್ಧ; ನಾಲ್ಕನೆಯ ದಿವಸದ ಯುದ್ಧ ಸಮಾಪ್ತಿ

ಆಗ ನೃಪತಿಯು ಕ್ರುದ್ಧನಾಗಿ ಭೀಮಸೇನನ ಎದೆಗೆ ನತಪರ್ವ ಶರದಿಂದ ಹೊಡೆದನು. ಆ ಮಹೇಷ್ವಾಸ ರಾಜನಿಂದ ಹೊಡೆಯಲ್ಪಟ್ಟ ಮಹಾರಥನು ಅಂಗಾಂಗಗಳ ನೋವಿನಿಂದ ಬಳಲಿ ಮೂರ್ಛಿತನಾಗಿ ಧ್ವಜದ ದಂಡವನ್ನು ಹಿಡಿದು ಕುಳಿತುಕೊಂಡನು. ಅವರು ಭೀತರಾದುದನ್ನೂ, ಭೀಮಸೇನನು ಮೂರ್ಛಿತನಾದುದನ್ನೂ ಕಂಡು ಪ್ರತಾಪವಾನ್ ಭಗದತ್ತನು ಗಟ್ಟಿಯಾಗಿ ಸಿಂಹನಾದಗೈದನು. ಆಗ ಭೀಮನು ಹಾಗಾದುದನ್ನು ನೋಡಿ ಸಂಕ್ರುದ್ಧನಾದ ಘೋರ ರಾಕ್ಷಸ ಘಟೋತ್ಕಚನು ಅಲ್ಲಿಯೇ ಅಂತರ್ಧಾನನಾದನು. ಅವನು ಭೀರುಗಳ ಭಯವರ್ಧಿಸುವ ದಾರುಣ ಮಾಯೆಯನ್ನು ಮಾಡಿ ಅದೃಶ್ಯನಾಗಿ ನಿಮಿಷಗಳಲ್ಲಿ ಘೋರರೂಪವನ್ನು ತಾಳಿದನು. ತನ್ನದೇ ಮಾಯೆಯಿಂದ ಮಾಡಲ್ಪಟ್ಟ ಐರಾವತವನ್ನೇರಿ ಬಂದನು. ಇತರ ದಿಗ್ಗಜಗಳೂ ಅನುಸರಿಸಿ ಬಂದವು. ಅಂಜನ, ವಾಮನ, ಸುಪ್ರಭೆಯ ಮಹಾಪದ್ಮ ಇವು ಮೂರು ಮಹಾನಾಗಗಳೂ ರಾಕ್ಷಸರನ್ನು ಏರಿಸಿಕೊಂಡು ಬಂದವು. ಆ ಮೂರು ಮಹಾಬಲ ಪರಾಕ್ರಮಿಗಳಾದ ತೇಜೋವೀರ್ಯಬಲೋಪೇತಗಳಾದ ಮಹಾಕಾಯಗಳು ಬಹಳಷ್ಟು ಮದೋದಕವನ್ನು ಸುರಿಸುತ್ತಿದ್ದವು. ಆಗ ಪರಂತಪ ಘಟೋತ್ಕಚನು

ಆನೆಯೊಂದಿಗೆ ಭಗದತ್ತನನ್ನು ಕೊಲ್ಲಲು ಬಯಸಿ ತನ್ನ ಆನೆಯನ್ನು ಪ್ರಚೋದಿಸಿದನು. ಮಹಾಬಲ ರಾಕ್ಷಸರಿಂದ ಪ್ರಚೋದಿತರಾದ ಅನ್ಯ ಗಜಗಳೂ ಕೂಡ ಸಂರಬ್ಧರಾಗಿ ಕೋರೆದಾಡೆಗಳೊಡನೆ ನಾಲ್ಕೂಕಡೆಗಳಿಂದ ಭಗದತ್ತನ ಆ ಅನೆಯ ಮೇಲೆ ಬಿದ್ದು ಬಹುವಾಗಿ ಪೀಡಿಸಿದವು. ಆ ಆನೆಗಳಿಂದ ಪೀಡಿತಗೊಂಡು ಅದು ಶರಗಳ ವೇದನೆಯಿಂದ ಆರ್ತವಾಗಿ ಮೋಡಗಳ ಗುಡುಗಿಗೆ ಸಮನಾದ ಮಹಾನಾದದಿಂದ ಕೂಗಿತು. ಕೂಗುತ್ತಿದ್ದ ಆ ಭೀಮನಿಸ್ವನ ಘೋರ ನಾದವನ್ನು ಕೇಳಿದ ಭೀಷ್ಮನು ರಾಜಾ ಸುಯೋಧನ ಮತ್ತು ದ್ರೋಣನಿಗೆ ಹೇಳಿದನು:

> “ಈ ಮಹೇಷ್ವಾಸ ಭಗದತ್ತನು ಸಂಗ್ರಾಮದಲ್ಲಿ ದುರಾತ್ಮ ಹೈಡಿಂಬಿಯೊಂದಿಗೆ ಯುದ್ಧಮಾಡಿ ಕಷ್ಟಕ್ಕೊಳಗಾಗಿದ್ದಾನೆ. ರಾಕ್ಷಸನು ಮಹಾಮಾಯನಾಗಿದ್ದಾನೆ. ರಾಜನು ಅತ್ಯಂತ ಕುಪಿತನಾಗಿದ್ದಾನೆ. ಅವರಿಬ್ಬರು ಮಹಾವೀರ್ಯವಂತರೂ ಕಾಲಮೃತ್ಯುವಂತೆ ಒಟ್ಟಾಗಿದ್ದಾರೆ. ಹರ್ಷಿತರಾದ ಪಾಂಡವರ ಮಹಾಸ್ವನವೂ ಭೀತಿಗೊಂಡ ಆನೆಯ ಚೀರುವ ಮಹಾಧ್ವನಿಯೂ ಕೇಳಿಬರುತ್ತಿದೆ. ನಿಮಗೆ ಮಂಗಳವಾಗಲಿ! ರಾಜನನ್ನು ಪರಿರಕ್ಷಿಸಲು ಅಲ್ಲಿಗೆ ಹೋಗೋಣ. ರಕ್ಷಣೆಯಿಲ್ಲದವರು ಸಮರದಲ್ಲಿ ಬೇಗನೇ ಪ್ರಾಣಗಳನ್ನು ಕಳೆದುಕೊಳ್ಳುತ್ತಾರೆ. ತ್ವರೆಮಾಡಿ! ತಡಮಾಡುವುದರಿಂದ ಏನು ಪ್ರಯೋಜನ? ರೌದ್ರವೂ ಲೋಮಹರ್ಷಣವೂ ಆದ

ಮಹಾಯುದ್ಧವು ನಡೆಯುತ್ತಿದೆ. ಭಕ್ತನೂ, ಕುಲಪುತ್ರನೂ, ಶೂರನೂ, ಪೃತನಾಪತಿಯೂ ಆದ ಅವನಿಗೆ ನಾವು ರಕ್ಷಣೆಯನ್ನು ಮಾಡುವುದು ಯುಕ್ತವಾಗಿದೆ."

ಭೀಷ್ಮನ ಆ ಮಾತನ್ನು ಕೇಳಿ ಭಾರದ್ವಾಜನನ್ನು ಮುಂದಿರಿಸಿಕೊಂಡ ಎಲ್ಲ ರಾಜರೂ ಒಟ್ಟಿಗೇ ಭಗದತ್ತನನ್ನು ರಕ್ಷಿಸಲು ಬಯಸಿ ಶೀಘ್ರದಲ್ಲಿಯೇ ಅವನು ಎಲ್ಲಿದ್ದನೋ ಅಲ್ಲಿಗೆ ಬಂದರು, ಅವರು ಹೋಗುತ್ತಿರುವುದನ್ನು ನೋಡಿ ಯುಧಿಷ್ಠಿರನನ್ನು ಮುಂದಿರಿಸಿಕೊಂಡ ಪಾಂಚಾಲರು ಪಾಂಡವರೊಡನೆ ಶತ್ರುಗಳನ್ನು ಹಿಂಬಾಲಿಸಿ ಹೋದರು. ಆ ಸೇನೆಗಳನ್ನು ನೋಡಿದ ಪ್ರತಾಪವಾನ್ ರಾಕ್ಷಸೇಂದ್ರನು ಕಲ್ಲುಬಂಡೆಯು ಸ್ಫೋಟಗೊಂಡ ಹಾಗೆ ಗಟ್ಟಿಯಾಗಿ ಕೂಗಿದನು. ಅವನ ಆ ಕೂಗನ್ನು ಕೇಳಿ ಮತ್ತು ಯುದ್ಧಮಾಡುತ್ತಿದ್ದ ಆನೆಯನ್ನೂ ನೋಡಿ ಶಾಂತನವ ಭೀಷ್ಮನು ಪುನಃ ಭಾರದ್ವಾಜನಿಗೆ ಹೇಳಿದನು:

"ದುರಾತ್ಮ ಹೈಡಿಂಬಿಯೊಂದಿಗೆ ಯುದ್ಧಮಾಡಲು ನನಗೆ ಇಷ್ಟವಾಗುತ್ತಿಲ್ಲ. ಈಗ ಅವನು ಬಲ-ವೀರ್ಯಗಳಿಂದ ಸಂಪನ್ನನಾಗಿದ್ದಾನೆ ಮತ್ತು ಸಹಾಯಕರನ್ನೂ ಪಡೆದಿದ್ದಾನೆ. ಯುದ್ಧದಲ್ಲಿ ಇವನನ್ನು ಜಯಿಸಲು ಸ್ವಯಂ ವಜ್ರಭೃತನಿಗೂ ಶಕ್ಯವಿಲ್ಲ. ಅವನು ಲಕ್ಷ್ಯಭೇದನದಲ್ಲಿ ಸಿದ್ಧಹಸ್ತನಾಗಿದ್ದಾನೆ. ನಾವೂ ಕೂಡ ಬಳಲಿದ್ದೇವೆ. ಪಾಂಚಾಲರು ಮತ್ತು ಪಾಂಡವರಿಂದ ನಾವು ದಿವಸವಿಡೀ ಗಾಯಗೊಂಡಿದ್ದೇವೆ.

ಆದುದರಿಂದ ವಿಜಯೋತ್ಸಾಹದಿಂದ ಉಬ್ಬಿರುವ ಪಾಂಡವರೊಂದಿಗೆ ಯುದ್ಧಮಾಡಲು ನನಗೆ ಮನಸ್ಸಾಗುತ್ತಿಲ್ಲ. ಇಂದು ಯುದ್ಧಕ್ಕೆ ವಿರಾಮವನ್ನು ಘೋಷಿಸಿ ನಾಳೆ ನಾವು ಒಟ್ಟಿಗೇ ಶತ್ರುಗಳೊಂದಿಗೆ ಹೋರಾಡೋಣ.”

ಘಟೋತ್ಕಚನ ಭಯದಿಂದ ಪೀಡಿತರಾಗಿ ಅದೇ ಉಪಾಯವನ್ನು ಹುಡುಕುತ್ತಿದ್ದ ಕೌರವರೂ ಕೂಡ ಪಿತಾಮಹನ ಮಾತನ್ನು ಕೇಳಿ ಅದರಂತೆಯೇ ಮಾಡಿದರು. ಕೌರವರು ನಿವೃತ್ತರಾಗಲು ಗೆಲುವಿಂದ ಉಬ್ಬಿದ ಪಾಂಡವರು ಶಂಖ-ವೇಣು ನಿಸ್ವನಗಳೊಂದಿಗೆ ಸಿಂಹನಾದವನ್ನು ಮಾಡಿದರು. ಘಟೋತ್ಕಚನನ್ನು ಮುಂದಿರಿಸಿಕೊಂಡು ಪಾಂಡವ ಕೌರವರ ಆ ದಿನದ ಯುದ್ಧವು ಈ ರೀತಿ ನಡೆಯಿತು. ಆ ನಿಶಾಕಾಲದಲ್ಲಿ ಪಾಂಡವರಿಂದ ಪರಾಜಿತರಾದ ಕೌರವರು ನಾಚಿಕೆಗೊಂಡವರಾಗಿ ತಮ್ಮ ತಮ್ಮ ಶಿಬಿರಗಳಿಗೆ ನಡೆದರು. ಬಾಣಗಳ ಹೊಡೆತಕ್ಕೆ ಗಾಯಗೊಂಡಿದ್ದ ಮಹಾರಥ ಪಾಂಡುಪುತ್ರರೂ ಕೂಡ ಯುದ್ಧದಿಂದ ಸಂತೋಷಗೊಂಡು ಶಿಬಿರಗಳಿಗೆ ತೆರಳಿದರು. ಭೀಮಸೇನ-ಘಟೋತ್ಕಚರನ್ನು ಮುಂದಿಟ್ಟು ಪರಮ ಸಂತೋಷಯುಕ್ತರಾಗಿ ಅನ್ಯೋನ್ಯರನ್ನು ಗೌರವಿಸಿದರು. ವಿವಿಧ ನಾದಗಳು ತೂರ್ಯಸ್ವನಗಳೊಡನೆ, ಸಿಂಹನಾದಮಾಡುವವರೊಂಡನೆ, ಶಂಖನಾದಗಳೊಂಡನೆ ಮಿಶ್ರಿತವಾಗಿ ಜೋರಾಗಿತ್ತು. ಭೂಮಿಯನ್ನು ನಡುಗಿಸುತ್ತಾ ಸಂತೋಷದಲ್ಲಿ ಕುಣಿಯುತ್ತಾ ನಿನ್ನ ಮಗನ ಮರ್ಮಗಳನ್ನು ಚುಚ್ಚುತ್ತಾ ಆ ವುಹಾತ್ಮ ಪರಂತಪರು ನಿಶಾಕಾಲದಲ್ಲಿ

ಶಿಬಿರಗಳಿಗೆ ತೆರಳಿದರು. ನೃಪತಿ ದುರ್ಯೋಧನನಾದರೋ ಭ್ರಾತೃವಧೆಯಿಂದ ಭಾಷ್ಪಶೋಕಸಮಾಕುಲನಾಗಿ ಒಂದು ಕ್ಷಣ ಚಿಂತೆಗೊಳಗಾದನು. ಆಗ ಶಿಬಿರಗಳ ವಿಧಿಯನ್ನು ಯಥಾವಿಧಿಯಾಗಿ ಮಾಡಿ, ಭ್ರಾತೃವ್ಯಸನದಿಂದ ಎಳೆಯಲ್ಪಟ್ಟು ಶೋಕಸಂತಪ್ತನಾದನು.

# ಐದನೆಯ ದಿನದ ಯುದ್ಧ

ರಾತ್ರಿಯು ಕಳೆದು ದಿವಾಕರನು ಉದಯಿಸಲು ಎರಡೂ ಸೇನೆಗಳೂ ಯುದ್ಧಕ್ಕೆ ಬಂದು ಸೇರಿದವು. ಅವರೆಲ್ಲರೂ ಒಟ್ಟಿಗೇ ಪರಸ್ಪರರನ್ನು ಸಂಕ್ರುದ್ಧರಾಗಿ ನೋಡುತ್ತಾ, ಪರಸ್ಪರರನ್ನು ಗೆಲ್ಲಲು ಬಯಸಿ ಹೊರಟರು. ಪಾಂಡವರು ಮತ್ತು ಧಾರ್ತರಾಷ್ಟ್ರರು ವ್ಯೂಹಗಳನ್ನು ರಚಿಸಿ ಸಂರಬ್ಧರಾಗಿ ಪ್ರಹರಿಸಲು ಉದ್ಯುಕ್ತರಾದರು. ಭೀಷ್ಮನು ಮಕರವ್ಯೂಹವನ್ನು ರಚಿಸಿ ಸುತ್ತಲೂ ಅದರ ರಕ್ಷಣೆಯನ್ನು ಮಾಡಿದನು. ಹಾಗೆಯೇ ಪಾಂಡವರು ತಮ್ಮ ವ್ಯೂಹದ ರಕ್ಷಣೆಯ ವ್ಯವಸ್ಥೆಯನ್ನು ಮಾಡಿದರು. ರಥಿಗಳಲ್ಲಿ ಶ್ರೇಷ್ಠ ದೇವವ್ರತನು ಮಹಾ ರಥಸಂಕುಲದಿಂದ ಆವೃತನಾಗಿ ರಥಸೇನ್ಯದೊಂದಿಗೆ ಹೊರಟನು. ಆಯಾ ವಿಭಾಗಗಳಲ್ಲಿ ವ್ಯವಸ್ಥಿತರಾದ ರಥಿಕರು, ಪದಾತಿಗಳು, ಆನೆ ಸವಾರರು ಮತ್ತು ಕುದುರೆ ಸವಾರರು ಒಂದರ ಹಿಂದೆ ಒಂದರಂತೆ ಅವನ ರಥಸೇನೆಯನ್ನು ಹಿಂಬಾಲಿಸಿ ನಡೆದವು. ಉದ್ಯುಕ್ತರಾಗಿರುವ ಅವರನ್ನು ನೋಡಿ ಯಶಸ್ವಿ ಪಾಂಡವರು ಕೂಡ ಜಯಿಸಲಸಾಧ್ಯವಾದ

ವ್ಯೂಹರಾಜ ಶ್ಯೇನವ್ಯೂಹವನ್ನು ರಚಿಸಿದರು. ಅದರ ಮುಖದಲ್ಲಿ ಮಹಾಬಲ ಭೀಮಸೇನನೂ, ಕಣ್ಣುಗಳಲ್ಲಿ ದುರ್ಧರ್ಷ ಶಿಖಂಡಿ ಮತ್ತು ಪಾರ್ಷತ ಧೃಷ್ಟದ್ಯುಮ್ನರು ಶೋಭಿಸಿದರು. ವೀರ ಸತ್ಯವಿಕ್ರಮ ಸಾತ್ಯಕಿಯು ಅದರ ತಲೆಯ ಭಾಗವಾದನು. ಗಾಂಡೀವವನ್ನು ಟೇಂಕರಿಸುತ್ತಾ ಪಾರ್ಥನು ಅದರ ಕುತ್ತಿಗೆಯಾದನು. ಸಮಗ್ರ ಅಕ್ಷೌಹಿಣಿಯ ಎಡಬಾಗದಲ್ಲಿ ಪುತ್ರರೊಂದಿಗೆ ಮಹಾತ್ಮ ಶ್ರೀಮಾನ್ ದ್ರುಪದನಿದ್ದನು. ಅದರ ಬಲಭಾಗದಲ್ಲಿ ಅಕ್ಷೌಹಿಣೀಪತಿ ಕೈಕೇಯನಿದ್ದನು. ಹಿಂಭಾಗದಲ್ಲಿ ದ್ರೌಪದೇಯರೂ, ವೀರ್ಯವಾನ್ ಸೌಭದ್ರನೂ ಇದ್ದರು. ಅವರ ಹಿಂದೆ ಸೋದರರಾದ ಯಮಳರೊಡನೆ ಧೀಮಾನ್, ಚಾರುವಿಕ್ರಮ, ಸ್ವಯಂ ರಾಜಾ ಯುಧಿಷ್ಠಿರನಿದ್ದನು.

ಭೀಮನು ಮಕರದ ಮುಖವನ್ನು ಪ್ರವೇಶಿಸಿ ಸಂಗ್ರಾಮದಲ್ಲಿ ಭೀಷ್ಮನನ್ನು ಎದುರಿಸಿ ಅವನನ್ನು ಸಾಯಕಗಳಿಂದ ಮುಚ್ಚಿಬಿಟ್ಟನು. ಆಗ ಭೀಷ್ಮನು ಪಾಂಡುಪುತ್ರರ ಸೈನ್ಯ ವ್ಯೂಹವನ್ನು ಮೋಹಗೊಳಿಸುತ್ತಾ ಮಹಾಸ್ತ್ರಗಳನ್ನು ಪ್ರಯೋಗಿಸತೊಡಗಿದನು. ರಣಮೂರ್ಧನಿಯಲ್ಲಿ ಸೈನ್ಯವು ಮೋಹಗೊಳ್ಳಲು ತ್ವರೆಮಾಡಿ ಧನಂಜಯನು ಭೀಷ್ಮನನ್ನು ಸಹಸ್ರ ಶರಗಳಿಂದ ಹೊಡೆದನು. ಭೀಷ್ಮನು ಪ್ರಯೋಗಿಸಿದ್ದ ಅಸ್ತ್ರಗಳನ್ನು ನಿರಸನಗೊಳಿಸಿ ತನ್ನ ಸೇನೆಯು ಸಂತೋಷಗೊಂಡು ಯುದ್ಧದಲ್ಲಿ ನಿಲ್ಲುವಂತೆ ಮಾಡಿದನು. ಆಗ ಹಿಂದೆ ತನ್ನ ಸೇನೆಯ ಘೋರ ವಧೆಯನ್ನು ನೋಡಿದ್ದ ಬಲಿಗಳಲ್ಲಿ ಶ್ರೇಷ್ಠ ಮಹಾರಥ ರಾಜಾ ದುರ್ಯೋಧನನು ಯುದ್ಧದಲ್ಲಿ ತನ್ನ ಭ್ರಾತೃಗಳ ವಧೆಯನ್ನು

ಸ್ಮರಿಸಿಕೊಳ್ಳುತ್ತಾ ಭಾರದ್ವಾಜನಿಗೆ ಹೇಳಿದನು:

> “ಆಚಾರ್ಯ! ನೀನು ಸತತವೂ ನನ್ನ ಹಿತವನ್ನೇ ಬಯಸುತ್ತೀಯೆ. ನಾವು ನಿನ್ನನ್ನು ಮತ್ತು ಪಿತಾಮಹ ಭೀಷ್ಮನನ್ನು ಆಶ್ರಯಿಸಿ ರಣದಲ್ಲಿ ದೇವತೆಗಳನ್ನು ಕೂಡ ಗೆಲ್ಲಬಲ್ಲೆವು ಎನ್ನುವುದರಲ್ಲಿ ಸಂಶಯವಿಲ್ಲ. ಇನ್ನು ಯುದ್ಧದಲ್ಲಿ ಹೀನಪರಾಕ್ರಮರಾದ ಪಾಂಡುಸುತರನು ಏನು?”

ಅವನು ಹೀಗೆ ಹೇಳಲು ದ್ರೋಣನು ಸಾತ್ಯಕಿಯನ್ನು ನೋಡಿ ಪಾಂಡವರ ಸೇನೆಯ ಮೇಲೆ ಆಕ್ರಮಣಿಸಿದನು. ಸಾತ್ಯಕಿಯಾದರೋ ದ್ರೋಣನನ್ನು ತಡೆದನು. ಆಗ ಲೋಮಹರ್ಷಣ ತುಮುಲ ಯುದ್ಧವು ಪ್ರಾರಂಭವಾಯಿತು. ರಣದಲ್ಲಿ ಕ್ರುದ್ಧನಾದ ಪ್ರತಾಪವಾನ್ ಭಾರದ್ವಾಜನು ನಗುತ್ತಾ ಶೈನೇಯನ ಕೊರಳಿಗೆ ನಿಶಿತ ಬಾಣಗಳಿಂದ ಹೊಡೆದನು. ಆಗ ಭೀಮಸೇನನು ದ್ರೋಣನಿಂದ ಸಾತ್ಯಕಿಯನ್ನು ರಕ್ಷಿಸುತ್ತಾ ಕ್ರುದ್ಧನಾಗಿ ಭಾರದ್ವಾಜನನ್ನು ಹೊಡೆದನು. ಆಗ ದ್ರೋಣ, ಭೀಷ್ಮ ಮತ್ತು ಶಲ್ಯರು ಕ್ರೋಧದಿಂದ ಭೀಮಸೇನನನ್ನು ಶರಗಳಿಂದ ಹೊಡೆಯತೊಡಗಿದರು. ಸಂಕ್ರುದ್ಧರಾದ ಅಭಿಮನ್ಯು ಮತ್ತು ದ್ರೌಪದೇಯರು ನಿಶಿತ ಬಾಣಗಳಿಂದ ಮತ್ತು ಆಯುಧಗಳಿಂದ ಅವರನ್ನು ಹೊಡೆದರು. ಸಂಕ್ರುದ್ಧರಾಗಿ ಮೇಲೆರಗಿ ಬರುತ್ತಿರುವ ಮಹಾಬಲ ಭೀಷ್ಮ-ದ್ರೋಣರನ್ನು ಶಿಖಂಡಿಯು ಎದುರಿಸಿ ಯುದ್ಧಮಾಡಿದನು. ಆ ವೀರನು ಮೋಡದ ಗರ್ಜನೆಯುಳ್ಳ ಬಲವಾದ

ಧನುಸ್ಸನ್ನು ಹಿಡಿದು ಕ್ಷಣಮಾತ್ರದಲ್ಲಿ ದಿವಾಕರನನ್ನೇ ಮುಚ್ಚಿಬಿಡುವಂತೆ ಶರವರ್ಷವನ್ನು ಸುರಿಸಿದನು. ಶಿಖಂಡಿಯನ್ನು ಎದುರಿಸಿ ಭರತರ ಪಿತಾಮಹನು ಅವನ ಸ್ತ್ರೀತ್ವವನ್ನು ಸ್ಮರಿಸಿಕೊಂಡು ಹೋರಾಡುವುದನ್ನು ನಿಲ್ಲಿಸಿದನು. ಆಗ ದ್ರೋಣನು ದುರ್ಯೋಧನನಿಂದ ಚೋದಿತನಾಗಿ ಭೀಷ್ಮನನ್ನು ರಕ್ಷಿಸಲು ರಣದಲ್ಲಿ ಮುಂದೆಬಂದನು. ದ್ರೋಣನು ಶಿಖಂಡಿಯನ್ನು ಎದುರಿಸಿ ಸಂಗ್ರಾಮದಲ್ಲಿ ಯುಗಾಂತದ ಅಗ್ನಿಯಂತೆ ಉಲ್ಬಣಿಸಿ ಅವನನ್ನು ಹೊರಹಾಕಿದನು. ಆಗ ದುರ್ಯೋಧನನು ಮಹಾ ಸೇನೆಯೊಂದಿಗೆ ಭೀಷ್ಮನ ಸಮೀಪಕ್ಕೆ ಬಂದು ಅವನನ್ನು ರಕ್ಷಿಸಿದನು. ಹಾಗೆಯೇ ಪಾಂಡವರು ಧನಂಜಯನನ್ನು ಮುಂದಿಟ್ಟುಕೊಂಡು ಜಯದ ಕುರಿತು ದೃಢ ನಿಶ್ಚಯವನ್ನು ಮಾಡಿ ಭೀಷ್ಮನನ್ನೇ ಆಕ್ರಮಣಿಸಿದರು. ಆಗ ಅಲ್ಲಿ ದೇವ-ದಾನರವರ ನಡುವಿನಂತೆ ನಿತ್ಯ ಯಶ ಮತ್ತು ಜಯವನ್ನು ಬಯಸುವ ಅವರ ನಡುವೆ ಪರಮಾದ್ಭುತವಾದ ಘೋರ ಯುದ್ಧವು ನಡೆಯಿತು.

## ತುಮುಲ ಯುದ್ಧ

ಧಾರ್ತರಾಷ್ಟ್ರರನ್ನು ಭೀಮಸೇನನ ಭಯದಿಂದ ಪಾರುಗೊಳಿಸಲು ಬಯಸಿ ಆಗ ಭೀಷ್ಮ ಶಾಂತನವನು ತುಮುಲ ಯುದ್ಧವನ್ನು ಮಾಡಿದನು. ಆ ಪೂರ್ವಾಹ್ಣದಲ್ಲಿ ಶೂರಮುಖ್ಯರ ವಿನಾಶಕಾರಕ ಮಹಾರೌದ್ರ ಯುದ್ಧವು ಕುರು ಮತ್ತು ಪಾಂಡವರ ರಾಜರ ನಡುವೆ ನಡೆಯಿತು. ಆ ಮಹಾಭಯಂಕರ ಮಿಶ್ರ ಸಂಗ್ರಾಮವು ನಡೆಯುತ್ತಿರಲು

ಗಗನವನ್ನು ಮುಟ್ಟುವ ಮಹಾ ತುಮುಲ ಶಬ್ಧವು ಉಂಟಾಯಿತು. ಮಹಾ ಆನೆಗಳ ಘೀಳು, ಕುದುರೆಗಳ ಹೇಷಾವರ, ಭೇರಿ-ಶಂಖಗಳ ನಾದದ ತುಮುಲ ಶಬ್ಧವು ಉಂಟಾಯಿತು. ವಿಜಯಕ್ಕಾಗಿ ವಿಕ್ರಾಂತರಾಗಿ ಯುದ್ಧಮಾಡುತ್ತಿದ್ದ ಮಹಾಬಲ ಮಹರ್ಷಭರು ಕೊಟ್ಟಿಗೆಯಲ್ಲಿ ಗೂಳಿಗಳಂತೆ ಅನ್ಯೋನ್ಯರ ಮೇಲೆ ಗರ್ಜಿಸುತ್ತಿದ್ದರು. ಸಮರದಲ್ಲಿ ತಲೆಯ ಮೇಲೆ ಬೀಳುತ್ತಿದ್ದ ನಿಶಿತ ಬಾಣಗಳು ಆಕಾಶದಿಂದ ಬೀಳುವ ಕಲ್ಲಿನ ಮಳೆಗಳಂತಿದ್ದವು. ಬಂಗಾರದ ಹೊಳೆಯುವ ಕುಂಡಲ-ಕಿರೀಟಗಳನ್ನು ಧರಿಸಿದ್ದ ಶಿರಗಳು ಬೀಳುತ್ತಿರುವುದು ಕಾಣುತ್ತಿತ್ತು. ವಿಶಿಖಗಳಿಂದ ಕತ್ತರಿಸಲ್ಪಟ್ಟ ದೇಹಗಳು, ಬಾಹುಗಳು, ಕಾರ್ಮುಕಗಳು, ಆಭರಣಗಳೊಂದಿಗೆ ಕೈಗಳು ಇವುಗಳಿಂದ ಭೂಮಿಯು ಮುಚ್ಚಿ ಹೋಗಿತ್ತು. ಮುಹೂರ್ತದಲ್ಲಿ ವಸುಂಧರೆಯು ಕವಚಗಳು ಅಪ್ಪಿರುವ ದೇಹಗಳಿಂದ, ಸಮಲಂಕೃತ ಕೈಗಳಿಂದ, ಚಂದ್ರಸಂಕಾಶ ಮುಖಗಳಿಂದ, ಶುಭವಾದ ರಕ್ತಾಂತ ನಯನಗಳಿಂದ, ಗಜ-ವಾಜಿ-ಮನುಷ್ಯರೆಲ್ಲರ ದೇಹಗಳಿಂದ ಎಲ್ಲ ಕಡೆ ಹರಡಿ ತುಂಬಿ ಹೋಯಿತು.

ಧೂಳು ಮೋಡಗಳಂತೆಯೂ ತುಮುಲ ಶಸ್ತ್ರಗಳು ಮಿಂಚಿನಂತೆಯೂ ಪ್ರಕಾಶಿಸಿದವು. ಆಯುಧಗಳ ನಿರ್ಘೋಷವು ಗುಡುಗಿನಂತೆ ಕೇಳಿದವು. ಕುರುಗಳ ಮತ್ತು ಪಾಂಡವರ ಆ ಕಟುಕ ಸಂಪ್ರಹಾರ ತುಮುಲವು ರಕ್ತವೇ ನೀರಾಗಿರುವ ನದಿಯನ್ನೇ ಹರಿಸಿತು. ಆ ಮಹಾಭಯಂಕರ ಲೋಮಹರ್ಷಣ ಘೋರ ತುಮುಲದಲ್ಲಿ ಯುದ್ಧದುರ್ಮದ ಕ್ಷತ್ರಿಯರು

ಶರಗಳ ಮಳೆಯನ್ನೇ ಸುರಿಸಿದರು. ಅಲ್ಲಿ ಶರವರ್ಷದಿಂದ ಪೀಡಿತರಾದ ಕೌರವ ಮತ್ತು ಪಾಂಡವರ ಕಡೆಯ ಆನೆಗಳು ಚೀರಿಕೊಳ್ಳುತ್ತಿದ್ದವು. ಶರಘಾತ ಪೀಡಿತವಾದ, ಆರೋಹಿಗಳನ್ನು ಕಳೆದುಕೊಂಡ ಕುದುರೆಗಳು ಹತ್ತೂ ದಿಕ್ಕುಗಳಲ್ಲಿ ಓಡಿ, ಹಾರಿ, ಇನ್ನು ಕೆಲವು ಬೀಳುತ್ತಿದ್ದವು. ಅಲ್ಲಲ್ಲಿ ಪಲಾಯನ ಮಾಡುತ್ತಿದ್ದ ಅಥವಾ ಹೊಡೆದು ಬಿದ್ದಿದ್ದ ಕೌರವ ಮತ್ತು ಪಾಂಡವರ ಕಡೆಯ ಯೋಧರು, ಕುದುರೆಗಳು, ಆನೆಗಳು, ರಥಗಳು ಕಂಡುಬಂದವು. ಕಾಲಚೋದಿತರಾದ ಕ್ಷತ್ರಿಯರು ಅಲ್ಲಿ ಗದೆ, ಖಡ್ಗ, ಪ್ರಾಸ, ನತಪರ್ವ ಬಾಣಗಳಿಂದ ಪರಸ್ಪರರನ್ನು ಕೊಂದರು. ಇನ್ನು ಕೆಲವು ಯುದ್ಧ ಕುಶಲ ವೀರರು ಯುದ್ಧದಲ್ಲಿ ಉಕ್ಕಿನ ಪರಿಘಗಳಂತಿರುವ ಬಾಹುಗಳಿಂದಲೇ ಹಲವರನ್ನು ಜಜ್ಜಿ ಹಾಕಿದರು. ಕೌರವ ಮತ್ತು ಪಾಂಡವರ ವೀರರು ಮುಷ್ಟಿಗಳಿಂದ, ಒದೆಗಳಿಂದ, ಹೊಡೆತದಿಂದ ಅನ್ಯೋನ್ಯರನ್ನು ಸಂಹರಿಸಿದರು. ಅಲ್ಲಿ ವಿರಥರೂ ಮತ್ತು ರಥಿಗಳೂ ಶ್ರೇಷ್ಠ ಖಡ್ಗಗಳನ್ನು ಹಿಡಿದು ಪರಸ್ಪರರನ್ನು ದ್ವೇಷಿಸಿ ಅನ್ಯೋನ್ಯರನ್ನು ಹೊಡೆಯತ್ತಿದ್ದರು. ಆಗ ರಾಜಾ ದುರ್ಯೋಧನನು ಅನೇಕ ಕಲಿಂಗರಿಂದ ಆವೃತನಾಗಿ ಭೀಷ್ಮನನ್ನು ಮುಂದಿರಿಸಿಕೊಂಡು ಪಾಂಡವರ ಮೇಲೆ ಎರಗಿದನು. ಹಾಗೆಯೇ ಪಾಂಡವರೆಲ್ಲರೂ ವೃಕೋದರನನ್ನು ಸುತ್ತುವರೆದು ರಭಸ ವಾಹನರಾಗಿ ಕ್ರುದ್ಧರಾಗಿ ಭೀಷ್ಮನನ್ನು ಎದುರಿಸಿದರು.

ಸಹೋದರರೂ ಮತ್ತು ಅನ್ಯ ಪಾರ್ಥಿವರೂ ಭೀಷ್ಮನೊಂದಿಗೆ ಯುದ್ಧಮಾಡುತ್ತಿರುವುದನ್ನು ನೋಡಿ ಧನಂಜಯನು ಅಸ್ತ್ರಗಳನ್ನು ಎತ್ತಿ

ಹಿಡಿದು ಗಾಂಗೇಯನಿದ್ದಲ್ಲಿಗೆ ಧಾವಿಸಿದನು. ಪಾರ್ಥನ ಪಾಂಚಜನ್ಯದ ಮತ್ತು ಧನುಸ್ಸು ಗಾಂಡೀವದ ನಿರ್ಘೋಷ ಮತ್ತು ಧ್ವಜವನ್ನು ನೋಡಿ ಎಲ್ಲರನ್ನೂ ಭಯವು ಆವರಿಸಿತು. ವೃಕ್ಷಗಳೂ ಮರೆಮಾಡದಂತಹ, ಧೂಮಕೇತುವಿನಂತೆ ಎತ್ತರದಲ್ಲಿ ಹಾರುತ್ತಿದ್ದ, ಬಹುವರ್ಣದ, ಚಿತ್ರಗಳಿಂದ ಕೂಡಿದ, ದಿವ್ಯ, ವಾನರ ಲಕ್ಷಣ ಗಾಂಡೀವಧನ್ವಿಯ ಧ್ವಜವು ಕಂಡುಬಂದಿತು. ಅಂಬರದಲ್ಲಿ ಮೇಘಗಳ ಮಧ್ಯೆ ಮಿಂಚು ಹೊಳೆಯುವಂತೆ ಯೋಧರು ಮಹಾರಥದಲ್ಲಿ ಬಂಗಾರದ ದಂಡವನ್ನುಳ್ಳ ಗಾಂಡೀವವನ್ನು ನೋಡಿದರು. ಕೌರವ ಸೇನೆಯನ್ನು ಸಂಹರಿಸುವಾಗ ಕೇಳಿಬರುವ ಅವನ ಗರ್ಜನೆಯು ಶಕ್ರನ ಗರ್ಜನೆಯಂತಿತ್ತು ಮತ್ತು ಚಪ್ಪಾಳೆಯೂ ಸುಘೋರ ಶಬ್ಧವುಳ್ಳದ್ದಾಗಿತ್ತು. ಅವನು ಭಿರುಗಾಳಿ ಮಿಂಚುಗಳಿಂದ ಕೂಡಿದ ಮೋಡಗಳಂತೆ ಎಲ್ಲ ದಿಕ್ಕುಗಳನ್ನೂ ಎಲ್ಲ ಕಡೆಗಳಿಂದಲೂ ಶರವರ್ಷಗಳಿಂದ ತುಂಬಿಸಿಬಿಟ್ಟನು. ಭೈರವಾಸ್ತ್ರ ಧನಂಜಯನು ಅಸ್ತ್ರಗಳಿಂದ ಮೋಹಿತನಾಗಿ ಪೂರ್ವ-ಪಶ್ಚಿಮ ದಿಕ್ಕುಗಳನ್ನೇ ಗುರುತಿಸಲಾಗದ ಗಾಂಗೇಯನನ್ನು ಎದುರಿಸಿದನು. ಕೌರವ ಯೋಧರು ಅವರ ವಾಹನಗಳು ಬಳಲಿರಲು ಅಸ್ತ್ರಗಳನ್ನು ಕಳೆದುಕೊಂಡು, ಹತಚೇತನರಾಗಿ ಅನ್ಯೋನ್ಯರಿಗೆ ಅಂಟಿಕೊಂಡರು. ಧಾರ್ತರಾಷ್ಟ್ರ ಸರ್ವರೊಂದಿಗೆ ಅವರು ಭೀಷ್ಮನನ್ನೇ ಅವಲಂಬಿಸಿದರು. ಆಗ ರಣದಲ್ಲಿ ಅವರೆಲ್ಲರ ರಕ್ಷಣೆಯ ಭಾರವು ಭೀಷ್ಮ ಶಾಂತನವನದಾಯಿತು. ಭಯಗೊಂಡು ರಥಿಗಳು ರಥಗಳಿಂದ ಮತ್ತು ಸವಾರರು ಕುದುರೆಗಳ

ಬೆನ್ನ ಮೇಲಿಂದ ಹಾರಿದರು. ಪದಾತಿಗಳೂ ಕೂಡ ಭೂಮಿಯ ಮೇಲೆ ಬಿದ್ದರು.

ಮೋಡಗಳ ಗರ್ಜನೆಯಂತಿದ್ದ ಗಾಂಡೀವದ ನಿರ್ಘೋಶವನ್ನು ಕೇಳಿ ಸರ್ವ ಸೇನೆಗಳೂ ಭಯದಿಂದ ಕರಗಿ ಹೋದವು. ಆಗ ಶೀಘ್ರಗಾಮಿಗಳಾದ ಅನೇಕ ಗೋಪರು ಮತ್ತು ಬಹುಸಹಸ್ರ ಗೋವಾಸನರ ಸೇನೆಯಿಂದ ಆವೃತರಾಗಿ ಕಾಂಬೋಜಮುಖ್ಯರು, ಮದ್ರ-ಸೌವೀರ-ಗಾಂಧಾರ-ತ್ರಿಗರ್ತರು, ಸರ್ವಕಾಲಿಂಗಮುಖ್ಯರಿಂದ ಆವೃತನಾದ ಕಲಿಂಗಾಧಿಪತಿ, ದುಃಶಾಸನನನ್ನು ಮುಂದಿರಿಸಿಕೊಂಡು ಆನೆ ಮತ್ತು ನರಗಣಗಳ ಸೇನೆ, ಸರ್ವರಾಜರೊಂದಿಗೆ ನೃಪತಿ ಜಯದ್ರಥ, ಮತ್ತು ದುರ್ಯೋಧನನಿಂದ ಪ್ರಚೋದಿತರಾದ ಹದಿಲಾಲ್ಕು ಸಾವಿರ ಶ್ರೇಷ್ಠ ಅಶ್ವಯೋಧರು ಸೌಬಲನನ್ನು ಸುತ್ತುವರೆದು ಎಲ್ಲರೂ ಒಟ್ಟಿಗೇ ಮತ್ತು ಪ್ರತ್ಯೇಕವಾಗಿ ರಥ ವಾಹನಗಳಿಂದ ಪಾಂಡವರೊಂದಿಗೆ ಯುದ್ಧಮಾಡ ತೊಡಗಿದರು. ರಥಿಗಳು, ಆನೆಗಳು ಮತ್ತು ಕುದುರೆಗಳ ಚಲನೆಯಿಂದ ಮೇಲೆದ್ದ ಮೇಘ ಸದೃಶ ಧೂಳು ಯುದ್ಧವನ್ನು ಇನ್ನಷ್ಟು ಭಯಂಕರವಾಗಿ ಮಾಡಿತು. ತೋಮರ, ಪ್ರಾಸ, ನಾರಾಚಗಳನ್ನು ಹೊಂದಿದ್ದ ಗಜಾಶ್ವರಥಯೋಧರ ಮಹಾಬಲದಿಂದ ಭೀಷ್ಮನು ಕಿರೀಟಿಯನ್ನು ಆಕ್ರಮಣಿಸಿದನು. ಅವಂತಿಯವನು ಕಾಶಿರಾಜನೊಂದಿಗೆ, ಸೈಂಧವನು ಭೀಮಸೇನನೊಂದಿಗೆ, ಅಜಾತ ಶತ್ರುವು ಮಕ್ಕಳು ಅಮಾತ್ಯರೊಂದಿಗೆ ಮದ್ರರ ಋಷಭ ಯಶಸ್ವಿ ಶಲ್ಯನೊಂದಿಗೆ ಯುದ್ಧಮಾಡಿದರು.

ವಿಕರ್ಣನು ಸಹದೇವನೊಡನೆ, ಶಿಖಂಡಿಯು ಚಿತ್ರಸೇನನೊಡನೆ, ಮತ್ಸ್ಯರು ದುರ್ಯೋಧನ-ಶಕುನಿಯರನ್ನು ಎದುರಿಸಿ ಹೋದರು. ದ್ರುಪದ, ಚೇಕಿತಾನ ಮತ್ತು ಮಹಾರಥ ಸಾತ್ಯಕಿಯರು ಪುತ್ರನೊಡನಿದ್ದ ಮಹಾತ್ಮ ದ್ರೋಣನೊಡನೆ ಯುದ್ಧ ಮಾಡಿದರು. ಹೀಗೆ ಸೇನೆಯ ಅಗ್ರಭಾಗದಲ್ಲಿದ್ದ ಅಶ್ವಸೈನ್ಯಗಳೂ, ತಿರುಗುತ್ತಿದ್ದ ಆನೆ-ರಥಗಳ ಸೈನ್ಯಗಳೂ ಸರ್ವತ್ರ ಪರಸ್ಪರ ಯುದ್ಧದಲ್ಲಿ ತೊಡಗಿದರು. ಮೋಡಗಳಿಲ್ಲದಿರುವ ಆಕಾಶದಲ್ಲಿ ಕಣ್ಣುಗಳನ್ನು ಕೋರೈಸುವ ಅತಿ ತೀವ್ರ ಮಿಂಚು ಕಾಣಿಸಿಕೊಂಡಿತು. ದಿಕ್ಕುಗಳು ಧೂಳಿನಿಂದ ತುಂಬಿಹೋದವು. ಸಿಡಿಲಿಗೆ ಸಮಾನ ಶಬ್ಧದೊಂದಿಗೆ ಉಲ್ಕೆಗಳು ಕಾಣಿಸಿದವು. ಚಂಡಮಾರುತವು ಹುಟ್ಟಿ ಧೂಳಿನ ಮಳೆಯನ್ನೇ ಸುರಿಸಿತು. ಸೈನ್ಯಗಳು ಏರಿಸಿದ ಧೂಳು ನಭವನ್ನು ಸೇರಿ ಸೂರ್ಯನನ್ನು ಮುಚ್ಚಿಹಾಕಿತು. ಧೂಳಿನಿಂದ ತುಂಬಿಕೊಂಡ ಮತ್ತು ಅಸ್ತ್ರಜಾಲಗಳಿಂದ ಪೀಡಿತರಾದ ಸರ್ವ ಸತ್ತ್ವಗಳಲ್ಲಿ ಅತೀವ ಭ್ರಾಂತಿಯುಂಟಾಯಿತು. ವೀರರ ಬಾಹುಗಳಿಂದ ಪ್ರಯೋಗಿಸಲ್ಪಟ್ಟ, ಸರ್ವ ಆವರಣಗಳನ್ನೂ ಭೇದಿಸಬಲ್ಲಂತಹ ಶರಜಾಲಗಳ ಸಂಘಾತದಿಂದ ತುಮುಲವುಂಟಾಯಿತು. ಭುಜೋತ್ತಮರಿಂದ ಪ್ರಯೋಗಿಸಲ್ಪಟ್ಟ ನಕ್ಷತ್ರಗಳಂತೆ ಹೊಳೆಯುತ್ತಿದ್ದ ಶಸ್ತ್ರಗಳು ಆಕಾಶದಲ್ಲಿ ಬೆಳಕನ್ನುಂಟುಮಾಡಿದವು. ಸುವರ್ಣಮಯ ಬಲೆಗಳಿಂದ ಪರಿವೃತವಾಗಿದ್ದ, ಎತ್ತಿನ ಚರ್ಮದಿಂದ ಮಾಡಲ್ಪಟ್ಟಿದ್ದ, ಚಿತ್ರವಿಚಿತ್ರ ಗುರಾಣಿಗಳು ರಣಾಂಗಣದ ಎಲ್ಲ ದಿಕ್ಕುಗಳಲ್ಲಿಯೂ ಬಿದ್ದಿದ್ದವು.

ಸೂರ್ಯವರ್ಣದ ಖಡ್ಗಗಳಿಂದ ಬೀಳಿಸಲ್ಪಟ್ಟ ಶರೀರ-ಶಿರಗಳು ಎಲ್ಲಕಡೆ ಎಲ್ಲ ದಿಕ್ಕುಗಳಲ್ಲಿ ಕಂಡುಬಂದವು. ಅಲ್ಲಲ್ಲಿ ಗಾಲಿಗಳು-ನೊಗಗಳು ಮಹಾಧ್ವಜಗಳು ತುಂಡಾಗಿ ಬಿದ್ದಿದ್ದವು ಮತ್ತು ಸತ್ತಿರುವ ಕುದುರೆಗಳ ಮೇಲಿದ್ದ ಮಹಾರಥರು ನೆಲಕ್ಕೀಡಾಗಿದ್ದರು. ಶಸ್ತ್ರಗಳಿಂದ ಗಾಯಗೊಂಡ ಇನ್ನು ಕೆಲವು ಕುದುರೆಗಳು ರಥಯೋಧರು ಹತರಾಗಿದ್ದರೂ ರಥಗಳನ್ನು ಎಳೆದು ಕೊಂಡು ಹೋಗುತ್ತಿದ್ದವು.

ಕೆಲವು ಉತ್ತಮ ಕುದುರೆಗಳು ಶರಗಳಿಂದ ಹೊಡೆಯಲ್ಪಟ್ಟು ಭಿನ್ನ ದೇಹಿಗಳಾಗಿದ್ದರೂ ಕಟ್ಟಿದ ನೊಗಗಳನ್ನು ಆಲ್ಲಲ್ಲಿ ಎಳೆದುಕೊಂಡು ಹೋಗುತ್ತಿದ್ದವು. ಕೆಲವೊಂದೆಡೆ ಒಂದೇ ಬಲಶಾಲಿ ಆನೆಯಿಂದ ಸೂತ, ಕುದುರೆ, ಮತ್ತು ರಥದೊಡನೆ ಹತರಾದ ರಥಿಗಳು ಕಂಡುಬಂದರು. ಅನೇಕ ಸೈನ್ಯಗಳು ಸಂಹಾರವಾಗುತ್ತಿದ್ದ ಆ ರಣದಲ್ಲಿ ಮದೋದಕವನ್ನು ಸುರಿಸಿತ್ತಿರುವ ಆನೆಗಳ ಗಂಧವನ್ನೇ ಆಘ್ರಾಣಿಸಿ ಇತರ ಆನೆಗಳು ಆಸಕ್ತಿಯನ್ನು ಕಳೆದುಕೊಂಡವು. ನಾರಾಚಗಳಿಂದ ಸಂಹರಿಸಲ್ಪಟ್ಟು ತೋಮರಸಹಿತ ಕೆಳಗೆ ಬೀಳುತ್ತಿದ್ದ ಮಾವಟಿಗರಿಂದಲೂ ಅಸುನೀಗಿದ ಆನೆಗಳಿಂದಲೂ ಆ ರಣಭೂಮಿಯು ಮುಚ್ಚಿ ಹೋಯಿತು. ಸೇನೆಗಳ ಸಂಘರ್ಷದಲ್ಲಿ ಪ್ರಚೋದಿತವಾದ ಶ್ರೇಷ್ಠ ಆನೆಗಳು ಯೋಧರು ಧ್ವಜಗಳೊಂದಿಗೆ ಅನೇಕ ರಥಗಳನ್ನು ಮುರಿದು ಉರುಳಿಸಿದವು. ಆ ಸಂಯುಗದಲ್ಲಿ ಆನೆಗಳು ನಾಗರಾಜನಂತಿರುವ ಸೊಂಡಿಲುಗಳಿಂದ ರಥದ ನೊಗಗಳನ್ನು ಎತ್ತಿಹಾಕಿ ಮುರಿದುದ್ದೂ ಕಂಡುಬಂದಿತು. ಉದ್ದ ಸೊಂಡಿಲುಗಳಿಂದ ರಥದ ಮೇಲಿದ್ದ ರಥಿಗಳ ಕೂದಲಿನಿಂದ

ಹಿಡಿದೆಳೆದು ಮರದ ಶಾಖೆಗಳಂತೆ ಮೇಲೆತ್ತಿ ರಣದಲ್ಲಿ ಜಜ್ಜಿ ಹಾಕುತ್ತಿದ್ದವು. ರಥಗಳು ರಥಗಳೊಂದಿಗೆ ಯುದ್ಧದಲ್ಲಿ ತೊಡಗಿರುವಾಗ ವರವಾರಣಗಳು ಅವುಗಳನ್ನು ಎಳೆದುಕೊಂಡು ಎಲ್ಲ ದಿಕ್ಕುಗಳಲ್ಲಿ ತಿರುಗಿಸಿ ಅವುಗಳನ್ನು ತಲೆಕೆಳಗೆ ಮಾಡಿ ಬೀಳಿಸುತ್ತಿದ್ದವು. ಹಾಗೆ ಎಳೆದುಕೊಂಡು ಹೋಗುತ್ತಿರುವ ಆನೆಗಳು ನೋಡಲು ಸರೋವರದಿಂದ ಕುಮುದಗಳ ಜಾಲಗಳನ್ನು ಎಳೆದುಕೊಂಡು ಹೋಗುತ್ತಿವೆಯೋ ಎನ್ನುವಂತೆ ತೋರುತ್ತಿದ್ದವು. ಈ ರೀತಿ ಅಲ್ಲಿ ಪ್ರಾಣಗಳನ್ನು ತೊರೆದ ಕುದುರೆ ಸವಾರರಿಂದಲೂ, ಪದಾತಿಗಳಿಂದಲೂ, ಧ್ವಜಗಳಿಂದ ಕೂಡಿದ ಮಹಾರಥಗಳಿಂದಲೂ ಆ ವಿಶಾಲ ರಣ ಭೂಮಿಯು ತುಂಬಿಹೋಯಿತು.

ಶಿಖಂಡಿಯು ಮತ್ಸ್ಯ ವಿರಾಟನನ್ನೊಡಗೂಡಿಕೊಂಡು ಮಹೇಷ್ವಾಸ, ಸುದುರ್ಜಯ ಭೀಷ್ಮನಿದ್ದೆಡೆಗೆ ಧಾವಿಸಿದನು. ರಣದಲ್ಲಿ ಧನಂಜಯನು ಅನ್ಯ ಶೂರ, ಮಹೇಷ್ವಾಸ, ಮಹಾಬಲ ರಾಜರನ್ನೂ, ದ್ರೋಣ, ಕೃಪ, ವಿಕರ್ಣರನ್ನೂ ಬಹುವಾಗಿ ಬಾಧಿಸಿದನು. ಭೀಮಸೇನನು ಅಮಾತ್ಯ-ಬಂಧುಗಳೊಡನೆ ಮಹೇಷ್ವಾಸ ಸೈಂಧವನನ್ನು, ಪೂರ್ವ ಮತ್ತು ದಕ್ಷಿಣ ಪ್ರದೇಶಗಳ ಭೂಮಿಪರನ್ನೂ, ಮಹೇಷ್ವಾಸ ಅಮರ್ಷಣ ದುರ್ಯೋಧನ ಮತ್ತು ದುಃಸ್ಸಹರನ್ನು ಎದುರಿಸಿದನು. ದುರ್ಜಯರೂ ಮಹೇಷ್ವಾಸರೂ ಆದ ತಂದೆ-ಮಗರಾದ ಮಹಾರಥ ಶಕುನಿ-ಉಲೂಕರನ್ನು ಸಹದೇವನು ಎದುರಿಸಿದನು. ಮಹಾರಥ ಯುಧಿಷ್ಠಿರನು ಗಜಸೇನೆಯೊಂದಿಗೆ ಹೋರಾಡುತ್ತಿದ್ದನು. ಮಾದ್ರೀಪುತ್ರ ಶೂರ ನಕುಲ

ಪಾಂಡವನು ಯುದ್ಧದಲ್ಲಿ ಸಂಕ್ರಂದನಂತೆ ರಥೋದಾರರಾದ ತ್ರಿಗರ್ತರೊಡನೆ ಯುದ್ಧಮಾಡಿದನು. ದುರ್ಧರ್ಷರಾದ ಶಾಲ್ವ-ಕೇಕಯರೊಂದಿಗೆ ಮಹಾರಥ ಸಾತ್ಯಕಿ, ಚೇಕಿತಾನ ಮತ್ತು ಸೌಭದ್ರರು ಹೋರಾಡುತ್ತಿದ್ದರು. ಸಮರದಲ್ಲಿ ದುರ್ಜಯರಾದ ಧೃಷ್ಟಕೇತು ಮತ್ತು ರಾಕ್ಷಸ ಘಟೋತ್ಕಚರು ಧಾರ್ತರಾಷ್ಟ್ರರ ರಥಸೇನೆಯೊಂದಿಗೆ ಹೋರಾಡುತ್ತಿದ್ದರು. ಸೇನಾಪತಿ ಅಮೇಯಾತ್ಮ ಮಹಾಬಲ ಧೃಷ್ಟದ್ಯುಮ್ನನು ಉಗ್ರಕರ್ಮಿ ದ್ರೋಣನೊಂದಿಗೆ ಯುದ್ಧ ಮಾಡುತ್ತಿದ್ದನು.

ಹೀಗೆ ಮಹೇಷ್ವಾಸ ಶೂರರಾದ ಕೌರವರು ಪಾಂಡವರೊಂದಿಗೆ ಸಮರದಲ್ಲಿ ಸೇರಿ ಸಂಪ್ರಹರಿಸಲು ತೊಡಗಿದರು. ಸೂರ್ಯನು ನಡುನೆತ್ತಿಗೆ ಬಂದು ಆಕಾಶವು ತಾಪಗೊಳ್ಳುತ್ತಿದ್ದರೂ ಕೌರವ ಪಾಂಡವರು ಪರಸ್ಪರರ ಸಂಹಾರಕ್ರಿಯೆಯಲ್ಲಿ ತೊಡಗಿದ್ದರು. ಧ್ವಜ-ಪತಾಕೆಗಳಿಂದ ಕೂಡಿದ ಬಂಗಾರ ಚಿತ್ರಗಳಿಂದ ಅಲಂಕರಿಸಲ್ಪಟ್ಟಿದ್ದ, ಹುಲಿಯ ಚರ್ಮಗಳನ್ನು ಹೊದೆಸಿದ್ದ ರಥಗಳು ರಜದಲ್ಲಿ ಸಂಚರಿಸುತ್ತಾ ಪ್ರಕಾಶಿಸಿದವು. ಪರಸ್ಪರರನ್ನು ಸಮರದಲ್ಲಿ ಗೆಲ್ಲಲು ಸೇರಿದ್ದವರ ಸಿಂಹಗರ್ಜನೆಗಳಿಂದ ತುಮುಲ ಶಬ್ಧವುಂಟಾಯಿತು. ಅಲ್ಲಿ ವೀರ ಸೃಂಜಯರು ಕುರುಗಳೊಂದಿಗೆ ಸುದಾರುಣ ಸಂಪ್ರಹಾರ ಮಾಡುತ್ತಿರುವ ಅದ್ಭುತವು ಕಾಣಿಸಿತು. ಎಲ್ಲಕಡೆಗಳಲ್ಲಿಯೂ ಪ್ರಯೋಗಿಸುತ್ತಿದ್ದ ಶರಗಳಿಂದ ದಿಕ್ಕುಗಳು ಮುಚ್ಚಿ, ಆಕಾಶವಾಗಲೀ, ದಿಕ್ಕುಗಳಾಗಲೀ, ಸೂರ್ಯನಾಗಲೀ ಕಾಣಲೇ ಇಲ್ಲ. ಥಳಥಳಿಸುವ

ಮೊನೆಯ ಶಕ್ತಿಗಳು, ಹಾಗೆಯೇ ಪ್ರಯೋಗಿಸುತ್ತಿರುವ ತೋಮರಗಳ, ಹರಿತ ಖಡ್ಗಗಳ ಕನ್ನೈದಿಲೆ ಬಣ್ಣದ ಪ್ರಭೆಗಳಿಂದ, ವಿಚಿತ್ರ ಕವಚ-ಭೂಷಣಗಳ ಪ್ರಭೆಗಳಿಂದ ಆಕಾಶ, ದಿಕ್ಕುಗಳು ಮತ್ತು ಉಪದಿಕ್ಕುಗಳು ತಮ್ಮ ಉಜ್ವಲ ಪ್ರಕಾಶದಿಂದ ಬೆಳಗುತ್ತಿದ್ದವು. ಅಲ್ಲಲ್ಲಿ ರಣಾಂಗಣವು ವಿರಾಜಿಸುತ್ತಿತ್ತು. ಬಂದು ಸೇರಿದ್ದ ರಥಸಿಂಹಾಸನವ್ಯಾಘ್ರರು ನಭಸ್ತಲದಲ್ಲಿ ಬೆಳಗುವ ಗ್ರಹಗಳಂತೆ ವಿರಾಜಿಸಿದರು. ರಥಿಗಳಲ್ಲಿ ಶ್ರೇಷ್ಠ ಭೀಷ್ಮನಾದರೋ ಸಂಕ್ರುದ್ಧನಾಗಿ ಸರ್ವಸೇನೆಗಳೂ ನೋಡುತ್ತಿದ್ದಂತೆಯೇ ಮಹಾಬಲ ಭೀಮಸೇನನನ್ನು ತಡೆದನು. ಆಗ ಭೀಷ್ಮನು ಪ್ರಯೋಗಿಸಿದ ರುಕ್ಮಪುಂಖ, ಶಿಲಾಶಿತ, ತೈಲದಲ್ಲಿ ಅದ್ದಿದ್ದ, ಸುತೇಜಸ ಬಾಣಗಳು ಸಮರದಲ್ಲಿ ಭೀಮನಿಗೆ ತಾಗಿದವು.

ಮಹಾಬಲ ಭೀಮಸೇನನು ಅವನ ಮೇಲೆ ಕ್ರುದ್ಧ ಸರ್ಪದ ವಿಷಕ್ಕೆ ಸಮಾನವಾಗಿದ್ದ ಶಕ್ತ್ಯಾಯುಧವನ್ನು ಪ್ರಯೋಗಿಸಿದನು. ಮೇಲೆ ಬೀಳುತ್ತಿದ್ದ ದುರಾಸದವಾದ ರುಕ್ಮದಂಡದ ಆ ಶಕ್ತಿಯನ್ನು ಭೀಷ್ಮನು ತಕ್ಷಣವೇ ಸನ್ನತಪರ್ವ ಶರಗಳಿಂದ ತುಂಡರಿಸಿದನು. ಇನ್ನೊಂದು ಪೀತಲದ ನಿಶಿತ ಭಲ್ಲದಿಂದ ಭೀಮಸೇನನ ಕಾರ್ಮುಕವನ್ನು ಎರಡಾಗಿ ತುಂಡರಿಸಿದನು. ಆಗ ಸಾತ್ಯಕಿಯೂ ಕೂಡ ಬೇಗನೇ ಭೀಷ್ಮನ ಬಳಿಸಾರಿ ಅವನ ಮೇಲೆ ಅನೇಕ ಶರಗಳನ್ನು ಸುರಿಸಿದನು. ಭೀಷ್ಮನು ತೀಕ್ಷ್ಣವಾದ ಪರಮದಾರುಣ ಶರವನ್ನು ಹೂಡಿ ವಾರ್ಷ್ಣೇಯನ ಸಾರಥಿಯನ್ನು ರಥದಿಂದ ಕೆಡವಿದನು. ಅವನ ರಥದ ಸಾರಥಿಯು ಬೀಳಲು ಅದರ ಕುದುರೆಗಳು ಮನೋಮಾರುತಹಂಸಗಳಂತೆ ಬೇಕಾದಲ್ಲಿ

ಓಡತೊಡಗಿದವು. ಆಗ ಸರ್ವ ಸೈನ್ಯಗಳಲ್ಲಿ ಕೂಗು ತುಮುಲಗಳಾದವು. ಮಹಾತ್ಮ ಪಾಂಡವರಲ್ಲಿ ಹಾಹಾಕಾರವೂ ಉಂಟಾಯಿತು. ಎಲ್ಲೆಲ್ಲೋ ಓಡಿಹೋಗುತ್ತಿದ್ದ ಯುಯುಧಾನನ ರಥವನ್ನು ಹಿಡಿಯುವುದರ ಕುರಿತು ಅಲ್ಲಿ ಮಹಾ ತುಮುಲ ಶಬ್ಧವುಂಟಾಯಿತು. ಇದೇ ಸಮಯದಲ್ಲಿ ಪುನಃ ಭೀಷ್ಮ ಶಾಂತನವನು ವೃತ್ರಹನು ಅಸುರೀ ಸೇನೆಯನ್ನು ಹೇಗೋ ಹಾಗೆ ಪಾಂಡವ ಸೇನೆಯನ್ನು ನಾಶಗೊಳಿಸಿದನು. ಭೀಷ್ಮನಿಂದ ವಧಿಸಲ್ಪಡುತ್ತಿದ್ದರೂ ಪಾಂಚಾಲ-ಸೋಮಕರು ಒಟ್ಟಿಗೇ ಭೀಷ್ಮನನ್ನು ಎದುರಿಸಿ ಯುದ್ಧ ಮಾಡುವ ದೃಢ ನಿಶ್ಚಯವನ್ನು ಮಾಡಿ ಹೋರಾಡಿದರು.

ಧೃಷ್ಟದ್ಯುಮ್ನನೇ ಮೊದಲಾದ ಪಾರ್ಥರು ದುರ್ಯೋಧನನ ಸೇನೆಯನ್ನು ಗೆಲ್ಲಲು ಬಯಸಿ ಶಾಂತನವನನ್ನು ಎದುರಿಸಿದರು. ಹಾಗೆಯೆ ಭೀಷ್ಮದ್ರೋಣಪ್ರಮುಖರು ವೇಗದಿಂದ ಶತ್ರುಗಳನ್ನು ಎದುರಿಸಿ ಯುದ್ಧವನ್ನು ನಡೆಸಿದರು. ಮಹಾರಥ ವಿರಾಟನು ಮಹಾರಥ ಭೀಷ್ಮನನ್ನು ಮೂರು ಬಾಣಗಳಿಂದ ಹೊಡೆದು ಅವನ ಕುದುರೆಗಳನ್ನೂ ಮೂರು ಬಾಣಗಳಿಂದ ಗಾಯಗೊಳಿಸಿದನು. ಆಗ ಮಹೇಷ್ವಾಸ, ಸಿದ್ಧಹಸ್ತ ಮಹಾಬಲ ಭೀಷ್ಮ ಶಾಂತನವನು ಅವನನ್ನು ರುಕ್ಮಪುಂಖ ಶರಗಳಿಂದ ತಿರುಗಿ ಹೊಡೆದನು. ಮಹಾರಥಿ ದೃಢಹಸ್ತ ದ್ರೌಣಿಯು ಭೀಮಧನ್ವಿ ಗಾಂಡೀವಧನ್ವಿಯ ಎದೆಗೆ ಆರು ಬಾಣಗಳಿಂದ ಹೊಡೆದನು. ಆಗ ಪರವೀರಹ ಶತ್ರುಕರ್ಶನ ಫಲ್ಗುನನು ತುಂಬಾ ತೀಕ್ಷ್ಣವಾದ ಪತ್ರಿಗಳಿಂದ ಅವನ ಕಾರ್ಮುಕವನ್ನು ತುಂಡರಿಸಿದನು.

ಕ್ರೋಧಮೂರ್ಛಿತನಾದ ಅವನು ಪಾರ್ಥನು ಕಾರ್ಮುಕವನ್ನು ಛೇದಿಸಿದುದನ್ನು ಸಹಿಸಿಕೊಳ್ಳಲಾರದೇ ವೇಗದಲ್ಲಿ ಇನ್ನೊಂದು ಕಾರ್ಮುಕವನ್ನು ತೆಗೆದುಕೊಂಡು ಫಲ್ಗುನನನ್ನು ಒಂಭತ್ತು ನಿಶಿತ ಶರಗಳಿಂದಲೂ ವಾಸುದೇವನನ್ನು ಏಳು ಶರಗಳಿಂದಲೂ ಹೊಡೆದನು. ಆಗ ಕೃಷ್ಣನೊಂದಿಗೆ ಅಮಿತ್ರಕರ್ಶಣ ಗಾಂಡೀವಧನ್ವಿ ಫಲ್ಗುನನು ಕ್ರೋಧದಿಂದ ಕಣ್ಣುಗಳನ್ನು ಕೆಂಪುಮಾಡಿಕೊಂಡು, ದೀರ್ಘವಾದ ಬಿಸಿ ನಿಟ್ಟುಸಿರು ಬಿಡುತ್ತಾ, ಪುನಃ ಪುನಃ ಚಿಂತಿಸುತ್ತಾ ಎಡಗೈಯಿಂದ ಧನುಸ್ಸನ್ನು ಮೀಟಿ, ಸಂಕ್ರುದ್ಧನಾಗಿ ಹರಿತವಾದ ಜೀವವನ್ನೇ ಕೊನೆಗೊಳಿಸಬಲ್ಲ ಘೋರ ಶಿಲೀಮುಖ ಸನ್ನತಪರ್ವಗಳನ್ನು ತಕ್ಷಣವೇ ತೆಗೆದುಕೊಂಡು ಬಲವಂತರಲ್ಲೇ ಶ್ರೇಷ್ಠನಾದ ದ್ರೌಣಿಗೆ ಹೊಡೆದನು. ಅದು ಅವನ ಕವಚವನ್ನು ಸೀಳಿ ರಕ್ತವನ್ನು ಕುಡಿಯಿತು. ಗಾಂಡೀವಧನ್ವಿಯಿಂದ ಅವನ ಶರೀರವು ನಿರ್ಭಿನ್ನವಾದರೂ ದ್ರೌಣಿಯು ವ್ಯಥೆಪಡಲ್ಲ. ವಿಹ್ವಲನಾಗದೇ ಹಾಗೆಯೇ ಶರವರ್ಷಗಳನ್ನು ಪ್ರಯೋಗಿಸಿದನು. ಅವನು ಮಹಾವ್ರತನನ್ನು ರಕ್ಷಿಸಲು ಬಯಸಿ ಸಮರದಲ್ಲಿ ನಿಂತುಕೊಂಡನು. ಇಬ್ಬರು ಕೃಷ್ಣರನ್ನು ಒಟ್ಟಿಗೇ ಎದುರಿಸುತ್ತಿದ್ದ ಅವನ ಆ ಮಹಾಕಾರ್ಯವನ್ನು ಸಂಯುಗದಲ್ಲಿ ಪುರುಷರ್ಷಭರು ಪ್ರಶಂಸಿಸಿದರು. ದ್ರೋಣನಿಂದ ದುರ್ಲಭವಾದ ಉಪಸಂಹಾರಗಳೊಂದಿಗೆ ಅಸ್ತ್ರಗ್ರಾಮಗಳನ್ನು ಪಡೆದಿದ್ದ ಅವನು ಅಭಯನಾಗಿ ನಿತ್ಯ ಸೇನೆಗಳೊಡನೆ ಯುದ್ಧಮಾಡಿದನು. ಆದರೆ

“ಇವನು ನನ್ನ ಆಚಾರ್ಯನ ಮಗ, ದ್ರೋಣನ

ಅತಿಪ್ರಿಯನಾದ ಮಗ. ವಿಶೇಷವಾಗಿ
ಬ್ರಾಹ್ಮಣನಾಗಿರುವುದರಿಂದ ನನಗೆ ಮಾನನೀಯ”

ಎಂದು ಅಭಿಪ್ರಾಯವನ್ನು ತಳೆದು ವೀರ ಶತ್ರುತಾಪನ ಬೀಭತ್ಸುವು ರಥಶ್ರೇಷ್ಠ ಭಾರದ್ವಾಜಸುತನ ಮೇಲೆ ಕೃಪೆತೋರಿದನು. ಆಗ ಯುದ್ಧದಲ್ಲಿ ಶತ್ರುತಾಪನ ಪರಾಕ್ರಮೀ ಕೌಂತೇಯನು ದ್ರೌಣಿಯುನ್ನು ಬಿಟ್ಟು ಕೌರವರ ಕಡೆಯವರೊಂದಿಗೆ ತ್ವರೆಮಾಡಿ ಯದ್ಧದಲ್ಲಿ ತೊಡಗಿದನು.

ದುರ್ಯೋಧನನಾದರೋ ಹತ್ತು ಗಾರ್ಧ್ರಪತ್ರ ಶಿಲಾಶಿತ ರುಕ್ಮಪುಂಖಗಳಿಂದ ಮಹೇಷ್ವಾಸ ಭೀಮಸೇನನನ್ನು ಹೊಡೆದನು. ಅವ್ಯಗ್ರ ಭೀಮಸೇನನಾದರೋ ಸಂಕ್ರುದ್ಧನಾಗಿ ಶತ್ರುಗಳ ಪ್ರಾಣವನ್ನು ಅಪಹರಿಸಬಲ್ಲ ದೃಢವಾದ, ಚಿತ್ರವಾದ ಕಾರ್ಮುಕವನ್ನೂ ಹತ್ತು ನಿಶಿತ ಶರಗಳನ್ನೂ ತೆಗೆದುಕೊಂಡು ತೀಕ್ಷ್ಣವಾಗಿಯೂ ಅತಿ ವೇಗದಲ್ಲಿಯೂ ಆಕರ್ಣಪರ್ಯಂತವಾಗಿ ಎಳೆದು ಬೇಗನೇ ಕುರುರಾಜನನ್ನು ವಿಶಾಲ ಎದೆಯ ಮೇಲೆ ಹೊಡೆದನು. ಶರಗಳಿಂದ ಚುಚ್ಚಲ್ಪಟ್ಟ ಅವನ ಚಿನ್ನದ ಸರದಲ್ಲಿದ್ದ ಮಣಿಯು ಗ್ರಹಗಳಿಂದ ಸಮಾವೃತವಾದ ಸೂರ್ಯನಂತೆ ರಾರಾಜಿಸಿತು. ದುರ್ಯೋಧನನಾದರೋ ಚಪ್ಪಾಳೆಯ ಶಬ್ಧವನ್ನು ಮದಿಸಿದ ಆನೆಯು ಹೇಗೋ ಹಾಗೆ ಭೀಮಸೇನನಿಂದ ತಾಗಿಸಿಕೊಂಡಿದುದನ್ನು ಸಹಿಸಿಕೊಳ್ಳಲಿಲ್ಲ. ಆಗ ಅವನು ಸಂಕ್ರುದ್ಧನಾಗಿ ಸೇನೆಯನ್ನು ಹೆದರಿಸಿ ಭೀಮನನ್ನು ಶಿಲಾಶಿತ ರುಕ್ಮಪುಂಖಗಳಿಂದ

ಹೊಡೆದನು. ಅನ್ಯೋನ್ಯರನ್ನು ಲಕ್ಷಿಸದೇ ಯುದ್ಧಮಾಡುತ್ತಿದ್ದ ಅವರಿಬ್ಬರೂ ದೇವತೆಗಳಂತೆ ಮಿಂಚಿದರು. ಪರವೀರಹ ವೀರ ಸೌಭದ್ರನು ನರವ್ಯಾಘ್ರ ಚಿತ್ರಸೇನನನ್ನು ಹತ್ತು ಬಾಣಗಳಿಂದಲೂ, ಪುರುಮಿತ್ರನನ್ನು ಏಳರಿಂದಲೂ, ಸತ್ಯವ್ರತನನ್ನು ಏಳರಿಂದಲೂ ಹೊಡೆದು ಯುದ್ಧದಲ್ಲಿ ಶಕ್ರನಂತೆ ರಣದಲ್ಲಿ ನೃತ್ಯಮಾಡುತ್ತಿರುವನೋ ಎನ್ನುವಂತೆ ಎದುರಿಸಿದವರೆಲ್ಲರನ್ನೂ ಹೊಡೆಯುತ್ತಾ ಕೌರವರನ್ನು ಆರ್ತರನ್ನಾಗಿಸಿದನು. ಅವನನ್ನು ತಿರುಗಿ ಚಿತ್ರಸೇನನು ಹತ್ತು ಶಿಲೀಮುಖಗಳಿಂದಲೂ ಸತ್ಯವ್ರತನು ಒಂಭತ್ತರಿಂದಲೂ ಪುರುಮಿತ್ರನು ಏಳರಿಂದಲೂ ಹೊಡೆದರು. ಪೆಟ್ಟು ತಿಂದು ರಕ್ತವನ್ನು ಸುರಿಸುತ್ತಿದ್ದ ಆರ್ಜುನಿಯು ಚಿತ್ರಸೇನನ ಶತ್ರುಸಂವಾರಣ ಮಹಾ ಚಿತ್ರ ಕಾರ್ಮುಕವನ್ನು ತುಂಡರಿಸಿದನು. ಶರದಿಂದ ಅವನ ಕವಚವನ್ನು ಸೀಳಿ ಎದೆಗೆ ತಾಗಿಸಿ ಹೊಡೆದನು. ಆಗ ಆ ವೀರ ರಾಜಪುತ್ರ ಮಹಾರಥರು ಕೋಪದಿಂದ ಒಟ್ಟಾಗಿ ಯುದ್ಧದಲ್ಲಿ ಅವನನ್ನು ನಿಶಿತ ಶರಗಳಿಂದ ಹೊಡೆದರು. ಅವರೆಲ್ಲರನ್ನೂ ಆ ಪರಮಾಸ್ತ್ರವಿದುವು ತೀಕ್ಷ್ಣ ಶರಗಳಿಂದ ಹೊಡೆದನು. ಅರಣ್ಯದ ದಾವಾಗ್ನಿಯು ಒಣಹುಲ್ಲುಗಳನ್ನು ನಿರಾಯಾಸವಾಗಿ ದಹಿಸುವಂತಿದ್ದ ಅವನ ಆ ಕೃತ್ಯವನ್ನು ನೋಡಿ ಧಾರ್ತರಾಷ್ಟ್ರರು ಅವನನ್ನು ಸುತ್ತುವರೆದರು.

ಕೌರವ ಸೇನೆಗಳನ್ನು ವಿನಾಶಗೊಳಿಸುತ್ತಾ ಸೌಭದ್ರಿಯು ಛಳಿಗಾಲದ ಅಂತ್ಯದಲ್ಲಿ ಧಗಧಗಿಸಿ ಉರಿಯುವ ಪಾವಕನಂತೆ ವಿರಾಜಿಸಿದನು. ಅವನ ಆ ಚರಿತವನ್ನು ನೋಡಿ ಧೃತರಾಷ್ಟ್ರನ ಮೊಮ್ಮಗ ಲಕ್ಷ್ಮಣನು

ಬೇಗನೇ ಸಾತ್ವತೀಪುತ್ರನನ್ನು ಎದುರಿಸಿದನು. ಸಂಕ್ರುದ್ಧನಾದ ಅಭಿಮನ್ಯುವಾದರೋ ಶುಭಲಕ್ಷಣ ಲಕ್ಷ್ಮಣನನ್ನು ಆರು ವಿಶಿಖಗಳಿಂದ ಹೊಡೆದು ಮೂರು ಶರಗಳಿಂದ ಸಾರಥಿಯನ್ನೂ ಹೊಡೆದನು. ಹಾಗೆಯೇ ಲಕ್ಷ್ಮಣನೂ ಕೂಡ ಸೌಭದ್ರನನ್ನು ನಿಶಿತ ಶರಗಳಿಂದ ಹೊಡೆಯಲು ಅಲ್ಲಿ ಅದ್ಭುತವೊಂದು ನಡೆಯಿತು. ಆಗ ಮಹಾಬಲ ಸೌಭದ್ರನು ಅವನ ನಾಲ್ಕು ಕುದುರೆಗಳನ್ನೂ ಸಾರಥಿಯನ್ನು ಕೊಂದು ಲಕ್ಷ್ಮಣನನ್ನು ನಿಶಿತ ಶರಗಳಿಂದ ಪ್ರಹರಿಸಿದನು. ಪರವೀರಹ ಲಕ್ಷ್ಮಣನು ರಥದ ಕುದುರೆಗಳು ಸತ್ತರೂ ಧೃತಿಗೆಡದೇ ಸಂಕ್ರುದ್ಧನಾಗಿ ಸೌಭದ್ರನ ರಥದ ಮೇಲೆ ಶಕ್ತಿಯನ್ನು ಎಸೆದನು. ಒಮ್ಮೆಲೇ ಬೀಳುತ್ತಿದ್ದ ಆ ಘೋರರೂಪೀ, ದುರಾಸದ ಭುಜಗೋಪಮ ಶಕ್ತಿಯನ್ನು ಅಭಿಮನ್ಯುವು ತೀಕ್ಷ್ಣ ಶರಗಳಿಂದ ತುಂಡರಿಸಿದನು. ಆಗ ಗೌತಮನು ಲಕ್ಷ್ಮಣನನ್ನು ತನ್ನ ರಥದಲ್ಲೇರಿಸಿಕೊಂಡು ಎಲ್ಲ ಸೈನಿಕರೂ ನೋಡುತ್ತಿದ್ದಂತೆಯೇ ಇನ್ನೊಂದೆಡೆ ರಥವನ್ನು ವೇಗವಾಗಿ ಓಡಿಸಿ ಹೊರಟು ಹೋದನು. ಆಗ ಆ ಸಮಾಕುಲದಲ್ಲಿ ಮಹಾಭಯಂಕರವಾದ ಯುದ್ಧವು ಮುಂದುವರೆಯಿತು. ಪರಸ್ಪರರನ್ನು ವಧಿಸಲು ಇಚ್ಛಿಸಿ ಆಕ್ರಮಣ ಮಾಡಿ ಕೊಲ್ಲುತ್ತಿದ್ದರು. ಕೌರವರ ಕಡೆಯ ಮಹೇಷ್ವಾಸರೂ ಪಾಂಡವರ ಮಹಾರಥರೂ ಸಮರದಲ್ಲಿ ಆಹುತಿಯಾಗಲು ಸಿದ್ಧರಾಗಿ ಪರಸ್ಪರರ ಪ್ರಾಣಗಳನ್ನು ತೆಗೆದರು. ತಲೆಕೂದಲು ಬಿಚ್ಚಿಹೋಗಿ, ಕವಚಗಳಿಲ್ಲದೇ, ವಿರಥರಾಗಿ, ಕಾರ್ಮುಕಗಳು ತುಂಡಾಗಿ ಬಾಹುಗಳಿಂದ ಸೃಂಜಯರು

ಕುರುಗಳೊಡನೆ ಯುದ್ಧಮಾಡಿದರು.

ಆಗ ಮಹಾಬಾಹು ಮಹಾಬಲ ಭೀಷ್ಮನು ಸಂಕ್ರುದ್ಧನಾಗಿ ದಿವ್ಯಾಸ್ತ್ರಗಳಿಂದ ಮಹಾತ್ಮ ಪಾಂಡವರ ಸೇನೆಗಳನ್ನು ಸಂಹರಿಸಿದನು. ಸತ್ತು ಬಿದ್ದಿದ್ದ ಆನೆಗಳಿಂದ, ಮಾವುತರಿಂದ, ಕೆಳಗುರುಳಿದ್ದ ಪದಾತಿಗಳು, ಅಶ್ವಗಳು, ರಥಗಳು ಮತ್ತು ಕುದುರೆ ಸವಾರರಿಂದ ರಣಭೂಮಿಯು ಮುಚ್ಚಿಹೋಗಿತ್ತು.

## ಭೂರಿಶ್ರವಸನು ಸಾತ್ಯಕಿಯ ಹತ್ತು ಮಕ್ಕಳನ್ನು ಸಂಹರಿಸಿದುದು

ಆಗ ಮಹಾಬಾಹು ಯುದ್ಧದುರ್ಮದ ಸಾತ್ಯಕಿಯು ಉತ್ತವಾದ ಭಾರಸಾಧನ ಚಾಪವನ್ನು ಎಳೆದು ಪುಂಖಗಳನ್ನು ಹೊಂದಿದ್ದ ಸರ್ಪದ ವಿಷಸಮಾನವಾದ ಶರಗಳನ್ನು ಪ್ರಯೋಗಿಸಿ ಅವನ ವಿಚಿತ್ರವಾದ ಲಘುವಾದ ಹಸ್ತಲಾಘವವನ್ನು ಪ್ರಕಟಿಸಿದನು. ಅವನು ಶತ್ರುಗಳ ಮೇಲೆ ಶರಗಳನ್ನು ಎಸೆದು ಹೊಡೆಯುವಾಗ ಎಷ್ಟು ಜೋರಾಗಿ ಚಾಪವನ್ನು ಎಳೆದು ಶರಗಳನ್ನು ಪ್ರಯೋಗಿಸಿ ಪುನಃ ಇತರ ಶರಗಳನ್ನು ಹೂಡಿ ಹೊಡೆಯುತ್ತಿದ್ದನೆಂದರೆ ಅವನು ಮಳೆಸುರಿಸುತ್ತಿರುವ ಮೇಘದಂತೆಯೇ ತೋರಿದನು. ಅವನು ಆ ರೀತಿ ಉರಿಯುತ್ತಿರುವುದನ್ನು ಅವಲೋಕಿಸಿದ ರಾಜಾ ದುರ್ಯೋಧನನು ಹತ್ತು ಸಾವಿರ ರಥಗಳನ್ನು ಅವನಿದ್ದಲ್ಲಿಗೆ ಕಳುಹಿಸಿದನು. ಆ ಎಲ್ಲ ಮಹೇಷ್ವಾಸರನ್ನೂ ಸತ್ಯವಿಕ್ರಮ ಪರಮೇಷ್ವಾಸ ವೀರ್ಯವಾನ್

ಸಾತ್ಯಕಿಯು ದಿವ್ಯಾಸ್ತ್ರಗಳಿಂದ ಸಂಹರಿಸಿದನು. ಆ ದಾರುಣಕರ್ಮವನ್ನು ಮಾಡಿ ಬಿಲ್ಲನ್ನು ಹಿಡಿದು ಆ ವೀರನು ಆಹವದಲ್ಲಿ ಭೂರಿಶ್ರವನನ್ನು ಎದುರಿಸಿದನು. ಆ ಕುರುಗಳ ಕೀರ್ತಿವರ್ಧನನಾದರೋ ಸೇನೆಯು ಯುಯುಧಾನನಿಂದ ಉರುಳಿಸಲ್ಪಟ್ಟಿದುದನ್ನು ನೋಡಿ ಸಂಕ್ರುದ್ಧನಾಗಿ ರಭಸದಿಂದ ಅವನ ಮೇಲೆ ನುಗ್ಗಿದನು. ಅವನು ಕಾಮನಬಿಲ್ಲಿನ ಬಣ್ಣದ ಮಹಾಧನುಸ್ಸನ್ನು ಟೇಂಕರಿಸಿ ವಜ್ರಸದೃಶವಾದ ಸರ್ಪವಿಷಸಮನಾದ ಸಹಸ್ರಾರು ಶರಗಳನ್ನು ಬಿಟ್ಟು ಹಸ್ತಲಾಘವವನ್ನು ತೋರಿಸಿದನು. ಸಾತ್ಯಕಿಯನ್ನು ಅನುಸರಿಸಿ ಬಂದವರು ಮೃತ್ಯುವಿನ ಸ್ಪರ್ಶದಂತಿದ್ದ ಆ ಶರಗಳನ್ನು ತಡೆಯಲಾಗದೇ, ಯುದ್ಧದುರ್ಮದ ಸಾತ್ಯಕಿಯನ್ನು ಬಿಟ್ಟು ಎಲ್ಲಕಡೆ ಪಲಾಯನಮಾಡಿದರು. ಅದನ್ನು ನೋಡಿ ಬಣ್ಣಬಣ್ಣದ ಕವಚಗಳು, ಆಯುಧಗಳು ಮತ್ತು ಧ್ವಜಗಳನ್ನು ಹೊಂದಿದ್ದ ಯುಯುಧಾನನ ಹತ್ತು ಮಹಾಬಲ ಮಹಾರಥ ಮಕ್ಕಳು ಒಟ್ಟಾಗಿ ಆಹವದಲ್ಲಿ ಮಹೇಷ್ವಾಸ ಭೂರಿಶ್ರವನನ್ನು ಎದುರಿಸಿ ಎಲ್ಲರೂ ಸಂರಬ್ಧರಾಗಿ ಮಹಾರಣದಲ್ಲಿ ಯೂಪಕೇತುವಿಗೆ ಹೇಳಿದರು:

> “ಭೋ! ಭೋ! ಕೌರವದಾಯಾದ! ಬಾ! ನಮ್ಮೊಡನೆ ಯುದ್ಧಮಾಡು! ಒಟ್ಟಿಗೇ ನಮ್ಮೊಡನೆ ಯುದ್ಧಮಾಡು ಅಥವಾ ಒಬ್ಬೊಬ್ಬರಡನೆ ಯುದ್ಧಮಾಡು. ನೀನು ನಮ್ಮನ್ನು ಪರಾಜಯಗೊಳಿಸಿ ನೀನು ಸಂಯುಗದಲ್ಲಿ ಯಶಸ್ಸನ್ನು ಗಳಿಸುತ್ತೀಯೆ. ಅಥವಾ ನಾವು ನಿನ್ನನ್ನು ಪರಾಜಯಗೊಳಿಸಿ ನಮ್ಮ ತಂದೆಯನ್ನು ಪ್ರೀತಿಯನ್ನು ಗಳಿಸುತ್ತೇವೆ.”

ಇದನ್ನು ಕೇಳಿ ಆ ಮಹಾಬಲ ವೀರ್ಯಶ್ಲಾಘೀ ನರಶ್ರೇಷ್ಠನು ಒಟ್ಟಾಗಿರುವ ಅವರನ್ನು ನೋಡಿ ಆ ಶೂರರಿಗೆ ಹೇಳಿದನು:

> "ವೀರರೇ! ಒಳ್ಳೆಯದಾಗಿಯೇ ಹೇಳಿದ್ದೀರಿ. ಅದೇ ನಿಮ್ಮ ಬಯಕೆಯಾದರೆ ಎಲ್ಲರೂ ಒಟ್ಟಾಗಿ ಪ್ರಯತ್ನಪಟ್ಟು ಯುದ್ಧಮಾಡಿ. ನಿಮ್ಮನ್ನು ರಣದಲ್ಲಿ ಸಂಹರಿಸುತ್ತೇನೆ."

ಆ ಮಹೇಷ್ವಾಸನು ಅವರಿಗೆ ಹೀಗೆ ಹೇಳಲು ಆ ವೀರ ಕ್ಷಿಪ್ರಕಾರಿಣರು ಆ ಅರಿಂದಮನ ಮೇಲೆ ಮಹಾ ಶರವರ್ಷಗಳನ್ನು ಸುರಿಸಿದರು. ಆ ಅಪರಾಹ್ಣದಲ್ಲಿ ಅವನೊಬ್ಬನ ಮತ್ತು ಒಟ್ಟಾಗಿರುವ ಅವರೆಲ್ಲರ ನಡುವೆ ರಣದಲ್ಲಿ ತುಮುಲ ಸಂಗ್ರಾಮವು ನಡೆಯಿತು. ಮಹಾಶೈಲವನ್ನು ಮೋಡಗಳು ಮುಸುಕಿ ಮಳೆಸುರಿಸುವಂತೆ ಅವರು ಆ ಒಬ್ಬನೇ ಶ್ರೇಷ್ಠ ರಥಿಯನ್ನು ಶರವರ್ಷಗಳಿಂದ ಮುಚ್ಚಿದರು. ಆದರೆ ಅವರು ಪ್ರಯೋಗಿಸಿದ ಆ ಯಮದಂಡದಂತೆ ಹೊಳೆಯುತ್ತಿದ್ದ ಶರಗಳ ಸಾಲುಗಳನ್ನು ಅವುಗಳು ಬಂದು ತಲುಪುವುದರೊಳಗೇ ಮಹಾರಥನು ಕತ್ತರಿಸಿದನು. ಭೀತನಾಗದೇ ಒಬ್ಬನೇ ಅನೇಕರೊಂದಿಗೆ ಯುದ್ಧಮಾಡುತ್ತಿರುವ ಸೌಮದತ್ತಿಯ ಅದ್ಭುತ ಪರಾಕ್ರಮವನ್ನು ನೋಡಿದೆವು. ಆ ಹತ್ತು ಮಹಾರಥರು ಶರವೃಷ್ಟಿಯನ್ನು ಪ್ರಯೋಗಿಸಿ ಆ ಮಹಾಬಾಹುವನ್ನು ಸುತ್ತುವರೆದು ಅವನನ್ನು ಸಂಹರಿಸಲು ಬಯಸಿದರು. ಆಗ ಮಹಾರಥಿ ಸೌಮದತ್ತಿಯು ಕ್ರುದ್ಧನಾಗಿ ನಿಮಿಷದಲ್ಲಿಯೇ ಅವರ ಚಾಪಗಳನ್ನು ಹತ್ತು ಬಾಣಗಳಿಂದ

ತುಂಡರಿಸಿದನು. ಅವರ ಧನುಸ್ಸುಗಳನ್ನು ಕತ್ತರಿಸಿ ತಕ್ಷಣವೇ ಸನ್ನತಪರ್ವ ಭಲ್ಲಗಳಿಂದ ನಿಶಿತ ಶರಗಳಿಂದ ಅವರ ಶಿರಗಳನ್ನೂ ಕತ್ತರಿಸಿದನು. ಅವನಿಂದ ಹತರಾದ ಅವರು ಸಿಡಿಲಿನಿಂದ ಹೊಡೆಯಲ್ಪಟ್ಟ ಮರಗಳಂತೆ ಭೂಮಿಯ ಮೇಲೆ ಬಿದ್ದರು. ರಣದಲ್ಲಿ ಆ ಮಹಾಬಲ ವೀರ ಪುತ್ರರು ಹತರಾದುದನ್ನು ನೋಡಿ ಕೂಗುತ್ತಾ ವಾರ್ಷ್ಣೇಯನು ಭೂರಿಶ್ರವನನ್ನು ಎದುರಿಸಿದನು. ರಥದಿಂದ ರಥವನ್ನು ಪೀಡಿಸುತ್ತಾ ಆ ಮಹಾಬಲರಿಬ್ಬರೂ ಅನ್ಯೋನ್ಯರ ರಥ-ವಾಜಿಗಳನ್ನು ಸಂಹರಿಸಿದರು. ರಥವಿಹೀನರಾದ ಅವರಿಬ್ಬರು ಮಹಾರಥರೂ ಒಟ್ಟಿಗೇ ಕೆಳಗೆ ಧುಮುಕಿದರು. ಶ್ರೇಷ್ಠ ಕವಚಗಳನ್ನು ಧರಿಸಿದ್ದ ಅವರಿಬ್ಬರು ನರವ್ಯಾಘ್ರರೂ ಮಹಾಖಡ್ಗಗಳನ್ನು ಹಿಡಿದು ಶೋಭಿಸಿದರು. ಆಗ ಖಡ್ಗವನ್ನು ಹಿಡಿದಿದ್ದ ಸಾತ್ಯಕಿಯನ್ನು ಬೇಗನೇ ಭೀಮಸೇನನು ತನ್ನ ರಥದ ಮೇಲೆ ಏರಿಸಿಕೊಂಡರು. ದುರ್ಯೋಧನನೂ ಕೂಡ ಆಹವದಲ್ಲಿ ಸರ್ವ ಧನ್ವಿಗಳೂ ನೋಡುತ್ತಿದ್ದಂತೆ ಭೂರಿಶ್ರವಸನನ್ನು ತಕ್ಷಣವೇ ತನ್ನ ರಥದ ಮೇಲೇರಿಸಿಕೊಂಡನು.

ಹೀಗೆ ನಡೆಯುತ್ತಿರುವ ರಣದಲ್ಲಿ ಸಂರಬ್ಧರಾದ ಪಾಂಡವರು ಮಹಾರಥ ಭೀಷ್ಮನೊಂದಿಗೆ ಯುದ್ಧ ಮಾಡಿದರು. ಆದಿತ್ಯನು ಕೆಂಪಾಗುತ್ತಿರಲು ತ್ವರೆಮಾಡಿ ಧನಂಜಯನು ಇಪ್ಪತ್ತೈದು ಸಾವಿರ ಮಹಾರಥರನ್ನು ಸಂಹರಿಸಿದನು. ಪಾರ್ಥನನ್ನು ಕೊಲ್ಲಲು ದುರ್ಯೋಧನನಿಂದಲೇ ಕಳುಹಿಸಲ್ಪಟ್ಟ ಅವರು ಪತಂಗಗಳು ಬೆಂಕಿಯ

ಬಳಿ ಬಂದಾಗ ಹೇಗೋ ಹಾಗೆ ಅವನನ್ನು ತಲುಪುವುದರೊಳಗೇ ನಾಶರಾಗಿಬಿಟ್ಟರು. ಆಗ ಧನುರ್ವೇದವಿಶಾರದರಾದ ಮತ್ಸ್ಯರು ಮತ್ತು ಕೇಕಯರು ಮಗನೊಂದಿಗೆ ಮಹಾರಥ ಪಾರ್ಥನನ್ನು ಸುತ್ತುವರೆದರು. ಇದೇ ಸಮಯದಲ್ಲಿ ಸೂರ್ಯನು ಅಸ್ತಂಗತನಾದನು ಮತ್ತು ಸರ್ವಸೇನೆಗಳನ್ನೂ ಪ್ರಮೋಹವು ಅಚ್ಛಾದಿಸಿತು. ಆಗ ದೇವವ್ರತನು ಸಂಧ್ಯಾಕಾಲದಲ್ಲಿ ಆಯಾಸಗೊಂಡ ಸೇನೆವಾಹನಗಳಿಗೆ ವಿರಾಮವನ್ನಿತ್ತನು. ಪರಸ್ಪರರ ಸಮಾಗಮದಿಂದ ತುಂಬಾ ಸಂವಿಗ್ನರಾಗಿದ್ದ ಪಾಂಡವರ ಮತ್ತು ಕುರುಗಳ ಸೇನೆಗಳು ತಮ್ಮ ತಮ್ಮ ನಿವೇಶನಗಳಿಗೆ ತೆರಳಿದವು. ತಮ್ಮ ತಮ್ಮ ಶಿಬಿರಗಳಿಗೆ ಹೋಗಿ ಅಲ್ಲಿ ಪಾಂಡವರು ಸೃಂಜಯರೊಂದಿಗೆ ಮತ್ತು ಕುರುಗಳೂ ಯಥಾವಿಧಿಯಾಗಿ ವಿಶ್ರಾಂತಿಪಡೆದರು.

# ಆರನೆಯ ದಿನದ ಯುದ್ಧ

ಸ್ವಲ್ಪ ಹೊತ್ತು ವಿಶ್ರಮಿಸಿ ರಾತ್ರಿಯು ಕಳೆದ ನಂತರ ಕುರುಪಾಂಡವರು ಒಟ್ಟಿಗೇ ಪುನಃ ಯುದ್ಧಮಾಡಲು ಹೊರಟರು. ಕೌರವರಲ್ಲಿ ಮತ್ತು ಪಾಂಡವರಲ್ಲಿ ರಥಮುಖ್ಯರು ರಥಗಳನ್ನು ಕಟ್ಟುವುದು, ಆನೆಗಳನ್ನು ಸಜ್ಜುಗೊಳಿಸಿದುದು, ಪದಾತಿ-ಕುದುರೆಗಳು ಅಣಿಯಾಗುವುದು ಇವೇ ಮೊದಲಾದ ಮಹಾಶಬ್ಧವುಂಟಾಯಿತು. ಎಲ್ಲಕಡೆ ಶಂಖದುಂದುಭಿಗಳ ನಾದಗಳ ತುಮುಲವೂ ಉಂಟಾಯಿತು. ಆಗ ರಾಜಾ ಯುಧಿಷ್ಠಿರನು

ಧೃಷ್ಟದ್ಯುಮ್ನನಿಗೆ ಹೇಳಿದನು:

"ಮಹಾಬಾಹೋ! ಶತ್ರುತಾಪನ ಮಕರ ವ್ಯೂಹವನ್ನು ರಚಿಸು!"

ಪಾರ್ಥನು ಹೀಗೆ ಹೇಳಲು ಮಹಾರಥ ರಥಿಗಳಲ್ಲಿ ಶ್ರೇಷ್ಠ ಧೃಷ್ಟದ್ಯುಮ್ನನು ರಥಿಗಳಿಗೆ ಆದೇಶವನ್ನಿತ್ತನು. ಅದರ ಶಿರದಲ್ಲಿ ದ್ರುಪದನೂ ಪಾಂಡವ ಧನಂಜಯರೂ ಇದ್ದರು. ಮಹಾರಥ ನಕುಲ-ಸಹದೇವರು ಕಣ್ಣುಗಳಾಗಿದ್ದರು. ಮಹಾಬಲ ಭೀಮಸೇನನು ಅದರ ಕೊಕ್ಕಾಗಿದ್ದನು. ಸೌಭದ್ರ, ದ್ರೌಪದೇಯರು, ರಾಕ್ಷಸ ಘಟೋತ್ಕಚ, ಸಾತ್ಯಕಿ ಮತ್ತು ಧರ್ಮರಾಜರು ವ್ಯೂಹದ ಕುತ್ತಿಗೆಯ ಭಾಗದಲ್ಲಿದ್ದರು. ಅದರ ಪೃಷ್ಠಭಾಗದಲ್ಲಿ ವಾಹಿನೀಪತಿ ವಿರಾಟನು ಮಹಾ ಸೇನೆಯಿಂದ ಆವೃತನಾಗಿ ಧೃಷ್ಟದ್ಯುಮ್ನನೊಂದಿಗೆ ಇದ್ದನು. ಐವರು ಕೇಕಯರು ಬಲಭಾಗದಲ್ಲಿದ್ದರು. ನರವ್ಯಾಘ್ರ ಧೃಷ್ಟಕೇತು ಮತ್ತು ವೀರ್ಯವಾನ್ ಕರಕರ್ಷರು ಎಡಭಾಗದಲ್ಲಿ ವ್ಯೂಹದ ರಕ್ಷಣೆಗೆ ನಿಂತಿದ್ದರು. ಅದರ ಪಾದಗಳಲ್ಲಿ ಶ್ರೀಮಾನ್ ಮಹಾರಥ ಕುಂತಿಭೋಜ ಶತಾನೀಕನು ಮಹಾ ಸೇನೆಯಿಂದ ಆವೃತನಾಗಿ ನಿಂತಿದ್ದನು. ಮಕರದ ಬಾಲವಾಗಿ ಮಹೇಷ್ವಾಸ ಬಲೀ ಶಿಖಂಡಿಯು ಸೋಮಕರಿಂದ ಸಂವೃತನಾಗಿ ಮತ್ತು ಇರಾವಾನನು ವ್ಯವಸ್ಥಿತರಾಗಿದ್ದರು. ಹೀಗೆ ಮಹಾವ್ಯೂಹವನ್ನು ರಚಿಸಿ ಕವಚಗಳನ್ನು ಧರಿಸಿ ಪಾಂಡವರು ಸೂರ್ಯೋದಯದಲ್ಲಿ ಪುನಃ ಯುದ್ಧಕ್ಕೆ ಹೊರಟರು.

ಕೌರವರೂ ಕೂಡ ತಕ್ಷಣವೇ ಆನೆ-ಕುದುರೆ-ರಥ-ಪದಾತಿಗಳೊಂದಿಗೆ ಚಿತ್ರವಾದ ಧ್ವಜಗಳಿಂದ ಹೊದಿಕೆಗಳಿಂದ ಮತ್ತು ಹೊಳೆಯುವ ಹರಿತ ಶಸ್ತ್ರಗಳೊಂದಿಗೆ ಹೊರಟರು. ಆ ಸೈನ್ಯವನ್ನು ನೋಡಿ ದೇವವ್ರತನು ಸೇನೆಯನ್ನು ಮಹಾ ಕ್ರೌಂಚ ವ್ಯೂಹವಾಗಿ ರಚಿಸಿದನು. ಅದರ ಕೊಕ್ಕಿನಲ್ಲಿ ಮಹೇಷ್ವಾಸ ಭಾರದ್ವಾಜನು ವಿರಾಜಿಸಿದನು. ಅಶ್ವತ್ಥಾಮ ಮತ್ತು ಕೃಪರು ಅದರ ಕಣ್ಣುಗಳಾದರು. ಕಾಂಬೋಜ, ಆರಟ್ಟ ಮತ್ತು ಬಾಹ್ಲೀಕರೊಂದಿಗೆ ನರಶ್ರೇಷ್ಠ, ಸರ್ವ ಧನುಷ್ಮತರಲ್ಲಿ ಶ್ರೇಷ್ಠ ಕೃತವರ್ಮನು ಅದರ ಶಿರೋಭಾಗದಲ್ಲಿದ್ದನು. ಅದರ ಕಂಠದಲ್ಲಿ ದುರ್ಯೋಧನನು ಅನೇಕ ರಾಜರಿಂದ ಆವೃತನಾಗಿದ್ದನು. ಪ್ರಾಗ್ಜ್ಯೋತಿಷದವನೊಡನೆ ಮದ್ರ-ಸೌವೀರ-ಕೇಕಯರು ಮಹಾ ಸೇನೆಗಳಿಂದ ಆವೃತರಾಗಿ ಅದರ ತೊಡೆಗಳಾದರು. ಪ್ರಸ್ಥಲಾಧಿಪ ಸುಶರ್ಮನು ತನ್ನ ಸೇನೆಯ ಸಹಿತ ಕವಚಗಳನ್ನು ಧರಿಸಿ ವ್ಯೂಹದ ಬಲಭಾಗವನ್ನು ರಕ್ಷಿಸುತ್ತಿದ್ದನು. ತುಷಾರರು, ಯವನರು ಮತ್ತು ಶಕರು ಚೂಚುಪರೊಂದಿಗೆ ವ್ಯೂಹದ ಎಡಭಾಗವನ್ನು ಆಶ್ರಯಿಸಿ ನಿಂತಿದ್ದರು. ಶ್ರುತಾಯು, ಶತಾಯು ಮತ್ತು ಸೌಮದತ್ತಿಯರು ವ್ಯೂಹದ ಜಘನ ಪ್ರದೇಶದಲ್ಲಿ ಪರಸ್ಪರರನ್ನು ರಕ್ಷಿಸಲು ನಿಂತರು. ಆಗ ಪಾಂಡವರು ಕೌರವರು ಒಟ್ಟಿಗೆ ಯುದ್ಧಕ್ಕಾಗಿ ಬಂದು ಸೇರಿದರು. ಸೂರ್ಯೋದಯದಲ್ಲಿ ಮಹಾ ಯುದ್ಧವು ನಡೆಯಿತು.

ರಥಿಗಳು ಆನೆಗಳ ಮೇಲೂ, ಆನೆಗಳು ರಥಿಗಳ ಮೇಲೂ ಎರಗಿದವು. ಅಶ್ವಾರೋಹಿಗಳು ಅಶ್ವಾರೋಹಿಗಳನ್ನೂ ರಥಿಗಳು

ಅಶ್ವಾರೋಹಿಗಳನ್ನೂ ಎದುರಿಸಿದರು. ಮಹಾರಣದಲ್ಲಿ ರಥಿಗಳು ಸಾರಥಿ ಮತ್ತು ಆನೆಗಳನ್ನೂ, ಆನೆಗಳ ಸವಾರರು ರಥಾರೋಹರನ್ನೂ, ರಥಿಗಳು ಅಶ್ವಾರೋಹಿಗಳನ್ನೂ, ರಥಿಗಳು ಪದಾತಿಗಳನ್ನು, ಹಾಗೆಯೇ ಅಶ್ವಾರೋಹಿಗಳು ಪದಾತಿಗಳನ್ನೂ, ಅನ್ಯೋನ್ಯರನ್ನು ಸಮರದಲ್ಲಿ ಕೋಪದಿಂದ ಮುನ್ನುಗ್ಗಿ ಆಕ್ರಮಣಿಸಿದರು. ಭೀಮಸೇನ, ಅರ್ಜುನ, ಯಮಳರು ಮತ್ತು ಅನ್ಯ ಮಹಾರಥರಿಂದ ರಕ್ಷಿಸಲ್ಪಟ್ಟ ಪಾಂಡವೀ ಸೇನೆಯು ರಾತ್ರಿಯಲ್ಲಿ ನಕ್ಷತ್ರಗಳಂತೆ ಶೋಭಿಸಿತು. ಹಾಗೆಯೇ ಭೀಷ್ಮ, ಕೃಪ, ದ್ರೋಣ, ಶಲ್ಯ, ದುರ್ಯೋಧನಾದಿಗಳಿಂದ ರಕ್ಷಿತವಾದ ಕೌರವ ಸೇನೆಯೂ ಕೂಡ ಆಕಾಶದಲ್ಲಿ ಸೇರಿರುವ ಗ್ರಹಗಳಂತೆ ಹೊಳೆಯಿತು. ಪರಾಕ್ರಮೀ ಕೌಂತೇಯ ಭೀಮಸೇನನಾದರೋ ದ್ರೋಣನನ್ನು ನೋಡಿ ವೇಗದ ಅಶ್ವಗಳಿಂದ ಭಾರದ್ವಾಜನ ಸೇನೆಯನ್ನು ಎದುರಿಸಿದನು. ಕ್ರುದ್ಧನಾದ ವೀರ್ಯವಾನ್ ದ್ರೋಣನಾದರೋ ಭೀಮನನ್ನು ಒಂಭತ್ತು ಆಯಸಗಳಿಂದ ಮರ್ಮಗಳಿಗೆ ಗುರಿಯಿಟ್ಟು ಹೊಡೆದನು. ದೃಢವಾಗಿ ಹೊಡೆಯಲ್ಪಟ್ಟ ಭೀಮನು ಭಾರದ್ವಾಜನ ಸಾರಥಿಯನ್ನು ಯಮನ ಸದನಕ್ಕೆ ಕಳುಹಿಸಿದನು. ಆಗ ಪ್ರತಾಪವಾನ್ ಭರದ್ವಾಜನು ಕುದುರೆಗಳನ್ನು ಸ್ವಯಂ ತಾನೇ ನಿಯಂತ್ರಿಸುತ್ತಾ ಪಾಂಡವೀ ಸೇನೆಯನ್ನು ಅಗ್ನಿಯು ಹತ್ತಿಯ ರಾಶಿಯಂತೆ ನಾಶಪಡಿಸಿದನು. ದ್ರೋಣ ಮತ್ತು ಭೀಷ್ಮರಿಂದ ವಧಿಸಲ್ಪಟ್ಟ ಸೃಂಜಯರು ಮತ್ತು ಕೇಕಯರು ಒಟ್ಟಿಗೇ ಪರಾಭವಗೊಂಡು ಪಲಾಯನಗೈದರು. ಹಾಗೆಯೇ ಕೌರವರ ಸೈನ್ಯವೂ ಭೀಮಾರ್ಜುನರಿಂದ ಪೀಡಿತರಾಗಿ ವರಾಂಗನೆಯು ಸೊಕ್ಕಿನಿಂದ

ನಿಂತುಕೊಳ್ಳುವಂತೆ ಅಲ್ಲಿಯೇ ಗರಬಡಿದಂತೆ ನಿಂತುಬಿಟ್ಟಿತು. ಆ ವೀರವರಕ್ಷಯದ ವ್ಯೂಹಗಳಲ್ಲಿ ಕೌರವರ ಮತ್ತು ಪಾಂಡವರ ಘೋರ ನಷ್ಟಗಳಾದವು. ಕೌರವರು ಶತ್ರುಗಳೊಂದಿಗೆ ಜೀವವನ್ನೂ ತೊರೆದು ಹೋರಾಡುತ್ತಿದ್ದರು. ಮಹಾರಥರಾದ ಪಾಂಡವರು ಮತ್ತು ಕೌರವರು ಅಸ್ತ್ರಗಳನ್ನು ತಿರುಗಿ ಪ್ರಯೋಗಿಸುತ್ತಾ ಅನ್ಯೋನ್ಯರೊಡನೆ ಯುದ್ಧಮಾಡಿದರು.

## ಭೀಮಪರಾಕ್ರಮ

ಭೀಮಸೇನನಾದರೋ ನಿಶಿತಬಾಣಗಳಿಂದ ಮಹಾಚಮುವನ್ನು ಭೇದಿಸಿ ದುರ್ಯೋಧನನ ಅನುಜರೆಲ್ಲರನ್ನೂ ಎದುರಿಸಿದನು. ಭೀಷ್ಮನಿಂದ ರಕ್ಷಿಸಲ್ಪಟ್ಟಿದ್ದ ಸಮೀಪದಲ್ಲಿದ್ದ ದುಃಶಾಸನ, ದುರ್ವಿಷಹ, ದುಃಸ್ಸಹ, ದುರ್ಮದ, ಜಯ, ಜಯತ್ಸೇನ, ವಿಕರ್ಣ, ಚಿತ್ರಸೇನ, ಸುದರ್ಶನ, ಚಾರುಚಿತ್ರ, ಸುವರ್ಮ, ದುಷ್ಕರ್ಣ, ಕರ್ಣ ಮೊದಲಾದ ಅನೇಕ ಸಂಕ್ರುದ್ಧ ಮಹಾರಥ ಧಾರ್ತರಾಷ್ಟ್ರರನ್ನು ನೋಡಿ ಮಹಾಬಲ ಭೀಮನು ಮಹಾಚಮುವನ್ನು ಪ್ರವೇಶಿಸಿದನು. ಹಾಗೆ ನುಗ್ಗಿ ಬರುತ್ತಿರುವ ವೃಕೋದರನನ್ನು ಸಮೀಪಿಸಿ ಕೌರವ ಸೇನೆಯ ನರಾಧಿಪರು ಅನ್ಯೋನ್ಯರಲ್ಲಿ "ಇವನನ್ನು ಜೀವಸಹಿತವಾಗಿಯೇ ಸೆರೆಹಿಡಿಯೋಣ!" ಎಂದು ಮಾತನಾಡಿಕೊಂಡರು. ಹೀಗೆ ನಿಶ್ಚಯಮಾಡಿಕೊಂಡ ಸಹೋದರರು ಪ್ರಜಾಸಂಹರಣ ಕಾಲದಲ್ಲಿ ಕ್ರೂರ ಮಹಾಗ್ರಹಗಳು ಸೂರ್ಯನನ್ನು ಸುತ್ತುವರೆಯುವಂತೆ ಪಾರ್ಥನನ್ನು ಸುತ್ತುವರೆದರು.

ದೇವಾಸುರರ ಯುದ್ಧದಲ್ಲಿ ದಾನವರನ್ನು ತಲುಪಿದ ಮಹೇಂದ್ರನಿಗೆ ಹೇಗೆ ಭೀತಿಯುಂಟಾಗಲಿಲ್ಲವೋ ಹಾಗೆ ವ್ಯೂಹದ ಮಧ್ಯವನ್ನು ಪ್ರವೇಶಿಸಿದ ಪಾಂಡವನನ್ನು ಭಯವೆಂಬುದೇ ಆಗಲಿಲ್ಲ. ಆಗ ನೂರಾರು ಸಹಸ್ರಾರು ರಥಿಗಳು ಎಲ್ಲ ಕಡೆಗಳಿಂದಲೂ ಘೋರ ಶರಗಳನ್ನು ಸುರಿಸುತ್ತಾ ಏಕಾಂಗಿಯಾಗಿದ್ದ ಅವನನ್ನು ಆಕ್ರಮಿಸಿದರು. ಆದರೆ ಆ ಶೂರನು ಧಾರ್ತರಾಷ್ಟ್ರರನ್ನು ಗಮನಕ್ಕೆ ತೆಗೆದುಕೊಳ್ಳದೇ ಕೌರವ ಪಕ್ಷದ ಶ್ರೇಷ್ಠ ಯೋಧರನ್ನೂ, ರಥ-ಅಶ್ವ-ಆನೆ-ಪದಾತಿಗಳ ಸೇನೆಗಳನ್ನೂ ಅಪಾರ ಸಂಖ್ಯೆಗಳಲ್ಲಿ ಸಂಹರಿಸಿದನು. ಅವರು ತನ್ನನ್ನು ಸೆರೆಹಿಡಿಯಲು ವ್ಯವಸ್ಥಿತರಾಗಿದ್ದಾರೆಂದು ತಿಳಿದ ಭೀಮಸೇನನು ಮಹಾಮನಸ್ಕರಾದ ಅವರೆಲ್ಲರನ್ನೂ ವಧಿಸಲು ಮನಸ್ಸು ಮಾಡಿದನು. ಆಗ ಪಾಂಡವನು ಗದೆಯನ್ನು ಹಿಡಿದು ರಥದಿಂದಿಳಿದು ಮಹಾಸಾಗರದಂತಿದ್ದ ಧಾರ್ತರಾಷ್ಟ್ರರ ಆ ಸೇನೆಯನ್ನು ಧ್ವಂಸಮಾಡಿದನು.

ಭೀಮಸೇನನು ಸೇನೆಯನ್ನು ಪ್ರವೇಶಿಸಿದ ನಂತರ ಪಾರ್ಷತ ಧೃಷ್ಟದ್ಯುಮ್ನನು ದ್ರೋಣನೊಡನೆ ಯುದ್ಧಮಾಡುವುದನ್ನು ಬಿಟ್ಟು ಸೌಬಲನಿದ್ದಲ್ಲಿಗೆ ಅವಸರದಿಂದ ಬಂದನು. ಕೌರವ ಮಹಾಸೇನೆಯನ್ನು ಸೀಳಿಕೊಂಡು ಬಂದ ಅವನು ಭೀಮಸೇನನ ಖಾಲಿ ರಥವನ್ನು ನೋಡಿದನು. ಸಮರದಲ್ಲಿ ಭೀಮಸೇನನ ಸಾರಥಿ ವಿಶೋಕನೊಬ್ಬನನ್ನೇ ನೋಡಿ ಧೃಷ್ಟದ್ಯುಮ್ನನು ದುಃಖಿತನೂ ಬುದ್ಧಿಗೆಟ್ಟವನೂ ಆದನು. ಸುದೀರ್ಘವಾಗಿ ನಿಟ್ಟುಸಿರುಬಿಡುತ್ತಾ ಕಣ್ಣೀರು ತುಂಬಿದವನಾಗಿ ಗದ್ಗದ

ಸ್ವರದಲ್ಲಿ "ನನ್ನ ಪ್ರಾಣಗಳಿಗಿಂತಲೂ ಪ್ರಿಯತಮನಾದ ಭೀಮನೆಲ್ಲಿ?" ಎಂದು ದುಃಖಿತನಾಗಿ ಕೇಳಿದನು. ಆಗ ವಿಶೋಕನು ಧೃಷ್ಟದ್ಯುಮ್ನನಿಗೆ ಕೈಮುಗಿದು ಹೇಳಿದನು:

> "ನನ್ನನ್ನು ಇಲ್ಲಿರಿಸಿ ಪ್ರತಾಪವಾನ್ ಬಲಶಾಲಿ ಪಾಂಡವೇಯನು ಮಹಾಸಾಗರದಂತಿರುವ ಧಾರ್ತರಾಷ್ಟ್ರರ ಈ ಸೇನೆಯನ್ನು ಪ್ರವೇಶಿಸಿದನು. ಅವನು ನನಗೆ ಈ ಪ್ರೀತಿಯುಕ್ತವಾದ ಮಾತುಗಳನ್ನಾಡಿದನು: "ಸೂತ! ನೀನು ಮುಹೂರ್ತಕಾಲ ಈ ಅಶ್ವಗಳನ್ನು ತಡೆಹಿಡಿದುಕೊಂಡು ಪ್ರತಿಪಾಲಿಸು. ನನ್ನನ್ನು ವಧಿಸಲು ಉದ್ಯುಕ್ತರಾಗಿರುವ ಇವರನ್ನು ಈಗಲೇ ಸಂಹರಿಸಿ ಬಂದುಬಿಡುತ್ತೇನೆ." ಆಗ ಗದೆಯನ್ನು ಹಿಡಿದು ಓಡಿ ಬರುತ್ತಿರುವ ಮಹಾಬಲನನ್ನು ನೋಡಿ ಎಲ್ಲರ ಸೇನೆಗಳೊಂದಿಗೆ ಸಂಘರ್ಷವುಂಟಾಯಿತು. ಭಯಾನಕವಾದ ತುಮುಲ ಯುದ್ಧವು ನಡೆಯುತ್ತಿರಲು ನಿನ್ನ ಸಖನು ಮಹಾವ್ಯೂಹವನ್ನು ಭೇದಿಸಿ ಪ್ರವೇಶಿಸಿದನು."

ವಿಶೋಕನ ಮಾತನ್ನು ಕೇಳಿ ಮಹಾಬಲ ಪಾರ್ಷತ ಧೃಷ್ಟದ್ಯುಮ್ನನು ರಣಮಧ್ಯದಲ್ಲಿ ಸೂತನಿಗೆ ಹೇಳಿದನು:

> "ಸೂತ! ರಣದಲ್ಲಿ ಭೀಮಸೇನನನ್ನು ಬಿಟ್ಟು ಪಾಂಡವರ ಸ್ನೇಹವನ್ನೂ ಕಳೆದುಕೊಂಡು ಜೀವಿಸಿರುವುದರಲ್ಲಿ ಪ್ರಯೋಜನವಿಲ್ಲ. ಒಬ್ಬನೇ ಹೋಗಿರುವ ಭೀಮನನ್ನು

ಯುದ್ಧದಲ್ಲಿ ಹಾಗೆಯೇ ಬಿಟ್ಟು ಭೀಮನಿಲ್ಲದೇ ನಾನು ಹಿಂದಿರುಗಿದರೆ ಕ್ಷತ್ರಿಯರು ನನ್ನನ್ನು ಏನೆಂದು ಹೇಳಿಕೊಂಡಾರು? ಸಹಾಯಕನನ್ನು ಬಿಟ್ಟು ತಾನು ಸುಕುಶಲಿಯಾಗಿ ಮನೆಗೆ ಹೋಗುವವನಿಗೆ ಅಗ್ನಿಯೇ ಮೊದಲಾದ ದೇವತೆಗಳು ಕೆಟ್ಟದ್ದನ್ನು ಮಾಡುತ್ತಾರೆ. ನನಗೆ ಭೀಮನು ಸಖನೂ ಹೌದು. ಅ ಮಹಾಬಲನು ಸಂಬಂಧಿಯೂ ಹೌದು. ಅವನು ನಮ್ಮ ಭಕ್ತ. ನಾವೂ ಆ ಅರಿನಿಶೂದನನ ಭಕ್ತರು. ಆದುದರಿಂದ ನಾನೂ ಕೂಡ ವೃಕೋದರನು ಎಲ್ಲಿ ಹೋಗಿದ್ದಾನೋ ಅಲ್ಲಿಗೆ ಹೋಗುತ್ತೇನೆ. ವಾಸವನು ದಾನವರನ್ನು ಹೇಗೋ ಹಾಗೆ ನಾನು ಅರಿಗಳನ್ನು ಸಂಹರಿಸುವುದನ್ನು ನೋಡು!"

ಹೀಗೆ ಹೇಳಿ ವೀರನು ಗದೆಗಳಿಂದ ಆನೆಗಳನ್ನು ಸಂಹರಿಸಿ ಹೋಗಿದ್ದ ಭೀಮಸೇನನ ಮಾರ್ಗದಲ್ಲಿಯೇ ಹೋಗಿ ಭಾರತೀ ಸೇನೆಯ ಮಧ್ಯಕ್ಕೆ ಬಂದನು. ಅಲ್ಲಿ ರಿಪುವಾಹಿನಿಯನ್ನು ದಹಿಸುತ್ತಿದ್ದ, ಭಿರುಗಾಳಿಯು ಮರಗಳನ್ನು ಭಗ್ನಗೊಳಿಸುವಂತೆ ರಣದಲ್ಲಿ ನೃಪರನ್ನು ಬಲವಾಗಿ ಧ್ವಂಸಿಸುತ್ತಿದ್ದ ಭೀಮನನ್ನು ನೋಡಿದನು. ಸಮರದಲ್ಲಿ ಅವನಿಂದ ವಧಿಸಲ್ಪಡುತ್ತಿದ್ದ ರಥಿಗಳು, ಅಶ್ವಾರೋಹಿಗಳು, ಪದಾತಿಗಳು ಮತ್ತು ಆನೆಗಳು ಜೋರಾಗಿ ಆರ್ತಸ್ವರದಲ್ಲಿ ಕೂಗುತ್ತಿದ್ದರು. ಆ ಚಿತ್ರಯೋಧಿ ಯುದ್ಧಕುಶಲಿ ಭೀಮಸೇನನಿಂದ ವಧಿಸಲ್ಪಡುತ್ತಿದ್ದ ಕೌರವ ಸೇನೆಯಲ್ಲಿ ದೊಡ್ಡ ಹಾಹಾಕಾರವೆದ್ದಿತು. ಆಗ ಅಸ್ತ್ರಗಳಲ್ಲಿ ಪರಿಣಿತರಾದವರು

ಎಲ್ಲರೂ ಭಯಪಡದೇ ವೃಕೋದರನನ್ನು ಸುತ್ತುವರೆದು ಶಸ್ತ್ರವೃಷ್ಟಿಯಿಂದ ಎಲ್ಲ ಕಡೆಗಳಿಂದಲೂ ಆಕ್ರಮಿಸಿದರು. ಧಾವಿಸಿಬಂದು ಶಸ್ತ್ರಭೃತರಲ್ಲಿ ಶ್ರೇಷ್ಠನಾದ, ಲೋಕವೀರರಿಂದ ಎಲ್ಲಕಡೆಗಳಿಂದ ಮುತ್ತಲ್ಪಟ್ಟ, ಘೋರ ಸೇನೆಯೊಂದಿಗೆ ಚೆನ್ನಾಗಿ ಯುದ್ಧಮಾಡುತ್ತಿದ್ದ ಬಲೀ ಭೀಮಸೇನನನ್ನು ನೋಡಿ ಪಾರ್ಷತನು ಅಂಗಾಂಗಳಲ್ಲಿ ಗಾಯಗೊಂಡಿದ್ದ, ಕ್ರೋಧವಿಷವನ್ನು ಕಾರುತ್ತಾ ನೆಲದ ಮೇಲೆಯೇ ನಿಂತು ಯುದ್ಧಮಾಡುತ್ತಿರುವ ಅಂತಕಾಲದಲ್ಲಿ ಕಾಲನಂತೆ ಗದೆಯನ್ನು ಹಿಡಿದಿರುವ ಭೀಮಸೇನನಿಗೆ ಆಶ್ವಾಸನೆ ನೀಡಿದನು. ಆ ಮಹಾತ್ಮನು ತಕ್ಷಣವೇ ಭೀಮಸೇನನನ್ನು ತನ್ನ ರಥದ ಮೇಲೇರಿಸಿಕೊಂಡು ಅವನ ಅಂಗಾಂಗಳೆಲ್ಲವನ್ನೂ ಚುಚ್ಚಿದ್ದ ಬಾಣಗಳನ್ನು ತೆಗೆದು ಗಾಂಢವಾಗಿ ಆಲಂಗಿಸಿ ಶತ್ರುಗಳ ಮಧ್ಯದಲ್ಲಿ ಅವನನ್ನು ಸಂತೈಸಿದನು.

ಆ ಮಹಾ ವಿಮರ್ದನ ಕಾರ್ಯವು ನಡೆಯುತ್ತಿರಲು ದುರ್ಯೋಧನನು ಸಹೋದರರರನ್ನು ಸಮೀಪಿಸಿ ಹೇಳಿದನು:

> "ಈ ದುರಾತ್ಮಾ ದ್ರುಪದನ ಮಗನು ಭೀಮಸೇನನ ನೆರವಿಗೆ ಬಂದುಬಿಟ್ಟನಲ್ಲ! ಇವನನ್ನು ಎಲ್ಲರೂ ಒಟ್ಟಿಗೇ ಸಂಹರಿಸಲು ಆಕ್ರಮಣಿಸೋಣ. ಈ ಶತ್ರುವು ನಮ್ಮ ಸೇನೆಗೆ ಹಾನಿಯನ್ನುಂಟುಮಾಡದಂತೆ ನೋಡಿಕೊಳ್ಳಬೇಕು."

ಅವನ ಮಾತುಗಳನ್ನು ಕೇಳಿ, ಧೃಷ್ಟದ್ಯುಮ್ನನನ್ನು ಸಹಿಸಿಕೊಳ್ಳದೇ,

ಹಿರಿಯಣ್ಣನ ಆಜ್ಞೆಯಿಂದ ಚೋದಿತರಾದ ಧಾರ್ತರಾಷ್ಟ್ರರು ಯುಗಕ್ಷಯದದಲ್ಲಿ ಉಗ್ರ ಧೂಮಕೇತುಗಳಂತೆ ಆಯುಧಗಳನ್ನೆತ್ತಿಕೊಂಡು ಅವನನ್ನು ವಧಿಸಲು ಅವನ ಮೇಲೆ ಎರಗಿದರು. ಆ ವೀರರು ಚಿತ್ರ ಧನುಸ್ಸುಗಳನ್ನು ಹಿಡಿದು ರಥಚಕ್ರನೇಮಿಗಳ ಗಡ-ಗಡಾಶಬ್ಧದಿಂದ ಭೂಮಿಯನ್ನು ನಡುಗಿಸುತ್ತಾ ಮೇಘಗಳು ಪರ್ವತದ ಮೇಲೆ ಮಳೆಗರೆಯುವಂತೆ ದ್ರುಪದನ ಮಗನನ್ನು ಬಾಣಗಳಿಂದ ಮುಚ್ಚಿದರು. ಆದರೆ ಆ ಚಿತ್ರಯೋಧಿ ವೀರನು ಅವರ ಸುತೀಕ್ಷ್ಣ ಶರಗಳು ಮೇಲೆ ಬೀಳುತ್ತಿದ್ದರೂ ಸಮರದಲ್ಲಿ ವಿಚಲಿತನಾಗದೇ ಧಾರ್ತರಾಷ್ಟ್ರರ ಬಾಣಗಳನ್ನು ತನ್ನದೇ ಬಾಣಗಳಿಂದ ಕತ್ತರಿಸಿ ರಣದಲ್ಲಿ ನಿಂತನು. ಧಾರ್ತರಾಷ್ಟ್ರರ ಮೇಲೆ ತುಂಬಾ ಕ್ರುದ್ಧನಾಗಿ ಅವರನ್ನು ಕೊಲ್ಲಲು ದ್ರುಪದಾತ್ಮಜ ಯುವಕ ಮಹಾರಥನು ದೈತ್ಯರ ಮೇಲೆ ಸಮರದಲ್ಲಿ ಮಹೇಂದ್ರನು ಹೇಗೋ ಹಾಗೆ ಪ್ರಮೋಹನಾಸ್ತ್ರವನ್ನು ಹೂಡಿದನು. ಆಗ ನರವೀರರು ಪ್ರಮೋಹನಾಸ್ತ್ರದಿಂದ ಹೊಡೆಯಲ್ಪಟ್ಟು ಬುದ್ಧಿಸತ್ತ್ವಗಳನ್ನು ಕಳೆದುಕೊಂಡು ಪ್ರಜ್ಞಾಹೀನರಾದರು. ಆಯುಸ್ಸನ್ನು ಕಳೆದುಕೊಂಡವರಂತೆ ಪ್ರಜ್ಞಾಹೀನರಾಗಿ ಬಿದ್ದಿರುವ ಧಾರ್ತರಾಷ್ಟ್ರರನ್ನು ನೋಡಿ ಕುರುಗಳೆಲ್ಲರೂ ಕುದುರೆ-ಆನೆ-ರಥಗಳೊಂದಿಗೆ ಎಲ್ಲಕಡೆ ಪಲಾಯನಮಾಡತೊಡಗಿದರು.

ಇದೇ ಸಮಯದಲ್ಲಿ ಶಸ್ತ್ರಭೃತರಲ್ಲಿ ಶ್ರೇಷ್ಠನಾದ ದ್ರೋಣನು ದ್ರುಪದನನ್ನು ಎದುರಿಸಿ ಅವನನ್ನು ಮೂರು ದಾರುಣ ಶರಗಳಿಂದ

ಹೊಡೆದನು. ದ್ರೋಣನಿಂದ ಪ್ರಹಾರದಿದ ಬಹುವಾಗಿ ಗಾಯಗೊಂಡ ದ್ರುಪದನು ಹಿಂದಿನ ವೈರವನ್ನು ಸ್ಮರಿಸುತ್ತಾ ರಣದಿಂದ ಬಹುದೂರ ಹೊರಟುಹೋದನು. ದ್ರುಪದನನ್ನು ಗೆದ್ದು ಪ್ರತಾಪವಾನ್ ದ್ರೋಣನು ಶಂಖವನ್ನು ಊದಿದನು. ಅವನ ಶಂಖಸ್ವನವನ್ನು ಕೇಳಿ ಸರ್ವ ಸೋಮಕರೂ ನಡುಗಿದರು. ಆಗ ತೇಜಸ್ವೀ ದ್ರೋಣನು ಧಾರ್ತರಾಷ್ಟ್ರರು ಪ್ರಮೋಹನಾಸ್ತ್ರದಿಂದ ಮೂರ್ಛಿತರಾಗಿದ್ದಾರೆಂದು ಕೇಳಿದನು. ರಾಜಗೃದ್ಧೀ ದ್ರೋಣನು ತ್ವರೆಮಾಡಿ ಆ ರಣಕ್ಕೆ ಧಾವಿಸಿದನು. ಅಲ್ಲಿ ಪ್ರತಾಪವಾನ್ ಮಹೇಷ್ವಾಸ ಭಾರದ್ವಾಜನು ಮಹಾರಣದಲ್ಲಿ ಸಂಚರಿಸುತ್ತಿರುವ ಧೃಷ್ಟದ್ಯುಮ್ನನನ್ನೂ ಭೀಮನನ್ನೂ ನೋಡಿದನು. ಮೋಹಾವಿಷ್ಟರಾಗಿದ್ದ ಧೃತರಾಷ್ಟ್ರ ಪುತ್ರರನ್ನು ನೋಡಿ ಆ ಮಹಾರಥನು ಪ್ರಜ್ಞಾಸ್ತ್ರವನ್ನು ಬಳಸಿ ಮೋಹನಾಸ್ತ್ರವನ್ನು ನಾಶಗೊಳಿಸಿದನು. ಹಿಂದೆ ಪ್ರಾಣವನ್ನು ಪಡೆದ ಧಾರ್ತರಾಷ್ಟ್ರ ಮಹಾರಥರು ಪುನಃ ಸಮರದಲ್ಲಿ ಭೀಮ-ಪಾರ್ಷತರೊಂದಿಗೆ ಯುದ್ಧ ಮಾಡತೊಡಗಿದರು.

ಆಗ ಯುಧಿಷ್ಠಿರನು ತನ್ನ ಸೈನಿಕರನ್ನು ಒಟ್ಟುಗೂಡಿಸಿ ಕರೆದು ಹೇಳಿದನು:

> “ನೀವು ಒಟ್ಟು ಶಕ್ತಿಯಿಂದ ಯುದ್ಧದಲ್ಲಿ ಭೀಮ-ಪಾರ್ಷತರಿಗೆ ಸಹಾಯಮಾಡಿ. ಸೌಭದ್ರನೇ ಮೊದಲಾದ ಹನ್ನೆರಡು ಮಂದಿ ವೀರ ರಥರು ಕವಚಗಳನ್ನು ಧರಿಸಿ ಅವರಿದ್ದಲ್ಲಿಗೆ ಹೋಗಿ.

ಇಲ್ಲವಾದರೆ ನನ್ನ ಮನಸ್ಸು ನಿಶ್ಚಿಂತವಾಗಿರಲಾರದು.”

ಹೀಗೆ ಅನುಜ್ಞಾತರಾದ ಶೂರ ವಿಕ್ರಾಂತಯೋಧಿಗಳು ಹಾಗೆಯೇ ಆಗಲೆಂದು ಹೇಳಿ ಆ ಎಲ್ಲ ಪುರುಷಮಾನಿನರೂ ಸೂರ್ಯನು ಮಧ್ಯಾಕಾಶದಲ್ಲಿ ಬರಲು ಭೀಮ-ಧೃಷ್ಟದ್ಯುಮ್ನರಿದ್ದಲ್ಲಿಗೆ ತೆರಳಿದರು. ಕೇಕಯರು, ದ್ರೌಪದೇಯರು, ಮತ್ತು ವೀರ್ಯವಾನ್ ಧೃಷ್ಟಕೇತುವು ಅಭಿಮನ್ಯುವನ್ನು ಮುಂದೆ ಮಾಡಿಕೊಂಡು ಮಹಾಸೇನೆಯಿಂದ ಆವೃತರಾಗಿ ಸುಚೀಮುಖವೆಂಬ ವ್ಯೂಹವನ್ನು ರಚಿಸಿಕೊಂಡು ಧಾರ್ತರಾಷ್ಟ್ರರ ಆ ರಥಸೇನೆಯನ್ನು ಭೇದಿಸಿದರು. ಅಭಿಮನ್ಯುವನ್ನು ಮುಂದಿಟ್ಟುಕೊಂಡು ಆ ಮಹೇಷ್ವಾಸರು ಬರಲು ಭೀಮಸೇನನಿಂದ ಭಯಾವಿಷ್ಟರಾಗಿದ್ದ ಮತ್ತು ಧೃಷ್ಟದ್ಯುಮ್ನನಿಂದ ವಿಮೋಹಿತರಾಗಿದ್ದ ಕೌರವ ಸೇನೆಯು ತಡೆದುಕೊಳ್ಳಲಾರದೇ ಮತ್ತೇರಿದವರಂತೆ ಅಥವಾ ಮೂರ್ಛಿತರಾದವರಂತೆ ಕೂಗಾಡುತ್ತಾ ನಿಂತಿತ್ತು. ಸುವರ್ಣವಿಕೃತ ಧ್ವಜಗಳನ್ನು ಹೊಂದಿದ್ದ ಆ ಮಹೇಷ್ವಾಸರು ಧೃಷ್ಟದ್ಯುಮ್ನ-ವೃಕೋದರರಿಗೆ ಸಹಾಯ ಮಾಡಲು ಧಾವಿಸಿ ಬಂದರು. ಬೆಂಗಾವಲಾಗಿ ಬಂದ ಅಭಿಮನ್ಯುಪುರೋಗಮ ಮಹೇಷ್ವಾಸರನ್ನು ನೋಡಿ ಕೌರವ ಸೇನೆಯನ್ನು ಸಂಹರಿಸುವಲ್ಲಿ ನಿರತರಾಗಿದ್ದ ಭೀಮ-ಧೃಷ್ಟದ್ಯುಮ್ನರಿಬ್ಬರೂ ಸಂತೋಷಗೊಂಡರು.

ಅವರಿಗೆ ಸಹಾಯುಕನಾಗಿ ಬರುತ್ತಿದ್ದ ಗುರು ದ್ರೋಣನನ್ನು ನೋಡಿ ಪಾಂಚಾಲ್ಯ ಪಾರ್ಷತ ವೀರನು ಧಾರ್ತರಾಷ್ಟ್ರರನ್ನು ವಧಿಸಲು ಮನಸ್ಸು

ಮಾಡಲಿಲ್ಲ. ಆಗ ವೃಕೋದರನನ್ನು ಕೇಕಯನ ರಥದ ಮೇಲೇರಿಸಿ ಸುಸಂಕ್ರುದ್ಧನಾದ ಧೃಷ್ಟದ್ಯುಮ್ನನು ಅಸ್ತ್ರಪಾರಗ ದ್ರೋಣನನ್ನು ಎದುರಿಸಿದನು. ಅವನು ತಮ್ಮ ಮೇಲೆ ಬೇಗನೆ ಬೀಳುತ್ತಿದ್ದುದನ್ನು ನೋಡಿ ಪ್ರತಾಪವಾನ್ ಶತ್ರುನಿಷೂದನ ಭಾರದ್ವಾಜನು ಕ್ರುದ್ಧನಾಗಿ ಅವನ ಬಿಲ್ಲನ್ನು ಒಂದೇ ಒಂದು ಭಲ್ಲದಿಂದ ತುಂಡರಿಸಿದನು. ಅನ್ನವಿಟ್ಟ ಸ್ವಾಮಿಯನ್ನು ಸ್ಮರಿಸುತ್ತಾ ದುರ್ಯೋಧನನ ಹಿತಕ್ಕಾಗಿ ಪಾರ್ಷತನ ಮೇಲೆ ಅನ್ಯ ನೂರಾರು ಬಾಣಗಳನ್ನು ಪ್ರಯೋಗಿಸಿದನು. ಆಗ ಇನ್ನೊಂದು ಬಿಲ್ಲನ್ನು ಎತ್ತಿಕೊಂಡು ಪರವೀರಹ ಪಾರ್ಷತನು ದ್ರೋಣನನ್ನು ಏಳು ಶಿಲಾಶಿತ ರುಕ್ಮಪುಂಖಗಳಿಂದ ಹೊಡೆದನು. ಅಮಿತ್ರಕರ್ಶನ ದ್ರೋಣನು ಪುನಃ ಅವನ ಚಾಪವನ್ನು ಕತ್ತರಿಸಿದನು ಮತ್ತು ನಾಲ್ಕು ಉತ್ತಮ ಸಾಯಕಗಳಿಂದ ಬೇಗನೇ ಅವನ ನಾಲ್ಕು ಕುದುರೆಗಳನ್ನು ಘೋರವಾದ ವೈವಸ್ವತಕ್ಷಯಕ್ಕೆ ಕಳುಹಿಸಿದನು. ವೀರ್ಯವಾನನು ಭಲ್ಲದಿಂದ ಅವನ ಸಾರಥಿಯನ್ನು ಮೃತ್ಯುಲೋಕಕ್ಕೆ ಕಳುಹಿಸಿದನು. ಅಶ್ವಗಳು ಹತರಾಗಲು ತಕ್ಷಣವೇ ಆ ಮಹಾರಥನು ರಥದಿಂದ ಹಾರಿ ಮಹಾಬಾಹು ಅಭಿಮನ್ಯುವಿನ ಮಹಾರಥವನ್ನೇರಿದನು.

ಆಗ ಭೀಮಸೇನ-ಪಾರ್ಷತರು ನೋಡುತ್ತಿದ್ದಂತೆಯೇ ರಥ-ಆನೆ-ಕುದುರೆಗಳೊಂದಿಗೆ ಸೇನೆಯು ನಡುಗುತ್ತಿರುವುದು ಕಂಡುಬಂದಿತು. ಅಮಿತತೇಜಸ್ವಿ ದ್ರೋಣನಿಂದ ಸದೆಬಡಿಯಲ್ಪಡುತ್ತಿದ್ದ ಸೇನೆಯನ್ನು ನೋಡಿ ಆ ಮಹಾರಥರು ಎಷ್ಟೇ ಪ್ರಯತ್ನಿಸಿದರೂ ಅವನನ್ನು

ತಡೆಯಲು ಶಕ್ಯರಾಗಲಿಲ್ಲ. ದ್ರೋಣನ ನಿಶಿತ ಶರಗಳಿಂದ ವಧಿಸಲ್ಪಡುತ್ತಿದ್ದ ಆ ಸೇನೆಯು ಅಲ್ಲೋಲಕಲ್ಲೋಲವಾದ ಮಹಾ ಸಾಗರದಂತೆ ಅಲ್ಲಲ್ಲಿಯೇ ಸುತ್ತಿ ಸುತ್ತಿ ಬರುತ್ತಿತ್ತು. ಆ ರೀತಿಯಲ್ಲಿದ್ದ ಅವರನ್ನು ಕಂಡು ಕೌರವ ಸೇನೆಯವರು ಬಹಳ ಹರ್ಷಿತರಾದರು. ಕ್ರುದ್ಧನಾಗಿ ಶತ್ರುಸೇನೆಯನ್ನು ಸುಡುತ್ತಿದ್ದ ಆಚಾರ್ಯನನ್ನು ನೋಡಿ ಎಲ್ಲಕಡೆಗಳಿಂದ ಯೋಧರು "ಸಾಧು! ಸಾಧು!" ಎಂದು ಕೂಗಿದರು.

ಆಗ ರಾಜಾ ದುರ್ಯೋಧನನು ಮೂರ್ಛೆಯಿಂದ ಎಚ್ಚೆತ್ತು ಪುನಃ ಅಚ್ಯುತ ಭೀಮನನ್ನು ಶರವರ್ಷಗಳಿಂದ ಆಕ್ರಮಣಿಸಿದನು. ಪುನಃ ಧೃತರಾಷ್ಟ್ರನ ಮಹಾರಥ ಪುತ್ರರು ಒಂದಾಗಿ ಸೇರಿ ಭೀಮನೊಂದಿಗೆ ಯುದ್ಧಮಾಡತೊಡಗಿದರು. ಮಹಾಬಾಹು ಭೀಮಸೇನನೂ ಕೂಡ ಪುನಃ ತನ್ನ ರಥವನ್ನು ಪಡೆದು ಅದನ್ನೇರಿ ಧಾರ್ತರಾಷ್ಟ್ರರನ್ನು ಎದುರಿಸಿದನು. ಮಹಾವೇಗವುಳ್ಳ ಬಂಗಾರದಿಂದ ಅಲಂಕರಿಸಲ್ಪಟ್ಟ ದೃಢವಾದ ಬಣ್ಣದ ಬಿಲ್ಲನ್ನು ಹಿಡಿದು ರಣದಲ್ಲಿ ಧಾರ್ತರಾಷ್ಟ್ರರನ್ನು ಶರಗಳಿಂದ ಹೊಡೆದನು. ಆಗ ರಾಜಾ ದುರ್ಯೋಧನನು ಮಹಾಬಲ ಭೀಮಸೇನನನ್ನು ತೀಕ್ಷ್ಣ ನಾರಾಚಗಳಿಂದ ಮರ್ಮಗಳಿಗೆ ಚೆನ್ನಾಗಿ ಹೊಡೆದನು. ಅವನಿಂದ ಅತಿಯಾಗಿ ಪೆಟ್ಟುತಿಂದ ಆ ಮಹೇಷ್ವಾಸ ಭೀಮನು ಕ್ರೋಧದಿಂದ ಕಣ್ಣುಗಳನ್ನು ಕೆಂಪುಮಾಡಿಕೊಂಡು ವೇಗದಿಂದ ಧನುಸ್ಸನ್ನು ಎತ್ತಿ ದುರ್ಯೋಧನನನ್ನು ಮೂರುಬಾಣಗಳಿಂದ ಅವನ ಬಾಹುಗಳಿಗೂ ಎದೆಗೂ ಹೊಡೆದನು. ಅವನಿಂದ ಪೆಟ್ಟುತಿಂದರೂ ರಾಜನು ಅಲುಗಾಡದೇ

ಪರ್ವತದಂತಿದ್ದನು. ಸಮರದಲ್ಲಿ ಕ್ರುದ್ಧರಾಗಿ ಪರಸ್ಪರರನ್ನು ಹೊಡೆಯುತ್ತಿದ್ದ ಅವರಿಬ್ಬರನ್ನು ನೋಡಿ ಜೀವವನ್ನೇ ತೊರೆಯಲು ಸಿದ್ಧರಾಗಿದ್ದ ದುರ್ಯೋಧನನ ಶೂರ ತಮ್ಮಂದಿರೆಲ್ಲರೂ ಭೀಮನನ್ನು ಹಿಡಿಯುವ ತಮ್ಮ ಹಿಂದಿನ ಉಪಾಯದಂತೆ ಮನಸ್ಸು ಮಾಡಿ ಅವನನ್ನು ಸೆರೆಹಿಡಿಯಲು ಪ್ರಯತ್ನಿಸಿದರು. ಅವರು ಅವನ ಮೇಲೆ ಎರಗಲು ಮಹಾಬಲ ಭೀಮಸೇನನು ಎದುರಾಳಿ ಆನೆಯನ್ನು ಇನ್ನೊಂದು ಆನೆಯು ಹೇಗೋ ಹಾಗೆ ಎದುರಿಸಿ ಯುದ್ಧ ಮಾಡಿದನು.

ತುಂಬಾ ಕ್ರುದ್ಧನಾದ ಆ ತೇಜಸ್ವಿಯು ಮಹಾಯಶಸ್ವಿ ಧೃತರಾಷ್ಟ್ರನ ಮಗ ಚಿತ್ರಸೇನನನ್ನು ನಾರಾಚಗಳಿಂದ ಹೊಡೆದನು. ಹಾಗೆಯೇ ಧೃತರಾಷ್ಟ್ರನ ಇತರ ಮಕ್ಕಳನ್ನೂ ವೇಗವುಳ್ಳ ಅನೇಕ ವಿಧದ ರುಕ್ಮಪುಂಖ ಶರಗಳಿಂದ ಹೊಡೆದನು. ಆಗ ಭೀಮಸೇನನನ್ನು ಅನುಸರಿಸಿ ಹೋಗಬೇಕೆಂದು ಧರ್ಮರಾಜನು ಅಭಿಮನ್ಯುವಿನ ನಾಯಕತ್ವದಲ್ಲಿ ಕಳುಹಿಸಿದ್ದ ಹನ್ನೆರಡು ಮಹಾರಥರು ತಮ್ಮ ಎಲ್ಲ ಸೇನೆಗಳೊಂದಿಗೆ ಬಂದು ಧಾರ್ತರಾಷ್ಟ್ರರನ್ನು ಎದುರಿಸಿ ಯುದ್ಧಮಾಡಿದರು. ಆ ಶೂರರ ಸೂರ್ಯಾಗ್ನಿಸಮತ್ತೇಜಸ್ಸಿನ ರಥಗಳನ್ನೂ, ಶ್ರೀಯಿಂದ ಆವೃತರಾಗಿ ಬೆಳಗುತ್ತಿರುವ ಆ ಮಹೇಷ್ವಾಸರನ್ನೂ, ಸುವರ್ಣಕವಚಗಳ ಬೆಳಕಿನಿಂದ ಬೆಳಗುತ್ತಿರುವ ಅವರನ್ನು ನೋಡಿ ಮಹಾಬಲ ಧಾರ್ತರಾಷ್ಟ್ರರು ಅವನನ್ನು ತ್ಯಜಿಸಿದರು.

ಅವರು ಜೀವಸಹಿತರಾಗಿ ಹೊರಟುಹೋದುದನ್ನು ಕೌಂತೇಯನು ಸಹಿಸಲಿಲ್ಲ. ಅವರನ್ನು ಬೆನ್ನಟ್ಟಿಹೋಗಿ ಪುನಃ ಪೀಡಿಸಿದನು. ಆಗ ಭೀಮಸೇನ ಮತ್ತು ಪಾರ್ಷತರೊಡನೆ ಅಭಿಮನ್ಯುವು ಇರುವುದನ್ನು ನೋಡಿ ಕೌರವ ಸೇನೆಯಲ್ಲಿದ್ದ ದುರ್ಯೋಧನನೇ ಮೊದಲಾದ ಮಹಾರಥರು ಧನ್ನುಸ್ಸುಗಳನ್ನು ಹಿಡಿದು ಉತ್ತಮ ಅಶ್ವಗಳಿಂದ ಎಳೆಯಲ್ಪಟ್ಟ ರಥಗಳಲ್ಲಿ ಅವರಿರುವಲ್ಲಿಗೆ ಧಾವಿಸಿದರು. ಆಗ ಅಪರಾಹ್ಣದಲ್ಲಿ ಕೌರವರ ಮತ್ತು ಬಲಶಾಲಿ ಪಾಂಡವರ ನಡುವೆ ಮಹಾ ರಣವಾಯಿತು.

## ಸಂಕುಲ ಯುದ್ಧ

ಅಭಿಮನ್ಯುವು ವಿಕರ್ಣನ ಮಹಾವೇಗದ ಕುದುರೆಗಳನ್ನು ಕೊಂದು ಇಪ್ಪತ್ತೈದು ಕ್ಷುದ್ರಕಗಳಿಂದ ಅವನನ್ನು ಹೊಡೆದನು. ಅಶ್ವವು ಹತವಾಗಲು ಮಹಾರಥ ವಿಕರ್ಣನು ಚಿತ್ರಸೇನನ ಹೊಳೆಯುವ ರಥವನ್ನು ಏರಿದನು. ಒಂದೇ ರಥದಲ್ಲಿ ನಿಂತಿದ್ದ ಆ ಇಬ್ಬರು ಕುರುವರ್ಧನ ಸಹೋದರರರನ್ನು ಆರ್ಜುನಿಯು ಶರಜಾಲಗಳಿಂದ ಮುಚ್ಚಿದನು. ಆಗ ದುರ್ಜಯ ಮತ್ತು ವಿಕರ್ಣರು ಕಾರ್ಷ್ಣಿಯನ್ನು ಐದು ಆಯಸಗಳಿಂದ ಹೊಡೆದರೂ ಕಾರ್ಷ್ಣಿಯು ಮೇರುವಿನಂತೆ ಅಲುಗಾಡದೇ ಅಚಲವಾಗಿದ್ದನು. ದುಃಶಾಸನನಾದರೋ ಸಮರದಲ್ಲಿ ಐವರು ಕೇಕಯರೊಂದಿಗೆ ಯುದ್ಧಮಾಡತೊಡಗಿದನು. ಅದು ಅದ್ಭುತವಾಗಿತ್ತು. ದ್ರೌಪದೇಯರು ರಣದಲ್ಲಿ ಕ್ರುದ್ಧರಾಗಿ

ದುರ್ಯೋಧನನನ್ನು ಸುತ್ತುವರೆದು ಒಬ್ಬೊಬ್ಬರೂ ಮೂರು ಬಾಣಗಳಿಂದ ಹೊಡೆದರು. ದುರ್ಯೋಧನನೂ ಕೂಡ ರಣದಲ್ಲಿ ದ್ರೌಪದೇಯರನ್ನು ಪ್ರತ್ಯೇಕ ಪ್ರತ್ಯೇಕವಾಗಿ ನಿಶಿತ ಸಾಯಕಗಳಿಂದ ಹೊಡೆದನು. ಅವರಿಂದಲೂ ಪೆಟ್ಟುತಿಂದ ಅವನು ರಕ್ತದಿಂದ ತೋಯ್ದು ಗೈರಿಕಾದಿ ಧಾತುಗಳ ಸಮ್ಮಿಶ್ರಣಗಳಿಂದ ಕೂಡಿದ ಝರಿಗಳಿರುವ ಗಿರಿಯಂತೆ ಶೋಭಿಸಿದನು. ಭೀಷ್ಮನೂ ಕೂಡ ಸಮರದಲ್ಲಿ ಗೋಪಾಲಕನು ಹಸುಗಳನ್ನು ತರುಬುವಂತೆ ಪಾಂಡವರ ಸೇನೆಯನ್ನು ತಡೆದಿದ್ದನು. ಆಗ ರಣಭೂಮಿಯ ದಕ್ಷಿಣಭಾಗದಿಂದ ಸೇನೆಗಳನ್ನು ಸಂಹರಿಸುತ್ತಿದ್ದ ಪಾರ್ಥನ ಗಾಂಡೀವ ನಿರ್ಘೋಷವು ಕೇಳಿಬಂದಿತು.

ಅಲ್ಲಿ ಕುರುಗಳ ಮತ್ತು ಪಾಂಡವರ ಸೇನೆಗಳಲ್ಲಿ ಎಲ್ಲ ಕಡೆ ಸಂಹೃತರಾದವರ ಮುಂಡಗಳು ಎದ್ದು ನಿಂತಿದ್ದವು. ಸೈನ್ಯವೆಂಬ ಸಾಗರದಲ್ಲಿ ರಕ್ತವೇ ನೀರಾಗಿತ್ತು. ಬಾಣಗಳು ಸುಳಿಯಾಗಿದ್ದವು. ಆನೆಗಳು ದ್ವೀಪಗಳಂತಿದ್ದವು. ಕುದುರೆಗಳು ಅಲೆಗಳಾಗಿದ್ದವು. ರಥಗಳು ನರವ್ಯಾಘ್ರರು ದಾಟಲು ಬಳಸಿದ ನೌಕೆಗಳಂತಿದ್ದವು. ಅಲ್ಲಿ ಕೈಗಳು ಕತ್ತರಿಸಿದ, ಕವಚಗಳಿಲ್ಲದ, ದೇಹವೇ ಇಲ್ಲದ ನೂರಾರು ಸಾವಿರಾರು ನರೋತ್ತಮರು ಅಲ್ಲಿ ಬಿದ್ದಿರುವುದು ಕಾಣುತ್ತಿತ್ತು. ರಕ್ತದಿಂದ ತೋಯಿಸಲ್ಪಟ್ಟು ನಿಹತವಾದ ಮತ್ತ ಮಾತಂಗಗಳು ನೆಲದ ಮೇಲೆ ಪರ್ವತಗಳಂತೆ ತೋರುತ್ತಿದ್ದವು. ಅಂತಹ ಅಲ್ಲಿಯೂ ಒಂದು ಪರಮಾದ್ಭುತವು ಕಂಡುಬಂದಿತು. ಕೌರವರಲ್ಲಿಯಾಗಲೀ ಪಾಂಡವರಲ್ಲಿಯಾಗಲೀ ಯುದ್ಧವು ಬೇಡವೆಂದು ಹೇಳುವವರು

ಯಾರೂ ಇರಲಿಲ್ಲ. ಹೀಗೆ ಮಹಾಯಶಸ್ಸನ್ನು ಬಯಸುತ್ತಾ ಕೌರವ ವೀರರು ಯುದ್ಧದಲ್ಲಿ ಜಯವನ್ನೇ ಬಯಸಿ ಪಾಂಡವರೊಂದಿಗೆ ಯುದ್ಧಮಾಡಿದರು.

## ಆರನೆಯ ದಿವಸದ ಯುದ್ಧದ ಮುಕ್ತಾಯ

ಭಾಸ್ಕರನು ಕೆಂಪಾಗುತ್ತಿರಲು ರಾಜಾ ದುರ್ಯೋಧನನು ಭೀಮನನ್ನು ಕೊಲ್ಲಲು ಬಯಸಿ ರಭಸದಿಂದ ಸಮರಕ್ಕೆ ಧಾವಿಸಿದನು. ಆ ನರವೀರ ದೃಢವೈರಿಯು ಬರುತ್ತಿರುವುದನ್ನು ನೋಡಿ ತುಂಬಾ ಕ್ರುದ್ಧನಾದ ಭೀಮಸೇನನು ಈ ಮಾತುಗಳನ್ನಾಡಿದನು:

> "ಬಹಳ ವರ್ಷಗಳಿಂದ ಕಾಯುತ್ತಿದ್ದ ಸಮಯವು ಇಗೋ ಇಂದು ಬಂದೊದಗಿದೆ. ರಣವನ್ನು ಬಿಟ್ಟು ಓಡಿ ಹೋಗದೇ ಇದ್ದರೆ ಇಂದು ನಿನ್ನನ್ನು ಕೊಲ್ಲುತ್ತೇನೆ. ಇಂದು ನಿನ್ನನ್ನು ಕೊಂದು ಕುಂತಿಯ ಪರಿಕ್ಲೇಶವನ್ನು, ಸಂಪೂರ್ಣ ವನವಾಸದ ಕಷ್ಟಗಳನ್ನು ಮತ್ತು ದ್ರೌಪದಿಯ ಪರಿಕ್ಲೇಶವನ್ನು ಕೊನೆಗೊಳಿಸುತ್ತೇನೆ. ಗಾಂಧಾರೇ! ಅಸೂಯೆಗೊಳಗಾಗಿ ನೀನು ಪಾಂಡವರನ್ನು ಅಪಮಾನಿಸಿದ್ದೀಯೆ. ಆ ಪಾಪದಿಂದಲೇ ಬಂದಿರುವ ಈ ವ್ಯಸನವನ್ನು ನೋಡು. ಕರ್ಣನ ಮತ್ತು ಸೌಬಲನ ಸಲಹೆಗಳಂತೆ ಹಿಂದೆ ನೀನು ಕಾಮದಿಂದ ಪಾಂಡವರ ಕುರಿತು ಯೋಚಿಸದೆಯೇ ಇಷ್ಟವಾದಂತೆ ಮಾಡಿದ್ದೆ. ಬೇಡಿಕೊಂಡ ದಾಶಾರ್ಹನನ್ನು ಮೋಹದಿಂದ

ಅಪಮಾನಿಸಿದ್ದೆ. ಉಲೂಕನ ಮೂಲಕ ಸಂದೇಶವನ್ನು ಕಳುಹಿಸಿ ಸಂತೋಷದಿಂದ ಯುದ್ಧವನ್ನು ಬಯಸಿ ಪ್ರಾರಂಭಿಸಿದೆ. ಇಂದು ನಿನ್ನನ್ನು ಬಾಂಧವರು ಮತ್ತು ಅನುಯಾಯಿಗಳೊಂದಿಗೆ ಸಂಹರಿಸುತ್ತೇನೆ. ಹಿಂದೆ ನೀನು ಮಾಡಿದ ಪಾಪಕ್ಕೆ ಸುಡುತ್ತೇನೆ.”

ಹೀಗೆ ಹೇಳಿ ಅವನು ಘೋರ ಧನುಸ್ಸನ್ನು ಎಳೆದು ಜೋರಾಗಿ ಟೇಂಕರಿಸಿ ಸೂರ್ಯನ ಕಿರಣಗಳಂತೆ ಹೊಳೆಯುತ್ತಿದ್ದ ಘೋರ ಶರಗಳನ್ನು ಹೂಡಿದನು. ತಕ್ಷಣವೇ ಕ್ರುದ್ಧನಾಗಿ ಸುಯೋಧನನ ಮೇಲೆ ಇಪ್ಪತ್ತಾರು ವಜ್ರಗಳಂತೆ ಮೊನಚಾಗಿದ್ದ, ಅಗ್ನಿಶಿಖರಗಳಂತೆ ಉರಿಯುತ್ತಿದ್ದ ಬಾಣಗಳನ್ನು ಪ್ರಯೋಗಿಸಿದನು. ಆಗ ಎರಡರಿಂದ ಅವನ ಬಿಲ್ಲನ್ನೂ ಎರಡರಿಂದ ಸೂತನನ್ನೂ ಹೊಡೆದು ನಾಲ್ಕರಿಂದ ಅವನ ಕುದುರೆಗಳನ್ನು ಯಮಸಾದನಕ್ಕೆ ಕಳುಹಿಸಿದನು. ಆ ಅರಿಮರ್ದನನು ತನ್ನ ಉತ್ತಮ ರಥದಿಂದ ಎರಡು ಶರಗಳನ್ನು ಪ್ರಯೋಗಿಸಿ ರಾಜನ ಛತ್ರವನ್ನು ತುಂಡರಿಸಿದನು. ಮತ್ತು ಮೂರು ಬಾಣಗಳಿಂದ ಅವನ ಪ್ರಜ್ವಲಿಸುತ್ತಿರುವ ಉತ್ತಮ ಧ್ವಜವನ್ನು ಕತ್ತರಿಸಿದನು. ಅದನ್ನು ಕತ್ತರಿಸಿ ದುರ್ಯೋಧನನು ನೋಡುತ್ತಿದ್ದಂತೆಯೇ ಜೋರಾಗಿ ಗರ್ಜಿಸಿದನು. ನಾನಾ ರತ್ನವಿಭೂಷಿತ ಆ ಶ್ರೀಮಾನ್ ಧ್ವಜವು ತಕ್ಷಣವೇ ರಥದಿಂದ ಮಿಂಚಿನಿಂದೊಡಗೂಡಿದ ಮೋಡದಂತೆ ನೆಲದ ಮೇಲೆ ಬಿದ್ದಿತು. ಕುರುಪತಿಯ ಆ ಸೂರ್ಯನಂತೆ ಬೆಳಗುತ್ತಿದ್ದ, ಮಣಿಮಯ ಆನೆಯ ಚಿಹ್ನೆಯುಳ್ಳ ಶುಭ ಧ್ವಜವು ತುಂಡಾದುದನ್ನು

ಸರ್ವ ಪಾರ್ಥಿವರೂ ನೋಡಿದರು. ಆ ಮಹಾರಥ ಭೀಮನು ರಣದಲ್ಲಿ ನಗುತ್ತಾ ಹತ್ತು ಬಾಣಗಳಿಂದ ಮಹಾಗಜವನ್ನು ಅಂಕುಶದಿಂದ ಚುಚ್ಚುವಂತೆ ಅವನನ್ನು ಹೊಡೆದನು. ಆಗ ಸಿಂಧುಗಳ ರಾಜಾ ರಥಶ್ರೇಷ್ಠ ಜಯದ್ರಥನು ಸತ್ಪುರುಷರಿಗೆ ಉಚಿತವಾದಂತೆ ದುರ್ಯೋಧನನ ಪಾರ್ಷ್ಣಿಯನ್ನು ಹಿಡಿದುಕೊಂಡನು. ರಥಿಗಳಲ್ಲಿ ಶ್ರೇಷ್ಠ ಕೃಪನು ಅಮಿತೌಜಸ ಕೌರವ್ಯ ಅಮರ್ಷಣ ದುರ್ಯೋಧನನನ್ನು ತನ್ನ ರಥದ ಮೇಲೇರಿಸಿಕೊಂಡನು. ಭೀಮಸೇನನಿಂದ ಗಾಢವಾಗಿ ಗಾಯಗೊಂಡ ದುರ್ಯೋಧನನು ವ್ಯಥಿತನಾಗಿ ರಥದಲ್ಲಿಯೇ ಕುಳಿತುಕೊಂಡನು.

ಆಗ ಭೀಮನನ್ನು ಕೊಲ್ಲಲು ಬಯಸಿ ಜಯದ್ರಥನು ಅನೇಕ ಸಾವಿರ ರಥಗಳಿಂದ ಭೀಮನನ್ನು ಎಲ್ಲಕಡೆಗಳಿಂದಲೂ ಮುತ್ತಿಗೆ ಹಾಕಿದನು. ಧೃಷ್ಟಕೇತು, ವೀರ್ಯವಾನ್ ಅಭಿಮನ್ಯು, ಕೇಕಯರು ಮತ್ತು ದ್ರೌಪದೇಯರು ಧಾರ್ತರಾಷ್ಟ್ರರನ್ನು ಎದುರಿಸಿ ಯುದ್ಧಮಾಡಿದರು. ಚಿತ್ರಸೇನ, ಸುಚಿತ್ರ, ಚಿತ್ರಾಶ್ವ, ಚಿತ್ರದರ್ಶನ, ಚಾರುಚಿತ್ರ, ಸುಚಾರು, ನಂದ, ಉಪನಂದ ಈ ಎಂಟು ಮಹೇಷ್ವಾಸ ಯಶಸ್ವಿ ಸುಕುಮಾರರು ಅಭಿಮನ್ಯುವಿನ ರಥವನ್ನು ಎಲ್ಲಕಡೆಗಳಿಂದಲೂ ಸುತ್ತುವರೆದರು. ಮಹಾಮನಸ್ವಿ ಅಭಿಮನ್ಯುವು ತಕ್ಷಣವೇ ಅವರಲ್ಲಿ ಒಬ್ಬೊಬ್ಬರನ್ನೂ ಘೋರರೆಯುತ್ತಿರುವ ತನ್ನ ಚಿತ್ರ ಧನುಸ್ಸಿನಿಂದ ವಜ್ರಮೃತ್ಯುಸಮನಾಗಿರುವ ಐದೈದು ಸನ್ನತಪರ್ವಶರಗಳಿಂದ ಹೊಡೆದು ಗಾಯಗೊಳಿಸಿದನು. ಅದನ್ನು ಸಹಿಸಲಾರದೇ ಅವರೆಲ್ಲರೂ

ರಥಸತ್ತಮ ಸೌಭದ್ರನ ಮೇಲೆ ಮೋಡಗಳು ಮೇರುವಿನ ಮೇಲೆ ಮಳೆ ಸುರಿಸುವಂತೆ ತೀಕ್ಷ್ಣ ಮಾರ್ಗಣಗಳ ಮಳೆಯನ್ನು ಸುರಿಸಿದರು. ಸಮರದಲ್ಲಿ ಪೀಡಿತನಾದ ಆ ಕೃತಾಸ್ತ್ರ ಯುದ್ಧದುರ್ಮದ ಅಭಿಮನ್ಯುವು ದೇವಾಸುರರ ಯುದ್ಧದಲ್ಲಿ ವಜ್ರಪಾಣಿಯು ಮಹಾಸುರರನ್ನು ಹೇಗೋ ಹಾಗೆ ಕೌರವರು ನಡುಗುವಂತೆ ಮಾಡಿದನು. ಆ ರಥಶ್ರೇಷ್ಠನು ವಿಕರ್ಣನ ಮೇಲೆ ಘೋರ ಸರ್ಪಗಳ ವಿಷದಂತಿದ್ದ ಹದಿನಾಲ್ಕು ಭಲ್ಲಗಳನ್ನು ಪ್ರಯೋಗಿಸಿ, ಅವನ ಧ್ವಜ, ಸಾರಥಿ, ಮತ್ತು ಕುದುರೆಗಳನ್ನು ತುಂಡರಿಸಿ ಯುದ್ಧದಲ್ಲಿ ನರ್ತಿಸಿದನು. ಪುನಃ ವಿಕರ್ಣನ ಮೇಲೆ ಮಹಾಬಲ ಸೌಭದ್ರನು ಅನ್ಯ ಶಿಲಾಶಿತ ಪೀತ ಕುಂತಾಗ್ರ ಶರಗಳನ್ನು ಪ್ರಯೋಗಿಸಿದನು. ಆ ಕಂಕಪುಕ್ಖಗಳನ್ನು ಹೊಂದಿದ್ದ ಶರಗಳು ವಿಕರ್ಣನಿಗೆ ತಾಗಿ ಅವನ ದೇಹವನ್ನು ಭೇದಿಸಿ ಭೂಮಿಯ ಮೇಲೆ ಉರಿಯುತ್ತಿರುವ ಪನ್ನಗಗಳಂತೆ ಬಿದ್ದವು. ಆ ಹೇಮಪುಂಖಾಗ್ರ ಶರಗಳು ವಿಕರ್ಣನ ರಕ್ತವನ್ನು ಕುಡಿದು ಭೂಮಿಯಮೇಲೆ ಕಾರುತ್ತಿರುವಂತೆ ತೋರಿದವು. ವಿಕರ್ಣನಿಗೆ ಗಾಯವಾದುದನ್ನು ನೋಡಿ ಅವನ ಅನ್ಯ ಸಹೋದರರು ಧಾವಿಸಿ ಅಭಿಮನ್ಯುವಿನ ನಾಯಕತ್ವದಲ್ಲಿದ್ದ ರಥರನ್ನು ಎದುರಿಸಿದರು. ಹೀಗೆ ಸೂರ್ಯವರ್ಚಸ ರಥಗಳಲ್ಲಿ ನಿಂತು ಆ ಯುದ್ಧದುರ್ಮದರು ಸಂರಬ್ಧರಾಗಿ ಬರಲು ಸಮರದಲ್ಲಿ ಅನ್ಯೋನ್ಯರನ್ನು ಹೊಡೆದರು.

ದುರ್ಮುಖನು ಶ್ರುತಕರ್ಮನನ್ನು ಏಳು ಆಶುಗಗಳಿಂದ ಹೊಡೆದು, ಧ್ವಜವನ್ನು ಒಂದರಿಂದಲೂ ಸಾರಥಿಯನ್ನು ಏಳರಿಂದಲೂ

ತುಂಡರಿಸಿದನು. ಕುದುರೆಗಳನ್ನು ಬಂಗಾರದ ಬಾಣಗಳ ಜಾಲಗಳಿಂದ ಮುಚ್ಚಿ ಕೊಂದನು ಮತ್ತು ಆರರಿಂದ ಅವನ ಸಾರಥಿಯನ್ನು ಬೀಳಿಸಿದನು. ಕುದುರೆಗಳು ಆ ರಥದಲ್ಲಿಯೇ ನಿಂತು ಮಹಾರಥ ಶ್ರುತಕರ್ಮನು ಸಂಕ್ರುದ್ಧನಾಗಿ ಮಹಾ ಉಲ್ಕೆಯಂತೆ ಉರಿಯುತ್ತಿರುವ ಶಕ್ತಿಯನ್ನು ಎಸೆದನು. ಅದು ಯಶಸ್ವಿ ದುರ್ಮುಖನ ಕವಚವನ್ನು ಸೀಳಿ ಒಳಹೊಕ್ಕು ತೇಜಸ್ಸಿನಿಂದ ಬೆಳಗುತ್ತಾ ಭೂಮಿಯನ್ನು ಪ್ರವೇಶಿಸಿತು. ಅಲ್ಲಿ ವಿರಥನಾಗಿದ್ದ ಅವನನ್ನು ನೋಡಿ ಮಹಾಬಲ ಸುತಸೋಮನು ಸರ್ವ ಸೇನೆಗಳೂ ನೋಡುತ್ತಿದ್ದಂತೆ ಅವನನ್ನು ತನ್ನ ರಥದ ಮೇಲೇರಿಸಿಕೊಂಡನು. ಆಗ ವೀರ ಶ್ರುತಕೀರ್ತಿಯು ಧೃತರಾಷ್ಟ್ರನ ಮಗ ಯಶಸ್ವಿ ಜಯತ್ಸೇನನನ್ನು ಕೊಲ್ಲಲು ಬಯಸಿ ಅವನನ್ನು ಎದುರಿಸಿದನು. ಮಹಾತ್ಮ ಶ್ರುತಕೀರ್ತಿಯು ಎಳೆದು ಹಿಡಿದಿದ್ದ ಚಾಪವನ್ನು ಸಮರದಲ್ಲಿ ಜಯತ್ಸೇನನು ನಗುತ್ತಾ ತೀಕ್ಷ್ಣವಾದ ಕ್ಷುರಪ್ರಗಳಿಂದ ತುಂಡುಮಾಡಿದನು. ಸಹೋದರನ ಬಿಲ್ಲು ತುಂಡಾದುದನ್ನು ನೋಡಿದ ತೇಜಸ್ವೀ ಶತಾನೀಕನು ಸಿಂಹದಂತೆ ಗರ್ಜಿಸುತ್ತಾ ಮುಂದೆ ಬಂದನು. ಶತಾನೀಕನಾದರೋ ಸಮರದಲ್ಲಿ ಬಿಲ್ಲನ್ನು ದೃಢವಾಗಿ ಟೇಂಕರಿಸಿ ಬೇಗನೇ ಹತ್ತು ಶಿಲೀಮುಖಗಳಿಂದ ಜಯತ್ಸೇನನನ್ನು ಹೊಡೆದನು. ಶತಾನೀಕನು ತಕ್ಷಣವೇ ಇನ್ನೊಂದು ತೀಕ್ಷ್ಣ ಸರ್ವಾವರಣಗಳನ್ನೂ ಭೇದಿಸಬಲ್ಲ ಬಾಣದಿಂದ ಜಯತ್ಸೇನನ ಹೃದಯವನ್ನು ಜೋರಾಗಿ ಹೊಡೆದನು. ಹೀಗೆ ನಡೆಯುತ್ತಿರುವಾಗ ಸಹೋದರನ ಹತ್ತಿರದಲ್ಲಿ ಇದ್ದ ದುಷ್ಕರ್ಣನು ಸಮರದಲ್ಲಿ ಕ್ರೋಧಮೂರ್ಛಿತನಾಗಿ ನಾಕುಲ

ಶತಾನೀಕನ ಧನುಸ್ಸನ್ನು ತುಂಡರಿಸಿದನು. ಆಗ ಇನ್ನೊಂದು ಭಾರ ಉತ್ತಮ ಧನುಸ್ಸನ್ನು ತೆಗೆದುಕೊಂಡು ಮಹಾಬಲ ಶತಾನೀಕನು ಹರಿತ ಬಾಣಗಳನ್ನು ಹೂಡಿ "ನಿಲ್ಲು! ನಿಲ್ಲು!" ಎಂದು ಅಣ್ಣನ ಮುಂದೆ ನಿಂತಿದ್ದ ದುಷ್ಕರ್ಣನನ್ನು ಕರೆದು ಪನ್ನಗಗಳಂತೆ ಜ್ವಲಿಸುತ್ತಿದ್ದ ನಿಶಿತ ಬಾಣಗಳನ್ನು ಪ್ರಯೋಗಿಸಿದನು. ಅವನು ಒಂದರಿಂದ ಧನುಸ್ಸನ್ನೂ, ಎರಡರಿಂದ ಸೂತನನ್ನೂ ಮತ್ತು ಪುನಃ ಏಳು ಬಾಣಗಳಿಂದ ದುಷ್ಕರ್ಣನನ್ನೂ ಹೊಡೆದನು. ಅನಂತರ ಹನ್ನೆರಡು ಶರಗಳಿಂದ ಮನಸ್ಸಿನ ವೇಗವನ್ನುಳ್ಳ, ಕೊಳೆಯೇ ಇಲ್ಲದ ಕಲ್ಮಾಷ ಕುದುರೆಗಳೆಲ್ಲವನ್ನೂ ಬೇಗನೆ ಕೊಂದನು. ಆಗ ಚೆನ್ನಾಗಿ ಪ್ರಯೋಗಿಸಲ್ಪಟ್ಟ ಇನ್ನೊಂದು ಭಲ್ಲದಿಂದ ಕ್ರುದ್ಧನಾಗಿ ದುಷ್ಕರ್ಣನ ಹೃದಯಕ್ಕೆ ಹೊಡೆದನು. ದುಷ್ಕರ್ಣನು ಹತನಾಗಿ ಬಿದ್ದುದನ್ನು ನೋಡಿ ಐವರು ಮಹಾರಥರು ಶತಾನೀಕನನ್ನು ಕೊಲ್ಲಲು ಬಯಸಿ ಅವನನ್ನು ಎಲ್ಲಕಡೆಗಳಿಂದ ಸುತ್ತುವರೆದರು.

ಶರವ್ರಾತಗಳಿಂದ ಯಶಸ್ವಿ ಶತಾನೀಕನನ್ನು ಹೊಡೆಯುತ್ತಿದ್ದ ಆ ಸಂರಬ್ಧರನ್ನು ಕೇಕಯದ ಐವರು ಸೋದರರರು ಧಾವಿಸಿ ಬಂದು ಎದುರಿಸಿದರು. ಅವರು ಆಕ್ರಮಣ ಮಾಡುತ್ತಿರುವುದನ್ನು ಧೃತರಾಷ್ಟ್ರನ ಮಹಾರಥ ಪುತ್ರರು ಮಹಾಗಜಗಳನ್ನು ಗಜಗಳು ಹೇಗೋ ಹಾಗೆ ಎದುರಿಸಿ ಯುದ್ಧಮಾಡಿದರು. ದುರ್ಮುಖ, ದುರ್ಜಯ, ದುರ್ಮರ್ಷಣ, ಶತ್ರುಂಜಯ, ಶತ್ರುಸಹ ಎಲ್ಲ ಯಶಸ್ವಿಗಳೂ ಕ್ರುದ್ಧರಾಗಿ ಕೇಕಯ ಸಹೋದರರೊಂದಿಗೆ ಸರಿಸಾಟಿಗಳಾಗಿ ಯುದ್ಧಮಾಡಿದರು.

ಮನೋವೇಗಗಳ ಕುದುರೆಗಳನ್ನು ಕಟ್ಟಿದ್ದ, ನಾನಾ ವರ್ಣವಿಚಿತ್ರ ಪತಾಕೆಗಳಿಂದ ಅಲಂಕೃತವಾಗಿದ್ದ ನಗರಗಳಂತಿರುವ ರಥಗಳಲ್ಲಿ, ಶ್ರೇಷ್ಠ ಧನುಸ್ಸುಗಳನ್ನು, ವಿಚಿತ್ರ ಕವಚ-ಧ್ವಜಗಳನ್ನು ಧರಿಸಿ ಆ ವೀರರು ವನದಿಂದ ಇನ್ನೊಂದು ವನಕ್ಕೆ ಹೊಗುವ ಸಿಂಹದಂತೆ ಶತ್ರುಗಳ ಸೈನ್ಯವನ್ನು ಪ್ರವೇಶಿಸಿದರು. ರಥಸೈನ್ಯಗಳಿಂದಲೂ ಗಜಸೈನ್ಯಗಳಿಂದಲೂ ಕೂಡಿದ್ದ ಅವರ ಇತರೇತರರರನ್ನು ಸಂಹರಿಸುವ, ಅನ್ಯೋನ್ಯರನ್ನು ಹೊಡೆಯುವ, ಯಮರಾಷ್ಟ್ರವನ್ನು ಹೆಚ್ಚುಗೊಳಿಸುವ ಆ ತುಮುಲ ಮಹಾರೌದ್ರ ಯುದ್ಧವು ನಡೆಯಿತು.

ಸೂರ್ಯನು ಅಸ್ತಮಿಸುತ್ತಿದ್ದ ಮುಹೂರ್ತದಲ್ಲಿಯೂ ಸಹಸ್ರಾರು ರಥಿಗಳು ಮತ್ತು ಕುದುರೆ ಸವಾರರನ್ನು ಬೀಳಿಸುತ್ತಾ ಆ ಸುದಾರುಣ ಯುದ್ಧವನ್ನು ನಡೆಸಿದರು. ಆಗ ಶಾಂತನವ ಭೀಷ್ಮನು ಕ್ರುದ್ಧನಾಗಿ ಸನ್ನತಪರ್ವ ಶರಗಳಿಂದ ಆ ಮಹಾತ್ಮ ಪಾಂಚಾಲರ ಸೈನ್ಯಗಳನ್ನು ಯಮಕ್ಷಯಕ್ಕೆ ಕಳುಹಿಸಿ ನಾಶಪಡಿಸಿದನು. ಹೀಗೆ ಪಾಂಡವರ ಸೇನೆಗಳನ್ನು ಭೇದಿಸಿ ಆ ಮಹೇಷ್ವಾಸನು ಸೈನ್ಯಗಳನ್ನು ಹಿಂತೆಗೆದುಕೊಂಡು ತನ್ನ ಶಿಬಿರಕ್ಕೆ ತೆರಳಿದನು. ಧರ್ಮರಾಜನೂ ಕೂಡ ಧೃಷ್ಟದ್ಯುಮ್ನ-ವೃಕೋದರರರನ್ನು ನೋಡಿ ಸಂಹೃಷ್ಟನಾಗಿ ಅವರ ನೆತ್ತಿಯನ್ನು ಆಘ್ರಾಣಿಸಿ ತನ್ನ ಶಿಬಿರಕ್ಕೆ ತೆರಳಿದನು.

# ಏಳನೆಯ ದಿನದ ಯುದ್ಧ

ಪರಸ್ಪರರ ಅಪರಾಧಿಗಳಾಗಿ ಶೂರರು ರಕ್ತದಿಂದ ತೋಯ್ದು ತಮ್ಮ ತಮ್ಮ ಶಿಬಿರಗಳಿಗೆ ತೆರಳಿದರು. ಯಥಾನ್ಯಾಯವಾಗಿ ವಿಶ್ರಮಿಸಿ ಪರಸ್ಪರರನ್ನು ಗೌರವಿಸಿ ಪುನಃ ಯುದ್ಧಮಾಡಲು ಬಯಸಿ ಸನ್ನದ್ಧರಾಗುತ್ತಿರುವುದು ಕಂಡುಬಂದಿತು. ಆಗ ಅಂಗಗಳಿಂದ ರಕ್ತವು ಸುರಿಯುತ್ತಿರಲು ದುರ್ಯೋಧನನು ಚಿಂತೆಯಲ್ಲಿ ಮುಳುಗಿ ಪಿತಾಮಹನನ್ನು ಪ್ರಶ್ನಿಸಿದನು:

> "ರೌದ್ರವೂ ಭಯಾನಕವೂ ಆಗಿರುವ, ಅನೇಕ ಧ್ವಜಗಳಿರುವ, ಚೆನ್ನಾಗಿ ವ್ಯೂಹದಲ್ಲಿ ರಚಿತವಾಗಿರುವ ಸೇನೆಯನ್ನೂ ಕೂಡ ಪಾಂಡವರು ಬೇಗನೇ ಭೇದಿಸಿ, ಪೀಡಿಸಿ, ರಥಗಳಲ್ಲಿ ಹೊರಟುಹೋಗುತ್ತಿದ್ದಾರೆ. ವಜ್ರದಂತಿರುವ ಮಕರವ್ಯೂಹವನ್ನು ಕೂಡ ಎಲ್ಲವನ್ನೂ ಸಮ್ಮೋಹಗೊಳಿಸಿ ಯುದ್ಧದಲ್ಲಿ ಕೀರ್ತಿಮಂತರಾಗಿದ್ದಾರೆ. ವ್ಯೂಹವನ್ನು ಪ್ರವೇಶಿಸಿದ ಭೀಮನ ಮೃತ್ಯುದಂಡದಂತೆ ಹೊಳೆಯುತ್ತಿದ್ದ ಘೋರ ಶರಗಳಿಂದ ಗಾಯಗೊಂಡಿದ್ದೇನೆ. ಕ್ರುದ್ಧನಾದ ಅವನನ್ನು ನೋಡಿಯೇ ಭಯದಿಂದ ನಾನು ಮೂರ್ಛಿತನಾಗುತ್ತೇನೆ. ಸತ್ಯಸಂಧ! ಇಂದು ನನಗೆ ಶಾಂತಿಯೇ ಇಲ್ಲದಾಗಿದೆ. ಕೇವಲ ನಿನ್ನ ಪ್ರಸಾದದಿಂದ ಪಾಂಡವೇಯರನ್ನು ಕೊಂದು ಜಯವನ್ನು ಗಳಿಸಲು ಶಕ್ಯನಾಗಿದ್ದೇನೆ."

ಅವನು ಹೀಗೆ ಹೇಳಲು ಮಹಾತ್ಮಾ ಮನಸ್ವೀ ಶಸ್ತ್ರಭೃತರಲ್ಲಿ ವರಿಷ್ಠ

ಗಂಗಾಸುತನು ವಿನಯನಾಗಿ ಕೇಳಿಕೊಂಡರೂ ಅವನು ಕುಪಿತನಾಗಿದ್ದಾನೆಂದು ತಿಳಿದು ದುರ್ಯೋಧನನಿಗೆ ನಗುತ್ತಾ ಹೇಳಿದನು:

“ರಾಜಪುತ್ರ! ಸೇನೆಯನ್ನು ಹೊಕ್ಕು ಸರ್ವಾತ್ಮದಿಂದ ನಿನಗೆ ವಿಜಯವನ್ನೂ ಸುಖವನ್ನೂ ಕೊಡಲು ಬಯಸಿ ಪರಮ ಪ್ರಯತ್ನವನ್ನು ಮಾಡುತ್ತಿದ್ದೇನೆ. ಅದರಿಂದಾಗಿ ನನ್ನ ರಕ್ಷಣೆಯ ಕುರಿತೂ ನಾನು ಯೋಚಿಸುತ್ತಿಲ್ಲ. ಸಮರದಲ್ಲಿ ಪಾಂಡವರ ಸಹಾಯಕ್ಕೆಂದು ಬಂದ ಅನೇಕ ಮಹಾರಥರು ರೌದ್ರರು, ಯಶಸ್ವಿಗಳು, ಶೂರತಮರು, ಕೃತಾಸ್ತ್ರರು, ಆಯಾಸವನ್ನು ಗೆದ್ದವರು ಮತ್ತು ಕ್ರೋಧವಿಷವನ್ನು ಕಾರುವವರು. ನಿನ್ನೊಂದಿಗೆ ವೈರವನ್ನಿಟ್ಟುಕೊಂಡಿರುವ, ವೀರ್ಯದಿಂದ ಉನ್ಮತ್ತರಾಗಿರುವ ಅವರನ್ನು ಶೀಘ್ರವಾಗಿ ಸೋಲಿಸಲು ಶಕ್ಯವಿಲ್ಲ. ನಾನಾದರೋ ಮನಃಪೂರ್ವಕವಾಗಿ ಜೀವವನ್ನೇ ತೊರೆದು ಇವರೊಂದಿಗೆ ಯುದ್ಧ ಮಾಡುತ್ತೇನೆ. ನಿನಗೋಸ್ಕರವಾಗಿ ನಾನು ನನ್ನ ಜೀವವನ್ನು ರಸಿಕೊಳ್ಳುವ ಆಸೆಯನ್ನಿಟ್ಟುಕೊಂಡಿಲ್ಲ. ನಿನಗೋಸ್ಕರವಾಗಿ ದೇವ-ದೈತ್ಯರೊಂದಿಗೆ ಸರ್ವಲೋಕಗಳನ್ನೂ ನಾನು ದಹಿಸಬಲ್ಲೆ. ಇನ್ನು ನಿನ್ನ ಈ ಶತ್ರುಗಳು ಯಾವ ಲೆಕ್ಕಕ್ಕೆ? ಆ ಪಾಂಡವರೊಡನೆಯೂ ಯುದ್ಧ ಮಾಡುತ್ತೇನೆ. ನಿನಗೆ ಪ್ರಿಯವಾದುದೆಲ್ಲವನ್ನೂ ನಾನು ಮಾಡುತ್ತೇನೆ.”

ಆಗ ಚಿಂತಾಮಗ್ನನಾಗಿದ್ದ ದುರ್ಯೋಧನನಿಗೆ ಪುನಃ ಭರತಶ್ರೇಷ್ಠ ಗಾಂಗೇಯನು ಹರ್ಷವನ್ನುಂಟುಮಾಡುವ ಈ ಮಾತುಗಳನ್ನಾಡಿದನು:

"ರಾಜನ್! ನಾನು, ದ್ರೋಣ, ಶಲ್ಯ, ಕೃತವರ್ಮ, ಅಶ್ವತ್ಥಾಮ, ವಿಕರ್ಣ, ಸೋಮದತ್ತ, ಸೈಂಧವ, ಅವಂತಿಯ ವಿಂದಾನುವಿದರು, ಬಾಹ್ಲಿಕರೊಂದಿಗೆ ಬಾಹ್ಲಿಕ, ತ್ರಿಗರ್ತರಾಜ, ಮಾಗಧ, ಕೌಸಲ್ಯ ಬೃಹದ್ಬಲ, ಚಿತ್ರಸೇನ, ವಿವಿಂಶತಿ, ಮಹಾಧ್ವಜಗಳಿಂದ ಶೋಭಿಸುವ ಅನೇಕ ಸಹಸ್ರ ರಥಗಳು, ಕುದುರೆ ಸವಾರರಿಂದ ಯುಕ್ತವಾದ ದೇಶೀಯ ಕುದುರೆಗಳು, ಗಂಡಸ್ಥಲದಿಂದ ಮದೋದಕವನ್ನು ಸುರಿಸುತ್ತಿರುವ ಮದೋನ್ಮತ್ತ ಗಜೇಂದ್ರರು, ನಾನಾ ಪ್ರಹರಣಾಯುಧಗಳನ್ನು ಹಿಡಿದಿರುವ ನಾನಾದೇಶಗಳಿಂದ ಬಂದಿರುವ ಶೂರ ಪದಾತಿಗಳು - ಇವರೆಲ್ಲರೂ ನಿನ್ನ ಸಲುವಾಗಿಯೇ ಯುದ್ಧಮಾಡಲು ಸಿದ್ಧರಾಗಿದ್ದಾರೆ. ಇವರಲ್ಲದೇ ಇನ್ನೂ ಅನ್ಯ ಅನೇಕರು ನಿನಗೋಸ್ಕರ ಜೀವವನ್ನು ಬಿಡಲು ಸಿದ್ಧರಾಗಿದ್ದಾರೆ. ಇವರು ರಣದಲ್ಲಿ ದೇವತೆಗಳನ್ನೂ ಗೆಲ್ಲಲು ಸಮರ್ಥರು ಎಂದು ನನ್ನ ಅಭಿಪ್ರಾಯ. ಆದರೆ ನಾನು ನಿನಗೆ ಹಿತ ವಚನಗಳನ್ನು ಸದಾ ಹೇಳುವುದು ಅವಶ್ಯಕ. ವಾಸುದೇವನ ಸಹಾಯವನ್ನು ಪಡೆದಿರುವ ಮತ್ತು ವಿಕ್ರಮದಲ್ಲಿ ಮಹೇಂದ್ರನ ಸಮನಾಗಿರುವ ಪಾಂಡವರನ್ನು ಗೆಲ್ಲಲು ವಾಸವನೊಂದಿಗೆ ದೇವತೆಗಳೂ ಕೂಡ ಅಶಕ್ಯರು. ಆದರೆ

ಸರ್ವಪ್ರಯತ್ನದಿಂದಲೂ ನಿನ್ನ ಮಾತನ್ನು ನಾನು ಮಾಡುತ್ತೇನೆ. ರಣದಲ್ಲಿ ಪಾಂಡವರನ್ನು ನಾನು ಗೆಲ್ಲುತ್ತೇನೆ. ಅಥವಾ ಪಾಂಡವರು ನನ್ನನ್ನು ಗೆಲ್ಲುತ್ತಾರೆ."

ಹೀಗೆ ಹೇಳಿ ಅವನಿಗೆ ಶುಭವಾದ ವಿಶಲ್ಯಕರಣೀ ಔಷಧಿಯನ್ನು ಕೊಟ್ಟನು. ಅದರಿಂದ ಅವನು ವಿಶಲ್ಯನಾಗಿ (ಅಂಗಾಂಗಗಳಿಗೆ ಚುಚ್ಚಿಕೊಂಡಿದ್ದ ಬಾಣಗಳು ಸುಲಭವಾಗಿ ಹೊರಬಿದ್ದವು ಮತ್ತು ವೇದನೆಯು ಹೊರಟುಹೋದವು) ವೀರ್ಯಸಂಪನ್ನನಾದನು.

ಅವನ ಆ ಮಾತುಗಳನ್ನು ಕೇಳಿ ದುರ್ಯೋಧನನು ಪರಮ ಪ್ರತೀತನಾದನು. ಆಗ ಪ್ರಹೃಷ್ಟನಾಗಿ ಎಲ್ಲ ಸೈನ್ಯಗಳಿಗೂ ಎಲ್ಲ ರಾಜರಿಗೂ "ಹೊರಡಿ!" ಎಂದು ಹೇಳಿದನು. ಅವನ ಆಜ್ಞಾನುಸಾರವಾಗಿ ಹತ್ತತ್ತು ಸಾವಿರ ರಥ-ಅಶ್ವ-ಪದಾತಿ-ಗಜಗಳಿಂದ ಕೂಡಿದ ಮಹಾಸೇನೆಯು ಹೊರಟಿತು. ನಾನಾವಿಧದ ಶಸ್ತ್ರಗಳನ್ನು ಹೊಂದಿದ್ದ, ನಾಗಾಶ್ವಪದಾತಿಗಳಿಂದ ತುಂಬಿದ್ದ ಕೌರವ ಸೇನೆಗಳು ಹರ್ಷಿತವಾಗಿ ಅತ್ಯಂತ ರಾರಾಜಿಸುತ್ತಿದ್ದವು. ಕೌರವ ಸೈನ್ಯಗಣಗಳು ಶಸ್ತ್ರಾಸ್ತ್ರಗಳನ್ನು ತಿಳಿದಿರುವ ಯೋಧರಿಂದ ನಿಯಂತ್ರಿಸಲ್ಪಟ್ಟಿದ್ದವು. ವಿಧಿವತ್ತಾಗಿ ಅನುಶಾಸಿತರಾಗಿ ರಣರಂಗಕ್ಕೆ ಪ್ರಯಾಣಮಾಡುತ್ತಿದ್ದ ರಥ-ಪದಾತಿ-ಗಜ-ಅಶ್ವ ಸಮೂಹಗಳಿಂದ ಮೇಲೆದ್ದ ಧೂಳು ಸೂರ್ಯನ ಕಿರಣಗಳನ್ನು ಮುಸುಕಿ ಬಾಲಸೂರ್ಯನ ರಶ್ಮಿಗಳಂತೆ ತೋರುತ್ತಿದ್ದವು. ರಥ ಮತ್ತು ಆನೆಗಳ ಮೇಲೆ ಕಟ್ಟಿದ್ದ ನಾನಾ ಬಣ್ಣದ

ಪತಾಕೆಗಳು ಎಲ್ಲಕಡೆಗಳಿಂದಲೂ ಬೀಸುತ್ತಿದ್ದ ಗಾಳಿಯಿಂದ ಹಾರಾಡುತ್ತಾ ಆಕಾಶದಲ್ಲಿ ಮೇಘಗಳಿಗೆ ತಾಗಿದ ಮಿಂಚುಗಳಂತೆ ಪ್ರಕಾಶಿಸುತ್ತಿದ್ದವು. ಟೇಂಕರಿಸುತ್ತಿದ್ದ ನೃಪರ ಧನುಸ್ಸುಗಳಿಂದ ಅತಿಘೋರ ತುಮುಲ ಶಬ್ಧವುಂಟಾಗುತ್ತಿತ್ತು. ಅದು ಆದಿಯುಗದಲ್ಲಿ ದೇವತೆಗಳೂ ಮಹಾಸುರರೂ ಸಾಗರವನ್ನು ಮಥಿಸುವಾಗ ಉಂಟಾದ ಶಬ್ಧದಂತಿತ್ತು. ಆ ಉಗ್ರನಾದದೊಂದಿಗೆ, ಬಹುಬಣ್ಣದ ರೂಪವುಳ್ಳ ಕೌರವ ಸೇನೆಯು ರಿಪುಸೈನ್ಯಗಳನ್ನು ನಾಶಪಡಿಸುವ ಯುಗಾಂತದ ಘನ ಕಪ್ಪು ಮೋಡದಂತೆ ತೋರಿತು.

ಆಗ ವಿಮಲ ಪ್ರಭಾತದಲ್ಲಿ ವ್ಯೂಹವಿಶಾರದ ವೀರ್ಯವಾನ್ ಭೀಷ್ಮನು ತನ್ನ ಸೇನೆಗಳನ್ನು ತಾನೇ ಮಂಡಲ ವ್ಯೂಹದಲ್ಲಿ ರಚಿಸಿದನು. ಆ ವ್ಯೂಹವು ನಾನಾಶಸ್ತ್ರಸಮಾಕುಲವಾಗಿತ್ತು. ಯೋಧಮುಖ್ಯರಿಂದ ಆನೆ-ಪದಾತಿಗಳಿಂದ, ಅನೇಕ ಸಹಸ್ರ ರಥಗಳಿಂದ, ಅನೇಕ ಅಶ್ವವೃಂದಗಳಿಂದ, ಋಷ್ಟಿ-ತೋಮರ ಧಾರಿಗಳಿಂದ ಎಲ್ಲಕಡೆಗಳಿಂದಲೂ ಪರಿವೃತವಾಗಿ ಸಂಪೂರ್ಣವಾಗಿತ್ತು. ಆನೆ ಆನೆಗೂ ಏಳು ರಥಗಳಿದ್ದವು. ರಥ ರಥಗಳಿಗೂ ಏಳು ಅಶ್ವಗಳಿದ್ದವು. ಪ್ರತಿ ಅಶ್ವಕ್ಕೂ ಹತ್ತು ಬಿಲ್ಗಾರರಿದ್ದರು. ಪ್ರತಿ ಬಿಲ್ಗಾರರಿಗೂ ಏಳು ಕವಚಧಾರಿಗಳಿದ್ದರು. ಹೀಗೆ ಮಹಾರಥರ ಕೌರವ ಮಹಾ ಸೈನ್ಯವನ್ನು ವ್ಯೂಹವನ್ನಾಗಿ ರಚಿಸಿ ರಣದಲ್ಲಿ ಯುದ್ಧದಲ್ಲಿ ಅದನ್ನು ಪಾಲಿಸಲು ಭೀಷ್ಮನು ನಿಂತನು. ಹತ್ತುಸಾವಿರ ಕುದುರೆಗಳು, ಅಷ್ಟೇ ಸಂಖ್ಯೆಯ ಆನೆಗಳು, ಹತ್ತು ಸಾವಿರ ರಥಗಳು, ಮುತ್ತು ಚಿತ್ರಸೇನನೇ ಮೊದಲಾದ

ಕವಚ ಧರಿಸಿದ ಧಾರ್ತರಾಷ್ಟ್ರರು ಪಿತಾಮಹನ ರಕ್ಷಣೆಗಿದ್ದರು. ಆ ಶೂರರಿಂದ ರಕ್ಷಿಸಲ್ಪಟ್ಟು ಮತ್ತು ಅವರನ್ನು ರಕ್ಷಿಸುತ್ತಾ ಆ ಮಹಾಬಲ ರಾಜರು ಯುದ್ಧ ಸನ್ನದ್ಧರಾದುದು ಕಾಣುತ್ತಿತ್ತು. ದುರ್ಯೋಧನನಾದರೋ ಸಮರದಲ್ಲಿ ಕವಚಧಾರಿಯಾಗಿ ರಥದಲ್ಲಿ ಕುಳಿತು ತ್ರಿವಿಷ್ಟಪರೊಂದಿಗೆ ಶಕ್ರನಂತೆ ಶ್ರೀಯಿಂದ ತುಂಬಿ ಬೆಳಗುತ್ತಿದ್ದನು. ಆಗ ಧಾರ್ತರಾಷ್ಟ್ರರ ಮಹಾ ಶಬ್ಧವು ಕೇಳಿಬಂದಿತು. ರಥಘೋಷ ಮತ್ತು ವಾದ್ಯಗಳು ಮೊಳಗುವ ತುಮುಲವಾಯಿತು.

ಭೀಷ್ಮನಿಂದ ಮಂಡಲಾಕಾರದಲ್ಲಿ ರಚಿಸಲ್ಪಟ್ಟಿದ್ದ ಅಮಿತ್ರಘಾತೀ ಧಾರ್ತರಾಷ್ಟ್ರರ ಆ ದುರ್ಭೇದ್ಯ ಮಹಾಸೇನೆಯು ಯುದ್ಧಕ್ಕೆ ಪಶ್ಚಿಮಾಭಿಮುಖವಾಗಿ ಹೊರಟಿತು. ರಣದಲ್ಲಿ ಅರಿಗಳಿಗೆ ದುರಾಸದವಾದ ಆ ಸೇನೆಯು ಎಲ್ಲಕಡೆಯೂ ಸುಂದರವಾಗಿ ಕಾಣುತ್ತಿತ್ತು. ಪರಮದಾರುಣವಾದ ಆ ಮಂಡಲವ್ಯೂಹವನ್ನು ನೋಡಿ ರಾಜಾ ಯುಧಿಷ್ಠಿರನು ಸ್ವಯಂ ತಾನೇ ವಜ್ರವ್ಯೂಹವನ್ನು ರಚಿಸಿದನು. ಹಾಗೆ ಸೈನ್ಯದ ವ್ಯೂಹದಲ್ಲಿ ಯಥಾಸ್ಥಾನಗಳಲ್ಲಿ ವ್ಯವಸ್ಥಿತರಾಗಿದ್ದ ರಥಿಗಳು ಮತ್ತು ಸಾದಿನರು ಸಿಂಹನಾದಗೈದರು. ಪ್ರಹಾರಿ ಶೂರರು ವ್ಯೂಹವನ್ನು ಭೇದಿಸಿ ಯುದ್ಧಮಾಡಲು ಬಯಸಿ ಇತರೇತರರ ಸೈನ್ಯದೊಂದಿಗೆ ಹೊರಟರು. ಭಾರದ್ವಾಜನು ಮತ್ಸ್ಯನನ್ನೂ, ದ್ರೌಣಿಯು ಶಿಖಂಡಿಯನ್ನೂ, ಸ್ವಯಂ ರಾಜಾ ದುರ್ಯೋಧನನು ಪಾರ್ಷತನನ್ನೂ ಆಕ್ರಮಣಿಸಿದರು. ನಕುಲ ಸಹದೇವರು ಮದ್ರೇಶನನ್ನು ಎದುರಿಸಿದರು. ಅವಂತಿಯ ವಿಂದಾನುವಿಂದರು ಇರಾವಂತನನ್ನು ಎದುರಿಸಿದರು. ಎಲ್ಲ

ನೃಪರೂ ಧನಂಜಯನೊಡನೆ ಯುದ್ಧಮಾಡಿದರು. ಭೀಮಸೇನನು ಹಾರ್ದಿಕ್ಯನನ್ನು ಆಕ್ರಮಣಿಸಿದನು. ಧೃತರಾಷ್ಟ್ರ ಪುತ್ರರಾದ ಚಿತ್ರಸೇನ, ವಿಕರ್ಣ ಮತ್ತು ಹಾಗೆಯೇ ದುರ್ಮರ್ಷಣನನ್ನು ಆರ್ಜುನಿಯು ಎದುರಿಸಿ ಯುದ್ಧಮಾಡಿದನು. ಮದಿಸಿದ ಆನೆಯು ಮದಿಸಿದುದನ್ನು ಹೇಗೋ ಹಾಗೆ ರಾಕ್ಷಸೋತ್ತಮ ಹೈಡಿಂಬಿಯು ಪ್ರಾಗ್ಜ್ಯೋತಿಷದ ಮಹೇಷ್ವಾಸನನ್ನು ವೇಗದಿಂದ ಆಕ್ರಮಣಿಸಿದನು. ರಾಕ್ಷಸ ಅಲಂಬುಸನು ತನ್ನ ಸೈನ್ಯದೊಂದಿಗೆ ಕ್ರುದ್ಧನಾಗಿ ಯುದ್ಧದುರ್ಮದ ಸಾತ್ಯಕಿಯನ್ನು ಎದುರಿಸಿದನು. ಭೂರಿಶ್ರವನು ಧೃಷ್ಟಕೇತುವೊಂದಿಗೆ ಮತ್ತು ಶ್ರುತಾಯುಷನು ರಾಜ ಧರ್ಮಪುತ್ರ ಯುಧಿಷ್ಠಿರನೊಂದಿಗೆ ಹೋರಾಡಿದರು. ಚೇಕಿತಾನನು ಕೃಪನನ್ನು ಎದುರಿಸಿದನು. ಉಳಿದವರು ಮಹಾರಥ ಭೀಮನನ್ನೇ ಎದುರಿಸಿ ಹೋರಾಡಿದರು.

## ಭೀಷ್ಮ-ಅರ್ಜುನರ ಯುದ್ಧ

ಶಕ್ತಿ-ತೋಮರ-ನಾರಾಚ-ಗದ-ಪರಿಘಗಳನ್ನು ಹಿಡಿದು ಸಹಸ್ರಾರು ರಾಜರು ಧನಂಜಯನನ್ನು ಸುತ್ತುವರೆದರು. ಆಗ ಅರ್ಜುನನು ತುಂಬಾ ಕ್ರುದ್ಧನಾಗಿ ವಾರ್ಷ್ಣೇಯನಿಗೆ ಇದನ್ನು ಹೇಳಿದನು:

> “ಮಾಧವ! ವ್ಯೂಹವಿದುಷ ಮಹಾತ್ಮ ಗಾಂಗೇಯನಿಂದ ವ್ಯೂಹಗೊಂಡಿರುವ ಧಾರ್ತರಾಷ್ಟ್ರನ ಸೈನ್ಯಗಳನ್ನು ನೋಡು! ಯುದ್ಧ ಮಾಡಲು ಬಯಸಿರುವ ಕವಚಧಾರಿಗಳಾದ ಶೂರರನ್ನು ನೋಡು! ಸಹೋದರರೊಂದಿಗೆ

ತ್ರಿಗರ್ತರಾಜನನ್ನು ನೋಡು! ಇಂದು ನೀನು
ನೋಡುತ್ತಿರುವಂತೆ ಈ ಯುದ್ಧಕಾಮಿಗಳನ್ನು ಸಂಹರಿಸುತ್ತೇನೆ."

ಹೀಗೆ ಹೇಳಿ ಕೌಂತೇಯನು ಧನುಸ್ಸನ್ನು ಟೇಂಕರಿಸಿ ನರಾಧಿಪತಿಗಣಗಳ ಮೇಲೆ ಶರವರ್ಷಗಳನ್ನು ಸುರಿಸಿದನು. ಆ ಪರಮೇಷ್ವಾಸರೂ ಕೂಡ ಮೋಡಗಳು ಮಳೆಯಿಂದ ಸರೋವರವನ್ನು ತುಂಬುವಂತೆ ಶರವರ್ಷಗಳಿಂದ ಅವನನ್ನು ತುಂಬಿದರು. ಆಗ ಆ ಇಬ್ಬರೂ ಕೃಷ್ಣರೂ ಮಹಾರಣದಲ್ಲಿ ಶರಗಳಿಂದ ಮುಚ್ಚಿಹೋಗಿದುದನ್ನು ನೋಡಿ ಕೌರವ ಸೈನ್ಯದಲ್ಲಿ ದೊಡ್ಡ ಹಾಹಾಕಾರವುಂಟಾಯಿತು. ಹಾಗಾದ ಕೃಷ್ಣರಿಬ್ಬರನ್ನು ನೋಡಿ ದೇವತೆಗಳೂ, ದೇವರ್ಷಿಗಳೂ, ಗಂಧರ್ವರೂ, ಮಹೋರಗರೂ ಪರಮ ವಿಸ್ಮಿತರಾದರು. ಆಗ ಕ್ರುದ್ಧ ಅರ್ಜುನನು ಐಂದ್ರಾಸ್ತ್ರವನ್ನು ಪ್ರಯೋಗಿಸಿದನು. ಅಲ್ಲಿ ವಿಜಯನ ಅದ್ಭುತ ಪರಾಕ್ರಮವು ಕಂಡಿತು. ಅದು ಶತ್ರುಗಳು ಬಿಟ್ಟ ಶರವೃಷ್ಟಿಯನ್ನೂ ಶರಗುಂಪುಗಳನ್ನೂ ನಿರಸನಗೊಳಿಸಿತಲ್ಲದೇ ಅದರಿಂದ ಗಾಯಗೊಳ್ಳದೇ ಇದ್ದ ಯಾರೂ ಅಲ್ಲಿರಲಿಲ್ಲ. ಪಾರ್ಥನು ಅವರ ಸಹಸ್ರಾರು ರಾಜರು, ಕುದುರೆಗಳು ಮತ್ತು ಆನೆಗಳನ್ನು ಮತ್ತು ಅನ್ಯರನ್ನು ಎರಡೆರಡು ಅಥವಾ ಮೂರು ಮೂರು ಶರಗಳಿಂದ ಹೊಡೆದನು. ಪಾರ್ಥನಿಂದ ಪೀಡಿಸಲ್ಪಟ್ಟ ಅವರು ಭೀಷ್ಮ ಶಾಂತನವನಲ್ಲಿಗೆ ಹೋದರು. ಅಗಾಧವಾದ ಆಳದಲ್ಲಿ ಮುಳುಗುತ್ತಿದ್ದ ಅವರಿಗೆ ಆಗ ಭೀಷ್ಮನೇ ತ್ರಾತನಾಗಿದ್ದನು. ಭಿರುಗಾಳಿಯಿಂದ ಮಹಾಸಾಗರವು ಅಲ್ಲೋಲಕಲ್ಲೋಲವಾಗುವಂತೆ ಕೌರವ ಸೇನೆಯು ಅಲ್ಲಿ ಅವರಿಂದ

ಪೀಡಿತವಾಗಿ ಭಗ್ನವಾಯಿತು.

ಹಾಗೆ ನಡೆಯುತ್ತಿರುವ ಸಂಗ್ರಾಮದಿಂದ ಸುಶರ್ಮನು ನಿವೃತ್ತನಾಗಲು, ಮಹಾತ್ಮ ಪಾಂಡವನಿಂದ ವೀರರು ಪ್ರಭಗ್ನರಾಗಲು, ಸಾಗರದಂತಿದ್ದ ಕೌರವ ಸೇನೆಯು ಬೇಗನೇ ಕ್ಷೋಭೆಗೊಳ್ಳಲು, ಗಾಂಗೇಯನು ತ್ವರೆಮಾಡಿ ವಿಜಯನ ಬಳಿ ಧಾವಿಸಿ ಬರಲು, ರಣದಲ್ಲಿ ಪಾರ್ಥನ ವಿಕ್ರಮವನ್ನು ನೋಡಿ ತ್ವರೆಮಾಡಿ ದುರ್ಯೋಧನನು ಅಲ್ಲಿ ಸೈನ್ಯದ ಮಧ್ಯದಲ್ಲಿ ಸೇರಿದ್ದ ನೃಪರೆಲ್ಲರಿಗೆ, ಎಲ್ಲರಿಗೂ ಹರ್ಷವಾಗುವಂತೆ ಹೇಳಿದನು:

> "ಈ ಕುರುಶ್ರೇಷ್ಠ ಭೀಷ್ಮ ಶಾಂತನವನು ಸಂಪೂರ್ಣ ಮನಸ್ಸಿನಿಂದ ತನ್ನ ಜೀವವನ್ನೇ ತೊರೆದು ಧನಂಜಯನೊಡನೆ ಯುದ್ಧಮಾಡಲು ಬಯಸಿದ್ದಾನೆ. ಸಮರದಲ್ಲಿ ಶತ್ರುಸೇನೆಯನ್ನು ನುಗ್ಗುತ್ತಿರುವ ಭಾರತ ಪಿತಾಮಹನನ್ನು ಎಲ್ಲ ಸೈನ್ಯಗಳಿಂದ ಸುತ್ತುವರೆದು ಎಲ್ಲರೂ ಪಾಲಿಸಿರಿ."

ಆಗಲೆಂದು ಹೇಳಿ ಆ ಸೇನೆಯಲ್ಲಿದ್ದ ಸರ್ವ ನರೇಂದ್ರರೂ ಪಿತಾಮಹನನ್ನು ಹಿಂಬಾಲಿಸಿ ಹೋದರು. ಆಗ ವೇಗದಲ್ಲಿ ಹೊರಟು ಭೀಷ್ಮ ಶಾಂತನವನು ಮಹಾಶ್ವೇತಾಶ್ವಗಳನ್ನು ಕಟ್ಟಿದ್ದ, ಭೀಮವಾನರಧ್ವಜವನ್ನು ಹೊಂದಿದ್ದ, ಮೇಘನಾದದಂತೆ ಗುಡುಗುತ್ತಿದ್ದ ಮಹಾ ರಥದಲ್ಲಿ ವಿರಾಜಿಸಿ ತನ್ನ ಕಡೆಗೇ ಬರತ್ತಿದ್ದ ಮಹಾಬಲ ಭಾರತ ಅರ್ಜುನನನ್ನು ಎದುರಿಸಿದನು.

ಸಮರದಲ್ಲಿ ಬರುತ್ತಿದ್ದ ಕಿರೀಟೀ ಧನಂಜಯನನ್ನು ನೋಡಿ ಭಯದಿಂದ ಸರ್ವಸೈನ್ಯಗಳಲ್ಲಿ ತುಮುಲ ಹಾಹಾಕಾರವುಂಟಾಯಿತು. ಕಡಿವಾಣಗಳನ್ನು ಕೈಯಲ್ಲಿ ಹಿಡಿದು ಮಧ್ಯಾಹ್ನದ ಇನ್ನೊಬ್ಬ ಸೂರ್ಯನಂತಿರುವ ಕೃಷ್ಣನನ್ನು ನೋಡಲು ಅವರು ಅಶಕ್ಯರಾದರು. ಹಾಗೆಯೇ ಬಿಳಿಯ ಕುದುರೆಗಳ ಮತ್ತು ಬಿಳಿಯ ಬಿಲ್ಲಿನ ಉದಯಿಸುತ್ತಿರುವ ಶ್ವೇತಗ್ರಹದಂತಿರುವ ಭೀಷ್ಮ ಶಾಂತನವನನ್ನು ಪಾಂಡವರು ನೋಡಲು ಅಶಕ್ಯರಾದರು. ಅವನು ಎಲ್ಲಕಡೆಗಳಿಂದ ಮಹಾತ್ಮ ತ್ರಿಗರ್ತರಿಂದ ಮತ್ತು ಹಾಗೆಯೇ ಮಹಾರಥರಾದ ಧೃತರಾಷ್ಟ್ರನ ಮಕ್ಕಳಿಂದ ಸುತ್ತುವರೆಯಲ್ಪಟ್ಟಿದ್ದನು.

## ದ್ರೋಣ-ವಿರಾಟರ ಯುದ್ಧ; ಶಂಕನ ವಧೆ

ಭಾರದ್ವಾಜನಾದರೋ ಪತ್ರಿಗಳಿಂದ ಮತ್ಸ್ಯನನ್ನು ಹೊಡೆದನು ಮತ್ತು ಶರಗಳಿಂದ ಅವನ ಧ್ವಜವನ್ನೂ, ಒಂದರಿಂದ ಧನುಸ್ಸನ್ನೂ ಕತ್ತರಿಸಿದನು. ಆಗ ವಾಹಿನೀಪತಿ ವಿರಾಟನು ತುಂಡಾದ ಬಿಲ್ಲನ್ನು ಬದಿಗಿಟ್ಟು ವೇಗದಿಂದ ಇನ್ನೊಂದು ದೃಢವಾದ ಭಾರವನ್ನು ಹೊರಬಲ್ಲ ಧನುಸ್ಸನ್ನು ಮತ್ತು ಸರ್ಪಗಳಂತೆ ಪ್ರಜ್ವಲಿಸುತ್ತಿರುವ, ವಿಷವನ್ನು ಕಾರುತ್ತಿರುವ ಬಾಣಗಳನ್ನು ತೆಗೆದುಕೊಂಡನು. ಅವನು ದ್ರೋಣನನ್ನು ಮೂರರಿಂದ ತಿರುಗಿ ಹೊಡೆದನ್ನು, ನಾಲ್ಕರಿಂದ ಅವನ ಕುದುರೆಗಳನ್ನು, ಒಂದರಿಂದ ಧ್ವಜವನ್ನು ಮತ್ತು ಐದರಿಂದ ಸಾರಥಿಯನ್ನು ಹೊಡೆದನು. ಒಂದರಿಂದ ಧನುಸ್ಸನ್ನು ಚೆನ್ನಾಗಿ ಹೊಡೆದಿದ್ದುದರಿಂದ ದ್ವಿಜರ್ಷಭನು ತುಂಬಾ ಕುಪಿತನಾದನು.

ದ್ರೋಣನು ಅವನ ಕುದುರೆಗಳನ್ನು ಎಂಟು ಸನ್ನತಪರ್ವ ಶರಗಳಿಂದ ಮತ್ತು ಸಾರಥಿಯನ್ನು ಒಂದು ಪತ್ರಿಯಿಂದ ವಧಿಸಿದನು. ಕುದುರೆಗಳು ಸಾರಥಿಯು ಹತರಾಗಲು ಆ ರಥಿಗಳಲ್ಲಿ ಶ್ರೇಷ್ಠನು ತಕ್ಷಣವೇ ತನ್ನ ರಥದಿಂದ ಹಾರಿ ಶಂಖನ ರಥವನ್ನೇರಿದನು. ಆಗ ಆ ತಂದೆ-ಮಗ ಇಬ್ಬರೂ ರಥದಲ್ಲಿ ನಿಂತು ಭಾರದ್ವಾಜನನ್ನು ಮಹಾ ಶರವರ್ಷದಿಂದ ಬಲವಂತವಾಗಿ ನಿಲ್ಲಿಸಿದರು. ತಕ್ಷಣವೇ ಭಾರದ್ವಾಜನು ಕ್ರುದ್ಧನಾಗಿ ಸರ್ಪದ ವಿಷದಂತಿರುವ ಶರವನ್ನು ಶಂಖನ ಮೇಲೆ ಪ್ರಯೋಗಿಸಿದನು. ಆ ಬಾಣವು ಅವನ ಹೃದಯವನ್ನು ಸೀಳಿ ರಕ್ತವನ್ನು ಕುಡಿದು ರಕ್ತ ಮತ್ತು ಮಾಂಸಗಳಿಂದ ಲೇಪನಗೊಂಡು ಭೂಮಿಯ ಮೇಲೆ ಬಿದ್ದಿತು. ಭರದ್ವಾಜನ ಶರನಿಂದ ಹತನಾದ ಅವನು ತಕ್ಷಣವೇ ಧನುಸ್ಸು-ಶರಗಳನ್ನು ಬಿಟ್ಟು, ತನ್ನ ತಂದೆಯ ಸಮೀಪದಲ್ಲಿರುವಾಗಲೇ ರಥದಿಂದ ಬಿದ್ದನು. ತನ್ನ ಮಗನು ಹತನಾದುದನ್ನು ನೋಡಿ ವಿರಾಟನು ಬಾಯಿಕಳೆದ ಅಂತಕನಂತಿರುವ ದ್ರೋಣನನ್ನು ಬಿಟ್ಟು, ಸಮರದಿಂದ ಪಲಾಯನ ಮಾಡಿದನು. ಆಗ ಭಾರದ್ವಾಜನು ಪಾಂಡವರ ಮಹಾಸೇನೆಯನ್ನು ತಕ್ಷಣವೇ ನೂರಾರು ಸಹಸ್ರಾರು ಸಂಖ್ಯೆಗಳಲ್ಲಿ ಸದೆಬಡಿಯತೊಡಗಿದನು.

## ಶಿಖಂಡಿ-ಅಶ್ವತ್ಥಾಮರ ಯುದ್ಧ

ಶಿಖಂಡಿಯು ದ್ರೌಣಿಯನ್ನು ಎದುರಿಸಿ ಅವನ ಹುಬ್ಬುಗಳ ಮಧ್ಯೆ ಮೂರು ಆಶುಗ ನಾರಾಚಗಳಿಂದ ಹೊಡೆದನು. ಹಣೆಯಲ್ಲಿ

ಚುಚ್ಚಿಕೊಂಡಿದ್ದ ಆ ಮೂರು ಬಾಣಗಳಿಂದ ಆ ನರಶಾರ್ದೂಲನು ಕಾಂಚನಮಯ ಮೂರು ಶಿಖರಗಳಿಂದ ಕೂಡಿದ ಮೇರು ಪರ್ವತದಂತೆ ಪ್ರಕಾಶಿಸಿದನು. ಆಗ ಕ್ರುದ್ಧನಾಗಿ ಅಶ್ವತ್ಥಾಮನು ನಿಮಿಷಾರ್ಧದಲ್ಲಿ ಅನೇಕ ಶರಗಳನ್ನು ಪ್ರಯೋಗಿಸಿ ಶಿಖಂಡಿಯ ಸೂತನನ್ನೂ, ಧ್ವಜವನ್ನೂ, ಕುದುರೆಗಳನ್ನೂ ಆಯುಧಗಳನ್ನೂ ಬೀಳಿಸಿದನು. ಕುದುರೆಗಳು ಹತವಾಗಲು ಆ ರಥಿಗಳಲ್ಲಿ ಶ್ರೇಷ್ಠ ಶತ್ರುತಾಪನ ಶಿಖಂಡಿಯು ರಥದಿಂದ ಹಾರಿ ನಿಶಿತ ವಿಮಲ ಖಡ್ಗ-ಗುರಾಣಿಗಳನ್ನು ಎತ್ತಿಕೊಂಡು ಕ್ರುದ್ಧನಾಗಿ ಗಿಡುಗನಂತೆ ಸಂಚರಿಸಿದನು. ಖಡ್ಗವನ್ನು ತಿರುಗಿಸುತ್ತಾ ಸಂಚರಿಸಿಸುತ್ತಿದ್ದ ಅವನನ್ನು ಕೊಲ್ಲಲು ದ್ರೌಣಿಗೆ ಅವಕಾಶವೇ ಕಾಣಲಿಲ್ಲ. ಆಗ ಅದ್ಭುತವಾಯಿತು. ಪರಮಕುಪಿತ ದ್ರೌಣಿಯು ಅನೇಕ ಸಹಸ್ರ ಬಾಣಗಳನ್ನು ಪ್ರಯೋಗಿಸಿದನು. ಬಲಿಷ್ಟರಲ್ಲಿ ಶ್ರೇಷ್ಠನಾದ ಶಿಖಂಡಿಯು ಸುದಾರುಣವಾಗಿ ಬೀಳುತ್ತಿದ್ದ ಆ ಶರವೃಷ್ಟಿಯನ್ನು ತೀಕ್ಷ್ಣವಾದ ಖಡ್ಗದಿಂದ ತುಂಡರಿಸಿದನು. ಆಗ ದ್ರೌಣಿಯು ನೂರುಚಂದ್ರಗಳಿದ್ದ ಅವನ ಮರೋರಮ ಖಡ್ಗ-ಗುರಾಣಿಗಳನ್ನು ಕತ್ತರಿಸಿ ಅನೇಕ ನಿಶಿತ ಪತ್ರಿಗಳಿಂದ ಅವನನ್ನು ಹೊಡೆದನು. ಆಗ ಕೂಡಲೇ ಸಾಯಕಗಳಿಂದ ತುಂಡಾದ ಖಡ್ಗವನ್ನೇ ಪ್ರಜ್ವಲಿಸುತ್ತಿರುವ ಸರ್ಪದಂತೆ ಶಿಖಂಡಿಯು ಅವನ ಮೇಲೆ ಎಸೆದನು. ಕೂಡಲೇ ತನ್ನ ಮೇಲೆ ಬೀಳುತ್ತಿದ್ದ ಕಾಲಾನಲಸಮಪ್ರಭೆಯ ಅದನ್ನು ಕತ್ತರಿಸಿ ದ್ರೌಣಿಯು ತನ್ನ ಹಸ್ತಲಾಘವವನ್ನು ಪ್ರದರ್ಶಿಸಿದನು. ಮತ್ತು ಶಿಖಂಡಿಯನ್ನು ಅನೇಕ ಆಯಸ ಶರಗಳಿಂದ ಗಾಯಗೊಳಿಸಿದನು. ನಿಶಿತ

ಶರಗಳಿಂದ ಜೋರಾಗಿ ಹೊಡೆಯಲ್ಪಟ್ಟ ಶಿಖಂಡಿಯಾದರೋ ತಕ್ಷಣವೇ ಮಹಾತ್ಮ ಸಾತ್ಯಕಿಯ ರಥವನ್ನೇರಿದನು.

## ಸಾತ್ಯಕಿ-ಅಲಂಬುಸರ ಯುದ್ಧ

ಬಲಿಗಳಲ್ಲಿ ಶ್ರೇಷ್ಠ ಸಾತ್ಯಕಿಯಾದರೋ ಕ್ರುದ್ಧನಾಗಿ ಕ್ರೂರ ರಾಕ್ಷಸ ಅಲಂಬುಸನನ್ನು ಘೋರ ಶರಗಳಿಂದ ಹೊಡೆದನು. ರಾಕ್ಷಸೇಂದ್ರನು ಅರ್ಧಚಂದ್ರದಿಂದ ಅವನ ಧನುಸ್ಸನ್ನು ಕತ್ತರಿಸಿದನು ಮತ್ತು ಅವನನ್ನು ಸಾಯಕಗಳಿಂದ ಹೊಡೆದನು. ರಾಕ್ಷಸೀ ಮಾಯೆಯನ್ನು ಮಾಡಿ ಅವನನ್ನು ಶರವರ್ಷಗಳಿಂದ ಮುಚ್ಚಿದನು. ಆಗ ಸ್ವಲ್ಪವೂ ಗಾಭರಿಗೊಳ್ಳದೇ ಸಮರದಲ್ಲಿ ನಿಶಿತ ಬಾಣಗಳಿಂದ ಹೋರಾಡುವ ಶೈನೇಯನ ಪರಾಕ್ರಮವು ಅದ್ಭುತವಾಗಿತ್ತು. ವಾರ್ಷ್ಣೇಯನು ಐಂದ್ರಾಸ್ತ್ರವನ್ನು ಹೂಡಿದನು. ಆ ಮಾಧವ ಯಶಸ್ವಿಯು ಅದನ್ನು ವಿಜಯನಿಂದ ಪಡೆದುಕೊಂಡಿದ್ದನು. ಆ ಅಸ್ತ್ರವು ರಾಕ್ಷಸೀ ಮಾಯೆಯನ್ನು ಭಸ್ಮವಾಗಿಸಿ, ಮಹಾಮೇಘವು ಮಳೆಸುರಿಸಿ ಪರ್ವತವನ್ನು ಮುಚ್ಚಿಬಿಡುವಂತೆ ಅಲಂಬುಸನನ್ನು ಎಲ್ಲ ಕಡೆಗಳಿಂದ ಘೋರ ಶರಗಳಿಂದ ಮುಚ್ಚಿಬಿಟ್ಟನು. ಆಗ ಮಹಾತ್ಮ ಮಾಧವನಿಂದ ಪೀಡಿತನಾಗಿ ಭಯದಿಂದ ಆ ರಾಕ್ಷಸನು ಸಾತ್ಯಕಿಯನ್ನು ಬಿಟ್ಟು ಪಲಾಯನ ಮಾಡಿದನು. ಕೌರವ ಯೋಧರು ನೋಡುತ್ತಿದ್ದಂತೆಯೇ ಯುದ್ಧದಲ್ಲಿ ಮಘವತನಿಗೂ ಅಜೇಯನಾಗಿದ್ದ ಆ ರಾಕ್ಷಸೇಂದ್ರನನ್ನು ಶೈನೇಯನು ಪ್ರಾಣದಿಂದ ಗೆದ್ದನು. ಸತ್ಯವಿಕ್ರಮಿ ಸಾತ್ಯಕಿಯು

ಜೋರಾಗಿ ಸಿಂಹನಾದಗೈದನು ಮತ್ತು ಅನೇಕ ನಿಶಿತ ಬಾಣಗಳಿಂದ ಭಯಾರ್ದಿತರಾದವರನ್ನು ಓಡಿಸಿದನು.

ಇದೇ ಸಮಯದಲ್ಲಿ ದ್ರುಪದಾತ್ಮಜ ಬಲಿ ಧೃಷ್ಟದ್ಯುಮ್ನನು ದುರ್ಯೋಧನನನ್ನು ಸನ್ನತಪರ್ವ ಶರಗಳಿಂದ ಹೊಡೆಯತೊಡಗಿದನು. ಧೃಷ್ಟದ್ಯುಮ್ನನ ವಿಶಿಖಗಳಿಂದ ಗಾಯಗೊಂಡ ದುರ್ಯೋಧನನು ಸ್ವಲ್ಪವೂ ವ್ಯಥಿತನಾಗಲಿಲ್ಲ. ಅವನು ಸಮರದಲ್ಲಿ ತಕ್ಷಣವೇ ಧೃಷ್ಟದ್ಯುಮ್ನನನ್ನು ತೊಂಭತ್ತು ಸಾಯಕಗಳಿಂದ ಹೊಡೆದನು. ಅದೊಂದು ಅದ್ಭುತವಾಗಿತ್ತು. ಆ ಮಹಾರಥ ಸೇನಾಪತಿಯು ಕ್ರುದ್ಧನಾಗಿ ಅವನ ಬಿಲ್ಲನ್ನು ಕತ್ತರಿಸಿದನು, ಶೀಘ್ರವಾಗಿ ನಾಲ್ಕೂ ಕುದುರೆಗಳನ್ನು ಸಂಹರಿಸಿದನು ಮತ್ತು ಕ್ಷಿಪ್ರವಾಗಿ ಏಳು ನಿಶಿತ ಬಾಣಗಳಿಂದ ಅವನನ್ನು ಹೊಡೆದನು. ಅಶ್ವಗಳು ಹತರಾಗಲು ಮಹಾಬಾಹು ಬಲಿಯು ರಥದಿಂದ ಕೆಳಗೆ ಧುಮುಕಿ ಖಡ್ಗವನ್ನು ಎತ್ತಿ ಹಿಡಿದು ಕಾಲ್ನಡುಗೆಯಲ್ಲಿಯೇ ಪಾರ್ಷತನ ಕಡೆ ಓಡಿ ಬಂದನು. ಆಗ ರಾಜನನ್ನು ಬಹುವಾಗಿ ಪ್ರೀತಿಸುತ್ತಿದ್ದ ಮಹಾಬಲ ಶಕುನಿಯು ಬಂದು ಆ ಸರ್ವಲೋಕದ ರಾಜನನ್ನು ತನ್ನ ರಥದ ಮೇಲೇರಿಸಿಕೊಂಡನು. ಆಗ ನೃಪನನ್ನು ಪರಾಜಯಗೊಳಿಸಿ ಪರವೀರಹ ಪಾರ್ಷತನು ವಜ್ರಪಾಣಿಯು ಅಸುರರನ್ನು ಹೇಗೋ ಹಾಗೆ ಕೌರವರ ಸೇನೆಯನ್ನು ಸಂಹರಿಸಿದನು.

ರಣದಲ್ಲಿ ಕೃತವರ್ಮನು ಮಹಾರಥ ಭೀಮನನ್ನು ಮಹಾಮೇಘವು

ರವಿಯನ್ನು ಹೇಗೋ ಹಾಗೆ ಶರಗಳನ್ನು ಸುರಿಸಿ ಮುಚ್ಚಿಬಿಟ್ಟನು. ಆಗ ಸಮರದಲ್ಲಿ ಪರಂತಪ ಭೀಮಸೇನನು ನಕ್ಕು ಸಂಕ್ರುದ್ಧನಾಗಿ ಕೃತವರ್ಮನ ಮೇಲೆ ಸಾಯಕಗಳನ್ನು ಪ್ರಯೋಗಿಸಿದನು. ಅತಿರಥ, ಶಸ್ತ್ರಕೋವಿದ ಸಾತ್ವತನು ಅವುಗಳಿಗೆ ನಡುಗದೇ ಭೀಮನನ್ನು ನಿಶಿತ ಶರಗಳಿಂದ ಗಾಯಗೊಳಿಸಿದನು. ಭೀಮಸೇನ ಮಹಾಬಲನು ಅವನ ನಾಲ್ಕೂ ಕುದುರೆಗಳನ್ನು ಕೊಂದು ಸುಪರಿಷ್ಕೃತವಾಗಿದ್ದ ಧ್ವಜವನ್ನೂ ಸಾರಥಿಯನ್ನೂ ಕೆಳಗುರುಳಿಸಿದನು. ಆಗ ಪರವೀರಹನು ಅನೇಕ ವಿಧದ ಶರಗಳಿಂದ ಅವನನ್ನು ಹೊಡೆದನು. ಅವನ ಎಲ್ಲ ಅಂಗಾಂಗಗಳೂ ಕ್ಷತ-ವಿಕ್ಷತವಾಗಿದ್ದುದು ಕಂಡುಬಂದಿತು. ಕುದುರೆಗಳನ್ನು ಕಳೆದುಕೊಂಡ ಅವನು ಕೂಡಲೇ ದುರ್ಯೋಧನನು ನೋಡುತ್ತಿದ್ದಂತೆ ಧೃತರಾಷ್ಟ್ರನ ಬಾವ ವೃಷಕನ ರಥವನ್ನು ಹತ್ತಿದನು. ಭೀಮಸೇನನೂ ಕೂಡ ಮಹಾಕೋಪದಿಂದ ಕೌರವ ಸೈನ್ಯವನ್ನು ದಂಡಪಾಣಿ ಅಂತಕನಂತೆ ಸಂಕ್ರುದ್ಧನಾಗಿ ಸಂಹರಿಸಿದನು.

## ದ್ವಂದ್ವಯುದ್ಧ

ಕೌರವರು ಯಥಾಶಕ್ತಿಯಾಗಿ ಯಥೋತ್ಸಾಹದಿಂದ ಪರಮ ಶಕ್ತಿ ಪೌರುಷಗಳನ್ನು ತೋರಿಸುತ್ತಾ ಯುದ್ಧಮಾಡುತ್ತಿದ್ದರು. ಸುರನದಿ ಗಂಗೆಯ ನೀರು ಸಿಹಿಯಾಗಿದ್ದರೂ ಸಮುದ್ರವನ್ನು ಸೇರಿದಾಗ ಅದರ ಗುಣವು ಲವಣತ್ವವನ್ನು ಹೊಂದುತ್ತದೆ. ಹಾಗೆಯೇ ಮಹಾತ್ಮರಾದ ಕೌರವರು ಪೌರುಷದಿಂದಿದ್ದರೂ ಸಂಯುಗದಲ್ಲಿ ವೀರ

ಪಾಂಡುಸುತರನ್ನು ಎದುರಿಸಿದ ಕೂಡಲೇ ಅದು ವ್ಯರ್ಥವಾಗಿ ಬಿಡುತ್ತಿತ್ತು. ಅವರು ಸಂಘಟಿತರಾಗಿ ಯಥಾಶಕ್ತಿಯಾಗಿಯೇ ದುಷ್ಕರ ಕರ್ಮವನ್ನು ಮಾಡುತ್ತಿದ್ದರು. ಆದುದರಿಂದ ದೋಷವು ಆ ಕೌರವರಿಗೆ ಹೋಗಬಾರದಂತಿತ್ತು. ಧೃತರಾಷ್ಟ್ರನ ಮತ್ತು ಅವನ ಮಗನ ಮಹಾ ಅಪರಾಧದಿಂದ ಯಮರಾಷ್ಟ್ರವನ್ನು ವರ್ಧಿಸುವ ಆ ಘೋರ ಪ್ರಕ್ಷಯವು ಭೂಮಿಯಮೇಲೆ ನಡೆಯಿತು. ಪೂರ್ವಾಹ್ಣದಲ್ಲಿ ಬಹಳ ಜನಕ್ಷಯವಾಯಿತು.

ಅವಂತಿಯ ಮಹೇಷ್ವಾಸ ಮಹಾತ್ಮ ಮಹಾಬಲರಿಬ್ಬರೂ ಇರಾವಾನನನ್ನು ನೋಡಿ ರಣೋತ್ಕಟರಾಗಿ ಒಟ್ಟಿಗೇ ಎದುರಿಸಿದರು. ಅವರ ಮಧ್ಯೆ ಲೋಮಹರ್ಷಣ ತುಮುಲ ಯುದ್ಧವು ನಡೆಯಿತು. ಸಂಕ್ರುದ್ಧನಾದ ಇರಾವಾನನು ದೇವರೂಪಿ ಸಹೋದರರನ್ನು ತಕ್ಷಣವೇ ನಿಶಿತ ಸನ್ನತಪರ್ವ ಶರಗಳಿಂದ ಹೊಡೆದನು. ಅದಕ್ಕೆ ಪ್ರತಿಯಾಗಿ ಸಮರದಲ್ಲಿ ಚಿತ್ರಯೋಧಿಗಳು ಅವನನ್ನು ಹೊಡೆದರು. ಶತ್ರುನಾಶಕ್ಕೆ ಪ್ರಯತ್ನಿಸುತ್ತಾ, ಪ್ರಹಾರ ಪ್ರತಿಪ್ರಹಾರಗಳನ್ನು ಮಾಡುತ್ತಾ ಹಾಗೆ ಯುದ್ಧಮಾಡುತ್ತಿದ್ದ ಅವರಲ್ಲಿ ವಿಶೇಷವಾದ ಅಂತರವೇನೂ ಕಾಣಲಿಲ್ಲ. ಆಗ ಇರಾವಾನನು ನಾಲ್ಕು ಬಾಣಗಳಿಂದ ಅನುವಿಂದನ ರಥದ ನಾಲ್ಕೂ ಕುದುರೆಗಳನ್ನು ಯಮಾಲಯಕ್ಕೆ ಕಳುಹಿಸಿಕೊಟ್ಟನು. ಸುತೀಕ್ಷ್ಣವಾದ ಎರಡು ಭಲ್ಲಗಳಿಂದ ಅವನ ಧನುಸ್ಸನ್ನೂ ಧ್ವಜವನ್ನೂ ಸಮರದಲ್ಲಿ ಕತ್ತರಿಸಿದನು. ಅದು ಅದ್ಭುತವಾಗಿತ್ತು. ಆಗ ಅನುವಿಂದನು ಹೊಸತಾದ ಭಾರಸಾಧನವಾದ ಉತ್ತಮ ಧನುಸ್ಸನ್ನು ಹಿಡಿದು ವಿಂದನ

ರಥವನ್ನೇರಿದನು. ಅವರಿಬ್ಬರು ಅವಂತಿಯ ವೀರರೂ ರಥಿಗಳಲ್ಲಿ ಶ್ರೇಷ್ಠರೂ ಒಂದೇ ರಥದಲ್ಲಿದ್ದುಕೊಂಡು ಮಹಾತ್ಮ ಇರಾವಂತನ ಮೇಲೆ ಬೇಗ ಶರಗಳನ್ನು ಪ್ರಯೋಗಿಸಿದರು. ಅವರು ಬಿಟ್ಟ ಮಹಾವೇಗದ ಕಾಂಚನಭೂಷಣ ಶರಗಳು ದಿವಾಕರನ ಪಥವನ್ನು ಅನುಸರಿಸಿ ಆಕಾಶವನ್ನೆಲ್ಲಾ ತುಂಬಿದವು. ಆಗ ಇರಾವಂತನು ಕ್ರುದ್ಧನಾಗಿ ಆ ಮಹಾರಥ ಸಹೋದರರಿಬ್ಬರ ಮೇಲೆ ಶರವರ್ಷವನ್ನು ಸುರಿಸಿ ಸಾರಥಿಯನ್ನು ಬೀಳಿಸಿದನು. ಪ್ರಾಣಕಳೆದುಕೊಂಡು ಸಾರಥಿಗಳಿಬ್ಬರೂ ಭೂಮಿಯ ಮೇಲೆ ಬೀಳಲು ಭ್ರಾಂತಗೊಂಡ ಕುದುರೆಗಳು ರಥವನ್ನು ದಿಕ್ಕು ದಿಕ್ಕುಗಳಿಗೆ ಕೊಂಡೊಯ್ದವು. ನಾಗರಾಜನ ಮಗಳ ಮಗನಾದ ಅವನು ಅವರಿಬ್ಬರನ್ನು ಪರಾಜಯಗೊಳಿಸಿ ತನ್ನ ಪೌರುಷವನ್ನು ಪ್ರಕಟಪಡಿಸುತ್ತಾ ಕೌರವ ಸೇನೆಯನ್ನು ನಾಶಪಡಿಸತೊಡಗಿದನು. ಅವನಿಂದ ವಧಿಸಲ್ಪಡುತ್ತಿದ್ದ ಧಾರ್ತರಾಷ್ಟ್ರನ ಮಹಾಸೇನೆಯು ವಿಷಪಾನಮಾಡಿದ ಮನುಷ್ಯನಂತೆ ಬಹುವಿಧವಾಗಿ ನಡೆದುಕೊಂಡಿತು.

ಆದಿತ್ಯವರ್ಣದ ರಥದಲ್ಲಿ, ಧ್ವಜದೊಂದಿಗೆ ಮಹಾಬಲ ರಾಕ್ಷಸೇಂದ್ರ ಹೈಡಿಂಬನು ಭಗದತ್ತನನ್ನು ಎದುರಿಸಿದನು. ಆಗ ಹಿಂದೆ ತಾರಕಮಯಸಂಗ್ರಾಮದಲ್ಲಿ ವಜ್ರಧರನಂತೆ ಪ್ರಾಗ್ಜ್ಯೋತಿಷದ ರಾಜನು ಗಜರಾಜನನ್ನೇರಿದನು. ಅಲ್ಲಿ ಗಂಧರ್ವ-ಋಷಿಗಳೊಂದಿಗೆ ಸೇರಿದ್ದ ದೇವತೆಗಳು ಹೈಡಿಂಬ ಭಗದತ್ತರ ನಡುವೆ ಏನೂ ವ್ಯತ್ಯಾಸವನ್ನು ಕಾಣಲಿಲ್ಲ. ಸುರಪತಿ ಶಕ್ರನು ಹೇಗೆ ದಾನವರನ್ನು ಕಾಡಿದನೋ ಹಾಗೆ

ಸಮರದಲ್ಲಿ ರಾಜನು ಪಾಂಡವರನ್ನು ಪೀಡಿಸಿದನು. ಅವನಿಂದ ಗಾಯಗೊಂಡ ಪಾಂಡವರು ತ್ರಾತಾರನಿಲ್ಲದೇ ತಮ್ಮ ಸೇನೆಯಲ್ಲಿ ಸರ್ವದಿಶಗಳಲ್ಲಿ ಓಡತೊಡಗಿದರು. ಅಲ್ಲಿ ರಥದಲ್ಲಿದ್ದ ಭೈಮಸೇನಿಯು ವಿಮನಸ್ಕರಾಗಿ ಓಡುತ್ತಿದ್ದ ಉಳಿದ ಮಹಾರಥರನ್ನು ನೋಡಿದನು. ಪುನಃ ಪಾಂಡವರ ಸೈನ್ಯವು ಮರಳಿ ಬರಲು ಅಲ್ಲಿ ಅವರು ಮತ್ತು ಕೌರವರ ಸೇನೆಗಳ ಮಧ್ಯೆ ಘೋರ ಯುದ್ಧವು ನಡೆಯಿತು. ಆಗ ಘಟೋತ್ಕಚನು ಮಹಾರಣದಲ್ಲಿ ಭಗದತ್ತನನ್ನು ಮೋಡವು ಮೇರುಗಿರಿಯನ್ನು ಹೇಗೋ ಹಾಗೆ ಶರಗಳಿಂದ ಮುಚ್ಚತೊಡಗಿದನು. ತಕ್ಷಣವೇ ರಾಜನು ರಾಕ್ಷಸನ ಧನುಸ್ಸಿನಿಂದ ಬಂದ ಆ ಶರಗಳನ್ನು ನಾಶಪಡಿಸಿ ರಣದಲ್ಲಿ ಭೈಮಸೇನಿಯ ಎಲ್ಲ ಮರ್ಮಸ್ಥಾನಗಳಿಗೂ ಹೊಡೆದನು. ಅನೇಕ ಸನ್ನತಪರ್ವ ಶರಗಳಿಂದ ಹೊಡೆಯಲ್ಪಟ್ಟರೂ ಭೇದಿಸಲ್ಪಡುವ ಪರ್ವತದಂತೆ ರಾಕ್ಷಸೇಂದ್ರನು ನಿಂತಲ್ಲಿಂದ ಚಲಿಸಲಿಲ್ಲ. ಆಗ ಕ್ರುದ್ಧನಾದ ಪ್ರಾಗ್ಜ್ಯೋತಿಷನು ಹದಿನಾಲ್ಕು ತೋಮರಗಳನ್ನು ಅವನ ಮೇಲೆ ಪ್ರಯೋಗಿಸಲು ಅವುಗಳನ್ನೂ ಸಮರದಲ್ಲಿ ರಾಕ್ಷಸನು ತುಂಡರಿಸಿದನು. ಮಹಾಬಾಹುವು ನಿಶಿತ ಶರಗಳಿಂದ ಆ ತೋಮರಗಳನ್ನು ಕತ್ತರಿಸಿ ಏಳು ಕಂಕಪತ್ರಿಗಳಿಂದ ಭಗದತ್ತನನ್ನೂ ಹೊಡೆದನು. ಆಗ ಪ್ರಾಗ್ಜ್ಯೋತಿಷದ ರಾಜನು ನಕ್ಕು ಸಾಯಕಗಳಿಂದ ಯುದ್ಧದಲ್ಲಿ ಅವನ ನಾಲ್ಕೂ ಕುದುರೆಗಳನ್ನೂ ಸಂಹರಿಸಿದನು. ಕುದುರೆಗಳು ಹತವಾದರೂ ರಥದಲ್ಲಿಯೇ ನಿಂತು ಪ್ರತಾಪವಾನ್ ರಾಕ್ಷಸೇಂದ್ರನು ವೇಗದಿಂದ ಪ್ರಾಗ್ಜ್ಯೋತಿಷನ ಆನೆಯ

ಮೇಲೆ ಶಕ್ತಿಯನ್ನು ಎಸೆದನು. ಮೇಲೆ ಬೀಳುತ್ತಿದ್ದ ಹೇಮದಂಡದ ಸುವೇಗದ ಶಕ್ತಿಯನ್ನು ನೃಪತಿಯು ಮೂರು ತುಂಡುಗಳನ್ನಾಗಿ ಮಾಡಿ ನೆಲದ ಮೇಲೆ ಹರಡಿದನು. ಶಕ್ತಿಯು ನಾಶವಾದುದನ್ನು ನೋಡಿ ಹೈಡಿಂಬನು, ಹೇಗೆ ಹಿಂದೆ ದೈತ್ಯಸತ್ತಮ ನಮುಚಿಯು ಇಂದ್ರನಿಂದ ಓಡಿಹೋಗಿದ್ದನೋ ಹಾಗೆ ಭಯದಿಂದ ಪಲಾಯನಗೈದನು. ಆ ಶೂರ, ವಿಕ್ರಾಂತ, ಖ್ಯಾತಪೌರುಷ, ಸಮರದಲ್ಲಿ ಯಮ-ವರುಣರಿಂದಲೂ ಅಜೇಯನನ್ನು ಸೋಲಿಸಿ ಭಗದತ್ತನು ವನಗಜವು ಪದ್ಮಗಳಿರುವ ಸರೋವರವನ್ನು ಧ್ವಂಸಮಾಡುವಂತೆ ತನ್ನ ಆನೆಯೊಂದಿಗೆ ಪಾಂಡವೀ ಸೇನೆಯನ್ನು ಮರ್ದಿಸಿದನು.

ಮದ್ರೇಶ್ವರನಾದರೋ ತಂಗಿಯ ಮಕ್ಕಳಾದ ಪಾಂಡುನಂದನ ಯಮಳರೊಂದಿಗೆ ಯುದ್ಧವನ್ನು ನಡೆಸಿದನು. ಸಹದೇವನಾದರೋ ಮಾವನನ್ನು ನೋಡಿ ಮೇಘಗಳು ದಿವಾಕರನನ್ನು ಹೇಗೋ ಹಾಗೆ ಶರಗಣಗಳಿಂದ ಅವನನ್ನು ಮುಚ್ಚಿದನು. ಶರೌಘಗಳಿಂದ ಮುಚ್ಚಲ್ಪಟ್ಟಿದ್ದರೂ ಅವನು ಹೃಷ್ಟರೂಪನಾಗಿಯೇ ಇದ್ದನು. ತಾಯಿಯ ಕಾರಣದಿಂದ ಅವರಿಗೂ ತಮ್ಮ ಮಾವನ ಮೇಲೆ ಪ್ರೀತಿಯಿತ್ತು. ಆಗ ಆ ಮಹಾರಥನು ನಕುಲನ ನಾಲ್ಕೂ ಕುದುರೆಗಳನ್ನು ನಾಲ್ಕು ಉತ್ತಮ ಸಾಯಕಗಳಿಂದ ಹೊಡೆದು ಯಮಸದನದ ಕಡೆ ಕಳುಹಿಸಿದನು. ಕುದುರೆಯು ಹತವಾಗಲು ತಕ್ಷಣವೇ ರಥದಿಂದ ಹಾರಿ ಮಹಾರಥ ಯಶಸ್ವಿಯು ಸಹೋದರನ ರಥವನ್ನೇ ಏರಿದನು. ಒಂದೇ ಕಡೆ ನಿಂತು ಅವರಿಬ್ಬರು ಶೂರರೂ ದೃಢವಾದ ಧನುಸ್ಸನ್ನು ಎಳೆದು ಕ್ರುದ್ಧರಾಗಿ

ಮದ್ರರಾಜನ ರಥವನ್ನು ಕ್ಷಣದಲ್ಲಿ ಮುಚ್ಚಿಬಿಟ್ಟರು. ತಂಗಿಯ ಮಕ್ಕಳಿಂದ ಅನೇಕ ಸನ್ನತಪರ್ವಗಳಿಂದ ಮುಚ್ಚಲ್ಪಟ್ಟಿರೂ ಪರ್ವತದಂತೆ ಆ ನರವ್ಯಾಘ್ರನು ಅಲುಗಾಡಲಿಲ್ಲ. ನಗುತ್ತಾ ಅವನೂ ಕೂಡ ಅವರ ಮೇಲೆ ಶರವೃಷ್ಟಿಯನ್ನು ಸುರಿಸಿದನು. ಆಗ ವೀರ್ಯವಾನ್ ಸಹದೇವನು ಕ್ರುದ್ಧನಾಗಿ ಶರವನ್ನು ಹೂಡಿ ಮದ್ರರಾಜನ ಮೇಲೆ ಪ್ರಯೋಗಿಸಿದನು. ಅವನಿಂದ ಬಿಡಲ್ಪಟ್ಟ ಆ ಶರವು ಗರುಡನಂತೆ ವೇಗವಾಗಿ ಹೋಗಿ ಮದ್ರರಾಜನನ್ನು ಭೇದಿಸಿ ಭೂಮಿಯ ಮೇಲೆ ಬಿದ್ದಿತು. ಗಾಢವಾಗಿ ಗಾಯಗೊಂಡ ಆ ಮಹಾರಥನು ರಥದಲ್ಲಿಯೇ ಕುಳಿತುಕೊಂಡು, ಮೂರ್ಛಿತನಾದನು. ಅವನು ಮೂರ್ಛಿತನಾಗಿ ಬಿದ್ದುದನ್ನು ಗಮನಿಸಿದ ಸೂತನು ಯಮಳರಿಂದ ಪೀಡಿತನಾದ ಅವನ ರಥವನ್ನು ಆಚೆ ಕೊಂಡೊಯ್ದನು. ಹಿಂದೆ ಹೋಗುತ್ತಿದ್ದ ಮದ್ರೇಶ್ವರನ ರಥವನ್ನು ನೋಡಿ ಧಾರ್ತರಾಷ್ಟ್ರರೆಲ್ಲರೂ ವಿಮನಸ್ಕರಾಗಿ ಇವನು ಉಳಿಯುವುದಿಲ್ಲವೆಂದು ಚಿಂತಿಸಿದರು. ಯುದ್ಧದಲ್ಲಿ ಸೋದರ ಮಾವನನ್ನು ಸೋಲಿಸಿ ಮಹಾರಥ ಮಾದ್ರೀಪುತ್ರರು ಮುದಿತರಾಗಿ ಶಂಖಗಳನ್ನು ಊದಿದರು ಮತ್ತು ಸಿಂಹನಾದಗೈದರು. ಅಮರರಾದ ಇಂದ್ರ-ಉಪೇಂದ್ರರು ದೈತ್ಯಸೇನೆಯನ್ನು ಹೇಗೋ ಹಾಗೆ ಅವರಿಬ್ಬರೂ ಹರ್ಷಿತರಾಗಿ ಕೌರವ ಸೈನ್ಯವನ್ನು ಬೆನ್ನಟ್ಟಿದರು.

ದಿವಾಕರನು ನಡುನೆತ್ತಿಯ ಮೇಲೆ ಬರಲು ರಾಜಾ ಯುಧಿಷ್ಠಿರನು ಶ್ರುತಾಯುಷನನ್ನು ನೋಡಿ ಕುದುರೆಗಳನ್ನು ಓಡಿಸಿದನು. ರಾಜನು

ಅರಿಂದಮ ಶ್ರುತಾಯುಷನನ್ನು ಎದುರಿಸಿ ಅವನನ್ನು ತೀಕ್ಷ್ಣವಾದ ಸಾಯಕಗಳಿಂದ ಮತ್ತು ಒಂಭತ್ತು ನತಪರ್ವಗಳಿಂದ ಹೊಡೆದನು. ಆ ರಾಜ ಮಹೇಷ್ವಾಸನು ಧರ್ಮಸೂನುವು ಕಳುಹಿಸಿದ ಬಾಣಗಳನ್ನು ರಣದಲ್ಲಿ ತಡೆದು, ಏಳುಶರಗಳನ್ನು ಕೌಂತೇಯನ ಮೇಲೆ ಪ್ರಯೋಗಿಸಿದನು. ಅವು ಆ ಮಹಾತ್ಮನ ಕವಚವನ್ನು ಸೀಳಿ ದೇಹದಲ್ಲಿ ಪ್ರಾಣಗಳನ್ನು ಹುಡುಕುತ್ತಿವೆಯೋ ಎನ್ನುವಂತೆ ಅವನ ರಕ್ತವನ್ನು ಹೀರಿದವು. ಶ್ರುತಾಯುಷನಿಂದ ಹೀಗೆ ತುಂಬಾ ಗಾಯಗೊಂಡ ಪಾಂಡವನಾದರೋ ರಣದಲ್ಲಿ ವರಾಹಕರ್ಣದಿಂದ ರಾಜನ ಹೃದಯವನ್ನು ಹೊಡೆದನು. ರಥಶ್ರೇಷ್ಠ ಪಾರ್ಥನು ಇನ್ನೊಂದು ಭಲ್ಲದಿಂದ ಆ ಮಹಾತ್ಮನ ಧ್ವಜವನ್ನು ತಕ್ಷಣವೇ ರಥದಿಂದ ಭೂಮಿಯ ಮೇಲೆ ಉರುಳಿಸಿದನು. ಧ್ವಜವನ್ನು ಬೀಳಿಸಿದುದನ್ನು ನೋಡಿ ಪಾರ್ಥಿವ ಶ್ರುತಾಯುವು ಪಾಂಡವನನ್ನು ತೀಕ್ಷ್ಣವಾದ ಏಳು ವಿಶಿಖಗಳಿಂದ ಹೊಡೆದನು. ಆಗ ಧರ್ಮಪುತ್ರ ಯುಧಿಷ್ಠಿರನು ಯುಗಾಂತದಲ್ಲಿ ಇರುವವುಗಳನ್ನು ಸುಟ್ಟುಬಿಡುವ ಹುತಾಶನನಂತೆ ಕ್ರೋಧದಿಂದ ಪ್ರಜ್ವಲಿಸಿದನು. ಕ್ರುದ್ಧನಾದ ಪಾಂಡವನನ್ನು ನೋಡಿ ದೇವ-ಗಂಧರ್ವ-ರಾಕ್ಷಸರು ಬಹುವಾಗಿ ವ್ಯಥೆಪಟ್ಟರು. ಜಗತ್ತೇ ವ್ಯಾಕುಲಗೊಂಡಿತು. “ಮೂರು ಲೋಕಗಳನ್ನೂ ಇಂದು ಸಂಕ್ರುದ್ಧನಾದ ಈ ನೃಪನು ಸುಟ್ಟುಬಿಡುತ್ತಾನೆ!” ಎನ್ನುವುದೇ ಸರ್ವಭೂತಗಳ ಮನೋಗತವಾಗಿತ್ತು. ಪಾಂಡವನು ಕ್ರೋಧಿತನಾಗಲು ಋಷಿಗಳೂ ದೇವತೆಗಳೂ ಲೋಕಗಳ ಶಾಂತಿಗಾಗಿ ಸ್ವಸ್ತಿವಾಚನ ಮಾಡಿದರು.

ಅವನೂ ಕೂಡ ಕ್ರೋಧಸಮಾವಿಷ್ಟನಾಗಿ ಕಟವಾಯಿಯನ್ನು ನೆಕ್ಕುತ್ತಾ ಪ್ರಲಯ ಕಾಲದ ಆದಿತ್ಯನಂತೆ ಘೋರರೂಪವನ್ನು ತಾಳಿದನು. ಆಗ ಕೌರವ ಸೇನೆಗಳೆಲ್ಲವೂ ತಮ್ಮ ಜೀವಿತದ ಮೇಲಿದ್ದ ಆಸೆಯನ್ನು ಸಂಪೂರ್ಣವಾಗಿ ತೊರೆದುಬಿಟ್ಟವು. ಮಹಾಯಶನಾದ ಅವನೇ ಧೈರ್ಯದಿಂದ ಕೋಪವನ್ನು ತಡೆದುಕೊಂಡು ಶ್ರುತಾಯುಷನ ಮಹಾಧನುಸ್ಸನ್ನು ಮುಷ್ಟಿಪ್ರದೇಶದಲ್ಲಿ ಕತ್ತರಿಸಿದನು. ಧನುಸ್ಸು ತುಂಡಾದ ಅವನನ್ನು ರಾಜನು ರಣದಲ್ಲಿ ಎದೆಯ ಮೇಲೆ ಸರ್ವ ಸೈನ್ಯವೂ ನೋಡುತ್ತಿರುವಂತೆ ನಾರಾಚದಿಂದ ಹೊಡೆದನು. ಇನ್ನೊಂದು ಕ್ಷಣದಲ್ಲಿ ಕ್ಷಿಪ್ರವಾಗಿ ಆ ಮಹಾಬಲ ಮಹಾತ್ಮನು ಅವನ ಕುದುರೆಗಳನ್ನೂ ಸೂತನಿಂದ ಶರಗಳಿಂದ ಸಂಹರಿಸಿದನು. ಹತವಾದ ಕುದುರೆಗಳನ್ನೂ ರಥವನ್ನೂ ನೋಡಿ ಪೌರುಷವನ್ನು ತ್ಯಜಿಸಿ ರಾಜ ಶ್ರುತಾಯುವು ವೇಗದಿಂದ ಸಮರವನ್ನು ತ್ಯಜಿಸಿ ಪಲಾಯನಗೈದನು. ಆ ಮಹೇಷ್ವಾಸನು ಧರ್ಮಪುತ್ರನಿಂದ ಗೆಲ್ಲಲ್ಪಡಲು ದುರ್ಯೋಧನನ ಸೇನೆಯು ಎಲ್ಲವೂ ಪರಾಙ್ಮುಖವಾದವು. ಹೀಗೆ ಮಾಡಿ ಧರ್ಮಪುತ್ರ ಯುಧಿಷ್ಠಿರನು ಬಾಯಿಕಳೆದ ಕಾಲನಂತೆ ಸೈನ್ಯವನ್ನು ಸಂಹರಿಸಿದನು.

ವಾರ್ಷ್ಣೇಯ ಚೇಕಿತಾನನು ರಥಿಗಳಲ್ಲಿ ಶ್ರೇಷ್ಠ ಗೌತಮನನ್ನು, ಸರ್ವ ಸೇನೆಗಳೂ ನೋಡುತ್ತಿರುವಂತೆ, ಸಾಯಕಗಳಿಂದ ಮುಚ್ಚಿಬಿಟ್ಟನು. ಆ ಶರಗಳನ್ನು ತಡೆದು ಶಾರದ್ವತ ಕೃಪನು ಯುದ್ಧದಲ್ಲಿ ಚೇಕಿತಾನನನ್ನು ಪತ್ರಿಗಳಿಂದ ಹೊಡೆದನು. ಅನಂತರ ಆ ಕ್ಷಿಪ್ರಹಸ್ತನು ಇನ್ನೊಂದು ಭಲ್ಲದಿಂದ ಅವನ ಧನುಸ್ಸನ್ನು ತುಂಡರಿಸಿ, ಸಾರಥಿಯನ್ನೂ, ನಾಲ್ಕು

ಕುದುರೆಗಳನ್ನೂ, ರಥದ ಬದಿಗಳನ್ನು ರಕ್ಷಿಸುತ್ತಿದ್ದ ಇಬ್ಬರು ಸಾರಥಿಗಳನ್ನೂ ಬೀಳಿಸಿದನು. ಆಗ ಸಾತ್ವತನು ಒಡನೆಯೇ ರಥದಿಂದ ಧುಮುಕಿ ಗದೆಯನ್ನು ಹಿಡಿದನು. ಗದಾಧಾರಿಗಳಲ್ಲಿ ಶ್ರೇಷ್ಠನಾದ ಅವನು ವೀರರನ್ನು ಘಾತಿಗೊಳಿಸುವ ಗದೆಯಿಂದ ಗೌತಮನ ಕುದುರೆಗಳನ್ನು ಕೊಂದು ಸಾರಥಿಯನ್ನೂ ಬೀಳಿಸಿದನು. ಭೂಮಿಗಿಳಿದ ಗೌತಮನು ಅವನ ಮೇಲೆ ಹದಿನಾರು ಬಾಣಗಳನ್ನು ಪ್ರಯೋಗಿಸಿದನು. ಆ ಶರಗಳು ಸಾತ್ವತನನ್ನು ಭೇದಿಸಿ ಧರಾತಲವನ್ನು ಪ್ರವೇಶಿಸಿದವು. ಆಗ ಚೇಕಿತಾನನು ಕ್ರುದ್ಧನಾಗಿ ಗೌತಮನನ್ನು ವಧಿಸಲು ಬಯಸಿ ವೃತ್ರನು ಪುರಂದರನ ಮೇಲೆ ಹೇಗೋ ಹಾಗೆ ಅವನ ಮೇಲೆ ಪುನಃ ಗದೆಯನ್ನು ಪ್ರಯೋಗಿಸಿದನು. ತನ್ನ ಮೇಲೆ ಬಂದು ಬೀಳುತ್ತಿದ್ದ ಆ ಪಚ್ಚೆಕಲ್ಲಿನಿಂದ ನಿರ್ಮಿತವಾಗಿದ್ದ ಮಹಾಗದೆಯನ್ನು ಅನೇಕ ಸಾವಿರ ಬಾಣಗಳಿಂದ ಗೌತಮನು ತಡೆದನು. ಆಗ ಚೇಕಿತಾನನು ಒರೆಯಿಂದ ಖಡ್ಗವನ್ನು ಸೆಳೆದು ಮೇಲೆತ್ತಿ ಅತಿ ವೇಗದಿಂದ ಗೌತಮನ ಸಮೀಪಕ್ಕೆ ಧಾವಿಸಿದನು. ಗೌತಮನೂ ಕೂಡ ಧನುಸ್ಸನ್ನು ಬಿಸುಟು ಖಡ್ಗವನ್ನು ಹಿಡಿದು ಮಹಾವೇಗದಿಂದ ಚೇಕಿತಾನನನ್ನು ಎದುರಿಸಿದನು. ಅವರಿಬ್ಬರು ಬಲಸಂಪನ್ನರೂ ಶ್ರೇಷ್ಠ ಖಡ್ಗಗಳನ್ನು ಹಿಡಿದು ಸುತೀಕ್ಷ್ಣವಾದ ಖಡ್ಗಗಳಿಂದ ಅನ್ಯೋನ್ಯರನ್ನು ಗಾಯಗೊಳಿಸಲು ಪ್ರಯತ್ನಿಸಿದರು. ವೇಗವಾಗಿ ಖಡ್ಗಗಳಿಂದ ಹೊಡೆಯಲ್ಪಟ್ಟು ಆ ಇಬ್ಬರು ಪುರುಷರ್ಷಭರೂ ಹೋರಾಟದಲ್ಲಿ ಗಾಯಗೊಂಡು ಮೋಹಿತರಾಗಿ ಸರ್ವಭೂತಗಳೂ ಪೂಜಿಸುವ ಭೂಮಿಯ ಮೇಲೆ ಬಿದ್ದು

ಮೂರ್ಛಿತರಾದರು. ಆಗ ವೇಗವಾಗಿ ಅಲ್ಲಿಗೆ ಬಂದ ಕರಕರ್ಷನು ಅವನ ಮೇಲಿನ ಸ್ನೇಹದಿಂದ ಹಾಗಿದ್ದ ಸಮರದುರ್ಮರ್ದ ಚೇಕಿತಾನನನ್ನು ನೋಡಿ, ಎಲ್ಲ ಸೇನೆಗಳೂ ನೋಡುತ್ತಿರಲು, ಅವನನ್ನು ತನ್ನ ರಥದ ಮೇಲೇರಿಸಿಕೊಂಡನು. ಹಾಗೆಯೇ ಶೂರ ಶಕುನಿಯು ತಕ್ಷಣವೇ ರಥಿಗಳಲ್ಲಿ ಶ್ರೇಷ್ಠ ಗೌತಮನನ್ನು ತನ್ನ ರಥದ ಮೇಲೇರಿಸಿಕೊಂಡನು.

ಹಾಗೆಯೇ ಮಹಾಬಲ ಧೃಷ್ಟಕೇತುವು ಸೌಮದತ್ತಿಯನ್ನು ನೋಡಿ ಕ್ರುದ್ಧನಾಗಿ ಅವನ ಎದೆಗೆ ತೊಂಬತ್ತು ಸಾಯಕಗಳನ್ನು ಕ್ಷಿಪ್ರವಾಗಿ ಹೊಡೆದನು. ಮಧ್ಯಾಹ್ನದ ಸೂರ್ಯನು ಕಿರಣಗಳಿಂದ ಹೇಗೋ ಹಾಗೆ ಸೌಮದತ್ತಿಯು ಹೃದಯಕ್ಕೆ ಚುಚ್ಚಿದ್ದ ಆ ತೊಂಬತ್ತು ಬಾಣಗಳಿಂದ ಪರಿಶೋಭಿಸಿದನು. ಭೂರಿಶ್ರವನಾದರೋ ಸಮರದಲ್ಲಿ ಉತ್ತಮ ಸಾಯಕಗಳಿಂದ ಮಹಾರಥ ಧೃಷ್ಟಕೇತುವಿನ ಸಾರಥಿಯನ್ನೂ ಕುದುರೆಗಳನ್ನೂ ಸಂಹರಿಸಿ ಅವನನ್ನು ವಿರಥನನ್ನಾಗಿ ಮಾಡಿದನು. ಅವನು ಅಶ್ವ-ಸಾರಥಿಗಳನ್ನು ಕಳೆದುಕೊಂಡು ವಿರಥನಾದುದನ್ನು ನೋಡಿ ಅವನನ್ನು ಮಹಾ ಶರವರ್ಷಗಳಿಂದ ರಣದಲ್ಲಿ ಮುಚ್ಚಿದನು. ಮಹಾಮನ ಧೃಷ್ಟಕೇತುವಾದರೋ ತನ್ನ ರಥವನ್ನು ತೊರೆದು ಶತಾನೀಕನ ರಥವನ್ನೇರಿದನು.

ಚಿತ್ರಸೇನ, ವಿಕರ್ಣ ಮತ್ತು ದುರ್ಮರ್ಷಣರು ಬಂಗಾರದ ರಥಗಳಲ್ಲಿ ಸೌಭದ್ರನನ್ನು ಎದುರಿಸಿದರು. ಶರೀರವು ವಾತ-ಪಿತ್ತ-ಕಫ ಈ

ಮೂರರೊಡನೆ ಹೋರಾಡುವಂತೆ ಅಭಿಮನ್ಯುವು ಅವರೊಡನೆ ಘೋರವಾದ ಯುದ್ಧ ಮಾಡಿದನು. ಆ ನರವ್ಯಾಘ್ರನು ಆ ಧೃತರಾಷ್ಟ್ರ ಪುತ್ರರನ್ನು ವಿರಥರನ್ನಾಗಿ ಮಾಡಿ ಭೀಮನ ವಚನವನ್ನು ಸ್ಮರಿಸಿಕೊಂಡು ಅವರನ್ನು ಕೊಲ್ಲಲಿಲ್ಲ.

## ಸುಶರ್ಮಾರ್ಜುನರ ಯುದ್ಧ

ಆಗ ಅನೇಕ ರಾಜರಿಂದ, ನೂರಾರು ಗಜಾಶ್ವರಥಸೇನೆಗಳಿಂದ ಸಂವೃತನಾಗಿ ಸಮರದಲ್ಲಿ ದೇವತೆಗಳಿಗೂ ದುರಾಸದನಾದ ಭೀಷ್ಮನು ಧಾರ್ತರಾಷ್ಟ್ರರನ್ನು ರಕ್ಷಿಸಲು ಶೀಘ್ರವಾಗಿ ಮಹಾರಥ, ಬಾಲಕ, ಅಭಿಮನ್ಯುವೊಬ್ಬನನ್ನೇ ಗುರಿಯಾಗಿಟ್ಟುಕೊಂಡು ಹೋಗುತ್ತಿರಲು ಶ್ವೇತವಾಹನ ಕೌಂತೇಯನು ವಾಸುದೇವನಿಗೆ ಇದನ್ನು ಹೇಳಿದನು:

> "ಹೃಷೀಕೇಶ! ಆ ಅನೇಕ ರಥಗಳು, ಅನೇಕ ಶೂರ, ಕೃತಾಸ್ತ್ರ, ಯುದ್ಧ ದುರ್ಮದರು ಎಲ್ಲಿದ್ದಾರೋ ಅಲ್ಲಿಗೆ, ಅವರು ಸೇನೆಗಳನ್ನು ಸಂಹರಿಸುವ ಮೊದಲೇ ಕುದುರೆಗಳನ್ನು ಓಡಿಸು!"

ಹೀಗೆ ಅಮಿತೌಜಸ ಕೌಂತೇಯನು ಹೇಳಲು ವಾರ್ಷ್ಣೇಯನು ಶ್ವೇತಹಯಗಳನ್ನು ಕಟ್ಟಿದ್ದ ರಥವನ್ನು ಕೌರವ ಮಹಾಸೇನೆಯಿರುವಲ್ಲಿಗೆ ಕೊಂಡೊಯ್ದನು. ಕ್ರುದ್ಧನಾಗಿರುವ ಅರ್ಜುನನು ಕೌರವರನ್ನು ಸಮೀಪಿಸಿದನು. ಭೀಷ್ಮನನ್ನು ರಕ್ಷಿಸುತ್ತಿದ್ದ ಆ ರಾಜರ ಬಳಿ ಹೋಗಿ ಕೌಂತೇಯನು ಸುಶರ್ಮಣನಿಗೆ ಹೇಳಿದನು:

“ನೀನು ಯುದ್ಧದಲ್ಲಿ ಅತ್ಯಂತ ಶ್ರೇಷ್ಠನೆಂದೂ ಬಹುಕಾಲದಿಂದ ನೀನು ನನಗೆ ವೈರಿಯೆಂದು ತಿಳಿದಿರುತ್ತೇನೆ. ನಮಗೆ ಮಾಡಿದ ಮೋಸಗಳ ಸುದಾರುಣ ಫಲವನ್ನು ಇಂದು ನೋಡು! ಇಂದು ನಿನಗೆ ನಿನ್ನ ಪೂರ್ವ ಪಿತಾಮಹರ ದರ್ಶನ ಮಾಡಿಸುತ್ತೇನೆ.”

ಹೀಗೆ ಶತ್ರುಘಾತಿ ಬೀಭತ್ಸುವು ಹೇಳುತ್ತಿದ್ದುದನ್ನು ಕೇಳಿಯೂ ರಥಯೂಥಪ ಸುಶರ್ಮನು ಪೌರುಷದ ಮಾತುಗಳನ್ನು ಏನನ್ನೂ ಶುಭವಾಗಲೀ ಅಶುಭವಾಗಲೀ ಆಡಲಿಲ್ಲ. ಅನೇಕ ರಾಜರಿಂದ ಆವೃತನಾಗಿ ವೀರ ಅರ್ಜುನನನ್ನು ಮುಂದಿನಿಂದ, ಹಿಂದಿನಿಂದ, ಬದಿಗಳಿಂದ ಮತ್ತು ಎಲ್ಲ ಕಡೆಗಳಿಂದ ಸುತ್ತುವರೆದು ಯುದ್ಧದಲ್ಲಿ ಧೃತರಾಷ್ಟ್ರ ಪುತ್ರರೊಡನೆ ಅರ್ಜುನನನ್ನು ಮೇಘಗಳು ದಿವಾಕರನನ್ನು ಹೇಗೋ ಹಾಗೆ ಶರಗಳಿಂದ ಮುಚ್ಚಿಬಿಟ್ಟನು. ಆಗ ಕೌರವರ ಮತ್ತು ಪಾಂಡವರ ನಡುವೆ ರಕ್ತದ ನೀರು ಹರಿದ ಮಹಾ ಸಂಗ್ರಾಮವು ನಡೆಯಿತು.

ಶರಗಳಿಂದ ಹೊಡೆಯಲ್ಪಟ್ಟ ಬಲಶಾಲಿ ಧನಂಜಯನು ಕಾಲಿನಿಂದ ತುಳಿಯಲ್ಪಟ್ಟ ನಾಗದಂತೆ ನಿಟ್ಟುಸಿರು ಬಿಡುತ್ತಾ ನಕ್ಕು ರಣದಲ್ಲಿ ಒಂದೊಂದೇ ಬಾಣಗಳಿಂದ ಮಹಾರಥರ ಚಾಪಗಳನ್ನು ಕತ್ತರಿಸಿದನು. ರಣದಲ್ಲಿ ಆ ವೀರ್ಯವಂತ ರಾಜರ ಧನುಸ್ಸುಗಳನ್ನು ಕ್ಷಣಮಾತ್ರದಲ್ಲಿ ಕತ್ತರಿಸಿ ಅವರನ್ನು ಉಳಿಸಬಾರದೆಂದು ನಿಶ್ಚಯಿಸಿ ಬಾಣಗಳಿಂದ ಹೊಡೆದನು. ಶಕ್ರಸುತನಿಂದ ಹೊಡೆಯಲ್ಪಟ್ಟ ಅವರು ರಕ್ತದಿಂದ ತೋಯ್ದು, ಗಾಯಗೊಂಡ ಶರೀರವುಳ್ಳವರಾಗಿ, ಶಿರಗಳು ತುಂಡಾಗಿ,

ಅಸುವನ್ನು ನೀಗಿ, ಕವಚಗಳು ಕಳಚಿ ಕೆಳಗೆ ಬಿದ್ದರು. ಪಾರ್ಥನ ಬಲದಿದ ಪರಾಜಿತರಾಗಿ ಅವರು ವಿಚಿತ್ರರೂಪಗಳಲ್ಲಿ ನೆಲದ ಮೇಲೆ ಬಿದ್ದು ಒಂದೇ ಬಾರಿಗೆ ವಿನಾಶಹೊಂದಿದರು. ರಾಜಪುತ್ರರು ಯುದ್ಧದಲ್ಲಿ ಹತರಾದುದನ್ನು ನೋಡಿ ತ್ರಿಗರ್ತರಾಜನು ಕ್ಷಣದಲ್ಲಿ ಆಗಮಿಸಿದನು. ಅವರ ರಥಗಳ ಹಿಂಬಾಗದಲ್ಲಿದ್ದ ಮೂವತ್ತೆರಡು ರಕ್ಷಕರೂ ಸೇರಿ ಪಾರ್ಥನ ಮೇಲೆ ಎರಗಿದರು. ಅವರು ಪಾರ್ಥನನ್ನು ಸುತ್ತುವರೆದು ಘೋರವಾಗಿ ಶಬ್ಧಮಾಡುವ ಚಾಪಗಳನ್ನು ಸೆಳೆದು ಮೋಡಗಳು ಮಳೆಯಿಂದ ಪರ್ವತವನ್ನು ಮುಚ್ಚುವಂತೆ ಬಾಣಗಳ ಮಳೆಯನ್ನು ಸುರಿಸಿ ಪಾರ್ಥನನ್ನು ಮುಚ್ಚಿದರು. ಆ ಶರಗಳ ಗುಂಪುಗಳ ಮಳೆಯಿಂದ ಪೀಡಿತನಾದ ಧನಂಜಯನು ರೋಷಗೊಂಡವನಾಗಿ ಎಣ್ಣೆಯಲ್ಲಿ ಅದ್ದಿದ್ದ ಅರವತ್ತು ಶರಗಳಿಂದ ಆ ರಥದ ಹಿಂಬಾಗದ ರಕ್ಷಕರನ್ನು ಹೊಡೆದು ಉರುಳಿಸಿದನು. ಅರವತ್ತು ರಥರನ್ನು ಸೋಲಿಸಿ ಯಶಸ್ವೀ ಧನಂಜಯನು ಸಂತೋಷಗೊಂಡನು. ಜಿಷ್ಣುವು ರಾಜರ ಸೇನೆಯನ್ನು ಸಂಹರಿಸಿ ಭೀಷ್ಮನ ವಧೆಗೆ ತ್ವರೆಮಾಡಿದನು.

ತ್ರಿಗರ್ತರಾಜನು ತನ್ನ ಬಂಧುವರ್ಗದ ಮಹಾರಥರು ನಿಹತರಾದುದನ್ನು ನೋಡಿ ಉಳಿದ ನರಾಧಿಪರನ್ನು ಕರೆದುಕೊಂಡು ಪಾರ್ಥನ ವಧೆಗಾಗಿ ತ್ವರೆಮಾಡಿ ಧಾವಿಸಿದನು. ಅಸ್ತ್ರಭೃಥರಲ್ಲಿ ವರಿಷ್ಠರು ಧನಂಜಯನನ್ನು ಆಕ್ರಮಣಿಸಿದುದನ್ನು ನೋಡಿ ಶಿಖಂಡಿಯೇ ಮೊದಲಾದವರು ಹರಿತ ಶಸ್ತ್ರಗಳನ್ನು ಹಿಡಿದು ಅವನನ್ನು ರಕ್ಷಿಸಲು ಅರ್ಜುನನ ರಥದ ಬಳಿ ಬಂದರು. ಪಾರ್ಥನಾದರೋ ಮೇಲೆ

ಬೀಳುತ್ತಿರುವ ತ್ರಿಗರ್ತರಾಜನೊಡನಿದ್ದ ನರವೀರರನ್ನು ನೋಡಿ, ಗಾಂಡೀವದಿಂದ ಪ್ರಯೋಗಿಸಿದ ನಿಶಿತ ಶರಗಳಿಂದ ಆ ಧನುಷ್ಮಂತರನ್ನು ವಿಧ್ವಂಸಗೊಳಿಸಿ, ಭೀಷ್ಮನಿದ್ದಲ್ಲಿಗೆ ಹೋಗುವಾಗ ರಾಜ ದುರ್ಯೋಧನ ಮತ್ತು ಸೈಂಧವನೇ ಮೊದಲಾದವರನ್ನು ನೋಡಿದನು. ತನ್ನನ್ನು ತಡೆಯುತ್ತಿದ್ದ ಅವರೊಡನೆ ಮುಹೂರ್ತಕಾಲ ಬಲದಿಂದ ಹೋರಾಡಿ ಆ ವೀರ ಅನಂತವೀರ್ಯ ಭೀಮಬಲ ಮನಸ್ವಿಯು  ಜಯದ್ರಥಾದಿ ಮಹಾ ತೇಜಸ್ವಿ ನೃಪರನ್ನು ಅಲ್ಲಿಯೇ ಬಿಟ್ಟು, ಶರಚಾಪಗಳನ್ನು ಹಿಡಿದು ಗಾಂಗೇಯನಿದ್ದಲ್ಲಿಗೆ ಬಂದನು.

ಉಗ್ರಬಲ ಅನಂತಕೀರ್ತಿ ಮಹಾತ್ಮ ಯುಧಿಷ್ಠಿರನು ಯುದ್ಧದಲ್ಲಿ ತನ್ನ ಪಾಲಿಗೆ ಬಂದಿದ್ದ ಮದ್ರಾಧಿಪನನ್ನು ಅಲ್ಲಿಯೇ ಬಿಟ್ಟು ಕೋಪಗೊಂಡು ತ್ವರೆಮಾಡಿ ಮಾದ್ರೀಸುತರು ಮತ್ತು ಭೀಮಸೇನರನ್ನೊಡಗೂಡಿ ಭೀಷ್ಮ ಶಾಂತನವನೊಂದಿಗೆ ಯುದ್ಧಮಾಡಲು ಧಾವಿಸಿದನು. ಅವರೆಲ್ಲ ಮಹಾರಥ ಉಗ್ರ ಪಾಂಡುಸುತರು ಒಟ್ಟಾಗಿ ಏಕಕಾಲದಲ್ಲಿ ಸಮರಕ್ಕೆ ಬಂದರೂ ಕೂಡ ಚಿತ್ರಯೋಧಿ, ಮಹಾತ್ಮ ಗಂಗಾಸುತ ಶಾಂತನವನು ವಿವ್ಯಥನಾಗಲಿಲ್ಲ. ಆಗ ಸತ್ಯಸಂಧ, ಉಗ್ರಬಲ, ಮನಸ್ವೀ ರಾಜಾ ಜಯದ್ರಥನು ಉತ್ತಮ ಧನುಸ್ಸಿನಿಂದ ಆ ಮಹಾರಥರ ಚಾಪಗಳನ್ನು ಕತ್ತರಿಸಿ ಜೋರಾಗಿ ನಕ್ಕನು. ಕ್ರೋಧವೆಂಬ ವಿಷವನ್ನೇ ಕಾರುತ್ತಿದ್ದ ಮಹಾತ್ಮಾ ದುರ್ಯೋಧನನು ಯುಧಿಷ್ಠಿರ, ಭೀಮಸೇನ, ಯಮಳರು ಮತ್ತು ಪಾರ್ಥನನ್ನು ಯುದ್ಧದಲ್ಲಿ ಅಗ್ನಿಯಂತೆ ಪ್ರಕಾಶಮಾನ ಬಾಣಗಳಿಂದ ಪ್ರಹರಿಸಿದನು. ದೈತ್ಯಗಣಗಳಿಂದ ಒಟ್ಟಿಗೇ

ಪ್ರಹೃತರಾದ ದೇವಗಣಗಳಂತೆ ಅವರು ಕೋಪಿಷ್ಟರಾಗಿದ್ದ ಕೃಪ, ಶಲ್ಯ, ಶಲ, ಮತ್ತು ಚಿತ್ರಸೇನರ ಶರಗಳಿಂದ ಪ್ರಹರಿತರಾದರು.

ಶಾಂತನವನಿಂದ ಶಿಖಂಡಿಯ ಆಯುಧವು ತುಂಡಾಗಿರುವುದನ್ನು ನೋಡಿ ಕೋಪಗೊಂಡ ಮಹಾತ್ಮ ಅಜಾತಶತ್ರುವು ಸಮರದಲ್ಲಿ ಶಿಖಂಡಿಗೆ ಈ ಕ್ರುದ್ಧ ಮಾತುಗಳನ್ನಾಡಿದನು:

> "ಆಗ ನೀನು ನಿನ್ನ ತಂದೆಯ ಎದಿರು "ಮಹಾವ್ರತ ಭೀಷ್ಮನನ್ನು ವಿಮಲಾರ್ಕವರ್ಣದ ಶರಸರಣಿಗಳಿಂದ ಕೊಲ್ಲುತ್ತೇನೆ. ಸತ್ಯವನ್ನೇ ಹೇಳುತ್ತೇನೆ" ಎಂದು ಪ್ರತಿಜ್ಞೆಯನ್ನು ಮಾಡಿದ್ದೆ. ಆದರೆ ಇದನ್ನು ನೀನು ಇನ್ನೂ ಸಫಲಗೊಳಿಸಲಿಲ್ಲ. ದೇವವ್ರತನನ್ನು ಯುದ್ಧದಲ್ಲಿ ನೀನು ಕೊಲ್ಲುತ್ತಿಲ್ಲ. ಮಿಥ್ಯಾಪ್ರತಿಜ್ಞನಾಗಬೇಡ. ಧರ್ಮವನ್ನೂ ಕುಲದ ಕೀರ್ತಿಯನ್ನೂ ರಕ್ಷಿಸು. ಭೀಮವೇಗದಿಂದ ಯುದ್ಧಮಾಡುತ್ತಿರುವ, ನನ್ನ ಸೈನ್ಯ ಸಂಘಗಳೆಲ್ಲವನ್ನೂ ಸುಡುತ್ತಿರುವ, ಕಾಲನಂತೆ ತಿಗ್ಮತೇಜಸ್ವೀ ಬಾಣಜಾಲಗಳಿಂದ ಕ್ಷಣದಲ್ಲಿ ಮೃತ್ಯುವನ್ನೀಡುತ್ತಿರುವ ಈ ಭೀಷ್ಮನನ್ನು ನೋಡು! ಶಾಂತನವನಿಂದ ಚಾಪವನ್ನು ತುಂಡರಿಸಿಕೊಂಡು, ಸಮರದಲ್ಲಿ ಅನಪೇಕ್ಷನಾಗಿ, ಪರಾಜಿತನಾಗಿ, ಬಂಧುಗಳು ಮತ್ತು ಸೋದರರರನ್ನು ಬಿಟ್ಟು ನೀನು ಎಲ್ಲಿಗೆ ತಾನೆ ಹೋಗುವೆ? ಇದು ನಿನಗೆ ಅನುರೂಪವಾದುದೆಂದು ಅಂದುಕೊಳ್ಳುವುದಿಲ್ಲ.

ದ್ರುಪದನ ಮಗನೇ! ಅನಂತವೀರ್ಯನಾದ ಭೀಷ್ಮನು ಸೈನ್ಯವನ್ನು ಭಗ್ನಗೊಳಿಸಿ ಪಲಾಯನಗೊಳಿಸುತ್ತಿರುವುದನ್ನು ನೋಡಿ ನೀನೂ ಕೂಡ ಭಯಪಟ್ಟಿದ್ದೀಯೆ. ಆದುದರಿಂದ ನಿನ್ನ ಮುಖವು ಬಣ್ಣವನ್ನು ಕಳೆದುಕೊಂಡು ಅಪ್ರಹೃಷ್ಟನಾಗಿರುವೆ. ಮಹಾಹವದಲ್ಲಿ ತೊಡಗಿರುವ ಧನಂಜಯನು ಎಲ್ಲಿದ್ದಾನೆಂದು ತಿಳಿಯದೇ ಇರುವಾಗ ಬೀಷ್ಮನ ಸಂಹಾರಕನೆಂದು ಭುವಿಯಲ್ಲಿಯೇ ಪ್ರಸಿದ್ಧನಾಗಿರುವ ನೀನು ಇಂದು ಹೇಗೆ ತಾನೇ ಭಯಪಡುತ್ತಿರುವೆ?"

ಧರ್ಮರಾಜನ ಕಠೋರಶಬ್ಧಗಳನ್ನು ಕೂಡಿದ್ದ, ವಿರೋಧಿಸುವ ಭಾವದಿಂದ ಕೂಡಿದ್ದ ಆ ಮಾತನ್ನು ಕೇಳಿ ಅದನ್ನೇ ಆದೇಶವೆಂದು ತಿಳಿದು ಆ ಮಹಾತ್ಮನು ಭೀಷ್ಮನ ವಧೆಗೆ ತ್ವರೆಮಾಡಿದನು. ಮಹಾವೇಗದಿಂದ ಭೀಷ್ಮನನ್ನು ಆಕ್ರಮಣಿಸಲು ಬರುತ್ತಿದ್ದ ಶಿಖಂಡಿಯನ್ನು ಶಲ್ಯನು ಸುದುರ್ಜಯ ಘೋರ ಶಸ್ತ್ರಗಳಿಂದ ತಡೆದನು. ಯುಗಾಂತದ ಅಗ್ನಿಯ ಸಮನಾದ ಪ್ರಭೆಯನ್ನುಳ್ಳ ಉರಿಯುತ್ತಿರುವ ಅಸ್ತ್ರವನ್ನು ನೋಡಿಯೂ ಕೂಡ ಮಹೇಂದ್ರನಂತಹ ಪ್ರಭಾವವುಳ್ಳ ದ್ರುಪದನ ಮಗನು ಭ್ರಾಂತಗೊಳ್ಳಲಿಲ್ಲ. ಮಹಾಧನುಷ್ಮಂತನು ಆ ಅಸ್ತ್ರಗಳನ್ನು ಪ್ರತಿಬಂಧಿಸುತ್ತಾ ಅಲ್ಲಿಯೇ ನಿಂತಿದ್ದನು. ಶಿಖಂಡಿಯು ಆ ಅಸ್ತ್ರವನ್ನು ಪ್ರತಿಘಾತಿಗೊಳಿಸಲು ಅನ್ಯ ವಾರುಣಾಸ್ತ್ರವನ್ನು ತೆಗೆದುಕೊಂಡು ಆ ಅಸ್ತ್ರದಿಂದ ಅದನ್ನು ನಿವಾರಿಸಿದುದನ್ನು ಆಕಾಶದಲ್ಲಿ ನಿಂತಿದ್ದ ಸುರರೂ ಪರ್ಥಿವರೂ ನೋಡಿದರು. ಭೀಷ್ಮನಾದರೋ ವೀರ

ಪಾಂಡುಸುತ ಅಜಮೀಢ ರಾಜ ಯುಧಿಷ್ಠಿರನ ಸುಚಿತ್ರ ಧನುಸ್ಸನ್ನೂ ಧ್ವಜವನ್ನೂ ತುಂಡರಿಸಿ ಗರ್ಜಿಸಿದನು. ಆಗ ಬಾಣಗಳೊಂದಿಗೆ ಧನುಸ್ಸನ್ನು ಅಲ್ಲಿಯೇ ಬಿಸುಟು ಭಯಭೀತನಾದ ಯುಧಿಷ್ಠಿರನನ್ನು ನೋಡಿ ಭೀಮಸೇನನು ಗದೆಯನ್ನು ಹಿಡಿದು ರಣಕ್ಕೆ ಧುಮುಕಿ ಕಾಲ್ನಡುಗೆಯಲ್ಲಿಯೇ ಜಯದ್ರಥನನ್ನು ಆಕ್ರಮಣಿಸಿದನು. ಮಹಾವೇಗದಿಂದ ಗದೆಯೊಂದಿಗೆ ಬೀಳುತ್ತಿದ್ದ ಭೀಮಸೇನನನ್ನು ಜಯದ್ರಥನು ಯಮದಂಡಗಳಂತೆ ಘೋರವಾಗಿರುವ ಐದುನೂರು ನಿಶಿತ ಶರಗಳಿಂದ ಎಲ್ಲ ಕಡೆಗಳಲ್ಲಿ ಪ್ರಹರಿಸಿದನು.

ಆ ಬಾಣಗಳ ಕುರಿತು ಚಿಂತಿಸದೇ ಕ್ರೋಧದಿಂದ ಚೇತನವನ್ನೇ ಕಳೆದುಕೊಂಡಿದ್ದ ತರಸ್ವೀ ವೃಕೋದರನು ಸಮರದಲ್ಲಿ ಸಿಂಧುರಾಜನ ರಥಕ್ಕೆ ಕಟ್ಟಿದ್ದ ಆರಟ್ಟದಲ್ಲಿ ಹುಟ್ಟಿದ್ದ ಸಮಸ್ತ ಕುದುರೆಗಳನ್ನೂ ಕೊಂದನು. ಅದನ್ನು ನೋಡಿ ಸುರರಾಜನಂತೆ ಅಪ್ರತಿಮ ಪ್ರಭಾವಶಾಲಿಯಾದ ಚಿತ್ರಸೇನನು ಭೀಮಸೇನನನ್ನು ವಧಿಸುವ ಸಲುವಾಗಿ ತ್ವರೆಮಾಡಿ ರಥದಲ್ಲಿ ಕುಳಿತು ಅಸ್ತ್ರವನ್ನು ಹಿಡಿದು ಧಾವಿಸಿದನು. ಆಗ ಭೀಮಸೇನನು ಜೋರಾಗಿ ಕೂಗಿ ಯಮದಂಡದಂತಿರುವ ಆ ಗದೆಯನ್ನು ಮೇಲಕ್ಕೆತ್ತಿ ಪ್ರತಿಯುದ್ಧದ ಬೆದರಿಕೆಯನ್ನು ಹಾಕುತ್ತಾ ಎದುರಾದನು. ಅದನ್ನು ನೋಡಿ ಸುತ್ತಲೂ ಇದ್ದ ಕುರುಗಳು ಉಗ್ರನಾದ ಚಿತ್ರಸೇನನನ್ನು ಬಿಟ್ಟು ಮೇಲೆಬೀಳುವ ಗದೆಯಿಂದ ತಪ್ಪಿಸಿಕೊಳ್ಳಲು ಪಲಾಯನಗೈದರು.  ಅತ್ಯಂತ ಮೋಹಕರವಾದ ದಾರುಣವಾದ ಮತ್ತು ಘೋರ ಯುದ್ಧದಲ್ಲಿ

ಮಹಾಗದೆಯು ತನ್ನ ಮೇಲೆ ಬೀಳುತ್ತಿರುವುದನ್ನು ನಿರೀಕ್ಷಿಸಿಯೂ ಕೂಡ ಚಿತ್ರಸೇನನು ವಿಮೂಢನಾಗಲಿಲ್ಲ. ಅವನು ವಿಮಲ ಖಡ್ಗವನ್ನೂ ಗುರಾಣಿಯನ್ನೂ ಹಿಡಿದು ಪರ್ವತದ ಮೇಲಿಂದ ಸಿಂಹವು ಧುಮುಕುವಂತೆ ರಥವನ್ನು ಬಿಟ್ಟು ಧುಮುಕಿ ರಣಾಂಗಣದ ಮತ್ತೊಂದು ಕಡೆ ಹೊರಟುಹೋದನು. ಆಶ್ಚರ್ಯವನ್ನುಂಟುಮಾಡುವ ಅವನ ಆ ಮಹತ್ಕಾರ್ಯವನ್ನು ನೋಡಿಯೇ ಕೌರವರು ಸಂಪ್ರಹೃಷ್ಟರಾಗಿ ಎಲ್ಲರೂ ಒಟ್ಟಾಗಿ ಎಲ್ಲ ಕಡೆಗಳಿಂದಲೂ ಕೂಗಿ ಸೇನೆಗಳೊಂದಿಗೆ ಚಿತ್ರಸೇನನನ್ನು ಗೌರವಿಸಿದರು. ವಿರಥನಾಗಿದ್ದ ಮನಸ್ವಿ ಚಿತ್ರಸೇನನ ಬಳಿಬಂದು ಧೃತರಾಷ್ಟ್ರನ ಮಗ ವಿಕರ್ಣನು ಅವನನ್ನು ತನ್ನ ರಥದ ಮೇಲೆ ಏರಿಸಿಕೊಂಡನು.

## ಏಳನೆಯ ದಿವಸದ ಯುದ್ಧ ಸಮಾಪ್ತಿ

ಹೀಗೆ ತುಂಬಾ ತುಮುಲವಾಗಿದ್ದ ಸಂಕುಲ ಯುದ್ಧವು ನಡೆಯತ್ತಿರಲು ಶಾಂತನವ ಭೀಷ್ಮನು ಕೂಡಲೇ ಯುಧಿಷ್ಠಿರನ ಮೇಲೆ ಧಾಳಿ ಮಾಡಿದನು. ಆಗ ರಥ-ಆನೆ-ಕುದುರೆಗಳೊಂದಿಗೆ ಸೃಂಜಯರು ನಡುಗಿದರು. ಮತ್ತು ಯುಧಿಷ್ಠಿರನು ಮೃತ್ಯುವಿನ ದವಡೆಗೆ ಬಂದೇಬಿಟ್ಟನೆಂದು ಭಾವಿಸಿದರು. ಯುಧಿಷ್ಠಿರನಾದರೋ ಯಮಳರಿಬ್ಬರನ್ನೊಡಗೂಡಿ ಭೀಷ್ಮನನ್ನು ಎದುರಿಸಿದನು. ಪಾಂಡವನು ಸಹಸ್ರಾರು ಬಾಣಗಳನ್ನು ಪ್ರಯೋಗಿಸಿ ಮೇಘಗಳು ದಿವಾಕರನನ್ನು ಹೇಗೋ ಹಾಗೆ ಭೀಷ್ಮನನ್ನು ಮರೆಮಾಡಿದನು. ಅವನಿಂದ

ಬೀಳುತ್ತಿರುವ ನೂರಾರು ಸಹಸ್ರಾರು ಶರಜಾಲಗಳೆಲ್ಲವನ್ನೂ ಗಾಂಗೇಯನು ಸ್ವೀಕರಿಸಿದನು. ಹಾಗೆಯೇ ಭೀಷ್ಮನು ಬಿಟ್ಟ ಶರಶಾಲಗಳು ಆಕಾಶದಲ್ಲಿ ಹಾರಾಡುವ ಬೆಳ್ಳಕ್ಕಿಯ ಸಾಲುಗಳಂತೆ ಕಂಡವು. ನಿಮಿಷಾರ್ಧದಲ್ಲಿ ಭೀಷ್ಮನ ಶರಜಾಲಗಳಿಂದ ಕೌಂತೇಯನು ಕಾಣದಂತಾದನು. ಆಗ ಯುಧಿಷ್ಠಿರನು ಕೌರವ್ಯನ ಮೇಲೆ ಕ್ರುದ್ಧ ಸರ್ಪಗಳ ವಿಷಗಳಂತಿರುವ ನಾರಾಚಗಳನ್ನು ಪ್ರಯೋಗಿಸಿದನು. ಅವನ ಧನುಸ್ಸನ್ನು ಬಿಟ್ಟು ತಲುಪುವುದರೊಳಗೇ ಭೀಷ್ಮನು ಅದನ್ನು ಕ್ಷುರಪ್ರದಿಂದ ತುಂಡರಿಸಿದನು. ಅದನ್ನು ತುಂಡರಿಸಿ ಭೀಷ್ಮನು ಕಾಲಸಮ್ಮಿತವಾದ ನಾರಾಚದಿಂದ ಕೌರವೇಂದ್ರನ ಕಾಂಚನಭೂಷಿತ ಕುದುರೆಗಳನ್ನು ಸಂಹರಿಸಿದನು. ಒಡನೆಯೇ ಕುದುರೆಗಳು ಹತವಾದ ರಥವನ್ನು ತ್ಯಜಿಸಿ ಧರ್ಮಪುತ್ರ ಯುಧಿಷ್ಠಿರನು ಮಹಾತ್ಮ ನಕುಲನ ರಥವನ್ನೇರಿದನು.

ಆಗ ಪರಪುರಂಜಯ ಭೀಷ್ಮನು ಎದುರಾದ ಯಮಳರನ್ನೂ ಕೂಡ ಸಂಕ್ರುದ್ಧನಾಗಿ ಶರಗಳಿಂದ ಮುಚ್ಚಿದನು. ಅವರಿಬ್ಬರೂ ಭೀಷ್ಮನ ಬಾಣಗಳಿಂದ ಪೀಡಿತರಾದುದನ್ನು ನೋಡಿ ಭೀಷ್ಮನ ವಧೆಯನ್ನು ಬಯಸಿ ಯುಧಿಷ್ಠಿರನು ಪರಮ ಚಿಂತೆಗೊಳಗಾದನು. ಆಗ ಯುಧಿಷ್ಠಿರನು ತನ್ನ ವಶದಲ್ಲಿದ್ದ ರಾಜರನ್ನು ಸ್ನೇಹಿತ ಗಣಗಳನ್ನು "ಎಲ್ಲರೂ ಭೀಷ್ಮ ಶಾಂತನವನನ್ನು ಸಂಹರಿಸಿರಿ!" ಎಂದು ಕೂಗಿ ಹುರಿದುಂಬಿಸಿದನು. ಪಾರ್ಥನಾಡಿದುದನ್ನು ಕೇಳಿ ಸರ್ವ ಪಾರ್ಥಿವರೂ ಮಹಾ ರಥಸಮೂಹಗಳಿಂದ ಪಿತಾಮಹನನ್ನು ಸುತ್ತುವರೆದರು.

ಅವರಿಂದ ಎಲ್ಲಕಡೆಗಳಿಂದಲೂ ಸುತ್ತುವರೆಯಲ್ಪಟ್ಟಿದ್ದ ದೇವವ್ರತನು ಧನುಸ್ಸಿನೊಂದಿಗೆ ಆಟವಾಡುತ್ತಾ ಮಹಾರಥರನ್ನು ಉರುಳಿಸತೊಡಗಿದನು. ವನದಲ್ಲಿ ಮೃಗಗಳ ಮಧ್ಯೆ ಪ್ರವೇಸಿಸಿದ ಸಿಂಹದ ಮರಿಯಂತೆ ರಣದಲ್ಲಿ ಸಂಚರಿಸಿ ಯುದ್ಧಮಾಡುತ್ತಿದ್ದ ಕೌರವನನ್ನು ಪಾರ್ಥರು ನೋಡಿದರು. ಸಿಂಹವನ್ನು ನೋಡಿದ ಮೃಗಗಣವು ಭಯಪಡುವಂತೆ ಆ ಶೂರರು ಅವನ ಸಾಯಕಗಳಿಂದ ಭಯಪಟ್ಟರು. ವಾಯುವಿನ ಸಹಾಯದಿಂದ ಅಗ್ನಿಯು ಹೇಗೆ ಒಣಹುಲ್ಲನ್ನು ದಹಿಸುತ್ತದೆಯೋ ಹಾಗೆ ಭರತಸಿಂಹನು ಮಾಡುತ್ತಿರುವುದನ್ನು ಕ್ಷತ್ರಿಯರು ನೋಡಿದರು. ಕುಶಲ ನರ ಭೀಷ್ಮನು ಗಳಿತ ಹಣ್ಣುಗಳನ್ನು ತಾಳೆ ಮರದಿಂದ ಉದುರಿಸುವಂತೆ ರಥಿಗಳ ಶಿರಗಳನ್ನು ರಣದಲ್ಲಿ ಬೀಳಿಸಿದನು. ಭೂಮಿಯ ಮೇಲೆ ಶಿರಗಳು ಬೀಳುತ್ತಿರಲು ಕಲ್ಲುಗಳು ಉರುಳಿ ಬೀಳುವಂತೆ ತುಮುಲ ಶಬ್ಧವುಂಟಾಯಿತು.

ಹೀಗೆ ಸುದಾರುಣ ತುಮುಲ ಯುದ್ಧವು ನಡೆಯುತ್ತಿರಲು ಎಲ್ಲ ಸೈನ್ಯಗಳಲ್ಲಿಯೂ ಮಹಾ ಸಂಘರ್ಷಣೆಯು ಪ್ರಾರಂಭವಾಯಿತು. ಎರಡೂ ಪಕ್ಷಗಳ ವ್ಯೂಹಗಳು ಭಗ್ನವಾದ ನಂತರ ಕ್ಷತ್ರಿಯರು ಒಬ್ಬರನ್ನೊಬ್ಬರನ್ನು ಕರೆದು ಪರಸ್ಪರ ಯುದ್ಧಮಾಡತೊಡಗಿದರು. ಶಿಖಂಡಿಯಾದರೋ ಭಾರತರ ಪಿತಾಮಹನ ಬಳಿಸಾರಿ ವೇಗದಿಂದ ಆಕ್ರಮಣಿಸಿ “ನಿಲ್ಲು! ನಿಲ್ಲು!” ಎಂದು ಹೇಳಿದನು. ಆಗ ಭೀಷ್ಮನು ಶಿಖಂಡಿಯ ಸ್ತ್ರೀತ್ವವನ್ನು ಆಲೋಚಿಸಿ ಶಿಖಂಡಿಯನ್ನು ಅನಾದರಿಸಿ

ಕ್ರುದ್ಧನಾಗಿ ಸೃಂಜಯರ ಮೇಲೆ ಯುದ್ಧಕ್ಕೆ ಹೋದನು. ಮಹಾರಥ ಭೀಷ್ಮನನ್ನು ನೋಡಿ ಹೃಷ್ಟರಾದ ಸೃಂಜಯರು ಅನೇಕ ಶಂಖನಾದ ಮಿಶ್ರಿತ ವಿವಿಧ ಸಿಂಹನಾದಗೈದರು,

ಸೂರ್ಯನು ಅಪರ ದಿಕ್ಕನ್ನನುಸರಿಸಿ ಹೋಗುತ್ತಿರಲು ರಥಸಮೂಹಗಳ ಸಮ್ಮಿಶ್ರಣ ಯುದ್ಧವು ಪ್ರಾರಂಭವಾಯಿತು. ಆಗ ಪಾಂಚಾಲ್ಯ ಧೃಷ್ಟದ್ಯುಮ್ನ ಮತ್ತು ಮಹಾರಥ ಸಾತ್ಯಕಿಯರು ಶಕ್ತಿ-ತೋಮರ-ಋಷ್ಟಿಗಳಿಂದ ಸೈನ್ಯವನ್ನು ಬಹಳವಾಗಿ ಪೀಡಿಸುತ್ತಾ ಶಸ್ತ್ರಗಳಿಂದ ಅನೇಕ ಕೌರವರನ್ನು ಸಂಹರಿಸಿದರು. ಅವರು ಸಂಹರಿಸುತ್ತಿದ್ದರೂ ಆರ್ಯರಾದ ಕೌರವರು ಯುದ್ಧದಲ್ಲಿ ಮತಿಯನ್ನಿರಿಸಿ ರಣರಂಗವನ್ನು ಬಿಟ್ಟು ಹೋಗಲಿಲ್ಲ. ಆ ಮಹಾರಥರು ಉತ್ಸಾಹದಿಂದಲೇ ಯೋಧರನ್ನು ಸಂಹರಿಸಿದರು. ಮಹಾತ್ಮ ಪಾರ್ಷತನಿಂದ ವಧಿಸಲ್ಪಡುತ್ತಿದ್ದ ಕೌರವ ಮಹಾತ್ಮರಿಂದ ಮಹಾ ಆಕ್ರಂದನವು ಕೇಳಿಬರುತ್ತಿತ್ತು. ಕೌರವರ ಆ ಘೋರ ನಿನಾದವನ್ನು ಕೇಳಿ ಮಹಾರಥರಾದ ಅವಂತಿಯ ವಿಂದಾನುವಿಂದರು ಪಾರ್ಷತನನ್ನು ಎದುರಿಸಿದರು.

ಆ ಮಹಾರಥರು ಅವನ ಕುದುರೆಗಳನ್ನು ಸಂಹರಿಸಿ ಒಡನೆಯೇ ಶರವರ್ಷದಿಂದ ಪಾರ್ಷತನನ್ನು ಮುಚ್ಚಿದರು. ಕೂಡಲೇ ಮಹಾಬಲ ಪಾಂಚಾಲ್ಯನು ರಥದಿಂದ ಹಾರಿ ವೇಗವಾಗಿ ಮಹಾತ್ಮ ಸಾತ್ಯಕಿಯ ರಥವನ್ನೇರಿದನು. ಆಗ ರಾಜಾ ಯುಧಿಷ್ಠಿರನು ಮಹಾ ಸೇನೆಯಿಂದ

ಆವೃತನಾಗಿ ಕ್ರುದ್ಧನಾಗಿ ಪರಂತಪರಾದ ಅವಂತಿಯವರ ಮೇಲೆ ಧಾಳಿನಡೆಸಿದನು. ಹಾಗೆಯೇ ಧೃತರಾಷ್ಟ್ರ ಪುತ್ರರೂ ಕೂಡ ಎಲ್ಲರೂ ಒಟ್ಟಾಗಿ ಅವಂತಿಯ ವಿಂದಾನುವಿಂದರನ್ನು ಸುತ್ತುವರೆದು ನಿಂತರು. ಅರ್ಜುನನೂ ಕೂಡ ಸಂಕ್ರುದ್ಧನಾಗಿ ವಜ್ರಪಾಣಿಯು ಅಸುರರೊಂದಿಗೆ ಹೇಗೋ ಹಾಗೆ ಕ್ಷತ್ರಿಯರೊಂದಿಗೆ ಯುದ್ಧಮಾಡಿದನು. ದುರ್ಯೋಧನನಿಗೆ ಪ್ರಿಯವಾದುದನ್ನು ಮಾಡುತ್ತಾ ಕ್ರುದ್ಧನಾದ ದ್ರೋಣನೂ ಕೂಡ ಅಗ್ನಿಯು ಹತ್ತಿಯ ರಾಶಿಯನ್ನು ಹೇಗೋ ಹಾಗೆ ಸರ್ವ ಪಾಂಚಾಲರನ್ನು ವಧಿಸುತ್ತಿದ್ದನು. ದುರ್ಯೋಧನನನ್ನು ಮುಂದಿಟ್ಟುಕೊಂಡು ಧಾರ್ತರಾಷ್ಟ್ರರು ಭೀಷ್ಮನನ್ನು ಸುತ್ತುವರೆದು ಪಾಂಡವರೊಂದಿಗೆ ಯುದ್ಧಮಾಡಿದರು. ಸೂರ್ಯನು ಕೆಂಪುಬಣ್ಣಕ್ಕೆ ತಿರುಗುತ್ತಿರಲಾಗಿ ರಾಜಾ ದುರ್ಯೋಧನನು ಕೌರವರೆಲ್ಲರಿಗೆ "ಬೇಗ ಮುಗಿಸಿ!" ಎಂದು ಹೇಳಿದನು. ಆಗ ಅವರು ದುಷ್ಕರ ಕರ್ಮಮಾಡುತ್ತಾ ಯುದ್ಧಮಾಡುತ್ತಿರಲು ಭಾಸ್ಕರನು ಗಿರಿಯನ್ನೇರಿ ಅಸ್ತನಾಗಲು ಬೆಳಕೇ ಇಲ್ಲದಾಯಿತು.

ಸಾಯಂಕಾಲದ ಹೊತ್ತಿಗೆ ಕ್ಷಣದಲ್ಲಿ ರಕ್ತವೇ ಪ್ರವಾಹವಾಗಿದ್ದ ನರಿಗಳ ಸಮೂದಿಂದ ಕೂಡಿದ್ದ ಘೋರ ನದಿಯೇ ಹರಿಯತೊಡಗಿತು. ಮಂಗಳಕರವಾಗಿ ಭೈರವ ಸ್ವರದಲ್ಲಿ ಕೂಗುತ್ತಿದ್ದ ನರಿಗಳಿಂದ ಮತ್ತು ಭೂತಸಮೂಗಳಿಂದ ತುಂಬಿಹೋಗಿದ್ದ ರಣರಂಗವು ಘೋರವಾಗಿತ್ತು. ರಾಕ್ಷಸರು ಪಿಶಾಚಿಗಳು ಮತ್ತು ಇನ್ನೂ ಇತರ ಮಾಂಸಾಹಾರಿಗಳು ನೂರಾರು ಸಾವಿರಾರು ಸಂಖ್ಯೆಗಳಲ್ಲಿ ಎಲ್ಲಾಕಡೆ ಕಾಣಿಸಿಕೊಂಡವು. ಆಗ

ಅರ್ಜುನನು ಸಮರಮಧ್ಯದಲ್ಲಿ ಅನುಯಾಯಿ ರಾಜರೊಂದಿಗೆ ಸುಶರ್ಮನನ್ನು ಸೋಲಿಸಿ ತನ್ನ ಶಿಬಿರದ ಕಡೆ ನಡೆದನು. ಕೌರವ್ಯ ರಾಜಾ ಯುಧಿಷ್ಠಿರನೂ ಕೂಡ ರಾತ್ರಿಯಾಗಲು ತನ್ನ ಸಹೋದರರೊಂದಿಗೆ ಸೇನೆಗಳಿಂದ ಆವೃತನಾಗಿ ತನ್ನ ಶಿಬಿರಕ್ಕೆ ತೆರಳಿದನು. ಭೀಮಸೇನನೂ ಕೂಡ ದುರ್ಯೋಧನ ಪ್ರಮುಖ ರಥರನ್ನು ಯುದ್ಧದಲ್ಲಿ ಸೋಲಿಸಿ ತನ್ನ ಶಿಬಿರದ ಕಡೆ ನಡೆದನು. ನೃಪತಿ ದುರ್ಯೋಧನನೂ ಕೂಡ ಶಾಂತನವ ಭೀಷ್ಮನನ್ನು ಸುತ್ತುವರೆದು ವೇಗವಾಗಿ ಶಿಬಿರದ ಕಡೆ ಹೊರಟನು. ದ್ರೋಣ, ದ್ರೌಣಿ, ಕೃಪ, ಶಲ್ಯ ಮತ್ತು ಸಾತ್ವತ ಕೃತವರ್ಮ ಎಲ್ಲರೂ ಸೇನೆಗಳಿಂದ ಪರಿವೃತರಾಗಿ ಶಿಬಿರದ ಕಡೆ ತೆರಳಿದರು. ಅದೇ ರೀತಿ ಸಾತ್ಯಕಿ ಮತ್ತು ಪಾರ್ಷತ ಧೃಷ್ಟದ್ಯುಮ್ನರು ರಣದಲ್ಲಿ ಯೋಧರಿಂದೊಡಗೂಡಿ ಶಿಬಿರದ ಕಡೆ ನಡೆದರು.

ಹೀಗೆ ಪರಂತಪರಾದ ಕೌರವರು ಮತ್ತು ಪಾಂಡವರು ಒಟ್ಟಿಗೇ ನಿಶಾಕಾಲದಲ್ಲಿ ಹಿಂದಿರುಗಿದರು. ತಮ್ಮ ಶಿಬಿರಗಳಿಗೆ ತೆರಳಿ ಪಾಂಡವರು ಮತ್ತು ಕುರುಗಳು ಪರಸ್ಪರರನ್ನು ಹೊಗಳಿಕೊಳ್ಳುತ್ತಾ ವಿಶ್ರಾಂತಿಪಡೆದರು. ಆ ಶೂರರು ಯಥಾವಿಧಿಯಾಗಿ ತಮ್ಮ ತಮ್ಮ ಗುಲ್ಮಗಳನ್ನಿರಿಸಿ, ತಮಗೆ ಚುಚ್ಚಿಕೊಂಡಿದ್ದ ಬಾಣಗಳ ತುಂಡುಗಳನ್ನು ಕಿತ್ತು ತೆಗೆದುಹಾಕಿ ವಿವಿಧ ಜಲಗಳಿಂದ ಸ್ನಾನಮಾಡಿದರು. ಆಗ ಎಲ್ಲರೂ ಸ್ವಸ್ತಿಗಳನ್ನು ಮಾಡಿಸಿಕೊಂಡು, ವಂದಿಗಳು ಸ್ತುತಿಸಲು ಯಶಸ್ವಿಗಳು ಗೀತವಾದ್ಯಗಳ ಶಬ್ಧಗಳೊಂದಿಗೆ ರಮಿಸಿದರು.

ಮುಹೂರ್ತಕಾಲ ಅಲ್ಲಿ ಎಲ್ಲವೂ ಸ್ವರ್ಗಸನ್ನಿಭವಾಗಿತ್ತು. ಅಲ್ಲಿ ಮಹಾರಥರು ಯುದ್ಧದ ಕುರಿತು ಏನನ್ನೂ ಮಾತನಾಡಿಕೊಳ್ಳಲಿಲ್ಲ. ಅನೇಕ ಆನೆ-ಕುದುರೆಗಳಿಂದ ಕೂಡಿದ್ದ ಆ ಸೇನೆಗಳಲ್ಲಿ ಆಯಾಸಗೊಂಡ ಜನರು ಅಲ್ಲಿ ಮಲಗಿರಲು ಅದು ಪ್ರೇಕ್ಷಣೀಯವಾಗಿ ಕಂಡಿತು.

# ಎಂಟನೆಯ ದಿನದ ಯುದ್ಧ

ಕೌರವರ ಮತ್ತು ಪಾಂಡವರ ಕಡೆಯ ಜನೇಶ್ವರರು ಆ ರಾತ್ರಿಯಲ್ಲಿ ಸುಖವಾಗಿ ಮಲಗಿ ಬೆಳಗಾಗುತ್ತಲೇ ಪುನಃ ಯುದ್ಧಕ್ಕೆ ತೆರಳಿದರು. ಯುದ್ಧಕ್ಕೆ ಹೊರಡುವ ಆ ಎರಡೂ ಸೇನೆಗಳಲ್ಲಿ ಮಹಾಸಾಗರದ ಭೋರ್ಗರೆತದಂತೆ ಮಹಾ ಶಬ್ಧವುಂಟಾಯಿತು. ಆಗ ಕೌರವರ ಮಹಾಸೇನೆಯ ರಾಜ ದುರ್ಯೋಧನ, ಚಿತ್ರಸೇನ, ವಿವಿಂಶತಿ, ರಥಿಗಳಲ್ಲಿ ಶ್ರೇಷ್ಠ ಭೀಷ್ಮ, ದ್ವಿಜ ಭಾರದ್ವಾಜ ಇವರೆಲ್ಲರೂ ಸಂಘಟಿತರಾಗಿ ಸುಸನ್ನದ್ಧರಾಗಿ ಪಾಂಡವರೊಂದಿಗೆ ಯುದ್ಧಮಾಡಲು ಕವಚಗಳನ್ನು ಧರಿಸಿ ವ್ಯೂಹವನ್ನು ರಚಿಸಿದರು. ಭೀಷ್ಮನು ಸಾಗರದಂತೆ ಘೋರವಾಗಿರುವ ವಾಹನಗಳೇ ಅಲೆಗಳಾಗಿರುವ ಮಹಾವ್ಯೂಹವನ್ನು ರಚಿಸಿದನು. ಸರ್ವ ಸೇನೆಗಳ ಅಗ್ರಭಾಗದಲ್ಲಿ ಭೀಷ್ಮ ಶಾಂತನವನು ಮಾಲವ, ದಾಕ್ಷಿಣಾತ್ಯರು, ಮತ್ತು ಅವಂತಿಯವರಿಂದ ಸುತ್ತುವರೆಯಲ್ಪಟ್ಟು ಹೊರಟನು. ಅವನ ನಂತರದಲ್ಲಿ ಪುಲಿಂದರು, ಪಾರದರು ಮತ್ತು ಕ್ಷುದ್ರಕಮಾಲರೊಂದಿಗೆ ಪ್ರತಾಪವಾನ್

ಭಾರದ್ವಾಜನಿದ್ದನು. ದ್ರೋಣನ ನಂತರದಲ್ಲಿ ಪ್ರತಾಪವಾನ್ ಭಗದತ್ತನು ಮಾಗಧ, ಕಲಿಂಗ ಮತ್ತು ಪಿಶಾಚರೊಂದಿಗೆ ಹೊರಟನು. ಪ್ರಾಗ್ಜ್ಯೋತಿಷರಾಜನನ್ನು ಅನುಸರಿಸಿ ಕೋಸಲದ ರಾಜ ಬೃಹದ್ಬಲನು ಮೇಕಲ, ತ್ರಿಪುರ ಮತ್ತು ಚಿಚ್ಛಿಲರಿಂದ ಕೂಡಿಕೊಂಡು ಹೋದನು. ಬೃಹದ್ಬಲನ ನಂತರ ಪ್ರಸ್ಥಲಾಧಿಪ ಶೂರ ತ್ರಿಗರ್ತನು ಅನೇಕ ಕಾಂಬೋಜರಿಂದ ಮತ್ತು ಸಹಸ್ರಾರು ಯವನರಿಂದ ಕೂಡಿಕೊಂಡು ಹೊರಟನು. ತ್ರಿಗರ್ತನನ್ನು ಅನುಸರಿಸಿ ಶೂರ ದ್ರೌಣಿಯು ರಭಸದಿಂದ ಸಿಂಹನಾದದಿಂದ ಧರಾತಲವನ್ನು ಮೊಳಗಿಸುತ್ತಾ ನಡೆದನು. ಹಾಗೆಯೇ ದ್ರೌಣಿಯ ನಂತರ ರಾಜಾ ದುರ್ಯೋಧನನು ಸೋದರರಿಂದ ಪರಿವಾರಿತನಾಗಿ ಸರ್ವ ಸೈನ್ಯದೊಂದಿಗೆ ಹೊರಟನು. ದುರ್ಯೋಧನನನ್ನು ಅನುಸರಿಸಿ ಶಾರದ್ವತ ಕೃಪನು ಹೊರಟನು. ಹೀಗೆ ಸಾಗರೋಪಮವಾಗಿದ್ದ ಮಹಾವ್ಯೂಹವು ಹೊರಟಿತು.

ಅಲ್ಲಿ ಪತಾಕೆಗಳು ಶ್ವೇತ ಚತ್ರಗಳು, ಬಹುಮೂಲ್ಯದ ಚಿತ್ರ-ವಿಚಿತ್ರವಾದ ಭುಜಬಂದಿಗಳೂ, ಧನುಸ್ಸುಗಳೂ ಪ್ರಕಾಶಿಸಿದವು. ಕೌರವರ ಆ ಮಹಾವ್ಯೂಹವನ್ನು ನೋಡಿ ಮಹಾರಥ ಯುಧಿಷ್ಠಿರನು ತಕ್ಷಣವೇ ಪೃತನಾಪತಿ ಪಾರ್ಷತನಿಗೆ ಹೇಳಿದನು: “ಮಹೇಷ್ವಾಸ! ಸಾಗರದಂತೆ ನಿರ್ಮಿತವಾಗಿರುವ ವ್ಯೂಹವನ್ನು ನೋಡು! ತಡಮಾಡದೇ ನೀನೂ ಕೂಡ ಅದಕ್ಕೆ ಪ್ರತಿಯಾದ ವ್ಯೂಹವನ್ನು ರಚಿಸು.”

ಆಗ ಶೂರ ಪಾರ್ಷತನು ಪರವ್ಯೂಹವನ್ನು ನಾಶಪಡಿಸಬಲ್ಲ

ಸುದಾರುಣವಾದ ಶೃಂಗಾಟಕ ವ್ಯೂಹವನ್ನು ರಚಿಸಿದನು. ಎರಡೂ ಶೃಂಗಗಳಲ್ಲಿ ಅನೇಕ ಸಹಸ್ರ ರಥಿಗಳಿಂದ ಮತ್ತು ಅಶ್ವಾರೋಹಿ-ಪದಾತಿಸೇನೆಗಳೊಂದಿಗೆ ಮಹಾರಥಿ ಭೀಮಸೇನ-ಸಾತ್ಯಕಿಯರಿದ್ದರು. ನಾಭಿಭಾಗದಲ್ಲಿ ನರಶ್ರೇಷ್ಠ ಶ್ವೇತಾಶ್ವ ವಾನರಧ್ವಜನಿದ್ದನು. ಮಧ್ಯದಲ್ಲಿ ರಾಜ ಯುಧಿಷ್ಠಿರ ಮತ್ತು ಇಬ್ಬರು ಮಾದ್ರೀಪುತ್ರ ಪಾಂಡವರಿದ್ದರು. ಇತರ ಮಹೇಷ್ವಾಸ ವ್ಯೂಹಶಾಸ್ತ್ರ ವಿಶಾರದ ನರಾಧಿಪರು ವ್ಯೂಹವನ್ನು ಪೂರೈಸಿದರು. ಅವರ ನಂತರ ಅಭಿಮನ್ಯು, ಮಹಾರಥ ವಿರಾಟ, ಸಂಹೃಷ್ಟರಾದ ದ್ರೌಪದೇಯರು ಮತ್ತು ರಾಕ್ಷಸ ಘಟೋತ್ಕಚರಿದ್ದರು. ಹೀಗೆ ಶೂರ ಪಾಂಡವರು ಮಹಾವ್ಯೂಹವನ್ನು ರಚಿಸಿಕೊಂಡು ಜಯವನ್ನು ಬಯಸಿ ಯುದ್ಧಮಾಡಲು ಇಚ್ಛಿಸಿ ಸಮರದಲ್ಲಿ ನಿಂತರು.

ತುಮುಲ ಭೇರಿಶಬ್ಧವು ಶಂಖನಾದದಿಂದ ಮಿಶ್ರಿತವಾಗಿ, ಸಿಂಹನಾದ ಮತ್ತು ಭುಜಗಳನ್ನು ತಟ್ಟುವುದರಿಂದಲೂ ಎಲ್ಲ ಕಡೆಗಳಿಂದ ಭಯಂಕರ ಶಬ್ಧವುಂಟಾಯಿತು. ಆಗ ಶೂರರು ಸಮರದಲ್ಲಿ ಎದುರಿಸಿ ಕೋಪದಿಂದ ಪರಸ್ಪರರನ್ನು ಎವೆಯಿಕ್ಕದೇ ನೋಡತೊಡಗಿದರು. ಮೊದಲು ಆ ಯೋಧರು ತಮಗೆ ಅನುರೂಪರಾದವರನ್ನು ಪರಸ್ಪರ ಯುದ್ಧಕ್ಕೆ ಕರೆದು ಅವರೊಂದಿಗೆ ಯುದ್ಧಮಾಡುತ್ತಿದ್ದರು. ಆಗ ಇತರೇತರನ್ನು ಸಂಹರಿಸುವ ಕೌರವರ ಮತ್ತು ಶತ್ರುಗಳ ನಡುವೆ ಭಯವನ್ನುಂಟುಮಾಡುವ ಘೋರರೂಪದ ಯುದ್ಧವು ನಡೆಯಿತು. ಬಾಯ್ದೆರೆದಿರುವ ಭಯಂಕರ ಸರ್ಪಗಳ ಗುಂಪಿನಂತೆ ನಿಶಿತವಾದ ನಾರಾಚಗಳು ಗುಂಪುಗುಂಪಾಗಿ ರಣಾಂಗಣದಲ್ಲಿ ಬೀಳುತ್ತಿದ್ದವು.

ಮೋಡದಿಂದ ಹೊರಬರುವ ಹೊಳೆಯುತ್ತಿರುವ ಮಿಂಚುಗಳಂತೆ ತೈಲದಲ್ಲಿ ಅದ್ದಿದ್ದ ತೇಜಸ್ಸುಳ್ಳ ಹೊಳೆಯುವ ಶಕ್ತಿಗಳು ಬೀಳುತ್ತಿದ್ದವು. ಸುವರ್ಣಭೂಷಿತವಾದ, ವಿಮಲ ಪಟ್ಟಿಗಳಿಂದ ಕಟ್ಟಲ್ಪಟ್ಟಿದ್ದ, ಪರ್ವತಶಿಖರಗಳತೆ ಚೂಪಾಗಿದ್ದ, ಶುಭ ಗದೆಗಳು ಅಲ್ಲಲ್ಲಿ ಬೀಳುತ್ತಿದ್ದುದು ಕಾಣುತ್ತಿತ್ತು. ನಿರ್ಮಲ ಆಕಾಶದಂತಹ ಖಡ್ಗಗಳೂ ವಿರಾಜಿಸುತ್ತಿದ್ದವು. ಎತ್ತಿನ ಚರ್ಮಗಳಿಂದ ಮಾಡಲ್ಪಟ್ಟ ನೂರು ಚಂದ್ರರ ಕವಚಗಳು ರಣದಲ್ಲಿ ಎಲ್ಲಕಡೆ ಬಿದ್ದು ಶೋಭಿಸುತ್ತಿದ್ದವು. ಅನ್ಯೋನ್ಯರೊಡನೆ ಯುದ್ಧಮಾಡುತ್ತಿದ್ದ ಆ ಸೇನೆಗಳು ಹೋರಾಡುತ್ತಿರುವ ದೈತ್ಯ-ದೇವ ಸೇನೆಗಳಂತೆ ಶೋಭಿಸಿದವು. ಅವರು ಸಮರದಲ್ಲಿ ಅನ್ಯೋನ್ಯರನ್ನು ಸುತ್ತುವರೆದು ಆಕ್ರಮಣಿಸುತ್ತಿದ್ದರು.

ಆ ಪರಮ ಯುದ್ಧದಲ್ಲಿ ರಥಿಗಳಿಂದ ಬೇಗನೇ ಕಳುಹಿಸಲ್ಪಟ್ಟ ಪಾರ್ಥಿವರ್ಷಭರು ನೊಕುಗಳಿಂದ ನೊಕುಗಳಿಗೆ ತಾಗಿಸಿ ಯುದ್ಧಮಾಡುತ್ತಿದ್ದರು. ದಂತಗಳಿಂದ ಹೊಡೆದಾಡುತ್ತಿದ್ದ ಆನೆಗಳ ಸಂಘರ್ಷದಿಂದ ಬೆಂಕಿಯು ಹುಟ್ಟಿ ಹೊಗೆಯೊಂದಿಗೆ ಅದು ಎಲ್ಲೆಡೆ ಹರಡಿತು. ಪ್ರಾಸಗಳಿಂದ ಹೊಡೆಯಲ್ಪಟ್ಟು ಕೆಲವು ಗಜಯೋಧರು ಗಿರಿಶೃಂಗಗಳಂತೆ ಆನೆಗಳ ಮೇಲಿಂದ ಬೀಳುತ್ತಿರುವುದು ಎಲ್ಲೆಡೆ ಕಂಡುಬಂದಿತು. ವಿಚಿತ್ರರೂಪಗಳನ್ನು ಧರಿಸಿದ್ದ, ನಖ-ಪ್ರಾಸಾಯುಧಗಳಿಂದ ಯುದ್ಧಮಾಡುತ್ತಿದ್ದ ಶೂರ ಪದಾತಿಗಳು ಪರಸ್ಪರರನ್ನು ಕೊಲ್ಲುತ್ತಿದ್ದುದು ಕಂಡುಬಂದಿತು. ಆ ಕುರು-ಪಾಂಡವ ಸೈನಿಕರು ಅನ್ಯೋನ್ಯರನ್ನು ಎದುರಿಸಿ ನಾನಾವಿಧದ ಘೋರ

ಶಸ್ತ್ರಗಳಿಂದ ರಣದಿಂದ ಯಮಾಲಯಕ್ಕೆ ಕಳುಹಿಸುತ್ತಿದ್ದರು. ಆಗ ಶಾಂತನವ ಭೀಷ್ಮನು ರಥಘೋಷದಿಂದ ಗರ್ಜಿಸುತ್ತಾ ಧನುಸ್ಸಿನ ಶಬ್ಧದಿಂದ ಪಾಂಡವರನ್ನು ಮೋಹಿಸುತ್ತಾ ರಣರಂಗದಲ್ಲಿ ಆಕ್ರಮಣಿಸಿದನು. ಪಾಂಡವರ ರಥರೂ ಕೂಡ ಭೈರವಸ್ವರದಲ್ಲಿ ಕೂಗುತ್ತಾ ಧೃಷ್ಟದ್ಯುಮ್ನನ ನಾಯಕತ್ವದಲ್ಲಿ ಯುದ್ಧಸನ್ನದ್ಧರಾಗಿ ಆಕ್ರಮಣಿಸಿದರು. ಆಗ ಕೌರವರ ಮತ್ತು ಪಾಂಡವರ ನಡುವೆ ನರ-ಅಶ್ವ-ರಥ-ಆನೆಗಳ ಪರಸ್ಪರ ಘರ್ಷಣೆಯ ಯುದ್ಧವು ನಡೆಯಿತು.

ಕ್ರುದ್ಧನಾಗಿ ಎಲ್ಲ ಕಡೆಗಳಲ್ಲಿ ದಹಿಸುತ್ತಿದ್ದ ಭೀಷ್ಮನನ್ನು ಸುಡುತ್ತಿರುವ ಭಾಸ್ಕರನನಂತೆ ಪಾಂಡವರು ನೋಡಲು ಅಶಕ್ಯರಾದರು. ಆಗ ಧರ್ಮಪುತ್ರನ ಶಾಸನದಂತೆ ಸೈನ್ಯಗಳೆಲ್ಲವೂ ಗಾಂಗೇಯನನ್ನು ಆಕ್ರಮಿಸಿ ನಿಶಿತ ಶರಗಳಿಂದ ಗಾಯಗೊಳಿಸಿದರು. ರಣಶ್ಲಾಘೀ ಭೀಷ್ಮನಾದರೋ ಸೃಂಜಯರೊಂದಿಗೆ ಸೋಮಕರನ್ನು ಮತ್ತು ಮಹೇಷ್ವಾಸ ಪಾಂಚಾಲರನ್ನು ಸಾಯಕಗಳಿಂದ ಉರುಳಿಸಿದನು. ಭೀಷ್ಮನಿಂದ ವಧಿಸಲ್ಪಡುತ್ತಿದ್ದ ಸೋಮಕರೊಡನೆ ಪಾಂಚಾಲರು ಸಾವಿನ ಭಯವನ್ನು ತೊರೆದು ಭೀಷ್ಮನನ್ನೇ ಪುನಃ ಆಕ್ರಮಣಿಸಿದರು. ಆದರೆ ಯುದ್ಧದಲ್ಲಿ ವೀರ ಭೀಷ್ಮ ಶಾಂತನವನು ಕೂಡಲೇ ಆ ರಥಿಗಳ ಬಾಹುಗಳು ಶಿರಸ್ಸುಗಳನ್ನು ತುಂಡರಿಸಿದನು. ದೇವವ್ರತನು ರಥಿಗಳನ್ನು ವಿರಥರನ್ನಾಗಿ ಮಾಡಿದನು. ಅಶ್ವಾರೋಹಿಗಳ ಮತ್ತು ಕುದುರೆಗಳ ಶಿರಗಳನ್ನು ಉರುಳಿಸಿದನು. ಭೀಷ್ಮನ ಅಸ್ತ್ರಗಳಿಂದ ಪ್ರಮೋಹಿತವಾಗಿ, ಮಾವುತರಿಲ್ಲದೇ ಮಲಗಿದ್ದ ಪರ್ವತೋಪಮ ಆನೆಗಳು ಕಂಡವು.

ರಥಿಗಳಲ್ಲಿ ಶ್ರೇಷ್ಠ ಮಹಾಬಲ ಭೀಮಸೇನನಲ್ಲದೇ ಪಾಂಡವ ಸೇನೆಯಲ್ಲಿ ಬೇರೆ ಯಾವ ಪುರುಷನೂ ಇರಲಿಲ್ಲ.

## ಭೀಮಸೇನನಿಂದ ಧೃತರಾಷ್ಟ್ರನ ಎಂಟು ಮಕ್ಕಳ ವಧೆ

ಅವನೇ ಭೀಷ್ಮನನ್ನು ಎದುರಿಸಿ ಪ್ರಹರಿಸತೊಡಗಿದನು. ಆಗ ಭೀಷ್ಮ-ಭೀಮ ಸಮಾಗಮದ ಘೋರ ಯುದ್ಧವು ನಡೆಯಿತು. ಅವನು ಎಲ್ಲ ಸೇನೆಗಳಿಗೂ ಘೋರರೂಪಿ ಭಯಾನಕನಾಗಿ ಕಂಡನು. ಪಾಂಡವರು ಹೃಷ್ಟರಾಗಿ ಸಿಂಹನಾದಗೈದರು. ಆಗ ರಾಜಾ ದುರ್ಯೋಧನನು ಸೋದರರಿಂದ ಸುತ್ತುವರೆಯಲ್ಪಟ್ಟು ಜನಕ್ಷಯವು ನಡೆಯುತ್ತಿರುವ ಸಮರದಲ್ಲಿ ಭೀಷ್ಮನನ್ನು ರಕ್ಷಿಸಿದನು. ರಥಿಗಳಲ್ಲಿ ಶ್ರೇಷ್ಠ ಅರಿಹ ಭೀಮನಾದರೋ ಭೀಷ್ಮನ ಸಾರಥಿಯನ್ನು ಕೊಂದು, ನಿಯಂತ್ರಣವಿಲ್ಲದೇ ಅವನ ರಥದ ಕುದುರೆಗಳು ಎಲ್ಲ ಕಡೆ ಓಡಿಹೋಗುತ್ತಿರಲು ಶರದಿಂದ ಸುನಾಭನ ತಲೆಯನ್ನು ಕತ್ತರಿಸಿದನು. ಸುತೀಕ್ಷ್ಣ ಕ್ಷುರಪ್ರದಿಂದ ಹತನಾಗಿ ಅವನು ಭೂಮಿಯ ಮೇಲೆ ಬಿದ್ದನು. ಅವನು ಹತನಾಗಲು ಧೃತರಾಷ್ಟ್ರನ ಮಹಾರಥ ಶೂರ ಪುತ್ರರು ಏಳು ಮಂದಿ ಸೋದರರರು ರಣದಲ್ಲಿ ಅದನ್ನು ಸಹಿಸಿಕೊಳ್ಳಲಿಲ್ಲ. ಆದಿತ್ಯಕೇತು, ಬಹ್ವಾಶೀ, ಕುಂಡಧಾರ, ಮಹೋದರ, ಅಪರಾಜಿತ, ಪಂಡಿತಕ ಮತ್ತು ವಿಶಾಲಾಕ್ಷ ಈ ಅರಿಮರ್ದನರು ಸನ್ನದ್ಧರಾಗಿ, ವಿಚಿತ್ರ ಕವಚ-ಧ್ವಜಗಳೊಂದಿಗೆ ಯುದ್ಧಮಾಡಲು ಬಯಸಿ ಸಂಗ್ರಾಮದಲ್ಲಿ ಪಾಂಡವನನ್ನು ಆಕ್ರಮಣಿಸಿದರು. ಮಹೋದರನಾದರೋ ಸಮರದಲ್ಲಿ

ವೃತ್ರಹನು ನಮುಚಿಯನ್ನು ಹೇಗೋ ಹಾಗೆ ಒಂಭತ್ತು ವಜ್ರಸಂಕಾಶ ಪತ್ರಿಗಳಿಂದ ಭೀಮನನ್ನು ಹೊಡೆದನು. ಶತ್ರುವನ್ನು ಗೆಲ್ಲಲು ಆದಿತ್ಯಕೇತುವು ಏಳರಿಂದ, ಬಹ್ವಾಶಿಯು ಐದರಿಂದ, ಕುಂಡಧಾರನು ಒಂಭತ್ತರಿಂದ, ವಿಶಾಲಾಕ್ಷನು ಏಳರಿಂದ, ಮತ್ತು ಅಪರಾಜಿತನು ಅನೇಕ ಶರಗಳಿಂದ ಮಹಾಬಲ ಭೀಮಸೇನನನ್ನು ಹೊಡೆದರು. ಅಪಂಡಿತಕನೂ ಕೂಡ ರಣದಲ್ಲಿ ಮೂರು ಬಾಣಗಳಿಂದ ಹೊಡೆದನು. ಶತ್ರುಗಳ ಆ ಪ್ರಹಾರಗಳನ್ನು ಭೀಮನು ಸಹಿಸಿಕೊಳ್ಳಲಿಲ್ಲ. ಆ ಅಮಿತ್ರಕರ್ಶನನು ಧನುಸ್ಸನ್ನು ಎಡಗೈಯಿಂದ ಮೀಟಿ ನತಪರ್ವ ಶರದಿಂದ ಸಂಯುಗದಲ್ಲಿ ಅಪರಾಜಿತನ ಸುನಸ ಶಿರವನ್ನು ಕತ್ತರಿಸಿದನು. ಭೀಮನಿಂದ ಅಪರಾಜಿತನ ಶಿರವು ಭೂಮಿಯ ಮೇಲೆ ಬಿದ್ದಿತು. ಆಗ ಇನ್ನೊಂದು ಭಲ್ಲದಿಂದ, ಸರ್ವಲೋಕವೂ ನೋಡುತ್ತಿದ್ದಂತೆ ಕುಂಡಧಾರನನ್ನು ಮೃತ್ಯುಲೋಕಕ್ಕೆ ಕಳುಹಿಸಿದನು. ಆಗ ಪುನಃ ಆ ಅಮೇಯಾತ್ಮನು ಶಿಲೀಮುಖಿಯನ್ನು ಹೂಡಿ ಸಮರದಲ್ಲಿ ಪಂಡಿತನ ಮೇಲೆ ಪ್ರಯೋಗಿಸಿದನು. ಕಾಲಚೋದಿತ ಸರ್ಪವು ಮನುಷ್ಯನನ್ನು ಕಚ್ಚಿ ಬಿಲವನ್ನು ಸೇರಿಕೊಳ್ಳುವಂತೆ ಆ ಶರವು ಪಂಡಿತನನ್ನು ಸಂಹರಿಸಿ ಧರಣೀತಲವನ್ನು ಪ್ರವೇಶಿಸಿತು. ಹಿಂದಿನ ಕ್ಲೇಶಗಳನ್ನು ಸ್ಮರಿಸಿಕೊಂಡು ಆ ಅದೀನಾತ್ಮನು ವಿಶಾಲಾಕ್ಷನ ಶಿರವನ್ನು ಕತ್ತರಿಸಿ ಭೂಮಿಯ ಮೇಲೆ ಬೀಳಿಸಿದನು. ಮಹೋದರನ ಎದೆಗೆ ನಾರಾಚದಿಂದ ಹೊಡೆಯಲು ಅವನು ಹತನಾಗಿ ಭೂಮಿಯ ಮೇಲೆ ಬಿದ್ದನು. ಅರಿಹನು ಸಂಯುಗದಲ್ಲಿ ಬಾಣದಿಂದ ಆದಿತ್ಯಕೇತುವಿನ

ಧ್ವಜವನ್ನು ಕತ್ತರಿಸಿ ತುಂಬಾ ತೀಕ್ಷ್ಣವಾದ ಭಲ್ಲದಿಂದ ಅವನ ಶಿರಸ್ಸನ್ನು ತುಂಡರಿಸಿದನು. ಭೀಮನು ಸಂಕ್ರುದ್ಧನಾಗಿ ನತಪರ್ವ ಶರದಿಂದ ಬಹ್ವಾಶಿಯನ್ನೂ ಯಮಸದನಕ್ಕೆ ಕಳುಹಿಸಿದನು.

ಧೃತರಾಷ್ಟ್ರನ ಇತರ ಮಕ್ಕಳು ಇವನು ಅಂದು ಸಭೆಯಲ್ಲಿ ಆಡಿದುದನ್ನು ಸತ್ಯವಾಗಿಸುತ್ತಾನೆ ಎಂದು ಅಂದುಕೊಂಡು ಅಲ್ಲಿಂದ ಪಲಾಯನಗೈದರು. ರಾಜಾ ದುರ್ಯೋಧನನು ತನ್ನ ಸಹೋದರ ವಧೆಯಿಂದಾದ ವ್ಯಸನದಿಂದ ಸಂಕಟಪಟ್ಟು ಕೌರವ ಯೋಧರಿಗೆ "ಯುದ್ಧದಲ್ಲಿ ಈ ಭೀಮನನ್ನು ಕೊಲ್ಲಿ!" ಎಂದು ಆಜ್ಞಾಪಿಸಿದನು. ಈ ರೀತಿ ತಮ್ಮ ಸಹೋದರರು ಹತರಾದುದನ್ನು ನೋಡಿ ಧೃತರಾಷ್ಟ್ರನ ಮಹೇಷ್ವಾಸ ಮಕ್ಕಳು ಮಹಾಪ್ರಾಜ್ಞ ಕ್ಷತ್ತನು ಹೇಳಿದ್ದ ಹಿತವೂ ಅನಾಮಯವೂ ಆದ ಆ ವಚನಗಳನ್ನು ಸ್ಮರಿಸಿಕೊಂಡು ಆ ದಿವ್ಯದರ್ಶಿಯ ಮಾತುಗಳು ಇಂದು ಪ್ರತ್ಯಕ್ಷವಾಗಿ ಕಾರ್ಯರೂಪಕ್ಕೆ ಬಂದಿದೆ ಎಂದುಕೊಂಡರು. ಧೃತರಾಷ್ಟ್ರ ಪುತ್ರರ ವಧೆಗೋಸ್ಕರವಾಗಿಯೇ ಬಲಶಾಲೀ ಪಾಂಡವನು ಹುಟ್ಟಿದ್ದಾನೋ ಎನ್ನುವಂತೆ ಆ ಮಹಾಬಾಹುವು ಕೌರವರನ್ನು ಸಂಹರಿಸುತ್ತಿದ್ದನು.

ಆಗ ರಾಜಾ ದುರ್ಯೋಧನನು ಭೀಷ್ಮನ ಬಳಿಸಾರಿ ಮಹಾ ದುಃಖದಿಂದ ಆವಿಷ್ಟನಾಗಿ ಸಂಕಟದಿಂದ ರೋದಿಸಿದನು:

> "ನನ್ನ ಶೂರ ಸಹೋದರರು ಯುದ್ಧದಲ್ಲಿ ಭೀಮಸೇನನಿಂದ ಹತರಾಗಿದ್ದಾರೆ. ಪ್ರಯತ್ನಪಟ್ಟರೂ ಕೂಡ ನನ್ನ ಸೈನಿಕರೆಲ್ಲರೂ

ಹತರಾಗುತ್ತಿದ್ದಾರೆ. ನೀನಾದರೋ ಮಧ್ಯಸ್ಥನಾಗಿದ್ದುಕೊಂಡು ನಿತ್ಯವೂ ನಮ್ಮನ್ನು ಉಪೇಕ್ಷಿಸುತ್ತಿರುವೆ. ನಾನಾದರೋ ವಿನಾಶದ ಮಾರ್ಗವನ್ನೇ ಹಿಡಿದುಬಿಟ್ಟಿದ್ದೇನೆ. ನನ್ನ ಈ ದೈವವನ್ನು ನೋಡು!”

ಕ್ರೂರವಾದ ಈ ಮಾತನ್ನು ಕೇಳಿ ದೇವವ್ರತನು ಕಣ್ಣೀರು ತುಂಬಿದ ದುರ್ಯೋಧನನಿಗೆ ಈ ಮಾತನ್ನಾಡಿದನು:

“ಹಿಂದೆಯೇ ನಾನು, ದ್ರೋಣ, ವಿದುರ, ಯಶಸ್ವಿನಿ ಗಾಂಧಾರಿಯರು ನಿನಗೆ ಇದನ್ನು ಹೇಳಿದ್ದೆವು. ಮಗೂ! ಆಗ ನೀನು ಅದರ ಅರ್ಥವನ್ನು ತಿಳಿದುಕೊಳ್ಳಲಿಲ್ಲ. ಹಿಂದೆಯೇ ನಾನು ನಿನಗೆ ಸಲಹೆಯನ್ನು ನೀಡಿದ್ದೆನು - ನಿಮ್ಮಿಬ್ಬರ ನಡುವಿನ ಯುದ್ಧದಲ್ಲಿ ನನ್ನನ್ನೂ ಆಚಾರ್ಯ ದ್ರೋಣನನ್ನೂ ಎಂದೂ ನಿಯೋಜಿಸಕೂಡದೆಂದು. ಸಂಯುಗದಲ್ಲಿ ಭೀಮನು ಯಾರ್ಯಾರು ಧಾರ್ತರಾಷ್ಟ್ರರನ್ನು ನೋಡುತ್ತಾನೋ ಅವರನ್ನೆಲ್ಲ ರಣದಲ್ಲಿ ಸಂಹರಿಸುತ್ತಾನೆ. ಸತ್ಯವನ್ನೇ ನಿನಗೆ ನಾನು ಹೇಳುತ್ತೇನೆ. ಆದುದರಿಂದ ನೀನು ಸ್ಥಿರನಾಗಿದ್ದುಕೊಂಡು, ರಣದಲ್ಲಿ ಬುದ್ಧಿಯನ್ನು ದೃಢವಾಗಿರಿಸಿಕೊಂಡು, ಸ್ವರ್ಗವನ್ನೇ ಅಂತಿಮಾಶ್ರವನ್ನಾಗಿರಿಸಿಕೊಂಡು ರಣದಲ್ಲಿ ಪಾರ್ಥರೊಂದಿಗೆ ಯುದ್ಧಮಾಡು. ಇಂದ್ರನೊಂದಿಗೆ ಸುರಾಸುರರಿಗೂ

ಪಾಂಡವರನ್ನು ಜಯಿಸಲು ಸಾಧ್ಯವಿಲ್ಲ. ಆದುದರಿಂದ ಯುದ್ಧದಲ್ಲಿ ಬುದ್ಧಿಯನ್ನು ಸ್ಥಿರವಾಗಿರಿಸಿಟ್ಟುಕೊಂಡು ಯುದ್ಧಮಾಡು!”

ಅಂದಿನ ಮದ್ಯಾಹ್ನ ಲೋಕಕ್ಷಯವನ್ನುಂಟುಮಾಡುವ ಮಹಾ ರೌದ್ರ ಸಂಗ್ರಾಮವು ನಡೆಯಿತು. ಸೈನ್ಯಗಳೆಲ್ಲವೂ ಧರ್ಮಪುತ್ರನ ಶಾಸನದಂತೆ ಸಂರಬ್ಧರಾಗಿ ಭೀಷ್ಮನನ್ನೇ ಕೊಲ್ಲಲು ಅವನನ್ನೇ ಆಕ್ರಮಣಿಸಿದವು. ಧೃಷ್ಟದ್ಯುಮ್ನ, ಶಿಖಂಡೀ ಮತ್ತು ಮಹಾರಥ ಸಾತ್ಯಕಿಯರು ಸೇನೆಗಳನ್ನೊಡಗೂಡಿ ಭೀಷ್ಮನನ್ನೇ ಆಕ್ರಮಿಸಿದರು. ಅರ್ಜುನ, ದ್ರೌಪದಿಯ ಮಕ್ಕಳು ಮತ್ತು ಚೇಕಿತಾನರು ದುರ್ಯೋಧನನು ಕಳುಹಿಸಿದ್ದ ರಾಜರೆಲ್ಲರ ಮೇಲೆ ಧಾಳಿ ಮಾಡಿದರು. ಹಾಗೆಯೇ ವೀರ ಅಭಿಮನ್ಯು, ಮಹಾರಥ ಹೈಡಿಂಬಿ ಮತ್ತು ಭೀಮಸೇನರು ಸಂಕ್ರುದ್ಧರಾಗಿ ಕೌರವರನ್ನು ಎದುರಿಸಿದರು. ಪಾಂಡವರು ಯುದ್ಧದಲ್ಲಿ ಮೂರು ವಿಭಾಗಗಳಾಗಿ ಕೌರವರನ್ನು ವಧಿಸುತ್ತಿದ್ದರು. ಹಾಗೆಯೇ ರಣದಲ್ಲಿ ಕೌರವರೂ ಕೂಡ ಶತ್ರುಗಳನ್ನು ವಧಿಸುತ್ತಿದ್ದರು. ರಥಿಗಳಲ್ಲಿ ಶ್ರೇಷ್ಠನಾದ ದ್ರೋಣನಾದರೋ ಸೃಂಜಯರೊಂದಿಗಿದ್ದ ಸೋಮಕರನ್ನು ಸಂಕ್ರುದ್ಧನಾಗಿ ಆಕ್ರಮಿಸಿ, ಯಮಲೋಕಕ್ಕೆ ಕಳುಹಿಸಿದನು. ಧನ್ವಿ ಭಾರದ್ವಾಜನಿಂದ ವಧಿಸಲ್ಪಡುತ್ತಿದ್ದ ಮಹಾತ್ಮಾ ಸೃಂಜಯರಲ್ಲಿ ಮಹಾ ಆಕ್ರಂದನವು ಉಂಟಾಯಿತು. ಅಲ್ಲಿ ದ್ರೋಣದಲ್ಲಿ ನಿಹತರಾದ ಹಲವಾರು ಕ್ಷತ್ರಿಯರು ರಣದಲ್ಲಿ ವ್ಯಾಧಿಪೀಡಿತರಾದ ಮನುಷ್ಯರಂತೆ ಸಂಕಟದಿಂದ ಹೊರಳಾಡುತ್ತಿದ್ದುದು ಕಾಣುತ್ತಿತ್ತು. ಹಸಿವೆಯಿಂದ

ಬಳಲಿದವರಂತೆ ಗಾಯಗೊಂಡು ಬಿದ್ದಿರುವವರ ಕೂಗು, ಅಳು ಮತ್ತು ಕಿರುಚಾಟಗಳು ಕೇಳಿ ಬರುತ್ತಿದ್ದವು. ಹಾಗೆಯೇ ಕೌರವರೊಡನೆಯೂ ಮಹಾಬಲ ಭೀಮಸೇನನು ಇನ್ನೊಬ್ಬ ಕ್ರುದ್ಧನಾದ ಕಾಲನಂತೆ ಘೋರವಾದ ಕದನವನ್ನು ನಡೆಸಿದನು. ಸೇನೆಗಳು ಅನ್ಯೋನ್ಯರನ್ನು ವಧಿಸುತ್ತಿರುವ ಆ ಮಹಾರಣದಲ್ಲಿ ರಕ್ತ-ಮಾಂಸಗಳೇ ಹರಿದಿದ್ದ ಘೋರ ನದಿಯು ಹುಟ್ಟಿತು. ಯಮರಾಷ್ಟ್ರವನ್ನು ವೃದ್ಧಿಗೊಳಿಸುವ ಕುರು-ಪಾಂಡವರ ಆ ಮಹಾ ಸಂಗ್ರಾಮವು ಘೋರ ರೂಪವನ್ನು ತಾಳಿತು.

ಆಗ ಭೀಮನು ರಣದಲ್ಲಿ ಕ್ರುದ್ಧನಾಗಿ ವಿಶೇಷ ರಭಸದಿಂದ ಗಜಸೇನೆಯ ಮೇಲೆ ಧಾಳಿ ನಡೆಸಿ ಅವುಗಳನ್ನು ಮೃತ್ಯುವಿಗೆ ಕಳುಹಿಸಿದನು. ಅಲ್ಲಿ ಭೀಮನ ನಾರಾಚಗಳಿಂದ ಹೊಡೆಯಲ್ಪಟ್ಟ ಆನೆಗಳು ಬೀಳುತ್ತಿದ್ದವು, ಕಿರುಚಿಕೊಳ್ಳುತ್ತಿದ್ದವು, ಮರಣಹೊಂದಿದ್ದವು ಮತ್ತು ದಿಕ್ಕಾಪಾಲಾಗಿ ತಿರುಗುತ್ತಿದ್ದವು. ಸೊಂಡಿಲುಗಳು ತುಂಡಾಗಿ ಅಥವಾ ಕಾಲು ತುಂಡಾಗಿ ಮಹಾ ಗಜಗಳು ಕ್ರೌಂಚಗಳಂತೆ ಕೂಗುತ್ತಾ ಭೀತರಾಗಿ ಭೂಮಿಯ ಮೇಲೆ ಮಲಗಿದ್ದವು. ನಕುಲ-ಸಹದೇವರು ಕುದುರೆಗಳ ಸೇನೆಯನ್ನು ಆಕ್ರಮಿಸಿದರು. ಅವರು ಕಾಂಚನ ಆಭರಣಗಳಿಂದ ಮತ್ತು ಮೇಲು ಹೊದಿಕೆಗಳಿಂದ ಅಲಂಕೃತಗೊಂಡಿದ್ದ ನೂರಾರು ಸಹಸ್ರಾರು ಕುದುರೆಗಳನ್ನು ವಧಿಸುತ್ತಿರುವುದು ಕಂಡುಬಂದಿತು. ಕೆಳಗೆ ಬಿದ್ದಿದ್ದ ಕುದುರೆಗಳಿಂದ ಮೇದಿನಿಯು ತುಂಬಿ ಹೋಗಿತ್ತು. ನಾಲಿಗೆಗಳಿರಲಿಲ್ಲ, ದೀರ್ಘ ನಿಟ್ಟುಸಿರು ಬಿಡುತ್ತಿದ್ದವು, ಕೂಗುತ್ತಿದ್ದವು, ಮತ್ತು

ತೀರಿಕೊಂಡಿದ್ದವು. ಹೀಗೆ ಕುದುರೆಗಳು ನಾನಾ ರೂಪಗಳನ್ನು ಧರಿಸಿದ್ದವು. ರಣದಲ್ಲಿ ಅರ್ಜುನನಿಂದ ಹತವಾದ ಕುದುರೆಗಳಿಂದ ವಸುಧೆಯು ಅಲ್ಲಲ್ಲಿ ಘೋರವಾಗಿ ಕಾಣುತ್ತಿತ್ತು. ಭಗ್ನವಾಗಿದ್ದ ರಥಗಳಿಂದ, ತುಂಡಾದ ಮಹಾಪ್ರಭೆಯ ಧ್ವಜ-ಚತ್ರಗಳಿಂದ, ಸುವರ್ಣಮಯ ಹಾರಗಳಿಂದ, ಕೇಯೂರ-ಕುಂಡಲಗಳನ್ನು ಧರಿಸಿದ್ದ ಶಿರಗಳಿಂದ, ಬಿಚ್ಚಿಹೋದ ಶಿರಸ್ತ್ರಾಣಗಳಿಂದ, ತುಂಡಾದ ಪತಾಕೆಗಳಿಂದ, ಸುಂದರ ನೊಗದ ಕೆಳಭಾಗಗಳಿಂದಲೂ, ಕಡಿವಾಣಗಳಿಂದಲೂ ವ್ಯಾಪ್ತವಾಗಿದ್ದ ರಣಭೂಮಿಯು ವಸಂತ ಋತುವಿನಲ್ಲಿ ಕುಸುಮಗಳಿಂದ ಆಚ್ಛಾದಿತವಾದ ಭೂಪ್ರದೇಶದಂತೆ ಕಾಣುತ್ತಿತ್ತು. ಹೀಗೆಯೇ ಕ್ರುದ್ಧ ಶಾಂತನವ ಭೀಷ್ಮನಿಂದ, ರಥಸತ್ತಮ ದ್ರೋಣನಿಂದ, ಅಶ್ವತ್ಥಾಮನಿಂದ, ಕೃಪನಿಂದ ಮತ್ತು ಕೃತವರ್ಮನಿಂದ ಪಾಂಡವರ ನಾಶವೂ ನಡೆಯಿತು. ಹಾಗೆಯೇ ಕ್ರುದ್ಧರಾದ ಅವರಿಂದ ಕೌರವರೂ ಹತರಾದರು.

## ಇರಾವನನ ವಧೆ

ಹಾಗೆ ನಡೆಯುತ್ತಿರುವ ವೀರವರಕ್ಷಯ ರೌದ್ರ ಯುದ್ದದಲ್ಲಿ ಸೌಬಲ ಶಕುನಿಯು ಪಾಂಡವರನ್ನು ಎದುರಿಸಿದನು. ಹಾಗೆಯೇ ಪರವೀರಹ ಸಾತ್ವತ ಹಾರ್ದಿಕ್ಯನೂ ಕೂಡ ಪಾಂಡವರ ಸೇನೆಯನ್ನು ಆಕ್ರಮಣಿಸಿದನು. ಆಗ ಕಾಂಬೋಜಮುಖ್ಯ ಮತ್ತು ನದಿಗಳಲ್ಲಿ ಹುಟ್ಟಿದ ಕುದುರೆಗಳಿಂದ, ಅರಟ್ಟರು, ಮಹೀಜರು ಮತ್ತು ಸಿಂಧುಜರಿಂದ

ಸುತ್ತುವರೆಯಲ್ಪಟ್ಟು, ವನಾಯುಜರು, ಶುಭ್ರರು ಮತ್ತು ಪರ್ವತವಾಸಿಗಳಿಂದ, ಮತ್ತು ಇತರ ತಿತ್ತಿರಜ ಮೊದಲಾದ ವಾಯುವೇಗವುಳ್ಳ ಸುವರ್ಣಾಲಂಕೃತಗೊಂಡ, ಕವಚಕಗಳನ್ನು ಧರಿಸಿದ್ದ ಸುಕಲ್ಪಿತವಾದ, ಹಯಗಳೊಡನೆ ಪಾಂಡವನ ಬಲಶಾಲೀ ಮಗ ಹೃಷ್ಟರೂಪ ಪರಂತಪನು ಆ ಸೈನ್ಯವನ್ನು ಎದುರಿಸಿದನು. ಇವನು ಇರಾವನ್ ಎಂಬ ಹೆಸರಿನ ಅರ್ಜುನನ ವೀರ್ಯವಾನ್ ಮಗ. ನಾಗರಾಜನ ಮಗಳಲ್ಲಿ ಧೀಮತ ಪಾರ್ಥನಿಂದ ಹುಟ್ಟಿದವನು. ಗರುಡನಿಂದ ತನ್ನ ಪತಿಯನ್ನು ಕಳೆದುಕೊಂಡ ಮಕ್ಕಳಿರದ, ದೀನಚೇತನಳಾಗಿದ್ದ, ಕೃಪಣಳಾಗಿದ್ದ ಅವಳನ್ನು ಮಹಾತ್ಮ ಐರಾವತನು ಅವನಿಗೆ ಕೊಟ್ಟಿದ್ದನು. ಕಾಮವಶಾನುಗನಾದ ಪಾರ್ಥನು ಅವಳನ್ನು ಪತ್ನಿಯನ್ನಾಗಿ ಸ್ವೀಕರಿಸಿದ್ದನು. ಇವನೇ ಇನ್ನೊಬ್ಬನ ಹೆಂಡತಿಯಲ್ಲಿ (ಪರಕ್ಷೇತ್ರದಲ್ಲಿ) ಹುಟ್ಟಿದ ಅರ್ಜುನನ ಮಗ. ಪಾರ್ಥನ ದ್ವೇಷದಿಂದಾಗಿ ಚಿಕ್ಕಪ್ಪನಿಂದ ಪರಿತ್ಯಕ್ತನಾದ ಅವನು ನಾಗಲೋಕದಲ್ಲಿ ತಾಯಿಯಿಂದ ಪರಿರಕ್ಷಿತನಾಗಿ ಬೆಳೆದನು. ರೂಪವಂತನೂ, ಗುಣವಂತನೂ, ವೀರ್ಯಸಂಪನ್ನನೂ, ಸತ್ಯವಿಕ್ರಮಿಯೂ ಆದ ಅವನು ಅಲ್ಲಿಗೆ ಅರ್ಜುನನು ಹೋಗಿದ್ದುದನ್ನು ಕೇಳಿ ಇಂದ್ರಲೋಕಕ್ಕೆ ಹೋಗಿದ್ದನು. ಆ ಅವ್ಯಗ್ರನು ಅಲ್ಲಿಗೆ ಹೋಗಿ ತಂದೆ ಮಹಾತ್ಮ ಸತ್ಯವಿಕ್ರಮಿಗೆ ವಿನಯದಿಂದ ಕೈಮುಗಿದು ನಮಸ್ಕರಿಸಿ ಹೇಳಿದ್ದನು: "ಪ್ರಭೋ! ನಾನು ಇರಾವಾನ್. ನಿನ್ನ ಮಗ." ಅವನು ತಾಯಿಯನ್ನು ಎಂದು ಭೇಟಿಯಾಗಿದ್ದನು ಎಲ್ಲವನ್ನೂ ಹೇಳಿಕೊಂಡನು. ಅವೆಲ್ಲವನ್ನು

ನಡೆದ ಹಾಗೆಯೇ ಪಾಂಡವನು ನೆನಪಿಸಿಕೊಂಡನು. ದೇವರಾಜ ನಿವೇಶನದಲ್ಲಿ ಪಾರ್ಥನು ತನ್ನದೇ ಸಮಾನ ಗುಣಗಳನ್ನು ಹೊಂದಿದ್ದ ಮಗನನ್ನು ಪ್ರೀತಿಯಿಂದ ಅಪ್ಪಿಕೊಂಡು ಸಂತೋಷಭರಿತನಾಗಿದ್ದನು. ಆಗ ದೇವಲೋಕದಲ್ಲಿ ಮಹಾಬಾಹು ಅರ್ಜುನನು ಸ್ವಕಾರ್ಯಕ್ಕಾಗಿ ಪ್ರೀತಿಪೂರ್ವಕವಾಗಿ ಯುದ್ಧಕಾಲದಲ್ಲಿ ನಮಗೆ ನಿನ್ನ ಸಹಾಯವನ್ನು ನೀಡು ಎಂದು ಆಜ್ಞೆಯಿತ್ತಿದ್ದನು. ಒಳ್ಳೆಯದು ಎಂದು ಹೇಳಿ ಅವನು ಯುದ್ಧಕಾಲದಲ್ಲಿ ಅನೇಕ ಕಾಮವರ್ಣಗಳ, ವೇಗಶಾಲೀ ಕುದುರೆಗಳಿಂದ ಸಂವೃತನಾಗಿ ಬಂದನು.

ಕಾಂಚನದೇಹದ, ನಾನಾವರ್ಣಗಳ, ಮನಸ್ಸಿನ ವೇಗವುಳ್ಳ ಆ ಕುದುರೆಗಳು ಒಮ್ಮಿಂದೊಮ್ಮೆಲೇ ಹಂಸಗಳಂತೆ ಮಹಾಸಾಗರದಿಂದ ಮೇಲೆದ್ದವು. ಅವು ಕೌರವ ಸೇನೆಯ ಕುದುರೆಗಳ ಗುಂಪನ್ನು ತಲುಪಿ ಮೂಗಿನಿಂದ ಮೂಗುಗಳನ್ನು, ಕುತ್ತಿಗೆಗಳನ್ನು ಪರಸ್ಪರ ಹೊಡೆಯಲು ಕೌರವರ ಕುದುರೆಗಳು ತಕ್ಷಣವೇ ಭೂಮಿಯ ಮೇಲೆ ಬಿದ್ದವು. ಆ ಕುದುರೆಗಳ ಸಮೂಹಗಳು ಪರಸ್ಪರರನ್ನು ಹೊಡೆದು ಬೀಳಿಸುವಾಗ ಗರುಡನು ಕೆಳಗಿಳಿಯುವಂತೆ ದಾರುಣ ಶಬ್ಧವು ಕೇಳಿಬಂದಿತು. ಹಾಗೆಯೇ ಯುದ್ಧದಲ್ಲಿ ಅನ್ಯೋನ್ಯರನ್ನು ತಾಗಿ ಆ ಅಶ್ವಾರೋಹಿಗಳು ಘೋರವಾದ ಪರಸ್ಪರವಧೆಯಲ್ಲಿ ತೊಡಗಿದರು. ನಡೆಯುತ್ತಿದ್ದ ಆ ತುಮುಲ ಸಂಕುಲ ಯುದ್ಧದಲ್ಲಿ ಎರಡೂ ಕಡೆಯ ಕುದುರೆಗಳು ಗುಂಪು ಗುಂಪಾಗಿ ಎಲ್ಲ ಕಡೆ ಓಡುತ್ತಿದ್ದವು. ಸಾಯಕಗಳಿಂದ ಗಾಯಗೊಂಡು, ಅಶ್ವಗಳನ್ನು ಕಳೆದುಕೊಂಡು ಆಯಾಸಗೊಂಡ ಶೂರರು ಪರಸ್ಪರರನ್ನು

ಎದುರಿಸಿ ನಾಶ ಹೊಂದಿದರು. ಕುದುರೆಗಳ ಸೇನೆಗಳು ನಾಶವಾಗಿ ಸ್ವಲ್ಪವೇ ಉಳಿದಿರಲು ಸೌಬಲನ ಶೂರ ಮಕ್ಕಳು ರಣಮೂರ್ಧನಿಗೆ ತೆರಳಿದರು. ಗಜ, ಗವಾಕ್ಷ, ವೃಷಕ, ಚರ್ಮವಾನ್, ಆರ್ಜವ ಮತ್ತು ಶುಕ ಈ ಆರು ಬಲಸಂಪನ್ನರು ಮುಟ್ಟಿದರೆ ವಾಯುವೇಗದಲ್ಲಿ ಹೋಗಬಲ್ಲ, ವೇಗದಲ್ಲಿ ವಾಯುವಿನ ಸಮನಾಗಿರುವ, ಶೀಲಸಂಪನ್ನ, ತರುಣ, ಉತ್ತಮ ಕುದುರೆಗಳನ್ನೇರಿ, ಮಹಾ ಸೇನೆಯೊಂದಿಗೆ ಬಂದರು. ಸ್ವಯಂ ಶಕುನಿಯಿಂದ ಮತ್ತು ಮಹಾಬಲ ಯೋಧರಿಂದ ತಡೆಯಲ್ಪಟ್ಟರೂ ಕೂಡ ಆ ರೌದ್ರರೂಪೀ ಯುದ್ಧ ಕುಶಲ ಮಹಾಬಲರು ಸನ್ನದ್ಧರಾದರು. ಯುದ್ಧ ದುರ್ಮದರಾಗಿದ್ದ ಹೃಷ್ಟರಾಗಿದ್ದ ಗಾಂಧಾರರು ಸ್ವರ್ಗ ಅಥವಾ ವಿಜಯವನ್ನು ಬಯಸಿ ಮಹಾ ಸೇನೆಯೊಡಗೂಡಿ ಪರಮ ದುರ್ಜಯವಾದ ಆ ಸೇನೆಯನ್ನು ಭೇದಿಸಿ ಒಳಹೊಕ್ಕರು.

ಅವರು ಹಾಗೆ ಪ್ರವೇಶಿಸಿದನ್ನು ನೋಡಿ ವೀರ್ಯವಾನ್ ಇರಾವಾನನೂ ಕೂಡ ವಿಚಿತ್ರ ಆಭರಣ ಆಯುಧಗಳನ್ನು ಧರಿಸಿದ್ದ ಯೋಧರಿಗೆ ಹೇಳಿದನು:

> “ಅನುಚರರು ಮತ್ತು ವಾಹನಗಳೊಂದಿಗೆ ಬಂದಿರುವ ಈ ಧಾರ್ತರಾಷ್ಟ್ರನ ಯೋಧರು ಎಲ್ಲರು ಸಮರದಲ್ಲಿ ಮೃತ್ಯುವನ್ನಪ್ಪುವಂಥಹ ನೀತಿಯನ್ನು ಕೈಗೊಳ್ಳಿರಿ!”

ಒಳ್ಳೆಯದು ಎಂದು ಹೇಳಿ ಇರಾವತನ ಎಲ್ಲ ಯೋಧರೂ ಸಮರದಲ್ಲಿ

ಶತ್ರುಗಳಿಗೆ ದುರ್ಜಯರಾದ ಆ ಶತ್ರುಸೇನೆಯನ್ನು ಸಂಹರಿಸಿದರು. ಅವನ ಸೇನೆಯಿಂದ ತಮ್ಮ ಸೇನೆಯು ಬಿದ್ದುದನ್ನು ನೋಡಿ ರಣದಲ್ಲಿ ಉದ್ರಿಕ್ತರಾಗಿ ಸುಬಲನ ಮಕ್ಕಳೆಲ್ಲರೂ ಇರಾವಂತನನ್ನು ಎದುರಿಸಿ ಎಲ್ಲ ಕಡೆಗಳಿಂದ ಸುತ್ತುವರೆದರು. ಹರಿತ ಪ್ರಾಸಗಳಿಂದ ಹೊಡೆಯುತ್ತಾ, ಪರಸ್ಪರರನ್ನು ಪ್ರಚೋದನೆಗೊಳಿಸುತ್ತಾ ಆ ಶೂರರು ಅವನನ್ನು ಸುತ್ತುವರೆದು ಮಹಾ ವ್ಯಾಕುಲವನ್ನುಂಟುಮಾಡಿದರು. ಆ ಮಹಾತ್ಮರ ತೀಕ್ಷ್ಣ ಪ್ರಾಸಗಳಿಂದ ಗಾಯಗೊಂಡು ಇರಾವಾನನು ರಕ್ತದಿಂದ ತೋಯ್ದು ಅಂಕುಶದಿಂದ ತಿವಿಯಲ್ಪಟ್ಟ ಆನೆಯಂತೆ ವ್ಯಾಕುಲಗೊಂಡನು. ಒಬ್ಬನಾಗಿದ್ದರೂ ಅನೇಕರು ಎದುರಿನಿಂದ, ಹಿಂದಿನಿಂದ ಮತ್ತು ಪಕ್ಕಗಳಿಂದ ಚೆನ್ನಾಗಿ ಪ್ರಹರಿಸುತ್ತಿದ್ದರೂ ಅವನು ಧೈರ್ಯವನ್ನು ಕಳೆದುಕೊಳ್ಳಲಿಲ್ಲ. ಆಗ ಸಂಕ್ರುದ್ಧನಾದ ಪರಪುರಂಜಯ ಇರಾವಾನನು ಅವರೆಲ್ಲರನ್ನೂ ನಿಶಿತ ಶರಗಳಿಂದ ಹೊಡೆದು ಮೂರ್ಛೆಗೊಳಿಸಿದನು. ತನ್ನ ಶರೀರರ ಸರ್ವಾಂಗಗಳಿಗೆ ಚುಚ್ಚಿಕೊಂಡಿದ್ದ ಪ್ರಾಸಗಳನ್ನು ಕಿತ್ತು ತೆಗೆದು ಅವುಗಳಿಂದಲೇ ರಣದಲ್ಲಿ ಸುಬಲನ ಮಕ್ಕಳನ್ನು ಪ್ರಹರಿಸಿದನು. ಅನಂತರ ನಿಶಿತ ಖಡ್ಗವನ್ನು ಎಳೆದು ತೆಗೆದುಕೊಂಡು ಗುರಾಣಿಯನ್ನೂ ಹಿಡಿದು ತಕ್ಷಣವೇ ಆ ಸೌಬಲರನ್ನು ಯುದ್ಧದಲ್ಲಿ ಸಂಹರಿಸಲು ಪದಾತಿಯಾಗಿಯೇ ನಡೆದನು.

ಆಗ ಪುನಃ ಎಚ್ಚೆತ್ತಿದ್ದ ಆ ಎಲ್ಲ ಸುಬಲಾತ್ಮಜರು ಪುನಃ ಕ್ರೋಧಸಮಾವಿಷ್ಟರಾಗಿ ಇರವಂತನನ್ನು ಆಕ್ರಮಣಿಸಿದರು. ಬಲದರ್ಪಿತ ಇರವಾನನೂ ಕೂಡ ಖಡ್ಗದಲ್ಲಿ ತನ್ನ ಕೈಚಳಕವನ್ನು

ತೋರಿಸುತ್ತಾ ಅವರೆಲ್ಲ ಸೌಬಲರನ್ನೂ ಎದರಿಸಿದನು. ಚಾಕಚಕ್ಯತೆಯಿಂದ ಓಡಾಡುತ್ತಿದ್ದ ಆ ಸುಬಲಾತ್ಮಜರೆಲ್ಲರೂ ಶೀಘ್ರವಾಗಿ ಚಲಿಸುತ್ತಿರುವ ಅವನನ್ನು ಹೊಡೆಯಲು ಅವಕಾಶವನ್ನೇ ಪಡೆಯಲಿಲ್ಲ. ಯುದ್ಧದಲ್ಲಿ ನೆಲದ ಮೇಲೆ ನಿಂತಿದ್ದ ಅವನನ್ನು ನೋಡಿ ಅವರೆಲ್ಲರೂ ಅವನನ್ನು ಸುತ್ತುವರೆದು ಪುನಃ ಪುನಃ ಸೆರೆಹಿಡಿಯಲು ಪ್ರಯತ್ನಿಸಿದರು. ಆಗ ಮೇಲೆ ಬೀಳುತ್ತಿದ್ದ ಆ ಅಮಿತ್ರಕರ್ಶನನು ಅವರ ಎರಡೂ ಹಸ್ತಗಳನ್ನು ಕತ್ತರಿಸಿ ಶರೀರಗಳನ್ನೂ ತುಂಡರಿಸಿದನು. ಅವರೆಲ್ಲರ ಆಯುಧಗಳು ಮತ್ತು ಭೂಷಿತ ಬಾಹುಗಳು ಬಿದ್ದು ಅಂಗಗಳು ತುಂಡಾಗಿ ಅಸುನೀಗಿ ಅವರು ಭೂಮಿಯ ಮೇಲೆ ಬಿದ್ದರು. ವೃಷಕನು ಮಾತ್ರ ಹೆಚ್ಚಾಗಿ ಗಾಯಗೊಂಡು ವೀರರನ್ನು ತುಂಡರಿಸುವ ಆ ಮಹಾರೌದ್ರ ಯುದ್ಧದಿಂದ ತಪ್ಪಿಸಿಕೊಂಡನು.

ಅವರೆಲ್ಲರೂ ಬಿದ್ದುದನ್ನು ನೋಡಿ ಭೀತನಾದ ದುರ್ಯೋಧನನು ಸಂಕ್ರುದ್ಧನಾಗಿ ಘೋರದರ್ಶನ ಮಹೇಷ್ವಾಸ ಮಾಯಾವೀ ಅರಿಂದಮ ಬಕವಧದ ಕಾರಣದಿಂದ ಹಿಂದಿನಿಂದಲೇ ಭೀಮಸೇನನ ವೈರಿಯಾಗಿದ್ದ ರಾಕ್ಷಸ ಆರ್ಶ್ಯಶೃಂಗಿಗೆ ಹೇಳಿದನು:

> “ವೀರ! ಹೇಗೆ ಈ ಫಲ್ಗುನನ ಬಲಶಾಲೀ ಮಾಯಾವೀ ಮಗನು ನನ್ನ ಸೇನೆಯನ್ನು ನಾಶಗೊಳಿಸಿ ವಿಪ್ರಿಯವಾದ ಘೋರ ಕೃತ್ಯವನ್ನೆಸಗಿದ್ದಾನೆ ನೋಡು! ನೀನೂ ಕೂಡ ಬಯಸಿದಲ್ಲಿಗೆ ಹೋಗಬಲ್ಲೆ. ಮಾಯಾಸ್ತ್ರಗಲ್ಲಿ

ವಿಶಾರದನಾಗಿದ್ದೀಯೆ. ಪಾರ್ಥನೊಂದಿಗೆ ವೈರವನ್ನೂ ಸಾಧಿಸುತ್ತಿದ್ದೀಯೆ. ಆದುದರಿಂದ ರಣದಲ್ಲಿ ಇವನನ್ನು ಕೊಲ್ಲು!”

ಆಗಲೆಂದು ಹೇಳಿ ಘೋರದರ್ಶನ ರಾಕ್ಷಸನು ಸಿಂಹನಾದದೊಂದಿಗೆ ಅರ್ಜುನನ ಯುವ ಮಗನಿರುವಲ್ಲಿಗೆ ಹೊರಟನು. ಯುದ್ಧ ಕುಶಲರಾದ ಹರಿತ ಪ್ರಾಸಗಳನ್ನು ಹಿಡಿದ ಅಶ್ವಾರೋಹಿ ವೀರ ಯೋಧರಿಂದ ಪ್ರಹಾರಿಗಳಿಂದ ತನ್ನದೇ ಸೈನಿಕರಿಂದ ಸುತ್ತುವರೆಯಲ್ಪಟ್ಟ ಅವನು ಸಮರದಲ್ಲಿ ಮಹಾಬಲ ಇರಾವಂತನನ್ನು ಸಂಹರಿಸಲು ಬಯಸಿದನು. ಪರಾಕ್ರಮೀ ಅಮಿತ್ರಘ್ನ ಇರಾವನನೂ ಕೂಡ ಸಂಕ್ರುದ್ಧನಾಗಿ ಆ ರಾಕ್ಷಸನನ್ನು ಕೊಲ್ಲಲು ಬಯಸಿ ತ್ವರೆಮಾಡಿ ಆಕ್ರಮಣಿಸಿದನು. ಮೇಲೆ ಬೀಳುತ್ತಿದ್ದ ಅವನನ್ನು ನೋಡಿ ಮಹಾಬಲ ರಾಕ್ಷಸನು ತ್ವರೆಮಾಡಿ ಮಾಯೆಯನ್ನುಪಯೋಗಿಸ ತೊಡಗಿದನು. ಆಗ ಅವನು ಇರಾವಾನನ ಅಶ್ವಾರೋಹಿಗಳಿಗೆ ಪ್ರತಿಯಾಗಿ ಮಾಯೆಯಿಂದ ಕುದುರೆಗಳನ್ನೇರಿದ ಶೂಲ ಪಟ್ಟಿಶಗಳನ್ನು ಹಿಡಿದಿರುವ ಘೋರ ರಾಕ್ಷಸರ ಪಡೆಯನ್ನು ನಿರ್ಮಿಸಿದನು. ಆ ಎರಡು ಸಾವಿರ ಪ್ರಹಾರಿಣರು ಎದುರಾಗಿ ಬೇಗನೇ ಪರಸ್ಪರರನ್ನು ಪ್ರೇತಲೋಕಗಳಿಗೆ ಕಳುಹಿಸಿದರು. ಆ ಸೇನೆಗಳು ಹಾಗೆ ನಾಶವಾಗಲು ಅವರಿಬ್ಬರು ಯುದ್ಧ ದುರ್ಮದರೂ ಸಂಗ್ರಾಮದಲ್ಲಿ ವೃತ್ರ-ವಾಸವರಂತೆ ಎದುರಾಗಿ ನಿಂತರು. ಯುದ್ಧದುರ್ಮದನಾದ ರಾಕ್ಷಸನು ಮುಂದೆ ಬಂದುದನ್ನು ನೋಡಿ ಕ್ರೋಧಸಂರಬ್ಧನಾದ ಮಹಾಬಲ ಇರಾವಾನನು ಎದುರಾದನು.



ತುಂಬಾ ಹತ್ತಿರಕ್ಕೆ ಬಂದಿದ್ದ ಆ ದುರ್ಮತಿಯ ಬಿಲ್ಲು ಭತ್ತಳಿಕೆಗಳನ್ನು ಖಡ್ಗದಿಂದ ಕತ್ತರಿಸಿದನು. ತನ್ನ ಧನುಸ್ಸು ತುಂಡಾಗಿದುದನ್ನು ನೋಡಿ ಅವನು ಕ್ರುದ್ಧನಾದ ಇರಾವಂತನನ್ನು ಮೋಹಗೊಳಿಸಲೋಸುಗ ಮಾಯೆಯಿಂದ ವೇಗದಿಂದ ಆಕಾಶವನ್ನು ಸೇರಿದನು. ಆಗ ಸರ್ವಮರ್ಮಗಳನ್ನೂ ತಿಳಿದಿದ್ದ, ಕಾಮರೂಪೀ, ದುರಾಸದ ಇರಾವಾನನೂ ಕೂಡ ಅಂತರಿಕ್ಷಕ್ಕೆ ಹಾರಿ ರಾಕ್ಷಸನನ್ನು ತನ್ನ ಮಾಯೆಯಿಂದ ಭ್ರಾಂತಗೊಳಿಸಿ ಅವನ ಶರೀರವನ್ನು ಸಾಯಕಗಳಿಂದ ಗಾಯಗೊಳಿಸಿದನು. ಹಾಗೆ ಆ ರಾಕ್ಷಸ ಶ್ರೇಷ್ಠನನ್ನು ಪುನಃ ಪುನಃ ಶರಗಳಿಂದ ಗಾಯಗೊಳಿಸಿದ ಹಾಗೆಲ್ಲ ಅವನು ಹೊಸ ಹೊಸ ಶರೀರಗಳನ್ನು ಪಡೆಯುತ್ತಿದ್ದನು ಮತ್ತು ಯೌವನವನ್ನು ತಾಳುತ್ತಿದ್ದನು. ಮಾಯಾವಿಗಳಿಗೆ ಸಹಜವಾಗಿ ಬೇಕಾದ ರೂಪ ವಯಸ್ಸು

ದೊರೆಯುತ್ತವೆ. ಹೀಗೆ ಆ ರಾಕ್ಷಸನ ಅಂಗಗಳು ಕತ್ತರಿಸಿದಂತೆಲ್ಲಾ ಪುನಃ ಪುನಃ ಬೆಳೆಯುತ್ತಿದ್ದವು. ಇರಾವಾನನೂ ಕೂಡ ಸಂಕ್ರುದ್ಧನಾಗಿ ಆ ಮಹಾಬಲ ರಾಕ್ಷಸನನ್ನು ತೀಕ್ಷ್ಣ ಪರಶುವಿನಿಂದ ಪುನಃ ಪುನಃ ಕತ್ತರಿಸಿದನು. ಮರದಂತೆ ಆ ವೀರನನ್ನು ಬಲಶಾಲಿಯು ಕಡಿಯುತ್ತಿದ್ದಂತಲೆಲ್ಲಾ ರಾಕ್ಷಸನು ಘೋರವಾಗಿ ಕೂಗುತ್ತಿದ್ದನು. ತುಮುಲ ಶಬ್ಧವುಂಟಾಯಿತು. ಪರಶುವಿನಿಂದ ಗಾಯಗೊಂಡ ರಾಕ್ಷಸನು ಬಹಳಷ್ಟು ರಕ್ತವನ್ನು ಸುರಿಸಿದನು. ಅದರಿಂದ ಕ್ರೋಧಗೊಂಡ ಬಲವಾನನು ವೇಗವಾಗಿ ಯುದ್ಧ ಮಾಡತೊಡಗಿದನು. ತನ್ನ ಶತ್ರುವು ವರ್ಧಿಸುತ್ತಿರುವುದನ್ನು ನೋಡಿ ಆರ್ಶ್ಯಶೃಂಗಿಯು ಮಹಾ ಘೋರ ರೂಪವನ್ನು ತಾಳಿ ಸಂಗ್ರಾಮದ ಮಧ್ಯೆ ಎಲ್ಲರೂ ನೋಡುತ್ತಿರುವಂತೆಯೇ ಅವನನ್ನು ಹಿಡಿಯಲು ಮುಂದಾದನು. ಮಹಾತ್ಮ ರಾಕ್ಷಸನ ಆ ಮಾಯೆಯನ್ನು ನೋಡಿ ಇರಾವಾನನೂ ಕೂಡ ಸಂಕ್ರುದ್ಧನಾಗಿ ಅದರಂತಹ ಮಾಯೆಯನ್ನು ಸೃಷ್ಟಿಸಲು ತೊಡಗಿದನು. ಯುದ್ಧದಿಂದ ಹಿಂದೆಸರಿಯದ ಕ್ರೋಧಾಭಿಭೂತನಾದ ಇರಾವಾನನಿಗೆ ಅವನ ತಾಯಿಯ ಕಡೆಯವರು ಅವನಿಗೆ ನೆರವಾಗಲು ಬಂದರು.

ಹೆಚ್ಚಾಗಿ ನಾಗಗಳಿಂದಲೇ ಎಲ್ಲಕಡೆಗಳಿಂದ ಸುತ್ತುವರೆಯಲ್ಪಟ್ಟಿದ್ದ ಅವನು ಹೆಡೆಯುಳ್ಳ ಅನಂತನ ಮಹಾ ರೂಪವನ್ನೇ ತಾಳಿದನು. ಆಗ ಅವನು ಬಹುವಿಧದ ನಾಗಗಳಿಂದ ರಾಕ್ಷಸನನ್ನು ಮುಚ್ಚಿದನು. ಸರ್ಪಗಳಿಂದ ಆಚ್ಛಾದಿದನಾದ ಆ ರಾಕ್ಷಸಪುಂಗವನು ಒಂದು ಕ್ಷಣ ಯೋಚಿಸಿ ಗರುಡನ ರೂಪವನ್ನು ತಾಳಿ ನಾಗಗಳನ್ನು

ಭಕ್ಷಿಸತೊಡಗಿದನು. ಅವನನ್ನು ಅನುಸರಿಸಿ ಬಂದಿದ್ದ ಅವನ ತಾಯಿಯ ಕಡೆಯವರನ್ನು ಮಾಯೆಯಿಂದ ಭಕ್ಷಿಸಿ, ಇರಾವಂತನನ್ನು ಮೋಹಗೊಳಿಸಿ ರಾಕ್ಷಸನು ಖಡ್ಗದಿಂದ ಅವನನ್ನು ವಧಿಸಿದನು. ಕುಂಡಲ ಮುಕುಟಗಳಿಂದ ಕೂಡಿದ, ಪದ್ಮ ಮತ್ತು ಚಂದ್ರನ ಕಾಂತಿಯುಳ್ಳ ಇರಾವತನ ಶಿರವನ್ನು ರಾಕ್ಷಸನು ಭೂಮಿಯ ಮೇಲೆ ಕೆಡವಿದನು. ರಾಕ್ಷಸನಿಂದ ಅರ್ಜುನನನ ಆ ವೀರ ಮಗನು ಹತನಾಗಲು ಧಾರ್ತರಾಷ್ಟ್ರರು ಇತರ ರಾಜರೊಂದಿಗೆ ಶೋಕ ರಹಿತರಾದರು. ಭಯಂಕರ ಸ್ವರೂಪವನ್ನು ತಾಳಿದ್ದ ಆ ಮಹಾ ಸಂಗ್ರಾಮದಲ್ಲಿ ಎರಡು ಸೇನೆಗಳ ನಡುವೆ ಪುನ ಮಹಾ ಘೋರ ಯುದ್ಧವು ಪ್ರಾರಂಭವಾಯಿತು.

ಕುದುರೆ, ಆನೆ ಮತ್ತು ಪದಾತಿಗಳು ಮಿಶ್ರಿತವಾಗಿ ಆನೆಗಳಿಂದ ಹತವಾದರು. ರಥಿಗಳು ಮತ್ತು ಆನೆಗಳು ಪದಾತಿಗಳಿಂದ ಸಂಹರಿಸಲ್ಪಟ್ಟರು. ಹಾಗೆಯೇ ಪದಾತಿ-ರಥಸಮೂಹಗಳು ಮತ್ತು ಬಹಳಷ್ಟು ಕುದುರೆಗಳು ಕೌರವರ ಮತ್ತು ಪಾಂಡವರ ಸಂಕುಲ ರಣದಲ್ಲಿ ರಥಿಗಳಿಂದ ಹತವಾದವು. ಅರ್ಜುನನಾದರೋ ತನ್ನ ಹಿರಿಯ ಮಗನ ಸಾವನ್ನು ತಿಳಿಯದೆಯೇ ಭೀಷ್ಮನಿಂದ ರಕ್ಷಿತವಾದ ಶೂರರಾಜರನ್ನು ಸಮರದಲ್ಲಿ ಸಂಹರಿಸಿದನು. ಹಾಗೆಯೇ ಕೌರವರು ಮತ್ತು ಮಹಾಬಲ ಸೃಂಜಯರು ಸಮರವೆಂಬ ಅಗ್ನಿಯಲ್ಲಿ ಆಹುತಿಗಳನ್ನಾಗಿತ್ತು ಪರಸ್ಪರರ ಪ್ರಾಣಗಳನ್ನು ತೆಗೆದರು. ಕೂದಲು ಕೆದರಿ, ಕವಚಗಳಿಲ್ಲದೇ, ರಥಗಳನ್ನು ಕಳೆದುಕೊಂಡು, ಧನುಸ್ಸುಗಳು

ತುಂಡಾಗಿರಲು ಪರಸ್ಪರರನ್ನು ಸೇರಿ ಬಾಹುಗಳಿಂದಲೇ ಯುದ್ಧ ಮಾಡುತ್ತಿದ್ದರು. ಆಗ ಮಹಾಬಲ ಭೀಷ್ಮನು ಮರ್ಮಸ್ಥಳಗಳನ್ನು ಭೇದಿಸುವ ಬಾಣಗಳಿಂದ ಮಹಾರಥರನ್ನು ಸಂಹರಿಸಿ ಪಂಡವರ ಸೇನೆಯನ್ನು ನಡುಗಿಸಿದನು. ಅವನಿಂದ ಯುಧಿಷ್ಠಿರನ ಸೇನೆಯಲ್ಲಿ ಬಹಳಷ್ಟು ಮನುಷ್ಯರು, ಆನೆಗಳು, ಅಶ್ವಾರೋಹಿಗಳು, ರಥಿಗಳು ಮತ್ತು ಕುದುರೆಗಳು ಹತರಾದವು. ಅಲ್ಲಿ ಭೀಷ್ಮನ ಪರಾಕ್ರಮವನ್ನು ನೋಡಿ ಶಕ್ರನದೇ ಅತ್ಯದ್ಭುತ ಪರಾಕ್ರಮವನ್ನು ನೋಡಿದಂತಾಯಿತು. ಹಾಗೆಯೇ ಧನ್ವಿಗಳಾದ ಭೀಮಸೇನನ, ಪಾರ್ಷತನ ಮತ್ತು ಸಾತ್ತ್ವತನ ಯುದ್ಧವೂ ರೌದ್ರವಾಗಿತ್ತು.

ದ್ರೋಣನ ವಿಕ್ರಾಂತವನ್ನು ನೋಡಿ ಪಾಂಡವರಿಗೆ ಭಯವು ತುಂಬಿಕೊಂಡಿತು.

> “ರಣದಲ್ಲಿ ಅವನೊಬ್ಬನೇ ಸೈನಿಕರೊಂದಿಗೆ ನಮ್ಮನ್ನು ಸಂಹರಿಸಲು ಶಕ್ತ. ಇನ್ನು ಲ್ಲಿ ಸೇರಿರುವ ಪೃಥ್ವಿಯ ಶೂರರೆಲ್ಲರದ್ದೇನು?”

ಎಂದು ರಣದಲ್ಲಿ ದ್ರೋಣನಿಂದ ಪೀಡಿತರಾದವರು ಹೇಳಿಕೊಂಡರು. ಹಾಗೆ ನಡೆಯುತ್ತಿದ್ದ ರೌದ್ರ ಸಂಗ್ರಾಮದಲ್ಲಿ ಎರಡೂ ಸೇನೆಗಳ ಶೂರರು ಪರಸ್ಪರರನ್ನು ಸಹಿಸಿಕೊಳುತ್ತಿರಲಿಲ್ಲ. ಆ ಮಹಾಬಲ ಧನ್ವಿಗಳು – ಕೌರವರು ಮತ್ತು ಪಾಂಡವೇಯರು - ರಾಕ್ಷಸ ಭೂತಗಳಿಂದ ಆವಿಷ್ಟರಾದ್ವರಂತೆ ಸಂರಬ್ಧರಾಗಿ ಯುದ್ಧ ಮಾಡುತ್ತಿದ್ದರು.

ದೈತ್ಯರದ್ದಂತಿದ್ದ ಆ ಸಂಗ್ರಾಮದಲ್ಲಿ ಯಾವ ಯೋಧನೂ ತನ್ನ ಪ್ರಾಣಗಳನ್ನು ರಕ್ಷಿಸಿಕೊಳ್ಳುತ್ತಿರಲಿಲ್ಲ.

## ಘಟೋತ್ಕಚನ ಯುದ್ಧ

ಇರಾವಂತನು ಹತನಾದುದನ್ನು ನೋಡಿ ರಾಕ್ಷಸ ಭೈಮಸೇನಿ ಘಟೋತ್ಕಚನು ಮಹಾಗರ್ಜನೆಯನ್ನು ಗರ್ಜಿಸಿದನು. ಅವನ ಕೂಗಿನ ಶಬ್ಧದಿಂದ ಪೃಥ್ವಿ, ಸಾಗರ, ಆಕಾಶ, ಪರ್ವತ-ವನಗಳು, ಅಂತರಿಕ್ಷ, ದಿಕ್ಕುಗಳು, ಉಪದಿಕ್ಕುಗಳು ಎಲ್ಲವೂ ನಡುಗಿದವು. ಆ ಮಹಾನಾದವನ್ನು ಕೇಳಿ ಕೌರವರ ಸೇನೆಯಲ್ಲಿರುವವರ ತೊಡೆಗಳು ಕಂಭಗಳಂತಾದವು ಮತ್ತು ಅವರ ಬೆವರಿಳಿಯಿತು. ಕೌರವರೆಲ್ಲರೂ ದೀನ ಚೇತಸರಾಗಿ ಸರ್ಪಗಳಂತೆ ಸುರುಳಿಸುತ್ತಿಕೊಂಡರು ಮತ್ತು ಸಿಂಹಕ್ಕೆ ಹೆದರಿದ ಆನೆಗಳಂತಾದರು. ಆ ಮಹಾ ಗರ್ಜನೆಯನ್ನು ಗರ್ಜಿಸಿ ರಾಕ್ಷಸನು ವಿಭೀಷಣ ರೂಪವನ್ನು ಮಾಡಿಕೊಂಡು, ಪ್ರಜ್ವಲಿಸುತ್ತಿರುವ ಶೂಲವನ್ನು ಎತ್ತಿಕೊಂಡು ನಾನಾ ಪ್ರಹರಣಗಳನ್ನು ಹಿಡಿದ ಘೋರ ರಾಕ್ಷಸಪುಂಗವರಿಂದ ಆವೃತನಾಗಿ ಕಾಲಾಂತಕ ಯಮನಂತೆ ಸಂಕ್ರುದ್ಧನಾಗಿ ಬಂದನು. ಸಂಕ್ರುದ್ಧನಾದ ಭೀಮದರ್ಶನನಾದ ಅವನು ಮೇಲೆ ಬೀಳುವುದನ್ನು ನೋಡಿ ಅವನ ಭಯದಿಂದ ಕೌರವ ಸೇನೆಯ ಹೆಚ್ಚು ಭಾಗವು ಪಲಾಯನ ಮಾಡಿತು. ಆಗ ರಾಜಾ ದುರ್ಯೋಧನನು ವಿಪುಲ ಚಾಪವನ್ನು ಹಿಡಿದು

ಸಿಂಹದಂತೆ ಪುನಃ ಪುನಃ ಗರ್ಜಿಸುತ್ತಾ ಘಟೋತ್ಕಚನ ಮೇಲೆ ಎರಗಿದನು.

ಅವನನ್ನು ಅನುಸರಿಸಿ ಮದೋದಕವನ್ನು ಸ್ರವಿಸುತ್ತಿರುವ ಪರ್ವತಗಳಂತಿರುವ ಹತ್ತು ಸಾವಿರ ಆನೆಗಳೊಂದಿಗೆ ಸ್ವಯಂ ವಂಗರಾಜನು ಹೋದನು. ಗಜಸೇನೆಯೊಂದಿಗೆ ಆವೃತನಾಗಿ ಆಕ್ರಮಣಿಸತ್ತಿರುವ ದುರ್ಯೋಧನನನ್ನು ನೋಡಿ ನಿಶಾಚರನು ಕುಪಿತನಾದನು. ಆಗ ರಾಕ್ಷಸರ ಮತ್ತು ದುರ್ಯೋಧನನ ಸೇನೆಗಳ ನಡುವೆ ರೋಮಾಂಚಕಾರೀ ತುಮುಲ ಯುದ್ಧವು ನಡೆಯಿತು. ಮೋಡಗಳ ಗುಂಪಿನಂತೆ ಮೇಲೇರಿ ಬರುತ್ತಿದ್ದ ಆ ಗಜಸೇನೆಯನ್ನು ನೋಡಿ ಶಸ್ತ್ರಗಳನ್ನು ಹಿಡಿದಿದ್ದ ಸಂಕ್ರುದ್ಧ ರಾಕ್ಷಸರು ಮುಂದೆ ಧಾವಿಸಿದರು. ವಿದ್ಯುತ್ತಿನಿಂದ ಕೂಡಿದ ಮೇಘಗಳಂತೆ ವಿವಿಧ ಗರ್ಜನೆಗಳನ್ನು ಮಾಡುತ್ತಾ ಅವರು ಬಾಣ-ಶಕ್ತಿ-ಋಷ್ಟಿ-ನಾರಾಚಗಳಿಂದ ಗಜಯೋಧಿಗಳನ್ನು ಸಂಹರಿಸಿದರು. ಭಿಂಡಿಪಾಲ, ಶೂಲ, ಮುದ್ಗರ, ಪರಶಾಯುಧ, ಪರ್ವತ ಶಿಖರಗಳು ಮತ್ತು ಮರಗಳಿಂದ ಆ ಮಹಾಗಜಗಳನ್ನು ಸಂಹರಿಸಿದರು. ನಿಶಾಚರರಿಂದ ವಧಿಸಲ್ಪಟ್ಟ ಕುಂಭಗಳು ಒಡೆದುಹೋಗಿರುವ, ಶರೀರಗಳು ರಕ್ತದಲ್ಲಿ ತೋಯ್ದು ಹೋಗಿರುವ, ಒಡೆದು ಹೋಗಿರುವ ಆನೆಗಳು ಕಂಡವು. ಆ ಗಜಯೋಧಿಗಳು ಭಗ್ನರಾಗಿ ಕಡಿಮೆಯಾಗಲು ದುರ್ಯೋಧನನು ರಾಕ್ಷಸರನ್ನು ಆಕ್ರಮಣಿಸಿದನು. ಕೋಪದ ವಶದಲ್ಲಿ ಬಂದು, ತನ್ನ

ಜೀವಿತವನ್ನೇ ತ್ಯಜಿಸಿ ಆ ಮಹಾಬಲನು ರಾಕ್ಷಸರ ಮೇಲೆ ನಿಶಿತ ಬಾಣಗಳನ್ನು ಪ್ರಯೋಗಿಸಿದನು. ಮಹೇಷ್ವಾಸ ದುರ್ಯೋಧನನು ಅಲ್ಲಿ ಸಂಕ್ರುದ್ಧನಾಗಿ ಪ್ರಧಾನ ರಾಕ್ಷಸರನ್ನು ಸಂಹರಿಸಿದನು. ಆ ಮಹಾರಥನು ವೇಗವಂತ, ಮಹಾರೌದ್ರ, ವಿದ್ಯುಜ್ಜಿಹ್ವ ಮತ್ತು ಪ್ರಮಾಥಿ ಈ ನಾಲ್ವರನ್ನು ನಾಲ್ಕು ಶರಗಳಿಂದ ಸಂಹರಿಸಿದನು. ಆಗ ಪುನಃ ಆ ಅಮೇಯಾತ್ಮನು ದುರಾಸದ ಶರವೃಷ್ಟಿಯನ್ನು ನಿಶಾಚರಸೇನೆಯ ಮೇಲೆ ಪ್ರಯೋಗಿಸಿದನು. ಅವನ ಆ ಮಹತ್ಕಾರ್ಯವನ್ನು ನೋಡಿ ಮಹಾಬಲ ಭೈಮಸೇನಿಯು ಕ್ರೋಧದಿಂದ ಭುಗಿಲೆದ್ದನು. ಇಂದ್ರನ ವಜ್ರದ ಧ್ವನಿಯಿರುವ ಮಹಾ ಧನುಸ್ಸನ್ನು ಟೇಂಕರಿಸಿ ಅರಿಂದಮ ದುರ್ಯೋಧನನನ್ನು ವೇಗದಿಂದ ಆಕ್ರಮಣಿಸಿದನು. ಕಾಲನಿಂದ ಬಿಡಲ್ಪಟ್ಟ ಅಂತಕನಂತಿರುವ ಅವನು ಮೇಲೆ ಬೀಳುವುದನ್ನು ನೋಡಿ ದುರ್ಯೋಧನನು ವ್ಯಥಿತನಾಗಲಿಲ್ಲ.

ಆಗ ಆ ಕ್ರೂರನು ಕ್ರೋಧದಿಂದ ಸಂರಕ್ತಲೋಚನನಾಗಿ ಹೇಳಿದನು:

> "ರಾಜನ್! ದುರ್ಬುದ್ಧೇ! ಕುಲಾಧಮ! ಪಾಂಡವರನ್ನು ಮೋಸದಿಂದ ಸೋಲಿಸಿ ಕ್ರೂರತನದಿಂದ ದೀರ್ಘಕಾಲ ಹೊರಗಟ್ಟಿದುದರ, ರಜಸ್ವಲೆಯಾಗಿದ್ದ ಏಕವಸ್ತ್ರವನ್ನು ಧರಿಸಿದ್ದ ಕೃಷ್ಣೆ ದ್ರೌಪದಿಯನ್ನು ಸಭೆಗೆ ಎಳೆದುತಂದು ಬಹುರೀತಿಯಾಗಿ ಕಷ್ಟಕೊಟ್ಟಿದುದರ, ನಿನಗೆ ಪ್ರಿಯವಾದುದನ್ನು ಬಯಸಿ ಆಶ್ರಮಸ್ಥರಾಗಿದ್ದ ನನ್ನ

ತಂದೆಯಂದಿರನ್ನು ಆ ದುರಾತ್ಮ ಸೈಂಧವನು ಕಾಡಿದುದರ ಈ ಎಲ್ಲ ಮತ್ತು ಇತರ ಅನ್ಯಾಯಗಳನ್ನು ಇಂದು, ರಣವನ್ನು ಬಿಟ್ಟು ನೀನು ಹೋಗದೇ ಇದ್ದರೆ, ಅಂತ್ಯಗೊಳಿಸಿಯೇ ಹೋಗುತ್ತೇನೆ.”

ಹೀಗೆ ಹೇಳಿ ಹೈಡಿಂಬಿಯು ಧನುಸ್ಸನ್ನು ಜೋರಾಗಿ ಎಳೆದು ಹತ್ತು ಬಾಣಗಳನ್ನು ಹೂಡಿ ತುಟಿಕಚ್ಚಿ, ಕಟವಾಯಿಗಳನ್ನು ನೆಕ್ಕುತ್ತಾ, ಮೋಡಗಳು ಮಳೆಯನೀರಿಂದ ಪರ್ವತವನ್ನು ಹೇಗೋ ಹಾಗೆ ಮಹಾ ಶರವರ್ಷದಿಂದ ದುರ್ಯೋಧನನನ್ನು ಮುಚ್ಚಿದನು.

ರಾಜೇಂದ್ರನು ದಾನವರಿಗೂ ಸಹಿಸಲಸಾಧ್ಯವಾದ ಅವನ ಆ ಬಾಣಗಳ ಮಳೆಯನ್ನು ಆನೆಯು ಹೇಗೆ ಮಳೆಯನ್ನು ಸಹಿಸಿಕೊಳ್ಳುತ್ತದೆಯೋ ಹಾಗೆ ಸಹಿಸಿಕೊಂಡನು. ಆಗ ಕ್ರೋಧಸಮಾವಿಷ್ಟನಾಗಿ, ಹಾವಿನಂತೆ ನಿಟ್ಟುಸಿರುಬಿಡುತ್ತಾ ದುರ್ಯೋಧನು ಪರಮ ಸಂಶಯವನ್ನು ತಾಳಿದನು. ಅವನು ಇಪ್ಪತ್ತೈದು ನಿಶಿತ ತೀಕ್ಷ್ಣ ನಾರಾಚಗಳನ್ನು ಪ್ರಯೋಗಿಸಿದನು. ತಕ್ಷಣವೇ ಅವು ಕೋಪಗೊಂಡ ಸರ್ಪಗಳು ಗಂಧಮಾದನ ಪರ್ವತವನ್ನು ಹೇಗೋ ಹಾಗೆ ಆ ರಾಕ್ಷಸ ಪುಂಗವನ ಮೇಲೆ ಬಿದ್ದವು. ಅವುಗಳಿಂದ ಗಾಯಗೊಂಡು ಕುಂಭಸ್ಥಳವು ಒಡೆದು ಆನೆಯಂತೆ ರಕ್ತವನ್ನು ಸುರಿಸುತ್ತಾ ರಾಜನ ವಿನಾಶವನ್ನು ನಿಶ್ಚಯಿಸಿದನು. ಆಗ ಪರ್ವತವನ್ನೂ ಸೀಳಬಲ್ಲ, ರಕ್ತವನ್ನು ಕುಡಿಯುವ ಮಹಾ ಶಕ್ತಿಯನ್ನು ಹಿಡಿದುಕೊಂಡನು.

ಆ ಮಹಾಉಲ್ಕೆಯಂತೆ ಉರಿಯುತ್ತಿರುವ, ಮಘವತನ ವಜ್ರದಂತಿರುವ ಅದನ್ನು ಮಹಾಬಾಹುವು ದುರ್ಯೋಧನನನ್ನು ಕೊಲ್ಲಲೋಸುಗ ಪ್ರಯೋಗಿಸಿದನು. ಅದು ಬೀಳುತ್ತಿರುವುದನ್ನು ನೋಡಿ ವಂಗದ ಅಧಿಪತಿಯು ತ್ವರೆಮಾಡಿ ಪರ್ವತದಂತಿರುವ ಆನೆಯೊಂದನ್ನು ರಾಕ್ಷಸನ ಕಡೆ ಓಡಿಸಿದನು. ಅವನು ಶ್ರೇಷ್ಠವಾದ, ಬಲಶಾಲಿಯಾದ, ವೇಗವಾಗಿ ಹೋಗಬಲ್ಲ ಆನೆಯ ಮೇಲೆ ಕುಳಿತು ದುರ್ಯೋಧನನ ರಥದ ಮಾರ್ಗಕ್ಕೆ ಅಡ್ಡಬಂದು ಆ ಆನೆಯಿಂದ ದುರ್ಯೋಧನನ ರಥವನ್ನು ತಡೆದನು.

ಧೀಮತ ವಂಗರಾಜನು ಮಾರ್ಗವನ್ನು ತಡೆದುದನ್ನು ನೋಡಿ ಕ್ರೋಧದಿಂದ ಕಣ್ಣುಗಳನ್ನು ಕೆಂಪಾಗಿಸಿಕೊಂಡು ಘಟೋತ್ಕಚನು ಎತ್ತಿ ಹಿಡಿದಿದ್ದ ಮಹಾಶಕ್ತಿಯನ್ನು ಆ ಆನೆಯ ಮೇಲೆ ಎಸೆದನು. ಅವನ ಬಾಹುಗಳಿಂದ ಹೊರಟ ಅದರಿಂದ ಹತವಾದ ಆನೆಯು ರಕ್ತವನ್ನು ಸುರಿಸಿ ನೋವಿನಿಂದ ಬಿದ್ದು ಸತ್ತುಹೋಯಿತು. ಆನೆಯು ಕೆಳಗೆ ಬೀಳುತ್ತಿದ್ದರೂ ಬಲಶಾಲೀ ವಂಗರಾಜನು ವೇಗದಿಂದ ಭೂಮಿಯ ಮೇಲೆ ಹಾರಿ ಇಳಿದನು. ದುರ್ಯೋಧನನೂ ಕೂಡ ಶ್ರೇಷ್ಠ ಆನೆಯು ಬಿದ್ದುದನ್ನು ನೋಡಿ ಮತ್ತು ತನ್ನ ಸೇನೆಯು ಭಗ್ನವಾದುದನ್ನು ನೋಡಿ ಪರಮ ವ್ಯಥಿತನಾದನು. ಕ್ಷತ್ರಧರ್ಮವನ್ನು ಗೌರವಿಸಿ, ಆತ್ಮಾಭಿಮಾನದಿಂದ ಪಲಾಯನಕ್ಕೆ ಸಂದರ್ಭವಾಗಿದ್ದರೂ ರಾಜನು ಪರ್ವತದಂತೆ ಅಚಲವಾಗಿದ್ದನು. ಪರಮ ಕ್ರುದ್ಧನಾಗಿ ಕಾಲಾಗ್ನಿತೇಜಸ್ಸಿನಿಂದ ಕೂಡಿದ್ದ ಹರಿತ ಬಾಣವನ್ನು ಹೂಡಿ ಅದನ್ನು

ಘೋರ ನಿಶಾಚರನ ಮೇಲೆ ಪ್ರಯೋಗಿಸಿದನು. ಇಂದ್ರನ ವಜ್ರದ ಪ್ರಭೆಯುಳ್ಳ ಆ ಬಾಣವು ಬೀಳುತ್ತಿರುವುದನ್ನು ನೋಡಿ ಮಹಾಕಾಯ ಘಟೋತ್ಕಚನು ಲಾಘವದಿಂದ ಅದನ್ನು ತಪ್ಪಿಸಿಕೊಂಡನು. ಇನ್ನೊಮ್ಮೆ ಅವನು ಕ್ರೋಧಸಂರಕ್ತಲೋಚನನಾಗಿ ಯುಗಾಂತದಲ್ಲಿ ಮೋಡಗಳು ಹೇಗೋ ಹಾಗೆ ಸರ್ವಭೂತಗಳನ್ನೂ ನಡುಗಿಸುತ್ತಾ ಜೋರಾಗಿ ಗರ್ಜಿಸಿದನು. ರಾಕ್ಷಸನ ಆ ಭಯಂಕರ ಘೋರ ಕೂಗನ್ನು ಕೇಳಿ ಭೀಷ್ಮ ಶಾಂತನವನು ಆಚಾರ್ಯನ ಬಳಿಬಂದು ಹೇಳಿದನು:

> "ರಾಕ್ಷಸನ ಈ ಘೋರ ಗರ್ಜನೆಯು ಕೇಳಿಬರುತ್ತಿದೆಯಲ್ಲವೇ? ಹೈಡಿಂಬಿಯು ರಾಜಾ ದುರ್ಯೋಧನನೊಡನೆ ನೇರ ಯುದ್ಧವನ್ನು ಮಾಡುತ್ತಿರುವಂತಿದೆ. ಇವನನ್ನು ಸಂಗ್ರಾಮದಲ್ಲಿ ಯಾವ ಜೀವಿಯು ಗೆಲ್ಲಲು ಶಕ್ಯವಿಲ್ಲ. ನೀವು ಅಲ್ಲಿಗೆ ಹೋಗಿ ರಾಜನನ್ನು ರಕ್ಷಿಸಿರಿ! ದುರಾತ್ಮ ರಾಕ್ಷಸನು ಮಹಾಭಾಗನನ್ನು ಆಕ್ರಮಣಿಸಿದ್ದಾನೆ. ಪರಂತಪರೇ! ಅವನನ್ನು ರಕ್ಷಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ!"

ಪಿತಾಮಹನ ಮಾತನ್ನು ಕೇಳಿ ಮಹಾರಥರು ತ್ವರೆಮಾಡಿ ಉತ್ತಮ ವೇಗದಿಂದ ಕೌರವನಿದ್ದಲ್ಲಿಗೆ ಹೊರಟರು. ದ್ರೋಣ, ಸೋಮದತ್ತ, ಬಾಹ್ಲಿಕ, ಜಯದ್ರಥ, ಕೃಪ, ಭೂರಿಶ್ರವ, ಶಲ್ಯ, ಚಿತ್ರಸೇನ, ವಿವಿಂಶತಿ, ಅಶ್ವತ್ಥಾಮ, ವಿಕರ್ಣ, ಅವಂತಿಯವರು, ಬೃಹದ್ಬಲ, ಮತ್ತು ಅವರನ್ನು ಹಿಂಬಾಲಿಸಿ ಅನೇಕ ಸಹಸ್ರ ರಥಗಳು ದುರ್ಯೋಧನನನ್ನು ರಕ್ಷಿಸಲು

ಧಾವಿಸಿ ಬಂದರು. ಲೋಕ ಸತ್ತಮರಿಂದ ಪಾಲಿತವಾದ ಆ ಅನಾಧೃಷ್ಠ ಸೇನೆಯೊಂದಿಗೆ ಬರುತ್ತಿದ್ದ ಆ ಆತತಾಯಿಯನ್ನು ನೋಡಿ ರಾಕ್ಷಸ ಸತ್ತಮ ಮಹಾಬಾಹುವು ಮೈನಾಕ ಪರ್ವತದಂತೆ ಅಲುಗಾಡಲಿಲ್ಲ. ಶೂಲ-ಮುದ್ಗರಗಳನ್ನೂ ನಾನಾ ಪ್ರಹರಣಗಳನ್ನೂ ಹಿಡಿದ ಜ್ಞಾತಿಗಳಿಂದ ಸುತ್ತುವರೆಯಲ್ಪಟ್ಟಿದ್ದ ಅವನು ವಿಪುಲವಾದ ಧನುಸ್ಸನ್ನು ಎತ್ತಿಕೊಂಡನು. ಆಗ ರಾಕ್ಷಸ ಮುಖ್ಯ ಮತ್ತು ದುರ್ಯೋಧನನ ಸೇನೆಯ ನಡುವೆ ರೋಮಾಂಚಕಾರಿಯಾದ ತುಮುಲ ಯುದ್ಧವು ನಡೆಯಿತು. ಧನುಸ್ಸುಗಳ ಟೇಂಕಾರದ ಶಬ್ಧವು ಎಲ್ಲಕಡೆ ಜೋರಾಗಿ ಬಿದಿರು ಮೆಳೆಗಳು ಸುಡುತ್ತಿರುವಂತೆ ಕೇಳಿ ಬರುತ್ತಿತ್ತು. ಶರೀರಗಳ ಕವಚಗಳ ಮೇಲೆ ಬೀಳುತ್ತಿದ್ದ ಶಸ್ತ್ರಗಳ ಶಬ್ಧವು ಪರ್ವತಗಳು ಸೀಳುತ್ತಿವೆಯೋ ಎಂಬಂತೆ ಕೇಳಿಬರುತ್ತಿತ್ತು. ವೀರಬಾಹುಗಳು ಪ್ರಯೋಗಿಸಿದ ತೋಮರಗಳು ಆಕಾಶದಲ್ಲಿ ತೀವ್ರಗತಿಯಲ್ಲಿ ಚಲಿಸುವ ಸರ್ಪಗಳಂತಿದ್ದವು.

ಆಗ ಮಹಾಬಾಹು ರಾಕ್ಷಸೇಂದ್ರನು ಮಹಾ ಧನುಸ್ಸನ್ನು ಟೇಂಕರಿಸಿ ಭೈರವ ಕೂಗನ್ನು ಕೂಗಿದನು. ಅವನು ಕ್ರುದ್ಧನಾಗಿ ಆಚಾರ್ಯನ ಧನುಸ್ಸನ್ನು ಅರ್ಧಚಂದ್ರ ಬಾಣದಿಂದ ಕತ್ತರಿಸಿದನು. ಭಲ್ಲದಿಂದ ಸೋಮದತ್ತನ ಧ್ವಜವನ್ನು ಹಾರಿಸಿ ಗರ್ಜಿಸಿದನು. ಮೂರು ಬಾಣಗಳಿಂದ ಬಾಹ್ಲಿಕನ ಎದೆಗೆ ಹೊಡೆದನು. ಒಂದರಿಂದ ಕೃಪನನ್ನೂ ಮೂರು ಶರಗಳಿಂದ ಚಿತ್ರಸೇನನನ್ನೂ ಹೊಡೆದನು. ಚೆನ್ನಾಗಿ ಸಂಪೂರ್ಣವಾಗಿ ಧನುಸ್ಸನ್ನು ಎಳೆದು ವಿಕರ್ಣನ ಜತ್ರುದೇಶಕ್ಕೆ

ಗುರಿಯಿಟ್ಟು ಹೊಡೆದನು. ಅವನು ರಕ್ತದಿಂದ ರಥದಲ್ಲಿಯೇ ಕುಸಿದು ಬಿದ್ದನು. ಪುನಃ ಆ ಅಮೇಯಾತ್ಮನು ಸಂಕ್ರುದ್ಧನಾಗಿ ಹದಿನೈದು ಬಾಣಗಳನ್ನು ಭೂರಿಶ್ರವನ ಮೇಲೆ ಪ್ರಯೋಗಿಸಿದನು. ಅವು ಅವನ ಕವಚವನ್ನು ಭೇದಿಸಿ ಶೀಘ್ರವಾಗಿ ಭೂಮಿಯ ಒಳಹೊಕ್ಕವು. ವಿವಿಂಶತಿ ಮತ್ತು ದ್ರೌಣಿಯರ ಸಾರಥಿಗಳನ್ನು ಹೊಡೆಯಲು ಅವರಿಬ್ಬರೂ ಕುದುರೆಗಳ ಕಡಿವಾಣಗಳನ್ನು ಬಿಟ್ಟು ರಥದಿಂದ ಕೆಳಕ್ಕೆ ಬಿದ್ದರು. ಅರ್ಧಚಂದ್ರ ಬಾಣದಿಂದ ವಾರಾಹ ಚಿಹ್ನೆಯ ಸ್ವರ್ಣಭೂಷಿತವಾದ ಸಿಂಧುರಾಜನ ಧ್ವಜವನ್ನು ಕತ್ತರಿಸಿ ಕೆಡವಿದನು. ಎರಡನೆಯದರಿಂದ ಅವನ ಬಿಲ್ಲನ್ನು ತುಂಡರಿಸಿದನು. ಆಗ ಕ್ರೋಧಸಂರಕ್ತಲೋಚನನಾದ ಆ ಮಹಾತ್ಮನು ಅವಂತಿಯವನ ನಾಲ್ಕು ಕುದುರೆಗಳನ್ನು ನಾಲ್ಕು ನಾರಾಚಗಳಿಂದ ಸಂಹರಿಸಿದನು. ಸಂಪೂರ್ಣವಾಗಿ ಎಳೆದು ಬಿಟ್ಟ ನಿಶಿತ ಬಾಣದಿಂದ ರಾಜಪುತ್ರ ಬೃಹದ್ಬಲನನ್ನು ಹೊಡೆದನು. ಆಳವಾಗಿ ಗಾಯಗೊಂಡ ಅವನು ವ್ಯಥಿತನಾಗಿ ರಥದಲ್ಲಿಯೇ ಕುಳಿತುಕೊಂಡನು. ಬಹಳ ಕೋಪದಿಂದ ಆವಿಷ್ಟನಾಗಿ ರಥದಲ್ಲಿ ನಿಂತಿದ್ದ ರಾಕ್ಷಸಾಧಿಪನು ಸರ್ಪಗಳ ವಿಷಕ್ಕೆ ಸಮಾನವಾದ ನಿಶಿತ ತೀಕ್ಷ್ಣ ಶರಗಳನ್ನು ಯುದ್ಧವಿಶಾರದ ಶಲ್ಯನ ಮೇಲೆ ಎಸೆಯಲು ಅವು ಅವನ ಶರೀರವನ್ನು ಭೇದಿಸಿದವು.

ಯುದ್ಧದಲ್ಲಿ ಅವರೆಲ್ಲರನ್ನೂ ವಿಮುಖರನ್ನಾಗಿ ಮಾಡಿ ರಾಕ್ಷಸನು ಕೊಲ್ಲಲು ಬಯಸಿ ದುರ್ಯೋಧನನನ್ನು ಆಕ್ರಮಣಿಸಿದನು. ರಾಜನ ಮೇಲೆ ವೇಗದಿಂದ ಬೀಳುತ್ತಿದ್ದ ಅವನನ್ನು ನೋಡಿ

ಯುದ್ಧದುರ್ಮದರಾದ ಕೌರವರು ಅವನನ್ನು ಸಂಹರಿಸುವ ಸಲುವಾಗಿ ಧಾವಿಸಿ ಬಂದರು. ತಾಲಪ್ರಮಾಣದ (ಸುಮಾರು ನಲ್ಕು ಮೊಳ ಉದ್ದದ) ಬಿಲ್ಲುಗಳನ್ನು ಎಳೆಯುತ್ತಾ ಮತ್ತು ಸಿಂಹಗಳ ಹಿಂಡಿನಂತೆ ಗರ್ಜಿಸುತ್ತಾ ಆ ಮಹಾಬಲರು ಅವನೊಬ್ಬನನ್ನೇ ಆಕ್ರಮಣಿಸಿದರು. ಆಗ ಅವನನ್ನು ಎಲ್ಲ ಕಡೆಗಳಿಂದ ಸುತ್ತುವರೆದು ಮೋಡಗಳು ಪರ್ವತವನ್ನು ಮಳೆಯ ನೀರಿನಿಂದ ಮುಚ್ಚಿಬಿಡುವಂತೆ ಬಾಣಗಳ ಮಳೆಯಿಂದ ಮುಚ್ಚಿದರು. ಗಾಢವಾಗಿ ಗಾಯಗೊಂಡು ಅಂಕುಶಗಳಿಂದ ತಿವಿಯಲ್ಪಟ್ಟ ಆನೆಯಂತೆ ವ್ಯಥಿತನಾಗಿ ಅವನು ಎಲ್ಲಕಡೆ ಹಾರಬಲ್ಲ ವೈನತೇಯನಂತೆ ಆಕಾಶಕ್ಕೆ ಹಾರಿದನು. ಕರ್ಕಶಧ್ವನಿಯುಳ್ಳ ಅವನು ಶರದೃತುವಿನ ಮೇಘದಂತೆ ದಿಕ್ಕುಗಳನ್ನೂ, ಆಕಾಶವನ್ನೂ, ಉಪದಿಕ್ಕುಗಳನ್ನೂ ಮೊಳಗಿಸುವಂತೆ ಜೋರಾಗಿ ಗರ್ಜಿಸಿದನು. ರಾಕ್ಷಸನ ಆ ಶಬ್ಧವನ್ನು ಕೇಳಿ ಭರತಶ್ರೇಷ್ಠ ರಾಜಾ ಯುಧಿಷ್ಠಿರನು ಭೀಮಸೇನನಿಗೆ ಹೇಳಿದನು:

> “ಅಯ್ಯಾ! ಭೈರವ ಸ್ವರದಲ್ಲಿ ಕೂಗುತ್ತಿರುವುದನ್ನು ಕೇಳಿದರೆ ರಾಕ್ಷಸನು ಮಹಾರಥ ಧಾರ್ತರಾಷ್ಟ್ರರೊಂದಿಗೆ ಯುದ್ಧ ಮಾಡುತ್ತಿರುವವನೆಂದು ತೋರುತ್ತಿದೆ. ಅಲ್ಲಿ ಅವನು ಅತಿ ಭಾರವಾದ ಕೆಲಸವನ್ನೇ ಮಾಡುತ್ತಿದ್ದಾನೆ. ಪಿತಾಮಹನೂ ಕೂಡ ಸಂಕ್ರುದ್ಧನಾಗಿ ಪಾಂಚಾಲರನ್ನು ಕೊಲ್ಲಲು ತೊಡಗಿದ್ದಾನೆ. ಅವರನ್ನು ರಕ್ಷಿಸಲೋಸುಗ ಫಲ್ಗುನನು ಶತ್ರುಗಳೊಂದಿಗೆ ಯುದ್ಧಮಾಡುತ್ತಿದ್ದಾನೆ. ಮಹಾಬಾಹೋ!

ಇದನ್ನು ಕೇಳಿದರೆ ಎರಡು ಕಾರ್ಯಗಳು ಬಂದೊದಗಿವೆ. ಹೋಗು ! ಪರಮ ಸಂಶಯದಲ್ಲಿರುವ ಹೈಡಿಂಬಿಯನ್ನು ರಕ್ಷಿಸು !”

ಅಣ್ಣನ ಮಾತನ್ನು ತಿಳಿದುಕೊಂಡು ವೃಕೋದರನು ತ್ವರೆಮಾಡಿ ಸಿಂಹನಾದದಿಂದ ಸರ್ವ ಪಾರ್ಥಿವರನ್ನು ನಡುಗಿಸುತ್ತಾ, ಪರ್ವಕಾಲದಲ್ಲಿ ಸಾಗರವು ಹೇಗೋ ಹಾಗೆ ಮಹಾ ವೇಗದಿಂದ ಆಗಮಿಸಿದನು. ಅವನನ್ನೇ ಹಿಂಬಾಲಿಸಿ ಸತ್ಯಧೃತಿ, ಯುದ್ಧದುರ್ಮದ ಸೌಚಿತ್ತಿ, ಶ್ರೇಣಿಮಾನ್, ವಸುದಾನ, ಕಾಶಿರಾಜನ ಮಗ ಅಭಿಭೂ, ಅಭಿಮನ್ಯುವಿನ ನಾಯಕತ್ವದಲ್ಲಿ ಮಹಾರಥ ದ್ರೌಪದೇಯರು, ಪರಾಕ್ರಮಿ ಕ್ಷತ್ರದೇವ, ಕ್ಷತ್ರಧರ್ಮ, ಹಾಗೆಯೇ ಅನೂಪಾಧಿಪ ಸ್ವಬಲಾಶ್ರಯಿ ನೀಲ ಇವರು ಮಹಾ ರಥಗುಂಪುಗಳಿಂದ ಬಂದು ಹೈಡಿಂಬನನ್ನು ಸುತ್ತುವರೆದರು. ಆರು ಸಾವಿರ ಸದಾ ಮತ್ತಿನಲ್ಲಿರುವ ಆನೆಗಳು ಮತ್ತು ಪ್ರಹಾರಿಗಳು ಒಟ್ಟಿಗೇ ರಾಕ್ಷಸೇಂದ್ರ ಘಟೋತ್ಕಚನನ್ನು ರಕ್ಷಿಸುತ್ತಿದ್ದರು. ಮಹಾಸಿಂಹನಾದದಿಂದ, ರಥದ ಗಾಲಿಗಳ ಘೋಷದಿಂದ, ಕುದುರೆಗಳ ಖುರಪುಟಗಳ ಶಬ್ಧಗಳಿಂದ ಅವರು ಭೂಮಿಯನ್ನೇ ನಡುಗಿಸಿದರು. ಅವರು ಹೀಗೆ ಮೇಲೆ ಎರಗಿ ಬರುವ ಶಬ್ಧವನ್ನು ಕೇಳಿ ಕೌರವ ಸೇನೆಯು ಭೀಮಸೇನನ ಭಯದಿಂದ ಉದ್ವಿಗ್ನವಾಗಿ ಮುಖದ ಕಳೆಯನ್ನು ಕಳೆದುಕೊಂಡು ಘಟೋತ್ಕಚನನ್ನು ಮುತ್ತಿಗೆ ಹಾಕುವುದನ್ನು ನಿಲ್ಲಿಸಿತು. ಆಗ ಅಲ್ಲಲ್ಲಿ ಸಂಗ್ರಾಮದಿಂದ ಹಿಂದೆಸರಿಯದೇ ಇದ್ದ ಮಹಾತ್ಮ ಕೌರವರ ಮತ್ತು ಪಾಂಡವರ ನಡುವೆ

ಯುದ್ಧವು ಪ್ರಾರಂಭವಾಯಿತು.

## ಸಂಕುಲಯುದ್ಧ

ನಾನಾ ರೂಪದ ಶಸ್ತ್ರಗಳನ್ನು ಪ್ರಯೋಗಿಸುತ್ತಾ ಆ ಮಹಾರಥರು ಅನ್ಯೋನ್ಯರ ಮೇಲೆ ಎರಗಿ ಪ್ರಹಾರಮಾಡ ತೊಡಗಿದರು. ಭೀರುಗಳಿಗೆ ಭಯವನ್ನುಂಟುಮಾಡುವ ಮಹಾರೌದ್ರ ಸಂಕುಲ ಯುದ್ಧವು ಅಲ್ಲಿ ನಡೆಯಿತು. ಮಹಾಯಶಸನ್ನು ಬಯಸಿದ ಕುದುರೆಗಳು ಆನೆಗಳನ್ನು ಮತ್ತು ಪದಾತಿಗಳು ರಥಿಗಳನ್ನು ಎದುರಿಸಿ ಸಮರದಲ್ಲಿ ಅನ್ಯೋನ್ಯರನ್ನು ಆಕ್ರಮಣಿಸಿದರು. ಗಜಾಶ್ವರಥಪದಾತಿಗಳ ಪದಸಂಘಟ್ಟನೆಯಿಂದ ಮತ್ತು ರಥಚಕ್ರಗಳಿಂದ ಮಹಾ ಧೂಳು ತೀವ್ರವಾಗಿ ಹುಟ್ಟಿತು. ಹುಟ್ಟಿದ ಧೂಳು ಸ್ವಲ್ಪ ಹೊತ್ತಿನಲ್ಲಿಯೇ ರಣಾಂಗಣವನ್ನು ಆವರಿಸಿತು. ಅಲ್ಲಿ ಕೌರವರ ಕಡೆಯವರಾಗಲೀ ಶತ್ರುಗಳ ಕಡೆಯವರಾಗಲೀ ಯಾರು ಯಾರೆಂಬುದನ್ನು ತಿಳಿಯಲೂ ಸಾಧ್ಯವಾಗುತ್ತಿರಲಿಲ್ಲ. ಮರ್ಯಾದೆಯೇ ಇಲ್ಲದ, ರೋಮಾಂಚಕಾರಿಯಾದ, ಜೀವಿಗಳ ಸಂಹಾರಕಾರಿಯಾದ ಆ ಯುದ್ಧದಲ್ಲಿ ತಂದೆಯು ಮಗನನ್ನಾಗಲೀ ಮಗನು ತಂದೆಯನ್ನಾಗಲೀ ಗುರುತಿಸಲಾಗುತ್ತಿರಲಿಲ್ಲ. ಶಸ್ತ್ರಗಳ ಮತ್ತು ಮನುಷ್ಯರ ಗರ್ಜನೆಯಿಂದ ಬಿದಿರುಮೆಳೆಗಳು ಸುಡುತ್ತಿರುವಂತೆ ಮಹಾ ಶಬ್ಧವುಂಟಾಯಿತು. ಆನೆ-ಕುದುರೆ-ಮನುಷ್ಯರ ರಕ್ತವೇ ನೀರಾಗಿ, ಕರುಳುಗಳೇ ಪ್ರವಾಹವಗಿರುವ, ತಲೆಗೂದಲುಗಳೇ ಪಾಚಿ ಹುಲ್ಲುಗಳಾಗಿರುವ ನದಿಯು ಅಲ್ಲಿ ಹರಿಯಿತು. ರಣದಲ್ಲಿ ಮನುಷ್ಯರ ದೇಹದಿಂದ ಬೀಳುತ್ತಿರುವ

ತಲೆಗಳಿಂದ ಕಲ್ಲುಗಳು ಬೀಳುವಂತೆ ಮಹಾ ಶಬ್ಧವು ಕೇಳಿಬರುತ್ತಿತ್ತು. ಶಿರಗಳಿಲ್ಲದ ಮನುಷ್ಯರಿಂದಲೂ, ಛಿನ್ನ-ಭಿನ್ನವಾದ ಆನೆಗಳ ದೇಹಗಳಿಂದಲೂ, ಕತ್ತರಿಸಲ್ಪಟ್ಟ ಕುದುರೆಗಳ ದೇಹಗಳಿಂದಲೂ ವಸುಂಧರೆಯು ತುಂಬಿಹೋಯಿತು. ನಾನಾವಿಧವಾದ ಶಸ್ತ್ರಗಳನ್ನು ಪ್ರಯೋಗಿಸುತ್ತಾ ಮಹಾರಥರು ಅನ್ಯೋನ್ಯರನ್ನು ಆಕ್ರಮಣಿಸಿ ಹೊಡೆಯ ತೊಡಗಿದರು.

ಅಶ್ವಾರೋಹಿಗಳಿಂದ ಕಳುಹಿಸಲ್ಪಟ್ಟ ಕುದುರೆಗಳು ಕುದುರೆಗಳೊಡನೆ ಅನ್ಯೋನ್ಯರೊಡನೆ ಹೋರಾಡಿ ರಣದಲ್ಲಿ ಜೀವವನ್ನು ತೊರೆದು ಬೀಳುತ್ತಿದ್ದವು. ತುಂಬಾ ಕ್ರೋಧದಿಂದ ಕಣ್ಣುಗಳನ್ನು ಕೆಂಪು ಮಾಡಿಕೊಂಡು ಮನುಷ್ಯರು ಮನುಷ್ಯರನ್ನು ಅನ್ಯೋನ್ಯರನ್ನು ಬಿಗಿದಪ್ಪಿ ಹಿಗ್ಗಾಮುಗ್ಗಾಗಿ ಸೆಳೆದಾಡಿ ಬೀಳಿಸಿ ಸಂಹರಿಸುತ್ತಿದ್ದರು. ಕಳುಹಿಸಲ್ಪಟ್ಟ ಮಹಾಗಾತ್ರದ ಆನೆಗಳು ಶತ್ರುಗಳ ಆನೆಗಳನ್ನು ಸೊಂಡಿಲುಗಳಿಂದ ಹಿಡಿದೆಳೆದು ಸಂಯುಗದಲ್ಲಿ ದಂತಗಳಿಂದ ತಿವಿದು ಗಾಯಗೊಳಿಸುತ್ತಿದ್ದವು. ಪತಾಕೆಗಳಿಂದ ಅಲಂಕೃತವಾಗಿದ್ದ ಅವುಗಳು ರಕ್ತಮಯವಾಗಿ ವಿದ್ಯುತ್ತಿನಿಂದ ಕೂಡಿದ ಮೇಘಗಳಂತೆ ತೋರುತ್ತಿದ್ದವು. ಕೆಲವುಗಳ ಅಗ್ರಭಾಗಗಳು ಒಡೆದಿದ್ದವು. ಕೆಲವುಗಳ ಕುಂಭಗಳು ತೋಮರಗಳಿಂದ ಒಡೆದುಹೋಗಿದ್ದವು. ಅವು ಮೋಡಗಳಂತೆ ಗರ್ಜಿಸುತ್ತಾ ಓಡಿ ಹೋಗುತ್ತಿದ್ದವು. ಕೆಲವುಗಳ ಸೊಂಡಿಲುಗಳು ತುಂಡಾಗಿದ್ದವು. ಇನ್ನು ಕೆಲವುಗಳ ಶರೀರವೇ ತುಂಡಾಗಿತ್ತು. ರೆಕ್ಕೆಗಳು ಕತ್ತರಿಸಲ್ಪಟ್ಟ ಪರ್ವತಗಳಂತೆ ಅವು ರಣಾಂಗಣದಲ್ಲಿ ಬಿದ್ದಿದ್ದವು.

ಇತರ ಶ್ರೇಷ್ಠ ಆನೆಗಳ ಪಕ್ಕೆಗಳನ್ನು ಇತರ ಆನೆಗಳು ಇರಿದು ಅವು ಖನಿಜವನ್ನು ಸುರಿಸುವ ಪರ್ವತಗಳಂತೆ ರಕ್ತವನ್ನು ಸುರಿಸುತ್ತಿದ್ದವು. ಕೆಲವು ನಾರಾಚಗಳಿಂದ ಹತವಾಗಿದ್ದವು. ಕೆಲವು ತೋಮರಗಳಿಂದ ಹೊಡೆಯಲ್ಪಟ್ಟಿದ್ದವು. ಆರೋಹಿಗಳು ಹತರಾಗಿ ಅವು ಶೃಂಗಗಳಿಲ್ಲದ ಪರ್ವತಗಳಂತೆ ತೋರುತ್ತಿದ್ದವು. ಕೆಲವು ಮದಾಂಧರಾಗಿ ಕ್ರೋಧಸಮಾವಿಷ್ಟಗೊಂಡು, ನಿಯಂತ್ರಣವಿಲ್ಲದೇ ರಣದಲ್ಲಿ ನೂರಾರು ರಥ-ಕುದುರೆ-ಪದಾತಿಗಳನ್ನು ತುಳಿದು ನಾಶಪಡಿಸಿದವು. ಹಾಗೆಯೇ ಪ್ರಾಸತೋಮರಗಳಿಂದ ಹಯಾರೋಹಿಗಳಿಂದ ಹೊಡೆಯಲ್ಪಟ್ಟ ಕುದುರೆಗಳು ದಿಕ್ಕುಗೆಟ್ಟು ಓಡುತ್ತಾ ವ್ಯಾಕುಲವನ್ನುಂಟುಮಾಡುತ್ತಾ ಓಡಿ ಹೋಗುತ್ತಿದ್ದವು. ಕುಲಪುತ್ರರಾದ ರಥಿಗಳು ದೇಹವನ್ನು ತ್ಯಜಿಸಿ ಭೀತಿಯಿಲ್ಲದೆ ಇತರ ರಥಿಗಳೊಂದಿಗೆ ಪರಮ ಶಕ್ತಿಯನ್ನು ಉಪಯೋಗಿಸಿ ಹೋರಾಡಿದರು. ಯಶಸ್ಸು ಅಥವಾ ಸ್ವರ್ಗವನ್ನು ಬಯಸಿದ ಆ ಯುದ್ಧಶಾಲಿಗಳು ಸ್ವಯಂವರದಂತೆ ಪರಸ್ಪರರನ್ನು ಆರಿಸಿಕೊಂಡು ಪ್ರಹರಿಸುತ್ತಿದ್ದರು. ಹಾಗೆ ನಡೆಯುತ್ತಿದ್ದ ರೋಮಾಂಚಕಾರೀ ಸಂಗ್ರಾಮದಲ್ಲಿ ಧಾರ್ತರಾಷ್ಟ್ರನ ಮಹಾ ಸೈನ್ಯದ ಹೆಚ್ಚು ಭಾಗವು ಯುದ್ಧದಿಂದ ಹಿಂದೆ ಸರಿಯಿತು.

## ಭೀಮ-ಘಟೋತ್ಕಚರ ಪರಾಕ್ರಮ

ತನ್ನ ಸೈನ್ಯವು ನಾಶವಾಗುತ್ತಿರುವುದನ್ನು ನೋಡಿ ರಾಜಾ ದುರ್ಯೋಧನನು ಸಂಕೃದ್ಧನಾಗಿ ಸ್ವಯಂ ತಾನೇ ಅರಿಂದಮ

ಭೀಮಸೇನನನ್ನು ಎದುರಿಸಿದನು. ಇಂದ್ರನ ವಜ್ರಾಯುಧಕ್ಕೆ ಸಮನಾದ ಅತಿದೊಡ್ಡ ಧನುಸ್ಸನ್ನು ತೆಗೆದುಕೊಂಡು ಮಹಾ ಶರವರ್ಷದಿಂದ ಪಾಂಡವನನ್ನು ಮುಚ್ಚಿದನು. ತೀಕ್ಷ್ಣವಾದ ಲೋಮವಾಹಿನಿ ಅರ್ಧಚಂದ್ರವನ್ನು ಹೂಡಿ ಕ್ರೋಧಸಮನ್ವಿತನಾದ ಅವನು ಭೀಮಸೇನನ ಚಾಪವನ್ನು ಕತ್ತರಿಸಿದನು. ಅನಂತರ ಅದೇ ಸರಿಯಾದ ಸಮಯವೆಂದು ಭಾವಿಸಿ ಅತ್ಯವಸರದಿಂದ ಆ ಮಹಾರಥನು ಪರ್ವತವನ್ನೂ ಸೀಳಬಲ್ಲ ನಿಶಿತ ಬಾಣವನ್ನು ಹೂಡಿ ಅದರಿಂದ ಮಹಾಬಾಹು ಭೀಮನ ಎದೆಗೆ ಹೊಡೆದನು. ಆಳವಾಗಿ ಗಾಯಗೊಂಡು ನೋವಿನಿಂದ ನೊಂದ ತೇಜಸ್ವಿ ಭೀಮನು ಕಟವಾಯಿಗಳನ್ನು ನೆಕ್ಕುತ್ತಾ ಸುವರ್ಣಭೂಷಿತವಾದ ಧ್ವಜದಂಡವನ್ನೇ ಅವಲಂಬನೆಯನ್ನಾಗಿ ಹಿಡಿದು ಕುಳಿತುಕೊಂಡನು. ಭೀಮಸೇನನು ಹಾಗೆ ವಿಮನಸ್ಕನಾಗಿದುದನ್ನು ನೋಡಿ ಘಟೋತ್ಕಚನು ಕ್ರೋಧದಿಂದ ವಿಶ್ವವನ್ನೇ ಸುಡಲಿಚ್ಛಿಸುವ ಅಗ್ನಿಯಂತೆ ಪ್ರಜ್ವಲಿಸಿದನು. ಅಭಿಮನ್ಯುವಿನ ನಾಯಕತ್ವದಲ್ಲಿದ್ದ ಪಾಂಡವರ ಮಹಾರಥರೂ ಕೂಡ ಕೂಗುತ್ತಾ ಸಂಭ್ರಮದಿಂದ ಅಲ್ಲಿಗೆ ಧಾವಿಸಿದರು. ಸಂಭ್ರಮದಿಂದ ಸಂಕ್ರುದ್ಧರಾಗಿ ಮೇಲೆ ಎರಗುತ್ತಿರುವ ಅವರನ್ನು ನೋಡಿ ಭಾರದ್ವಾಜನು ಕೌರವ ಮಹಾರಥರಿಗೆ ಹೇಳಿದನು:

"ನಿಮಗೆ ಮಂಗಳವಾಗಲಿ! ಬೇಗನೆ ಹೋಗಿ! ರಾಜನನ್ನು ಪರಿರಕ್ಷಿಸಿ. ಚಿಂತೆಯೆಂಬ ಸಾಗರದಲ್ಲಿ ಮುಳುಗಿರುವ ಅವನು ಉಳಿಯುತ್ತಾನೋ ಇಲ್ಲವೋ ಎಂಬ ಪರಮ ಸಂಶಯವು

> ಹುಟ್ಟಿದೆ! ಪಾಂಡವರ ಮಹೇಷ್ವಾಸ ಮಹಾರಥರು ಕ್ರುದ್ಧರಾಗಿ ಭೀಮಸೇನನನ್ನು ಮುಂದಿರಿಸಿಕೊಂಡು, ವಿಜಯವನ್ನೇ ಉದ್ದೇಶವನ್ನಾಗಿಟ್ಟುಕೊಂಡು, ನಾನಾವಿಧದ ಶಸ್ತ್ರಗಳನ್ನು ಪ್ರಯೋಗಿಸುತ್ತಾ, ಭೈರವ ಕೂಗುಗಳನ್ನು ಕೂಗಿ ಈ ಭೂಮಿಯನ್ನು ನಡುಗಿಸುತ್ತಾ ದುರ್ಯೋಧನನನ್ನು ಆಕ್ರಮಣಿಸಿದ್ದಾರೆ."

ಆಚಾರ್ಯನ ಆ ಮಾತನ್ನು ಕೇಳಿ ಸೋಮದತ್ತನೇ ಮೊದಲಾದ ಕೌರವರು ಪಾಂಡವರ ಸೇನೆಯನ್ನು ಎದುರಿಸಿದರು. ಕೃಪ, ಭೂರಿಶ್ರವ, ಶಲ್ಯ, ದ್ರೋಣಪುತ್ರ, ವಿವಿಂಶತಿ, ಚಿತ್ರಸೇನ, ವಿಕರ್ಣ, ಸೈಂಧವ, ಬೃಹದ್ಬಲ, ಮತ್ತು ಅವಂತಿಯ ಮಹೇಷ್ವಾಸರಿಬ್ಬರು ಕೌರವನನ್ನು ಸುತ್ತುವರೆದರು. ಅವರು ಇಪ್ಪತ್ತು ಹೆಜ್ಜೆಗಳಷ್ಟು ಮುಂದೆ ಹೋಗಿ ಪಾಂಡವರು ಮತ್ತು ಧಾರ್ತರಾಷ್ಟ್ರರು ಪರಸ್ಪರರನ್ನು ಸಂಹರಿಸಲು ಬಯಸಿ ಯುದ್ಧವನ್ನು ಪ್ರಾರಂಭಿಸಿದರು. ಹೀಗೆ ಹೇಳಿ ಮಹಾಬಾಹು ಭಾರದ್ವಾಜನು ಧನುಸ್ಸನ್ನು ಜೋರಾಗಿ ಟೇಂಕರಿಸಿ ಭೀಮನನ್ನು ಇಪ್ಪತ್ತಾರು ಬಾಣಗಳಿಂದ ಪ್ರಹರಿಸಿದನು. ಪುನಃ ಆ ಮಹಾಬಾಹುವು ಶೀಘ್ರವಾಗಿ ಮಳೆಗಾಲದಲ್ಲಿ ಮೋಡವು ಮಳೆನೀರನ್ನು ಪರ್ವತದ ಮೇಲೆ ಸುರಿಸುವಂತೆ ಅವನ ಮೇಲೆ ಬಾಣಗಳನ್ನು ಸುರಿದು ಮುಚ್ಚಿದನು. ಆಗ ಮಹೇಷ್ವಾಸ ಮಹಾಬಲ ಭೀಮಸೇನನು ಅವುಗಳಿಗೆ ಪ್ರತಿಯಾಗಿ ತ್ವರೆಮಾಡಿ ಹತ್ತು ಶಿಲೀಮುಖಗಳಿಂದ ಅವನ ಎಡ ಪಾರ್ಶ್ವಕ್ಕೆ ಹೊಡೆದನು. ಗಾಢವಾಗಿ ಪೆಟ್ಟುತಿಂದು ವ್ಯತಿಥನಾದ ಆ

ವಯೋವೃದ್ಧನು ಸಂಜ್ಞೆಗಳನ್ನು ಕಳೆದುಕೊಂಡು ರಥದಲ್ಲಿ ಕುಸಿದು ಕುಳಿತುಕೊಂಡನು. ಗುರುವನ್ನು ನೋಯಿಸಿದುದನ್ನು ನೋಡಿ ಸ್ವಯಂ ರಾಜಾ ದುರ್ಯೋಧನ ಮತ್ತು ದ್ರೌಣಿ ಇಬ್ಬರೂ ಸಂಕ್ರುದ್ಧರಾಗಿ ಭೀಮಸೇನನ ಮೇಲೆ ಎರಗಿದರು.

ಕಾಲಾಂತಕ ಯಮರಂತಿರುವ ಅವರಿಬ್ಬರೂ ಮೇಲೆ ಬೀಳುತ್ತಿರುವುದನ್ನು ನೋಡಿ ಮಹಾಬಾಹು ಭೀಮಸೇನನು ಭಾರವಾದ ಗದೆಯನ್ನು ತೆಗೆದುಕೊಂಡು ತಕ್ಷಣವೇ ರಥದಿಂದ ಕೆಳಗೆ ಹಾರಿ, ಯಮದಂಡದಂತಿರುವ ಆ ಭಾರವಾದ ಗದೆಯನ್ನು ಎತ್ತಿ ಹಿಡಿದು ರಣದಲ್ಲಿ ಪರ್ವತದಂತೆ ಅಚಲವಾಗಿ ನಿಂತನು. ಶಿಖರದಿಂದ ಕೂಡಿದ ಕೈಲಾಸಪರ್ವತದಂತೆ ಗದೆಯನ್ನೆತ್ತಿ ನಿಂತಿದ್ದ ಅವನನ್ನು ನೋಡಿ ಕೌರವ ಮತ್ತು ದ್ರೋಣಪುತ್ರರು ಒಟ್ಟಿಗೇ ಆಕ್ರಮಣಿಸಿದರು. ಅವರಿಬ್ಬರು ಬಲಿಗಳಲ್ಲಿ ಶ್ರೇಷ್ಠರು ಒಟ್ಟಿಗೇ ತ್ವರೆಮಾಡಿ ಮೇಲೆ ಬೀಳುತ್ತಿರಲು ವೃಕೋದರನೂ ಕೂಡಿ ತ್ವರೆಮಾಡಿ ವೇಗದಿಂದ ಅವರ ಮೇಲೆ ಎರಗಿದನು. ಸಂಕ್ರುದ್ಧನಾದ, ನೋಡಲು ಭಯಂಕರನಾಗಿದ್ದ ಅವನನ್ನು ನೋಡಿ ಕೌರವರ ಮಹಾರಥರು ತ್ವರೆಮಾಡಿ ಮುಂದೆ ಬಂದರು. ಭಾರದ್ವಾಜಪ್ರಮುಖರೆಲ್ಲರೂ ಭೀಮಸೇನನನ್ನು ಕೊಲ್ಲಲು ಬಯಸಿ ನಾನಾವಿಧದ ಶಸ್ತ್ರಗಳನ್ನು ಭೀಮಸೇನನ ಎದೆಯ ಮೇಲೆ ಪ್ರಯೋಗಿಸಿ, ಎಲ್ಲರೂ ಒಟ್ಟಿಗೇ ಎಲ್ಲ ಕಡೆಗಳಿಂದ ಪಾಂಡವನನ್ನು ಪೀಡಿಸಿದರು. ಪೀಡಿತನಾಗಿದ್ದ ಆ ಮಹಾರಥನನ್ನು ನೋಡಿ ಸಂಶಯವನ್ನು ತಾಳಿ ಅಭಿಮನ್ಯುವೇ ಮೊದಲಾದ ಪಾಂಡವರ ಮಹಾರಥರು ತಮ್ಮ

ಪ್ರಾಣಗಳನ್ನು ತ್ಯಜಿಸಿ ಅವನನ್ನು ಪರಿರಕ್ಷಿಸಲು ಅವನ ಬಳಿ ಧಾವಿಸಿ ಬಂದರು. ಆಗ ಅನೂಪಾಧಿಪತಿ, ಶೂರ, ಭೀಮನ ಪ್ರಿಯ ಮಿತ್ರ, ನಿತ್ಯವೂ ದ್ರೋಣಸುತನೊಡನೆ ಸ್ಪರ್ಧಿಸುವ ನೀಲಾಂಬುದನೆಂದು ಪ್ರಖ್ಯಾತನಾದ ನೀಲನು ಸಂಕ್ರುದ್ಧನಾಗಿ ದ್ರೌಣಿಯನ್ನು ಆಕ್ರಮಣಿಸಿದನು. ಅವನು ಮಹಾಚಾಪವನ್ನು ಟೇಂಕರಿಸಿ ದ್ರೌಣಿಯನ್ನು ಹಿಂದೆ ಹೇಗೆ ಶಕ್ರನು ತನ್ನ ತೇಜಸ್ಸು ಮತ್ತು ಕ್ರೋಧದಿಂದ ಮೂರು ಲೋಕಗಳನ್ನೂ ನಡುಗಿಸುತ್ತಿದ್ದ ದಾನವ, ದೇವತೆಗಳ ಭಯಂಕರ, ದುರಾಧರ್ಷ, ವಿಪ್ರಚಿತ್ತಿಯನ್ನು ಹೇಗೋ ಹಾಗೆ ಪತ್ರಿಗಳಿಂದ ಹೊಡೆದನು. ಹಾಗೆ ನೀಲನ ಸುಮುಖ ಪತತ್ರಿಗಳಿಂದ ಗಾಯಗೊಂಡು ರಕ್ತ ಸುರಿಸಿ ಪೀಡಿತನಾದ ದ್ರೌಣಿಯು ಕ್ರೋಧಸಮನ್ವಿತನಾದನು.

ಆ ಮತಿಮತರಲ್ಲಿ ಶ್ರೇಷ್ಠನು ಇಂದ್ರನ ವಜ್ರಾಯುಧದ ನಿಸ್ವನಕ್ಕೆ ಸಮನಾಗಿ ಚಿತ್ರ ಧನುಸ್ಸನ್ನು ಟೇಂಕರಿಸಿ ನೀಲನ ವಿನಾಶಮಾಡಲು ನಿಶ್ಚಯಿಸಿದನು. ಆಗ ಕರ್ಮ್ಮಾರನಿಂದ ಪರಿಸ್ಕರಿಸಲ್ಪಟ್ಟ ವಿಮಲ ಭಲ್ಲಗಳನ್ನು ಹೂಡಿ ಅವನ ನಾಲ್ಕು ಕುದುರೆಗಳನ್ನು ಕೊಂದನು ಮತ್ತು ಧ್ವಜವನ್ನು ಬೀಳಿಸಿದನು. ಏಳನೆಯ ಭಲ್ಲದಿಂದ ನೀಲನ ಎದೆಗೆ ಹೊಡೆದನು. ಅದು ಗಾಢವಾಗಿ ಒಳಹೊಕ್ಕಿದುದರಿಂದ ವ್ಯಥಿತನಾಗಿ ಅವನು ರಥದಲ್ಲಿಯೇ ಕುಳಿತುಕೊಂಡನು. ಮೋಡಗಳ ಸಮೂಹದಂತಿದ್ದ ರಾಜಾ ನೀಲನು ಮೂರ್ಛಿತನಾದುದನ್ನು ನೋಡಿ ಸಂಕೃದ್ಧನಾದ ಘಟೋತ್ಕಚನೂ ಕೂಡ ಸಹೋದರರನ್ನು ಕೂಡಿಕೊಂಡು ವೇಗದಿಂದ ಆಹವಶೋಭಿ ದ್ರೌಣಿಯನ್ನು

ಎದುರಿಸಿದನು. ಆಗ ಇತರ ಯುದ್ಧದುರ್ಮದ ರಾಕ್ಷಸರೂ ಅವನನ್ನು ಅನುಸರಿಸಿ ಬಂದರು. ತನ್ನ ಮೇಲೆ ಬೀಳುತ್ತಿದ್ದ ಘೋರದರ್ಶನ ರಾಕ್ಷಸನನ್ನು ನೋಡಿ ತೇಜಸ್ವೀ ಭಾರದ್ವಾಜನ ಮಗನು ತ್ವರೆಮಾಡಿ ಅವನನ್ನು ಎದುರಿಸಿದನು.

ಆ ರಾಕ್ಷಸನ ಮುಂದೆನಿಂತು ಯುದ್ಧಮಾಡುತ್ತಿದ್ದ ಕ್ರುದ್ಧರಾದ ಭೀಮದರ್ಶನ ರಾಕ್ಷಸರನ್ನು ಅವನು ಸಂಕ್ರುದ್ಧನಾಗಿ ಸಂಹರಿಸಿದನು. ದ್ರೌಣಿಯ ಬಿಲ್ಲಿನಿಂದ ಹೊರಟ ಬಾಣಗಳಿಂದ ಅವರು ವಿಮುಖರಾದುದನ್ನು ನೋಡಿ ಮಹಾಯಾಕ ಭೈಮಸೇನಿ ಘಟೋತ್ಕಚನು ಅತ್ಯಂತ ಕುಪಿತನಾದನು. ಮಾಯಾವಿ ರಾಕ್ಷಸಾಧಿಪನು ಸಮರದಲ್ಲಿ ದ್ರೌಣಿಯನ್ನು ಮೋಹಗೊಳಿಸುತ್ತಾ ಘೋರರೂಪವಾದ, ಸುದಾರುಣವಾದ ಮಹಾಮಾಯೆಯನ್ನು ನಿರ್ಮಿಸಿದನು. ಆಗ ನಿನ್ನವರೆಲ್ಲರೂ ಆ ಮಾಯೆಯಿಂದ ಹಿಮ್ಮೆಟ್ಟಿದರು. ಅವರು ಅನ್ಯೋನ್ಯರು ಕತ್ತರಿಸಲ್ಪಟ್ಟು, ರಕ್ತದಿಂದ ತೋಯ್ದು ಕೃಪಣರಾಗಿ ಭೂಮಿಯ ಮೇಲೆ ಹೊರಳಾಡುತ್ತಿರುವಂತೆ, ದ್ರೋಣ, ದುರ್ಯೋಧನ, ಶಲ್ಯ, ಅಶ್ವತ್ಥಾಮ ಮೊದಲಾದ ಪ್ರಧಾನ ಕೌರವ ಮಹೇಷ್ವಾಸರು ಪ್ರಾಯಶಃ ವಿಧ್ವಂಸರಾದರೆಂದೂ, ಎಲ್ಲ ರಥ-ಆನೆ-ಕುದುರೆಗಳೂ ವಿನಾಶಗೊಂಡು ಬಿದ್ದಿವೆಯೆಂದೂ, ಸಾವಿರರು ಕುದುರೆಗಳು ಆರೋಹಿಗಳೊಂದಿಗೆ ತುಂಡಾಗಿ ಬಿದ್ದುರುವುದೆಂದೂ ಅವರು ನೋಡಿದರು. ಅದನ್ನು ಕಂಡು ಶಿಬಿರದ ಕಡೆ ಓಡಿ ಹೋಗುತ್ತಿದ್ದ ಕೌರವ ಸೇನೆಯನ್ನು ದೇವವ್ರತ್-ಸಂಜಯರು ಇಬ್ಬರೂ ಕೂಗಿ ಕರೆದರು:

“ಯುದ್ಧಮಾಡಿ! ಓಡಿಹೋಗಬೇಡಿ! ಇದು ರಣದಲ್ಲಿಯ ರಾಕ್ಷಸೀ ಮಾಯೆ. ಇದು ಘಟೋತ್ಕಚನ ಕೆಲಸ. ಇದರಿಂದ ಮೋಹಿತರಾಗಬೇಡಿ. ನಿಲ್ಲಿ!”

ಆದರೂ ಭಯದಿಂದ ಅವರು ಆ ಮಾತಿನಲ್ಲಿ ನಂಬಿಕೆಯನ್ನಿಡಲಿಲ್ಲ. ಅವರು ಪಲಾಯನ ಮಾಡುತ್ತಿರುವುದನ್ನು ನೋಡಿ ಜಯಗಳಿಸಿದ ಪಾಂಡವರು ಘಟೋತ್ಕಚನನ್ನೊಡಗೂಡಿ ಸಿಂಹನಾದಗೈದರು. ಶಂಖದುಂದುಭಿಗಳ ಘೋಷದಿಂದ ನಾಲ್ಕೂ ದಿಕ್ಕುಗಳನ್ನು ಮೊಳಗಿಸಿದರು. ಹೀಗೆ ಸೂರ್ಯಾಸ್ತಮನದ ವೇಳೆಯಲ್ಲಿ ದುರಾತ್ಮ ಹೈಡಿಂಬಿಯಿಂದ ಭಗ್ನಗೊಳಿಸಲ್ಪಟ್ಟು ದಿಕ್ಕಾಪಾಲಾಗಿ ಓಡಿ ಹೋಯಿತು.

## ಭೀಮ-ಘಟೋತ್ಕಚರೊಡನೆ ಭಗದತ್ತನ ಯುದ್ಧ

ಆ ಮಹಾ ಸಂಕ್ರಂದಲ್ಲಿ ರಾಜಾ ದುರ್ಯೋಧನನು ಗಾಂಗೇಯನ ಬಳಿಸಾರಿ, ವಿನಯದಿಂದ ನಮಸ್ಕರಿಸಿ ಅವನಿಗೆ ಘಟೋತ್ಕಚನ ವಿಜಯವನ್ನೂ ತನ್ನವರ ಪರಾಜಯವೆಲ್ಲವನ್ನೂ ನಡೆದಂತೆ ಹೇಳಲು ಪ್ರಾರಂಭಿಸಿದನು. ಆ ದುರ್ಧರ್ಷನು ಪುನಃ ಪುನಃ ನಿಟ್ಟುಸಿರು ಬಿಡುತ್ತಾ ವರದಿಮಾಡಿದ ನಂತರ ಕುರುಪಿತಾಮಹ ಭೀಷ್ಮನಿಗೆ ಹೇಳಿದನು:

“ಪ್ರಭು! ಶತ್ರುಗಳು ವಾಸುದೇವನನ್ನು ಹೇಗೋ ಹಾಗೆ ನಾನು ನಿನ್ನನ್ನು ಆಶ್ರಯಿಸಿ ಪಾಂಡವರೊಂದಿಗೆ ಈ ಘೋರ ಯುದ್ಧವನ್ನು ಕೈಗೊಂಡೆನು. ನನಗಾಗಿ ಹನ್ನೊಂದು ಅಕ್ಷೌಹಿಣಿ

ಸೇನೆಗಳು ಸೇರಿ ನಿನ್ನ ನಿರ್ದೇಶನಕ್ಕೆ ಕಾದು ನಿಂತಿವೆ. ಆದರೆ ಘಟೋತ್ಕಚನನ್ನು ಆಶ್ರಯಿಸಿ ಭೀಮಸೇನನೇ ಮೊದಲಾದ ಪಾಂಡವರು ಯುದ್ಧದಲ್ಲಿ ನನ್ನನ್ನು ಸೋಲಿಸಿದರು. ಅದು ನನ್ನ ದೇಹವನ್ನು ಒಣಗಿದ ಮರವನ್ನು ಬೆಂಕಿಯು ಸುಡುವಂತೆ ಸುಡುತ್ತಿದೆ. ಆದುದರಿಂದ ನಿನ್ನ ಪ್ರಸಾದದಿಂದ ಆಪತ್ತನ್ನು ತರುತ್ತಿರುವ ಆ ರಾಕ್ಷಸನನ್ನು ಸ್ವಯಂ ನಾನೇ ಕೊಲ್ಲಲು ಬಯಸುತ್ತೇನೆ. ನಿನ್ನನ್ನು ಆಶ್ರಯಿದ ನನಗೆ ಆ ದುರ್ಧರ್ಷವಾದುದನ್ನು ಮಾಡಲು ಬಿಡಬೇಕು."

ರಾಜನ ಆ ಮಾತನ್ನು ಕೇಳಿ ಭೀಷ್ಮ ಶಾಂತನವನು ದುರ್ಯೋಧನನಿಗೆ ಈ ಮಾತನ್ನಾಡಿದನು:

"ರಾಜನ್! ನಾನು ಏನು ಹೇಳುತ್ತೇನೋ ಅದನ್ನು ಕೇಳು. ಅದರಂತೆಯೇ ನೀನು ನಡೆದುಕೊಳ್ಳಬೇಕು. ಮಗೂ! ಸರ್ವಾವಸ್ಥೆಯಲ್ಲಿ ನಿನ್ನನ್ನು ನೀನು ಸದಾ ರಕ್ಷಿಸಿಕೊಳ್ಳಬೇಕು. ಸಂಗ್ರಾಮದಲ್ಲಿ ಸದಾ ಧರ್ಮರಾಜನೊಂದಿಗೆ ಅಥವಾ ಅರ್ಜುನ, ಯಮಳರು ಅಥವಾ ಪುನಃ ಭೀಮಸೇನನೊಂದಿಗೆ ಯುದ್ಧಮಾಡುವುದು ನಿನ್ನ ಕಾರ್ಯ. ರಾಜಧರ್ಮವನ್ನು ಗೌರವಿಸಿ ರಾಜನು ರಾಜನೊಂದಿಗೆ ಯುದ್ಧಮಾಡುತ್ತಾನೆ. ನಿನಗೋಸ್ಕರವಾಗಿ ಆ ಮಹಾಬಲ ರಾಕ್ಷಸನೊಂದಿಗೆ ನಾನು, ದ್ರೋಣ, ಕೃಪ, ದ್ರೌಣಿ, ಕೃತವರ್ಮ, ಶಲ್ಯ, ಸೌಮದತ್ತಿ

> ವಿಕರ್ಣ, ಮತ್ತು ದುಃಶಾಸನನೇ ಮೊದಲಾದ ನಿನ್ನ ಭ್ರಾತರರು ಎದುರಿಸಿ ಯುದ್ಧಮಾಡುತ್ತೇವೆ. ಆ ರೌದ್ರ ರಾಕ್ಷಸೇಂದ್ರನ ಮೇಲೆ ಹೆಚ್ಚಿನ ಕೋಪವಿದ್ದರೆ, ಆ ದುರ್ಮತಿಯೊಂದಿಗೆ ಯುದ್ಧಮಾಡಲು ಯುದ್ಧದಲ್ಲಿ ಪುರಂದರನ ಸಮನಾದ ಈ ಮಹೀಪಾಲ ಭಗದತ್ತನಾದರೂ ಹೋಗಲಿ."

ರಾಜನಿಗೆ ಹೀಗೆ ಹೇಳಿ, ಪಾರ್ಥಿವೇಂದ್ರನ ಸಮಕ್ಷಮದಲ್ಲಿಯೇ ಆ ವಾಕ್ಯವಿಶಾರದನು ಭಗದತ್ತನಿಗೆ ಈ ಮಾತನ್ನಾಡಿದನು:

> "ಮಹಾರಾಜ! ಶೀಘ್ರದಲ್ಲಿಯೇ ಹೋಗು! ಯುದ್ಧ ದುರ್ಮದ ಹೈಡಿಂಬನನ್ನು ರಣದಲ್ಲಿ ಸರ್ವಧನ್ವಿಗಳೂ ನೋಡುತ್ತಿರಲು, ಹಿಂದೆ ಇಂದ್ರನು ಕ್ರೂರಕರ್ಮಿ ರಾಕ್ಷಸ ತಾರಕನನ್ನು ಹೇಗೋ ಹಾಗೆ ತಡೆದು ನಿಲ್ಲಿಸು. ನಿನ್ನಲ್ಲಿ ದಿವ್ಯಾಸ್ತ್ರಗಳಿವೆ. ವಿಕ್ರಮವಿದೆ. ಈ ಮೊದಲೇ ನೀನು ಅನೇಕ ಅಸುರರೊಂದಿಗೆ ಯುದ್ಧಮಾಡಿರುವೆ. ಮಹಾಹವದಲ್ಲಿ ನೀನು ಅವನೊಂದಿಗೆ ಪ್ರತಿಯುದ್ಧಮಾಡಬಲ್ಲೆ. ಸ್ವಬಲದಿಂದ ಪರಿವೃತನಾಗಿ ರಾಕ್ಷಸಪುಂಗವನನ್ನು ಸಂಹರಿಸು!"

ಸೇನಾಪತಿ ಭೀಷ್ಮನ ಈ ಮಾತನ್ನು ಕೇಳಿ ಅವನು ಸಿಂಹನಾದ ಗೈಯುತ್ತಾ ಶೀಘ್ರವಾಗಿ ಶತ್ರುಗಳನ್ನು ಎದುರಿಸಲು ಹೊರಟನು. ಮಳೆಗಾಲದ ಮೋಡದಂತೆ ಗರ್ಜಿಸುತ್ತಾ ಬರುತ್ತಿದ್ದ ಅವನನ್ನು ನೋಡಿ ಸಂಕ್ರುದ್ಧರಾದ ಮಹಾರಥ ಪಾಂಡವರು ಎದುರಿಸಿದರು. ಸುಪ್ರತೀಕದ

ಮೇಲೆ ಬರುತ್ತಿದ್ದ ಭಗದತ್ತನನ್ನು ಭೀಮಸೇನ, ಅಭಿಮನ್ಯು, ರಾಕ್ಷಸ ಘಟೋತ್ಕಚ, ದ್ರೌಪದೇಯರು, ಸತ್ಯಧೃತಿ, ಕ್ಷತ್ರದೇವ, ಚೇದಿಪತಿ, ವಸುದಾನ ಮತ್ತು ದಶಾರ್ಣಾಧಿಪತಿ ಇವರು ಎದುರಿಸಿ ಯುದ್ಧ ಮಾಡಿದರು. ಆಗ ಪಾಂಡವರು ಮತ್ತು ಭಗದತ್ತನ ನಡುವೆ ಘೋರರೂಪವಾದ, ಭಯಾನಕವಾದ, ಯಮರಾಷ್ಟ್ರವನ್ನು ಹೆಚ್ಚಿಸುವ ಯುದ್ಧವು ನಡೆಯಿತು. ರಥಿಗಳು ಪ್ರಯೋಗಿಸಿದ ಭೀಮವೇಗದ ಸುತೇಜಸ ಬಾಣಗಳು ಆನೆಗಳ ಮೇಲೂ ರಥಗಳ ಮೇಲೂ ಬಿದ್ದವು. ಮಾವುತರಿಂದ ನಿರ್ದೇಶಿಸಲ್ಪಟ್ಟ ಮದಿಸಿದ ಮಹಾಗಜಗಳು ಪರಸ್ಪರರೊಡನೆ ನಿರ್ಭೀತಿಯಿಂದ ಕಾದಾಡಿದವು. ಮದಾಂಧರಾಗಿ, ರೋಷಸಂರಬ್ಧರಾಗಿ ಆ ಮಹಾಹವದಲ್ಲಿ ಒನಕೆಗಳಂತಿದ್ದ ಕೋರೆದಾಡೆಗಳಿಂದ ಪರಸ್ಪರರನ್ನು ಇರಿದು ಸೀಳುತ್ತಿದ್ದವು. ಚಾಮರಗಳನ್ನು ಕಟ್ಟಿದ್ದ, ಮೇಲೆ ಪ್ರಾಸಗಳನ್ನು ಹಿಡಿದು ಕುಳಿತಿದ್ದ ಸವಾರರಿಂದ ಪ್ರಚೋದಿತರಾಗಿ ಕುದುರೆಗಳು ಕ್ಷಿಪ್ರವಾಗಿ ಇತರ ಕುದುರೆಗಳ ಮೇಳೆ ಬೀಳುತ್ತಿದ್ದವು. ಪದಾತಿಗಳು ಶತ್ರು ಪದಾತಿಗಳ ಶಕ್ತಿ-ತೋಮರಗಳಿಂದ ಹೊಡೆಯಲ್ಪಟ್ಟು ನೂರಾರು ಸಹಸ್ರಾರು ಸಂಖ್ಯೆಗಳಲ್ಲಿ ಭೂಮಿಯಮೇಲೆ ಬಿದ್ದಿದ್ದರು. ಹಾಗೆಯೇ ರಥಿಗಳೂ ಕೂಡ ಕರ್ಣಿ, ನಾಲೀಕ ಮತ್ತು ಸಾಯಕಗಳಿಂದ ಸಮರದಲ್ಲಿ ವೀರರನ್ನು ಸಂಹರಿಸಿ ಸಿಂಹನಾದ ಮಾಡಿ ವಿನೋದಿಸುತ್ತಿದ್ದರು. ಹೀಗೆ ಅಲ್ಲಿ ಲೋಮಹರ್ಷಣ ಸಂಗ್ರಾಮವು ನಡೆಯುತ್ತಿರಲು, ಮಹೇಷ್ವಾಸ ಭಗದತ್ತನು ಭೀಮಸೇನನ ಮೇಲೆ ಧಾಳಿಮಾಡಿದನು.

ಎಲ್ಲ ಕಡೆಗಳಿಂದ ನೀರನ್ನು ಸುರಿಸುತ್ತಿರುವ ಪರ್ವತದಂತೆ ಏಳು ಕಡೆಗಳಲ್ಲಿ ಮದೋದಕವನ್ನು ಸುರಿಸುತ್ತಿರುವ ಮದಿಸಿದ ಆನೆ ಸುಪ್ರತೀಕನ ಶಿರದ ಮೇಲೆ ಕುಳಿತು ಐರಾವತದ ಮೇಲೆ ಕುಳಿತ ಇಂದ್ರನಂತೆ ಸಹಸ್ರಾರು ಶರಗಳ ಮಳೆಯನ್ನು ಸುರಿಸಿದನು. ವರ್ಷಋತುವಿನಲ್ಲಿ ಮೇಘವು ಪರ್ವತವನ್ನು ಜಲಧಾರೆಗಳಿಂದ ಮುಚ್ಚುವಂತೆ ಆ ಪಾರ್ಥಿವನು ಭೀಮನನ್ನು ಶರಧಾರೆಗಳಿಂದ ಪ್ರಹರಿಸಿದನು. ಮಹೇಷ್ವಾಸ ಭೀಮಸೇನನಾದರೂ ಸಂಕ್ರುದ್ಧನಾಗಿ ಶರವೃಷ್ಟಿಯಿಂದ ಶತ್ರುಗಳ ನೂರಾರು ಪಾದರಕ್ಷಕರನ್ನು ಸಂಹರಿಸಿದನು. ಸಂಹರಿಸುತ್ತಿದ್ದ ಅವನನ್ನು ನೋಡಿ ಪ್ರತಾಪವಾನ್ ಭಗದತ್ತನು ಗಜೇಂದ್ರನನ್ನು ಭೀಮಸೇನನ ಕಡೆ ನಡೆಸಿದನು. ಶಿಂಜಿನಿಯಿಂದ ಪ್ರಯೋಗಿಸಲ್ಪಟ್ಟ ಬಾಣದಂತೆ ಅವನಿಂದ ನಡೆಸಲ್ಪಟ್ಟ ಆ ಆನೆಯು ವೇಗದಿಂದ ಅರಿಂದಮ ಭೀಮಸೇನನ ಕಡೆ ಓಡಿಬಂದಿತು. ವೇಗದಿಂದ ಮುಂದುವರೆದು ಬರುತ್ತಿದ್ದ ಅದನ್ನು ನೋಡಿ ಪಾಂಡವ ಮಹಾರಥರು - ಕೇಕಯರು, ಅಭಿಮನ್ಯು, ದ್ರೌಪದೇಯರೆಲ್ಲರು, ದಶಾರ್ಣಾಧಿಪತಿ, ಶೂರ ಕ್ಷತ್ರದೇವ, ಚೇದಿಪತಿ, ಚಿತ್ರಕೇತು ಇವರೆಲ್ಲರೂ ಕ್ರುದ್ಧರಾಗಿ ಭೀಮಸೇನನನ್ನು ಮುಂದಿರಿಸಿಕೊಂಡು ಅದರ ಮೇಲೆ ಆಕ್ರಮಣ ಮಾಡಿದರು. ಉತ್ತಮ ದಿವ್ಯಾಸ್ತ್ರಗಳನ್ನು ಪ್ರದರ್ಶಿಸುತ್ತಾ ಕ್ರುದ್ಧರಾದ ಆ ಮಹಾಬಲರು ಅದೇ ಒಂದು ಆನೆಯನ್ನು ಎಲ್ಲ ಕಡೆಗಳಿಂದ ಸುತ್ತುವರೆದರು. ಅನೇಕ ಬಾಣಗಳಿಂದ ಗಾಯಗೊಂಡು ಪೀಡಿತವಾದ ಆ ಮಹಾಗಜವು ಬಣ್ಣ ಬಣ್ಣದ

ಧತುಗಳನ್ನು ಸುರಿಸುವ ಪರ್ವತದಂತೆ ರಕ್ತವನ್ನು ಸುರಿಸಿತು. ಆಗ ದಶಾರ್ಣಾಧಿಪತಿಯು ಕೂಡ ಪರ್ವತೋಪಮವಾದ ಆನೆಯ ಮೇಲೆ ಕುಳಿತು ಭಗದತ್ತನ ಆನೆಯ ಕಡೆ ಧಾವಿಸಿದನು. ಸಮರದಲ್ಲಿ ಮೇಲೆ ಬೀಳಲು ಬರುತ್ತಿದ್ದ ಆ ಗಜವನ್ನು ಗಜಪತಿ ಸುಪ್ರತೀಕವು ತೀರವು ಸಮುದ್ರವನ್ನು ತಡೆಯುವಂತೆ ತಡೆದನು. ಮಹಾತ್ಮ ದಶಾರ್ಣನ ಗಜೇಂದ್ರನನ್ನು ತಡೆದುದನ್ನು ನೋಡಿ ಸಾಧು ಸಾಧು ಎಂದು ಪಾಂಡವ ಸೈನ್ಯಗಳು ಅದನ್ನು ಗೌರವಿಸಿದರು. ಆಗ ಕ್ರುದ್ಧನಾದ ಪ್ರಾಗ್ಜ್ಯೋತಿಷನು ಮುಂದೆ ನಿಂತಿದ್ದ ಆನೆಯ ಮುಖಕ್ಕೆ ಹದಿನಾಲ್ಕು ತೋಮರಗಳಿಂದ ಹೊಡೆದನು. ಹಾವುಗಳು ಹುತ್ತವನ್ನು ಪ್ರವೇಶಿಸುವಂತೆ ಅವನು ಬಿಟ್ಟ ತೋಮರಗಳು ಸುವರ್ಣಮಯವಾದ ಶ್ರೇಷ್ಠ ಆನೆಯ ಕವಚವನ್ನು ಭೇದಿಸಿ ಅದರ ದೇಹದ ಒಳಹೊಕ್ಕವು.

ಆಳವಾಗಿ ಚುಚ್ಚಲ್ಪಟ್ಟು ವ್ಯಥಿತವಾದ ಆ ಆನೆಯು ಬೇಗನೇ ವೇಗವಾಗಿ ಹಿಂದೆ ಓಡಿಹೋಯಿತು. ಚಂಡಮಾರುತವು ಮರಗಳನ್ನು ಉರುಳಿಸುವಂತೆ ವೇಗದಿಂದ ಭೈರವವಾದ ಕೂಗನ್ನು ಕೂಗುತ್ತಾ ತನ್ನ ಸೇನೆಯವರನ್ನೇ ತುಳಿದು ಉರುಳಿಸುತ್ತಾ ಓಡಿ ಹೋಯಿತು. ಆ ಆನೆಯು ಪರಾಜಿತವಾದರೂ ಪಾಂಡವರ ಮಹಾರಥರು ವಿಚಲಿತರಾಗದೇ ಯುದ್ಧದಲ್ಲಿ ನಿರತರಾಗಿದ್ದರು. ಆಗ ಭೀಮನನ್ನು ಮುಂದೆಮಾಡಿಕೊಂಡು ನಾನಾ ವಿಧಧ ಬಾಣಗಳನ್ನೂ ವಿವಿಧ ಶಸ್ತ್ರಗಳನ್ನೂ ಪ್ರಯೋಗಿಸುತ್ತಾ ಭಗದತ್ತನನ್ನು ಮುತ್ತಿದರು. ಮೇಲೆ ಬೀಳುತ್ತಿರುವ ಆ ಸಂಕ್ರುದ್ಧ ಅಮರ್ಷಿಗಳ ಘೋರವಾದ ನಿನಾದವನ್ನು

ಕೇಳಿ ಭಯವನ್ನರಿಯದ ಮಹೇಷ್ವಾಸ ಭಗದತ್ತನು ತನ್ನ ಆನೆಯನ್ನು ಪ್ರಚೋದಿಸಿದನು. ಅಂಕುಶದ ಅಂಗುಷ್ಠದಿಂದ ಒತ್ತಲ್ಪಟ್ಟ ಆ ಗಜಪ್ರವರವು ಯುದ್ಧದಲ್ಲಿ ಆ ಕ್ಷಣದಲ್ಲಿ ಸಂವರ್ತಕ ಅಗ್ನಿಯಂತಾಯಿತು. ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ ಓಡುತ್ತಾ ಸಂಕ್ರುದ್ಧವಾದ ಆ ಅನೆಯು ನೂರಾರು ಸಹಸ್ರಾರು ರಥಸಂಘಗಳನ್ನೂ, ಸವಾರರೊಂದಿಗೆ ಕುದುರೆಗಳನ್ನೂ, ಪದಾತಿಗಳನ್ನೂ ತುಳಿದು ಹಾಕಿತು. ಅದರಿಂದ ವಿನಾಶಗೊಂಡ ಪಾಂಡವರ ಆ ಮಹಾ ಸೇನೆಯು ಬೆಂಕಿಯಿಂದ ಸುಡಲ್ಪಟ್ಟ ಚರ್ಮದಲ್ಲಿ ಸಂಕೋಚಗೊಂಡಿತು. ಧೀಮತ ಭಗದತ್ತನಿಂದ ತನ್ನ ಸೇನೆಯು ಭಗ್ನವಾದುದನ್ನು ನೋಡಿ ಸಂಕ್ರುದ್ಧನಾದ ಘಟೋತ್ಕಚನು ಭಗದತ್ತನನ್ನು ಆಕ್ರಮಣಿಸಿದನು.

ವಿಕಟ ಪುರುಷನಾಗಿ, ದೀಪ್ತ ಮುಖವುಳ್ಳವನಾಗಿ, ದೀಪ್ತಲೋಚನನಾಗಿ, ರೋಷದಿಂದ ಪ್ರಜ್ವಲಿಸುತ್ತಿರುವಂತಹ ವಿಭೀಷಣ ರೂಪವನ್ನು ತಾಳಿ ಆ ಮಹಾಬಲನು ಗಿರಿಗಳನ್ನೂ ಸೀಳಬಲ್ಲಂತಹ ವಿಪುಲ ಶೂಲವನ್ನು ಹಿಡಿದು ಆ ಆನೆಯನ್ನು ಕೊಲ್ಲಲು ವೇಗವಾಗಿ ಅದರ ಮೇಲೆ ಎಸೆದನು. ಎಲ್ಲ ಕಡೆಗಳಿಂದಲೂ ಬೆಂಕಿಯ ಕಿಡಿಗಳಿಂದ ಸುತ್ತುವರೆದು ವೇಗವಾಗಿ ಬೀಳುತ್ತಿದ್ದ ಆ ಜ್ವಾಲಾರಾಶಿಯನ್ನು ರಣದಲ್ಲಿ ನೋಡಿ ಪಾರ್ಥಿವನು ತೀಕ್ಷ್ಣವಾದ ಸುಂದರವಾದ ಅರ್ಧಚಂದ್ರವನ್ನು ಪ್ರಯೋಗಿಸಿ ವೇಗವಾದ ಬಾಣದಿಂದ ಆ ಮಹಾಶೂಲವನ್ನು ತುಂಡರಿಸಿದನು. ಆ ಹೇಮಪರಿಷ್ಕೃತವಾದ ಶೂಲವು ಎರಡಾಗಿ ಆಕಾಶದಲ್ಲಿ ಶಕ್ರನು ಬಿಟ್ಟ ವಜ್ರವು ವ್ಯರ್ಥವಾಗಿ ಆಕಾಶದಲ್ಲಿ ಹೋಗುವಂತೆ ಕೆಳಗೆ ಬಿದ್ದಿತು.

ಕತ್ತರಿಸಲ್ಪಟ್ಟ ಆ ಶೂಲವು ಎರಡಾಗಿ ಬಿದ್ದುದನ್ನು ನೋಡಿ ಪಾರ್ಥಿವನು ಬಂಗಾರದ ದಂಡವುಳ್ಳ ಅಗ್ನಿಶಿಖೆಯಂತಿರುವ ಮಹಾಶಕ್ತಿಯನ್ನು ಹಿಡಿದು ಅದನ್ನು ರಾಕ್ಷಸನ ಮೇಲೆ ಎಸೆದು “ನಿಲ್ಲು! ನಿಲ್ಲು!” ಎಂದನು. ವಜ್ರಾಯುಧದಂತೆ ತನ್ನ ಮೇಲೆ ಬೀಳುತ್ತಿರುವ ಅದನ್ನು ನೋಡಿ ರಾಕ್ಷಸನು ತಕ್ಷಣವೇ ಹಾರಿ ಅದನ್ನು ಹಿಡಿದು ನಕ್ಕನು. ಬೇಗನೇ ಅದನ್ನು ತೊಡೆಯಮೇಲಿರಿಸಿ ಒತ್ತಿ ಮುರಿದುದನ್ನು ನೋಡುತ್ತಿದ್ದ ಪಾರ್ಥಿವೇಂದ್ರರಿಗೆ ಅದೊಂದು ಅದ್ಭುತವೆನಿಸಿತು.

ರಾಕ್ಷಸನು ಆ ಬಲಶಾಲಿ ಕರ್ಮವನ್ನು ಮಾಡಿದುದನ್ನು ನೋಡಿ ದಿವಿಯಲ್ಲಿ ಗಂಧರ್ವರೊಂದಿಗೆ ದೇವತೆಗಳೂ, ಮುನಿಗಳೂ ವಿಸ್ಮಿತರಾದರು. ಭೀಮಸೇನನೇ ಮೊದಲಾದ ಪಾಂಡವ ಮಹೇಷ್ವಾಸರು ಸಾಧು ಸಾಧು ಎಂಬ ಕೂಗಿನಿಂದ ಭೂಮಿಯನ್ನೇ ಮೊಳಗಿಸಿದರು. ಪ್ರಹೃಷ್ಟರಾದ ಮಹಾತ್ಮರ ಆ ಮಹಾನಾದವನ್ನು ಕೇಳಿದ ಪ್ರತಾಪವಾನ್ ಮಹೇಷ್ವಾಸ ಭಗದತ್ತನು ಸಹಿಸಲಾರದೇ ಹೋದನು. ಇಂದ್ರನ ವಜ್ರಾಯುಧದಂತೆ ಮೊಳಗುತ್ತಿದ್ದ ಮಹಾಚಾಪವನ್ನು ಟೇಂಕರಿಸಿ ಅವನು ಮಿವಲ ತೀಕ್ಷ್ಣ ಜ್ವಲನಪ್ರಭೆಗಳುಳ್ಳ ನಾರಾಚಗಳನ್ನು ಪ್ರಯೋಗಿಸುತ್ತಾ ವೇಗದಿಂದ ಪಾಂಡವರ ಮಹಾರಥರ ಮೇಲೆ ಎರಗಿದನು. ಭೀಮನನ್ನು ಒಂದರಿಂದ, ರಾಕ್ಷಸನನ್ನು ಒಂಭತ್ತು ಶರಗಳಿಂದ, ಅಭಿಮನ್ಯುವನ್ನು ಮೂರರಿಂದ ಮತ್ತು ಕೇಕಯರನ್ನು ಐದರಿಂದ ಹೊಡೆದನು. ಶಿಂಜಿನಿಯನ್ನು ಕರ್ಣಪರ್ಯಂತವಾಗಿ ಎಳೆದು ಸ್ವರ್ಣಪುಂಖಗಳಿರುವ

ಪತ್ರಿಯಿಂದ ಆಹವದಲ್ಲಿ ಕ್ಷತ್ರದೇವನ ಬಲತೋಳನ್ನು ಕತ್ತರಿಸಿದನು. ಕೂಡಲೇ ಅವನ ಉತ್ತಮ ಧನುವು ಬಾಣದೊಂದಿಗೆ ಕೆಳಗೆ ಬಿದ್ದಿತು. ಅನಂತರ ಐದು ಬಾಣಗಳಿಂದ ಐವರು ದ್ರೌಪದೇಯರನ್ನು ಹೊಡೆದು ಕ್ರೋಧದಿಂದ ಭೀಮಸೇನನ ಕುದುರೆಗಳನ್ನು ಸಂಹರಿಸಿದನು.

ಅವನ ಕೇಸರಿ ಧ್ವಜವನ್ನು ಮೂರು ವಿಶಿಖಗಳಿಂದ ತುಂಡರಿಸಿದನು ಮತ್ತು ಅನ್ಯ ಮೂರು ಪತ್ರಿಗಳಿಂದ ಅವನ ಸಾರಥಿಯನ್ನು ಹೊಡೆದನು. ಭಗದತ್ತನಿಂದ ಸಂಯುಗದಲ್ಲಿ ಗಾಢವಾದ ಪೆಟ್ಟುತಿಂದು ವ್ಯಥಿತನಾದ ವಿಶೋಕನು ರಥದಲ್ಲಿಯೇ ಕುಳಿತುಕೊಂಡನು. ಆಗ ರಥಿಗಳಲ್ಲಿ ಶ್ರೇಷ್ಠನಾದ ಭೀಮನು ರಥವಿಲ್ಲದವನಾಗಿ ಗದೆಯನ್ನು ಹಿಡಿದು ವೇಗದಿಂದ ಆ ಮಹಾರಥದಿಂದ ಕೆಳಗೆ ಧುಮುಕಿದನು. ಶೃಂಗದಿಂದೊಡಗೂಡಿದ ಪರ್ವತದಂತಿರುವ ಅವನು ಧಾವಿಸಿ ಬರುತ್ತಿರುವುದನ್ನು ನೋಡಿ ಕೌರವರಲ್ಲಿ ಘೋರ ಭಯವುಂಟಾಯಿತು.

ಇದೇ ಸಮಯದಲ್ಲಿ ಕೃಷ್ಣಸಾರಥಿ ಪಾಂಡವನು ಸಹಸ್ರಾರು ಶತ್ರುಗಳನ್ನು ಸಂಹರಿಸಿ, ಪ್ರಾಗ್ಜ್ಯೋತಿಷನೊಂದಿಗೆ ಎಲ್ಲಿ ಪುರುಷವ್ಯಾಘ್ರ, ಪರಂತಪ, ತಂದೆ-ಮಗ ಭೀಮಸೇನ-ಘಟೋತ್ಕಚರು ಯುದ್ಧದಲ್ಲಿ ತೊಡಗಿದ್ದರೋ ಅಲ್ಲಿಗೆ ಆಗಮಿಸಿದನು. ಯುದ್ಧಮಾಡುತ್ತಿರುವ ಆ ಮಹಾರಥರನ್ನು ನೋಡಿ ಪಾಂಡವನು ತ್ವರೆಮಾಡಿ ಅಲ್ಲಿ ಶರಗಳನ್ನು ತೂರಿದನು. ಆಗ ಮಹಾರಥ ರಾಜಾ ದುರ್ಯೋಧನನು ತ್ವರೆಮಾಡಿ ತನ್ನ ರಥ-ಆನೆ-ಅಶ್ವಸಂಕುಲಗಳ ಸೇನೆಯನ್ನು ಕ್ಷಿಪ್ರವಾಗಿ ಪ್ರೇರೇಪಿಸಿದನು. ತನ್ನ ಮೇಲೆ

ಒಮ್ಮೆಲೇ ಬೀಳುತ್ತಿದ್ದ ಕೌರವರ ಆ ಮಹಾಸೇನೆಯನ್ನು ವೇಗದಿಂದ ಶ್ವೇತವಾಹನ ಪಾಂಡವನು ಎದುರಿಸಿದನು. ಭಗದತ್ತನೂ ಕೂಡ ತನ್ನ ಆನೆಯಿಂದ ಪಾಂಡವ ಸೇನೆಯನ್ನು ಧ್ವಂಸಮಾಡಿ ಯುಧಿಷ್ಠಿರನ ಸಮೀಪಕ್ಕೆ ಹೋದನು. ಆಗ ಆಯುಧಗಳನ್ನು ಎತ್ತಿ ಹಿಡಿದಿದ್ದ ಪಾಂಚಾಲ-ಸೃಂಜಯ-ಕೇಕಯರೊಂಡನೆ ಭಗದತ್ತನ ತುಮುಲ ಯುದ್ಧವು ನಡೆಯಿತು. ಸಮರದಲ್ಲಿ ಭೀಮಸೇನನೂ ಕೂಡ ಕೇಶವಾರ್ಜುನರಿಬ್ಬರಿಗೂ ಉತ್ತಮ ಇರಾವತನ ವಧೆಯ ವೃತ್ತಾಂತವನ್ನು ಕೇಳಿಸಿದನು.

## ಎಂಟನೇ ದಿನದ ಯುದ್ಧ ಸಮಾಪ್ತಿ

ಮಗ ಇರಾವತನ ಮರಣವನ್ನು ಕೇಳಿ ದುಃಖದಿಂದ ಮಹಾ ಆವಿಷ್ಟನಾಗಿ ಸರ್ಪದಂತೆ ನಿಟ್ಟುಸಿರು ಬಿಡುತ್ತಾ ಅರ್ಜುನನು ವಾಸುದೇವನಿಗೆ ಹೇಳಿದನು:

> "ಇದನ್ನೇ ಮಹಾಪ್ರಾಜ್ಞ ವಿದುರನು ಹಿಂದೆ ನೋಡಿದ್ದನು. ಕುರುಗಳ ಮತ್ತು ಪಾಂಡವರ ಘೋರಕ್ಷಯವಾಗುತ್ತದೆಯೆಂದು ಆ ಮಹಾಮತಿಯು ಜನೇಶ್ವರ ಧೃತರಾಷ್ಟ್ರನನ್ನು ತಡೆಯುತ್ತಿದ್ದನು. ಮಧುಸೂದನ! ಸಂಗ್ರಾಮದಲ್ಲಿ ಅವಧ್ಯರಾದ ಅನೇಕ ವೀರರು ಹೋರಾಡುವಾಗ ಕೌರವರಿಂದ ಮತ್ತು ನಮ್ಮಿಂದ ಹತರಾಗಿದ್ದಾರೆ. ಧನಕ್ಕಾಗಿ ಕುತ್ಸಿತ ಕರ್ಮಗಳನ್ನು ಮಾಡಲಾಗುತ್ತದೆ. ಯಾವುದಕ್ಕಾಗಿ ಈ

ಜ್ಞಾತಿಸಂಕ್ಷಯವು ನಡೆಯುತ್ತಿದೆಯೋ ಆ ಧನಕ್ಕೆ ಧಿಕ್ಕಾರ. ಜ್ಞಾತಿವಧೆಯಿಂದ ಗಳಿಸಿದ ಧನಕ್ಕಿಂತಲೂ ಅಧನನ ಮೃತ್ಯುವು ಶ್ರೇಯಸ್ಕರವಾದುದು. ಇಲ್ಲಿ ಸೇರಿರುವ ಬಾಂಧವರನ್ನು ಕೊಂದು ನಾವು ಏನನ್ನು ಪಡೆಯಲಿದ್ದೇವೆ? ದುರ್ಯೋಧನ ಮತ್ತು ಸೌಬಲ ಶಕುನಿಯರ ಅಪರಾಧದಿಂದ ಮತ್ತು ಕರ್ಣನ ದುರ್ಮಂತ್ರದಿಂದ ಕ್ಷತ್ರಿಯರು ಸಾಯುತ್ತಿದ್ದಾರೆ. ಅಂದು ರಾಜನು ಅರ್ಧ ರಾಜ್ಯವನ್ನಾಗಲೀ ಅಥವಾ ಐದು ಗ್ರಾಮಗಳನ್ನಾಗಲೀ ಬೇಡಿದ ಸುಕೃತವು ಇಂದು ನನಗೆ ಅರ್ಥವಾಗುತ್ತಿದೆ. ಆದರೆ ದುರ್ಮತಿ ದುರ್ಯೋಧನನು ಅದಕ್ಕೂ ಒಪ್ಪಿಕೊಳ್ಳಲಿಲ್ಲ. ಧರಣೀತಲದಲ್ಲಿ ಮಲಗಿರುವ ಕ್ಷತ್ರಿಯ ಶೂರರನ್ನು ನೋಡಿ ನನ್ನನ್ನೇ ನಿಂದಿಸಿಕೊಳ್ಳುತ್ತೇನೆ. ಈ ಕ್ಷತ್ರಿಯ ಜೀವನಕ್ಕೆ ಧಿಕ್ಕಾರ! ರಣದಲ್ಲಿ ಕ್ಷತ್ರಿಯರು ನನ್ನನ್ನು ಅಶಕ್ತನೆಂದೇ ತಿಳಿದುಕೊಳ್ಳಬಹುದು. ಬಾಂಧವರೊಡನೆ ಯುದ್ಧಮಾಡುವುದು ನನಗೆ ಇಷ್ಟವಾಗುವುದಿಲ್ಲ. ಬೇಗನೆ ಕುದುರೆಗಳನ್ನು ಧಾರ್ತರಾಷ್ಟ್ರರ ಸೇನೆಯ ಕಡೆ ಓಡಿಸು. ಸಮರವೆಂಬ ಈ ಮಹಾಸಾಗರವನ್ನು ಭುಜಗಳೆರಡರಿಂದ ಈಸಿ ದಾಟುತ್ತೇನೆ. ಇದು ವ್ಯರ್ಥವಾಗಿ ಕಾಲಕಳೆಯುವ ಸಮಯವಲ್ಲ.”

ಪಾರ್ಥನು ಹೀಗೆ ಹೇಳಲು ಪರವೀರಹ ಕೇಶವನು ಗಾಳಿಯ ವೇಗವುಳ್ಳ ಆ ಬಿಳೀ ಕುದುರೆಗಳನ್ನು ಓಡಿಸಿದನು. ಆಗ ಹುಣ್ಣಿಮೆಯ ದಿನ

ಗಾಳಿಯು ಬೀಸುವುದರಿಂದ ವೇಗವಾಗಿ ಉಕ್ಕಿಬರುವ ಸಮುದ್ರದಂತೆ ಕೌರವ ಸೇನೆಯಲ್ಲಿ ಮಹಾ ಕೋಲಾಹಲ ಶಬ್ಧವುಂಟಾಯಿತು. ಅಪರಾಹ್ಣದಲ್ಲಿ ಮೇಘಗರ್ಜನೆಗೆ ಸಮಾನವಾದ ಬೀಷ್ಮ-ಪಾಂಡವರ ನಡುವಿನ ಯುದ್ಧವು ಪ್ರರಂಭವಾಯಿತು. ಆಗ ವಾಸವನನ್ನು ವಸುಗಳಂತೆ ಧೃತರಾಷ್ಟ್ರನ ಸುತರು ದ್ರೋಣನನ್ನು ಸುತ್ತುವರೆದುಕೊಂಡು ಭೀಮಸೇನನನ್ನು ಎದುರಿಸಿದರು. ಆಗ ಶಾಂತನವ ಭೀಷ್ಮ, ರಥಿಗಳಲ್ಲಿ ಶ್ರೇಷ್ಠ ಕೃಪ, ಭಗದತ್ತ ಮತ್ತು ಸುಶರ್ಮರು ಅರ್ಜುನನ ಮೇಲೆ ಎರಗಿದರು. ಹಾರ್ದಿಕ್ಯ-ಬಾಹ್ಲೀಕರು ಸಾತ್ಯಕಿಯನ್ನು ಎದುರಿಸಿದರು. ನೃಪತಿ ಅಂಬಷ್ಠಕನು ಅಭಿಮನ್ಯುವನ್ನು ತಡೆದನು. ಉಳಿದವರು ಅನ್ಯ ಮಹಾರಥರನ್ನು ಎದುರಿಸಲು ಆಗ ಘೋರರೂಪವಾದ, ಭಯಾವಹವಾದ ಯುದ್ಧವು ನಡೆಯಿತು. ಧೃತರಾಷ್ಟ್ರನ ಪುತ್ರರನ್ನು ನೋಡಿ ಭೀಮಸೇನನು ರಣದಲ್ಲಿ ಆಹುತಿಯಿಂದ ಯಜ್ಞೇಶ್ವರನಂತೆ ಕ್ರುದ್ಧನಾಗಿ ಭುಗಿಲೆದ್ದನು. ಧೃತರಾಷ್ಟ್ರನ ಪುತ್ರರಾದರೋ ಮೋಡಗಳು ಪರ್ವತವನ್ನು ಹೇಗೋ ಹಾಗೆ ಕೌಂತೇಯನನ್ನು ಶರಗಳ ಮಳೆಯಿಂದ ಮುಚ್ಚಿದರು. ಧೃತರಾಷ್ಟ್ರನ ಪುತ್ರರಿಂದ ಬಹಳವಾಗಿ ಮುಚ್ಚಲ್ಪಟ್ಟ ಆ ವೀರ ದರ್ಪಿತನು ಹುಲಿಯಂತೆ ಕಟವಾಯಿಗಳನ್ನು ನೆಕ್ಕಿದನು. ಆಗ ಭೀಮನು ತೀಕ್ಷ್ಣವಾದ ಕ್ಷುರಪ್ರದಿಂದ ವ್ಯೋಢರಸ್ಕನ್ನು ಉರುಳಿಸಲು ಅವನು ಗತಜೀವಿತನಾದನು. ಇನ್ನೊಂದು ಹಳದಿ ಬಣ್ಣದ ನಿಶಿತ ಭಲ್ಲದಿಂದ ಕ್ಷುದ್ರಮೃಗವನ್ನು ಸಿಂಹವು ಹೇಗೋ ಹಾಗೆ ಕುಂಡಲಿನಿಯನ್ನು

ಬೀಳಿಸಿದನು. ತಕ್ಷಣವೇ ನಿಶಿತವಾದ ಹಳದೀ ಬಣ್ಣದ ಶಿಲೀಮುಖಗಳನ್ನು ತೆಗೆದುಕೊಂಡು ಅವನು ಧೃತರಾಷ್ಟ್ರನ ಏಳು ಮಕ್ಕಳಿಗೆ ಗುರಿಯಿಟ್ಟು ಹೊಡೆದನು. ಆ ದೃಢಧನ್ವಿ ಭೀಮಸೇನನು ಪ್ರಯೋಗಿಸಿದ ಶರಗಳು ತಾಗಿ ಧೃತರಾಷ್ಟ್ರನ ಸುಮಹಾರಥ ಮಕ್ಕಳು - ಅನಾಧೃಷ್ಟಿ, ಕುಂಡಭೇದ, ವೈರಾಟ, ದೀರ್ಘಲೋಚನ, ದೀರ್ಘಬಾಹು, ಸುಬಾಹು, ಮತ್ತು ಕನಕಧ್ವಜ - ರಥಗಳಿಂದ ಬಿದ್ದರು. ಬೀಳುವಾಗ ಆ ವೀರರು ವಸಂತಕಾಲದಲ್ಲಿ ಗಳಿದ ಶಬಲಪುಷ್ಪಗಳಂತೆ ಶೋಭಿಸುತ್ತಿದ್ದರು. ಆಗ ಮಹಾಬಲ ಭೀಮಸೇನನನ್ನು ಕಾಲನೆಂದು ಅಭಿಪ್ರಾಯಪಟ್ಟು ಉಳಿದ ಧೃತರಾಷ್ಟ್ರನ ಮಕ್ಕಳು ಪಲಾಯನಗೈದರು. ಧೃತರಾಷ್ಟ್ರನ ಮಕ್ಕಳನ್ನು ದಹಿಸುತ್ತಿದ್ದ ಆ ವೀರನನ್ನು ದ್ರೋಣನು ನೀರಿನ ಮಳೆಯಿಂದ ಗಿರಿಯನ್ನು ಹೇಗೋ ಹಾಗೆ ಎಲ್ಲ ಕಡೆಗಳಿಂದ ಶರಗಳಿಂದ ಮುಚ್ಚಿದನು. ದ್ರೋಣನು ತಡೆಯುತ್ತಿದ್ದರೂ ಧೃತರಾಷ್ಟ್ರನ ಪುತ್ರರೊಂದಿಗೆ ಹೋರಾಡುತ್ತಿದ್ದ ಕುಂತೀಪುತ್ರನ ಅದ್ಭುತ ಪೌರುಷವು ಅಲ್ಲಿ ಕಂಡಿತು. ಮಳೆಯು ಸುರಿಯುತ್ತಿದ್ದರೂ ಗೂಳಿಯೊಂದು ಹೇಗೆ ಅದನ್ನು ಸಹಿಸಿಕೊಳ್ಳುತ್ತದೆಯೋ ಹಾಗೆ ದ್ರೋಣನು ಪ್ರಯೋಗಿಸಿದ ಶರವರ್ಷವನ್ನು ಭೀಮನು ತಡೆದುಕೊಂಡನು. ಯುದ್ಧದಲ್ಲಿ ಧೃತರಾಷ್ಟ್ರನ ಪುತ್ರರನ್ನು ವಧಿಸಿದ್ದುದು ಮತ್ತು ದ್ರೋಣನು ಮುಂದುವರೆಯದಂತೆ ತಡೆಗಟ್ಟಿದುದು - ಇದು ಅಲ್ಲಿ ವೃಕೋದರನು ನಡೆಸಿದ ಅದ್ಭುತವಾಗಿತ್ತು. ಮಹಾಬಲಿಷ್ಟ ವ್ಯಾಘ್ರವು ಮೃಗಗಳ ಹಿಂಡುಗಳ ಮಧ್ಯೆ ಸಂಚರಿಸುವಂತೆ ಅರ್ಜುನಪೂರ್ವಜನು ವೀರರಾದ

ಧೃತರಾಷ್ಟ್ರನ ಮಕ್ಕಳ ನಡುವೆ ಆಟವಾಡುತ್ತಿದ್ದನು. ಪಶುಗಳ ಮಧ್ಯೆ ನಿಂತು ತೋಳವು ಹೇಗೆ ಪಶುಗಳನ್ನು ಓಡಿಸುತ್ತದೆಯೋ ಹಾಗೆ ವೃಕೋದರನು ಧೃತರಾಷ್ಟ್ರನ ಸುತರನ್ನು ರಣದಿಂದ ಓಡಿಸಿದನು. ಗಾಂಗೇಯ, ಭಗದತ್ತ ಮತ್ತು ಮಹಾರಥ ಗೌತಮರು ರಭಸದಿಂದ ಯುದ್ಧಮಾಡುತ್ತಿದ್ದ ಅರ್ಜುನ ಪಾಂಡವನನ್ನು ತಡೆದರು.

ಅವರ ಅಸ್ತ್ರಗಳನ್ನು ಅಸ್ತ್ರಗಳಿಂದ ನಿವಾರಣೆಗೊಳಿಸುತ್ತಾ ಆ ಅತಿರಥನು ರಣದಲ್ಲಿ ಕೌರವ ಸೇನೆಯ ಪ್ರವೀರರನ್ನು ಮೃತ್ಯುವಿಗೆ ಕಳುಹಿಸಿದನು. ಅಭಿಮನ್ಯುವಾದರೋ ಲೋಕವಿಶ್ರುತನಾದ ರಥಿಗಳಲ್ಲಿ ಶ್ರೇಷ್ಠ ರಾಜಾ ಅಂಬಷ್ಠನನ್ನು ಸಾಯಕಗಳಿಂದ ವಿರಥನನ್ನಾಗಿ ಮಾಡಿದನು. ವಿರಥನಾಗಿ ಯಶಸ್ವಿ ಸೌಭದ್ರನಿಂದ ವಧಿಸಲ್ಪಡುತ್ತಿದ್ದ ಮನುಜಾಧಿಪನು ನಾಚಿ ತಕ್ಷಣವೇ ರಥದಿಂದ ಕೆಳಗೆ ಹಾರಿ, ಸೌಭದ್ರನ ಮೇಲೆ ಖಡ್ಗವನ್ನು ಎಸೆದು ಹಾರ್ದಿಕ್ಯನ ರಥವನ್ನೇರಿದನು. ಯುದ್ಧ ಮಾರ್ಗವಿಶಾರದನಾದ ಪರವೀರಹ ಸೌಭದ್ರನು ಬೀಳುತ್ತಿರುವ ಆ ಖಡ್ಗದ ಮಾರ್ಗವನ್ನೇ ಚಳಕಂದಿಂದ ಬದಲಾಯಿಸಿದನು. ರಣದಲ್ಲಿ ಆ ಖಡ್ಗವನ್ನು ತಪ್ಪಿಸಿದುದನ್ನು ನೋಡಿ ಸೈನ್ಯಗಳಲ್ಲಿ ಸೌಭದ್ರನನ್ನು ಹೊಗಳಿ "ಸಾಧು! ಸಾಧು!" ಎಂಬ ಕೂಗು ಕೇಳಿಬಂದಿತು. ಧೃಷ್ಟದ್ಯುಮ್ನನನ್ನು ಮುಂದಿಟ್ಟುಕೊಂಡು ಅನ್ಯರು ಕೌರವ ಸೇನೆಯೊಡನೆ ಯುದ್ಧ ಮಾಡಿದರು. ಹಾಗೆಯೇ ಕೌರವರೆಲ್ಲರೂ ಪಾಂಡವಸೇನೆಯೊಂದಿಗೆ ಯುದ್ಧ ಮಾಡಿದರು. ಅನ್ಯೋನ್ಯರನ್ನು ಕೊಲ್ಲುವ ದುಷ್ಕರ ಕರ್ಮವನ್ನು ಮಾಡುತ್ತಿದ್ದ ಕೌರವರು ಮತ್ತು ಅವರಲ್ಲಿ ಮಹಾ

ಆಕ್ರಂದನವುಂಟಾಯಿತು. ರಣದಲ್ಲಿ ಶೂರರು ಅನ್ಯೋನ್ಯರ ಕೂದಲನ್ನು ಎಳೆದು, ಉಗುರು, ಹಲ್ಲು, ಆಯುಧ, ಮುಷ್ಟಿ, ತೊಡೆ, ತೋಳು, ಅಂಗೈ ಮತ್ತು ಹರಿತ ಖಡ್ಗಗಳಿಂದ ಸಮಯ ನೋಡಿ ಅನ್ಯೋನ್ಯರನ್ನು ಯಮಸಾದನಕ್ಕೆ ಕಳುಹಿಸುತ್ತಿದ್ದರು. ತಂದೆಯು ಮಗನನ್ನೂ ಮಗನು ತಂದೆಯನ್ನೂ ಕೊಲ್ಲುತ್ತಿದ್ದರು. ವ್ಯಾಕುಲರಾಗಿದ್ದರೂ ಅಲ್ಲಿ ಜನರು ಕೊನೆಯವರೆಗೂ ಹೋರಾಡುತ್ತಿದ್ದರು. ಹತರಾದವರಿಂದ ಕೆಳಗೆ ಬಿದ್ದಿದ್ದ ಸುಂದರವಾದ ಬಂಗಾರದ ಬೆನ್ನುಳ್ಳ ಧನುಸ್ಸುಗಳು, ಅಮೂಲ್ಯವಾದ ಬತ್ತಳಿಕೆಗಳೂ, ಸುವರ್ಣಮಯವಾದ, ರಜತಮಯವಾದ, ರೆಕ್ಕೆಗಳಿಂದ ಕೂಡಿದ್ದ ಎಣ್ಣೆಯಲ್ಲಿ ನೆನೆಸಿದ್ದ ನಿಶಿತ ಬಾಣಗಳು ರಣದಲ್ಲಿ ಬಿದ್ದಿದ್ದು ಪೊರೆಯನ್ನು ಬಿಟ್ಟ ಸರ್ಪಗಳಂತೆ ಪ್ರಕಾಶಿಸುತ್ತಿದ್ದವು. ಆನೆಯ ದಂತದ ಹಿಡಿಯುಳ್ಳ ಬಂಗಾರದಿಂದ ಅಲಂಕರಿಸಲ್ಪಟ್ಟ ಖಡ್ಗಗಳನ್ನು, ಧನುಷ್ಮಂತರ ಬಂಗಾರದ ಹಿಡಿಯುಳ್ಳ ಅನೇಕ ಗುರಾಣಿಗಳನ್ನೂ, ಚಾಪಗಳನ್ನೂ, ಬಂಗಾರದಿಂದ ಮಾಡಲ್ಪಟ್ಟಿದ್ದ ಪ್ರಾಸಗಳನ್ನೂ, ಹೇಮಭೂಷಿತ ಪಟ್ಟಿಶಗಳನ್ನೂ, ಬಂಗಾರಮಯವಾದ ಋಷ್ಟಿಗಳನ್ನೂ, ಕನಕೋಜ್ವಲ ಶಕ್ತಿಗಳನ್ನೂ, ಮುರಿದು ಬಿದ್ದಿರುವ ಭಾರವಾದ ಮುಸಲಗಳನ್ನೂ, ಪರಿಘಗಳನ್ನೂ, ಪಟ್ಟಿಶಗಳನ್ನೂ, ಬಿಂಡಿಪಾಲಗಳನ್ನೂ, ಬಿದ್ದಿರುವ ಬಂಗಾರದಿಂದ ಮಾಡಲ್ಪಟ್ಟಿದ್ದ ಬಣ್ಣ ಬಣ್ಣದ ತೋಮರಗಳನ್ನೂ, ನಾನಾ ಅಳತೆಯ ಆನೆಯ ಮೇಲೆ ಹೊದಿಸುವ ಚಿತ್ರಗಂಬಳಿಗಳನ್ನೂ, ಚಾಮರ-ವ್ಯಜನಗಳನ್ನೂ ರಣದಲ್ಲಿ ನೋಡಬಹುದಾಗತ್ತು. ನಾನಾ ವಿಧದ

ಶಸ್ತ್ರಗಳನ್ನು ಬಿಸುಟು ಬಿದ್ದಿದ್ದ ಮಹಾರಥ ನರರು ಗತಾಸುಗಳಾಗಿದ್ದರೂ ಜೀವಂತರಾಗಿರುವಂತೆ ಕಾಣುತ್ತಿದ್ದರು. ಭೂಮಿಯ ಮೇಲೆ ಬಿದ್ದಿದ್ದ ಯೋಧರಲ್ಲಿ ಕೆಲವರು ಗದೆಯಿಂದ ಜಜ್ಜಿಹೋಗಿದ್ದರು. ಕೆಲವರ ತಲೆಗಳು ಮುಸಲಗಳಿಂದ ಒಡೆಯಲ್ಪಟ್ಟಿದ್ದವು. ಕೆಲವರು ರಥ, ಆನೆ, ಕುದುರೆಗಳಿಂದ ತುಳಿಯಲ್ಪಟ್ಟಿದ್ದರು. ಹಾಗೆಯೇ ಅಶ್ವ-ಪದಾತಿ-ಗಜಗಳ ಶರೀರಗಳಿಂದ ತುಂಬಿಹೋಗಿದ್ದ ರಣಾಂಗಣವು ಪರ್ವತಗಳಿಂದ ತುಂಬಿದೆಯೋ ಎನ್ನುವಂತೆ ತೋರುತ್ತಿತ್ತು. ಸಮರದಲ್ಲಿ ಬಿದ್ದ ಶಕ್ತಿ, ಋಷ್ಟಿ, ಶರ, ತೋಮರ, ಖಡ್ಗ, ಪಟ್ಟಿಶ, ಪ್ರಾಸ, ಅಯಸ್ಕುಂತ (ಲೋಹದಂಡ, ಹಾರೆ), ಪರಶು, ಪರಿಘ, ಭಿಂಡಿಪಾಲ, ಶತಘ್ನೀ ಮತ್ತು ಹಾಗೆಯೇ ಶಸ್ತ್ರಗಳಿಂದ ತುಂಡಾದ ಶರೀರಗಳಿಂದ ರಣಭೂಮಿಯು ತುಂಬಿಹೋಗಿತ್ತು. ದೇಹವು ರಕ್ತದಿಂದ ತೋಯ್ದುಹೋಗಿರುವ, ನಿಃಶಬ್ಧರಾಗಿರುವ, ಅಲ್ಪ ಶಬ್ದಮಾಡುತ್ತಿರುವವರ, ಸತ್ತವರ ಶರೀರಗಳಿಂದ ಭೂಮಿಯು ತುಂಬಿಹೋಗಿತ್ತು. ಕೈಚೀಲಗಳೊಡನೆ, ಕೇಯೂರಗಳಿಂದ ಅಲಂಕೃತವಾದ ಚಂದನವನ್ನು ಬಳಿದುಕೊಂಡಿರುರುವ ತೋಳುಗಳೊಡನೆ, ಆನೆಯ ಸೊಂಡಿಲುಗಳಂತಿರುವ ತೊಡೆಗಳ ತರಸ್ವಿಗಳ, ಚೂಡಾಮಣಿಗಳನ್ನು ಕಟ್ಟಿ ಧರಿಸಿರುವ ಕುಂಡಲಗಳೊಂದಿರುವ ಕೆಳಗೆ ಬಿದ್ದಿರುವ ವೃಷಭಾಕ್ಷರ ಶಿರಗಳು ಮೇದಿನಿಯನ್ನು ತುಂಬಿದ್ದವು. ಅಲ್ಲಲ್ಲಿ ಹರಡಿದ್ದ ರಕ್ತದಿಂದ ತೋಯ್ದ ಕಾಂಚನ ಕವಚಗಳಿಂದ ಭೂಮಿಯು ಜ್ವಾಲೆಯಿಲ್ಲದೇ ಬರೀ ಕೆಂಡಗಳೇ ಉಳಿದಿರುವ ಅಗ್ನಿಗಳಂತೆ

ಶೋಭಿಸಿತು. ಎಸೆಯಲ್ಪಟ್ಟಿದ್ದ ಬತ್ತಳಿಕೆಗಳಿಂದಲೂ, ಬಿದ್ದಿದ್ದ ಧನುಸ್ಸುಗಳಿಂದಲೂ, ಎಲ್ಲಕಡೆ ಹರಡಿದ್ದ ರುಕ್ಮಪುಂಖ ಶರಗಳಿಂದಲೂ, ಭಗ್ನಗೊಂಡಿದ್ದ ಹಲವಾರು ಕಿಂಕಿಣೀಮಾಲೆಗಳಿಂದ ಕೂಡಿದ ರಥಗಳಿಂದಲೂ, ನಾಲಿಗೆಯನ್ನು ಹೊರಚಾಚಿ ರಕ್ತದ ಮಡುವಿನಲ್ಲಿ ಸತ್ತುಬಿದ್ದಿದ್ದ ಕುದುರೆಗಳಿಂದಲೂ, ಪಾತಕೆಗಳಿಂದಲೂ, ಉಪಾಸಾಂಗಗಳಿಂದಲೂ, ಧ್ವಜಗಳಿಂದಲೂ, ಹರಡಿದ್ದ ಪ್ರವೀರರ ಬಿಳೀ ಮಹಾಶಂಖಗಳಿಂದಲೂ, ಸೊಂಡಿಲುಗಳು ಕತ್ತರಿಸಿ ಮಲಗಿದ್ದ ಆನೆಗಳಿಂದಲೂ ಆ ರಣಭೂಮಿಯು ನಾನಾರೂಪಗಳ ಅಲಂಕಾರಗಳಿಂದ ಅಲಂಕರಿಸಿಕೊಂಡ ನಾರಿಯಂತೆ ತೋರಿತು. ಕೆಲವು ಆನೆಗಳು ಅಲ್ಲಿ ಪ್ರಾಸಗಳು ಆಳವಾಗಿ ನೆಟ್ಟಿರುವುದರಿಂದ ವೇದನೆಯನ್ನು ತಾಳಲಾರದೇ ಸೊಂಡಿಲುಗಳ ಮೂಲಕ ಘೀಳಿಡುತ್ತಿದ್ದವು ಮತ್ತು ಸೊಂಡಿಲಿನ ಹೊಳ್ಳೆಗಳಿಂದ ಹೊರಬರುತ್ತಿದ್ದ ನೀರಿನ ತುಂತುರುಗಳಿಂದ ಆ ರಣಭೂಮಿಯು ನೀರನ್ನು ಸ್ರವಿಸುತ್ತಿರುವ ಪರ್ವತಗಳಿಂದ ಕೂಡಿದೆಯೋ ಎಂದು ತೋರಿತು.

ಆನೆಗಳಿಗೆ ಹೊದಿಸುವ ನಾನಾಬಣ್ಣದ ಕಂಬಳಿಗಳಿಂದಲೂ, ಕೆಳಗೆ ಬಿದ್ದಿರುವ ವೈಡೂರ್ಯಮಣಿದಂಡಗಳನ್ನು ಹೊಂದಿರುವ ಸುಂದರ ಅಂಕುಶಗಳಿಂದಲೂ, ಎಲ್ಲಾಕಡೆ ಬಿದ್ದಿರುವ ಗಜೇಂದ್ರಗಳ ಘಂಟೆಗಳಿಂದಲೂ, ಹರಿದುಹೋದ ಬಣ್ಣಬಣ್ಣದ ಕಂಬಳಿಗಳಿಗಳಿಂದಲೂ, ವಿಚಿತ್ರ ಕಂಠಾಭರಣಗಳಿಂದಲೂ, ಸುವರ್ಣಮಯ ಹಗ್ಗಗಳಿಂದಲೂ, ಮುರಿದಿದ್ದ ಅನೇಕ ಯಂತ್ರಗಳಿಂದ,

ಸುವರ್ಣಮಯ ತೋಮರಗಳಿಂದಲೂ, ಧೂಳಿನಿಂದ ಮಸುಕಾಗಿದ್ದ ಕುದುರೆಗಳ ಎದೆಗೆ ತೊಡಿಸುವ ಸುವರ್ಣಮಯ ಕವಚಗಳಿಂದಲೂ, ಅಂಗದಗಳೂ ಕೂಡಿ ಕತ್ತರಿಸಲ್ಪಟ್ಟು ಬಿದ್ದಿದ್ದ ಕುದುರೆಸವಾರರ ತೋಳುಗಳಿಂದ, ಹೊಳೆಯುತ್ತಿರುವ ಪಸಗಳಿಂದಲೂ, ತೀಕ್ಷ್ಣವಾಗಿ ಮಿಂಚುತ್ತಿದ್ದ ಅರ್ಷ್ಟಿಗಳಿಂದಲೂ, ಅಲ್ಲಲ್ಲಿ ಬಿದಿದ್ದ ಶಿರಸ್ತ್ರಾಣಗಳಿಂದಲೂ, ಬಂಗಾರದಿಂದ ಮಾಡಲ್ಪಟ್ಟ ವಿಚಿತ್ರ ಅರ್ಧಚಂದ್ರದ ಬಾಣಗಳಿಂದಲೂ, ಕುದುರೆಯ ಮೇಲೆ ಹಾಕುವ ಜೀನು ಮೊದಲಾದ ಹೊದಿಕೆಗಳಿಂದಲೂ, ನರೇಂದ್ರರ ಬೆಲೆಬಾಳುವ ಬಣ್ಣಬಣ್ಣದ ಚೂಡಾಮಣಿಗಳಿಂದಲೂ, ಬಿದ್ದಿದ್ದ ಚತ್ರ-ಚಾಮರ-ವ್ಯಜನಗಳಿಂದಲೂ, ಸುಂದರ ಕುಂಡಲಗಳಿಂದ ಪದ್ಮೇಂದುವಂತೆ ಹೊಳೆಯುತ್ತಿರುವ ವದನಗಳಿಂದ, ವೀರಯೋಧರ ಕಿವಿಗಳಿಂದ ಕಳಚಿ ಬಿದ್ದಿದ್ದ ಸುವರ್ಣದಿಂದ ಪ್ರಜ್ವಲಿಸುತ್ತಿದ್ದ ಕರ್ಣಕುಂಡಲಗಳಿಂದಲೂ ಅಚ್ಛಾದಿತವಾದ ಆ ರಣಭೂಮಿಯು ಗ್ರಹ-ನಕ್ಷತ್ರಗಳಿಂದ ಅಚ್ಛಾದಿತವಾದ ಆಕಾಶದಂತೆ ಕಾಣುತ್ತಿತ್ತು. ಈ ರೀತಿಯಲ್ಲಿ ಅಲ್ಲಿ ನಿನ್ನ ಮತ್ತು ಅವರ ಮಹಾಸೇನೆಯು ಪರಸ್ಪರರನ್ನು ಎದುರಿಸಿ ವಿನಾಶಗೊಂಡಿತು.

ಅವರು ಆಯಾಸಗೊಂಡಿರಲು, ಭಗ್ನಗೊಂಡಿರಲು, ಮರ್ದಿತರಾಗಿರಲು ಘೋರ ರಾತ್ರಿಯಾಯಿತು ಮತ್ತು ರಣದಲ್ಲಿ ಕಾಣದಂತಾದೆವು. ಆಗ ಆ ಘೋರ ನಿಶಾಮುಖದಲ್ಲಿ ರೌದ್ರವಾಗಿ ಸುದಾರುಣವಾಗಿ ನಡೆಯುತ್ತಿದ್ದ ಯುದ್ಧದಿಂದ ಕುರುಪಾಂಡವರು ಸೈನ್ಯಗಳನ್ನು ಹಿಂದೆ

ತೆಗೆದುಕೊಂಡರು. ಕುರು-ಪಾಂಡವರು ಒಟ್ಟಿಗೇ ಹಿಂದೆಸರಿದು ತಮ್ಮ ತಮ್ಮ ಶಿಬಿರಗಳಿಗೆ ತೆರಳಿ ಕಾಲಾವಕಾಶವಿದ್ದಂತೆ ವಿಶ್ರಮಿಸಿದರು.

## ದುರ್ಯೋಧನನ ಮಂತ್ರಾಲೋಚನೆ

ಆಗ ರಾಜಾ ದುರ್ಯೋಧನ, ಸೌಬಲ ಶಕುನಿ, ದುಃಶಾಸನ ಮತ್ತು ಸೂತಪುತ್ರರು ಸೇರಿಕೊಂಡು "ಪಾಂಡುಸುತರನ್ನು ಗಣಗಳೊಂದಿಗೆ ಯುದ್ಧದಲ್ಲಿ ಹೇಗೆ ಗೆಲ್ಲಬೇಕು" ಎಂದು ಮಂತ್ರಾಲೋಚನೆ ಮಾಡಿದರು. ಆಗ ರಾಜಾ ದುರ್ಯೋಧನನು ಸೂತಪುತ್ರನನ್ನೂ ಸೌಬಲನನ್ನೂ ಸಂಭೋಧಿಸಿ ತನ್ನ ಮಂತ್ರಿಗಳೆಲ್ಲರಿಗೆ ಹೇಳಿದನು:

> "ದ್ರೋಣ, ಭೀಷ್ಮ, ಕೃಪ, ಶಲ್ಯ ಮತ್ತು ಸೌಮದತ್ತಿಗಳು ಪಾರ್ಥರಿಗೆ ಯಾವುದೇ ರೀತಿಯ ಬಾಧೆಗಳನ್ನೂ ಉಂಟುಮಾಡುತ್ತಿಲ್ಲ. ಇದರ ಕಾರಣವು ಅರ್ಥವಾಗುತ್ತಿಲ್ಲ. ಕರ್ಣ ! ಅವಧ್ಯರಾಗಿರುವುದಲ್ಲದೇ ಅವರು ನನ್ನ ಸೇನೆಯನ್ನು ನಾಶಗೊಳಿಸುತ್ತಿದ್ದಾರೆ. ಸಂಯುಗದಲ್ಲಿ ಕ್ಷೀಣಬಲನೂ ಕ್ಷೀಣಶಸ್ತ್ರನೂ ಆಗುತ್ತಿದ್ದೇನೆ. ದೇವತೆಗಳಿಂದಲೂ ಅವಧ್ಯರಾದ ಶೂರ ಪಾಂಡವರಿಂದ ಪರಾಜಿತನಾಗುತ್ತಿರುವ ನನಗೆ ಸಂಶಯವಾಗುತ್ತಿದೆ. ರಣದಲ್ಲಿ ಹೇಗೆ ಯುದ್ಧಮಾಡಬೇಕು?"

ಸೂತಪುತ್ರನು ನರಾಧಿಪನಿಗೆ ಹೇಳಿದನು:

> "ಭರತಶ್ರೇಷ್ಠ! ಶೋಕಿಸಬೇಡ! ನಿನಗೆ ಪ್ರಿಯವಾದುದನ್ನು ಮಾಡುತ್ತೇನೆ. ಆದಷ್ಟು ಬೇಗನೆ ಮಹಾರಣದಿಂದ ಭೀಷ್ಮ

ಶಾಂತನವನು ಹೊರಟು ಹೋಗಲಿ. ಗಾಂಗೇಯನು ಯುದ್ಧದಿಂದ ನಿವೃತ್ತನಾಗಿ ಶಸ್ತ್ರಗಳನ್ನು ಕೆಳಗಿಟ್ಟರೆ, ನಿನ್ನಾಣೆ! ಸತ್ಯವಾಗಿಯೂ ನಾನು ಯುದ್ಧದಲ್ಲಿ ಭೀಷ್ಮನು ನೋಡುತ್ತಿದ್ದಂತೆಯೇ ಸರ್ವಸೋಮಕರೊಂದಿಗೆ ಪಾರ್ಥರನ್ನು ಕೊಲ್ಲುತ್ತೇನೆ. ಭೀಷ್ಮನು ಸದಾ ಪಾಂಡವರ ಮೇಲೆ ದಯೆಯನ್ನು ತೋರಿಸುತ್ತಾ ಬರಲಿಲ್ಲವೇ? ರಣದಲ್ಲಿ ಭೀಷ್ಮನು ಈ ಮಹಾರಥರನ್ನು ಗೆಲ್ಲಲು ಅಶಕ್ತನಾಗಿದ್ದಾನೆ. ರಣಪ್ರಿಯನಾದ ಭೀಷ್ಮನು ನಿತ್ಯವೂ ರಣದಲ್ಲಿ ಅಭಿಮಾನಿಯಾಗಿರುವವನು. ಹೀಗಿರುವಾಗಿ ಯುದ್ಧದಲ್ಲಿ ಅವನು ಒಟ್ಟಾಗಿ ಬಂದಿರುವ ಪಾಂಡವರನ್ನು ಹೇಗೆ ತಾನೇ ಜಯಿಸಿಯಾನು? ಆದುದರಿಂದ ನೀನು ಈಗ ಶೀಘ್ರವೇ ಭೀಷ್ಮನ ಶಿಬಿರಕ್ಕೆ ಹೋಗಿ ಅನುನಯದಿಂದ ರಣದಲ್ಲಿ ಭೀಷ್ಮನು ಶಸ್ತ್ರನ್ಯಾಸಮಾಡುವಂತೆ ಮಾಡು. ಭೀಷ್ಮನು ಶಸ್ತ್ರನ್ಯಾಸ ಮಾಡಿದೊಡನೆಯೇ ನಾನೊಬ್ಬನೇ ರಣದಲ್ಲಿ ಸುಹೃದಯರು ಮತ್ತು ಬಾಂಧವಗಳೊಂದಿಗೆ ಪಾಂಡವರನ್ನು ಸಂಹರಿಸುವುದನ್ನು ನೋಡು!”

ಕರ್ಣನು ಹೀಗೆ ಹೇಳಲು ದುರ್ಯೋಧನನು ಅಲ್ಲಿದ್ದ ತಮ್ಮ ದುಃಶಾಸನನಿಗೆ ಹೇಳಿದನು:

“ದುಃಶಾಸನ! ನಮ್ಮವರು ಎಲ್ಲರೂ ಸುತ್ತುವರೆದು ನನ್ನನ್ನು

ಹಿಂಬಾಲಿಸುವಂತೆ ವ್ಯವಸ್ಥೆ ಮಾಡು. ಬೇಗನೇ ಈ ಎಲ್ಲ ಕೆಲಸವನ್ನು ಮಾಡಿ ಮುಗಿಸು.”

ಹೀಗೆ ಹೇಳಿ ಜನೇಶ್ವರನು ಕರ್ಣನಿಗೆ ಹೇಳಿದನು:

“ರಣದಲ್ಲಿ ಭೀಷ್ಮನನ್ನು ಒಪ್ಪಿಸಿ ಇಲ್ಲಿಗೆ ಬರುತ್ತೇನೆ. ಅರಿಂದಮ! ನಂತರ ನಿನ್ನಲ್ಲಿಗೆ ಬೇಗನೇ ಬರುತ್ತೇನೆ. ಆಗ ನೀನು ಸಂಯುಗದಲ್ಲಿ ಮಾಡಿ ತೋರಿಸುವಿಯಂತೆ.”

ಆಗ ದುರ್ಯೋಧನನು ಎಲ್ಲ ದೇವತಗಳೊಂದಿಗೆ ಶತಕ್ರತುವಂತೆ ತನ್ನ ಸಹೋದರರೊಂದಿಗೆ ಬೇಗನೇ ಹೊರಟನು. ಆಗ ತಕ್ಷಣವೇ ಭ್ರಾತಾ ದುಃಶಾಸನನು ಶಾರ್ದೂಲಸಮವಿಕ್ರಮ ನೃಪಶಾರ್ದೂಲನನ್ನು ಕುದುರೆಯ ಮೇಲೆ ಹತ್ತಿಸಿದನು. ಅಂಗದಗಳನ್ನು ಧರಿಸಿದ್ದ, ಕಿರೀಟವನ್ನು ಹಸ್ತಾಭರಣಗಳನ್ನು ಧರಿಸಿದ್ದ ನೃಪ ಧಾರ್ತರಾಷ್ಟ್ರನು ಮಹೇಂದ್ರನಂತೆ ಕಂಗೊಳಿಸಿದನು. ಶಿರೀಷಪುಷ್ಪ ಸದೃಶನಾಗಿದ್ದ, ಚಿನ್ನದ ಹೊಂಬಣ್ಣದ, ಸುಂಗಂಧಯುಕ್ತವಾದ ಬಹುಮೂಲ್ಯದ ಚಂದನವನ್ನು ಲೇಪಿಸಿಕೊಂಡಿದ್ದ, ಧೂಳಿಲ್ಲದ ಶುಭ್ರ ವಸ್ತ್ರಗಳನ್ನು ತೊಟ್ಟಿದ್ದ, ಮದೋನ್ಮತ್ತ ಸಿಂಹದ ನಡುಗೆಯ ನೃಪನು ಶರದೃತುವಿನ ವಿಮಲ ಆಕಾಶದಲ್ಲಿರುವ ದಿವಾಕರನಂತೆ ಶೋಭಿಸಿದನು. ಭೀಷ್ಮನ ಶಿಬಿರದ ಕಡೆ ಹೋಗುತ್ತಿರುವ ಆ ನರವ್ಯಾಘ್ರನನ್ನು ಸರ್ವಲೋಕದ ಧನ್ವಿಗಳಾದ ಮಹೇಷ್ವಾಸರೂ ಸಹೋದರರೂ ವಾಸವನನ್ನು ತ್ರಿದಶರಂತೆ ಹಿಂಬಾಲಿಸಿದರು. ಕೆಲವರು ಕುದುರೆಗಳನ್ನೇರಿ, ಅನ್ಯರು ಆನೆಗಳನ್ನೇರಿ,

ಅನ್ಯ ನರಶ್ರೇಷ್ಠರು ರಥಗಳನ್ನೇರಿ ಎಲ್ಲ ಕಡೆಗಳಿಂದಲೂ ಸುತ್ತುವರೆದಿದ್ದರು. ಮಹೀಪತಿಯ ರಕ್ಷಣಾರ್ಥವಾಗಿ ಸುಹೃದಯರು ಶಸ್ತ್ರಗಳನ್ನು ಹಿಡಿದು ದಿವಿಯಲ್ಲಿ ಅಮರರು ಶಕ್ರನಂತೆ ಹಿಂಬಾಲಿಸಿದರು. ಕುರುಗಳಿಂದ ಮತ್ತು ಕೌರವರ ಮಹಾರಥರಿಂದ ಸಂಪೂಜ್ಯಮಾನನಾಗಿ ಆ ಯಶಸ್ವಿ ನೃಪನು ಎಲ್ಲಕಡೆಗಳಲ್ಲಿ ಸೋದರರನ್ನೊಡಗೂಡಿ ಗಾಂಗೇಯನ ಸದನದ ಕಡೆ ಪ್ರಯಾಣಿಸಿದನು.

ಆ ಬಲಸಮಯದಲ್ಲಿ ಸರ್ವಶತ್ರುಗಳನ್ನೂ ಸಂಹಾರಮಾಡಲ್ಲ, ಆನೆಯ ಸೊಂಡಲಿನಂತಿದ್ದ, ನೈಪುಣ್ಯತೆಯನ್ನು ಹೊಂದಿದ್ದ ಬಲಗೈಯನ್ನು ಮೇಲೆತ್ತಿ ಎಲ್ಲ ದಿಕ್ಕುಗಳಲ್ಲಿಯು ಅಂಜಲೀ ಬದ್ಧರಾಗಿ ಅರ್ಪಿಸುತ್ತಿದ್ದ ಪ್ರಣಾಮಗಳನ್ನು ಸ್ವೀಕರಿಸುತ್ತಾ ನಾನಾದೇಶ ನಿವಾಸಿಗಳ ಮಧುರ ವಚನವನ್ನು ಕೇಳಿದನು. ಸಂಸ್ತುತಿಸುತ್ತಿದ್ದ ಸೂತರಿಂದ, ಮಹಾಯಶ ಮಾಗಧರಿಂದ ಎಲ್ಲರಿಂದ ಪೂಜಿಸಿಕೊಳ್ಳುತ್ತಾ ಸರ್ವಲೋಕೇಶ್ವರೇಶ್ವರನು ಹೊಳೆಯುತ್ತಿರುವ ಕಾಂಚನಗಳಿಂದ ಮತ್ತು ಸುಗಂಧಿತ ತೈಲಾವಸೇಚನೆಗೊಂಡ ಮಹಾತ್ಮರಿಂದ ಸುತ್ತುವರೆಯಲ್ಪಟ್ಟು ಪ್ರಜ್ವಲಿಸುತ್ತಾ ಮುಂದುವರೆದನು. ಶುಭ ಕಾಂಚನಗಳಿಂದ ಹೊಳೆಯುತ್ತಿರುವವರಿಂದ ಪರಿವೃತನಾದ ರಾಜನು ಉರಿಯುತ್ತಿರುವ ಮಹಾಗ್ರಹಗಳಿಂದ ಯುಕ್ತನಾದ ಚಂದ್ರಮನಂತೆ ಶೋಭಿಸಿದನು. ಕಂಚುಕ ಉಷ್ಣೀಷಿಣಗಳನ್ನು ಧರಿಸಿದ್ದ ಝರ್ಝರಗಳನ್ನು ಹಿಡಿದಿದ್ದ ವೇತ್ರರು ಎಲ್ಲಕಡೆಯಿಂದ ಮುನ್ನುಗ್ಗುತ್ತಿದ್ದ ಜನಸ್ತೋಮವನ್ನು ಮೆಲ್ಲನೇ ಹಿಂದೆ ಸರಿಸುತ್ತಿದ್ದರು. ಆಗ ರಾಜ

ಜನೇಶ್ವರನು ಭೀಷ್ಮನ ಶುಭ ಸದನವನ್ನು ತಲುಪಿ ಕುದುರೆಯಿಂದ ಇಳಿದು ಭೀಷ್ಮನನ್ನು ಸಮೀಪಿಸಿದನು. ಭೀಷ್ಮನನ್ನು ಅಭಿವಂದಿಸಿ, ಮೆತ್ತನೆಯ ಕಾಂಚನದ ಸರ್ವತೋಭದ್ರಾಸನ ಪರಮಾಸನದಲ್ಲಿ ಕುಳಿತುಕೊಂಡು ಅಂಜಲೀ ಬದ್ಧನಾಗಿ ಬಾಷ್ಪಕಂಠದಲ್ಲಿ ಅಶ್ರುಲೋಚನನಗಿ ಭೀಷ್ಮನಿಗೆ ಹೇಳಿದನು:

"ಶತ್ರುಸೂದನ! ನಾವು ನಿನ್ನನ್ನು ಸಮಾಶ್ರಯಿಸಿ ಸಂಯುಗದಲ್ಲಿ ಇಂದ್ರನನ್ನೂ ಸುರಾಸುರರನ್ನೂ ರಣದಲ್ಲಿ ಗೆಲ್ಲಲು ಉತ್ಸಾಹಿತರಾಗಿದ್ದೇವೆ. ಇನ್ನು ಸುಹೃದಯರು ಮತ್ತು ಬಾಂಧವಗಣಗಳೊಂದಿಗಿರುವ ವೀರ ಪಾಂಡುಸುತರು ಯಾವ ಲೆಕ್ಕಕ್ಕೆ? ಆದುದರಿಂದ ಗಾಂಗೇಯ! ನನ್ನ ಮೇಲೆ ಕೃಪೆ ಮಾಡಲು ಮಹೇಂದ್ರನು ದಾನವರನ್ನು ಹೇಗೋ ಹಾಗೆ ನೀನು ವೀರ ಪಾಂಡುಸುತರನ್ನು ಗೆಲ್ಲು. ಹಿಂದೆ ನೀನು ಸೋಮಕರನ್ನೂ, ಪಾಂಚಾಲರನ್ನೂ, ಕರೂಷರನ್ನೂ ಪಾಂಡವರೊಂದಿಗೆ ಸಂಹರಿಸುತ್ತೇನೆ ಎಂದು ಹೇಳಿದ್ದೆ. ಆ ವಚನವನ್ನು ಸತ್ಯವಾಗಿಸಲು ಸಮಾಗತರಾಗಿರುವ ಪಾರ್ಥರನ್ನು ಮತ್ತು ಮಹೇಷಸ ಸೋಮಕರನ್ನು ಗೆಲ್ಲು. ಸತ್ಯವಾಗ್ಮಿಯಾಗು. ಅವರ ಮೇಲಿನ ದಯೆಯಿಂದಲೋ ನನ್ನ ಮೇಲಿನ ದ್ವೇಷದಿಂದಲೋ ಅಥವಾ ನನ್ನ ದೌರ್ಭಾಗ್ಯದಿಂದಲೋ ನೀನು ಪಾಂಡವರನ್ನು ರಕ್ಷಿಸುವೆಯಾದರೆ ಸಮರದಲ್ಲಿ ಆಹವಶೋಭಿ ಕರ್ಣನಿಗೆ

ಅನುಮತಿಯನ್ನು ನೀಡು. ಅವನು ರಣದಲ್ಲಿ ಸುಹೃದಯರು ಬಾಂಧವರ ಗಣಗಳೊಂದಿಗೆ ಪಾರ್ಥರನ್ನು ಗೆಲ್ಲುತ್ತಾನೆ.”

ಹೀಗೆ ಹೇಳಿ ನೃಪತಿ ದುರ್ಯೋಧನನು ಭೀಮಪರಾಕ್ರಮಿ ಭೀಷ್ಮನಿಗೆ ಬೇರೆ ಏನನ್ನೂ ಹೇಳಲಿಲ್ಲ.

ದುರ್ಯೋಧನನ ಮಾತೆಂಬ ಮುಳ್ಳುಗಳಿಂದ ಬಹಳ ಆಳದವರೆಗೂ ಚುಚ್ಚಲ್ಪಟ್ಟ ಪಿತಾಮಹನು ಮಹಾ ದುಃಖದಿಂದ ಆವಿಷ್ಟನಾದರೂ ಅಪ್ರಿಯವಾದುದೇನನ್ನೂ ಹೇಳಲಿಲ್ಲ. ದುಃಖರೋಷಸಮನ್ವಿತನಾದ ಲೋಕವಿದರಲ್ಲಿ ಶ್ರೇಷ್ಠನು ಅಂಕುಶದಿಂದ ನೋಯಿಸಲ್ಪಟ್ಟ ಆನೆಯಂತೆ ನಿಟ್ಟುಸಿರು ಬಿಡುತ್ತಾ, ಕೋಪದಿಂದ ದೇವಾಸುರಗಂಧರ್ವರೊಡನೆ ಲೋಕಗಳನ್ನು ಸುಟ್ಟುಬಿಡುವನೋ ಎನ್ನುವಂತೆ ಕಣ್ಣುಗಳನ್ನು ಮೇಲೆತ್ತಿ ಬಹಳ ಹೊತ್ತು ಆಲೋಚಿಸಿ ಅವನಿಗೆ ಸಾಮದಿಂದ ಕೂಡಿದ ಈ ಮಾತನ್ನಾಡಿದನು:

“ದುರ್ಯೋಧನ! ಏಕೆ ಹೀಗೆ ನನ್ನನ್ನು ಮಾತೆಂಬ ಶಲ್ಯಗಳಿಂದ ನೋಯಿಸುತ್ತಿರುವೆ? ನಿನಗೆ ಪ್ರಿಯವಾದುದನ್ನು ಮಾಡಲು ಯಥಶಕ್ತಿಯಾಗಿ ಪ್ರಯತ್ನಿಸುತ್ತಿದ್ದೇನೆ. ನಿನ್ನ ಹಿತವನ್ನೇ ಬಯಸಿ ಸಮರಾಗ್ನಿಯಲ್ಲಿ ಪ್ರಾಣಗಳನ್ನು ಅರ್ಪಿಸುತ್ತಿದ್ದೇನೆ. ಎಂದು ಶೂರ ಪಾಂಡವನು ರಣದಲ್ಲಿ ಶಕ್ರನನ್ನು ಪರಾಜಯಗೊಳಿಸಿ ಖಾಂಡವವನ್ನಿತ್ತು ಅಗ್ನಿಯನ್ನು ತೃಪ್ತಿಪಡಿಸಿದನೋ ಅದೇ ಪರ್ಯಾಪ್ತವಾದ ನಿದರ್ಶನ. ಎಂದು ಅಪಹರಿಸಲ್ಪಟ್ಟ

ನಿನ್ನನ್ನು ಗಂಧರ್ವರಿಂದ ಪಾಂಡವನು ಬಿಡುಗಡೆ ಮಾಡಿದನೋ ಅದೇ ಪರ್ಯಾಪ್ತ ನಿದರ್ಶನವು. ನಿನ್ನ ಶೂರ ಸೋದರರರು ಮತ್ತು ಸೂತಪುತ್ರ ರಾಧೇಯನು ಓಡಿಹೋದದ್ದೇ ಪರ್ಯಾಪ್ತ ನಿದರ್ಶನವು. ನಾವೆಲ್ಲರೂ ವಿರಾಟನಗರದಲ್ಲಿ ಒಟ್ಟಿಗೇ ಇದ್ದಾಗ ಅವನು ಒಬ್ಬನೇ ನಮ್ಮೊಡನೆ ಯುದ್ಧಮಾಡಿ ಜಯಿಸಿದುದೇ ಪರ್ಯಾಪ್ತ ನಿದರ್ಶನವು. ಯುದ್ಧದಲ್ಲಿ ದ್ರೋಣನನ್ನೂ ದಿಗ್ಭ್ರಮೆಗೊಳಿಸಿ, ನನ್ನನ್ನೂ, ಕರ್ಣನನ್ನೂ, ದ್ರೌಣಿಯನ್ನೂ, ಸುಮಹಾರಥ ಕೃಪನನ್ನೂ ಸಂಯುಗದಲ್ಲಿ ಸೋಲಿಸಿ, ವಸ್ತ್ರಗಳನ್ನು ತೆಗೆದುಕೊಂಡು ಹೋದ ಅದೇ ಪರ್ಯಾಪ್ತ ನಿದರ್ಶನವು. ಯುದ್ಧದಲ್ಲಿ ವಾಸವನಿಗೂ ಜಯಿಸಲಸಾದ್ಯರಾದ ನಿವಾತಕವಚರನ್ನು ಸಮರದಲ್ಲಿ ಗೆದ್ದ ಪಾರ್ಥನೇ ಪರ್ಯಾಪ್ತ ನಿದರ್ಶನವು. ರಣದಲ್ಲಿ ರಭಸನಾಗಿರುವ ಪಾಂಡವನನ್ನು ರಣದಲ್ಲಿ ಗೆಲ್ಲಲು ಯಾರುತಾನೇ ಶಕ್ತರು? ಮೋಹದಿಂದ ನೀನು ಏನನ್ನು ಹೇಳಬೇಕು ಏನನ್ನು ಹೇಳಬಾರದು ಎನ್ನುವುದನ್ನು ಅರ್ಥಮಾಡಿಕೊಳ್ಳುತ್ತಿಲ್ಲ. ಗಾಂಧಾರೇ! ಮರಣವು ಸನ್ನಿಹಿತವಾದಾಗ ಮನುಷ್ಯನು ಎಲ್ಲ ವೃಕ್ಷಗಳನ್ನೂ ಕಾಂಚನದವುಗಳೆಂದೇ ಕಾಣುತ್ತಾನೆ. ಹಾಗೆ ನೀನೂ ಕೂಡ ವಿಪರೀತಗಳನ್ನು ಕಾಣುತ್ತಿದ್ದೀಯೆ. ಸ್ವಯಂ ನೀನೇ ಸೃಂಜಯರು ಮತ್ತು ಪಾಂಡವರೊಂದಿಗೆ ಮಹಾ ವೈರವನ್ನು

ಕಟ್ಟಿಕೊಂಡಿರುವೆ. ಇಂದು ನೀನೇ ರಣದಲ್ಲಿ ಯುದ್ಧಮಾಡು. ಪುರುಷನಾಗು. ನೋಡುತ್ತೇವೆ. ನಾನಾದರೋ ಶಿಖಂಡಿಯನ್ನು ಬಿಟ್ಟು ಸೇರಿರುವ ಸರ್ವ ಸೋಮಕರನ್ನೂ ಪಾಂಚಾಲರನ್ನೂ ಸಂಹರಿಸುತ್ತೇನೆ. ಯುದ್ಧದಲ್ಲಿ ಅವರಿಂದಲಾದರೂ ಹತನಾಗಿ ಯಮಸಾದನಕ್ಕೆ ಹೋಗುತ್ತೇನೆ. ಅಥವಾ ಅವರನ್ನು ಸಂಗ್ರಾಮದಲ್ಲಿ ಸಂಹರಿಸಿ ನಿನಗೆ ಪ್ರೀತಿಯಾದುದನ್ನು ಕೊಡುತ್ತೇನೆ. ಶಿಖಂಡಿಯು ಹಿಂದೆ ರಾಜಮನೆಯಲ್ಲಿ ಸ್ತ್ರೀಯಾಗಿಯೇ ಹುಟ್ಟಿದ್ದನು. ಸ್ತ್ರೀಯಾಗಿದ್ದ ಶಿಖಂಡಿನಿಯು ವರದಾನದಿಂದ ಪುರುಷನಾದನು. ಪ್ರಾಣತ್ಯಾಗ ಮಾಡಬೇಕಾಗಿ ಬಂದರೂ ನಾನು ಅವನನ್ನು ಸಂಹರಿಸುವುದಿಲ್ಲ. ಧಾತ್ರನಿಂದ ನಿರ್ಮಿತಳಾಗಿದ್ದ ಶಿಖಂಡಿನಿಯು ಈಗಲೂ ಸ್ತ್ರೀಯೆಂದೇ ಮನ್ನಿಸುತ್ತೇನೆ. ಸುಖವಾಗಿ ನಿದ್ದೆಮಾಡು. ಎಲ್ಲಿಯವರೆಗೆ ಮೇದಿನಿಯಿರುವಳೋ ಅಲ್ಲಿಯವರೆಗೆ ಜನರು ಮಾತನಾಡಿಕೊಳ್ಳುವಂಥಹ ಮಹಾರಣವನ್ನು ನಾನು ನಾಳೆ ನಿರ್ಮಿಸುತ್ತೇನೆ."

ಹೀಗೆ ಹೇಳಲು ದುರ್ಯೋಧನನು ಗುರುವಿಗೆ ತಲೆಬಾಗಿ ನಮಸ್ಕರಿಸಿ ತನ್ನ ಬಿಡಾರಕ್ಕೆ ತೆರಳಿದನು. ಆಗಮಿಸಿ ರಾಜನು ಮಹಾಜನರನ್ನು ಕಳುಹಿಸಿದನು. ಆ ಶತ್ರುಕ್ಷಯಂಕರ ಪಾರ್ಥಿವನು ತಕ್ಷಣವೇ ಡೇರೆಯನ್ನು ಪ್ರವೇಶಿಸಿ ರಾತ್ರಿಯನ್ನು ಕಳೆದನು.

# ಒಂಭತ್ತನೆಯ ದಿನದ ಯುದ್ಧ

ರಾತ್ರಿಯು ಕಳೆದು ಬೆಳಗಾಗುತ್ತಲೇ ಎದ್ದು ನೃಪನು ರಾಜರನ್ನು ಕರೆಯಿಸಿ ಆಜ್ಞಾಪಿಸಿದನು:

> “ಸೇನೆಯನ್ನು ಸಿದ್ಧಗೊಳಿಸಿ. ಇಂದು ಭೀಷ್ಮನು ರಣದಲ್ಲಿ ಕ್ರುದ್ಧನಾಗಿ ಸೋಮಕರನ್ನು ಸಂಹರಿಸುತ್ತಾನೆ.”

ರಾತ್ರಿಯಲ್ಲಿ ದುರ್ಯೋಧನನು ಬಹಳವಾಗಿ ಅಳುತ್ತಾ ಹೇಳಿದನ್ನು ಕೇಳಿ, ಅದು ತನ್ನನ್ನು ಯುದ್ಧದಿಂದ ಹಿಂದೆಸರಿಯಲು ಹೇಳಿದುದೆಂದು ಮನಗಂಡು ಬಹಳ ಖಿನ್ನನ್ನಾಗಿ ಪರಾಧಿನತೆಯನ್ನು ನಿಂದಿಸಿ ಶಾಂತನವನು ರಣದಲ್ಲಿ ಅರ್ಜುನನೊಡನೆ ಯುದ್ಧ ಮಾಡಲು ಬಯಸಿ ದೀರ್ಘ ಯೋಚನೆಯಲ್ಲಿ ಮುಳುಗಿದನು. ಗಾಂಗೇಯನು ಚಿಂತಿಸುತ್ತಿರುವುದನ್ನು ಅವನ ಮುಖಭಾವದಿಂದಲೇ ಅರ್ಥಮಾಡಿಕೊಂಡ ದುರ್ಯೋಧನನು ದುಃಶಾಸನನನ್ನು ಕರೆದು ಆಜ್ಞಾಪಿಸಿದನು:

> “ದುಃಶಾಸನ! ಭೀಷ್ಮನನ್ನು ರಕ್ಷಿಸಲು ಸಮರ್ಥವಾದ ರಥಗಳನ್ನು ಕೂಡಲೇ ಸಿದ್ಧಗೊಳಿಸು. ನಮ್ಮಲ್ಲಿರುವ ಇಪ್ಪತ್ತೆರಡು ಅನೀಕಗಳನ್ನೂ ಇದಕ್ಕಾಗಿಯೇ ಮೀಸಲಿಡು. ಬಹಳ ವರ್ಷಗಳಿಂದ ಯೋಚಿಸಿಕೊಂಡು ಬಂದಿದ್ದ ಸಮಯವು ಈಗ ಬಂದೊದಗಿದೆ. ಸೈನ್ಯದೊಂದಿಗೆ

ಪಾಂಡವರ ವಧೆ ಮತ್ತು ರಾಜ್ಯಪ್ರಾಪ್ತಿ ಇವೆರಡೂ ಆಗಲಿವೆ. ಅದರಲ್ಲಿ ಭೀಷ್ಮನ ಅಭಿರಕ್ಷಣೆಯೇ ಮಾಡಬೇಕಾದ್ದು ಎಂದು ನನ್ನ ಅಭಿಪ್ರಾಯ. ಅವನನ್ನು ನಾವು ರಕ್ಷಿಸಿದರೆ ಅವನು ನಮ್ಮ ಸಹಾಯಕನಾಗಿ ಪಾರ್ಥರನ್ನು ಯುದ್ಧದಲ್ಲಿ ಸಂಹರಿಸಬಲ್ಲನು. ಆದರೆ ಆ ವಿಶುದ್ಧಾತ್ಮನು ನನಗೆ ಹೇಳಿದ್ದನು - “ನಾನು ಶಿಖಂಡಿಯನ್ನು ಕೊಲ್ಲುವುದಿಲ್ಲ. ಮೊದಲು ಅವನು ಹೆಣ್ಣಾಗಿ ಹುಟ್ಟಿದ್ದನು. ಆದುದರಿಂದ ಅವನು ರಣದಲ್ಲಿ ನನಗೆ ವರ್ಜ್ಯ. ನಾನು ತಂದೆಗೆ ಇಷ್ಟವಾದುದನ್ನು ಮಾಡಲು ಏನು ಮಾಡಿದೆನೆಂದು ಲೋಕವೇ ತಿಳಿದಿದೆ. ಹಿಂದೆಯೇ ನಾನು ಸಂಪದ್ಭರಿತ ರಾಜ್ಯ ಮತ್ತು ಸ್ತ್ರೀಯನ್ನು ತ್ಯಜಿಸಿದ್ದೇನೆ. ನಾನು ಸ್ತ್ರೀಯನ್ನು, ಮೊದಲು ಸ್ತ್ರೀಯಾಗಿ ಹುಟ್ಟಿದವರನ್ನು ಎಂದೂ ಯುದ್ಧದಲ್ಲಿ ಕೊಲ್ಲುವುದಿಲ್ಲ. ನಿನಗೆ ಈ ಸತ್ಯವನ್ನು ಹೇಳುತ್ತಿದ್ದೇನೆ. ಈ ಶಿಖಂಡಿಯು ಮೊದಲು ಸ್ತ್ರೀಯಾಗಿದ್ದನು ಎಂದು ನೀನೂ ಕೇಳಿರಬಹುದು. ಯುದ್ಧದ ತಯಾರಿಯಲ್ಲಿಯೇ ನಿನಗೆ ಹೇಳಿದಂತೆ ಇವನು ಶಿಖಂಡಿನಿಯಾಗಿ ಹುಟ್ಟಿದ್ದನು. ಕನ್ಯೆಯಾಗಿ ಹುಟ್ಟಿ ಪುರುಷನಾದ ಅವನೂ ಯುದ್ಧಮಾಡುತ್ತಿದ್ದಾನೆ. ಅವನ ಮೇಲೆ ನಾನು ಎಂದೂ ಬಾಣಗಳನ್ನು ಪ್ರಯೋಗಿಸುವುದಿಲ್ಲ. ಆದರೆ ಯುದ್ಧದಲ್ಲಿ ಪಾಂಡವರ ಜಯವನ್ನು ಬಯಸಿ ನನ್ನೊಡನೆ ಯುದ್ಧಮಾಡಬರುವ ಕ್ಷತ್ರಿಯರೆಲ್ಲರನ್ನೂ ಸಂಹರಿಸುತ್ತೇನೆ.”

ಹೀಗೆ ನನಗೆ ಶಾಸ್ತ್ರವಿದು ಭರತಶ್ರೇಷ್ಠ ಗಾಂಗೇಯನು ಹೇಳಿದ್ದನು. ಆದುದರಿಂದ ಸರ್ವಪ್ರಕಾರದಿಂದಲೂ ಭೀಷ್ಮನನ್ನು ರಕ್ಷಿಸಬೇಕೆಂಬ ಅಭಿಪ್ರಾಯ. ಮಹಾವನದಲ್ಲಿ ರಕ್ಷಣೆಯಿಲ್ಲದ ಸಿಂಹವನ್ನು ತೋಳವೇ ಕೊಲ್ಲಬಹುದು. ಶಿಖಂಡಿಯೆಂಬ ತೋಳವು ಈ ಸಿಂಹವನ್ನು ಕೊಲ್ಲಬಾರದು. ಸೋದರಮಾವ ಶಕುನಿ, ಶಲ್ಯ, ಕೃಪ, ದ್ರೋಣ, ವಿವಿಂಶತಿ ಇವರು ಪ್ರಯತ್ನಪಟ್ಟು ಗಾಂಗೇಯನನ್ನು ರಕ್ಷಿಸಲಿ. ಇವನನ್ನು ರಕ್ಷಿಸಿದರೆ ಜಯವು ಖಂಡಿತ.”

ದುರ್ಯೋಧನನ ಮಾತನ್ನು ಕೇಳಿ ರಾಜರು ರಥಸೇನೆಗಳಿಂದ ಗಾಂಗೇಯನನ್ನು ಎಲ್ಲ ಕಡೆಗಳಿಂದಲೂ ಸುತ್ತುವರೆದರು. ಧೃತರಾಷ್ಟ್ರನ ಪುತ್ರರೂ ಕೂಡ ಗಾಂಗೇಯನನ್ನು ಸುತ್ತುವರೆದು ತಮ್ಮ ನಡುಗೆಯಿಂದ ಭೂಮಿಯನ್ನು ನಡುಗಿಸುತ್ತಾ ಪಾಂಡವರನ್ನು ಕ್ಷೋಭಿಸುತ್ತಾ ಸಂತೋಷದಿಂದ ಮುಂದುವರೆದರು. ಉತ್ತಮವಾಗಿ ಸುಸಜ್ಜಿತವಾದ ರಥಗಳಿಂದ ಮತ್ತು ಆನೆಗಳಿಂದ ಕೂಡಿ, ಕವಚಗಳನ್ನು ಧರಿಸಿ ಸಮವಸ್ಥಿತರಾಗಿ ಮಹಾರಥರು ರಣದಲ್ಲಿ ಭೀಷ್ಮನನ್ನು ಸುತ್ತುವರೆದರು. ದೇವಾಸುರರ ಯುದ್ಧದಲ್ಲಿ ತ್ರಿದಶರು ವಜ್ರಧಾರಿಣಿಯ ಹೇಗೋ ಹಾಗೆ ಅವರು ಆ ಮಹಾರಥನನ್ನು ರಕ್ಷಿಸುತ್ತಾ ನಿಂತಿದ್ದರು. ಆಗ ರಾಜಾ ದುರ್ಯೋಧನನು ಪುನಃ ಸಹೋದರನಿಗೆ ಹೇಳಿದನು:

“ಅರ್ಜುನನ ರಥದ ಬಲಚಕ್ರವನ್ನು ಯುಧಾಮನ್ಯುವೂ

ಎಡಚಕ್ರವನ್ನು ಉತ್ತಮೌಜಸನೂ ಕಾಯುತ್ತಿದ್ದಾರೆ. ಅರ್ಜುನನು ಶಿಖಂಡಿಯನ್ನು ರಕ್ಷಿಸುತ್ತಿದ್ದಾನೆ. ದುಃಶಾಸನ! ಪಾರ್ಥನ ರಕ್ಷಣೆಯಲ್ಲಿದ್ದ ಅವನು ನಮ್ಮಿಂದ ತಪ್ಪಿಸಿಕೊಂಡು ಭೀಷ್ಮನನ್ನು ಕೊಲ್ಲದಂತೆ ಮಾಡು!"

ಅಣ್ಣನ ಆ ಮಾತನ್ನು ಕೇಳಿ ದುಃಶಾಸನನು ಭೀಷ್ಮನನ್ನು ಮುಂದಾಳುವಾಗಿ ಮಾಡಿಕೊಂಡು ಸೇನೆಯೊಂದಿಗೆ ಹೊರಟನು. ರಥಸೇನೆಗಳಿಂದ ಪರಿವೃತನಾಗಿರುವ ಭೀಷ್ಮನನ್ನು ನೋಡಿ ರಥಿಗಳಲ್ಲಿ ಶ್ರೇಷ್ಠ ಅರ್ಜುನನು ಧೃಷ್ಟದ್ಯುಮ್ನನಿಗೆ ಹೇಳಿದನು:

"ನರವ್ಯಾಘ್ರ! ಇಂದು ಭೀಷ್ಮನ ಎದುರಿಗೆ ಅವನಿಗೆ ರಕ್ಷಣೆಯನ್ನಿತ್ತು ಶಿಖಂಡಿಯನ್ನು ನಿಲ್ಲಿಸು."

ಆಗ ಶಾಂತನವ ಭೀಷ್ಮನು ಸೇನೆಯೊಂದಿಗೆ ಹೊರಟನು. ಅವನು ಆಹವದಲ್ಲಿ ಸರ್ವತೋಭದ್ರ ಮಹಾ ವ್ಯೂಹವನ್ನು ರಚಿಸಿದನು. ಕೃಪ, ಕೃತವರ್ಮ, ಶೈಬ್ಯ, ಶಕುನಿ, ಸೈಂಧವ, ಕಾಂಬೋಜದ ಸುದಕ್ಷಿಣ, ಮತ್ತು ಧೃತರಾಷ್ಟ್ರನ ಪುತ್ರರೆಲ್ಲರೂ ಭೀಷ್ಮನೊಂದಿಗೆ ವ್ಯೂಹದ ಅಗ್ರಭಾಗದಲ್ಲಿ ಸರ್ವ ಸೇನೆಗಳ ಪ್ರಮುಖರಾಗಿ ನಿಂತರು. ದ್ರೋಣ, ಭೂರಿಶ್ರವ, ಶಲ್ಯ, ಭಗದತ್ತ ಇವರು ಕವಚಗಳನ್ನು ಧರಿಸಿ ವ್ಯೂಹದ ಎಡಭಾಗದಲ್ಲಿದ್ದರು. ಅಶ್ವತ್ಥಾಮ, ಸೋಮದತ್ತ ಮತ್ತು ಅವಂತಿಯ ಮಹಾರಥರಿಬ್ಬರೂ ಮಹಾಸೇನೆಯಿಂದೊಡಗೂಡಿ ಬಲಭಾಗವನ್ನು ರಕ್ಷಿಸಿದರು. ದುರ್ಯೋಧನನು ತ್ರಿಗರ್ತರಿಂದ ಎಲ್ಲಕಡೆಗಳಿಂದಲೂ

ಆವೃತನಾಗಿ ಪಾಂಡವರನ್ನು ಎದುರಿಸಿ ವ್ಯೂಹಮಧ್ಯದಲ್ಲಿ ನಿಂತಿದ್ದನು. ರಥಶ್ರೇಷ್ಠ ಅಲಂಬುಸ ಮತ್ತು ಮಹಾರಥ ಶ್ರುತಾಯು ಇಬ್ಬರೂ ಕವಚಧಾರಿಗಳಾಗಿ ಸರ್ವಸೇನೆಗಳ ವ್ಯೂಹದ ಹಿಂಭಾಗದಲ್ಲಿ ನಿಂತಿದ್ದರು. ಹೀಗೆ ವ್ಯೂಹವನ್ನು ಮಾಡಿಕೊಂಡು ಕೌರವರು ಸನ್ನದ್ಧರಾಗಿ ಅಗ್ನಿಯಂತೆ ಉರಿಯುತ್ತಿದ್ದರು.

ಆಗ ರಾಜಾ ಯುಧಿಷ್ಠಿರ, ಪಾಂಡವ ಭೀಮಸೇನ, ಮಾದ್ರೀಪುತ್ರ ನಕುಲ-ಸಹದೇವರಿಬ್ಬರೂ ಕವಚಧಾರಿಗಳಾಗಿ ಸರ್ವಸೇನೆಗಳ ವ್ಯೂಹದ ಅಗ್ರಭಾಗದಲ್ಲಿ ನಿಂತಿದ್ದರು. ಶತ್ರುಸೇನವಿನಾಶಿಗಳಾದ ಧೃಷ್ಟದ್ಯುಮ್ನ, ವಿರಾಟ, ಮಹಾರಥಿ ಸಾತ್ಯಕಿ ಇವರು ಮಹಾ ಸೇನೆಗಳೊಂದಿಗೆ ನಿಂತಿದ್ದರು. ಶಿಖಂಡೀ, ವಿಜಯ, ರಾಕ್ಷಸ ಘಟೋತ್ಕಚ, ಮಹಾಬಾಹು ಚೇಕಿತಾನ, ವೀರ್ಯವಾನ್ ಕುಂತಿಭೋಜ ಇವರು ಮಹಾ ಸೇನೆಗಳಿಂದ ಆವೃತರಾಗಿ ರಣದಲ್ಲಿ ನಿಂತಿದ್ದರು. ಮಹೇಷ್ವಾಸ ಅಭಿಮನ್ಯು, ಮಹಾರಥ ದ್ರುಪದ, ಮಹಾರಥ ದ್ರುಪದ, ಐವರ ಕೇಕಯ ಸಹೋದರರು ಕವಚಧಾರಿಗಳಾಗಿ ಯುದ್ಧಕ್ಕೆ ನಿಂತಿದ್ದರು. ಹೀಗೆ ಪಾಂಡವ ಶೂರರೂ ಕೂಡ ಸುದುರ್ಜಯವೆಂಬ ಪ್ರತಿವ್ಯೂಹವನ್ನು ರಚಿಸಿಕೊಂಡು ಸಮರದಲ್ಲಿ ಯುದ್ಧಕ್ಕಾಗಿ ನಿಂತರು. ರಣದಲ್ಲಿ ಕೌರವರ ಕಡೆಯ ನರಾಧಿಪರು ಭೀಷ್ಮನನ್ನು ಅಗ್ರನನ್ನಾಗಿ ಮಾಡಿಕೊಂಡು ಪಾರ್ಥರನ್ನು ಎದುರಿಸಿ ಯುದ್ಧಮಾಡಿದರು. ಹಾಗೆಯೇ ಪಾಂಡವರು ಭೀಮಸೇನನನ್ನು ಮುಂದಿರಿಸಿಕೊಂಡು ಸಂಗ್ರಾಮದಲ್ಲಿ ಜಯವನ್ನು ಬಯಸಿ ಭೀಷ್ಮನನ್ನು ಎದುರಿಸಿ ಯುದ್ಧಮಾಡಿದರು.

ಗರ್ಜನೆ ಮತ್ತು ಕಿಲಕಿಲ ಶಬ್ಧಗಳಿಂದ, ಕ್ರಕಚ-ಗೋವಿಷಾಣಿಕಗಳನ್ನು ಊದುತ್ತಾ, ಭೇರಿ-ಮೃದಂಗ-ಪಣವಗಳನ್ನು ಬಾರಿಸುತ್ತಾ, ಶಂಖಗಳನ್ನು ಊದುತ್ತಾ, ಭೈರವ ಕೂಗುಗಳನ್ನು ಕೂಗುತ್ತಾ ಪಾಂಡವರು ಧಾವಿಸಿ ಬಂದರು. ಭೇರೀ-ಮೃದಂಗ-ಶಂಖಗಳ ಮತ್ತು ದುಂದುಭಿಗಳ ನಿಸ್ವನಗಳಿಂದ, ಜೋರಾದ ಸಿಂಹನಾದಗಳಿಂದ, ವಿವಿಧ ಕೂಗುಗಳಿಂದ ಕೌರವರೂ ಕೂಡ ಅವರಿಗೆ ಪ್ರತಿಸ್ಪಂದಿಸಿ ಕೂಗುತ್ತಾ ಅವರ ಮೇಲೆ ಒಮ್ಮಿಂದೊಮ್ಮೆಲೇ ಕ್ರುದ್ಧರಾಗಿ ಎರಗಿದರು. ಆಗ ಮಹಾ ತುಮುಲವುಂಟಾಯಿತು.

ಆಗ ಓಡಿಹೋಗಿ ಅನ್ಯೋನ್ಯರನ್ನು ಕೊಲ್ಲುವುದನ್ನು ಮಾಡತೊಡಗಿದರು. ಮಹಾ ಶಬ್ಧದಿಂದ ವಸುಂಧರೆಯು ನಡುಗಿದಳು. ಮಹಾಘೋರ ಪಕ್ಷಿಗಳು ಆಕಾಶದಲ್ಲಿ ಹಾರಡತೊಡಗಿದವು. ಉತ್ತಮ ಪ್ರಭೆಯಿಂದ ಉದಿಸಿದ ಸೂರ್ಯನು ತನ್ನ ಪ್ರಭೆಯನ್ನು ಕಳೆದುಕೊಳ್ಳತೊಡಗಿದನು. ಮಹಾ ಭಯವನ್ನು ಸೂಚಿಸುತ್ತಾ ಭಿರುಗಾಳಿಯು ಬೀಸತೊಡಗಿತು. ಬರಲಿರುವ ಮಹಾ ಕಷ್ಟವನ್ನು ತಿಳಿಸುತ್ತಾ ಅಲ್ಲಿ ತೋಳಗಳು ಘೋರವಾಗಿ ಅಮಂಗಳವಾಗಿ ಕೂಗಿಕೊಂಡವು. ದಿಕ್ಕುಗಳನ್ನು ಪ್ರಜ್ವಲಿಸುತ್ತಾ ರಕ್ತ ಮತ್ತು ಮೂಳೆಗಳ ಸಮ್ಮಿಶ್ರವಾದ ಮಾಂಸದ ಮಳೆಯು ಬಿದ್ದಿತು. ಅಳುತ್ತಿದ್ದ ವಾಹನ-ಪ್ರಾಣಿಗಳ ಕಣ್ಣುಗಳಲ್ಲಿ ಕಣ್ಣೀರು ಹರಿಯಿತು. ಬೆದರಿ ಮಲ-ಮೂತ್ರಗಳನ್ನು ವಿಸರ್ಜಿಸಿದವು. ಅಡಗಿದ್ದ ನರಭಕ್ಷ ರಾಕ್ಷಸರು ಕೂಗುತ್ತಿದ್ದ ಭೈರವ ರವ ಮಹಾನಾದವು ಕೇಳಿಬಂದಿತು. ನರಿಗಳು, ಹದ್ದುಗಳು, ಕಾಗೆಗಳು ಮತ್ತು ನಾಯಿಗಳು

ಅಲ್ಲಿ ಬಹುವಿಧದಲ್ಲಿ ಕೂಗುತ್ತಾ ಬೀಳುತ್ತಿದ್ದವು. ಉರಿಯುತ್ತಿರುವ ಮಹಾ ಉಲ್ಕೆಗಳು ದಿವಾಕರನ ಮಂಡಲಕ್ಕೆ ತಾಗಿ ತಕ್ಷಣವೇ ಭೂಮಿಯ ಮೇಲೆ ಬಿದ್ದು ಮಹಾ ಭಯವನ್ನು ಸೂಚಿಸಿದವು. ಆಗ ಅಲ್ಲಿ ಸೇರಿದ್ದ ಪಾಂಡವ-ಧಾರ್ತರಾಷ್ಟ್ರರ ಮಹಾ ಸೇನೆಗಳು ಶಂಖ-ಮೃದಂಗ ನಿಸ್ವನಗಳಿಂದ ಭಿರುಗಾಳಿಯಿಂದ ವನಗಳು ಅಲ್ಲಾಡುವಂತೆ ಕಂಪಿಸಿದವು. ನರೇಂದ್ರರಿಂದಲೂ, ಗಜ-ಅಶ್ವ ಸಮಾಕುಲಗಳಿಂದ ಕೂಡಿದ, ಅಶುಭ ಮುಹೂರ್ತದಲ್ಲಿ ಹೊರಟಿದ್ದ ಸೈನ್ಯಗಳ ಭಯಂಕರ ಶಬ್ಧವು ಭಿರುಗಾಳಿಯಿಂದ ಅಲ್ಲೋಲ-ಕಲ್ಲೋಲವಾದ ಸಮುದ್ರಗಳ ಭೋರ್ಗರೆತಕ್ಕೆ ಸಮಾನವಾಗಿತ್ತು.

## ಅಲಂಬುಷ-ಅಭಿಮನ್ಯು ಯುದ್ಧ

ರಥೋದಾರನಾದ ತೇಜಸ್ವಿ ಅಭಿಮನ್ಯುವು ಪಿಂಗಳವರ್ಣದ ಉತ್ತಮ ಕುದುರೆಗಳಿಂದ ಕೂಡಿದ ರಥದಲ್ಲಿ ಕುಳಿತು ಮೋಡಗಳು ಮಳೆಯನ್ನು ಸುರಿಸುವಂತೆ ಬಾಣಗಳ ಮಳೆಯನ್ನು ಸುರಿಸುತ್ತಾ ದುರ್ಯೋಧನನ ಮಹಾ ಸೇನೆಯ ಮೇಲೆ ದಾಳಿಮಾಡಿದನು. ರಾಶಿ ರಾಶಿ ಶಸ್ತ್ರಗಳಿಂದ ಕೂಡಿದ್ದ ಅಕ್ಷಯವಾದ ಸೇನಾಸಾಗರವನ್ನು ಒಳಹೊಗುತ್ತಿದ್ದ ಕ್ರುದ್ಧ ಅರಿಸೂದನ ಸೌಭದ್ರನನ್ನು ತಡೆಯಲು ಕೌರವರ ಕಡೆಯ ಕುರುಪುಂಗವರಿಗೆ ಸಾಧ್ಯವಾಗಲಿಲ್ಲ. ಅವನು ಬಿಟ್ಟ ಶತ್ರುಗಳನ್ನು ನಾಶಪಡಿಸಬಲ್ಲ ಬಾಣಗಳು ಶೂರ ಕ್ಷತ್ರಿಯರನ್ನು ಪ್ರೇತರಾಜನ ಮನೆಗೆ ಕೊಂಡೊಯ್ಯುತ್ತಿದ್ದವು. ಸೌಭದ್ರನು ಕ್ರುದ್ಧನಾಗಿ ಯಮದಂಡಕ್ಕೆ

ಸಮಾನವಾದ ಪ್ರಜ್ವಲಿತ ಮುಖವುಳ್ಳ ಸರ್ಪಗಳಂತಿದ್ದ ಸಾಯಕಗಳನ್ನು ಪ್ರಯೋಗಿಸುತ್ತಿದ್ದನು. ಪಾಲ್ಗುನಿಯು ತಕ್ಷಣವೇ ರಥಗಳಲ್ಲಿದ್ದ ರಥಿಗಳನ್ನೂ, ಕುದುರೆಯನ್ನೇರಿದ್ದ ಸವಾರರನ್ನೂ, ಆನೆಗಳೊಂದಿಗೆ ಗಜಾರೋಹಿಗಳನ್ನೂ ಕೆಳಗುರುಳಿಸಿದನು. ಯುದ್ಧದಲ್ಲಿ ಅವನು ಮಾಡುತ್ತಿರುವ ಮಹಾ ಕಾರ್ಯಗಳನ್ನು ನೋಡಿ ರಾಜರು ಸಂತೋಷಗೊಂಡು ಫಾಲ್ಗುನಿಯನ್ನು ಬಹಳವಾಗಿ ಹೊಗಳಿದರು ಮತ್ತು ಗೌರವಿಸಿದರು. ಭಿರುಗಾಳಿಯು ಹತ್ತಿಯ ರಾಶಿಯನ್ನು ಎಲ್ಲ ದಿಕ್ಕುಗಳಲ್ಲಿಯೂ ಹಾರಿಸಿಬಿಡುವಂತೆ ಸೌಭದ್ರನು ಆ ಸೇನೆಗಳನ್ನು ಓಡಿಸಿ ಬಹುವಾಗಿ ಶೋಭಿಸಿದನು. ಆಳವಾದ ಕೆಸರಿನಲ್ಲಿ ಸಿಲುಕಿಕೊಂಡ ಆನೆಗಳಿಗೆ ರಕ್ಷಕರೇ ಇಲ್ಲದಿರುವಂತೆ ಅವನಿಂದ ಓಡಿಸಲ್ಪಟ್ಟ ಕೌರವ ಸೇನೆಗಳಿಗೆ ಯಾರೂ ಇಲ್ಲದಂತಾಯಿತು.

ಕೌರವರ ಸರ್ವ ಸೇನೆಗಳನ್ನು ಓಡಿಸಿ ನರೋತ್ತಮ ಅಭಿಮನ್ಯುವು ಹೊಗೆಯಿಲ್ಲದ ಬೆಂಕಿಯಂತೆ ಉರಿಯುತ್ತಾ ನಿಂತನು. ಕಾಲಚೋದಿತ ಪತಂಗಗಳು ಉರಿಯುತ್ತಿರುವ ಪಾವಕನನ್ನು ಸಹಿಸಿಕೊಳ್ಳಲಾರದಂತೆ ಅರಿಘಾತಿಯ ಪ್ರಹಾರವನ್ನು ಕೌರವರಲ್ಲಿ ಯಾರಿಗೂ ಸಹಿಸಿಕೊಳ್ಳಲಾಗಲಿಲ್ಲ. ಸರ್ವಶತ್ರುಗಳ ಪ್ರಹಾರ ಮಾಡಿ ಪಾಂಡವರ ಮಹಾರಥ ಮಹೇಷ್ವಾಸನು ವಜ್ರದೊಂದಿಗೆ ವರ್ಜಭೃತುವಿನಂತೆ ಅದೃಶ್ಯನಾಗುತ್ತಿದ್ದನು. ದಿಕ್ಕು ದಿಕ್ಕುಗಳಲ್ಲಿ ತಿರುಗುತ್ತಿದ್ದ ಅವನ ಬಂಗಾರದ ಬೆನ್ನಿನ ಬಿಲ್ಲು ಮೋಡಗಳಲ್ಲಿ ಹೊಳೆಯುವ ಮಿಂಚುಗಳಂತೆ ಕಾಣುತ್ತಿತ್ತು. ವನದಲ್ಲಿ ಹೂಬಿಟ್ಟ ಮರಗಳನ್ನು ಹುಡುಕಿಕೊಂಡು ಹಾರಿ

ಹೋಗುವ ದುಂಬಿಗಳಂತೆ ಅವನ ಹೊಂಬಣ್ಣದ ನಿಶಿತ ಶರಗಳು ಸಂಗ್ರಾಮದಲ್ಲಿ ಸುಯ್ಯನೆ ಹೋಗುತ್ತಿದ್ದವು. ಹಾಗೆಯೇ ಮೇಘಘೋಷದಿಂದ ರಥದಲ್ಲಿ ಸಂಚರಿಸುತ್ತಿದ್ದ ಮಹಾತ್ಮ ಸೌಭದ್ರನ ಗತಿಯಲ್ಲಿಯೂ ಜನರು ಯಾವ ಅಂತರವನ್ನೂ ಕಾಣುತ್ತಿರಲಿಲ್ಲ.

ಕೃಪ, ದ್ರೋಣ, ದ್ರೌಣಿ, ಬೃಹದ್ಬಲ ಮತ್ತು ಮಹೇಷ್ವಾಸ ಸೈಂಧವನನ್ನು ಮೋಹಗೊಳಿಸುತ್ತಾ ಅವನು ಶೀಘ್ರವಾಗಿ ಸಂಚರಿಸುತ್ತಿದ್ದನು. ಕೌರವ ಸೇನೆಯನ್ನು ಸುಡುತ್ತಿದ್ದ ಅವನ ಧನುಸ್ಸು ಯಾವಾಗಲೂ ಸೂರ್ಯಮಂಡಲದಂತೆ ಮಂಡಲಾಕಾರದಲ್ಲಿರುವುದೇ ಕಾಣುತ್ತಿತ್ತು. ಶರಗಳೆಂಬ ಕಿರಣಗಳಿಂದ ಸುಡುತ್ತಿದ್ದ ಅವನ ಕರ್ಮಗಳನ್ನು ನೋಡಿ ಶೂರ ಕ್ಷತ್ರಿಯರು ಅವನು ಲೋಕದಲ್ಲಿ ಎರಡನೆಯ ಫಲ್ಗುನನನೆಂದು ಭಾವಿಸಿದರು. ಅವನಿಂದ ಆರ್ದಿತವಾದ ಆ ಭಾರತರ ಮಹಾ ಸೇನೆಯು ಕಾಮಪರವಶಳಾದ ಸ್ತ್ರೀಯಂತೆ ಮತಿಗೆಟ್ಟು ತೂರಾಡುತ್ತಿತ್ತು. ಆ ಸೈನ್ಯವನ್ನು ಓಡಿಸುತ್ತಾ, ಮಹಾರಥರನ್ನು ಕಂಪಿಸುತ್ತಾ, ಮಯನನ್ನು ಜಯಿಸಿದ ವಾಸವನಂತೆ ಸುಹೃದಯರನ್ನು ಹರ್ಷಗೊಳಿಸಿದನು. ಅವನಿಂದ ಹೊಡೆದೋಡಿಸಲ್ಪಟ್ಟ ಕೌರವ ಸೈನ್ಯಗಳು ಮೋಡಗಳ ಗುಡುಗಿನಂತೆ ಘೋರವಾಗಿ ಆರ್ತಸ್ವರದಲ್ಲಿ ಕೂಗಿಕೊಳ್ಳುತ್ತಿತ್ತು. ಪರ್ವಕಾಲದಲ್ಲಿ ಭಿರುಗಾಳಿಗೆ ಸಿಲುಕಿದ ಸಮುದ್ರದಂತಿದ್ದ ಕೌರವ ಸೈನ್ಯದ ಆ ಘೋರ ನಿನಾದವನ್ನು ಕೇಳಿ ರಾಜಾ ದುರ್ಯೋಧನನು ಆರ್ಶ್ಯಶೃಂಗಿಗೆ ಹೇಳಿದನು:

“ಈ ಮಹೇಷ್ವಾಸ ಕಾರ್ಷ್ಣಿಯು ಎರಡನೆಯ ಅರ್ಜುನನೋ ಎನ್ನುವಂತೆ ಕ್ರೋಧದಿಂದ ವೃತ್ರನು ದೇವಸಮೂಹದಂತೆ ನಮ್ಮ ಸೇನೆಗಳನ್ನು ಓಡಿಸುತ್ತಿದ್ದಾನೆ. ರಾಕ್ಷಸಶ್ರೇಷ್ಠ! ಸರ್ವ ವಿದ್ಯೆಗಳಲ್ಲಿ ಪಾರಂಗತನಾದ ನಿನ್ನನ್ನು ಬಿಟ್ಟು ಬೇರೆ ಯಾರನ್ನೂ ಅವನ ಚಿಕಿತ್ಸಕನನ್ನು ನಾನು ಕಾಣಲಾರೆನು. ಬೇಗನೇ ನೀನು ಹೋಗಿ ಆಹವದಲ್ಲಿ ಸೌಭದ್ರನನ್ನು ಕೊಲ್ಲು. ನಾವು ಭೀಷ್ಮ-ದ್ರೋಣರ ನೇತೃತ್ವದಲ್ಲಿ ಪಾರ್ಥರನ್ನು ಕೊಲ್ಲುತ್ತೇವೆ.”

ಹೀಗೆ ಹೇಳಲು ಬಲವಾನ್ ಪ್ರತಾಪವಾನ್ ರಾಕ್ಷಸೇಂದ್ರನು ತಕ್ಷಣವೇ ದುರ್ಯೋಧನನ ಶಾಸನದಂತೆ ಮಳೆಗಾಲದಲ್ಲಿ ಮೋಡಗಳು ಗರ್ಜಿಸುವಂತೆ ಜೋರಾಗಿ ಗರ್ಜಿಸುತ್ತ ಸಮರಕ್ಕೆ ಹೊರಟನು. ಅವನ ಆ ಜೋರಿನ ಕೂಗಿನಿಂದ ಪಾಂಡವರ ಮಹಾ ಸೇನೆಯು ತುಂಬಿ ಉಕ್ಕುವ ಸಮುದ್ರದಂತೆ ಎಲ್ಲಕಡೆಗಳಿಂದ ಕ್ಷೋಭೆಗೊಂಡಿತು. ಅವನ ಕೂಗಿಗೆ ಹೆದರಿ ಎಷ್ಟೋ ಜನರು ಪ್ರಿಯ ಪ್ರಾಣಗಳನ್ನು ತೊರೆದು ನೆಲದ ಮೇಲೆ ಬಿದ್ದರು. ಕಾರ್ಷ್ಣಿಯಾದರೋ ಸಂತೋಷದಿಂದ ರಥದಲ್ಲಿ ನಿಂತು ನರ್ತಿಸುತ್ತಿರುವನೋ ಎನ್ನುವಂತೆ ಧನುಸ್ಸನ್ನು ಹಿಡಿದು ಆ ರಾಕ್ಷಸನ ಮೇಲೆ ಆಕ್ರಮಣಿಸಿದನು. ಆಗ ಆ ರಾಕ್ಷಸನು ರಣದಲ್ಲಿ ಆರ್ಜುನಿಯ ಸಮೀಪಕ್ಕೆ ಬಂದು ಕ್ರುದ್ಧನಾಗಿ ಅನತಿದೂರದಲ್ಲಿಯೇ ನಿಂತು ಅವನ ಸೇನೆಯನ್ನು ಓಡಿಸತೊಡಗಿದನು. ಬಲಿಯಿಂದ ದೇವಸೇನೆಯು ಹೇಗೋ ಹಾಗೆ ರಣದಲ್ಲಿ ಆ ರಾಕ್ಷಸನಿಂದ ವಧಿಸಲ್ಪಡುತ್ತಿದ್ದ ಪಾಂಡವರ ಮಹಾಸೇನೆಯು ಸಮರದಿಂದ ಪಲಾಯನ ಮಾಡಿತು. ಘೋರರೂಪದ

ಆ ರಾಕ್ಷಸನಿಂದ ವಧಿಸಲ್ಪಡುತ್ತಿದ್ದ ಅವನ ಸೈನ್ಯದಲ್ಲಿ ಮಹಾನಾಶವುಂಟಾಯಿತು. ಆಗ ರಾಕ್ಷಸನು ತನ್ನ ಪರಾಕ್ರಮವನ್ನು ಪ್ರದರ್ಶಿಸುತ್ತಾ ಸಹಸ್ರಾರು ಬಾಣಗಳಿಂದ ಪಾಂಡವರ ಮಹಾಸೇನೆಯನ್ನು ರಣದಿಂದ ಓಡಿಸಿದನು. ಹಾಗೆ ಘೋರರೂಪದ ರಾಕ್ಷಸನಿಂದ ವಧಿಸಲ್ಪಡುತ್ತಿರುವ ಪಾಂಡವರ ಸೇನೆಯು ಭಯಪಟ್ಟು ರಣದಿಂದ ಪಲಾಯನ ಮಾಡಿತು. ಕಮಲ ಪುಷ್ಪಗಳಿಂದ ತುಂಬಿದ ಸರೋವರವನ್ನು ಆನೆಯು ಹೇಗೆ ಧ್ವಂಸಿಸುತ್ತದೆಯೋ ಹಾಗೆ ಆ ಸೇನೆಯನ್ನು ಧ್ವಂಸಿಸಿ ಅವನು ರಣದಲ್ಲಿ ಮಹಾಬಲ ದ್ರೌಪದೇಯರನ್ನು ಆಕ್ರಮಣಿಸಿದನು.

ಪ್ರಹಾರಿಗಳಾದ ಆ ಮಹೇಷ್ವಾಸ ದ್ರೌಪದೇಯರು ಎಲ್ಲರೂ ಕ್ರುದ್ಧರಾಗಿ ಐದು ಗ್ರಹಗಳು ರವಿಯನ್ನು ಹೇಗೋ ಹಾಗೆ ರಾಕ್ಷಸನ ಮೇಲೆ ಎರಗಿದರು. ಯುಗಕ್ಷಯದಲ್ಲಿ ಚಂದ್ರಮನು ಐದು ಘೋರ ಗ್ರಹಗಳಿಂದ ಪೀಡಿಸಲ್ಪಡುವಂತೆ ಆ ರಾಕ್ಷಸೋತ್ತಮನು ವೀರರಾದ ಅವರಿಂದ ಪೀಡಿತನಾದನು. ಆಗ ಮಹಾಬಲ ಪ್ರತಿವಿಂಧ್ಯನು ಉಕ್ಕಿನಿಂದಲೇ ಮಾಡಲ್ಪಟ್ಟ ನೇರವಾದ ಮುಂಬಾಗವನ್ನು ಹೊಂದಿದ್ದ ನಿಶಿತ ಶರಗಳಿಂದ ರಾಕ್ಷಸನನ್ನು ಭೇದಿಸಿದನು. ಅವುಗಳಿಂದ ಒಡೆದ ಕವಚದಿಂದ ಆ ರಾಕ್ಷಸೋತ್ತಮನು ಸೂರ್ಯನ ಕಿರಣಗಳಿಂದ ಸಮ್ಮಿಶ್ರವಾದ ದೊಡ್ಡ ಕಪ್ಪು ಮೋಡದೋಪಾದಿಯಲ್ಲಿ ಶೋಭಿಸಿದನು. ಸುವರ್ಣದ ರೆಕ್ಕೆಗಳುಳ್ಳ ಆ ಬಾಣಗಳು ಆರ್ಶ್ಯಶೃಂಗಿಯ ಶರೀರದೊಳಕ್ಕೆ ನೆಟ್ಟಿಕೊಂಡು ಅವನು ಬೆಳಗುತ್ತಿರುವ ಶಿಖರಗಳುಳ್ಳ ಪರ್ವತದಂತೆ

ಕಂಡನು. ಆಗ ಆ ಇವರು ಸಹೋದರರರೂ ಮಹಾಹವದಲ್ಲಿ ರಕ್ಷಸೇಂದ್ರನನ್ನು ಸುವರ್ಣ ಭೂಷಿತವಾದ ನಿಶಿತ ಬಾಣಗಳಿಂದ ಹೊಡೆದರು. ಕುಪಿತಸರ್ಪಗಳಂತಿದ್ದ ಘೋರ ಶರಗಳಿಂದ ಗಾಯಗೊಂಡ ಅಲಂಬುಸನು ಅಂಕುಶದಿಂದ ಚುಚ್ಚಲ್ಪಟ್ಟ ಗಜರಾಜನಂತೆ ತುಂಬಾ ಕ್ರುದ್ಧನಾದನು. ಆ ಮಹಾರಥರಿಂದ ಅತಿಯಾಗಿ ಪೀಡಿತನಾಗಿ ಗಾಯಗೊಂಡ ಅವನು ಮುಹೂರ್ತಕಾಲ ದೀರ್ಘ ತಮಸ್ಸಿನ ಮೂರ್ಛೆಯನ್ನು ಹೊಂದಿದನು. ಆಗ ಸಂಜ್ಞೆಯನ್ನು ಹಿಂದೆ ಪಡೆದುಕೊಂಡು ಎರಡು ಪಟ್ಟು ಕ್ರೋಧಾನ್ವಿತನಾಗಿ ಸಾಯಕಗಳಿಂದ ಅವರ ಧ್ವಜಗಳನ್ನೂ ಧನುಸ್ಸುಗಳನ್ನೂ ತುಂಡರಿಸಿದನು. ಮಹಾರಥ ಅಲಂಬುಸನು ನಗುತ್ತಾ ರಥದಲ್ಲಿಯೇ ನಿಂತು ನರ್ತಿಸುತ್ತಿರುವಂತೆ ಅವರೊಬ್ಬೊಬ್ಬರನ್ನೂ ಮೂರು ಮೂರು ಬಾಣಗಳಿಂದ ಹೊಡೆದನು. ತ್ವರೆಮಾಡಿ ಸಂಕ್ರುದ್ಧನಾದ ಮಹಾಬಲ ರಾಕ್ಷಸನು ಆ ಮಹಾತ್ಮರ ಕುದುರೆಗಳನ್ನೂ ಸಾರಥಿಗಳನ್ನೂ ಸಂಹರಿಸಿದನು.

ಪುನಃ ಸಂಹೃಷ್ಟನಾಗಿ ಅವರನ್ನು ಸುಸಂಶಿತ ಬಹವಿಧದ ಆಕಾರದ ನೂರಾರು ಸಹಸ್ರಾರು ಶರಗಳಿಂದ ಗಾಯಗೊಳಿಸಿದನು. ಆ ಮಹೇಷ್ವಾಸರನ್ನು ವಿರಥರನ್ನಾಗಿ ಮಾಡಿ ಆ ನಿಶಾಚರ ರಾಕ್ಷಸನು ಅವರನ್ನು ಕೊಲ್ಲಲು ಬಯಸಿ ವೇಗದಿಂದ ಅವರ ಮೇಲೆ ಎರಗಿದನು. ಆ ದುರಾತ್ಮ ರಾಕ್ಷಸನಿಂದ ಅವರು ಆರ್ದಿತರಾದುದನ್ನು ನೋಡಿ ಅರ್ಜುನನ ಮಗನು ಯುದ್ಧದಲ್ಲಿ ರಾಕ್ಷಸನನ್ನು ಎದುರಿಸಿದನು. ವೃತ್ರ-

ವಾಸವರ ನಡುವಿನಂತೆ ಅವರಿಬ್ಬರ ನಡುವೆ ಯುದ್ಧವು ನಡೆಯಿತು. ಅದನ್ನು ಮಹಾರಥರಾದ ಕೌರವರು ಮತ್ತು ಪಾಂಡವರು ಎಲ್ಲರೂ ನೋಡಿದರು. ಮಹಾ ಯುದ್ದದಲ್ಲಿ ತೊಡಗಿದ್ದ ಅವರಿಬ್ಬರು ಮಹಾಬಲರೂ ಕ್ರೋಧದಿಂದ ಉರಿಯುತ್ತಿದ್ದು, ಕ್ರೋಧದಿಂದ ಕಣ್ಣುಗಳನ್ನು ಕೆಂಪು ಮಾಡಿಕೊಂಡು, ಪರಸ್ಪರರನ್ನು ಕಾಲಾನಲರಂತೆ ನೋಡುತ್ತಿದ್ದರು. ದೇವಾಸುರರ ಯುದ್ಧದಲ್ಲಿ ಶಕ್ರ-ಶಂಬರರ ನಡುವೆ ನಡೆದಂತೆ ಅವಬ್ಬರ ನಡುವೆ ಘೋರವಾದ ಅಪ್ರಿಯವಾದ ಯುದ್ಧವಾಯಿತು.

ಅಲಂಬುಸನಾದರೋ ಸಮರದಲ್ಲಿ ಮಹಾರಥ ಅಭಿಮನ್ಯುವನ್ನು ಪುನಃ ಪುನಃ ಮಹಾನಾದಗೈದು ಬೆದರಿಸುತ್ತಾ ವೇಗದಿಂದ ಧಾವಿಸಿ ಬಂದು "ನಿಲ್ಲು! ನಿಲ್ಲು!" ಎಂದನು. ಸೌಭದ್ರನೂ ಕೂಡ ರಣದಲ್ಲಿ ಮತ್ತೆ ಮತ್ತೆ ಸಿಂಹದಂತೆ ಗರ್ಜಿಸಿ ತನ್ನ ತಂದೆಯ ಅತ್ಯಂತ ವೈರಿ ಮಹೇಷ್ವಾಸ ಆರ್ಶ್ಯಶೃಂಗಿಯನ್ನು ಎದುರಿಸಿದನು. ಆಗ ಯುದ್ಧದಲ್ಲಿ ತ್ವರೆಮಾಡಿ ರಥಿಗಳಲ್ಲಿ ಶ್ರೇಷ್ಠರಾದ ರಥಿಗಳಿಬ್ಬರೂ, ಮಾಯಾವೀ ರಾಕ್ಷಸಶ್ರೇಷ್ಠ ಮತ್ತು ದಿವ್ಯಾಸ್ತ್ರಜ್ಞ ಫಾಲ್ಗುನಿ ನರ-ರಾಕ್ಷಸರಿಬ್ಬರೂ ದೇವ-ದಾನವರಂತೆ ಹೋರಾಡಿದರು. ಆಗ ಕಾರ್ಷ್ಣಿಯು ಮೂರು ನಿಶಿತ ಸಾಯಕಗಳಿಂದ ಆರ್ಶ್ಯಶೃಂಗಿಯನ್ನು ರಣದಲ್ಲಿ ಹೊಡೆದು ಪುನಃ ಐದರಿಂದ ಹೊಡೆದನು. ಅಲಂಬುಸನೂ ಕೂಡ ಸಂಕ್ರುದ್ಧನಾಗಿ ಮಹಾಗಜವನ್ನು ಅಂಕುಶದಿಂದ ತಿವಿಯುವಂತೆ ಕಾರ್ಷ್ಣಿಯ ಎದೆಗೆ ಒಂಭತ್ತು ಆಶುಗಗಳಿಂದ ಹೊಡೆದನು. ಆಗ ಕ್ಷಿಪ್ರಕಾರೀ ನಿಶಾಚರನು ರಣದಲ್ಲಿ

ಸಹಸ್ರಾರು ಶರಗಳಿಂದ ಅರ್ಜುನನ ಮಗನನ್ನು ಪೀಡಿಸಿದನು. ಆಗ ಅಭಿಮನ್ಯುವು ಕ್ರುದ್ಧನಾಗಿ ನಿಶಿತವಾದ ತೊಂಭತ್ತು ನತಪರ್ವಣ ಶರಗಳನ್ನು ರಾಕ್ಷಸನ ವಿಶಾಲ ಎದೆಯಮೇಲೆ ಪ್ರಯೋಗಿಸಿದನು. ಅವು ತಕ್ಷಣವೇ ಅವನ ಶರೀರವನ್ನು ಹೊಕ್ಕು ಮರ್ಮಗಳನ್ನು ಚುಚ್ಚಿದವು. ಅವುಗಳಿಂದ ಸರ್ವಾಂಗಗಳಲ್ಲಿ ಗಾಯಗೊಂಡ ಆ ರಕ್ಷಸೋತ್ತಮನು ಪರ್ವತವನ್ನು ತುಂಬಿದ ಪುಷ್ಪಭರಿತ ಕಿಂಶುಕದಂತೆ ಶೋಭಿಸಿದನು. ಬಂಗಾರದ ರೆಕ್ಕೆಗಳನ್ನುಳ್ಳ ಆ ಬಾಣಗಳನ್ನು ಧರಿಸಿದ ಮಹಾಬಲ ರಾಕ್ಷಸಶ್ರೇಷ್ಠನು ಹತ್ತಿ ಉರಿಯುತ್ತಿರುವ ಪರ್ವತದಂತೆ ಕಂಡನು. ಆಗ ಕ್ರುದ್ಧನಾದ ಮಹಾಬಲ ಆರ್ಶ್ಯಶೃಂಗಿಯು ಮಹೇಂದ್ರನಂತಿದ್ದ ಕಾರ್ಷ್ಣಿಯನ್ನು ಪತ್ರಿಗಳಿಂದ ಮುಚ್ಚಿದನು.

ಅವನು ಪ್ರಯೋಗಿಸಿದ ಯಮದಂಡದಂತಿರುವ ನಿಶಿತ ವಿಶಿಖಗಳು ಅಭಿಮನ್ಯುವನ್ನು ಹೊಕ್ಕು ಗಾಯಗೊಳಿಸಿ ಭೂಮಿಯನ್ನು ಪ್ರವೇಶಿಸಿದವು. ಹಾಗೆಯೇ ಆರ್ಜುನಿಯು ಬಿಟ್ಟ ಕಾಂಚನಭೂಷಣ ಶರಗಳು ಅಲಂಬುಸನನ್ನು ಹೊಕ್ಕು ಗಾಯಗೊಳಿಸಿ ಭೂಮಿಯನ್ನು ಪ್ರವೇಶಿಸಿದವು. ಆಹವದಲ್ಲಿ ಶಕ್ರನು ಮಯನನ್ನು ಹೇಗೋ ಹಾಗೆ ರಣದಲ್ಲಿ ಸೌಭದ್ರನು ರಾಕ್ಷಸನನ್ನು ಸನ್ನತಪರ್ವಗಳಿಂದ ಹೊಡೆದು ಹಿಂದೆ ಸರಿಯುವಂತೆ ಮಾಡಿದನು. ಹೀಗೆ ಶತ್ರುವಿನಿಂದ ಪೆಟ್ಟುತಿಂದ ರಣದಿಂದ ಹಿಂದೆಸರಿದ ಪರತಾಪನ ರಾಕ್ಷಸನು ಮಹಾಮಾಯೆಯಿಂದ ಕತ್ತಲೆಯನ್ನು ಆವರಿಸುವಂತೆ ಮಾಡಿದನು. ಆಗ ಅವನ ಆ ಕತ್ತಲೆಯಿಂದ ಭೂಮಿಯ ಮೇಲೆ ಎಲ್ಲವೂ ಕಳೆದು ಹೋದಂತಾಯಿತು.

ರಣದಲ್ಲಿ ಅಭಿಮನ್ಯುವೂ ಕಾಣಲಿಲ್ಲ. ಕೌರವರು ಪಾಂಡವರು ಯಾರೂ ಕಾಣಲಿಲ್ಲ. ಆ ಘೋರರೂಪವಾದ ಮಹಾ ಕತ್ತಲೆಯನ್ನು ನೋಡಿ ಕುರುನಂದನ ಅಭಿಮನ್ಯುವು ಅತಿ ಉಗ್ರವಾದ ಭಾಸ್ಕರ ಅಸ್ತ್ರವನ್ನು ಪ್ರಯೋಗಿಸಿದನು. ಆಗ ಜಗತ್ತಿನ ಎಲ್ಲ ಕಡೆ ಪ್ರಕಾಶವಾಯಿತು. ಆ ದುರಾತ್ಮ ರಾಕ್ಷಸನ ಮಾಯೆಯೂ ಕೂಡ ನಾಶವಾಯಿತು.

ಮಹಾವೀರ್ಯ ನರೋತ್ತಮನು ಸಂಕ್ರುದ್ಧನಾಗಿ ರಾಕ್ಷಸೇಂದ್ರನನ್ನು ಸಮರದಲ್ಲಿ ಸನ್ನತಪರ್ವಗಳಿಂದ ಮುಚ್ಚಿದನು. ಆ ರಾಕ್ಷಸನು ಇನ್ನೂ ಇತರ ಅನೇಕ ಮಾಯೆಗಳನ್ನು ಬಳಸಿದನು. ಸರ್ವಾಸ್ತ್ರಗಳನ್ನು ತಿಳಿದುಕೊಂಡಿದ್ದ ಅಮೇಯಾತ್ಮ ಫಾಲ್ಗುನಿಯು ಅವುಗಳನ್ನೂ ನಿಲ್ಲಿಸಿದನು. ತನ್ನ ಮಾಯೆಯನ್ನು ಕಳೆದುಕೊಂಡು ಮತ್ತು ಸಾಯಕಗಳಿಂದ ಹೊಡೆಯಲ್ಪಟ್ಟು ರಾಕ್ಷಸನು ಅಲ್ಲಿಯೇ ರಥವನ್ನು ಬಿಟ್ಟು ಮಹಾ ಭಯದಿಂದ ಓಡಿ ಹೋದನು. ಆ ಕೂಟಯೋಧಿನಿ ರಾಕ್ಷಸನನ್ನು ಕಳುಹಿಸಿ ತಕ್ಷಣವೇ ಆರ್ಜುನಿಯು ಕೌರವರ ಸೇನೆಯನ್ನು ಕಾಡಿನ ಮದಾಂಧ ಆನೆಯು ಪದ್ಮಗಳಿರುವ ಸರೋವರವನ್ನು ಹೇಗೋ ಹಾಗೆ ಮರ್ದಿಸಿದನು.

ಆಗ ಶಾಂತನವ ಭೀಷ್ಮನು ಸೈನ್ಯವು ಓಡಿ ಹೋಗುತ್ತಿರುವುದನ್ನು ನೋಡಿ ಮಹಾ ರಥಸೇನೆಯಿಂದ ಸೌಭದ್ರನನ್ನು ಸುತ್ತುವರೆದನು. ಧಾರ್ತರಾಷ್ಟ್ರ ಮಹಾರಥರು ಆ ಶೂರನ ಸುತ್ತಲೂ ಮಂಡಲಾಕಾರದಲ್ಲಿದ್ದುಕೊಂಡು ಯುದ್ಧದಲ್ಲಿ ಅನೇಕರು ಒಬ್ಬನನ್ನು

ದೃಢ ಸಾಯಕಗಳಿಂದ ಹೊಡೆಯತೊಡಗಿದರು. ತಂದೆಗೆ ಸಮನಾಗಿ ಪರಾಕ್ರಮಿಯಾಗಿದ್ದ, ವಿಕ್ರಮ ಮತ್ತು ಬಲಗಳಲ್ಲಿ ವಾಸುದೇವನಂತಿದ್ದ, ಎಲ್ಲ ಶಸ್ತ್ರಭೃತರಲ್ಲಿ ಶ್ರೇಷ್ಠನಾದ ಆ ವೀರನು ಕೌರವರ ರಥಿಗಳಿಗೆ ತನ್ನ ತಂದೆ ಮತ್ತು ಸೋದರ ಮಾವ ಇಬ್ಬರಿಗೂ ಸದೃಶವಾದ ಬಹುವಿಧದ ಕೆಲಸಗಳನ್ನು ಮಾಡಿದನು. ಆಗ ಅಮರ್ಷಣ ಧನಂಜಯನು ಕೌರವ ಸೈನಿಕರನ್ನು ಸಂಹರಿಸುತ್ತ ಪುತ್ರನಿಗಾಗಿ ಭೀಷ್ಮನಲ್ಲಿಗೆ ತಲುಪಿದನು. ಹಾಗೆಯೇ ದೇವವ್ರತನೂ ಕೂಡ ಸ್ವಯಂಭಾನುವು ಇನ್ನೊಬ್ಬ ಭಾಸ್ಕರನನ್ನು ಹೇಗೋ ಹಾಗೆ ಪಾರ್ಥನನ್ನು ತಲುಪಿದನು. ಆಗ ರಥ-ಆನೆ-ಕುದುರೆಗಳಿಂದೊಡಗೂಡಿ ಧೃತರಾಷ್ಟ್ರನ ಪುತ್ರರು ರಣದಲ್ಲಿ ಗುಂಪುಗುಂಪಾಗಿ ಭೀಷ್ಮನನ್ನು ಎಲ್ಲಕಡೆಗಳಿಂದ ಸುತ್ತುವರೆದರು. ಹಾಗೆಯೇ ಪಾಂಡವರು ಧನಂಜಯನನ್ನು ಮಹಾಸೇನೆಯಿಂದ ಕೂಡಿ, ಕವಚಗಳನ್ನು ಧರಿಸಿ ಸುತ್ತುವರೆದರು.

ಆಗ ಭೀಷ್ಮನ ಮುಂದೆ ನಿಂತಿದ್ದ ಶಾರದ್ವತನು ಅರ್ಜುನನನ್ನು ಇಪ್ಪತ್ತೈದು ಸಾಯಕಗಳಿಂದ ಚುಚ್ಚಿದನು. ಪಾಂಡವರಿಗೆ ಪ್ರಿಯವಾದುದನ್ನು ಮಾಡಲು ಬಯಸಿ ಸಾತ್ಯಕಿಯು ಸಿಂಹವೊಂದು ಆನೆಯನ್ನು ಹೇಗೋ ಹಾಗೆ, ಮುಂದೆಬಂದು ಅವನನ್ನು ನಿಶಿತ ಶರಗಳಿಂದ ಹೊಡೆದನು. ಗೌತಮನೂ ಕೂಡ ತ್ವರೆಮಾಡಿ ಸಂಕ್ರುದ್ಧನಾಗಿ ಮಾಧವ ಸಾತ್ಯಕಿಯನ್ನು ಒಂಭತ್ತು ಕಂಕಪತ್ರಗಳಿಂದ ಕೂಡಿದ್ದ ಶರಗಳಿಂದ ಹೃದಯಕ್ಕೆ ಗುರಿಯಿಟ್ಟು ಹೊಡೆದನು. ಮಹಾರಥ ಶೈನೇಯನೂ ಕೂಡ ತುಂಬಾ ಕ್ರುದ್ಧನಾಗಿ ಗೌತಮನನ್ನು

ಕೊನೆಗೊಳಿಸಬಲ್ಲ ಘೋರವಾದ ಶಿಲೀಮುಖವನ್ನು ತೆಗೆದುಕೊಂಡು ಹೊಡೆದನು. ಶಕ್ರನ ವಜ್ರದಂತೆ ಬೆಳಗುತ್ತಾ ವೇಗದಿಂದ ಬಂದು ಬೀಳುತ್ತಿದ್ದ ಅದನ್ನು ಪರಮ ಕೋಪಿ ದ್ರೌಣಿಯು ಸಂಕ್ರುದ್ಧನಾಗಿ ಎರಡಾಗಿ ತುಂಡರಿಸಿದನು. ಆಗ ಶೈನೇಯನು ರಥಿಗಳಲ್ಲಿ ಶ್ರೇಷ್ಠ ಗೌತಮನನ್ನು ಅಲ್ಲಿಯೇ ಬಿಟ್ಟು ರಾಹುವು ಶಶಿಯನ್ನು ಹೇಗೋ ಹಾಗೆ ದ್ರೌಣಿಯ ಮೇಲೆ ಎರಗಿದನು. ದ್ರೋಣನ ಮಗನು ಅವನ ಧನುಸ್ಸನ್ನು ಎರಡಾಗಿ ಕತ್ತರಿಸಿದನು ಮತ್ತು ಧನುಸ್ಸು ತುಂಡಾದ ಅವನನ್ನು ಸಾಯಕಗಳಿಂದ ಹೊಡೆದನು. ಆಗ ಸಾತ್ಯಕಿಯು ಇನ್ನೊಂದು ಶತ್ರುಗಳನ್ನು ಸಂಹರಿಸುವ, ಭಾರವಾದ ಬಿಲ್ಲನ್ನು ತೆಗೆದುಕೊಂಡು ದ್ರೌಣಿಯ ಬಾಹುಗಳು ಮತ್ತು ಎದೆಗೆ ಅರವತ್ತು ಬಾಣಗಳನ್ನು ತಾಗಿಸಿದನು. ಗಾಯಗೊಂಡ ಅವನು ವ್ಯಥಿತನಾಗಿ ಒಂದು ಕ್ಷಣ ಮೂರ್ಛಿತನಾಗಿ, ಧ್ವಜದ ದಂಡವನ್ನು ಹಿಡಿದು ರಥದಲ್ಲಿಯೇ ಕುಸಿದು ಬಿದ್ದನು.

ಆಗ ಸಂಜ್ಞೆಯನ್ನು ಪಡೆದು ಪ್ರತಾಪವಾನ್ ದ್ರೋಣಪುತ್ರನು ಕ್ರುದ್ಧನಾಗಿ ವಾರ್ಷ್ಣೇಯನನ್ನು ನಾರಾಚಗಳಿಂದ ಹೊಡೆದನು. ಅದು ಶೈನೇಯನನ್ನು ಒಳಹೊಕ್ಕು ಹೊರಬಂದು ವಸಂತಕಾಲದಲ್ಲಿ ಬಲವಾನ್ ಸರ್ಪಶಿಶುವು ಬಿಲವನ್ನು ಹೊಗುವಂತೆ ಭೂಮಿಯನ್ನು ಹೊಕ್ಕಿತು. ಅನಂತರ ಇನ್ನೊಂದು ಭಲ್ಲದಿಂದ ಮಾಧವನ ಉತ್ತಮ ಧ್ವಜವನ್ನು ಸಮರದಲ್ಲಿ ಕತ್ತರಿಸಿ ದ್ರೌಣಿಯು ಸಿಂಹನಾದಗೈದನು. ಪುನಃ ಘೋರ ಶರಗಳಿಂದ ಇವನನ್ನು, ಬೇಸಗೆಯ ಕೊನೆಯಲ್ಲಿ ಮೋಡಗಳು ಸೂರ್ಯನನ್ನು

ಹೇಗೋ ಹಾಗೆ, ಮುಚ್ಚಿದನು. ಸಾತ್ಯಕಿಯೂ ಕೂಡ ಆ ಶರಜಾಲವನ್ನು ನಾಶಪಡಿಸಿ ತಕ್ಷಣವೇ ದ್ರೌಣಿಯನ್ನು ಅನೇಕ ಶರಜಾಲಗಳಿಂದ ಆಕ್ರಮಣಿಸಿದನು. ಪರವೀರಹ ಶೈನೇಯನು ದ್ರೌಣಿಯನ್ನು, ಮೇಘಜಾಲಗಳಿಂದ ವಿಮುಕ್ತನಾದ ಸೂರ್ಯನು ಹೇಗೋ ಹಾಗೆ ಸುಡತೊಡಗಿದನು. ಪುನಃ ಅವನನ್ನು ಸಹಸ್ರಾರು ಬಾಣಗಳಿಂದ ಹೊಡೆದು ಮುಚ್ಚಿಸಿ ಮಹಾಬಲ ಸಾತ್ಯಕಿಯು ಗರ್ಜಿಸಿದನು. ರಾಹುವಿನಿಂದ ನಿಶಾಕರನು ಗ್ರಸ್ತನಾದಂತಿದ್ದ ಮಗನನ್ನು ನೋಡಿ ಪ್ರತಾಪವಾನ್ ಭಾರದ್ವಾಜನು ಧಾವಿಸಿ ಬಂದು ಶೈನೇಯನ ಮೇಲೆ ಎರಗಿದನು. ಅವನು ಸುತೀಕ್ಷ್ಣವಾದ ಪೃಷತ್ಕದಿಂದ ವಾರ್ಷ್ಣೇಯನನ್ನು ಹೊಡೆದು ಅವನಿಂದ ಪರಿತಪ್ತನಾದ ಮಗನನ್ನು ಬಿಡಿಸಿದನು. ಸಾತ್ಯಕಿಯಾದರೋ ರಣದಲ್ಲಿ ಮಹಾರಥ ಗುರುಪುತ್ರನನ್ನು ಗೆದ್ದು, ದ್ರೋಣನನ್ನು ಇಪ್ಪತ್ತು ಸರ್ವಪಾರಶ ಶರಗಳಿಂದ ಹೊಡೆದನು. ಅದರ ನಂತರ ಅಮೇಯಾತ್ಮ ಶ್ವೇತವಾಹನ ಮಹಾರಥ ಕೌಂತೇಯನು ಕ್ರುದ್ಧನಾಗಿ ದ್ರೋಣನೊಡನೆ ಯುದ್ಧಮಾಡತೊಡಗಿದನು. ಆಗ ನಭಸ್ತಲದಲ್ಲಿ ಬುಧ ಮತ್ತು ಶುಕ್ರರ ನಡುವಿನಂತೆ ದ್ರೋಣ ಮತ್ತು ಪಾರ್ಥರೊಡನೆ ಮಹಾ ಯುದ್ಧವು ನಡೆಯಿತು.

ಯುದ್ಧದಲ್ಲಿ ದ್ರೋಣನು ಪಾರ್ಥನನ್ನು ತನಗೆ ಪ್ರಿಯನಾದವನೆಂದು ಗುರುತಿಸುವುದಿಲ್ಲ. ಅಥವಾ ಪಾರ್ಥನೂ ಕ್ಷತ್ರಧರ್ಮವನ್ನು ಗೌರವಿಸಿ ಯುದ್ಧದದಲ್ಲಿ ಅವನನ್ನು ಗುರುವೆಂದು ಗುರುತಿಸುವುದಿಲ್ಲ. ಕ್ಷತ್ರಿಯರು ರಣದಲ್ಲಿ ಎಂದೂ ಒಬ್ಬರನ್ನೊಬ್ಬರು ತಿರಸ್ಕರಿಸುವುಲ್ಲ.

ನಿರ್ಮರ್ಯಾದೆಯಿಂದ ತಂದೆ-ಸಹೋದರರೊಡನೆಯೂ ಯುದ್ಧ ಮಾಡುತ್ತಾರೆ. ರಣದಲ್ಲಿ ದ್ರೋಣನು ಪಾರ್ಥನಿಂದ ಮೂರು ಬಾಣಗಳಿಂದ ಹೊಡೆಯಲ್ಪಟ್ಟನು. ಆದರೆ ಅವನು ಪಾರ್ಥನ ಚಾಪದಿಂದ ಹೊರಟುಬಂದ ಆ ಬಾಣಗಳನ್ನು ಪರಿಗಣಿಸಲೇ ಇಲ್ಲ. ರಣದಲ್ಲಿ ಪುನಃ ಪಾರ್ಥನನ್ನು ಶರವೃಷ್ಟಿಯಿಂದ ಮುಚ್ಚಿದನು ಮತ್ತು ರೋಷದಿಂದ ಗಹನವಾದ ವನವು ಸುಡುತ್ತಿದೆಯೋ ಎನ್ನುವಂತೆ ಉರಿದನು. ಆಗ ತಡಮಾಡದೇ ದ್ರೋಣನು ಸನ್ನತಪರ್ವ ಶರಗಳಿಂದ ಅರ್ಜುನನನ್ನು ನಿಲ್ಲಿಸಿದನು. ರಾಜಾ ದುರ್ಯೋಧನನು ದ್ರೋಣನ ರಥದ ಹಿಂಬಾಗದ ರಕ್ಷಕನಾಗಿರುವಂತೆ ಸುಶರ್ಮನಿಗೆ ನಿರ್ದೇಶಿಸಿದನು. ತ್ರಿಗರ್ತರಾಜನೂ ಕೂಡ ಕ್ರುದ್ಧನಾಗಿ ಸಮರದಲ್ಲಿ ಕಾರ್ಮುಕವನ್ನು ಚೆನ್ನಾಗಿ ಎಳೆದು ಪಾರ್ಥನನ್ನು ಬಾಣಗಳಿಂದ ಮುಚ್ಚಿದನು. ಅವರಿಬ್ಬರು ಬಿಟ್ಟ ಆ ಬಾಣಗಳು ಶರತ್ಕಾಲದಲ್ಲಿ ಆಕಾಶದಲ್ಲಿ ಹಾರಾಡುವ ಹಂಸಗಳಂತೆ ಪ್ರಕಾಶಿಸಿದವು. ರುಚಿಕರ ಹಣ್ಣುಗಳ ಭಾರದಿಂದ ಬಗ್ಗಿರುವ ವೃಕ್ಷಕ್ಕೆ ಹಕ್ಕಿಗಳು ಮುತ್ತಿಕೊಳ್ಳುವಂತೆ ಅವರ ಶರಗಳು ಅರ್ಜುನನ ಶರೀರದ ಸುತ್ತಲೂ ಚುಚ್ಚಿಕೊಂಡವು. ರಥಿಗಳಲ್ಲಿ ಶ್ರೇಷ್ಠನಾದ ಅರ್ಜುನನಾದರೋ ರಣದಲ್ಲಿ ಸಿಂಹನಾದ ಮಾಡಿ ಸಮರದಲ್ಲಿ ಪುತ್ರನೊಂದಿಗೆ ತ್ರಿಗರ್ತರಾಜನನ್ನು ಶರಗಳಿಂದ ಹೊಡೆದನು.

ಪ್ರಲಯಕಾಲದಲ್ಲಿ ಕಾಲಪುರುಷನಂತೆ ಪಾರ್ಥನಿಂದ ಪ್ರಹೃತರಾದ ಅವರು ಮರಣದ ನಿಶ್ಚಯವನ್ನು ಮಾಡಿ ಪಾರ್ಥನನ್ನೇ ಎದುರಿಸಿ,

ಪಾಂಡವನ ರಥದ ಮೇಲೆ ಬಾಣಗಳ ಮಳೆಯನ್ನು ಸುರಿಸಿದರು. ಅಚಲವಾಗಿದ್ದು ಪರ್ವತವು ನೀರಿನ ಮಳೆಯನ್ನು ಸ್ವೀಕರಿಸುವಂತೆ ಅವರು ಸುರಿಸಿದ ಬಾಣಗಳ ಮಳೆಯನ್ನು ಪಾಂಡವನು ತಡೆದುಕೊಂಡನು. ಅಲ್ಲಿ ಎಲ್ಲರೂ ಬೀಭತ್ಸುವಿನ ಕೈಚಳಕದ ಅದ್ಭುತವನ್ನು ನೋಡಿದರು. ಅನೇಕ ಶೂರರು ಸುರಿಸಿದ ಸಹಿಸಲಸಾಧ್ಯವಾದ ಬಾಣಗಳ ಮಳೆಯನ್ನು ಅವನೊಬ್ಬನೇ ಭಿರುಗಾಳಿಯು ಮೋಡಗಳ ಸಮೂಹವನ್ನು ಹೇಗೋ ಹಾಗೆ ಚದುರಿಸಿ ತಡೆದನು. ಪಾರ್ಥನ ಆ ಕೆಲಸದಿಂದ ದೇವ-ದಾನವರು ಸಂತುಷ್ಟರಾದರು. ಆಗ ಕ್ರುದ್ಧನಾಗಿ ರಣದಲ್ಲಿ ಪಾರ್ಥನು ತ್ರಿಗರ್ತರ ಮೇಲೆ ವಾಯವ್ಯಾಸ್ತ್ರವನ್ನು ಪ್ರಯೋಗಿಸಿದನು. ಅದರಿಂದ ಭಿರುಗಾಳಿಯು ಹುಟ್ಟಿ ನಭಸ್ತಲವೇ ಅಲ್ಲೋಲಕಲ್ಲೋಲವಾಯಿತು. ಅನೇಕ ವೃಕ್ಷಗಳನ್ನು ಕೆಡವಿ ಸೈನಿಕರನ್ನೂ ಧ್ವಂಸಮಾಡಿತು. ಆಗ ದ್ರೋಣನು ಸುದಾರುಣವಾದ ವಾಯವ್ಯಾಸ್ತ್ರವನ್ನು ನೋಡಿ ಬೇರೆ ಘೋರವಾದ ಶೈಲಾಸ್ತ್ರವನ್ನು ಪ್ರಯೋಗಿಸಿದನು. ಯುದ್ಧದಲ್ಲಿ ಮಹಾರಣದಲ್ಲಿ ದ್ರೋಣನು ಬಿಟ್ಟ ಆ ಅಸ್ತ್ರವು ಭಿರುಗಾಳಿಯನ್ನು ಪ್ರಶಮನಗೊಳಿಸಿತು. ದಿಕ್ಕುಗಳು ಪ್ರಸನ್ನವಾದವು.

## ಭೀಮನ ಪರಾಕ್ರಮ

ಆಗ ವೀರ ಪಾಂಡುಸುತ ಭೀಮನು ತ್ರಿಗರ್ತನ ರಥಸೇನೆಯನ್ನು ರಣದಲ್ಲಿ ನಿರುತ್ಸಾಹಿಗಳನ್ನಾಗಿಯೂ, ವಿಮುಖರನ್ನಾಗಿಯೂ, ಪರಾಕ್ರಮ ಹೀನರನ್ನಾಗಿಯೂ ಮಾಡಿದನು. ಆಗ ರಾಜಾ ದುರ್ಯೋಧನ,

ರಥಿಗಳಲ್ಲಿ ಶ್ರೇಷ್ಠ ಕೃಪ, ಅಶ್ವತ್ಥಾಮ, ಶಲ್ಯ, ಕಾಂಬೋಜದ ಸುದಕ್ಷಿಣ, ಅವಂತಿಯ ವಿಂದಾನುವಿಂದರು ಮತ್ತು ಬಾಹ್ಲಿಕರೊಂದಿಗೆ ಬಾಹ್ಲೀಕ ಇವರುಗಳು ಮಹಾ ರಥಸೇನೆಯಿಂದ ಪಾರ್ಥನನ್ನು ಎಲ್ಲ ಕಡೆಗಳಿಂದ ಸುತ್ತುವರೆದರು. ಹಾಗೆಯೇ ಭಗದತ್ತ ಮತ್ತು ಮಹಾಬಲ ಶ್ರುತಾಯು ಇವರು ಗಜಸೇನೆಗಳಿಂದ ಭೀಮನನ್ನು ಎಲ್ಲ ಕಡೆಗಳಿಂದಲೂ ತಡೆದರು. ಭೂರಿಶ್ರವ, ಶಲ, ಮತ್ತು ಸೌಬಲರು ತಕ್ಷಣವೇ ವಿವಿಧ ಶರಜಾಲಗಳಿಂದ ಮಾದ್ರೀಪುತ್ರರನ್ನು ತಡೆದರು. ಭೀಷ್ಮನಾದರೋ ಎಲ್ಲ ಧಾರ್ತರಾಷ್ಟ್ರರ ಎಲ್ಲ ಸೈನಿಕರೊಂದಿಗೆ ಯುಧಿಷ್ಠರನನ್ನು ಎದುರಿಸಿ ಎಲ್ಲ ಕಡೆಗಳಿಂದ ಸುತ್ತುವರೆದರು. ಮೇಲೆ ಬೀಳುತ್ತಿದ್ದ ಗಜಸೇನೆಯನ್ನು ನೋಡಿ ಪಾರ್ಥ ವೃಕೋದರ ವೀರನು ಕಾನನದಲ್ಲಿರುವ ಮೃಗರಾಜನಂತೆ ತನ್ನ ಕಟವಾಯಿಗಳನ್ನು ನೆಕ್ಕಿದನು. ಆಗ ರಥಿಗಳಲ್ಲಿ ಶ್ರೇಷ್ಠನು ಮಹಾಹವದಲ್ಲಿ ಗದೆಯನ್ನು ಹಿಡಿದು ತಕ್ಷಣವೇ ರಥದಿಂದ ಕೆಳಗೆ ಹಾರಿ ನಿನ್ನ ಸೈನ್ಯವನ್ನು ಹೆದರಿಸಿದನು. ಗದಾಪಾಣಿಯಾಗಿ ನಿಂತಿದ್ದ ಭೀಮಸೇನನನ್ನು ನೋಡಿ ಗಜಾರೋಹಿಗಳೂ ರಣದಲ್ಲಿ ಪ್ರಯತ್ನಪಟ್ಟು ಅವನನ್ನು ಎಲ್ಲ ಕಡೆಗಳಿಂದ ಸುತ್ತುವರೆದರು. ಆನೆಗಳ ಮಧ್ಯವನ್ನು ಸೇರಿ ಪಾಂಡವನು ಮಹಾ ಮೇಘ ಜಾಲಗಳ ನಡುವೆ ಕಾಣುವ ರವಿಯಂತೆ ವಿರಾಜಿಸಿದನು. ಪಾಂಡವರ್ಷಭನು ಆ ಗಜಸೇನೆಯನ್ನು ಭಿರುಗಾಳಿಯು ಮಹಾ ಮೋಡಗಳ ಜಾಲವನ್ನು ಹೇಗೋ ಹಾಗೆ ಎಲ್ಲಕಡೆ ಚದುರಿಸಿದನು. ಬಲಶಾಲಿ ಭೀಮಸೇನನಿಂದ ವಧಿಸಲ್ಪಡುತ್ತಿದ್ದ ಆ ಆನೆಗಳು ರಣದಲ್ಲಿ ಮೋಡಗಳು ಗುಡುಗುವಂತೆ

ಗರ್ಜಿಸಿದವು. ರಣಮೂರ್ಧನಿಯಲ್ಲಿ ಅನೇಕ ಆನೆಗಳಿಂದ ಸೀಳಲ್ಪಟ್ಟ ಮತ್ತು ಗಾಯಗೊಂಡ ಪಾರ್ಥನು ಹೂಬಿಟ್ಟ ಅಶೋಕವೃಕ್ಷದಂತೆ ಶೋಭಿಸಿದನು. ತಿವಿಯಲು ಬಂದ ದಂತವನ್ನೇ ಹಿಡಿದು ಜಗ್ಗಾಡಿ ಕಿತ್ತು ಅವುಗಳಿಂದಲೇ ದಂಡವನ್ನು ಹಿಡಿದ ಅಂತಕನಂತೆ ಆನೆಗಳ ಕುಂಭಸ್ಥಳಗಳನ್ನು ತಿವಿದು ಸಾಯಿಸುತ್ತಿದ್ದನು. ರಕ್ತದಿಂದ ನೆನೆದಿದ್ದ ಗದೆಯನ್ನು ಹಿಡಿದು, ಮೇಡಸ್ಸು, ಮಜ್ಜೆಗಳು ಶರೀರದ ಮೇಲೆ ಹಾರಿ ಪ್ರಕಾಶಿಸುತ್ತಿದ್ದ ಅವನು ರಕ್ತದಿಂದ ಅಭ್ಯಂಜನ ಮಾಡಿದ ರುದ್ರನಂತೆ ತೋರಿದನು. ಹೀಗೆ ವಧಿಸಲ್ಪಟ್ಟು ಉಳಿದಿದ್ದ ಮಹಾಗಜಗಳು ತಮ್ಮದೇ ಸೇನೆಯನ್ನು ಧ್ವಂಸಮಾಡುತ್ತಾ ಎಲ್ಲಾಕಡೆ ಓಡಿಹೋದವು. ಎಲ್ಲ ಕಡೆಗಳಿಂದಲೂ ಗಜಸೈನ್ಯಗಳು ಪಲಾಯನ ಮಾಡತ್ತಿದ್ದುದರಿಂದ ಉಳಿದ ದುರ್ಯೋಧನನ ಸೇಲೆಯೆಲ್ಲವೂ ಪರಾಙ್ಮುಖವಾಯಿತು.

## ಸಂಕುಲಯುದ್ಧ

ಮಧ್ಯಾಹ್ನದಲ್ಲಿ ಸೋಮಕರೊಂದಿಗೆ ಭೀಷ್ಮನ ಲೋಕಕ್ಷಯಕಾರಕ ರೌದ್ರ ಸಂಗ್ರಾಮವು ಪ್ರಾರಂಭವಾಯಿತು. ರಥಿಗಳಲ್ಲಿ ಶ್ರೇಷ್ಠ ಗಾಂಗೇಯನು ನಿಶಿತ ಬಾಣಗಳಿಂದ ಪಾಂಡವರ ಸೇನೆಗಳನ್ನು ನೂರಾರು ಸಹಸ್ರಾರು ಸಂಖ್ಯೆಗಳಲ್ಲಿ ವಧಿಸಿದನು. ದೇವವ್ರತನು ಹುಲ್ಲಿನಿಂದ ಧಾನ್ಯಗಳನ್ನು ಬೇರ್ಪಡಿಸಲು ಎತ್ತುಗಳು ತುಳಿಯುವಂತೆ ಆ ಸೇನೆಯನ್ನು ಮರ್ದಿಸಿದನು. ಧೃಷ್ಟದ್ಯುಮ್ನ, ಶಿಖಂಡಿ, ವಿರಾಟ ಮತ್ತು ದ್ರುಪದರು ಸಮರದಲ್ಲಿ ಆ ಮಹಾರಥ ಭೀಷ್ಮನ ಹತ್ತಿರ ಹೋಗಿ ಬಾಣಗಳಿಂದ ಹೊಡೆದು ಆಕ್ರಮಣಿಸಿದರು. ಆಗ ಅವನು ಧೃಷ್ಟದ್ಯುಮ್ನ ಮತ್ತು

ವಿರಾಟರನ್ನು ಮೂರು ಬಾಣಗಳಿಂದ ಹೊಡೆದು, ದ್ರುಪದನ ಮೇಲೆ ನಾರಾಚವನ್ನು ಪ್ರಯೋಗಿಸಿದನು. ಸಮರದಲ್ಲಿ ಆ ಮಹೇಷ್ವಾಸ ಅಮಿತ್ರಕರ್ಶಿ ಭೀಷ್ಮನಿಂದ ಹೊಡೆಯಲ್ಪಟ್ಟ ಅವರು ಕಾಲಿನಿಂದ ತುಳಿಯಲ್ಪಟ್ಟ ಸರ್ಪಗಳಂತೆ ಕ್ರೋಧಿತರಾದರು. ಭಾರತರ ಪಿತಾಮಹನನ್ನು ಶಿಖಂಡಿಯು ಹೊಡೆದರೂ ಕೂಡ ಅವನ ಸ್ತ್ರೀತ್ವವನ್ನು ಮನಸ್ಸಿಗೆ ತಂದುಕೊಂಡು ಆ ಅಚ್ಯುತನು ಅವನನ್ನು ಪ್ರಹರಿಸಲಿಲ್ಲ. ಧೃಷ್ಟದ್ಯುಮ್ನನಾದರೋ ಕ್ರೋಧದಿಂದ ಅಗ್ನಿಯಂತೆ ಪ್ರಜ್ವಲಿಸುತ್ತಾ ಪಿತಾಮಹನನ್ನು ಮೂರು ಬಾಣಗಳಿಂದ ಪಿತಾಮಹನ ಎದೆಗೆ ಹೊಡೆದನು. ಭೀಷ್ಮನನ್ನು ದ್ರುಪದನು ಇಪ್ಪತ್ತೈದರಿಂದ, ವಿರಾಟನು ಹತ್ತು ಬಾಣಗಳಿಂದ, ಮತ್ತು ಶಿಖಂಡಿಯು ಇಪ್ಪತ್ತೈದು ಸಾಯಕಗಳಿಂದ ಹೊಡೆದರು. ಯುದ್ಧದಲ್ಲಿ ಆ ಮಹಾತ್ಮರಿಂದ ಹೀಗೆ ಅತಿಯಾಗಿ ಗಾಯಗೊಂಡ ಭೀಷ್ಮನು ವಸಂತಕಾಲದಲ್ಲಿ ಪುಷ್ಪ-ಚಿಗುರುಗಳಿಂದ ಕೂಡಿದ ಅಶೋಕವೃಕ್ಷದಂತೆ ಕೆಂಪಾಗಿ ತೋರಿದನು.

ಅವರನ್ನು ಮೂರು ಮೂರು ಜಿಹ್ಮಗಗಳಿಂದ ತಿರುಗಿ ಹೊಡೆದು ಗಾಂಗೇಯನು ಭಲ್ಲದಿಂದ ದ್ರುಪದನ ಧನುಸ್ಸನ್ನು ಕತ್ತರಿಸಿದನು. ರಣನೆತ್ತಿಯಲ್ಲಿ ಅವನು ಇನ್ನೊಂದು ಬಿಲ್ಲನ್ನು ಎತ್ತಿಕೊಂಡು ಭೀಷ್ಮನನ್ನು ಐದು ಮತ್ತು ಸಾರಥಿಯನ್ನು ಮೂರು ನಿಶಿತ ಬಾಣಗಳಿಂದ ಹೊಡೆದನು. ಆಗ ಯುಧಿಷ್ಠಿರನ ಹಿತವನ್ನು ಅಪೇಕ್ಷಿಸಿ ಮತ್ತು ರಣಮುಖದಲ್ಲಿ ಪಾಂಚಾಲ್ಯ ಧೃಷ್ಟದ್ಯುಮ್ನನನ್ನು ರಕ್ಷಿಸುವ ಸಲುವಾಗಿ ಭೀಮನು ದ್ರೌಪದಿಯ ಐದು ಮಕ್ಕಳು, ಕೇಕಯದ ಐವರು

ಸಹೋದರರು ಮತ್ತು ಸಾತ್ವತ ಸಾತ್ಯಕಿಯನ್ನೊಡಗೂಡಿ ಗಾಂಗೇಯನನ್ನು ಅಕ್ರಮಣಿಸಿದನು. ಹಾಗೆಯೇ ಕೌರವರೆಲ್ಲರೂ ಭೀಷ್ಮನ ರಕ್ಷಣೆಗಾಗಿ ಉದ್ಯುಕ್ತರಾಗಿ ಸೇನೆಗಳೊಂದಿಗೆ ಪಾಂಡುಸೇನೆಯನ್ನು ಎದುರಿಸಿ ಹೋರಾಡಿದರು. ಆಗ ಅಲ್ಲಿ ಕೌರವರ ಮತ್ತು ಪಾಂಡವರ ನಡುವೆ ಯಮರಾಷ್ಟ್ರವನ್ನು ವೃದ್ಧಿಗೊಳಿಸುವ ಪದಾತಿ-ಕುದುರೆ-ರಥ-ಆನೆಗಳ ಮಹಾ ಸಂಕುಲ ಯುದ್ಧವು ನಡೆಯಿತು. ರಥಿಗಳು ರಥಿಗಳ ಮೇಲೆ ಆಕ್ರಮಣಮಾಡಿ ಯಮಸಾದನಕ್ಕೆ ಕಳುಹಿಸುತ್ತಿದ್ದರು. ಇತರರು ಅಲ್ಲಲ್ಲಿ ಪದಾತಿ-ಆನೆ-ಕುದುರೆ ಸವಾರರನ್ನು ಸನ್ನತಪರ್ವ ಶರಗಳಿಂದ ಮತ್ತು ವಿವಿಧ ಘೋರ ಅಸ್ತ್ರಗಳಿಂದ ಪರಲೋಕಗಳಿಗೆ ಕಳುಹಿಸುತ್ತಿದ್ದರು. ರಥಗಳಿಗೆ ಕಟ್ಟಿದ್ದ ಕುದುರೆಗಳು ರಥಿಗಳನ್ನು ಕಳೆದುಕೊಂಡು ಮತ್ತು ಸಾರಥಿಗಳನ್ನು ಕಳೆದುಕೊಂಡು ಸಮರದಲ್ಲಿ ಎಲ್ಲ ಕಡೆಗಳಲ್ಲಿ ಓಡಿಹೋಗುತ್ತಿದ್ದವು. ರಣದಲ್ಲಿ ಬಹಳಷ್ಟು ಮನುಷ್ಯರನ್ನು ಮತ್ತು ಕುದುರೆಗಳನ್ನು ಮರ್ದಿಸುತ್ತಿರುವ ಆ ರಥಗಳು ಗಂಧರ್ವನಗರಗಳಂತೆ ಕಾಣುತ್ತಿದ್ದವು.

ಹೊಳೆಯುತ್ತಿರುವ ಕವಚಗಳನ್ನು ಧರಿಸಿದ್ದ, ಕುಂಡಲ-ಕಿರೀಟಗಳಿಂದ ಮತ್ತು ಸರ್ವಾಂಗಗಳಲ್ಲಿ ವಿಭೂಷಿತರಾದ, ರೂಪದಲ್ಲಿ ದೇವಪುತ್ರರ ಸಮನಾದ, ಯುದ್ಧ ಶೌರ್ಯದಲ್ಲಿ ಶಕ್ರನ ಸಮನಾದ, ವೈಶ್ರವಣನಂತೆ ಶ್ರೀಮಂತರಾದ, ನ್ಯಾಯಗಳಲ್ಲಿ ಬೃಹಸ್ಪತಿಯಂತಿರುವ, ಸರ್ವಲೋಕೇಶ್ವರರಂತಿರುವ ಶೂರ ರಥರು ರಥಹೀನರಾಗಿ ಸಾಧಾರಣ ಮನುಷ್ಯರಂತೆ ಅಲ್ಲಲ್ಲಿ ಓಡಿಹೋಗುತ್ತಿರುವುದು ಕಂಡುಬಂದಿತು.

ಆನೆಗಳೂ ಕೂಡ ಮಾವುತರನ್ನು ಕಳೆದುಕೊಂಡು ತಮ್ಮ ಸೈನಿಕರನ್ನೇ ತುಳಿಯುತ್ತಾ ಜೋರಾಗಿ ಕೂಗಿಕೊಂಡು ಎಲ್ಲ ಕಡೆ ಓಡಿಹೋಗುತ್ತಿದ್ದವು. ಕಪ್ಪುಮೋಡಗಳಂತೆ ಹೊಳೆಯುವ ಮತ್ತು ಮೋಡಗಳಿಂದ ಗರ್ಜಿಸುವ ಆನೆಗಳು ಕವಚಗಳನ್ನು, ಚಾಮರ-ಚತ್ರಗಳನ್ನು, ಪತಾಕೆಗಳನ್ನು, ಕಕ್ಷ್ಯಗಳನ್ನು, ಘಂಟೆಗಳನ್ನು, ಮತ್ತು ತೋಮರಗಳನ್ನು ಕಳೆದುಕೊಂಡು ಹತ್ತೂ ದಿಕ್ಕುಗಳಲ್ಲಿ ಓಡಿ ಹೋಗುತ್ತಿರುವುದು ಕಂಡುಬಂದಿತು. ಹಾಗೆಯೇ ಕೌರವರ ಮತ್ತು ಪಾಂಡವರ ಸಂಕುಲಗಳಲ್ಲಿ ಆನೆಗಳನ್ನು ಕಳೆದುಕೊಂಡ ಗಜಾರೋಹಿಗಳು ಓಡಿಹೋಗುತ್ತಿರುವುದು ಕಾಣುತ್ತಿತ್ತು. ನಾನಾ ದೇಶಗಳಲ್ಲಿ ಹುಟ್ಟಿದ್ದ, ಹೇಮಭೂಷಿತ, ವಾಯುವಿನ ವೇಗವುಳ್ಳ ನೂರಾರು ಸಹಸ್ರಾರು ಕುದುರೆಗಳು ಓಡಿಹೋಗುತ್ತಿರುವುದು ತೋರುತ್ತಿತ್ತು. ಅಶ್ವಾರೋಹಿಗಳು ಖಡ್ಗಗಳನ್ನು ಹಿಡಿದು ಕುದುರೆಗಳನ್ನು ಓಡಿಸಿಕೊಂಡು ಹೋಗುತ್ತಿರುವುದನ್ನೂ, ಕುದುರೆಗಳು ಅವರನ್ನು ಓಡಿಸಿಕೊಂಡು ಹೋಗುತ್ತಿರುವುದನ್ನೂ ಸಮರದಲ್ಲಿ ಎಲ್ಲಕಡೆ ಎಲ್ಲರೂ ನೋಡಿದರು. ಆನೆಯು ಆನೆಯನ್ನು ಸೇರಿಕೊಂಡು ಮಹಾರಣದಲ್ಲಿ ಪದಾತಿಗಳನ್ನೂ ಕುದುರೆಗಳನ್ನೂ ಧ್ವಂಸಮಾಡಿ ಓಡಿ ಹೋಗುತ್ತಿರುವುದನ್ನೂ ಕಂಡರು.

ಹಾಗೆಯೇ ರಣದಲ್ಲಿ ಆನೆಗಳು ರಥಗಳನ್ನು ಧ್ವಂಸಮಾಡಿದವು. ರಥಗಳೂ ಕೂಡ ಪದಾತಿಗಳು ಮತ್ತು ಕುದುರೆಗಳ ಮೇಲೆ ಬಿದ್ದು ಧ್ವಂಸಮಾಡಿದವು. ಸಮರದಲ್ಲಿ ಕುದುರೆಗಳು ರಣದಲ್ಲಿದ್ದ ಪದಾತಿಗಳನ್ನು ತುಳಿದು ಧ್ವಂಸಮಾಡಿದವು. ಹೀಗೆ ಪರಸ್ಪರರನ್ನು

ಬಹಳವಾಗಿ ಧ್ವಂಸಮಾಡಲಾಯಿತು. ನಡೆಯುತ್ತಿದ್ದ ಆ ಮಹಾಭಯಂಕರ ರೌದ್ರ ಯುದ್ಧದಲ್ಲಿ ರಕ್ತ ಮತ್ತು ಕರುಳುಗಳು ತರಂಗಗಳಾಗಿದ್ದ ಘೋರ ನದಿಯೊಂದು ಹುಟ್ಟಿ ಹರಿಯಿತು. ಮೂಳೆಗಳ ರಾಶಿಗಳು ಬಂಡೆಗಳಂತಿದ್ದವು, ಕೂದಲುಗಳು ಪಾಚೆಹುಲ್ಲಿನಂತಿದ್ದವು, ರಥಗಳ ಗುಂಪುಗಳು ಮಡುವುಗಳಾಗಿದ್ದವು, ಮತ್ತು ಕುದುರೆಗಳು ದುರಾಸದವಾಗಿದ್ದ ಅದರ ಮೀನುಗಳಾಗಿದ್ದವು. ತಲೆಬುರುಡೆಗಳಿಂದ ತುಂಬಿಹೋಗಿತ್ತು. ಆನೆಗಳು ಅದರ ಮೊಸಳೆಗಳಂತಿದ್ದವು. ಕವಚ ಮತ್ತು ಶಿರಸ್ತ್ರಾಣಗಳು ನೊರೆಗಳಂತಿದ್ದವು. ಧನುಸ್ಸುಗಳು ಪ್ರವಾಹದಂತೆಯೂ ಕತ್ತಿಗಳು ಆಮೆಗಳಂತೆಯೂ ಇದ್ದವು. ಪತಾಕೆ ಮತ್ತು ಧ್ವಜಗಳು ತೀರವೃಕ್ಷಗಳಂತಿದ್ದವು. ಸತ್ತವರ ಹೆಣಗಳೆಂಬ ತೀರವನ್ನು ಕೊಚ್ಚಿಕೊಂಡು ಹೋಗುತ್ತಿದ್ದು. ಮಾಂಸಾಹಾರಿ ಪ್ರಾಣಿ-ಪಕ್ಷಿಗಳು ಆ ನದಿಯ ಹಂಸಗಳಾಗಿದ್ದವು. ಯಮರಾಷ್ಟ್ರವಿವರ್ಧಿನಿಯಾದ ಆ ನದಿಯನ್ನು ಶೂರ ಕ್ಷತ್ರಿಯರು ರಥ-ಆನೆ-ಕುದುರೆಗಳನ್ನೇ ದೋಣಿಗಳನ್ನಾಗಿಸಿಕೊಂಡು ಭಯವನ್ನು ತ್ಯಜಿಸಿ ಆ ಮಹಾಹವದಲ್ಲಿ ದಾಟುತ್ತಿದ್ದರು. ವೈತರಣಿಯು ಹೇಗೆ ಪ್ರೇತಗಳನ್ನು ಪ್ರೇತರಾಜಪುರಕ್ಕೆ ಕೊಂಡೊಯ್ಯುತ್ತದೆಯೋ ಹಾಗೆ ರಣದಲ್ಲಿಯ ಆ ನದಿಯು ಸಂಕೋಚಪಟ್ಟವರನ್ನು, ಕಳವಳದಿಂದಿರುವವರನ್ನು ಒಯ್ಯುತ್ತಿತ್ತು. ಅಲ್ಲಿ ಆ ಮಹಾವಿನಾಶವನ್ನು ನೋಡಿ ಕ್ಷತ್ರಿಯರೆಲ್ಲರೂ ಸಂಕಟದಿಂದ ಕೂಗಿದರು:

“ದುರ್ಯೋಧನನ ಅಪರಾಧದಿಂದ ಕೌರವರು

> ಕ್ಷಯವಾಗುತ್ತಿದ್ದಾರೆ. ಜನೇಶ್ವರ ಪಾಪಾತ್ಮಾ ಲೋಭಮೋಹಿತ
> ಧಾರ್ತರಾಷ್ಟ್ರನು ಹೇಗೆ ತಾನೇ ಗುಣವಂತರಾದ
> ಪಾಂಡುಪುತ್ರರೊಂದಿಗೆ ದ್ವೇಷವನ್ನು ಸಾಧಿಸುತ್ತಾನೆ?"

ಹೀಗೆ ಬಹುವಿಧವಾದ ಮಾತುಗಳನ್ನು ಅಲ್ಲಿ ಪಾಂಡವರು ಮತ್ತು ಧೃತರಾಷ್ಟ್ರನ ಪುತ್ರರ ಸುದಾರುಣ ಸಮಾಗಮದಲ್ಲಿ ಕೇಳಿಬರುತ್ತಿದ್ದವು. ಸರ್ವ ಯೋಧರು ಹೇಳಿಕೊಳ್ಳುತ್ತಿದ್ದ ಆ ಮಾತನ್ನು ಕೇಳಿ ಸರ್ವಲೋಕವನ್ನೂ ಅನಾದರಿಸುವ ದುರ್ಯೋಧನನು ಭೀಷ್ಮ, ದ್ರೋಣ, ಕೃಪ ಮತ್ತು ಶಲ್ಯರಿಗೆ

> "ಅಹಂಕಾರವನ್ನು ಬಿಟ್ಟು ಯುದ್ಧಮಾಡಿ! ಏಕೆ
> ತಡಮಾಡುತ್ತಿದ್ದೀರಿ?"

ಎಂದನು.

ಆಗ ಅಕ್ಷದ್ಯೂತವನ್ನಾಡಿದ ಕುರುಗಳ ಮತ್ತು ಪಾಂಡವರ ನಡುವೆ ಸುಘೋರವಾದ ವಿನಾಶಕಾರಿ ಯುದ್ಧವು ನಡೆಯಿತು. ಸಮರದಲ್ಲಿ ಪಾಂಡುಸುತರಾಗಲೀ ಅಥವಾ ಕೌರವರಾಗಲೀ, ಅವರ ಸೇನೆಗಳಾಗಲೀ, ಅವರ ಅನುಯಾಯಿಗಳಾಗಲೀ ತಮ್ಮ ಪ್ರಾಣಗಳನ್ನು ರಕ್ಷಿಸಿಕೊಳ್ಳುತ್ತಿಲ್ಲ.

ಅರ್ಜುನನಾದರೋ ಸುಶರ್ಮನ ನಾಯಕತ್ವದಲ್ಲಿದ್ದ ನೃಪರನ್ನು ನಿಶಿತ ಸಾಯಕಗಳಿಂದ ಪ್ರೇತರಾಜನ ಭವನಕ್ಕೆ ಕಳುಹಿಸಿದನು. ಸುಶರ್ಮನೂ

ಕೂಡ ಸಂಯುಗದಲ್ಲಿ ಬಾಣಗಳಿಂದ ಪಾರ್ಥನನ್ನು ಮತ್ತು ಪುನಃ ಏಳರಿಂದ ವಾಸುದೇವನನ್ನು ಹಾಗೂ ಎಂಭತ್ತರಿಂದ ಪಾರ್ಥನನ್ನು ಹೊಡೆದನು. ಅವನನ್ನು ಶರೌಘಗಳಿಂದ ತಡೆದು ಮಹಾರಥ ಶಕ್ರಸೂನುವು ರಣದಲ್ಲಿ ಸುಶರ್ಮನ ಯೋಧರನ್ನು ಯಮಸಾದನಕ್ಕೆ ಕಳುಹಿಸಿದನು. ಯುಗಕ್ಷಯದಲ್ಲಿ ಕಾಲನಂತೆ ಪಾರ್ಥನಿಂದ ವಧಿಸಲ್ಪಟ್ಟ ಆ ಮಹಾರಥರಿಗೆ ಭಯವು ಹುಟ್ಟಿ ಪಲಾಯನ ಮಾಡಿದರು. ಕೆಲವರು ಕುದುರೆಗಳನ್ನು ಬಿಟ್ಟು, ಕೆಲವರು ರಥಗಳನ್ನು ಬಿಟ್ಟು, ಇನ್ನು ಕೆಲವರು ಆನೆಗಳನ್ನು ಬಿಟ್ಟು ಹತ್ತೂ ಕಡೆಗಳಲ್ಲಿ ಓಡತೊಡಗಿದರು. ಇನ್ನು ಕೆಲವರು ತಮ್ಮೊಂದಿಗೆ ಕುದುರೆ, ರಥ, ಆನೆಗಳನ್ನು ಕರೆದುಕೊಂಡು ತ್ವರೆಮಾಡಿ ರಣದಿಂದ ಪಲಾಯನ ಮಾಡುತ್ತಿದ್ದರು. ಪದಾತಿಗಳು ಕೂಡ ಮಹಾರಣದಲ್ಲಿ ಶಸ್ತ್ರಗಳನ್ನು ಬಿಸುಟು ಇತರರ ಮೇಲೆ ಅನುಕಂಪವಿಲ್ಲದೇ ಅಲ್ಲಲ್ಲಿ ಓಡಿ ಹೋಗುತ್ತಿದ್ದರು.

ತ್ರೈಗರ್ತ ಸುಶರ್ಮ ಮತ್ತು ಇತರ ಪಾರ್ಥಿವಶ್ರೇಷ್ಠರು ಅವರನ್ನು ಬಹಳವಾಗಿ ತಡೆದರೂ ಸಂಯುಗದಲ್ಲಿ ಅವರು ನಿಲ್ಲಲಿಲ್ಲ. ಆ ಸೇನೆಯು ಪಲಾಯನ ಮಾಡುತ್ತಿರುವುದನ್ನು ನೋಡಿ ದುರ್ಯೋಧನನು ಭೀಷ್ಮನನ್ನು ಮುಂದಿಟ್ಟುಕೊಂಡು, ಸರ್ವಸೇನೆಗಳನ್ನು ಕರೆದುಕೊಂಡು ಎಲ್ಲರನ್ನೂ ಒಟ್ಟುಗೂಡಿಕೊಂಡು ತ್ರಿಗರ್ತರಾಜನ ಜೀವವನ್ನುಳಿಸಲು ಧನಂಜಯನ ಮೇಲೆರಗಿದನು. ಅವನೊಬ್ಬನೇ ಬಹುವಿಧದ ಬಾಣಗಳನ್ನು ಬೀರುತ್ತಾ ತನ್ನ ಸಹೋದರರೊಂದಿಗೆ ಸಮರದಲ್ಲಿ ನಿಂತಿದ್ದನು. ಉಳಿದವರೆಲ್ಲರೂ ಪಲಾಯನ ಮಾಡಿದ್ದರು. ಹಾಗೆಯೇ

ಪಾಂಡವರೂ ಕೂಡ ಸರ್ವಸೇನೆಗಳಿಂದೊಡಗೂಡಿ ಕವಚಗಳನ್ನು ಧರಿಸಿ ಫಲ್ಗುನನಿಗಾಗಿ ಭೀಷ್ಮನಿದ್ದಲ್ಲಿಗೆ ಬಂದರು. ಗಾಂಡೀವಧನ್ವಿಯ ಘೋರ ಶೌರ್ಯವನ್ನು ತಿಳಿದಿದ್ದರೂ ಅವರು ಹಾಹಾಕಾರಗೈಯುತ್ತಾ ಉತ್ಸಾಹದಿಂದ ಹೋಗಿ ಭೀಷ್ಮನನ್ನು ಸುತ್ತುವರೆದರು. ಆಗ ಶೂರ ತಾಲಧ್ವಜನು ಸಮರದಲ್ಲಿ ಪಾಂಡವರ ಸೇನೆಯನ್ನು ಸನ್ನತಪರ್ವ ಶರಗಳಿಂದ ಮುಚ್ಚಿಬಿಟ್ಟನು. ಸೂರ್ಯನು ನಡುನೆತ್ತಿಯ ಮೇಲೆ ಬರಲು ಕುರುಗಳು ಎಲ್ಲರೂ ಒಂದಾಗಿ ಪಾಂಡವರೊಂದಿಗೆ ಯುದ್ಧಮಾಡುತ್ತಿದ್ದರು.

## ಸಾತ್ಯಕಿಯ ಪರಾಕ್ರಮ

ಶೂರ ಸಾತ್ಯಕಿಯು ಕೃತವರ್ಮನನ್ನು ಐದು ಆಯಸಗಳಿಂದ ಹೊಡೆದು ಸಹಸ್ರಾರು ಬಾಣಗಳನ್ನು ಹರಡಿ ಯುದ್ಧದಲ್ಲಿ ತೊಡಗಿದನು. ಹಾಗೆಯೇ ರಾಜ ದ್ರುಪದನು ದ್ರೋಣನನ್ನು ನಿಶಿತ ಶರಗಳಿಂದ ಹೊಡೆದು ಪುನಃ ಅವನನ್ನು ಏಳರಿಂದ ಮತ್ತು ಸಾರಥಿಯನ್ನು ಏಳರಿಂದ ಹೊಡೆದನು. ಭೀಮಸೇನನಾದರೋ ಪ್ರಪಿತಾಮಹ ರಾಜಾ ಬಾಹ್ಲೀಕನನ್ನು ಹೊಡೆದು ಕಾನನದಲ್ಲಿ ಸಿಂಹದಂತೆ ಮಹಾನಾದಗೈದನು. ಚಿತ್ರಸೇನನಿಂದ ಅನೇಕ ಆಶುಗಗಳಿಂದ ಹೊಡೆಯಲ್ಪಟ್ಟ ಆರ್ಜುನಿಯು ಚಿತ್ರಸೇನನ ಹೃದಯವನ್ನು ಮೂರು ಬಾಣಗಳಿಂದ ಚೆನ್ನಾಗಿ ಹೊಡೆದನು. ದಿವಿಯಲ್ಲಿ ಮಹಾಘೋರರಾದ ಬುಧ-ಶನೈಶ್ಚರರಂತೆ ರಣದಲ್ಲಿ ಸೇರಿದ್ದ ಆ ಮಹಾಕಾಯರಿಬ್ಬರೂ ಬೆಳಗಿದರು. ಪರವೀರಹ ಸೌಭದ್ರನು

ಅವನ ನಾಲ್ಕೂ ಕುದುರೆಗಳನ್ನೂ ಸೂತನನ್ನೂ ಒಂಭತ್ತು ಶರಗಳಿಂದ ಸಂಹರಿಸಿ ಜೋರಾಗಿ ಕೂಗಿದನು. ಅಶ್ವಗಳು ಹತರಾಗಲು ಆ ಮಹಾರಥನು ತಕ್ಷಣವೇ ರಥದಿಂದ ಧುಮುಕಿ ದುರ್ಮುಖನ ರಥವನ್ನೇರಿದರು. ಪರಾಕ್ರಮೀ ದ್ರೋಣನು ದ್ರುಪದನನ್ನು ಸನ್ನತಪರ್ವ ಶರಗಳಿಂದ ಹೊಡೆದು ತಕ್ಷಣವೇ ಅವನ ಸಾರಥಿಯನ್ನೂ ಹೊಡೆದನು. ಸೇನಾಮುಖದಲ್ಲಿ ಹಾಗೆ ಪೀಡೆಗೊಳಗಾದ ರಾಜಾ ದ್ರುಪದನು ಹಿಂದಿನ ವೈರವನ್ನು ಸ್ಮರಿಸಿಕೊಂಡು ವೇಗಶಾಲಿ ಕುದುರೆಗಳ ಮೇಲೇರಿ ಪಲಾಯನ ಮಾಡಿದನು. ಭೀಮಸೇನನಾದರೋ ಮುಹೂರ್ತದಲ್ಲಿಯೇ ಎಲ್ಲ ಸೇನೆಗಳೂ ನೋಡುತ್ತಿರುವಂತೆ ರಾಜ ಬಾಹ್ಲೀಕನ ಕುದುರೆಗಳು, ಸಾರಥಿ ಮತ್ತು ರಥವನ್ನು ಧ್ವಂಸ ಮಾಡಿದನು.

ಆಗ ಗಾಭರಿಗೊಂಡು ಅತೀವ ಸಂಶಯದಿಂದ ಪುರುಷೋತ್ತಮ ಬಾಹ್ಲೀಕನು ವಾಹನದಿಂದ ಕೆಳಗೆ ಹಾರಿ ತಕ್ಷಣವೇ ಮಹಾರಥ ಲಕ್ಷ್ಮಣನ ರಥವನ್ನೇರಿದನು. ಕೃತವರ್ಮನನ್ನು ತಡೆಹಿದಿದು ಮಹಾರಥ ಸಾತ್ಯಕಿಯು ಬಹುವಿಧದ ಶರಗಳಿಂದ ಪಿತಾಮಹನನ್ನು ಎದುರಿಸಿದನು. ಅವನು ಭಾರತನನ್ನು ಅರವತ್ತು ನಿಶಿತ ಲೋಮವಾಹಿಗಳಿಂದ ಹೊಡೆದನು. ಅವನು ಮಹಾಧನುಸ್ಸನ್ನು ಅಲುಗಾಡಿಸುತ್ತಾ ರಥದಲ್ಲಿ ನಿಂತು ನರ್ತಿಸುವಂತಿದ್ದನು. ಅವನ ಮೇಲೆ ಪಿತಾಮಹನು ಹೇಮಚಿತ್ರದ, ಮಹಾವೇಗದ, ನಾಗಕನ್ಯೆಯಂತೆ ಶುಭವಾಗಿದ್ದ ಮಹಾ ಶಕ್ತಿಯನ್ನು ಎಸೆದನು. ತನ್ನ ಮೇಲೆ ಬೀಳಲು ಬರುತ್ತಿದ್ದ ಮೃತ್ಯುವನಂತಿದ್ದ ಆ ತೇಜಸ್ಸುಳ್ಳದ್ದನ್ನು ವಾರ್ಷ್ಣೇಯನು

ತಕ್ಷಣವೇ ಕೈಚಳಕದಿಂದ ಧ್ವಂಸಮಾಡಿದನು. ವಾರ್ಷ್ಣೇಯನನ್ನು ತಲುಪದ ಆ ಪರಮದಾರುಣ ಶಕ್ತಿಯು ಪ್ರಭೆಯನ್ನು ಕಳೆದುಕೊಂಡು ಮಹಾಉಲ್ಕದಂತೆ ಭೂಮಿಯ ಮೇಲೆ ಬಿದ್ದಿತು. ಆಗ ವಾರ್ಷ್ಣೇಯನಾದರೋ ನೋಡಲು ಘೋರವಾಗಿದ್ದ ತನ್ನದೇ ಶಕ್ತಿಯನ್ನು ಹಿಡಿದು ವೇಗದಿಂದ ಪಿತಾಮಹನ ರಥದ ಮೇಲೆ ಎಸೆದನು.

ವಾರ್ಷ್ಣೇಯನ ಭುಜವೇಗದಿಂದ ಪ್ರಯಾಣಿಸಿದ ಅದು ಮಹಾಹವದಲ್ಲಿ ಕಾಲರಾತ್ರಿಯಂತೆ ಧಾವಿಸಿ ಬಂದಿತು. ಬರುತ್ತಿದ್ದ ಅದನ್ನು ಭಾರತನು ತೀಕ್ಷ್ಣವಾದ ಎರಡು ಕ್ಷುರಪ್ರಗಳಿಂದ ತಕ್ಷಣವೇ ಎರಡಾಗಿ ಕತ್ತರಿಸಿ, ನೆಲದ ಮೇಲೆ ಬೀಳಿಸಿದನು. ಶಕ್ತಿಯನ್ನು ಗೆದ್ದು ಶತ್ರುಕರ್ಶನ ಗಾಂಗೇಯನು ಜೋರಾಗಿ ನಕ್ಕು ಸಾತ್ಯಕಿಯನ್ನು ಎದೆಯಲ್ಲಿ ಒಂಭತ್ತು ಶರಗಳಿಂದ ಹೊಡೆದನು. ಆಗ ಮಾಧವನು ಕಷ್ಟದಲ್ಲಿದ್ದುದರಿಂದ ಪಾಂಡವರು ರಥ-ಆನೆ-ಕುದುರೆಗಳೊಂದಿಗೆ ರಣದಲ್ಲಿ ಭೀಷ್ಮನನ್ನು ಸುತ್ತುವರೆದರು. ಆಗ ಸಮರದಲ್ಲಿ ವಿಜಯವನ್ನು ಬಯಸಿದ ಪಾಂಡವರ ಮತ್ತು ಕುರುಗಳ ಲೋಮಹರ್ಷಣ ತುಮುಲ ಯುದ್ಧವು ನಡೆಯಿತು.

## ಯುಧಿಷ್ಠಿರ-ಮಾದ್ರೀಪುತ್ರರ ಪರಾಕ್ರಮ

ಆಕಾಶದಲ್ಲಿ ಬೇಸಗೆಯ ಕೊನೆಯಲ್ಲಿ ಮೋಡಗಳು ಭಾಸ್ಕರನನ್ನು ಹೇಗೋ ಹಾಗೆ ರಣದಲ್ಲಿ ಪಾಂಡವರು ಭೀಷ್ಮನನ್ನು ಮುತ್ತಿಕೊಂಡಿರುವುದನ್ನು ನೋಡಿ ಕ್ರುದ್ಧನಾದ ದುರ್ಯೋಧನನು ದುಃಶಾಸನನಿಗೆ ಹೇಳಿದನು:

“ಭರತರ್ಷಭ! ಈ ಶೂರ ಮಹೇಷ್ವಾಸ ಶತ್ರುನಿಶೂದನ ಭೀಷ್ಮನನ್ನು ಶೂರ ಪಾಂಡವರು ಎಲ್ಲ ಕಡೆಗಳಿಂದ ಮುತ್ತಿಗೆ ಹಾಕಿದ್ದಾರೆ. ಆ ಸುಮಹಾತ್ಮನ ರಕ್ಷಣೆಯ ಕಾರ್ಯವು ನಿನ್ನದು. ಏಕೆಂದರೆ ಸಮರದಲ್ಲಿ ನಮ್ಮನ್ನು ರಕ್ಷಿಸುತ್ತಿರುವ ಪಿತಾಮಹನನ್ನು ಸಂಹರಿಸಲು ಪಾಂಡವರೊಂದಿಗೆ ಪಾಂಚಾಲರು ಪ್ರಯತ್ನಿಸುತ್ತಿದ್ದಾರೆ. ಅಲ್ಲಿ ಭೀಷ್ಮನನ್ನು ರಕ್ಷಿಸುವುದೇ ಕಾರ್ಯವೆಂದು ನನಗನ್ನಿಸುತ್ತಿದೆ. ಈ ಮಹೇಷ್ವಾಸ ಭೀಷ್ಮ ಪಿತಾಮಹನೇ ನಮ್ಮ ರಕ್ಷಕ. ನೀನು ಸರ್ವಸೇನೆಗಳೊಂದಿಗೆ ಪಿತಾಮಹನನ್ನು ಸುತ್ತುವರೆದು ಸಮರದಲ್ಲಿ ದುಷ್ಕರವಾದ ಅವನನ್ನು ರಕ್ಷಿಸುವ ಕೆಲಸವನ್ನು ಮಾಡಬೇಕು.”

ಇದನ್ನು ಕೇಳಿ ದುಃಶಾಸನನು ಮಹಾ ಸೇನೆಯೊಂದಿಗೆ ಆವೃತನಾಗಿ ಭೀಷ್ಮನನ್ನು ಸುತ್ತುವರೆದು ನಿಂತನು. ಆಗ ಸುಬಲಾತ್ಮಜನು ಒಂದುಲಕ್ಷ ಕುದುರೆಗಳನ್ನುಳ್ಳ, ಹೊಳೆಯುತ್ತಿರುವ ಪ್ರಾಸಗಳನ್ನು ಹಿಡಿದಿರುವ, ಋಷ್ಟಿ-ತೋಮರ ಧಾರಿಗಳ, ದರ್ಪಿತರಾದ, ಒಳ್ಳೆಯ ವೇಗವುಳ್ಳ, ಪ್ರಬಲರಾಗಿರುವ, ಪತಾಕೆಗಳಿಂದ ಕೂಡಿದ, ಯುದ್ಧದಲ್ಲಿ ತರಬೇತಿ ಹೊಂದಿ ಕುಶಲರಾಗಿರುವ ನರೋತ್ತಮರೊಡಗೂಡಿ ನಕುಲ, ಸಹದೇವ, ಮತ್ತು ನರಶ್ರೇಷ್ಠ ಪಾಂಡವ ಧರ್ಮರಾಜನನ್ನು ಎಲ್ಲ ಕಡೆಗಳಿಂದಲೂ ಸುತ್ತುವರೆದು ತಡೆದು ನಿಲ್ಲಿಸಿದನು. ಆಗ ರಾಜಾ ದುರ್ಯೋಧನನು ಪಾಂಡವರನ್ನು ನಿವಾರಿಸಲು ಹತ್ತುಸಾವಿರ ಶೂರ ಅಶ್ವಾರೋಹಿಗಳನ್ನು

ಕಳುಹಿಸಿಕೊಟ್ಟನು. ಮಹಾವೇಗದಿಂದ ಒಂದೇ ಸಮನೆ ಅನೇಕ ಗರುಡಗಳಂತೆ ಬಂದೆರಗಿದ ಅವುಗಳ ಖುರಪುಟಗಳಿಂದಾಗಿ ಭೂಮಿಯು ಕಂಪಿಸಿತು ಮತ್ತು ಕೂಗಿಕೊಂಡಿತು. ಪರ್ವತದ ಮೇಲೆ ಬಿದಿರಿನ ಮಹಾವನವು ಸುಡುತ್ತಿದೆಯೋ ಎನ್ನುವಂತೆ ಆ ಕುದುರೆಗಳ ಖುರಪುಟಗಳ ಮಹಾ ಶಬ್ಧವು ಕೇಳಿಬಂದಿತು. ಅವು ಭೂಮಿಯ ಮೇಲೆ ಹೋಗುತ್ತಿರಲು ಮೇಲೆದ್ದ ಮಹಾ ಧೂಳಿನ ರಾಶಿಯು ದಿವಾಕರ ಪಥವನ್ನು ತಲುಪಿ ಭಾಸ್ಕರನನ್ನು ಮುಸುಕಿದವು.

ವೇಗದಿಂದ ಬಂದೆರಗಿದ ಆ ಕುದುರೆಗಳಿಂದ ಪಾಂಡವ ಸೇನೆಯು ಮಹಾ ವೇಗದಿಂದ ಹಂಸಗಳು ಬಂದು ಮಹಾ ಸರೋವರದಲ್ಲಿ ಬಿದ್ದರೆ ಹೇಗೋ ಹಾಗೆ ಕ್ಷೋಭೆಗೊಂಡಿತು. ಅವುಗಳ ಹೇಷಾವರ ಶಬ್ಧದಿಂದ ಬೇರೆ ಏನೂ ಕೇಳುತ್ತಿರಲಿಲ್ಲ. ಆಗ ರಾಜ ಯುಧಿಷ್ಠಿರ ಮತ್ತು ಮಾದ್ರೀಪುತ್ರ ಪಾಂಡವರಿಬ್ಬರೂ ವೇಗವಾಗಿ ಬಂದ ಅಶ್ವಾರೋಹಿಗಳನ್ನು ಮಳೆಗಾಲದ ಹುಣ್ಣಿಮೆಯಲ್ಲಿ ಉಕ್ಕಿ ಮೇಲೆ ಬರುವ ಮಹಾಸಾಗರವನ್ನು ದಡಗಳು ಹೇಗೋ ಹಾಗೆ ಬೇಗನೇ ತಡೆದರು. ಆಗ ಆ ರಥಿಗಳು ಸನ್ನತಪರ್ವ ಶರಗಳಿಂದ ಅಶ್ವಾರೋಹಿಗಳ ಶಿರಗಳನ್ನು ದೇಹದಿಂದ ಕತ್ತರಿಸಿದರು. ದೃಢಧನ್ವಿಗಳಿಂದ ನಿಹತರಾದ ಅವರು ಮಹಾಗಜದಿಂದ ನೂಕಲ್ಪಟ್ಟು ಗಿರಿಗುಹ್ವರದಲ್ಲಿ ಬೀಳುವ ಆನೆಗಳಂತೆ ಬಿದ್ದರು. ಅವರು ಪ್ರಾಸಗಳಿಂದ ಮತ್ತು ನಿಶಿತ ಸನ್ನತಪರ್ವ ಶರಗಳಿಂದ ಶಿರಗಳನ್ನು ಕತ್ತರಿಸುತ್ತಾ ಹತ್ತೂ ದಿಕ್ಕುಗಳಲ್ಲಿ ಸಂಚರಿಸಿದರು. ಹೀಗೆ ಋಷ್ಟಿ ಮತ್ತು ಖಡ್ಗಗಳಿಂದ

ಹೊಡೆಯಲ್ಪಟ್ಟ ಆ ಅಶ್ವಾರೋಹಿಗಳ ಶಿರಗಳು ದೊಡ್ಡ ಮರದಿಂದ ಹಣ್ಣುಗಳು ಉದುರುವಂತೆ ಉದುರಿ ಬಿದ್ದವು. ಅಲ್ಲಿ ನೂರಾರು ಸಹಸ್ರಾರು ಸವಾರರು ಸಂಹರಿಸಲ್ಪಟ್ಟು ಕುದುರೆಗಳ ಮೇಲಿನಿಂದ ಬಿದ್ದಿದ್ದರು ಮತ್ತು ಬೀಳುತ್ತಿದ್ದರು. ವಧಿಸಲ್ಪಡುತ್ತಿರುವ ಕುದುರೆಗಳು ಸಿಂಹವನ್ನು ಕಂಡ ಜಿಂಕೆಗಳು ಪ್ರಾಣಗಳನ್ನು ಉಳಿಸುಕೊಳ್ಳಲು ಓಡಿಹೋಗುವಂತೆ ಭಯಾರ್ದಿತರಾಗಿ ಓಡಿಹೋಗುತ್ತಿದ್ದವು.

ಪಾಂಡವರಾದರೋ ಶತ್ರುಗಳನ್ನು ಗೆದ್ದು ಶಂಖಗಳನ್ನು ಮೊಳಗಿಸಿ ಭೇರಿಗಳನ್ನು ಬಾರಿಸಿದರು. ಆಗ ತನ್ನ ಸೈನ್ಯವು ನಾಶವಾದುದನ್ನು ನೋಡಿ ದುರ್ಯೋಧನನು ದೀನನಾಗಿ ಮದ್ರರಾಜನಿಗೆ ಈ ಮಾತನ್ನಾಡಿದನು:

> “ಸೋದರಮಾವ! ಈ ಜ್ಯೇಷ್ಠ ಪಾಂಡುಸುತನು ನನ್ನವರನ್ನು ಗೆದ್ದು ನೀನು ನೋಡುತ್ತಿರುವಂತೆಯೇ ಸೇನೆಗಳನ್ನು ಓಡಿಸುತ್ತಿದ್ದಾನೆ. ನೀನು ಅವರನ್ನು ಸಮುದ್ರವನ್ನು ಭೂಮಿಯು ತಡೆಯುವಂತೆ ತಡೆದು ನಿಲ್ಲಿಸು. ನೀನು ಅಸಹ್ಯ ಬಲ ವಿಕ್ರಮನೆಂದು ಪ್ರಸಿದ್ಧನಾಗಿದ್ದೀಯೆ.”

ದುರ್ಯೋಧನನ ಆ ಮಾತನ್ನು ಕೇಳಿ ಪ್ರತಾಪವಾನ್ ಶಲ್ಯನು ರಥಸಮೂಹಗಳೊಂದಿಗೆ ರಾಜಾ ಯುಧಿಷ್ಠಿರನಿದ್ದಲ್ಲಿಗೆ ಹೊರಟನು. ಸಮರದಲ್ಲಿ ತನ್ನ ಮೇಲೆ ಒಮ್ಮಿಂದೊಮ್ಮೆಲೇ ಬಂದು ಎರಗಿದ ಮಹಾವೇಗವುಳ್ಳ ಶಲ್ಯನ ಮಹಾಸೇನೆಯನ್ನು ಪಾಂಡವನು ತಡೆದನು.

ತಕ್ಷಣವೇ ಮಹಾರಥ ಧರ್ಮರಾಜನು ಮದ್ರರಾಜನ ಎದೆಗೆ ಹತ್ತು ಸಾಯಕಗಳನ್ನು ಮತ್ತು ನಕುಲ ಸಹದೇವರು ಮೂರು ಮೂರು ಜಿಹ್ಮಗಗಳಿಂದ ಹೊಡೆದರು. ಮದ್ರರಾಜನೂ ಕೂಡ ಅವರೆಲ್ಲರನ್ನು ಮೂರು ಮೂರು ಬಾಣಗಳಿಂದ ಹೊಡೆದನು. ಪುನಃ ಯುಧಿಷ್ಠಿರನನ್ನು ಅರವತ್ತು ನಿಶಿತ ಬಾಣಗಳಿಂದ ಹೊಡೆದನು. ಸಂರಬ್ಧರಾಗಿ ಮಾದ್ರೀಪುತ್ರರಿಬ್ಬರನ್ನು ಎರೆಡೆರಡು ಬಾಣಗಳಿಂದ ಹೊಡೆದನು. ಆಗ ಮಹಾಬಾಹು ಭೀಮನು ರಾಜನು ಮೃತ್ಯುವಿನ ಬಾಯಿಯ ಬಳಿಯಂತೆ ಮದ್ರರಾಜನ ವಶದಲ್ಲಿದ್ದುದನ್ನು ನೋಡಿ ಅಮಿತ್ರಜಿತು ಯುಧಿಷ್ಠಿರನ ಬಳಿ ಧಾವಿಸಿ ಬಂದನು. ಸೂರ್ಯನು ಇಳಿಮುಖದಲ್ಲಿ ಬೆಳಗುತ್ತಿರುವಾಗ ಸುದಾರುಣವಾದ ಮಹಾಘೋರ ಯುದ್ಧವು ನಡೆಯಿತು.

## ಒಂಭತ್ತನೇ ದಿನದ ಯುದ್ಧ ಸಮಾಪ್ತಿ

ಆಗ ಭೀಷ್ಮನು ಕ್ರುದ್ಧನಾಗಿ ನಿಶಿತ ಉತ್ತಮ ಸಾಯಕಗಳಿಂದ ರಣದಲ್ಲಿ ಸೇನೆಗಳೊಂದಿಗೆ ಎಲ್ಲೆಡೆಯಿಂದಲೂ ಪಾರ್ಥರನ್ನು ಹೊಡೆದನು. ಭೀಮನನ್ನು ಹನ್ನೆರಡರಿಂದ ಹೊಡೆದು ಸಾತ್ಯಕಿಯನ್ನು ಒಂಭತ್ತು ಶರಗಳಿಂದ, ಮತ್ತು ನಕುಲನನ್ನು ಮೂರು ಬಾಣಗಳಿಂದ, ಸಹದೇವನನ್ನು ಏಳರಿಂದ, ಮತ್ತು ಯುಧಿಷ್ಠಿರನನ್ನು ತೋಳು-ತೊಡೆಗಳಲ್ಲಿ ಹನ್ನೆರಡು ಬಾಣಗಳಿಂದ ಹೊಡೆದನು. ನಂತರ ಧೃಷ್ಟದ್ಯುಮ್ನನನ್ನು ಹೊಡೆದು ಆ ಮಹಾಬಲನು ಜೋರಾಗಿ ಕೂಗಿದನು. ಅದಕ್ಕೆ ಪ್ರತಿಯಾಗಿ ಪಿತಾಮಹನನ್ನು ನಕುಲನು ಹನ್ನೆರಡು ಶರಗಳಿಂದ, ಮಾಧವನು ಮೂರರಿಂದ, ಧೃಷ್ಟದ್ಯುಮ್ನನು ಏಳರಿಂದ,

ಭೀಮಸೇನನು ಐದರಿಂದ ಮತ್ತು ಯುಧಿಷ್ಠಿರನು ಹನ್ನೆರಡರಿಂದ ಹೊಡೆದರು. ದ್ರೋಣನಾದರೋ ಸಾತ್ಯಕಿಯನ್ನು ಹೊಡೆದು ಭೀಮಸೇನನನ್ನು ಹೊಡೆದನು. ಒಬ್ಬೊಬ್ಬರನ್ನೂ ಯಮದಂಡದಂತಿರುವ ನಿಶಿತ ಐದೈದು ಬಾಣಗಳಿಂದ ಹೊಡೆದನು. ಮಾವಟಿಗನು ಮಹಾಗಜವನ್ನು ಅಂಕುಶದಿಂದ ತಿವಿಯುವಂತೆ ಬ್ರಾಹ್ಮಣಪುಂಗವ ದ್ರೋಣನನ್ನು ಅವರಿಬ್ಬರೂ ಮೂರು ನೇರ ಹೋಗುವ ಬಾಣಗಳಿಂದ ತಿರುಗಿ ಹೊಡೆದರು. ಸೌವೀರರು, ಕಿತವರು, ಪೂರ್ವದೇಶೀಯರು, ಪಶ್ಚಿಮ ದೇಶೀಯರು, ಉತ್ತರ ದೇಶೀಯರು, ಮಾಲವರು, ಅಭೀಷಾಹರು, ಶೂರಸೇನರು, ಶಿಬಿಗಳು ಮತ್ತು ವಸಾತಿಗಳು - ಇವರೆಲ್ಲರು ಸಂಗ್ರಾಮದಲ್ಲಿ ನಿಶಿತ ಶರಗಳಿಂದ ಪ್ರಹರಿತರಾದರೂ ಭೀಷ್ಮನನ್ನು ಬಿಟ್ಟು ಹೋಗಲಿಲ್ಲ. ಹೀಗೆ ವಿವಿಧಾಯುಧಗಳನ್ನು ಹಿಡಿದು ಪಾಂಡವರನ್ನು ಹೋರಾಡುತ್ತಿದ್ದ ಅನ್ಯರೂ ಕೂಡ ಮಹಾತ್ಮ ಪಾಂಡವೇಯರಿಂದ ವಧಿಸಲ್ಪಡುತ್ತಿದ್ದರು. ಹಾಗೆಯೇ ಪಾಂಡವರು ಪಿತಾಮಹನನ್ನು ಸುತ್ತುವರೆದರು. ಎಲ್ಲಕಡೆಗಳಿಂದ ರಥಗಳ ಗುಂಪುಗಳಿಂದ ಸುತ್ತುವರೆಯಲ್ಪಟ್ಟ ಆ ಅಪರಾಜಿತನಾದರೋ ಗಹನ ಅರಣ್ಯದಲ್ಲಿ ಹಬ್ಬಿದ ಬೆಂಕಿಯಂತೆ ಶತ್ರುಗಳನ್ನು ಸುಡುತ್ತಾ ಪ್ರಜ್ವಲಿಸಿದನು. ಭೀಷ್ಮನ ರಥವೇ ಅಗ್ನಿಗಾರವಾಗಿತ್ತು. ಧನುಸ್ಸೇ ಜ್ವಾಲೆಯಾಗಿತ್ತು. ಖಡ್ಗ, ಶಕ್ತಿ ಮತ್ತು ಗದೆಗಳೇ ಇಂಧನಗಳಾಗಿದ್ದವು. ಶರಗಳು ಕಿಡಿಗಳಂತಿದ್ದವು. ಹೀಗೆ ಅವನು ಕ್ಷತ್ರಿಯರ್ಷಭರನ್ನು ಸುಟ್ಟು ಭಸ್ಮಮಾಡಿದನು.

ಸುವರ್ಣಭೂಷಿತವದ, ಹದ್ದಿನ ರೆಕ್ಕೆಗಳಿಂದ ಕೂಡಿದ, ನಿಶಿತ ಬಾಣಗಳಿಂದಲೂ, ಕರ್ಣಿ-ನಾಲೀಕ-ನಾರಾಚಗಳಿಂದನು ಆ ಸೇನೆಯನ್ನು ಮುಚ್ಚಿಬಿಟ್ಟನು. ನಿಶಿತ ಶರಗಳಿಂದ ಧ್ವಜಗಳನ್ನು ಮತ್ತು ರಥಿಗಳನ್ನು ಉರುಳಿಸಿದನು. ರಥ ಸೇನೆಯನ್ನು ತಲೆಯಿಲ್ಲದ ತಾಲದ ಮರದಂತೆ ಮಾಡಿದನು. ಆ ಸರ್ವಶಸ್ತ್ರಭೃತರಲ್ಲಿ ಶ್ರೇಷ್ಠ ಮಹಾಬಾಹುವು ಸಂಯುಗದಲ್ಲಿ  ರಥ-ಆನೆ-ಕುದುರೆಗಳನ್ನು ನಿರ್ಮನುಷ್ಯರನ್ನಾಗಿ ಮಾಡಿದನು. ಸಿಡಿಲಿನ ಗರ್ಜನೆಯಂತೆ ಕೇಳಿ ಬರುತ್ತಿದ್ದ ಅವನ ಬಿಲ್ಲಿನ ಟೇಂಕಾರಶಬ್ಧವನ್ನು ಕೇಳಿ ಸರ್ವಪ್ರಾಣಿಗಳೂ ನಡುಗಿದವು. ಭೀಷ್ಮನು ಪ್ರಯೋಗಿಸುತ್ತಿದ್ದ ಬಾಣಗಳು ಒಮ್ಮೆಯೂ ವ್ಯರ್ಥವಾಗುತ್ತಿರಲಿಲ್ಲ. ಭೀಷ್ಮನಿಂದ ಹೊರಟ ಬಾಣಗಳು ಅವರ ದೇಹವನ್ನು ಭೇದಿಸಿ ಹೊರಬರುತ್ತಿದ್ದವು. ವೀರರನ್ನು ಕಳೆದುಕೊಂಡು ರಥಗಳನ್ನು ಕುದುರೆಗಳು ಮಾತ್ರ ಎಳೆದುಕೊಂಡು ರಣರಂಗದಲ್ಲಿ ಓಡಿಹೋಗುತ್ತಿರುವುದು ಕಾಣುತ್ತಿತ್ತು. ಹದಿನಾಲ್ಕು ಸಾವಿರ ಸತ್ಕುಲ ಪ್ರಸೂತ, ಪ್ರಾಣವನ್ನೇ ಮುಡುಪಾಗಿಟ್ಟಿರುವ, ವಿಖ್ಯಾತರಾದ, ಯುದ್ಧದಲ್ಲಿ ಹಿಮ್ಮೆಟ್ಟದೇ ಇರುವ, ಸುವರ್ಣಭೂಷಿತ ಧ್ವಜವುಳ್ಳ ಚೇದಿ-ಕಾಶಿ-ಕರೂಷ ಮಹಾರಥರು ಬಾಯಿಕಳೆದ ಅಂತಕನಂತಿರುವ ಭೀಷ್ಮನೊಡನೆ ಯುದ್ಧಮಾಡಿ ಕುದುರೆ-ರಥ-ಆನೆಗಳೊಂದಿಗೆ ನಾಶರಾಗಿ ಪರಲೋಕವನ್ನು ಸೇರಿದರು. ಅಲ್ಲಿ ಭಗ್ನವಾಗಿದ್ದ ಧುರಿಗಳುಳ್ಳ, ಸಲಕರಣೆಗಳು ಹೊರಬಿದ್ದಿದ್ದ, ಗಾಲಿಗಳು ಮುರಿದಿದ್ದ ನೂರಾರು ಸಹಸ್ರಾರು ರಥಗಳು ಎಲ್ಲ ಕಡೆ ಕಾಣುತ್ತಿದ್ದವು.

ನೊಗಗಳು ತುಂಡಾಗಿದ್ದ ರಥಗಳಿಂದ, ಕೆಳಗೆ ಬಿದ್ದ ರಥಿಗಳಿಂದ, ಬಾಣಗಳು, ಒಡೆದ ಕವಚಗಳಿಂದ, ಪಟ್ಟಿಶಗಳಿಂದ, ಗದೆ-ಮುಸಲಗಳಿಂದ, ನಿಶಿತ ಶಿಲೀಮುಖಗಳಿಂದಲೂ, ರಥದ ತೋಳುಮರಗಳಿಂದಲೂ, ಮುರಿದಿದ್ದ ಚಕ್ರಗಳಿಂದಲೂ, ಕೈಗಳಿಂದಲೂ, ಬಿಲ್ಲುಗಳಿಂದಲೂ, ಖಡ್ಗಗಳಿಂದಲೂ, ಕುಂಡಲಗಳಿದ್ದ ತಲೆಗಳಿಂದ, ಕೈಚೀಲಗಳಿಂದ, ಬೆರಳಿಗೆ ಹಾಕಿಕೊಳ್ಳುವ ಚರ್ಮದ ಸಾಧನಗಳಿಂದ, ಕೆಳಕ್ಕೆ ಬಿದ್ದ ಧ್ವಜಗಳಿಂದ, ಅನೇಕ ತುಂಡುಗಳಾಗಿದ್ದ ಚಪಗಳಿಂದ ರಣಭೂಮಿಯು ತುಂಬಿಹೋಗಿತ್ತು. ಏರಿದ್ದವರನ್ನು ಕಳೆದುಕೊಂಡ ಆನೆಗಳು, ಸವಾರರನ್ನು ಕಳೆದುಕೊಂಡ ಕುದುರೆಗಳು ನೂರಾರು ಸಹಸ್ರಾರು ಸಂಖ್ಯೆಗಳಲ್ಲಿ ಅಲ್ಲಿ ಸತ್ತು ಬಿದ್ದಿದ್ದವು. ಓಡುತ್ತಿರುವ ಮಹಾರಥರನ್ನು ತಡೆಯಲು ಅವರ ವೀರರು ಎಷ್ಟೇ ಪ್ರಯತ್ನಿಸಿದರೂ ಭೀಷ್ಮನ ಬಾಣಗಳಿಂದ ಪೀಡಿತರಾದ ಅವರನ್ನು ನಿಲ್ಲಿಸಲು ಅವರಿಗೆ ಸಾಧ್ಯವಾಗಲಿಲ್ಲ. ಮಹೇಂದ್ರನಿಗೆ ಸಮನಾದ ವೀರ್ಯದಿಂದ ವಧಿಸಲ್ಪಟ್ಟಿದ್ದ ಮಹಾಸೇನೆಯು ಸಂಪೂರ್ಣವಾಗಿ ನಾಶವಾಯಿತು. ಇಬ್ಬರು ಒಟ್ಟಾಗಿ ಓಡಿ ಹೋಗಲು ಸಾಧ್ಯವಾಗುತ್ತಿರಲಿಲ್ಲ. ಹಾಹಾಕಾರ ಮಾಡಿಕೊಂಡು ಚೇತನವನ್ನೇ ಕಳೆದುಕೊಂಡ ಪಾಂಡುಪುತ್ರರ ಸೇನೆಯ ರಥ-ಆನೆ-ಕುದುರೆಗಳನ್ನು ಹೊಡೆದನು ಮತ್ತು ಧ್ವಜ ದಂಡಗಳನ್ನು ಉರುಳಿಸಿದನು. ದೈವಬಲದಿಂದಲೇ ಪ್ರೇರಿತರಾಗಿ ಅಲ್ಲಿ ತಂದೆಯಂದಿರು ಮಕ್ಕಳನ್ನೂ, ಹಾಗೆಯೇ ಮಕ್ಕಳು ತಂದೆಯರನ್ನೂ, ಗೆಳೆಯರು ಗೆಳೆಯರನ್ನೂ ಕರೆದು ಕೊಲ್ಲುತ್ತಿದ್ದರು. ಪಾಂಡುಪುತ್ರನ

ಕೆಲವು ಸೈನಿಕರು ಕವಚಗಳನ್ನು ಕಳಚಿ, ಕೂದಲು ಬಿಚ್ಚಿ ಹರಡಿಕೊಂಡು ಓಡಿ ಹೋಗುತ್ತಿರುವುದು ಕಂಡುಬಂದಿತು. ಹುಲಿಯನ್ನು ಕಂಡ ಗೋವುಗಳ ಸಮೂಹದಂತೆ ಭ್ರಾಂತವಾಗಿದ್ದ, ತಲೆಕೆಳಗಾದ ಮೂಕಿಗಳ ರಥಗಳಿಂದ ಕೂಡಿದ್ದ ಪಾಂಡುಪುತ್ರನ ಸೈನ್ಯವು ಆರ್ತಸ್ವರದಿಂದ ಕೂಗುತ್ತಿದ್ದುದು ಕಂಡುಬಂದಿತು. ಪುಡಿಪುಡಿಯಾದ ಆ ಸೈನ್ಯವನ್ನು ನೋಡಿ ಯಾದವನಂದನನು ಉತ್ತಮ ರಥವನ್ನು ನಿಲ್ಲಿಸಿ ಪಾರ್ಥ ಬೀಭತ್ಸುವಿಗೆ ನುಡಿದನು:

> "ಪಾರ್ಥ ! ಯಾವ ಸಮಯವನ್ನು ನಾವೆಲ್ಲ ಬಯಸಿ ನಿರೀಕ್ಷಿಸಿದ್ದೆವೋ ಆ ಸಮಯವು ಬಂದೊದಗಿದೆ. ನೀನೀಗ ವ್ಯಾಮೋಹದಿಂದ ಮೋಹಿತನಾಗಿರದೇ ಇದ್ದರೆ ಈಗಲೇ ಭೀಷ್ಮನನ್ನು ಪ್ರಹರಿಸು. ಹಿಂದೆ ವಿರಾಟನಗರದಲ್ಲಿ ರಾಜರ ಸಮಾಗಮದಲ್ಲಿ ಸಂಜಯನಿರುವಾಗ "ಭೀಷ್ಮ-ದ್ರೋಣ ಪ್ರಮುಖರಾದ ಧಾರ್ತರಾಷ್ಟ್ರನ ಸೈನಿಕರೆಲ್ಲರನ್ನೂ, ಅವರ ಅನುಯಾಯಿಗಳೊಂದಿಗೆ ಯಾರು ನನ್ನೊಂದಿಗೆ ಸಂಯುಗದಲ್ಲಿ ಯುದ್ಧಮಾಡುತ್ತಾರೋ ಅವರನ್ನು ಸಂಹರಿಸುತ್ತೇನೆ" ಎಂದು ಏನನ್ನು ನೀನು ಹೇಳಿದ್ದೆಯೋ ಆ ವಾಕ್ಯವನ್ನು ಸತ್ಯವನ್ನಾಗಿಸು. ಕ್ಷತ್ರಧರ್ಮವನ್ನು ನೆನಪಿಸಿಕೊಂಡು ಅದರಂತೆ ಯುದ್ಧಮಾಡು !"

ವಾಸುದೇವನು ಹೀಗೆ ಹೇಳಲು ಮುಖವನ್ನು ಕೆಳಗೆ ಮಾಡಿಕೊಂಡು

ಓರೆನೋಟದಿಂದ ಇಚ್ಛೆಯೇ ಇಲ್ಲದವನಂತೆ ಬೀಭತ್ಸುವು ಈ ಮಾತನ್ನಾಡಿದನು:

> “ಅವಧ್ಯರನ್ನು ವಧೆಮಾಡಿ ನರಕಕ್ಕಿಂತಲೂ ನಿಂದ್ಯವಾದ ರಾಜ್ಯವು ಉತ್ತಮವೇ? ವನವಾಸದಲ್ಲಿದ್ದು ದುಃಖವನ್ನು ಅನುಭವಿಸುವುದು ಒಳ್ಳೆಯದೇ? ಭೀಷ್ಮನೆಲ್ಲಿರುವನೋ ಅಲ್ಲಿಗೆ ಕುದುರೆಗಳನ್ನು ಓಡಿಸು. ನಿನ್ನ ಮಾತಿನಂತೆಯೇ ಮಾಡುತ್ತೇನೆ. ವೃದ್ಧ ಕುರುಪಿತಾಮಹ ದುರ್ಧರ್ಷನನ್ನು ಕೆಡವುತ್ತೇನೆ.”

ಆಗ ಮಾಧವನು ಸೂರ್ಯನಂತೆ ನೋಡಲೂ ಕಷ್ಟನಾಗಿದ್ದ ಭೀಷ್ಮನು ಎಲ್ಲಿದ್ದನೋ ಅಲ್ಲಿಗೆ ಆ ಬೆಳ್ಳಿಯ ಬಣ್ಣದ ಕುದುರೆಗಳನ್ನು ಓಡಿಸಿದನು. ಮಹಾಬಾಹು ಪಾರ್ಥನು ಭೀಷ್ಮನನ್ನು ರಣದಲ್ಲಿ ಎದುರಿಸಿ ಬರಲು ಯುಧಿಷ್ಠಿರನ ಮಹಾಸೇನೆಯು ಹಿಂದಿರುಗಿತು. ಆಗ ಕುರುಶ್ರೇಷ್ಠ ಭೀಷ್ಮನು ಸಿಂಹದಂತೆ ಪದೇ ಪದೇ ಗರ್ಜಿಸುತ್ತಾ ಶೀಘ್ರದಲ್ಲಿಯೇ ಧನಂಜಯನ ರಥವನ್ನು ಬಾಣಗಳ ಮಳೆಯಿಂದ ಮುಚ್ಚಿದನು.

ಕ್ಷಣದಲ್ಲಿಯೇ ಆ ಶರವರ್ಷದಿಂದಾಗಿ ಮಹಾ ರಥವಾಗಲೀ, ಸಾರಥಿಯಾಗಲೀ ರಥದಲ್ಲಿದ್ದವನಾಗಲೀ ಕಾಣಲೇ ಇಲ್ಲ. ಸಾತ್ವತ ವಾಸುದೇವನೂ ಸ್ವಲ್ಪವೂ ಭ್ರಾಂತನಾಗದೇ ಧೈರ್ಯವನ್ನು ತಾಳಿ ಭೀಷ್ಮನ ಸಾಯಕಗಳಿಂದ ತತ್ತರಿಸಿದ ಆ ಕುದುರೆಗಳನ್ನು ಪ್ರಚೋದಿಸಿದನು. ಆಗ ಪಾರ್ಥನು ಮೇಘಕ್ಕೆ ಸಮನಾದ ಧ್ವನಿಯುಳ್ಳ ದಿವ್ಯ ಧನುಸ್ಸನ್ನು ಹಿಡಿದು ನಿಶಿತ ಬಾಣಗಳಿಂದ ಭೀಷ್ಮನ ಧನುಸ್ಸನ್ನು

ಕತ್ತರಿಸಿ ಬೀಳಿಸಿದನು. ಧನುಸ್ಸು ತುಂಡಾಗಲು ಕೌರವ್ಯ ಭೀಷ್ಮನು ಪುನಃ ಇನ್ನೊಂದು ಮಹಾಧನುಸ್ಸನ್ನು ತೆಗೆದುಕೊಂಡು ನಿಮಿಷಮಾತ್ರದಲ್ಲಿ ಶಿಂಜಿನಿಯನ್ನು ಬಿಗಿದು ಸಜ್ಜು ಗೊಳಿಸಿದನು. ಆಗ ಮೇಘಕ್ಕೆ ಸಮನಾದ ಧ್ವನಿಯುಳ್ಳ ಆ ಧನುಸ್ಸನ್ನು ಎರಡೂ ಕೈಗಳಿಂದ ಸೆಳೆಯಲು ಆ ಧನುಸ್ಸನ್ನೂ ಕೂಡ ಅರ್ಜುನನು ಕ್ರುದ್ಧನಾಗಿ ತುಂಡರಿಸಿದನು. ಅವನ ಆ ಲಾಘವವನ್ನು ಶಂತನುವಿನ ಮಗನು “ಸಾಧು ಪಾರ್ಥ ಮಹಾಬಾಹೋ! ಸಾಧು ಕುಂತೀಸುತ!” ಎಂದು ಗೌರವಿಸಿದನು. ಹೀಗೆ ಹೇಳಿ ಇನ್ನೊಂದು ಸುಂದರ ಧನುಸ್ಸನ್ನು ತೆಗೆದುಕೊಂಡು ಭೀಷ್ಮನು ಪಾರ್ಥನ ರಥದ ಮೇಲೆ ಶರಗಳನ್ನು ಪ್ರಯೋಗಿಸಿದನು. ವಾಸುದೇವನು ಅನೇಕ ವಿಧದ ಮಂಡಲಕ್ರಮಗಳಲ್ಲಿ ಕುದುರೆಗಳನ್ನು ತಿರುಗಿಸಿ ಅವನ ಶರಗಳನ್ನು ವ್ಯರ್ಥಗೊಳಿಸಿ ಕುದುರೆ ಓಡಿಸುವುದರಲ್ಲಿ ತನಗಿದ್ದ ಅತ್ಯಂತ ಶಕ್ತಿಯನ್ನು ಪ್ರದರ್ಶಿಸಿದನು. ಎದುರಾದ ಗೂಳಿಯ ಕೊಂಬುಗಳ ತಿವಿತದಿಂದ ಗಾಯಗೊಂಡು ರೋಷಗೊಂಡ ಎರಡು ಎತ್ತುಗಳಂತೆ ಬಾಣಗಳಿಂದ ಗಾಯಗೊಂಡ ಭೀಷ್ಮ-ಪಾರ್ಥ ನರವ್ಯಾಘ್ರರಿಬ್ಬರೂ ಶೋಭಿಸಿದರು.

ಪಾರ್ಥನು ಮೃದುವಾಗಿ ಯುದ್ಧ ಮಾಡುತ್ತಿರುವುದನ್ನೂ, ಯುದ್ಧದಲ್ಲಿ ನಿಲುಗಡೆಯಿಲ್ಲದೇ ಬಾಣಗಳ ಮಳೆಯನ್ನು ಸುರಿಸುತ್ತಿರುವ ಭೀಷ್ಮನನ್ನೂ, ಎರಡೂ ಸೇನೆಗಳ ಮಧ್ಯೆ ಸುಡುತ್ತಿರುವ ಆದಿತ್ಯನಂತೆ ಪಾಂಡುಪುತ್ರರ ಸೈನಿಕರನ್ನು ಆಯ್ದು ಆಯ್ದು ಸಂಹರಿಸತ್ತಿದ್ದ,



ಯುಧಿಷ್ಠಿರನ ಸೇನೆಯನ್ನು ಯುಗಾಂತನಂತೆ ಮಾಡುತ್ತಿದ್ದ ಭೀಷ್ಮನನ್ನು ನೋಡಿ ಮಹಾಬಾಹು, ಮಾಧವ, ಪರವೀರಹ ವಾಸುದೇವನು ಸಹಿಸಲಾರದೇ ಹೋದನು. ಆಗ ಪಾರ್ಥನ ಬೆಳ್ಳಿಯ ಬಣ್ಣದ ಕುದುರೆಗಳ ಕಡಿವಾಣಗಳನ್ನು ಬಿಸುಟು ಕ್ರುದ್ಧನಾದ ಆ ಮಹಾಯೋಗಿಯು ಮಹಾರಥದಿಂದ ದುಮುಕಿದನು. ಭುಜಗಳನ್ನೇ ಆಯುಧಗಳನ್ನಾಗಿರಿಸಿಕೊಂಡ ಆ ಬಲಶಾಲಿಯು ಚಾವಟಿಯನ್ನೇ ಕೈಯಲ್ಲಿ ಹಿಡಿದು ಪುನಃ ಪುನಃ ಸಿಂಹನಾದ ಗೈಯುತ್ತಾ, ಹೆಜ್ಜೆಗಳಿಂದ ಜಗತ್ತನ್ನೇ ಸೀಳಿ ಬಿಡುವಂತೆ ಆ ಜಗತೀಶ್ವರನು, ಕ್ರೋಧದಿಂದ ಕಣ್ಣುಗಳನ್ನು ಕೆಂಪುಮಾಡಿಕೊಂಡ ಆ ಕೃಷ್ಣನು, ಮಹಾಹವದಲ್ಲಿ

ಕೌರವರ ಚೇತನಗಳನ್ನು ಸೆಳೆದುಕೊಳ್ಳುವನೋ ಎನ್ನುವಂತಿರುವ ಆ ಅಮಿತದ್ಯುತಿಯು ಕೊಲ್ಲಬೇಕೆಂದು ಭೀಷ್ಮನ ಕಡೆಗೆ ಓಡಿದನು, ಗರ್ಜಿಸುತ್ತಾ ಭೀಷ್ಮನ ಕಡೆ ಬರುತ್ತಿದ್ದ ಮಾಧವನನ್ನು ನೋಡಿ

> "ಆಹವದಲ್ಲಿ ಭೀಷ್ಮನು ಹತನಾದನು! ಭೀಷ್ಮನು ಹತನಾದನು!"

ಎಂದು ಅಲ್ಲಿದ್ದ ಸೈನಿಕರು ಕೂಗಿಕೊಂಡು ಎಲ್ಲರೂ ವಾಸುದೇವನ ಭಯದಿಂದ ಓಡಿಹೋದರು. ಪೀತಕೌಶೇಯಗಳನ್ನು ಧರಿಸಿದ್ದ ಮಣಿಶ್ಯಾಮ ಜನಾರ್ದನನು ಭೀಷ್ಮನೆಡೆಗೆ ಓಡಿ ಬರುವಾಗ ಮಿಂಚಿನ ಮಾಲೆಯನ್ನು ಧರಿಸಿದ್ದ ಕಪ್ಪು ಮೋಡದಂತೆ ಶೋಭಿಸಿದನು. ಸಿಂಹವು ಮದಗಜವನ್ನು ಅಟ್ಟಿಸಿಕೊಂಡು ಹೋಗುವಂತೆ, ಪಡೆಯಾದ ಹೋರಿಯು ಗೂಳಿಯನ್ನು ಅಟ್ಟಿಸಿಕೊಂಡು ಹೋಗುವಂತೆ ಆ ತೇಜಸ್ವಿ ಯಾದವರ್ಷಭನು ಗರ್ಜಿಸುತ್ತಾ ಓಡಿ ಬಂದನು. ಆಹವದಲ್ಲಿ ತನ್ನ ಕಡೆ ಧಾವಿಸಿ ಬರುತ್ತಿದ್ದ ಪುಂಡರೀಕಾಕ್ಷನನ್ನು ನೋಡಿ ರಣದಲ್ಲಿ ಭೀಷ್ಮನು ಗಾಬರಿ ಗೊಳ್ಳಲಿಲ್ಲ. ಮಹಾಧನುಸ್ಸನ್ನು ಸೆಳೆದು ಭ್ರಾಂತಿಗೊಂಡಿರದ ಚೇತಸ್ಸಿನಿಂದ ಗೋವಿಂದನಿಗೆ ಇದನ್ನು ನುಡಿದನು:

> "ಬಾ! ಬಾ! ಪುಂಡರೀಕಾಕ್ಷ! ದೇವದೇವ! ನಿನಗೆ ವಂದನೆಗಳು. ಸಾತ್ವತಶ್ರೇಷ್ಠ! ಇಂದು ಈ ಮಹಾಹವದಲ್ಲಿ ನನ್ನನ್ನು ಸಂಹರಿಸು! ದೇವ! ಅನಘ! ನಿನ್ನಿಂದ ನಾನು ಸಂಗ್ರಾಮದಲ್ಲಿ ಹತನಾದರೂ ನನಗೆ ಲೋಕದಲ್ಲಿ ಪರಮ

ಕಲ್ಯಾಣವೇ ದೊರೆಯುತ್ತದೆ. ಗೋವಿಂದ! ಇಂದು ನಾನು ಸಂಯುಗಲ್ಲಿ ಮೂರು ಲೋಕಗಳಲ್ಲಿಯೂ ಸಂಭಾವಿತನಾಗಿದ್ದೇನೆ.”

ಅವನ ಹಿಂದೆ ಓಡಿ ಬರುತ್ತಿದ್ದ ಮಹಾಬಾಹು ಪಾರ್ಥನು ಕೇಶವನನ್ನು ಎರಡೂ ಕೈಗಳಿಂದ ಹಿಡಿದುಕೊಂಡನು. ಪಾರ್ಥನು ಹಿಡಿದುಕೊಂಡರೂ ಪುರುಷೋತ್ತಮ ರಾಜೀವಲೋಚನ ಕೃಷ್ಣನು ಅವನನ್ನೂ ಎಳೆದುಕೊಂಡು ವೇಗವಾಗಿ ಮುಂದಾದನು. ಪರವೀರಹ ಪಾರ್ಥನು ಬಲವಾಗಿ ಅವನ ಚರಣಗಳನ್ನು ಹಿಡಿದುಕೊಂಡರೂ ಹೃಷೀಕೇಶನು ಸುಮಾರು ಹತ್ತು ಹೆಜ್ಜೆಗಳಷ್ಟು ಹೋಗಿಬಿಟ್ಟಿದ್ದನು. ಆಗ ಪರವೀರಹ ಅರ್ಜುನನು ಆರ್ತನಾಗಿ, ಕಣ್ಣುಗಳು ಕ್ರೋಧದಿಂದ ಕೂಡಿದವನಾಗಿ, ನಾಗರ ಹಾವಿನಂತೆ ದೀರ್ಘ ನಿಟ್ಟುಸಿರು ಬಿಡುತ್ತಾ ಈ ಮಾತನ್ನಾಡಿದನು:

“ಮಹಾಬಾಹೋ! ಹಿಂದಿರುಗು! ಹಿಂದೆ ನೀನು ಯುದ್ಧ ಮಾಡುವುದಿಲ್ಲವೆಂದು ಏನು ಹೇಳಿದ್ದೆಯೋ ಅದನ್ನು ಸುಳ್ಳಾಗಿಸಬಾರದು. ನಿನ್ನನ್ನು ಜನರು ಸುಳ್ಳುಬುರುಕ ಎಂದು ಕರೆಯುತ್ತಾರೆ. ಯುದ್ಧಮಾಡುವ ಸಂಪೂರ್ಣ ಭಾರವೂ ನನ್ನದು. ಈ ಯತವ್ರತನನ್ನು ನಾನು ಸಂಹರಿಸುತ್ತೇನೆ. ಇದನ್ನು ನಾನು ಸಖ್ಯ, ಸತ್ಯ ಮತ್ತು ಸುಕೃತಗಳ ಮೇಲೆ ಆಣೆಯಿಟ್ಟು ಹೇಳುತ್ತಿದ್ದೇನೆ. ನಾನು ಎಲ್ಲ ಶತ್ರುಗಳನ್ನೂ ಕೊನೆಗಾಣಿಸುತ್ತೇನೆ.

ಪೂರ್ಣಚಂದ್ರನಂತಿರುವ ದುರ್ಧರ್ಷನಾದ ಮಹಾವ್ರತನನ್ನು ಇಂದೇ ಅವನ ಇಚ್ಛೆಯಂತೆಯೇ ಸಂಹಾರಮಾಡುವುದನ್ನು ನೀನು ಕಾಣುವೆ.”

ಮಹಾತ್ಮ ಮಾಧವನಾದರೋ ಫಲ್ಗುನನ ಮಾತನ್ನು ಕೇಳಿ ಏನನ್ನೂ ಹೇಳದೇ ಸಿಟ್ಟಿನಿಂದ ಪುನಃ ರಥವನ್ನೇರಿದನು. ಅವರಿಬ್ಬರೂ ನರವ್ಯಾಘ್ರರು ರಥದಲ್ಲಿ ಕುಳಿತುಕೊಳ್ಳಲು ಭೀಷ್ಮ ಶಾಂತನವನು ಪುನಃ ಅವರ ಮೇಲೆ ಮೋಡವು ಪರ್ವತದ ಮೇಲೆ ಸುರಿಸುವಂತೆ ಬಾಣಗಳ ಮಳೆಯನ್ನು ಸುರಿಸಿದನು. ಗಭಸ್ತಿ ಆದಿತ್ಯನು ಶಿಶಿರ ಋತುವಿನಲ್ಲಿ ತೇಜಸ್ಸುಗಳನ್ನು ಹೀರಿಕೊಳ್ಳುವಂತೆ ದೇವವ್ರತನು ಯೋಧರ ಪ್ರಾಣಗಳನ್ನು ತೆಗೆದುಕೊಂಡನು. ಯುದ್ಧದಲ್ಲಿ ಕುರುಗಳ ಸೇನೆಯನ್ನು ಪಾಂಡವ ಅರ್ಜುನನು ಹೇಗೆ ಸದೆಬಡಿದನೋ ಹಾಗೆ ಭೀಷ್ಮನೂ ಕೂಡ ಪಾಂಡವ ಸೇನೆಗಳನ್ನು ಯುದ್ಧದಲ್ಲಿ ಸದೆಬಡಿದನು. ಹತರಾಗಿ, ನಿರುತ್ಸಾಹರಾಗಿ, ವಿಚೇತಸರಾಗಿ ಸೇನೆಗಳು ರಣದಲ್ಲಿ ಮಧ್ಯಾಹ್ನದ ಸೂರ್ಯನಂತೆ ತನ್ನದೇ ತೇಜಸ್ಸಿನಿಂದ ಉರಿಯುತ್ತಿದ್ದ ಅಪ್ರತಿಮ ಭೀಷ್ಮನನ್ನು ನೋಡಲೂ ಶಕ್ಯರಾಗಲಿಲ್ಲ. ಭೀಷ್ಮನು ಯುಗಕ್ಷಯದಲ್ಲಿನ ಕಾಲನಂತೆ ಅವರನ್ನು ವಧಿಸುತ್ತಿದ್ದುದನ್ನು ನೋಡಿ ಪಾಂಡವರು ಭಯಪೀಡಿತರಾದರು. ಕೆಸರಿನಲ್ಲಿ ಸಿಲುಕಿಕೊಂಡಿದ್ದ ಗೋವುಗಳಂತೆ ತ್ರಾತಾರರನ್ನು ಕಾಣದೇ ಆ ಬಲಿಗಳು ರಣದಲ್ಲಿ ಪಿಪೀಲಿಕಗಳಂತೆ ದುರ್ಬಲರೂ ಕ್ಷುಣ್ಣರೂ ಆದರು. ಮಹಾರಥ, ದುಷ್ಪ್ರಧರ್ಷ, ಶರೌಘಗಳಿಂದ ನರೇಂದ್ರರನ್ನು ಸುಡುತ್ತಿದ್ದ, ಶರಗಳೇ ಕಿರಣಗಳಾಗಿರುವ

ಸೂರ್ಯನಂತೆ ಸುಡುತ್ತಿದ್ದ ಆ ಭೀಷ್ಮನನ್ನು ನೋಡಲಿಕ್ಕೂ ಸಾಧ್ಯವಾಗುತ್ತಿರಲಿಲ್ಲ. ಅವನು ಹೀಗೆ ಪಾಂಡುಸೇನೆಯನ್ನು ಮರ್ದಿಸುತ್ತಿರಲು ಸಹಸ್ರರಶ್ಮಿ ಸೂರ್ಯನು ಅಸ್ತನಾದನು. ಆಗ ಆಯಾಸಗೊಂಡಿರುವ ಸೇನೆಗಳಿಗೆ ಹಿಂದೆಸರಿಯುವ ಕುರಿತು ಮನಸ್ಸು ಮಾಡಿದರು.

## ಪಾಂಡವರು ಭೀಷ್ಮನ ವಧೋಪಾಯವನ್ನು ತಿಳಿದುಕೊಂಡಿದುದು

ಅವರಿನ್ನೂ ಯುದ್ಧಮಾಡುತ್ತಿರುವಾಗಲೇ ಭಾಸ್ಕರನು ಅಸ್ತಂಗತನಾಗಿ ಘೋರ ಸಂಜೆಯಾಯಿತು. ರಣದಲ್ಲಿ ಏನೂ ಕಾಣದಾಯಿತು. ಆಗ ರಾಜಾ ಯುಧಿಷ್ಠಿರನು ಸಂಜೆಯಾದುದನ್ನೂ, ಅಮಿತ್ರಘಾತಿ ಭೀಷ್ಮನು ಸೇನೆಯನ್ನು ಸಂಹರಿಸುತ್ತಿರುವುದನ್ನೂ, ಶಸ್ತ್ರಗಳನ್ನು ಬಿಸುಟು ಹಿಮ್ಮೆಟ್ಟಿ ಪಲಯನಮಾಡುತ್ತಿರುವವರನ್ನೂ, ಯುದ್ಧದಲ್ಲಿ ಕ್ರುದ್ಧನಾದ ಭೀಷ್ಮನು ಮಹಾರಥರನ್ನು ಸಂಹರಿಸುತ್ತಿರುವುದನ್ನೂ, ಸೋಮಕರೂ ಪರಾಜಿತರಾದುದನ್ನು, ಮಹಾರಥರ ನಿರುತ್ಸಾಹವನ್ನೂ ನೋಡಿ ತತ್ಕಾಲದಲ್ಲಿ ಸೇನೆಯನ್ನು ಹಿಂದೆತೆಗೆದುಕೊಳ್ಳುವುದೇ ಸೂಕ್ತವೆಂದು ಯೋಚಿಸಿದನು. ಆಗ ರಾಜಾ ಯುಧಿಷ್ಠಿರನು ತನ್ನ ಸೇನೆಗಳನ್ನು ಹಿಂದಕ್ಕೆ ಕರೆಸಿಕೊಂಡನು. ಹಾಗೆಯೇ ಕೌರವ ಸೇನೆಯೂ ಯುದ್ಧದಿಂದ ಹಿಂದೆ ಸರಿಯಿತು. ಅಲ್ಲಿ ಸೇನೆಗಳನ್ನು ಹಿಂದೆ ತೆಗೆದುಕೊಂಡು ಸಂಗ್ರಾಮದಲ್ಲಿ ಕ್ಷತ-ವಿಕ್ಷತರಾದ ಮಹಾರಥರು ಡೇರೆಗಳನ್ನು ಪ್ರವೇಶಿಸಿ ವಿಶ್ರಾಂತಿ

ಪಡೆದರು. ಭೀಷ್ಮನಿಂದ ತುಂಬಾ ಪೀಡಿತರಾದ ಪಾಂಡವರು ಸಮರದಲ್ಲಿ ಭೀಷ್ಮನ ಕರ್ಮಗಳ ಕುರಿತು ಯೋಚಿಸಿ ಶಾಂತಿಯನ್ನೇ ಪಡೆಯಲಿಲ್ಲ. ಭೀಷ್ಮನೂ ಕೂಡ ಸೃಂಜಯರೊಂದಿಗೆ ಪಾಂಡವರನ್ನು ಸಮರದಲ್ಲಿ ಗೆದ್ದು, ಧೃತರಾಷ್ಟ್ರನ ಸುತರಿಂದ ಪೂಜಿತನಾಗಿ, ವಂದಿಸಿಕೊಂಡು, ಸುತ್ತುವರೆದ ಹೃಷ್ಟರೂಪರಾದ ಕುರುಗಳೊಂದಿಗೆ ಡೇರೆಯನ್ನು ಪ್ರವೇಶಿಸಿದನು. ಆ ರಾತ್ರಿಯು ಸರ್ವಭೂತಗಳಿಗೂ ಪ್ರಮೋಹನಕಾರಿಯಾಯಿತು.

ಆ ರಾತ್ರಿಯ ಮೊದಲನೆಯ ಜಾವದಲ್ಲಿ ದುರಾದರ್ಷ ಪಾಂಡವರು ವೃಷ್ಣಿ-ಸೃಂಜಯರೊಂದಿಗೆ ಮಂತ್ರಾಲೋಚನೆಗೆ ಕುಳಿತುಕೊಂಡರು. ಮಂತ್ರನಿಶ್ಚಯಕೋವಿದರಾದ ಆ ಎಲ್ಲ ಮಹಾಬಲರೂ ಕಾಲಕ್ಕೆ ತಕ್ಕುದಾದ ತಮಗೆ ಶ್ರೇಯಸ್ಕರವಾದುದರ ಕುರಿತು ಅವ್ಯಗ್ರರಾಗಿ ಮಂತ್ರಾಲೋಚನೆ ಮಾಡಿದರು. ಬಹುಕಾಲ ಮಂತ್ರಾಲೋಚನೆ ಮಾಡಿದ ನಂತರ ರಾಜಾ ಯುಧಿಷ್ಠಿರನು ವಾಸುದೇವನ ಕಡೆ ತಿರುಗಿ ಈ ಮಾತುಗಳನ್ನಾಡಿದನು:

> “ನೋಡು ಕೃಷ್ಣ! ಭೀಮಪರಾಕ್ರಮಿ ಮಹಾತ್ಮ ಭೀಷ್ಮನು ಆನೆಯೊಂದು ಬೆಂಡಿನ ವನವನ್ನು ಹೇಗೋ ಹಾಗೆ ನನ್ನ ಬಲವನ್ನು ಧ್ವಂಸಗೊಳಿಸುತ್ತಿದ್ದಾನೆ. ಉರಿಯುತ್ತಿರುವ ಪಾವಕನಂತೆ ಸೇನೆಗಳನ್ನು ನೆಕ್ಕುತ್ತಿರುವ ಆ ಮಹಾತ್ಮನನ್ನು ನೋಡಲೂ ಕೂಡ ನಮಗೆ ಉತ್ಸಾಹವಿಲ್ಲ. ರಣದಲ್ಲಿ ಪ್ರತಾಪಿ

ಭೀಷ್ಮನ ತೀಕ್ಷ್ಣಶಸ್ತ್ರಗಳು ವಿಷೋಲ್ಬಣನಾದ ಘೋರ ಮಹಾನಾಗ ತಕ್ಷಕನಂತಿವೆ. ಕ್ರುದ್ಧನಾದ ಯಮನನ್ನಾಗಲೀ, ವಜ್ರಪಾಣಿ ದೇವರಾಜನನ್ನಾಗಲೀ, ಪಾಶವನ್ನು ಹಿಡಿದ ವರುಣನನ್ನಾಗಲೀ, ಗದೆಯೊಂದಿಗಿರುವ ಧನೇಶ್ವರನನ್ನಾಗಲೀ ಗೆಲ್ಲಲು ಶಕ್ಯವಿದೆ. ಆದರೆ ಸಮರದಲ್ಲಿ ಚಾಪವನ್ನು ಹಿಡಿದು ನಿಶಿತ ಶರಗಳನ್ನು ಪ್ರಯೋಗಿಸುತ್ತಿರುವ, ಸಂಕ್ರುದ್ಧನಾಗಿರುವ ಭೀಷ್ಮನನ್ನು ಜಯಿಸಲು ಶಕ್ಯವಿಲ್ಲ. ಹೀಗಿರುವಾಗ, ನನ್ನದೇ ಬುದ್ಧಿದೌರ್ಬಲ್ಯದಿಂದ ಸಮರದಲ್ಲಿ ಭೀಷ್ಮನನ್ನು ಎದುರಿಸಿ ನಾನು ಶೋಕಸಾಗರದಲ್ಲಿ ಮುಳುಗಿಹೋಗಿದ್ದೇನೆ. ವನಕ್ಕೆ ಹೋಗುತ್ತೇನೆ. ಅಲ್ಲಿ ಹೋಗುವುದೇ ನನಗೆ ಶ್ರೇಯಸ್ಕರವಾದುದು. ಯುದ್ಧವು ಇಷ್ಟವಾಗುತ್ತಿಲ್ಲ. ಏಕೆಂದರೆ ನಾವು ಎಂದೂ ಭೀಷ್ಮನನ್ನು ಕೊಲ್ಲಲಾರೆವು. ಹೇಗೆ ಪತಂಗಗಳು ಪ್ರಜ್ವಲಿಸುವ ಬೆಂಕಿಯ ಮೇಲೆರಗಿ ಒಮ್ಮೆಗೇ ಮೃತ್ಯುವನ್ನಪ್ಪುವವೋ ಹಾಗಿ ನಾವೂ ಕೂಡ ಭೀಷ್ಮನನ್ನು ಎದುರಿಸುತ್ತಿದ್ದೇವೆ. ರಾಜ್ಯದ ಕಾರಣಕ್ಕಾಗಿ ಪರಾಕ್ರಮದಿಂದ ಕ್ಷಯವನ್ನು ತಂದುಕೊಂಡಿದ್ದೇನೆ. ನನ್ನ ಶೂರ ಸಹೋದರರು ಸಾಯಕಗಳಿಂದ ತುಂಬಾ ಪೀಡಿತರಾಗಿದ್ದಾರೆ. ನನ್ನದೇ ಕಾರಣದಿಂದಾಗಿ ರಾಜ್ಯಭ್ರಷ್ಟರಾಗಿ ಕೇವಲ ಭ್ರಾತೃಸೌಹಾರ್ದತೆಯಿಂದ ಅರಣ್ಯಕ್ಕೆ ಬಂದರು. ಕೃಷ್ಣೆಯೂ ಕೂಡ ನನ್ನಿಂದಾಗಿಯೇ ಕಷ್ಟಗಳನ್ನು ಅನುಭವಿಸಿದಳು.

ಜೀವಿತವನ್ನು ನಾನು ಬಹಳ ಮನ್ನಿಸುತ್ತೇನೆ. ಆದರೆ ಇಂದು ಜೀವಿತವಾಗಿರುವುದೇ ದುರ್ಲಭವಾಗಿಬಿಟ್ಟಿದೆ. ಆದುದರಿಂದ ಇಂದು ಉಳಿದ ಜೀವಿತದಲ್ಲಿಯಾದರೂ ಉತ್ತಮ ಧರ್ಮಾಚರಣೆಯಲ್ಲಿ ಕಳೆಯುತ್ತೇನೆ. ನಿನಗೆ ಭ್ರಾತೃಗಳ ಸಹಿತ ನನ್ನ ಮೇಲೆ ಅನುಗ್ರಹವಿದ್ದರೆ, ಸ್ವಧರ್ಮಕ್ಕೆ ವಿರೋಧವಾಗದಂತೆ ಏನಾದರೂ ಉಪಾಯವನ್ನು ಹೇಳು ಕೇಶವ!"

ಅವನ ಈ ಬಹುವಿಸ್ತರವಾದ ಕಾರುಣ್ಯದ ಮಾತುಗಳನ್ನು ಕೇಳಿ ಕೃಷ್ಣನು ಯುಧಿಷ್ಠಿರನನ್ನು ಸಂತವಿಸುತ್ತಾ ಉತ್ತರಿಸಿದನು:

"ಧರ್ಮಪುತ್ರ! ನೀನು ವಿಷಾದಿಸಬೇಡ. ನಿನ್ನ ತಮ್ಮಂದಿರು ಶೂರರೂ, ದುರ್ಜಯರೂ, ಶತ್ರುಸೂದನರೂ ಆಗಿದ್ದಾರೆ. ಅರ್ಜುನ-ಭೀಮಸೇನರು ವಾಯು-ಅಗ್ನಿಯರ ಸಮತೇಜಸ್ವಿಗಳು. ಮಾದ್ರೀಪುತ್ರರೂ ಕೂಡ ತ್ರಿದಶರ ಈಶ್ವರನಂತೆ ವಿಕ್ರಾಂತರು. ಅಥವಾ ಸೌಹಾರ್ದತೆಯಿಂದ ಭೀಷ್ಮನೊಂದಿಗೆ ಯುದ್ಧಮಾಡಲು ನನ್ನನ್ನು ನಿಯುಕ್ತಿಸು. ಏಕೆಂದರೆ ನಾನು ನಿನಗಾಗಿ ಮಹಾಹವದಲ್ಲಿ ಏನನ್ನೂ ಸಹ ಮಾಡುತ್ತೇನೆ. ಒಂದು ವೇಳೆ ಫಲ್ಗುನನು ಇಚ್ಛಿಸಿದರೆ ಧಾರ್ತರಾಷ್ಟ್ರರು ನೋಡುತ್ತಿದ್ದಂತೆಯೇ ಪುರುಷರ್ಷಭ ಭೀಷ್ಮನನ್ನು ರಣದಲ್ಲಿ ಆಹ್ವಾನಿಸಿ ಕೊಲ್ಲುತ್ತೇನೆ. ಭೀಷ್ಮನು

ಹತನಾದರೆ ಜಯವನ್ನು ಕಾಣುತ್ತೀಯೆ. ಇಂದೇ ಕುರುವೃದ್ಧ ಪಿತಾಮಹನನ್ನು ಒಂದೇ ರಥದಲ್ಲಿ ಕೊಲ್ಲುತ್ತೇನೆ. ಸಂಗ್ರಾಮದಲ್ಲಿ ಮಹೇಂದ್ರನಂತಿರುವ ನನ್ನ ವಿಕ್ರಮವನ್ನು ನೋಡು. ಮಹಾಸ್ತ್ರಗಳನ್ನು ಪ್ರಯೋಗಿಸಿ ಅವನನ್ನು ರಥದಿಂದ ಉರುಳಿಸುತ್ತೇನೆ. ಯಾರು ಪಾಂಡುಪುತ್ರರ ಶತ್ರುವೋ ಅವರು ನನ್ನ ಶತ್ರು ಎನ್ನುವುದರಲ್ಲಿ ಸಂಶಯವಿಲ್ಲ. ನನಗಾಗಿರುವವರು ನಿನಗಾಗಿಯೂ ಇರುವವರು. ನನ್ನವರು ನಿನ್ನವರು ಕೂಡ. ನಿನ್ನ ತಮ್ಮನು ನನ್ನ ಸಖ, ಸಂಬಂಧೀ ಮತ್ತು ಶಿಷ್ಯನು ಕೂಡ. ಅರ್ಜುನನಿಗಾಗಿ ನಾನು ನನ್ನ ಮಾಂಸಗಳನ್ನೂ ಕಿತ್ತು ಕೊಡುತ್ತೇನೆ. ಈ ನರವ್ಯಾಘ್ರನೂ ಕೂಡ ನನಗಾಗಿ ಜೀವಿತವನ್ನೂ ತ್ಯಜಿಸುತ್ತಾನೆ. ಯಾವುದೇ ಸಮಯದಲ್ಲಿಯೂ ಪರಸ್ಪರರನ್ನು ದಾಟಿಸಬೇಕೆಂಬುದು ನಮ್ಮ ಒಪ್ಪಂದ. ನನ್ನನ್ನು ನಿಯೋಜಿಸು. ನಾನು ನಿನಗೆ ಆಶ್ರಯವಾಗುತ್ತೇನೆ. ಹಿಂದೆ ಉಪಪ್ಲವದದಲ್ಲಿ ಉಲೂಕನ ಸನ್ನಿಧಿಯಲ್ಲಿ ಗಾಂಗೇಯನನ್ನು ಕೊಲ್ಲುತ್ತೇನೆ ಎಂದು ಪಾರ್ಥನು ಪ್ರತಿಜ್ಞೆ ಮಾಡಿದ್ದನು. ಧೀಮತ ಪಾರ್ಥನ ಆ ಮಾತನ್ನು ನಾನು ರಕ್ಷಿಸಬೇಕಾಗಿದೆ. ಪಾರ್ಥನು ಅನುಜ್ಞೆಯಿತ್ತರೆ ಆ ಕಾರ್ಯವನ್ನು ನಾನು ಮಾಡುತ್ತೇನೆ ಎನ್ನುವುದರಲ್ಲಿ ಸಂಶಯವಿಲ್ಲ. ಅಥವಾ ಫಲ್ಗುನನೇ ಅದನ್ನು ಮಾಡಬೇಕೆಂದರೂ ಅದು ಅವನಿಗೆ ಭಾರವೇನೂ ಅಲ್ಲ. ಸಂಗ್ರಾಮದಲ್ಲಿ ಅವನು ಪರಪುರಂಜಯ

ಭೀಷ್ಮನನ್ನು ಸಂಹರಿಸಬಲ್ಲನು. ಮನಸ್ಸುಮಾಡಿದರೆ ಪಾರ್ಥನು ರಣದಲ್ಲಿ ಅಶಕ್ಯವಾದರೂ ಮಾಡಬಲ್ಲನು ಎಂದು ತಿಳಿ. ತ್ರಿದಶರು, ದೈತ್ಯದಾನವರ ಸಹಿತ ಯುದ್ಧಮಾಡಲು ಬಂದರೂ ಅರ್ಜುನನು ಅವರನ್ನು ಹತಗೊಳಿಸಬಲ್ಲನು. ಇನ್ನು ಭೀಷ್ಮನು ಯಾವ ಲೆಕ್ಕಕ್ಕೆ? ಭೀಷ್ಮ ಶಾಂತನವನು ಮಹಾವೀರ್ಯನಾದರೂ ಸತ್ತ್ವವನ್ನು ಕಳೆದುಕೊಂಡು ಅಲ್ಪಜೀವಿತನಾಗಿದ್ದಾನೆ. ಈ ಸಮಯದಲ್ಲಿ ತನ್ನ ಕರ್ತವ್ಯವೇನೆಂಬುದನ್ನು ತಿಳಿದುಕೊಂಡಿಲ್ಲ.”

ಯುಧಿಷ್ಠಿರನು ಹೇಳಿದನು:

“ಮಾಧವ! ಇದು ನೀನು ಹೇಳದಂತೆಯೇ ಇದೆ. ಅವರೆಲ್ಲರೂ ನಿನ್ನ ವೇಗವನ್ನು ತಡೆದುಕೊಳ್ಳಲಾರರು. ಯಾರ ಮಹಾಬಲಕ್ಕೆ ನೀನು ನಾಥನಾಗಿದ್ದೀಯೋ ಆ ನಾನು ಬಯಸಿದ ಎಲ್ಲವನ್ನೂ ಪಡೆದೇ ಪಡೆಯುತ್ತೇನೆ. ನಿನ್ನನ್ನು ನಾಥನನ್ನಾಗಿ ಪಡೆದ ನಾನು ರಣದಲ್ಲಿ ಇಂದ್ರನೊಡನೆ ದೇವತೆಗಳನ್ನು ಕೂಡ ಜಯಿಸಬಲ್ಲೆ. ಇನ್ನು ಮಹಾಹವದಲ್ಲಿ ಭೀಷ್ಮನು ಯಾವ ಲೆಕ್ಕಕ್ಕೆ? ಸ್ವಾರ್ಥವನ್ನು ಸಾಧಿಸುವುದಕ್ಕಾಗಿ ನಿನ್ನನ್ನು ಅಸತ್ಯವಾದಿಯನ್ನಾಗಿ ಮಾಡಲು ನನಗೆ ಮನಸ್ಸಿಲ್ಲ. ಮಾತುಕೊಟ್ಟಹಾಗೆ ಯುದ್ಧಮಾಡದೆಯೇ ಸಹಾಯಮಾಡು. “ನಿನ್ನ ಹಿತದಲ್ಲಿ ಸಲಹೆಯನ್ನು ನೀಡುತ್ತೇನೆ. ಆದರೆ ನಿನ್ನ

ಪರವಾಗಿ ಎಂದೂ ಯುದ್ಧಮಾಡುವುದಿಲ್ಲ. ದುರ್ಯೋಧನನ ಸಲುವಾಗಿ ಯುದ್ಧಮಾಡುತ್ತೇನೆ. ಇದು ಸತ್ಯ" ಎಂದು ಒಮ್ಮೆ ಭೀಷ್ಮನು ನನ್ನೊಡನೆ ಒಪ್ಪಂದವನ್ನು ಮಾಡಿಕೊಂಡಿದ್ದನು. ಏಕೆಂದರೆ ಅವನೇ ನನಗೆ ರಾಜ್ಯವನ್ನು ಕೊಡುವವನು ಮತ್ತು ರಾಜ್ಯವನ್ನು ಪಡೆಯುವುದರ ಕುರಿತು ಸಲಹೆ ನೀಡುವವನು. ಆದುದರಿಂದ ದೇವವ್ರತನ ವಧೋಪಾಯವನ್ನು ಅವನಿಂದಲೇ ನಿನ್ನನ್ನೂ ಕೂಡಿ ನಾವೆಲ್ಲರೂ ಹೋಗಿ ಕೇಳೋಣ. ನಿನಗೆ ಇಷ್ಟವಾದರೆ ಈಗಲೇ ಒಟ್ಟಿಗೇ ಹೋಗಿ ನರೋತ್ತಮ ಕೌರವ ಭೀಷ್ಮನ ಸಲಹೆಯನ್ನು ಕೇಳೋಣ. ಅವನು ನಮಗೆ ಹಿತವಾದ ಸತ್ಯವಾದ ಮಾತನ್ನೇ ಹೇಳುತ್ತಾನೆ. ಅವನು ಹೇಗೆ ಹೇಳುತ್ತಾನೋ ಹಾಗೇ ನಾನು ಸಂಗ್ರಾಮದಲ್ಲಿ ಮಾಡುತ್ತೇನೆ. ಆ ಧೃತವ್ರತನೇ ನಮಗೆ ಜಯವನ್ನು ಕೊಡುವವನು ಮತ್ತು ಜಯಗಳಿಸಲು ಸಲಹೆಯನ್ನು ನೀಡುವವನು. ತಂದೆಯನ್ನು ಕಳೆದುಕೊಂಡು ಬಾಲಕರಾಗಿದ್ದಾಗ ಅವನೇ ನಮ್ಮನ್ನು ಬೆಳೆಸಿದನು. ಆ ನನ್ನ ಪಿತಾಮಹ, ತಂದೆಗೆ ತಂದೆಯಂತಿದ್ದ, ವೃದ್ಧನನ್ನು ಕೊಲ್ಲಲು ಬಯಸುತ್ತಿದ್ದೇನಲ್ಲ! ಈ ಕ್ಷತ್ರಿಯ ಜೀವನಕ್ಕೆ ಧಿಕ್ಕಾರ!"

ಆಗ ವಾರ್ಷ್ಣೇಯನು ಕುರುನಂದನನಿಗೆ ಹೇಳಿದನು:

"ಮಹಾಬಾಹೋ! ನನಗೆ ನೀನಾಡಿದುದು ಯಾವಾಗಲೂ

ಇಷ್ಟವಾಗುತ್ತದೆ. ದೇವವ್ರತ ಭೀಷ್ಮನು ಪುಣ್ಯಕರ್ಮಿ. ದೃಷ್ಟಿಮಾತ್ರದಿದ ದಹಿಸಬಲ್ಲನು. ಅವ್ನ ವಧೋಪಾಯವನ್ನು ಕೇಳಲು ಸಾಗರಗೆಯ ಮಗನ ಬಳಿ ಹೋಗೋಣ. ವಿಶೇಷವಾಗಿ ನೀನೇ ಇದನ್ನು ಕೇಳಿದರು ಅವನು ಸತ್ಯವನ್ನೇ ಹೇಳುತ್ತಾನೆ. ನಾವೆಲ್ಲರೂ ಈಗಲೇ ಕುರುಪಿತಾಮಹನನ್ನು ಕೇಳಲು ಅಲ್ಲಿಗೆ ಹೋಗೋಣ! ಶಿರಸಾ ನಮಸ್ಕರಿಸಿ ಸಲಹೆಯನ್ನು ಕೇಳೋಣ. ಅವನು ಏನು ಸಲಹೆಯನ್ನು ಕೊಡುತ್ತಾನೋ ಅದರಂತೆಯೇ ಶತ್ರುಗಳೊಡನೆ ಹೋರಾಡೋಣ.”

ಹೀಗೆ ಮಂತ್ರಾಲೋಚನೆ ಮಾಡಿ ವೀರ ಪಾಂಡವರು ಎಲ್ಲರೂ ವೀರ್ಯವಾನ್ ವಾಸುದೇವನನ್ನೊಡಗೂಡಿ, ಶಸ್ತ್ರ-ಕವಚಗಳನ್ನು ಬಿಚ್ಚಿಟ್ಟು, ಪಾಂಡುಪೂರ್ವಜ ಭೀಷ್ಮನ ಬಿಡಾರದ ಕಡೆ ಹೊರಟರು. ಪ್ರವೇಶಿಸಿ ಭೀಷ್ಮನಿಗೆ ತಲೆಬಾಗಿ ನಮಸ್ಕರಿಸಿದರು. ಪಾಂಡವರು ಭೀಷ್ಮನನ್ನು ಶಿರಸಾ ವಂದಿಸಿ ಪೂಜಿಸಿ ಶರಣು ಹೋದರು. ಮಹಾಬಾಹು ಭೀಷ್ಮ ಕುರುಪಿತಾಮಹನು ಅವರನ್ನುದ್ದೇಶಿಸಿ ಹೇಳಿದನು:

“ವಾರ್ಷ್ಣೇಯ! ನಿನಗೆ ಸ್ವಾಗತ! ಧನಂಜಯ! ನಿನಗೆ ಸ್ವಾಗತ! ಧರ್ಮಪುತ್ರನಿಗೆ, ಭೀಮನಿಗೆ ಮತ್ತು ಯಮಳರಿಗೂ ಸ್ವಾಗತ! ನಿಮ್ಮ ಪ್ರೀತಿಯನ್ನು ವೃದ್ಧಿಗೊಳಿಸಲು ಇಂದು ನಾನು ಯಾವ



ಕಾರ್ಯವನ್ನು ಮಾಡಲಿ? ಅದು ಎಷ್ಟೇ ಸುದುಷ್ಕರವಾದರೂ ಸರ್ವಾತ್ಮನಾ ಅದನ್ನು ಮಾಡಿಕೊಡುತ್ತೇನೆ.”

ಹೀಗೆ ಗಾಂಗೇಯನು ಪ್ರೀತಿಯುಕ್ತನಾಗಿ ಪುನಃ ಪುನಃ ಹೇಳಲು ಧರ್ಮಪುತ್ರ ಯುಧಿಷ್ಠಿರನು ದೀನಾತ್ಮನಾಗಿ ಈ ಮಾತನ್ನಾಡಿದನು:

“ಧರ್ಮಜ್ಞ! ಹೇಗೆ ನಾವು ಜಯಗಳಿಸಬಲ್ಲೆವು? ಹೇಗೆ ನಾವು ರಾಜ್ಯವನ್ನು ಪಡೆಯಬಹುದು? ಪ್ರಜೆಗಳು ನಾಶವಾಗದೇ ಇರುವುದು ಹೇಗೆ? ಅದನ್ನು ನನಗೆ ಹೇಳು. ನೀನೇ ನಿನ್ನ ವಧೋಪಾಯವನ್ನೂ ನಮಗೆ ಹೇಳಬೇಕು. ಸಮರದಲ್ಲಿ ನಿನ್ನನ್ನು ಹೇಗೆ ಸೋಲಿಸಬಲ್ಲೆವು? ನಿನ್ನಲ್ಲಿ ಸೂಕ್ಷ್ಮವಾದ ರಂಧ್ರವೂ ಕೂಡ ಕಾಣುವುದಕ್ಕೆ ಸಿಗುವುದಿಲ್ಲ. ಸಂಯುಗದಲ್ಲಿ ನೀನು ಸದಾ ವೃತ್ತಾಕಾರದಲ್ಲಿ ಧನುಸ್ಸನ್ನು ತಿರುಗಿಸುತ್ತಿರುವುದೇ ಕಂಡು ಬರುತ್ತದೆ. ರವಿಯಂತೆ ರಥದಲ್ಲಿರುವ ನೀನು ಬಾಣಗಳನ್ನು ಭತ್ತಳಿಕೆಯಿಂದ ತೆಗೆದುಕೊಳ್ಳುವುದಾಗಲೀ, ಅದನ್ನು ಧನುಸ್ಸಿಗೆ ಅನುಸಂಧಾನಮಾಡುವುದಾಗಲೀ, ಮತ್ತು ಶಿಂಜಿನಿಯನ್ನು ಸೆಳೆದು ಬಿಡುವುದಾಗಲೀ ನಾವು ನೋಡಲಾರೆವು. ರಥಾಶ್ವಗಜಪದಾತಿಗಳನ್ನು ಸಂಹಾರಿಸುವ ನಿನ್ನನ್ನು ಯಾವ ಪುರುಷನು ತಾನೇ ಕೊಲ್ಲಲು ಉತ್ಸಾಹಿತನಾಗುತ್ತಾನೆ? ಶರಗಳ ಮಹಾ ಮಳೆಯನ್ನು ಸುರಿಸಿ ನೀನು ನನ್ನ ಸೇನೆಗೆ ಮಹಾ

ಕ್ಷಯವನ್ನು ತಂದಿದ್ದೀಯೆ. ನಾವು ಯುದ್ಧದಲ್ಲಿ ನಿನ್ನನ್ನು ಜಯಿಸುವುದು ಹೇಗೆ, ಹೇಗೆ ರಾಜ್ಯವು ನನ್ನದಾಗಬಲ್ಲದು, ಅಥವಾ ನನ್ನ ಸೈನ್ಯಕ್ಕೆ ಶಾಂತಿ ದೊರೆಯುವುದು ಅದನ್ನು ನನಗೆ ಹೇಳು."

ಆಗ ಪಾಂಡವನಿಗೆ ಪಾಂಡುಪೂರ್ವಜ ಶಾಂತನವನು ಹೇಳಿದನು:

"ಕೌಂತೇಯ! ನಾನು ಬದುಕಿರುವವರೆಗೆ ಎಂದೂ ಸಂಯುಗದಲ್ಲಿ ನಿನ್ನ ಏಳ್ಗೆಯು ಕಾಣಿಸುವುದಿಲ್ಲ. ಸತ್ಯವನ್ನೇ ಹೇಳುತ್ತಿದ್ದೇನೆ. ಆದರೆ ಯುದ್ಧದಲ್ಲಿ ನನ್ನನ್ನು ಸೋಲಿಸಿದರೆ ಖಂಡಿತವಾಗಿ ಕೌರವರನ್ನು ಗೆಲ್ಲುತ್ತೀಯೆ. ರಣದಲ್ಲಿ ಜಯವನ್ನು ಬಯಸುವೆಯಾದರೆ ಬೇಗನೆ ನನ್ನನ್ನು ಕೊಲ್ಲು. ಪಾರ್ಥರೇ! ಯಥಾಸುಖವಾಗಿ ನನ್ನನ್ನು ಹೊಡೆಯಿರಿ. ಅನುಜ್ಞೆಯನ್ನು ನೀಡುತ್ತೇನೆ. ಹೀಗೆ ಮಾಡುವುದರಿಂದ ನಿಮಗೆ ಒಳ್ಳೆಯದಾಗುವುದೆಂದು ನನಗೆ ತಿಳಿದಿದೆ. ನಾನು ಸತ್ತರೆ ಅವರೆಲ್ಲರೂ ಸತ್ತ ಹಾಗೆ ಎಂದು ತಿಳಿದುಕೋ."

ಯುಧಿಷ್ಠಿರನು ಹೇಳಿದನು:

"ಸಮರದಲ್ಲಿ ಕ್ರುದ್ಧನಾಗಿ ದಂಡಪಾಣಿ ಅಂತಕನಂತಿರುವ ನಿನ್ನನ್ನು ನಾವು ಯುದ್ಧದಲ್ಲಿ ಜಯಿಸಬಲ್ಲಂತಹ ಉಪಾಯವನ್ನು ಹೇಳು. ವಜ್ರಧರನನ್ನೂ, ವರುಣನನ್ನೂ, ಯಮನನ್ನೂ ಸಹ ಜಯಿಸಬಲ್ಲೆವು. ಆದರೆ ಸಮರದಲ್ಲಿ

ನಿನ್ನನ್ನು ಗೆಲ್ಲಲು ಇಂದ್ರನೊಂದಿಗೆ ಸುರಾಸುರರಿಗೂ ಶಕ್ಯವಿಲ್ಲ."

ಭೀಷ್ಮನು ಹೇಳಿದನು:

"ಪಾಂಡವ! ಸತ್ಯವನ್ನೇ ಮಾತನಾಡುತ್ತಿದ್ದೀಯೆ. ರಣದಲ್ಲಿ ಶ್ರೇಷ್ಠ ಕಾರ್ಮುಕವನ್ನು ನಾನು ಹಿಡಿದಿರುವವರೆಗೆ, ಶಸ್ತ್ರಾಸ್ತ್ರಗಳು ನನ್ನ ಕೈಯಲ್ಲಿರುವವರೆಗೆ ನನ್ನನ್ನು ಗೆಲ್ಲಲು ಇಂದ್ರನೊಂದಿಗೆ ಸುರಾಸುರರಿಗೂ ಶಕ್ಯವಿಲ್ಲ. ನಾನು ಶಸ್ತ್ರಾಸ್ತ್ರಗಳನ್ನು ಕೆಳಗಿಟ್ಟಾಗ ಮಾತ್ರ ಈ ಮಹಾರಥರು ನನ್ನನ್ನು ಸಂಹರಿಸಬಲ್ಲರು. ಶಸ್ತ್ರವನ್ನು ಕೆಳಗಿಟ್ಟವನೊಡನೆ, ಕೆಳಕ್ಕೆ ಬಿದ್ದವನೊಡನೆ, ಕವಚ-ಧ್ವಜಗಳಿಲ್ಲದವನೊಡನೆ, ಓಡಿಹೋಗುತ್ತಿರುವವನೊಡನೆ, ಭೀತಿಗೊಂಡಿರುವವನೊಡನೆ, 'ನಾನು ನಿನ್ನವನಾಗಿದ್ದೇನೆ' ಎಂದು ಹೇಳುವವನೊಂದಿಗೆ, ಸ್ತ್ರೀಯೊಂದಿಗೆ, ಸ್ತ್ರೀಯ ಹೆಸರನ್ನಿಟ್ಟುಕೊಂಡವನೊಂದಿಗೆ, ಅಂಗವಿಕಲರೊಡನೆ, ಏಕಮಾತ್ರ ಪುತ್ರನಾಗಿರುವವನೊಡನೆ, ಅಪ್ರಸೂತನೊಂದಿಗೆ, ದುಷ್ಪ್ರೇಕ್ಷನೊಂದಿಗೆ ಯುದ್ಧಮಾಡುವುದು ನನಗೆ ಇಷ್ಟವಿಲ್ಲ. ಹಿಂದೆ ನಾನು ಮಾಡಿದ್ದ ಮತ್ತೊಂದು ಸಂಕಲ್ಪದ ಕುರಿತೂ ಕೇಳು. ಅಮಂಗಲ ಸೂಚಕ ಚಿಹ್ನೆಯಿರುವ ಧ್ವಜವನ್ನು ನೋಡಿದರೂ ನಾನು ಖಂಡಿತವಾಗಿ ಯುದ್ಧ ಮಾಡುವುದಿಲ್ಲ. ನಿನ್ನ ಸೇನೆಯಲ್ಲಿ ದ್ರೌಪದ ಮಹಾರಥ ಸಮರಾಕಾಂಕ್ಷೀ ಸಮಿತಿಂಜಯ ಶೂರ

ಶಿಖಂಡಿಯಿದ್ದಾನಲ್ಲ? ಅವನು ಮೊದಲು ಸ್ತ್ರೀಯಾಗಿದ್ದು ನಂತರ ಪುರುಷನಾದನು. ಇವೆಲ್ಲವನ್ನೂ ನಡೆದಂತೆ ನಿನಗೂ ತಿಳಿದೇ ಇದೆ. ಸಮರದಲ್ಲಿ ಶೂರ ಅರ್ಜುನನು ಶಿಖಂಡಿಯನ್ನು ಮುಂದಿರಿಸಿಕೊಂಡು ಕವಚನ್ನು ಧರಿಸಿದವನಾಗಿ ತೀಕ್ಷ್ಣ ಬಾಣಗಳಿಂದ ನನ್ನನ್ನೇ ಹೊಡೆಯಲಿ. ಅಮಂಗಲಧ್ವಜವಿರುವ ಮತ್ತು ವಿಶೇಷವಾಗಿ ಅವನು ಹಿಂದೆ ಸ್ತ್ರೀಯಾಗಿದ್ದುದರಿಂದ ಅವನನ್ನು ನಾನು ಧನುರ್ಬಾಣಗಳನ್ನೂ ಹಿಡಿದಿದ್ದರೂ ಹೊಡೆಯಲು ಎಂದೂ ಇಚ್ಛಿಸುವುದಿಲ್ಲ. ಆ ಅವಕಾಶದಲ್ಲಿ ಪಾಂಡವ ಧನಂಜಯನು ನನ್ನ ಬಳಿಸಾರಿ ಕ್ಷಿಪ್ರವಾಗಿ ಎಲ್ಲ ಕಡೆಗಳಿಂದ ನನ್ನನ್ನು ಶರಗಳಿಂದ ಹೊಡೆದು ಸಂಹರಿಸಲಿ. ಯುದ್ಧದಲ್ಲಿ ತೊಡಗಿರುವ ಈ ನನ್ನನ್ನು ಕೊಲ್ಲುವವರು, ಮಹಾಭಾಗ ಕೃಷ್ಣ ಮತ್ತು ಪಾಂಡವ ಧನಂಜಯನ ಹೊರತಾಗಿ ಈ ಲೋಕಗಳಲ್ಲಿ ಬೇರೆ ಯಾರನ್ನೂ ಕಾಣೆ. ಹೀಗೆ ಅವನನ್ನು ಅಥವಾ ಬೇರೆ ಯಾರಾದರೂ ಅಂಥವನನ್ನು ನನ್ನ ಮುಂದೆ ನಿಲ್ಲಿಸಿ ಬೀಭತ್ಸುವೇ ನನ್ನನ್ನು ಬೀಳಿಸಬೇಕು. ಇದರಿಂದಲೇ ನಿನಗೆ ವಿಜಯವಾಗುವುದು. ಕೌಂತೇಯ! ನಾನು ಹೇಳಿದ ಮಾತಿನಂತೆಯೇ ಮಾಡು. ಆಗ ಸಂಗ್ರಾಮದಲ್ಲಿ ಎದುರಾಗಿರುವ ಧಾರ್ತರಾಷ್ಟ್ರರನ್ನು ಜಯಿಸುತ್ತೀಯೆ."

ಅವನಿಂದ ಅಪ್ಪಣೆಯನ್ನು ಪಡೆದು, ಕುರುಪಿತಾಮಹ ಮಹಾತ್ಮ ಭೀಷ್ಮನನ್ನು ನಮಸ್ಕರಿಸಿ ಪಾರ್ಥರು ತಮ್ಮ ಶಿಬಿರದ ಕಡೆ ನಡೆದರು.

ಹಾಗೆ ಪರಲೋಕದ ದೀಕ್ಷೆಯನ್ನು ತೆಗೆದುಕೊಂಡಿದ್ದ ಗಾಂಗೇಯನು ಹೇಳಿದಾಗಿನಿಂದ ಅರ್ಜುನನು ದುಃಖ ಸಂತಪ್ತನೂ ನಾಚಿಕೊಂಡವನೂ ಆಗಿ ಹೇಳಿದನು:

> "ಮಾಧವ! ಗುರು, ಕುಲವೃದ್ಧ, ಕೃತಪ್ರಜ್ಞ, ಧೀಮತ ಪಿತಾಮಹನೊಂದಿಗೆ ನಾನು ಸಂಗ್ರಾಮದಲ್ಲಿ ಹೇಗೆ ಯುದ್ಧಮಾಡಬಲ್ಲೆ? ಬಾಲ್ಯದಲ್ಲಿ ನಾನು ಆಡಿ ಮೈಯೆಲ್ಲ ಧೂಳುತುಂಬಿ ಬಂದಾಗ ಈ ಮಹಾಮನ ಮಹಾತ್ಮನು ನನ್ನನ್ನೆತ್ತಿಕೊಂಡು ತಾನೂ ಧೂಳಿನಿಂದ ತುಂಬಿಕೊಳ್ಳುತ್ತಿದ್ದನು. ಬಾಲಕನಾಗಿದ್ದಾಗ ನಾನು ಅವನ ತೊಡೆಯ ಮೇಲೆ ಕುಳಿತು ಮಹಾತ್ಮ ಪಾಂಡವನ ತಂದೆಯಾದ ಅವನನ್ನು ತಂದೆಯೆಂದು ಕರೆದಾಗ "ಭಾರತ! ನಾನು ನಿನ್ನ ತಂದೆಯಲ್ಲ. ನಿನ್ನ ತಂದೆಯ ತಂದೆ!" ಎಂದು ಬಾಲ್ಯದಲ್ಲಿ ನನಗೆ ಹೇಳುತ್ತಿದ್ದ ಅವನನ್ನು ಹೇಗೆ ತಾನೇ ನಾನು ವಧಿಸಬಲ್ಲೆ? ಬೇಕಾದರೆ ಅವನು ನನ್ನ ಸೇನೆಯನ್ನು ವಧಿಸಲಿ. ಆದರೆ ನಾನು ಆ ಮಹಾತ್ಮನೊಂದಿಗೆ ಯುದ್ಧ ಮಾಡುವುದಿಲ್ಲ. ಜಯವಾಗಲಿ ಅಥವಾ ವಧೆಯಾಗಲಿ. ನಿನಗೆ ಹೇಗನ್ನಿಸುತ್ತದೆ?"

ಶ್ರೀಕೃಷ್ಣನು ಹೇಳಿದನು:

> "ಜಿಷ್ಣೋ! ಹಿಂದೆ ನೀನು ಭೀಷ್ಮವಧೆಯ ಪ್ರತಿಜ್ಞೆಯನ್ನು ಮಾಡಿದ್ದೀಯೆ. ಕ್ಷತ್ರಧರ್ಮದಲ್ಲಿರುವ ನೀನು ಏಕೆ ಈಗ

ಸಂಹರಿಸುವುದಿಲ್ಲ? ಸಿಡಿಲು ಬಡಿದ ಮರದಂತೆ ಇವನನ್ನು ರಥದಿದ ಬೀಳಿಸು. ಗಾಂಗೇಯನನ್ನು ಕೊಲ್ಲದೇ ಯುದ್ಧದಲ್ಲಿ ನಿನಗೆ ವಿಜಯವಾಗುವುದಿಲ್ಲ. ಪೂರ್ವೇಂದ್ರನಾಗಿದ್ದ ನೀನೇ ಅವಶ್ಯವಾಗಿ ಭೀಷ್ಮನನ್ನು ಕೊಲ್ಲುತ್ತೀಯೆ ಎಂದು ಹಿಂದೆಯೇ ದೈವನಿರ್ಧಾರಿತವಾಗಿತ್ತು. ಇದಲ್ಲದೇ ಬೇರೆ ಆಗುವುದಿಲ್ಲ. ಅಂತಕನಂತೆ ಬಾಯಿಕಳೆದಿರುವ ದುರಾದರ್ಷ ಭೀಷ್ಮನನ್ನು ನಿನ್ನನ್ನು ಬಿಟ್ಟು ಸ್ವಯಂ ವಜ್ರಧರನೇ ಕೊಲ್ಲಲು ಶಕ್ಯವಿಲ್ಲ. ಭೀಷ್ಮನನ್ನು ಕೊಲ್ಲು. ಹಿಂದೆ ಮಹಾಬುದ್ಧಿ ಬೃಹಸ್ಪತಿಯು ಶಕ್ರನಿಗೆ ಹೇಳಿದಂತೆ ನನ್ನ ಈ ಮಾತನ್ನು ಕೇಳು. ಅತ್ಯಂತ ಹಿರಿಯನಾದರೂ, ವೃದ್ಧನಾದರೂ, ಸಕಲ ಸದ್ಗುಣಗಳಿಂದ ಸಮನ್ವಿತನಾಗಿದ್ದರೂ ಶಸ್ತ್ರಹಿಡಿದು ಕೊಲ್ಲಲು ಬಂದರೆ ಅಂತಹ ಆತತಾಯಿಯನ್ನು ಕೊಲ್ಲಬೇಕು. ಇದು ಕ್ಷತ್ರಿಯರು ನೆಲೆಸಿರುವ ಶಾಶ್ವತ ಧರ್ಮ. ಅಸೂಯೆಯಿಲ್ಲದೇ ಯುದ್ಧಮಾಡಬೇಕು. ಶಿಷ್ಟರನ್ನು ರಕ್ಷಿಸಬೇಕು. ಯಜ್ಞ ಮಾಡಬೇಕು.”

ಅರ್ಜುನನು ಹೇಳಿದನು:

“ಕೃಷ್ಣ! ನಿಜವಾಗಿಯೂ ಶಿಖಂಡಿಯೇ ಭೀಷ್ಮನ ನಿಧನಕ್ಕೆ ಕಾರಣನಾಗುತ್ತಾನೆ. ಪಾಂಚಾಲ್ಯನನ್ನು ನೋಡಿದೊಡನೆಯೇ ಸದಾ ಭೀಷ್ಮನು ಹಿಮ್ಮೆಟ್ಟುತ್ತಾನೆ. ಆದುದರಿಂದ ನಾವು ಅವನ ಮುಂದೆ ಶಿಖಂಡಿಯನ್ನು ಇರಿಸಿ ಗಾಂಗೇಯನನ್ನು

ಸಂಹರಿಸೋಣ. ಇದೇ ಉಪಾಯವೆಂದು ನನಗನ್ನಿಸುತ್ತದೆ. ನಾನು ಸಾಯಕಗಳಿಂದ ಅನ್ಯ ಮಹೇಷ್ವಾಸರನ್ನು ತಡೆಯುತ್ತೇನೆ. ಯೋಧಶ್ರೇಷ್ಠ ಶಿಖಂಡಿಯು ಭೀಷ್ಮನನ್ನೇ ಎದುರಿಸಲಿ. “ಮೊದಲು ಕನ್ಯೆಯಾಗಿದ್ದು ನಂತರ ಪುರುಷನಾದ ಈ ಶಿಖಂಡಿಯನ್ನು ನಾನು ಕೊಲ್ಲುವುದಿಲ್ಲ” ಎಂದು ಕುರುಮುಖ್ಯನನ್ನು ನೀನು ಕೇಳಿದ್ದೀಯೆ.”

ಮಾಧವನೊಂದಿಗೆ ಹೀಗೆ ನಿಶ್ಚಯವನ್ನು ಮಾಡಿ ಪುರುಷರ್ಷಭ ಪಾಂಡವರು ತಮ್ಮ ತಮ್ಮ ಶಯನಗಳಲ್ಲಿ ಪವಡಿಸಿ ವಿಶ್ರಾಂತಿ ಪಡೆದರು.

# ಹತ್ತನೆಯ ದಿನದ ಯುದ್ಧ: ಭೀಷ್ಮ ವಧೆ

ವಿಮಲ ಪ್ರಭಾತದಲ್ಲಿ ಸೂರ್ಯೋದಯವಾಗುತ್ತಲೇ ಭೇರಿ ಮೃದಂಗ ಮತ್ತು ಡೋಲುಗಳನ್ನು ಬಾರಿಸಲು, ಮೊಸರಿನಂತೆ ಬಿಳುಪಾಗಿದ್ದ ಶಂಖಗಳನ್ನು ಎಲ್ಲೆಡೆಯೂ ಊದುತ್ತಿರಲು ಶಿಖಂಡಿಯನ್ನು ಮುಂದಿರಿಸಿಕೊಂಡು ಪಾಂಡವರು ಯುದ್ಧಕ್ಕೆ ಹೊರಟರು. ಸರ್ವಶತ್ರುಗಳನ್ನೂ ವಿನಾಶಗೊಳಿಸಬಲ್ಲ ವ್ಯೂಹವನ್ನು ರಚಿಸಿ ಶಿಖಂಡಿಯು ಸರ್ವ ಸೇನೆಗಳ ಅಗ್ರಸ್ಥಾನದಲ್ಲಿದ್ದನು. ಅವನ ಚಕ್ರಗಳನ್ನು ಭೀಮಸೇನ-ಧನಂಜಯರು ರಕ್ಷಿಸುತ್ತಿದ್ದರು. ಹಿಂಬದಿಯಲ್ಲಿ ದ್ರೌಪದಿಯ ಮಕ್ಕಳೂ, ಸೌಭದ್ರನೂ ಇದ್ದರು. ಸಾತ್ಯಕಿ ಮತ್ತು ಚೇಕಿತಾನರು

ಅವರನ್ನು ರಕ್ಷಿಸುತ್ತಿದ್ದರು. ಅವರ ಹಿಂದೆ ಪಾಂಚಾಲರಿಂದ ರಕ್ಷಿತನಾದ ಧೃಷ್ಟದ್ಯುಮ್ನನಿದ್ದನು. ಅನಂತರ ಯುಧಿಷ್ಠಿರನು ಯಮಳರ ಸಹಿತ ಸಿಂಹನಾದ ಗೈಯುತ್ತಾ ಹೊರಟನು. ಅವರ ಹಿಂದೆ ತನ್ನ ಸೈನ್ಯದಿಂದ ಸಂವೃತನಾಗಿ ವಿರಾಟನೂ ಅವನ ನಂತರ ದ್ರುಪದನೂ ಹೊರಟರು. ಐವರು ಕೇಕಯ ಸಹೋದರರೂ, ವೀರ್ಯವಾನ್ ಧೃಷ್ಟಕೇತುವೂ ಪಾಂಡುಸೇನೆಯ ಜಘನಪ್ರದೇಶವನ್ನು ಕಾಯುತ್ತಿದ್ದರು. ಈ ರೀತಿ ಮಹಾಸೈನ್ಯವನ್ನು ಮಹಾವ್ಯೂಹವನ್ನಾಗಿ ರಚಿಸಿ ಪಾಂಡವರು ಸಂಗ್ರಾಮದಲ್ಲಿ ತಮ್ಮ ಜೀವವನ್ನು ತೊರೆದು ಕೌರವ ಸೇನೆಯನ್ನು ಎದುರಿಸಿದರು.

ಹಾಗೆಯೇ ಕುರುಗಳು ಧೃತರಾಷ್ಟ್ರನ ದುರಾಧರ್ಷ ಸುಮಹಾಬಲ ಮಕ್ಕಳಿಂದ, ಅನಂತರ ಮಹೇಷ್ವಾಸ ದ್ರೋಣ ಮತ್ತು ಅವನ ಮಹಾರಥ ಮಗನಿಂದ ರಕ್ಷಿಸಲ್ಪಟ್ಟ ಮಹಾಬಲ ಭೀಷ್ಮನನ್ನು ಸರ್ವ ಸೈನ್ಯಗಳ ಅಗ್ರನನ್ನಾಗಿ ಮಾಡಿಕೊಂಡು ಪಾಂಡವರನ್ನು ಎದುರಿಸಿ ಹೋದರು. ಅವರ ನಂತರ ಗಜಸೇನೆಯಿಂದ ಸಂವೃತನಾದ ಭಗದತ್ತನಿದ್ದನು. ಭಗದತ್ತನನ್ನು ಅನುಸರಿಸಿ ಕೃಪ ಮತ್ತು ಕೃತವರ್ಮರಿಬ್ಬರಿದ್ದರು. ಅನಂತರ ಕಾಂಬೋಜರಾಜ ಬಲವಾನ್ ಸುದಕ್ಷಿಣ, ಮಾಗಧ, ಜಯತ್ಸೇನ, ಸೌಬಲ, ಬೃಹದ್ಬಲರಿದ್ದರು. ಅನಂತರ ಸುಶರ್ಮನೇ ಮೊದಲಾದ ಇತರ ಮಹೇಷ್ವಾಸ ನೃಪರು ಕೌರವ ಸೇನೆಯ ಹಿಂಬಾಗವನ್ನು ಪಾಲಿಸುತ್ತಿದ್ದರು. ದಿವಸಗಳು ಕಳೆದಂತೆಲ್ಲ ಭೀಷ್ಮ ಶಾಂತನವನು ಯುದ್ಧದಲ್ಲಿ ಅಸುರ, ಪೈಶಾಚ

ಮತ್ತು ರಾಕ್ಷಸವ್ಯೂಹಗಳನ್ನು ರಚಿಸುತ್ತಿದ್ದನು. ಆಗ ಕೌರವರ ಮತ್ತು ಪಾಂಡವರ ನಡುವೆ ಅನ್ಯೋನ್ಯರನ್ನು ಸಂಹರಿಸುವ, ಯಮರಾಷ್ಟ್ರವನ್ನು ವರ್ಧಿಸುವ ಯುದ್ಧವು ಪ್ರಾರಂಭವಾಯಿತು.

ಅರ್ಜುನ ಪ್ರಮುಖ ಪಾರ್ಥರು ಶಿಖಂಡಿಯನ್ನು ಮುಂದಿರಿಸಿಕೊಂಡು ವಿವಿಧ ಶರಗಳನ್ನು ಬೀರುತ್ತಾ ಯುದ್ಧದಲ್ಲಿ ಭೀಷ್ಮನನ್ನು ಎದುರಿಸಿದರು. ಅಲ್ಲಿ ಭೀಮನ ಶರಗಳಿಂದ ಪೀಡಿತರಾದ ಕೌರವರು ರಕ್ತದಿಂದ ತೋಯ್ದು ಅಸುನೀಗಿ ಪರಲೋಕಕ್ಕೆ ನಡೆದರು. ನಕುಲ, ಸಹದೇವ ಮತ್ತು ಮಹಾರಥ ಸಾತ್ಯಕಿಯರು ಕೌರವ ಸೇನೆಯ ಮೇಲೆರಗಿ ಓಜಸ್ಸಿನಿಂದ ಬಹಳವಾಗಿ ಪೀಡಿಸಿದರು. ಅವರಿಂದ ವಧಿಸಲ್ಪಡುತ್ತಿದ್ದ ಕೌರವರು ಪಾಂಡವರ ಮಹಾಸೇನೆಯನ್ನು ತಡೆಯಲು ಅಶಕ್ಯರಾದರು. ಆಗ ಮಹಾರಥರಿಂದ ವಧಿಸಲ್ಪಡುತ್ತಿರುವ ಕೌರವ ಸೇನೆಯು ಎಲ್ಲ ದಿಕ್ಕುಗಳಲ್ಲಿ ಪಲಾಯನ ಮಾಡತೊಡಗಿತು. ಪಾಂಡವರಿಂದಲೂ ಸೃಂಜಯರಿಂದಲೂ ನಿಶಿತ ಬಾಣಗಳಿಂದ ವಧಿಸಲ್ಪಡುತ್ತಿರುವ ಕೌರವರು ರಕ್ಷಕರನ್ನೇ ಕಾಣದಾದರು. ಪ್ರಹೃಷ್ಟಮನಸ್ಕರಾದ ಶೂರ ಪಾಂಡವರು ದುರ್ಯೋಧನನ ಸೇನೆಯನ್ನು ಸಂಹರಿಸುತ್ತಾ ಮುಂದುವರೆದರು. ರಣದಲ್ಲಿ ಶತ್ರುಗಳಿಂದ ಸೈನ್ಯಾಘಾತವನ್ನೂ, ನರ-ವಾರಣ-ವಾಜಿಗಳ ವಿನಾಶವನ್ನೂ ಭೀಷ್ಮನು ಸಹಿಸಿಕೊಳ್ಳಲಿಲ್ಲ. ಆ ಮಹೇಷ್ವಾಸ ದುರ್ಧರ್ಷನು ತನ್ನ ಜೀವವನ್ನೂ ತೊರೆದು ಪಾಂಡವರನ್ನು, ಪಾಂಚಾಲರನ್ನು ಮತ್ತು ಸೃಂಜಯರನ್ನು ಎದುರಿಸಿದನು. ಅವನು ರಣದಲ್ಲಿ ಶಸ್ತ್ರಗಳನ್ನು ಪ್ರಯೋಗಿಸಿ ವತ್ಸದಂತ,

ನಾರಾಚ, ನಿಶಿತ ಅಂಜಲಿಕಗಳು ಮತ್ತು ಸಾಯಕಗಳಿಂದ ಮಹಾರಥ ಪಾಂಡವರ ಐವರು ಪ್ರಮುಖರನ್ನು ತಡೆದನು. ಆ ಪುರುಷರ್ಷಭನು ಕ್ರುದ್ಧನಾಗಿ ಬಹಳಷ್ಟು ಅಮಿತ ಆನೆ-ಅಶ್ವಗಳನ್ನು ಸಂಹರಿಸಿದನು. ಅವನು ರಥಿಗಳನ್ನು ರಥಗಳಿಂದ, ಅಶ್ವಾರೋಹಿಗಳನ್ನು ಅಶ್ವಗಳ ಬೆನ್ನಮೇಲಿಂದ, ಗಜಾರೋಹಿಗಳನ್ನು ಆನೆಗಳ ಮೇಲಿಂದ ಉರುಳಿಸಿ ಶತ್ರುಗಳಲ್ಲಿ ಭಯವನ್ನುಂಟುಮಾಡಿದನು. ಸಮರದಲ್ಲಿ ತ್ವರೆಮಾಡುತ್ತಿದ್ದ ಆ ಮಹಾರಥ ಭೀಷ್ಮನೊಬ್ಬನನ್ನೇ ಪಾಂಡವರು ವಜ್ರಪಾಣಿಯನ್ನು ಅಸುರರು ಹೇಗೋ ಹಾಗೆ ಸುತ್ತುವರೆದು ಮುತ್ತಿಗೆ ಹಾಕಿದರು.

ತಾಗಲು ಇಂದ್ರನ ವಜ್ರದಂತಿರುವ ನಿಶಿತ ಶರಗಳನ್ನು ಎಲ್ಲ ಕಡೆಗಳಿಂದಲೂ ಪ್ರಯೋಗಿಸುತ್ತಿರುವ ಅವನು ಘೋರ ರೂಪವನ್ನು ತಾಳಿಕೊಂಡಿರುವಂತೆ ಕಂಡನು. ಸಂಗ್ರಾಮದಲ್ಲಿ ಯುದ್ಧ ಮಾಡುತ್ತಿದ್ದ ಅವನ ಮಹಾ ಧನುಸ್ಸು ಇಂದ್ರನ ಧನುಸ್ಸಿನಂತೆ ನಿತ್ಯವೂ ಮಂಡಲಾಕಾರದಲ್ಲಿದ್ದುದು ಕಂಡುಬಂದಿತು. ಸಮರದಲ್ಲಿ ಅವನ ಕರ್ಮವನ್ನು ನೋಡಿ ಧೃತರಾಷ್ಟ್ರನ ಪುತ್ರರು ಪರಮ ವಿಸ್ಮಿತರಾಗಿ ಪಿತಾಮಹನನ್ನು ಗೌರವಿಸಿದರು. ಪಾರ್ಥರು ವಿಮನಸ್ಕರಾಗಿ ರಣದಲ್ಲಿ ಯುದ್ಧ ಮಾಡುತ್ತಿದ್ದ ಶೂರ ವಿಪ್ರಚಿತ್ತಿಯನ್ನು ಅಮರರು ಹೇಗೋ ಹಾಗೆ ಭೀಷ್ಮನನ್ನು ನೋಡುತ್ತಿದ್ದರು. ಬಾಯ್ತೆರೆದ ಅಂತಕನಂತಿದ್ದ ಅವನನ್ನು ತಡೆಯಲು ಅವರಿಗೆ ಸಾಧ್ಯವಾಗಲಿಲ್ಲ. ಅಂದಿನ ಹತ್ತನೆಯ ದಿವಸದಂದು ಭೀಷ್ಮನು ತನ್ನ ನಿಶಿತ ಬಾಣಗಳಿಂದ ಬೆಂಕಿಯು ಕಾಡನ್ನು ಸುಡುವಂತೆ ಶಿಖಂಡಿಯ ರಥಸೇನೆಯನ್ನು ಸುಟ್ಟುಹಾಕಿದನು.

ಶಿಖಂಡಿಯು ಕಾಲನು ಸೃಷ್ಟಿಸಿದ ಅಂತಕನಂತೆ ಕ್ರುದ್ಧನಾಗಿ ಅವನನ್ನು ಸ್ತನಾಂತರದಲ್ಲಿ ಮೂರು ಸರ್ಪವಿಷದಂತಿರುವ ಬಾಣಗಳಿಂದ ಹೊಡೆದನು. ಆಳವಾಗಿ ಚುಚ್ಚಿದ ಬಾಣಗಳು ಶಿಖಂಡಿಯವು ಎಂದು ನೋಡಿದ ಭೀಷ್ಮನು ಸಂಕ್ರುದ್ಧನಾದರೂ ತಿರುಗಿ ಹೊಡೆಯದೇ ನಗುತ್ತಾ ಹೇಳಿದನು:

> "ನನ್ನನ್ನು ನೀನು ಹೊಡೆಯಲು ಬಯಸುತ್ತೀಯೋ ಇಲ್ಲವೋ ನಾನು ಎಂದೂ ನಿನ್ನೊಡನೆ ಯುದ್ಧ ಮಾಡುವುದಿಲ್ಲ. ಏಕೆಂದರೆ ಧಾತ್ರನು ನಿನ್ನನ್ನು ಹೇಗೆ ಮಾಡಿದ್ದನೋ ಅದೇ ಶಿಖಂಡಿನಿಯು ನೀನು."

ಅವನ ಆ ಮಾತನ್ನು ಕೇಳಿ ಕ್ರೋಧಮೂರ್ಛಿತನಾದ ಶಿಖಂಡಿಯು ಕಟವಾಯಿಯನ್ನು ನೆಕ್ಕುತ್ತಾ ಭೀಷ್ಮನಿಗೆ ಹೇಳಿದನು:

> "ಮಹಾಬಾಹೋ! ಕ್ಷತ್ರಿಯರ ಕ್ಷಯಂಕರನಾದ ನಿನ್ನನ್ನು ನಾನು ಬಲ್ಲೆ. ನೀನು ಜಾಮದಗ್ನಿಯೊಡನೆಯೂ ಯುದ್ಧಮಾಡಿದ್ದೆಯೆಂದು ಕೇಳಿದ್ದೇನೆ. ನಿನ್ನ ಪ್ರಭಾವವು ದಿವ್ಯವಾದುದೆಂದು ನಾನು ಬಹಳ ಕೇಳಿದ್ದೇನೆ. ನಿನ್ನ ಪ್ರಭಾವವನ್ನು ತಿಳಿದೂ ನಾನು ಇಂದು ನಿನ್ನೊಡನೆ ಯುದ್ಧಮಾಡಲು ಬಯಸುತ್ತೇನೆ. ಪಾಂಡವರಿಗೂ ಮತ್ತು ನನಗೂ ಪ್ರಿಯವಾದುದನ್ನು ಮಾಡಲು ನಾನು ಇಂದು ರಣದಲ್ಲಿ ನಿನ್ನೊಡನೆ ಹೋರಾಡುತ್ತೇನೆ. ನಾನು

ಖಂಡಿತವಾಗಿಯೂ ನಿನ್ನನ್ನು ಕೊಲ್ಲುತ್ತೇನೆ. ನಿನ್ನ ಮುಂದೆಯೇ ಈ ಸತ್ಯವನ್ನು ಆಣೆಯಿಟ್ಟು ಹೇಳುತ್ತಿದ್ದೇನೆ. ನನ್ನ ಈ ಮಾತನ್ನು ಕೇಳಿ ಏನು ಒಳ್ಳೆಯದೆಂದು ಯೋಚಿಸುತ್ತೀಯೋ ಹಾಗೆ ಮಾಡು. ಭೀಷ್ಮ ! ನೀನು ನನ್ನನ್ನು ಹೊಡೆಯಲು ಇಚ್ಛಿಸುತ್ತೀಯೋ ಅಥವಾ ಇಲ್ಲವೋ ನೀನು ಮಾತ್ರ ನನ್ನಿಂದ ಜೀವಂತ ಉಳಿಯಲಾರೆ! ಕೊನೆಯದಾಗಿ ಈ ಲೋಕವನ್ನು ನೋಡಿಕೋ !"

ಹೀಗೆ ಹೇಳಿ ಅವನು ರಣದಲ್ಲಿ ಭೀಷ್ಮನನ್ನು ವಾಕ್ಯಸಾಯಕಗಳಲ್ಲದೇ ಐದು ನತಪರ್ವಗಳಿಂದ ಹೊಡೆದನು. ಅವನ ಆ ಮಾತನ್ನು ಕೇಳಿ ಪರಂತಪ ಸವ್ಯಸಾಚಿಯು ಇದೇ ಸಮಯವೆಂದು ಯೋಚಿಸಿ ಶಿಖಂಡಿಯುನ್ನು ಪ್ರಚೋದಿಸಿದನು:

"ನಾನು ನಿನ್ನ ಹಿಂದಿನಿಂದ ಶತ್ರುವನ್ನು ಶರಗಳಿಂದ ಹೊಡೆಯುತ್ತೇನೆ. ಸರಂಬ್ಧನಾಗಿ ಆ ಭೀಮಪರಾಕ್ರಮ ಭೀಷ್ಮನನ್ನು ಆಕ್ರಮಿಸು. ಈ ಮಹಾಬಲನು ನಿನ್ನನ್ನು ಪೀಡಿಸಲು ಅಶಕ್ತನು. ಆದುದರಿಂದ ಇಂದು ಭೀಷ್ಮನ ಮೇಲೆ ಆಕ್ರಮಣ ಮಾಡು. ಒಂದು ವೇಳೆ ನೀನು ಇಂದು ಭೀಷ್ಮನನ್ನು ಕೊಲ್ಲದೇ ಹಿಂದಿರುಗಿದರೆ ನನ್ನೊಡನೆ ನೀನೂ ಕೂಡ ಲೋಕದ ಅಪಹಾಸ್ಯಕ್ಕೆ ಈಡಾಗುತ್ತೀಯೆ. ಈ ಪರಮ ಆಹವದಲ್ಲಿ ನಾವು ಅಪಹಾಸ್ಯಕ್ಕೆ ಒಳಗಾಗದಂತೆ ಮಾಡು. ರಣದಲ್ಲಿ

ಪಿತಾಮಹನನ್ನು ಕೊಲ್ಲುವ ಪ್ರಯತ್ನವನ್ನು ಮಾಡು. ಎಲ್ಲ ರಥಿಗಳನ್ನೂ ತಡೆಹಿಡಿದು ನಾನು ನಿನ್ನ ಯುದ್ಧದಲ್ಲಿ ರಕ್ಷಣೆಯನ್ನು ಮಾಡುತ್ತೇನೆ. ಪಿತಾಮಹನನ್ನು ಸಾಧಿಸು. ದ್ರೋಣ, ದ್ರೋಣಪುತ್ರ, ಕೃಪ, ಸುಯೋಧನ, ಚಿತ್ರಸೇನ, ವಿಕರ್ಣ, ಸೈಂಧವ ಜಯದ್ರಥ, ಅವಂತಿಯ ವಿಂದಾನುವಿಂದರು, ಕಾಂಬೋಜದ ಸುದಕ್ಷಿಣ, ಶೂರ ಭಗದತ್ತ, ಮಹಾರಥ ಮಾಗಧ, ರಣಶೂರ ಸೌಮದತ್ತಿ, ರಾಕ್ಷಸ ಆರ್ಶ್ಯಶೃಂಗಿ, ತ್ರಿಗರ್ತರಾಜ, ಮತ್ತು ರಣದಲ್ಲಿ ಸರ್ವ ಮಹಾರಥರನ್ನು ಸಮುದ್ರದ ಅಲೆಗಳನ್ನು ದಡವು ಹೇಗೋ ಹಾಗೆ ತಡೆದು ನಿಲ್ಲಿಸುತ್ತೇನೆ. ಇಲ್ಲಿ ನಿಂತಿರುವ ಸರ್ವ ಸೈನಿಕರೊಂದಿಗೆ ಕುರುಗಳನ್ನು ತಡೆಯುತ್ತೇನೆ. ರಣದಲ್ಲಿ ಪಿತಾಮಹನನ್ನು ಸಂಹರಿಸು!”

## ಭೀಷ್ಮ-ದುರ್ಯೋಧನರ ಸಂವಾದ

ಪಿತಾಮಹನನ್ನು ಮುಂದಿರಿಸಿಕೊಂಡು ಕೌರವರ ಕಡೆಯ ಅನೇಕ ಶತ ಸಹಸ್ರ ಮಹಾರಥರು ಸುಸಜ್ಜಿತವಾದ ರಥ, ಆನೆ ಮತ್ತು ಕುದುರೆಗಳ ಗಣಗಳೊಂದಿಗೆ ಯುದ್ಧಕ್ಕೆ ಧಾವಿಸಿದರು. ತನ್ನ ಸೇನೆಯನ್ನು ಪಾಂಡವ ಜಯಂತನು ಪೀಡಿಸುತ್ತಿರುವುದನ್ನು ನೋಡಿ ದುರ್ಯೋಧನನು ತುಂಬಾ ಪೀಡಿತನಾಗಿ ಭೀಷ್ಮನಿಗೆ ಹೇಳಿದನು:

“ಅಯ್ಯಾ! ಈ ಪಾಂಡುಸುತ ಕೃಷ್ಣಸಾರಥಿ ಶ್ವೇತಾಶ್ವನು

ಅಗ್ನಿಯು ಕಾನನದಂತೆ ನನ್ನವರೆಲ್ಲರನ್ನೂ ಸುಡುತ್ತಿದ್ದಾನೆ. ಗಾಂಗೇಯ! ನೋಡು! ಪಾಂಡವನಿಂದ ವಧಿಸಲ್ಪಡುತ್ತಿರುವ ಸೇನೆಗಳು ಎಲ್ಲಕಡೆ ಓಡಿಹೋಗುತ್ತಿವೆ. ಕಾನನದಲ್ಲಿ ಪಾಲಕನು ಪಶುಗಣಗಳನ್ನು ಹೇಗೆ ಕೊಲ್ಲುತ್ತಾನೋ ಹಾಗೆ ನನ್ನ ಸೈನ್ಯವೂ ಕೊಲ್ಲಲ್ಪಡುತ್ತಿದೆ. ಧನಂಜಯನ ಶರಗಳಿಂದ ಭಗ್ನವಾಗಿ ಇಲ್ಲಿ ಅಲ್ಲಿ ಓಡಿಹೋಗುತ್ತಿರುವ ನನ್ನ ಸೇನೆಯನ್ನು ಈ ದುರಾಧರ್ಷ ಭೀಮನು ಓಡಿಸುತ್ತಿದ್ದಾನೆ. ಸಾತ್ಯಕಿ, ಚೇಕಿತಾನ, ಪಾಂಡವ ಮಾದ್ರೀಪುತ್ರರೀರ್ವರು ಮತ್ತು ವಿಕ್ರಾಂತ ಅಭಿಮನ್ಯುವು ನನ್ನ ಸೇನೆಯನ್ನು ಸುಡುತ್ತಿದ್ದಾರೆ. ಮಹಾಬಲರಿಬ್ಬರು ಧೃಷ್ಟದ್ಯುಮ್ನ ಮತ್ತು ರಾಕ್ಷಸ ಘಟೋತ್ಕಚರು ವೇಗದಿಂದ ನನ್ನ ಸೈನ್ಯವನ್ನು ಓಡಿಸುತ್ತಿದ್ದಾರೆ. ಈ ಮಹಾಬಲರಿಂದ ಸೈನ್ಯವೆಲ್ಲವೂ ವಧಿಸಲ್ಪಡುತ್ತಿರಲು ನಾನು ಯುದ್ಧದಲ್ಲಿ ದೇವತುಲಪರಾಕ್ರಮಿಯಾದ ನೀನಲ್ಲದೇ ಅನ್ಯ ಗತಿಯನ್ನೂ ಸ್ಥಾನವನ್ನೂ ಕಾಣುತ್ತಿಲ್ಲ. ನೀನೊಬ್ಬನೇ ಸಾಕು. ಬೇಗನೆ ಪೀಡಿತರಾಗುತ್ತಿರುವವರ ಗತಿಯಾಗು!”

ಹೀಗೆ ಹೇಳಲು ದೇವವ್ರತ ಶಂತನುಸುತನು ಒಂದು ಕ್ಷಣ ಆಲೋಚಿಸಿ, ತನ್ನಲ್ಲಿಯೇ ನಿಶ್ಚಯ ಮಾಡಿಕೊಂಡು, ಸಮಾಧಾನಗೊಳಿಸುತ್ತಾ ದುರ್ಯೋಧನನಿಗೆ ಹೀಗೆ ಹೇಳಿದನು:

"ದುರ್ಯೋಧನ! ಇದನ್ನು ತಿಳಿದು ಸ್ಥಿರನಾಗು. ಹಿಂದೆ ನಾನು ನಿನಗೆ ಪ್ರತಿಜ್ಞೆಮಾಡಿದ್ದೆ. ಪ್ರತಿದಿನವೂ ಹತ್ತು ಸಾವಿರ ಮಹಾತ್ಮ ಕ್ಷತ್ರಿಯರನ್ನು ಸಂಹರಿಸಿ ಸಂಗ್ರಾಮದಿಂದ ಹಿಂದಿರುಗುತ್ತೇನೆ ಎಂದು. ಹೇಳಿದಂತೆಯೇ ಆ ಕೆಲಸವನ್ನು ನಾನು ಮಾಡಿ ಮುಗಿಸಿದ್ದೇನೆ. ಇಂದು ಕೂಡ ಮಹಾಹವದಲ್ಲಿ ಮಹಾಕರ್ಮವನ್ನು ಮಾಡುತ್ತೇನೆ. ಇಂದು ನಾನು ನಿಹತನಾಗಿ ಮಲಗುತ್ತೇನೆ ಅಥವಾ ಪಾಂಡವರನ್ನು ಕೊಲ್ಲುತ್ತೇನೆ. ಊಟವನ್ನು ಉಂಡಿದುದರಿಂದ ನನಗೆ ನಿನ್ನ ಮೇಲಿರುವ ಮಹಾ ಋಣದಿಂದ ಇಂದು ಸೇನೆಯ ಮುಂದೆ ಸತ್ತು ನನ್ನನ್ನು ಬಿಡುಗಡೆಗೊಳಿಸಿಕೊಳ್ಳುತ್ತೇನೆ."

ಹೀಗೆ ಹೇಳಿ ದುರಾಧರ್ಷ ಭರತಶ್ರೇಷ್ಠನು ಕ್ಷತ್ರಿಯರನ್ನು ಶರಗಳಿಂದ ಸುಡುತ್ತಾ ಪಾಂಡವರ ಸೇನೆಯನ್ನು ತಲುಪಿದನು. ಸೇನೆಯ ಮಧ್ಯೆ ನಾಗದ ವಿಷದಂತೆ ಕ್ರುದ್ಧನಾಗಿ ನಿಂತಿದ್ದ ಗಾಂಗೇಯನನ್ನು ಪಾಂಡವರು ಸುತ್ತುವರೆದರು. ಆ ಹತ್ತನೆಯ ದಿನ ಅವನು ನೂರು ಸಾವಿರರನ್ನು ಕೊಂದು ತನ್ನ ಶಕ್ತಿಯನ್ನು ಪ್ರದರ್ಶಿಸಿದನು. ಪಾಂಚಲರ ಕಡೆಯಲ್ಲಿದ್ದ ಶ್ರೇಷ್ಠ ರಾಜಪುತ್ರ ಮಹಾಬಲರನ್ನು ಅವನು ಸೂರ್ಯನು ನೀರಿನಿಂದ ತೇವಾಂಶವನ್ನು ಹೀರಿಕೊಳ್ಳುವಂತೆ ಹೀರಿಕೊಂಡನು. ತರಸ್ವಿಗಳಾಗಿದ್ದ ಹತ್ತು ಸಾವಿರ ಆನೆಗಳನ್ನು, ಪುನಃ ಹತ್ತು ಸಾವಿರ ಆರೋಹಿಗಳೊಂದಿಗೆ ಕುದುರೆಗಳನ್ನು, ಮತ್ತು ಎರಡು ಲಕ್ಷ ಪದಾತಿಗಳನ್ನು ಸಂಪೂರ್ಣವಾಗಿ ಸಂಹರಿಸಿ ಆ ನರೋತ್ತಮ ಭೀಷ್ಮನು ರಣದಲ್ಲಿ ಧೂಮವಿಲ್ಲದ

ಪಾವಕನಂತೆ ಪ್ರಜ್ವಲಿಸಿದನು. ಉತ್ತರಾಯಣದ ಮಾರ್ಗದಲ್ಲಿರುವ ಭಾಸ್ಕರನಂತೆ ಸುಡುತ್ತಿರುವ ಅವನನ್ನು ಪಾಂಡವೇಯರಲ್ಲಿ ಯಾರೂ ಕೂಡ ನೋಡಲೂ ಬಯಸುತ್ತಿರಲಿಲ್ಲ. ಆ ಮಹೇಷ್ವಾಸನಿಂದ ಪೀಡಿತರಾದ ಮಹಾರಥ ಸೃಂಜಯರೂ ಪಾಂಡವರೂ ಭೀಷ್ಮನನ್ನು ವಧಿಸಲೆಂದು ಆಕ್ರಮಣ ಮಾಡಿದರು. ಬಹುಸೇನೆಗಳಿಂದ ಆಕ್ರಮಣಿಸಲ್ಪಟ್ಟ ಮಹಾಬಾಹು ಭೀಷ್ಮ ಶಾಂತನವನು ಮೇಘಗಳಿಂದ ಮುತ್ತಲ್ಪಟ್ಟ ಶೈಲದಂತೆ ತೋರಿದನು. ದುರ್ಯೋಧನನಾದರೋ ಗಾಂಗೇಯನನ್ನು ಎಲ್ಲ ಕಡೆಗಳಿಂದಲೂ ಸುತ್ತುವರೆದು ಆ ಮಹಾ ಸೇನೆಯೊಂದಿಗೆ ಯುದ್ಧದಲ್ಲಿ ತೊಡಗಿದನು.

## ಅರ್ಜುನ-ದುಃಶಾಸನರ ಯುದ್ಧ

ಅರ್ಜುನನಾದರೋ ರಣದಲ್ಲಿ ಭೀಷ್ಮನ ವಿಕ್ರಮವನ್ನು ನೋಡಿ ಶಿಖಂಡಿಗೆ ಹೇಳಿದನು:

> “ಈಗಲೇ ಪಿತಾಮಹನನ್ನು ಕೊಲ್ಲು! ಭೀಷ್ಮನಿಗೆ ಸ್ವಲ್ಪವೂ ಇಂದು ಭಯಪಡಬೇಕಾದುದಿಲ್ಲ. ನಾನು ಉತ್ತಮ ರಥದಿಂದ ಇವನನ್ನು ತೀಕ್ಷ್ಣ ಶರಗಳಿಂದ ಬೀಳಿಸುತ್ತೇನೆ.”

ಪಾರ್ಥನು ಹೀಗೆ ಹೇಳಲು ಪಾರ್ಥನ ಮಾತನ್ನು ಕೇಳಿ ಶಿಖಂಡಿಯು ಗಾಂಗೇಯನನ್ನು ಆಕ್ರಮಣಿಸಿದನು. ಪಾರ್ಥನ ಮಾತನ್ನು ಕೇಳಿ ಹರ್ಷಿತರಾದ ಧೃಷ್ಟದ್ಯುಮ್ನ ಮತ್ತು ಸೌಭದ್ರರು ಭೀಷ್ಮನ ಮೇಲೆ ಆಕ್ರಮಣ ಮಾಡಿದರು. ದುರ್ಯೋಧನನು ನೋಡುತ್ತಿದ್ದಂತೆಯೇ

ವೃದ್ಧರಾದ ವಿರಾಟ-ದ್ರುಪದರೂ ಕುಂತಿಭೋಜನೂ ಗಾಂಗೇಯನನ್ನು ಎದುರಿಸಿದರು. ಪಾರ್ಥನು ಹೇಳಿದುದನ್ನು ಕೇಳಿ ನಕುಲ ಸಹದೇವರೂ ವೀರ್ಯವಾನ್ ಧರ್ಮರಾಜನೂ ಹಾಗೆಯೇ ಇತರ ಎಲ್ಲ ಸೇನೆಗಳೂ ಗಾಂಗೇಯನನ್ನು ಮುತ್ತಿಗೆ ಹಾಕಿದರು. ಆಗ ಕೌರವರ ಮತ್ತು ಒಟ್ಟಾಗಿ ಸೇರಿದ್ದ ಪಾಂಡವ ಮಹಾರಥರ ನಡುವೆ ಯಥಾಶಕ್ತಿಯಾದ ಯಥೋತ್ಸಾಹಿತ ಪ್ರತಿಯುದ್ಧವು ನಡೆಯಿತು.

ಹೋರಿಯನ್ನು ವ್ಯಾಘ್ರದ ಮರಿಯೊಂದು ಕಚ್ಚಲು ಹೋಗುವಂತೆ ರಣದಲ್ಲಿ ಭೀಷ್ಮನನ್ನು ತಲುಪಲು ಹೋಗುತ್ತಿದ್ದ ಚೇಕಿತಾನನನ್ನು ಚಿತ್ರಸೇನನು ಎದುರಿಸಿದನು. ಭೀಷ್ಮನ ಬಳಿ ಹೋಗುತ್ತಿದ್ದ ಧೃಷ್ಟದ್ಯುಮ್ನನನ್ನು ತ್ವರೆಮಾಡಿ ರಣದಲ್ಲಿ ಪ್ರಯತ್ನಪಟ್ಟು ಕೃತವರ್ಮನು ತಡೆದನು. ಗಾಂಗೇಯನ ವಧೆಯನ್ನು ಇಚ್ಛಿಸಿ ಸುಸಂಕ್ರುದ್ಧನಾಗಿ ತ್ವರೆಮಾಡುತ್ತಿದ್ದ ಭೀಮಸೇನನನ್ನು ಸೌಮದತ್ತಿಯು ತಡೆದನು. ಹಾಗೆಯೇ ಅನೇಕ ಸಾಯಕಗಳನ್ನು ಬೀರುತ್ತಿದ್ದ ನಕುಲನನ್ನು ಭೀಷ್ಮನ ಜೀವಿತವನ್ನು ಇಚ್ಛಿಸಿ ವಿಕರ್ಣನು ತಡೆದನು. ಯುದ್ಧದಲ್ಲಿ ಭೀಷ್ಮನ ರಥದ ಕಡೆ ಹೋಗಲು ಪ್ರಯತ್ನಿಸುತ್ತಿದ್ದ ಸಹದೇವನನ್ನು ಸಂಕ್ರುದ್ಧನಾದ ಶಾರದ್ವತ ಕೃಪನು ತಡೆದನು. ಭೀಷ್ಮನ ನಿಧನವನ್ನು ತರಲು ಹೋಗುತ್ತಿದ್ದ ಕ್ರೂರಕರ್ಮಿ ಭೈಮಸೇನಿ ಮಹಾಬಲ ರಾಕ್ಷಸನನ್ನು ಬಲೀ ದುರ್ಮುಖನು ಎದುರಿಸಿದನು. ಸಾತ್ಯಕಿಯನ್ನು ಆರ್ಶ್ಯಶೃಂಗಿಯು ತಡೆದನು. ಭೀಷ್ಮರಥದ ಕಡೆ ಹೋಗುತ್ತಿದ್ದ ಅಭಿಮನ್ಯುವನ್ನು ಕಾಂಬೋಜ ರಾಜ ಸುದಕ್ಷಿಣನು ತಡೆದನು. ಒಟ್ಟಿಗಿದ್ದ

ವೃದ್ಧ ವಿರಾಟ-ದ್ರುಪದರನ್ನು ಕ್ರುದ್ಧನಾದ ಅಶ್ವತ್ಥಾಮನು ತಡೆಹಿಡಿದನು. ಹಾಗೆಯೇ ಭೀಷ್ಮನ ವಧಾಕಾಂಕ್ಷಿಯಾಗಿದ್ದ ಜ್ಯೇಷ್ಠ ಪಾಂಡುಸುತ ಧರ್ಮಪುತ್ರನನ್ನು ಭಾರದ್ವಾಜನು ಪ್ರಯತ್ನಪಟ್ಟು ತಡೆದನು. ಶಿಖಂಡಿಯನ್ನು ಮುಂದಿರಿಸಿಕೊಂಡು ರಭಸದಿಂದ ಯುದ್ಧದಲ್ಲಿ ದಶದಿಕ್ಕುಗಳನ್ನೂ ಸುಡುತ್ತಾ ಭೀಷ್ಮನೆಡೆಗೆ ಬರುತ್ತಿದ್ದ ಅರ್ಜುನನನ್ನು ಮಹೇಷ್ವಾಸ ದುಃಶಾಸನನು ತಡೆದನು. ಕೌರವರ ಅನ್ಯ ಯೋಧರೂ ಕೂಡ ಭೀಷ್ಮಾಭಿಮುಖವಾಗಿ ಬರುತ್ತಿದ್ದ ಮಹಾರಥ ಪಾಂಡವರನ್ನು ತಡೆದರು. ಧೃಷ್ಟದ್ಯುಮ್ನನಾದರೋ ಸೇನೆಗಳಿಗೆ ಪುನಃ ಪುನಃ ಕೂಗಿ ಹೇಳುತ್ತಿದ್ದನು:

> “ಸಂರಬ್ಧರಾಗಿ ಮಹಾಬಲ ಭೀಷ್ಮನೊಬ್ಬನನ್ನೇ ಆಕ್ರಮಣಿಸಿರಿ. ಈ ಕುರುನಂದನ ಅರ್ಜುನನು ರಣದಲ್ಲಿ ಭೀಷ್ಮನೊಡನೆ ಯುದ್ಧ ಮಾಡುತ್ತಾನೆ. ನೀವೂ ಕೂಡ ಭೀಷ್ಮನೊಡನೆ ಯುದ್ಧ ಮಾಡಿ. ಭಯಪಡಬೇಡಿ. ಅವನಿರುವಾಗ ಭೀಷ್ಮನು ನಿಮ್ಮನ್ನು ತಲುಪಲಾರನು. ಅರ್ಜುನನನ್ನು ಸಮರದಲ್ಲಿ ವಾಸವನೂ ಕೂಡ ಯುದ್ಧದಲ್ಲಿ ಎದುರಿಸಲು ಉತ್ಸಾಹಿಸುವುದಿಲ್ಲ. ಇನ್ನು ರಣದಲ್ಲಿ ಶಕ್ತಿಯನ್ನು ಕಳೆದುಕೊಂಡ ಅಲ್ಪಜೀವಿತನಾದ ಭೀಷ್ಮನೆಲ್ಲಿ?”

ಹೀಗೆ ಸೇನಾಪತಿಯನ್ನು ಕೇಳಿ ಪಾಂಡವರ ಮಹಾರಥರು ಸಂಹೃಷ್ಟರಾಗಿ ಗಾಂಗೇಯನ ರಥದ ಕಡೆ ಧಾವಿಸಿದರು.

ಪ್ರಲಯಕಾಲದ ಜಲಪ್ರವಾಹದಂತೆ ಮುನ್ನುಗ್ಗಿ ಬರುತ್ತಿದ್ದ ಅವರನ್ನು ಸಂಹೃಷ್ಟರಾದ ಕೌರವ ಪುರುಷರ್ಷಭರು ತಡೆದು ನಿಲ್ಲಿಸಿದರು.

ಭೀಷ್ಮನ ಜೀವಿತಾಕಾಂಕ್ಷಿಯಾದ ಮಹಾರಥ ದುಃಶಾಸನನು ಭಯವನ್ನು ತ್ಯಜಿಸಿ ಧನಂಜಯನನ್ನು ಎದುರಿಸಿದನು. ಹಾಗೆಯೇ ಗಾಂಗೇಯನ ರಥದ ಕಡೆ ಬರುತ್ತಿದ್ದ ಶೂರ ಪಾಂಡವರೂ ಕೂಡ ಧೃತರಾಷ್ಟ್ರನ ಮಹಾರಥ ಮಕ್ಕಳನ್ನು ಎದುರಿಸಿದರು. ಅಲ್ಲಿ ಒಂದು ಚಿತ್ರರೂಪದ ಅದ್ಭುತವು ನಡೆಯಿತು. ದುಃಶಾಸನನ ರಥವನ್ನು ತಲುಪಿದ ಪಾರ್ಥನು ಮುಂದುವರೆಯಲಿಲ್ಲ. ದಡವು ಹೇಗೆ ಮಹಾಸಾಗರದಲ್ಲಿ ಕ್ಷೋಭೆಗೊಂಡ ಅಲೆಗಳನ್ನು ತಡೆಹಿಡಿಯುತ್ತದೆಯೋ ಹಾಗೆ ದುಃಶಾಸನನು ಕ್ರುದ್ಧನಾಗಿ ಪಾಂಡವನನ್ನು ತಡೆದನು. ಇಬ್ಬರೂ ರಥಿಗಳಲ್ಲಿ ಶ್ರೇಷ್ಠರು. ಇಬ್ಬರೂ ದುರ್ಜಯರು. ಇಬ್ಬರೂ ಕಾಂತಿ-ದೀಪ್ತಗಳಲ್ಲಿ ಚಂದ್ರಾರ್ಕಸದೃಶರು. ಅವರಿಬ್ಬರೂ ಕುಪಿತರಾಗಿ ಅನ್ಯೋನ್ಯರ ವಧಾಕಾಂಕ್ಷಿಗಳಾಗಿ ಮಹಾಯುದ್ಧದಲ್ಲಿ ಹಿಂದೆ ಮಘ-ಶಕ್ರರಂತೆ ಎದುರಾದರು. ದುಃಶಾಸನನು ಪಾಂಡವನನ್ನು ಮೂರು ವಿಶಿಖಗಳಿಂದ ಮತ್ತು ವಾಸುದೇವನನ್ನು ಇಪ್ಪತರಿಂದ ಹೊಡೆದನು. ವಾರ್ಷ್ಣೆಯನು ಪೀಡಿತನಾದುದನ್ನು ನೋಡಿ ಸಿಟ್ಟಿಗೆದ್ದ ಅರ್ಜುನನು ದುಃಶಾಸನನನ್ನು ನೂರು ನಾರಾಚಗಳಿಂದ ಹೊಡೆದನು. ಅವು ಅವನ ಕವಚವನ್ನು ಸೀಳಿ ರಕ್ತವನ್ನು ಕುಡಿದವು. ಕ್ರುದ್ಧನಾಗಿ ದುಃಶಾಸನನು ಪಾರ್ಥನ ಹಣೆಗೆ ಐದು ಸನ್ನತಪರ್ವ ಶರಗಳಿಂದ ಹೊಡೆದನು. ಲಾಲಾಟಕ್ಕೆ ಚುಚ್ಚಿಕೊಂಡಿದ್ದ ಆ ಮೂರು ಬಾಣಗಳಿಂದ

ಪಾಂಡವೋತ್ತಮನು ಮೂರು ಎತ್ತರ ಶೃಂಗಗಳಿಂದ ಕೂಡಿದ ಮೇರುವಿನಂತೆ ಶೋಭಿಸಿದನು. ಅ ಧನ್ವಿಯಿಂದ ಅತಿಯಾಗಿ ಹೊಡೆಯಲ್ಪಟ್ಟ ಮಹೇಷ್ವಾಸ ಪಾರ್ಥನು ರಣದಲ್ಲಿ ಕಿಂಶುಕ ಪುಷ್ಪದಂತೆ ವಿರಾಜಿಸಿದನು.

ಆಗ ಕ್ರುದ್ಧನಾದ ಪಾಂಡವನು ದುಃಶಾಸನನನ್ನು ಅಮವಾಸ್ಯೆಯಂದು ಸಂಕ್ರುದ್ಧ ಉಗ್ರ ರಾಹುವು ನಿಶಾಕರನನ್ನು ಹೇಗೋ ಹಾಗೆ ಪೀಡಿಸತೊಡಗಿದನು. ಬಲವತ್ತಾಗಿ ಪೀಡೆಗೊಳಗದ ದುಃಶಾಸನನು ಪಾರ್ಥನನ್ನು ಶಿಲಾಶಿತ ಕಂಕಪತ್ರಗಳಿಂದ ಹೊಡೆದನು. ಪರಾಕ್ರಮೀ ಪಾರ್ಥನು ಅವನ ಧನುಸ್ಸನ್ನು ಕತ್ತರಿಸಿ ತ್ವರೆಮಾಡಿ ನಂತರ ಅವನನ್ನೂ ಒಂಭತ್ತು ಶರಗಳಿಂದ ಹೊಡೆದನು. ಭೀಷ್ಮನ ಮುಂದೆ ನಿಂತಿದ್ದ ಅವನು ಬೇರೊಂದು ಬಿಲ್ಲನ್ನು ಎತ್ತಿಕೊಂಡು ಅರ್ಜುನನನ್ನು ಇಪ್ಪತ್ತೈದು ಬಾಣಗಳಿಂದ ಬಾಹು-ಎದೆಗಳಿಗೆ ಹೊಡೆದನು. ಆಗ ಶತ್ರುಕರ್ಶನ ಪಾಂಡವನು ಅವನ ಮೇಲೆ ಕ್ರುದ್ಧನಾಗಿ ಅನೇಕ ಯಮದಂಡಗಳಂತಿರುವ ಘೋರ ವಿಶಿಖಗಳನ್ನು ಪ್ರಯೋಗಿಸಿದನು. ತಲುಪುವುದರೊಳಗೇ ಆ ಬಾಣಗಳನ್ನು ದುಃಶಾಸನನು ತುಂಡರಿಸಿದನು. ಪ್ರಯತ್ನಿಸುತ್ತಿರುವ ಪಾರ್ಥನ ಅದೊಂದು ಅದ್ಭುತವಾಯಿತು. ಪಾರ್ಥನೂ ಕೂಡ ದುಃಶಾಸನನನ್ನು ನಿಶಿತ ಬಾಣಗಳಿಂದ ಹೊಡೆದನು. ಆಗ ಕ್ರುದ್ಧನಾದ ಪಾರ್ಥನು ಬಿಲ್ಲಿಗೆ ಸ್ವರ್ಣಪುಂಖ ಶಿಲಾಶಿತ ಶರಗಳನ್ನು ಹೂಡಿ ಪ್ರಯೋಗಿಸಿದನು. ಸರೋವರವನ್ನು ಸೇರಿ ಹಂಸಗಳು ಹೇಗೋ ಹಾಗೆ ಅವು ಆ

ಮಹಾತ್ಮನ ದೇಹದ ಒಳಹೊಕ್ಕವು. ಮಹಾತ್ಮ ಪಾಂಡವನಿಂದ ಪೀಡಿತನಾದ ದುಃಶಾಸನನು ಪಾರ್ಥನನ್ನು ರಣದಲ್ಲಿಯೇ ಬಿಟ್ಟು ಕೂಡಲೇ ಭೀಷ್ಮನ ರಥವನ್ನು ಆಶ್ರಯಿಸಿದನು. ಅಗಾಧವಾಗಿ ಗಾಯಗೊಂಡಿದ್ದ ಅವನಿಗೆ ಭೀಷ್ಮನು ನೆರಳಾದನು. ಪುನಃ ಎಚ್ಚೆತ್ತು ದುಃಶಾಸನನು ಅವನನ್ನು ತಡೆಯಲು ಪ್ರಯತ್ನಿಸಿದನು. ಹಿಂದೆ ವೃತ್ರನು ಪುರಂದರನನ್ನು ಹೇಗೋ ಹಾಗೆ ಅವನು ಮಹಾವೀರ್ಯದಿಂದ ನಿಶಿತ ಬಾಣಗಳಿಂದ ಪಾರ್ಥನನ್ನು ಹೊಡೆದನು. ಆದರೆ ಅರ್ಜುನನು ವಿವ್ಯಥನಾಗಲಿಲ್ಲ.

## ದ್ವಂದ್ವ ಯುದ್ಧ

ಭೀಷ್ಮನೊಂದಿಗೆ ಯುದ್ಧಮಾಡಲು ಕವಚವನ್ನು ಧರಿಸಿ ಬರುತ್ತಿದ್ದ ಸಾತ್ಯಕಿಯನ್ನು ಮಹೇಷ್ವಾಸ ಆರ್ಶ್ಯಶೃಂಗಿ (ಅಲಂಬುಷನು) ಯು ತಡೆದನು. ಮಾಧವನಾದರೋ ಸುಸಂಕ್ರುದ್ಧನಾಗಿ ರಣದಲ್ಲಿ ನಕ್ಕವನಂತೆ ರಾಕ್ಷಸನನ್ನು ಒಂಭತ್ತು ಶರಗಳಿಂದ ಹೊಡೆದನು. ಹಾಗೆಯೇ ರಾಕ್ಷಸನೂ ಕೂಡ ಸಂಕ್ರುದ್ಧನಾಗಿ ಶಿನಿಪುಂಗವ ಮಾಧವನನ್ನು ನಿಶಿತ ಶರಗಳಿಂದ ಹೊಡೆದನು. ಪರವೀರಹ ಮಾಧವ ಶೈನೇಯನು ಸುಸಂಕ್ರುದ್ಧನಾಗಿ ರಾಕ್ಷಸನ ಮೇಲೆ ಶರಸಂಘಗಳನ್ನು ಪ್ರಯೋಗಿಸಿದನು. ಆಗ ರಾಕ್ಷಸನು ಮಹಾಬಾಹು ಸತ್ಯವಿಕ್ರಮಿ ಸಾತ್ಯಕಿಯನ್ನು ತೀಕ್ಷ್ಣ ವಿಶಿಖಗಳಿಂದ ಹೊಡೆದು ಸಿಂಹನಾದಗೈದನು. ರಾಕ್ಷಸನಿಂದ ತುಂಬಾ ಗಾಯಗೊಂಡ ಮಾಧವನಾದರೋ ಧೈರ್ಯದಿಂದ ಅವನನ್ನು ಹೊಡೆದನು ಮತ್ತು

ಜೋರಾಗಿ ಕೂಗಿದನು. ಆಗ ಭಗದತ್ತನು ಕ್ರುದ್ಧನಾಗಿ ಮಹಾಗಜವನ್ನು ಅಂಕುಶದಿಂದ ಚುಚ್ಚುವಂತೆ ಮಾಧವನನ್ನು ನಿಶಿತ ಶರಗಳಿಂದ ಪೀಡಿಸಿದನು. ಆಗ ರಥಿಗಳಲ್ಲಿ ಶ್ರೇಷ್ಠ ಶೈನೇಯನು ಯುದ್ಧದಲ್ಲಿ ರಾಕ್ಷಸನನ್ನು ಬಿಟ್ಟು ಪ್ರಾಗ್ಜ್ಯೋತಿಷನ ಮೇಲೆ ಸನ್ನತಪರ್ವ ಶರಗಳನ್ನು ಎಸೆದನು. ರಾಜಾ ಪ್ರಾಗ್ಜ್ಯೋತಿಷನು ಮಾಧವನ ಮಹಾಧನುವನ್ನು ಕೈಚಳಕದಿಂದ ಶಿತಧಾರ ಭಲ್ಲದಿಂದ ಕತ್ತರಿಸಿದನು. ಆಗ ವೇಗದಿಂದ ಪರವೀರಹನು ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ರಣದಲ್ಲಿ ಕ್ರುದ್ಧನಾಗಿ ಭಗದತ್ತನನ್ನು ನಿಶಿತ ಶರಗಳಿಂದ ಹೊಡೆದನು. ಸಾತ್ಯಕಿಯ ಆ ಪ್ರಹಾರದಿಂದ ಅತಿಯಾಗಿ ಗಾಯಗೊಂಡ ಮಹೇಷ್ವಾಸನು ಕಟವಾಯಿಗಳನ್ನು ನೆಕ್ಕುತ್ತ ಕನಕವೈಡೂರ್ಯಭೂಷಿತವಾದ ಉಕ್ಕಿನ ದೃಢವಾದ ಯಮದಂಡದಂತಿದ್ದ ಘೋರ ಶಕ್ತಿಯನ್ನು ಸಾತ್ಯಕಿಯ ಮೇಲೆ ಎಸೆದನು. ಅವನ ಬಾಹುಬಲದಿಂದ ಎಸೆಯಲ್ಪಟ್ಟು ವೇಗದಿಂದ ಬರುತ್ತಿದ್ದ ಅದನ್ನು ಸಾತ್ಯಕಿಯು ಸಾಯಕಗಳಿಂದ ಮೂರುಭಾಗಗಳನ್ನಾಗಿ ತುಂಡರಿಸಿದನು. ಅದು ಪ್ರಭೆಯನ್ನು ಕಳೆದುಕೊಂಡು ಮಹಾ ಉಲ್ಕೆಯಂತೆ ಭೂಮಿಯ ಮೇಲೆ ಬಿದ್ದಿತು. ಶಕ್ತಿಯನ್ನು ನಾಶಪಡಿಸಿದದನ್ನು ನೋಡಿ ದುರ್ಯೋಧನನು ದೊಡ್ಡ ರಥಸೇನೆಯಿಂದ ಮಾಧವನನ್ನು ತಡೆದನು. ಮಹಾರಥ ವಾರ್ಷ್ಣೇಯನನ್ನು ಸುತ್ತುವರೆದು ದುರ್ಯೋಧನನು ತುಂಬಾ ಹರ್ಷಿತನಾಗಿ ತನ್ನ ತಮ್ಮಂದಿರಿಗೆಲ್ಲರಿಗೆ ಹೇಳಿದನು:

“ಕೌರವ್ಯರೇ! ಸಾತ್ಯಕಿಯು ಯುದ್ಧದಲ್ಲಿ ಜೀವಂತವಾಗಿ

ಹಿಂದಿರುಗದಂತೆ ಮಹಾ ಒಮ್ಮುಖವಾಗಿ ನೀವೆಲ್ಲ ಯುದ್ಧಮಾಡಿ. ಇವನು ಹತನಾದರೆ ಪಾಂಡವರ ಮಹಾಬಲವು ಹತವಾದಂತೆ ಎಂದು ನನಗನ್ನಿಸುತ್ತದೆ.”

ಹಾಗೆಯೇ ಆಗಲೆಂದು ಅವನ ಮಾತನ್ನು ಸ್ವೀಕರಿಸಿ ಮಹಾರಥರು ಭೀಷ್ಮನನ್ನು ಎದುರಿಸಲು ಹೋಗುತ್ತಿದ್ದ ಶೈನೇಯನೊಂದಿಗೆ ಯುದ್ಧಮಾಡಗಿದರು. ಭೀಷ್ಮನೆಡೆಗೆ ಬರುತ್ತಿದ್ದ ಅಭಿಮನ್ಯುವನ್ನು ಬಲವಾನ್ ಕಾಂಬೋಜರಾಜನು ತಡೆದನು. ಆರ್ಜುನಿಯು ಆ ನೃಪತಿಯನ್ನು ಸನ್ನತಪರ್ವ ಶರಗಳಿಂದ ಹೊಡೆದು ಪುನಃ ಅವನನ್ನು ಅರವತ್ನಾಲ್ಕು ಬಾಣಗಳಿಂದ ಹೊಡೆದನು. ಭೀಷ್ಮನ ಜೀವಿತವನ್ನು ಬಯಸಿದ ಸುದಕ್ಷಿಣನಾದರೋ ಕಾರ್ಷ್ಣಿಯನ್ನು ಐದರಿಂದ ಮತ್ತು ಸಾರಥಿಯನ್ನು ಒಂಭತ್ತರಿಂದ ಹೊಡೆದನು. ಶತ್ರುತಾಪನ ಶಿಖಂಡಿಯು ಗಾಂಗೇಯನನ್ನು ಎದುರಿಸಿದಾಗ ಇವರಿಬ್ಬರ ನಡುವೆ ಪರಾಕ್ರಮದ ಮಹಾ ಯದ್ಧವು ನಡೆಯಿತು. ಮಹಾರಥ ವೃದ್ಧ ವಿರಾಟ-ದ್ರುಪದರು ಸಂರಬ್ಧರಾಗಿ ಮಹಾಸೇನೆಯನ್ನು ತಡೆಯುತ್ತಾ ಭೀಷ್ಮನ ಕಡೆಗೆ ಮುನ್ನುಗ್ಗಿದರು. ಆಗ ರಥಸತ್ತಮ ಅಶ್ವತ್ಥಾಮನು ಕ್ರುದ್ಧನಾಗಿ ಅಲ್ಲಿಗೆ ಬರಲು ಅವನು ಮತ್ತು ಅವರ ನಡುವೆ ಯುದ್ಧವು ನಡೆಯಿತು. ವಿರಾಟನು ಆಹವಶೋಭಿ, ಮಹೇಷ್ವಾಸ, ಪ್ರಯತ್ನಿಸುತ್ತಿದ್ದ ದ್ರೌಣಿಯನ್ನು ಹತ್ತು ಭಲ್ಲೆಗಳಿಂದ ಹೊಡೆದನು. ದ್ರುಪದನೂ ಕೂಡ ಭೀಷ್ಮನ ಮುಂದೆ ನಿಂತಿದ್ದ ಗುರುಪುತ್ರನನ್ನು ಎದುರಿಸಿ ಅವನನ್ನು ಮೂರು ನಿಶಿತ ಬಾಣಗಳಿಂದ ಹೊಡೆದನು. ಅಶ್ವತ್ಥಾಮನು ಭೀಷ್ಮನ ಕಡೆ

ಮುನ್ನುಗ್ಗುತ್ತಿರುವ ವೃದ್ಧ ವಿರಾಟ-ದ್ರುಪದರನ್ನು ಹತ್ತು ಶರಗಳಿಂದ ಹೊಡೆದನು. ಆಗ ಆ ಇಬ್ಬರು ವೃದ್ಧರು ಘೋರ ಸಾಯಕಗಳಿಂದ ದ್ರೌಣಿಯನ್ನು ತಿರುಗಿ ಹೊಡೆಯುವ ಮಹಾ ಅದ್ಭುತವು ಕಂಡಿತು.

ವನದಲ್ಲಿ ಮದಿಸಿದ ಆನೆಯ ಮೇಲೆ ಮತ್ತೊಂದು ಆನೆಯು ಎರಗುವಂತೆ ಮುನ್ನುಗ್ಗುತ್ತಿದ್ದ ಸಹದೇವನನ್ನು ಶಾರದ್ವತ ಕೃಪನು ಎದುರಿಸಿದನು. ಕೃಪನು ಮಹಾರಥ ಮಾದ್ರೀಪುತ್ರನನ್ನು ಬೇಗನೇ ಎಪ್ಪತ್ತು ರುಕ್ಮಭೂಷಣ ಬಾಣಗಳಿಂದ ಹೊಡೆದನು. ಅವನ ಚಾಪವನ್ನು ಮಾದ್ರೀಸುತನು ಸಾಯಕಗಳಿಂದ ಎರಡಾಗಿ ತುಂಡರಿಸಿದನು. ಕೂಡಲೇ ಧನುಸ್ಸನ್ನು ತುಂಡರಿಸಿ ಅವನನ್ನು ಒಂಭತ್ತು ಶರಗಳಿಂದ ಹೊಡೆದನು. ಅವನು ಭಾರಸಾಧನದ ಇನ್ನೊಂದು ಬಿಲ್ಲನ್ನು ತೆಗೆದುಕೊಂಡು ಸುಸಂಹೃಷ್ಟನಾಗಿ, ಭೀಷ್ಮನ ಜೀವಿತವನ್ನು ಇಚ್ಛಿಸಿ ಕ್ರುದ್ಧನಾಗಿ ಮಾದ್ರೀಪುತ್ರನನ್ನು ಹತ್ತು ನಿಶಿತ ಬಾಣಗಳಿಂದ ಅವನ ಎದೆಗೆ ಗುರಿಯಿಟ್ಟು ಹೊಡೆದನು. ಹಾಗೆಯೇ ಪಾಂಡವನೂ ಕೂಡ ಭೀಷ್ಮನ ವಧೆಯನ್ನು ಬಯಸಿ ಕ್ರುದ್ಧನಾಗಿ ಅಮರ್ಷಣ ಶಾರದ್ವತನ ಎದೆಗೆ ಹೊಡೆದನು. ಅವರಿಬ್ಬರ ಯುದ್ಧವು ಘೋರರೂಪಿಯೂ ಭಯಾವಹವೂ ಆಗಿದ್ದಿತು. ಆದರೆ ಭೀಷ್ಮನ ಜೀವವನ್ನು ರಕ್ಷಿಸುತ್ತಾ ಶತ್ರುತಾಪನ ವಿಕರ್ಣನು ಅರವತ್ತು ಸಾಯಕಗಳಿಂದ ರಣದಲ್ಲಿ ಕ್ರುದ್ಧನಾದ ನಕುಲನನ್ನು ಹೊಡೆದನು. ವಿಕರ್ಣನಿಂದ ತುಂಬಾ ಗಾಯಗೊಂಡ ನಕುಲನೂ ಕೂಡ ವಿಕರ್ಣನನ್ನು ಎಪ್ಪತ್ತೇಳು ಶಿಲೀಮುಖಗಳಿಂದ ಹೊಡೆದನು. ಗೋಹಟ್ಟಿಯಲ್ಲಿ ಗೋವಿಗಾಗಿ

ಹೋರಿಗಳೆರಡು ಹೋರಾಡುವಂತೆ ಭೀಷ್ಮನ ಕಾರಣದಿಂದ ಆ ಇಬ್ಬರು ಪರಂತಪರೂ ನರಶಾರ್ದೂಲ ವೀರರೂ ಅನ್ಯೋನ್ಯರನ್ನು ಗಾಯಗೊಳಿಸಿದರು.

ಭೀಷ್ಮನನ್ನು ಉದ್ದೇಶಿಸಿ ಕೌರವ ಸೇನೆಯನ್ನು ನಾಶಪಡಿಸುತ್ತಾ ರಣದಲ್ಲಿ ಮುನ್ನುಗ್ಗಿ ಬರುತ್ತಿದ್ದ ಘಟೋತ್ಕಚನನ್ನು ದುರ್ಮುಖನು ಎದುರಿಸಿದನು. ಆಗ ಹೈಡಿಂಬಿಯಾದರೋ ಕ್ರುದ್ಧನಾಗಿ ಶತ್ರುತಾಪನ ದುರ್ಮುಖನನ್ನು ತೊಂಭತ್ತು ನಿಶಿತ ಶರಗಳಿಂದ ಎದೆಗೆ ಗುರಿಯಿಟ್ಟು ಹೊಡೆದನು. ಭೀಮಸೇನಸುತನನ್ನೂ ಕೂಡ ವೀರ ದುರ್ಮುಖನು ಅರವತ್ತು ಸುಮುಖ ಶರಗಳಿಂದ ಹೊಡೆದು ಹರ್ಷದಿಂದ ಕೂಗಿದನು.

ಭೀಷ್ಮನ ವಧೆಯನ್ನು ಬಯಸಿ ಮುಂದೆ ಬರುತ್ತಿದ್ದ ಧೃಷ್ಟದ್ಯುಮ್ನನನ್ನು ಭೀಷ್ಮನ ಜೀವವನ್ನು ರಕ್ಷಿಸುತ್ತಾ ಹಾರ್ದಿಕ್ಯನು ತಡೆದನು. ವಾರ್ಷ್ಣೇಯನು ಶೂರ ಪಾರ್ಷತನನ್ನು ಐದು ಆಯಸಗಳಿಂದ ಹೊಡೆದು ಒಡನೆಯೇ ಪುನಃ ಸ್ತನಾಂತರಕ್ಕೆ ಐವತ್ತು ಬಾಣಗಳಿಂದ ಹೊಡೆದನು. ಹಾಗೆಯೇ ಪಾರ್ಷತನು ಹಾರ್ದಿಕ್ಯನನ್ನು ಒಂಭತ್ತು ನಿಶಿತ ತೀಕ್ಷ್ಣ ಕಂಕಪತ್ರಗಳಿಂದ ಮುಚ್ಚಲ್ಪಟ್ಟ ಶರಗಳಿಂದ ಹೊಡೆದನು. ಆಗ ಭೀಷ್ಮನಿಗಾಗಿ ಮಹಾರಣದಲ್ಲಿ ವೃತ್ರ-ಮಹೇಂದ್ರರ ನಡುವೆ ನಡೆದಂತೆ ಅನ್ಯೋನ್ಯರಲ್ಲಿ ನಾನು ಹೆಚ್ಚು ತಾನು ಹೆಚ್ಚು ಎಂದು ಹೊಡೆದಾಡಿದ ಯುದ್ಧವು ನಡೆಯಿತು.

ಭೀಷ್ಮನ ಕಡೆಗೆ ಬರುತ್ತಿದ್ದ ಮಹಾಬಲ ಭೀಮಸೇನನಿಗೆ ತಕ್ಷಣವೇ

ಭೂರಿಶ್ರವನು “ನಿಲ್ಲು! ನಿಲ್ಲು!” ಎಂದು ಹೇಳಿದನು. ಆಗ ಸೌಮದತ್ತಿಯು ಭೀಮಸೇನನನ್ನು ಸ್ತನಾಂತರದಲ್ಲಿ ಸುತೀಕ್ಷ್ಣ ರುಕ್ಮಪುಂಖ ನಾರಾಚಗಳಿಂದ ಹೊಡೆದನು. ಹಿಂದೆ ಸ್ಕಂದನು ಶಕ್ತಿಯಿಂದ ಹೊಡೆದಾಗ ಕ್ರೌಂಚ ಪರ್ವತವು ಶೋಭಿಸಿದಂತೆ ಪ್ರತಾಪವಾನ್ ಭೀಮಸೇನನು ಎದೆಗೆ ಹೊಡೆತವನ್ನು ತಿಂದು ಶೋಭಿಸಿದನು. ಅವರಿಬ್ಬರೂ ಸೂರ್ಯಸಂಕಾಶದ ಕರ್ಮ್ಮಾರರಿಂದ ಹದಗೊಳಿಸಲ್ಪಟ್ಟ ಬಾಣಗಳಿಂದ ಅನ್ಯೋನ್ಯರನ್ನು ಕ್ರುದ್ಧರಾಗಿ ಪುನಃ ಪುನಃ ಹೊಡೆದು ಗಾಯಗೊಳಿಸಿದರು. ಭೀಷ್ಮವಧಾಕಾಂಕ್ಷಿಯಾದ ಭೀಮನು ಮಹಾರಥ ಸೌಮದತ್ತಿಯನ್ನು ಮತ್ತು ಹಾಗೆಯೇ ಭೀಷ್ಮನ ಜಯವನ್ನು ಆಶಿಸಿದ್ದ ಸೌಮದತ್ತಿಯು ಪಾಂಡವನನ್ನೂ ಮಾಡಿದುದಕ್ಕೆ ಪ್ರತಿಮಾಡುತ್ತಾ ಪ್ರಯತ್ನಪಟ್ಟು ಯುದ್ಧಮಾಡುತ್ತಿದ್ದರು.

ಮಹಾ ಸೇನೆಯಿಂದ ಆವೃತನಾಗಿ ಭೀಷ್ಮಾಭಿಮುಖನಾಗಿ ಬರುತ್ತಿದ್ದ ಯುಧಿಷ್ಠಿರನನ್ನು ಭಾರದ್ವಾಜನು ತಡೆದನು. ಮೋಡದ ಗುಡುಗಿನಂತಿದ್ದ ದ್ರೋಣನ ರಥನಿರ್ಘೋಷವನ್ನು ಕೇಳಿ ಪ್ರಭದ್ರಕನು ಥರಥರಿಸಿದನು. ದ್ರೋಣನಿಂದ ತಡೆಯಲ್ಪಟ್ಟ ಪಾಂಡುಪುತ್ರನ ಆ ಮಹಾ ಸೇನೆಯು ಒಂದು ಹೆಜ್ಜೆಯೂ ಮುಂದೆ ಚಲಿಸಲು ಸಾಧ್ಯವಾಗಲಿಲ್ಲ.

ಕ್ರುದ್ಧನಾಗಿ ಭೀಷ್ಮನ ಕಡೆ ಬರುತ್ತಿದ್ದ ಚೇಕಿತಾನನನ್ನು ಧೃತರಾಷ್ಟ್ರನ ಮಗ ಕ್ರುದ್ಧರೂಪಿ ಚಿತ್ರಸೇನನು ತಡೆದನು. ಭೀಷ್ಮನ ಕಾರಣದಿಂದ ಪರಾಕ್ರಾಂತನಾಗಿದ್ದ ಮಹಾರಥ ಚಿತ್ರಸೇನನು ಚೇಕಿತಾನನೊಂದಿಗೆ

ಪರಮ ಶಕ್ತಿಯಿಂದ ಯುದ್ಧಮಾಡಿದನು. ಹಾಗೆಯೇ ಚೇಕಿತಾನನೂ ಕೂಡ ಚಿತ್ರಸೇನನೊಡನೆ ಹೋರಾಡಿದನು. ಆಗ ಅಲ್ಲಿ ಪರಾಕ್ರಮಯುಕ್ತ ಮಹಾಯುದ್ಧವು ನಡೆಯಿತು.

ಅರ್ಜುನನನ್ನು ತಡೆಯಲು ಬಹುವಾಗಿ ಪ್ರಯತ್ನಿಸುತ್ತಿದ್ದ ದುಃಶಾಸನನನ್ನು ವಿಮುಖನನ್ನಾಗಿ ಮಾಡಿ ಅವನು ಕೌರವ ಸೇನೆಯುನ್ನು ಮರ್ದಿಸಿದನು. ಶತ್ರುಗಳು ಭೀಷ್ಮನನ್ನು ಕೊಲ್ಲಬಾರದೆಂದು ನಿಶ್ಚಯಿಸಿ ದುಃಶಾಸನನೂ ಕೂಡ ಪರಮ ಶಕ್ತಿಯಿಂದ ಪಾರ್ಥನನ್ನು ತಡೆದನು. ಅಲ್ಲಲ್ಲಿ ದುರ್ಯೋಧನನ ಸೇನೆಯನ್ನು ವಧಿಸುತ್ತಾ ಆ ಶ್ರೇಷ್ಠ ರಥರು ಮುಂದುವರೆದರು.

## ದ್ರೋಣ-ಅಶ್ವತ್ಥಾಮರ ಸಂವಾದ

ಆಗ ವೀರ ಮಹೇಷ್ವಾಸ, ಮತ್ತವಾರಣವಿಕ್ರಮಿ ಮಹಾರಥ ದ್ರೋಣನು ಮತ್ತವಾರಣವನ್ನೂ ತಡೆಯಬಹುದಾದಂತ ಮಹಾಚಾಪವನ್ನು ಎತ್ತಿ ಹಿಡಿದು ಆ ಶ್ರೇಷ್ಠ ಧನುಸ್ಸನ್ನು ಟೇಂಕರಿಸುತ್ತಾ ಮಹಾರಥ ಪಾಂಡವೇಯರ ಸೇನೆಯ ಮೇಲೆ ಎರಗಿದನು. ಸೇನೆಗಳ ಮೇಲೆ ಆಕ್ರಮಣಮಾಡುವಾಗ ಎಲ್ಲಕಡೆ ನಿಮಿತ್ತಗಳನ್ನು ವೀಕ್ಷಿಸಿ ವೀರ್ಯವಾನ್ ನಿಮಿತ್ತಜ್ಞ ದ್ರೋಣನು ಮಗನಿಗೆ ಹೇಳಿದನು:

> “ಮಗು! ಇಂದಿನ ದಿವಸ ಮಹಾರಥ ಪಾರ್ಥನು ಸಮರದಲ್ಲಿರುವಲ್ಲಿ ಭೀಷ್ಮನನ್ನು ಕೊಲ್ಲಲು ಪರಮ ಯತ್ನವನ್ನು ಮಾಡುತ್ತಾನೆ. ನನ್ನ ಬಾಣುಗಳು ಕುಪ್ಪಳಿಸುತ್ತಿವೆ. ನನ್ನ ಧನುಸ್ಸು

ಆಕಳಿಸುವಂತಿದೆ. ಅಸ್ತ್ರಗಳು ವ್ಯರ್ಥವಾಗುತ್ತಿವೆ. ನನ್ನ ಬುದ್ಧಿಯು ಕ್ರೂರವಾಗಿ ವರ್ತಿಸುತ್ತಿದೆ. ಘೋರ ಮೃಗಪಕ್ಷಿಗಳು ದಿಕ್ಕುಗಳಲ್ಲಿ ಕೂಗುತ್ತಿವೆ. ಭಾರತರ ಸೇನೆಯ ಕಡೆ ಕೆಳಗಿನಿಂದ ಹದ್ದುಗಳು ಅದೃಶ್ಯವಾಗುತ್ತಿವೆ. ಆದಿತ್ಯನು ಪ್ರಭೆಯನ್ನು ಕಳೆದುಕೊಂಡಿರುವಂತಿದೆ. ಎಲ್ಲಕಡೆ ದಿಕ್ಕುಗಳು ಕೆಂಪಾಗಿವೆ. ಭೂಮಿಯು ಕಿರುಚಿತ್ತಿರುವಂತಿದೆ. ಕಂಪಿಸುತ್ತಿದೆ. ಕಂಕಗಳು, ಹದ್ದುಗಳು ಮತ್ತು ಬಲಾಕಗಳು ಮತ್ತೆ ಮತ್ತೆ ಕೂಗುತ್ತಿವೆ. ನರಿಗಳು ಅಶಿವವಾಗಿ ಕೂಗುತ್ತಾ ಮಹಾ ಭಯವನ್ನು ಸೂಚಿಸುತ್ತಿವೆ. ಆದಿತ್ಯಮಂಡಲದ ಮಧ್ಯದಿಂದ ಮಹಾ ಉಲ್ಕೆಯೊಂದು ಬಿದ್ದಿತು. ಪರಿಘ ನಕ್ಷತ್ರವು ಶಿರವಿಲ್ಲದೇ ಸೂರ್ಯನ್ನು ಆವರಿಸಿ ನಿಂತಿದೆ. ಕ್ಷತ್ರಿಯರ ದೇಹ ಕತ್ತರಿಸುವ ಘೋರ ಭಯವನ್ನು ಸೂಚಿಸುತ್ತಾ ಚಂದ್ರ-ಭಾಸ್ಕರರು ಘೋರರೂಪವನ್ನು ತಾಳಿದ್ದಾರೆ. ಕೌರವೇಂದ್ರನ ದೇವಾಲಯಗಳಲ್ಲಿರುವ ದೇವತೆಗಳು ಕಂಪಿಸುತ್ತಿವೆ, ನಗುತ್ತಿವೆ, ಕುಣಿಯುತ್ತಿವೆ ಮತ್ತು ರೋದಿಸುತ್ತಿವೆ. ಭಗವಾನ್ ಚಂದ್ರಮನು ಕೊಂಬುಗಳು ಕೆಳಗಾಗಿ ಕಾಣಿಸುತ್ತಿದ್ದಾನೆ.  ಧಾರ್ತರಾಷ್ಟ್ರನ ಸೇನೆಯಲ್ಲಿ ನರೇಂದ್ರರ ಮುಖಗಳು ಮಾಸಿದಂತೆ ಕಾಣುತ್ತಿವೆ. ಅವರ ಕವಚಗಳು ಹೊಳೆಯುತ್ತಿಲ್ಲ. ಎರಡೂ ಸೇನೆಗಳಲ್ಲಿ ಎಲ್ಲ ಕಡೆಗಳಿಂದ ಪಾಂಚಜನ್ಯದ ಮಹಾ ನಿರ್ಘೋಷ ಮತ್ತು ಗಾಂಡೀವದ ಟೇಂಕಾರವು ಕೇಳಿ ಬರುತ್ತಿದೆ.

ನಿಶ್ಚಯವಾಗಿಯೂ ಸಂಯುಗದಲ್ಲಿ ಬೀಭತ್ಸುವು ಉತ್ತಮ ಅಸ್ತ್ರಗಳನ್ನು ಬಳಸಿ ರಣದಲ್ಲಿ ಇತರರನ್ನು ತಪ್ಪಿಸಿಕೊಂಡು ಪಿತಾಮಹನ ಹತ್ತಿರ ಹೋಗುತ್ತಾನೆ. ಭೀಷ್ಮಾರ್ಜುನರ ಸಮಾಗಮವನ್ನು ಯೋಚಿಸಿಯೇ ನನ್ನ ಮನಸ್ಸು ಸುಡುತ್ತಿದೆ ಮತ್ತು ರೋಮಕೂಪಗಳು ಹರ್ಷಿತಗೊಳ್ಳುತ್ತಿವೆ. ಆ ಪಾಪಚೇತಸ ನಿಕೃತಿಪ್ರಜ್ಞ ಪಾಂಚಲ್ಯನನ್ನು ರಣದಲ್ಲಿ ಮುಂದಿರಿಸಿಕೊಂಡು ಪಾರ್ಥನು ಭೀಷ್ಮನೊಂದಿಗೆ ಯುದ್ಧಮಾಡಲು ಹೋಗಿದ್ದಾನೆ. ಹಿಂದೆ ಭೀಷ್ಮನು ಈ ಶಿಖಂಡಿನಿಯನ್ನು ನಾನು ಕೊಲ್ಲುವುದಿಲ್ಲವೆಂದು ಹೇಳಿದ್ದನು. ಏಕೆಂದರೆ ಸ್ತ್ರೀಯೆಂದು ಧಾತ್ರುವಿಂದ ವಿಹಿತಳಾಗಿ ದೈವವಶಾತ್ ಪುನಃ ಪುರುಷನಾಗಿದ್ದಾನೆ. ಮಹಾರಥ ಯಾಜ್ಞಸೇನಿಯು ಅಮಂಗಲಧ್ವಜನೂ ಆಗಿದ್ದಾನೆ. ಅಪಗಾಸುತನು ಆ ಅಮಂಗಲ ಕೇತುವನ್ನು ಪ್ರಹರಿಸುವುದಿಲ್ಲ. ಇದನ್ನು ಯೋಚಿಸಿ ನನ್ನ ಪ್ರಜ್ಞೆಯು ತುಂಬಾ ಸಡಿಲವಾಗುತ್ತಿದೆ. ಇಂದು ರಣದಲ್ಲಿ ಪಾರ್ಥನು ಕುರುವೃದ್ಧನನ್ನು ಆಕ್ರಮಿಸಿದ್ದಾನೆ. ಯುಧಿಷ್ಠಿರನ ಕ್ರೋಧ, ಭೀಮಾರ್ಜುನರ ಸಮಾಗಮ, ನನ್ನ ಅಸ್ತ್ರಗಳ ಸಂಭ್ರಮ ಇವುಗಳಿಂದ ಪ್ರಜೆಗಳಿಗೆ ಅಶುಭವು ನಿಶ್ಚಯ. ಪಾಂಡವನು ಮನಸ್ವೀ, ಬಲವಾನ, ಶೂರ, ಕೃತಾಸ್ತ್ರ, ದೃಢವಿಕ್ರಮಿ, ಬಹುದೂರ ಹೊಡೆಯಬಲ್ಲವನು, ದೃಢವಾಗಿ ಹಿಡಿಯಬಲ್ಲನು, ಮತ್ತು

ನಿಮಿತ್ತಗಳನ್ನು ಅರಿತವನು. ಅವನು ಸಮರದಲ್ಲಿ ವಾಸವನೊಂದಿಗೆ ದೇವತೆಗಳಿಗೂ ಅಜೇಯನು. ಪಾಂಡವನು ಬಲವಾನ್, ಬುದ್ಧಿಮಾನ್, ಕ್ಲೇಶಗಳನ್ನು ಗೆದ್ದವನು, ಯೋಧರಲ್ಲಿ ಶ್ರೇಷ್ಠ, ರಣದಲ್ಲಿ ನಿತ್ಯವೂ ವಿಜಯಿ ಮತ್ತು ಭೈರವನು. ಅವನ ಮಾರ್ಗದಲ್ಲಿಯೇ ಹೋಗಿ ಯತವ್ರತನಲ್ಲಿಗೆ ಹೋಗು. ಅಲ್ಲಿ ಆಗುವ ವೈಶಮವನ್ನು ನೋಡು. ಶೂರರ ಹೇಮಚಿತ್ರಗಳ, ಮಹಾ ಶುಭ ಕವಚಗಳು ಸನ್ನತಪರ್ವ ಶರ್ಯಗಳಿಂದ ಸೀಳಲ್ಪಡುತ್ತವೆ. ಧ್ವಜಾಗ್ರಗಳು, ತೋಮರಗಳು ಮತ್ತು ಧನುಸ್ಸುಗಳು ತುಂಡಾಗುತ್ತವೆ. ಸಂಕ್ರುದ್ಧನಾದ ಕಿರೀಟಿಯು ವಿಮಲ ಪ್ರಾಸಗಳನ್ನೂ, ತೀಕ್ಷ್ಣ ಶಕ್ತಿಗಳನ್ನೂ, ಆನೆಗಳ ಕನಕೋಜ್ಜ್ವಲ ವೈಜಂತಿಗಳನ್ನೂ ಛಿದ್ರಗೊಳಿಸುತ್ತಾನೆ.

ಪುತ್ರ! ಉಪಜೀವನ ಮಾಡುತ್ತಿರುವ ನಮಗೆ ನಮ್ಮ ಪ್ರಾಣಗಳನ್ನು ರಕ್ಷಿಸಿಕೊಳ್ಳುವ ಕಾಲವಿದಲ್ಲ. ಸ್ವರ್ಗ, ಯಶಸ್ಸು ಮತ್ತು ವಿಜಯಗಳನ್ನು ಮುಂದಿರಿಸಿಕೊಂಡು ಹೋಗು. ಹಯ-ನಾಗ-ರಥಗಳಿಂದ ಕೂಡಿದ ಈ ಮಹಾಘೋರ ಸುದುಸ್ತರ ಸಂಗ್ರಾಮನದಿಯನ್ನು ಕಪಿಧ್ವಜನು ತನ್ನ ರಥದಿಂದ ದಾಟುತ್ತಾನೆ. ಬ್ರಹ್ಮಣ್ಯತೆ, ದಮ, ದಾನ, ತಪಸ್ಸು, ಮತ್ತು ಮಹಾ ಚಾರಿತ್ರ್ಯಗಳನ್ನು ಧನಂಜಯ, ಬಲವಾನ್ ಭೀಮಸೇನ, ಮತ್ತು ಪಾಂಡವ ಮಾದ್ರೀಪುತ್ರರೀರ್ವರ ಭ್ರಾತ, ಯಾರ

ನಾಥನಾಗಿ ವಾರ್ಷ್ಣೇಯ ವಾಸುದೇವನೋ ಆ ಧರ್ಮರಾಜನಲ್ಲಿ ಕಾಣುತ್ತವೆ. ಅದೇ ಪ್ರಭುವಿನ ಕೋಪವು, ತಪಸ್ಸಿನಿಂದ ದಗ್ಧಶರೀರನ ಕೋಪವು ಭಾರತರನ್ನು ಮತ್ತು ದುರ್ಮತಿ ಧಾರ್ತರಾಷ್ಟ್ರನನ್ನು ಸುಡುತ್ತದೆ. ವಾಸುದೇವನನ್ನು ಆಶ್ರಯಿಸಿ ಪಾರ್ಥನು ಧಾರ್ತರಾಷ್ಟ್ರರ ಸರ್ವ ಸೈನ್ಯಗಳನ್ನು ಎಲ್ಲಕಡೆಯಿಂದ ಸೀಳಿಕೊಂಡು ಬರುವುದು ಕಾಣುತ್ತದೆ. ಮಹಾ ತಿಮಿಂಗಿಲವು ದೊಡ್ಡ ಅಲೆಗಳ ಮಹಾ ಸಮುದ್ರವನ್ನು ಹೇಗೋ ಹಾಗೆ ಕಿರೀಟಿಯು ಈ ಸೈನ್ಯವನ್ನು ಕ್ಷೋಭೆಗೊಳಿಸುವುದನ್ನು ನೋಡು. ಸೇನೆಯ ಮುಂಭಾಗದಲ್ಲಿ ಹಾಹಾಕಿಲಿಕಿಲ ಶಬ್ಧಗಳು ಕೇಳಿಬರುತ್ತಿವೆ. ಪಾಂಚಾಲದಾಯದನಲ್ಲಿಗೆ ಹೋಗು. ನಾನು ಯುಧಿಷ್ಠಿರನೊಂದಿಗೆ ಯುದ್ಧಮಾಡುತ್ತೇನೆ. ಎಲ್ಲಕಡೆಗಳಲ್ಲಿಯೂ ಅತಿರಥರು ನಿಂತಿರುವ ಅಮಿತ ತೇಜಸ್ವಿ ರಾಜನ ವ್ಯೂಹದ ಒಳಭಾಗವು ಸಮುದ್ರ ಕುಕ್ಷಿಯಂತೆ ದುರ್ಲಭವಾಗಿದೆ. ರಾಜ ಮನುಜೇಶ್ವರನನ್ನು ಸಾತ್ಯಕಿ, ಅಭಿಮನ್ಯು, ಧೃಷ್ಟದ್ಯುಮ್ನ, ವೃಕೋದರರು ಮತ್ತು ಯಮಳರು ರಕ್ಷಿಸುತ್ತಿದ್ದಾರೆ. ಇಗೋ! ಉಪೇಂದ್ರಸದೃಶನಾದ ಶ್ಯಾಮವರ್ಣಿ ಮಹಾಶಾಲದಂತೆ ಎತ್ತರನಾಗಿರುವ ಈ ಎರಡನೆಯ ಫಲ್ಗುನಿಯು ಸೇನೆಗಳೊಂದಿಗೆ ಹೋಗುತ್ತಿದ್ದಾನೆ. ಉತ್ತಮ ಅಸ್ತ್ರಗಳನ್ನೂ ಮಹಾಧನುಸ್ಸನ್ನೂ ಹಿಡಿದು ಹೋಗಿ ರಾಜನ ಪಕ್ಕದಲ್ಲಿರುವ

ವೃಕೋದರನೊಡನೆ ಯುದ್ಧಮಾಡು. ತನ್ನ ಪ್ರಿಯಪುತ್ರನು ಶಾಶ್ವತ ವರ್ಷಗಳು ಜೀವಿತನಾಗಿರಬೇಕೆಂದು ಯಾರು ತಾನೇ ಇಚ್ಛಿಸುವುದಿಲ್ಲ? ಕ್ಷತ್ರಧರ್ಮವನ್ನು ಪುರಸ್ಕರಿಸಿ ನಿನ್ನನ್ನು ಯುದ್ಧಕ್ಕೆ ನಿಯೋಜಿಸುತ್ತಿದ್ದೇನೆ. ರಣದಲ್ಲಿ ಈ ಭೀಷ್ಮನೂ ಸಹ ಮಹಾಸೇನೆಯನ್ನು ದಹಿಸುವನು. ಇವನು ಯುದ್ಧದಲ್ಲಿ ಯಮ ಮತ್ತು ವರುಣರ ಸದೃಶನು."

## ಭೀಮ ಪರಾಕ್ರಮ

ಭಗದತ್ತ, ಕೃಪ, ಶಲ್ಯ, ಸಾತ್ವತ ಕೃತವರ್ಮ, ಅವಂತಿಯ ವಿಂದಾನುವಿಂದರು, ಸೈಂಧವ ಜಯದ್ರಥ, ಚಿತ್ರಸೇನ, ವಿಕರ್ಣ ಮತ್ತು ಯುವ ದುರ್ಮರ್ಷಣ ಈ ಹತ್ತು ಕೌರವರ ಕಡೆಯ ಯೋಧರು ನಾನಾದೇಶಗಳಿಂದ ಒಟ್ಟುಗೂಡಿಸಿದ ಮಹಾಸೇನೆಯೊಂದಿಗೆ ಭೀಷ್ಮನ ಮಹಾ ಯಶಸ್ಸನ್ನು ಬಯಸುತ್ತಾ ಭೀಮನ ಮೇಲೆ ಆಕ್ರಮಣಮಾಡಿದರು. ಶಲ್ಯನು ಒಂಭತ್ತು ಬಾಣಗಳಿಂದಲೂ, ಕೃತವರ್ಮನು ಮೂರು ಬಾಣಗಳಿಂದಲೂ, ಮತ್ತು ಕೃಪನು ಒಂಭತ್ತು ಶರಗಳಿಂದಲೂ ಭೀಮಸೇನನನ್ನು ಹೊಡೆದರು. ಚಿತ್ರಸೇನ, ವಿಕರ್ಣ ಮತ್ತು ಭಗದತ್ತರೂ ಕೂಡ ಹತ್ತು ಹತ್ತು ಭಲ್ಲೆಗಳಿಂದ ಭೀಮಸೇನನನ್ನು ಹೊಡೆದರು. ಸೈಂಧವನು ಮೂರು ಬಾಣಗಳಿಂದ ಅವನ ಜತ್ರುದೇಶವನ್ನೂ, ಅವಂತಿಯ ವಿಂದಾನುವಿಂದರಿಬ್ಬರು ಐದೈದು ಶರಗಳಿಂದಲೂ ಮತ್ತು ದುರ್ಮರ್ಷಣನು ಇಪ್ಪತ್ತು ನಿಶಿತ ಶರಗಳಿಂದ

ಪಾಂಡವನನ್ನು ಹೊಡೆದರು. ಧಾರ್ತರಾಷ್ಟ್ರನ ಆ ಎಲ್ಲ ಮಹಾರಥರನ್ನೂ, ಸರ್ವಲೋಕ ಪ್ರವೀರರನ್ನೂ ಮಹಾಬಲ ಭೀಮಸೇನನು ಅನೇಕ ಬಾಣಗಳಿಂದ ಪ್ರತ್ಯೇಕ ಪ್ರತ್ಯೇಕವಾಗಿ ಹೊಡೆದನು. ಐವತ್ತರಿಂದ ಶಲ್ಯನನ್ನು ಮತ್ತು ಎಂಟರಿಂದ ಕೃತವರ್ಮನನ್ನು ಹೊಡೆದು ಕೃಪನ ಚಾಪವನ್ನು ಬಾಣದೊಂದಿಗೆ ಮಧ್ಯದಲ್ಲಿಯೇ ಕತ್ತರಿಸಿದನು. ಧನ್ನುಸ್ಸು ತುಂಡಾದವನನ್ನು ಪುನಃ ಐದರಿಂದ ಹೊಡೆದನು. ಹಾಗೆಯೇ ವಿಂದಾನುವಿಂದರನ್ನು ಮೂರರಿಂದ, ದುರ್ಮರ್ಷಣನನ್ನು ಇಪ್ಪತ್ತರಿಂದ ಮತ್ತು ಚಿತ್ರಸೇನನನ್ನು ಐದರಿಂದ ಹೊಡೆದನು. ವಿಕರ್ಣನನ್ನು ಹತ್ತು ಮತ್ತು ಜಯದ್ರಥನನ್ನು ಐದು ಬಾಣಗಳಿಂದ ಹೊಡೆದು ಭೀಮನು ಪುನಃ ಸೈಂಧವನನ್ನು ಮೂರರಿಂದ ಹೊಡೆದನು. ಆಗ ರಥಿಗಳಲ್ಲಿ ಶ್ರೇಷ್ಠ ಗೌತಮನು ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಸಂರಬ್ಧನಾಗಿ ಭೀಮನನ್ನು ಹತ್ತು ನಿಶಿತ ಶರಗಳಿಂದ ಹೊಡೆದನು. ಅನೇಕ ಬಾಣಗಳಿಂದ ಚುಚ್ಚಲ್ಪಟ್ಟ ಮಹಾಗಜದಂತೆ ಪ್ರತಾಪವಾನ್ ಮಹಾಬಾಹು ಭೀಮಸೇನನು ಕ್ರುದ್ಧನಾಗಿ ಗೌತಮನನ್ನು ಅನೇಕ ಶರಗಳಿಂದ ಪ್ರಹರಿಸಿದನು. ಮತ್ತು ಆ ಕಾಲಾಂತಕ ಸಮದ್ಯುತಿಯು ಮೂರು ಶರಗಳಿಂದ ಸೈಂಧವನ ಸಾರಥಿಯನ್ನೂ ಕುದುರೆಗಳನ್ನೂ ಮೃತ್ಯುಲೋಕಕ್ಕೆ ಕಳುಹಿಸಿದನು. ತಕ್ಷಣವೇ ಕುದುರೆಗಳನ್ನು ಕಳೆದುಕೊಂಡ ರಥದಿಂದ ಕೆಳಗೆ ಧುಮುಕಿ ಆ ಮಹಾರಥನು ಭೀಮಸೇನನ ಮೇಲೆ ನಿಶಿತ ಶರಗಳನ್ನು ಪ್ರಯೋಗಿಸಿದನು. ಭರತಶ್ರೇಷ್ಠ

ಭೀಮನು ಭಲ್ಲಗಳೆರಡರಿಂದ ಮಹಾತ್ಮ ಸೈಂಧವನ ಧನುಸ್ಸನ್ನು ಮಧ್ಯದಲ್ಲಿಯೇ ಎರಡು ಭಾಗಗಳನ್ನಾಗಿ ತುಂಡರಿಸಿದನು. ಧನುಸ್ಸು ತುಂಡಾಗಲು, ಕುದುರೆಗಳು ಹತವಾಗಿ, ಸಾರಥಿಯೂ ಹತನಾಗಿ ವಿರಥನಾಗಿದ್ದ ಅವನು ಅವಸರದಿಂದ ಚಿತ್ರಸೇನನ ರಥವನ್ನೇರಿದನು.

ಅಲ್ಲಿ ರಣದಲ್ಲಿ ಪಾಂಡವನು ಒಂದು ಅದ್ಭುತ ಕರ್ಮವನ್ನೇ ಮಾಡಿದನು: ಎಲ್ಲ ಲೋಕಗಳೂ ನೋಡುತ್ತಿದ್ದಂತೆಯೇ ಆ ಮಹಾರಥನು ಮಹಾರಥರನ್ನು ತಡೆದು ಸೈಂಧವನನ್ನು ವಿರಥನನ್ನಾಗಿ ಮಾಡಿದನು. ಭೀಮಸೇನನ ವಿಕ್ರಮವನ್ನು ಅತೀವವಾಗಿ ಸಹಿಸಿಕೊಳ್ಳಲಾರದ ಶಲ್ಯನು ಕರ್ಮಾರನಿಂದ ಹದಗೊಳಿಸಲ್ಪಟ್ಟ ಏಳು ತೀಕ್ಷ್ಣಶರಗಳನ್ನು ಹೂಡಿ ಭೀಮನನ್ನು ಹೊಡೆದು ನಿಲ್ಲು ನಿಲ್ಲು ಎಂದು ಕೂಗಿದನು. ಶಲ್ಯನ ಕಾರಣದಿಂದಾಗಿ ಅರಿಂದಮರಾದ ಕೃಪ, ಕೃತವರ್ಮ, ಭಗದತ್ತ, ಅವಂತಿಯ ವಿಂದಾನುವಿಂದರು, ಚಿತ್ರಸೇನ, ದುರ್ಮರ್ಷಣ, ವಿಕರ್ಣ, ವೀರ್ಯವಾನ್ ಸಿಂಧುರಾಜ ಇವರು ತಕ್ಷಣವೇ ಭೀಮನನ್ನು ಪ್ರಹರಿಸಿದರು.

ಅವನಾದರೋ ಅವರನ್ನು ಐದೈದು ಶರಗಳಿಂದ ತಿರುಗಿ ಹೊಡೆದನು ಮತ್ತು ಶಲ್ಯನನ್ನು ಏಳರಿಂದ ಮತ್ತು ಪುನಃ ಹತ್ತು ಶರಗಳಿಂದ ಹೊಡೆದನು. ಶಲ್ಯನು ಅವನನ್ನು ಒಂಭತ್ತರಿಂದ ಮತ್ತು ಪುನಃ ಐದರಿಂದ ಹೊಡೆದು, ಅವನ ಸಾರಥಿಯನ್ನು ಕವಚವನ್ನು ಗಾಢವಾಗಿ ಹೊಗುವಂತೆ ಭಲ್ಲದಿಂದ ಹೊಡೆದನು. ವಿಶೋಕನು ಪೆಟ್ಟುತಿಂದುದನ್ನು

ವೀಕ್ಷಿಸಿ ಪ್ರತಾಪವಾನ್ ಭೀಮಸೇನನು ಮದ್ರರಾಜನನ್ನು ಮೂರು ಬಾಣಗಳಿಂದ ತೋಳುಗಳಿಗೂ ವಕ್ಷಸ್ಥಳಕ್ಕೂ ಪ್ರಹರಿಸಿದನು. ಹಾಗೆಯೇ ಅವನು ಇತರ ಮಹೇಷ್ವಾಸರನ್ನೂ ನೇರವಾಗಿ ಹೋಗುವ ಮೂರು ಮೂರು ಬಾಣಗಳಿಂದ ಪ್ರಹರಿಸಿ ಸಿಂಹದಂತೆ ಗರ್ಜಿಸಿದನು. ಪ್ರಯತ್ನಿಸುತ್ತಿದ್ದ ಆ ಮಹೇಷ್ವಾಸರೂ ಯುದ್ಧದುರ್ಮದ ಪಾಂಡವನನ್ನು ಬಗ್ಗಿರದೇ ಇರುವ ಅಗ್ರಭಾಗಗಳನ್ನು ಹೊಂದಿದ ಮೂರು ಮೂರು ಬಾಣಗಳಿಂದ ಅವನ ಮರ್ಮಸ್ಥಾನಗಳಲ್ಲಿ ಹೊಡೆದರು. ಹೀಗೆ ಅತಿಯಾಗಿ ನೋವುಂಟಾಗುವಂತೆ ಹೊಡೆಯಲ್ಪಟ್ಟರೂ ಭೀಮಸೇನನು ಮೋಡಗಳು ಮಳೆನೀರನ್ನು ಸುರಿದರೂ ಪರ್ವತವು ಹೇಗೆ ವಿಚಲಿತವಾಗಿರುವುದಿಲ್ಲವೋ ಹಾಗೆ ವಿವ್ಯಥನಾಗಿದ್ದನು. ಆ ಮಹಾಯಶನು ಶಲ್ಯನನ್ನು ಒಂಭತ್ತು ಬಾಣಗಳಿಂದ ಜೋರಾಗಿ ಹೊಡೆದು, ದೃಢನಾದ ಪ್ರಾಗ್ಜ್ಯೋತಿಷನನ್ನು ನೂರರಿಂದ ಹೊಡೆದನು. ಆಗ ಹಸ್ತಪಳಗಿದ ಆ ಮಹಾತ್ಮನು ಸುತೀಕ್ಷ್ಣವಾದ ಕ್ಷುರಪ್ರದಿಂದ ಸಾತ್ವತನ ಚಾಪವನ್ನು ಬಾಣಗಳೊಂದಿಗೆ ಕತ್ತರಿಸಿದನು. ತಕ್ಷಣವೇ ಇನ್ನೊಂದು ಧನುಸ್ಸನ್ನು ಹಿಡಿದು ಕೃತವರ್ಮನು ನಾರಾಚದಿಂದ ವೃಕೋದರನನ್ನು ಹುಬ್ಬುಗಳ ನಡುವೆ ತಾಗುವಂತೆ ಹೊಡೆದನು. ಭೀಮನಾದರೋ ಸಮರದಲ್ಲಿ ಒಂಭತ್ತು ಆಯಸಗಳಿಂದ ಶಲ್ಯನನ್ನು ಹೊಡೆದು ಭಗದತ್ತನನ್ನು ಮೂರರಿಂದಲೂ, ಕೃತವರ್ಮನನ್ನು ಎಂಟರಿಂದಲೂ, ಎರಡೆರಡರಿಂದ ಗೌತಮರೇ ಮೊದಲಾದ ರಥರನ್ನು ಹೊಡೆದನು.

ಅವರು ಸಮರದಲ್ಲಿ ಅವನನ್ನು ನಿಶಿತಶರಗಳಿಂದ ಹೊಡೆದರು. ಸುತ್ತಲೂ ಎಲ್ಲಕಡೆಗಳಿಂದಲೂ ಮಹಾರಥರಿಂದ ಪೀಡಿತನಾದರೂ ಕೂಡ ಭೀಮಸೇನನು ಅವರನ್ನು ತೃಣಸಮಾನರೆಂದು ಪರಿಗಣಿಸಿ ವ್ಯಥೆಯಿಲ್ಲದೇ ಹೋರಾಡುತ್ತಿದ್ದನು. ಆ ರಥಿಗಳಲ್ಲಿ ಶ್ರೇಷ್ಠರೂ ಕೂಡ ಅವ್ಯಗ್ರರಾಗಿ ಭೀಮನ ಮೇಲೆ ನೂರಾರು ಸಹಸ್ರಾರು ನಿಶಿತ ಶರಗಳನ್ನು ಪ್ರಯೋಗಿಸುತ್ತಿದ್ದರು.

ಅವನ ಮೇಲೆ ವೀರ ಮಹಾರಥ ಭಗದತ್ತನು ಮಹಾವೇಗದ, ಸ್ವರ್ಣದಂಡದ, ಮಹಾಅಮೂಲ್ಯವಾದ ಶಕ್ತಿಯನ್ನು ಎಸೆದನು. ಹಾಗೆಯೇ ರಾಜ ಮಹಾಭುಜ ಸೈಂಧವನು ತೋಮರವನ್ನೂ, ಕೃಪನು ಶತಘ್ನಿಯನ್ನೂ ಮತ್ತು ಶಲ್ಯನು ಬಾಣವನ್ನೂ ಎಸೆದರು. ಇತರ ಮಹೇಷ್ವಾಸರೂ ಐದ್ಯೈದು ಶಿಲೀಮುಖಿಗಳನ್ನು ಭೀಮಸೇನನನ್ನು ಅನುಲಕ್ಷಿಸಿ ಬಲಪೂರ್ವಕವಾಗಿ ಪ್ರಯೋಗಿಸಿದರು. ಅನಿಲಾತ್ಮಜನು ತೋಮರವನ್ನು ಕ್ಷುರಪ್ರದಿಂದ ಎರಡು ಮಾಡಿದನು. ಮೂರು ಬಾಣಗಳಿಂದ ಪಟ್ಟಿಶವನ್ನೂ ಕೂಡ ಎಳ್ಳಿನ ಗಿಡದಂತೆ ತುಂಡರಿಸಿದನು. ಅವನು ಒಂಭತ್ತು ಕಂಕಪತ್ರಿಗಳಿಂದ ಶತಘ್ನಿಯನ್ನು ತುಂಡರಿಸಿದನು ಮತ್ತು ಆ ಮಹಾಬಲನು ಮದ್ರರಾಜನು ಪ್ರಯೋಗಿಸಿದ್ದ ಶರವನ್ನೂ ಕತ್ತರಿಸಿ ರಣದಲ್ಲಿ ಭಗದತ್ತನು ಕಳುಹಿಸಿದ್ದ ಶಕ್ತಿಯನ್ನೂ ಕೂಡಲೇ ಕತ್ತರಿಸಿದನು. ಹಾಗೆಯೇ ರಣಶ್ಲಾಘೀ ಭೀಮಸೇನನು ಇತರರ ಘೋರ ಶರಗಳು ಒಂದೊಂದನ್ನೂ ಮೂರು ಮೂರು ಸನ್ನತಪರ್ವ ಶರಗಳಿಂದ ತುಂಡರಿಸಿದನು. ಆ ಎಲ್ಲ ಮಹೇಷ್ವಾಸರನ್ನೂ ಮೂರು ಮೂರು

ಶರಗಳಿಂದ ಹೊಡೆದನು.

ಶತ್ರುಯೋಧರನ್ನು ಸಾಯಕಗಳಿಂದ ಸಂಹರಿಸುತ್ತಿದ್ದ ಮಹಾರಥ ಭೀಮನನ್ನು ನೋಡಿ ಆ ಮಹಾರಣವು ನಡೆಯುತ್ತಿರುವಲ್ಲಿಗೆ ಧನಂಜಯನು ರಥದಲ್ಲಿ ಧಾವಿಸಿ ಬಂದನು. ಅಲ್ಲಿ ಒಟ್ಟಿಗೇ ಹೋರಾಡುತ್ತಿದ್ದ ಆ ವೀರ ಮಹಾತ್ಮ ಪಾಂಡವರಿಬ್ಬರನ್ನೂ ನೋಡಿ ಕೌರವರು ಜಯದ ಆಸೆಯನ್ನೇ ಬಿಟ್ಟುಬಿಟ್ಟರು. ಭೀಷ್ಮನ ನಿಧನಾಕಾಂಕ್ಷಿಯಾಗಿ ಶಿಖಂಡಿಯನ್ನು ಮುಂದಿಟ್ಟುಕೊಂಡು ಮಹಾರಥ ಭೀಷ್ಮನೊಡನೆ ಯುದ್ಧ ಮಾಡುತ್ತಿದ್ದ ಬೀಭತ್ಸು ಅರ್ಜುನನು ಭೀಮನು ನಿನ್ನವರಾದ ಯಾವ ಹತ್ತು ಯೋಧರೊಡನೇ ಹೋರಾಡುತ್ತಿದ್ದನೋ ಅವರನ್ನು ರಣದಲ್ಲಿ ಎದುರಿಸಿ, ಭೀಮನ ಹಿತವನ್ನು ಬಯಸಿ ಅವರ ಮೇಲೆ ಪ್ರಹರಿಸಿದನು.

ಆಗ ರಾಜಾ ದುರ್ಯೋಧನನು ಅರ್ಜುನ ಭೀಮಸೇನರಿಬ್ಬರ ವಧೆಗಾಗಿ ಸುಶರ್ಮನನ್ನು ಪ್ರಚೋದಿಸಿದನು. “ಸುಶರ್ಮನ್! ಹೋಗು! ಸೇನೆಗಳಿಂದ ಪರಿವಾರಿತರಾಗಿರುವ ಅವರಿಬ್ಬರು ಪಾಂಡುಸುತ ಧನಂಜಯ-ವೃಕೋದರರರನ್ನು ಕೊಲ್ಲು!” ಅವನ ಆ ಶಾಸನವನ್ನು ಕೇಳಿ ಪ್ರಸ್ಥಲಾಧಿಪ ತ್ರಿಗರ್ತನು ರಣದಲ್ಲಿ ಧನ್ವಿ ಭೀಮಾರ್ಜುನರಿಬ್ಬರನ್ನೂ ಅನೇಕ ಸಾವಿರ ರಥಗಳಿಂದ ಎಲ್ಲಕಡೆಗಳಿಂದ ಸುತ್ತುವರೆದನು. ಆಗ ಶತ್ರುಗಳೊಂದಿಗೆ ಅರ್ಜುನನ ಯುದ್ಧವು ಪ್ರಾರಂಭವಾಯಿತು.

## ಭೀಮಾರ್ಜುನ ಪರಾಕ್ರಮ

ಅರ್ಜುನನಾದರೋ ಸಮರದಲ್ಲಿ ಪ್ರಯತ್ನಿಸುತ್ತಿದ್ದ ಮಹಾರಥ ಶಲ್ಯನನ್ನು ಸನ್ನತಪರ್ವ ಶರಗಳಿಂದ ಹೊಡೆದನು. ಸುಶರ್ಮನನ್ನೂ ಕೃಪನನ್ನೂ ಮೂರು ಬಾಣಗಳಿಂದ ಹೊಡೆದನು. ಪ್ರಗ್ಜ್ಯೋತಿಷನನ್ನು, ಸೈಂಧವ ಜಯದ್ರಥನನ್ನು, ಚಿತ್ರಸೇನನನ್ನು, ವಿಕರ್ಣನನ್ನು, ಕೃತವರ್ಮನನ್ನು ಕೂಡ, ದುರ್ಮರ್ಷಣನನ್ನು, ಮತ್ತು ಅವಂತಿಯ ಮಹಾರಥರೀರ್ವರನ್ನು ಒಬ್ಬೊಬ್ಬರನ್ನೂ ಮೂರು ಮೂರು ಕಂಕಬರ್ಹಿಣ ಬಾಣಗಳಿಂದ ಹೊಡೆದು ಆ ಅತಿರಥನು ಕೌರವ ವಾಹಿನಿಯನ್ನು ಪೀಡಿಸಿದನು. ಚಿತ್ರಸೇನರಥದಲ್ಲಿ ನಿಂತ ಜಯದ್ರಥನು ಪಾರ್ಥನನ್ನು ಸಾಯಕಗಳಿಂದ ಭೇದಿಸಿ, ತಕ್ಷಣವೇ ಭೀಮನನ್ನು ಹೊಡೆದನು. ಶಲ್ಯ ಮತ್ತು ರಥಿಗಳಲ್ಲಿ ಶ್ರೇಷ್ಠ ಕೃಪರು ಮಹಾಬಾಹು ಜಿಷ್ಣುವನ್ನು ಅನೇಕ ಮರ್ಮಭೇದಿಗಳಿಂದ ಹೊಡೆದರು. ಚಿತ್ರಸೇನನೇ ಮೊದಲಾದ ಧೃತರಾಷ್ಟ್ರನ ಮಕ್ಕಳು ಕೂಡ ಬೇಗನೇ ಐದು ಐದು ನಿಶಿತ ಶರಗಳಿಂದ ಅರ್ಜುನ ಮತ್ತು ಭೀಮಸೇನರನ್ನು ಹೊಡೆದರು. ಅಲ್ಲಿ ರಥಿಗಳಲ್ಲಿ ಶ್ರೇಷ್ಠರಾದ ಆ ಇಬ್ಬರು ಕೌಂತೇಯ ಭರತರ್ಷಭರೂ ತ್ರಿಗರ್ತರ ಮಹಾಬಲವನ್ನು ಪೀಡಿಸುತ್ತಿದ್ದರು. ಸುಶರ್ಮನೂ ಕೂಡ ಪಾರ್ಥನನ್ನು ಅನೇಕ ರಾಯಸಗಳಿಂದ ಹೊಡೆದು ನಭಸ್ತಲವನ್ನೂ ಮೊಳಗಿಸುತ್ತಾ ಮಹಾ ಕೂಗನ್ನು ಕೂಗಿದನು. ಅನ್ಯ ಶೂರ ರಥಿಗಳೂ ಭೀಮಸೇನ-ಧನಂಜಯರನ್ನು ರುಕ್ಮಪುಂಖ, ತೀಕ್ಷ್ಣವಾದ, ನಿಶಿತ ಬಾಣಗಳಿಂದ ಹೊಡೆದರು.

ಆ ರಥಿಗಳ ಮಧ್ಯೆ ರಥಿಗಳಲ್ಲಿ ಶ್ರೇಷ್ಠರಾದ, ರಥೋದಾರರಾದ,

ಚಿತ್ರರೂಪರಾದ ಕೌಂತೇಯರಿಬ್ಬರೂ ಗೋವುಗಳ ಮಧ್ಯೆ ಬಲೋತ್ಕಟ ಸಿಂಹಗಳಂತೆ ಆಸೆತೋರಿಸಿ ಆಟವಾಡುತ್ತಿದ್ದರು. ಆ ಇಬ್ಬರು ವೀರರು ರಣದಲ್ಲಿ ಅನೇಕ ವೀರರ ಧನುಸ್ಸುಗಳನ್ನೂ ಶಿರಗಳನ್ನೂ ತುಂಡರಿಸಿ, ನೂರಾರು ನರರ ಶಿರಗಳನ್ನು ಕಡಿದುರುಳಿಸಿದರು. ಆ ಮಹಾಯುದ್ಧದಲ್ಲಿ ಅನೇಕ ರಥಗಳು ತುಂದವು. ನೂರಾರು ಕುದುರೆಗಳು ಹತವಾದವು. ಗಜಾರೋಹರೊಂದಿಗೆ ಗಜಗಳು ನೆಲಕ್ಕುರುಳಿದವು. ಅನೇಕ ರಥಿಗಳು, ಅಶ್ವಾರೋಹಿಗಳು ಕೊಲ್ಲಲ್ಪಟ್ಟು ಅಲ್ಲಲ್ಲಿ ಎಲ್ಲ ಕಡೆ ಬಿದ್ದಿರುವುದು ಕಂಡಿತು. ಹತರಾದ ಗಜ ಪದಾತಿಗಳಿಂದ, ಸಂಹರಿಸಲ್ಪಟ್ಟ ಕುದುರೆಗಳ ಸಮೂಹಗಳಿಂದ, ಭಗ್ನವಾಗಿದ್ದ ಅನೇಕ ರಥಗಳಿಂದ ಮೇದಿನಿಯು ತುಂಬಿಹೋಗಿತ್ತು. ಹರಿದು ಕೆಳಗೆ ಬಿದ್ದಿದ್ದ ಅನೇಕ ಬಣ್ಣಗಳ ಧ್ವಜಗಳಿಂದ, ಚತ್ರಗಳಿಂದ, ಅಂಕುಶಗಳಿಂದ, ಪರಿಸ್ತೋಮಗಳಿಂದ, ಚಿನ್ನದ ಕೇಯೂರ-ಅಂಗದ- ಹಾರಗಳಿಂದ, ಉಷ್ಣೀಷ-ಅಪವಿದ್ಧಗಳಿಂದ, ಚಾಮರ-ವ್ಯಜನಗಳಿಂದ ಅಲ್ಲಲ್ಲಿ ಬಿದ್ದಿದ್ದ ನರೇಂದ್ರರ ತುಂಡಾದ ಬಾಹುಗಳಿಂದ, ಹೊಟ್ಟೆಗಳಳಿಂದ, ತೊಡೆಗಳಿಂದ ಮೇದಿನಿಯು ಹರಡಿ ಹೋಗಿತ್ತು.

ಭೀಮಾರ್ಜುನರ ಸಮಾಗಮವನ್ನು ನೋಡಿ ಧೃತರಾಷ್ಟ್ರನ ಪುತ್ರರಾದರೋ ಮಹಾಭಯದಿಂದ ಗಾಂಗೇಯನ ರಥದ ಹಿಂದೆ ಹೋಗಿ ಅಡಗಿಕೊಂಡರು. ಕೃಪ, ಕೃತವರ್ಮ, ಸೈಂಧವ ಜಯದ್ರಥ, ಅವಂತಿಯ ವಿಂದಾನುವಿಂದರು ಹಿಮ್ಮೆಟ್ಟಲಿಲ್ಲ. ಆಗ ಮಹೇಷ್ವಾಸ ಭೀಮ ಮತ್ತು ಮಹಾರಥ ಫಲ್ಗುನರು ಘೋರವಾದ ಕೌರವರ

ಸೇನೆಯನ್ನು ರಣದಲ್ಲಿ ನಾಶಗೊಳಿಸತೊಡಗಿದರು. ಆಗ ತಕ್ಷಣವೇ ರಾಜರು ಹತ್ತುಸಾವಿರ ಲಕ್ಷಗಟ್ಟಲೆ ಬಾಣಗಳನ್ನು ಧನಂಜಯನ ರಥದಮೇಲೆ ಸುರಿದರು. ಆ ಶರಜಾಲಗಳನ್ನು ತಡೆದು ಪಾರ್ಥನು ಸೇರಿರುವ ಮಹಾರಥರನ್ನು ಒಟ್ಟಿಗೇ ಮೃತ್ಯುವಿಗೆ ಕಳುಹಿಸಿದನು. ಆಡುತ್ತಿರುವಂತೆ ಮಹಾರಥ ಶಲ್ಯನು ಕ್ರುದ್ಧನಾಗಿ ಉರಸಿ, ಭಲ್ಲ ಮತ್ತು ಸನ್ನತಪರ್ವಗಳಿಂದ ಜಿಷ್ಣುವನ್ನು ಹೊಡೆದು ಗಾಯಗೊಳಿಸಿದನು. ಪಾರ್ಥನು ಐದು ಬಾಣಗಳಿಂದ ಅವನ ಧನುಸ್ಸನ್ನು ಮತ್ತು ಹಸ್ತಾವಾಪವನ್ನು ಕತ್ತರಿಸಿ, ತೀಕ್ಷ್ಣವಾದ ಸಾಯಕಗಳಿಂದ ಜೋರಾಗಿ ಅವನ ಮರ್ಮಗಳಿಗೆ ಹೊಡೆದನು. ಮದ್ರೇಶ್ವರನು ಇನ್ನೊಂದು ಭಾರಸಾಧನ ಧನುಸ್ಸನ್ನು ಎತ್ತಿಕೊಂಡು ರೋಷಿತನಾಗಿ ಮೂರು ಶರಗಳಿಂದ ಜಿಷ್ಣುವನ್ನೂ, ಐದರಿಂದ ವಾಸುದೇವನನ್ನೂ, ಒಂಭತ್ತು ಬಾಣಗಳಿಂದ ಭೀಮಸೇನನ ಭುಜ-ತೊಡೆಗಳಿಗೆ ಹೊಡೆದನು.

ಆಗ ಮಹಾರಥ ದ್ರೋಣ-ಮಾಗಧರು ದುರ್ಯೋಧನನ್ನೊಡಗೂಡಿ ಎಲ್ಲಿ ಮಹಾರಥರಾದ ಪಾರ್ಥ ಮತ್ತು ಪಾಂಡವ ಭೀಮಸೇನರು ಕೌರವ ಮಹಾಸೇನೆಯನ್ನು ಸಂಹರಿಸುತ್ತಿರುವ ಪ್ರದೇಶಕ್ಕೆ ಬಂದರು. ಯುವಕ ಜಯತ್ಸೇನನು ಭೀಮಾಯುಧ ಭೀಮನನ್ನು ಎಂಟು ನಿಶಿತ ಬಾಣಗಳಿಂದ ಹೊಡೆದನು. ಅವನನ್ನು ಭೀಮನು ಹತ್ತು ಭಲ್ಲಗಳಿಂದ ಹೊಡೆದು ಪುನಃ ಏಳರಿಂದ ಹೊಡೆದನು. ಮತ್ತು ಅವನ ಸಾರಥಿಯನ್ನು ಭಲ್ಲದಿಂದ ಹೊಡೆದು ರಥನೀಡದಿಂದ ಉರುಳಿಸಿದನು. ಉದ್ಭ್ರಾಂತ ಕುದುರೆಗಳು ಎಲ್ಲಕಡೆ ಓಡುತ್ತಾ ಎಲ್ಲ ಸೈನ್ಯಗಳು ನೋಡುತ್ತಿದ್ದಂತೆ

ಮಾಗಧನನ್ನು ಎತ್ತಿಕೊಂಡು ಹೋದವು. ದ್ರೋಣನು ಅಂತರವನ್ನು ಪಡೆದು ಭೀಮಸೇನನನ್ನು ಅರವತ್ತೈದು ಆಯಸಗಳ ಚೆನ್ನಾಗಿ ಹರಿತಮಾಡಿದ ಶಿಲೀಮುಖ ಬಾಣಗಳಿಂದ ಹೊಡೆದನು. ಪಿತೃಸಮ ಗುರುವನ್ನು ಸಮರಶ್ಲಾಘೀ ಭೀಮನು ಒಂಭತ್ತು ಭಲ್ಲೆಗಳಿಂದ ಮತ್ತು ನಂತರ ಅರವತ್ತರಿಂದ ಹೊಡೆದನು. ಅರ್ಜುನನಾದರೋ ಸುಶರ್ಮನನ್ನು ಅನೇಕ ಆಯಸಗಳಿಂದ ಹೊಡೆದು ಗಾಳಿಯು ದೊಡ್ಡ ದೊಡ್ಡ ಮೋಡಗಳನ್ನು ಹೇಗೋ ಹಾಗೆ ಅವನ ಸೇನೆಯನ್ನು ಚದುರಿಸಿದನು. ಆಗ ಭೀಷ್ಮ, ಸೌಬಲ ಮತ್ತು ಬೃಹದ್ಬಲರು ಭೀಮಸೇನ-ಧನಂಜಯರನ್ನು ಧಾವಿಸಿ ಎದುರಿಸಿದರು. ಬಾಯಿಕಳೆದ ಅಂತಕನಿಂತಿದ್ದ ಭೀಷ್ಮನನ್ನು ಪಾಂಡವ ಶೂರರೂ ಪಾರ್ಷತ ಧೃಷ್ಟದ್ಯುಮ್ನನೂ ಎದುರಿಸಿದರು. ಶಿಖಂಡಿಯಾದರೋ ಸಂಹೃಷ್ಟನಾಗಿ ಭಯವನ್ನು ತ್ಯಜಿಸಿ ಭಾರತರ ಪಿತಾಮಹ ಯತವ್ರತನನ್ನು ಸಮೀಪಿಸಿ ಎದುರಿಸಿದನು. ಯುಧಿಷ್ಠಿರ ಪ್ರಮುಖರಾದ ಪಾರ್ಥರು ಸೃಂಜಯರೊಡನೆ  ಶಿಖಂಡಿಯನ್ನು ಮುಂದಿರಿಸಿಕೊಂಡು ಭೀಷ್ಮನನ್ನು ಎದರಿಸಿ ಯದ್ಧಮಾಡಿದರು. ಹಾಗೆಯೇ ಕೌರವರೆಲ್ಲರೂ ಯತವ್ರತನನ್ನು ಮುಂದಿರಿಸಿಕೊಂಡು ಶಿಖಂಡಿಪ್ರಮುಖ ಪಾರ್ಥರೊಡನೆ ಯುದ್ಧಮಾಡಿದರು. ಆಗ ಅಲ್ಲಿ ಭೀಷ್ಮನ ವಿಜಯಕ್ಕಾಗಿ ಪಾಂಡುಸುತರೊಂದಿಗೆ ಕೌರವರ ಭಯಾವಹ ಯುದ್ಧವು ನಡೆಯಿತು. ಭೀಷ್ಮನು ಕೌರವರ ಪಣವಾದನು. ಏಕೆಂದರೆ ಅಲ್ಲಿ ವಿಜಯ ಅಥವ ಸೋಲಿನ ದ್ಯೂತವು ನಡೆದಿತ್ತು.

ಧೃಷ್ಟದ್ಯುಮ್ನನು ಸರ್ವ ಸೇನೆಗಳನ್ನೂ "ನರಸತ್ತಮರೇ! ಗಾಂಗೇಯನನ್ನು ಆಕ್ರಮಿಸಿ! ಭಯಪಡಬೇಡಿ!" ಎಂದು ಹುರಿದುಂಬಿಸಿದನು. ಸೇನಾಪತಿಯ ಮಾತನ್ನು ಕೇಳಿ ತಕ್ಷಣವೇ ಪಾಂಡವರ ಸೇನೆಯು ಪ್ರಾಣವನ್ನೂ ತೊರೆದು ಭೀಷ್ಮನ ಮೇಲೆರಗಿತು. ರಥಿಗಳಲ್ಲಿ ಶ್ರೇಷ್ಠ ಭೀಷ್ಮನೂ ಕೂಡ ಮೇಲೆ ಬೀಳುತ್ತಿರುವ ಆ ಸೇನೆಯನ್ನು ಮಹಾಸಾಗರವನ್ನು ಖಂಡವು ಹೇಗೋ ಹಾಗೆ ತಡೆ ಹಿಡಿದನು.

ಭೀಷ್ಮನು ಯುಧಿಷ್ಠಿರನಿಗೆ ತನ್ನನ್ನು ವಧಿಸಲು ಆದೇಶವಿತ್ತುದುದು

ಅನುದಿನವೂ ಕಿರೀಟಿಯು ಕೌರವ ಮಹಾರಥರನ್ನು ಪರಮಾಸ್ತ್ರಗಳಿಂದ ಪರಲೋಕಕ್ಕೆ ಕಳುಹಿಸುತ್ತಿದ್ದನು. ಕೌರವ್ಯ ಸಮಿತಿಂಜಯ ಭೀಷ್ಮನೂ ಕೂಡ ಪ್ರತಿಜ್ಞೆಮಾಡಿದಂತೆ ಸತತವಾಗಿ ಪಾಂಡವರ ಸೇನಾನಾಶವನ್ನು ಮಾಡಿದನು. ಕುರುಗಳ ಸಹಿತ ಯುದ್ಧಮಾಡುತ್ತಿರುವ ಮಹಾರಥ ಭೀಷ್ಮ ಮತ್ತು ಪಾಂಚಾಲರನ್ನು ಸೇರಿ ಯುದ್ಧಮಾಡುತ್ತಿರುವ ಅರ್ಜುನನ್ನು ನೋಡಿ ಜನರು ಸಂಶಯಪಟ್ಟರು. ಆ ಹತ್ತನೆಯ ದಿವಸವಾದರೋ ಭೀಷ್ಮಾರ್ಜುನರ ಸಮಾಗಮದಲ್ಲಿ ಸತತವಾದ ಮಹಾರೌದ್ರ ಸೇನೆಗಳ ವಿನಾಶವು ನಡೆಯಿತು. ಪರಂತಪ ಪರಮಾಸ್ತ್ರವಿದು ಭೀಷ್ಮ ಶಾಂತನವನು ಹತ್ತು ಸಾವಿರಕ್ಕೂ ಹೆಚ್ಚು ಯೋಧರನ್ನು ಸಂಹರಿಸಿದನು. ಕೊನೆಯವರೆಗೂ ಅವರ ನಾಮ ಗೋತ್ರಗಳು ತಿಳಿಯದೇ ಇದ್ದ, ಪಲಾಯನ ಮಾಡದೇ ಇದ್ದ ಶೂರರು ಭೀಷ್ಮನಿಂದ ಅಲ್ಲಿ ಹತರಾದರು. ಹತ್ತನೆಯ ದಿವಸ ಧರ್ಮಾತ್ಮಾ

ಪರಂತಪ ಭೀಷ್ಮನು ಪಾಂಡವ ವಾಹಿನಿಯನ್ನು ಪರಿತಪಿಸಿ ಕೊನೆಗೆ ತನ್ನ ಜೀವಿತದಿಂದ ನಿರ್ವೇದಹೊಂದಿದನು. ರಣದಲ್ಲಿ ಹೋರಾಡುತ್ತಿರುವಾಗ ಬೇಗನೆ ತನ್ನ ವಧೆಯಾಗಬೇಕೆಂದು ಇಚ್ಛಿಸಿ, ಮಾನವಶ್ರೇಷ್ಠರನ್ನು ಇನ್ನು ಕೊಲ್ಲಬಾರದೆಂದು ಆಲೋಚಿಸಿ ಮಹಾಬಾಹು ದೇವವ್ರತನು ಸಮೀಪದಲ್ಲಿದ್ದ ಪಾಂಡವನಿಗೆ ಹೇಳಿದನು:

> “ಯುಧಿಷ್ಠಿರ! ಮಗೂ! ಧರ್ಮವನ್ನೂ ಸ್ವರ್ಗವನ್ನೂ ನೀಡುವ ನನ್ನ ಮಾತುಗಳನ್ನು ಕೇಳು. ಈ ದೇಹದಿಂದ ತುಂಬಾ ನಿರ್ವಿಣ್ಣನಾಗಿದ್ದೇನೆ. ಅನೇಕ ಪ್ರಾಣಿಗಳನ್ನು ರಣದಲ್ಲಿ ಕೊಲ್ಲುವುದರಲ್ಲಿಯೇ ನನ್ನ ಕಾಲವು ಕಳೆದು ಹೋಯಿತು. ಆದುದರಿಂದ ನನಗೆ ಪ್ರಿಯವಾದುದನ್ನು ಮಾಡಲು ಬಯಸಿದರೆ ಪಾರ್ಥನನ್ನು, ಪಾಂಚಾಲರನ್ನು ಮತ್ತು ಸೃಂಜಯರನ್ನು ಮುಂದಿಟ್ಟುಕೊಂಡು ನನ್ನ ವಧೆಗೆ ಪ್ರಯತ್ನ ಮಾಡು.”

ಅವನ ಆ ಅಭಿಪ್ರಾಯವನ್ನು ತಿಳಿದುಕೊಂಡು ಸತ್ಯದರ್ಶನ ಪಾಂಡವನು ಸೃಂಜಯರೊಡಗೂಡಿ ಸಂಗ್ರಾಮದಲ್ಲಿ ಭೀಷ್ಮನನ್ನು ಎದುರಿಸಿದನು. ಭೀಷ್ಮನ ಆ ಮಾತನ್ನು ಕೇಳಿ ಧೃಷ್ಟದ್ಯುಮ್ನ ಮತ್ತು ಪಾಂಡವ ಯುಧಿಷ್ಠಿರರು ತಮ್ಮ ಚತುರ್ಬಲವನ್ನು ಪ್ರಚೋದಿಸಿದರು:

> “ಮುನ್ನುಗ್ಗಿ ಭೀಷ್ಮನೊಂದಿಗೆ ಯುದ್ಧಮಾಡಿ! ಸತ್ಯಸಂಧ

ರಿಪುಜಿಷ್ಣು ಜಿಷ್ಣುವಿನಂತೆ ರಕ್ಷಿತರಾಗಿ ಸಂಯುಗದಲ್ಲಿ ವಿಜಯಿಗಳಾಗಿ! ಈ ವಾಹಿನೀಪತಿ ಮಹೇಷ್ವಾಸ ಪಾರ್ಷತನೂ ಭೀಮಸೇನನೂ ಸಮರದಲ್ಲಿ ನಿಮ್ಮನ್ನು ನಿಶ್ಚಯವಾಗಿಯೂ ಪಾಲಿಸುತ್ತಾರೆ. ಭೀಷ್ಮನಿಗೆ ಸ್ವಲ್ಪವೂ ಹೆದರದೇ ಕರ್ತವ್ಯವೆಂದು ಯುದ್ಧಮಾಡಿ. ಶಿಖಂಡಿಯನ್ನು ಮುಂದಿಟ್ಟುಕೊಂಡು ಖಂಡಿತವಾಗಿಯೂ ಭೀಷ್ಮನನ್ನು ಜಯಿಸುತ್ತೇವೆ!”

ಹೀಗೆ ಒಪ್ಪಂದವನ್ನು ಮಾಡಿಕೊಂಡು ಹತ್ತನೆಯ ದಿನ ಪಾಂಡವರು ಬ್ರಹ್ಮಲೋಕಪರರಾಗಿ ಕ್ರೋಧ ಮೂರ್ಛಿತರಾದರು. ಶಿಖಂಡಿಯನ್ನೂ ಪಾಂಡವ ಧನಂಜಯನನ್ನೂ ಮುಂದಿಟ್ಟುಕೊಂಡು ಭೀಷ್ಮನನ್ನು ಕೆಡುವಲು ಪರಮ ಯತ್ನದಲ್ಲಿ ತೊಡಗಿದರು. ಆಗ ದುರ್ಯೋಧನನಿಂದ ನಿರ್ದೇಷಿಸಲ್ಪಟ್ಟ ನಾನಾ ಜನಪದೇಶ್ವರರು ದ್ರೋಣ ಪುತ್ರನ ಸಹಾಯದಿಂದ ಮಹಾಬಲಶಾಲಿ ಸೇನೆಗಳೊಂದಿಗೆ, ಬಲವಾನ್ ದುಃಶಾಸನ ಮತ್ತು ಎಲ್ಲ ಸಹೋದರರೊಂದಿಗೆ ಸಮರದ ಮಧ್ಯದಲ್ಲಿದ್ದ ಭೀಷ್ಮನನ್ನು ರಕ್ಷಿಸುವುದರಲ್ಲಿ ತೊಡಗಿದರು. ಆಗ ಕೌರವರ ಶೂರರು ಯತವ್ರತನನ್ನು ಮುಂದಿರಿಸಿಕೊಂಡು ಶಿಖಂಡಿಪ್ರಮುಖರಾದ ಪಾರ್ಥರನ್ನು ಎದುರಿಸಿ ಯುದ್ಧಮಾಡಿದರು.

ಚೇದಿ ಮತ್ತು ಪಾಂಚಾಲರನ್ನು ಒಡಗೂಡಿ, ಶಿಖಂಡಿಯನ್ನು ಮುಂದಿಟ್ಟುಕೊಂಡು ವಾನರಧ್ವಜನು ಶಾಂತನವ ಭೀಷ್ಮನಲ್ಲಿಗೆ

ಬಂದನು. ದ್ರೋಣಪುತ್ರನು ಶಿನಿಯನ್ನು, ಧೃಷ್ಟಕೇತುವ ಪೌರವನನ್ನು, ಯುಧಾಮನ್ಯುವು ದುರ್ಯೋಧನನೊಂದಿಗೆ ಯುದ್ಧಮಾಡಿದರು. ಸೇನೆಗಳೊಂದಿಗೆ ಪರಂತಪ ವಿರಾಟನು ವೃದ್ಧಕ್ಷತ್ರನ ಮಗ ಜಯದ್ರಥನನ್ನು ಎದುರಿಸಿದನು. ಸೇನೆಯೊಡನಿದ್ದ ಮಹೇಷ್ವಾಸ ಮದ್ರರಾಜನನ್ನು ಯುಧಿಷ್ಠಿರ ಮತ್ತು ಭೀಮಸೇನನು ಗಜಸೇನೆಗಳನ್ನು ಎದುರಿಸಿದರು. ದೂರಸರಿಸಲು ಅಸಾಧ್ಯನಾದ, ತಡೆಯಲು ಅಸಾಧ್ಯನಾದ ಸರ್ವಶಸ್ತ್ರಭೃತರಲ್ಲಿ ಶ್ರೇಷ್ಠನಾದ ದ್ರೋಣನೊಂದಿಗೆ ಯದ್ಧಮಾಡಲು ಸೋಮಕರೊಂದಿಗೆ ಪಾಂಚಾಲ್ಯನು ಬಂದನು. ಸಿಂಹಕೇತು ಅರಿಂದಮ ಬೃಹದ್ಬಲನು ಕರ್ಣಿಕಾರಧ್ವಜ, ರಾಜಪುತ್ರ ಸೌಭದ್ರನನ್ನು ಎದುರಿಸಿದನು. ಶಿಖಂಡಿಯನ್ನು ಮತ್ತು ಪಾಂಡವ ಧನಂಜಯನನ್ನು ಕೊಲ್ಲಲು ಧೃತರಾಷ್ಟ್ರನ ಪುತ್ರರು ರಾಜರೊಂದಿಗೆ ಅವರ ಸಮೀಪ ಬಂದರು. ಅತಿ ಮಹಾಭಯಂಕರ ಯುದ್ಧದಲ್ಲಿ ಪರಾಕ್ರಮದಿಂದ ಮೇಲೆ ಬೀಳುತ್ತಿದ್ದ ಸೇನೆಗಳಿಂದ ಮೇದಿನಿಯು ಕಂಪಿಸಿತು. ರಣದಲ್ಲಿ ಶಾಂತನವನನ್ನು ನೋಡಿ ಕೌರವರ ಸೇನೆಗಳು ಮತ್ತು ಶತ್ರುಗಳ ಸೇನೆಗಳ ನಡುವೆ ಯುದ್ಧವು ನಡೆಯಿತು. ಆಗ ಅನ್ಯೋನ್ಯರ ಮೇಲೆ ಆಕ್ರಮಿಸಿ ಬರಲು ಪ್ರಯತ್ನಿಸುತ್ತಿದ್ದ ಅವರ ಮಹಾ ಶಬ್ಧವು ಎಲ್ಲ ದಿಕ್ಕುಗಳಲ್ಲಿಯೂ ಮೊಳಗಿತು. ಶಂಖ-ದುಂದುಭಿಗಳ ಘೋಷ, ಆನೆಗಳ ಘೀಳಿಡುವಿಕೆ ಮತ್ತು ಸೈನ್ಯಗಳ ಸಿಂಹನಾದಗಳು ದಾರುಣವೆನಿಸಿದವು. ಎಲ್ಲ ನರೇಂದ್ರರ ಚಂದ್ರಾರ್ಕಸದೃಶ ಪ್ರಭೆಯಿದ್ದ ವೀರ ಅಂಗದ ಕಿರೀಟಗಳು ನಿಷ್ಪ್ರಭೆಗೊಂಡವು. ಮೇಲೆದ್ದ ಧೂಳು

ಶಸ್ತ್ರಗಳ ವಿದ್ಯುತ್ತಿನಿಂದ ಆವೃತವಾಗಿ, ಧನುಸ್ಸುಗಳ ನಿರ್ಘೋಷಗಳೊಂದಿಗೆ ದಾರುಣವಾದವು. ಎರಡೂ ಸೇನೆಗಳಲ್ಲಿ ಬಾಣ, ಶಂಖ, ಪ್ರಣಾದ ಮತ್ತು ಭೇರಿಗಳ ಮಹಾಸ್ವನಗಳು ರಥಘೋಷದೊಂದಿಗೆ ಸೇರಿಕೊಂಡವು. ಪ್ರಾಸ-ಶಕ್ತಿ-ಋಷ್ಟಿ ಸಂಘಗಳಿಂದ ಮತ್ತು ಬಾಣಗಳ ರಾಶಿಯಿಂದ ಸೇರಿ ಸೇನೆಗಳಲ್ಲಿ ಆಕಾಶದಲ್ಲಿ ಬೆಳಕೇ ಇಲ್ಲದಂತಾಯಿತು. ಮಹಾಹವದಲ್ಲಿ ರಥಿಕರು ಮತ್ತು ಅಶ್ವಾರೋಹಿಗಳು ಅನ್ಯೋನ್ಯರನ್ನು ಯುದ್ಧಮಾಡುತ್ತಿದ್ದರು. ಆನೆಗಳು ಆನೆಗಳನ್ನು ಮತ್ತು ಪದಾತಿಗಳು ಪದಾತಿಗಳನ್ನು ಸಂಹರಿಸಿದರು. ಮಾಂಸದ ತುಂಡಿಗಾಗಿ ಗಿಡುಗಗಳು ಹೋರಾಡುವಂತೆ ಭೀಷ್ಮನ ಸಲುವಾಗಿ ಪಾಂಡವರೊಂದಿಗೆ ಕುರುಗಳ ಆ ಮಹಾಯುದ್ಧವು ನಡೆಯಿತು. ರಣರಂಗದಲ್ಲಿ ಅನ್ಯೋನ್ಯರನ್ನು ವಧಿಸಲು ಬಯಸಿದ ಅವರೀರ್ವರ ಸಮಾಗಮವು ಘೋರ ಯುದ್ಧವಾಯಿತು.

## ಸಂಕುಲ ಯುದ್ಧ

ಪರಾಕ್ರಮಿ ಅಭಿಮನ್ಯುವು ಭೀಷ್ಮನನ್ನು ರಕ್ಷಿಸಲು ಅಪಾರ ಸೇನಾ ಸಮೇತನಾಗಿ ಬಂದ ದುರ್ಯೋಧನನನ್ನು ಎದುರಿಸಿ ಯುದ್ಧಮಾಡಿದನು. ಕ್ರುದ್ಧನಾದ ದುರ್ಯೋಧನನು ಕಾರ್ಷ್ಣಿ ಅಭಿಮನ್ಯುವನ್ನು ಒಂಭತ್ತು ನತಪರ್ವ ಬಾಣಗಳಿಂದ ಮತ್ತು ಪುನಃ ಮೂರು ಶರಗಳಿಂದ ಹೊಡೆದನು. ಸಂಕ್ರುದ್ಧನಾದ ಕಾರ್ಷ್ಣಿಯು ದುರ್ಯೋಧನನ ಮೇಲೆ ಮೃತ್ಯುವಿನ ಸೋದರಿಯಂತೆ ಘೋರವಾಗಿದ್ದ

ಶಕ್ತಿಯನ್ನು ಪ್ರಯೋಗಿಸಿದನು. ವೇಗವಾಗಿ ಬೀಳುತ್ತಿದ್ದ ಆ ಘೋರರೂಪಿಯನ್ನು ಮಹಾರಥ ದುರ್ಯೋಧನನು ಕ್ಷುರಪ್ರದಿಂದ ಎರಡಾಗಿ ತುಂಡರಿಸಿದನು. ಆ ಶಕ್ತಿಯು ಬಿದ್ದುದನ್ನು ನೋಡಿದ ಕಾರ್ಷ್ಣಿಯು ಪರಮಕುಪಿತನಾಗಿ ದುರ್ಯೋಧನನ ವಕ್ಷಸ್ಥಲ ಮತ್ತು ಬಾಹುಗಳನ್ನು ಮೂರು ಬಾಣಗಳಿಂದ ಪ್ರಹರಿಸಿದನು. ಪುನಃ ಅವನು ಹತ್ತು ಘೋರ ಶರಗಳಿಂದ ಅಮರ್ಷಣ ದುರ್ಯೋಧನನ ಎದೆಗೆ ಹೊಡೆದನು. ಆ ಯುದ್ಧವು ಘೋರವೂ ಚಿತ್ರರೂಪವೂ ಆಗಿದ್ದು, ನೋಡುವವರಲ್ಲಿ ಪ್ರೀತಿಯನ್ನುಂಟುಮಾಡುತ್ತಿತ್ತು. ಸರ್ವ ಪಾರ್ಥಿವರೂ ಗೌರವಿಸುವಂತಿತ್ತು. ಭೀಷ್ಮನ ನಿಧನ ಮತ್ತು ಪಾರ್ಥನ ವಿಜಯಕ್ಕಾಗಿ ಆ ಸೌಭದ್ರ-ಕುರುಪುಂಗವ ವೀರರಿಬ್ಬರೂ ರಣದಲ್ಲಿ ಹೋರಾಡಿದರು.

ಪರಂತಪ ಬ್ರಾಹ್ಮಣಪುಂಗವ ದ್ರೌಣಿಯು ಕ್ರುದ್ಧನಾಗಿ ರಭಸದಿಂದ ನಾರಾಚಗಳಿಂದ ಸಾತ್ಯಕಿಯನ್ನು ಎದೆಯ ಮೇಲೆ ಹೊಡೆದನು. ಅಮೇಯಾತ್ಮ ಶೈನಿಯೂ ಕೂಡ ಒಂಭತ್ತು ಕಂಕಪತ್ರಿಗಳಿಂದ ಗುರುಪುತ್ರನ ಸರ್ವ ಮರ್ಮಾಂಗಗಳಿಗೂ ಹೊಡೆದನು. ಅಶ್ವತ್ಥಾಮನಾದರೋ ಸಮರದಲ್ಲಿ ವೇಗಶಾಲಿ ಸಾತ್ಯಕಿಯನ್ನು ಒಂಭತ್ತು ಬಾಣಗಳಿಂದ ಹೊಡೆದು ಪುನಃ ಮೂವತ್ತು ಬಾಣಗಳಿಂದ ಅವನ ಎದೆ-ಬಾಹುಗಳನ್ನು ಹೊಡೆದನು. ದ್ರೋಣಪುತ್ರನಿಂದ ಈ ರೀತಿ ಪೆಟ್ಟುತಿಂದ ಮಹೇಷ್ವಾಸ ಮಹಾಯಶಸ್ವಿ ಸಾತ್ವತನು ದ್ರೋಣಪುತ್ರನನ್ನು ಮೂರು ಬಾಣಗಳಿಂದ ಗಾಯಗೊಳಿಸಿದನು.

ಪೌರವನು ಮಹಾರಥ ಮಹೇಷ್ವಾಸ ಧೃಷ್ಟಕೇತುವನ್ನು ಬಹಳ ಶರಗಳಿಂದ ಹೊಡೆದು ಗಾಯಗೊಳಿಸಿದನು. ಹಾಗೆಯೇ ಯುದ್ಧದಲ್ಲಿ ಮಹಾರಥ ಸುಮಹಾಬಲ ಧೃಷ್ಟಕೇತುವು ಪೌರವನನ್ನು ಮೂವತ್ತು ನಿಶಿತ ಬಾಣಗಳಿಂದ ಹೊಡೆದನು. ಮಹಾರಥ ಪೌರವನಾದರೋ ಧೃಷ್ಟಕೇತುವಿನ ಧನುಸ್ಸನ್ನು ತುಂಡರಿಸಿ, ಬಲವತ್ತಾದ ಕೂಗನ್ನು ಕೂಗಿ, ಹತ್ತು ಶರಗಳಿಂದ ಅವನನ್ನು ಹೊಡೆದನು. ಆಗ ಅವನು ಇನ್ನೊಂದು ಕಾರ್ಮುಕವನ್ನು ಎತ್ತಿಕೊಂಡು ಎಪ್ಪತ್ಮೂರು ಶಿಲೀಮುಖ ಶರಗಳಿಂದ ಪೌರವನನ್ನು ಗಾಯಗೊಳಿಸಿದನು. ಅಲ್ಲಿ ಅವರಿಬ್ಬರು ಮಹೇಷ್ವಾಸರೂ, ಮಹಾಬಲಿಷ್ಟರೂ, ಮಹಾರಥರು ಮಹಾ ಶರವರ್ಷಗಳನ್ನು ಪರಸ್ಪರರ ಮೇಲೆ ಸುರಿಸಿದರು. ಅವರಿಬ್ಬರು ಮಹಾರಥರೂ ಅನ್ಯೋನ್ಯರ ಧನುಸ್ಸುಗಳನ್ನು ಕತ್ತರಿಸಿ, ಕುದುರೆಗಳನ್ನು ಕೊಂದು ವಿರಥರಾಗಿ ಖಡ್ಗಯುದ್ಧದಲ್ಲಿ ತೊಡಗಿದರು. ಅವರಿಬ್ಬರೂ ನೂರು ಚಂದ್ರರ ಮತ್ತು ನೂರು ನಕ್ಷತ್ರಗಳ ಚಿತ್ರಗಳಿಂದ ಕೂಡಿದ, ಎತ್ತಿನ ಚರ್ಮದಿಂದ ಮಾಡಿದ ಗುರಾಣಿಗಳನ್ನೂ ಮಹಾಪ್ರಭೆಯುಳ್ಳ ಖಡ್ಗಗಳನ್ನೂ ಹಿಡಿದಿದ್ದರು. ಮಹಾವನದಲ್ಲಿ ಸಿಂಹಿಯನ್ನು ಕೂಡಲು ಕಾದಾಡುವ ಎರಡು ಸಿಂಹಗಳಂತೆ ಅವರಿಬ್ಬರೂ ವಿಜಯವನ್ನು ಬಯಸಿ ಅನ್ಯೋನ್ಯರಮೇಲೆ ಖಡ್ಗದಿಂದ ಪ್ರಹರಿಸಿದರು. ಮುಂದೆ ಹೋಗುವುದು, ಹಿಂದೆ ಸರಿಯುವುದು, ಮತ್ತು ಮಂಡಲಾಕಾರದಲ್ಲಿ ಸುತ್ತುವುದು ಹೀಗೆ ವಿಚಿತ್ರ ನಡಿಗೆಗಳಿಂದ ತಮ್ಮ ಕೌಶಲಗಳನ್ನು ಪ್ರದರ್ಶಿಸುತ್ತಿದ್ದರು ಮತ್ತು ಪರಸ್ಪರರನ್ನು ಆಹ್ವಾನಿಸುತ್ತಿದ್ದರು.

ಪೌರವನು ಸಂಕ್ರುದ್ಧನಾಗಿ ಮಹಾ ಖಡ್ಗದಿಂದ ಧೃಷ್ಟಕೇತುವಿನ ಕಿವಿಯ ಭಾಗಕ್ಕೆ ಹೊಡೆದು “ನಿಲ್ಲು! ನಿಲ್ಲು!” ಎಂದು ಹೇಳಿದನು. ಚೇದಿರಾಜನೂ ಕೂಡ ಪುರುಷರ್ಷಭ ಪೌರವನನ್ನು ಮಹಾಖಡ್ಗದ ಹರಿತ ಭಾಗದಿಂದ ಕುತ್ತಿಗೆಯ ಮೇಲೆ ಹೊಡೆದನು. ಆ ಮಹಾಹವದಲ್ಲಿ ಅವರಿಬ್ಬರು ಅರಿಂದಮರೂ ಅನ್ಯೋನ್ಯರನ್ನು ಎದುರಿಸಿ ಅನ್ಯೋನ್ಯರನ್ನು ವೇಗವಾಗಿ ಹೊಡೆದು ಕೆಳಗೆ ಬಿದ್ದರು. ಆಗ ಧೃತರಾಷ್ಟ್ರನ ಮಗ ಜಯತ್ಸೇನನು ಪೌರವನನ್ನು ತನ್ನ ರಥದಮೇಲೆ ಕುಳ್ಳಿರಿಸಿಕೊಂಡು ರಣರಂಗದ ಆಚೆ ಕೊಂಡೊಯ್ದನು. ಧೃಷ್ಟಕೇತುವನ್ನು ಸಮರದಲ್ಲಿ ಪರಂತಪ, ಪ್ರತಾಪವಾನ್, ಮಾದ್ರೀಪುತ್ರ ಸಹದೇವನು ರಣದಿಂದ ಆಚೆ ಕರೆದುಕೊಂಡು ಹೋದನು.

ಚಿತ್ರಸೇನನು ಸುಶರ್ಮನನ್ನು ಒಂಭತ್ತು ಆಶುಗಗಳಿಂದ ಹೊಡೆದು, ಪುನಃ ಅರವತ್ತು ಬಾಣಗಳಿಂದಲೂ ಮತ್ತೆ ಪುನಃ ಎಂಭತ್ತು ಬಾಣಗಳಿಂದಲೂ ಹೊಡೆದನು. ಆದರೆ ಸುಶರ್ಮನು ಕ್ರುದ್ಧನಾಗಿ ಧೃತರಾಷ್ಟ್ರನ ಮಗನನ್ನು ಇಪ್ಪತ್ತು ನಿಶಿತ ಬಾಣಗಳಿಂದ ಹೊಡೆದನು. ಚಿತ್ರಸೇನನು ಕ್ರುದ್ಧನಾಗಿ ಮೂವತ್ತು ನತಪರ್ವಗಳಿಂದ ಅವನನ್ನು ಹೊಡೆದನು. ಅವನೂ ಕೂಡ ಯಶಸ್ಸು ಮಾನಗಳನ್ನು ಹೆಚ್ಚಿಸುತ್ತಾ ಅವನನ್ನು ತಿರುಗಿ ಹೊಡೆದನು.

ರಾಜಪುತ್ರ ಸೌಭದ್ರಿಯು ಬೃಹದ್ಬಲನನ್ನು ಎದುರಿಸಿದನು. ಕೋಸಲೇಂದ್ರನು ಆರ್ಜುನಿಯನ್ನು ಐದು ಆಯಸಗಳಿಂದ

ಗಾಯಗೊಳಿಸಿದನು. ಪುನಃ ಅವನನ್ನು ಇಪ್ಪತ್ತು ಸನ್ನತಪರ್ವ ಶರಗಳಿಂದ ಹೊಡೆದನು. ಸೌಭದ್ರಿಯು ಬೃಹದ್ಬಲನನ್ನು ಒಂಭತ್ತು ಆಯಸಗಳಿಂದ ಹೊಡೆದನು ಮತ್ತು ನಡುಗದೇ ಪುನಃ ಪುನಃ ಹೊಡೆದನು. ಫಾಲ್ಗುಣಿಯು ಪುನಃ ಕೌಸಲ್ಯನ ಧನುವನ್ನು ತುಂಡುಮಾಡಿ ಮೂವತ್ತು ಕಂಕಪತ್ರಿ ಶರಗಳಿಂದ ಅವನನ್ನು ಗಾಯಗೊಳಿಸಿದನು. ರಾಜಪುತ್ರ ಬೃಹದ್ಬಲನು ಇನ್ನೊಂದು ಕಾರ್ಮುಕವನ್ನು ತೆಗೆದುಕೊಂಡು ಕ್ರುದ್ಧನಾಗಿ ಫಾಲ್ಗುನಿಯನ್ನು ಬಹಳ ಶರಗಳಿಂದ ಹೊಡೆದನು. ಭೀಷ್ಮನಿಗಾಗಿ ನಡೆದ ಆ ಕ್ರೋಧ ಚಿತ್ರಯೋಧಿಗಳ ಮಹಾಯುದ್ಧ ಸಮರವು ದೇವಾಸುರರ ಯುದ್ಧದಲ್ಲಿ ಮಯ-ವಾಸವರ ನಡುವೆ ನಡೆದಂತೆ ನಡೆಯಿತು.

ವಜ್ರಪಾಣಿ ಶಕ್ರನು ಉತ್ತಮ ಪರ್ವತಗಳನ್ನು ಸೀಳುತ್ತಿರುವಂತೆ ಭೀಮಸೇನನು ಗಜಸೇನೆಯೊಡನೆ ಯುದ್ಧಮಾಡುತ್ತಾ ಬಹುವಾಗಿ ಶೋಭಿಸಿದನು. ಭೀಮನಿಂದ ವಧಿಸಲ್ಪಟ್ಟ ಗಿರಿಸನ್ನಿಭ ಮಾತಂಗಗಳು ಚೀತ್ಕಾರಗಳಿಂದ ಭೂಮಿಯಲ್ಲಿ ಪ್ರತಿಧ್ವನಿಗಳನ್ನುಂಟುಮಾಡುತ್ತಾ ಕೆಳಗೆ ಬೀಳುತ್ತಿದ್ದವು. ದೊಡ್ಡದಾದ ಇದ್ದಲಿನ ರಾಶಿಯಂತಿದ್ದ ಪರ್ವತಾಕಾರದ ಆನೆಗಳು ಭೂಮಿಯ ಮೇಲೆ ಬಿದ್ದು ರಣರಂಗವು ಪರ್ವತಗಳಿಂದ ವ್ಯಾಪ್ಯವಾಗಿದೆಯೋ ಎಂಬಂತೆ ತೋರುತ್ತಿತ್ತು.

ಮಹೇಷ್ವಾಸ ಯುಧಿಷ್ಠಿರನು ಮಹಾ ಸೇನೆಯಿಂದ ರಕ್ಷಿತನಾಗಿ ಬಾಣಗಳಿಂದ ಮದ್ರರಾಜನನ್ನು ಪೀಡಿಸುತ್ತಿದ್ದನು. ಭೀಷ್ಮನಿಗಾಗಿ

ಸಂರಬ್ಧನಾಗಿ ಪರಾಕ್ರಮೀ ಮದ್ರೇಶ್ವರನು ಮಹಾರಥ ಧರ್ಮಪುತ್ರನನ್ನು ಪೀಡಿಸಿದನು. ರಾಜಾ ಸೈಂಧವನು ವಿರಾಟನನ್ನು ಒಂಭತ್ತು ಸನ್ನತಪರ್ವಗಳಿಂದ ಹೊಡೆದು ಪುನಃ ಮೂರು ತೀಕ್ಷ್ಣ ಸಾಯಕಗಳಿಂದ ಗಾಯಗೊಳಿಸಿದನು. ವಿರಾಟನೂ ಕೂಡ ಮೂವತ್ತು ನಿಶಿತಬಾಣಗಳಿಂದ ಸೈಂಧವನ ಎದೆಗೆ ಹೊಡೆದನು. ಚಿತ್ರ ಧನುಸ್ಸುಗಳನ್ನೂ, ಚಿತ್ರ ಕವಚಗಳನ್ನೂ, ಚಿತ್ರ ಆಯುಧ ಧ್ವಜಗಳನ್ನೂ ಪಡೆದಿದ್ದ ಆ ಚಿತ್ರರೂಪೀ ಮತ್ಸ್ಯ-ಸೈಂಧವರು ಸಂಗ್ರಾಮದಲ್ಲಿ ರಾಜಿಸಿದರು. ದ್ರೋಣನು ಪಾಂಚಾಲಪುತ್ರನನ್ನು ಎದುರಿಸಿ ಸನ್ನತಪರ್ವ ಶರಗಳಿಂದ ಮಹಾಯುದ್ಧವನ್ನು ನಡೆಸಿದನು. ಆಗ ದ್ರೋಣನು ಪಾರ್ಷತನ ಮಹಾಧನುಸ್ಸನ್ನು ತುಂಡುಮಾಡಿ ಪಾರ್ಷತನ್ನು ಐವತ್ತು ಬಾಣಗಳಿಂದ ಹೊಡೆದನು. ಪರವೀರಹ ಪಾರ್ಷತನು ಇನ್ನೊಂದು ಕಾರ್ಮುಕವನ್ನು ತೆಗೆದುಕೊಂಡು ದ್ರೋಣನಮೇಲೆ ಯುದ್ಧದಲ್ಲಿ ಹರಿತ ಸಾಯಕಗಳನ್ನು ಪ್ರಯೋಗಿಸಿದನು. ಆ ಶರಗಳನ್ನು ಶರಸಂಘಗಳಿಂದ ತಡೆದು ಮಹಾರಥ ದ್ರೋಣನು ದ್ರುಪದಪುತ್ರನನ್ನು ಐದು ಸಾಯಕಗಳಿಂದ ಹೊಡೆದನು. ಅದರಿಂದ ಕ್ರುದ್ಧನಾದ ಪರವೀರಹ ಪಾರ್ಷತನು ರಣದಲ್ಲಿ ದ್ರೋಣನ ಮೇಲೆ ಯಮದಂಡದಂತಿರುವ ಗದೆಯನ್ನು ಎಸೆದನು. ಬೀಳುತ್ತಿರುವ ಆ ಹೇಮಪಟ್ಟವಿಭೂಷಿತ ಗದೆಯನ್ನು ಕೂಡಲೇ ದ್ರೋಣನು ಐವತ್ತು ಬಾಣಗಳಿಂದ ತಡೆದನು. ದ್ರೋಣದ ಚಾಪದಿಂದ ಹೊರಟ ಆ ಶರಗಳಿಂದ ಅದು ಅನೇಕ ಚೂರುಗಳಾಗಿ ಒಡೆದು ನೆಲದ ಮೇಲೆ

ಉದುರಿ ಬಿದ್ದಿತು. ಗದೆಯು ನಾಶವಾದುದನ್ನು ನೋಡಿ ಶತ್ರುಸೂದನ ಪಾರ್ಷತನು ದ್ರೋಣನ ಮೇಲೆ ಸರ್ವಪಾರಶವೀ ಶುಭ ಶಕ್ತಿಯನ್ನು ಎಸೆದನು. ಅದನ್ನು ದ್ರೋಣನು ಒಂಭತ್ತು ಬಾಣಗಳಿಂದ ಯುದ್ಧದಲ್ಲಿ ತುಂಡರಿಸಿದನು ಮತ್ತು ಮಹೇಷ್ವಾಸ ಪಾರ್ಷತನ್ನು ಪೀಡಿಸಿದನು. ಈ ರೀತಿ ಭೀಷ್ಮನಿಗಾಗಿ ಘೋರರೂಪವೂ ಭಯಾನಕವೂ ಆದ ಮಹಾ ಯುದ್ಧವು ದ್ರೋಣ-ಪಾರ್ಷತರ ನಡುವೆ ನಡೆಯಿತು.

ಅರ್ಜುನನು ಗಾಂಗೇಯನನ್ನು ನಿಶಿತ ಶರಗಳಿಂದ ಪೀಡಿಸುತ್ತಾ ವನದಲ್ಲಿ ಮದಿಸಿದ ಸಲಗವು ಇನ್ನೊಂದನ್ನು ಎದುರಿಸುವಂತೆ ಎದುರಿಸಿದನು. ಆಗ ಪ್ರತಾಪವಾನ್ ಭಗದತ್ತನು ಗಂಡಸ್ಥಳದ ಮೂರು ಕಡೆಗಳಿಂದ ಮದೋದಕವನ್ನು ಸುರಿಸುತ್ತಿದ್ದ ಕೊಬ್ಬಿದ ಆನೆಯ ಮೇಲೆ ಕುಳಿತು ಪಾರ್ಥನನ್ನು ಆಕ್ರಮಿಸಿದನು. ಒಮ್ಮೆಲೇ ತನ್ನ ಮೇಲೆ ಬೀಳುತ್ತಿರುವ ಆ ಮಹೇಂದ್ರನ ಐರವಾತದಂತಿರುವ ಆನೆಯನ್ನು ಬೀಭತ್ಸುವು ಪರಮ ಯತ್ನದಿಂದ ಎದುರಿಸಿದನು. ಆಗ ಆನೆಯ ಮೇಲಿದ್ದ ಪ್ರತಾಪವಾನ್ ರಾಜಾ ಭಗದತ್ತನು ಅರ್ಜುನನನ್ನು ಶರವರ್ಷಗಳಿಂದ ತಡೆದನು. ಅರ್ಜುನನಾದರೋ ಬರುತ್ತಿದ್ದ ಆನೆಯನ್ನು ಬೆಳ್ಳಿಯಂತೆ ವಿಮಲವಾಗಿದ್ದ ತೀಕ್ಷ್ಣ ರಾಯಸಗಳಿಂದ ಹೊಡೆದನು. ಕೌಂತೇಯನು ಶಿಖಂಡಿಯನ್ನು “ಭೀಷ್ಮನ ಹತ್ತಿರ ಬಾ! ಬಾ!” ಎಂದು ಪ್ರಜೋದಿಸುತ್ತ “ಅವನನ್ನು ಕೊಲ್ಲು!” ಎಂದನು. ಆಗ ಪ್ರಾಗ್ಜ್ಯೋತಿಷದ ಭಗದತ್ತನು ಪಾಂಡುಪೂರ್ವಜ ಪಾಂಡವನನ್ನು ಬಿಟ್ಟು ಅವಸರದಲ್ಲಿ ದ್ರುಪದನ ರಥದ ಕಡೆ ನಡೆದನು.

ಆಗ ಅರ್ಜುನನು ಶಿಖಂಡಿಯನ್ನು ಮುಂದಿರಿಸಿಕೊಂಡು ಭೀಷ್ಮನನ್ನು ಎದುರಿಸಿದನು. ಕೌರವರ ಶೂರರು ಎಲ್ಲರೂ ಕೂಗುತ್ತಾ ರಭಸದಿಂದ ರಣದಲ್ಲಿ ಧಾವಿಸಿ ಪಾಂಡವನನ್ನು ಎದುರಿಸಿದರು. ಅದು ಅದ್ಭುತವಾಗಿತ್ತು. ಆಗ ಅರ್ಜುನನು ಧೃತರಾಷ್ಟ್ರನ ಪುತ್ರರ ನಾನಾವಿಧದ ಸೇನೆಗಳನ್ನು ಗಾಳಿಯು ಆಕಾಶದಲ್ಲಿರುವ ಮೋಡಗಳನ್ನು ಹೇಗೋ ಹಾಗೆ ಚದುರಿಸಿದನು. ಶಿಖಂಡಿಯಾದರೋ ಅವ್ಯಗ್ರನಾಗಿ ಭರತರ ಪಿತಾಮಹನನನ್ನು ಬೇಗನೆ ಅನೇಕ ಬಾಣಗಳಿಂದ ಹೊಡೆದನು.

ಪಾರ್ಥನನ್ನು ಅನುಸರಿಸಿ ಬಂದ ಸೋಮಕರನ್ನು ಭೀಷ್ಮನು ಸಂಹರಿಸಿದನು ಮತ್ತು ಆ ಮಹಾರಥನು ಪಾಂಡವರ ಸೈನ್ಯವನ್ನು ತಡೆದನು. ಅವನ ರಥವೇ ಅಗ್ನಿಗಾರವಾಗಿತ್ತು. ಧನುಸ್ಸೇ ಅಗ್ನಿಯ ಜ್ವಾಲೆಯಾಗಿತ್ತು. ಖಡ್ಗ-ಶಕ್ತಿ-ಗದೆಗಳು ಇಂಧನವಾಗಿದ್ದವು. ಶರಸಂಘಗಳು ಮಹಾಜ್ವಾಲೆಯಾಗಿತ್ತು. ಕ್ಷತ್ರಿಯರು ಸಮರದಲ್ಲಿ ದಹಿಸುತ್ತಿದ್ದರು. ಹೇಗೆ ಮಹಾ ಅಗ್ನಿಯು ಗಾಳಿಯೊಡಗೂಡಿ ಒಣಹುಲ್ಲನ್ನು ಸುಟ್ಟುಹಾಕುವುದೋ ಹಾಗೆ ಭೀಷ್ಮನೂ ಕೂಡ ದಿವ್ಯಾಸ್ತ್ರಗಳನ್ನು ಪ್ರಯೋಗಿಸುತ್ತಾ ಬೆಳಗಿದನು. ಮಹಾಯಶ ಭೀಷ್ಮನು ಸಿಂಹಗರ್ಜನೆ ಮಾಡಿ ಸುವರ್ಣಪುಂಖಗಳ ನಿಶಿತ ಸನ್ನತಪರ್ವ ಶರಗಳಿಂದ ದಿಕ್ಕು-ಉಪದಿಕ್ಕುಗಳನ್ನೂ ತುಂಬಿಸಿದನು. ರಥರನ್ನು, ಸವಾರರೊಂದಿಗೆ ಆನೆಗಳನ್ನೂ ಉರುಳಿಸಿ ಆ ರಥಸಮೂಹವನ್ನು ಬೋಳಾದ ತಾಳೆಮರಗಳ ವನದಂತೆ ಮಾಡಿದನು.
ಸರ್ವಶಸ್ತ್ರಭೃತರಲ್ಲಿ ಶ್ರೇಷ್ಠ ಭೀಷ್ಮನು ಮನುಷ್ಯರು, ರಥಗಳು, ಆನೆಗಳು

ಮತ್ತು ಕುದುರೆಗಳು ಇಲ್ಲದಂತೆಯೇ ಮಾಡಿದನು. ಸಿಡಿಲಿನ ಶಬ್ಧದಂತಿದ್ದ ಅವನ ಧನುಸ್ಸಿನ ಶಿಂಜಿನಿಯ ಟೇಂಕಾರವನ್ನು ಕೇಳಿ ಎಲ್ಲೆಡೆಯೂ ಸೈನಿಕರು ಕಂಪಿಸಿದರು. ಭೀಷ್ಮನ ಚಾಪದಿಂದ ಹೊರಟ ಶರಗಳು ಶರೀರಗಳನ್ನು ಚುಚ್ಚದೇ ವ್ಯರ್ಥವಾಗಿ ಬೀಳುತ್ತಿರಲಿಲ್ಲ. ಮನುಷ್ಯರೇ ಇಲ್ಲದಿದ್ದ ರಣದಲ್ಲಿ ವೇಗವಾಗಿ ಹೋಗಬಲ್ಲ ಕುದುರೆಗಳನ್ನು ಕಟ್ಟಿದ ರಥಗಳು ಓಡುತ್ತಿರುವುದು ಕಂಡುಬರುತ್ತಿತ್ತು.

ಬಾಯಿಕಳೆದ ಅಂತಕನಂತಿದ್ದ ಭೀಷ್ಮನನ್ನು ಸಂಗ್ರಾಮದಲ್ಲಿ ಎದುರಿಸಿ ಹದಿನಾಲ್ಕು ಸಾವಿರ ಮಹಾರಥ, ಸಮಾಖ್ಯಾತ, ಕುಲಪುತ್ರರು, ತನುವನ್ನೇ ತ್ಯಜಿಸಿ ಬಂದ ಚೇದಿ-ಕಾಶಿ-ಕರೂಷಣರು ಕುದುರೆ-ರಥ-ಆನೆಗಳೊಂದಿಗೆ ಪರಲೋಕಗಳಿಗೆ ತೆರಳಿದರು. ರಣದಲ್ಲಿ ಭೀಷ್ಮನನ್ನು ಎದುರಿಸಿಯೂ ಜೀವವನ್ನು ಉಳಿಸಿಕೊಳ್ಳುತ್ತೇನೆ ಎನ್ನುವ ಯಾವ ಸೋಮಕ ಮಹಾರಥನೂ ಅಲ್ಲಿರಲಿಲ್ಲ.ಭೀಷ್ಮನ ವಿಕ್ರಮವನ್ನು ನೋಡಿ ರಣದಲ್ಲಿದ್ದ ಯೋಧರೆಲ್ಲರನ್ನೂ ಪ್ರೇತರಾಜನ ಪುರದ ಕಡೆಗೆ ಕಳುಹಿಸಿಯಾಯಿತೆಂದು ಜನರು ಅಂದುಕೊಳ್ಳುತ್ತಿದ್ದರು. ಆ ಸಮಯದಲ್ಲಿ ವೀರ ಪಾಂಡುಸುತ ಕೃಷ್ಣಸಾರಥಿ ಶ್ವೇತಾಶ್ವನನ್ನು ಮತ್ತು ಅವನಿಂದ ಪಾಲಿತಗೊಂಡ ಅಮಿತೌಜಸ ಪಾಂಚಾಲ್ಯ ಶಿಖಂಡಿಯನ್ನು ಬಿಟ್ಟು ಬೇರೆ ಯಾವ ಮಹಾರಥನೂ ಅವನನ್ನು ಎದುರಿಸಲು ಮುಂದೆ ಬರಲಿಲ್ಲ.

ಶಿಖಂಡಿಯಾದರೋ ರಣದ ಮಹಾಹವದಲ್ಲಿ ಭೀಷ್ಮನ ಬಳಿಹೋಗಿ ಇಪ್ಪತ್ತು ಬಾಣಗಳಿಂದ ಹೊಡೆದನು. ಕೇವಲ ಕಣ್ಣುನೋಟದಿಂದಲೇ

ದಹಿಸಿಬಿಡುವನೋ ಎನ್ನುವಂತೆ ಗಾಂಗೇಯನು ಸಿಟ್ಟಿನಿಂದ ಉರಿಯುವ ಕಣ್ಣುಗಳಿಂದ ಶಿಖಂಡಿಯನ್ನು ನೋಡಿದನು. ಅವನ ಸ್ತ್ರೀತ್ವವನ್ನು ನೆನಪಿಸಿಕೊಂಡು ಸರ್ವಲೋಕಗಳೂ ನೋಡುತ್ತಿರಲು ಭೀಷ್ಮನು ಅವನು ಹೊಡೆದರೂ ಅವನನ್ನು ತಿರುಗಿ ಹೊಡೆಯಲಿಲ್ಲ. ಅರ್ಜುನನಾದರೋ ಶಿಖಂಡಿಗೆ ಹೇಳಿದನು:

> "ತ್ವರೆಮಾಡು! ಪಿತಾಮಹನನ್ನು ಬೇಗನೇ ಕೊಲ್ಲು! ಏನನ್ನು ನೋಡುತ್ತಿದ್ದೀಯೆ? ಮಹಾರಥ ಭೀಷ್ಮನನ್ನು ಕೊಲ್ಲು! ಏಕೆಂದರೆ ನೀನಲ್ಲದೇ ಯುಧಿಷ್ಠಿರನ ಸೇನೆಯಲ್ಲಿ ಪಿತಾಮಹ ಭೀಷ್ಮನೊಡನೆ ಯುದ್ಧಮಾಡಬಲ್ಲ ಬೇರೆ ಅನ್ಯರನ್ನು ನಾನು ಕಾಣೆ. ನಿನಗೆ ಸತ್ಯವನ್ನು ಹೇಳುತ್ತಿದ್ದೇನೆ."

ಪಾರ್ಥನು ಹೀಗೆ ಹೇಳಲು ಶಿಖಂಡಿಯು ನಾನಾವಿಧದ ಶರಗಳಿಂದ ಬೇಗನೇ ಪಿತಾಮಹನನ್ನು ಹೊಡೆದನು. ಆ ಬಾಣಗಳ ಕುರಿತು ಯೋಚಿಸದೇ ದೇವವ್ರತನು ಕ್ರುದ್ಧನಾದ ಅರ್ಜುನನನ್ನು ಸಾಯಕಗಳಿಂದ ತಡೆದನು. ಹಾಗೆಯೇ ಪಾಂಡವರ ಸೇನೆಗಳೆಲ್ಲವನ್ನೂ ಮಹಾರಥನು ತೀಕ್ಷ್ಣ ಶರಗಳಿಂದ ಪರಲೋಕಕ್ಕೆ ಕಳುಹಿಸಿದನು. ಹಾಗೆಯೇ ಪಾಂಡವನೂ ಕೂಡ ಮಹಾ ಸೇನೆಯೊಂದಿಗೆ ಆವೃತನಾಗಿ ಭೀಷ್ಮನನ್ನು ಮೋಡಗಳು ದಿವಾಕರನನ್ನು ಹೇಗೋ ಹಾಗೆ ಮುಚ್ಚಿದನು. ಎಲ್ಲಕಡೆಗಳಿಂದಲೂ ಸುತ್ತುವರೆದಿದ್ದ ಆ ಭಾರತನು ಬೆಂಕಿಯು ವನವನ್ನು ಸುಡುವಂತೆ ಶೂರರನ್ನು ಸುಟ್ಟುಹಾಕಿದನು.

ಅಲ್ಲಿ ದುಃಶಾಸನನ ಅದ್ಭುತ ಪೌರುಷವು ಕಂಡುಬಂದಿತು. ಅವನು ಪಾರ್ಥನೊಂದಿಗೆ ಯುದ್ಧಮಾಡುತ್ತಿದ್ದನು ಮತ್ತು ಯತವ್ರತನನ್ನು ರಕ್ಷಿಸುತ್ತಿದ್ದನು. ಮಹಾತ್ಮ ಧನ್ವಿ ದುಃಶಾಸನನ ಕೃತ್ಯದಿಂದ ಸರ್ವ ಲೋಕಗಳೂ ಸಂತೋಷಗೊಂಡವು. ಅವನೊಬ್ಬನೇ ಅನುಯಾಯಿಗಳೊಂದಿಗೆ ಪಾರ್ಥರನ್ನು ಎದುರಿಸಿ ಯುದ್ಧ ಮಾಡುತ್ತಿದ್ದನು. ಯುದ್ಧದಲ್ಲಿ ಪ್ರಚಂಡಪರಾಕ್ರಮಿಯಾಗಿದ್ದ ಅವನನ್ನು ಪಾಂಡವರೂ ಕೂಡ ತಡೆಯಲು ಸಮರ್ಥರಾಗಲಿಲ್ಲ. ಸಮರದಲ್ಲಿ ದುಃಶಾಸನನಿಂದ ರಥಿಗಳು ವಿರಥರಾದರು. ಮಹಾಬಲ ಆನೆಗಳೂ, ಅವುಗಳನ್ನು ಏರಿದವರೂ ತೀಕ್ಷ್ಣಶರಗಳಿಂದ ಒಡೆದು ನೆಲದ ಮೇಲೆ ಬಿದ್ದರು. ಹಾಗೆಯೇ ಅನ್ಯ ಆನೆಗಳು ಶರಗಳಿಂದ ಪೀಡಿತವಾಗಿ ದಿಕ್ಕು ದಿಕ್ಕುಗಳಲ್ಲಿ ಓಡಿ ಹೋದವು. ಹೇಗೆ ಅಗ್ನಿಯು ಇಂಧನಕ್ಕೆ ತಾಗಿ ಇನ್ನೂ ಹೆಚ್ಚು ಹತ್ತಿ ಉರಿಯುವುದೋ ಹಾಗೆ ದುಃಶಾಸನನು ಪಾಂಡವರನ್ನು ದಹಿಸುತ್ತಾ ಇನ್ನೂ ಹತ್ತಿ ಉರಿದನು. ಮಹೇಂದ್ರತನಯ ಶ್ವೇತಾಶ್ವ ಕೃಷ್ಣಸಾರಥಿಯನ್ನು ಬಿಟ್ಟರೆ ಪಾಂಡವರಲ್ಲಿ ಬೇರೆ ಯಾವ ಮಹಾರಥನೂ ಆ ಭಾರತ ಮಹಾಮಾತ್ರನನ್ನು ಎದುರಿಸಿ ಯುದ್ಧಮಾಡಲು ಅಥವಾ ಜಯಿಸಲು ಉತ್ಸುಕರಾಗಿರಲಿಲ್ಲ. ಸರ್ವಸೈನ್ಯಗಳೂ ನೋಡುತ್ತಿದ್ದಂತೆಯೇ ವಿಜಯ ಅರ್ಜುನನು ಅವನನ್ನು ಗೆದ್ದು ಒಡನೆಯೇ ಭೀಷ್ಮನನ್ನು ಆಕ್ರಮಿಸಿದನು. ಸೋತಿದ್ದರೂ ರಣೋತ್ಕಟ ದುಃಶಾಸನನು ಭೀಷ್ಮನ ಬಾಹುಗಳನ್ನು ಆಶ್ರಯಿಸಿ ಪುನಃ ಪುನಃ ದಣಿವಾರಿಸಿಕೊಂಡು ಯುದ್ಧಮಾಡುತ್ತಲೇ ಇದ್ದನು.

ಅರ್ಜುನನೊಡನೆಯೂ ಯುದ್ಧಮಾಡುತ್ತಾ ಅವನು ರಣದಲ್ಲಿ ರಾಜಿಸಿದನು.

ಶಿಖಂಡಿಯಾದರೋ ರಣದಲ್ಲಿ ಸರ್ಪವಿಷಗಳಿಗೆ ಸಮವಾದ ತೀಕ್ಷ್ಣ ಶರಗಳಿಂದ ಒಂದೇ ಸಮನ ಪಿತಾಮಹನನ್ನು ಹೊಡೆಯುತ್ತಲೇ ಇದ್ದನು. ಆದರೆ ಅವುಗಳು ಭೀಷ್ಮನಿಗೆ ನೋವನ್ನುಂಟುಮಾಡುತ್ತಿರಲಿಲ್ಲ. ಗಾಂಗೇಯನು ನಗುತ್ತಲೇ ಆ ಬಾಣಗಳನ್ನು ಸ್ವೀಕರಿಸುತ್ತಿದ್ದನು. ಬೇಸಗೆಯ ಬಿಸಿಲಿನಿಂದ ಬಳಲಿದವನು ಹೇಗೆ ನೀರಿನ ಮಳೆಯನ್ನು ಬಯಸುತ್ತಾನೋ ಹಾಗೆ ಗಾಂಗೇಯನು ಶಿಖಂಡಿಯ ಶರಧಾರೆಗಳನ್ನು ಸ್ವೀಕರಿಸಿದನು. ಘೋರ ಆಹವದಲ್ಲಿ ಭೀಷ್ಮನು ಮಹಾತ್ಮ ಪಾಂಡವರ ಸೇನೆಗಳನ್ನು ದಹಿಸುತ್ತಿರುವುದನ್ನು ಕ್ಷತ್ರಿಯರು ನೋಡಿದರು. ಆಗ ದುಃಶಾಸನನು ಎಲ್ಲ ಸೈನ್ಯಗಳಿಗೂ ಹೇಳಿದನು:

> “ಸಂಗ್ರಾಮದಲ್ಲಿ ಫಲ್ಗುನನನ್ನು ರಥಗಳಿಂದ ಎಲ್ಲ ಕಡೆಗಳಿಂದಲೂ ಆಕ್ರಮಿಸಿರಿ. ಧರ್ಮವಿದು ಭೀಷ್ಮನು ಸಮರದಲ್ಲಿ ನಮ್ಮೆಲ್ಲರನ್ನೂ ಪಾಲಿಸುತ್ತಾನೆ. ಆದುದರಿಂದ ಪಾಂಡವನ ಭಯವನ್ನು ತೊರೆದು ಅವನೊಡನೆ ಯುದ್ಧಮಾಡಿ. ಈ ತಾಲಧ್ವಜನು ಉರಿಯುತ್ತಾ ರಣದಲ್ಲಿ ಸರ್ವ ಧಾರ್ತರಾಷ್ಟ್ರರನ್ನು ಪಾಲಿಸುತ್ತಾ ಅವರ ಕವಚ-ರಕ್ಷಕನಾಗಿ ನಿಂತಿದ್ದಾನೆ. ತ್ರಿದಶರೂ ಕೂಡ ಪ್ರಯತ್ನಿಸಿದರೂ ಈ ಭೀಷ್ಮನನ್ನೆದುರಿಸಿ ಯುದ್ಧಮಾಡಲಾರರು. ಇನ್ನು

ಬಲಶಾಲಿಗಳಾಗಿದ್ದರೂ ಸಾವಿರುವ ಮಹಾತ್ಮ ಪಾಂಡವರು ಯಾವ ಲೆಕ್ಕಕ್ಕೆ? ಆದುದರಿಂದ ಹೇ ಯೋಧರೇ! ಅರ್ಜುನನೊಡನೆ ಯುದ್ಧವು ಸನ್ನಿಹಿತವಾಗಿರುವಾಗ ಓಡಿ ಹೋಗಬೇಡಿ. ಇಂದು ನಾನು ನೀವೆಲ್ಲ ವಸುಧಾಧಿಪರೊಡನೆ ಎಲ್ಲಕಡೆಗಳಿಂದ ಮುತ್ತಿಗೆ ಹಾಕಿ ಫಲ್ಗುನನೊಂದಿಗೆ ಯುದ್ಧಮಾಡುತ್ತೇನೆ.”

ದುಃಶಾಸನನ ಆ ಮಾತನ್ನು ಕೇಳಿ ಬಲವಂತರಾದ ಮಹಾರಥ ಧನ್ವಿಗಳು ಅರ್ಜುನನ ಮೇಲೆ ಆಕ್ರಮಿಸಿದರು. ವಿದೇಹರು, ಕಲಿಂಗರು, ದಾಶೇರಕಗಣಗಳೊಂದಿಗೆ ನಿಷಾದರು ಮತ್ತು ಸೌವೀರರು ಅವನ ಮೇಲೆರಗಿದರು. ಬಾಹ್ಲೀಕರು, ದರದರು, ಪೂರ್ವದವರು, ಉತ್ತರದವರು, ಮಾಲವರು, ಅಭೀಷಾಹರು, ಶೂರಸೇನರು, ಶಿಬಯರು, ವಸಾಯತರು, ಶಾಲ್ವರು, ತ್ರಿಗರ್ತರು, ಅಂಬಷ್ಠರು, ಕೇಕಯರು ಒಟ್ಟಿಗೇ ರಣದಲ್ಲಿ ಪತಂಗಗಳು ಬೆಂಕಿಯನ್ನು ಹೇಗೋ ಹಾಗೆ ಪಾರ್ಥನನ್ನು ಮುತ್ತಿದರು. ಆಗ ಧನಂಜಯನು ದಿವ್ಯಾಸ್ತ್ರಗಳನ್ನು ಸ್ಮರಿಸಿ ಆ ಎಲ್ಲ ಮಹಾರಥರನ್ನೂ ಸೇನೆಗಳೊಂದಿಗೆ ನಾಶಪಡಿಸಿದನು. ತನ್ನ ಶರಪ್ರತಾಪದಿಂದ ಮಹಾಬಲ ಬೀಭತ್ಸುವು ಮಹಾವೇಗವುಳ್ಳ ಅಸ್ತ್ರಗಳಿಂದ ಅಗ್ನಿಯು ಪತಂಗಗಳನ್ನು ಸುಡುವಂತೆ ಸುಟ್ಟುಹಾಕಿದನು. ಆ ದೃಢಧನ್ವಿಯ ಗಾಂಡೀವವು ಸಹಸ್ರಬಾಣಗಳನ್ನು ಸೃಷ್ಟಿಸುತ್ತಾ ಆಕಾಶದಲ್ಲಿ ಮಿಂಚಿನಂತೆ ಹೊಳೆಯಿತು. ಶರಾರ್ತರಾದ ಆ ರಾಜರು ರಥಧ್ವಜಗಳು ಮುರಿದು ವಾನರಧ್ವಜನನ್ನು ಎದುರಿಸಲಾರದಂತಾದರು.

ಕಿರೀಟಿಯ ಶರಗಳಿಂದ ಹೊಡೆಯಲ್ಪಟ್ಟು ರಥಿಗಳು ಧ್ವಜಗಳೊಂದಿಗೆ, ಅಶ್ವಾರೋಹಿಗಳು ಅಶ್ವಗಳೊಂದಿಗೆ, ಗಜಾರೋಹಿಗಳು ಆನೆಗಳೊಂದಿಗೆ ಬಿದ್ದರು. ಅರ್ಜುನನ ಭುಜಗಳಿಂದ ಪ್ರಯೋಗಿಸಲ್ಪಟ್ಟ ಶರಗಳಿಂದ ಭೂಮಿಯು ತುಂಬಿಹೋಯಿತು. ಅನೇಕ ಸೇನೆಗಳೊಂದಿಗೆ ರಾಜರು ಎಲ್ಲಕಡೆ ಓಡಿ ಹೋದರು. ಆಗ ಮಹಾಬಾಹು ಪಾರ್ಥನು ಸೇನೆಗಳನ್ನು ಪಲಾಯನಗೊಳಿಸಿ ದುಃಶಾಸನನ ಮೇಲೆ ಸಾಯಕಗಳನ್ನು ಕಳುಹಿಸಿದನು. ಅವು ದುಃಶಾಸನನನ್ನು ಹೊಕ್ಕು ಬಿಲದೊಳಗೆ ಹೊಗುವ ಸರ್ಪಗಳಂತೆ ನೆಲವನ್ನು ಮುಕ್ಕಿದವು. ಅವನ ಕುದುರೆಗಳು ಮತ್ತು ಸಾರಥಿಯು ಸತ್ತು ಬಿದ್ದರು. ಪ್ರಭುವು ವಿವಿಂಶತಿಯನ್ನು ಇಪ್ಪತ್ತು ಬಾಣಗಳಿಂದ ವಿರಥನನ್ನಾಗಿ ಮಾಡಿ ಪುನಃ ಐದು ನತಪರ್ವಗಳಿಂದ ತುಂಬಾ ಗಾಯಗೊಳಿಸಿದನು. ಕೃಪ, ಶಲ್ಯ, ವಿಕರ್ಣರನ್ನೂ ಅನೇಕ ಆಯಸಗಳಿಂದ ಹೊಡೆದು ಶ್ವೇತವಾಹನ ಕೌಂತೇಯನು ಅವರನ್ನೂ ಕೂಡ ವಿರಥರನ್ನಾಗಿ ಮಾಡಿದನು. ಹೀಗೆ ವಿರಥರಾದ ಐವರು - ಕೃಪ, ಶಲ್ಯ, ದುಃಶಾಸನ, ವಿಕರ್ಣ ಮತ್ತು ವಿವಿಂಶತಿ – ಸವ್ಯಸಾಚಿಯಿಂದ ಸೋಲಲ್ಪಟ್ಟು ಸಮರದಿಂದ ಪಲಾಯನಗೈದರು.

ಹಾಗೆ ಪೂರ್ವಾಹ್ಣದಲ್ಲಿ ಮಹಾರಥರನ್ನು ಪರಾಜಯಗೊಳಿಸಿ ರಣದಲ್ಲಿ ಪಾರ್ಥನು ಹೊಗೆಯಿಲ್ಲದ ಬೆಂಕಿಯಂತೆ ಪ್ರಜ್ವಲಿಸಿದನು. ಹಾಗೆಯೇ ಭಾಸ್ಕರನ ಕಿರಣಗಳಂತಹ ಶರವರ್ಷಗಳಿಂದ ಅನ್ಯ ಪಾರ್ಥಿವರನ್ನೂ ಉರುಳಿಸಿದನು. ಆಗ ಶರವರ್ಷಗಳಿಂದ ಮಹಾರಥರನ್ನು ಪರಾಙ್ಮುಖಗೊಳಿಸಿ ಪಾಂಡವರ ಮತ್ತು ಕುರುಸೇನೆಗಳ ಮಧ್ಯೆ ರಕ್ತವೇ

ನೀರಾಗಿರುವ ಮಹಾನದಿಯನ್ನು ಹರಿಸಿದನು. ರಥಿಗಳು ಅನೇಕ ಆನೆಗಳನ್ನೂ ರಥ ಸಂಘಗಳನ್ನೂ ಸಂಹರಿಸುತ್ತಿದ್ದರು. ಆನೆಗಳು ರಥಗಳನ್ನೂ, ಆನೆಗಳನ್ನೂ, ಕುದುರೆಗಳನ್ನೂ, ಪದಾತಿಗಳನ್ನೂ ಸಂಹರಿಸುತ್ತಿದ್ದವು. ಗಜ-ಅಶ್ವ-ರಥಯೋಧಿಗಳ ಶರೀರ ಮತ್ತು ಶಿರಗಳು ತುಂಡು ತುಂಡಾಗಿ ಎಲ್ಲಾಕಡೆ ಬಿದ್ದಿದ್ದವು. ಬಿದ್ದಿರುವ ಮತ್ತು ಬೀಳುತ್ತಿರುವ ಕುಂಡಲ-ಅಂಗದ ಧಾರಿ ಮಹಾರಥ ರಾಜಪುತ್ರರಿಂದ ರಣಭೂಮಿಯು ತುಂಬಿಹೋಗಿತ್ತು. ರಥಗಳ ಗಾಲಿಗೆ ಸಿಲುಕಿ ತುಂಡಾಗಿದ್ದರು. ಆನೆಗಳ ತುಳಿತಕ್ಕೆ ಸಿಲುಕಿ ನುಜ್ಜಾಗಿದ್ದರು. ಅಶ್ವಗಳು ಮತ್ತು ಅಶ್ವಾರೋಹಿಗಳೊಂದಿಗೆ ಪದಾತಿಗಳು ಕಂಡುಬಂದರು. ಗಜ-ಅಶ್ವ-ರಥ ಸಂಘಗಳು ಎಲ್ಲಕಡೆ ಮುರಿದು ಬಿದ್ದಿದ್ದವು. ಭೂಮಿಯು ಮುರಿದ ರಥ, ಚಕ್ರ, ನೊಗ ಮತ್ತು ಧ್ವಜಗಳಿಂದ ಹರಡಿಹೋಗಿತ್ತು. ಅಶ್ವ-ರಥಿ ಸೇನೆಗಳ ರಕ್ತದಿಂದ ತೋಯ್ದು ಹೋಡಿದ್ದ ಆ ರಣಭೂಮಿಯು ಶರದೃತುವಿನ ಕೆಂಪುಬಣ್ಣದ ಆಕಾಶದಂತೆ ಶೋಭಿಸಿತು. ನಾಯಿಗಳು, ಕಾಗೆಗಳು, ಹದ್ದುಗಳು, ತೋಳಗಳು, ನರಿಗಳು ಇವೇ ಮೊದಲಾದ ವಿಕಾಸ್ವರದ ಮೃಗಪಕ್ಷಿಗಳು ಭಕ್ಷಗಳನ್ನುಂಡು ಕೂಗಾಡಿದವು. ರಾಕ್ಷಸರು ಮತ್ತು ಭೂತಗಳು ಗರ್ಜಿಸುತ್ತಿರುವುದು ಕಂಡುಬರಲು ಎಲ್ಲ ದಿಕ್ಕುಗಳಲ್ಲಿ ನಾನಾ ವಿಧದ ಗಾಳಿಗಳು ಬೀಸಿದವು. ಕಾಂಚನದ ಮಾಲೆಗಳೂ, ಬೆಲೆಬಾಳುವ ಪತಾಕೆಗಳೂ ಗಾಳಿಯೊಂದಿಗೆ ಒಂದು ಕಡೆಯಿಂದ ಇನ್ನೊಂದು ಕಡೆ ಹಾರಾಡುತ್ತಿದ್ದುದು ಕಾಣುತ್ತಿತ್ತು. ಸಹಸ್ರಾರು ಬಿಳಿಯ ಛತ್ರಗಳೂ, ಧ್ವಜಗಳೊಂದಿಗೆ ಮಹಾರಥಗಳು

ನೂರಾರು ಸಹಸ್ರಾರು ಸಂಖ್ಯೆಗಳಲ್ಲಿ ಹರಡಿ ಬಿದ್ದಿರುವುದು ಕಾಣುತ್ತಿತ್ತು. ಶರಗಳಿಂದ ಪೀಡಿತರಾಗಿ ಆನೆಗಳು ಪತಾಕೆಗಳೊಂದಿಗೆ ದಿಕ್ಕಾಪಾಲಾದವು. ಗದ-ಶಕ್ತಿ-ಧನುಸ್ಸುಗಳನ್ನು ಹಿಡಿದಿದ್ದ ಕ್ಷತ್ರಿಯರು ಭೂಮಿಯ ಮೇಲೆ ಎಲ್ಲ ಕಡೆ ಬಿದ್ದಿರುವುದು ಕಾಣುತ್ತಿತ್ತು.

ಆಗ ಭೀಷ್ಮನು ದಿವ್ಯ ಅಸ್ತ್ರವನ್ನು ಪ್ರಕಟಿಸುತ್ತ ಸರ್ವಧನ್ವಿಗಳೂ ನೋಡುತ್ತಿದ್ದಂತೆ, ಕೌಂತೇಯನನ್ನು ಆಕ್ರಮಿಸಿದನು. ಆದರೆ ರಣದಲ್ಲಿ ಅವನನ್ನು ಕವಚಧಾರಿಯಾದ ಶಿಖಂಡಿಯು ಎದುರಿಸಲು ಭೀಷ್ಮನು ಪಾವಕೋಪಮವಾದ ಆ ಅಸ್ತ್ರವನ್ನು ಹಿಂತೆಗೆದುಕೊಂಡನು. ಇದೇ ಸಮಯದಲ್ಲಿ ಕೌಂತೇಯ ಶ್ವೇತವಾಹನನು ಪಿತಾಮಹನನ್ನು ದಿಗ್ಭ್ರಮೆಗೊಳಿಸುತ್ತಾ ಕೌರವ ಸೇನೆಯನ್ನು ಸಂಹರಿಸಿದನು.

## ಭೀಷ್ಮ ಪರಾಕ್ರಮ

ಈ ರೀತಿ ವ್ಯೂಹಗೊಂಡ ಸೇನೆಗಳು ಪಲಾಯನ ಮಾಡದೇ ನಿಂತುಕೊಂಡು ಎಲ್ಲರೂ ಬ್ರಹ್ಮಲೋಕಪರರಾಗಿ ಸೇರಿದ್ದರು. ಆಗ ಸೇನೆ ಸೇನೆಗಳೊಡನೆ ಸಂಕುಲಯುದ್ಧವು ಪ್ರಾರಂಭವಾಯಿತು. ರಥಿಕರು ರಥಿಕರೊಡನೆ, ಪದಾತಿಗಳು ಪದಾತಿಗಳೊಡನೆ, ಅಶ್ವಯೋಧರು ಅಶ್ವಯೋಧರೊಡನೆ ಮತ್ತು ಗಜಯೋಧರು ಗಜಯೋಧರೊಡನೆ ಯುದ್ಧಮಾಡಲಿಲ್ಲ. ನಿಯಮಗಳನ್ನು ಉಲ್ಲಂಘಿಸಿ ಸೇನೆಗಳ ಮಧ್ಯೆ ಮಹಾ ರೌದ್ರ ಯುದ್ಧವುಂಟಾಯಿತು. ಎಲ್ಲೆಡೆಯಲ್ಲಿಯೂ ಚದುರಿಹೋಗಿದ್ದ ನರ-ರಥ-ಅಶ್ವ-ಗಜಸೇನೆಗಳ ನಡುವೆ ನಡೆದ ಆ

ಮಹಾರೌದ್ರ ಕ್ಷಯಕಾರಕ ಯುದ್ಧದಲ್ಲಿ ಪರಸ್ಪರರ ನಡುವೆ ವ್ಯತ್ಯಾಸವೇ ಇಲ್ಲದಂತಾಯಿತು. ಆಗ ಶೂರರಾದ ಶಲ್ಯ, ಕೃಪ, ಚಿತ್ರಸೇನ, ದುಃಶಾಸನ, ವಿಕರ್ಣರು ಕಾಂತಿಯುಕ್ತ ರಥಗಳನ್ನೇರಿ ರಣದಲ್ಲಿ ಪಾಂಡವರ ಸೇನೆಗಳನ್ನು ನಡುಗಿಸಿದರು. ಆ ಮಹಾತ್ಮರಿಂದ ವಧಿಸಲ್ಪಡುತ್ತಿದ್ದ ಪಾಂಡವಸೇನೆಯು ಚಂಡಮಾರುತಕ್ಕೆ ಸಿಲುಕಿ ನೀರಿನ ಮೇಲಿರುವ ದೋಣಿಯು ಎಲ್ಲೆಲ್ಲೋ ಸೆಳೆದೊಯ್ಯಲ್ಪಡುವಂತೆ ದಿಕ್ಕುಪಾಲಾಯಿತು. ಹೇಗೆ ಶಿಶಿರ ಋತುವಿನ ಛಳಿಯು ಗೋವುಗಳ ಮರ್ಮಾಂಗಗಳನ್ನು ಕತ್ತರಿಸುವುದೋ ಹಾಗೆ ಭೀಷ್ಮನು ಪಾಂಡುಸುತರ ಮರ್ಮಾಂಗಗಳನ್ನು ಕತ್ತರಿಸುತ್ತಿದ್ದನು. ಹಾಗೆಯೇ ಮಹಾತ್ಮ ಪಾರ್ಥನೂ ಕೂಡ ಕೌರವ ಸೇನೆಯಲ್ಲಿ ದೊಡ್ಡ ದೊಡ್ಡ ಮೋಡಗಳಂತಿದ್ದ ಬಹಳಷ್ಟು ಆನೆಗಳನ್ನು ಬೀಳಿಸಿದನು. ಪಾರ್ಥನು ಸಹಸ್ರಾರು ನಾರಾಚ ಬಾಣಗಳಿಂದ ಹೊಡೆದು ನರಯೂಥಪರನ್ನು ಮಣ್ಣುಮುಕ್ಕಿಸಿದುದು ಕಾಣುತ್ತಿತ್ತು. ಯುದ್ಧದಲ್ಲಿ ಭೀಷ್ಮನ ಮತ್ತು ಪಾಂಡವ ಧನಂಜಯನ ವಿಕ್ರಾಂತದಿಂದ ಆ ಮಹಾಭಯಂಕರ ವೀರವರಕ್ಷಯದಲ್ಲಿ ಬಾಣಗಳಿಂದ ಹೊಡೆಯಲ್ಪಟ್ಟು ಆರ್ತಸ್ವರದಲ್ಲಿ ಕೂಗಿ ಮಹಾಗಜಗಳೂ, ಆಭರಣಗಳನ್ನು ಧರಿಸಿದ್ದ ಮಹಾತ್ಮರ ಶರೀರಗಳೂ, ಕರ್ಣಕುಂಡಲಗಳನ್ನು ಧರಿಸಿದ್ದ ಶಿರಸ್ಸುಗಳೂ ಅಲ್ಲಲ್ಲಿ ಬಿದ್ದಿದ್ದವು.

ಯುದ್ಧದಲ್ಲಿ ಪಿತಾಮಹನ ಪರಾಕ್ರಮವನ್ನು ನೋಡಿ ಬ್ರಹ್ಮಲೋಕಪುರಸ್ಕೃತರಾದ ಕೌರವ್ಯರು ಯುದ್ಧದಿಂದ

ಹಿಂದಿರುಗಲಿಲ್ಲ. ಸ್ವರ್ಗವನ್ನೇ ಗುರಿಯನ್ನಾಗಿರಿಸಿಕೊಂಡ ಯುದ್ಧದಲ್ಲಿ ಸಾವನ್ನು ಇಚ್ಛಿಸುತ್ತಾ ಆ ವೀರವರಕ್ಷಯದಲ್ಲಿ ಪಾಂಡವರ ಮೇಲೆ ಆಕ್ರಮಣ ಮಾಡಿದರು. ಶೂರ ಪಾಂಡವರೂ ಕೂಡ ಧೃತರಾಷ್ಟ್ರನ ಪುತ್ರರು ಹಿಂದೆ ಮಾಡಿಕೊಟ್ಟ ಬಹುವಿಧದ ಕ್ಲೇಶಗಳನ್ನು ಸ್ಮರಿಸಿಕೊಳ್ಳುತ್ತಾ, ಬ್ರಹ್ಮಲೋಕಪುರಸ್ಕೃತರಾಗಿ ರಣದಲ್ಲಿ ಭಯವನ್ನು ತೊರೆದು ಧೃತರಾಷ್ಟ್ರನ ಮಕ್ಕಳನ್ನೂ ಅವರ ಕಡೆಯವರನ್ನೂ ಎದುರಿಸಿ ಸಂತೋಷದಿಂದ ಹೋರಾಡಿದರು. ಮಹಾರಥಿ ಸೇನಾಪತಿಯು ಸೇನೆಗಳಿಗೆ “ಸೋಮಕರೂ ಸೃಜಯರೂ ಒಟ್ಟಿಗೇ ಗಾಂಗೇಯನನ್ನು ಆಕ್ರಮಿಸಿರಿ!” ಎಂದು ಆಜ್ಞೆಯಿತ್ತನು. ಸೇನಾಪತಿಯ ಮಾತನ್ನು ಕೇಳಿ ಸೃಂಜಯರೊಂದಿಗೆ ಸೋಮಕರು ಶಸ್ತ್ರವೃಷ್ಟಿಗಳಿಂದ ಎಲ್ಲ ಕಡೆಗಳಿಂದ ಮುತ್ತಿಗೆ ಹಾಕಿದರು. ಹೀಗೆ ಹೊಡೆಯಲ್ಪಡಲು ಶಾಂತನವನು ಕ್ರುದ್ಧನಾಗಿ ಸೃಂಜಯರೊಡನೆ ಯುದ್ಧಮಾಡಿದನು.

ಹಿಂದೆ ಧೀಮತ ರಾಮನಿಂದ ಆ ಕೀರ್ತಿವಂತನು ಪರಾನೀಕವಿನಾಶಿನೀ ಎಂಬ ಅಸ್ತ್ರದ ಶಿಕ್ಷೆಯನ್ನು ಪಡೆದಿದ್ದನು. ಅದೇ ಶಿಕ್ಷೆಯನ್ನು ಅವಲಂಬಿಸಿ ಪರವೀರಹ ವೃದ್ಧ ಕುರುಪಿತಾಮಹ ಭೀಷ್ಮನು ಪ್ರತಿದಿನವೂ ಪಾರ್ಥರ ಹತ್ತುಸಾವಿರರನ್ನು ಕೊಂದು ಪರವೀರರ ಬಲಕ್ಷಯವನ್ನುಂಟುಮಾಡುತ್ತಿದ್ದನು. ಪ್ರಾಪ್ತವಾದ ಆ ಹತ್ತನೆಯ ದಿವಸದಲ್ಲಿ ಭೀಷ್ಮನೊಬ್ಬನೇ ಮತ್ಸ್ಯ-ಪಾಂಚಾಲರೊಡನೆಯ ಅಸಂಖ್ಯ ಗಜಾಶ್ವಗಳನ್ನು ಕೊಂದು ಏಳು ಮಹಾರಥರನ್ನು ಸಂಹರಿಸಿದನು. ಶಿಕ್ಷಾಬಲದಿಂದ ಪ್ರಪಿತಾಮಹನು ಐದು ಸಾವಿರ ರಥಿಗಳನ್ನು ಸಂಹರಿಸಿ

ಮಹಾಯುದ್ಧದಲ್ಲಿ ಹದಿನಾಲ್ಕು ಸಾವಿರ ಪದಾತಿಗಳನ್ನೂ, ಸಾವಿರ ಆನೆಗಳನ್ನೂ, ಮತ್ತು ಹತ್ತುಸಾವಿರ ಅಶ್ವಸೈನಿಕರನ್ನೂ ಸಂಹರಿಸಿದನು. ಆಗ ಸರ್ವಮಹೀಪಾಲರ ವರೂಥಿನಿಯನ್ನು ಕ್ಷೋಭೆಗೊಳಿಸಿ ವಿರಾಟನ ಪ್ರೀತಿಯ ತಮ್ಮ ಶತಾನೀಕನನ್ನು ಉರುಳಿಸಿದನು. ಶತಾನೀಕನನ್ನು ಸಂಹರಿಸಿ ಪ್ರತಾಪವಾನ್ ಭೀಷ್ಮನು ಸಹಸ್ರಾರು ರಾಜರನ್ನು ಭಲ್ಲೆಗಳಿಂದ ಉರುಳಿಸಿದನು. ಯಾರು ಪಾರ್ಥ ಧನಂಜಯನನ್ನು ಸೇರಿ ಭೀಷ್ಮನನ್ನು ಎದುರಿಸುತ್ತಿದ್ದರೋ ಆ ಎಲ್ಲ ರಾಜರೂ ಯಮಸಾದನವನ್ನು ಸೇರಿದರು. ಹೀಗೆ ಹತ್ತೂ ದಿಕ್ಕುಗಳಿಂದಲೂ ಶರಜಾಲಗಳಿಂದ ಸುತ್ತುವರೆದು ಭೀಷ್ಮನು ಪಾರ್ಥರ ಸೇನೆಯನ್ನು ಸೋಲಿಸಿ ತನ್ನ ಸೇನಾಗ್ರದಲ್ಲಿ ನಿಂತಿದ್ದನು. ಆ ಹತ್ತನೆಯ ದಿನದಲ್ಲಿ ಮಹಾಕರ್ಮವನ್ನೆಸಗಿ ಅವನು ಧನುಸ್ಸನ್ನು ಹಿಡಿದು ಎರಡು ಸೇನೆಗಳ ಮಧ್ಯೆ ನಿಂತಿದ್ದನು. ಗ್ರೀಷ್ಮಋತುವಿನಲ್ಲಿ ನಡುನೆತ್ತಿಗೆ ಬಂದು ಸುಡುತ್ತಿರುವ ಭಾಸ್ಕರನನ್ನು ಆಕಾಶದಲ್ಲಿ ಹೇಗೆ ನೋಡಲಿಕ್ಕಾಗುವುದಿಲ್ಲವೋ ಹಾಗೆ ರಾಜರು ಅವನನ್ನು ನೋಡಲೂ ಶಕ್ಯರಾಗಲಿಲ್ಲ. ಸಂಯುಗದಲ್ಲಿ ಶಕ್ರನು ಹೇಗೆ ದೈತ್ಯಸೇನೆಯನ್ನು ತಡೆದು ನಿಲ್ಲಿಸಿದನೋ ಹಾಗೆ ಭೀಷ್ಮನು ಪಾಂಡವರ ಸೇನೆಯನ್ನು ತಡೆದು ನಿಲ್ಲಿಸಿದನು.

ಅವನ ಆ ಪರಾಕ್ರಾಂತವನ್ನು ನೋಡಿದ ದೇವಕೀಪುತ್ರ ಮಧುಸೂದನನು ಧನಂಜಯನನ್ನು ಪ್ರಸನ್ನಗೊಳಿಸುತ್ತಾ ಹೇಳಿದನು:

"ಸೇನೆಗಳ ಮಧ್ಯೆ ನಿಂತಿರುವ ಈ ಶಾಂತನವ ಭೀಷ್ಮನನ್ನು ಬಲವನ್ನುಪಯೋಗಿಸಿ ಸಂಹರಿಸಿದರೆ ನಿನಗೆ ವಿಜಯವಾಗುತ್ತದೆ. ಯಾವ ಸ್ಥಳದಲ್ಲಿ ಈ ನಮ್ಮ ಸೇನೆಯು ಭೀಷ್ಮನಿಂದ ಬೇರೆಯಾಗಿದೆಯೋ ಅದೇ ಸ್ಥಳದಲ್ಲಿ ನೀನು ಭೀಷ್ಮನನ್ನು ಹಿಂದೆ-ಮುಂದೆ ಹೋಗದಂತೆ ಬಲಪೂರ್ವಕವಾಗಿ ನಿರ್ಬಂಧಿಸು."

ತಕ್ಷಣವೇ ಪ್ರಚೋದಿತನಾದ ವಾನರಧ್ವಜನು ಧ್ವಜ, ರಥ ಮತ್ತು ಕುದುರೆಗಳೊಂದಿಗೆ ಭೀಷ್ಮನನ್ನು ಶರಗಳಿಂದ ಮುಚ್ಚಿಬಿಟ್ಟನು. ಆ ಕುರುಮುಖ್ಯರ ಋಷಭನೂ ಕೂಡ ಪಾಂಡವನು ಪ್ರಯೋಗಿಸಿದ ಬಾಣ ಸಮೂಹಗಳನ್ನು ಬಾಣಸಮೂಹಗಳನ್ನು ಪ್ರಯೋಗಿಸಿ ಕತ್ತರಿಸಿ ಚೂರು ಚೂರು ಮಾಡಿದನು. ಆಗ ಪಾಂಚಾಲರಾಜ, ವೀರ್ಯವಾನ್ ಧೃಷ್ಟಕೇತು, ಪಾಂಡವ ಭೀಮ, ಪಾರ್ಷತ ಧೃಷ್ಟದ್ಯುಮ್ನ, ಯಮಳರು, ಚೇಕಿತಾನ, ಐವರು ಕೇಕಯರು, ಸಾತ್ಯಕಿ, ಸೌಭದ್ರಿ, ಘಟೋತ್ಕಚ, ದ್ರೌಪದೇಯರು, ಶಿಖಂಡಿ, ವೀರ್ಯವಾನ್ ಕುಂತಿಭೋಜ, ಸುಶರ್ಮ, ವಿರಾಟ, ಮಹಾಬಲಿ ಪಾಂಡವೇಯ ಇವರು ಮತ್ತು ಇನ್ನೂ ಬಹಳಷ್ಟು ಇತರರು ಭೀಷ್ಮನ ಬಾಣಗಳಿಂದ ಪೀಡಿತರಾಗಿ ಶೋಕಸಾಗರದಲ್ಲಿ ಮುಳುಗಿರಲು ಫಲ್ಗುನನು ಅವರನ್ನು ಮೇಲೆತ್ತಿದನು. ಕಿರೀಟಿಯಿಂದ ರಕ್ಷಿತನಾದ ಶಿಖಂಡಿಯು ವೇಗದಿಂದ ಪರಮಾಯುಧವನ್ನು ಹಿಡಿದು ಭೀಷ್ಮನ ಮೇಲೆ ಪ್ರಯೋಗಿಸಿದನು. ಆಗ ರಣವಿಭಾಗಗಳನ್ನು ತಿಳಿದಿದ್ದ ಅಪರಾಜಿತ ಬೀಭತ್ಸುವು ಭೀಷ್ಮನ ಅನುಚರರೆಲ್ಲರನ್ನೂ ಸಂಹರಿಸಿ

ಭೀಷ್ಮನನ್ನೇ ಆಕ್ರಮಣಿಸಿದನು. ದೃಢಧನ್ವಿಯಿಂದ ರಕ್ಷಿತರಾಗಿ ಸಾತ್ಯಕಿ, ಚೇಕಿತಾನ, ಪಾರ್ಷತ ಧೃಷ್ಟದ್ಯುಮ್ನ, ವಿರಾಟ, ದ್ರುಪದ, ಮತ್ತು ಮಾದ್ರೀಪುತ್ರ ಪಾಂಡವರಿಬ್ಬರೂ ಭೀಷ್ಮನ ಮೇಲೆಯೇ ಆಕ್ರಮಣ ಮಾಡಿದರು. ಅಭಿಮನ್ಯುವಾದರೋ ದ್ರೌಪದಿಯ ಐವರು ಮಕ್ಕಳೊಂದಿಗೆ ಮಹಾಯುಧಗಳನ್ನು ಹಿಡಿದು ಭೀಷ್ಮನನ್ನು ಆಕ್ರಮಣಿಸಿದರು. ಆ ಎಲ್ಲ ದೃಢಧನ್ವಿಗಳೂ ಪಲಾಯನ ಮಾಡದೇ ಬಹಳ ಕೃತಮಾರ್ಗಣ ಬಾಣಗಳಿಂದ ಭೀಷ್ಮನನ್ನು ಚುಚ್ಚಿದರು. ಆದರೆ ಪಿತಾಮನನು ಆಟವಾಡುತ್ತಿರುವನೋ ಎನ್ನುವಂತೆ ತನ್ನನ್ನು ಎದುರಿಸಿ ಬರುತ್ತಿದ್ದ ಪಾರ್ಥಿವೋತ್ತಮರು ಬಿಟ್ಟ ಆ ಬಾಣಗಣಗಳನ್ನು ತಡೆದು ಶರವಿಘಾತ ಮಾಡಿದನು ಮತ್ತು ಪಾಂಡವರ ಸೇನೆಯನ್ನು ದುಃಖಕ್ಕೀಡುಮಾಡಿದನು.

ಆದರೆ ಅವನ ಸ್ತ್ರೀತ್ವವನ್ನು ಸ್ಮರಿಸಿ, ಪುನಃ ಪುನಃ ಮುಗುಳ್ನಗುತ್ತಾ ಭೀಷ್ಮನು ಪಾಂಚಾಲ್ಯ ಶಿಖಂಡಿಯ ಮೇಲೆ ಬಾಣಪ್ರಯೋಗ ಮಾಡಲಿಲ್ಲ, ಮತ್ತು ಆ ಮಹಾರಥನು ದ್ರುಪದನ ಸೇನೆಯ ಏಳು ರಥರನ್ನು ಸಂಹರಿಸಿದನು. ಆಗ ತಕ್ಷಣವೇ ಒಂಟಿಯಾದ ಭೀಷ್ಮನೊಡನೆ ಹೋರಾಡುತ್ತಿದ್ದ ಮತ್ಸ್ಯ-ಪಾಂಚಾಲ-ಚೇದಿಗಳ ಸೇನೆಯಲ್ಲಿ ಕಿಲಕಿಲ ಶಬ್ಧವುಂಟಾಯಿತು. ಅವರ ಶ್ರೇಷ್ಠ ಅಶ್ವ-ರಥ-ವ್ರಾತ-ವಾರಣಗಳಿಂದ ಮತ್ತು ಪದಾತಿಗಳಿಂದ ರಣದಲ್ಲಿ ರಿಪುಗಳನ್ನು ಸುಡುತ್ತಿದ್ದ ಭಾಗೀರಥೀಪುತ್ರ ಭೀಷ್ಮನೊಬ್ಬನನ್ನೇ ದಿವಾಕರನನ್ನು ಮೇಘಗಳಂತೆ ಮುತ್ತಿಗೆ ಹಾಕಿದರು. ಆಗ ದೇವಾಸುರರ ನಡುವಿನಂತಿದ್ದ ಅವರ ಆ

ಯುದ್ಧದಲ್ಲಿ ಶಿಖಂಡಿಯನ್ನು ಮುಂದಿರಿಸಿಕೊಂಡು ಕಿರೀಟಿಯು ಭೀಷ್ಮನನ್ನು ಗಾಯಗೊಳಿಸಿದನು.

## ಅರ್ಜುನನು ಭೀಷ್ಮನನ್ನು ಹೊಡೆದು ಶರಶಯ್ಯೆಯ ಮೇಲೆ ಮಲಗಿಸಿದುದು




ಹೀಗೆ ಆ ಪಾಂಡವರೆಲ್ಲರೂ ಸಮರದಲ್ಲಿ ಶಿಖಂಡಿಯನ್ನು ಮುಂದಿರಿಸಿಕೊಂಡು ಭೀಷ್ಮನನ್ನು ಎಲ್ಲ ಕಡೆಗಳಿಂದಲೂ ಸುತ್ತುವರೆದು ಹೊಡೆಯತೊಡಗಿದರು. ಶತಘ್ನಿ, ಸುಘೋರ, ಪಟ್ಟಿಶ, ಪರಶು, ಮುದ್ಗರ, ಮುಸಲ, ಪ್ರಾಸ, ಕ್ಷಿಪಣಿಗಳಿಂದ, ಕನಕಪುಂಖಗಳ ಶರಗಳಿಂದ, ಕಂಪಿಸುತ್ತಿರುವ ಶಕ್ತಿ ತೋಮರಗಳಿಂದ, ನಾರಾಚ,

ವತ್ಸದಂತ ಮತ್ತು ಭುಶುಂಡಿಗಳಿಂದ ಎಲ್ಲ ಕಡೆಗಳಿಂದ ಎಲ್ಲ ಸೃಂಜಯರೂ ಸೇರಿಕೊಂಡು ಭೀಷ್ಮನನ್ನು ಹೊಡೆದರು. ಅವು ದೇಹವನ್ನು ಹೊಕ್ಕು ಬಹುವಾಗಿ ತ್ರಾಣಪೀಡಿತನಾದರೂ ಮರ್ಮಗಳನ್ನು ಭೇದಿಸಿದರೂ ಗಾಂಗೇಯನು ವ್ಯಥೆಪಡಲಿಲ್ಲ. ಆದರೆ ಭೀಷ್ಮನು ಶತ್ರುಗಳಿಗೆ ಯುಗಾಂತದ ಅಗ್ನಿಯ ಸಮನಾಗಿ ತೋರಿದನು. ಉರಿಯುತ್ತಿರುವ ಅವನ ಶರಚಾಪಗಳೇ ಶಿಖೆಗಳಾಗಿದ್ದವು, ಬಾಣ ಪ್ರಯೋಗದ ವೇಗವೇ ಅಗ್ನಿಯ ಸಖ ಮಾರುತದಂತಿತ್ತು. ಅವನ ರಥ ಚಕ್ರಗಳ ಸಂನಾದವು ಅಗ್ನಿಯಿಂದ ಹೊರಡುವ ಚಟ ಚಟ ಶಬ್ಧವಾಗಿತ್ತು. ಮಹಾ ಅಸ್ತ್ರಗಳಿಂದಲೇ ಅಗ್ನಿಯು ಉದಯಿಸುವಂತಿದ್ದವು. ಬಣ್ಣದ ಚಾಪವೇ ಮಹಾಜ್ವಾಲೆಯಾಗಿತ್ತು. ವೀರರ ಕ್ಷಯವೆಂಬುದೇ ಇಂಧನವಾಗಿತ್ತು. ಆ ರಥಸಮೂಹಗಳ ನಡುವಿನಿಂದ ನುಸುಳಿ ಹೊರಬಂದು ಅವನು ಪುನಃ ನರೇಂದ್ರರ ಮಧ್ಯದಲ್ಲಿ ಚಲಿಸುವುದು ಕಾಣುತ್ತಿತ್ತು. ಅವನು ವೇಗವಾಗಿ ಪಾಂಚಾಲರಾಜನನ್ನೂ ಧೃಷ್ಟಕೇತುವನ್ನೂ ಲಕ್ಷಿಸದೇ ಪಾಂಡವರ ಸೇನೆಯ ಮಧ್ಯಕ್ಕೆ ಬಂದು ಧಾಳಿಯಿಟ್ಟನು. ಮಹಾವೇಗದಿಂದ ಮತ್ತು ಭೀಮಘೋಷದಿಂದ ಅವನು ವೈರಿಗಳ ಕವಚಗಳನ್ನೂ ಭೇದಿಸಬಲ್ಲ ಆರು ಭಾಸ್ಕರ ಪ್ರತಿಮ ಶರಗಳಿಂದ ಈ ಆರರನ್ನು – ಸಾತ್ಯಕಿ, ಭೀಮ, ಪಾಂಡವ ಧನಂಜಯ, ದ್ರುಪದ, ವಿರಾಟ ಮತ್ತು ಪಾರ್ಷತ ಧೃಷ್ಟದ್ಯುಮ್ನರನ್ನು ಹೊಡೆದನು. ಅವನ ಆ ನಿಶಿತ ಬಾಣಗಳಿಂದ ತಪ್ಪಿಸಿಕೊಂಡು ಮಹಾರಥರು ಹತ್ತು ಹತ್ತು ಬಾಣಗಳಿಂದ ಭೀಷ್ಮನನ್ನು

ಹೊಡೆದರು. ಮಹಾವ್ರತ ಶಿಖಂಡಿಯು ಪ್ರಯೋಗಿಸಿದ ಸ್ವರ್ಣಪುಂಖಗಳ ಶಿಲಾಶಿತ ಬಾಣಗಳು ಭೀಷ್ಮನ ದೇಹವನ್ನು ಪ್ರವೇಶಿಸಿದವು.

ಆಗ ಕಿರೀಟಿಯು ಸಂರಬ್ಧನಾಗಿ ಶಿಖಂಡಿಯನ್ನು ಮುಂದಿರಿಸಿಕೊಂಡು ಭೀಷ್ಮನನ್ನು ಎದುರಿಸಿ ಅವನ ಧನುಸ್ಸನ್ನು ಕತ್ತರಿಸಿದನು. ಭೀಷ್ಮನ ಧನುಶ್ಚೇದನವನ್ನು ಸಹಿಸಲಾರದೇ ಮಹಾರಥರಾದ ದ್ರೋಣ, ಕೃತವರ್ಮ, ಸೈಂಧವ ಜಯದ್ರಥ, ಭೂರಿಶ್ರವ, ಶಲ, ಶಲ್ಯ ಮತ್ತು ಭಗದತ್ತ ಈ ಏಳು ಮಂದಿ ಪರಮ ಕೃದ್ಧರಾಗಿ ಕಿರೀಟಿಯ ಮೇಲೆ ಆಕ್ರಮಣ ಮಾಡಿದರು. ಆ ಮಹಾರಥರು ಉತ್ತಮ ದಿವ್ಯ ಅಸ್ತ್ರಗಳನ್ನು ಪ್ರದರ್ಶಿಸುತ್ತಾ ಕ್ರುದ್ಧರಾಗಿ ಅವನ ಮೇಲೆ ಎರಗಿ ಪಾಂಡವನನ್ನು ಮುಸುಕು ಹಾಕಿದರು. ಅವರು ಫಲ್ಗುನನ ಮೇಲೆರಗಿದುದರ ಶಬ್ಧವು ಯುಗಕ್ಷಯದಲ್ಲಿ ಮೇಲುಕ್ಕಿ ಬರುತ್ತಿದ್ದ ಸಮುದ್ರದ ಶಬ್ಧದಂತಿತ್ತು. ಫಲ್ಗುನನ ರಥದ ಬಳಿ “ಸಂಹರಿಸಿ! ಸೆರೆಹಿಡಿಯಿರಿ! ಹೊಡೆಯಿರಿ! ಕತ್ತರಿಸಿ!” ಎಂಬ ಕೂಗಿನ ತುಮುಲ ಶಬ್ಧವು ಕೇಳಿಬಂದಿತು. ಆ ತುಮುಲ ಶಬ್ಧವನ್ನು ಕೇಳಿ ಪಾಂಡವರ ಮಹಾರಥಿಗಳು ಫಲ್ಗುನನನ್ನು ರಕ್ಷಿಸಲು ಧಾವಿಸಿಬಂದರು. ಚಿತ್ರಕಾರ್ಮುಕಗಳನ್ನು ಹಿಡಿದಿದ್ದ ಸಾತ್ಯಕಿ, ಭೀಮಸೇನ, ಧೃಷ್ಟದ್ಯುಮ್ನ, ವಿರಾಟ-ದ್ರುಪದರಿಬ್ಬರೂ, ರಾಕ್ಷಸ ಘಟೋತ್ಕಚ, ಸಂಕ್ರುದ್ಧ ಅಭಿಮನ್ಯು ಈ ಏಳು ಮಂದಿ ಕ್ರೋಧಮೂರ್ಛಿತರು ತ್ವರೆಮಾಡಿ ಅಲ್ಲಿಗೆ ಧಾವಿಸಿದರು. ಸಂಗ್ರಾಮದಲ್ಲಿ ದೇವತೆಗಳು ಮತ್ತು ದಾನವರ ಹಾಗೆ ಅವರ ಮಧ್ಯೆ ಲೋಮಹರ್ಷಣ

ತುಮುಲ ಯುದ್ಧವು ನಡೆಯಿತು. ರಥಶ್ರೇಷ್ಠ ಶಿಖಂಡಿಯಾದರೋ ಕಿರೀಟಿಯಿಂದ ರಕ್ಷಿಸಲ್ಪಟ್ಟು ಧನುಸ್ಸನ್ನು ಕತ್ತರಿಸಲ್ಪಟ್ಟಿದ್ದ ಭೀಷ್ಮನನ್ನು ಹತ್ತು ಬಾಣಗಳಿಂದಲೂ, ಸಾರಥಿಯನ್ನು ಹತ್ತು ಬಾಣಗಳಿಂದಲೂ ಹೊಡೆದು ಒಂದರಿಂದ ಧ್ವಜವನ್ನು ತುಂಡರಿಸಿದನು. ಆಗ ಗಾಂಗೇಯನು ಇನ್ನೊಂದು ವೇಗವತ್ತರ ಧನುಸ್ಸನ್ನು ತೆಗೆದುಕೊಂಡು ಶಿಂಜಿನಿಯನ್ನು ಬಿಗಿದು ಸಿದ್ಧಮಾಡುವುದರಲ್ಲಿ ಫಲ್ಗುನನು ಅದನ್ನೂ ಕೂಡ ಮೂರು ನಿಶಿತ ಬಾಣಗಳಿಂದ ಕತ್ತರಿಸಿಬಿಟ್ಟನು. ಹೀಗೆ ಕ್ರುದ್ಧ ಪಾಂಡವ ಪರಂತಪ ಸವ್ಯಸಾಚಿಯು ಗಾಂಗೇಯನು ಹೊಸ ಹೊಸ ಧನುಸ್ಸನ್ನು ತೆಗೆದುಕೊಳ್ಳುತ್ತಿದ್ದಂತೆಯೇ ಪುನಃ ಪುನಃ ಅವುಗಳನ್ನು ಕತ್ತರಿಸಿ ಹಾಕಿದನು. ಧನುಸ್ಸನ್ನು ತುಂಡರಿಸಿಕೊಂಡು ಸಂಕ್ರುದ್ಧನಾದ ಅವನು ನಾಲಿಗೆಯಿಂದ ತನ್ನ ಕಟಬಾಯಿಯನ್ನು ನೆಕ್ಕುತ್ತಾ, ಪರ್ವತವನ್ನೂ ಸೀಳಬಲ್ಲ ಶಕ್ತಿಯನ್ನು ಹಿಡಿದು ಸಂಕ್ರುದ್ಧನಾಗಿ ಅದನ್ನು ಅರ್ಜುನನ ರಥದ ಮೇಲೆ ಎಸೆದನು.

ವಜ್ರಾಯುಧದಂತೆ ಪ್ರಜ್ವಲಿಸುತ್ತಿರುವ ಅದು ತನ್ನ ಮೇಲೆ ಬೀಳಲಿರುವುದನ್ನು ನೋಡಿ ಸಂಕ್ರುದ್ಧ ಪಾಂಡವನಂದನನು ಐದು ನಿಶಿತ ಭಲ್ಲೆಗಳನ್ನು ತೆಗೆದುಕೊಂಡು ಭೀಷ್ಮನ ಬಾಹುಗಳಿಂದ ಪ್ರಯೋಗಿಸಲ್ಪಟ್ಟ ಆ ಶಕ್ತಿಯನ್ನು ಐದು ಬಾಣಗಳಿಂದ ಐದು ಭಾಗಗಳಾಗಿ ತುಂಡರಿಸಿದನು. ಸಂಕ್ರುದ್ಧ ಕಿರೀಟಿಯಿಂದ ತುಂಡರಿಸಲ್ಪಟ್ಟ ಅದು ಮೇಘಮಂಡಲದಿಂದ ತುಂಡಾಗಿ ಕೆಳಗೆ ಬೀಳುವ ಮಿಂಚಿನಂತೆ ಬಿದ್ದಿತು. ಆ ಶಕ್ತಿಯು ತುಂಡಾಗಿದ್ದುದನ್ನು

ನೋಡಿ ಕ್ರೋಧಸಮನ್ವಿತ ವೀರ ಪರಪುರಂಜಯ ಭೀಷ್ಮನು ಬುದ್ಧಿಯಿಂದ ಚಿಂತಿಸತೊಡಗಿದನು:

> "ಒಂದುವೇಳೆ ಇವರ ರಕ್ಷಕನು ಮಹಾಬಲ ವಿಷ್ವಕ್ಸೇನನಾಗಿರದಿದ್ದರೆ ಈ ಪಾಂಡವರೆಲ್ಲರನ್ನೂ ಒಂದೇ ಒಂದು ಧನುಸ್ಸಿನಿಂದ ಸಂಹರಿಸಲು ನಾನು ಶಕ್ತನಿದ್ದೆ. ಈ ಎರಡು ಕಾರಣಗಳನ್ನಿಟ್ಟುಕೊಂಡು ನಾನು ಪಾಂಡವರೊಂದಿಗೆ ಹೋರಾಡುವುದಿಲ್ಲ – ಪಾಂಡವರು ಅವಧ್ಯರೆನ್ನುವುದು ಮತ್ತು ಶಿಖಂಡಿಯ ಸ್ತ್ರೀ ಭಾವತ್ವ. ಹಿಂದೆ ಕಾಲೀ ಸತ್ಯವತಿಯನ್ನು ತಂದಿತ್ತಾಗ ಸಂತೋಷಗೊಂಡ ತಂದೆಯು ನನಗೆ ಸ್ವಚ್ಛಂದ ಮರಣ ಮತ್ತು ರಣದಲ್ಲಿ ಅವಧ್ಯತ್ವವನ್ನು ಪಾಲಿಸಿದ್ದನು. ಆ ಮೃತ್ಯುವಿನ ಕಾಲವು ನನಗೆ ಬಂದೊದಗಿದೆ ಎಂದು ತಿಳಿದುಕೊಳ್ಳುತ್ತೇನೆ."

ಅಮಿತತೇಜಸ ಭೀಷ್ಮನ ಈ ಅಭಿಪ್ರಾಯವನ್ನು ತಿಳಿದ ಆಕಾಶದಲ್ಲಿದ್ದ ಋಷಿಗಳೂ ವಸುಗಳೂ ಭೀಷ್ಮನಿಗೆ ಹೇಳಿದರು:

> "ವೀರ! ನೀನು ಏನನ್ನು ನಿರ್ಧರಿಸಿದ್ದೀಯೋ ಅದು ನಮಗೂ ಬಹಳ ಪ್ರಿಯವಾಗಿದೆ. ಹಾಗೆಯೇ ಮಾಡು. ಯುದ್ಧದಿಂದ ಬುದ್ಧಿಯನ್ನು ಹಿಂತೆಗೆದುಕೋ!"

ಅವರ ಮಾತುಗಳು ಮುಗಿಯುತ್ತಿದ್ದಂತೆಯೇ ಮಂಗಳಕರವಾದ, ಅನುಕೂಲವಾದ, ಸುಗಂಧಯುಕ್ತವಾದ ಗಾಳಿಯು ತುಂತುರು

ಹನಿಗಳೊಡನೆ ಬೀಸಿತು. ದೇವದುಂದುಭಿಗಳೂ ಗಟ್ಟಿಯಾಗಿ ಮೊಳಗಿದವು. ಭೀಷ್ಮನ ಮೇಲೆ ಪುಷ್ಪವೃಷ್ಟಿಯೂ ಸುರಿಯಿತು. ಅವರ ಸಂವಾದವನ್ನು ಅಲ್ಲಿರುವ ಬೇರೆ ಯಾರೂ ಕೇಳಿಸಿಕೊಳ್ಳಲಿಲ್ಲ. ಮಹಾಬಾಹು ಭೀಷ್ಮನನ್ನು ಬಿಟ್ಟು ಮುನಿಯ ತೇಜಸ್ಸಿನಿಂದ ಸಂಜಯನು ಮಾತ್ರ ಅದನ್ನು ಕೇಳಿಸಿಕೊಂಡನು. ಸರ್ವಲೋಕಪ್ರಿಯನಾದ ಭೀಷ್ಮನು ರಥದಿಂದ ಬೀಳುವವನಿದ್ದಾನೆ ಎಂದು ತ್ರಿದಶರಿಗೂ ಮಹಾ ಸಂಭ್ರಮವಾಯಿತು. ಮಹಾಮನಸ್ಕರಾದ ದೇವಗಣಗಳ ಈ ಮಾತನ್ನು ಕೇಳಿ ಶಾಂತನವ ಭೀಷ್ಮನು ಸರ್ವಾವರಣಗಳನ್ನೂ ಭೇದಿಸುವ ಹರಿತ ಬಾಣಗಳಿಂದ ಚುಚ್ಚಲ್ಪಟ್ಟರೂ ಬೀಭತ್ಸುವನ್ನು ತಡೆಯಲಿಲ್ಲ. ಆಗ ಶಿಖಂಡಿಯು ಕ್ರುದ್ಧನಾಗಿ ಭರತರ ಪಿತಾಮಹನ ವಕ್ಷಸ್ಥಲಕ್ಕೆ ಒಂಭತ್ತು ನಿಶಿತ ಬಾಣಗಳಿಂದ ಹೊಡೆದನು. ಭೂಕಂಪವಾದರೂ ಚಲಿಸದ ಪರ್ವತದಂತೆ ಕುರು ಪಿತಾಮಹ ಭೀಷ್ಮನು ಯುದ್ಧದಲ್ಲಿ ಅವನಿಂದ ಹೊಡೆಯಲ್ಪಟ್ಟರೂ ವಿಚಲಿತನಾಗಲಿಲ್ಲ.

ಆಗ ನಸುನಕ್ಕು ಬೀಭತ್ಸುವು ತನ್ನ ಗಾಂಡೀವ ಧನುಸ್ಸನ್ನು ಠೇಂಕರಿಸಿ ಗಾಂಗೇಯನನ್ನು ಇಪ್ಪತ್ತೈದು ಕ್ಷುದ್ರಕಗಳಿಂದ ಪ್ರಹರಿಸಿದನು. ಪುನಃ ಸಂಕ್ರುದ್ಧನಾದ ಧನಂಜಯನು ತ್ವರೆಮಾಡಿ ನೂರು ಬಾಣಗಳನ್ನು ಪ್ರಯೋಗಿಸಿ ಅವನ ಶರೀರದ ಎಲ್ಲ ಭಾಗಗಳನ್ನೂ ಮರ್ಮಸ್ಥಾನಗಳನ್ನೂ ಗಾಯಗೊಳಿಸಿದನು. ಈ ರೀತಿ ಮಹಾರಣದಲ್ಲಿದ್ದ ಅನ್ಯರೂ ಚೆನ್ನಾಗಿ ಅವನನ್ನು ಹೊಡೆಯುತ್ತಿರಲು

ಅವೆಲ್ಲವನ್ನು ಅವನು ರುಕ್ಮಪುಂಖ ಶಿಲಾಶಿತ ಬಾಣಗಳಿಂದ ನಿರಸನಗೊಳಿಸಿದನು. ಆಗ ಸಂರಬ್ಧನಾದ ಕಿರೀಟಿಯು ಶಿಖಂಡಿಯನ್ನು ಮುಂದಿಟ್ಟುಕೊಂಡು ಭೀಷ್ಮನ ಮೇಲೆ ಧಾಳಿಯಿಟ್ಟು ಅವನ ಧನುಸ್ಸನ್ನು ತುಂಡರಿಸಿದನು. ಆಗ ಅವನು ಅವನನ್ನು ಹತ್ತು ಬಾಣಗಳಿಂದ ಹೊಡೆದು, ಒಂದರಿಂದ ಧ್ವಜವನ್ನು ಕತ್ತರಿಸಿ, ಹತ್ತು ಬಾಣಗಳಿಂದ ಸಾರಥಿಯನ್ನು ತತ್ತರಿಸಿದನು. ಅನಂತರ ಗಾಂಗೇಯನು ಬಲವತ್ತರವಾದ ಇನ್ನೊಂದು ಧನುಸ್ಸನ್ನು ತೆಗೆದುಕೊಳ್ಳಲು ಅದನ್ನೂ ಸಹ ನಿಶಿತವಾದ ಮೂರು ಭಲ್ಲೆಗಳಿಂದ ಮೂರು ಭಾಗಗಳನ್ನಾಗಿ ತುಂಡರಿಸಿದನು. ಆ ಮಹಾರಣದಲ್ಲಿ ಬಿಲ್ಲುಗಳನ್ನು ತೆಗೆದುಕೊಂಡ ಹಾಗೆ ನಿಮಿಷಮಾತ್ರದಲ್ಲಿ ಅದನ್ನು ತುಂಡರಿಸುತ್ತಿದ್ದನು. ಹೀಗೆ ಬಹಳಷ್ಟು ಧನುಸ್ಸುಗಳನ್ನೂ ಅವನು ತುಂಡರಿಸಿದನು. ಆಗ ಶಾಂತನವ ಭೀಷ್ಮನು ಬೀಭತ್ಸುವನ್ನು ವಿರೋಧಿಸಲಿಲ್ಲ. ಆಗಲೂ ಕೂಡ ಅವನನ್ನು ಇಪ್ಪತ್ತೈದು ಕ್ಷುದ್ರಕಗಳಿಂದ ಹೊಡೆಯಲಾಯಿತು. ಆಗ ಅತಿಯಾಗಿ ಗಾಯಗೊಂಡ ಆ ಮಹೇಷ್ವಾಸನು ದುಃಶಾಸನನಿಗೆ ಹೇಳಿದನು:

> "ಈ ಪಾಂಡವರ ಮಹಾರಥಿ ಪಾರ್ಥನು ಕ್ರುದ್ಧನಾಗಿ ರಣದಲ್ಲಿ ಅನೇಕ ಸಹಸ್ರ ಬಾಣಗಳಿಂದ ನನ್ನನ್ನೇ ಹೊಡೆಯುತ್ತಿದ್ದಾನೆ. ಸಮರದಲ್ಲಿ ಇವನನ್ನು ಗೆಲ್ಲಲು ವಜ್ರಭೃತನಿಗೂ ಶಕ್ಯವಿಲ್ಲ. ನನ್ನನ್ನು ಕೂಡ ವೀರ ದೇವ-ದಾನವ-ರಾಕ್ಷಸರು ಕೂಡಿದರೂ ಜಯಿಸಲು ಶಕ್ತರಿಲ್ಲ. ಇನ್ನು ದುರ್ಬಲರಾದ ಮನುಷ್ಯರು ಯಾವ ಲೆಕ್ಕಕ್ಕೆ?"

ಹೀಗೆ ಅವರು ಮಾತನಾಡಿಕೊಳ್ಳುತ್ತಿರುವಾಗಲೇ ಫಲ್ಗುನನು ಶಿಖಂಡಿಯನ್ನು ಮುಂದೆ ನಿಲ್ಲಿಸಿಕೊಂಡು ಭೀಷ್ಮನನ್ನು ನಿಶಿತ ಶರಗಳಿಂದ ಹೊಡೆದನು. ಆಗ ಅವನು ಪುನಃ ನಸುನಗುತ್ತಾ ದುಃಶಾಸನನಿಗೆ ಹೇಳಿದನು:

> "ಗಾಂಡೀವಧನ್ವಿಯ ನಿಶಿತ ಬಾಣಗಳಿಂದ ತುಂಬಾ ವೇದನೆಯಾಗುತ್ತಿದೆ. ವಜ್ರದ ಮೊನೆಯಂತೆ ತಾಗುತ್ತಿರುವ ಈ ಮೊನಚಾದ ಬಾಣಗಳು ದೇಹವನ್ನು ಪ್ರವೇಶಿಸುತ್ತಿವೆ. ಅವಿಚ್ಛಿನ್ನವಾಗಿ ಬಿಡಲ್ಪಡುವ ಈ ಬಾಣಗಳು ಶಿಖಂಡಿಯವಲ್ಲ! ಸುದೃಢವಾದ ಕವಚಗಳನ್ನು ಭೇದಿಸಿ ಇವು ದೇಹವನ್ನು ಹೊಗುತ್ತಿವೆ. ಮುಸಲದಂತೆ ನನ್ನನ್ನು ಗಾಯಗೊಳಿಸುತ್ತಿರುವ ಈ ಬಾಣಗಳು ಶಿಖಂಡಿಯವಲ್ಲ! ಬ್ರಹ್ಮದಂಡದ ಸಮನಾಗಿ ತಾಗುವ, ವಜ್ರವೇಗದ, ದುರಾಸದ ಬಾಣಗಳು ನನ್ನ ಪ್ರಾಣಗಳನ್ನು ಕಾಡುತ್ತಿವೆ. ಇವು ಶಿಖಂಡಿಯವಲ್ಲ! ನಾಲಿಗೆಗಳನ್ನು ಹೊರಚಾಚಿದ ಸಂಕ್ರುದ್ಧ ಪ್ರಚಂಡವಿಷಸರ್ಪಗಳಂತೆ ನನ್ನ ಮರ್ಮಗಳನ್ನು ಪ್ರವೇಶಿಸುತ್ತಿವೆ. ಈ ಬಾಣಗಳು ಶಿಖಂಡಿಯವಲ್ಲ! ಇಲ್ಲಿಗೇ ಬಂದಿರುವ ಯಮದೂದರಂತೆ ನನ್ನ ಪ್ರಾಣಗಳನ್ನು ನಾಶಪಡಿಸುತ್ತಿವೆ. ಗದೆ-ಪರಿಘದಂತೆ ತಾಗುತ್ತಿರುವ ಈ ಬಾಣಗಳು ಶಿಖಂಡಿಯವಲ್ಲ! ಮಾಘಮಾಸದಲ್ಲಿ ಏಡಿಗಳಂತೆ ನನ್ನ ಅಂಗಾಂಗಗಳನ್ನು ಒಡೆಯುತ್ತಿವೆ. ಈ ಬಾಣಗಳು

> ಅರ್ಜುನನವು. ಈ ಬಾಣಗಳು ಶಿಖಂಡಿಯವಲ್ಲ! ವೀರ ಗಾಂಡೀವಧನ್ವಿ ಕಪಿಧ್ವಜ ಜಿಷ್ಣುವನ್ನು ಬಿಟ್ಟು ಈ ಸರ್ವರಲ್ಲಿ ಬೇರೆ ಯಾವ ನರಾಧಿಪನೂ ನನಗೆ ದುಃಖವನ್ನುಂಟುಮಾಡಲಾರನು."

ಹೀಗೆ ಹೇಳುತ್ತಿರುವ ಶಾಂತನವನು ಪಾಂಡವನನ್ನು ಸುಟ್ಟುಬಿಡುತ್ತಾನೋ ಎನ್ನುವಂತೆ ಪರಮಕ್ರುದ್ಧನಾಗಿ ಉರಿಯುತ್ತಿರುವ ಮೊನೆಯುಳ್ಳ ಶಕ್ತಿಯನ್ನು ಬಿಸುಟನು. ಕುರುವೀರರೆಲ್ಲರೂ ನೋಡುತ್ತಿದ್ದಂತೆಯೇ ಅರ್ಜುನನು ಅದನ್ನು ಅಲ್ಲಿ ಮೂರು ವಿಶಿಖೆಗಳಿಂದ ಮೂರು ಭಾಗಗಳನ್ನಾಗಿ ತುಂಡರಿಸಿ ಕೆಳಗೆ ಬೀಳಿಸಿದನು. ಆಗ ಗಾಂಗೇಯನು ಕಡೆಯದಾಗಿ ಮೃತ್ಯುವಾಗಲಿ ಅಥವಾ ಜಯವಾಗಲೆಂದು ಸುವರ್ಣಭೂಷಿತವಾದ ಖಡ್ಗವನ್ನು ಮತ್ತು ಗುರಾಣಿಯನ್ನು ಕೈಗೆ ತೆಗೆದುಕೊಂಡನು. ರಥದಿಂದ ಕೆಳಗಿಳಿದು ಬರುತ್ತಿದ್ದ ಅವನ ಗುರಾಣಿಯನ್ನು ಅರ್ಜುನನು ನೂರಾರು ಚೂರುಗಳನ್ನಾಗಿ ಮಾಡಿ ಹಾಕಿದನು. ಅದು ಒಂದು ಅದ್ಭುತವಾಗಿತ್ತು. ಆಗ ಯುಧಿಷ್ಠಿರನು ಸಿಂಹದಂತೆ ಗರ್ಜಿಸಿ ತನ್ನ ಸೇನೆಗಳನ್ನು ಪ್ರಚೋದಿಸಿದನು:

> "ಗಾಂಗೇಯನ ಬಳಿ ಧಾವಿಸಿ! ನೀವು ಅವನಿಗಾಗಿ ಸ್ವಲ್ಪವೂ ಭಯಪಡಕೂಡದು!"

ಆಗ ಅವರು ತೋಮರ, ಪ್ರಾಸ, ಬಾಣ, ಪಟ್ಟಿಶ, ಖಡ್ಗ, ನಿಶಿತ

ನಾರಾಚ, ವತ್ಸದಂತ, ಭಲ್ಲ – ಇವೇ ಮೊದಲಾದ ಶಸ್ತ್ರಗಳನ್ನು ಹಿಡಿದು ಭೀಷ್ಮನೊಬ್ಬನನ್ನೇ ಆಕ್ರಮಣಿಸಿದರು. ಪಾಂಡವರ ಸೇನೆಯಲ್ಲಿ ಘೋರ ಸಿಂಹನಾದವು ಕೇಳಿಬಂದಿತು. ಭೀಷ್ಮನ ಜಯವನ್ನು ಬಯಸಿದ್ದ ಧೃತರಾಷ್ಟ್ರನ ಪುತ್ರರೂ ಕೂಡ ಅವನೊಬ್ಬನನ್ನೇ ಸುತ್ತುವರೆದು ಸಿಂಹನಾದಗೈದರು.

ಆಗ ಹತ್ತನೇ ದಿನದ ಯುದ್ಧದಲ್ಲಿ, ಭೀಷ್ಮಾರ್ಜುನರ ಸಮಾಗಮದಲ್ಲಿ, ಶತ್ರುಗಳೊಂದಿಗೆ ಕೌರವರ ತುಮುಲ ಯುದ್ಧವು ನಡೆಯಿತು. ಗಂಗೆಯು ಸಮುದ್ರವನ್ನು ಸೇರುವ ಸಮಯದಲ್ಲಿ ಮುಹೂರ್ತಕಾಲ ಸುಳಿಯುಂಟಾಗುವಂತೆ ನಡೆಯಿತು. ಯುದ್ಧಮಾಡುತ್ತಿರುವ ಸೈನಿಕರು ಪರಸ್ಪರರನ್ನು ಸಂಹರಿಸಿದರು. ರಕ್ತದಿಂದ ತೋಯ್ದು ಹೋಗಿದ್ದ ಭೂಮಿಯು ಭಯಂಕರವಾಗಿ ತೋರಿತು. ಸಮಪ್ರದೇಶ, ತಗ್ಗು ಪ್ರದೇಶಗಳು ಯಾವುದೆಂದು ತಿಳಿಯಲಾರದೇ ಹೋದವು. ಆ ಹತ್ತನೆಯ ದಿವಸ ಮರ್ಮಗಳನ್ನು ಭೇದಿಸಿದ ನೋವುಗಳುಳ್ಳವನಾಗಿದ್ದರೂ ಭೀಷ್ಮನು ಹತ್ತು ಸಾವಿರ ಯೋಧರನ್ನು ಕೊಂದು ರಣದಲ್ಲಿ ನಿಂತಿದ್ದನು. ಆಗ ಸೇನೆಯ ಮುಖದಲ್ಲಿ ನಿಂತಿದ್ದ ಪಾರ್ಥ ಧನಂಜಯನು ಕುರುಸೈನ್ಯವನ್ನು ಮಧ್ಯದಿಂದ ಓಡಿಸಲಾರಂಬಿಸಿದನು. ಆಗ ಕೌರವರು ಕುಂತೀಪುತ್ರ ಧನಂಜಯನ ಶ್ವೇತಹಯಗಳಿಗೆ ಮತ್ತು ಪೀಡಿಸುತ್ತಿರುವ ನಿಶಿತ ಶಸ್ತ್ರಗಳಿಂದ ಮಹಾರಣದಿಂದ ಪಲಾಯನಮಾಡಿದರು. ಆದರೆ ಸೌವೀರರು, ಕಿತವರು, ಪ್ರಾಚ್ಯರು, ಪ್ರತೀಚ್ಯರು, ಔತ್ತರೇಯರು, ಮಾಲವರು, ಅಭೀಷಾಹರು, ಶೂರಸೇನರು, ಶಿಬಯರು, ವಸಾತಯರು,

ಶಾಲ್ವಶ್ರಯರು, ತ್ರಿಗರ್ತರು, ಅಂಬಷ್ಠರು, ಮತ್ತು ಕೇಕಯರು ಈ ಹನ್ನೆರಡು ಜನಪದದವರು ಯುದ್ಧಮಾಡುತ್ತಿರುವ ಕಿರೀಟಿಯ ಶರಗಳಿಂದ ಪೀಡಿತರಾಗಿದ್ದರೂ ಕೂಡ ಸಂಗ್ರಾಮದಲ್ಲಿ ಭೀಷ್ಮನನ್ನು ಬಿಟ್ಟು ಓಡಲಿಲ್ಲ. ಆಗ ಅವರೆಲ್ಲ ಬಹಳ ಜನರು ಅವನೊಬ್ಬನನ್ನೇ ಎಲ್ಲಕಡೆಗಳಿಂದ ಸುತ್ತುವರೆದು ಆಕ್ರಮಿಸಿ ಶರವರ್ಷದಿಂದ ಅವನನ್ನು ಮುಚ್ಚಿದರು. "ಬೀಳಿಸಿರಿ! ಸೆರೆಹಿಡಿಯಿರಿ! ಯುದ್ಧಮಾಡಿರಿ! ಕತ್ತರಿಸಿ!" ಇವೇ ಮುಂತಾದ ತುಮುಲ ಶಬ್ಧಗಳು ಭೀಷ್ಮನ ರಥದ ಬಳಿಯಿಂದ ಕೇಳಿಬಂದವು.

ನೂರಾರು ಸಹಸ್ರಾರು ಶರಗಳಿಂದ ಹೊಡೆಯಲ್ಪಟ್ಟ ಭೀಷ್ಮನ ದೇಹದಲ್ಲಿ ಹೊಡೆಯಲ್ಪಡದ ಒಂದು ಅಂಗುಲದಷ್ಟು ಜಾಗವೂ ಇರಲಿಲ್ಲ. ಈ ವಿಧವಾಗಿ ಅವನು ಮೊನಚಾದ ಕೊನೆಗಳನ್ನುಳ್ಳ ಫಲ್ಗುನನ ಬಾಣಗಳಿಂದ ಚೂರ್ಣೀಕೃತನಾಗಿ, ದಿನಕರನು ಮುಳುಗುವುದಕ್ಕೆ ಸ್ವಲ್ಪಹೊತ್ತು ಮುಂಚೆ, ಧೃತರಾಷ್ಟ್ರನ ಮಕ್ಕಳು ನೋಡುತ್ತಿದ್ದಂತೆಯೇ, ತಲೆಯನ್ನು ಪೂರ್ವದಿಕ್ಕಿಗೆ ಹಾಕಿ ರಥದಿಂದ ಬಿದ್ದನು. ರಥದಿಂದ ಭೀಷ್ಮನು ಬೀಳುತ್ತಿರಲು "ಹಾ! ಹಾ!" ಎಂದು ದಿವಿಯಲ್ಲಿ ದೇವತೆಗಳ ಮತ್ತು ಎಲ್ಲ ಪಾರ್ಥಿವರ ಮಹಾ ಕೂಗು ಕೇಳಿಬಂದಿತು. ಮಹಾತ್ಮ ಪಿತಾಮಹನು ಬೀಳುತ್ತಿರುವುದನ್ನು ನೋಡಿ ಭೀಷ್ಮನೊಂದಿಗೆ ಕೌರವರೆಲ್ಲರ ಹೃದಯಗಳೂ ಕುಸಿದು ಬಿದ್ದವು. ಎಲ್ಲ ಧನುಷ್ಮತರಿಗೂ ಕೇತುಪ್ರಾಯನಾಗಿದ್ದ ಆ ಮಹಾಬಾಹುವು ಇಂದ್ರಧ್ವಜವು ಕೆಳಗೆ ಬೀಳುವಂತೆ ಶಬ್ಧಮಾಡುತ್ತ ಕೆಳಗೆ ಬಿದ್ದನು.

ಆದರೆ ಶರಸಮೂಹಗಳಿಂದ ಸಮಾವೃತನಾಗಿದ್ದ ಅವನ ಶರೀರವು ಧರಣಿಯನ್ನು ಸ್ಪರ್ಶಿಸಲಿಲ್ಲ. ರಥದಿಂದ ಬಿದ್ದು ಶರತಲ್ಪದಲ್ಲಿ ಮಲಗಿದ್ದ ಮಹೇಷ್ವಾಸ ಪುರುಷರ್ಷಭನನ್ನು ಯಾವುದೋ ಒಂದು ದಿವ್ಯ ಭಾವವು ಸಮಾವೇಶಗೊಂಡಿತು. ಪರ್ಜನ್ಯನು ಮಳೆಸುರಿಸಿದನು. ಮೇದಿನಿಯು ಕಂಪಿಸಿದಳು. ಅವನು ಬೀಳಲು ದಿವಾಕರನೂ ಪಾಲಿದಂತೆ ಕಂಡುಬಂದಿತು. ಇನ್ನೂ ಸಂಜ್ಞೆಯಿದ್ದು ಕಾಲವನ್ನು ಚಿಂತಿಸುತ್ತಿದ್ದ ಆ ವೀರನು ಅಂತರಿಕ್ಷದಲ್ಲಿ ಎಲ್ಲಕಡೆ ನಡೆಯುತ್ತಿದ್ದ ದಿವ್ಯ ಮಾತುಗಳನ್ನು ಕೇಳಿದನು: "ಸರ್ವಶಸ್ತ್ರಭೃತರಲ್ಲಿ ಶ್ರೇಷ್ಠನಾದ, ನರವ್ಯಾಘ್ರ ಮಹಾತ್ಮ ಗಾಂಗೇಯನು ಹೇಗೆ ದಕ್ಷಿಣಾಯನವು ಪ್ರಾಪ್ತವಾಗಿರುವಾಗ ಕಾಲವಶನಾಗುತ್ತಾನೆ?"

ಅದನ್ನು ಕೇಳಿ ಗಾಂಗೇಯನು "ಇನ್ನೂ ಇದ್ದೇನೆ!" ಎಂದು ಹೇಳಿದನು. ಭೂತಲದ ಮೇಲೆ ಬಿದ್ದರೂ ಉತ್ತರಾಯಣವನ್ನು ಪ್ರತೀಕ್ಷಿಸುತ್ತಾ ಕುರುಪಿತಾಮಹ ಭೀಷ್ಮನು ಪ್ರಾಣಗಳನ್ನು ಹಿಡಿದಿಟ್ಟುಕೊಂಡಿದ್ದನು. ಅವನ ಆ ಮತವನ್ನು ತಿಳಿದ ಹಿಮವತನ ಸುತೆ ಗಂಗೆಯು ಹಂಸರೂಪದಲ್ಲಿ ಮಹರ್ಷಿಗಳನ್ನು ಅಲ್ಲಿಗೆ ಕಳುಹಿಸಿದಳು. ಆಗ ಮಾನಸ ಸರೋವರದಲ್ಲಿ ವಾಸಿಸುತ್ತಿದ್ದ ಸಂಪಾತಿ ಹಂಸಗಳು ಒಟ್ಟುಗೂಡಿ ತ್ವರೆಮಾಡಿ ಕುರುಪಿತಾಮಹ ಭೀಷ್ಮನನ್ನು ನೋಡಲು ಎಲ್ಲಿ ನರಶ್ರೇಷ್ಠ ಪಿತಾಮಹನು ಶರತಲ್ಪದಲ್ಲಿ ಮಲಗಿದ್ದನೋ ಅಲ್ಲಿಗೆ ಆಗಮಿಸಿದರು. ಆ ಹಂಸರೂಪಿ ಮುನಿಗಳು ಭೀಷ್ಮನ ಬಳಿಸಾರಿ ಶರತಲ್ಪಸ್ಥನಾಗಿದ್ದ ಕುರುಪಿತಾಮಹ ಭೀಷ್ಮನನ್ನು ಕಂಡರು. ಆ ಮಹಾತ್ಮನನ್ನು ನೋಡಿ

ಮನೀಷಿಣರು ಪ್ರದಕ್ಷಿಣೆ ಮಾಡಿ ಭಾಸ್ಕರನ ದಕ್ಷಿಣಾಯನದ ಕುರಿತು ಪರಸ್ಪರರಲ್ಲಿ ಸಮಾಲೋಚಿಸಿ ಭರತಶ್ರೇಷ್ಠ ಗಾಂಗೇಯನಿಗೆ ಹೇಳಿದರು:

> “ಭೀಷ್ಮನು ಮಹಾತ್ಮನಾಗಿದ್ದುಕೊಂಡು ದಕ್ಷಿಣಾಯನದಲ್ಲಿ ಹೇಗೆ ತಾನೇ ಮೃತ್ಯುವಶನಾಗುತ್ತಾನೆ?”

ಎಂದು ಹೇಳಿಕೊಳ್ಳುತ್ತಾ ಹಂಸಗಳು ದಕ್ಷಿಣಾಭಿಮುಖವಾಗಿ ಹೋದವು. ಅವರನ್ನು ನೋಡಿ ಆ ಮಹಾಬುದ್ಧಿ ಶಾಂತನವನೂ ಕೂಡ ಯೋಚಿಸಿ ಅವರಿಗೆ ಹೇಳಿದನು:

> “ಆದಿತ್ಯನು ದಕ್ಷಿಣಾವೃತ್ತದಲ್ಲಿರುವಾಗ ನಾನು ಯಾವ ಕಾರಣಕ್ಕೂ ಹೋಗುವುದಿಲ್ಲ. ಇದು ನನ್ನ ಮನಸ್ಸಿನಲ್ಲಿದೆ. ಆದಿತ್ಯನು ಉತ್ತರಾವೃತ್ತಕ್ಕೆ ಬಂದಾಗಲೇ ನಾನು ನನ್ನ ಪುರಾತನ ಸ್ಥಾನವ್ಯಾವುದೋ ಅಲ್ಲಿಗೆ ಹೋಗುತ್ತೇನೆ. ಹಂಸಗಳೇ! ನಾನು ಸತ್ಯವನ್ನೇ ಹೇಳುತ್ತಿದ್ದೇನೆ. ಉತ್ತರಾಯಣದ ಪ್ರತೀಕ್ಷೆಯಿಂದ ಪ್ರಾಣಗಳನ್ನು ಧಾರಣೆಮಾಡಿಕೊಂಡಿರುತ್ತೇನೆ. ಏಕೆಂದರೆ ಪ್ರಾಣಗಳನ್ನು ಬಿಡುವ ನಿಯಂತ್ರಣ ಶಕ್ತಿಯು ನನ್ನಲ್ಲಿದೆ. ಅದರಿಂದ ಉತ್ತರಾಯಣದ ವರೆಗೆ ಪ್ರಾಣಗಳನ್ನು ಧರಿಸಿಕೊಂಡಿರುತೇನೆ. ಇಚ್ಛೆಯಿಂದ ಮರಣಿಯಾಗು ಎಂದು ನನಗೆ ನನ್ನ ಮಹಾತ್ಮ ಪಿತನು ವರವನ್ನಿತ್ತಿದ್ದನು. ಅದೇ ವರದಂತೆಯೇ ಆಗುತ್ತದೆ. ಪ್ರಾಣವನ್ನು ಬಿಡಲು ಸರಿಯಾದ ಸಮಯದ ವರೆಗೆ

ಪ್ರಾಣಗಳನ್ನು ಧಾರಣೆಮಾಡಿಕೊಂಡಿರುತ್ತೇನೆ.”

ಹೀಗೆ ಆ ಹಂಸಗಳಿಗೆ ಹೇಳಿ ಶರತಲ್ಪದಲ್ಲಿ ಮಲಗಿದನು. ಈ ರೀತಿ ಮಹೌಜಸ ಶೃಂಗಪ್ರಾಯ ಭೀಷ್ಮನು ಬೀಳಲು ಪಾಂಡವರು ಮತ್ತು ಸೃಂಜಯರು ಸಿಂಹನಾದಗೈದರು. ಭರತರ ಮಧ್ಯಗನಾಗಿದ್ದ ಆ ಮಹಾಸತ್ತ್ವನು ಹತನಾಗಲು ಧೃತರಾಷ್ಟ್ರನ ಪುತ್ರರಿಗೆ ಮುಂದೇನು ಮಾಡಬೇಕೆಂದು ತೋಚದಾಯಿತು. ಕುರುಗಳಲ್ಲಿ ಸಮ್ಮೋಹವೂ ತುಮುಲವೂ ಉಂಟಾಯಿತು. ದುರ್ಯೋಧನನ ನಾಯಕತ್ವದಲ್ಲಿದ್ದ ನೃಪರು ನಿಟ್ಟುಸಿರು ಬಿಡುತ್ತಾ ಅಳತೊಡಗಿದರು. ವಿಷಾದರಾಗಿ, ಗರಬಡಿದವರಂತೆ, ಬಹುಕಾಲ ಹಾಗೆಯೇ ನಿಂತುಕೊಂಡರು. ಅವರಿಗೆ ಯುದ್ಧಮಾಡಲೂ ಕೂಡ ಮನಸ್ಸು ಬರಲಿಲ್ಲ. ಸಂಧಿವಾತ ಹಿಡಿದವರಂತೆ ಪಾಂಡವರನ್ನು ಆಕ್ರಮಣಿಸಲೂ ಇಲ್ಲ. ಅವಧ್ಯನಾದ ಮಹೌಜಸ ಶಂತನು ಪುತ್ರ ಭೀಷ್ಮನು ಹತನಾಗಲು ಕುರುಗಳಲ್ಲಿ ಅಗಾಧ ಅಭಾವವಾಯಿತೆಂದು ವಿಚಾರಿಸಿದರು. ಅವರು ಪ್ರವೀರರನ್ನು ಕಳೆದುಕೊಂಡರು. ನಿಶಿತ ಶರಗಳಿಂದ ತುಂಡರಿಸಲ್ಪಟ್ಟರು. ಸವ್ಯಸಾಚಿಯಿಂದ ನಿರ್ಜಿತರಾಗಿ ಏನು ಮಾಡಬೇಕೆಂದು ತಿಳಿಯದವರಾದರು. ಪಾಂಡವರಾದರೋ ಜಯವನ್ನು ಪಡೆದು ಪರಲೋಕಗಳಲ್ಲಿಯೂ ಉತ್ತಮ ಗತಿಗಳನ್ನು ಪಡೆದರು. ಪರಿಘಬಾಹುಗಳಾದ ಎಲ್ಲರೂ ಮಹಾಶಂಖಗಳನ್ನು ಊದಿದರು. ಪಾಂಚಾಲರೊಂದಿಗೆ ಸೋಮಕರೂ ಹರ್ಷಿಸಿದರು. ಸಹಸ್ರಾರು ಜಯಘೋಷಗಳಿಂದ ಆನಂದಿಸುತ್ತಿರಲು ಸುಮಹಾಬಲ ಭೀಮಸೇನನು

ತೋಳುಗಳನ್ನು ಗಟ್ಟಿಯಾಗಿ ತಟ್ಟುತ್ತಾ ಕುಣಿದಾಡಿದನು. ಗಾಂಗೇಯನು ಬೀಳಲು ಎರಡೂ ಸೇನೆಗಳಲ್ಲಿ ವೀರರು ಶಸ್ತ್ರಗಳನ್ನು ಕೆಳಗಿಟ್ಟು ಎಲ್ಲ ಕಡೆಗಳಿಂದ ಧಾವಿಸಿಬಂದರು.

ಕೆಲವರು ಜೋರಾಗಿ ಅಳುತ್ತಿದ್ದರು. ಕೆಲವರು ಕೆಳಗೆ ಬಿದ್ದರು. ಇನ್ನು ಕೆಲವರು ಮೂರ್ಛೆಗೊಂಡರು. ಅನ್ಯರು ಕ್ಷತ್ರ ಧರ್ಮವನ್ನು ನಿಂದಿಸಿದರು. ಇನ್ನು ಕೆಲವರು ಭೀಷ್ಮನನ್ನು ಗೌರವಿಸಿದರು. ಋಷಿಗಳೂ ಪಿತೃಗಳೂ ಆ ಮಹಾವ್ರತನನ್ನು ಪ್ರಶಂಸಿಸಿದರು. ಭರತರ ಪೂರ್ವಜರೂ ಕೂಡ ಅವನನ್ನು ಪ್ರಶಂಸಿಸಿದರು. ವೀರ್ಯವಾನ್ ಧೀಮಾನ್ ಶಾಂತನವನು ಮಹೋಪನಿಷಧದ ಯೋಗವನ್ನು ಆಶ್ರಯಿಸಿ ಜಪಿಸುತ್ತಾ ಕಾಲಾಕಾಂಕ್ಷಿಯಾಗಿ ಸ್ಥಿತನಾದನು.

## ಅರ್ಜುನನು ಭೀಷ್ಮನಿಗೆ ತಲೆದಿಂಬನ್ನು ಒದಗಿಸಿದ್ದುದು

ಕುರುವೃದ್ಧ ಪಿತಾಮಹನು ಆ ಸಾಯಂಕಾಲ ಧಾರ್ತರಾಷ್ಟ್ರರನ್ನು ವಿಷಾದಗೊಳಿಸಿ ಪಾಂಚಾಲರನ್ನು ಸಂತೋಷಗೊಳಿಸಿ ಭೂಮಿಯ ಮೇಲೆ ಬಿದ್ದನು. ರಥದಿಂದ ಜಾರಿ ಧರಣೀ ತಲದಲ್ಲಿ ಬಿದ್ದ ಭೀಷ್ಮನು ಮೇದಿನಿಗೆ ತಾಗದಹಾಗೆ ಶರತಲ್ಪತ ಮೇಲೆ ಮಲಗಿದನು. ಕುರುಗಳ ಸೀಮಾವೃಕ್ಷದಂತಿದ್ದ ಅವನು ಬೀಳಲು "ಹಾ! ಹಾ!" ಎಂದು ಭೂತಗಳ ತುಮುಲ ಶಬ್ಧವುಂಟಾಯಿತು. ಎರಡೂ ಸೇನೆಗಳ ಕ್ಷತ್ರಿಯರನ್ನು ಭಯವು ಆವೇಶಗೊಂಡಿತು. ಹರಿದ ಕವಚ ಧ್ವಜಗಳ ಶಾಂತನವ ಭೀಷ್ಮನನ್ನು ನೋಡಿ ಕುರುಗಳೂ ಪಾಂಡವರೂ ಅವನನ್ನು

ಸುತ್ತುವರೆದರು. ಶಾಂತನವ ಭೀಷ್ಮನು ಹತನಾಗಲು ಆಕಾಶದಲ್ಲಿ ಅಂಧಕಾರವು ಕವಿಯಿತು. ಭಾನುಮತನು ಪ್ರಭಾಹೀನನಾದನು. ಭೂಮಿಯೂ ಕೂಡ ಭಯಂಕರ ಶಬ್ಧಮಾಡಿತು.

> "ಇವನು ಬ್ರಹ್ಮವಿದರಲ್ಲಿ ಶ್ರೇಷ್ಠನು. ಇವನು ಬ್ರಹ್ಮವಿದರ ಗತಿ."

ಎಂದು ಮಲಗಿದ್ದ ಭರತರ್ಷಭನ ಕುರಿತು ಭೂತಗಳು ಮಾತನಾಡಿಕೊಳ್ಳುತ್ತಿದ್ದವು.

> "ಹಿಂದೆ ಈ ಪುರುಷರ್ಷಭನು ತಂದೆ ಶಂತನುವು ಕಾಮಾರ್ತನಾಗಿದ್ದಾನೆಂದು ತಿಳಿದು ತನ್ನನ್ನು ಊರ್ಧ್ವರೇತಸನನ್ನಾಗಿ ಮಾಡಿಕೊಂಡನು."

ಹೀಗೆ ಹೇಳುತ್ತ ಶರತಲ್ಪಸ್ಥನಾಗಿದ್ದ ಭರತರ ಪ್ರಮುಖನಾಗಿದ್ದ ಅವನ ಕುರಿತಾಗಿ ಸಿದ್ಧ-ಚಾರಣರ ಸಹಿತ ಋಷಿಗಳು ಧಾವಿಸಿ ಬಂದರು.

ಭರತರ ಪಿತಾಮಹ ಶಾಂತನವ ಭೀಷ್ಮನು ಹತನಾಗಲು ಧೃತರಾಷ್ಟ್ರನ ಪುತ್ರರು ಏನು ಮಾಡಲೂ ಕೂಡ ತಿಳಿಯದಾದರು. ಕಾಂತಿಯು ತೊಲಗಿ ವಿಷಣ್ಣವದನರಾದರು. ಲಜ್ಜಿತರಾಗಿ, ನಾಚಿಕೆಯಿಂದ ತಲೆಯನ್ನು ಕೆಳಮಾಡಿ ನಿಂತಿದ್ದರು. ಪಾಂಡವರಾದರೋ ಜಯವನ್ನು ಗಳಿಸಿ ಸಂಗ್ರಾಮದ ಅಗ್ರಭಾಗದಲ್ಲಿ ನಿಂತು ಎಲ್ಲರೂ ಸುವರ್ಣಮಯ ಜಾಲಗಳಿಂದ ಅಲಂಕೃತವಾದ ಮಹಾ ಶಂಖಗಳನ್ನು ಊದಿದರು.

ಮಹಾಬಲಸಮನ್ವಿತರಾದ ಶತ್ರುಗಳನ್ನು ಹನನಗೊಳಿಸಿ ಅತಿಯಾದ ತೂರ್ಯನಿನಾದಗಳು ವಾದ್ಯಗಳು ಮೊಳಗಲು ಮಹಾಬಲ ಕೌಂತೇಯ ಭೀಮಸೇನನು ಮಹಾ ಹರ್ಷದಿಂದ ಕೂಡಿದವನಾಗಿ ಆಟವಾಡುತ್ತಿರುವುದು ಕಂಡುಬಂದಿತು. ಕುರುಗಳಲ್ಲಿಯೂ ಕೂಡ ಸಮ್ಮೋಹದ ತುಮುಲವುಂಟಾಯಿತು. ಕರ್ಣ-ದುರ್ಯೋಧನರೂ ಕೌರವರ ಧುರಂಧರರೂ ಭೀಷ್ಮನು ಬೀಳಲು ಪುನಃ ಪುನಃ ಸಿಟ್ಟುಸಿರು ಬಿಡುತ್ತಿದ್ದರು. ಎಲ್ಲಕಡೆ ಹಾಹಾಕಾರವೆದ್ದಿತು. ಎಲ್ಲರೂ ಲೋಕಮರ್ಯಾದೆಯನ್ನು ತೊರೆದು ವರ್ತಿಸತೊಡಗಿದರು.

ಭೀಷ್ಮನು ಬಿದ್ದುದನ್ನು ನೋಡಿ ದುಃಶಾಸನನು ಉತ್ತಮ ವೇಗದಲ್ಲಿ ದ್ರೋಣನ ಸೇನೆಯತ್ತ ಧಾವಿಸಿ ಹೋದನು. ಅಣ್ಣನಿಂದ ಕಳುಹಿಸಲ್ಪಟ್ಟ ಆ ವೀರ ಪುರುಷವ್ಯಾಘ್ರನು ತನ್ನ ಸೇನೆಯು ದುಃಖಿಸುತ್ತಿರಲು ಅದನ್ನು ಪ್ರಚೋದಿಸುತ್ತಾ ಹೊರಟನು. ಬರುತ್ತಿರುವ ದುಃಶಾಸನನನ್ನು ನೋಡಿ ಏನಾಯಿತು ಹೇಳು ಅವನನ್ನು ಸುತ್ತುವರೆದರು. ಆಗ ಕೌರವನು ಭೀಷ್ಮನು ನಿಹತನಾದುದನ್ನು ದ್ರೋಣನಿಗೆ ಹೇಳಿದನು. ಆ ಅಪ್ರಿಯವಾದುದನ್ನು ಕೇಳಿದ ತಕ್ಷಣ ದ್ರೋಣನು ರಥದಿಂದ ಕೆಳಗೆ ಬಿದ್ದನು. ಸಂಜ್ಞೆಗಳನ್ನು ಹಿಂದೆ ಪಡೆದು ಪ್ರತಾಪವಾನ ಭಾರದ್ವಾಜನು ತನ್ನ ಸೇನೆಗಳು ಯುದ್ಧವನ್ನು ನಿಲ್ಲಿಸುವಂತೆ ಮಾಡಿದನು. ಕುರುಗಳು ವಿನಿವೃತ್ತರಾದುದನ್ನು ಕಂಡು ಪಾಂಡವರು ಕೂಡ ಶೀಘ್ರಗ ದೂತರನ್ನು ಕಳುಹಿಸಿ ಎಲ್ಲ ವಲಯಗಳಲ್ಲಿಯೂ ಯುದ್ಧವನ್ನು ನಿಲ್ಲಿಸುವಂತೆ ಮಾಡಿದರು.

ಎರಡು ಸೇನೆಗಳು ವಿನಿವೃತ್ತರಾದ ನಂತರ ಪರಂಪರೆಯಂತೆ ಎಲ್ಲ ನರಾಧಿಪರೂ ಕವಚಗಳನ್ನು ಬಿಚ್ಚಿಟ್ಟು ಭೀಷ್ಮನ ಬಳಿ ಬಂದರು. ಆಗ ನೂರಾರು ಸಹಸ್ರಾರು ಯೋಧರು ಯುದ್ಧದಿಂದ ಹಿಂದಿರುಗಿ ಅಮರರು ಪ್ರಜಾಪತಿಯನ್ನು ಹೇಗೋ ಹಾಗೆ ಆ ಮಹಾತ್ಮನ ಬಳಿಸಾರಿದರು. ಮಲಗಿದ್ದ ಆ ಭರತರ್ಷಭ ಭೀಷ್ಮನ ಬಳಿಬಂದು ಪಾಂಡವರೂ ಕುರುಗಳೂ ಒಟ್ಟಿಗೇ ಅಭಿವಂದಿಸಿ ನಿಂತುಕೊಂಡರು. ಕೈಮುಗಿದು ಮುಂದೆ ನಿಂತಿದ್ದ ಪಾಂಡವರನ್ನೂ ಕುರುಗಳನ್ನೂ ಉದ್ದೇಶಿಸಿ ಧರ್ಮಾತ್ಮ ಭೀಷ್ಮ ಶಾಂತನವನು ಹೀಗೆ ಹೇಳಿದನು:

> "ಮಹಾಭಾಗರೇ! ನಿಮಗೆ ಸ್ವಾಗತ! ನಿಮಗೆ ಸ್ವಾಗತ! ಅಮರೋಪಮರಾಗಿರುವ ನಿಮ್ಮ ದರ್ಶನದಿಂದ ನಾನು ತೃಪ್ತನಾಗಿದ್ದೇನೆ."

ಈ ರೀತಿ ಅವರನ್ನು ಅಭಿನಂದಿಸಿ ಅವನು ತನ್ನ ತಲೆಯು ಜೋಲಾಡುತ್ತಿರಲು

> "ನನ್ನ ಶಿರವು ಜೋಲಾಡುತ್ತಿದೆ. ಇದಕ್ಕೆ ಉಪಧಾನವನ್ನು ನೀಡಿ!"

ಎಂದು ಹೇಳಿದನು. ಆಗ ನೃಪರು ಕೋಮಲವೂ ಮೃದುವೂ ಆದ ಹಲವು ತಲೆದಿಂಬುಗಳನ್ನು ತಂದರು. ಆದರೆ ಪಿತಾಮಹನು ಅವುಗಳ್ಯಾವುದನ್ನೂ ಇಷ್ಟಪಡಲಿಲ್ಲ. ನರವ್ಯಾಘ್ರನು ನಗುತ್ತಾ ಆ ನೃಪರಿಗೆ ಹೇಳಿದನು:

“ಪಾರ್ಥಿವರೇ! ವೀರಶಯ್ಯೆಗೆ ಇವು ತಕ್ಕುದಾದವಲ್ಲ!”

ಆಗ ಸರ್ವಲೋಕಮಹಾರಥ ದೀರ್ಘಬಾಹು ಪಾಂಡವ ನರಶ್ರೇಷ್ಠ ಧನಂಜಯನನ್ನು ವೀಕ್ಷಿಸಿ ಹೇಳಿದನು:

> “ಧನಂಜಯ ಮಹಾಬಾಹೋ! ನನ್ನ ಈ ಶಿರಸ್ಸು ಜೋಲಾಡುತ್ತಿದೆ. ಇದಕ್ಕೆ ಯುಕ್ತವಾದುದು ಏನೆಂದು ನೀನು ಯೋಚಿಸುತ್ತೀಯೋ ಅಂತಹ ತಲೆದಿಂಬನ್ನು ನೀಡು!”

ಅವನು ಮಹಾಚಾಪವನ್ನು ಕೆಳಗಿಟ್ಟು, ಪಿತಾಮಹನನ್ನು ನಮಸ್ಕರಿಸಿ, ಕಣ್ಣುಗಳಲ್ಲಿ ಕಣ್ಣೀರನ್ನು ತುಂಬಿಸಿಕೊಂಡು ಈ ಮಾತನ್ನಾಡಿದನು:

> “ಕುರುಶ್ರೇಷ್ಠ! ಸರ್ವ ಶಸ್ತ್ರಭೃತರಲ್ಲಿ ಶ್ರೇಷ್ಠ! ಆಜ್ಞಾಪಿಸು! ದುರ್ಧರ್ಷ! ಪಿತಾಮಹ! ನಾನು ನಿನ್ನ ಸೇವಕ. ಏನು ಮಾಡಲಿ?”

ಶಾಂತನವನು ಅವನಿಗೆ ಹೇಳಿದನು:

> “ಮಗೂ! ನನ್ನ ಶಿರವು ಜೋಲಾಡುತ್ತಿದೆ. ನನಗೆ ತಲೆದಿಂಬನ್ನು ಮಾಡಿಕೊಡು. ಈ ಶಯನಕ್ಕೆ ಅನುರೂಪವಾದುದನ್ನು ಶೀಘ್ರವಾಗಿ ನೀಡು! ಏಕೆಂದರೆ ನೀನು ಸರ್ವಧನುಷ್ಮತರಲ್ಲಿ ಶ್ರೇಷ್ಠ. ಕ್ಷತ್ರಧರ್ಮವನ್ನು ತಿಳಿದಿರುವೆ. ಬುದ್ಧಿಸತ್ತ್ವಗುಣಾನ್ವಿತನಾಗಿರುವೆ.”

ಫಲ್ಗುನನಾದರೋ ಹಾಗೆಯೇ ಆಗಲೆಂದು ಹೇಳಿ ಅವನ ಹೇಳಿಕೆಯನ್ನು

ಪೂರೈಸಲು ತೊಡಗಿದನು. ಗಾಂಡೀವವನ್ನು ಹಿಡಿದು ನತಪರ್ವಣ ಶರಗಳನ್ನು ಅಭಿಮಂತ್ರಿಸಿದನು. ಭರತರ ಪ್ರಮುಖನಾದ ಮಹಾತ್ಮನ ಅನುಮತಿಯನ್ನು ಪಡೆದು ಮಹಾವೇಗದ ಮೂರು ತೀಕ್ಷ್ಣ ಬಾಣಗಳಿಂದ ಅವನ ಶಿರವನ್ನು ಮೇಲಕ್ಕೆತ್ತಿಸಿದನು. ಅಭಿಪ್ರಾಯವನ್ನು ತಿಳಿದುಕೊಂಡ ಧರ್ಮಾತ್ಮ ಸವ್ಯಸಾಚಿಯಿಂದ ಧರ್ಮಾರ್ಥತತ್ತ್ವವಿದು ಭರತಶ್ರೇಷ್ಠ ಭೀಷ್ಮನು ಸಂತುಷ್ಟನಾದನು. ನೀಡಿದ ತಲೆದಿಂಬಿಗಾಗಿ ಕುಂತೀಪುತ್ರ ಯೋಧರಲ್ಲಿ ಶ್ರೇಷ್ಠ, ಸುಹೃದಯರ ಪ್ರೀತಿವರ್ಧಕ ಧನಂಜಯನನ್ನು ಪ್ರತಿನಂದಿಸಿದನು:

> "ಪಾಂಡವ! ಹಾಸಿಗೆಗೆ ತಕ್ಕುದಾದ ತಲೆದಿಂಬನ್ನೇ ಒದಗಿಸಿಕೊಟ್ಟಿದ್ದೀಯೆ. ಬೇರೆ ಏನನ್ನಾದರೂ ಕೊಟ್ಟಿದ್ದರೆ ಸಿಟ್ಟಿನಿಂದ ನಾನು ನಿನ್ನನ್ನು ಶಪಿಸುತ್ತಿದ್ದೆ. ಧರ್ಮದಲ್ಲಿ ನಿಷ್ಠೆಯನ್ನಿಟ್ಟಿರುವ ಕ್ಷತ್ರಿಯರು ಇದೇ ರೀತಿಯ ಶರತಲ್ಪದ ಮೇಲೆ ಮಲಗಬೇಕು."

ಬೀಭತ್ಸುವಿಗೆ ಹೀಗೆ ಹೇಳಿ ಪಾಂಡವರ ಹತ್ತಿರ ನಿಂತಿದ್ದ ಎಲ್ಲ ರಾಜರು ಮತ್ತು ರಾಜಪುತ್ರರಿಗೆ ಹೇಳಿದನು:

> "ನೃಪರೇ! ಈ ಹಾಸಿಗೆಯನ್ನು ನೋಡಿ. ಈ ಶಯ್ಯೆಯಲ್ಲಿಯೇ ನಾನು ರವಿಯ ಆವರ್ತನದವರೆಗೆ ಮಲಗಿರುತ್ತೇನೆ. ಯಾವಾಗ ವೈಶ್ರವಣನಿರುವ ದಿಕ್ಕಿಗೆ ಉತ್ತಮ ತೇಜಸ್ಸಿನ ರಥದಲ್ಲಿ ಕಿರಣಗಳಿಂದ ಲೋಕಗಳನ್ನು ಸುಡುತ್ತಾ ದಿವಾಕರನು

ಹೋಗುತ್ತಾನೋ ಆವಾಗ ನಾನು ಸುಹೃದವೂ ಸುಪ್ರಿಯವೂ ಆದ ಪ್ರಾಣಗಳನ್ನು ಬಿಡುತ್ತೇನೆ. ನಾನಿರುವ ಇಲ್ಲಿ ಸುತ್ತಲೂ ಕಂದಕವನ್ನು ತೋಡಿರಿ. ನೂರಾರು ಶರಗಳಿಂದ ಚುಚ್ಚಲ್ಪಟ್ಟ ನಾನು ಇಲ್ಲಿಯೇ ವಿವಸ್ವತನನ್ನು ಧ್ಯಾನಿಸುತ್ತಿರುತ್ತೇನೆ. ಪಾರ್ಥಿವರೇ! ಈಗಲಾದರೂ ನೀವು ವೈರತ್ವವನ್ನು ಬಿಸುಟು ಯುದ್ಧದಿಂದ ವಿರತರಾಗಿರಿ!”

ಆಗ ಶರೀರದಲ್ಲಿ ಚುಚ್ಚುಕೊಂಡಿರುವ ಬಾಣಗಳನ್ನು ತೆಗೆಯುವುದರಲ್ಲಿ ಕುಶಲರಾದ ಸಕಲವಿಧದ ಉಪಕರಣಗಳಿಂದಲೂ ಯುಕ್ತರಾದ ಕುಶಲರೂ ಸುಶಿಕ್ಷಿತರೂ ಆದ ವೈದ್ಯರು ಬಂದರು. ಅವರನ್ನು ನೋಡಿ ಜಾಹ್ನವೀ ಪುತ್ರನು ಈ ಮಾತುಗಳನ್ನು ಹೇಳಿದನು:

“ಈ ಚಿಕಿತ್ಸಕರಿಗೆ ಕೊಡಬೇಕಾದುದನ್ನು ಕೊಟ್ಟು ಗೌರವಿಸಿ ಕಳುಹಿಸಿಕೊಡಿ. ನಾನು ಈ ಅವಸ್ಥೆಯಲ್ಲಿರುವಾಗ ವೈದ್ಯರಿಗೆ ಇಲ್ಲಿ ಯಾವ ಕೆಲಸವೂ ಇಲ್ಲ. ಕ್ಷತ್ರಧರ್ಮವು ಪ್ರಶಂಸೆಮಾಡುವ ಉತ್ತಮ ಗತಿಯನ್ನು ನಾನು ಹೊಂದಿದ್ದೇನೆ. ಮಹೀಪಾಲರೇ! ಶರತಲ್ಪಗತನಾಗಿರುವ ನನಗೆ ಇದು ಧರ್ಮವಾಗುವುದಿಲ್ಲ. ಈ ಬಾಣಗಳೊಂದಿಗೇ ಅಂತ್ಯದಲ್ಲಿ ದಗ್ಧನಾಗಬೇಕೆಂದು ಇಚ್ಛಿಸುತ್ತೇನೆ.”

ಅವನ ಆ ಮಾತನ್ನು ಕೇಳಿ ದುರ್ಯೋಧನನು ಯಥಾರ್ಹವಾಗಿ ವೈದ್ಯರನ್ನು ಗೌರವಿಸಿ ಕಳುಹಿಸಿಕೊಟ್ಟನು. ಅಮಿತತೇಜಸ್ವಿ ಭೀಷ್ಮನ

ಪರಮ ಧರ್ಮನಿಷ್ಠೆಯನ್ನು ನೋಡಿ ನಾನಾ ಜನಪದೇಶ್ವರರು ವಿಸ್ಮಯಗೊಂಡರು. ಅವನಿಗೆ ತಲೆದಿಂಬನ್ನು ಮಾಡಿಕೊಟ್ಟು ಪಾಂಡವರು ಮತ್ತು ಕೌರವರ ಸಹಿತ ಎಲ್ಲ ಮಹಾರಥರೂ ಶುಭ ಶಯನದಲ್ಲಿ ಮಲಗಿದ್ದ ಮಹಾತ್ಮ ಭೀಷ್ಮನ ಬಳಿಸಾರಿ ಪ್ರದಕ್ಷಿಣೆಗಳನ್ನು ಮಾಡಿ ಅಭಿವಂದಿಸಿದರು. ಭೀಷ್ಮನಿಗೆ ಎಲ್ಲ ಕಡೆಗಳಿಂದ ರಕ್ಷಣೆಯ ವ್ಯವಸ್ಥೆಯನ್ನು ಮಾಡಿ ಸಾಯಾಂಕಾಲ ರಕ್ತಸಿಕ್ತರಾದ ವೀರರು ತಮ್ಮ ತಮ್ಮ ಶಿಬಿರಗಳನ್ನು ಸ್ಮರಿಸಿಕೊಳ್ಳುತ್ತಾ ಪರಮ ಆತುರದಿಂದ ಬಿಡಾರಗಳಿಗೆ ತೆರಳಿದರು. ಭೀಷ್ಮನ ಪತನದಿಂದ ಹೃಷ್ಟರಾಗಿ, ಪರಮ ಪ್ರೀತರಾಗಿದ್ದ ಮಹಾರಥ ಪಾಂಡವರ ಬಳಿಬಂದು ಯಾದವನು ಕಾಲಕ್ಕೆ ತಕ್ಕಂತೆ ಧರ್ಮಪುತ್ರ ಯುಧಿಷ್ಠಿರನಿಗೆ ಹೇಳಿದನು:

> “ಕೌರವ್ಯ ! ಅದೃಷ್ಟವಷಾತ್ ವಿಜಯಿಯಾಗಿರುವೆ. ಅದೃಷ್ಟವಷಾತ್ ಭೀಷ್ಮನು ಕೆಳಗುರುಳಿದನು. ಈ ಸತ್ಯಸಂಧ ಮಹಾರಥನು, ಸರ್ವಶಸ್ತ್ರಪಾರಗನು ಮನುಷ್ಯರಿಂದ ಅಥವಾ ದೇವತೆಗಳಿಂದ ಅವಧ್ಯ. ಕೇವಲ ದೃಷ್ಟಿಪಾತದಿಂದಲೇ ಇತರರನ್ನು ಧ್ವಂಸಮಾಡಬಲ್ಲ ನಿನ್ನನ್ನು ಸಮೀಪಿಸಿದ ಅವನು ನಿನ್ನ ಘೋರ ದೃಷ್ಟಿಯಿಂದಲೇ ದಗ್ಧನಾದನು.”

ಹೀಗೆ ಹೇಳಿದ ಜನಾರ್ದನನಿಗೆ ಧರ್ಮರಾಜನು ಉತ್ತರಿಸಿದನು:

> “ನಿನ್ನ ಪ್ರಸಾದದಿಂದ ಜಯ. ನಿನ್ನ ಕ್ರೋಧದಿಂದ ಪರಾಜಯ. ಭಕ್ತರಿಗೆ ಅಭಯಂಕರನಾಗಿರುವ ಕೃಷ್ಣ ! ನೀನೇ ನಮಗೆ

> ಶರಣ್ಯ. ಕೇಶವ! ನೀನು ಯಾರವನಾಗಿರುವೆಯೋ ಅವರಿಗೆ ಜಯವೊದಗಿದರೆ ಆಶ್ಚರ್ಯವೇನಿಲ್ಲ. ಸಮರದಲ್ಲಿ ನಿತ್ಯವೂ ನೀನು ನಮಗೆ ರಕ್ಷಕ. ನಿತ್ಯವೂ ನೀನು ನಮ್ಮ ಹಿತರತ. ಸರ್ವಥಾ ನಿನ್ನನ್ನು ಪಡೆದಿರುವಾಗ ಇದು ಆಶ್ಚರ್ಯವೇನಲ್ಲ ಎಂದು ನನಗನ್ನಿಸುತ್ತದೆ.”

ಹೀಗೆ ಹೇಳಿದುದಕ್ಕೆ ಮುಗುಳ್ನಕ್ಕು ಜನಾರ್ದನನು

> “ಪಾರ್ಥಿವೋತ್ತಮ! ಈ ಮಾತು ನಿನಗೆ ಯುಕ್ತರೂಪವೇ ಆಗಿದೆ”

ಎಂದು ಉತ್ತರಿಸಿದನು.

## ಅರ್ಜುನನು ಗಾಂಗೇಯನಿಗೆ ಪಾನೀಯವನ್ನಿತ್ತಿದುದು; ದುರ್ಯೋಧನನಿಗೆ ಭೀಷ್ಮನ ಉಪದೇಶ

ರಾತ್ರಿಯು ಬರಲು ಸರ್ವ ಪಾರ್ಥಿವರೂ, ಪಾಂಡವ-ಧಾರ್ತರಾಷ್ಟ್ರರು ಪಿತಾಮಹನಲ್ಲಿಗೆ ಆಗಮಿಸಿದರು. ಆ ವೀರಶಯನದಲ್ಲಿ ಮಲಗಿದ್ದ ವೀರ ಕ್ಷತ್ರಿಯರ್ಷಭ ಕುರುಸತ್ತಮನನ್ನು ಅಭಿವಾದಿಸಲು ಕ್ಷತ್ರಿಯರು ಉಪಸ್ಥಿತರಾದರು. ಕನ್ಯೆಯರು ಚಂದನ-ಚೂರ್ಣ-ಲಾಜ-ಮಾಲೆಗಳೆಲ್ಲವನ್ನು ತಂದು, ಸ್ತ್ರೀಯರು, ಬಾಲರು, ವೃದ್ಧರು, ಅನೇಕ ಪ್ರೇಕ್ಷಕ ಜನರೂ ಉದಯಿಸುತ್ತಿರುವ ಸೂರ್ಯನ ಬಳಿ ಭೂತಗಳು ಸಾಗುವಂತೆ ಶಾಂತನವನ ಬಳಿ ಬಂದರು. ವಾದ್ಯಗಾರರು, ವರ್ತಕರು,

ವೇಶ್ಯೆಯರು, ನಟನರ್ತಕರು, ಶಿಲ್ಪಿಗಳು ವೃದ್ಧ ಕುರುಪಿತಾಮಹನಲ್ಲಿಗೆ ಬಂದರು. ಕೌರವ-ಪಾಂಡವರು ಇಬ್ಬರೂ ಯುದ್ಧವನ್ನು ನಿಲ್ಲಿಸಿ, ಸನ್ನಾಹಗಳನ್ನು ಕಳಚಿ, ಆಯುಧಗಳನ್ನು ಬದಿಗಿಟ್ಟು ಒಟ್ಟಿಗೇ ಯಥಾಪೂರ್ವವಾಗಿ ವಯಸ್ಸಿಗೆ ತಕ್ಕಂತೆ ಅನ್ಯೋನ್ಯರಿಗೆ ಪ್ರೀತಿ ತೋರಿಸಿ ಆ ದುರಾಧರ್ಷ, ಅರಿಂದಮ ದೇವವ್ರತನ ಬಳಿ ಕುಳಿತುಕೊಂಡರು. ನೂರಾರು ಪಾರ್ಥಿವರಿಂದ ಕೂಡಿದ ಭೀಷ್ಮನಿಂದ ಶೋಭಿತವಾದ ಆ ಭಾರತೀ ಸಮಿತಿಯು ದಿವಿಯಲ್ಲಿನ ಆದಿತ್ಯಮಂಡಲದಂತೆ ಬೆಳಗಿ ಶೋಭಿಸಿತು. ಪಿತಾಮಹನನ್ನು ಉಪಾಸಿಸುತ್ತಿದ್ದ ಆ ನೃಪರು ದೇವೇಶ ಪಿತಾಮಹನನ್ನು ಉಪಾಸಿಸುವ ದೇವತೆಗಳಂತೆ ಶೋಭಿಸಿದರು. ಭೀಷ್ಮನಾದರೋ ಧೈರ್ಯದಿಂದ ವೇದನೆಗಳನ್ನು ನಿಗ್ರಹಿಸಿಕೊಂಡು, ಶರಗಳಿಂದ ಅಭಿತಪ್ತನಾಗಿ, ಅಷ್ಟೊಂದು ಸಂತೋಷವಿಲ್ಲದೇ ಹೇಳಿದನು:

“ಶರಗಳಿಂದ ಗಾಯಗೊಂಡು ನನ್ನ ದೇಹವು ಸುಡುತ್ತಿದೆ. ಶರಗಳ ಸಂತಾಪದಿಂದ ಮೂರ್ಛಿತನಾಗಿದ್ದೇನೆ. ಪಾನೀಯವನ್ನು ಬಯಸುತ್ತಿದ್ದೇನೆ” ಎಂದು ಆ ರಾಜರಿಗೆ ಹೇಳಿದನು. ಆಗ ಅಲ್ಲಿದ್ದ ಕ್ಷತ್ರಿಯರು ಬೇಗನೇ ಶುಚಿರುಚಿಯಾದ ಭಕ್ಷ್ಯಗಳನ್ನು ಶೀತಲ ಸಿಹಿನೀರಿನ ಬಿಂದಿಗೆಗಳನ್ನೂ ತರಿಸಿದರು. ತಂದಿರುವ ಅವುಗಳನ್ನು ನೋಡಿ ಶಾಂತನವ ಭೀಷ್ಮನು ಹೇಳಿದನು: “ಅಯ್ಯಾ! ಇಂದು ನಾನು ಮನುಷ್ಯರ ಯಾವ ಭೋಗಗಳನ್ನೂ ಭೋಗಿಸಲು ಶಕ್ಯನಿಲ್ಲ.

ಮನುಷ್ಯನಿಂದ ಬೇರೆಯಾಗಿ ಶರಶಯ್ಯಗತನಾಗಿದ್ದೇನೆ. ಶಶಿಸೂರ್ಯರು ಹಿಂದಿರುಗುವುದನ್ನು ಕಾಯುತ್ತಾ ಇದ್ದೇನೆ.”

ಹೀಗೆ ದೀನ ಮಾತುಗಳನ್ನು ಸರ್ವ ಪಾರ್ಥಿವರಿಗೆ ಹೇಳಿ ಮಹಾಬಾಹು ಧನಂಜಯನಿಗೆ ಹೇಳಿದನು. ಕೂಡಲೇ ಮಾಹಾಬಾಹುವು ಪಿತಾಮಹನಿಗೆ ಅಂಜಲೀಬದ್ಧನಾಗಿ ನಮಸ್ಕರಿಸಿ ನಿಂತು ಏನು ಮಾಡಲಿ? ಎಂದು ಕೇಳಿದನು. ಕೈಮುಗಿದು ಮುಂದೆ ನಿಂತಿದ್ದ ಆ ಪಾಂಡವನನ್ನು ನೋಡಿ ಧರ್ಮಾತ್ಮ ಭೀಷ್ಮನು ಪ್ರೀತನಾಗಿ ಧನಂಜಯನಿಗೆ ಹೇಳಿದನು:

“ನನ್ನ ಈ ಶರೀರವು ಸುಡುತ್ತಿದೆ. ಈ ಮಹಾ ಶರಗಳು ಎಲ್ಲೆಲ್ಲಿಯೂ ನನ್ನನ್ನು ಚುಚ್ಚುತ್ತಿವೆ. ನನ್ನ ಮರ್ಮಸ್ಥಾನಗಳು ತುಂಬಾ ನೋಯುತ್ತಿವೆ. ನನ್ನ ಬಾಯಿಯು ಒಣಗಿದೆ. ಅರ್ಜುನ! ಶರೀರದ ಆಹ್ಲಾದಕ್ಕಾಗಿ ನನಗೆ ನೀರನ್ನು ಕೊಡು. ಯಥಾವಿಧಿಯಾಗಿ ನೀರನ್ನು ಕೊಡಲು ನೀನೇ ಶಕ್ತ.”

ಹಾಗೆಯೇ ಆಗಲೆಂದು ವೀರ್ಯವಾನ್ ಅರ್ಜುನನು ರಥವನ್ನೇರಿ ಗಾಂಡೀವವನ್ನು ಬಲವನ್ನುಪಯೋಗಿಸಿ ಹೆದೆಯೇರಿಸಿ ಠೇಂಕರಿಸಿದನು. ಸಿಡಿಲಿನ ಧ್ವನಿಯಂತಿದ್ದ ಧನುಸ್ಸಿನ ಠೇಂಕಾರ ಶಬ್ಧವನ್ನು ಕೇಳಿ ಅಲ್ಲಿದ್ದ ಎಲ್ಲ ಭೂತಗಳೂ ಎಲ್ಲ ರಾಜರೂ ಭಯಗೊಂಡರು. ಆಗ ಆ ರಥಿಗಳಲ್ಲಿ ಶ್ರೇಷ್ಠ ಮಹಾಯಶ ಪಾರ್ಥನು ರಥದಿಂದ ಮಲಗಿದ್ದ ಸರ್ವಶಸ್ತ್ರಭೃತರಲ್ಲಿ ಶ್ರೇಷ್ಠ ಭರತಶ್ರೇಷ್ಠನಿಗೆ ಪ್ರದಕ್ಷಿಣೆ ಮಾಡಿ,



ಉರಿಯುತ್ತಿರುವ ಶರವನ್ನು ಅಭಿಮಂತ್ರಿಸಿ ಪರ್ಜನ್ಯಾಸ್ತ್ರವನ್ನು ಸಂಯೋಜಿಸಿ ಸರ್ವಲೋಕಗಳೂ ನೋಡುತ್ತಿರಲು ಭೀಷ್ಮನ ಬಲಭಾಗದಲ್ಲಿ ಭೂಮಿಗೆ ಹೊಡೆದನು. ಆಗ ಒಡನೆಯೇ ಶುದ್ಧವಾದ, ಮಂಗಳವಾದ, ಶೀತಲವಾದ, ಅಮೃತಕಲ್ಪವಾದ, ದಿವ್ಯ ಗಂಧರಸಗಳಿಂದ ಕೂಡಿದ ನೀರು ಬುಗ್ಗೆಯಂತೆ ಹೊರಚಿಮ್ಮಿತು. ಆ ಶೀತಲ ನೀರ ಧಾರೆಯಿಂದ ದಿವ್ಯಪರಾಕ್ರಮಿ ಪಾರ್ಥನು ಕುರುಋಷಭ ಭೀಷ್ಮನನ್ನು ತೃಪ್ತಿಗೊಳಿಸಿದನು. ಶಕ್ರನಂತೆಯೇ ಮಾಡಿದ ಪಾರ್ಥನ ಆ ಕರ್ಮದಿಂದ ಅಲ್ಲಿದ್ದ ವಸುಧಾಧಿಪರು ಪರಮ ವಿಸ್ಮಿತರಾದರು. ಬೀಭತ್ಸುವಿನ ಆ ಅತಿಮಾನುಷ ಅದ್ಭುತ ಕರ್ಮವನ್ನು ನೋಡಿ ಕುರುಗಳು ಛಳಿಯಿಂದ ಪೀಡಿತಗೊಂಡ ಹಸುಗಳಂತೆ ನಡುಗಿದರು. ವಿಸ್ಮಯದಿಂದ ಎಲ್ಲಕಡೆ ನೃಪರು ಉತ್ತರೀಯಗಳನ್ನು ಹಾರಿಸಿದರು. ಎಲ್ಲಕಡೆ ಶಂಖ ದುಂದುಭಿಗಳ ನಿರ್ಘೋಷದ ತುಮುಲವುಂಟಾಯಿತು. ಶಾಂತನವನೂ ಕೂಡ ತೃಪ್ತನಾಗಿ ಬೀಭತ್ಸುವಿಗೆ ಸರ್ವಪಾರ್ಥಿವವೀರರ ಸನ್ನಿಧಿಯಲ್ಲಿ ಗೌರವಿಸುವಂತೆ ಹೇಳಿದನು:

> “ಮಹಾಬಾಹೋ! ಕೌರವನಂದನ! ನಿನ್ನಲ್ಲಿ ಇದು ಇದೆಯೆಂದರೆ ವಿಚಿತ್ರವೇನೂ ಅಲ್ಲ. ಹಿಂದೆ ಅಮಿತದ್ಯುತಿ ಋಷಿಯಾಗಿದ್ದೆ ಎಂದು ನಾರದನು ಹೇಳಿದ್ದನು. ದೇವತೆಗಳೊಂದಿಗೆ ದೇವೇಂದ್ರನೂ ಸಹ ಮಾಡಲಾಗದಂತಹ ಮಹಾ ಕಾರ್ಯವನ್ನು ವಾಸುದೇವನ ಸಹಾಯದಿಂದ ನೀನು ಮಾಡುತ್ತೀಯೆ. ಪಾರ್ಥ! ತಿಳಿದವರು ನಿನ್ನನ್ನು ಎಲ್ಲ

ಕ್ಷತ್ರಿಯರಿಗೂ ಮೃತ್ಯುಸ್ವರೂಪನೆಂದು ಹೇಳುತ್ತಾರೆ. ಧನುರ್ಧರರಲ್ಲಿ ಪ್ರಧಾನನು ನೀನು. ಪೃಥ್ವಿಯಲ್ಲಿ ನರರಲ್ಲಿ ಪ್ರವರ. ಜಗತ್ತಿನಲ್ಲಿ ಮನುಷ್ಯನು ಶ್ರೇಷ್ಠ. ಪಕ್ಷಿಗಳಲ್ಲಿ ಗರುಡನು ಶ್ರೇಷ್ಠ. ಜಲಾಶಯಗಳಲ್ಲಿ ಸಾಗರವು ಶ್ರೇಷ್ಠ. ನಾಲ್ಕು ಪಾದಗಳಿರುವವುಗಳಲ್ಲಿ ಗೋವು ಶ್ರೇಷ್ಠ. ಆದಿತ್ಯನು ತೇಜಸ್ಸುಳ್ಳವುಗಳಲ್ಲಿ ಶ್ರೇಷ್ಠ. ಗಿರಿಗಳಲ್ಲಿ ಹಿಮವತನು ಶ್ರೇಷ್ಠ. ಜಾತಿಗಳಲ್ಲಿ ಬ್ರಾಹ್ಮಣನು ಶ್ರೇಷ್ಠ. ಧನ್ವಿಗಳಲ್ಲಿ ನೀನು ಶ್ರೇಷ್ಠ. ಧಾರ್ತರಾಷ್ಟ್ರನು ನಾನು ಹೇಳಿದ ಮಾತುಗಳನ್ನು, ವಿದುರ, ದ್ರೋಣ, ರಾಮ, ಜನಾರ್ದನ ಮತ್ತು ಸಂಜಯನೂ ಕೂಡ ಪುನಃ ಪುನಃ ಹೇಳಿದುದನ್ನು ಕೇಳಲಿಲ್ಲ. ದುರ್ಯೋಧನನು ವಿಪರೀತ ಬುದ್ಧಿಯುಳ್ಳವ. ಮೂಢನಂತಿದ್ದಾನೆ. ನನ್ನ ಮಾತುಗಳನ್ನು ಗೌರವಿಸುವುದಿಲ್ಲ. ಶಾಸ್ತ್ರಗಳನ್ನು ಮೀರಿ ನಡೆಯುವ ಅವನು ಭೀಮನ ಬಲದಿಂದ ನಿಹತನಾಗಿ ಬಹುಕಾಲದವರೆಗೆ ಮಲಗುತ್ತಾನೆ."

ಅವನ ಆ ಮಾತುಗಳನ್ನು ಕೇಳಿ ಕೌರವೇಂದ್ರ ದುರ್ಯೋಧನನು ದೀನ ಮನಸ್ಕನಾದನು. ಅದನ್ನು ತಿಳಿದ ಶಾಂತನವನು ಅವನ ಕಡೆ ತಿರುಗಿ ಹೇಳಿದನು:

"ರಾಜನ್! ಕೇಳು. ಕೋಪವನ್ನು ದೂರಮಾಡು. ದುರ್ಯೋಧನ! ಧೀಮತ ಪಾರ್ಥನು ಶೀತನ ಅಮೃತ ಗಂಧಿ

ನೀರಿನ ಧಾರೆಯನ್ನು ಹುಟ್ಟಿಸಿದುದನ್ನು ನೀನೇ ನೋಡಿದೆ. ಇದನ್ನು ಮಾಡುವವರು ಈ ಲೋಕದಲ್ಲಿ ಬೇರೆ ಯಾರು ಇದ್ದುದೂ ತಿಳಿದಿಲ್ಲ. ಆಗ್ನೇಯ, ವಾರುಣ, ಸೌಮ್ಯ, ವಾಯುವ್ಯ, ವೈಷ್ಣವ, ಐಂದ್ರ, ಪಾಶುಪದ, ಪಾರಮೇಷ್ಠ್ಯ, ಪ್ರಜಾಪದಿ, ಧಾತು, ತ್ವಷ್ಟು, ಸವಿತು ಎಲ್ಲ ದಿವ್ಯಾಸ್ತ್ರಗಳೂ ಮಾನುಷಲೋಕದಲ್ಲೆಲ್ಲಾ ಧನಂಜಯನಿಗೆ ಮಾತ್ರ ತಿಳಿದಿದೆ. ದೇವಕೀಪುತ್ರ ಕೃಷ್ಣನನ್ನು ಬಿಟ್ಟು ಇದು ಬೇರೆಯಾರಿಗೂ ತಿಳಿದಿಲ್ಲ. ಮಗೂ! ಪಾಂಡವರನ್ನು ಯುದ್ಧದಲ್ಲಿ ಗೆಲ್ಲಲು ಎಂದೂ ಶಕ್ಯವಿಲ್ಲ. ಯಾರು ಅಮಾನುಷ ಕರ್ಮಗಳನ್ನು ಮಾಡಿದ್ದಾನೋ ಆ ಮಹಾತ್ಮ, ಸತ್ತ್ವವತ, ಸಮರದಲ್ಲಿ ಶೂರ, ಆಹವಶೋಭಿ, ಸಮರ ಕೌಶಲನೊಡನೆ ಸಂಧಿಯನ್ನು ಮಾಡಿಕೋ. ಎಲ್ಲಿಯವರೆಗೆ ಮಹಾಬಾಹು ಕೃಷ್ಣನು ಕುರುಸಂಸದಿಯ ಸ್ವಧೀನದಲ್ಲಿರುತ್ತಾನೋ ಅಲ್ಲಿಯವರೆಗೆ ಶೂರ ಪಾರ್ಥನೊಂದಿಗೆ ಸಂಧಿಯನ್ನು ಮಾಡಿಕೋ. ಅರ್ಜುನನ ಸನ್ನತಪರ್ವ ಶರಗಳಿಂದ ನಿನ್ನ ಸೇನೆಯು ನಿಃಶೇಷವಾಗಿ ನಾಶವಾಗುವುದರೊಳಗೆ ನೀನು ಸಂಧಿಯನ್ನು ಮಾಡಿಕೋ. ಸಮರದಲ್ಲಿ ಸಹೋದರರು ಮತ್ತು ಬಹಳಷ್ಟು ನೃಪರು ಇನ್ನೂ ಹತಶೇಷರಾಗಿರುವಾಗಲೇ ಸಂಧಿಯನ್ನು ಮಾಡಿಕೋ. ಯುಧಿಷ್ಠಿರನ ಕ್ರೋಧದಿಂದ ಉರಿಯುವ ದೃಷ್ಟಿಯು ನಿನ್ನ ಸೇನೆಯನ್ನು ಸುಡುವುದರೊಳಗೇ ನೀನು ಸಂಧಿಯನ್ನು

ಮಾಡಿಕೋ. ನಕುಲ, ಸಹದೇವ ಮತ್ತು ಪಾಂಡವ ಭೀಮಸೇನರು ನಿನ್ನ ಸೇನೆಯನ್ನು ಸಂಪೂರ್ಣವಾಗಿ ನಾಶಗೊಳಿಸುವ ಮೊದಲು ಪಾಂಡವರೊದನೆ ಸೌಭ್ರಾತೃತ್ವವನ್ನು ಬಯಸು. ನನ್ನೊಂದಿಗೇ ಯುದ್ಧವು ಅಂತ್ಯಗೊಳ್ಳಲಿ. ಪಾಂಡವರೊಂದಿಗೆ ಸಂಧಿಮಾಡಿಕೋ. ನಾನು ಹೇಳಿದ ಈ ಮಾತುಗಳನ್ನು ನೀನು ಇಷ್ಟಪಡಬೇಕು. ಇದು ನಿನಗೂ ಕುಲಕ್ಕೂ ಕ್ಷೇಮವಾದುದೆಂದು ನನಗನ್ನಿಸುತ್ತದೆ. ಕೋಪವನ್ನು ತೊರೆದು ಪಾರ್ಥರೊಂದಿಗೆ ಸಂಧಿ ಮಾಡಿಕೋ. ಫಲ್ಗುನನ ಕೃತಕರ್ಮಗಳು ಪರ್ಯಾಪ್ತವಾಗಲಿ. ಭೀಷ್ಮನ ಅಂತ್ಯದೊಡನೆ ನಿಮ್ಮಲ್ಲಿ ಸೌಹಾರ್ದತೆಯುಂಟಾಗಲಿ. ಉಳಿದವರಾದರೂ ಚೆನ್ನಾಗಿರಲಿ. ಪ್ರಸೀದನಾಗು. ಪಾಂಡವರ ಅರ್ಧರಾಜ್ಯವನ್ನು ನೀಡು. ಇಂದ್ರಪ್ರಸ್ಥವನ್ನು ಧರ್ಮರಾಜನು ಆಳಲಿ. ಇದರಿಂದ ನೀನು ಪಾರ್ಥಿವರಲ್ಲಿ ಮಿತ್ರದ್ರೋಹೀ, ಪಾಪಿ ಎಂಬ ಕೀರ್ತಿಯನ್ನು ಪಡೆಯುವುಲ್ಲ. ನನ್ನ ಅವಸಾನದಿಂದ ಪ್ರಜೆಗಳಲ್ಲಿ ಶಾಂತಿಯು ನೆಲೆಸಲಿ. ಪಾರ್ಥಿವರು ಪ್ರೀತಿಮಂತರಾಗಿ ತಮ್ಮ ತಮ್ಮಲ್ಲಿಗೆ ಹಿಂದಿರುಗಲಿ. ತಂದೆಯು ಮಗನನ್ನು, ಮಾವನು ಅಳಿಯನನ್ನು, ಅಣ್ಣನು ತಮ್ಮನನ್ನು ಸೇರಲಿ. ಕಾಲಕ್ಕೆ ತಕ್ಕುದಾದ ನನ್ನ ಈ ಮಾತುಗಳನ್ನು ನೀನು ಕೇಳದೆಯೇ ಹೋದರೆ ಮೋಹಾವಿಷ್ಟನಾಗಿ ಅಬುದ್ಧಿಯಿಂದ ಪರಿತಪಿಸುತ್ತೀಯೆ.

ಭೀಷ್ಮನ ಈ ಅಂತ್ಯವು ನಿಮ್ಮೆಲ್ಲರಿಗೂ ಅಂತ್ಯವೆನಿಸುತ್ತದೆ. ಸತ್ಯವನ್ನೇ ಹೇಳುತ್ತಿದ್ದೇನೆ.”

ಈ ಮಾತನ್ನು ಆಪಗೇಯನು ರಾಜರ ಮಧ್ಯದಲ್ಲಿ ಭಾರತನಿಗೆ ಕೇಳಿಸಿ, ಶರಗಳಿಂದ ಚುಚ್ಚಲ್ಪಟ್ಟು ಸಂತಪ್ತವಾದ ಮರ್ಮಗಳ ವೇದನೆಯನ್ನು ನಿಗ್ರಹಿಸಿಕೊಂಡು ಆತ್ಮನನ್ನು ಯೋಜಿಸಿ ಸುಮ್ಮನಾದನು.

## ಭೀಷ್ಮ-ಕರ್ಣರ ಸಂವಾದ

ಶಂತನುನಂದನ ಭೀಷ್ಮನು ಸುಮ್ಮನಾಗಲು ಅಲ್ಲಿದ್ದ ಪಾರ್ಥಿವರೆಲ್ಲರೂ ತಮ್ಮ ತಮ್ಮ ಡೇರೆಗಳಿಗೆ ಪುನಃ ತೆರಳಿದರು. ಭೀಷ್ಮನು ಹತನಾದನೆಂದು ಕೇಳಿದ ಪುರುಷರ್ಷಭ ರಾಧೇಯನು ಸಂತ್ರಾತನಾಗಿ ತ್ವರೆಮಾಡಿ ಅವನಿರುವಲ್ಲಿಗೆ ಆಗಮಿಸಿದನು. ಅಲ್ಲಿ ಅವನು ದೇವ ಕಾರ್ತಿಕೇಯನು ಹುಟ್ಟಿದಾಗ ದರ್ಬೆಯ ಹಾಸಿನ ಮೇಲೆ ಮಲಗಿದ್ದಂತೆ ಶರ ಶಯ್ಯೆಯ ಮೇಲೆ ಮಲಗಿದ್ದ ಆ ಪ್ರಭು ಮಹಾತ್ಮನನ್ನು ನೋಡಿದನು. ಅಶ್ರುಕಂಠನಾಗಿದ್ದ ಮಹಾದ್ಯುತಿ ವೃಷಸೇನನು ಕಣ್ಣು ಮುಚ್ಚಿ ಮಲಗಿದ್ದ ಆ ವೀರನ ಪಾದಗಳ ಮೇಲೆ ಬಿದ್ದನು.

“ಕುರುಶ್ರೇಷ್ಠ! ನಾನು ರಾಧೇಯ! ನೋಡಿದಾಗಲೆಲ್ಲಾ ನೀನು ನನ್ನನ್ನು ಅತ್ಯಂತ ಕೀಳುಮಾಡಿ ದ್ವೇಷಿಸುತ್ತಿದ್ದವನು.”

ಎಂದು ಅವನಲ್ಲಿ ಮಾತನಾಡಿದನು.

ಅದನ್ನು ಕೇಳಿ ಕುರುವೃದ್ಧನು ಪ್ರಯತ್ನಪಟ್ಟು ಕಣ್ಣುಗಳನ್ನು ತೆರೆದು, ಮೆಲ್ಲನೇ ಅವನನ್ನು ನೋಡಿ ಸ್ನೇಹಭಾವದಿಂದ ಈ ಮಾತನ್ನಾಡಿದನು.

ತನ್ನ ರಕ್ಷಕರನ್ನು ಕಳುಹಿಸಿ ಏಕಾಂತವಾಗಿದೆಯೆಂದು ಖಚಿತಪಡಿಸಿಕೊಂಡು, ತಂದೆಯು ಮಗನನ್ನು ಹೇಗೋ ಹಾಗೆ ಗಾಂಗೇಯನು ಒಂದೇ ತೋಳಿನಿಂದ ಅವನನ್ನು ಆಲಂಗಿಸಿಸಿದನು.

“ಬಾ! ಬಾ! ನೀನು ಯಾವಾಗಲೂ ನನ್ನೊಡನೆ ಸ್ಪರ್ಧಿಸುತ್ತಿದ್ದೆ. ಇಲ್ಲಿಗೆ ನೀನು ಬಾರದೇ ಇದ್ದಿದ್ದರೆ ನಿನಗೆ ಖಂಡಿತವಾಗಿಯೂ ಶ್ರೇಯಸ್ಸಾಗುತ್ತಿರಲಿಲ್ಲ. ನೀನು ಕೌಂತೇಯ. ರಾಧೇಯನಲ್ಲವೆಂದು ನನಗೆ ನಾರದನಿಂದ ತಿಳಿದಿತ್ತು. ಕೃಷ್ಣದ್ವೈಪಾಯನ ಮತ್ತು ಕೇಶವನಿಗೂ ಇದು ತಿಳಿದಿತ್ತು ಎನ್ನುವುದರಲ್ಲಿ ಸಂಶಯವಿಲ್ಲ. ಮಗೂ! ನಿನ್ನ ಮೇಲೆ ನನಗೆ ದ್ವೇಷವೇನೂ ಇಲ್ಲ. ನಿನಗೆ ಸತ್ಯವನ್ನೇ ಹೇಳುತ್ತಿದ್ದೇನೆ. ನಿನ್ನ ತೇಜೋವಧೆಗೋಸ್ಕರ ಕಠೋರ ಮಾತುಗಳನ್ನಾಡುತ್ತಿದ್ದೆ. ಏಕೆಂದರೆ ನೀನು ಅಕಸ್ಮಾತ್ತಾಗಿ (ವಿನಾಕಾರಣ) ಪಾಂಡವರನ್ನು ದ್ವೇಷಿಸುತ್ತಿರುವೆ ಎಂದು ನನ್ನ ಅಭಿಪ್ರಾಯವಾಗಿತ್ತು. ಸೂರ್ಯನಂದನ! ಇದರಿಂದಾಗಿ ನಾನು ನಿನ್ನ ಮೇಲೆ ಬಹಳಷ್ಟು ಬಾರಿ ಕಠೋರನಾಗಿದ್ದೆ. ಸಮರದಲ್ಲಿ ನಿನ್ನ ವೀರ್ಯವನ್ನು, ಶತ್ರುಗಳಿಗೆ ನೀನು ದುಃಸಹನೆನ್ನುವುದನ್ನು, ಬ್ರಾಹ್ಮಣ್ಯತ್ವವನ್ನೂ, ಶೌರ್ಯವನ್ನೂ, ದಾನವನ್ನೂ, ಪರಮ ಗತಿಯನ್ನೂ ನಾನು ತಿಳಿದುಕೊಂಡಿದ್ದೇನೆ. ಅಮರೋಪಮನಾಗಿರುವ ನಿನ್ನಂತಹ ಪುರುಷರು ಯಾರೂ ಇಲ್ಲ. ಕುಲಭೇದವನ್ನು ನೀನು ತರುತ್ತಿರುವೆಯೆಂದು ತಿಳಿದು

ಸದಾ ಕಠೋರವಾಗಿ ಮಾತನಾಡುತ್ತಿದ್ದೆ. ಧನುರ್ವಿದ್ಯೆಯಲ್ಲಿ, ಬಿಲ್ಲನ್ನು ಸಂಧಾನಮಾಡುವುದರಲ್ಲಿ, ಲಾಘವದಲ್ಲಿ ಮತ್ತು ಅಸ್ತ್ರಬಲದಲ್ಲಿ ನೀನು ಫಲ್ಗುನ ಮತ್ತು ಮಹಾತ್ಮ ಕೃಷ್ಣನ ಸದೃಶನಾಗಿದ್ದೀಯೆ. ಕರ್ಣ ! ರಾಜಪುರಕ್ಕೆ ಹೋಗಿ ನೀನು ಧನುಷ್ಮತನು ಒಬ್ಬನೇ ಕುರುರಾಜನಿಗೋಸ್ಕರ ರಾಜರನ್ನು ಅಪಮಾನಗೊಳಿಸಿದೆ. ಹಾಗೆಯೇ ದುರಾಸದ ಬಲವಾನ್ ಜರಾಸಂಧನು ಸಮರದಲ್ಲಿ ಸಮರಶ್ಲಾಘಿಯಾದ ನಿನ್ನ ಸರಿಸಮನಾಗಿರಲಿಲ್ಲ. ಬ್ರಹ್ಮಣ್ಯನಾಗಿರುವೆ. ಸತ್ಯವಾದಿಯಾಗಿರುವ. ತೇಜಸ್ಸಿನಲ್ಲಿ ಸೂರ್ಯನಂತಿರುವ. ದೇವಗರ್ಭನಾಗಿರುವೆ. ಸಮರಲ್ಲಿ ಅಜಿತನಾಗಿರುವೆ. ಭೂಮಿಯಲ್ಲಿ ಮನುಷ್ಯರಿಗಿಂತ ಅಧಿಕನಾಗಿರುವೆ. ಹಿಂದೆ ನಿನ್ನ ಮೇಲೆ ಇರಿಸಿಕೊಂಡಿದ್ದ ಕೋಪವನ್ನು ಇಂದು ನಾನು ತ್ಯಜಿಸುತ್ತಿದ್ದೇನೆ. ಪುರುಷ ಕೃತ್ಯದಿಂದ ದೈವವನ್ನು ಬದಲಾಯಿಸಲು ಶಕ್ಯವಿಲ್ಲ. ವೀರ ಪಾಂಡವರು ನಿನ್ನ ಸೋದರರು. ನೀನು ಅವರ ಅಣ್ಣ. ನನಗೆ ಪ್ರಿಯವಾದುದನ್ನು ಮಾಡಬೇಕೆಂದು ನೀನು ಬಯಸುವೆಯಾದರೆ ಅವರೊಂದಿಗೆ ಸೇರು. ನನ್ನ ಪತನದೊಂದಿಗೆ ವೈರತ್ವವು ಕೊನೆಗೊಳ್ಳಲಿ. ಪೃಥ್ವಿಯ ಸರ್ವ ರಾಜರೂ ಇಂದು ನಿರಾಮಯರಾಗಲಿ.”

ಕರ್ಣನು ಹೇಳಿದನು:

“ಮಹಾಪ್ರಾಜ್ಞ! ಈ ಎಲ್ಲವೂ ನನಗೆ ತಿಳಿದಿದೆ. ನೀನು ಹೇಳಿದುದರಲ್ಲಿ ಸಂಶಯವಿಲ್ಲ. ನಾನು ಕೌಂತೇಯ. ಸೂತಜನಲ್ಲ. ಆದರೆ ನಾನು ಕುಂತಿಯಿಂದ ತಿರಸ್ಕರಿಸಲ್ಪಟ್ಟು ಸೂತನಿಂದ ವರ್ಧಿತನಾದೆ. ದುರ್ಯೋಧನನ ಐಶ್ವರ್ಯವನ್ನು ಭೋಗಿಸಿ ಅದನ್ನು ಸುಳ್ಳಾಗಿಸಲು ಮನಸ್ಸಿಲ್ಲ. ಸಂಪತ್ತು, ಶರೀರ, ಮಕ್ಕಳು, ಪತ್ನಿಯರು, ಯಶಸ್ಸು ಎಲ್ಲವನ್ನೂ ದುರ್ಯೋಧನನಿಗಾಗಿ ತ್ಯಜಿಸಿದ್ದೇನೆ. ಸುಯೋಧನನನ್ನು ಆಶ್ರಯಿಸಿ ನಾನು ನಿತ್ಯವೂ ಪಾಂಡವರನ್ನು ಕುಪಿತರನ್ನಾಗಿ ಮಾಡಿದ್ದೇನೆ. ಆಗುವಂಥಹುದು ಬಹುಷಃ ಅವಶ್ಯಕವಾಗಿದೆ ಮತ್ತು ತಡೆಯಲು ಸಾಧ್ಯವಿಲ್ಲ. ಪುರುಷ ಪ್ರಯತ್ನದಿಂದ ದೈವವನ್ನು ಬದಲಾಯಿಸಲು ಯಾರಿಗೆ ಉತ್ಸಾಹವಿದೆ? ನಿಮಿತ್ತಗಳು ಪೃಥ್ವಿಯ ಕ್ಷಯವನ್ನು ಸೂಚಿಸುತ್ತಿವೆ. ಸಂಸದಿಯಲ್ಲಿ ನೀನು ಇವುಗಳ ಕುರಿತು ತೋರಿಸಿದ್ದೀಯೆ, ಮಾತನಾಡಿದ್ದೀಯೆ. ಪಾಂಡವರು ಮತ್ತು ವಾಸುದೇವ ಇವರು ಅಜೇಯ ಪುರುಷರೆಂದು ನನಗೆ ಎಲ್ಲವೂ ತಿಳಿದಿದೆ. ಅವರೊಂದಿಗೆ ಯುದ್ಧಮಾಡಲು ಬಯಸುತ್ತೇನೆ. ತಾತ! ಪ್ರೀತಿಮನಸ್ಕನಾಗಿ ನನಗೆ ಸದಾ ಯುದ್ಧಮಾಡಲು ಅನುಮತಿಯನ್ನು ನೀಡು. ನಿನ್ನ ಅನುಮತಿಯಂತೆ ನಾನು ಯುದ್ಧಮಾಡಬಲ್ಲೆ ಎಂದು ನನ್ನ ಅಭಿಪ್ರಾಯ. ನಾನು ಏನೆಲ್ಲ ಕೆಟ್ಟ ಮಾತುಗಳನ್ನು ಆಡಿದ್ದೆನೋ, ಅಪಮಾನಗೊಳಿಸಿದ್ದೆನೋ, ಚಪಲತೆಯಿಂದ

ಜಗಳವಾಡಿದ್ದೆನೋ ನನ್ನಿಂದಾದ ಅವೆಲ್ಲವನ್ನು ನೀನು ಕ್ಷಮಿಸಬೇಕು."

ಭೀಷ್ಮನು ಹೇಳಿದನು:

"ಕರ್ಣ ! ಈ ಸುದಾರುಣ ವೈರವನ್ನು ಕೊಡವಿ ಹಾಕಲು ಶಕ್ಯವಿಲ್ಲವೆಂದಾದರೆ ನಿನಗೆ ಅನುಮತಿಯನ್ನು ಕೊಡುತ್ತೇನೆ. ಸ್ವರ್ಗವನ್ನು ಬಯಸಿ ಯುದ್ಧಮಾಡು. ಉತ್ತಮರ ನಡತೆಯಲ್ಲಿ ನಡೆದುಕೊಂಡು ಯಥಾ ಶಕ್ತಿಯಾಗಿ, ಉತ್ಸಾಹವಿದ್ದಷ್ಟು, ಸಿಟ್ಟನ್ನು ಬಿಟ್ಟು, ದುಡುಕದೇ ನೃಪನ ಕೆಲಸವನ್ನು ಮಾಡು. ನಾನು ನಿನಗೆ ಅನುಜ್ಞೆಯನ್ನು ನೀಡುತ್ತೇನೆ. ಏನು ಇಚ್ಛಿಸಿದ್ದೀಯೋ ಅದನ್ನು ಪಡೆ. ಕ್ಷತ್ರಧರ್ಮದಿಂದ ಲೋಕಗಳನ್ನು ಜಯಿಸುತ್ತೀಯೆ. ಸಂಶಯವಿಲ್ಲ. ಬಲವೀರ್ಯಗಳನ್ನು ಆಶ್ರಯಿಸಿ ನಿರಹಂಕಾರನಾಗಿ ಯುದ್ಧಮಾಡು. ಏಕೆಂದರೆ ಧರ್ಮಯುದ್ಧವೇ ಕ್ಷತ್ರಿಯನಿಗೆ ಶ್ರೇಯಸ್ಕರವು. ಬೇರೆ ಏನೂ ತಿಳಿದಿಲ್ಲ. ಶಾಂತಿಯನ್ನು ತರಲು ನಾನು ದೀರ್ಘಕಾಲ ಬಹಳಷ್ಟು ಪ್ರಯತ್ನ ಮಾಡಿದೆ. ಆದರೆ ಅದನ್ನು ಮಾಡಲು ಶಕ್ಯನಾಗಲಿಲ್ಲ. ಎಲ್ಲಿ ಧರ್ಮವಿದೆಯೋ ಅಲ್ಲಿ ಜಯವಿದೆ."

ಹೀಗೆ ಹೇಳಿದ ಗಾಂಗೇಯನನ್ನು ವಂದಿಸಿ, ಪ್ರಸನ್ನಗೊಳಿಸಿ ರಾಧೇಯನು ರಥವನ್ನೇರಿ ದುರ್ಯೋಧನನ ಬಳಿಗೆ ಹೊರಟನು.

# ಭೀಷ್ಮ ವಧ ಶ್ರವಣ

ಯುದ್ಧಪ್ರಾರಂಭವಾದ ಹತ್ತನೆಯ ದಿನದ ರಾತ್ರಿ ಭೂತ-ಭವ್ಯ-ಭವಿಷ್ಯಗಳೆಲ್ಲವನ್ನೂ ತಿಳಿದಿದ್ದ ಪ್ರತ್ಯಕ್ಷದರ್ಶೀ ಗಾವಲ್ಗಣೀ ಸಂಜಯನು ರಣಭೂಮಿಯಿಂದ ಬಂದನು. ದುಃಖಿತನಾಗಿ ಯೋಚನೆಯಲ್ಲಿ ಮುಳುಗಿದ್ದ ಧೃತರಾಷ್ಟ್ರನಿಗೆ ಭಾರತ ಪಿತಾಮಹ ಭೀಷ್ಮನು ಹತನಾದನೆಂದು ಹೇಳಿದನು.

> “ಮಹಾರಾಜ! ನಿನಗೆ ನಮಸ್ಕಾರ. ನಾನು ಸಂಜಯ. ಭರತರ ಪಿತಾಮಹ ಶಾಂತನವ ಭೀಷ್ಮನು ಹತನಾದನು. ಸರ್ವಯೋಧರಲ್ಲಿ ಶ್ರೇಷ್ಠನಾದ, ಸರ್ವ ಧನುಷ್ಮತರ ಧಾಮ ಕುರುಪಿತಾಮಹನು ಇಂದು ಶರತಲ್ಪಗತನಾಗಿದ್ದಾನೆ. ಯಾರ ವೀರ್ಯವನ್ನು ಆಶ್ರಯಿಸಿ ನಿನ್ನ ಪುತ್ರರು ದ್ಯೂತವನ್ನಾಡಿದ್ದರೋ ಆ ಭೀಷ್ಮನು ಯುದ್ಧದಲ್ಲಿ ಶಿಖಂಡಿಯಿಂದ ಹತನಾಗಿ ಮಲಗಿದ್ದಾನೆ. ಕಾಶಿಪುರಿಯಲ್ಲಿ ಮಹಾಮೃಧದಲ್ಲಿ ಸೇರಿದ್ದ ಎಲ್ಲ ಪೃಥಿವೀಪಾಲರನ್ನೂ ಒಬ್ಬನೇ ರಥದಲ್ಲಿದ್ದು ಗೆದ್ದ ಮಹಾರಥಿ, ಜಾಮದಗ್ನಿ ರಾಮನಿಗೂ ರಣದಲ್ಲಿ ಅಯೋಧ್ಯನಾದ ವಸುಸಂಭವ, ಜಾಮದಗ್ನಿಯಿಂದ ಹತನಾಗದೇ ಇದ್ದ ಭೀಷ್ಮನು ಇಂದು ಶಿಖಂಡಿಯಿಂದ ಹತನಾಗಿದ್ದಾನೆ. ಶೌರ್ಯದಲ್ಲಿ ಮಹೇಂದ್ರಸದೃಶನಾದ, ಸ್ಥೈರ್ಯದಲ್ಲಿ



ಹಿಮಾಚಲದಂತಿರುವ, ಗಾಂಭೀರ್ಯದಲ್ಲಿ ಸಮುದ್ರದಂತಿರುವ, ಸಹಿಷ್ಣುತ್ವದಲ್ಲಿ ಧರೆಯ ಸಮನಾಗಿರುವ, ಆ ಶರದಂಷ್ಟ್ರ, ಧನುರ್ವಕ್ತ್ರ, ಖಡ್ಗಜಿಹ್ವ, ದುರಾಸದ, ನರಸಿಂಹ ನಿನ್ನ ಪಿತ ಭೀಷ್ಮನು ಇಂದು ಪಾಂಚಾಲ್ಯನಿಂದ ಹೊಡೆದುರಿಳಿಸಲ್ಪಟ್ಟಿದ್ದಾನೆ. ರಣದಲ್ಲಿ ಮುನ್ನುಗ್ಗುತ್ತಿರುವ ಯಾರನ್ನು ನೋಡಿ ಪಾಂಡವರ ಮಹಾಸೇನೆಯು ಸಿಂಹವನ್ನು ನೋಡಿದ ಗೋವುಗಳ ಹಿಂಡಿನಂತೆ ಭಯೋದ್ವಿಗ್ನವಾಗಿ ನಡುಗುತ್ತಿತ್ತೋ ಆ ಭೀಷ್ಮನು ನಿನ್ನ ಸೇನೆಗಳನ್ನು ಹತ್ತು ಹಗಲು-ರಾತ್ರಿ ಪರಿರಕ್ಷಿಸಿ, ಸುದುಷ್ಕರ ಕೃತ್ಯಗಳನ್ನೆಸಗಿ ಅಸ್ತನಾದ ಆದಿತ್ಯನಂತೆ ಹೊರಟುಹೋದನು. ಶಕ್ರನಂತೆ ಸಹಸ್ರಾರು ಬಾಣಗಳನ್ನು ಸುರಿಸಿ, ಯುದ್ಧದ ಹತ್ತು ದಿನಗಳ ಪ್ರತಿದಿನವೂ ಹತ್ತು ಸಾವಿರ ಯೋಧರನ್ನು ಸಂಹರಿಸಿ ಭೀಷ್ಮನು ಅನರ್ಹನಾಗಿದ್ದರೂ, ನಿನ್ನ ದುರ್ಮಂತ್ರದಿಂದ ಭಿರುಗಾಳಿಗೆ ಸಿಲುಕಿದ ಮರದಂತೆ ಕೆಳಗುರಿಳಿಸಲ್ಪಟ್ಟು ಭೂಮಿಯ ಮೇಲೆ ಮಲಗಿದ್ದಾನೆ."

ಧೃತರಾಷ್ಟ್ರನು ಹೇಳಿದನು:

"ಕುರುಗಳ ಋಷಭ ಭೀಷ್ಮನು ಶಿಖಂಡಿಯಿಂದ ಹೇಗೆ ಹತನಾದನು? ವಾಸವೋಪಮನಾದ ನನ್ನ ಪಿತನು ರಥದಿಂದ ಹೇಗೆ ಬಿದ್ದನು? ಸಂಜಯ! ತಂದೆಗಾಗಿ ಬ್ರಹ್ಮಚರ್ಯವನ್ನು

ಪಾಲಿಸಿದ, ದೇವತೆಗಳಂತೆ ಬಲಶಾಲಿಯಾಗಿದ್ದ ಭೀಷ್ಮನಿಲ್ಲದೇ ನನ್ನ ಪುತ್ರರು ಹೇಗಿದ್ದಾರೆ? ಆ ಮಹಾಸತ್ವ, ಮಹೇಷ್ವಾಸ, ಮಹಾಬಲಿ, ಮಹಾರಥಿ, ನರವ್ಯಾಘ್ರನು ಹತನಾಗಲು ಅವರ ಮನಸ್ಸು ಹೇಗಿದೆ? ಕುರುಗಳ ಋಷಭ, ವೀರ, ಯುದ್ಧದಲ್ಲಿ ಕಂಪಿಸದ, ಪುರುಷರ್ಷಭನು ಹತನಾಗಿದ್ದಾನೆಂದು ನನಗೆ ಏನು ಹೇಳಿದೆಯೋ ಅದರಿಂದ ನನ್ನನ್ನು ಪರಮ ದುಃಖವು ಆವರಿಸಿದೆ. ಅವನನ್ನು ಯಾರು ಅನುಸರಿಸಿ ಹೋಗುತ್ತಿದ್ದರು? ಯಾರು ಮುಂದಿದ್ದರು? ಯಾರು ಅವನ ಪಕ್ಕದಲ್ಲಿದ್ದರು? ಮತ್ತು ಯಾರು ಅವನೊಂದಿಗೆ ಹೋಗುತ್ತಿದ್ದರು? ಶತ್ರುಗಳ ಸೇನೆಯನ್ನು ಹೊಗುವಾಗ ಆ ರಥಶಾರ್ದೂಲ, ಅಚ್ಯುತ, ಕ್ಷತ್ರಿಯರ್ಷಭನನ್ನು ಯಾವ ಶೂರರು ಹಿಂದಿನಿಂದ ರಕ್ಷಣೆಗೆಂದು ಅನುಸರಿಸುತ್ತಿದ್ದರು? ಸೂರ್ಯನು ಕತ್ತಲೆಯನ್ನು ಕಳೆಯುವಂತೆ ಶತ್ರುಸೈನ್ಯವನ್ನು ಕಳೆಯುತ್ತಿರುವ ಆ ಅಮಿತ್ರಹ, ಸಹಸ್ರರಶ್ಮಿಪ್ರತಿಮನು ಶತ್ರುಗಳಲ್ಲಿ ಭಯವನ್ನು ತಂದು ರಣದಲ್ಲಿ ಕೌರವಶಾಸನದಂತೆ ದುಷ್ಕರ ಕರ್ಮಗಳನ್ನು ಮಾಡಿದನು. ಯುದ್ಧದಲ್ಲಿ ಸೇನೆಗಳನ್ನು ಮುತ್ತಿಗೆ ಹಾಕುವಾಗ ದುರಾಧರ್ಷ ಕೃತ್ಯವನ್ನು ಮಾಡುವ ಅವನನ್ನು ಯಾರು ತಡೆಗಟ್ಟಿ ಕೊನೆಗೊಳಿಸಿದರು? ಪಾಂಡವರು ಯುದ್ಧದಲ್ಲಿ ಶಾಂತನವನನ್ನು ಹೇಗೆ ತಡೆದರು? ಸೇನೆಗಳನ್ನು ಕಡಿಯುತ್ತಿರುವ ಆ ಶರದಂಷ್ಟ್ರ, ತರಸ್ವಿ, ಚಾಪದಂತೆ

ಬಾಯಿತೆರೆದುಕೊಂಡಿದ್ದ, ಘೋರ ಖಡ್ಗದಂಥಹ ನಾಲಗೆಯುಳ್ಳ, ದುರಾಸದ, ಅನ್ಯರನ್ನು ಮೀರಿಸಿದ್ದ, ಪುರುಷವ್ಯಾಘ್ರ, ಹ್ರೀಮಂತ, ಅಪರಾಜಿತ ಆ ಅಜಿತನನ್ನು ಯುದ್ಧದಲ್ಲಿ ಕೌಂತೇಯರು ಹೇಗೆ ಉರುಳಿಸಿದರು?"

ಧೃತರಾಷ್ಟ್ರನ ಈ ಎಲ್ಲ ಪ್ರಶ್ನೆಗಳಿಗೆ ಉತ್ತರವಾಗಿ ಸಂಜಯನು ಮಹಾಭಾರತ ಯುದ್ಧದ ಮೊದಲ ಹತ್ತು ದಿನಗಳ ಆಗುಹೋಗುಗಳನ್ನು ವರ್ಣಿಸತೊಡಗಿದನು. ಸಂಜಯನು ಹೇಳಿದನು:

"ಮಹಾರಾಜ! ಅರ್ಹನಾಗಿರುವ ನೀನು ಕೇಳುತ್ತಿರುವ ಈ ಪ್ರಶ್ನೆಗಳು ನಿನಗೆ ತಕ್ಕುದಾಗಿಯೇ ಇವೆ. ಆದರೆ ಈ ದೋಷವನ್ನು ದುರ್ಯೋಧನನ ಮೇಲೆ ಹಾಕುವುದು ಸರಿಯಲ್ಲ. ತನ್ನ ದುಶ್ಚರಿತಗಳಿಂದಾಗಿ ಅಶುಭವನ್ನು ಪಡೆದ ನರನು ಅದು ಅನ್ಯನು ಮಾಡಿದ್ದು ಎಂದು ಹೊರಿಸಬಾರದು. ಇತರರಿಗೆ ಯಾರು ಎಲ್ಲ ರೀತಿಯಲ್ಲಿ ನಿಂದನೀಯವಾಗಿ ನಡೆದುಕೊಳ್ಳುತ್ತಾನೋ ಅದನ್ನು ಮಾಡಿದವನು ಸರ್ವಲೋಕಗಳ ನಿಂದನೆಗೆ ಮತ್ತು ವಧೆಗೆ ಅರ್ಹ. ಮೋಸಗಳನ್ನು ಅರಿಯದೇ ಇದ್ದ ಪಾಂಡವರು ನಿನ್ನನ್ನು ನೋಡಿಕೊಂಡು ಅಮಾತ್ಯರೊಂದಿಗೆ ಕ್ಷಾಂತರಾಗಿ ಬಹುಕಾಲ ವನದಲ್ಲಿ ಅನುಭವಿಸಿದರು. ಯೋಗಬಲದಿಂದ ನಾನು ಪ್ರತ್ಯಕ್ಷವಾಗಿ ಕಂಡ ಕುದುರೆಗಳ, ಆನೆಗಳ, ಅಮಿತೌಜಸ

ಶೂರರ ದೃಶ್ಯಗಳನ್ನು ನೋಡಿರುವುದನ್ನು ಕೇಳು. ಮನಸ್ಸನ್ನು ಶೋಕಕ್ಕೊಳಪಡಿಸಬೇಡ. ನರಾಧಿಪ! ಇದು ಹೀಗೆಯೇ ಆಗುತ್ತದೆಯೆಂದು ಹಿಂದೆಯೇ ದೈವ ನಿರ್ಧಿತವಾಗಿತ್ತು. ಯಾರ ಪ್ರಸಾದದಿಂದ ನನಗೆ ಈ ದಿವ್ಯವಾದ ಅನುತ್ತಮ ಜ್ಞಾನವು ಪ್ರಾಪ್ತವಾಯಿತೋ ಆ ನಿನ್ನ ತಂದೆ ಧೀಮತ ಪಾರಶರ್ಯನಿಗೆ ನಮಸ್ಕರಿಸುತ್ತೇನೆ. ಅತೀಂದ್ರಿಯ ದೃಷ್ಟಿ, ದೂರದ್ದನ್ನೂ ಕೇಳುವ, ಇನ್ನೊಬ್ಬರ ಚಿತ್ತವನ್ನು – ಅತೀತವನ್ನೂ ಅನಾಗತವನ್ನೂ – ತಿಳಿಯುವ ವಿಶೇಷ ಜ್ಞಾನ, ಸದಾ ಆಕಾಶದಲ್ಲಿಯೂ ಸಂಚರಿಸಬಲ್ಲ, ಯುದ್ಧದಲ್ಲಿ ಶಸ್ತ್ರಗಳು ತಾಗದ ವರದಾನವನ್ನು ನಾನು ಆ ಮಹಾತ್ಮನಿಂದ ಪಡೆದೆ. ವಿಚಿತ್ರವಾದ, ಪರಮಾದ್ಭುತವಾದ, ಲೋಮಹರ್ಷಣವಾದ ಈ ಭಾರತರ ಮಹಾಯುದ್ಧವನ್ನು ನಡೆದ ಹಾಗೆ ನನ್ನಿಂದ ಕೇಳು.”